ಭಗವಾನ್ ಶ್ರೀವೇದವ್ಯಾಸಪ್ರಣೀತ

ಮಹಾಭಾರತ

ಲಕ್ಷಾಲಂಕಾರಕ್ಕೆ ಅನುಗುಣವಾಗಿ
ಮಹಾಭಾರತತಾತ್ಪರ್ಯನಿರ್ಣಯದೊಂದಿಗೆ
ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ

ಆದಿಪರ್ವ

ಭಾಗ-3

ಪ್ರಕಾಶಕರು

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ

ಪಲಿಮಾರು ಮಠ, ಉಡುಪಿ

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೩

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜತೀರ್ಥರ
ಲಕ್ಷಾಲಂಕಾರದೊಂದಿಗೆ ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ)

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್॥ ಪಿ. ಎಸ್. ಶೇಷಗಿರಿ ಆಚಾರ್ಯ,

ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ - ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಕೃತಿಗಳನ್ನು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ಷಷ್ಟಿಪೂರ್ತಿಯ ಸಮಾರಂಭದಲ್ಲಿ ಮನ್ಮಥ ಸಂ/ ಕಾರ್ತಿಕ ಬಹುಳ ತೃತೀಯಾ (28.11.2015) ದಂದು ತಿರುಮಲಕ್ಷೇತ್ರದಲ್ಲಿ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಅನಾವರಣಗೊಳಿಸಿ ಶ್ರೀನಿವಾಸನ ಅಡಿದಾವರೆಗಳಲ್ಲಿ ಸಮರ್ಪಿಸಿದರು.

ಆದಿಪರ್ವ ಭಾಗ-೩

© ತತ್ವಸಂಶೋಧನಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-45-3

ಪುಟಗಳು	-	X + 700 = 710
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ	-	ಎಂ. ಶರತ್ ಚಂದ್ರ,
ಅಕ್ಷರ ಜೋಡಣೆ	-	ಬೆಮ್ಮತ್ತಿ ಶ್ರೀನಿವಾಸ ಮತ್ತು ಶ್ರೀಮತಿ ಎಸ್. ನಾಗಲತಾ
ಮುದ್ರಕರು	-	**ಪವನ್ ಪ್ರಿಂಟರ್ಸ್, ಬೆಂಗಳೂರು. 9686489131**

ವಿಷಯಾನುಕ್ರಮಣಿಕೆ

ಮಹಾಭಾರತ

ಆದಿಪರ್ವ ಭಾಗ-೩

		ಪುಟ ಸಂ.
1.	ದ್ರೋಣರಿಂದ ಅರ್ಜುನನ ಪರೀಕ್ಷೆ. ಅರ್ಜುನನ ಅತಿಶಯ. ಅರ್ಜುನನಿಂದ ಲಕ್ಷ್ಯವೇಧ. ಬ್ರಹ್ಮಶಿರಸ್ ಅಸ್ತ್ರದ ಪ್ರಾಪ್ತಿ	5
2	ಕುಮಾರರಿಂದ ಅಸ್ತ್ರಕೌಶಲ ಪ್ರದರ್ಶನ, ಯುಧಿಷ್ಠಿರ ಪರೀಕ್ಷೆ, ಭೀಮ ದುರ್ಯೋಧನರ ರಂಗ ಪ್ರವೇಶ	16
3.	ಭೀಮದುರ್ಯೋಧನರ ಸಲುವಾಗಿ ಪ್ರೇಕ್ಷಕದ್ವೈಧೀಭಾವ, ಅಶ್ವತ್ಥಾಮರಿಂದ ಸಮಾಧಾನ, ಅರ್ಜುನನ ರಂಗಪ್ರವೇಶ ಮತ್ತು ಕೌಶಲ ಪ್ರದರ್ಶನ	27
4.	ಕರ್ಣನ ರಂಗಪ್ರವೇಶ, ಅರ್ಜುನನನ್ನು ಮೀರಿಸಿ ಕೌಶಲ ಪ್ರದರ್ಶನ, ಕರ್ಣಾರ್ಜುನರ ವಿರೋಧ, ದುರ್ಯೋಧನನಿಂದ ಅಂಗರಾಜ್ಯದಲ್ಲಿ ಕರ್ಣನ ಅಭಿಷೇಕ	36
5.	ಕರ್ಣನ ತಂದೆಯಾದ ಅಧಿರಥನ ರಂಗಪ್ರವೇಶ, ಅವನಿಗೆ ಕರ್ಣನ ನಮಸ್ಕಾರ, ಭೀಮಸೇನನ ಮೂದಲಿಕೆಯ ಮಾತುಗಳು, ರಂಗದಿಂದ ಎಲ್ಲರ ನಿರ್ಗಮನ	46
6.	ದ್ರೋಣರಿಗೆ ಗುರುದಕ್ಷಿಣದಾನ ಪ್ರಸಂಗ, ದುರ್ಯೋಧನಾದಿಗಳ ಪರಾಜಯ, ಭೀಮಾರ್ಜುನರ ಜಯ, ದ್ರೋಣದ್ರುಪದ ಸಂವಾದ, ದ್ರೋಣರಿಂದ ದ್ರುಪದನ ಅರ್ಧರಾಜ್ಯ ಸ್ವೀಕಾರ	59
7.	ದ್ರುಪದನಿಂದ ಯಾಜಾನುಯಾಜರ ವರಣ, ಧೃಷ್ಟದ್ಯುಮ್ನ ಮತ್ತು ದ್ರೌಪದಿಯರ ಉತ್ಪತ್ತಿ	89
8.	ತಪಸ್ಸು ಮಾಡುತ್ತಿದ್ದ ಪಾಂಚಾಲರಾಜನಾದ ಪೃಷತನಿಗೆ ಮೇನಕೆಯ ದರ್ಶನದಿಂದ ದ್ರುಪದನ ಉತ್ಪತ್ತಿ	107

9. ಯುಧಿಷ್ಠಿರನಿಗೆ ಯೌವರಾಜ್ಯಾಭಿಷೇಕ, ಬಲರಾಮನಲ್ಲಿ ಭೀಮಸೇನನ ಗದಾಭ್ಯಾಸ, ದ್ರೋಣರಿಂದ ಅರ್ಜುನನಿಗೆ ಬ್ರಹ್ಮಶಿರ ಅಸ್ತ್ರಪ್ರಾಪ್ತಿ. ಭೀಮಾರ್ಜುನ ವಿಜಯ, ದುರ್ಯೋಧನನ ಅಸೂಯೆ, ಧೃತರಾಷ್ಟ್ರನ ಬುದ್ಧಿಭೇದ 114

10. ಯುಧಿಷ್ಠಿರನ ಅಭಿಷೇಕವನ್ನು ನೋಡಿ ದುರ್ಯೋಧನನ ಅಸೂಯೆ, ಧೃತರಾಷ್ಟ್ರನ ಜೊತೆಯಲ್ಲಿ ಸಂವಾದ, ಧೃತರಾಷ್ಟ್ರನ ಚಂಚಲಮನಸ್ಥಿತಿಃ 126

11. ಕಣಿಕ ನೀತಿ 135

12. ಕಣಿಂಕನ ನೀತಿಯ ಪ್ರಭಾವದಿಂದ ಪಾಂಡವರನ್ನು ವಾರಣಾವತಕ್ಕೆ ಕಳುಹಿಸುವಂತೆ ದುರ್ಯೋಧನನ ಆಗ್ರಹ, ಧೃತರಾಷ್ಟ್ರನ ಲೋಕಾಪವಾದ ಭೀತಿ, ಕೊನೆಗೆ ಪಾಂಡವರಿಗೆ ವಾರಣಾವತಕ್ಕೆ ಹೋಗಲು ಆದೇಶ 162

13. ದುರ್ಯೋಧನನ ಹರ್ಷ, ವಾರಣಾವತದಲ್ಲಿ ಅರಗಿನ ಮನೆಯನ್ನು ಕಟ್ಟಲು ಪುರೋಚನನಿಗೆ ಆದೇಶ 174

14. ವಾರಣಾವತಕ್ಕೆ ಯುಧಿಷ್ಠಿರಾದಿಗಳ ಪ್ರಯಾಣ, ಪೌರರ ಅನುಗಮನ ಮತ್ತು ಪ್ರತಿನಿವೃತ್ತಿ, ಮ್ಲೇಚ್ಛಭಾಷೆಯಿಂದ ವಿದುರನ ಉಪದೇಶ 179

15. ವಾರಣಾವತನಿವಾಸಿಗಳಿಂದ ಪಾಂಡವರ ಸತ್ಕಾರ ಮತ್ತು ಸ್ವೀಕಾರ, ಹತ್ತು ದಿನಗಳು ಕಳೆದ ಮೇಲೆ ಜತುಗೃಹಪ್ರವೇಶ, ಭೀಮ ಯುಧಿಷ್ಠಿರರಿಗೆ ಗೃಹದ ಸತ್ಯತೆಯ ಜ್ಞಾನ, ಧರ್ಮರಾಜನ ಉಪದೇಶ 187

16. ವಿದುರನ ಆಪ್ತನಾದ ಖನಕನಿಂದ ಸುರಂಗ ನಿರ್ಮಾಣ 195

17. ಜತುಗೃಹಕ್ಕೆ ಅಗ್ನಿಸ್ಪರ್ಶಮಾಡಿ ಪಾಂಡವರ ಪಲಾಯನ 203

18. ವಿದುರನು ಕಳುಹಿಸಿದ ನಾವಿಕನಿಂದ ಪಾಂಡವರ ಗಂಗಾತರಣ ಮತ್ತು ವನಪ್ರವೇಶ 209

19. ಪ್ರಾತಃಕಾಲದಲ್ಲಿ ಧೃತರಾಷ್ಟ್ರನಿಗೆ ಪಾಂಡವರ ಮರಣದ ವಾರ್ತೆಯ ಹರಣ. ಬಂಧುಗಳಿಂದ ಪಾಂಡವರಿಗೆ ಉದಕ ಕ್ರಿಯ, ಭೀಷ್ಮರ ರೋದನ, ವಿದುರನಿಂದ ಸಾಂತ್ವನ 213

20. ದಾಹವನ್ನು ತಿಳಿದು ದುರ್ಯೋಧನಾದಿಗಳ ಹರ್ಷ, ಭೀಷ್ಮ ವಿದುರರಿಗೆ ಸತ್ಯವನ್ನು ತಿಳಿದು ಹರ್ಷ, ಕಾಡಿನಲ್ಲಿ ಭೀಮಸೇನನ ಧಾವನ 225

21. ತೃಷಾರ್ತರಾದ ತಾಯಿಯನ್ನೂ ಸಹೋದರರನ್ನೂ ಒಂದೆಡೆ ಕೂಡಿಸಿ ಜಲವನ್ನು ತರಲು ಭೀಮನ ಗಮನ, ಭೀಮನು ಜಲವನ್ನು ತರುವ ವೇಳೆಗೆ ಅವರ ನಿದ್ರೆ ಮತ್ತು ಭೀಮನ ವಿಲಾಪ **229**

22. ಪಾಂಡವರು ಮಲಗಿದ್ದ ಕಡೆಗೆ ಹಿಡಿಂಬೆಯ ಪ್ರವೇಶ, ಭೀಮ ಹಿಡಿಂಬೆಯರ ಸಂವಾದ **239**

23. ಹಿಡಂಬಿಯು ವಿಳಂಬ ಮಾಡುತ್ತಿರಲು ಅಲ್ಲಿಗೆ ಹಿಡಿಂಬನ ಆಗಮನ **249**

24. ಭೀಮ ಹಿಡಿಂಬರ ವಿವಾದ, ಅವರ ಯುದ್ಧದ ಪ್ರಾರಂಭ, ಪಾಂಡವರ ಎಚ್ಚರಿಕೆ **254**

25. ಕುಂತಿ ಹಿಡಿಂಬಾ ಸಂವಾದ, ಹಿಡಿಂಬ ಭೀಮ ಯುದ್ಧ, ಅರ್ಜುನನನ್ನು ನಿರಾಕರಿಸಿ ಭೀಮಸೇನನಿಂದ ಹಿಡಿಂಬನ ವಧೆ **261**

26. ಹಿಡಿಂಬೆಯಿಂದ ತನ್ನ ದಿವ್ಯಜ್ಞಾನದ ಆವಿಷ್ಕಾರ, ಭೀಮನು ಅವಳನ್ನು ಸ್ವೀಕರಿಸಲು ಕುಂತಿಯ ಸಮ್ಮತಿ ಮತ್ತು ಧರ್ಮರಾಜನ ಸಮಯಬಂಧ **273**

27. ಪಾಂಡವರಿಂದ ಶಾಲಿಹೋತ್ರಸರೋವರಪ್ರಾಪ್ತಿ, ಭೀಮಹಿಡಿಂಬಿಯರ ವಿಹಾರ, ವ್ಯಾಸರ ಆಗಮನ ಮತ್ತು ಆಶ್ವಾಸನ **282**

28. ವ್ಯಾಸರ ನಿರ್ಗಮನ, ಶಾಲಿಹೋತ್ರಾಶ್ರಮದಲ್ಲಿ ಪಾಂಡವರ ವಾಸ, ಘಟೋತ್ಕಚನ ಜನನ **294**

29. ಘಟೋತ್ಕಚ ಮತ್ತು ಹಿಡಿಂಬಿಯರ ಗಮನ, ಬ್ರಾಹ್ಮಣ ವೇಷದಿಂದ ಪಾಂಡವರ ಏಕಚಕ್ರನಗರ ಗಮನ, ಮಾರ್ಗದಲ್ಲಿ ವ್ಯಾಸರ ದರ್ಶನ, ಏಕಚಕ್ರನಗರದಲ್ಲಿ ಬ್ರಾಹ್ಮಣನ ಮನೆಯಲ್ಲಿ ಅವರನ್ನಿಟ್ಟು ವ್ಯಾಸರ ಗಮನ **299**

30. ಪಾಂಡವರ ಭೈಕ್ಷಚರ್ಯೆ, ಪುರವಾಸಿಗಳ ಪ್ರೀತಿ, ಬ್ರಾಹ್ಮಣ ಗೃಹದಲ್ಲಿ ಆರ್ತನಾದ, ಕಾರಣವನ್ನು ತಿಳಿಯಲು ಕುಂತಿಯ ಪ್ರವೇಶ **307**

31. ತನ್ನನ್ನು ಕಳುಹಿಸಿಕೊಡುವಂತೆ ಪತ್ನಿಯ ಒತ್ತಾಯ, ಬ್ರಾಹ್ಮಣನಿಂದ ನಿರಾಕರಣೆ **320**

32. ಕನ್ಯೆಯ ವಚನ, ಬಾಲಕನ ವಚನ, ಕುಂತಿಯ ಪ್ರವೇಶ, ಬ್ರಾಹ್ಮಣನಿಂದ ಬಕವೃತ್ತಾಂತ ಕಥನ **330**

33. ತನ್ನ ಒಬ್ಬ ಪುತ್ರನನ್ನು ಕಳುಹಿಸುವುದಾಗಿ ಹೇಳಿ ಬ್ರಾಹ್ಮಣನಿಗೆ ಕುಂತಿಯ ಆಶ್ವಾಸನೆ 343

34. ಭೀಮನ ಮುಖ ಅರಳಿರುವುದನ್ನು ನೋಡಿ ಧರ್ಮರಾಜನ ಶಂಕೆ, ಕುಂತಿಯಿಂದ ಸಮಾಧಾನ, ಬಂಡಿ ಅನ್ನವನ್ನು ತೆಗೆದುಕೊಂಡು ಬಕನ ಸಮೀಪಕ್ಕೆ ಹೋಗಿ ಭೀಮನಿಂದ ಭಕ್ಷಣ 350

35. ಭೀಮ ಬಕರ ಯುದ್ಧ ಮತ್ತು ಬಕವಧೆ 367

36. ಶರಣಾಗತರಾದ ಬಕಪರಿವಾರಕ್ಕೆ ಭೀಮನಿಂದ ಅಭಯದಾನ ಮತ್ತು ನಿಯಮ ಬಂಧನ, ಪುನಃ ಕೆಲವು ಕಾಲ ಏಕಚಕ್ರನಗರದಲ್ಲಿ ವಾಸ 374

37. ಪಾಂಡವರು ವಾಸವಾಗಿದ್ದ ಮನೆಗೆ ಒಬ್ಬ ಬ್ರಾಹ್ಮಣನ ಪ್ರವೇಶ, ದ್ರೌಪದಿಯ ಸ್ವಯಂವರವನ್ನು ಪ್ರಸ್ತಾಪಿಸಿ ಅವನಿಂದ ಧೃಷ್ಟದ್ಯುಮ್ನ, ದ್ರೌಪದಿಯರ ಜನನ ಕಥನ 380

38. ಜತುಗೃಹದಲ್ಲಿ ಪಾಂಡವರ ದಾಹವನ್ನು ಕೇಳಿ ದ್ರುಪದನ ವಿಷಾದ ಮತ್ತು ಅರ್ಜುನನ ಬಗ್ಗೆ ಚಿಂತೆ 402

39. ಬ್ರಾಹ್ಮಣನಿಂದ ಪಾಂಡವರಿಗೆ ದ್ರುಪದನ ಪುರೋಹಿತರ ಸಮಾಧಾನ ವಚನಗಳ ಕಥನ. ಮತ್ತು ಸ್ವಯಂವರ ಘೋಷಣೆಯ ಸೂಚನೆಯ ಕಥನ 408

40. ಬ್ರಾಹ್ಮಣರ ಜೊತೆಯಲ್ಲಿ ಪಾಂಚಾಲನಗರವನ್ನು ಕುರಿತು ಪಾಂಡವರ ಗಮನ. ವ್ಯಾಸರ ಆಶ್ವಾಸನ ಮತ್ತು ಬ್ರಾಹ್ಮಣರ ಸಂವಾದ 412

41. ಅರ್ಧರಾತ್ರಿಯಲ್ಲಿ ಪಾಂಡವರ ಗಂಗಾಪ್ರಾಪ್ತಿ. ಚಿತ್ರರಥಗಂಧರ್ವನ ಜೊತೆಯಲ್ಲಿ ಅರ್ಜುನನ ಯುದ್ಧ, ಚಿತ್ರರಥನ ಪರಾಜಯ. ಆಗ್ನೇಯಾಸ್ತ್ರವನ್ನು ಕೊಟ್ಟು ಗಂಧರ್ವನಿಂದ ಅರ್ಜುನನ ಗಾಂಧರ್ವಾಸ್ತ್ರಗ್ರಹಣ 427

42. ಬ್ರಾಹ್ಮಣ ಪುರಸ್ಕಾರವಿಲ್ಲದಿರುವುದು ಧರ್ಷಣಕ್ಕೆ ಕಾರಣ ಎಂದು ಹೇಳಿ ಪುರೋಹಿತರನ್ನು ಸಂಪಾದಿಸಲು ಗಂಧರ್ವನಿಂದ ಸೂಚನೆ 440

43. ತಾಪತ್ಯೋಪಾಖ್ಯಾನ, ತಪತೀ ಮತ್ತು ಸಂವರಣರ ಸಮಾಗಮ. ಸಂವರಣನ ವಚನಗಳು, ತಪತಿಯ ಅಂತರ್ಧಾನ 446

44. ಭೂಮಿಯ ಮೇಲೆ ಬಿದ್ದ ಸಂವರಣನ ಬಳಿಗೆ ತಪತಿಯ ಆಗಮನ ಮತ್ತು ಅವರ ಸಂವಾದ 454

45. ತಪತಿಯ ಅಂತರ್ಧಾನ, ಸಂವರಣನ ವಿಲಾಪ ಮತ್ತು ಮೂರ್ಛೆ, ಮಂತ್ರಿಯಿಂದ ಸಮಾಧಾನ, ಸಂವರಣನ ತಪಸ್ಸು, ವಸಿಷ್ಠರ ಆಗಮನ 459

46. ಸೂರ್ಯನಿಂದ ತಪತಿಯನ್ನು ತಂದು ಸಂವರಣನ ಜೊತೆಯಲ್ಲಿ ವಿವಾಹ. ರಾಜನು ವನದಲ್ಲಿಯೇ ವಿಹರಿಸುತ್ತಿರಲು ರಾಜ್ಯದಲ್ಲಿ ಅನಾವೃಷ್ಟಿ. ವಸಿಷ್ಠರಿಂದ ರಾಜನ ಆನಯನ, ಸುಭಿಕ್ಷೆ 463

47. ಗಂಧರ್ವನಿಂದ ವಿಶ್ವಾಮಿತ್ರೋಪಾಖ್ಯಾನ ಕಥನ. ವಸಿಷ್ಠ ವಿಶ್ವಾಮಿತ್ರರ ವಿರೋಧ, ವಿಶ್ವಾಮಿತ್ರರ ಪರಾಜಯ, ತಪಸ್ಸಿನಲ್ಲಿ ನಿಷ್ಠೆ 470

48. ವಸಿಷ್ಠ ವಿಶ್ವಾಮಿತ್ರರ ವಿರೋಧದ ವಿಸ್ತಾರ, ಕಲ್ಮಾಷಪಾದನ ಕಥೆ, ರಾಕ್ಷಸಾವಿಷ್ಟನಾದ ಕಲ್ಮಾಷಪಾದನಿಂದ ವಸಿಷ್ಠರ ಎಲ್ಲಾ ಮಕ್ಕಳ ಭಕ್ಷಣ. ಆತ್ಮಹತ್ಯೆಯನ್ನು ಮಾಡಿಕೊಳ್ಳಲು ವಸಿಷ್ಠರ ವಿಫಲ ಪ್ರಯತ್ನಗಳು 487

49. ಪುನಃ ಆತ್ಮಹತ್ಯೆಗೆ ವಸಿಷ್ಠರ ವಿಫಲ ಪ್ರಯತ್ನಗಳು. ಅದೃಶ್ಯಂತಿಯ ಜೊತೆಯಲ್ಲಿ ಸಂವಾದ. ಆಶ್ರಮಕ್ಕೆ ಪ್ರತಿನಿವೃತ್ತಿ. ಕಲ್ಮಾಷಪಾದನನ್ನು ರಾಕ್ಷಸನಿಂದ ವಿಮೋಚನೆಗೊಳಿಸಿ ಮದಯಂತಿಯಲ್ಲಿ ಪುತ್ರೋತ್ಪಾದನೆ 498

50. ಆಶ್ರಮದಲ್ಲಿ ಪರಾಶರರ ಜನನ. ವಸಿಷ್ಠರಿಂದ ಅವರ ಸಾಂತ್ವನ ಕಾರ್ತವೀರ್ಯನ ವಂಶಸ್ಥರಿಂದ ಭೃಗುಕುಲದ ವಧೆ. ಔರ್ವರ ಜನ್ಮ. ಮತ್ತು ಕ್ಷತ್ರಿಯರ ಅಂಧತ್ವ 507

51. ಔರ್ವರ ಅನುಗ್ರಹದಿಂದ ಕ್ಷತ್ರಿಯರಿಗೆ ದೃಷ್ಟಿಪ್ರಾಪ್ತಿ. ಲೋಕವಿನಾಶಕ್ಕಾಗಿ ಔರ್ವರ ತಪಸ್ಸು. ಪಿತೃಗಳ ಮಾತಿನಂತೆ ತಪಸ್ಸನ್ನು ನಿಲ್ಲಿಸಿ, ಸಮುದ್ರದಲ್ಲಿ ಕ್ರೋಧಾಗ್ನಿಯ ವಿಸರ್ಜನೆ. ಪರಾಶರರು ಮಾಡಿದ ರಾಕ್ಷಸ ಸತ್ರ 513

52. ಸೌದಾಸನು ತನ್ನ ಭಾರ್ಯೆಯಲ್ಲಿ ವಸಿಷ್ಠರನ್ನು ನಿಯೋಜಿಸಲು ಬ್ರಾಹ್ಮಣಿಯ ಶಾಪ ಮೊದಲಾದ ವೃತ್ತಾಂತ ಕಥನ 527

53. ಗಂಧರ್ವವಚನದಂತೆ ಪಾಂಡವರಿಂದ ಧೌಮ್ಯರ ವರಣ, ಪಾಂಡವರ ಮತ್ತು ಧೌಮ್ಯರ ಹರ್ಷ. ಜೊತೆಯಲ್ಲಿ ಪಾಂಚಾಲದೇಶಕ್ಕೆ ಗಮನ 535

54. ಸ್ವಯಂವರಕ್ಕಾಗಿ ಪಾಂಡವರ ಮತ್ತು ಉಳಿದ ರಾಜರ ದ್ರುಪದಪುರಪ್ರವೇಶ. ಧೃಷ್ಟದ್ಯುಮ್ನನಿಂದ ಸ್ವಯಂವರದ ಘೋಷಣೆ 543

55. ಧೃಷ್ಟದ್ಯುಮ್ನನಿಂದ ತಂಗಿಗೆ ಬಂದ ರಾಜರ ಪರಿಚಯ,
ಸ್ಪರ್ಧೆಯಿಂದ ಲಕ್ಷ್ಯವೇಧವನ್ನು ಮಾಡಲು ಪ್ರಯತ್ನಿಸಿದ
ರಾಜರ ವೈಫಲ್ಯ, ಪಾಂಡವರನ್ನು ನೋಡಿ ಕೃಷ್ಣನ ಹರ್ಷ,
ಅರ್ಜುನನ ಧನುಸ್ಸಮೀಪ ಗಮನ 555

56. ಬ್ರಾಹ್ಮಣರು ಅನೇಕ ರೀತಿಯಲ್ಲಿ ಮಾತನಾಡುತ್ತಿರಲು ಅರ್ಜುನನಿಂದ
ಲಕ್ಷ್ಯವೇಧ, ಬ್ರಾಹ್ಮಣರ ಹರ್ಷ, ದ್ರೌಪದಿಯಿಂದ ಮಾಲಾರ್ಪಣೆ 571

57. ರಾಜರ ಕ್ಷೋಭೆ, ದ್ರುಪದನನ್ನು ಕೊಲ್ಲಲು ಪ್ರಯತ್ನ. ಭೀಮಸೇನನ
ಸ್ಥೈರ್ಯ, ಕೃಷ್ಣನಿಂದ ಬಲರಾಮನಿಗೆ ಪಾಂಡವರ ಪ್ರತ್ಯೇಕ ಪರಿಚಯ 581

58. ಕರ್ಣಾರ್ಜುನರ, ಭೀಮಶಲ್ಯರ, ಧರ್ಮರಾಜ ಸುಯೋಧನರ,
ದ್ವಂದ್ವ ಯುದ್ಧ, ಕರ್ಣಾದಿಗಳ ಪರಾಜಯ, ಪಶ್ಚಾತ್ನಿವೃತ್ತಿ,
ಭೀಮಾರ್ಜುನರಿಂದ ದ್ರೌಪದಿಯನ್ನು ಕರೆದುಕೊಂಡು ಕುಂತಿಯ
ಸಮೀಪಗಮನ 590

59. ಭೀಮಾರ್ಜುನರಿಂದ ಕುಂತಿಗೆ ದ್ರೌಪದಿಯ ನಿವೇದನೆ, ಕುಂತಿಯ ವಾಕ್ಯ,
ಪಾಂಡವರ ದಿಗ್ವಿಜಯ. ಐವರಿಗೂ ಪತ್ನಿಯೆಂಬ ಯುಧಿಷ್ಠಿರನ ನಿಶ್ಚಯ.
ಕೃಷ್ಣಬಲರಾಮರ ಆಗಮನ ಮತ್ತು ಕುಶಲ ಪ್ರಶ್ನೆ 602

60. ಧೃಷ್ಟದ್ಯುಮ್ನನಿಂದ ದ್ರೌಪದಿಯನ್ನು ಹಿಂಬಾಲಿಸಿ ಪಾಂಡವರ ಪರೀಕ್ಷಣ,
ದ್ರುಪದನ ಬಳಿಗೆ ಪುನರಾಗಮನ 613

61. ಧೃಷ್ಟದ್ಯುಮ್ನನಿಂದ ರಾತ್ರಿಯ ವೃತ್ತಾಂತದ ಕಥನ, ದ್ರುಪದನಿಂದ
ಧರ್ಮರಾಜನ ಬಳಿಗೆ ಪುರೋಹಿತನ ಪ್ರೇಷಣ, ಧರ್ಮರಾಜ
ಮತ್ತು ಪುರೋಹಿತನ ಸಂವಾದ 619

62. ದ್ರುಪದನಿಂದ ಪಾಂಡವರ ಪರೀಕ್ಷೆ, ಅವರು ಕ್ಷತ್ರಿಯರೆಂದು ನಿರ್ಧಾರ 628

63. ಧರ್ಮರಾಜನಿಂದ ತಾವು ಪಾಂಡುಪುತ್ರರೆಂದು ಕಥನ, ದ್ರುಪದನ ಹರ್ಷ,
ಐದು ಜನರಿಗೆ ದ್ರೌಪದಿಯನ್ನು ಕೊಡಲು ಅಸಂತೋಷ 636

64. ವ್ಯಾಸರನ್ನು ಕುರಿತು ದ್ರುಪದನ ಪ್ರಶ್ನೆ, ಧರ್ಮರಾಜ ಮತ್ತು
ಕುಂತಿಯ ವಚನಗಳು, ವ್ಯಾಸರಿಂದ ದ್ರುಪದನಿಗೆ ಏಕಾಂತದಲ್ಲಿ
ಉಪದೇಶ 645

65. ವ್ಯಾಸರಿಂದ ಪಂಚಕನ್ಯೋಪಾಖ್ಯಾನ ಪ್ರಾರಂಭ. ಅದರಲ್ಲಿ ನಾಳಾಯನಿಯ ಜನ್ಮ. ಅನಂತರ ಪತಿಸೇವೆಯಿಂದ ನಾಳಾಯನಿಯ ವರಸ್ವೀಕಾರ. ಅನಂತರ ಇಂದ್ರಸೇನೆಯ ಜನ್ಮ. ರುದ್ರದೇವರಿಂದ ಪಂಚಪತ್ನೀತ್ವ ವರಸ್ವೀಕಾರ **651**

66. ಪಂಚೇಂದ್ರೋಪಾಖ್ಯಾನ – ದೇವತೆಗಳ ಸತ್ರದಲ್ಲಿ ಬ್ರಹ್ಮದೇವರ ವಾಕ್ಯವನ್ನು ಕೇಳಿ ದೇವತೆಗಳಿಂದ ಗಂಗಾಸಮೀಪ ಗಮನ, ಅಲ್ಲಿ ಅಳುತ್ತಿರುವ ವನಿತೆಯ ದರ್ಶನ, ಅವಳನ್ನು ಕರೆದುಕೊಂಡು ರುದ್ರಸಮೀಪಕ್ಕೆ ಗಮನ, ರುದ್ರ ಮತ್ತು ಇಂದ್ರರ ಸಂವಾದ, ರುದ್ರನಿಂದ ಇಂದ್ರನ ನಿಂದೆ, ವ್ಯಾಸರಿಂದ ದ್ರುಪದನಿಗೆ ದಿವ್ಯ ದೃಷ್ಟಿಯನ್ನು ಕೊಟ್ಟು ಪಂಚೇಂದ್ರರ ಮತ್ತು ಅವರ ಸಮೀಪದಲ್ಲಿ ದ್ರೌಪದಿಯ ದರ್ಶನ, ದ್ರುಪದನ ಸಮಾಧಾನ ಮತ್ತು ಹರ್ಷ **665**

67. ವ್ಯಾಸರಿಂದ ದ್ರೌಪದಿಯ ದೇವತಾಂಶತ್ವ ಸಮರ್ಥನೆ. ದ್ರುಪದನಿಂದ ವ್ಯಾಸರ ಅಭಿಪ್ರಾಯದ ಅಂಗೀಕಾರ, ವಿವಾಹ, ಉಡುಗೊರೆಗಳು ಮತ್ತು ಎಲ್ಲರ ಹರ್ಷ **683**

68. ದ್ರೌಪದಿಗೆ ಕುಂತಿಯ ಆಶೀರ್ವಾದ. ಕೃಷ್ಣನು ಕಳುಹಿಸಿದ ಉಡುಗೊರೆಗಳು **696**

—0—

ಮಹಾಭಾರತ

ಆದಿಪರ್ವ - ಭಾಗ-೩

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೫

ದ್ರೋಣೋऽಥ ತಾನವದದ್ ಯೋ ಮದಿಷ್ಟಂ
ಕರ್ತುಂ ಪ್ರತಿಜ್ಞಾಂ ಪ್ರಥಮಂ ಕರೋತಿ ।
ತಂ ಧನ್ವಿನಾಂ ಪ್ರವರಂ ಸಾಧಯಿಷ್ಯ
ಇತ್ಯುರ್ಜನಸ್ತಾಮಕರೋತ್ ಪ್ರತಿಜ್ಞಾಮ್ ॥೩೫॥

ದ್ರೋಣ ಕುಮಾರರಿಗೆ ಹೇಳಿದ, 'ಯಾರು ಮೊದಲಿಗೆ ನನ್ನ ಇಷ್ಟವನ್ನು ಸಾಧಿಸಿ ಕೊಡಲು ಪ್ರತಿಜ್ಞೆ ಮಾಡುವನೋ ಅವನನ್ನು ನಾನು ಧನುರ್ಧಾರಿಗಳಲ್ಲಿ ಮೊದಲಿಗನನ್ನಾಗಿ ಮಾಡುವೆನು' ಎಂದು. ಆಗ ಅರ್ಜುನ ಆ ಪ್ರತಿಜ್ಞೆಯನ್ನು ಮಾಡಿದ.

ಉನ್ಮಾದನಾದೀನಿ ಸ ವೇದ ಕೃಷ್ಣಾದಸ್ತ್ರಾಣ್ಯ-
ನಾಪತ್ಸು ನ ತಾನಿ ಮುಂಚೇತ್ ।
ಇತ್ಯಾಜ್ಞಯಾ ಕೇಶವಸ್ಯಾಪರಾಣಿ
ಪ್ರಯೋಗಯೋಗ್ಯಾನಿ ಸದೇಚ್ಛತಿ ಸ್ಮ ॥೩೬॥

ಅರ್ಜುನ ಉನ್ಮಾದನಾದಿ ಅಸ್ತ್ರಗಳನ್ನು ಶ್ರೀಕೃಷ್ಣನಿಂದಲೆ ತಿಳಿದಿದ್ದ. ಆದರೆ ಅವುಗಳನ್ನು ಆಪತ್ತಿನಲ್ಲಿ ಹೊರತು ಬೇರೆ ಕಾಲದಲ್ಲಿ ಪ್ರಯೋಗಿಸುವಂತಿಲ್ಲ. ಅದರಿಂದ

ಕೃಷ್ಣನ ಅನುಮತಿಯಿಂದಲೆ ಸದಾ ಪ್ರಯೋಗಕ್ಕೆ ಯೋಗ್ಯವಾದ ಅಸ್ತ್ರಗಳನ್ನು ದ್ರೋಣನಿಂದ ಕಲಿಯಲು ಬಯಸಿದ.

ಭೀಷ್ಮಾದಿಭಿರ್ಭವಿತಾ ಸಂಗರೋ ನ-
ಸ್ತದಾ ನಾಹಂ ಗುರುಭಿರ್ನಿತ್ಯಯೋದ್ಧಾ ।
ಭವೇಯಮೇಕಃ ಫಲ್ಗುನೋಽಸ್ತ್ರಜ್ಞ ಏಷಾಂ
ನಿವಾರಕಶ್ಚೇನ್ಮಮ ಧರ್ಮಲಾಭಃ ॥೩೭॥

ಭೀಮ ಪ್ರತಿಜ್ಞೆಯನ್ನು ಮಾಡಲಿಲ್ಲ. ಏಕೆಂದರೆ, 'ಭೀಷ್ಮಾದಿಗಳೊಡನೆ ನಮಗೆ ಯುದ್ಧವಾಗಲಿದೆ. ಆಗ ನಾನು ಆ ಹಿರಿಯರೊಡನೆ ಎಂದೂ ಯುದ್ಧಮಾಡಲಾರೆನು. ಆಗ ಅಸ್ತ್ರಜ್ಞನಾದ ಒಬ್ಬ ಅರ್ಜುನ ಅವರನ್ನು ಇದಿರಿಸುವವನಾಗಿದ್ದರೆ ನನಗೆ ಪುಣ್ಯ ಲಾಭವಾಗುವುದು'.

ನ ಬುದ್ಧಿಪೂರ್ವಂ ವರ ಇಂದಿರಾಪತೇ-
ರನ್ಯತ್ರ ಮೇ ಗ್ರಾಹ್ಯ ಇತಶ್ಚ ಜಿಷ್ಣುಃ ।
ಕರೋತು ಗುರ್ವರ್ಥಮಿತಿ ಸ್ಮ ಚಿಂತಯನ್
ಭೀಮಃ ಪ್ರತಿಜ್ಞಾಂ ನ ಚಕಾರ ತತ್ರ ॥೩೮॥

ಶ್ರೀಹರಿಯಿಂದ ಹೊರತು ಬೇರೆಯವರಿಂದ ವರವೂ ನನಗೆ ಬುದ್ಧಿಪೂರ್ವಕ ಸ್ವೀಕಾರಾರ್ಹವಲ್ಲ. ಅದರಿಂದಲೂ ಅರ್ಜುನನೇ ಗುರುವಿಗಾಗಿ ಪ್ರತಿಜ್ಞೆ ಮಾಡಲಿ ಎಂದು ಬಗೆದು ಭೀಮ ಆಗ ಪ್ರತಿಜ್ಞೆ ಮಾಡಲಿಲ್ಲ.

ತತ್ಪ್ರೇರಿತೇನಾರ್ಜುನೇನ ಪ್ರತಿಜ್ಞಾ ಕೃತಾ ಯದಾ ವಿಪ್ರವರಸ್ತತಃ ಪರಮ್ ।
ಸ್ನೇಹಂ ನಿತಾಂತಂ ಸುರರಾಜ ಸೂನೌ ಕೃತ್ವಾ ಮಹಾಸ್ತ್ರಾಣಿ ದದೌ ಸ ತಸ್ಯ ॥

ಭೀಮನಿಂದ ಪ್ರೇರಿತನಾಗಿ ಅರ್ಜುನ ಪ್ರತಿಜ್ಞೆ ಮಾಡಿದಾಗ ಬ್ರಾಹ್ಮಣೋತ್ತಮನಾದ ದ್ರೋಣ ಅರ್ಜುನನಲ್ಲಿ ಹೆಚ್ಚು ಪ್ರೀತಿ ಮಾಡಿ ಅವನಿಗೆ ಮಹಾ ಅಸ್ತ್ರಗಳನ್ನು ಉಪದೇಶಿಸಿದ.

ಸ ಪಕ್ಷಪಾತಂ ಚ ಚಕಾರ ತಸ್ಮಿನ್
ಕರೋತಿ ಚಾಸ್ಯೋರುತರಾಂ ಪ್ರಶಂಸಾಮ್ ।
ರಹಸ್ಯವಿದ್ಯಾಶ್ಚ ದದಾತಿ ತಸ್ಯ
ನಾನ್ಯಸ್ಯ ಕಸ್ಯಾಪಿ ತಥಾ ಕಥಂಚಿತ್ ॥೪೦॥

ಅಂದಿನಿಂದ ದ್ರೋಣ ಅರ್ಜುನನ ಪಕ್ಷಪಾತಿಯಾದ. ಅವನ ಪ್ರಶಂಸೆಯನ್ನೇ ಹೆಚ್ಚಾಗಿ ಮಾಡಿದ. ಗೋಪ್ಯವಾದ ಮಂತ್ರಗಳನ್ನು ಅವನಿಗೇ ಉಪದೇಶಿಸಿದ. ಹಾಗೆ ಬೇರೆ ಯಾರಿಗೂ ಯಾವ ರೀತಿಯಲ್ಲಿಯೂ ಮಾಡಲಿಲ್ಲ.

ಭೀಮಃ ಸಮಸ್ತಂ ಪ್ರತಿಭಾ ಬಲೇನ
ಜಾನನ್ ಸ್ನೇಹಂ ತ್ವದ್ವಿತೀಯಂ ಕನಿಷ್ಠೇ ।
ದ್ರೋಣಸ್ಯ ಕೃತ್ವಾ ಸಕಲಾಸ್ತ್ರವೇದಿನಂ
ಕರ್ತುಂ ಪಾರ್ಥಂ ನಾರ್ಜುನವಚ್ಚಕಾರ ॥೪೧॥

ಎಲ್ಲ ಅಸ್ತ್ರವನ್ನೂ ಪ್ರತಿಭಾ ಬಲದಿಂದಲೆ ತಿಳಿದಿದ್ದರಿಂದಲೂ ಭೀಮ ತಮ್ಮನಾದ ಅರ್ಜುನನಲ್ಲಿ ದ್ರೋಣನಿಗೆ ಅನುಪಮ ಪ್ರೀತಿ ಉಂಟುಮಾಡಿ ಅವನನ್ನು ಸರ್ವಾಸ್ತ್ರಕೋವಿದನನ್ನಾಗಿ ಮಾಡುವ ಉದ್ದೇಶದಿಂದ ಅರ್ಜುನನಂತೆ ತಾನು ಪ್ರತಿಜ್ಞೆ ಮಾಡಲಿಲ್ಲ.

ನೈವಾತಿಯತ್ನೇನ ದದರ್ಶ ಲಕ್ಷ್ಯಂ
ಶುಶ್ರೂಷಾಯಾಂ ಪಾರ್ಥಮಗ್ರೇ ಕರೋತಿ ।
ಸ್ವಬಾಹುವೀರ್ಯಾದ್‌ಭಗವತ್ಪ್ರಸಾದಾ-
ನ್ನಿಹನ್ಮಿ ಶತ್ರೂನ್ ಕಿಮನೇನ ಚೇತಿ ॥೪೨॥

ಭೀಮ ಬಹುಪ್ರಯತ್ನದಿಂದ ಲಕ್ಷ್ಯವನ್ನು ನೋಡುತ್ತಲೂ ಇರಲಿಲ್ಲ. ಗುರುಶುಶ್ರೂಷೆಯಲ್ಲಿಯೂ ಅರ್ಜುನನನ್ನು ಮುಂದೆ ಮಾಡುತ್ತಿದ್ದ. 'ನಾನು ನನ್ನ ಬಾಹುಬಲದಿಂದಲೂ ಗುರ್ವನುಗ್ರಹದಿಂದಲೂ ಶತ್ರುಗಳನ್ನು ಕೊಲ್ಲುವೆ. ಪ್ರತಿಜ್ಞೆ ಮಾಡಿ ಅಸ್ತ್ರೋಪದೇಶ ಪಡೆಯುವರಿಂದೇನು?' ಎಂದು.

ತದಾ ಸಮೀಯುಃ ಸಕಲಾಃ ಕ್ಷಿತೀಶ
ಪುತ್ರಾ ದ್ರೋಣಾತ್ ಸಕಲಾಸ್ತ್ರಾಣ್ಯವಾಪ್ತುಮ್ ।
ದದೌ ಸ ತೇಷಾಂ ಪರಮಾಸ್ತ್ರಾಣಿ ವಿಪ್ರೋ
ರಾಮಾದವಾಪ್ತಾನ್ಯಗತಾನಿ ಚಾನ್ಯೈಃ ॥೪೩॥

ಆಗ ಎಲ್ಲ ರಾಜಕುಮಾರರೂ ದ್ರೋಣನಿಂದ ಸಕಲ ಅಸ್ತ್ರಗಳನ್ನೂ ಕಲಿಯಲು ಬಂದರು. ದ್ರೋಣ ಪರಶುರಾಮರಿಂದ ತಾನು ತಿಳಿದಿದ್ದ. ಅನ್ಯರು ತಿಳಿಯದಿದ್ದ ಉತ್ತಮ ಅಸ್ತ್ರಗಳನ್ನು ಅವರಿಗೆ ಕಲಿಸಿದ.

ಅಸ್ತ್ರಾಣಿ ಚಿತ್ರಾಣಿ ಮಹಾಂತಿ ದಿವ್ಯಾ
ನ್ಯಸ್ಯೈರ್ನರೈರ್ಮನಸಾಪ್ಯಸ್ಮೃತಾನಿ ।
ಅವಾಪ್ಯ ಸರ್ವೇ ತನಯಾ ನೃಪಾಣಾಂ
ಶಕ್ತಾ ಬಭೂವುರ್ನ ಯಥೈವ ಪೂರ್ವೇ ॥೪೪॥

ಬೇರೆ ರಾಜರುಗಳಿಂದ ಮನಸ್ಸಿನಲ್ಲಿಯೂ ಚಿಂತಿಸಲಾಗದಿದ್ದ ವಿಚಿತ್ರ ಮಹಾ ದಿವ್ಯಾಸ್ತ್ರಗಳನ್ನು ಪಡೆದು ಎಲ್ಲ ರಾಜಕುಮಾರರು ಹಿಂದಿನ ರಾಜರುಗಳಂತೆಯೆ ಆಗದೆ ಅವರಿಗಿಂತಲೂ ಹೆಚ್ಚು ಸಮರ್ಥರಾದರು.

ನೈತಾದೃಶಾಃ ಪೂರ್ವಮಾಸನ್ನರೇಂದ್ರಾ
ಅಸ್ತ್ರೇ ಬಲೇ ಸರ್ವ ವಿದ್ಯಾಸು ಚೈವ ।
ದೌಷ್ಯಂತಿ ಮಾಂಧಾತೃಮರುತ್ತ ಪೂರ್ವಾ-
ಶ್ಚೈತತ್ಸಮಾ ನಾಸುರುದಾರವೀರ್ಯಾಃ ॥೪೫॥

ಹಿಂದೆ ಎಂದೂ ಅಸ್ತ್ರದಲ್ಲಿ ಬಲದಲ್ಲಿ ಸಕಲ ವಿದ್ಯೆಗಳಲ್ಲಿ ಇಂಥ ರಾಜರೆ ಇರಲಿಲ್ಲ. ಮಹಾಬಲಶಾಲಿಗಳೆನಿಸಿದ್ದ ಭರತ ಮಾಂಧಾತೃ ಮರುತ್ತ ಮುಂತಾದವರೂ ಈ ರಾಜಕುಮಾರರಿಗೆ ಸಮಾನರಾಗಿರಲಿಲ್ಲ.

★★★★★

ನೂರ ಮೂವತ್ತೆರಡನೆಯ ಅಧ್ಯಾಯ

(ದ್ರೋಣರಿಂದ ಅರ್ಜುನನ ಪರೀಕ್ಷೆ. ಅರ್ಜುನನ ಅತಿಶಯ. ಅರ್ಜುನನಿಂದ ಲಕ್ಷ್ಯವೇಧ. ಬ್ರಹ್ಮಶಿರಸ್ ಅಸ್ತ್ರದ ಪ್ರಾಪ್ತಿ.)

ವೈಶಂಪಾಯನಃ

ದ್ರೋಣಸ್ಯ ತು ತದಾ ಶಿಷ್ಯೌ ಗದಾಯುದ್ಧೇ ವಿಶೇಷತಃ ।
ದುರ್ಯೋಧನಶ್ಚ ಭೀಮಶ್ಚ ಸದಾ ಸನ್ನದ್ಧಮಾನಸೌ ॥೧॥

ದ್ರೋಣರಿಗೆ ಗದಾಯುದ್ಧದಲ್ಲಿ ವಿಶೇಷವಾಗಿ ಮನಸ್ಸಿನಲ್ಲಿ ಸನ್ನದ್ಧರಾದ ದುರ್ಯೋಧನ ಮತ್ತು ಭೀಮ ಇಬ್ಬರು ಶಿಷ್ಯರು.

ಅಶ್ವತ್ಥಾಮಾ ಮಹಾಸ್ತ್ರೇಷು ಸರ್ವೇಷ್ವಭ್ಯಧಿಕೋऽಭವತ್ ।
ಯುಧಿಷ್ಠಿರೋ ರಥಶ್ರೇಷ್ಠಃ ಸರ್ವೇಷು ಚ ಧನಂಜಯಃ ।
ತಥಾऽತಿ ಪುರುಷಾನನ್ಯಾನ್ ಯಮಜಾವಸಿಚರ್ಮಣಿ ॥೨॥

ಮಹಾಸ್ತ್ರಗಳಲ್ಲಿ ಅಶ್ವತ್ಥಾಮರು ಸರ್ವಶ್ರೇಷ್ಠರಾದರು. ರಥಯುದ್ಧದಲ್ಲಿ ಯುಧಿಷ್ಠಿರನು ಶ್ರೇಷ್ಠನಾದನು. ಎಲ್ಲ ವಿದ್ಯೆಗಳಲ್ಲಿಯೂ ಅರ್ಜುನನು ಶ್ರೇಷ್ಠನಾದನು. ಖಡ್ಗಯುದ್ಧದಲ್ಲಿ ನಕುಲ, ಸಹದೇವರು ಉಳಿದವರನ್ನು ಮೀರಿಸಿದರು.

ಪ್ರಥಿತಃ ಸಾಗರಾಂತಾಯಾಂ ರಥಯೂಥಪಯೂಥಪಃ ।
ಯುದ್ಧಯೋಗಬಲೋತ್ಸಾಹೈಃ ಸರ್ವಾಸ್ತ್ರೇಷು ಚ ನಿಷ್ಠಿತಃ ।
ಅಸ್ತ್ರೇ ಗುರ್ವನುರಾಗೇ ಚ ವಿಶಿಷ್ಟೋऽಭವದರ್ಜುನಃ ॥೩॥

ಅರ್ಜುನನು ಸಾಗರಾಂತವಾದ ಭೂಮಿಯಲ್ಲಿ ರಥಯೂಥಪ- ಯೂಥಪನೆಂದು ಪ್ರಖ್ಯಾತನಾದನು. ಯುದ್ಧಯೋಗ, ಬಲ, ಉತ್ಸಾಹಗಳಿಂದ ಯಾವಾಗಲೂ ಅಸ್ತ್ರವಿದ್ಯೆಯಲ್ಲಿ ನಿರತನಾಗಿ ಗುರುಗಳ ಅನುಗ್ರಹವನ್ನು ಸಂಪಾದಿಸಿ, ಅರ್ಜುನನು ವಿಶಿಷ್ಟನಾದನು.

ತುಲ್ಯೇಷ್ವಸ್ತ್ರೋಪದೇಶೇಷು ಸೌಷ್ಠವೇಷು ಚ ವೀರ್ಯವಾನ್ ।
ಏಕಃ ಸರ್ವಕುಮಾರಾಣಾಂ ಸ ಬಭೂವಾರ್ಜುನೋಽಧಿಕಃ ॥೪॥

ದ್ರೋಣರು ಎಲ್ಲಾ ಕುಮಾರರಿಗೂ ಒಂದೇ ರೀತಿಯ ಅಸ್ತ್ರೋಪದೇಶ ಮತ್ತು ಕೌಶಲವನ್ನು ಹೇಳಿಕೊಟ್ಟರೂ, ಅರ್ಜುನನೊಬ್ಬನು ಮಾತ್ರ ಎಲ್ಲಾ ಕುಮಾರರನ್ನೂ ಮೀರಿಸಿದನು.

ಪ್ರಾಣಾಧಿಕಂ ಭೀಮಸೇನಂ ಕೃತವಿದ್ಯಂ ಧನಂಜಯಮ್ ।
ಧಾರ್ತರಾಷ್ಟ್ರಾ ದುರಾತ್ಮಾನೋ ನಾಮೃಷ್ಯಂತ ಪರಂತಪ ॥೫॥

ಪರಂತಪನೇ, ಅಧಿಕಪ್ರಾಣಬಲವುಳ್ಳ ಭೀಮಸೇನನನ್ನು ಮತ್ತು ವಿದ್ಯಾವಿಶಾರದನಾದ ಅರ್ಜುನನ್ನು ನೋಡಿ, ದುಷ್ಟರಾದ ಧೃತರಾಷ್ಟ್ರಪುತ್ರರು ಸಹಿಸಲಿಲ್ಲ.

ತಾಂಸ್ತು ಸರ್ವಾನ್ ಸಮಾನೀಯ ಸರ್ವವಿದ್ಯಾಸು ನಿಷ್ಠಿತಾನ್ ।
ದ್ರೋಣಃ ಪ್ರಹರಣಜ್ಞಾನೇ ಜಿಜ್ಞಾಸುಃ ಪುರುಷರ್ಷಭಾನ್ ॥೬॥

ಕೃತ್ರಿಮಂ ಭಾಸಮಾರೋಪ್ಯ ವೃಕ್ಷಾಗ್ರೇ ಶಿಲ್ಪಿಭಿಃ ಕೃತಮ್ ।
ಅವಿಜ್ಞಾತಂ ಕುಮಾರಾಣಾಂ ಲಕ್ಷ್ಯಭೂತಮುಪಾದಿಶತ್ ॥೭॥

ದ್ರೋಣರು ವಿವಿಧ ವಿದ್ಯೆಗಳಲ್ಲಿ ಶಿಕ್ಷಣವನ್ನು ಪಡೆದ ಆ ಕುಮಾರರ ಕೌಶಲವನ್ನು ತಿಳಿಯುವ ದೃಷ್ಟಿಯಿಂದ ಅವರೆಲ್ಲರನ್ನೂ ಕರೆದು ಒಂದು ವೃಕ್ಷದ ಮೇಲೆ ಕುಮಾರರಿಗೆ ತಿಳಿಯದಂತೆ ಶಿಲ್ಪಿಗಳು ಮಾಡಿದ ಒಂದು ಕೃತ್ರಿಮವಾದ ಪಕ್ಷಿಯನ್ನಿಟ್ಟು ಇದು ನಿಮಗೆ ಲಕ್ಷ್ಯವಾದುದು ಎಂದು ಕುಮಾರರಿಗೆ ಆದೇಶವನ್ನು ನೀಡಿದರು.

ದ್ರೋಣಃ

ಶೀಘ್ರಂ ಭವಂತಃ ಸರ್ವೇ ವೈ ಧನೂಂಷ್ಯಾದಾಯ ಸತ್ವರಾಃ ।
ಭಾಸಮೇತಂ ಸಮುದ್ದಿಶ್ಯ ತಿಷ್ಠಂತು ಸಹಿತೇಷವಃ ॥೮॥

ಮದ್ವಾಕ್ಯಸಮಕಾಲಂ ಚ ಶಿರೋಽಸ್ಯ ವಿನಿಕೃತ್ಯತಾಮ್ ।
ಏಕೈಕಶೋ ನಿಯೋಕ್ಷ್ಯಾಮಿ ತಥಾ ಕುರುತ ಪುತ್ರಕಾಃ ॥೯॥

ನೀವೆಲ್ಲರೂ ಬೇಗ ಧನುಸ್ಸುಗಳನ್ನು ತೆಗೆದುಕೊಂಡು ಬಂದು ಬಾಣಗಳನ್ನು ಹಿಡಿದುಕೊಂಡು ಈ ಪಕ್ಷಿಯ ಮೇಲೆ ಗುರಿಯಿಟ್ಟು ನಿಲ್ಲಬೇಕು. ನಾನು ಹೇಳಿದ ತಕ್ಷಣ ಬಾಣಪ್ರಯೋಗ ಮಾಡಿ ಅದರ ಶಿರಸ್ಸನ್ನು ಕತ್ತರಿಸಬೇಕು. ಪುತ್ರರೇ, ನಿಮ್ಮನ್ನು ಒಬ್ಬೊಬ್ಬರಾಗಿ ಕರೆಯುವೆನು. ಹಾಗೆ ಮಾಡಿ.

ವೈಶಂಪಾಯನಃ

ತತೋ ಯುಧಿಷ್ಠಿರಂ ಪೂರ್ವಮುವಾಚಾಂಗಿರಸಾಂ ವರಃ ।
ಸಂಧತ್ಸ್ವ ಬಾಣಂ ದುರ್ಧರ್ಷ ಮದ್ವಾಕ್ಯಾಂತೇ ವಿಮುಚ್ಯತಾಮ್ ॥೧೦॥

ಅನಂತರ ಆಂಗಿರಸಪ್ರವರರಾದ ದ್ರೋಣರು ಮೊದಲು ಯುಧಿಷ್ಠಿರನನ್ನು ಕರೆದು ದುರ್ಧರ್ಷನೇ ಬಾಣವನ್ನು ಹೂಡಿ ನಿಲ್ಲು. ನಾನು ಹೇಳಿದ ತಕ್ಷಣ ಬಾಣ ಪ್ರಯೋಗವನ್ನು ಮಾಡು ಎಂದು ಹೇಳಿದರು.

ತತೋ ಯುಧಿಷ್ಠಿರಃ ಪೂರ್ವಂ ಧನುರ್ಗೃಹ್ಯ ಮಹಾವರಮ್ ।
ತಸ್ಥೌ ಭಾಸಂ ಸಮುದ್ದಿಶ್ಯ ಗುರುವಾಕ್ಯಪ್ರಚೋದಿತಃ ॥೧೧॥

ಆಗ ಮೊದಲು ಯುಧಿಷ್ಠಿರನು ಗುರುವಾಕ್ಯಪ್ರಚೋದಿತನಾಗಿ ಮಹಾ ಝೇಂಕಾರವಿರುವ ಧನುಸ್ಸನ್ನು ಹಿಡಿದುಕೊಂಡು ಪಕ್ಷಿಯ ಮೇಲೆ ಗುರಿಯಿಟ್ಟು ನಿಂತನು.

ತತೋ ವಿತತಧನ್ವಾನಂ ದ್ರೋಣಸ್ತಂ ಕುರುನಂದನಮ್ ।
ಸ ಮುಹೂರ್ತಾದುವಾಚೇದಂ ವಚನಂ ಭರತರ್ಷಭ ॥೧೨॥

ಭರತರ್ಷಭನೇ, ಧನುಸ್ಸನ್ನು ಬಗ್ಗಿಸಿ, ನಿಂತ ಕುರುನಂದನನನ್ನು ಕುರಿತು, ಒಂದು ಮುಹೂರ್ತವಾದ ಬಳಿಕ ದ್ರೋಣರು ಹೀಗೆ ಹೇಳಿದರು.

ಪಶ್ಯಸ್ಯೇತಂ ದ್ರುಮಾಗ್ರಸ್ಥಂ ಭಾಸಂ ಸುರವರಾತ್ಮಜ ।
ಪಶ್ಯಾಮೀತ್ಯೇವ ಚಾಚಾರ್ಯಂ ಪ್ರತ್ಯುವಾಚ ಯುಧಿಷ್ಠಿರಃ ॥೧೩॥

ಸುರವರಾತ್ಮಜನೇ, ವೃಕ್ಷದ ಮೇಲಿರುವ ಪಕ್ಷಿಯು ಕಾಣುತ್ತಿದೆಯೇ? ಯುಧಿಷ್ಠಿರನು ಕಾಣುತ್ತಿದೆಯೆಂದು ಆಚಾರ್ಯರಿಗೆ ಪ್ರತ್ಯುತ್ತರವನ್ನು ಕೊಟ್ಟನು.

ಸ ಮುಹೂರ್ತಾದಿವ ಪುನಃ ದ್ರೋಣಸ್ತಂ ಪ್ರತ್ಯಭಾಷತ ।
ಪಾರ್ಥ ವೃಕ್ಷಮಿಮಂ ಮಾಂ ಚ ಭ್ರಾತೄ ನ್ ವಾऽಪಿ ಪ್ರಪಶ್ಯಸಿ ॥

ದ್ರೋಣರು ಪುನಃ ಮುಹೂರ್ತವಾದ ಮೇಲೆ ಅವನನ್ನು ಕುರಿತು ಪಾರ್ಥನೇ ಈ ವೃಕ್ಷವನ್ನು ನನ್ನನ್ನು, ಮತ್ತು ತಮ್ಮಂದಿರನ್ನು ಕಾಣುತ್ತಿದ್ದೀಯಾ ಎಂದು ಕೇಳಿದರು.

ತಮುವಾಚ ಚ ಕೌಂತೇಯಃ ಪಶ್ಯಾಮ್ಯೇನಂ ವನಸ್ಪತಿಮ್ ।
ಭವಂತಂ ಚ ತಥಾ ಭ್ರಾತೄ ನ್ ಭಾಸಂ ಚೇತಿ ಪುನಃಪುನಃ ॥೧೫॥

ಕೌಂತೇಯನಾದ ಯುಧಿಷ್ಠಿರನು ಈ ವನಸ್ಪತಿಯನ್ನೂ, ತಮ್ಮನ್ನೂ, ತಮ್ಮಂದಿರನ್ನೂ ನೋಡುತ್ತಿದ್ದೇನೆಂದು ಪುನಃ ಪುನಃ ಆಚಾರ್ಯರನ್ನು ಕುರಿತು ಹೇಳಿದನು.

ತಮುವಾಚಾಪಸರ್ಪೇತಿ ದ್ರೋಣೋऽಪ್ರೀತಮನಾ ಇವ ।
ನೈತಚ್ಛಕ್ಯಂ ತ್ವಯಾ ವೇದ್ಧುಂ ಲಕ್ಷ್ಯಮಿತ್ಯೇವ ಕುತ್ಸಯನ್ ॥೧೬॥

ದ್ರೋಣರು ಬೇಸರಗೊಂಡ ಮನಸ್ಸಿನಿಂದ ನೀನು ದೂರ ಸರಿ. ನೀನು ಈ ಲಕ್ಷ್ಯವನ್ನು ಭೇದಿಸಲಾರೆ ಎಂದು ಕುತ್ಸನಪೂರ್ವಕವಾಗಿ ನುಡಿದರು.

ತತೋ ದುರ್ಯೋಧನಾದೀಂಸ್ತಾನ್ ಧಾರ್ತರಾಷ್ಟ್ರಾನ್ ಮಹಾಬಲಾನ್ ।
ತೇನೈವ ಕ್ರಮಯೋಗೇನ ಜಿಜ್ಞಾಸುಃ ಪರ್ಯಪೃಚ್ಛತ ॥೧೭॥

ಅನಂತರ ಧೃತರಾಷ್ಟ್ರನ ಮಕ್ಕಳಾದ ಮಹಾಬಲರಾದ ದುರ್ಯೋಧನಾದಿಗಳನ್ನು ಅವರ ಕೌಶಲವನ್ನು ತಿಳಿಯುವ ಉದ್ದೇಶದಿಂದ ಅದೇ ಕ್ರಮದಲ್ಲಿ ಪ್ರಶ್ನೆ ಮಾಡಿದರು.

ಅನ್ಯಾಂಶ್ಚ ಶಿಷ್ಯಾನ್ ಭೀಮಾದೀನ್ ರಾಜ್ಞಶ್ಚೈವಾನ್ಯದೇಶಜಾನ್ ।
ತಥೈವ ಸರ್ವೇ ಸರ್ವಂ ತತ್ ಪಶ್ಯಾಮ ಇತಿ ಕುತ್ಸಿತಾಃ ॥೧೮॥

ಹಾಗೇ ಎಲ್ಲ ಶಿಷ್ಯರನ್ನೂ, ಭೀಮಾದಿಗಳನ್ನೂ ಅನ್ಯದೇಶದ ರಾಜರುಗಳನ್ನೂ ಪ್ರಶ್ನೆಮಾಡಿದರು. ಎಲ್ಲವನ್ನು ನೋಡುತ್ತಿದ್ದೇವೆ ಎಂದು ಹೇಳಿದ ಅವರೆಲ್ಲರೂ ದ್ರೋಣರಿಂದ ನಿಂದನೆಗೆ ಒಳಗಾದರು.

ತತೋ ಧನಂಜಯಂ ದ್ರೋಣಃ ಸ್ಮಯಮಾನೋऽಭ್ಯಭಾಷತ ।
ತ್ವಯೇದಾನೀಂ ಪ್ರಹರ್ತವ್ಯಂ ಲಕ್ಷ್ಯಮೇತನ್ನಿಪಾತ್ಯತಾಮ್ ॥೧೯॥

ಅನಂತರ ದ್ರೋಣರು ನಗುತ್ತಾ ಅರ್ಜುನನನ್ನು ಕರೆದು, ನೀನು ಬಾಣ ಪ್ರಯೋಗವನ್ನು ಮಾಡಿ, ಈಗ ಲಕ್ಷ್ಯವನ್ನು ಉರುಳಿಸಬೇಕು ಎಂದು ಹೇಳಿದರು.

ಮದಾ್ವಕ್ಯಸಮಕಾಲಂ ತೇ ಮೋಕ್ತವ್ಯಶ್ಚ ಭವೇಚ್ಛರಃ ।
ವಿಕೃಷ್ಯ ಕಾರ್ಮುಕಂ ತ್ವತ್ರ ತಿಷ್ಠ ತಾವನ್ಮುಹೂರ್ತಕಮ್ ॥೨೦॥

ನಾನು ಬಾಣಪ್ರಯೋಗ ಮಾಡು ಎಂದು ಹೇಳಿದ ತಕ್ಷಣ. ನೀನು ಬಾಣ ಪ್ರಯೋಗ ಮಾಡಬೇಕಾಗುತ್ತದೆ. ಬಿಲ್ಲನ್ನು ಎಳೆದು, ಬಾಣವನ್ನು ಹೂಡಿ, ಮೊದಲು ಒಂದು ಮುಹೂರ್ತ ಇಲ್ಲಿ ನಿಲ್ಲು.

ಏವಮುಕ್ತಾ ಸವ್ಯಸಾಚೀ ಮಂಡಲೀಕೃತಕಾರ್ಮುಕಃ ।
ತಸ್ಥೌ ಭಾಸಂ ಸಮುದ್ದಿಶ್ಯ ಗುರುವಾಕ್ಯಸಮಾಹಿತಃ ॥೨೧॥

ಹೀಗೆ ಅರ್ಜುನನು ಗುರುವಾಕ್ಯವನ್ನು ಕೇಳಿ ಸಮಾಧಾನದಿಂದ ಬಿಲ್ಲನ್ನು ಎಳೆದು ಮಂಡಲಾಕಾರವನ್ನಾಗಿ ಮಾಡಿ, ಬಾಣವನ್ನು ಹೂಡಿ, ಪಕ್ಷಿಗೆ ಗುರಿಯಿಟ್ಟು ನಿಂತನು.

ಮುಹೂರ್ತಾದೇವ ತಂ ದ್ರೋಣಃ ತಥೈವ ಸಮಭಾಷತ ।
ಪಶ್ಯಸ್ಯೇತಂ ಸ್ಥಿತಂ ಭಾಸಂ ದ್ರುಮಂ ಮಾಮಪಿ ಚೇತ್ಯುತ ॥೨೨॥

ಪಶ್ಯಾಮ್ಯೇಕಂ ಭಾಸಮೇವಾಹಮಿತಿ ತಂ ಪ್ರತ್ಯಭಾಷತ ।
ನತು ವೃಕ್ಷಂ ಭವಂತಂ ವಾ ಪಶ್ಯಾಮೀತಿ ಚ ಭಾರತ ॥೨೩॥

ಒಂದು ಮುಹೂರ್ತ ಕಳೆದ ಮೇಲೆ ದ್ರೋಣರು ಮೊದಲಿನಂತೆ ಈ ವೃಕ್ಷವನ್ನೂ, ಪಕ್ಷಿಯನ್ನೂ, ಮತ್ತು ನನ್ನನ್ನೂ ನೋಡುತ್ತಿದ್ದೀಯಾ ಎಂದು ಕೇಳಿದರು. ಭಾರತನೇ ಅರ್ಜುನನು ಪಕ್ಷಿಯೊಂದು ಮಾತ್ರ ಕಾಣುತ್ತಿದೆ. ನೀವಾಗಲೀ, ವೃಕ್ಷವಾಗಲೀ ಕಾಣುವುದಿಲ್ಲ ಎಂದು ಹೇಳಿದನು.

ತತಃ ಪ್ರೀತಮನಾ ದ್ರೋಣೋ ಮುಹೂರ್ತಾದಿವ ತಂ ಪುನಃ ।
ಪ್ರತ್ಯಭಾಷತ ದುರ್ಧರ್ಷಂ ಪಾಂಡವಾನಾಂ ರಥರ್ಷಭಮ್ ।
ಭಾಸಂ ಪಶ್ಯಸಿ ಯದ್ಯೇನಂ ತಥಾ ಬ್ರೂಹಿ ಪುನರ್ವಚಃ ॥೨೪॥

ಅದರಿಂದ ಸಂತೋಷಗೊಂಡ ದ್ರೋಣರು ಒಂದು ಮುಹೂರ್ತಬಿಟ್ಟು ಪಾಂಡವರಲ್ಲಿ ರಥಶ್ರೇಷ್ಠನಾದ ದುರ್ಧರ್ಷನಾದ ಅರ್ಜುನನ್ನು ಕುರಿತು ನೀನು ಹೇಗೆ ಪಕ್ಷಿಯನ್ನು ನೋಡುತ್ತಿದ್ದೇಯೋ, ಅದರಂತೆ ಹೇಳು ಎಂದು ಪುನಃ ಮಾತನಾಡಿದರು.

ಶಿರಃ ಪಶ್ಯಾಮಿ ಭಾಸಸ್ಯ ನ ಗಾತ್ರಮಿತಿ ಸೋಽಬ್ರವೀತ್ ।
ಅರ್ಜುನೇನೈವಮುಕ್ತಸ್ತು ದ್ರೋಣೋ ಹೃಷ್ಟತನೂರುಹಃ ।
ಮುಂಚಸ್ವೇತ್ಯಬ್ರವೀತ್ ಪಾರ್ಥಂ ಸ ಮುಮೋಚಾವಿಚಾರಯನ್ ॥೨೫॥

ಪಕ್ಷಿಯ ಶಿರಸ್ಸು ಮಾತ್ರ ಕಾಣುತ್ತಿದೆ. ಪಕ್ಷಿಯ ಶರೀರ ಕಾಣುತ್ತಿಲ್ಲ ಎಂದು ಅರ್ಜುನನು ಹೇಳಲು ದ್ರೋಣರು ರೋಮಾಂಚನಗೊಂಡು ಬಾಣಪ್ರಯೋಗವನ್ನು ಮಾಡು ಎಂದು ಹೇಳಿದರು. ಅರ್ಜುನನು ಏನೂ ವಿಚಾರ ಮಾಡದೇ ಬಾಣಪ್ರಯೋಗವನ್ನು ಮಾಡಿದನು.

ತತಸ್ತಸ್ಯ ನಗಸ್ಥಸ್ಯ ಕ್ಷುರೇಣ ನಿಶಿತೇನ ಸಃ ।
ಶಿರ ಉತ್ಕೃತ್ಯ ತರಸಾ ಪಾತಯಾಮಾಸ ಪಾಂಡವಃ ॥೨೬॥

ಆಗ ಪಾಂಡುಪುತ್ರನಾದ ಅರ್ಜುನನು ಹರಿತವಾದ ಶರದಿಂದ ವೃಕ್ಷದ ಮೇಲಿದ್ದ ಪಕ್ಷಿಯ ಶಿರಸ್ಸನ್ನು ಕತ್ತರಿಸಿ, ಶೀಘ್ರವಾಗಿ ಕೆಳಗೆ ಉರುಳಿಸಿದನು.

ತಸ್ಮಿನ್ ಕರ್ಮಣಿ ಸಂಸಿದ್ಧೇ ಪರಿಷ್ವಜ್ಯ ಚ ಪಾಂಡವಮ್ ।
ಮೇನೇ ಚ ದ್ರುಪದಂ ಸಂಖ್ಯೇ ಸಾನುಬಂಧಂ ಪರಾಜಿತಮ್ ॥೨೭॥

ಆ ಕರ್ಮದಲ್ಲಿ ಅರ್ಜುನನು ಸಂಸಿದ್ಧಿಯನ್ನು ಪಡೆಯುತ್ತಿರಲು, ದ್ರೋಣರು ಅವನನ್ನು ಆಲಿಂಗಿಸಿ, ಯುದ್ಧದಲ್ಲಿ ದ್ರುಪದನೂ ಅವನ ಅನುಚರರೂ ಪರಾಜಿತರಾದರೆಂದು ಭಾವಿಸಿದರು.

ಕಸ್ಯಚಿತ್ತ್ವಥ ಕಾಲಸ್ಯ ಸಶಿಷ್ಯೋಽಂಗಿರಸಾಂ ವರಃ ।
ಜಗಾಮ ಗಂಗಾಮಭಿತೋ ಮಜ್ಜಿತುಂ ಭರತರ್ಷಭ ॥೨೮॥

ಭರತರ್ಷಭನೇ, ಸ್ವಲ್ಪ ಸಮಯದ ನಂತರ ದ್ರೋಣರು ಶಿಷ್ಯರ ಜೊತೆಯಲ್ಲಿ ಸ್ನಾನಕ್ಕಾಗಿ ಗಂಗೆಗೆ ಹೋದರು.

ಅವಗಾಢಮಥೋ ದ್ರೋಣಂ ಸಲಿಲೇ ಸಲಿಲೇಚರಃ ।
ಗ್ರಾಹೋ ಜಗ್ರಾಹ ಬಲವಾನ್ ಜಂಘಾಂತೇ ಕಾಲಚೋದಿತಃ ॥೨೯॥

ನೀರಿನಲ್ಲಿ ಮುಳುಗಿದ ದ್ರೋಣರನ್ನು ಜಲಚಾರಿಯಾದ ಒಂದು ಬಲಿಷ್ಠವಾದ ಮೊಸಳೆಯು ಕಾಲಚೋದಿತವಾಗಿ ಅವರ ತೊಡೆಯ ಬಳಿ ಹಿಡಿಯಿತು.

ಸ ಸಮರ್ಥೋಽಪಿ ಮೋಕ್ಷಾಯ ಶಿಷ್ಯಾನ್ ಸರ್ವಾನಚೋದಯತ್।
ಗ್ರಾಹಂ ಹತ್ವಾ ಮೋಕ್ಷಯಧ್ವಂ ಮಾಮಿತಿ ತ್ವರಯನ್ನಿವ ॥೩೦॥

ದ್ರೋಣರು ತಾವೇ ಬಿಡಿಸಿಕೊಳ್ಳಲು ಸಮರ್ಥರಾಗಿದ್ದರೂ, ಎಲ್ಲ ಶಿಷ್ಯರನ್ನೂ ಉದ್ದೇಶಿಸಿ, ಬೇಗ ಮೊಸಳೆಯನ್ನು ಕೊಂದು ನನ್ನನ್ನು ಬಿಡಿಸಿ ಎಂದು ಹೇಳಿದರು.

ತದಾಕ್ಯಸಮಕಾಲಂ ತು ಭೀಭತ್ಸುರ್ನಿಶಿತೈಃ ಶರೈಃ ।
ಅವಾಗ್ಗೈರ್ದಶಭಿರ್ಬಾಣೈಃ ಮಗ್ನಮಂಭಸ್ಯತಾಡಯತ್ ॥೩೧॥

ಗುರುಗಳ ವಾಕ್ಯವನ್ನು ಕೇಳುತ್ತಿದ್ದಂತೆಯೇ ಅರ್ಜುನನು ಹರಿತವಾದ ಹತ್ತು ಬಾಣಗಳನ್ನು ತೆಗೆದುಕೊಂಡು, ಅಧೋಮುಖವಾಗಿ ಪ್ರಯೋಗಿಸಿ ನೀರಿನಲ್ಲಿ ಮುಳುಗಿದ್ದ ಮೊಸಳೆಗೆ ಹೊಡೆದನು.

ಇತರೇ ತು ವಿಸಮ್ಮೂಢಾಃ ತತ್ರ ತತ್ರ ಪ್ರಪೇದಿರೇ ।
ತಂ ಚ ದೃಷ್ಟ್ವಾ ಕ್ರಿಯೋಪೇತಂ ದ್ರೋಣೋಽಮನ್ಯತ ಪಾಂಡವಮ್ ।
ವಿಶಿಷ್ಟಂ ಸರ್ವಶಿಷ್ಯೇಭ್ಯಃ ಪ್ರೀತಿಮಾಂಶ್ಚಾಭವತ್ ತದಾ ॥೩೨॥

ಉಳಿದವರು ದಿಗ್ಭ್ರಾಂತರಾಗಿ ಅಲ್ಲಲ್ಲಿ ತಿರುಗಾಡಿದರು. ಅರ್ಜುನನ ಕೌಶಲವನ್ನು ನೋಡಿದ ದ್ರೋಣರು ಅರ್ಜುನನು ಕ್ರಿಯಾಸಿದ್ಧಿಯನ್ನು ಪಡೆದವನೆಂದೂ, ಅವನು ತಮ್ಮ ಎಲ್ಲಾ ಶಿಷ್ಯರಿಗಿಂತಲೂ ಶ್ರೇಷ್ಠನಾದವನೆಂದೂ ತಿಳಿದು ಸಂತೋಷಗೊಂಡರು.

ಸ ಪಾರ್ಥಬಾಣೈರ್ಬಹುಧಾ ಖಂಡಶಃ ಪರಿಕಲ್ಪಿತಃ ।
ಗ್ರಾಹಃ ಪಂಚತ್ವಮಾಪೇದೇ ಜಂಘಾಂ ತ್ಯಕ್ತ್ವಾ ಮಹಾತ್ಮನಃ ॥೩೩॥

ಅರ್ಜುನನಿಂದ ಅನೇಕ ಬಾಣಗಳಿಂದ ಹೊಡೆಯಲ್ಪಟ್ಟ ಆ ಮೊಸಳೆಯು ಚೂರು ಚೂರಾಗಿ ಕತ್ತರಿಸಲ್ಪಟ್ಟು ದ್ರೋಣರ ತೊಡೆಯನ್ನು ಬಿಟ್ಟು ಮರಣವನ್ನು ಹೊಂದಿತು.

ಗೃಹಾಣೇದಂ ಮಹಾಬಾಹೋ ವಿಶಿಷ್ಟಮತಿದುರ್ಧರಮ್ ।
ಅಸ್ತ್ರಂ ಬ್ರಹ್ಮಶಿರೋ ವೀರ ಸಪ್ರಯೋಗನಿವರ್ತನಮ್ ॥೩೪॥

ಆಗ ದ್ರೋಣರು ಸಂತೋಷಗೊಂಡು ಅರ್ಜುನನ್ನು ಕುರಿತು, ಮಹಾಬಾಹುವೇ, ಶ್ರೇಷ್ಠವಾದ ಮತ್ತು ಇನ್ನೊಬ್ಬರು ಧರಿಸಲು ಅಸಾಧ್ಯವಾದ ಈ ಅಸ್ತ್ರವನ್ನು ತೆಗೆದುಕೋ. ವೀರನೇ ಇದಕ್ಕೆ 'ಬ್ರಹ್ಮಶಿರಸ್ಸು' ಎಂದು ಹೆಸರು. ಇದನ್ನು ಪ್ರಯೋಗ ಮಾಡುವ ರೀತಿಯನ್ನೂ, ನಿವರ್ತನೆ ಮಾಡುವ ರೀತಿಯನ್ನೂ ಉಪದೇಶಿಸುತ್ತೇನೆ.

ನಚ ತೇ ಮಾನುಷೇಷ್ವೇತತ್ ಪ್ರಯೋಕ್ತವ್ಯಂ ಕಥಂಚನ ।
ಜಗದ್ಧಿ ನಿರ್ದಹೇದೇತದಲ್ಪತೇಜಸಿ ಪಾತಿತಮ್ ॥೩೫॥

ಈ ಅಸ್ತ್ರವನ್ನು ಮನುಷ್ಯರ ಮೇಲೆ ಎಂದೂ ಪ್ರಯೋಗ ಮಾಡಬಾರದು. ಈ ಅಸ್ತ್ರವನ್ನು ಅಲ್ಪವೀರ್ಯರಾದ ಮನುಷ್ಯರ ಮೇಲೆ ಪ್ರಯೋಗ ಮಾಡಿದರೆ ಅಸ್ತ್ರವು ಜಗತ್ತನ್ನೇ ಸುಡುತ್ತದೆ.

ಅಸಾಮಾನ್ಯಮಿದಂ ತಾತ ಲೋಕೇಷ್ವಸ್ತ್ರಂ ನಿಗದ್ಯತೇ ।
ತದ್ ಧಾರಯೀಥಾಃ ಪ್ರಯತಃ ಶೃಣು ಚೇದಂ ವಚೋ ಮಮ ॥೩೬॥

ಪ್ರೀತಿಪಾತ್ರನೇ, ಲೋಕದಲ್ಲಿ ಇದನ್ನು ಅಸಾಧಾರಣವಾದ ಅಸ್ತ್ರವೆಂದು ಕರೆಯುತ್ತಾರೆ. ನಿಯಮಬದ್ಧನಾಗಿ ಇದನ್ನು ಧರಿಸು ಮತ್ತು ನನ್ನ ಈ ಮಾತನ್ನು ಕೇಳು.

ಬಾಧತೇಽಮಾನುಷಃ ಕಶ್ಚಿದ್ ಯದಾ ತ್ವಂ ವೀರ ಕಶ್ಚನ ।
ತದ್ವಧಾಯ ಪ್ರಯುಂಜೀಥಾಸ್ತದಸ್ತ್ರಮಿದಮಾಹವೇ ॥೩೭॥

ಎಲೈ ವೀರನೇ, ನಿನ್ನನ್ನು ಯಾವನಾದರೂ ಅಮಾನುಷನು ಬಾಧಿಸಿದರೆ ಆಗ ಅವನ ವಧೆಗಾಗಿ ಈ ಅಸ್ತ್ರವನ್ನು ಯುದ್ಧದಲ್ಲಿ ಪ್ರಯೋಗಿಸು.

ತತ್ತಥೇತಿ ಪ್ರತಿಶ್ರುತ್ಯ ಭೀಭತ್ಸುಃ ಪ್ರಕೃತಾಂಜಲಿಃ ।
ಜಗ್ರಾಹ ಪರಮಾಸ್ತ್ರಂ ತದ್ ಆಹ ಚೈನಂ ಪುನರ್ಗುರುಃ ।
ಭವಿತಾ ತ್ವತ್ಸಮೋ ನಾನ್ಯಃ ಪುಮಾಂಲ್ಲೋಕೇ ಧನುರ್ಧರಃ ॥೩೮॥

ಹಾಗೆಯೇ ಆಗಲಿ ಎಂದು ಹೇಳಿ ಅರ್ಜುನನು ಗುರುಗಳಿಗೆ ಕೈಮುಗಿದು ಶ್ರೇಷ್ಠವಾದ ಆ ಅಸ್ತ್ರವನ್ನು ಸ್ವೀಕರಿಸಿದನು. ಆಗ ಗುರುಗಳಾದ ದ್ರೋಣರು ನಿನ್ನ ಸಮಾನರಾದ ಧನುರ್ಧಾರಿಗಳಾದ ಪುರುಷರು ಲೋಕದಲ್ಲಿ ಯಾರೂ ಉಂಟಾಗುವುದಿಲ್ಲ ಎಂದು ಮತ್ತೊಮ್ಮೆ ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವಾವಿಂಶತ್ಯಧಿಕಶತತಮೋऽಧ್ಯಾಯಃ॥
॥ ಸಂಭವಪರ್ವಣಿ ಅಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೮

ಯದಾ ತೇ ಸರ್ವಶಸ್ತ್ರಾಸ್ತ್ರವೇದಿನೋ ರಾಜಪುತ್ರಕಾಃ ।
ಬಭೂವೂ ರಂಗಮಧ್ಯೇ ತಾನ್ ಭಾರದ್ವಾಜೋ ವ್ಯದರ್ಶಯತ್ ॥೩೦॥

ರಾಜಕುಮಾರರು ಸಕಲಶಾಸ್ತ್ರಪಾರಂಗತರಾದಾಗ ಅವರ ಪಾಂಡಿತ್ಯ ಪರೀಕ್ಷೆಗೆ ದ್ರೋಣರು ಅವರನ್ನು ರಂಗಸ್ಥಳದ ನಡುವೆ ಪ್ರದರ್ಶಿಸಿದರು.

ರಕ್ತಚಂದನ ಸತ್ಪುಷ್ಪ ವಸ್ತ್ರ ಶಸ್ತ್ರ ಗುಡೋದನೈಃ ।
ಸಂಪೂಜ್ಯ ಭಾರ್ಗವಂ ರಾಮಮನುಜಜ್ಞೇ ಕುಮಾರಕಾನ್ ॥೩೧॥

ದ್ರೋಣರು ಪ್ರಾರಂಭದಲ್ಲಿ ಕೆಂಪು ಗಂಧ ಒಳ್ಳೆಯ ಹೂಗಳು ವಸ್ತ್ರಗಳು ಆಯುಧಗಳು ಮತ್ತು ಬೆಲ್ಲದ ಭಕ್ಷ್ಯಗಳಿಂದ ಗುರು ಪರಶುರಾಮರನ್ನು ಪೂಜಿಸಿ ಕುಮಾರರಿಗೆ ತಮ್ಮ ವಿದ್ಯಾ ಕೌಶಲ ಪ್ರದರ್ಶನಮಾಡಲು ಆಜ್ಞಾಪಿಸಿದರು.

ತೇ ಭೀಷ್ಮದ್ರೋಣವಿದುರಗಾಂಧಾರೀಧೃತರಾಷ್ಟ್ರಕಾನ್ ।
ಸರಾಜಮಂಡಲಾನ್ ನತ್ವಾ ಕುಂತೀಂ ಚಾದರ್ಶಯತ್ ಶ್ರಮಮ್॥೩೨॥

ರಾಜಕುಮಾರರು ಭೀಷ್ಮದ್ರೋಣ ವಿದುರ ಗಾಂಧಾರಿ ಧೃತರಾಷ್ಟ್ರರನ್ನೂ ಕುಂತಿಯನ್ನೂ ರಾಜರುಗಳ ಸಮೂಹಗಳನ್ನೂ ನಮಿಸಿ ತಾವು ಕಲಿತ ವಿದ್ಯೆಗಳನ್ನು ಪ್ರದರ್ಶಿಸಿದರು.

ಭೀಮ ದುರ್ಯೋಧನೌ ತತ್ರ ಶಿಕ್ಷಾ ಸಂದರ್ಶನಚ್ಛಲಾತ್ ।
ಸಮಾದಾಯ ಗದೇ ಗುರ್ವೀ ಸಂರಂಭಾದಭ್ಯುದೀಯತುಃ ॥೪೨॥

ಆಗ ತಮ್ಮ ವಿದ್ಯಾಭ್ಯಾಸ ಕೌಶಲ ಪ್ರದರ್ಶನದ ನೆಪದಿಂದ ಭೀಮ ದುರ್ಯೋಧನರು ಭಾರವಾದ ಗದೆಯನ್ನೆತ್ತಿಕೊಂಡು ಕೋಪದಿಂದ ಪರಸ್ಪರ ಎದುರಿಗೆ ಬಂದರು.

ದೇವಾಸುರಮನುಷ್ಯಾದಿ ಜಗದೇತಚ್ಚರಾಚರಮ್ ।
ಸರ್ವಂ ತದಾ ದ್ವಿಧಾಭೂತಂ ಭೀಮದುರ್ಯೋಧನಾಶ್ರಯಾತ್ ॥೪೩॥

ಆಗ ಭೀಮ-ದುರ್ಯೋಧನ ಪಕ್ಷಗಳನ್ನು ಹಿಡಿದು ದೇವದಾನವ ಮಾನವ ಮುಂತಾದ ಈ ಚರಾಚರ ಪ್ರಪಂಚವೆಲ್ಲವೂ ಎರಡು ತಂಡವಾಯಿತು.

ದೇವಾ ದೇವಾನುಕೂಲಾಶ್ಚ ಭೀಮಮೇವ ಸಮಾಶ್ರಿತಾಃ ।
ಅಸುರಾ ಆಸುರಾಶ್ಚೈವ ದುರ್ಯೋಧನ ಸಮಾಶ್ರಯಾಃ ॥೪೪॥

ದೇವತೆಗಳೂ ದೇವತೆಗಳಿಗೆ ಅನುಕೂಲರಾದವರೂ ಭೀಮನ ಪಕ್ಷವನ್ನೇ ಹಿಡಿದರು. ಅಸುರರೂ ಅವರ ಕಡೆಯವರೂ ದುರ್ಯೋಧನನ ಪಕ್ಷ ಹಿಡಿದರು.

ದ್ವಿಧಾಭೂತಾ ಮನುಷ್ಯಾಶ್ಚ ದೇವಾಸುರ ವಿಭೇದತಃ ।
ಜಯ ಭೀಮ ಮಹಾಬಾಹೋ ಜಯ ದುರ್ಯೋಧನೇತಿ ಚ ॥೪೫॥

ಮನುಷ್ಯರೂ ಕೂಡ ತಮ್ಮ ತಮ್ಮ ದೇವ ದಾನವ ಸ್ವಭಾವಾನುಸಾರವಾಗಿ ಭೀಮ ದುರ್ಯೋಧನರ ಪಕ್ಷ ಹಿಡಿದು ಎರಡು ತಂಡಗಳಾದರು. ಮಹಾಬಾಹು ಭೀಮ! ನಿನಗೆ ಜಯವಾಗಲಿ! ಮಹಾಬಾಹು ದುರ್ಯೋಧನ! ನಿನಗೆ ಜಯವಾಗಲಿ! ಎಂದರು.

ಹುಂಕಾರಾಂಶ್ಚೈವ ಫಟ್ಕಾರಾಂಶ್ಚಕ್ರುರ್ದೇವಾಸುರಾ ಅಪಿ
ದೃಷ್ಟ್ವಾ ಜಗತ್ ಸುಸಂರಬ್ಧಂ ದ್ರೋಣೋऽಥ ದ್ವಿಜಸತ್ತಮಃ ॥೪೬॥

ನೇದಂ ಜಗದ್ ವಿನಶ್ಯೇತ ಭೀಮದುರ್ಯೋಧನಾಶ್ರಯಾತ್ ।
ಇತಿ ಪುತ್ರೇಣ ತೌ ವೀರೌ ನ್ಯವಾರಯದರಿಂದಮೌ ॥೪೭॥

ಸ್ವಕೀಯಾಯಾಂ ಸ್ವಕೀಯಾಯಾಂ ಯೋಗ್ಯತಾಯಾಂ ನ ತು ಕ್ವಚಿತ್ ।
ಯುವಯೋಃ ಸಮ ಇತ್ಯುಕ್ತ್ವಾ ದ್ರೌಣಿರೇತೌ ನ್ಯವಾರಯತ್ ॥೪೮॥

ದೇವತೆಗಳೂ ಅಸುರರೂ ಪರಸ್ಪರ ಕೋಪದ ಸಿಂಹನಾದ ಮಾಡಿದರು. ಭುಜ ತಟ್ಟಿಕೊಂಡರು. ಹೀಗೆ ಜಗತ್ತೇ ಉದ್ವೇಗಗೊಂಡುದನ್ನು ನೋಡಿ ಬ್ರಾಹ್ಮಣೋತ್ತಮರಾದ ದ್ರೋಣರು 'ಈ ಜಗತ್ತು ಭೀಮ ದುರ್ಯೋಧನರ ಪಕ್ಷ ಹಿಡಿದು ಪರಸ್ಪರ ಹೋರಾಡಿ ನಾಶವಾಗದಿರಲಿ' ಎಂದು ಮಗನಾದ ಅಶ್ವತ್ಥಾಮನ ಮೂಲಕ, ಶತ್ರು ಸಂಹಾರಕರಾದ ಇಬ್ಬರು ವೀರರನ್ನು ತಡೆದು ನಿಲ್ಲಿಸಿದರು. ನಿಮ್ಮ ನಿಮ್ಮ ಯೋಗ್ಯತೆಯಲ್ಲಿ ನಿಮಗೆ ಸಮಾನರು ಎಲ್ಲೂ ಇಲ್ಲ ಎಂದು ಹೇಳುತ್ತ ಅಶ್ವತ್ಥಾಮ ಇಬ್ಬರನ್ನೂ ತಡೆದ.

ದ್ರೋಣಾಜ್ಞಯಾ ವಾರಿತೌ ತೌ ಯಯತುಃ ಸ್ವಂ ಸ್ವಮಾಲಯಮ್ ॥೪೯॥

ಸುರಾಸುರಾನ್ ಸುಸಂರಬ್ಧಾನ್ ಕಾಲೇನ ದ್ರಕ್ಷ್ಯಥೇತಿ ಚ ।
ಬ್ರಹ್ಮಾ ನಿವಾರ್ಯ ಸಸುರೋ ಯಯೌ ಸೇಶಃ ಸ್ವಮಾಲಯಮ್ ॥೫೦॥

ದ್ರೋಣರ ಆಜ್ಞೆಯಿಂದ ತಡೆದು ನಿಂತ ಭೀಮ-ದುರ್ಯೋಧನರು ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು. 'ಸ್ವಲ್ಪ ಕಾಲಾನಂತರ ಇವರ ಪರಸ್ಪರ ಯುದ್ಧವನ್ನೂ ಜಯಾಪಜಯಗಳನ್ನೂ ನೋಡುವಿರಿ' ಎನ್ನುತ್ತ ಬ್ರಹ್ಮದೇವ ಮೇಲೆ ಆಕಾಶದಲ್ಲಿ ನೆರೆದಿದ್ದ ದೇವಾಸುರರನ್ನು ತಡೆದು ರುದ್ರನಿಂದೊಡಗೂಡಿ ದೇವತೆಗಳಿಂದ ಸಹಿತನಾಗಿ ತನ್ನ ಲೋಕಕ್ಕೆ ಹಿಂತಿರುಗಿದ.

★ ★ ★ ★

ನೂರಮೂವತ್ಮೂರನೆಯ ಅಧ್ಯಾಯ

(ಕುಮಾರರಿಂದ ಅಸ್ತ್ರಕೌಶಲ ಪ್ರದರ್ಶನ, ಯುಧಿಷ್ಠಿರ ಪರೀಕ್ಷೆ, ಭೀಮ ದುರ್ಯೋಧನರ ರಂಗ ಪ್ರವೇಶ)

ವೈಶಂಪಾಯನಃ

ಕೃತಾಸ್ತ್ರಾನ್ ಧಾರ್ತರಾಷ್ಟ್ರಾಂಶ್ಚ ಪಾಂಡುಪುತ್ರಾಂಶ್ಚ ಭಾರತ ।
ದೃಷ್ಟ್ವಾ ದ್ರೋಣೋಽಬ್ರವೀದ್ ವಾಕ್ಯಂ ಧೃತರಾಷ್ಟ್ರಂ ಜನೇಶ್ವರಮ್ ॥೧॥

ಕೃಪಸ್ಯ ಸೋಮದತ್ತಸ್ಯ ಬಾಹ್ಲೀಕಸ್ಯ ಚ ಧೀಮತಃ ।
ಗಾಂಗೇಯಸ್ಯ ಚ ಸಾನ್ನಿಧ್ಯೇ ವ್ಯಾಸಸ್ಯ ವಿದುರಸ್ಯ ಚ ॥೨॥

ಎಲೈ ಭಾರತನೇ, ದ್ರೋಣರು ರಾಜನಾದ ಧೃತರಾಷ್ಟ್ರನನ್ನು ಕುರಿತು ಪಾಂಡವರು ಮತ್ತು ಕೌರವರು ಅಸ್ತ್ರವಿದ್ಯೆಯನ್ನು ಸಂಪಾದಿಸಿದ್ದಾರೆ ಎಂದು ಕೃಪ, ಸೋಮದತ್ತ, ಮೇಧಾವಿಯಾದ ಬಾಹ್ಲೀಕ, ಭೀಷ್ಮ, ವ್ಯಾಸರು ಮತ್ತು ವಿದುರ ಇವರ ಸನ್ನಿಧಿಯಲ್ಲಿ ತಿಳಿಸಿದರು.

ರಾಜನ್ ಸಮಾಪ್ತವಿದ್ಯಾಸ್ತೇ ಕುಮಾರಾಃ ಕುರುಸತ್ತಮ ।
ತೇ ದರ್ಶಯೇಯುಃ ಸ್ವಾಂ ಶಿಕ್ಷಾಂ ರಾಜನ್ನನುಮತೇ ತವ ॥೩॥

ಕುರುಶ್ರೇಷ್ಠನಾದ ರಾಜನೇ, ಕುಮಾರರು ಸಂಪೂರ್ಣವಾಗಿ ವಿದ್ಯೆಯನ್ನು ಪಡೆದಿದ್ದಾರೆ. ನಿನ್ನ ಅಭಿಪ್ರಾಯದಂತೆ ಅವರು ತಮ್ಮ ಕೌಶಲವನ್ನು ತೋರಿಸುತ್ತಾರೆ.

ತತೋಽಬ್ರವೀನ್ಮಹಾರಾಜಃ ಪ್ರಹೃಷ್ಟೇನಾಂತರಾತ್ಮನಾ ।
ಭಾರದ್ವಾಜ ಮಹತ್ಕರ್ಮ ಕೃತಂ ದ್ವಿಜವರ ತ್ವಯಾ ॥೪॥

ಆಗ ಮಹಾರಾಜನಾದ ಧೃತರಾಷ್ಟ್ರನು ಮನಸ್ಸಿನಲ್ಲಿ ಸಂತೋಷಗೊಂಡು ದ್ರೋಣರನ್ನು ಕುರಿತು ದ್ವಿಜಶ್ರೇಷ್ಠರಾದ ದ್ರೋಣರೇ, ನೀವು ಮಹತ್ಕಾರ್ಯವನ್ನು ಸಾಧಿಸಿದ್ದೀರಿ ಎಂದು ಹೇಳಿದನು.

ಯದಾऽನುಮನ್ಯಸೇ ಕಾಲಂ ಯಸ್ಮಿನ್ ದೇಶೇ ಯಥಾಯಥಾ ।
ತಥಾ ತಥಾ ವಿಧಾನಾಯ ಸ್ವಯಮಾಜ್ಞಾಪಯಸ್ವ ಮಾಮ್ ॥೫॥

ಯಾವಾಗ ಕಾಲವು ಸೂಕ್ತವಾಗಿದೆಯೋ, ಆ ಕಾಲದಲ್ಲಿ ಯಾವ ಪ್ರದೇಶದಲ್ಲಿ ಹೇಗೆ ಸಿದ್ಧಗೊಳಿಸಬೇಕೆಂದು ನೀವು ಸ್ವತಃ ನನಗೆ ಆದೇಶವನ್ನು ನೀಡಬೇಕು.

ಸ್ಪೃಹಯಾಮ್ಯದ್ಯ ನಿರ್ವೇಶಂ ಪುರುಷಾಣಾಂ ಸಚಕ್ಷುಷಾಮ್ ।
ಅಸ್ತ್ರಹೇತೋಃ ಸಮಾಯುಕ್ತಾನ್ ಯೇ ಮೇ ದ್ರಕ್ಷ್ಯಂತಿ ಪುತ್ರಕಾನ್ ॥೬॥

ನನ್ನ ಮಕ್ಕಳು ಪ್ರಯೋಗಿಸುವ ಅಸ್ತ್ರಗಳನ್ನು ನೋಡುವ ಸಾರ್ಥಕವಾದ ಕಣ್ಣುಳ್ಳ ಜನರ ದೊಡ್ಡ ಸಮೂಹವನ್ನು (ಜಾತ್ರೆಯನ್ನು) ನಾನು ಈ ದಿನ ಬಯಸುತ್ತೇನೆ.

ಸತ್ಕಾರ್ಯಃ ಕ್ಷತ್ತ ಆಚಾರ್ಯೋ ಬ್ರವೀತಿ ಕುರು ತತ್ ತಥಾ ।
ನ ಹೀದೃಶಂ ಪ್ರಿಯಂ ಮೇऽದ್ಯ ಭವಿತಾ ಧರ್ಮವತ್ಸಲ ॥೭॥

ಧರ್ಮವತ್ಸಲನಾದ ವಿದುರನೇ, ಸತ್ಕಾರಕ್ಕೆ ಅರ್ಹರಾದ ಆಚಾರ್ಯರು ಅವರು ಹೇಳಿದಂತೆ ಮಾಡು. ನನಗೆ ಇಂತಹ ಪ್ರಿಯವಾದ ಕಾರ್ಯವು ಈ ದಿನ ಬೇರೆ ಇನ್ನೊಂದಿಲ್ಲ.

ವೈಶಂಪಾಯನಃ

ತತೋ ರಾಜಾನಮಾಮಂತ್ರ್ಯ ವಿದುರಾನುಗತೋ ಬಹಿಃ ।
ಭಾರದ್ವಾಜೋ ಮಹಾಪ್ರಾಜ್ಞೋ ಜ್ಞಾಪಯಾಮಾಸ ಮೇದಿನೀಮ್ ॥೮॥

ಅನಂತರ ರಾಜನ ಅನುಮತಿಯನ್ನು ಪಡೆದು, ವಿದುರನ ಜೊತೆಯಲ್ಲಿ ನಗರದ ಹೊರಗೆ ಬಂದು ಮಹಾಪ್ರಾಜ್ಞರಾದ ದ್ರೋಣರು ಭೂಮಿಯನ್ನು ತೋರಿಸಿದರು.

ಸಮಾಮವೃಕ್ಷಂ ನಿರ್ಗುಲ್ಮಾದಮುಕ್ತವಣಸಂಸ್ಥಿತಾಮ್ ।
ತಸ್ಯಾ ಭೂಮೌ ಬಲಿಂ ಚಕ್ರೇ ತಿಥಿನಕ್ಷತ್ರಪೂಜಿತೇ ॥೯॥

ಸಮತಟ್ಟಾದ, ವೃಕ್ಷಗಳೂ, ಪೊದೆಗಳೂ ಇಲ್ಲದ ಉತ್ತರ ದಿಕ್ಕಿನಲ್ಲಿ ನಿಮ್ನವಾಗಿರುವ ಭೂಮಿಯನ್ನು ಆರಿಸಿ ಶ್ರೇಷ್ಠವಾದ ತಿಥಿ, ನಕ್ಷತ್ರಗಳಲ್ಲಿ ಅಲ್ಲಿ ಪೂಜೆಯನ್ನು ಮಾಡಿದರು.

ಅವಘುಷ್ಟಂ ಪುರೇ ಚಾಪಿ ತದರ್ಥಂ ಭರತರ್ಷಭ ।
ರಂಗಭೂಮಿಂ ಸುವಿಹಿತಾಂ ಶಾಸ್ತ್ರದೃಷ್ಟಾಮಕಾರಯತ್ ॥೧೦॥

ಭರತರ್ಷಭನೇ, ನಗರದಲ್ಲೆಲ್ಲಾ ಘೋಷಣೆಯನ್ನು ಮಾಡಿಸಿ ಶಾಸ್ತ್ರೋಕ್ತ ಪ್ರಕಾರದಿಂದ ರಂಗಭೂಮಿಯನ್ನು ಚೆನ್ನಾಗಿ ನಿರ್ಮಿಸಿದರು.

ಪ್ರೇಕ್ಷಾಗಾರಂ ಸುವಿಹಿತಂ ಚಕ್ರುಸ್ತತ್ರ ಚ ಶಿಲ್ಪಿನಃ ।
ರಾಜ್ಞಾಂ ಸರ್ವಾಯುಧೋಪೇತಂ ಸ್ತ್ರೀಣಾಂ ಚೈವ ನರರ್ಷಭ ॥೧೧॥

ಎಲೈ ನರಶ್ರೇಷ್ಠನೇ, ಶಿಲ್ಪಿಗಳು ಪ್ರೇಕ್ಷಾಗಾರಗಳನ್ನು ಚೆನ್ನಾಗಿ ನಿರ್ಮಿಸಿದರು. ರಾಜರಿಗೆ ಸರ್ವಾಯುಧೋಪೇತವಾದ ಪ್ರೇಕ್ಷಾಗಾರವನ್ನು, ಸ್ತ್ರೀಯರಿಗೆ ಬೇರೆ ಪ್ರೇಕ್ಷಾಗಾರವನ್ನೂ ನಿರ್ಮಿಸಿದರು.

ಮಂಚಾನ್ ಸ್ಮ ಕಾರಯಾಮಾಸುರ್ಯತ್ರ ಜಾನಪದಾ ಜನಾಃ ।
ಸಚಿವಾಶ್ಚ ಪುನರ್ಮಂಚಾನ್ ಕಾರಯಾಮಾಸುರುಚ್ಛ್ರಿತಾನ್ ॥೧೨॥

ಜಾನಪದ ಜನರು ಕುಳಿತುಕೊಳ್ಳವಂತಹ ಸುಖಾಸನಗಳನ್ನು ಮಾಡಿಸಿದರು. ಪುನಃ ಸಚಿವರು ಕುಳಿತುಕೊಳ್ಳುವ ಎತ್ತರವಾದ ಸುಖಾಸನಗಳನ್ನು ಮಾಡಿಸಿದರು.

ತಸ್ಮಿಂಸ್ತದಾऽಹನಿ ಪ್ರಾಪ್ತೇ ರಾಜಾ ಸಸಚಿವಸ್ತದಾ ।
ಸಾಂತಃಪುರಃ ಸಹಾಮಾತ್ಯೋ ವ್ಯಾಸಸ್ಯಾನುಮತೇ ತದಾ ॥೧೩॥

ಭೀಷ್ಮಂ ಪ್ರಮುಖಿತಃ ಕೃತ್ವಾ ಕೃಪಂ ಚಾಚಾರ್ಯಸತ್ತಮಮ್ ।
ಬಾಹ್ಲೀಕಂ ಸೋಮದತ್ತಂ ಚ ಭೂರಿಶ್ರವಸಮೇವ ಚ ॥೧೪॥

ಕುರೂನನ್ಯಾಂಶ್ಚ ಸಚಿವಾನಾದಾಯ ನಗರಾದ್ ಬಹಿಃ ।
ರಂಗಭೂಮಿಂ ಸಮಾಸಾದ್ಯ ಬ್ರಾಹ್ಮಣೈಃ ಸಹಿತೋ ನೃಪಃ ॥೧೫॥

ಮುಕ್ತಾಜಾಲಪರಿಕ್ಷಿಪ್ತಂ ವೈಢೂರ್ಯಮಣಿಭೂಷಿತಮ್ ।
ಶಾತಕುಂಭಮಯಂ ದಿವ್ಯಂ ಪ್ರೇಕ್ಷಾಗಾರಮುಪಾರುಹತ್ ॥೧೬॥

ಆ ಕುಪ್ಪತವಾದ ದಿವಸವು ಬಂದಾಗ ಧೃತರಾಷ್ಟ್ರನು, ಸಚಿವರು, ಅಂತಃಪುರಜನರು ಮತ್ತು ಅಮಾತ್ಯರ ಜೊತೆಯಲ್ಲಿ ಹೊರಟು, ವ್ಯಾಸರ ಅಭಿಪ್ರಾಯದಂತೆ ಭೀಷ್ಮರನ್ನು ಮುಂದೆ ಮಾಡಿಕೊಂಡು ಆಚಾರ್ಯಶ್ರೇಷ್ಠರಾದ ಕೃಪರನ್ನೂ, ಬಾಹ್ಲೀಕ, ಸೋಮದತ್ತ ಮತ್ತು ಭೂರಿಶ್ರವರನ್ನೂ, ಹಾಗೆಯೇ ಬೇರೆ ಕುರುಗಳನ್ನೂ ಮತ್ತು ಸಚಿವರನ್ನೂ ಕರೆದುಕೊಂಡು ಬ್ರಾಹ್ಮಣರ ಜೊತೆಯಲ್ಲಿ ನಗರದಿಂದ ಹೊರಗೆ ಬಂದು ರಂಗಭೂಮಿಯನ್ನು ಸಮೀಪಿಸಿ ಮುತ್ತಿನ ಗೊಂಚಲುಗಳಿಂದಲೂ, ವೈಢೂರ್ಯಮಣಿಗಳಿಂದಲೂ ಅಲಂಕೃತವಾಗಿದ್ದ, ಸುವರ್ಣಮಯವಾದ ದಿವ್ಯ ಪ್ರೇಕ್ಷಾಗಾರವನ್ನು ಹತ್ತಿ ಕುಳಿತನು.

ಗಾಂಧಾರೀ ಚ ಮಹಾಭಾಗಾ ಕುಂತೀ ಚ ಜಯತಾಂ ವರ ।
ಸ್ತ್ರಿಯಶ್ಚ ಸರ್ವಾ ಯಾ ರಾಜ್ಞಸ್ತಾಸಾಂ ಚ ಪರಿಚಾರಕಾಃ ॥೧೭॥

ಹರ್ಷಾದಾರುರುಹುಃ ಕಾಂತಂ ಮೇರುಂ ದೇವಸ್ತ್ರಿಯೋ ಯಥಾ ।
ಬ್ರಾಹ್ಮಣಕ್ಷತ್ರವಿಟ್‌ಶೂದ್ರಂ ಸರ್ವಂ ತತ್ರ ಸಮಾಗತಮ್ ॥೧೮॥

ಎಲೈ ಜಯಶೀಲರಲ್ಲಿ ಶ್ರೇಷ್ಠನೇ, ಗಾಂಧಾರಿಯೂ, ಮಹಾನುಭಾವಳಾದ ಕುಂತಿಯೂ, ರಾಜನ ಬೇರೆ ಸ್ತ್ರೀಯರು ಮತ್ತು ಅವರ ಪರಿಚಾರಕರೆಲ್ಲರೂ ಸಂತೋಷದಿಂದ ದೇವಸ್ತ್ರೀಯರು ಮೇರುಪರ್ವತವನ್ನು ಏರಿದಂತೆ ಮನೋಹರವಾದ ತಮ್ಮ ತಮ್ಮ ಆಸನಗಳನ್ನು ಏರಿ ಕುಳಿತರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಲ್ಲರೂ ಅಲ್ಲಿ ಬಂದು ನೆರೆದರು.

ಪ್ರವಾದಕೈಶ್ಚ ವಾದಿತ್ರೈರ್ಜನ್ಯೈಃ ಕೋಲಾಹಲೈರಪಿ ।
ಮಹಾರ್ಣವ ಇವ ಕ್ಷುಬ್ಧಃ ಸಮಾಜಃ ಸೋಽಭವತ್ ತದಾ ॥೧೯॥

ಆ ದೊಡ್ಡ ಸಮಾಜವು ಗಟ್ಟಿಯಾಗಿ ಮಾತನಾಡುವ ಜನಗಳಿಂದಲೂ, ವಾದ್ಯಗಳಿಂದಲೂ, ಕೋಲಾಹಲಗಳಿಂದಲೂ ತುಂಬಿ ದೊಡ್ಡ ಸಮುದ್ರದಂತೆ ಕ್ಷುಬ್ಧವಾಯಿತು.

ತತಃ ಶುಕ್ಲಾಂಬರಧರಃ ಶುಕ್ಲಯಜ್ಞೋಪವೀತವಾನ್ ।
ಶುಕ್ಲಕೇಶಃ ಸಿತಶ್ಮಶ್ರುಃ ಶುಕ್ಲಮಾಲ್ಯಾನುಲೇಪನಃ ॥೨೦॥

ರಂಗಮಧ್ಯಂ ತದಾ ದ್ರೋಣಃ ಸಪುತ್ರಃ ಸಂವಿವೇಶ ಹ ।
ನಭೋ ಜಲಧರೈರ್ಮುಕ್ತಂ ಸಾಂಗಾರಕ ಇವಾಂಶುಮಾನ್ ॥೨೧॥

ಅನಂತರ ಶುಕ್ಲಾಂಬರವನ್ನು ಧರಿಸಿ, ಶುಕ್ಲ ಯಜ್ಞೋಪವೀತವನ್ನು ಧರಿಸಿದ, ಶುಕ್ಲಕೇಶರೂ, ಶುಕ್ಲಶ್ಮಶ್ರುಗಳೂ, ಶುಕ್ಲಮಾಲೆಗಳನ್ನು ಧರಿಸಿದವರೂ ಆದ ದ್ರೋಣರು ಪುತ್ರರಾದ ಅಶ್ವತ್ಥಾಮರ ಜೊತೆಯಲ್ಲಿ ಮೇಘರಹಿತವಾದ ಗಗನದಲ್ಲಿ ಸೂರ್ಯನು ಅಂಗಾರಕನ ಜೊತೆಯಲ್ಲಿ ಬಂದಂತೆ ರಂಗಭೂಮಿಯ ಮಧ್ಯಭಾಗವನ್ನು ಪ್ರವೇಶಿಸಿದರು.

ವ್ಯಾಸಸ್ಯಾನುಮತೇ ಚಕ್ರೇ ಬಲಿಂ ಬಲವತಾಂ ವರಃ ।
ಬ್ರಾಹ್ಮಣಾಂಶ್ಚಾಪಿ ಶಾಸ್ತ್ರಜ್ಞಾನ್ ವಾಚಯಾಮಾಸ ಮಂಗಲೈಃ ॥೨೨॥

ವ್ಯಾಸರ ಅಭಿಪ್ರಾಯದಂತೆ ಬಲಿಷ್ಠರಲ್ಲಿ ಶ್ರೇಷ್ಠರಾದ ಅವರು ಶಾಸ್ತ್ರಜ್ಞರಾದ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿ ಅಲ್ಲಿ ಪೂಜೆಯನ್ನು ಮಾಡಿದರು.

ಸುವರ್ಣಮಣಿರತ್ನಾನಿ ವಸ್ತ್ರಾಣಿ ವಿವಿಧಾನಿ ಚ ।
ಪ್ರದದೌ ದಕ್ಷಿಣಾಂ ರಾಜಾ ದ್ರೋಣಾಯ ಚ ಕೃಪಾಯ ಚ ॥೨೩॥

ಧೃತರಾಷ್ಟ್ರನು ದ್ರೋಣರಿಗೂ ಮತ್ತು ಕೃಪರಿಗೂ, ಸುವರ್ಣ ಮಣಿರತ್ನಗಳನ್ನೂ, ಅನೇಕ ವಿಧವಾದ ವಸ್ತ್ರಗಳನ್ನೂ, ವಿಪುಲವಾದ ದಕ್ಷಿಣೆಯನ್ನೂ ಕೊಟ್ಟನು.

ಅಥ ಪುಣ್ಯಾಹಘೋಷಸ್ಯ ಮಹತಃ ಸಮನಂತರಮ್ ।
ವಿವಿಶುರ್ವಿವಿಧಂ ಗೃಹ್ಯ ಶಸ್ತ್ರೋಪಕರಣಂ ನೃಪಾಃ ॥೨೪॥

ಆಗ ದೊಡ್ಡ ಪುಣ್ಯಾಹಘೋಷವು ಮುಗಿಯುತ್ತಿರಲು ರಾಜರುಗಳು ತಮ್ಮ ವಿವಿಧಶಸ್ತ್ರಗಳನ್ನೂ ಮತ್ತು ಉಪಕರಣಗಳನ್ನೂ ಹಿಡಿದುಕೊಂಡು ರಂಗಭೂಮಿಯನ್ನು ಪ್ರವೇಶಿಸಿದರು.

ತತೋ ಬದ್ಧಾಂಗುಲಿತ್ರಾಣಾ ಬದ್ಧಕಕ್ಷ್ಯಾ ಮಹಾಬಲಾಃ ।
ಬದ್ಧತೂಣಾಃ ಸಧನುಷೋ ವಿವಿಶುರ್ಹರತರ್ಷಭಾಃ ॥೨೫॥

ಅನಂತರ ಬೆರಳುಗಳ ರಕ್ಷಣೆಯನ್ನು ಹಾಕಿಕೊಂಡು, ಸೊಂಟದ ಪಟ್ಟಿಯನ್ನು ಕಟ್ಟಿಕೊಂಡು, ಬೆನ್ನಿಗೆ ಬತ್ತಳಿಕೆಯನ್ನು ಕಟ್ಟಿಕೊಂಡು, ಕೈಯಲ್ಲಿ ಧನುಸ್ಸನ್ನು ಹಿಡಿದು ಮಹಾಬಲರಾದ ಭರತಶ್ರೇಷ್ಠರು ರಂಗಭೂಮಿಯನ್ನು ಪ್ರವೇಶಿಸಿದರು.

ಅನುಜ್ಯೇಷ್ಠಂ ಚ ತೇ ತತ್ರ ಯುಧಿಷ್ಠಿರಪುರೋಗಮಾಃ ।
ರಂಗಮಧ್ಯೇ ಸ್ಥಿತಂ ದ್ರೋಣಮಭಿವಾದ್ಯ ನರರ್ಷಭಾಃ ॥೨೬॥

ಯುಧಿಷ್ಠಿರಮೊದಲಾದ ನರರ್ಷಭರು ಜ್ಯೇಷ್ಠಾನುಜ್ಯೇಷ್ಠ ಕ್ರಮದಲ್ಲಿ ಅಲ್ಲಿ ರಂಗಮಧ್ಯದಲ್ಲಿದ್ದ ದ್ರೋಣರಿಗೆ ನಮಸ್ಕರಿಸಿ, ವಿಧಿವತ್ತಾಗಿ ದ್ರೋಣರಿಗೂ ಮತ್ತು ಕೃಪರಿಗೂ ಪೂಜೆಯನ್ನು ಸಲ್ಲಿಸಿದರು.

ಪೂಜಾಂ ಚಕ್ರುರ್ಯಥಾನ್ಯಾಯಂ ದ್ರೋಣಸ್ಯ ಚ ಕೃಪಸ್ಯ ಚ ।
ಆಶೀರ್ಭಿಶ್ಚ ಪ್ರಯುಕ್ತಾಭಿಃ ಸರ್ವೇ ಸಂಹೃಷ್ಟಮಾನಸಾಃ ॥೨೭॥

ಅಭಿವಾದ್ಯ ಪುನಃ ಶಸ್ತ್ರಾಣ್ ಬಲಿಪುಷ್ಪೈಃ ಸಮನ್ವಿತಾನ್ ।
ರಕ್ತಚಂದನಸಮ್ಮಿಶ್ರೈಃ ಸ್ವಯಮರ್ಚಂತ ಕೌರವಾಃ ॥೨೮॥

ಅವರು ನೀಡಿದ ಆಶೀರ್ವಾದದಿಂದ ಮನಸ್ಸಿನಲ್ಲಿ ಸಂತೋಷಗೊಂಡ ಎಲ್ಲಾ ಕೌರವರೂ ಪುನಃ ಪೂಜಾಪುಷ್ಪಗಳಿಂದ ಸಹಿತವಾಗಿದ್ದ ಶಸ್ತ್ರಗಳಿಗೆ ನಮಸ್ಕರಿಸಿ ರಕ್ತಚಂದನಮಿಶ್ರವಾದ ಪುಷ್ಪಗಳಿಂದ ಸ್ವತಃ ಪೂಜೆಯನ್ನು ಮಾಡಿದರು.

ಸರ್ವೇ ರಕ್ತಾಂಬರಧರಾಃ ಸರ್ವೇ ವಸ್ತ್ರವಿಭೂಷಣಾಃ ।
ರಕ್ತಚಂದನದಿಗ್ಧಾಶ್ಚ ರಕ್ತಮಾಲ್ಯಾನುರಾಗಿಣಃ ॥೨೯॥

ಎಲ್ಲರೂ ರಕ್ತವಸ್ತ್ರವನ್ನುಟ್ಟು, ವಿಭೂಷಣಗಳಿಂದ ಅಲಂಕೃತರಾಗಿ, ರಕ್ತಚಂದನಗಳನ್ನು ಲೇಪಿಸಿಕೊಂಡು, ರಕ್ತಪುಷ್ಪಗಳ ಮಾಲೆಯನ್ನು ಧರಿಸಿದ್ದರು.

ಸರ್ವೇ ರಕ್ತಪತಾಕಾಶ್ಚ ಸರ್ವೇ ರಕ್ತಾಂತಲೋಚನಾಃ ।
ದ್ರೋಣೇನ ಸಮನುಜ್ಞಾತಾ ಗೃಹ್ಯ ಶಸ್ತ್ರಂ ಪರಂತಪಾಃ ।
ಧನೂಂಷಿ ಪೂರ್ವಂ ಸಂಗೃಹ್ಯ ತಪ್ತಕಾಂಚನಭೂಷಿತಾಃ ॥೩೦॥

ರಕ್ತಪತಾಕೆಯುಳ್ಳವರೂ, ರಕ್ತಾಂತನಯನವುಳ್ಳವರೂ, ಪರಂತಪರಾದ ಅವರೆಲ್ಲರೂ ದ್ರೋಣರ ಅನುಮತಿಯನ್ನು ಪಡೆದು ಕೈಯಲ್ಲಿ ಶಸ್ತ್ರಗಳನ್ನೂ, ಧನುಸ್ಸನ್ನೂ ಹಿಡಿದುಕೊಂಡು ತಪ್ತಸುವರ್ಣಭೂಷಿತರಾಗಿ ಪ್ರವೇಶಿಸಿದರು.

ಸಜ್ಯಾನಿ ವಿವಿಧಾಕಾರೈಃ ಶರೈಃ ಸಂಧಾಯ ಕೌರವಾಃ ।
ಜ್ಯಾಘೋಷಂ ತಲಘೋಷಂ ಚ ಕೃತ್ವಾ ಭೂತಾನ್ಯಪೂಜಯನ್ ॥೩೧॥

ಅವರು ತಮ್ಮ ಬಿಲ್ಲಿಗೆ ಹೆದೆಯೇರಿಸಿ, ವಿವಿಧಾಕಾರದ ಬಾಣಗಳನ್ನು ಹೂಡಿ ಜ್ಯಾಘೋಷ ಮತ್ತು ತಲಘೋಷವನ್ನು ಮಾಡಿ ಎಲ್ಲಾ ಭೂತಗಳನ್ನೂ ಪೂಜಿಸಿದರು.

ಚಕ್ರುರಸ್ತ್ರಂ ಮಹಾವೀರ್ಯಾಃ ಕುಮಾರಾಃ ಪರಮಾದ್ಭುತಮ್ ।
ಕೇಷಾಂಚಿತ್ ತರುಮೂಲೇಷು ಶರಾ ನಿಪತಿತಾ ನೃಪ ।
ಕೇಷಾಂಚಿತ್ ಪುಷ್ಪಮಕುಟೇ ನಿಪತಂತಿ ಸ್ಮ ಸಾಯಕಾಃ ॥೩೨॥

ರಾಜನೇ, ಮಹಾಪರಾಕ್ರಮಿಗಳಾದ ಕುಮಾರರು ಪರಮಾದ್ಭುತವಾದ ಅಸ್ತ್ರಪ್ರಯೋಗವನ್ನು ಮಾಡಿದರು. ಕೆಲವರು ಪ್ರಯೋಗ ಮಾಡಿದ ಬಾಣಗಳು ವೃಕ್ಷಗಳ ಮೂಲದಲ್ಲಿ ಬಿದ್ದವು. ಇನ್ನೂ ಕೆಲವರು ಪ್ರಯೋಗಿಸಿದ ಬಾಣಗಳು ವೃಕ್ಷಗಳ ಪುಷ್ಪಗಳಿಂದ ಕೂಡಿದ ಉನ್ನತ ಭಾಗದಲ್ಲಿ ಬೀಳುತ್ತಿದ್ದವು.

ಕೇಚಿಲ್ಲಕ್ಷಿತಲಕ್ಷ್ಯಾಣಿ ಬಾಣೈರಾಹಿತಲಕ್ಷಣೈಃ ।
ವಿವಿಧುರ್ಲಾಘವೋತ್ಸೃಷ್ಟೈರ್ಗುರೂಣಿ ಚ ಲಘೂನಿ ಚ ॥೩೩॥

ಇನ್ನೂ ಕೆಲವರು ಸಣ್ಣ ಮತ್ತು ದೊಡ್ಡ ಪ್ರಮಾಣದ ಲಕ್ಷ್ಯಗಳನ್ನು ಅವುಗಳಿಗೆ ಗುರಿಯಿಟ್ಟು ಲಾಘವದಿಂದ ಪ್ರಯೋಗಿಸಿದ ಬಾಣಗಳಿಂದ ಅವುಗಳನ್ನು ಹೊಡೆಯುತ್ತಿದ್ದರು.

ಕೇಚಿಚ್ಚರಾಕ್ಷೇಪಭಯಾಚ್ಚಿರಾಂಸ್ಯವನನಾಮಿರೇ ।
ಮನುಜಾ ಹೃಷ್ಟಮನಸೋ ವೀಕ್ಷಾಂಚಕ್ರುಃ ಸವಿಸ್ಮಯಾಃ ॥೩೪॥

ಕೆಲವರು ತಮ್ಮ ಮೇಲೆ ಬಾಣವು ಬೀಳಬಹುದು ಎಂಬ ಭಯದಿಂದ ತಲೆಗಳನ್ನು ತಗ್ಗಿಸಿ ಕುಳಿತಿದ್ದರು. ಎಲ್ಲಾ ಮನುಜರೂ ಸಂತೋಷ ಮತ್ತು ವಿಸ್ಮಯಗಳಿಂದ ಅಸ್ತ್ರಕೌಶಲವನ್ನು ವೀಕ್ಷಿಸಿದರು.

ತೇ ಸ್ಮ ಲಕ್ಷ್ಯಾಣಿ ಬಿಭಿದುರ್ಬಾಣೈರ್ನಾಮಾಕ್ಷರಾಂಕಿತೈಃ ।
ವಿವಿಧೈರ್ಲಾಘವೋತ್ಸೃಷ್ಟೈರುಹ್ಯಂತೋ ವಾಜಿಭಿರ್ದ್ರುತಮ್ ॥೩೫॥

ರಾಜಕುಮಾರರಾದರೋ, ತಮ್ಮ ಹೆಸರನ್ನು ಕೆತ್ತಿದ ಆಕಾಶದಲ್ಲಿ ಗರಿಗಳ ಸಹಾಯದಿಂದ ಬೇಗ ಹೋಗುವ ಲಾಘವದಿಂದ ಪ್ರಯೋಗಿಸಲ್ಪಟ್ಟ ಬಾಣಗಳಿಂದ ಲಕ್ಷ್ಯಗಳನ್ನು ಭೇದಿಸಿದರು.

ತತ್ಕುಮಾರಬಲಂ ತತ್ರ ಗೃಹೀತಶರಕಾರ್ಮುಕಮ್ ।
ಗಂಧರ್ವನಗರಾಕಾರಂ ಪ್ರೇಕ್ಷಂತೋ ವಿಸ್ಮಿತಾ ಭವನ್ ॥೩೬॥

ಇಚ್ಛಾಮಾತ್ರದಿಂದ ನಿರ್ಮಿಸಿದ ಕಾರಣ, ಗಂಧರ್ವನಗರದಂತೆ ತೋರುತ್ತಿದ್ದ ಬಿಲ್ಲುಬಾಣಗಳನ್ನು ಹಿಡಿದ ರಾಜಕುಮಾರರ ಸಮೂಹವನ್ನು ನೋಡಿ ಎಲ್ಲರೂ ವಿಸ್ಮಿತರಾದರು.

ಸಹಸಾ ಚುಕ್ರುಶುಸ್ತತ್ರ ಶತಶೋಽಥ ಸಹಸ್ರಶಃ ।
ವಿಸ್ಮಯೋತ್ಫುಲ್ಲನಯನಾಃ ಚಾಬ್ರುವನ್ ಸಾಧುಸಾಧ್ವಿತಿ ॥೩೭॥

ಅಲ್ಲಿ ಪ್ರೇಕ್ಷಕರು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಇದ್ದಕ್ಕಿದ್ದಂತೆಯೇ ಹರ್ಷೋದ್ಗಾರವನ್ನು ಮಾಡುತ್ತಿದ್ದರು. ವಿಸ್ಮಯದಿಂದ ಅರಳಿದ ಕಣ್ಣುಳ್ಳವರಾಗಿ 'ಸಾಧು, ಸಾಧು' ಎಂದು ಉಚ್ಚರಿಸುತ್ತಿದ್ದರು.

ಕೃತ್ವಾ ಧನುಷಿ ತೇ ಮಾರ್ಗಾನ್ ರಥಚರ್ಯಾಸು ಚಾಸಕೃತ್ ।
ಗಜಪೃಷ್ಠೇಽಶ್ವಪೃಷ್ಠೇ ಚ ನಿಯುದ್ಧೇ ಚ ಮಹಾಬಲಾಃ ॥೩೮॥

ಗೃಹೀತಖಡ್ಗಚರ್ಮಾಣಸ್ತತೋ ಭೂಯಃ ಪ್ರಹಾರಿಣಃ ।
ಶಸ್ತ್ರಮಾರ್ಗಾನ್ ಯಥೋದ್ದಿಷ್ಟಾಂಶ್ಚೇರುಃ ಸರ್ವಾಸು ಭೂಮಿಷು ॥೩೯॥

ಮಹಾಬಲರಾದ ಅವರು ಧನುರ್ಯುದ್ಧದ ಮಾರ್ಗಗಳನ್ನೂ, ರಥಯುದ್ಧದ ಮಾರ್ಗಗಳನ್ನೂ ಅನೇಕ ಬಾರಿ ಪ್ರದರ್ಶಿಸಿ, ಗಜಪೃಷ್ಠದಲ್ಲಿ, ಅಶ್ವಪೃಷ್ಠದಲ್ಲಿ ಮತ್ತು ನಿಯುದ್ಧಗಳಲ್ಲಿ (ಕುಸ್ತಿಯಲ್ಲಿ) ತಮ್ಮ ಕೌಶಲವನ್ನು ತೋರಿಸಿ, ಖಡ್ಗಚರ್ಮಗಳನ್ನು ಹಿಡಿದು ಪ್ರಹಾರವನ್ನು ಮಾಡುತ್ತಾ ಆ ಎಲ್ಲಾ ಪ್ರದೇಶದಲ್ಲಿ ಶಾಸ್ತ್ರೋಕ್ತವಾದ ವಿವಿಧ ಶಸ್ತ್ರಮಾರ್ಗಗಳಲ್ಲಿ ಸಂಚರಿಸಿದರು.

ಲಾಘವಂ ಸೌಷ್ಠವಂ ಶೌರ್ಯಂ ಸ್ಥಿರತ್ವಂ ದೃಢಮುಷ್ಟಿತಾಮ್ ।
ದಶ್ಯಶುಸ್ತತ್ರ ಸರ್ವೇಷಾಂ ಪ್ರಯೋಗಾನ್ ಖಡ್ಗಚರ್ಮಣಾಮ್ ॥೪೦॥

ಅಲ್ಲಿ ಪ್ರೇಕ್ಷಕರು ಎಲ್ಲಾ ಕುಮಾರರ ಕ್ಷಿಪ್ರತೆಯನ್ನೂ ಸಮೀಚೀನತೆಯನ್ನೂ, ಶೌರ್ಯವನ್ನೂ, ಸ್ಥೈರ್ಯವನ್ನೂ, ದೃಢಮುಷ್ಟಿತ್ವವನ್ನೂ, ಅವರ ಖಡ್ಗಚರ್ಮ ಪ್ರಯೋಗಗಳಲ್ಲಿನೋಡಿದರು.

ಅಥ ತೌ ನಿತ್ಯಸಂಕ್ರುದ್ಧೌ ಸುಯೋಧನವೃಕೋದರೌ ।
ಅವತೀರ್ಣೌ ಗದಾಹಸ್ತೌ ಸದ್ವಿಶೃಂಗಾವಿವಾಚಲೌ ॥೪೧॥

ಅನಂತರ, ನಿತ್ಯವೂ ಪರಸ್ಪರ ಕ್ರೋಧವುಳ್ಳ ಭೀಮ ದುರ್ಯೋಧನರು ಎರಡು ಶೃಂಗಗಳುಳ್ಳ ಎರಡು ಪರ್ವತಗಳಂತೆ ಕೈಯಲ್ಲಿ ಗದೆಯನ್ನು ಹಿಡಿದು ರಂಗಭೂಮಿಯನ್ನು ಪ್ರವೇಶಿಸಿದರು.

ಕ್ರೂರಪ್ರೇಕ್ಷ್ಣೌ ಮಹಾಬಾಹೂ ಪೌರುಷೇ ಪರ್ಯವಸ್ಥಿತೌ ।
ಬೃಹಂತೌ ವಾಶಿತಾಹೇತೋಃ ಸಮದಾವಿವ ಕುಂಜರೌ ॥೪೨॥

ಕ್ರೂರದೃಷ್ಟಿಯುಳ್ಳ ಮಹಾಬಾಹುಗಳಾದ ಮಹಾಪೌರುಷ ನಿಷ್ಠರಾದ ಬೃಹತ್ತಾದ ಶರೀರವುಳ್ಳ ಅವರಿಬ್ಬರೂ ಹೆಣ್ಣಾನೆಯ ಸಲುವಾಗಿ ಹೋರಾಡುವ ಎರಡು ಮದಿಸಿದ ಆನೆಗಳಂತೆ ತೋರಿದರು.

ತೌ ಪ್ರದಕ್ಷಿಣಸವ್ಯಾನಿ ಮಂಡಲಾನಿ ಮಹಾಬಲೌ ।
ಚೇರತುರ್ನಿರ್ಮಲಗದೌ ಸಮದೌ ವೃಷಭಾವಿವ ॥೪೩॥

ಅವರಿಬ್ಬರೂ ನಿರ್ಮಲವಾದ ಗದೆಯನ್ನು ಹಿಡಿದು ಮದಯುಕ್ತವಾದ ಎರಡು ವೃಷಭಗಳಂತೆ ಮಹಾಬಲದಿಂದ ಕೂಡಿದವರಾಗಿ ದಕ್ಷಿಣ ಮತ್ತು ಸವ್ಯ ಮಂಡಲಗಳಲ್ಲಿ ಸಂಚರಿಸಿದರು.

ಧೃತರಾಷ್ಟ್ರಾಯ ವಿದುರೋ ಗಾಂಧಾರ್ಯೈ ಚ ಮಹಾಮತಿಃ ।
ನ್ಯವೇದಯತ ತತ್ ಸರ್ವಂ ಕುಮಾರಾಣಾಂ ಚ ಚೇಷ್ಟಿತಮ್ ॥೪೪॥

ಮಹಾಮತಿಯಾದ ವಿದುರನು ಧೃತರಾಷ್ಟ್ರನಿಗೂ ಮತ್ತು ಗಾಂಧಾರಿಗೂ ಕುಮಾರರ ಎಲ್ಲಾ ಚೇಷ್ಟೆಗಳನ್ನು ತಿಳಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರಯತ್ರಿಂಶದಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ಏಕಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೮

ಕರ್ಣಂ ಹಸ್ತೇ ಪ್ರಗೃಹ್ಯೈವ ಧಾರ್ತರಾಷ್ಟ್ರೋ ಗೃಹಂ ಯಯೌ ।
ಪಾರ್ಥಂ ಹಸ್ತೇ ಪ್ರಗೃಹ್ಯೈವ ಭೀಮಃ ಪ್ರಾಯಾತ್ ಸ್ವಮಾಲಯಮ್ ॥

ಕರ್ಣನ ಕೈಹಿಡಿದು ದುರ್ಯೋಧನ ಮನೆಗೆ ಹೋದ ಅರ್ಜುನನ ಕೈಹಿಡಿದು ಭೀಮ ತನ್ನ ಮನೆಗೆ ಹೋದ.

ಪಾರ್ಥೇನ ಕರ್ಣೋ ಹಂತವ್ಯ ಇತ್ಯಾಸೀದ್ ಭೀಮನಿಶ್ಚಯಃ ।
ವೈಪರಿತ್ಯೇನ ತಸ್ಯಾಸೀದ್ ದುರ್ಯೋಧನವಿನಿಶ್ಚಯಃ ॥೫೨॥

ತವರ್ಥಂ ನೀತಿಮತುಲಾಂ ಚಕ್ರತುಸ್ತಾವುಭಾವಪಿ ॥೫೩॥

ಅರ್ಜುನನಿಂದ ಕರ್ಣ ಹತನಾಗಬೇಕೆಂಬುದು ಭೀಮನ ನಿಶ್ಚಯ. ಇದಕ್ಕೆ ವಿಪರೀತವಾಗಿ ಕರ್ಣನಿಂದ ಅರ್ಜುನ ಹತನಾಗಬೇಕೆಂದು ದುರ್ಯೋಧನ ತೀರ್ಮಾನಿಸಿದ್ದ.

ತಥೋತ್ಕರ್ಷೇ ಫಲ್ಗುನಸ್ಯ ಯಶಸೋ ವಿಜಯಸ್ಯ ಚ ।
ಉದ್ಯೋಗ ಆಸೀದ್ ಭೀಮಸ್ಯ ಧಾರ್ತರಾಷ್ಟ್ರಸ್ಯ ಚಾನ್ಯಥಾ ॥೫೪॥

ಅರ್ಜುನನಿಗೆ ಯಶಸ್ಸು ಮತ್ತು ವಿಜಯ ದಿನೇದಿನೆ ಹೆಚ್ಚುವಂತೆ ಭೀಮನ ಯತ್ನ ನಡೆದಿತ್ತು. ಕರ್ಣನಿಗೆ ಯಶಸ್ಸು ವಿಜಯ ಹೆಚ್ಚುವಂತೆ ದುರ್ಯೋಧನನ ಪ್ರಯತ್ನ ಸಾಗಿತ್ತು.

ಭೀಮಾರ್ಥಂ ಕೇಶವೋಽನ್ಯೇ ಚ ದೇವಾಃ ಫಲ್ಗುನಪಕ್ಷಿಣಃ ।
ಆಸನ್ ಯಥೈವ ರಾಮಾದ್ಯಾಃ ಸಂಗ್ರಹೇಣ ಹನೂಮತಃ
ಸುರಾಃ ಸುಗ್ರೀವಪಕ್ಷಸ್ಥಾಃ ಪೂರ್ವಮಾಸಂಸ್ತಥೈವ ಹಿ ॥೫೫॥

ತದರ್ಥಮೇವ ಭೀಮಸ್ಯ ಹ್ಯನುಜತ್ವಂ ಸುರೇಶ್ವರಃ
ಆಪ ಪೂರ್ವಾನುತಾಪೇನ ತೇನ ಭೀಮಸ್ತಥಾಕರೋತ್ ॥೫೬॥

ದುರ್ಯೋಧನಾರ್ಥಂ ಕರ್ಣಸ್ಯ ಪಕ್ಷಿಣೋ ದೈತ್ಯದಾನವಾಃ ।
ಆಸುಃ ಸರ್ವೇ ಗ್ಲಹಾವೇತಾವಾಸತುಃ ಕರ್ಣಫಲ್ಗುನೌ ॥೫೭॥

ಹೇಗೆ ಹಿಂದೆ ಹನುಮಂತ ಪರಿಗ್ರಹಿಸಿದನೆಂದು ರಾಮಾದಿ ದೇವತೆಗಳು ಸುಗ್ರೀವನ ಪಕ್ಷವಹಿಸಿದರೋ ಹಾಗೇ ಭೀಮನ ಸಂತೋಷಕ್ಕಾಗಿ ಕೃಷ್ಣನೂ ಬೇರೆ ದೇವತೆಗಳೂ ಅರ್ಜುನಪಕ್ಷವನ್ನು ವಹಿಸಿದರು. ಅದಕ್ಕಾಗಿಯೆ ಹಿಂದೆ ತಾನು ಮಾಡಿದ ಅಪರಾಧಕ್ಕೆ ಪಶ್ಚಾತ್ತಾಪಪಟ್ಟು ಇಂದ್ರ ಭೀಮನ ತಮ್ಮನಾಗಿ ಅವತರಿಸಿದ್ದ. ಅದರಿಂದ ಭೀಮ ಅವನಿಗೆ ಅಭಯವನ್ನಿತ್ತ. ದುರ್ಯೋಧನನ ಸಂತೋಷಕ್ಕಾಗಿ ದೈತ್ಯದಾನವರೆಲ್ಲರೂ ಕರ್ಣನ ಪಕ್ಷ ವಹಿಸಿದರು. ಹೀಗೆ ಯುದ್ಧವೆಂಬ ಜೂಜಿನಲ್ಲಿ ಕರ್ಣಾರ್ಜುನರು ಪಣವಾದರು.

★ ★ ★ ★

ನೂರಮೂವತ್ನಾಲ್ಕನೆಯ ಅಧ್ಯಾಯ

(ಭೀಮದುರ್ಯೋಧನರ ಸಲುವಾಗಿ ಪ್ರೇಕ್ಷಕದ್ವೈಧೀಭಾವ, ಅಶ್ವತ್ಥಾಮರಿಂದ ಸಮಾಧಾನ, ಅರ್ಜುನನ ರಂಗಪ್ರವೇಶ ಮತ್ತು ಕೌಶಲ ಪ್ರದರ್ಶನ)

ವೈಶಂಪಾಯನಃ

ಕುರುರಾಜೇ ತು ರಂಗಸ್ಥೇ ಭೀಮೇ ಚ ಬಲಿನಾಂ ವರೇ ।
ಪಕ್ಷಪಾತಕೃತಸ್ನೇಹಃ ಸ ದ್ವಿಧೇವಾಭವಜ್ಜನಃ ॥೧॥

ಕುರುರಾಜನಾದ ದುರ್ಯೋಧನನೂ, ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮನೂ ರಂಗಭೂಮಿಯನ್ನು ಪ್ರವೇಶಿಸುತ್ತಿರಲು ಪ್ರೇಕ್ಷಕರು ತಮ್ಮ ತಮ್ಮ ಪ್ರಿಯನಾಯಕರಲ್ಲಿ ಸ್ನೇಹದಿಂದ ಉಂಟಾದ ಪಕ್ಷಪಾತದಿಂದ ಎರಡು ಭಾಗವಾದರು.

ಜಯ ಹೇ ಕುರುರಾಜೇತಿ ಜಯ ಹೇ ಭೀಮ ಇತ್ಯುತ ।
ಪುರುಷಾಣಾಂ ಸುವಿಪುಳಾಃ ಪ್ರಣಾದಾಃ ಸಹಸೋತ್ಥಿತಾಃ ॥೨॥

''ಕುರುರಾಜನನಾದ ದುರ್ಯೋಧನನಿಗೆ ಜಯವಾಗಲಿ'' ''ಭೀಮಸೇನನಿಗೆ ಜಯವಾಗಲಿ'' ಎಂಬ ಪ್ರೇಕ್ಷಕಜನರ ವಿಪುಲವಾದ ಅಬ್ಬರಗಳು ಇದ್ದಕ್ಕಿದ್ದಂತೆಯೇ ಕೇಳಿ ಬಂದವು.

ತತಃ ಕ್ಷುಬ್ಧಾರ್ಣವಸಮಂ ರಂಗಮಾಲೋಕ್ಯ ಬುದ್ಧಿಮಾನ್ ।
ಭಾರದ್ವಾಜಃ ಪ್ರಿಯಂ ಪುತ್ರಮಶ್ವತ್ಥಾಮಾನಮಬ್ರವೀತ್ ॥೩॥

ಆಗ ಕ್ಷುಬ್ಧಸಮುದ್ರದಂತೆ ಇದ್ದ ರಂಗಭೂಮಿಯನ್ನು ನೋಡಿ ಮೇಧಾವಿಗಳಾದ ದ್ರೋಣರು ಪ್ರಿಯಪುತ್ರನಾದ ಅಶ್ವತ್ಥಾಮರನ್ನು ಕುರಿತು ಹೀಗೆ ಹೇಳಿದರು.

ವಾರಯೈತೌ ಮಹಾವೀರ್ಯೌ ಕೃತಯೋಗಾವುಭಾವಪಿ ।
ಮಾ ಭೂದ್ ರಂಗಪ್ರಕೋಪೋಽಯಂ ಭೀಮದುರ್ಯೋಧನೋದ್ಭವಃ ॥

ಮಹಾಪರಾಕ್ರಮಿಗಳೂ ಮತ್ತು ಬಹಳ ಪರಿಶ್ರಮವುಳ್ಳವರೂ ಆದ ಇವರಿಬ್ಬರನ್ನು ನಿವಾರಿಸು. ಭೀಮದುರ್ಯೋಧನರ ನಿಮಿತ್ತದಿಂದ ರಂಗಪ್ರಕೋಪವು ಉಂಟಾಗದಿರಲಿ.

ವೈಶಂಪಾಯನಃ

ತತ ಉತ್ಥಾಯ ವೇಗೇನ ಅಶ್ವತ್ಥಾಮಾ ನ್ಯವಾರಯತ್ ।
ಗುರೋರಾಜ್ಞಾ ಭೀಮ ಇತಿ ಗಾಂಧಾರೇ ಗುರುಶಾಸನಮ್ ।
ಅಲಂ ಯೋಗಕೃತಂ ವೇಗಮಲಂ ಸಾಹಸಮಿತ್ಯುತ ॥೫॥

ಆಗ ಗುರುಪುತ್ರರಾದ ಅಶ್ವತ್ಥಾಮರು ತಕ್ಷಣ ಎದ್ದು ''ಭೀಮಸೇನನೇ, ಇದು ಗುರುಗಳ ಆಜ್ಞೆ. ದುರ್ಯೋಧನನೇ ಇದು ಗುರುಗಳ ಆಜ್ಞೆ. ಅಭ್ಯಾಸಜನ್ಯವಾದ ಈ ರಭಸವನ್ನೂ, ಈ ಸಾಹಸವನ್ನೂ ನಿಲ್ಲಿಸಿ'' ಎಂದು ಹೇಳಿ ಅವರಿಬ್ಬರನ್ನೂ ತಡೆದರು.

ತತಸ್ತಾವುದ್ಯತಗದೌ ಗುರುಪುತ್ರೇಣ ವಾರಿತೌ ।
ಯುಗಾಂತಾನಿಲಸಂಕುಟ್ಟೌ ಮಹಾವೇಗಾವಿವಾರ್ಣವೌ ॥೬॥

ಆಗ ಪ್ರಳಯಕಾಲದ ವಾಯುವಿನಂತೆ ಕ್ರುದ್ಧರಾದ, ಮಹಾವೇಗವುಳ್ಳ ಎರಡು ಸಮುದ್ರದಂತಿದ್ದ, ಎತ್ತಿದ ಗದೆಯನ್ನು ಹಿಡಿದಿದ್ದ ಅವರಿಬ್ಬರೂ ಗುರುಪುತ್ರರಿಂದ ನಿವಾರಿಸಲ್ಪಟ್ಟರು.

ತತೋ ರಂಗಾಂಕಣಗತೋ ದ್ರೋಣೋ ವಚನಮಬ್ರವೀತ್ ।
ನಿವಾರ್ಯ ವಾದಿತ್ರಗಣಂ ಮಹಾಮೇಘನಿಭಸ್ವನಮ್ ॥೭॥

ಅನಂತರ ದ್ರೋಣರು ರಂಗವನ್ನು ಪ್ರವೇಶಿಸಿ ಮಹಾಮೇಘಸ್ವನದಂತಿದ್ದ ವಾದ್ಯಗಳನ್ನು ನಿಲ್ಲಿಸಿ ಹೀಗೆ ಮಾತನಾಡಿದರು.

ಯೋ ಮೇ ಪುತ್ರಾತ್ ಪ್ರಿಯತರಃ ಸರ್ವಾಸ್ತ್ರವಿದುಷಾಂ ವರಃ ।
ಐಂದ್ರಿರಿಂದ್ರಾನುಜಸಮಃ ಸ ಪಾರ್ಥೋ ದೃಶ್ಯತಾಮಿತಿ ॥೮॥

ನನಗೆ ಮಗನಿಗಿಂತಲೂ ಪ್ರಿಯನಾದ ಎಲ್ಲಾ ಅಸ್ತ್ರವೇತ್ತರಿಗಿಂತಲೂ ಶ್ರೇಷ್ಠನಾದ ಇಂದ್ರನ ಪುತ್ರನಾದ, ಇಂದ್ರನ ತಮ್ಮನಾದ ಉಪೇಂದ್ರನಂತಿರುವ ಅರ್ಜುನನು ಬರುತ್ತಿದ್ದಾನೆ, ಎಲ್ಲರೂ ನೋಡಿ.

ಆಚಾರ್ಯವಚನಾತ್ ಸೋಽಥ ಕೃತಸ್ತ್ವಸ್ತ್ರಯನೋ ಯುವಾ ।
ಬದ್ಧಗೋಧಾಂಗುಲಿತ್ರಾಣಃ ಪೂರ್ಣತೂಣಃ ಸಕಾರ್ಮುಕಃ ॥೯॥

ಕಾಂಚನಂ ಕವಚಂ ಬಿಭ್ರತ್ ಪ್ರತ್ಯದೃಶ್ಯತ ಫಲ್ಗುನಃ ।
ಏಕಃ ಸೇಂದ್ರಾಯುಧತಡಿತ್ ಸಸಂಧ್ಯ ಇವ ತೋಯದಃ ॥೧೦॥

ತತಃ ಸರ್ವಸ್ಯ ರಂಗಸ್ಯ ಸಮುತ್ಪಿಂಜಲಕೋಽಭವತ್ ।
ವಾದಿತ್ರಾಣ್ಯಪ್ಯವಾದ್ಯಂತ ಸಶಂಖಾನಿ ಸಮಂತತಃ ॥೧೧॥

ಆಗ ಗುರುಗಳ ವಚನದಂತೆ ಬ್ರಾಹ್ಮಣರ ಆಶೀರ್ವಾದವನ್ನು ಪಡೆದು ಬೆರಳುಗಳಿಗೆ ರಕ್ಷಣೆಯನ್ನು ಹಾಕಿಕೊಂಡು ಬಾಣಗಳು ತುಂಬಿದ ಬತ್ತಳಿಕೆಯನ್ನು ಧರಿಸಿ ಕೈಯಲ್ಲಿ ಧನುಸ್ಸನ್ನು ಹಿಡಿದು ಸುವರ್ಣಮಯವಾದ ಕವಚವನ್ನು ತೊಟ್ಟು ಯುವಕನಾದ ಅರ್ಜುನನು ಸಂಧ್ಯಾಕಾಲದಲ್ಲಿ ಕಾಮನಬಿಲ್ಲು ಮತ್ತು ಮಿಂಚಿನಿಂದ ಕೂಡಿರುವ ಮೋಡದಂತೆ ಕಾಣಿಸಿಕೊಂಡನು. ಆಗ ಪ್ರೇಕ್ಷಕವೃಂದದಲ್ಲಿ ಕೋಲಾಹಲವುಂಟಾಯಿತು. ವಾದ್ಯಗಳು ಮೊಳಗಿದವು. ಎಲ್ಲಾಕಡೆಯಲ್ಲಿಯೂ ಶಂಖಧ್ವನಿಯು ಕೇಳಿಬಂದಿತು.

ಪ್ರೇಕ್ಷಕಃ

ಏಷ ಕುಂತೀಸುತಃ ಶ್ರೀಮಾನೇಷ ಪಾಂಡವಮಧ್ಯಮಃ ।
ಏಷ ಪುತ್ರೋ ಮಹೇಂದ್ರಸ್ಯ ಕುರೂಣಾಮೇಷ ರಕ್ಷಿತಾ ॥೧೨॥

ಏಷೋಽಸ್ತ್ರವಿದುಷಾಂ ಶ್ರೇಷ್ಠ ಏಷ ಧರ್ಮಭೃತಾಂ ವರಃ ।
ಏಷ ಶೀಲವತಾಂ ಚಾಪಿ ಶೀರ್ಷರತ್ನಾಕರೋರ್ಜುನಃ ॥೧೩॥

ಇವನು ಕುಂತಿಯ ಮಕ್ಕಳಲ್ಲಿ ಮಧ್ಯದವನಾಗಿ ತೇಜಸ್ವಿಯಾದವನು. ಇವನು ಮಹೇಂದ್ರನ ಪುತ್ರ. ಇವನು ಕುರುಗಳ ರಕ್ಷಣೆಯನ್ನು ಮಾಡುವವನು. ಇವನು ಅಸ್ತ್ರಜ್ಞರಲ್ಲಿ ಶ್ರೇಷ್ಠನಾದವನು. ಇವನು ಧರ್ಮವನ್ನು ಆಚರಿಸುವವರಲ್ಲಿ ಶ್ರೇಷ್ಠನಾದವನು. ಇವನು ಒಳ್ಳೆಯ ಶೀಲವನ್ನು ಹೊಂದಿರುವವರಿಗೆ ಮುಕುಟಮಣಿಯಂತಿರುವವನು.

ವೈಶಂಪಾಯನಃ

ಇತ್ಯೇವಮತುಲಾ ವಾಚಃ ಶೃಣ್ವಂತ್ಯಾಃ ಪ್ರೇಕ್ಷಕೇರಿತಾಃ ।
ಕುಂತ್ಯಾಃ ಪ್ರಸ್ರವಸಮ್ಮಿಶ್ರೈರಾಸ್ಯೈಃ ಕ್ಲಿನ್ನಮುರೋಽಭವತ್ ॥೧೪॥

ಈ ರೀತಿಯಾಗಿ ಪ್ರೇಕ್ಷಕರು ನುಡಿದ ಅಸದೃಶ ಮಾತುಗಳನ್ನು ಕೇಳಿದ ಕುಂತಿಗೆ ಕಣ್ಣೀರಿನಿಂದಲೂ ಮತ್ತು ಆ ಕ್ಷಣದಲ್ಲಿ ಉತ್ಪನ್ನವಾದ ಸ್ತನ್ಯದಿಂದಲೂ ಎದೆಯು ಒದ್ದೆಯಾಯಿತು.

ತೇನ ಶಬ್ದೇನ ಮಹತಾ ಪೂರ್ಣಶ್ರುತಿರಥಾಬ್ರವೀತ್ ।
ಧೃತರಾಷ್ಟ್ರೋ ನರಶ್ರೇಷ್ಠೋ ವಿದುರಂ ಹೃಷ್ಟಮಾನಸಃ ॥೧೫॥

ಕಿವಿಗಳನ್ನು ತುಂಬಿಕೊಂಡಂತಿದ್ದ ಆ ದೊಡ್ಡ ಶಬ್ದವನ್ನು ಕೇಳಿ, ನರಶ್ರೇಷ್ಠನಾದ ಧೃತರಾಷ್ಟ್ರನು ಸಂತೋಷದಿಂದ ವಿದುರನಿಗೆ ಹೇಳಿದನು.

ಕ್ಷತ್ತಃ ಕ್ಷುಬ್ಧಾರ್ಣವಸಮಃ ಕಿಮೇಷ ಸುಮಹಾಸ್ವನಃ ।
ಸಹಸೈವೋತ್ಥಿತೋ ರಂಗೇ ಭಿಂದನ್ನಿವ ನಭಸ್ತಳಮ್ ॥೧೬॥

ವಿದುರನೇ, ಕ್ಷುಬ್ಧಸಮುದ್ರದಂತಿರುವ ಈ ದೊಡ್ಡ ಶಬ್ದವು ರಂಗಭೂಮಿಯಲ್ಲಿ ಇದ್ದಕ್ಕಿದ್ದಂತೆಯೇ ಉತ್ಪನ್ನವಾಗಿ ಆಕಾಶವನ್ನು ಭೇದಿಸುವಂತೆ ತೋರುತ್ತಿದೆ. ಇದೇನು?

ವಿದುರಃ

ಏಷ ಪಾರ್ಥೋ ಮಹಾಬಾಹುಃ ಕೌಂತೇಯಃ ಪಾಂಡುನಂದನಃ ।
ಅವತೀರ್ಣಃ ಸಕವಚಸ್ತತ್ರೈಷ ಜನನಿಸ್ವನಃ ॥೧೭॥

ಪಾಂಡುಪುತ್ರನಾದ, ಕುಂತಿಯ ಮಗನಾದ, ಮಹಾಬಾಹುವಾದ ಅರ್ಜುನನು ಕವಚವನ್ನು ಧರಿಸಿ, ರಂಗಭೂಮಿಯನ್ನು ಪ್ರವೇಶಿಸುತ್ತಿದ್ದಾನೆ. ಅದರಿಂದ ಈ ಜನಗಳ ಶಬ್ದವು ಉಂಟಾಗಿದೆ.

ಧೃತರಾಷ್ಟ್ರಃ

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ರಕ್ಷಿತೋಽಸ್ಮಿ ಮಹಾಮತೇ ।
ಪೃಥಾರಣಿಸಮುದ್ಭೂತೈಸ್ತ್ರಿಭಿಃ ಪಾಂಡವವಹ್ನಿಭಿಃ ॥೧೮॥

ಮಹಾಮತಿಯಾದ ವಿದುರನೇ ಕುಂತಿ ಎಂಬ ಅರಣಿಯಿಂದ ಉಂಟಾದ ಪಾಂಡು ಪುತ್ರರಾದ ಈ ಮೂರು ಅಗ್ನಿಗಳಿಂದ ನಾನು ಧನ್ಯನಾಗಿದ್ದೇನೆ, ಅನುಗೃಹೀತನಾಗಿದ್ದೇನೆ ಮತ್ತು ರಕ್ಷಿಸಲ್ಪಟ್ಟಿದ್ದೇನೆ.

ವೈಶಂಪಾಯನಃ

ತಸ್ಮಿನ್ ಪ್ರಮುದಿತೇ ರಂಗೇ ಕಥಂಚಿತ್ ಪರ್ಯವಸ್ಥಿತೇ ।
ದರ್ಶಯಾಮಾಸ ಭೀಭತ್ಸುರಾಚಾರ್ಯಾದಸ್ತ್ರಲಾಘವಮ್ ॥೧೯॥

ಆ ಸಂತೋಷಗೊಂಡ ರಂಗಸ್ಥಳವು ಹೇಗೋ ಸ್ವಲ್ಪ ಸಮಾಧಾನಕ್ಕೆ ಬರುತ್ತಿರಲು ಅರ್ಜುನನು ತಾನು ಆಚಾರ್ಯರಿಂದ ಕಲಿತ ಅಸ್ತ್ರಲಾಘವವನ್ನು ಪ್ರದರ್ಶಿಸಿದನು.

ಆಗ್ನೇಯೇನಾಸೃಜದ್ ವಹ್ನಿಂ ವಾರುಣೇನಾಸೃಜತ್ ಪಯಃ ।
ವಾಯವ್ಯಾದಸೃಜದ್ ವಾಯುಂ ಪರ್ಜನ್ಯಾದಸೃಜದ್ ಘನಾನ್ ॥೨೦॥

ಭೌಮೇನ ಪ್ರಾಸೃಜದ್ ಭೂಮಿಂ ಪಾರ್ವತೇನಾಸೃಜದ್ ಗಿರಿಮ್ ।
ಅಂತರ್ಧಾನೇನ ಚಾಸ್ತ್ರೇಣ ಪುನರಂತರ್ಹಿತೋಽಭವತ್ ॥೨೧॥

ಆಗ್ನೇಯಾಸ್ತ್ರದಿಂದ ವಹ್ನಿಯನ್ನು ಸೃಷ್ಟಿಸಿದನು. ವರುಣಾಸ್ತ್ರದಿಂದ ಜಲವನ್ನು ಸೃಷ್ಟಿಸಿದನು. ವಾಯವ್ಯಾಸ್ತ್ರದಿಂದ ವಾಯುವನ್ನು ಸೃಷ್ಟಿಸಿದನು. ಪರ್ಜನ್ಯಾಸ್ತ್ರದಿಂದ ಮೋಡಗಳನ್ನು ಸೃಷ್ಟಿಸಿದನು. ಪೃಥಿವ್ಯಸ್ತ್ರದಿಂದ ಭೂಮಿಯನ್ನೂ, ಪರ್ವತಾಸ್ತ್ರದಿಂದ ಬೆಟ್ಟವನ್ನೂ ಸೃಷ್ಟಿಸಿದನು. ಪುನಃ ಅಂತರ್ಧಾನಾಸ್ತ್ರವನ್ನು ಪ್ರಯೋಗಮಾಡಿ ಅಂತರ್ಧಾನವನ್ನು ಹೊಂದಿದನು.

ಕ್ಷಣಾತ್ ಪ್ರಾಂಶುಃ ಕ್ಷಣಾದ್ ಹ್ರಸ್ವಃ ಕ್ಷಣಾಚ್ಚ ರಥಧೂರ್ಗತಃ ।
ಕ್ಷಣೇನ ರಥಮಧ್ಯಸ್ಥಃ ಕ್ಷಣೇನಾವತರನ್ಮಹೀಮ್ ॥೨೨॥

ಒಂದು ಕ್ಷಣದಲ್ಲಿ ಎತ್ತರನಾಗಿ, ಇನ್ನೊಂದು ಕ್ಷಣದಲ್ಲಿ ಚಿಕ್ಕವನಾಗಿ, ಇನ್ನೊಂದು ಕ್ಷಣದಲ್ಲಿ ರಥದ ಮುಂಭಾಗದಲ್ಲಿದ್ದವಾಗಿ, ಇನ್ನೊಂದು ಕ್ಷಣದಲ್ಲಿ ರಥದ ಮಧ್ಯದಲ್ಲಿದ್ದವನಾಗಿ, ಮುಂದಿನ ಕ್ಷಣದಲ್ಲಿ ಭೂಮಿಯ ಮೇಲೆ ಇಳಿದು ತನ್ನ ಕೌಶಲವನ್ನು ತೋರಿಸಿದನು.

ಸುಕುಮಾರಶ್ಚ ಶೂರಶ್ಚ ಗುರುಶ್ಚಾಪಿ ಗುರುಪ್ರಿಯಃ ।
ಸೌಷ್ಠವೇನ ಹಿ ಸಂಯುಕ್ತಃ ಸೋಽವಿಧ್ಯದ್ ಏವಿಧೈಃ ಶರೈಃ ॥೨೩॥

ಸುಕುಮಾರನೂ, ಶೂರನೂ, ಗುರುಪ್ರಿಯನೂ, ಶ್ರೇಷ್ಠನೂ ಆದ ಅವನು, ಸೌಷ್ಠವದಿಂದ ಕೂಡಿದವನಾಗಿ ಅನೇಕ ಬಾಣಗಳನ್ನು ಪ್ರಯೋಗಿಸಿ ಲಕ್ಷ್ಯಗಳನ್ನು ಭೇದಿಸಿದನು.

ಭ್ರಮತಶ್ಚ ವರಾಹಸ್ಯ ಸಿಂಹಸ್ಯ ಪ್ರಮುಖೇ ಸ್ಥಿತಃ ।
ಪಂಚ ಬಾಣಾನ್ ನಸಂಯುಕ್ತಾನ್ ಸ ಮುಮೋಚೈಕಬಾಣವತ್ ॥೨೪॥

ಓಡುತ್ತಿರುವ ವರಾಹ ಮತ್ತು ಸಿಂಹದ ಎದುರಿಗೆ ನಿಂತು ಅಸಂಯುಕ್ತವಾದ ಐದು ಬಾಣಗಳನ್ನು ಒಂದೇ ಬಾಣದಂತೆ ಬಿಟ್ಟನು.

ಗವ್ಯೇ ವಿಷಾಣಕೋಶೇ ಚ ಬಾಲರಜ್ಜ್ವವಲಂಬಿತೇ ।
ನಿಚಖಾನ ಮಹಾವೀರಃ ಸಾಯಕಾನೇಕವಿಂಶತಿಮ್ ॥೨೫॥

ಒಂದು ಸಣ್ಣ ಹಗ್ಗದಿಂದ ತೂಗು ಹಾಕಿದ ಗೋವಿನ ಕೊಂಬಿನೊಳಗೆ, ಮಹಾವೀರನಾದ ಅವನು ಇಪ್ಪತ್ತೊಂದು ಬಾಣಗಳನ್ನು ತೂರಿಸಿದನು.

ಇತ್ಯೇವಮಾದಿ ಸುಮಹತ್ ಖಡ್ಗೇ ಧನುಷಿ ಚಾಭವತ್ ।
ಗದಾಯಾಂ ಚಾಸ್ತ್ರಕುಶಲೋ ದರ್ಶಕಾನಾಂ ಪ್ರದರ್ಶಯನ್ ॥೨೬॥

ಇವೇ ಮೊದಲಾದ ಆಶ್ಚರ್ಯಗಳನ್ನು ಖಡ್ಗದಲ್ಲಿಯೂ, ಧನುಸ್ಸಿನಲ್ಲಿಯೂ, ಗದೆಯಲ್ಲಿಯೂ ಅಸ್ತ್ರಕುಶಲನಾದ ಅವನು ದರ್ಶಕರಿಗೆ ತೋರಿಸಿದನು.

ಚಕ್ರತೋಮರಪ್ರಾಸಾನಾಂ ಭಿಂಡಿಪಾಲಪರಶ್ವಧಾನ್ ।
ಅನ್ಯೇಷಾಂ ಚಾಪಿ ಶಿಕ್ಷಾಣಾಂ ದರ್ಶಯಾಮಾಸ ಲಾಘವಮ್ ॥೨೭॥

ಚಕ್ರ, ತೋಮರ, ಪ್ರಾಸಗಳ, ಭಿಂಡಿಪಾಲ ಮತ್ತು ಪರಶ್ವಧಗಳ, ಹಾಗೆಯೇ ಇನ್ನೂ ಅನೇಕ ಶಸ್ತ್ರಗಳ ಶಿಕ್ಷಾಲಾಘವವನ್ನೂ ಪ್ರದರ್ಶಿಸಿದನು.

ತತಃ ಸಮಾಪ್ತಭೂಯಿಷ್ಠೇ ತಸ್ಮಿನ್ ಕರ್ಮಣಿ ಭಾರತ ।
ಮಂದೀಭೂತೇ ಸಮಾಜೇ ಚ ವಾದಿತ್ರಾಣಾಂ ಚ ನಿಸ್ವನೇ ॥೨೮॥

ದ್ವಾರದೇಶಾತ್ ಸಮುದ್ಭೂತೋ ಮಾಹಾತ್ಮ್ಯಬಲಸೂಚಕಃ ।
ವಜ್ರನಿಷ್ಪೇಷಸದೃಶಃ ಶುಶ್ರುವೇ ಭೂರಿನಿಸ್ವನಃ ॥೨೯॥

ಎಲೈ ಭಾರತನೇ, ಅರ್ಜುನನ ಪ್ರದರ್ಶನವು ಮುಗಿಯುತ್ತಾ ಬಂದಿರಲು ಆ ದೊಡ್ಡ ಸಮಾಜದಲ್ಲಿ ವಾದ್ಯಗಳ ಸ್ವನವು ಕ್ಷೀಣವಾಗುತ್ತಿರಲು ದ್ವಾರದೇಶದಲ್ಲಿ ಮಾಹಾತ್ಮ್ಯ ಮತ್ತು ಬಲವನ್ನು ಸೂಚಿಸುವ ವಜ್ರದಂತೆ ಕಠೋರವಾದ ಮಹಾಸ್ವನವು ಕೇಳಿಬಂದಿತು.

ಶೀರ್ಯಂತೇ ಕಿಂ ನು ಗಿರಯಃ ಕಿಂಸ್ವಿದ್ ಭೂಮಿರ್ವಿದೀರ್ಯತೇ ।
ಕಿಂಸ್ವಿದಾಪೂರ್ಯತೇ ವ್ಯೋಮ ಜಲಭಾರಸ್ವನೈರ್ಘನೈಃ ॥೩೦॥

ರಾಜನೇ, ಆ ಸ್ವನವನ್ನು ಕೇಳಿದ ತಕ್ಷಣ ಪ್ರೇಕ್ಷಕರಿಗೆ ಏನು ಪರ್ವತಗಳು ಸಿಡಿಯುತ್ತಿವೆಯೋ, ಭೂಮಿಯು ಬಿರಿಯುತ್ತಿದೆಯೋ, ಅಥವಾ ಜಲಪೂರ್ಣವಾದ ಮೋಡಗಳಿಂದ ಆಕಾಶವೆಲ್ಲವೂ ತುಂಬುತ್ತಿದೆಯೋ ಎಂಬ ಬುದ್ಧಿಯು ಉಂಟಾಯಿತು.

ರಂಗಸ್ಯೈವಂ ಮತಿರಭೂತ್ ಕ್ಷಣೇನ ವಸುಧಾಧಿಪ ।
ದ್ವಾರಂ ಚಾಭಿಮುಖಾಃ ಸರ್ವೇ ಬಭೂವುಃ ಪ್ರೇಕ್ಷಕಾಸ್ತದಾ ॥೩೧॥

ಪಂಚಭಿರ್ಭ್ರಾತೃಭಿಃ ಪಾರ್ಥೈರ್ದ್ರೋಣಃ ಪರಿವೃತೋ ಬಭೌ ।
ಪಂಚತಾರೇಣ ಸಂಯುಕ್ತಃ ಸಾವಿತ್ರೇಣೇವ ಚಂದ್ರಮಾಃ ॥೩೨॥

ಎಲ್ಲಾ ಪ್ರೇಕ್ಷಕರೂ ದ್ವಾರದೇಶದ ಕಡೆಗೆ ಮುಖ ಮಾಡಿ ನೋಡಿದರು. ಪಂಚಪಾಂಡವರಿಂದ ಪರಿವೃತರಾದ ದ್ರೋಣರು, ಸೂರ್ಯನಿಂದ ತೇಜಸ್ಸನ್ನು ಪಡೆದು ಪಂಚನಕ್ಷತ್ರಗಳಿಂದ ಕೂಡಿದ ಎರಡನೆಯ ಚಂದ್ರನಂತೆ ತೋರಿದರು.

ಅಶ್ವತ್ಥಾಮ್ನಾ ಚ ಸಹಿತಂ ಭ್ರಾತೄಣಾಂ ಶತಮೂರ್ಜಿತಮ್ ।
ದುರ್ಯೋಧನಮಮಿತ್ರಘ್ನಮುತ್ಥಿತಂ ಪರ್ಯವಾರಯತ್ ॥೩೩॥

ಇನ್ನೊಂದೆಡೆ ಅಶ್ವತ್ಥಾಮರಿಂದ ಸಹಿತವಾದ ದುರ್ಯೋಧನ ಮೊದಲಾದ ಬಲಿಷ್ಠರಾದ ನೂರು ಅಣ್ಣತಮ್ಮಂದಿರ ಸಮೂಹವು ಮೇಲೆದ್ದು ಸುತ್ತುವರಿಯಿತು.

ಸ ತೈಸ್ತದಾ ಭ್ರಾತೃಭಿರುದ್ಯತಾಯುಧೈ
ರ್ವೃತೋ ಗದಾಪಾಣಿರವಸ್ಥಿತಃ ಸ್ಥಿರಃ ।
ಬಭೌ ತದಾ ದಾನವಸಂಕ್ಷಯೇ ಪುರಾ
ಪುರಂದರೋ ದೇವಗಣೈರಿವಾವೃತಃ ॥೩೪॥

ಆಗ ಅಶ್ವತ್ಥಾಮರು, ಕೈಗಳಲ್ಲಿ ಆಯುಧವನ್ನು ಹಿಡಿದ ಸಹೋದರರಿಂದ ಸುತ್ತುವರಿಯಲ್ಪಟ್ಟು ಕೈಯಲ್ಲಿ ಗದೆಯನ್ನು ಹಿಡಿದು ಸ್ಥಿರವಾಗಿ ನಿಂತು ಹಿಂದೆ ದೇವಾಸುರ ಯುದ್ಧದಲ್ಲಿ ದೇವಗಣಗಳಿಂದ ಆವೃತನಾದ ಇಂದ್ರನಂತೆ ಶೋಭಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಚತುಃತ್ರಿಂಶದಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ದ್ವ್ಯಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಮೂವತ್ತಾ ನ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೮

ತದೈವ ಕರ್ಣ ಆಗತ್ಯ ರಾಮೋಪಾತ್ತಾಸ್ತ್ರಸಂಪದಮ್ ।
ದರ್ಶಯನ್ನಧಿಕಃ ಪಾರ್ಥಾದಭೂದ್ ರಾಜನ್ಯಸಂಸದಿ ॥೩೫॥

ಅದೇ ಸಮಯದಲ್ಲಿ ಕರ್ಣನು ಬಂದು ಪರಶುರಾಮರಿಂದ ಕಲಿತಿದ್ದ ಅಸ್ತ್ರಸಂಪತ್ತನ್ನು ರಾಜರುಗಳ ಸಮ್ಮುಖದಲ್ಲಿ ಪ್ರದರ್ಶಿಸಿ ಅರ್ಜುನನಿಗಿಂತ ಮೇಲೆನೆನಿಸಿದ.

ಕುಂತೀ ನಿಜಂ ಸುತಂ ಜ್ಞಾತ್ವಾ ಲಜ್ಜಯಾ ನಾವದಚ್ಚ ತಮ್ ।
ಪಾರ್ಥೋऽಸಹಂಸ್ತಂ ಯುದ್ಧಾಯೈವಾಹ್ವಯಾಮಾಸ ಸಂಸದಿ ॥೩೬॥

ಕುಂತಿ ಕರ್ಣನನ್ನು ತನ್ನ ಮಗನೆಂದು ತಿಳಿದರೂ ಲಜ್ಜೆಯಿಂದ ಮಗನೆಂದು ಕರೆದು ಮಾತಾಡಲಿಲ್ಲ. ಅರ್ಜುನ ಕರ್ಣನ ಪಾಂಡಿತ್ಯವನ್ನು ಸಹಿಸದೆ ಸಭೆಯಲ್ಲಿ ಅವನನ್ನು ಯುದ್ಧಕ್ಕೆ ಆಹ್ವಾನಿಸಿದ.

ರಣಾಯಾಕ್ಷತ್ರಿಯಾಹ್ವಾನಂ ಜಾನನ್ ಧರ್ಮಪ್ರತೀಪಕಮ್ ।
ಭೀಮೋ ನಿವಾರ್ಯ ಬೀಭತ್ಸುಂ ಕರ್ಣಾಯಾದಾತ್ ಪ್ರತೋದಕಮ್ ॥

ಕ್ಷತ್ರಿಯನಲ್ಲದವನನ್ನು ಯುದ್ಧಕ್ಕೆ ಕರೆಯುವುದು ಧರ್ಮ ವಿರುದ್ಧವಾಗುವುದು ಎಂದು ತಿಳಿದ ಭೀಮ ಅರ್ಜುನನನ್ನು ತಡೆದು ನಿಲ್ಲಿಸಿ ಕರ್ಣನ ಕೈಗೆ ಚಾಬುಕನ್ನು ನೀಡಿದ.

ಅಕ್ಷತ್ರ ಸಂಸ್ಕಾರ ಯುತೋ ಜಾತೋಽಪಿ ಕ್ಷತ್ರಿಯೇ ಕುಲೇ ।
ನ ಕ್ಷತ್ರಿಯೋ ಹಿ ಭವತಿ ಯಥಾ ವ್ರಾತ್ಯೋ ದ್ವಿಜೋತ್ತಮಃ ॥೩೮॥

'ಬ್ರಾಹ್ಮಣನಾಗಿ ಹುಟ್ಟಿಯೂ ಉಪನಯನಾದಿ ಸಂಸ್ಕಾರವಿಲ್ಲದಿದ್ದರೆ ಬ್ರಾಹ್ಮಣನೆನಿಸುವುದಿಲ್ಲ ಹೇಗೋ ಹಾಗೇ ಕ್ಷತ್ರಿಯಕುಲದಲ್ಲಿ ಹುಟ್ಟಿದವನೂ ಕ್ಷತ್ರಿಯ ಸಂಸ್ಕಾರ ಉಳ್ಳವನಾಗದಿದ್ದರೆ ಕ್ಷತ್ರಿಯನೆನಿಸುವುದಿಲ್ಲ' ಎಂದ.

ನಿರುತ್ತರೇ ಕೃತೇ ಕರ್ಣೇ ಭೀಮೇನೈವ ಸುಯೋಧನಃ ।
ಅಭ್ಯಷೇಚಯದಂಗೇಷು ರಾಜಾನಂ ಪಿತ್ರನುಜ್ಞಯಾ ॥೩೯॥

ಧೃತರಾಷ್ಟ್ರಃ ಪಕ್ಷಪಾತಾತ್ ಪುತ್ರಸ್ಯಾನುವಶೋಽಭವತ್ ॥೪೦॥

ಭೀಮ ಹೀಗೆ ಕರ್ಣನನ್ನು ನಿರುತ್ತರಗೊಳಿಸಿದಾಗ ಸುಯೋಧನ ತಂದೆಯಿಂದ ಅನುಜ್ಞೆ ಪಡೆದು ಕರ್ಣನನ್ನು ಅಂಗರಾಜ್ಯದಲ್ಲಿ ರಾಜನನ್ನಾಗಿ ಅಭಿಷೇಕ ಮಾಡಿದ. ಧೃತರಾಷ್ಟ್ರ ಮಗನಲ್ಲಿ ಪಕ್ಷಪಾತದಿಂದ ಅವನಿಗೆ ವಶನಾಗಿದ್ದ.

★ ★ ★ ★

ನೂರಮೂವತ್ತೈದನೆಯ ಅಧ್ಯಾಯ

(ಕರ್ಣನ ರಂಗಪ್ರವೇಶ, ಅರ್ಜುನನನ್ನು ಮೀರಿಸಿ ಕೌಶಲ ಪ್ರದರ್ಶನ, ಕರ್ಣಾರ್ಜುನರ ವಿರೋಧ, ದುರ್ಯೋಧನನಿಂದ ಅಂಗರಾಜ್ಯದಲ್ಲಿ ಕರ್ಣನ ಅಭಿಷೇಕ)

ವೈಶಂಪಾಯನಃ

ಏತಸ್ಮಿನ್ನೇವ ಕಾಲೇ ತು ತಸ್ಮಿನ್ ಜನಸಮಾಗಮೇ ।
ದತ್ತೇऽವಕಾಶೇ ಪುರುಷೈಃವಿಸ್ಮಯೋತ್ಫುಲ್ಲಲೋಚನೈಃ ।
ವಿವೇಶ ರಂಗಂ ವಿಸ್ತೀರ್ಣಂ ಕರ್ಣಃ ಪರಪುರಂಜಯಃ ॥೧॥

ಇದೇ ಸಮಯದಲ್ಲಿ ಆ ಜನರ ಸಮೂಹದಲ್ಲಿ ಸ್ವಲ್ಪ ಅವಕಾಶವು ದೊರೆಯುತ್ತಿರಲು, ವಿಸ್ಮಯದಿಂದ ಅರಳಿದ ಕಣ್ಣುಗಳುಳ್ಳ ಜನರಿಂದ ನೋಡಲ್ಪಟ್ಟವನಾಗಿ, ಪರಪುರಂಜಯನಾದ ಕರ್ಣನು ವಿಸ್ತೀರ್ಣವಾದ ರಂಗಸ್ಥಳವನ್ನು ಪ್ರವೇಶಿಸಿದನು.

ಸಹಜಂ ಕವಚಂ ಬಿಭ್ರತ್ ಕುಂಡಲೋದ್ಯೋತಿತಾನನಃ ।
ಸಧನುರ್ಬದ್ಧನಿಸ್ತ್ರಿಂಶಃ ಸಾಕ್ಷಾದಿವ ದಿವಾಕರಃ
ಸ ಕಾನೀನಃ ಪೃಥುಯಶಾಃ ಪೃಥಾಯಾಃ ಪೃಥುಲೋಚನಃ ॥೨॥

ಅವನು ಸಹಜವಾದ ಕವಚವನ್ನು ಧರಿಸಿ ಕರ್ಣಕುಂಡಲಗಳಿಂದ ಶೋಭಿಸುವ ಮುಖವುಳ್ಳವನಾಗಿ, ಕೈಯಲ್ಲಿ ಧನುಸ್ಸನ್ನು ಹಿಡಿದು ಸೊಂಟದಲ್ಲಿ ಕತ್ತಿಯನ್ನು ಕಟ್ಟಿ ಸಾಕ್ಷಾತ್‌ಸೂರ್ಯನಂತೆ ತೋರುತ್ತಿದ್ದನು. ದೀರ್ಘಲೋಚನನೂ, ವಿಸ್ತಾರವಾದ ಕೀರ್ತಿಯುಳ್ಳವನೂ ಆದ ಅವನು ಕುಂತಿಗೆ ಕನ್ಯಾವಸ್ಥೆಯಲ್ಲಿ ಹುಟ್ಟಿದ ಪುತ್ರ.

ತೀಕ್ಷ್ಣಾಂಶೋರ್ಭಾಸ್ಕರಸ್ಯಾಂಶಃ ಕರ್ಣೋऽರಿಗಣನಾಶನಃ ।
ಸಿಂಹರ್ಷಭಗಜೇಂದ್ರಾಣಾಂ ತುಲ್ಯವೀರ್ಯಪರಾಕ್ರಮಃ ॥೩॥

ಕರ್ಣನು ತಿಗ್ಮಾಂಶುವಾದ ಸೂರ್ಯನ ಅಂಶ. ಶತ್ರುಸಮೂಹವನ್ನು ನಾಶಮಾಡುವವನು. ಸಿಂಹ, ವೃಷಭ ಮತ್ತು ಗಜೇಂದ್ರಗಳಿಗೆ ಸಮಾನವಾದ ವೀರ್ಯ ಮತ್ತು ಪರಾಕ್ರಮಗಳನ್ನು ಹೊಂದಿದವನು.

ದೀಪ್ತಿಕಾಂತಿದ್ಯುತಿಗುಣೈಃ ಸೂರ್ಯೇಂದುಜ್ವಲನೋಪಮಃ ।
ಪ್ರಾಂಶುಃ ಕನಕತಾಲಾಭಃ ಸಿಂಹಸಂಹನನೋ ಯುವಾ ॥೪॥

ಅವನ ದೀಪ್ತಿ, ಕಾಂತಿ ಮತ್ತು ದ್ಯುತಿ ಗುಣಗಳಲ್ಲಿ ಕ್ರಮವಾಗಿ ಸೂರ್ಯ, ಚಂದ್ರ ಮತ್ತು ಅಗ್ನಿಯನ್ನು ಹೋಲುತ್ತಿದ್ದನು. ಎತ್ತರವಾದ ಆಕೃತಿಯನ್ನು ಹೊಂದಿ ಕನಕತಾಲದ ಬಣ್ಣವನ್ನು ಹೊಂದಿ ಸಿಂಹದಂತೆ ಶರೀರವುಳ್ಳವನಾಗಿ ಯುವಕನಾಗಿದ್ದನು.

ಪ್ರಸಂಖ್ಯೇಯಗುಣಃ ಶ್ರೀಮಾನ್ ಭಾಸ್ಕರಸ್ಯಾತ್ಮಸಂಭವಃ ।
ಸ ಸಮೀಕ್ಷ್ಯ ಮಹಾಬಾಹುಃ ಸರ್ವತೋ ರಂಗಮಂಡಪಮ್ ॥೫॥

ಪ್ರಣಾಮಂ ದ್ರೋಣಕೃಪಯೋರ್ನಾಮಪೂರ್ವಮಥಾಕರೋತ್ ।
ಸ ಸಮಾಜೇ ಜನಃ ಸರ್ವೋ ನಿಶ್ಚಲಃ ಸ್ಥಿರಲೋಚನಃ ॥೬॥

ಸೂರ್ಯನ ಸ್ವಂತ ಪುತ್ರನಾದ ಅವನು ಕಾಂತಿಯುಕ್ತನೂ, ಎಣಿಸಬೇಕಾದ ಅನೇಕ ಗುಣಗಳುಳ್ಳವನೂ ಆಗಿದ್ದನು. ಆ ಮಹಾಬಾಹುವು ರಂಗಮಂಟಪವನ್ನು ಎಲ್ಲಾ ಕಡೆಯಲ್ಲಿಯೂ ನೋಡಿ ತನ್ನ ನಾಮವನ್ನು ಉಚ್ಚರಿಸಿ ದ್ರೋಣ ಮತ್ತು ಕೃಪರಿಗೆ ನಮಸ್ಕಾರವನ್ನು ಮಾಡಿದನು.

ಕೋऽಯಮಿತ್ಯಾಗತಕ್ಷ್ವೇಭಃ ಕೌತೂಹಲಪರೋऽಭವತ್ ।
ಸೋऽಬ್ರವೀನ್ಮೇಘಧೀರೇಣ ಸ್ವರೇಣ ವದತಾಂ ವರಃ ॥೭॥

ಆ ಸಮೂಹದಲ್ಲಿದ್ದ ಜನರೆಲ್ಲರೂ ಅಲುಗಾಡದೇ ಕುಳಿತು ನೆಟ್ಟದೃಷ್ಟಿಯಿಂದ ಅವನನ್ನು ನೋಡುತ್ತಾ ಇವನು ಯಾರು ಎಂದು ತಿಳಿಯದೇ ಕ್ಷೋಭೆಗೆ ಒಳಗಾಗಿ ಕುತೂಹಲಯುಕ್ತರಾದರು.

ಭ್ರಾತಾ ಭ್ರಾತರಮಜ್ಞಾತಂ ಸಾವಿತ್ರಃ ಪಾಕಶಾಸನಿಮ್ ।
ಪಾರ್ಥ ಯತ್ ತೇ ಕೃತಂ ಕರ್ಮ ವಿಶೇಷವದಹಂ ತತಃ ।
ಕರಿಷ್ಯೇ ಪಶ್ಯತಾಂ ನೃಣಾಂ ಮಾ ಭೂದಾತ್ಮನಿ ವಿಸ್ಮಯಃ ॥೮॥

ಮಾತನಾಡುವವರಲ್ಲಿ ಶ್ರೇಷ್ಠನಾದ, ಸೂರ್ಯನ ಮಗನಾದ ಅವನು ಇಂದ್ರನ ಮಗನಾದ ಅರ್ಜುನನನ್ನು ತನ್ನ ತಮ್ಮನೆಂದು ತಿಳಿಯದೇ, ಮೇಘಗಂಭೀರ ಸ್ವರದಿಂದ ಮಾತನಾಡಿದನು. ಅರ್ಜುನನೇ, ನೀನು ಏನು ಮಾಡಿದ್ದೀಯೋ ಅದಕ್ಕಿಂತ ಹೆಚ್ಚಿನ ಕೌಶಲವನ್ನು ಈ ಎಲ್ಲಾ ಜನರು ನೋಡುತ್ತಿರುವಂತೆ ನಾನು ಮಾಡಿ ತೋರಿಸುವೆನು. ನಾನೇ ಶ್ರೇಷ್ಠನೆಂದು ಗರ್ವಪಡಬೇಡ.

ವೈಶಂಪಾಯನಃ

ಅಸಮಾಪ್ತೇ ತತಸ್ತಸ್ಯ ವಚನೇ ವದತಾಂ ವರ ।
ಯಂತ್ರಕ್ಷಿಪ್ತ ಇವ ಕ್ಷಿಪ್ರಮುತ್ಥಿತಃ ಸರ್ವತೋ ಜನಃ ॥೯॥

ಎಲೈ ಮಾತನಾಡುವವರಲ್ಲಿ ಶ್ರೇಷ್ಠನಾದ ಜನಮೇಜಯನೇ, ಕರ್ಣನ ಮಾತುಗಳು ಮುಗಿಯುವುದಕ್ಕಿಂತ ಮುಂಚೆಯೇ ಎಲ್ಲಾ ಜನರು ಯಂತ್ರದಿಂದ ಚಿಮ್ಮಿದವರಂತೆ ಬೇಗ ಎದ್ದು ನಿಂತರು.

ಪ್ರೀತಿಶ್ಚ ಪುರುಷವ್ಯಾಘ್ರ ದುರ್ಯೋಧನಮುಪಾಸ್ಪೃಶತ್ ।
ಹ್ರೀಶ್ಚ ಕ್ರೋಧಶ್ಚ ಬೀಭತ್ಸುಂ ಕ್ಷಣೇನ ತ್ವಾವಿವೇಶ ಹ ॥೧೦॥

ಪುರುಷವ್ಯಾಘ್ರನೇ, ದುರ್ಯೋಧನನಿಗೆ ಬಹಳ ಸಂತೋಷವುಂಟಾಯಿತು. ಆದರೆ ಅರ್ಜುನನನ್ನು ನಾಚಿಕೆ ಮತ್ತು ಕ್ರೋಧಗಳು ಒಂದೇ ಕ್ಷಣದಲ್ಲಿ ಆವರಿಸಿದವು.

ತತೋ ದ್ರೋಣಾಭ್ಯನುಜ್ಞಾತಃ ಕರ್ಣಃ ಪ್ರಿಯತರಸ್ತದಾ ।
ಯತ್ ಕೃತಂ ಕರ್ಮ ಪಾರ್ಥೇನ ನ್ಯಕ್ಕಾರ ಮಹಾಬಲಃ ॥೧೧॥

ಅನಂತರ ದ್ರೋಣರ ಅನುಜ್ಞೆಯನ್ನು ಪಡೆದು ದುರ್ಯೋಧನನಿಗೆ ಪ್ರಿಯತರನಾದ ಮಹಾಬಲನಾದ ಕರ್ಣನು ಅರ್ಜುನ ಮಾಡಿದುದೆಲ್ಲವನ್ನೂ ಅವನಿಗಿಂತ ಅತಿಶಯವಾಗಿ ಮಾಡಿ ತೋರಿಸಿ ಅರ್ಜುನನ ಕೌಶಲವನ್ನು ತಿರಸ್ಕರಿಸಿದನು.

ಅಥ ದುರ್ಯೋಧನಸ್ತತ್ರ ಭ್ರಾತೃಭಿಃ ಸಹ ಭಾರತ ।
ಕರ್ಣಂ ಪರಿಷ್ವಜ್ಯ ಮುದಾ ತದಾ ವಚನಮಬ್ರವೀತ್ ॥೧೨॥

ಅನಂತರ, ಭಾರತನೇ, ದುರ್ಯೋಧನನು ತನ್ನ ತಮ್ಮಂದಿರ ಜೊತೆಯಲ್ಲಿ ಬಂದು ಕರ್ಣನನ್ನು ಆಲಿಂಗಿಸಿ ಸಂತೋಷದಿಂದ ಹೀಗೆ ಮಾತನಾಡಿದನು.

ಸ್ವಾಗತಂ ತೇ ಮಹಾಬಾಹೋ ದಿಷ್ಟ್ಯಾ ಪ್ರಾಪ್ತೋಽಸಿ ಮಾನದ ।
ಅಹಂ ಚ ಕುರುರಾಷ್ಟ್ರಂ ಚ ಯಥೇಷ್ಟಮುಪಭುಜ್ಯತಾಮ್ ॥೧೩॥

ಮಹಾಬಾಹುವೇ, ನಿನಗೆ ಸ್ವಾಗತ. ಮಾನದನೇ, ಅದೃಷ್ಟದಿಂದ ನೀನು ಇಲ್ಲಿಗೆ ಪ್ರಾಪ್ತನಾಗಿದ್ದೀಯೆ. ನಾನು ಮತ್ತು ಕುರುರಾಷ್ಟ್ರವೆಲ್ಲವನ್ನೂ ನಿನ್ನ ಮನಸ್ಸಿಗೆ ಬಂದಂತೆ ಭೋಗಿಸು.

ಕರ್ಣಃ

ಕೃತಂ ಸರ್ವೇಣ ಮೇ ರಾಜನ್ ಸಖಿತ್ವಂ ಭವತಾ ವೃಣೇ ।
ದ್ವಂದ್ವಯುದ್ಧಂ ಚ ಪಾರ್ಥೇನ ಕರ್ತುಮಿಚ್ಛಾಮಿ ಭಾರತ ॥೧೪॥

ರಾಜನೇ, ನನಗೆ ಯಾವುದೂ ಬೇಡ. ನಿನ್ನ ಸ್ನೇಹವೊಂದನ್ನು ಬೇಡುತ್ತೇನೆ. ಭಾರತನೇ, ಅರ್ಜುನನ ಜೊತೆಯಲ್ಲಿ ದ್ವಂದ್ವಯುದ್ಧವನ್ನು ಮಾಡಲು ಬಯಸುತ್ತೇನೆ.

ವೈಶಂಪಾಯನಃ

ತತಃ ಕ್ಷಿಪ್ತಮಿವಾತ್ಮಾನಂ ಮತ್ವಾ ಪಾರ್ಥೋಽಭ್ಯಭಾಷತ ।
ಕರ್ಣಂ ಭ್ರಾತೃಸಮೂಹಸ್ಯ ಮಧ್ಯೇಽಚಲಮಿವ ಸ್ಥಿತಮ್ ॥೧೫॥

ಆಗ ತಾನು ನಿಂದೆಗೆ ಒಳಗಾದೆನೆಂದು ತಿಳಿದು ಭ್ರಾತೃಸಮೂಹದ ಮಧ್ಯದಲ್ಲಿ ಅಲುಗಾಡದೇ ನಿಂತ ಕರ್ಣನನ್ನು ಕುರಿತು ಅರ್ಜುನನು ಮಾಡನಾಡಿದನು.

ಅನಾಹೂತೋಪಸೃಷ್ಟಾನಾಮನಾಹೂತೋಪಜಲ್ಪತಾಮ್ ।
ಯೇ ಲೋಕಾಸ್ತಾನ್ ಹತಃ ಕರ್ಣ ಮಯಾ ತ್ವಂ ಪ್ರತಿಪತ್ಸ್ಯಸೇ ॥೧೬॥

ಕರ್ಣನೇ, ಆಹ್ವಾನವಿಲ್ಲದೇ ಬಂದವರಿಗೆ, ಆಹ್ವಾನವಿಲ್ಲದೇ ಮಾತನಾಡುವವರಿಗೆ, ಯಾವ ಲೋಕಗಳಿವೆಯೋ, ನನ್ನಿಂದ ಹತನಾಗಿ ನೀನು ಈ ದಿನ ಆ ಲೋಕಗಳನ್ನು ಹೊಂದುವಿ.

ಕರ್ಣಃ

ರಂಗೋಽಯಂ ಸರ್ವಸಾಮಾನ್ಯಃ ಕಿಮತ್ರ ತವ ಫಲ್ಗುನ ।
ವೀರ್ಯಶ್ರೇಷ್ಠಾಶ್ಚ ರಾಜನ್ಯಾ ಬಲಂ ಧರ್ಮೋಽನುವರ್ತತೇ ॥೧೭॥

ಫಲ್ಗುನ, ರಂಗಭೂಮಿಯು ಎಲ್ಲರಿಗೂ ಸೇರಿದುದು. ಇಲ್ಲಿನಿನ್ನ ವಿಶೇಷವೇನು? ರಾಜರು ಯಾವಾಗಲೂ ವೀರ್ಯಶ್ರೇಷ್ಠರಾದವರು. ಬಲವನ್ನು ಧರ್ಮವು ಹಿಂಬಾಲಿಸುತ್ತದೆ.

ಕಿಂ ಕ್ಷೇಪ್ಯೈಃ ದುರ್ಬಲಾಯಾಸ್ಯೈಃ ಶರೈಃ ಕಥಯ ಭಾರತ ।
ಗುರೋಃ ಸಮಕ್ಷಂ ಯಾವತ್ ತೇ ಹರಾಮ್ಯದ್ಯ ಶಿರಃ ಶರೈಃ ॥೧೮॥

ದುರ್ಬಲರನ್ನು ಆಯಾಸಗೊಳಿಸುವ ನಿಂದೆಯ ಮಾತುಗಳಿಂದ ಏನು ಪ್ರಯೋಜನ? ಭಾರತನೇ, ಬಾಣಗಳಿಂದ ಮಾತನಾಡು. ಗುರುಗಳ ಎದುರಿನಲ್ಲಿ ಈ ದಿನ ನನ್ನ ಬಾಣಗಳಿಂದ ನಿನ್ನ ಶಿರಸ್ಸನ್ನು ಕತ್ತರಿಸುತ್ತೇನೆ.

ವೈಶಂಪಾಯನಃ

ತತೋ ದ್ರೋಣಾಭ್ಯನುಜ್ಞಾತಃ ಪಾರ್ಥಃ ಪರಪುಂಜಯಃ ।
ಭ್ರಾತೃಭಿಸ್ತ್ವರಯಾಽಽಶ್ಲಿಷ್ಟೋ ರಣಾಯೋಪಜಗಾಮ ತಮ್ ॥೧೯॥

ಅನಂತರ ದ್ರೋಣರ ಅನುಮತಿಯನ್ನು ಪಡೆದು ಸಹೋದರರಿಂದ ಶೀಘ್ರವಾಗಿ ಆಲಿಂಗಿಸಲ್ಪಟ್ಟು ಪರಪುರಂಜಯನಾದ ಅರ್ಜುನನು ಯುದ್ಧಕ್ಕಾಗಿ ಕರ್ಣನನ್ನು ಸಮೀಪಿಸಿದನು.

ತತೋ ದುರ್ಯೋಧನೇನಾಪಿ ಸಭ್ರಾತ್ರಾ ಸಮರೋದ್ಯತಃ ।
ಪರಿಷ್ವಕ್ತಃ ಸ್ಥಿತಃ ಕರ್ಣಃ ಪ್ರಗೃಹ್ಯ ಸಶರಂ ಧನುಃ ॥೨೦॥

ಆಗ ದುರ್ಯೋಧನ ಮತ್ತು ಅವನ ತಮ್ಮಂದಿರಿಂದ ಆಲಿಂಗನವನ್ನು ಪಡೆದ ಕರ್ಣನು ಬಿಲ್ಲುಬಾಣಗಳನ್ನು ತೆಗೆದುಕೊಂಡು ಸಮರೋದ್ಯತನಾಗಿ ನಿಂತನು.

ತತಃ ಸವಿದ್ಯುತ್ಸ್ತನಿತೈಃ ಸೇಂದ್ರಾಯುಧಪುರೋಜವೈಃ ।
ಆವೃತಂ ಗಗನಂ ಮೇಘೈರ್ಬಲಾಕಾಪಂಕ್ತಿ ಭಾಸಿಭಿಃ ॥೨೧॥

ಆಗ ಆಕಾಶವು ಗುಡುಗು, ಮಿಂಚು, ಕಾಮನಬಿಲ್ಲು ಮತ್ತು ತುಂತುರು ಹನಿಗಳಿಂದ ಕೂಡಿದ ಮೋಡಗಳಿಂದಲೂ, ಬಲಾಕಾಪಕ್ಷಿಗಳ ಸಾಲನ್ನು ಬೆಳಗುವ ಮೋಡಗಳಿಂದಲೂ ಆಚ್ಛಾದಿತವಾಯಿತು.

ತತಃ ಸ್ನೇಹಾದ್ದರಿಹಯಂ ದೃಷ್ಟ್ವಾ ರಂಗಾವಲೋಕನಮ್ ।
ಭಾಸ್ಕರೋಽಪ್ಯನಯನ್ನಾಶಂ ಸಮೀಪೋಪಗತಾನ್ ಘನಾನ್ ॥೨೨॥

ಆಗ ತನ್ನ ಮಗನ ಮೇಲಿನ ಸ್ನೇಹದಿಂದ ರಂಗಭೂಮಿಯನ್ನು ನೋಡುತ್ತಿದ್ದ ಇಂದ್ರನನ್ನು ನೋಡಿ, ಸೂರ್ಯನು ತನ್ನ ಸಮೀಪದಲ್ಲಿದ್ದ ಮೋಡಗಳನ್ನು ನಾಶಪಡಿಸಿದನು.

ಮೇಘಚ್ಛಾಯೋಪಗೂಢಶ್ಚ ತತೋಽದೃಶ್ಯತ ಪಾಂಡವಃ ।
ಸೂರ್ಯಾತಪಪರಿಷ್ಟಕ್ತಃ ಕರ್ಣೋಽಪಿ ಸಮದೃಶ್ಯತ ॥೨೩॥

ಆಗ ಮೇಘಚ್ಛಾಯೆಯಿಂದ ಆವೃತನಾದ ಅರ್ಜುನನನ್ನೂ ಸೂರ್ಯನ ಬಿಸಿಲಿನಲ್ಲಿ ನಿಂತಿರುವ ಕರ್ಣನನ್ನೂ ಎಲ್ಲರೂ ನೋಡಿದರು.

ಧಾರ್ತರಾಷ್ಟ್ರಾ ಯತಃ ಕರ್ಣಸ್ತಸ್ಮಿನ್ ದೇಶೇ ವ್ಯವಸ್ಥಿತಾಃ ।
ಭಾರದ್ವಾಜಃ ಕೃಪೋ ಭೀಷ್ಮೋ ಯತಃ ಪಾರ್ಥಸ್ತತೋಽಭವನ್ ॥೨೪॥

ದುರ್ಯೋಧನ ಮೊದಲಾದವರೆಲ್ಲರೂ ಕರ್ಣನ ಸಮೀಪದಲ್ಲಿ ನಿಂತರು. ದ್ರೋಣ, ಕೃಪ ಮತ್ತು ಭೀಷ್ಮರು ಇದ್ದ ಕಡೆ ಅರ್ಜುನನು ನಿಂತನು.

ದ್ವಿಧಾ ರಂಗಃ ಸಮಭವತ್ ಸ್ತ್ರೀಣಾಂ ದ್ವೈಧಮಜಾಯತ ।
ಕುಂತಿಭೋಜಸುತಾ ಮೋಹಂ ವಿಜ್ಞಾತಾರ್ಥಾ ಜಗಾಮ ಹ ॥೨೫॥

ಕೆಲವರು ಅರ್ಜುನನ ಪಕ್ಷವನ್ನೂ, ಕೆಲವರು ಕರ್ಣನ ಪಕ್ಷವನ್ನೂ ಹಿಡಿದು ರಂಗಭೂಮಿಯು ಎರಡು ಭಾಗವಾಯಿತು. ಸ್ತ್ರೀಯರಿಗೂ ಸಹ ಅಂತಹ ದ್ವೈಧೀಭಾವವು ಉಂಟಾಯಿತು. ಆದರೆ ಸತ್ಯವನ್ನು ತಿಳಿದ ಕುಂತಿಯು ಮಾತ್ರ ಮೂರ್ಛೆ ಹೋದಳು.

ತಾಂ ತಥಾ ಮೋಹಮಾಪನ್ನಾಂ ವಿದುರಃ ಸರ್ವಧರ್ಮವಿತ್ ।
ಕುಂತೀಮಾಶ್ವಾಸಯಾಮಾಸ ಪ್ರೋಕ್ಷ್ಯ ಚಂದನವಾರಿಭಿಃ ॥೨೬॥

ಹಾಗೆ ಮೂರ್ಛೆಗೆ ಒಳಗಾದ ಕುಂತಿಯನ್ನು ಸರ್ವಧರ್ಮವನ್ನೂ ತಿಳಿದ ವಿದುರನು ಚಂದನಜಲದಿಂದ ಪ್ರೋಕ್ಷಿಸಿ ಸಮಾಧಾನ ಮಾಡಿದನು.

ತತಃ ಪ್ರತ್ಯಾಗತಪ್ರಾಣಾ ತಾವುಭಾವಪಿ ದಂಶಿತೌ ।
ಪುತ್ರೌ ದೃಷ್ಟ್ವಾ ಸುಸಂತಪ್ತಾ ನಾನ್ವಪದ್ಯತ ಕಿಂಚನ ॥೨೭॥

ಪುನಃ ಸಂಜ್ಞೆಯನ್ನು ಪಡೆದ ಕುಂತಿಯು ತನ್ನ ಇಬ್ಬರು ಮಕ್ಕಳು ಯುದ್ಧಕ್ಕೆ ಸಿದ್ಧರಾಗಿರುವುದನ್ನು ನೋಡಿ ಬಹಳ ತಾಪಗೊಂಡು ಕರ್ತವ್ಯಮೂಢಳಾದಳು.

ತಾವುದ್ಯತ ಮಹಾಚಾಪೌ ಕೃಪಃ ಶಾರದ್ವತೋಽಬ್ರವೀತ್ ।
ದ್ವಂದ್ವಯುದ್ಧಸಮಾಚಾರೇ ಕುಶಲಃ ಸರ್ವಧರ್ಮವಿತ್ ॥೨೮॥

ಆಗ ದ್ವಂದ್ವಯುದ್ಧದ ನಡವಳಿಕೆಯಲ್ಲಿ ಕುಶಲರಾದ ಸರ್ವಧರ್ಮಜ್ಞರಾದ, ಶರದ್ವಂತರ ಪುತ್ರರಾದ ಕೃಪರು, ಧನುಸ್ಸನ್ನು ಎತ್ತಿ ಹಿಡಿದಿದ್ದ ಅವರಿಬ್ಬರನ್ನೂ ಕುರಿತು ಹೇಳಿದರು.

ಅಯಂ ಪೃಥಾಯಾಸ್ತನಯಃ ಕನೀಯಾನ್ ಪಾಂಡುನಂದನಃ ।
ಕೌರವ್ಯೋ ಭವತಾ ಸಾರ್ಧಂ ದ್ವಂದ್ವಯುದ್ಧಂ ಕರಿಷ್ಯತಿ ॥೨೯॥

ಕರ್ಣನೇ, ಇವನು ಪಾಂಡು ಮತ್ತು ಕುಂತಿಯರ ಮಧ್ಯದ ಪುತ್ರ . ಕುರುವಂಶಕ್ಕೆ ಸೇರಿದವನು. ನಿನ್ನ ಜೊತೆಯಲ್ಲಿ ದ್ವಂದ್ವಯುದ್ಧವನ್ನು ಮಾಡುವನು.

ತ್ವಮಪ್ಯೇವಂ ಮಹಾಬಾಹೋ ಮಾತರಂ ಪಿತರಂ ಕುಲಮ್ ।
ಕಥಯಸ್ವ ನರೇಂದ್ರಾಣಾಂ ಕಿಂ ಚ ತ್ವಂ ಭೂಷಯೇಃ ಕುಲಮ್ ॥೩೦॥

ಮಹಾಬಾಹುವೇ, ನೀನೂ ಸಹ ಅದರಂತೆ ನಿನ್ನ ತಾಯಿಯನ್ನೂ ತಂದೆಯನ್ನೂ ಮತ್ತು ಕುಲವನ್ನೂ ತಿಳಿಸು. ನೀನು ಯಾವ ರಾಜಕುಲವನ್ನು ಅಲಂಕರಿಸಿದ್ದೀಯೆ?

ತತೋ ವಿದಿತ್ವಾ ಪಾರ್ಥಶ್ಚ ಪ್ರತಿಯೋತ್ಸ್ಯತಿ ವಾ ನವಾ ।
ವೃಥಾಕುಲಾಸಮಾಚಾರೈರ್ನ ಯುಧ್ಯಂತೇ ನೃಪಾತ್ಮಜಾಃ ॥೩೧॥

ಅದನ್ನು ತಿಳಿದ ಪಾರ್ಥನು ಯುದ್ಧ ಮಾಡುವನು ಅಥವಾ ಮಾಡುವುದಿಲ್ಲ. ವ್ಯರ್ಥವಾದ ಕುಲ ಮತ್ತು ಆಚಾರಗಳನ್ನು ಹೊಂದಿರುವವರ ಜೊತೆಯಲ್ಲಿ ರಾಜಕುಮಾರರು ಯುದ್ಧಮಾಡುವುದಿಲ್ಲ.

ವೈಶಂಪಾಯನಃ

ಏವಮುಕ್ತಸ್ಯ ಕರ್ಣಸ್ಯ ವ್ರೀಡಾವನತಮಾನನಮ್ ।
ಬಭೌ ವರ್ಷಾಂಬುದಕ್ಲಿನ್ನಂ ಪದ್ಮಮಾಗಲಿತಂ ಯಥಾ ॥೩೨॥

ಈ ಮಾತುಗಳನ್ನು ಕೇಳಿದ ಕರ್ಣನ ಮುಖವು ನಾಚಿಕೆಯಿಂದ ಬಾಡಿತು. ಮಳೆಗಾಲದಲ್ಲಿ ಮಳೆಯಿಂದ ತೊಯ್ದಕಮಲದಲಂತೆ ಅವನ ಮುಖವು ಬಾಡಿತು.

ದುರ್ಯೋಧನಃ

ಆಚಾರ್ಯ ತ್ರಿವಿಧಾ ಯೋನೀ ರಾಜ್ಞಾಂ ಧರ್ಮವಿನಿಶ್ಚಯೇ ।
ಸತ್ಕುಲೀನಶ್ಚ ಶೂರಶ್ಚ ಯಶ್ಚ ಸೇನಾಂ ವಿಕರ್ಷತಿ ॥೩೩॥

ಆಚಾರ್ಯರೇ ಧರ್ಮನಿಶ್ಚಯವನ್ನು ಮಾಡುವ ವಿಷಯದಲ್ಲಿ ರಾಜರಿಗೆ ಮೂರು ಯೋನಿಗಳನ್ನು ಗಮನಿಸುತ್ತಾರೆ. ಸತ್ಕುಲ ಪ್ರಸೂತನಾದವನು, ಶೂರನಾದವನು ಮತ್ತು ಸೇನಾಪತಿಯಾದವನು. (ಈ ಮೂವರು ಶ್ಲಾಘ್ಯರಾಗುತ್ತಾರೆ).

ಅದ್ಭ್ಯೋऽಗ್ನಿರ್ಬ್ರಹ್ಮತಃ ಕ್ಷತ್ರಮಶ್ಮನೋ ಲೋಹಮುತ್ಥಿತಮ್ ।
ತೇಷಾಂ ಸರ್ವತ್ರಗಂ ತೇಜಃ ಸ್ವಾಸು ಯೋನಿಷು ಶಾಮ್ಯತಿ ॥೩೪॥

ಬ್ರಹ್ಮಾಂಡದೊಳಗೆ ಜಲದಿಂದ ಅಗ್ನಿಯು ಉತ್ಪತ್ತಿಯಾಗುತ್ತದೆ. ಬ್ರಾಹ್ಮಣರಿಂದ ಕ್ಷತ್ರಿಯರು ಉತ್ಪನ್ನರಾಗುತ್ತಾರೆ. ಕಲ್ಲಿನಿಂದ ಲೋಹವುಂಟಾಗುತ್ತದೆ. ಈ ಮೂರು ಪದಾರ್ಥಗಳ ಎಲ್ಲ ಕಡೆಯೂ ಇರುವ ಸಾಮರ್ಥ್ಯವು ತಮ್ಮ ಯೋನಿಗಳಲ್ಲಿ ನಾಶ ಹೊಂದುತ್ತದೆ. (ಅಗ್ನಿಯ ಸಾಮರ್ಥ್ಯವು ಜಲದಲ್ಲಿ ನಾಶ ಹೊಂದುತ್ತದೆ. ಕ್ಷತ್ರಿಯರ ಸಾಮರ್ಥ್ಯವು ಬ್ರಾಹ್ಮಣರಲ್ಲಿ ನಾಶ ಹೊಂದುತ್ತದೆ. ಲೋಹದ ಸಾಮರ್ಥ್ಯವು ಕಲ್ಲಿನಲ್ಲಿ ನಾಶ ಹೊಂದುತ್ತದೆ.)

ಯದ್ಯಯಂ ಫಲ್ಗುನೋ ಯುದ್ಧೇ ನಾರಾಜ್ಞಾ ಯೋದ್ಧುಮಿಚ್ಛತಿ ।
ತಸ್ಮಾದೇಷೋಂಗವಿಷಯೇ ಮಯಾ ರಾಜ್ಯೇಽಭಿಷಿಚ್ಯತೇ ॥೩೫॥

ಒಂದು ಪಕ್ಷ ಅರ್ಜುನನು ರಾಜನಲ್ಲದವನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸದಿದ್ದರೆ, ಈ ಕರ್ಣನನ್ನು ಅಂಗರಾಜ್ಯದಲ್ಲಿ ನಾನು ಅಭಿಷೇಕ ಮಾಡುತ್ತೇನೆ.

ವೈಶಂಪಾಯನಃ

ತತೋ ರಾಜಾನಮಾಮಂತ್ರ್ಯ ಗಾಂಗೇಯಂ ಚ ಪಿತಾಮಹಮ್ ।
ಅಭಿಷೇಕಸ್ಯ ಸಂಭಾರಾನ್ ಸಮಾನೀಯ ದ್ವಿಜಾತಿಭಿಃ ॥೩೬॥

ಗೋಸಹಸ್ರಾಯುತಂ ದತ್ತ್ವಾ ಯುಕ್ತಾನಾಂ ಪುಣ್ಯಕರ್ಮಣಾಮ್ ।
ಅಹೋಽಯಮಂಗರಾಜ್ಯಸ್ಯ ಇತಿ ವಾಚ್ಯ ದ್ವಿಜಾತಿಭಿಃ ॥೩೭॥

ತತಸ್ತಸ್ಮಿನ್ ಕ್ಷಣೇ ಕರ್ಣಃ ಸಲಾಜಕುಸುಮೈರ್ಘಟೈಃ ।
ಕಾಂಚನೈಃ ಕಾಂಚನೇ ಪೀಠೇ ಮಂತ್ರವಿದ್ಭಿರ್ದ್ವಿಜಾತಿಭಿಃ ॥೩೮॥

ಅಭಿಷಿಕ್ತೋಽಂಗರಾಜ್ಯೇ ಸ್ಮ ಶ್ರಿಯಾ ಯುಕ್ತೋ ಮಹಾಬಲಃ ।
ಸ ಮೌಲಿಹಾರಕೇಯೂರೈಃ ಸಹಸ್ತಾಭರಣಾಂಗದೈಃ ॥೩೯॥

ಆಗ ರಾಜನಾದ ಧೃತರಾಷ್ಟ್ರನ ಮತ್ತು ಪಿತಾಮಹರಾದ ಭೀಷ್ಮರ ಅನುಮತಿಯನ್ನು ಪಡೆದು ಬ್ರಾಹ್ಮಣರಿಂದ ಅಭಿಷೇಕದ ಸಾಮಗ್ರಿಗಳನ್ನು ತರಿಸಿ, ತಪಸ್ವಿಗಳಾದ ಬ್ರಾಹ್ಮಣರಿಗೆ ಅಯುತಸಹಸ್ರಗೋದಾನವನ್ನು ಮಾಡಿ ಬ್ರಾಹ್ಮಣರಿಂದ ''ಇವನು ಅಂಗರಾಜ್ಯಕ್ಕೆ ಅಧಿಪತಿಯಾಗಲು ಯೋಗ್ಯನಾದವನು'' ಎಂದು ಹೇಳಿಸಿ ಸುವರ್ಣಮಯವಾದ ಪೀಠದಲ್ಲಿ ಕರ್ಣನನ್ನು ಕೂಡಿಸಿ, ಮಂತ್ರವೇತ್ತರಾದ ಬ್ರಾಹ್ಮಣರಿಂದ ಲಾಜಕುಸುಮಪೂರ್ವಕವಾಗಿ ಜಲಪೂರ್ಣವಾದ, ಸುವರ್ಣಮಯವಾದ ಘಟಗಳಿಂದ ಅಭಿಷೇಕ ಮಾಡಿದನು.

ರಾಜಲಿಂಗೈಸ್ತಥಾಽನ್ಯೈಶ್ಚ ಭೂಷಿತೋ ಭೂಷಣೈಃ ಶುಭೈಃ ।
ಸಚ್ಛತ್ರವಾಲವ್ಯಜನೈಃ ಜಯಶಬ್ದೋತ್ತರೇಣ ಚ ॥೪೦॥

ಸಭಾಜ್ಯಮಾನೋ ವಿಪ್ರೈಶ್ಚ ಪ್ರದತ್ತ್ವಾ ಹ್ಯಮಿತಂ ವಸು ।
ಉವಾಚ ವಚನಂ ರಾಜಾ ರಾಜ್ಞಾಂ ಮಧ್ಯೇ ವೃಷಸ್ತದಾ ॥೪೧॥

ಅಭಿಷಿಕ್ತನಾದ ಮಹಾಬಲನಾದ ಕರ್ಣನು ಕಿರೀಟ ಹಾರ ಕೇಯೂರಗಳಿಂದಲೂ, ಹಸ್ತಾಭರಣಗಳಿಂದಲೂ, ಉಳಿದ ರಾಜಚಿಹ್ನೆಯ ಶುಭಭೂಷಣಗಳಿಂದಲೂ ಭೂಷಿತನಾಗಿ, ಶ್ವೇತಚ್ಛತ್ರ ಬಾಲವ್ಯಜನ ಮತ್ತು ಜಯಶಬ್ದಗಳಿಂದ ಪೂಜಿಸಲ್ಪಟ್ಟವನಾಗಿ ಬ್ರಾಹ್ಮಣರಿಗೆ ಅಮಿತವಾದ ಧನವನ್ನು ಕೊಟ್ಟು ರಾಜರ ಮಧ್ಯದಲ್ಲಿ ಕರ್ಣನು ಮಾತನಾಡಿದನು.

ಅಸ್ಯ ರಾಜ್ಯಪ್ರದಾನಸ್ಯ ಸದೃಶಂ ಕಿಂ ದದಾಮಿ ತೇ ।
ತದ್ ಬ್ರೂಹಿ ರಾಜಶಾರ್ದೂಲ ಕರ್ತವ್ಯಂ ಹಿ ತವಾನಘ ॥೪೨॥

ಅನಘನಾದ ರಾಜಶಾರ್ದೂಲನಾದ ದುರ್ಯೋಧನನೇ, ಈ ರಾಜ್ಯಪ್ರದಾನಕ್ಕೆ ಉಚಿತವಾದ ಏನನ್ನು ನಿನಗೆ ಕೊಡಲಿ? ನಾನು ಏನು ಮಾಡಬೇಕೆಂದು ತಿಳಿಸು.

ದುರ್ಯೋಧನಃ

ಅತ್ಯಂತಂ ಸಖ್ಯಮಿಚ್ಛಾಮಿ ತ್ವಯಾ ಸಹ ಮಹಾಬಲ ।

ಮಹಾಬಲನೇ, ನಿನ್ನ ಜೊತೆಯಲ್ಲಿ ಅತ್ಯಂತ ಸ್ನೇಹವನ್ನು ಬಯಸುತ್ತೇನೆ.

ವೈಶಂಪಾಯನಃ

ಏವಮುಕ್ತಸ್ತತಃ ಕರ್ಣಃ ತಥೇತಿ ಪ್ರತ್ಯಭಾಷತ ।
ಅಂಗರಾಜ್ಯಸ್ಯ ಯುಕ್ತಾನಿ ದತ್ತಾ ರಾಜಪರಿಚ್ಛದಾನ್ ।
ಹರ್ಷಾಚ್ಚೈನಂ ಪರಿಷ್ವಜ್ಯ ಪರಾಂ ಮುದಮವಾಪ ಹ ॥೪೪॥

ಈ ಮಾತನ್ನು ಕೇಳಿದ ಕರ್ಣನು ''ಹಾಗೆಯೇ ಆಗಲಿ'' ಎಂದು ಉತ್ತರವನ್ನು ಕೊಟ್ಟನು. ದುರ್ಯೋಧನನು ಅವನಿಗೆ ಅಂಗರಾಜ್ಯಕ್ಕೆ ಯೋಗ್ಯವಾದ ಉಳಿದ ರಾಜ ಸಲಕರಣೆಗಳನ್ನು ಕೊಟ್ಟು ಸಂತೋಷದಿಂದ ಆಲಿಂಗಿಸಿ ಬಹಳ ಸಂತೋಷವನ್ನು ಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚತ್ರಿಂಶತ್ಯಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ತ್ರ್ಯಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಮೂವತ್ತೈದನೆಯ ಅಧ್ಯಾಯ ಮುಗಿಯಿತು.

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೮

ಅಭಿಷಿಕ್ತೇ ತದಾ ಕರ್ಣೇ ಪ್ರಾಯಾದಧಿರಥಃ ಪಿತಾ ।
ಸರ್ವರಾಜಸದೋಮಧ್ಯೇ ವವಂದೇ ತಂ ವೃಷಾ ತದಾ ।
ತುತುಷುಃ ಕರ್ಮಣಾ ತಸ್ಯ ಸಂತಃ ಸರ್ವೇ ಸಮಾಗತಾಃ ॥೪೧॥

ಕರ್ಣ ಪಟ್ಟಾಭಿಷಿಕ್ತನಾದಾಗ ಅವನ ತಂದೆ ಅಧಿರಥ ಬಂದ. ಎಲ್ಲ ರಾಜರ ಸಭೆಯ ನಡುವೆ ಅವನನ್ನು ಕರ್ಣ ವಂದಿಸಿದ. ಅವನ ಈ ನಡತೆಯಿಂದ ನೆರೆದಿದ್ದ ಎಲ್ಲ ಸಜ್ಜನರೂ ಸಂತುಷ್ಟರಾದರು.

ನೂರ ಮೂವತ್ತಾರನೆಯ ಅಧ್ಯಾಯ

(ಕರ್ಣನ ತಂದೆಯಾದ ಅಧಿರಥನ ರಂಗಪ್ರವೇಶ, ಅವನಿಗೆ ಕರ್ಣನ ನಮಸ್ಕಾರ, ಭೀಮಸೇನನ ಮೂದಲಿಕೆಯ ಮಾತುಗಳು, ರಂಗದಿಂದ ಎಲ್ಲರ ನಿರ್ಗಮನ.)

ವೈಶಂಪಾಯನಃ

ತತಃ ಸ್ರಸ್ತೋತ್ತರಪಟಃ ಸಪ್ರಸ್ವೇದಃ ಸವೇಪಥುಃ ।
ವಿವೇಶಾಧಿರಥೋ ರಾಜನ್ ಸಯಷ್ಟಿಃ ಪ್ರಸ್ಖಲನ್ನಿವ ॥೧॥

ರಾಜನೇ ಅನಂತರ ತನ್ನ ಉತ್ತರೀಯವು ಜಾರುತ್ತಿರಲು ಬಹಳ ಬೆವರಿನಿಂದಲೂ ಮತ್ತು ನಡುಕದಿಂದಲೂ ಕೂಡಿದವನಾಗಿ ಅಧಿರಥನು ಕೋಲನ್ನು ಹಿಡಿದು ಎಡವುವವನಂತೆ ರಂಗಸ್ಥಲವನ್ನು ಪ್ರವೇಶಿಸಿದನು.

ತಮಾಲೋಕ್ಯ ಧನುಸ್ಸ್ಯಕ್ತ್ವಾ ಪಿತೃಗೌರವಯಂತ್ರಿತಃ ।
ಕರ್ಣೋಭಿಷೇಕಾರ್ದ್ರಶಿರಾಃ ಶಿರಸಾ ತಮವಂದತ ॥೨॥

ಅವನನ್ನು ನೋಡಿದ ಕರ್ಣನು ತಂದೆಯ ಮೇಲಿನ ಗೌರವದಿಂದಾಗಿ ಧನುಸ್ಸನ್ನು ತ್ಯಜಿಸಿ ಅಭಿಷೇಕದಿಂದ ಇನ್ನೂ ಒದ್ದೆಯಾಗಿದ್ದ ತಲೆಯಿಂದ ಅವನಿಗೆ ಪ್ರಣಾಮವನ್ನು ಮಾಡಿದನು.

ತತಃ ಪಾದಾವವಚ್ಛಾದ್ಯ ಪಟಾಂತೇನ ಸಸಂಭ್ರಮಮ್ ।
ಪುತ್ರೇತಿ ಪರಿಪೂರ್ಣಾರ್ಥಮಬ್ರವೀದ್ ರಥಸಾರಥಿಮ್ ॥೩॥

ಆಗ ಗಾಬರಿಯಿಂದ ತನ್ನ ಪಾದಗಳನ್ನು ವಸ್ತ್ರದಿಂದ ಆಚ್ಛಾದಿಸಿ ಅದಿರಥನು ರಥಸಾರಥಿಯಾದ ಕರ್ಣನನ್ನು ''ಪುತ್ರಾ'' ಎಂದು ಅರ್ಥಪೂರ್ಣವಾದ ಮಾತಿನಿಂದ ಕರೆದನು.

ಪರಿಷ್ವಜ್ಯ ಚ ತಸ್ಯಾಂಗಂ ಮೂರ್ಧಾನಮಮರದ್ಯುತೇಃ ।
ಅಂಗರಾಜ್ಯಾಭಿಷೇಕಾರ್ದ್ರಮಶ್ರುಭಿಃ ಪರ್ಯಷಿಂಚತ ॥೪॥

ಅಧಿರಥನು ಕರ್ಣನನ್ನು ಆಲಿಂಗಿಸಿ ದೇವತಾಕಾಂತಿಯನ್ನು ಹೊಂದಿದ್ದ, ಅಂಗರಾಜ್ಯಾಭಿಷೇಕದಿಂದ ಆರ್ದ್ರವಾದ ಅವನ ತಲೆಯ ಮೇಲೆ ತನ್ನ ಆನಂದಬಾಷ್ಪಗಳಿಂದ ಅಭಿಷೇಕ ಮಾಡಿದನು.

ತಂ ದೃಷ್ಟ್ವಾ ಸೂತಪುತ್ರೋಽಯಮಿತಿ ನಿಶ್ಚಿತ್ಯ ಪಾಂಡವಃ ।
ಭೀಮಸೇನಸ್ತದಾ ವಾಕ್ಯಂ ಪ್ರಹಸನ್ನಿದಮಬ್ರವೀತ್ ॥೫॥

ಅದನ್ನು ನೋಡಿ ಪಾಂಡುಪುತ್ರನಾದ ಭೀಮಸೇನನು ಇವನು ಸೂತಪುತ್ರನೆಂದು ನಿಶ್ಚಯಿಸಿ ನಗುತ್ತಾ ಮಾತನಾಡಿದನು.

ಭೀಮಃ

ನ ತ್ವಮರ್ಹಸಿ ಪಾರ್ಥೇನ ಸೂತಪುತ್ರ ರಣೇ ವಧಮ್ ।
ಕುಲಸ್ಯ ಸದೃಶಂ ಕರ್ಮ ಪ್ರತೋದೋಽಯಂ ಪ್ರಗೃಹ್ಯತಾಮ್ ॥೬॥

ಸೂತಪುತ್ರನೇ, ನೀನು ಅರ್ಜುನನ ಜೊತೆಯಲ್ಲಿ ಯುದ್ಧಮಾಡಿ ವಧೆಯನ್ನು ಹೊಂದಲು ಅರ್ಹನಲ್ಲ. ನಿನ್ನ ಕುಲಾಚಾರಕ್ಕೆ ಸದೃಶವಾದ ಈ ಚಾವಟಿಯನ್ನು ತೆಗೆದುಕೋ.

ಅಂಗರಾಜ್ಯಂ ಚ ನಾರ್ಹಸ್ತ್ವಮುಪಭೋಕ್ತುಂ ನರಾಧಮ ।
ಶ್ವಾ ಹುತಾಶಸಮೀಪಸ್ಥಂ ಪುರೋಡಾಶಮಿವಾಧ್ವರೇ ॥೭॥

ನರಾಧಮನೇ, ನಾಯಿಯು ಯಜ್ಞದಲ್ಲಿ ಅಗ್ನಿಯ ಸಮೀಪವಿರುವ ಪುರೋಡಾಶವನ್ನು ಮುಟ್ಟಲು ಹೇಗೆ ಅನರ್ಹವೋ ಹಾಗೆ ನೀನು ಅಂಗರಾಜ್ಯವನ್ನು ಭೋಗಿಸಲು ಅನರ್ಹನಾಗಿರುತ್ತೀಯೆ.

ವೈಶಂಪಾಯನಃ

ಏವಮುಕ್ತಸ್ತತಃ ಕರ್ಣಃ ಕಿಂಚಿತ್ ಪ್ರಸ್ಫುರಿತಾಧರಃ ।
ಗಗನಸ್ಥಂ ವಿನಿಶ್ವಸ್ಯ ದಿವಾಕರಮುದೈಕ್ಷತ ॥೮॥

ಈ ಮಾತುಗಳನ್ನು ಕೇಳಿದ ಕರ್ಣನು ತನ್ನ ತುಟಿಗಳು ಸ್ವಲ್ಪ ಅದುರುತ್ತಿರಲು ನಿಟ್ಟುಸಿರನ್ನು ಬಿಟ್ಟು ಆಕಾಶದಲ್ಲಿದ್ದ ಸೂರ್ಯನನ್ನು ನೋಡಿದನು.

ತತೋ ದುರ್ಯೋಧನಃ ಕೋಪಾದುತ್ಪಪಾತ ಮಹಾಬಲಃ ।
ಭ್ರಾತೃಪದ್ಮವನಾತ್ ತಸ್ಮಾನ್ಮದೋತ್ಕಟ ಇವ ದ್ವಿಪಃ ॥೯॥

ಆಗ ಮಹಾಬಲನಾದ ದುರ್ಯೋಧನನು ಭ್ರಾತೃಗಳೆಂಬ ಪದ್ಮವನದಿಂದ ಮದೋತ್ಕಟವಾದ ಆನೆಯು ಎದ್ದು ಬಂದಂತೆ ತನ್ನ ಆಸನದಿಂದ ಸಿಡಿದು ನಿಂತನು.

ಸೋಽಬ್ರವೀದ್ ಭೀಮಕರ್ಮಾಣಂ ಭೀಮಸೇನಮಿದಂ ವಚಃ ।
ಭೀಮಸೇನ ನ ಯುಕ್ತಂ ತೇ ವಚನಂ ವಕ್ತುಮೀದೃಶಮ್ ॥೧೦॥

ಅವನು ಉಗ್ರಕರ್ಮನಾದ ಭೀಮಸೇನನನ್ನು ಕುರಿತು, ಭೀಮಸೇನ ನೀನು ಹೀಗೆ ಮಾತನಾಡುವುದು ಸರಿಯಲ್ಲ ಎಂದು ಹೇಳಿದನು.

ಕ್ಷತ್ರಿಯಾಣಾಂ ಬಲಂ ಜ್ಯೇಷ್ಠಂ ಯೋದ್ಧವ್ಯಂ ಕ್ಷತ್ರಬಂಧುನಾ ।
ಶೂರಾಣಾಂ ಚ ನದೀನಾಂ ಚ ಪ್ರಭವೋ ದುರ್ವಿಭಾವನಃ ॥೧೧॥

ಕ್ಷತ್ರಿಯರು ಕ್ಷತ್ರಿಯರ ಜೊತೆಯಲ್ಲಿ ಯುದ್ಧ ಮಾಡಬೇಕು. ಅವರಿಗೆ ಬಲವೇ ಜ್ಯೇಷ್ಠ ಮತ್ತು ಶ್ರೇಷ್ಠವಾದುದು. ಶೂರರ ಮತ್ತು ನದಿಗಳ ಉದ್ಭವವನ್ನು ತಿಳಿಯುವ ಪ್ರಯತ್ನವನ್ನು ಮಾಡಬಾರದು.

ಸಲಿಲಾದುತ್ಥಿತೋ ವಹ್ನಿರ್ಯೇನ ದಗ್ಧಂ ಚರಾಚರಮ್ ।
ದಧೀಚಸ್ಯಾಸ್ಥಿಭಿರ್ವಜ್ರಂ ಕೃತಂ ದಾನವಸೂದನಮ್ ॥೧೨॥

ಚರಾಚರಜಗತ್ತನ್ನು ದಹಿಸುವ ವಹ್ನಿಯು ನೀರಿನಿಂದ ಉತ್ಪನ್ನವಾಗುತ್ತದೆ. ಎಲ್ಲಾ ದಾನವರನ್ನೂ ಸಂಹರಿಸುವ ವಜ್ರಾಯುಧವು ದಧೀಚಿ ಋಷಿಗಳ ಅಸ್ಥಿಗಳಿಂದ ನಿರ್ಮಿಸಲ್ಪಟ್ಟಿದೆ.

ಆಗ್ನೇಯಃ ಕೃತ್ತಿಕಾಪುತ್ರೋ ರೌದ್ರೋ ಗಾಂಗೇಯ ಇತ್ಯಪಿ ।
ಶ್ರೂಯತೇ ಭಗವಾನ್ ದೇವಃ ಸ ವೈ ಗುಹ್ಯಮಯೋ ಗುಹಃ ॥೧೩॥

ಪೂಜ್ಯನಾದ ಷಣ್ಮುಖನನ್ನು ಅಗ್ನಿಯ ಮಗನೆಂದೂ, ಕೃತ್ತಿಕೆಯ ಮಗನೆಂದೂ, ರುದ್ರನ ಮಗನೆಂದೂ, ಗಂಗೆಯ ಮಗನೆಂದೂ ನಾವು ಕೇಳಿದ್ದೇವೆ. ಆ ಷಣ್ಮುಖದೇವನು ನಿಶ್ಚಿತವಾಗಿ ರಹಸ್ಯಮಯನಾದವನು.

ಕ್ಷತ್ರಿಯಾಸು ಚ ಯೇ ಜಾತಾ ಬ್ರಾಹ್ಮಣಾಸ್ತವ ವಿಶ್ರುತಾಃ ।
ವಿಶ್ವಾಮಿತ್ರಪ್ರಭೃತಯಃ ಪ್ರಾಪ್ತಾ ಬ್ರಹ್ಮತ್ವಮವ್ಯಯಮ್ ॥೧೪॥

ಎಷ್ಟೋ ಜನರು ಕ್ಷತ್ರಿಯಸ್ತ್ರೀಯರಲ್ಲಿ ಜನಿಸಿ ಪ್ರಖ್ಯಾತರಾದ ಬ್ರಾಹ್ಮಣರಾಗಿದ್ದಾರೆ. ವಿಶ್ವಾಮಿತ್ರನೇ ಮೊದಲಾದವರು ಶಾಶ್ವತವಾದ ಬ್ರಾಹ್ಮಣತ್ವವನ್ನು ಪಡೆದಿದ್ದಾರೆ.

ಆಚಾರ್ಯಃ ಕಲಶಾಜ್ಜಾತೋ ಶರಸ್ತಂಬಾದ್ ಗುರುಃ ಕೃಪಃ ।
ಭವತಾಂ ಚ ಯಥಾ ಜನ್ಮ ತದಪ್ಯಾಗಮಿತಂ ನರೈಃ ॥೧೫॥

ದ್ರೋಣರು ಕಲಶದಿಂದ ಜನಿಸಿದವರು. ಗುರುಗಳಾದ ಕೃಪರು ಶರಸ್ತಂಬದಿಂದ ಜನಿಸಿದವರು. ನೀವು ಹೇಗೆ ಜನಿಸಿದ್ದೀರಿ ಎಂದು ಎಲ್ಲ ಜನರಿಗೂ ತಿಳಿದ ವಿಷಯ.

ಸಕುಂಡಲಂ ಸಕವಚಂ ದಿವ್ಯಲಕ್ಷಣಲಕ್ಷಿತಮ್ ।
ಕಥಮಾದ್ಯಿಸಂಕಾಶಂ ಸೂತೋಽಮುಂ ಜನಯಿಷ್ಯತಿ ॥೧೬॥

ಕವಚಕುಂಡಲಗಳನ್ನು ಧರಿಸಿ ದಿವ್ಯಲಕ್ಷಣಗಳಿಂದ ಭೂಷಿತನಾಗಿ ಸೂರ್ಯನಂತೆ ಬೆಳಗುತ್ತಿರುವ ಇವನನ್ನು ಹೇಗೆ ಒಬ್ಬ ಸೂತನು ಉತ್ಪಾದಿಸುವನು.

ಏವಂ ಕ್ಷತ್ರಗುಣೈರ್ಯುಕ್ತಂ ಶೂರಂ ಸಮಿತಿಶೋಭನಮ್ ।
ಕಥಮಾದಿತ್ಯಸಂಕಾಶಂ ಮೃಗೀ ವ್ಯಾಘ್ರಂ ಪ್ರಸೂಯತೇ ॥೧೭॥

ಹೀಗೆ ಕ್ಷತ್ರಿಯ ಗುಣಗಳಿಂದ ಯುಕ್ತನಾಗಿ ಶೂರನೂ, ಯುದ್ಧಶೋಭನನೂ, ಆದಿತ್ಯಸದೃಶನೂ ಆದ ಇವನು ಸೂತನಿಂದ ಹೇಗೆ ಜನಿಸಿತ್ತಾನೆ. ಹೆಣ್ಣುಜಿಂಕೆಯು ಎಂದಾದರೂ ವ್ಯಾಘ್ರದ ಮರಿಯನ್ನು ಪ್ರಸವಿಸುತ್ತದೆಯೆ?

ಪೃಥಿವೀರಾಜ್ಯಮರ್ಹೋಯಂ ನಾಂಗರಾಜ್ಯಂ ನರೇಶ್ವರಃ ।
ಸ್ವಬಾಹುಬಲವೀರ್ಯೇಣ ಮಯಾ ಚಾಜ್ಞಾನುವರ್ತಿನಾ ॥೧೮॥

ಈ ರಾಜನು ತನ್ನ ಬಾಹುಬಲ ಮತ್ತು ಪರಾಕ್ರಮಗಳಿಂದ ಮತ್ತು ನನ್ನಂತಹ ವಶವರ್ತಿಯಾದ ಮಿತ್ರನನ್ನು ಕೂಡಿಕೊಂಡು ಸಮಗ್ರವಾದ ಭೂಮಿಯನ್ನೇ ಆಳಲು ಅರ್ಹನಾಗುತ್ತಾನೆ, ಕೇವಲ ಅಂಗರಾಜ್ಯವನ್ನಲ್ಲ.

ಯಸ್ಯ ವಾ ಮನುಜಸ್ಯೇದಂ ನ ಕ್ಷಾಂತಂ ಮದ್ವಿಚೇಷ್ಟಿತಮ್ ।
ರಥಮಾರುಹ್ಯ ಪದ್ಭ್ಯಾಂ ವಾ ವಿನಾಮಯತು ಕಾರ್ಮುಕಮ್ ॥೧೯॥

ನನ್ನ ಈ ಮಾತುಗಳನ್ನು ಮತ್ತು ಕ್ರಿಯೆಗಳನ್ನು ಯಾವನು ಸಹಿಸುವುದಿಲ್ಲವೋ ಅಂತಹವನು ರಥವನ್ನು ಹತ್ತಿಯಾದರೂ ಅಥವಾ ಪಾದಗಳ ಮೇಲೆ ನಿಂತಾದರೂ ಧನುಸ್ಸನ್ನು ಬಗ್ಗಿಸಿ ನನ್ನ ಜೊತೆಯಲ್ಲಿ ಯುದ್ಧಕ್ಕೆ ಬರಲಿ.

ವೈಶಂಪಾಯನಃ

ತತಃ ಸರ್ವಸ್ಯ ರಂಗಸ್ಯ ಹಾಹಾಕಾರೋ ಮಹಾನಭೂತ್ ।
ಸಾಧುವಾದಾನುಸಂಬದ್ಧಃ ಸೂರ್ಯಶ್ಚಾಸ್ತಮುಪಾಗಮತ್ ॥೨೦॥

ಆಗ ರಂಗಭೂಮಿಯಲ್ಲಿ ಎಲ್ಲಾ ಕಡೆಯಲ್ಲಿಯೂ ದೊಡ್ಡ ಹಾಹಾಕಾರವ ೃಂಟಾಯಿತು. ಸಾಧುವಾದಗಳು ಕೇಳಿ ಬಂದವು. ಸೂರ್ಯನು ಅಸ್ತಂಗತನಾದನು.

ತತೋ ದುರ್ಯೋಧನಃ ಕರ್ಣಮಾಲಂಬ್ಯಾಗ್ರಕರೇ ನೃಪಃ ।
ದೀಪಿಕಾಭಿಃ ಕೃತಾಲೋಕಃ ತಸ್ಮಾದ್ ರಂಗಾದ್ ವಿನಿರ್ಯಯೌ ॥೨೧॥

ಆಗ ದುರ್ಯೋಧನರಾಜನು ಕರ್ಣನನ್ನು ಹಸ್ತಾಗ್ರದಲ್ಲಿ ಹಿಡಿದು ದೀಪಗಳಿಂದ ದಾರಿಯು ತೋರಿಸಲ್ಪಡುತ್ತಿರಲು ರಂಗದಿಂದ ಹೊರಗೆ ಹೊರಟನು.

ಪಾಂಡವಾಶ್ಚ ಸಹದ್ರೋಣಾಃ ಸಕೃಪಾ ಭರತರ್ಷಭಾಃ ।
ಭೀಷ್ಮೇಣ ಸಹಿತಾಃ ಸರ್ವೇ ಯಯುಃ ಸ್ವಂಸ್ವಂ ನಿವೇಶನಮ್ ॥೨೨॥

ಭರತಶ್ರೇಷ್ಠರಾದ ಪಾಂಡವರೆಲ್ಲರೂ, ದ್ರೋಣ, ಕೃಪ ಮತ್ತು ಭೀಷ್ಮರ ಜೊತೆಯಲ್ಲಿ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿದರು.

ಅರ್ಜುನೇತಿ ಜನಃ ಕಶ್ಚಿತ್ ಕಶ್ಚಿತ್ ಕರ್ಣೇತಿ ಭಾರತ ।
ಕಶ್ಚಿದ್ದುರ್ಯೋಧನೇತ್ಯೇವಂ ಬ್ರುವಂತಃ ಪ್ರಸ್ಥಿತಾಸ್ತತಃ ॥೨೩॥

ಉಳಿದ ಜನರಲ್ಲಿ ಕೆಲವರು ''ಅರ್ಜುನ ಅರ್ಜುನ'' ಎಂದು ಮಾತನಾಡುತ್ತಲೂ, ಕೆಲವರು ''ಕರ್ಣ'' ಎಂದು ಮಾತನಾಡುತ್ತಲೂ, ಕೆಲವರು ''ದುರ್ಯೋಧನ'' ಎಂದು ಮಾತನಾಡುತ್ತಲೂ ರಂಗಭೂಮಿಯಿಂದ ಹೊರಟರು.

ಕುಂತ್ಯಾಶ್ಚ ಪ್ರತ್ಯಭಿಜ್ಞಾಯ ದಿವ್ಯಲಕ್ಷಣಸೂಚಿತಮ್ ।
ಪುತ್ರಮಂಗೇಶ್ವರಂ ಸ್ನೇಹಾಚ್ಛನ್ನಾ ಪ್ರೀತಿರವರ್ಧತ ॥೨೪॥

ಕುಂತಿಗಾದರೋ ದಿವ್ಯಲಕ್ಷಣಭೂಷಿತನಾದ ಅಂಗರಾಜನಾದ ತನ್ನ ಮಗನನ್ನು ಗುರುತಿಸಿ ಅವನ ಮೇಲಿನ ಸ್ನೇಹದಿಂದ ಪ್ರೀತಿಯು ಪ್ರಚ್ಛನ್ನವಾಗಿ ಅಭಿವೃದ್ಧಿಯನ್ನು ಹೊಂದಿತು.

ದುರ್ಯೋಧನಸ್ಯಾಪಿ ತಥಾ ಕರ್ಣಮಾಸಾದ್ಯ ಪಾರ್ಥಿವ ।
ಭಯಮರ್ಜುನಸಂಜಾತಂ ಕ್ಷಿಪ್ರಮಂತರಧೀಯತ ॥೨೫॥

ರಾಜನೇ ದುರ್ಯೋಧನನು ಕರ್ಣನನ್ನು ಪಡೆದ ಮೇಲೆ ಅವನಿಗೆ ಇದ್ದ ಅರ್ಜುನನ ಭಯವು ಕ್ಷಿಪ್ರವಾಗಿ ಮಾಯವಾಯಿತು.

ಸ ಚಾಪಿ ಧೀರಃ ಕೃತಶಾಸ್ತ್ರವಿಶ್ರಮಃ
ಪರೇಣ ಸಾಮ್ನಾऽಭ್ಯವದತ್ ಸುಯೋಧನಮ್ ।
ಯುಧಿಷ್ಠಿರಸ್ಯಾಪ್ಯಭವತ್ ಸದಾ ಮತಿ-
ರ್ನ ಕರ್ಣತುಲ್ಯೋऽಸ್ತಿ ಧನುರ್ಧರಃ ಕ್ಷಿತೌ ॥೨೬॥

ಆ ಧೀರನೂ, ಶಸ್ತ್ರಗಳಲ್ಲಿ ಪರಿಶ್ರಮವನ್ನು ಹೊಂದಿದವನೂ ಆದ ಕರ್ಣನು ಬಹಳ ಸಮಾಧಾನದಿಂದ ದುರ್ಯೋಧನನ ಜೊತೆಯಲ್ಲಿ ಮಾತನಾಡಿದನು. ಈ ಕಡೆ ಯುಧಿಷ್ಠಿರನಿಗೂ ಸಹ ಭೂಮಿಯಲ್ಲಿ ಕರ್ಣನಿಗೆ ಸಮಾನನಾದ ಧನುರ್ಧರನು ಇನ್ನೊಬ್ಬನಿಲ್ಲ ಎಂಬ ಬುದ್ಧಿಯು ಉಂಟಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಷಟ್‌ತ್ರಿಂಶ್ಯಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ಚತುರಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಮೂವತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೮

ಅಥ ಪೃಷ್ಟೋ ದಕ್ಷಿಣಾರ್ಥಂ ದ್ರೋಣ ಆಹ ಕುಮಾರಕಾನ್ ।
ಬಧ್ವಾ ಪಾಂಚಾಲರಾಜಾನಂ ದತ್ತೇತ್ಯೂಚುಸ್ತಥೇತಿ ತೇ ॥೫೮॥

ಬಳಿಕ ಗುರುದಕ್ಷಿಣೆ ಏನೆಂದು ಹೇಳಲು ಕುಮಾರರು ಕೇಳಿಕೊಂಡಾಗ ದ್ರೋಣರು ಗುರುದಕ್ಷಿಣೆಗಾಗಿ ಪಾಂಚಾಲರಾಜನನ್ನು ಸೆರೆಹಿಡಿದು ತಂದುಕೊಂಡಿರಿ ಎಂದರು. ಕುಮಾರರು ಹಾಗೇ ಆಗಲಿ ಎಂದರು.

ತೇ ಧಾರ್ತರಾಷ್ಟ್ರಾಃ ಕರ್ಣೇನ ಸಹಿತಾಃ ಪಾಂಡವಾ ಅಪಿ ।
ಯಯುರ್ದ್ರೋಣೇನ ಸಹಿತಾಃ ಪಾಂಚಾಲನಗರಂ ಪ್ರತಿ ॥೫೯॥

ಕರ್ಣ ಸಹಿತರಾದ ಕೌರವರೂ ಪಾಂಡವರೂ ದ್ರೋಣರೊಂದಿಗೆ ಪಾಂಚಾಲನಗರಕ್ಕೆ ಹೋದರು.

ಅಥಾಹ ಭೀಮಃ ಸಾಮರ್ಥ್ಯವಿವೇಕಾಭೀಪ್ಸಯಾ ಗುರುಮ್ ॥೬೦॥

ಗರ್ವ ಏಷ ಕುಮಾರಾಣಾಮನಿವಾರ್ಯೋ ದ್ವಿಜೋತ್ತಮ ।
ಗಚ್ಛಂತ್ವೇತೇऽಗ್ರತೋ ನೈಷಾಂ ವಶಗೋ ದ್ರುಪದೋ ಭವೇತ್ ॥೬೧॥

ನಿವೃತ್ತೇಷ್ವಕೃತಾರ್ಥೇಷು ವಯಂ ಬಧ್ವಾ ರಿಪುಂ ತವ
ಆನಯಾಮೋ ನ ಸಂದೇಹ ಇತಿ ತಸ್ಥೌ ಸಸೋದರಃ ॥೬೨॥

ಪಾಂಡವ ಕೌರವರೊಳಗೆ ಯಾರು ಸಮರ್ಥರು ಯಾರು ಅಸಮರ್ಥರೆಂಬುದು ಬೆಳಕಿಗೆ ಬರಲೆಂಬ ಬಯಕೆಯಿಂದ ಭೀಮಸೇನ ಗುರುದ್ರೋಣರಿಗೆ ಹೇಳಿದ- 'ಬ್ರಾಹ್ಮಣೋತ್ತಮ, ಈ ಕುಮಾರರ ದುರಹಂಕಾರ ತಡೆಯಲು ಅಸಾಧ್ಯವಾಗಿದೆ. ಇವರೇ ಮುಂದೆ ಹೋಗಲಿ. ದ್ರುಪದ ಇವರಿಗೆ ವಶನಾಗುವುದಿಲ್ಲ. ತಮ್ಮ ಕಾರ್ಯದಲ್ಲಿ ಅಯಶಸ್ವಿಗಳಾಗಿ ಇವರು ಹಿಂತಿರುಗಿ ಬಂದಾಗ ನಾವು ನಿಮ್ಮ ಶತ್ರುವನ್ನು ಕಟ್ಟಿ ತರುವೆವು. ಇದರಲ್ಲಿ ಸಂಶಯವಿಲ್ಲ'. ಹೀಗೆ ಹೇಳಿ ಸೋದರರೊಡನೆ ನಗರದ ಹೊರಗೇ ಉಳಿದ, ಭೀಮ.

ಸದ್ರೋಣಕೇಷು ಪಾರ್ಥೇಷು ಸ್ಥಿತೇಷ್ವನ್ಯೇ ಸಸೂತಜಾಃ ।
ಯಯುರಾತ್ತಪ್ರಹರಣಾಃ ಪಾಂಚಾಲಾಂತಃಪುರಂ ದ್ರುತಮ್ ॥೬೩॥

ದ್ರೋಣರೊಡನೆ ಪಾಂಡವರು ಹಿಂದೆ ಉಳಿದಿದ್ದಾಗ ಕೌರವರು ಕರ್ಣನೊಂದಿಗೆ ಆಯುಧ ಎತ್ತಿಕೊಂಡು ಪಾಂಚಾಲರಾಜನ ಪಟ್ಟಣದೊಳಗೆ ಬೇಗನೆ ನುಗ್ಗಿದರು.

ಕುಮಾರಾನ್ ಗ್ರಹಣೇಪ್ಸುಂಸ್ತಾನುಪಯಾತಾನುದೀಕ್ಷ್ಯ ಸಃ ।
ಅಕ್ಷೌಹಿಣೀತ್ರಿತಯಯುಕ್ ನಿಃಸೃತೋ ದ್ರುಪದೋ ಗೃಹಾತ್ ॥೬೪॥

ಕುಮಾರರು ತನ್ನನ್ನು ಸೆರೆಹಿಡಿಯಲು ಬಯಸಿ ಬರುತ್ತಿದ್ದಾರೆ ಎಂಬುದು ತಿಳಿದು ದ್ರುಪದ ಮೂರು ಅಕ್ಷೌಹಿಣೀ ಸೈನ್ಯ ಸಮೇತನಾಗಿ ಅರಮನೆಯಿಂದ ಹೊರಗೆ ಹೊರಟ.

ತೇ ಶರೈರಭಿವರ್ಷಂತಃ ಪರಿವಾರ್ಯ ಕುಮಾರಕಾನ್ ।
ಅರ್ದಯಾಮಾಸುರುದ್ವೃತ್ತಾನ್ ಸ್ತ್ರಿಯೋ ಬಾಲಾಶ್ಚ ಸರ್ವಶಃ ॥೬೫॥

ಪಾಂಚಾಲರು ಕುಮಾರರನ್ನು ಸುತ್ತುವರಿದು ಬಾಣಗಳ ಮಳೆಗೆರೆಯುತ್ತ ಪೀಡಿಸಿದರು. ಉದ್ಧತರಾದ ಕುಮಾರರನ್ನು ಎಲ್ಲ ಹೆಂಗಸರೂ ಮಕ್ಕಳೂ ಕೂಡ ಪೀಡಿಸಿದರು.

ಹರ್ಮ್ಯಸಂಸ್ಥಾಃ ಸ್ತ್ರಿಯೋ ಬಾಲಾ ಗ್ಲಾವಭಿರ್ಮುಸಲೈರಪಿ ।
ಅತ್ಯರ್ಥಮರ್ದಯಾಮಾಸುಃ ಕುಮಾರಾನ್ ಸುಸುಖೈಧಿತಾನ್ ॥೬೬॥

ಉಪ್ಪರಿಗೆಗಳಲ್ಲಿನಿಂತ ಹೆಂಗಸರು ಮಕ್ಕಳು ಸುಖವಾಗಿ ಬೆಳೆದಿದ್ದ ಕುಮಾರರನ್ನು ಕಲ್ಲು ಒನಕೆಗಳಿಂದ ಬಹಳವಾಗಿ ಪೀಡಿಸಿದರು.

ದ್ರುಪದಸ್ಯ ವರೋ ಹ್ಯಸ್ತಿ ಸೂರ್ಯದತ್ತಸ್ತಪೋಬಲಾತ್ ।
ಆ ಯೋಜನಾತ್ ಪುರಮುಪ ನ ತ್ವಾಂ ಜೇಷ್ಯತಿ ಕಶ್ಚನ ॥೬೭॥

ದ್ರುಪದನಿಗೆ ತಪೋಬಲದಿಂದ ಸೂರ್ಯನಿತ್ತಿದ್ದ ವರವಿತ್ತು 'ನಗರದ ಸಮೀಪದಲ್ಲಿ ಒಂದು ಯೋಜನೆದೊಳಗೆ ಯಾರೂ ನಿನ್ನನ್ನು ಗೆಲ್ಲಲಾರರು' ಎಂದು.

ಇತಿ ತೇನ ವರೇಣೈವ ಸುಖಸಂವರ್ಧಿತಾಶ್ಚ ತೇ ।
ಭಗ್ನಾ ಕುಮಾರಾ ಆವೃತ್ಯ ದುದ್ರುವುರ್ಯತ್ರ ಪಾಂಡವಾಃ ॥೬೮॥

ಆ ವರ ಬಲದಿಂದಲೆ ಸುಖವಾಗಿ ಬೆಳೆಸಲ್ಪಟ್ಟ ಕುಮಾರರು ಪರಾಜಿತರಾಗಿ ಹಿಂತಿರುಗಿ ಪಾಂಡವರಿದ್ದಲ್ಲಿಗೆ ಧಾವಿಸಿದರು.

ಸ್ತ್ರೀಬಾಲವೃದ್ಧಸಹಿತೈಃ ಪಾಂಚಾಲೈರಪ್ಯನುದ್ರುತಾಃ ।
ಭೀಮಾರ್ಜುನೇತಿ ವಾಶಂತೋ ಯಯುರ್ಯತ್ರ ಸ್ಮ ಪಾಂಡವಾಃ ॥೬೯॥

ಹೆಂಗಸರು ಮಕ್ಕಳು ಮದುಕರಿದೊಡಗೂಡಿ ಪಾಂಚಾಲರು ಬೆನ್ನಟ್ಟಿ ಬರುತ್ತಿದ್ದಂತೆ ಭೀಮ! ಅರ್ಜುನ! ಕಾಪಾಡಿ ಎಂದು ಕೂಗುತ್ತ ಪಾಂಡವರಿದ್ದಲ್ಲಿಗೆ ಓಡಿದರು. ಕುಮಾರರು.

ತಾನ್ ಪ್ರಭಗ್ನಾನ್ ಸಮಾಲೋಕ್ಯ ಭೀಮಃ ಪ್ರಹರತಾಂ ವರಃ ।
ಆರುರೋಹ ರಥಂ ವೀರಃ ಪುರ ಆತ್ತ ಶರಾಸನಃ ॥೭೦॥

ಕುಮಾರರು ಬಹಳ ಪರಾಜಿತರಾದುದನ್ನು ಕಂಡು ಯೋಧರಲ್ಲಿ ಶ್ರೇಷ್ಠನಾದ ವೀರ ಭೀಮಸೇನ ಬಿಲ್ಲು ಬಾಣ ಹಿಡಿದು ಮುಂಭಾಗದಲ್ಲಿ ರಥವೇರಿದ.

ತಮನ್ವಯಾದಿಂದ್ರಸೂನುರ್ಯಮೌ ತಸ್ಯೈವ ಚಕ್ರಯೋಃ ।
ಯುಧಿಷ್ಠಿರಸ್ತು ದ್ರೋಣೇನ ಸಹ ತಸ್ಥೌ ನಿರೀಕ್ಷಕಃ ॥೭೧॥

ಅವನ ಹಿಂದೆ ಅರ್ಜುನ ರಥವೇರಿ ಹೊರಟ. ಅರ್ಜುನನ ರಥದ ಬಳಿ ಚಕ್ರ ರಕ್ಷಕರಾಗಿ ನಕುಲ ಸಹದೇವರು ಹೊರಟರು. ಯುಧಿಷ್ಠಿರ ದ್ರೋಣನೊಂದಿಗೆ ಯುದ್ಧ ನಿರೀಕ್ಷಕನಾಗಿ ನಿಂತ.

ಆಯಾಂತಮಗ್ರತೋ ದೃಷ್ಟ್ವಾ ಭೀಮಮಾತ್ತಶರಾಸನಮ್ ।
ದುದ್ರುವುಃ ಸರ್ವಪಾಂಚಾಲಾ ವಿವಿಶುಃ ಪುರಮೇವ ಚ ॥೭೨॥

ಮುಂಚೂಣಿಯಲ್ಲಿ ಬಿಲ್ಲು ಬಾಣ ಹಿಡಿದು ಭೀಮಸೇನ ಬರುತ್ತಿದ್ದುದನ್ನು ಕಂಡು ಎಲ್ಲ ಪಾಂಚಾಲರೂ ಭಯದಿಂದ ಓಡಿದರು. ತಮ್ಮ ಪಟ್ಟಣವನ್ನು ಹೊಕ್ಕರು.

ದ್ರುಪದಸ್ತ್ವಭ್ಯಯಾದ್ ಭೀಮಂ ಸಪುತ್ರಃ ಸಹ ಸೇನಯಾ ।
ಚಕ್ರರಕ್ಷೌ ಚ ತಸ್ಯಾಸ್ತಾಂ ಯುಧಾಮನ್ಯೂತ್ತಮೌಜಸೌ ॥೭೩॥

ದ್ರುಪದ ಮಕ್ಕಳೊಡನೆ ಸೈನ್ಯ ಸಮೇತನಾಗಿ ಭೀಮನನ್ನು ಇದಿರಿಸಿದ. ಅವನಿಗೆ ಯುಧಾಮನ್ಯು ಉತ್ತಮೌಜರು ಚಕ್ರರಕ್ಷಕರಾಗಿದ್ದರು.

ಧಾತ್ರರ್ಯಮಾವೇಶಯುತೌ ವಿಶ್ವಾವಸು ಪರಾವಸೂ ।
ಸುತೌ ತಸ್ಯ ಮಹಾವೀರ್ಯೌ ಸತ್ಯಜಿತ್ ಪೃಷ್ಠತೋಽಭವತ್ ॥೭೪॥

ಆ ಇಬ್ಬರು ದ್ರುಪದ ಪುತ್ರರು ಧಾತೃ ಆರ್ಯಮರೆಂಬ ಆದಿತ್ಯರ ಆವೇಶಯುಕ್ತರಾದ ವಿಶ್ವಾವಸು ಪರಾವಸುಗಳೆಂಬ ಗಂಧರ್ವರು ಮಹಾವೀರ್ಯಶಾಲಿಗಳು. ರಥದ ಹಿಂದೆ ರಕ್ಷಕನಾಗಿ ಸತ್ಯಜಿತ್ ಇದ್ದ.

ಸ ಮಿತ್ರಾಂಶಯುತೋ ವೀರಶ್ಚಿತ್ರಸೇನೋ ಮಹಾರಥಃ ।
ಅಗ್ರತಸ್ತು ಶಿಖಂಡ್ಯಾಗಾದ್ ರಥೋದಾರಃ ಶರಾನ್ ಕ್ಷಿಪನ್ ॥೭೫॥

ಸತ್ಯಜಿತ್ ಮಿತ್ರನೆಂಬ ಆದಿತ್ಯನ ಅಂಶದಿಂದ ಯುಕ್ತನಾದ ಚಿತ್ರಸೇನ ಗಂಧರ್ವ, ವೀರ, ಮಹಾರಥ, ಮುಂಭಾಗದಲ್ಲಿ ಶ್ರೇಷ್ಠವಾದ ರಥದಲ್ಲಿ ಬಾಣಗಳನ್ನು ಎಸೆಯುತ್ತ ಶಿಖಂಡಿ ಬಂದ.

ಜನಮೇಜಯಸ್ತಮನ್ವೇವ ಪೂರ್ವಂ ಚಿತ್ರರಥೋ ಹಿ ಯಃ ।
ತ್ವಷ್ಟುರಾವೇಶಸಂಯುಕ್ತಃ ಸ ಶರಾನಭ್ಯವರ್ಷತ ॥೭೬॥

ಶಿಖಂಡಿಯ ಹಿಂದಿನಿಂದ ಜನಮೇಜಯ ಬಾಣಗಳ ಮಳೆಗರೆದ. ಅವನು ಹಿಂದೆ ಚಿತ್ರರಥನೆಂಬ ಗಂಧರ್ವ. ತ್ವಷ್ಟ್ರ ಎಂಬ ಆದಿತ್ಯನ ಆವೇಶದಿಂದ ಕೂಡಿದ್ದ.

ತಾವುಭೌ ವಿರಥೌ ಕೃತ್ವಾ ವಿಚಾಪೌ ಚ ವಿವರ್ಮಕೌ ।
ಭೀಮೋ ಜಘಾನ ತಾಂ ಸೇನಾಂ ಸವಾಜಿರಥಕುಂಜರಾಮ್ ॥೭೭॥

ಭೀಮಸೇನ ಶಿಖಂಡಿ ಜನಮೇಜಯರ ರಥಗಳನ್ನು ಮುರಿದ, ಬಿಲ್ಲುಗಳನ್ನು ಕಡಿದ. ಕವಚಗಳನ್ನು ಭೇದಿಸಿದ. ಅಶ್ವರಥ ಗಜಗಳಿಂದ ಕೂಡಿದ ಆ ಸೈನ್ಯವನ್ನು ಸಂಹರಿಸಿದ.

ಅಥೈನಂ ಶರವರ್ಷೇಣ ಯುಧಾಮನ್ಯೂತ್ತಮೌಜಸೌ ।
ಅಭೀಯತುಸ್ತೌ ವಿರಥೌ ಚಕ್ರೇ ಭೀಮೋ ನಿರಾಯುಧೌ ॥೭೮॥

ಬಳಿಕ ಯುಧಾಮನ್ಯು ಉತ್ತಮೌಜರು ಭೀಮನನ್ನು ಬಾಣಗಳ ಮಳೆಯಿಂದ ಇದಿರಿಸಿದರು. ಅವರನ್ನು ಭೀಮ ರಥರಹಿತರನ್ನಾಗಿ ನಿರಾಯುಧರನ್ನಾಗಿ ಮಾಡಿದ.

ಹಸ್ತಪ್ರಾಪ್ತಂ ಚ ಪಾಂಚಾಲಂ ನಾಗ್ರಹೀತ್ ಸ ವೃಕೋದರಃ ।
ಗುರ್ವರ್ಥ ಮರ್ಜುನಸ್ಯೋರ್ವೀಂ ಪ್ರತಿಜ್ಞಾಂ ಕರ್ತುಮವ್ಯಥಾಮ್
ಮಾನಭಂಗಾಯ ಕರ್ಣಸ್ಯ ಪಾರ್ಥಮೇವ ನ್ಯಯೋಜಯತ್ ॥೭೯॥

ಕೈಗೆ ಸಿಗುವಂತಿದ್ದ ದ್ರುಪದನನ್ನು ಭೀಮ ಸೆರೆ ಹಿಡಿಯಲಿಲ್ಲ. ಗುರುದ್ರೋಣರಿಗಾಗಿ ಅರ್ಜುನ ಗೈದಿದ್ದ ಮಹಾ ಪ್ರತಿಜ್ಞೆಯನ್ನು ಸತ್ಯಗೊಳಿಸುವುದಕ್ಕಾಗಿ ಮತ್ತು ಕರ್ಣನ ಮಾನ ಕಳೆಯುವುದಕ್ಕಾಗಿ ಅರ್ಜುನನನ್ನು ಆ ಕಾರ್ಯಕ್ಕಾಗಿ ಬಿಟ್ಟ.

ಸ ಶರಾನ್ ಕ್ಷಿಪತಸ್ತಸ್ಯ ಪಾಂಚಾಲಸ್ಯಾರ್ಜುನೋ ದ್ರುತಮ್ ।
ಪುಪ್ಲುವೇ ಸ್ಯಂದನೇ ಚಾಪಂ ಛಿತ್ವಾ ತಂ ಚಾಗ್ರಹೀತ್ ಕ್ಷಣಾತ್ ॥೮೦॥

ಅರ್ಜುನ ತನ್ನ ಮೇಲೆ ಬಾಣಗಳನ್ನು ಎಸೆಯುತ್ತಿದ್ದ ದ್ರುಪದನ ರಥದೊಳಗೆ ಹಾರಿದ. ಅವನ ಬಿಲ್ಲನ್ನು ಮುರಿದು ಕ್ಷಣದಲ್ಲಿ ಸೆರೆಹಿಡಿದ.

ಸಿಂಹೋ ಮೃಗಮಿವಾದಾಯ ಸ್ವರಥಂ ಚಾಭಿಪೇದಿವಾನ್ ।
ಅಥ ಪ್ರಕುಪಿತಂ ಸೈನ್ಯಂ ಫಲ್ಗುನಂ ಪರ್ಯವಾರಯತ್ ॥೮೧॥

ಸಿಂಹ ಜಿಂಕೆಯನ್ನು ಹಿಡಿದು ತರುವಂತೆ ಅರ್ಜುನ ದ್ರುಪದನನ್ನು ಹಿಡಿದು ತಂದು ತನ್ನ ರಥಕ್ಕೆ ಹಾರಿದ. ಆಗ ಬಹುಕೋಪಗೊಂಡ ಸೈನ್ಯ ಅರ್ಜುನನನ್ನು ಸುತ್ತುವರಿಯಿತು.

ಜಘಾನ ಭೀಮಸ್ತರಸಾ ತತ್ಸೈನ್ಯಂ ಶರವೃಷ್ಟಿಭಿಃ ।
ಅಥ ಸತ್ಯಜಿದಭ್ಯಾಗಾತ್ ಪಾರ್ಥಂ ಮುಂಚನ್ ಶರಾನ್‌ಬಹೂನ್ ॥

ಭೀಮ ಆ ಸೈನ್ಯವನ್ನು ಬಾಣವೃಷ್ಟಿಗಳಿಂದ ಬೇಗನೆ ಸಂಹರಿಸತೊಡಗಿದ. ಆಗ ಸತ್ಯಜಿತ್ ಬಹಳ ಬಾಣಗಳನ್ನು ಎಸೆಯುತ್ತ ಅರ್ಜುನನ ಮುಂದೆ ಬಂದ.

ತಮರ್ಜುನಃ ಕ್ಷಣೇನೈವ ಚಕ್ರೇ ವಿರಥ ಕಾರ್ಮುಕಮ್ ।
ಘ್ನಂತಂ ಭೀಮಂ ಪುನಃ ಸೈನ್ಯಮರ್ಜುನಃ ಪ್ರಾಹ ಮಾ ಭವಾನ್ ॥೮೩॥

ಸೇನಾಮರ್ಹತಿ ರಾಜ್ಞೋಽಸ್ಯ ವೀರ ಹಂತುಮಶೇಷತಃ ।
ಸಂಬಂಧಯೋಗ್ಯಸ್ತಾತಸ್ಯ ಸಖಾಯಂ ನಃ ಸುಧಾರ್ಮಿಕಃ ॥೮೪॥

ನೇಷ್ಯಾಮ ಏನಮೇವಾತೋ ಗುರೋರ್ವಚನಗೌರವಾತ್ ।
ಸ್ನೇಹಪಾಶಂ ತತಶ್ಚಕ್ರೇ ಬೀಭತ್ಸೌದ್ರುಪದೋಽಧಿಕಮ್ ॥೮೫॥

ಅರ್ಜುನ ಕ್ಷಣದಲ್ಲಿ ಅವನನ್ನು ರಥರಹಿತ ಚಾಪರಹಿತನನ್ನಾಗಿ ಮಾಡಿದ. ಭೀಮ ಮತ್ತೂ ಸೈನ್ಯವನ್ನು ಸಂಹರಿಸುತ್ತಿದ್ದುದನ್ನು ಕಂಡು ಅರ್ಜುನ ನುಡಿದ. 'ವೀರನೆ, ಈ ರಾಜನ ಸೈನ್ಯವನ್ನು ಪೂರ್ತಿ ಸಂಹರಿಸಬೇಡ. ಈತ ಬಹಳ ಧಾರ್ಮಿಕ. ನಮ್ಮ ತಂದೆಯ ಸ್ನೇಹಿತ. ನಮಗೆ ವಿವಾಹ ಸಂಬಂಧಕ್ಕೆ ಯೋಗ್ಯ. ಅದರಿಂದ ನಾವು ಗುರುಗಳ ಮಾತಿನಲ್ಲಿ ಗೌರವಭಾದಿಂದ ದ್ರುಪದನನ್ನು ಮಾತ್ರ ಹಿಡಿದು ಒಯ್ಯೋಣ'. ಅದರಿಂದ ದ್ರುಪದ ಅರ್ಜುನನಲ್ಲಿ ಅಧಿಕವಾಗಿ ಸ್ನೇಹಪಾಶವಿಟ್ಟುಕೊಂಡ.

ತತಃ ಸೇನಾಂ ವಿಹಾಯೈವ ಭೀಮೋ ಬೀಭತ್ಸುಮನ್ವಗಾತ್ ।
ಮುಕ್ತಾ ಕಥಂಚಿದ್ ಭೀಮಾಸ್ಯಾತ್ ಸಾ ಸೇನಾ ದುದ್ರುವೇ ಭಯಾತ್ ॥

ಬಳಿಕ ಸೈನ್ಯವನ್ನು ಬಿಟ್ಟು ಭೀಮ ಅರ್ಜುನನನ್ನು ಹಿಂಬಾಲಿಸಿದ. ಹೀಗೆ ಭೀಮನ ಬಾಯಿಂದ ಹೇಗೋ ತಪ್ಪಿಸಿಕೊಂಡ ಸೈನ್ಯ ಭಯದಿಂದ ಪಲಾಯನ ಮಾಡಿತು.

ದ್ರುಪದಂ ಸ್ಥಾಪಯಾಮಾಸಾಥಾರ್ಜುನೋ ದ್ರೋಣಸನ್ನಿಧೌ ।
ಪಪ್ರಚ್ಛೈನಂ ತದಾ ದ್ರೋಣಃ ಸಖ್ಯಮಸ್ಮೃತ ನೇತಿ ವಾ ॥೮೭॥

ಅರ್ಜುನ ದ್ರೋಣರ ಬಳಿ ದ್ರುಪದನನ್ನು ತಂದು ನಿಲ್ಲಿಸಿದ. ದ್ರೋಣರು ಆಗ ದ್ರುಪದನನ್ನು ಕೇಳಿದರು. 'ಈಗ ಹೇಳು, ನಮ್ಮೊಳಗೆ ಸಖ್ಯವಿದೆಯೆ, ಇಲ್ಲವೆ?'

ಅಸ್ತೀದಾನೀಮಿತಿ ಪ್ರಾಹ ದ್ರುಪದೋಽಂಗಿರಸಾಂ ವರಮ್ ।
ಅಥಾಹ ದ್ರುಪದಂ ದ್ರೋಣಃ ಸಖ್ಯಮಿಚ್ಛೇಽಕ್ಷಯಂ ತವ ॥೮೮॥

'ಈಗ ಇದೆ' ಎಂದ ದ್ರುಪದ. ದ್ರೋಣರು ಹೇಳಿದರು, 'ನಿನ್ನ ಶಾಶ್ವತವಾದ ಸಖ್ಯವನ್ನೇ ನಾನು ಬಯಸುವೆನು'.

ನ ಹ್ಯರಾಜ್ಞೋ ಭವೇತ್‌ಸಖ್ಯಂ ತವೇತೀದಂ ಕೃತಂ ಮಯಾ ।
ನ ವಿಪ್ರಧರ್ಮೋ ಯದ್ಯುದ್ಧಮತಸ್ತ್ವಂ ನ ಮಯಾ ಧೃತಃ ॥೮೯॥

'ರಾಜನಲ್ಲದವನೊಡನೆ ನಿನಗೆ ಸಖ್ಯವಿರುವುದಿಲ್ಲವೆಂದು ನಾನು ಈ ಕಾರ್ಯಮಾಡಿದೆ. ಯುದ್ಧ ಬ್ರಾಹ್ಮಣನಿಗೆ ಧರ್ಮವಲ್ಲ. ಅದರಿಂದ ನಾನು ಸ್ವತಃ ನಿನ್ನನ್ನು ವಶಪಡಿಸಿಕೊಳ್ಳಲಿಲ್ಲ.

ಶಿಷ್ಯೈರೇತತ್ ಕಾರಿತಂ ಮೇ ತವ ಸಖ್ಯಮಭೀಪ್ಸತಾ ।
ಅತಃ ಸಖ್ಯಾರ್ಥಮೇವಾದ್ಯ ತ್ವದ್ರಾಜ್ಯಾರ್ಧೋ ಹೃತೋ ಮಯಾ ॥೯೦॥

'ಶಿಷ್ಯರಿಂದ ಈ ಕೆಲಸವನ್ನು ನನಗಾಗಿ ಮಾಡಿಸಿಕೊಂಡೆ. ಏಕೆಂದರೆ ನಾನು ನಿನ್ನ ಸಖ್ಯವನ್ನು ಬಯಸಿದ್ದೇನೆ. ಅದರಿಂದ ಸಖ್ಯಕ್ಕಾಗಿಯೆ ಇದೀಗ ನಿನ್ನ ರಾಜ್ಯದ ಒಂದು ಭಾಗವನ್ನು ನಾನು ಅಪಹರಿಸಿದ್ದೇನೆ.

ಗಂಗಾಯಾ ದಕ್ಷಿಣೇ ಕೂಲೇ ತ್ವಂ ರಾಜೈವೋತ್ತರೇ ತ್ವಹಮ್ ।
ನ ಹ್ಯರಾಜತ್ವ ಏಕಸ್ಯ ಸಖ್ಯಂ ಸ್ಯಾದಾವಯೋಃ ಸಖೇ ॥೯೧॥

ಮಿತ್ರ , ಗಂಗೆಯ ದಕ್ಷಿಣ ತೀರದಲ್ಲಿ ನೀನೆ ರಾಜ. ಉತ್ತರ ತೀರದಲ್ಲಿ ನಾನು. ನಮ್ಮಿಬ್ಬರೊಳಗೆ ಒಬ್ಬನು ರಾಜನಲ್ಲದಿದ್ದರೆ ಸಖ್ಯ ಚಿರಕಾಲ ಉಳಿಯಲಾರದು ತಾನೆ?

ಇತ್ಯುಕ್ತ್ವೋನ್ಮುಚ್ಯ ತಂ ದ್ರೋಣೋ ರಾಜ್ಯಾರ್ಧಂ ಗೃಹ್ಯ ಚಾಮುತಃ ।
ಯಯೌ ಶಿಷ್ಯೈರ್ನಾಗಪುರಂ ನ್ಯವಸತ್ ಸುಖಮತ್ರ ಚ ॥೯೨॥

ದ್ರೋಣರು ಹೀಗೆ ಹೇಳಿ ದ್ರುಪದನನ್ನು ಬಂಧಮುಕ್ತನನ್ನಾಗಿ ಮಾಡಿ ಅವನ ರಾಜ್ಯದ ಒಂದು ಭಾಗವನ್ನು ಸ್ವೀಕರಿಸಿ ಶಿಷ್ಯರೊಡನೆ ಹಸ್ತಿನಾಪುರಕ್ಕೆ ಹೋದರು. ಅಲ್ಲಿ ಸುಖವಾಗಿ ವಾಸಮಾಡಿದರು.

ಬ್ರಾಹ್ಮಣ್ಯ ತ್ಯಾಗಭೀರುಃ ಸನ್ ನಾಗೃಹ್ಣಾದ್ ಧನುರಪ್ಯಸೌ ।
ಧಾರ್ತರಾಷ್ಟ್ರೈಸ್ತು ಭೀಮಸ್ಯ ಭಯಾತ್ ಪಾದೌ ಪ್ರಣಮ್ಯ ಚ ॥೯೩॥

ಶರಣಾರ್ಥಂ ಯಾಚಿತತ್ವಾತ್ ಸಪುತ್ರೋ ಯುಯುಧೇ ಪರೈಃ ।
ಏವಂ ಹರೀಚ್ಛಯೈವಾಸೌ ಕ್ಷಾತ್ರಂ ಧರ್ಮಮುಪೇಯಿವಾನ್ ॥೯೪॥

ಬ್ರಾಹ್ಮಣ್ಯವನ್ನು ಬಿಟ್ಟಂತಾದೀತೆಂದು ಭಯಪಟ್ಟು ದ್ರೋಣರು ಎಂದೂ ಸ್ವತಃ ಬಿಲ್ಲನ್ನೆತ್ತಿಕೊಳ್ಳಲಿಲ್ಲ. ಕೌರವರು ಭೀಮನ ಭಯದಿಂದ ಕಾಲಿಗೆ ಬಿದ್ದು ರಕ್ಷಣೆಗಾಗಿ ಬೇಡಿದ್ದರಿಂದ ದ್ರೋಣರು ಅಶ್ವತ್ಥಾಮನಿಂದ ಕೂಡಿಕೊಂಡು ಪಾಂಡವರೊಡನೆ ಯುದ್ಧಮಾಡಿದರು. ಹೀಗೆ ಹರೀಚ್ಛೆಯಿಂದಲೆ ಅವರು ಕ್ಷಾತ್ರಧರ್ಮವನ್ನು ಕೈಗೊಂಡರು.

★ ★ ★ ★

ನೂರ ಮೂವತ್ತೇಳನೆಯ ಅಧ್ಯಾಯ

(ದ್ರೋಣರಿಗೆ ಗುರುದಕ್ಷಿಣದಾನ ಪ್ರಸಂಗ, ದುರ್ಯೋಧನಾದಿಗಳ ಪರಾಜಯ, ಭೀಮಾರ್ಜುನರ ಜಯ, ದ್ರೋಣದ್ರುಪದ ಸಂವಾದ, ದ್ರೋಣರಿಂದ ದ್ರುಪದನ ಅರ್ಧರಾಜ್ಯ ಸ್ವೀಕಾರ.)

ವೈಶಂಪಾಯನಃ

ಪಾಂಡವಾನ್ ಧಾರ್ತರಾಷ್ಟ್ರಾಂಶ್ಚ ಕೃತಾಸ್ತ್ರಾನ್ ಪ್ರಸಮೀಕ್ಷ್ಯ ತು ।
ಗುರ್ವರ್ಥಂ ದಕ್ಷಿಣಾಂ ಕಾಲೇ ಪ್ರಾಪ್ತೇಽಮನ್ಯತ ವೈ ಗುರುಃ ॥೧॥

ಪಾಂಡವರು ಮತ್ತು ಕೌರವರು ಅಸ್ತ್ರವಿದ್ಯೆಯಲ್ಲಿ ಪರಿಣತರಾದುದನ್ನು ಗಮನಿಸಿ ಗುರುಗಳಾದ ದ್ರೋಣರು ಗುರುದಕ್ಷಿಣೆಯನ್ನು ಸ್ವೀಕರಿಸುವುದಕ್ಕೆ ಇದು ಯೋಗ್ಯವಾದ ಕಾಲವೆಂದು ತಿಳಿದರು.

ಕೃತಾಸ್ತ್ರಾಂಶ್ಚ ತತಃ ಶಿಷ್ಯಾನ್ ಚೋದಯಾಮಾಸ ವೈ ಗುರುಃ ।
ಅಸ್ತ್ರಶಿಕ್ಷಾಮನುಜ್ಞಾತಾನ್ ಗಂಗಾದ್ವಾರಮುಪಾಗತಾನ್ ॥೨॥

ಅಸ್ತ್ರವಿದ್ಯೆಯಲ್ಲಿ ಪಾರಂಗತರಾಗಿ ದ್ರೋಣರ ಮನ್ನಣೆಯನ್ನು ಪಡೆದು ಗಂಗಾದ್ವಾರಕ್ಕೆ ಬಂದ ಎಲ್ಲಾ ಶಿಷ್ಯರನ್ನೂ ಕುರಿತು ಗುರುಗಳಾದ ದ್ರೋಣರು ಒತ್ತಾಯ ಮಾಡಿದರು.

ಭಾರದ್ವಾಜಸ್ತತಸ್ತಾಂಸ್ತು ಸರ್ವಾನೇವಾಭ್ಯಭಾಷತ ।
ಇಚ್ಛಾಮಿ ದತ್ತಾಂ ಸಹಿತೈಮರ್ಹ್ಯಂ ಪರಮದಕ್ಷಿಣಾಮ್ ॥೩॥

ದ್ರೋಣರು ಅವರೆಲ್ಲರನ್ನೂ ಕುರಿತು ನೀವೆಲ್ಲರೂ ಸೇರಿ, ನನಗೆ ಶ್ರೇಷ್ಠವಾದ ಗುರುದಕ್ಷಿಣೆಯನ್ನು ಸಲ್ಲಿಸಬೇಕೆಂದು ನಾನು ಬಯಸುತ್ತೇನೆ ಎಂದು ಹೇಳಿದರು.

ಏವಮುಕ್ತಾಸ್ತತಸ್ತೇ ವೈ ಶಿಷ್ಯಾ ದ್ರೋಣಮುಪಾಗಮನ್ ।
ಭಗವಾನ್ ಕಿಂ ಪ್ರಯಚ್ಛಾಮ ಆಜ್ಞಾಪಯತು ನೋ ಗುರುಃ ॥೪॥

ಹೀಗೆ ಹೇಳಿದಾಗ ಆ ಶಿಷ್ಯರು ದ್ರೋಣರ ಸಮೀಪಕ್ಕೆ ಬಂದು ಪೂಜ್ಯರೇ, ನಾವು ಏನನ್ನು ಕೊಡಬೇಕು? ಪೂಜ್ಯರಾದ ಗುರುಗಳಾದ ತಾವು ಅಪ್ಪಣೆಯನ್ನು ಕೊಡಬೇಕು ಎಂದು ಹೇಳಿದರು.

ತತಃ ಶಿಷ್ಯಾನ್ ಸಮಾಹೂಯ ಆಚಾರ್ಯಃ ಸಮಚೋದಯತ್ ।
ದ್ರೋಣಃ ಸರ್ವಾನಶೇಷೇಣ ದಕ್ಷಿಣಾರ್ಥಂ ಮಹೀಪತೇ ॥೫॥

ರಾಜನೇ, ಆಗ ದ್ರೋಣರು ಎಲ್ಲಾ ಶಿಷ್ಯರನ್ನೂ ಕರೆದು ಗುರುದಕ್ಷಿಣೆಗಾಗಿ ಒತ್ತಾಯ ಮಾಡಿದರು.

ಪಂಚಾಲರಾಜಂ ದ್ರುಪದಂ ಗೃಹೀತ್ವಾ ರಣಮೂರ್ಧನಿ ।
ಪರ್ಯಾನಯತ ಭದ್ರಂ ವಃ ಸಾ ಸ್ಯಾತ್ ಪರಮದಕ್ಷಿಣಾ ॥೬॥

ಪಾಂಚಾಲರಾಜನಾದ ದ್ರುಪದನನ್ನು ಯುದ್ಧದಲ್ಲಿ ಸೆರೆಹಿಡಿದು ನನ್ನ ಬಳಿಗೆ ಕರೆದುಕೊಂಡು ಬನ್ನಿ. ನಿಮಗೆ ಮಂಗಳವಾಗಲಿ. ಇದೇ ನಾನು ಬಯಸುವ ಶ್ರೇಷ್ಠವಾದ ಗುರುದಕ್ಷಿಣೆ.

ವೈಶಂಪಾಯನಃ

ತಥೇತ್ಯುಕ್ತ್ವಾ ತು ತೇ ಸರ್ವೇ ರಥೈಸ್ತೂರ್ಣಂ ಪ್ರಹಾರಿಣಃ ।
ಆಚಾರ್ಯಧನದಾನಾರ್ಥಂ ದ್ರೋಣೇನ ಸಹಿತಾ ಯಯುಃ ॥೭॥

ಹಾಗೆಯೇ ಆಗಲಿ ಎಂದು ಹೇಳಿ ಪ್ರಹರಣಶೀಲರಾದ ಅವರೆಲ್ಲರೂ ರಥಗಳನ್ನು ತೆಗೆದುಕೊಂಡು ಗುರು ದಕ್ಷಿಣೆಯನ್ನು ಕೊಡುವ ಸಲುವಾಗಿ ದ್ರೋಣರನ್ನೂ ಕರೆದುಕೊಂಡು ಶೀಘ್ರವಾಗಿ ಹೊರಟರು.

ತತೋಽಭಿಜಗ್ಮುಃ ಪಾಂಚಾಲಂ ಕ್ರೋಶಂತಃ ಕೌರವರ್ಷಭಾಃ ।
ತತೋ ರಥಪದಾತೌಘೈಃ ಕುಂಜರೈಃ ಸಾದಿಭಿಃ ಸಹ ॥೮॥

ಅನಂತರ ಆ ಕೌರವಶ್ರೇಷ್ಠರೆಲ್ಲರೂ ರಥ, ಗಜ, ಹಯ, ಪದಾತಿಗಳ ಸಮೂಹದೊಡನೆ, ಗಟ್ಟಿಯಾಗಿ ಕಿರುಚುತ್ತಾ ಪಾಂಚಾಲದೇಶಕ್ಕೆ ಹೊರಟರು.

ದುರ್ಯೋಧನಶ್ಚ ಕರ್ಣಶ್ಚ ಯುಯುತ್ಸುಶ್ಚ ಮಹಾಬಲಃ ।
ದುಃಶಾಸನೋ ವಿಕರ್ಣಶ್ಚ ಜಲಸಂಧಃ ಸುಲೋಚನಃ ॥೯॥

ಏತೇ ಚಾನ್ಯೇ ಚ ಬಹವಃ ಕುಮಾರಾ ಬಹುವಿಕ್ರಮಾಃ ।
ಅಹಂಪೂರ್ವಮಹಂಪೂರ್ವಮಿತ್ಯೇವಂ ಕ್ಷತ್ರಿಯರ್ಷಭಾಃ ॥೧೦॥

ದುರ್ಯೋಧನ, ಕರ್ಣ, ಮಹಾಬಲನಾದ ಯುಯುತ್ಸು, ದುಃಶಾಸನ, ವಿಕರ್ಣ, ಜಲಸಂಧ, ಸುಲೋಚನ ಇವರೂ, ಇನ್ನೂ ಅನೇಕ ವಿಕ್ರಮಶಾಲಿಗಳಾದ ರಾಜಕುಮಾರರೂ, ಕ್ಷತ್ರಿಯಶ್ರೇಷ್ಠರೂ 'ನಾನು ಮುಂದೆ, ನಾನು ಮುಂದೆ' ಎಂಬ ಭಾವನೆಯಿಂದ ಹೊರಟರು.

ತತೋ ವರರಥಾರೂಢಾಃ ಕುಮಾರಾಃ ಸಾದಿಭಿಃ ಸಹ ।
ಪ್ರವಿಶ್ಯ ನಗರಂ ಸರ್ವೇ ರಾಜಮಾರ್ಗಮುಪಾಯಯುಃ ॥೧೧॥

ಅನಂತರ ಶ್ರೇಷ್ಠವಾದ ರಥಗಳನ್ನು ಏರಿದ ಕುಮಾರರೆಲ್ಲರೂ ಅಶ್ವದಳದ ಜೊತೆಯಲ್ಲಿ ಪಾಂಚಾಲನಗರವನ್ನು ಪ್ರವೇಶಿಸಿ ರಾಜಮಾರ್ಗವನ್ನು ಸೇರಿದರು.

ತಸ್ಮಿನ್ ಕಾಲೇ ತು ಪಾಂಚಾಲಃ ಶ್ರುತ್ವಾ ದೃಷ್ಟ್ವಾ ಮಹದ್ಬಲಮ್ ।
ಭ್ರಾತೃಭಿಃ ಸಹಿತೋ ರಾಜನ್ ತ್ವರಯಾ ನಿರ್ಯಯೌ ಗೃಹಾತ್ ॥೧೨॥

ಎಲೈ ರಾಜನೇ, ಆ ಸಮಯದಲ್ಲಿ ಪಾಂಚಾಲರಾಜನಾದ ದ್ರುಪದನು ಈ ದೊಡ್ಡ ಸೈನ್ಯವನ್ನು ಕೇಳಿ ಮತ್ತು ನೋಡಿ ತನ್ನ ತಮ್ಮಂದಿರಿಂದ ಒಡಗೂಡಿ ಶೀಘ್ರವಾಗಿ ಅರಮನೆಯಿಂದ ಹೊರಗೆ ಬಂದನು.

ತತಸ್ತು ಕೃತಸನ್ನಾಹಾ ಯಜ್ಞಸೇನಸಹೋದರಾಃ ।
ಶರವರ್ಷಾಣಿ ಮುಂಚತಃ ಪ್ರಣೇದುಃ ಸರ್ವತೋದಿಶಮ್ ॥೧೩॥

ಆಗ ದ್ರುಪದರಾಜನಾದ ಯಜ್ಞಸೇನನ ಸಹೋದರರು ಯುದ್ಧಸನ್ನದ್ಧರಾಗಿ ಬಾಣಗಳ ಮಳೆಯನ್ನು ಕರೆಯುತ್ತಾ ಎಲ್ಲಾ ಕಡೆಯಲ್ಲಿಯೂ ಸಿಂಹನಾದವನ್ನು ಮಾಡಿದರು.

ತತೋ ರಥೇನ ಶುಭ್ರೇಣ ಸಮಾಸಾದ್ಯ ತು ಕೌರವಾನ್ ।
ಯಜ್ಞಸೇನಃ ಶರಾನ್ ಘೋರಾನ್ ವವರ್ಷ ಯುಧಿ ದುರ್ಜಯಃ॥೧೪॥

ಆಗ ಯುದ್ಧದಲ್ಲಿ ದುರ್ಜಯನಾದ ಯಜ್ಞಸೇನನು ಶುಭ್ರವಾದ ರಥವನ್ನು ಏರಿ ಕೌರವರನ್ನು ಸಮೀಪಿಸಿ ಅವರ ಮೇಲೆ ಉಗ್ರವಾದ ಬಾಣದ ಮಳೆಯನ್ನು ಕರೆದನು.

ಪೂರ್ವಮೇವ ತು ಸಮ್ಮಂತ್ರ್ಯ ಪಾರ್ಥೋ ದ್ರೋಣಮಥಾಽಬ್ರವೀತ್ ।
ದರ್ಪೋತ್ಸೇಕಃ ಕುಮಾರಾಣಾಮಾಚಾರ್ಯ ದ್ವಿಜಸತ್ತಮ ॥೧೫॥

ಏಷಾಂ ಪರಾಕ್ರಮಸ್ಯಾಂತೇ ವಯಂ ಕುರ್ಯಾಮ ಸಾಹಸಮ್ ।
ಏತೈರಶಕ್ಯಃ ಪಾಂಚಾಲೋ ಗ್ರಹೀತುಂ ರಣಮೂರ್ಧನಿ ॥೧೬॥

ಅರ್ಜುನನು ಮೊದಲೇ ದ್ರೋಣರನ್ನು ಸಂಧಿಸಿ ಹೀಗೆ ಹೇಳಿದ್ದನು. ಆಚಾರ್ಯರಾದ ಬ್ರಾಹ್ಮಣ ಶ್ರೇಷ್ಠರೇ, ಈ ಕುಮಾರರೆಲ್ಲರೂ ದರ್ಪದಿಂದ ಉಬ್ಬಿದ್ದಾರೆ.

ಇವರು ಯುದ್ಧದಲ್ಲಿ ಪಾಂಚಾಲರಾಜನನ್ನು ಹಿಡಿಯಲು ಸಮರ್ಥರಲ್ಲ. ಇವರ ವಿಕ್ರಮವು ಮುಗಿದ ಮೇಲೆ ನಾವು ಕಾರ್ಯವನ್ನು ಸಾಧಿಸುತ್ತೇವೆ.

ಏವಮುಕ್ತ್ವಾ ತು ಕೌಂತೇಯೋ ಭ್ರಾತೃಭಿಃ ಸಹಿತೋಽನಘಃ ।
ಅರ್ಧಕ್ರೋಶೇ ತು ನಗರಾದತಿಷ್ಠದ್ ಬಹಿರೇವ ಸಃ ॥೧೭೭॥

ಹೀಗೆ ಹೇಳಿ ಕುಂತಿಯ ಪುತ್ರನಾದ ಅರ್ಜುನನು ಅಣ್ಣತಮ್ಮಂದಿರಿಂದ ಸಹಿತನಾದ ನಗರದ ಹೊರಗೆ ಅರ್ಧಕ್ರೋಶ ದೂರದಲ್ಲಿಯೇ ನಿಂತನು.

ದ್ರುಪದಃ ಕೌರವಾನ್ ದೃಷ್ಟ್ವಾ ಪ್ರಧಾವತ ಸಮಂತತಃ ।
ಶರಜಾಲೇನ ಮಹತಾ ಮೋಹಯನ್ ಕೌರವೀಂ ಚಮೂಮ್ ॥೧೮೮॥

ದ್ರುಪದನು ಕೌರವರನ್ನು ನೋಡಿ ಅವರ ಸೈನ್ಯವನ್ನು ಶರಜಾಲದಿಂದ ಮರುಳುಗೊಳಿಸುತ್ತಾ ಎಲ್ಲಾ ಕಡೆ ಓಡಾಡಿದನು.

ತಮುದ್ಯಂತಂ ರಥೇನೈಕಮಾಶುಕಾರಿಣಮಾಹವೇ ।
ಅನೇಕಮಿತಿ ಸಂತ್ರಾಸಾನ್ಮೇನಿರೇ ಸರ್ವಕೌರವಾಃ ॥೧೯೯॥

ಯುದ್ಧದಲ್ಲಿ ಶೀಘ್ರತೆಯನ್ನು ಹೊಂದಿದ ಒಂದು ರಥದಲ್ಲಿ ಸಂಚರಿಸುವ ಅವನನ್ನು ಭಯಗ್ರಸ್ತರಾದ ಕೌರವರು ಅನೇಕರೆಂದು ಭಾವಿಸಿದರು.

ದ್ರುಪದಸ್ಯ ಶರಾ ಘೋರಾ ವಿಚೇರುಃ ಸರ್ವತೋದಿಶಮ್ ।
ತತಃ ಶಂಖಾಶ್ಚ ಭೇರ್ಯಶ್ಚ ಮೃದಂಗಾಶ್ಚ ಸಹಸ್ರಶಃ ॥೨೦೦॥

ಪ್ರಾವಾದ್ಯಂತ ಮಹಾರಾಜ ಪಾಂಚಾಲಾನಾಂ ನಿವೇಶನೇ ।
ಸಿಂಹನಾದಶ್ಚ ಸಂಜಜ್ಞೇ ಪಾಂಚಾಲಾನಾಂ ಮಹಾತ್ಮನಾಮ್ ॥೨೦೧॥

ದ್ರುಪದನ ಘೋರವಾದ ಬಾಣಗಳು ಎಲ್ಲಾ ದಿಕ್ಕುಗಳಲ್ಲಿಯೂ ಸಂಚರಿಸಿದವು. ಮಹಾರಾಜನೇ, ಆಗ ಪಾಂಚಾಲರಾಜನ ಮನೆಯಲ್ಲಿ ಶಂಖಭೇರಿಗಳು, ಮೃದಂಗ ಮೊದಲಾದ ವಾದ್ಯಗಳು ಸಹಸ್ರಸಂಖ್ಯೆಯಲ್ಲಿ ಮೊಳಗಿದವು. ಮಹಾತ್ಮರಾದ ಪಾಂಚಾಲರು ಸಿಂಹನಾದವನ್ನೂ ಮಾಡಿದರು.

ಧನುರ್ಜ್ಯಾತಲಶಬ್ದಶ್ಚ ಸಂಸ್ಪೃಶದ್ ಗಗನಂ ಮಹತ್ ।
ದುಃಶಾಸನೋ ವಿಕರ್ಣಶ್ಚ ಸುಬಾಹುರ್ದೀರ್ಘಲೋಚನಃ ।
ದುರ್ಯೋಧನಶ್ಚ ಸಂಕ್ರುದ್ಧಃ ಶರವರ್ಷೈರವಾಕಿರನ್ ॥೨೨॥

ಪಾಂಚಾಲರ ಧನುಸ್ಸಿನ ಹೆದೆಯ ಝೇಂಕಾರವು, ಹಸ್ತತಾಳದ ಆಸ್ಫೋಟನದ ಶಬ್ದಗಳು ಮುಗಿಲನ್ನು ಮುಟ್ಟಿದವು. ಆಗ ದುಃಶಾಸನ, ವಿಕರ್ಣ, ಸುಬಾಹು, ದೀರ್ಘಲೋಚನ, ದುರ್ಯೋಧನ ಇವರು ಕ್ರುದ್ಧರಾಗಿ ಪಾಂಚಾಲ ರಾಜನ ಮೇಲೆ ಬಾಣದ ಮಳೆಯನ್ನು ಸುರಿಸಿದರು.

ಸೋಽತಿವಿದ್ಧೋ ಮಹೇಷ್ವಾಸೈಃ ಪಾರ್ಷತೋ ಯುಧಿ ದುರ್ಜಯಃ ।
ವ್ಯಧಮತ್ ತಾನ್ಯನೀಕಾನಿ ತತ್ಕ್ಷಣಾದೇವ ಭಾರತ ॥೨೩॥

ಭಾರತನೇ, ಯುದ್ಧದಲ್ಲಿ ದುರ್ಜಯನಾದ ದ್ರುಪದನು ಮಹಾಧನುರ್ಧಾರಿಗಳಾದ ಕೌರವರಿಂದ ಹೀಗೆ ಅತಿಯಾಗಿ ಪೀಡಿಸಲ್ಪಟ್ಟರೂ ಆ ಕ್ಷಣದಲ್ಲಿಯೇ ಅವರ ಸೈನ್ಯವನ್ನು ಚದುರಿಸಿದನು.

ದುರ್ಯೋಧನಂ ವಿಕರ್ಣಂ ಚ ಕರ್ಣಂ ಚಾಪಿ ಮಹಾಬಲಮ್ ।
ನಾನಾನೃಪಸುತಾನ್ ವೀರಾನ್ ಸೈನ್ಯಾನಿ ವಿವಿಧಾನಿ ಚ ।
ಅಲಾತಚಕ್ರವತ್ ಸರ್ವಾಂಶ್ಚರನ್ ಬಾಣೈರತರ್ಪಯತ್ ॥೨೪॥

ಅಲಾತ ಚಕ್ರದಂತೆ ತಿರುಗುತ್ತಾ ದ್ರುಪದನು ದುರ್ಯೋಧನನನ್ನೂ, ವಿಕರ್ಣನನ್ನೂ, ಮಹಾಬಲನಾದ ಕರ್ಣನನ್ನೂ, ಅನೇಕ ರಾಜಕುಮಾರರನ್ನೂ. ವೀರರನ್ನೂ, ಅನೇಕ ಸೈನ್ಯಗಳನ್ನೂ ಬಾಣಗಳಿಂದ ಹೊಡೆದನು.

ಅಭಿದ್ರವತ ಕೌರವ್ಯಾನ್ ವರ್ಷಮಾಣಾ ಘನಾ ಇವ ।
ದುಃಶಾಸನಂ ಚ ದಶಭಿರ್ವಿಕರ್ಣಂ ವಿಂಶತ್ಯಾ ಶರೈಃ ॥೨೫॥

ದ್ರುಪದನು ಕೌರವರನ್ನು ಸಮೀಪಿಸಿ ಮಳೆಯನ್ನು ಸುರಿಸುವ ಮೋಡಗಳಂತೆ ದುಃಶಾಸನನನ್ನು ಹತ್ತು ಬಾಣಗಳಿಂದಲೂ, ವಿಕರ್ಣನನ್ನು ಇಪ್ಪತ್ತು ಬಾಣಗಳಿಂದಲೂ ಪೀಡಿಸಿದನು.

ಶಕುನಿಂ ವಿಂಶತ್ಯಾ ತೀಕ್ಷ್ಣೈರ್ದಶಭಿರ್ಮರ್ಮಭೇದಿಭಿಃ ।
ಕರ್ಣದುರ್ಯೋಧನೌ ಚೋಭೌ ಶರೈಃ ಸರ್ವಾಂಗಸಂಧಿಷು ॥೨೬॥

ಶಕುನಿಯನ್ನು ಇಪ್ಪತ್ತು ತೀಕ್ಷ್ಣವಾದ ಬಾಣಗಳಿಂದಲೂ, ಕರ್ಣ ದುರ್ಯೋಧನರನ್ನು ಎಲ್ಲಾ ಅಂಗಸಂಧಿಗಳಲ್ಲಿ ಮರ್ಮಭೇದಿಗಳಾದ ಹತ್ತು ಬಾಣಗಳಿಂದಲೂ ಪೀಡಿಸಿದನು.

ಅಷ್ಟಾವಿಂಶತಿಭಿಃ ಸರ್ವೈಃ ಪೃಥಕ್‌ಪೃಥಗರಿಂದಮಃ ।
ಸುಬಾಹುಂ ಪಂಚಭಿರ್ವಿದ್ಧ್ವಾ ತಥಾಽನ್ಯಾನ್ ವಿವಿಧೈಃ ಶರೈಃ ।
ವಿವ್ಯಾಧ ಸಹಸಾ ಭೂಯೋ ನನಾದ ಬಲವತ್ತರಮ್ ॥೨೭॥

ಉಳಿದ ರಾಜಕುಮಾರರುಗಳನ್ನು ಅರಿಂದಮನಾದ ದ್ರುಪದನು ಪ್ರತಿಯೊಬ್ಬರನ್ನೂ ಇಪ್ಪತ್ತೆಂಟು ಬಾಣಗಳಿಂದ ಪೀಡಿಸಿ, ಸುಬಾಹುವನ್ನು ಐದು ಬಾಣಗಳಿಂದ ಹೊಡೆದು ಉಳಿದವರನ್ನು ಅನೇಕ ಬಾಣಗಳಿಂದ ಪೀಡಿಸಿ ಇದ್ದಕ್ಕಿದ್ದಂತೆಯೇ ಬಲವತ್ತರವಾದ ಸಿಂಹನಾದವನ್ನು ಮಾಡಿದನು.

ವಿನದ್ಯ ಕೋಪಾತ್ ಪಾಂಚಾಲಃ ಸರ್ವಶಸ್ತ್ರಭೃತಾಂ ವರಃ ।
ಧನೂಂಷಿ ರಥಯಂತ್ರಂ ಚ ಹಯಾನ್ ಛತ್ರಧ್ವಜಾನಪಿ ।
ಚಕರ್ತ ಸರ್ವಪಾಂಚಾಲಾಃ ಪ್ರಣೇದುಃ ಸಿಂಹಸರ್ಪವತ್ ॥೨೮॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಪಾಂಚಾಲರಾಜನಾದ ದ್ರುಪದನು ಕೋಪದಿಂದ ಗರ್ಜಿಸಿ ಕೌರವರ ಧನುಸ್ಸುಗಳನ್ನೂ, ರಥಯಂತ್ರವನ್ನೂ, ಅಶ್ವಛತ್ರಧ್ವಜಗಳನ್ನೂ ಕತ್ತರಿಸಿದನು. ಎಲ್ಲಾ ಪಾಂಚಾಲರೂ ಸಿಂಹಗಳಂತೆ ಮತ್ತು ಸರ್ಪಗಳಂತೆ ಗರ್ಜಿಸಿದರು.

ತತಸ್ತು ನಾಗರಾಃ ಸರ್ವೇ ಮುಸಲೈರ್ಯಷ್ಟಿಭಿಸ್ತದಾ ।
ಅಭ್ಯದ್ರವಂತ ಕೌರವ್ಯಾನ್ ವರ್ಷಮಾಣಾ ಘನಾ ಇವ ।
ಸಬಾಲವೃದ್ಧಾಃ ಕಾಂಪಿಲ್ಯಾಃ ಕೌರವಾನಭ್ಯಯುಸ್ತದಾ ॥೨೯॥

ಅನಂತರ ನಗರವಾಸಿಗಳೆಲ್ಲರೂ ಒನಕೆ ಮತ್ತು ದೊಣ್ಣೆಗಳನ್ನು ತೆಗೆದುಕೊಂಡು ಕೌರವರಿಗೆ ಎದುರಾಗಿ ಬಂದು ಮಳೆಯನ್ನು ಸುರಿಸುವ ಮೋಡಗಳಂತೆ ಅವರ ಮೇಲೆ

ಪ್ರಹಾರ ಮಾಡಿದರು. ಆಗ, ಕಾಂಪಿಲ್ಯನಗರದ ಬಾಲಕರು ಮತ್ತು ವೃದ್ಧರೂ ಸಹ ಕೌರವರಿಗೆ ಯುದ್ಧದಲ್ಲಿ ಎದುರಾದರು. (ದ್ರುಪದರಾಜನ ಪುರಕ್ಕೆ ಕಂಪಿಲವೆಂದೂ, ಕಾಂಪಿಲ್ಯವೆಂದೂ ಹೆಸರು).

ದೃಷ್ಟ್ವಾ ತು ತುಮುಲಂ ಯುದ್ಧಂ ಪೌರೈರ್ಮಗ್ನಾಶ್ಚ ಭಾರತಾಃ ।
ದ್ರವಂತಿ ಸ್ಮ ನ ತಿಷ್ಠಂತಿ ಕ್ರೋಶಂತಃ ಪಾಂಡವಾನ್ ಪ್ರತಿ ॥೩೦॥

ಆ ಘೋರವಾದ ಯುದ್ಧವನ್ನು ನೋಡಿ ಪೌರರ ಪ್ರಹಾರಗಳಲ್ಲಿ ಮುಳುಗಿದ ಕೌರವರು ಅಲ್ಲಿ ನಿಲ್ಲದೇ, ಪಾಂಡವರ ಕಡೆಗೆ ಕಿರುಚುತ್ತಾ ಓಡಿದರು.

ಪಾಂಚಾಲಶರಭಿನ್ನಾಂಗೋ ಭಯಮಾಸಾದ್ಯ ವೈ ನೃಪ ।
ಕರ್ಣೋ ರಥಾದವಪ್ಲುತ್ಯ ಪಲಾಯನಪರೋಽಭವತ್ ॥೩೧॥

ಕರ್ಣನು ದ್ರುಪದನ ಬಾಣಗಳಿಂದ ಗಾಯಗೊಂಡು ಭಯವನ್ನು ಹೊಂದಿ ರಥದಿಂದ ಧುಮುಕಿ ಪಲಾಯನಪರನಾದನು.

ಪಾಂಡವಾಸ್ತು ಸ್ವನಂ ಶ್ರುತ್ವಾ ಆರ್ತಾನಾಂ ರೋಮಹರ್ಷಣಮ್ ।
ಅಭಿವಾದ್ಯ ತತೋ ದ್ರೋಣಂ ರಥಾನಾರುರುಹುಸ್ತದಾ ॥೩೨॥

ಪಾಂಡವರು ತಮ್ಮವರಾದ ಕೌರವರ ರೋಮಾಂಚಕಾರಿಯಾದ ಆರ್ತನಾದವನ್ನು ಕೇಳಿ, ದ್ರೋಣರಿಗೆ ನಮಸ್ಕರಿಸಿ ತಮ್ಮ ರಥಗಳನ್ನು ಏರಿದರು.

ಯುಧಿಷ್ಠಿರಂ ನಿವಾರ್ಯಾಶು ಮಾ ಯುದ್ಧಮಿತಿ ಪಾಂಡವ ।
ಮಾದ್ರೇಯೌ ಚಕ್ರರಕ್ಷೌ ತು ಫಲ್ಗುನಶ್ಚ ತದಾಽಕರೋತ್ ।
ಸೇನಾಗ್ರತೋ ಭೀಮಸೇನಸ್ತದಾಽಭೂದ್ ಗದಯಾ ಸಹ ॥೩೩॥

ಎಲೈ ಜನಮೇಜಯನೇ, ಯುಧಿಷ್ಠಿರನಿಗೆ ನೀನು ಯುದ್ಧ ಮಾಡುವುದು ಬೇಡ ಎಂದು ಹೇಳಿ ಅವನನ್ನು ನಿವಾರಿಸಿ ಅರ್ಜುನನು ನಕುಲಸಹದೇವರನ್ನು ತನ್ನ ಚಕ್ರರಕ್ಷಕರನ್ನಾಗಿ ಮಾಡಿಕೊಂಡನು. ಭೀಮಸೇನನು ಕೈಯಲ್ಲಿ ಗದೆಯನ್ನು ಹಿಡಿದು ಅರ್ಜುನನ ಮುಂದೆ ಹೊರಟನು.

ತದಾ ಶಂಖಧ್ವನಿಂ ಕೃತ್ವಾ ಭ್ರಾತೃಭಿಃ ಸಹಿತೋಽನಘಃ ।
ಅಯಾಜ್ಜವೇನ ಕೌಂತೇಯೋ ರಥಘೋಷೇಣ ನಾದಯನ್ ॥೩೪॥

ಆಗ, ಅಣ್ಣತಮ್ಮಂದಿರಿಂದ ಸಹಿತನಾದ ಅನಘನಾದ ಅರ್ಜುನನು ಶಂಖಧ್ವನಿಯನ್ನು ಮಾಡಿ ರಥಘೋಷವು ಎಲ್ಲೆಡೆಯಲ್ಲಿಯೂ ಕೇಳಿ ಬರುವಂತೆ ವೇಗದಿಂದ ಹೊರಟನು.

ಪಾಂಚಾಲಾನಾಂ ತತಃ ಸೇನಾಮುದ್ಧೂತಾರ್ಣವನಿಃಸ್ವನಾಮ್ ।
ಭೀಮಸೇನೋ ಮಹಾಬಾಹುರ್ದಂಡಪಾಣಿರಿವಾಂತಕಃ ॥೩೫॥

ಪ್ರವಿವೇಶ ಮಹಾಸೇನಾಂ ಮಕರಃ ಸಾಗರಂ ಯಥಾ ।
ಸ್ವಯಮಭ್ಯದ್ರವದ್ ಭೀಮೋ ನಾಗಾನೀಕಂ ಗದಾಧರಃ ॥೩೬॥

ಮಹಾಬಾಹುವಾದ ಭೀಮಸೇನನು ದಂಡಪಾಣಿಯಾದ ಯಮನಂತೆ ಪಾಂಚಾಲರ ಸಮುದ್ರದ ಘೋಷದಂತೆ ಮೊರೆಯುತ್ತಿದ್ದ ಆ ದೊಡ್ಡ ಸೈನ್ಯವನ್ನು ಮೊಸಳೆಯು ಸಾಗರವನ್ನು ಪ್ರವೇಶಿಸುವಂತೆ ಪ್ರವೇಶಿಸಿದನು. ಭೀಮನು ಕೈಯಲ್ಲಿ ಗದೆಯನ್ನು ಹಿಡಿದು ಗಜಾನೀಕಗಳ ಕಡೆ ತಾನೇ ಓಡಿದನು.

ಸುಯುದ್ಧಕುಶಲಃ ಪಾರ್ಥೋ ಬಾಹುವೀರ್ಯೇಣ ಚಾತುಲಃ ।
ವ್ಯಹನತ್ ಕುಂಜರಾನೀಕಂ ಗದಯಾ ಕಾಲರೂಪಧೃಕ್ ॥೩೭॥

ಯುದ್ಧದಲ್ಲಿ ಕುಶಲನೂ, ಬಾಹುವೀರ್ಯದಲ್ಲಿ ಅಸದೃಶನೂ ಆದ ಕುಂತಿಯ ಮಗನಾದ ಭೀಮನು ಮೃತ್ಯುವಿನ ರೂಪವನ್ನು ಧರಿಸಿದವನಂತೆ ಆನೆಗಳ ಹಿಂಡನ್ನು ಗದೆಯಿಂದ ಸಂಹಾರ ಮಾಡಿದನು.

ತೇ ಗಜಾ ಗಿರಿಸಂಕಾಶಾಃ ಗಿರಂತೋ ರುಧಿರಂ ಬಹು ।
ಭೀಮಸೇನಸ್ಯ ಗದಯಾ ಭಿನ್ನಮಸ್ತಕಪಿಂಡಕಾಃ ॥೩೮॥

ಪತಂತಿ ದ್ವಿರದಾ ಭೂಮೌ ವಜ್ರಘಾತಾದಿವಾಚಲಾಃ ।
ಗಜಾನಶ್ವಾನ್ ರಥಾಂಶ್ಚೈವ ಪಾತಯಾಮಾಸ ಪಾಂಡವಃ ॥೩೯॥

ಪರ್ವತದಂತಿರುವ ಆ ಆನೆಗಳಾದರೋ, ಭೀಮಸೇನನ ಗದಾಪ್ರಹಾರಕ್ಕೆ ಒಳಗಾಗಿ ತಲೆಗಳನ್ನೂ ಮತ್ತು ಶರೀರಗಳನ್ನೂ ಒಡೆದು ಕೊಂಡು ಬಹಳವಾಗಿ ರಕ್ತವನ್ನು ಸುರಿಸುತ್ತಾ, ವಜ್ರಾಯುಧದ ಪ್ರಹಾರದಿಂದ ಪರ್ವತಗಳು ಬಿದ್ದಂತೆ ಭೂಮಿಯಲ್ಲಿ ಕುಸಿದವು. ಭೀಮಸೇನನು ಹೀಗೆ ಗಜಗಳನ್ನೂ ಅಶ್ವಗಳನ್ನೂ ಮತ್ತು ರಥಗಳನ್ನೂ ಧ್ವಂಸ ಮಾಡಿದನು.

ಪದಾತೀನ್ ನಾಗರಾಂಶ್ಚೈವ ನಾವಧೀದರ್ಜುನಾಗ್ರಜಃ ।
ಗೋಪಾಲ ಇವ ದಂಡೇನ ಯಥಾ ಪಶುಗಣಾನ್ ವನೇ ।
ಚಾಲಯನ್ ರಥಾನಾಗಾಶ್ವಾನ್ ಸಂಚಚಾಲ ವೃಕೋದರಃ ॥೪೦॥

ದನಕಾಯುವವನು ಕೋಲಿನಿಂದ ಕಾಡಿನಲ್ಲಿ ಪಶುಗಳನ್ನು ನಡೆಸುವಂತೆ, ರಥಗಳನ್ನೂ, ಗಜಗಳನ್ನೂ ಮತ್ತು ಅಶ್ವಗಳನ್ನೂ ನಾಶಮಾಡಿದ ಅರ್ಜುನನ ಅಣ್ಣನಾದ ವೃಕೋದರನು ಪದಾತಿಗಳನ್ನಾಗಲೀ, ನಗರವಾಸಿಗಳನ್ನಾಗಲೀ ಕೊಲ್ಲಲಿಲ್ಲ. ಅವನು ಅಶ್ವಗಜರಥಗಳನ್ನು ಓಡಾಡಿಸುತ್ತಾ ಸಂಚರಿಸಿದನು.

ಭಾರದ್ವಾಜಪ್ರಿಯಂ ಕರ್ತುಮುದ್ಯತಃ ಫಲ್ಗುನಸ್ತದಾ ।
ಪಾರ್ಷತಂ ಶರಜಾಲೇನ ಕ್ಷಿಪ್ರಂ ಪ್ರಚ್ಛಾದ್ಯ ಪಾಂಡವಃ ॥೪೧॥

ಹಯೌಘಾಂಶ್ಚ ಗಜೌಘಾಂಶ್ಚ ರಥೌಘಾಂಶ್ಚ ಸಮಂತತಃ ।
ಪಾತಯನ್ ಸಮರೇ ರಾಜನ್ ಯುಗಾಂತಾಗ್ನಿರಿವ ಜ್ವಲನ್ ॥೪೨॥

ಅರ್ಜುನನು ಆಗ ದ್ರೋಣರಿಗೆ ಪ್ರಿಯವನ್ನು ಮಾಡಲು ಉದ್ಯುಕ್ತನಾಗಿ ದ್ರುಪದನನ್ನು ಶರಜಾಲದಿಂದ ಆಚ್ಛಾದಿಸಿ ಹಯಸಮೂಹಗಳನ್ನೂ, ಗಜಸಮೂಹಗಳನ್ನೂ, ರಥಸಮೂಹಗಳನ್ನೂ ಎಲ್ಲಾ ಕಡೆಯಲ್ಲಿಯೂ ನೆಲಕ್ಕೆ ಉರುಳಿಸುತ್ತಾ ಯುದ್ಧದಲ್ಲಿ ಯುಗಾಂತಕಾಲದ ಅಗ್ನಿಯಂತೆ ಜ್ವಲಿಸಿದನು.

ತತಸ್ತೇ ಹನ್ಯಮಾನಾ ವೈ ಪಾಂಚಾಲಾಃ ಸೃಂಜಯಾಸ್ತಥಾ ।
ಶರೈರ್ನಾನಾವಿಧೈಸ್ತೂರ್ಣಂ ಪಾರ್ಥಂ ಪ್ರಚ್ಛಾದ್ಯ ಸರ್ವಶಃ ।
ಸಿಂಹನಾದವರವಾನ್ ಕೃತ್ವಾ ಸಮಯುಧ್ಯಂತ ಪಾಂಡವಮ್ ॥೪೩॥

ಹೀಗೆ ಪಾರ್ಥನ ಪ್ರಹಾರಕ್ಕೆ ಒಳಗಾದ ಪಾಂಚಾಲರು ಮತ್ತು ಸೃಂಜಯರು ಅನೇಕ ವಿಧವಾದ ಬಾಣಗಳಿಂದ ಅರ್ಜುನನ್ನೂ ಎಲ್ಲಾ ಕಡೆಯಿಂದಲೂ ಆಚ್ಛಾದಿಸಿ ಸಿಂಹಗರ್ಜನೆಯನ್ನು ಮಾಡುತ್ತಾ ಅರ್ಜುನನೊಡನೆ ಯುದ್ಧವನ್ನು ಮಾಡಿದರು.

ತದ್ಯುದ್ಧಮಭವದ್ ಘೋರಂ ಸುಮಹಾದ್ಭುತದರ್ಶನಮ್ ।
ಸಿಂಹನಾದಸ್ವನಂ ಶ್ರುತ್ವಾ ನಾಮೃಷ್ಯತ ಧನಂಜಯಃ ॥೪೪॥

ಆ ಯುದ್ಧವು ಘೋರವಾಗಿದ್ದಿತು. ನೋಡಲು ಅತ್ಯಂತ ಅದ್ಭುತವಾಗಿಯೂ ಇದ್ದಿತು. ಪಾಂಚಾಲರ ಸಿಂಹನಾದವನ್ನು ಕೇಳಿದ ಅರ್ಜುನನು ಅದನ್ನು ಸಹಿಸಲಿಲ್ಲ.

ತತಃ ಕಿರೀಟೀ ಸಹಸಾ ಪಾಂಚಾಲಂ ಸಮಭಿದ್ರವತ್ ।
ಛಾದಯಿನ್ನಿಷುಜಾಲೇನ ಮಹತಾ ಮೋಹಯನ್ನಿವ ॥೪೫॥

ಆಗ ಕಿರೀಟಿಯು ಇದ್ದಕ್ಕಿದ್ದಂತೆಯೇ ಪಾಂಚಾಲರಾಜನನ್ನು ಸಮೀಪಿಸಿ ಶರಜಾಲದಿಂದ ಅವನನ್ನು ಮುಚ್ಚಿ ಅವನನ್ನು ಮರುಳು ಮಾಡಿದನು.

ಶೀಘ್ರಮಭ್ಯಸ್ಯತೋ ಬಾಣಾನ್ ಸಂದಧಾನಸ್ಯ ಚಾನಿಶಮ್ ।
ನಾಂತರಂ ದದೃಶೇ ಕಿಂಚಿತ್ ಕೌಂತೇಯಸ್ಯ ತರಸ್ವಿನಃ ॥೪೬॥

ವೇಗಶಾಲಿಯಾದ ಅರ್ಜುನನು ಬತ್ತಳಿಕೆಯಿಂದ ಬಾಣವನ್ನು ತೆಗೆಯುವುದಕ್ಕೂ, ಬಿಲ್ಲಿನಲ್ಲಿ ಹೂಡುವುದಕ್ಕೂ ಮತ್ತು ಬಿಲ್ಲಿನಿಂದ ಮೋಚನೆ ಮಾಡುವುದಕ್ಕೂ ಮಧ್ಯೆ ಅವಕಾಶವೇ ಕಾಣುತ್ತಿರಲಿಲ್ಲ

ನ ದಿಶೋ ನಾಂತರಿಕ್ಷಂ ಚ ತದಾ ನೈವ ಚ ಮೇದಿನೀ ।
ಅದೃಶ್ಯತ ಮಹಾರಾಜ ತತ್ರ ಕಿಂಚನ ಸಂಯುಗೇ ॥೪೭॥

ಮಹಾರಾಜನೇ, ಅರ್ಜುನನು ಬಾಣಪ್ರಯೋಗ ಮಾಡುವಾಗ ಯುದ್ಧದಲ್ಲಿ ಭೂಮಿಯಾಗಲೀ, ಅಂತರಿಕ್ಷವಾಗಲೀ ಕಾಣುತ್ತಿರಲಿಲ್ಲ.

ಬಾಣಾಂಧಕಾರೇ ಬಲಿನಾ ಕೃತೇ ಗಾಂಡೀವಧನ್ವನಾ ।
ಪಾಂಚಾಲಾನಾಂ ಕುರೂಣಾಂ ಚ ಸಾಧುಸಾಧ್ವಿತಿ ನಿಸ್ವನಃ ॥೪೮॥

ಗಾಂಡೀವಧನುಸ್ಸನ್ನು ಹೊಂದಿದ ಬಲಿಷ್ಠನಾದ ಅರ್ಜುನನು ಬಾಣಗಳಿಂದ ಅಂಧಕಾರವನ್ನು ಸೃಷ್ಟಿಸಲು ಪಾಂಚಾಲರು ಮತ್ತು ಕುರುಗಳು ''ಸಾಧು, ಸಾಧು'' ಎಂದು ಗಟ್ಟಿಯಾಗಿ ಕಿರುಚಿದರು.

ತತ್ರ ತೂರ್ಯನಿನಾದಶ್ಚ ಶಂಖಾನಾಂ ಚ ಮಹಾಸ್ವನಃ ।
ಸಿಂಹನಾದಶ್ಚ ಸಂಜಜ್ಞೇ ಸಾಟ್ಟಹಾಸೇನ ಮಿಶ್ರಿತಃ ॥೪೯॥

ಅಲ್ಲಿ ಅಟ್ಟಹಾಸದಿಂದ ಮಿಶ್ರಿತವಾದ ವಾದ್ಯಗಳ ನಾದವೂ ಶಂಖದ ಸ್ವನವೂ ಮತ್ತು ಸಿಂಹನಾದವೂ ಉಂಟಾಯಿತು.

ತತಃ ಪಾಂಚಾಲರಾಜಸ್ತು ತಥಾ ಸತ್ಯಜಿತಾ ಸಹ ।
ತ್ವರಮಾಣೋऽಭಿದುದ್ರಾವ ಮಹೇಂದ್ರಂ ಶಂಬರೋ ಯಥಾ ॥೫೦॥

ಆಗ ಪಾಂಚಾಲರಾಜನಾದ ದ್ರುಪದನು ತನ್ನ ತಮ್ಮನಾದ ಸತ್ಯಜಿತನೊಡನೆ ಶಂಬರನು ಮಹೇಂದ್ರನ ಕಡೆಗೆ ಧಾವಿಸಿದಂತೆ ಅರ್ಜುನನು ಇದ್ದ ಕಡೆಗೆ ಶೀಘ್ರವಾಗಿ ಧಾವಿಸಿ ಬಂದನು.

ಮಹತಾ ಶರಜಾಲೇನ ಪಾರ್ಥಃ ಪಾಂಚಾಲಮಾವೃಣೋತ್ ।
ತತೋ ಹಲಹಲಾಶಬ್ದ ಆಸೀತ್ ಪಾಂಚಾಲಕೇ ಬಲೇ ॥೫೧॥

ಅರ್ಜುನನು ದೊಡ್ಡ ಶರಜಾಲದಿಂದ ದ್ರುಪದನನ್ನು ಮುಚ್ಚಿದನು. ಆಗ ಪಾಂಚಾಲ ಸೈನ್ಯದಲ್ಲಿ ಕಳವಳದಿಂದ ಉಂಟಾದ ಹಲಹಲಾ ಶಬ್ದವು ಕೇಳಿ ಬಂದಿತು.

ಜಿಘೃಕ್ಷತಿ ಮಹಾಸಿಂಹೇ ಗಜಾನಾಮಿವ ಯೂಥಪಮ್ ।
ದೃಷ್ಟ್ವಾ ಪಾರ್ಥಂ ತದಾಯಾಂತಂ ಸತ್ಯಜಿತ್ ಸತ್ಯವಿಕ್ರಮಃ ।
ಪಾಂಚಾಲಂ ವೈ ಪರಿಪ್ರೇಪ್ಸುರ್ಧನಂಜಯಮಭಿದ್ರವತ್ ॥೫೨॥

ಮಹಾಸಿಂಹವು ಗಜರಾಜನನ್ನು ಹಿಡಿದಂತೆ ಅರ್ಜುನನು ಪಾಂಚಾಲರಾಜನನ್ನು ಹಿಡಿಯಲು ಬರುತ್ತಿರಲು ಸತ್ಯವಿಕ್ರಮನಾದ ಸತ್ಯಜಿತನು ಅದನ್ನು ನೋಡಿ, ತನ್ನ ಅಣ್ಣನನ್ನು ರಕ್ಷಿಸಲು ಬಯಸಿ, ಅರ್ಜುನನಿಗೆ ಎದುರಾಗಿ ಬಂದನು.

ತತಸ್ತ ವರ್ಜುನಪಾಂಚಾಲೌ ಯುದ್ಧಾಯ ಸಮುಪಾಗತೌ ।
ವ್ಯಕ್ಷೋಭಯೇತಾಂ ತೌ ಸೈನ್ಯಮಿಂದ್ರವೈರೋಚನಾವಿವ ॥೫೩॥

ಆಗ ಅರ್ಜುನ ಮತ್ತು ಸತ್ಯಜಿತರು ಇಬ್ಬರೂ ಯುದ್ಧಕ್ಕೆ ಸನ್ನದ್ಧರಾದ ಇಂದ್ರವೈರೋಚನರಂತೆ ಪರಸ್ಪರರ ಸೈನ್ಯವನ್ನು ಅಲ್ಲೋಲಕಲ್ಲೋಲ ಮಾಡಿದರು.

ತತಃ ಸತ್ಯಜಿತಂ ಪಾರ್ಥೋ ದಶಭಿರ್ಮರ್ಮಭೇದಿಭಿಃ ।
ವಿವ್ಯಾಧ ಬಲವದ್ ರಾಜನ್ ತದದ್ಭುತಮಿವಾಭವತ್ ॥೫೪॥

ರಾಜನೇ, ಅನಂತರ ಅರ್ಜುನನು ಸತ್ಯಜಿತನನ್ನು ಮರ್ಮಭೇದಿಗಳಾದ ಹತ್ತುಬಾಣಗಳಿಂದ ಬಲವಾಗಿ ಹೊಡೆದನು. ಆ ದೃಶ್ಯವು ಅದ್ಭುತವಾಗಿದ್ದಿತು.

ತತಃ ಶರಶತೈಃ ಪಾರ್ಥಂ ಪಾಂಚಾಲಃ ಶೀಘ್ರಮಾರ್ದಯತ್ ।
ಪಾರ್ಥಸ್ತು ಶರವರ್ಷೇಣ ಚ್ಛಾದ್ಯಮಾನೋ ಮಹಾರಥಃ ।
ವೇಗಂ ಚಕ್ರೇ ಮಹಾವೇಗೋ ಧನುಜ್ಯಾಮವಮೃಜ್ಯ ಚ ॥೫೫॥

ಆಗ ಪಾಂಚಾಲರಾಜನು ಅರ್ಜುನನನ್ನು ನೂರುಬಾಣಗಳಿಂದ ಶೀಘ್ರವಾಗಿ ಪೀಡಿಸಿದನು. ಮಹಾರಥನಾದ ಅರ್ಜುನನು ಆ ಶರವರ್ಷದಿಂದ ಮುಚ್ಚಲ್ಪಟ್ಟವನಾಗಿ ಧನುಸ್ಸಿನ ಹೆದೆಯನ್ನು ಸವರಿ ಮಹಾವೇಗವನ್ನು ಉಂಟು ಮಾಡಿದನು.

ತತಃ ಸತ್ಯಜಿತಶ್ಚಾಪಂ ಛಿತ್ತ್ವಾ ರಾಜಾನಮಭ್ಯಯಾತ್ ।
ಅಥಾನ್ಯದ್ಧನುರಾದಾಯ ಸತ್ಯಜಿದ್ ವೇಗವತ್ತರಮ್ ॥೫೬॥

ಸಾಶ್ವಂ ಸಸೂತಂ ಸರಥಂ ಪಾರ್ಥಂ ವಿವ್ಯಾಧ ಸತ್ವರಮ್ ।
ಸ ತಂ ನ ಮಮೃಷೇ ಪಾರ್ಥಃ ಪಾಂಚಾಲೇನಾರ್ದಿತೋ ಮೃಧೇ ॥೫೭॥

ಅನಂತರ, ಸತ್ಯಜಿತನ ಧನುಸ್ಸನ್ನು ಕತ್ತರಿಸಿ ದ್ರುಪದನ ಕಡೆಗೆ ಹೊರಟನು. ಆಗ ಸತ್ಯಜಿತನು ಇನ್ನೊಂದು ವೇಗವುಳ್ಳ ಧನುಸ್ಸನ್ನು ತೆಗೆದುಕೊಂಡು ಅರ್ಜುನನ ರಥದ ಅಶ್ವಗಳನ್ನು ಮತ್ತು ಸೂತನನ್ನು ಮತ್ತು ರಥಸಹಿತವಾದ ಅರ್ಜುನನನ್ನು ಶೀಘ್ರವಾಗಿ ಬಾಣಗಳಿಂದ ಪೀಡಿಸಿದನು.

ತತಸ್ತಸ್ಯ ವಿನಾಶಾರ್ಥಂ ಸತ್ವರಂ ವ್ಯಸೃಜಚ್ಛರಾನ್ ।
ಹಯಾನ್ ಧ್ವಜಂ ಧನುರ್ಮುಷ್ಟಿಮುಭೌ ತೌ ಪಾರ್ಷ್ಣಿಸಾರಥೀ ॥೫೮॥

ಯುದ್ಧದಲ್ಲಿ ಸತ್ಯಜಿತನಿಂದ ಪ್ರಹಾರಕ್ಕೆ ಒಳಗಾದ ಅರ್ಜುನನು ಅದನ್ನು ಸಹಿಸಲಿಲ್ಲ. ಅವನ ವಿನಾಶಕ್ಕೋಸ್ಕರ ಕ್ಷಿಪ್ರವಾದ ಶರಗಳನ್ನು ಪ್ರಯೋಗ ಮಾಡಿ ಅವನ ರಥದ

ಗಾಂಡೀವಧನುಸ್ಸನ್ನು ಹೊಂದಿದ ಬಲಿಷ್ಠನಾದ ಅರ್ಜುನನು ಬಾಣಗಳಿಂದ ಅಂಧಕಾರವನ್ನು ಸೃಷ್ಟಿಸಲು ಪಾಂಚಾಲರು ಮತ್ತು ಕುರುಗಳು ''ಸಾಧು, ಸಾಧು'' ಎಂದು ಗಟ್ಟಿಯಾಗಿ ಕಿರುಚಿದರು.

ತತ್ರ ತೂರ್ಯನಿನಾದಶ್ಚ ಶಂಖಾನಾಂ ಚ ಮಹಾಸ್ವನಃ ।
ಸಿಂಹನಾದಶ್ಚ ಸಂಜಜ್ಞೇ ಸಾಟ್ಟಹಾಸೇನ ಮಿಶ್ರಿತಃ ॥೪೯॥

ಅಲ್ಲಿ ಅಟ್ಟಹಾಸದಿಂದ ಮಿಶ್ರಿತವಾದ ವಾದ್ಯಗಳ ನಾದವೂ ಶಂಖದ ಸ್ವನವೂ ಮತ್ತು ಸಿಂಹನಾದವೂ ಉಂಟಾಯಿತು.

ತತಃ ಪಾಂಚಾಲರಾಜಸ್ತು ತಥಾ ಸತ್ಯಜಿತಾ ಸಹ ।
ತ್ವರಮಾಣೋऽಭಿದುದ್ರಾವ ಮಹೇಂದ್ರಂ ಶಂಬರೋ ಯಥಾ ॥೫೦॥

ಆಗ ಪಾಂಚಾಲರಾಜನಾದ ದ್ರುಪದನು ತನ್ನ ತಮ್ಮನಾದ ಸತ್ಯಜಿತನೊಡನೆ ಶಂಬರನು ಮಹೇಂದ್ರನ ಕಡೆಗೆ ಧಾವಿಸಿದಂತೆ ಅರ್ಜುನನು ಇದ್ದ ಕಡೆಗೆ ಶೀಘ್ರವಾಗಿ ಧಾವಿಸಿ ಬಂದನು.

ಮಹತಾ ಶರಜಾಲೇನ ಪಾರ್ಥಃ ಪಾಂಚಾಲಮಾವೃಣೋತ್ ।
ತತೋ ಹಲಹಲಾಶಬ್ದ ಆಸೀತ್ ಪಾಂಚಾಲಕೇ ಬಲೇ ॥೫೧॥

ಅರ್ಜುನನು ದೊಡ್ಡ ಶರಜಾಲದಿಂದ ದ್ರುಪದನನ್ನು ಮುಚ್ಚಿದನು. ಆಗ ಪಾಂಚಾಲ ಸೈನ್ಯದಲ್ಲಿ ಕಳವಳದಿಂದ ಉಂಟಾದ ಹಲಹಲಾ ಶಬ್ದವು ಕೇಳಿ ಬಂದಿತು.

ಜಿಘೃಕ್ಷತಿ ಮಹಾಸಿಂಹೇ ಗಜಾನಾಮಿವ ಯೂಥಪಮ್ ।
ದೃಷ್ಟ್ವಾ ಪಾರ್ಥಂ ತದಾಯಾಂತಂ ಸತ್ಯಜಿತ್ ಸತ್ಯವಿಕ್ರಮಃ ।
ಪಾಂಚಾಲಂ ವೈ ಪರಿಪ್ರೇಪ್ಸುರ್ಧನಂಜಯಮಭಿದ್ರವತ್ ॥೫೨॥

ಮಹಾಸಿಂಹವು ಗಜರಾಜನನ್ನು ಹಿಡಿದಂತೆ ಅರ್ಜುನನು ಪಾಂಚಾಲರಾಜನನ್ನು ಹಿಡಿಯಲು ಬರುತ್ತಿರಲು ಸತ್ಯವಿಕ್ರಮನಾದ ಸತ್ಯಜಿತನು ಅದನ್ನು ನೋಡಿ, ತನ್ನ ಅಣ್ಣನನ್ನು ರಕ್ಷಿಸಲು ಬಯಸಿ, ಅರ್ಜುನನಿಗೆ ಎದುರಾಗಿ ಬಂದನು.

ತತಸ್ತ ಾರ್ಜುನಪಾಂಚಾಲೌ ಯುದ್ಧಾಯ ಸಮುಪಾಗತೌ ।
ವ್ಯಕ್ಷೋಭಯೇತಾಂ ತೌ ಸೈನ್ಯಮಿಂದ್ರವೈರೋಚನಾವಿವ ॥೫೩॥

ಆಗ ಅರ್ಜುನ ಮತ್ತು ಸತ್ಯಜಿತರು ಇಬ್ಬರೂ ಯುದ್ಧಕ್ಕೆ ಸನ್ನದ್ಧರಾದ ಇಂದ್ರವೈರೋಚನರಂತೆ ಪರಸ್ಪರರ ಸೈನ್ಯವನ್ನು ಅಲ್ಲೋಲಕಲ್ಲೋಲ ಮಾಡಿದರು.

ತತಃ ಸತ್ಯಜಿತಂ ಪಾರ್ಥೋ ದಶಭಿರ್ಮರ್ಮಭೇದಿಭಿಃ ।
ವಿವ್ಯಾಧ ಬಲವದ್ ರಾಜನ್ ತದದ್ಭುತಮಿವಾಭವತ್ ॥೫೪॥

ರಾಜನೇ, ಅನಂತರ ಅರ್ಜುನನು ಸತ್ಯಜಿತನನ್ನು ಮರ್ಮಭೇದಿಗಳಾದ ಹತ್ತುಬಾಣಗಳಿಂದ ಬಲವಾಗಿ ಹೊಡೆದನು. ಆ ದೃಶ್ಯವು ಅದ್ಭುತವಾಗಿದ್ದಿತು.

ತತಃ ಶರಶತೈಃ ಪಾರ್ಥಂ ಪಾಂಚಾಲಃ ಶೀಘ್ರಮಾರ್ದಯತ್ ।
ಪಾರ್ಥಸ್ತು ಶರವರ್ಷೇಣ ಚ್ಛಾದ್ಯಮಾನೋ ಮಹಾರಥಃ ।
ವೇಗಂ ಚಕ್ರೇ ಮಹಾವೇಗೋ ಧನುರ್ಜ್ಯಾಮವಮೃಜ್ಯ ಚ ॥೫೫॥

ಆಗ ಪಾಂಚಾಲರಾಜನು ಅರ್ಜುನನನ್ನು ನೂರುಬಾಣಗಳಿಂದ ಶೀಘ್ರವಾಗಿ ಪೀಡಿಸಿದನು. ಮಹಾರಥನಾದ ಅರ್ಜುನನು ಆ ಶರವರ್ಷದಿಂದ ಮುಚ್ಚಲ್ಪಟ್ಟವನಾಗಿ ಧನುಸ್ಸಿನ ಹೆದೆಯನ್ನು ಸವರಿ ಮಹಾವೇಗವನ್ನು ಉಂಟು ಮಾಡಿದನು.

ತತಃ ಸತ್ಯಜಿತಶ್ಚಾಪಂ ಛಿತ್ತ್ವಾ ರಾಜಾನಮಭ್ಯಯಾತ್ ।
ಅಥಾನ್ಯದ್ಧನುರಾದಾಯ ಸತ್ಯಜಿದ್ ವೇಗವತ್ತರಮ್ ॥೫೬॥

ಸಾಶ್ವಂ ಸಸೂತಂ ಸರಥಂ ಪಾರ್ಥಂ ವಿವ್ಯಾಧ ಸತ್ವರಮ್ ।
ಸ ತಂ ನ ಮಮೃಷೇ ಪಾರ್ಥಃ ಪಾಂಚಾಲೇನಾರ್ದಿತೋ ಮೃಧೇ ॥೫೭॥

ಅನಂತರ, ಸತ್ಯಜಿತನ ಧನುಸ್ಸನ್ನು ಕತ್ತರಿಸಿ ದ್ರುಪದನ ಕಡೆಗೆ ಹೊರಟನು. ಆಗ ಸತ್ಯಜಿತನು ಇನ್ನೊಂದು ವೇಗವುಳ್ಳ ಧನುಸ್ಸನ್ನು ತೆಗೆದುಕೊಂಡು ಅರ್ಜುನನ ರಥದ ಅಶ್ವಗಳನ್ನು ಮತ್ತು ಸೂತನನ್ನು ಮತ್ತು ರಥಸಹಿತವಾದ ಅರ್ಜುನನನ್ನು ಶೀಘ್ರವಾಗಿ ಬಾಣಗಳಿಂದ ಪೀಡಿಸಿದನು.

ತತಸ್ತಸ್ಯ ವಿನಾಶಾರ್ಥಂ ಸತ್ವರಂ ವ್ಯಸೃಜಚ್ಛರಾನ್ ।
ಹಯಾನ್ ಧ್ವಜಂ ಧನುರ್ಮುಷ್ಟಿಮುಭೌ ತೌ ಪಾರ್ಷ್ಣಿಸಾರಥೀ ॥೫೮॥

ಯುದ್ಧದಲ್ಲಿ ಸತ್ಯಜಿತನಿಂದ ಪ್ರಹಾರಕ್ಕೆ ಒಳಗಾದ ಅರ್ಜುನನು ಅದನ್ನು ಸಹಿಸಲಿಲ್ಲ. ಅವನ ವಿನಾಶಕ್ಕೋಸ್ಕರ ಕ್ಷಿಪ್ರವಾದ ಶರಗಳನ್ನು ಪ್ರಯೋಗ ಮಾಡಿ ಅವನ ರಥದ

ಕುದುರೆಗಳನ್ನೂ, ಧ್ವಜವನ್ನೂ, ಪಾರ್ಷ್ಣಿ ಸಾರಥಿಗಳನ್ನೂ ಸಂಹರಿಸಿ ಧನುಸ್ಸನ್ನು ಕತ್ತರಿಸಿದನು.

ಸ ತಥಾ ಭಿದ್ಯಮಾನೇಷು ಕಾರ್ಮುಕೇಷು ಪುನಃಪುನಃ ।
ಹಯೇಷು ವಿನಿಕೃತ್ತೇಷು ವಿಮುಖೋಽಭವದಾಹವೇ ॥೫೯॥

ಸತ್ಯಜಿತನು ತನ್ನ ಧನುಸ್ಸುಗಳು ಮತ್ತು ಕುದುರೆಗಳು ಮತ್ತೆ ಮತ್ತೆ ಕತ್ತರಿಸಲ್ಪಡುತ್ತಿರಲು ಯುದ್ಧದಲ್ಲಿ ವಿಮುಖನಾದನು.

ಸ ಸತ್ಯಜಿತಮಾಲೋಕ್ಯ ತಥಾ ವಿಮುಖಮಾಹವೇ ।
ವೇಗೇನ ಮಹತಾ ರಾಜನ್ನಭ್ಯಧಾವತ ಪಾರ್ಷತಮ್ ॥೬೦॥

ಸತ್ಯಜಿತನು ಯುದ್ಧದಲ್ಲಿ ವಿಮುಖನಾದುದನ್ನು ನೋಡಿ ಅರ್ಜುನನು ಮಹಾವೇಗದಿಂದ ದ್ರುಪದನ ಕಡೆಗೆ ಧಾವಿಸಿದನು.

ತದಾ ಚಕ್ರೇ ಮಹದ್ಯುದ್ಧಮರ್ಜುನೋ ಜಯತಾಂ ವರಃ ।
ತಸ್ಯ ಪಾರ್ಥೋ ಧ್ವಜಂ ಚಿತ್ರಂ ಧನುಶ್ಚೋರ್ವ್ಯಾಮಪಾತಯತ್ ॥೬೧॥

ಜಯಶೀಲರಲ್ಲಿ ಶ್ರೇಷ್ಠನಾದ ಅರ್ಜುನನು ದ್ರುಪದನ ಜೊತೆಯಲ್ಲಿ ದೊಡ್ಡ ಯುದ್ಧವನ್ನು ಮಾಡಿ ಅವನ ವಿಚಿತ್ರವಾದ ಧ್ವಜವನ್ನು ಮತ್ತು ಧನುಸ್ಸನ್ನು ನೆಲಕ್ಕೆ ಉರುಳಿಸಿದನು.

ಪಂಚಭಿಸ್ತಸ್ಯ ವಿವ್ಯಾಧ ಹಯಾನ್ ಸೂತಂ ಚ ಸಾಯಕೈಃ ।
ತತ ಉತ್ಸೃಜ್ಯ ತಚ್ಚಾಪಮಾದದಾನಃ ಶರಾವರಮ್ ॥೬೨॥

ಖಡ್ಗಮುದ್ಯಮ್ಯ ಕೌಂತೇಯಃ ಸಿಂಹನಾದಮಥಾಕರೋತ್ ।
ಪಾಂಚಾಲರಥಮಾಸ್ಥಾಯ ಅವಿತ್ರಸ್ತೋ ಧನಂಜಯಃ ॥೬೩॥

ಅವನ ರಥದ ಅಶ್ವಗಳನ್ನೂ ಮತ್ತು ಸೂತನನ್ನೂ ಐದೈದು ಬಾಣಗಳಿಂದ ಪೀಡಿಸಿ ಅರ್ಜುನನು ಧನುಸ್ಸನ್ನು ಬಿಟ್ಟು ಖಡ್ಗಚರ್ಮಗಳನ್ನು ಹಿಡಿದು ಸಿಂಹನಾದವನ್ನು ಮಾಡಿದನು.

ಪಾಂಚಾಲಸ್ಯ ರಥಸ್ಯೈಷಾಮಾಪ್ಲುತ್ಯ ಸಹಸಾ ಬಲೀ ।
ವಿಕ್ಷೋಭ್ಯಾಂಭೋನಿಧಿಂ ತಾರ್ಕ್ಷ್ಯಸ್ತಂ ನಾಗಮಿವ ಸೋಽಗ್ರಹೀತ್॥೬೪॥

ಅರ್ಜುನನು ಯಾವ ಹೆದರಿಕೆಯೂ ಇಲ್ಲದೇ, ಪಾಂಚಾಲ ರಾಜನ ರಥದ ಈಷಾದಂಡದ ಮೇಲೆ ಹಾರಿ ಸಮುದ್ರವನ್ನು ಅಲ್ಲೋಲಕಲ್ಲೋಲ ಮಾಡಿ ಗರುಡನು ಸರ್ಪವನ್ನು ಹಿಡಿಯುವಂತೆ ದ್ರುಪದರಾಜನನ್ನು ಹಿಡಿದನು.

ತತಸ್ತು ಸರ್ವಪಾಂಚಾಲಾ ವಿದ್ರವಂತಿ ದಿಶೋ ದಶ ।
ದರ್ಶಯನ್ ಸರ್ವಸೈನ್ಯಾನಾಂ ಬಾಹ್ವೋರ್ಬಲಮಥಾತ್ಮನಃ ॥೬೫॥

ಸಿಂಹನಾದಸ್ವನಂ ಕೃತ್ವಾ ನಿರ್ಜಗಾಮ ಧನಂಜಯಃ ।
ಆಯಾಂತಮರ್ಜುನಂ ದೃಷ್ಟ್ವಾ ಕುಮಾರಾಃ ಸಹಿತಾಸ್ತದಾ ।
ಮಮೃದುಸ್ತಸ್ಯ ನಗರಂ ದ್ರುಪದಸ್ಯ ಮಹಾತ್ಮನಃ ॥೬೬॥

ಆಗ ಎಲ್ಲಾ ಪಾಂಚಾಲರೂ ದಿಕ್ಕುದಿಕ್ಕುಗಳಿಗೆ ಓಡಿದರು. ಅರ್ಜುನನು ಎಲ್ಲಾ ಸೈನ್ಯಗಳಿಗೂ ತನ್ನ ಬಾಹುಬಲವನ್ನು ತೋರಿಸಿ ಸಿಂಹನಾದವನ್ನು ಮಾಡಿ ದ್ರುಪದನನ್ನು ಎತ್ತಿಕೊಂಡು ತನ್ನ ರಥಕ್ಕೆ ಹಿಂದಿರುಗಿದನು. ಹಿಂದಿರುಗುತ್ತಿರುವ ಅರ್ಜುನನನ್ನು ನೋಡಿ ಎಲ್ಲಾ ಕುಮಾರರೂ ಒಟ್ಟಿಗೆ ಸೇರಿ ಮಹಾತ್ಮನಾದ ದ್ರುಪದನಗರವನ್ನು ಭಗ್ನಗೊಳಿಸಿದರು.

ಅರ್ಜುನಃ

ಸಂಬಂಧೀ ಕುರುವೀರಾಣಾಂ ದ್ರುಪದೋ ರಾಜಸತ್ತಮಃ ।
ಮಾ ವಧೀಸ್ತದ್ಬಲಂ ಭೀಮ ಗುರುದಾನಂ ಪ್ರದೀಯತಾಮ್ ॥೬೭॥

ರಾಜಶ್ರೇಷ್ಠನಾದ ದ್ರುಪದನು ಕುರುವೀರರಿಗೆ ಸಂಬಂಧಿಯಾದವನು (ಮತ್ತು ಪಾಂಡುವಿಗೆ ಅತಿ ಪ್ರಿಯನಾದವನು). ಭೀಮಸೇನನೇ, ಅವನ ಸೈನ್ಯವನ್ನು ಕೊಲ್ಲಬೇಡ. ನಾವು ಗುರುದಕ್ಷಿಣೆ ಮಾತ್ರ ಕೊಡೋಣ.

ವೈಶಂಪಾಯನಃ

ಭೀಮಸೇನಸ್ತದಾ ರಾಜನ್ನರ್ಜುನೇನ ನಿವಾರಿತಃ ।
ಅತೃಪ್ತೋ ಯುದ್ಧಧರ್ಮೇಷು ನ್ಯವರ್ತತ ಮಹಾರಥಃ ॥೬೮॥

ಮಹಾರಥನಾದ ಭೀಮಸೇನನು ಅರ್ಜುನನ ಮಾತುಗಳನ್ನು ಕೇಳಿ, ಯುದ್ಧದಲ್ಲಿ ತೃಪ್ತಿಯನ್ನು ಪಡೆಯದಿದ್ದರೂ ಅರ್ಜುನನ ಮಾತಿನಂತೆ ಹಿಂದೆ ಸರಿದನು.

ತೇ ಯಜ್ಞಸೇನಂ ದ್ರುಪದಂ ಗೃಹೀತ್ವಾ ರಣಮೂರ್ಧನಿ ।
ಉಪಜಹ್ರುಃ ಸಹಾಮಾತ್ಯಂ ದ್ರೋಣಾಯ ಭರತರ್ಷಭಾಃ ॥೬೯॥

ಆ ಭರತಶ್ರೇಷ್ಠರು ಘೋರವಾದ ಯುದ್ಧದಲ್ಲಿ ಪಾಂಚಾಲರಾಜನಾದ ಯಜ್ಞಸೇನನನ್ನು ಅವನ ಮಂತ್ರಿಗಳ ಜೊತೆಯಲ್ಲಿ ಬಂಧಿಸಿ ದ್ರೋಣರ ಸಮೀಪಕ್ಕೆ ಕರೆ ತಂದರು.

ಭಗ್ನದರ್ಪಂ ಹೃತಧನಂ ತಥಾ ವಶಮುಪಾಗತಮ್ ।
ಸ ವೈರಂ ಮನಸಾ ಧ್ಯಾತ್ವಾ ದ್ರೋಣೋ ದ್ರುಪದಮಬ್ರವೀತ್ ॥೭೦॥

ತನ್ನ ದರ್ಪವನ್ನೂ ಮತ್ತು ಧನವನ್ನೂ ಕಳೆದುಕೊಂಡು ತನಗೆ ವಶವಾದ ದ್ರುಪದನನ್ನು ಕುರಿತು ಹಿಂದಿನ ವೈರವನ್ನು ಮನಸ್ಸಿನಲ್ಲಿಯೇ ಚಿಂತಿಸುತ್ತಾ ದ್ರೋಣರು ಮಾತನಾಡಿದರು.

ಪ್ರಮೃಜ್ಯ ತರಸಾ ರಾಷ್ಟ್ರಂ ಪುರಂ ತೇ ಮೃದಿತಂ ಮಯಾ ।
ಪ್ರಾಪ್ಯ ಜೀವನ್ ರಿಪುವಶಂ ಸಖಿಪೂರ್ವಂ ಕಿಮಿಷ್ಯತೇ ॥೭೧॥

ನನ್ನ ಬಲದಿಂದ ನಿನ್ನ ರಾಷ್ಟ್ರವನ್ನು ಮತ್ತು ನಗರವನ್ನು ಭಗ್ನಗೊಳಿಸಿದ್ದೇನೆ. ಶತ್ರುವಶನಾಗಿ ಬದುಕಿರುವ ನೀನು ಪೂರ್ವಸ್ನೇಹವನ್ನೂ ಬಯಸುತ್ತೀಯಾ?

ವೈಶಂಪಾಯನಃ

ಏವಮುಕ್ತ್ವಾ ಪ್ರಹಸ್ಯೈನಂ ನಿಶ್ಚಿತ್ಯ ಪುನರಬ್ರವೀತ್ ।
ಮಾ ಭೈಃ ಪ್ರಾಣಭಯಾದ್ ರಾಜನ್ ಕ್ಷಮಿಣೋ ಬ್ರಾಹ್ಮಣಾ ವಯಮ್ ॥

ಹೀಗೆ ಮಾತನಾಡಿ ಅವನನ್ನು ಹಾಸ್ಯ ಮಾಡಿ ಏನು ಮಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿ ದ್ರೋಣರು ಪುನಃ ಮಾತನಾಡಿದರು. ರಾಜನೇ ಪ್ರಾಣಭಯದಿಂದ ಹೆದರಬೇಡ. ನಾವು ಕ್ಷಮಾಶೀಲರಾದ ಬ್ರಾಹ್ಮಣರು.

ಆಶ್ರಮೇ ಕ್ರೀಡಿತಂ ಯತ್ ತು ತ್ವಯಾ ಬಾಲ್ಯೇ ಮಯಾ ಸಹ ।
ತೇನ ಸಂವರ್ಧಿತೋ ಹರ್ಷಸ್ತ್ವಯಾ ಮೇ ಕ್ಷತ್ರಿಯರ್ಷಭ ॥೭೩॥

ಕ್ಷತ್ರಿಯಶ್ರೇಷ್ಠನೇ, ಬಾಲ್ಯದಲ್ಲಿ ನೀನು ಆಶ್ರಮದಲ್ಲಿ ನನ್ನ ಜೊತೆಯಲ್ಲಿ ಆಟವಾಡಿ ಬಹಳ ಹೆಚ್ಚಿನ ಸಂತೋಷವನ್ನುಂಟು ಮಾಡಿದೆ.

ಪ್ರಾರ್ಥಯೇಽಹಂ ತ್ವಯಾ ಸಖ್ಯಂ ಪುನರೇವ ನರೇಶ್ವರ ।
ವರಂ ದದಾಮಿ ತೇ ರಾಜನ್ ರಾಜ್ಯಸ್ಯಾರ್ಧಮವಾಪ್ನುಹಿ ॥೭೪॥

ರಾಜನೇ, ನಾನು ಪುನಃ ನಿನ್ನ ಜೊತೆಯಲ್ಲಿ ಸಖ್ಯವನ್ನೇ ಬಯಸುತ್ತೇನೆ. ರಾಜನೇ, ನಿನಗೆ ವರವನ್ನು ಕೊಡುತ್ತೇನೆ. ನೀನು ಅರ್ಧರಾಜ್ಯವನ್ನು ತೆಗೆದುಕೋ.

ಅರಾಜಾ ಕಿಲ ನೋ ರಾಜ್ಞಃ ಸಖಾ ಭವಿತುಮರ್ಹತಿ ।
ಅತಃ ಪ್ರಯತಿತಂ ರಾಜ್ಯೇ ಯಜ್ಞಸೇನ ಮಯಾ ತವ ॥೭೫॥

ರಾಜನಲ್ಲದವನು ರಾಜನಿಗೆ ಸ್ನೇಹಿತನಾಗಲು ಯೋಗ್ಯನಲ್ಲವಷ್ಟೆ ಯಜ್ಞಸೇನನೇ, ಅದಕ್ಕಾಗಿ ನಾನು ನಿನ್ನ ರಾಜ್ಯವನ್ನು ಸಂಪಾದಿಸಲು ಪ್ರಯತ್ನವನ್ನು ಮಾಡಿದೆ.

ರಾಜಾಽಸಿ ದಕ್ಷಿಣೇ ಕೂಲೇ ಭಾಗೀರಥ್ಯಾಽಹಮುತ್ತರೇ ।
ಸಖಾಯಂ ಮಾಂ ವಿಜಾನೀಹಿ ಪಾಂಚಾಲ ಯದಿ ಮನ್ಯಸೇ ॥೭೬॥

ನೀನು ಗಂಗೆಯ ದಕ್ಷಿಣ ದಡದಲ್ಲಿ ರಾಜನಾಗಿರುತ್ತೀಯೆ. ನಾನು ಗಂಗೆಯ ಉತ್ತರದಲ್ಲಿ ರಾಜನಾಗಿರುವೆನು. ದ್ರುಪದನೇ ನಿನಗೆ ಸಮ್ಮತವಾದರೆ, ನನ್ನನ್ನು ಸ್ನೇಹಿತನೆಂದು ಪರಿಗ್ರಹಿಸು.

ದ್ರುಪದಃ

ಅನಾಶ್ಚರ್ಯಮಿದಂ ಬ್ರಹ್ಮನ್ ವಿಕ್ರಾಂತೇಷು ಮಹಾತ್ಮಸು ।
ಪ್ರೀಯೇ ತ್ವಯಾಹಂ ತತ್ತಶ್ಚ ಪ್ರೀತಿಮಿಚ್ಛಾಮಿ ಶಾಶ್ವತೀಮ್ ॥೭೭॥

ಬ್ರಾಹ್ಮಣರೇ, ವಿಕ್ರಮಶಾಲಿಗಳಾದ ತಮ್ಮಂತಹ ಮಹಾತ್ಮರಲ್ಲಿ ಇದು ಆಶ್ಚರ್ಯವಲ್ಲ. ನಾನು ನಿಮ್ಮಲ್ಲಿ ಸಂತೋಷಗೊಂಡಿದ್ದೇನೆ. ನಿಮ್ಮ ಶಾಶ್ವತವಾದ ಪ್ರೀತಿಯನ್ನು ಬಯಸುತ್ತೇನೆ.

ವೈಶಂಪಾಯನಃ

ಏವಮುಕ್ತಸ್ತು ತಂ ದ್ರೋಣೋ ಮೋಕ್ಷಯಾಮಾಸ ಭಾರತ ।
ಸತ್ಕೃತ್ಯ ಚೈನಂ ಪ್ರೀತಾತ್ಮಾ ರಾಜ್ಯಾರ್ಧಂ ಪ್ರತ್ಯಪಾದಯತ್ ॥೭೮॥

ಭಾರತನೇ, ದ್ರುಪದನು ಹೀಗೆ ಹೇಳಿದಾಗ ದ್ರೋಣರು ಸಂತೋಷದಿಂದ ಅವನನ್ನು ಸತ್ಕರಿಸಿ ಅರ್ಧರಾಜ್ಯವನ್ನು ಕೊಟ್ಟು ಅವನನ್ನು ಬಿಡುಗಡೆಗೊಳಿಸಿದರು.

ಆಸಂದಿಮಥ ಗಂಗಾಯಾಸ್ತೀರೇ ಜನಪದಾಯುತಮ್ ।
ಸೋಽಧ್ಯಾವಸದ್ ದೀನಮನಾಃ ಕಾಂಪಿಲ್ಯಂ ಚ ಪುರೋತ್ತಮಮ್ ॥

ದ್ರುಪದನು ದೈನ್ಯದಿಂದ ಕೂಡಿದ ಮನಸ್ಸುಳ್ಳವನಾಗಿ ಗಂಗೆಯ ದಕ್ಷಿಣತೀರದಲ್ಲಿ ಆಸಂದಿನಗರದವರೆಗೂ ಇರುವ ರಾಜ್ಯವನ್ನು ಶ್ರೇಷ್ಠನಗರವಾದ ಕಾಂಪಿಲ್ಯವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದನು.

ದಕ್ಷಿಣಾಶ್ಚೈವ ಪಾಂಚಾಲಾನ್ ಯಾವಚ್ಚರ್ಮಣ್ವತೀಂ ನದೀಮ್ ।
ಅಹಿಚ್ಛತ್ರಂ ಚ ವಿಷಯಂ ಭಾರದ್ವಾಜೋಽಭ್ಯಪದ್ಯತ ॥೮೦॥

ಗಂಗಾನದಿಯ ದಕ್ಷಿಣದಲ್ಲಿ ಚರ್ಮಣ್ವತೀ ನದಿಯವರೆಗೆ ಇರುವ ಪ್ರದೇಶವನ್ನೂ ಅಹಿಚ್ಛತ್ರ ನಗರವನ್ನೂ ದ್ರೋಣರು ಪಡೆದರು.

ಏವಂ ರಾಜ್ಯಮಹಿಚ್ಛತ್ರಂ ಪುರಾ ಬಹುಧನಾನ್ವಿತಮ್ ।
ಯುಧಾ ನಿರ್ಜಿತ್ಯ ಪಾರ್ಥೇನ ದ್ರೋಣಾಯ ಪ್ರತಿಪಾದಿತಮ್ ॥೮೧॥

ಹೀಗೆ ಹಿಂದೆ ಧನಧಾನ್ಯದಿಂದ ಸಮೃದ್ಧವಾದ ಅಹಿಚ್ಛತ್ರ ರಾಜ್ಯವು ಯುದ್ಧದಲ್ಲಿ ಗೆದ್ದು ಅರ್ಜುನನಿಂದ ದ್ರೋಣರಿಗೆ ಕೊಡಲ್ಪಟ್ಟಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಸಪ್ತತ್ರಿಂಶ್ಯಧಿಕಶತತಮೋಽಧ್ಯಾಯಃ ॥
॥ ಸಂಭವಪರ್ವಣಿ ಪಂಚಾಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೮೮

ದ್ರುಪದಸ್ತು ದಿವಾರಾತ್ರಂ ತಪ್ಯಮಾನಃ ಪರಾಭವಾತ್ ।
ಭೀಮಾರ್ಜುನಬಲಂ ದೃಷ್ಟ್ವಾ ಚೈಚ್ಛತ್ ಪಾಂಡವಸಂಶ್ರಯಮ್ ॥೯೫॥

ಸಂಬಂಧೀತ್ಯರ್ಜುನವಚಶ್ಚೀಕೀರ್ಷುಃ ಸತ್ಯಮೇವ ಚ ।
ಮಾರ್ದವಂ ಚಾರ್ಜುನೇ ದೃಷ್ಟ್ವಾ ಸುತಾಮೈಚ್ಛತ್ ತದರ್ಥತಃ ॥೯೬॥

ದ್ರುಪದ ತನೆಗೆ ದ್ರೋಣರಿಂದ ಉಂಟಾದ ಪರಾಭವದಿಂದ ಹಗಲು ರಾತ್ರಿ ಬೇಯುತ್ತಿದ್ದ. ಭೀಮಾರ್ಜುನರ ಬಲವನ್ನು ಕಣ್ಣಾರೆ ಕಂಡು ಪಾಂಡವರ ಆಶ್ರಯ ಪಡೆಯಲೂ ಬಯಸಿದ್ದ. ತಾನು ಸಂಬಂಧಕ್ಕೆ ಯೋಗ್ಯನೆಂದು ಅರ್ಜುನನಾಡಿದ ಮಾತನ್ನು ನಿಜಗೊಳಿಸಲೂ ಬಯಸಿದ್ದ. ಅದರಿಂದ ಅರ್ಜುನನ ಮೃದುಸ್ವಭಾವವನ್ನು ಮೆಚ್ಚಿ ಅವನಿಗಾಗಿ ಒಬ್ಬ ಮಗಳನ್ನು ಪಡೆಯಲು ಬಯಸಿದ.

ಪುತ್ರಂ ಚ ದ್ರೋಣ ಹಂತಾರಮಿಚ್ಛನ್ ವಿಪ್ರವರೌ ಯಯೌ ।
ಯಾಜೋಪಯಾಜಾವಾನೀಯಾಥಾರ್ಬುದೇನ ಗವಾಂ ನೃಪಃ ॥೯೭॥

ಚಕಾರೇಷ್ಟಿಂ ಚ ತದ್ಭಾರ್ಯಾ ದ್ವಿಜಾಭ್ಯಾಮತ್ರ ಚಾಹುತಾ ।
ದ್ರುಪದಾತ್ ಸುತ ಲಬ್ಧ್ಯರ್ಥಂ ಸಾಹಂಕಾರಾದ್ ವ್ಯಲಂಬಯತ್॥೯೮॥

ದ್ರೋಣನನ್ನು ಕೊಲ್ಲಬಲ್ಲ ಒಬ್ಬ ಮಗನನ್ನೂ ಬಯಸಿ ದ್ರುಪದ ಯಾಜ ಉಪಯಾಜರೆಂಬ ಬ್ರಾಹ್ಮಣಶ್ರೇಷ್ಠರನ್ನು ಆಶ್ರಯಿಸಿದ. ಹತ್ತು ಕೋಟಿ ಗೋದಾನ ಮಾಡಿ ಅವರನ್ನು ಕರೆಸಿಕೊಂಡು ಇಷ್ಟಿಯನ್ನು ಮಾಡಿದ. ರಾಣಿಗೆ ದ್ರುಪದನಿಂದ ಪುತ್ರಲಾಭವಾಗಲಿ ಎಂದು ಅವರು ಯಜ್ಞಶಾಲೆಗೆ ರಾಣಿಯನ್ನು ಕರೆಸಿದರು. ಅವಳು ಅಹಂಕಾರದಿಂದ ವಿಲಂಬ ಮಾಡಿದಳು.

ಕಿಮೇತಯೇತ್ಯವಜ್ಞಾಯ ತಾವುಭೌ ವಿಪ್ರಸತ್ತಮೌ ।
ಅಜುಹ್ವತಾಂ ತತ್ಪುತ್ರಾರ್ಥಂ ಪತ್ನ್ಯಾಪ್ರಾಶ್ಯಂ ಹವಿಸ್ತದಾ ॥೯೯॥

'ಈ ರಾಣಯಿಂದೇನು?' ಎಂದು ತಿರಸ್ಕಾರ ಮಾಡಿ ಆ ಇಬ್ಬರು ಬ್ರಾಹ್ಮಣೋತ್ತರು ದ್ರುಪದನ ಪುತ್ರೋತ್ಪತ್ತಿಗೆ ಪತ್ನಿ ಸೇವಿಸಬೇಕಾಗಿದ್ದ ಹವಿಸ್ಸನ್ನು ಅಗ್ನಿಯಲ್ಲಿ ಹೋಮಿಸಿದರು.

ಹುತೇ ಹವಿಷಿ ಮಂತ್ರಾಭ್ಯಾಂ ವೈಷ್ಣವಾಭ್ಯಾಂ ತದೈವ ಹಿ ।
ದೀಪ್ತಾಂಗಾರ ನಿಭೋ ವಹ್ನಿಃ ಕುಂಡಮಧ್ಯಾತ್ ಸಮುತ್ಥಿತಃ ॥೧೦೦॥

ಕಿರೀಟೀ ಕುಂಡಲೀ ದೀಪ್ತೋ ಹೇಮಾವಲೀ ವರಾಸಿಮಾನ್ ।
ರಥೇನಾದಿತ್ಯವರ್ಣೇನ ನದನ್ ದ್ರುಪದಮಾದ್ರವತ್ ॥೧೦೧॥

ವೈಷ್ಣವ ಮಂತ್ರಗಳಿಂದ ಹವಿಸ್ಸನ್ನು ಹೋಮಿಸಿದಾಗ ತಕ್ಷಣ ಕುಂಡದ ಮಧ್ಯದಿಂದ ಉರಿವ ಕೆಂಡದಂಥ ಮೈಬಣ್ಣದ, ಕಿರೀಟ ಕುಂಡಲಗಳನ್ನೂ, ಚಿನ್ನದ ಹಾರಗಳನ್ನೂ ಧರಿಸಿ ಶ್ರೇಷ್ಠವಾದ ಖಡ್ಗವನ್ನು ಹಿಡಿದ ಅಗ್ನಿದೇವ ಎದ್ದು ಬಂದ. ಸೂರ್ಯನಂತೆ ಬೆಳಗುವ ರಥದೊಂದಿಗೆ ಸಿಂಹನಾದ ಮಾಡುತ್ತ ದ್ರುಪದನ ಬಳಿಗೆ ಬಂದ.

ಧೃಷ್ಟತ್ವಾದ್ ದ್ಯೋತನತ್ವಾಚ್ಚ ಧೃಷ್ಟದ್ಯುಮ್ನ ಇತೀರಿತಃ ।
ಮುನಿಭಿರ್ದ್ರುಪದೇನಾಪಿ ಸರ್ವವೇದಾರ್ಥ ತತ್ವವಿತ್ ॥೧೦೨॥

ದಿಟ್ಟತನವಿದ್ದುದರಿಂದಲೂ ಕಾಂತಿಯುಕ್ತನಾದ್ದರಿಂದಲೂ ಧೃಷ್ಟದ್ಯುಮ್ನ ಎಂದು ಮುನಿಗಳಿಂದಲೂ ದ್ರುಪದನಿಂದಲೂ ಕರೆಸಿಕೊಂಡನು ಹಾಗೂ ಸರ್ವವೇದಾರ್ಥವೇತ್ತನಾಗಿದ್ದನು.

ಅನ್ವೇನಂ ಭಾರತೀ ಸಾಕ್ಷಾದ್‌ವೇದಿಮಧ್ಯಾತ್ ಸಮುತ್ಥಿತಾ ।
ಪ್ರಾಣೋ ಹಿ ಭರತೋ ನಾಮ ಸರ್ವಸ್ಯ ಭರಣಾತ್ ಶ್ರುತಃ ॥೧೦೩॥

ತದ್ಭಾರ್ಯಾ ಭಾರತೀ ನಾಮ ವೇದರೂಪಾ ಸರಸ್ವತೀ ।
ಶಂರೂಪಮಾಶ್ರಿತಾ ವಾಯುಂ ಶ್ರೀರಿತ್ಯೇವ ಚ ಕೀರ್ತಿತಾ ॥೧೦೪॥

ಧೃಷ್ಟದ್ಯುಮ್ನನ ಅನಂತರ ಸಾಕ್ಷಾತ್ ಭಾರತೀದೇವಿ ದ್ರೌಪದಿಯಾಗಿ ಯಜ್ಞವೇದಿಕೆಯ ಮಧ್ಯದಿಂದ ಎದ್ದು ಬಂದಳು. ಎಲ್ಲರನ್ನೂ ರಕ್ಷಿಸುವುದರಿಂದ 'ಭರತ'ನೆಂದು ಪ್ರಸಿದ್ಧನಾದವ ಪ್ರಾಣ. ಭರತನ ಪತ್ನಿಯಾದ್ದರಿಂದ ಇವಳು 'ಭಾರತಿ'. ಅವಳೆ ವೇದಾಭಿಮಾನಿನಿಯಾದ್ದರಿಂದ 'ಸರಸ್ವತಿ'. ಸುಖರೂಪನಾದ ವಾಯುವನ್ನು ಆಶ್ರಯಿಸಿದಳಾದ್ದರಿಂದ 'ಶ್ರೀ' ಎಂದೂ ಅವಳೇ ಕರೆಸಿಕೊಂಡಿದ್ದಾಳೆ.

ಆವೇಶಯುಕ್ತಾ ಶಚ್ಯಾಶ್ಚ ಶ್ಯಾಮಲಾಯಾಸ್ತಥೋಷಸಃ ।
ತಾಶ್ಚೇಂದ್ರ ಧರ್ಮನಾಸತ್ಯ ಸಂಶ್ರಯಾತ್ ಶ್ರಿಯ ಈರಿತಾಃ ॥೧೦೫॥

ದ್ರೌಪದಿ, ಶಚಿ, ಶ್ಯಾಮಲೆ, ಉಷೆಯರ ಆವೇಶದಿಂದ ಕೂಡಿದ್ದಳು. ಆ ಶಚಿ, ಶ್ಯಾಮಲೆ, ಉಷೆಯರೂ ಕೂಡ ಇಂದ್ರ, ಧರ್ಮ, ಅಶ್ವಿನೀದೇವತೆಗಳನ್ನು ಆಶ್ರಯಿಸಿದ್ದರಿಂದ ಶ್ರೀ ಎನಿಸಿದ್ದಾರೆ.

ಸಾ ಕೃಷ್ಣಾ ನಾಮತಶ್ಚಾಸೀದುತ್ಕೃಷ್ಟತ್ವಾದ್ಧಿ ಯೋಷಿತಾಮ್ ।
ಕೃಷ್ಣಾ ಸಾ ವರ್ಣತಶ್ಚಾಸೀದುಷ್ಕೃಷ್ಟಾನಂದಿನೀ ಚ ಸಾ ॥೧೦೬॥

ಸ್ತ್ರೀಯರಲ್ಲೆಲ್ಲ ಉತ್ಕೃಷ್ಟಳಾದ್ದರಿಂದ ದ್ರೌಪದಿ 'ಕೃಷ್ಣೆ' ಎನಿಸಿದಳು. ವರ್ಣದಿಂದಲೂ ಕೃಷ್ಣೆ. ಉತ್ಕೃಷ್ಟವಾದ ಆನಂದ ಉಳ್ಳವಳಾದ್ದರಿಂದಲೂ ಕೃಷ್ಣೆ.

ಉತ್ಪತ್ತಿತಶ್ಚ ಸರ್ವಜ್ಞಾ ಸರ್ವಾಭರಣಭೂಷಿತಾ ।
ಸಂಪ್ರಾಪ್ತ ಯೌವನೈವಾಸೀದಜರಾ ಲೋಕಸುಂದರೀ ॥೧೦೭॥

ದ್ರೌಪದಿ ಹುಟ್ಟಿನಿಂದಲೇ ಸರ್ವಜ್ಞಳೂ ಸರ್ವಾಭರಣ ಭೂಷಿತಳೂ ಯೌವನ ಭರಿತಳೂ ಜರೆ ಇಲ್ಲದವಳೂ ಲೋಕಸುಂದರಿಯೂ ಆಗಿದ್ದಳು.

ಉಮಾಂಶಯುಕ್ತಾ ನಿತರಾಂ ಸರ್ವಲಕ್ಷಣ ಸಂಯುತಾ ॥೧೦೮॥

ಪೂರ್ವಂ ಹ್ಯುಮಾ ಚ ದೇವ್ಯಸ್ತಾಃ ಕದಾಚಿದ್‌ಭರ್ತೃಭಿರ್ಯುತಾಃ ।
ವಿಲಾಸಂ ದರ್ಶಯಾಮಾಸುರ್ಬ್ರಹ್ಮಣಃ ಪಶ್ಯತೋऽಧಿಕಮ್ ॥೧೦೯॥

ಶಶಾಪ ತಾಸ್ತದಾ ಬಹ್ಮಾ ಮಾನುಷೀಂ ಯೋನಿಮಾಪ್ಸ್ಯಥ ।
ತತ್ರಾನ್ಯಗಾಶ್ಚ ಭವೇತೇತ್ಯೇವಂ ಶಪ್ತಾಃ ಸುರಾಂಗನಾಃ ॥೧೧೦॥

ವಿಚಾರ್ಯ ಭಾರತೀಮೇತ್ಯ ಸರ್ವಮಸ್ಯೈ ನಿವೇದ್ಯ ಚ ।
ಸಹಸ್ರವತ್ಸರಂ ಚೈನಾಂ ಶುಶ್ರೂಷಿತ್ವಾ ಬಭಾಷಿರೇ ॥೧೧೧॥

ದ್ರೌಪದಿ ಪಾರ್ವತಿಯ ಅಂಶದಿಂದಲೂ ಯುಕ್ತಳಾಗಿದ್ದಳು. ಬಲು ಚೆನ್ನಾಗಿ ಸಕಲ ಲಕ್ಷಣಗಳಿಂದ ಯುಕ್ತಳೂ ಆಗಿದ್ದಳು. ಹಿಂದೆ ಪಾರ್ವತಿಯೂ ಶಚೀ ಮುಂತಾದ

ದೇವಿಯರೂ ಒಮ್ಮೆ ಬ್ರಹ್ಮನು ನೋಡುತ್ತಿದ್ದಂತೆಯೆ ತಮ್ಮ ಪತಿಗಳೊಡನೆ ಬಹಳ ವಿಲಾಸವನ್ನು ಪ್ರದರ್ಶಿಸಿದರು. ಬ್ರಹ್ಮ ಅವರನ್ನು 'ಮನುಷ್ಯ ಜನ್ಮ ಹೊಂದಿರಿ. ಮನುಷ್ಯ ಜನ್ಮದಲ್ಲಿ ಪರಪುರುಷ ಸ್ಪರ್ಶಿಗಳಾಗಿರಿ' ಎಂದು ಶಪಿಸಿದ. ಹೀಗೆ ಶಪ್ತರಾದ ದೇವಾಂಗನೆಯರು ವಿಚಾರ ಮಾಡಿ ಭಾರತೀದೇವಿಯ ಬಳಿಗೆ ಬಂದು ಎಲ್ಲವನ್ನೂ ಹೇಳಿಕೊಂಡು ಸಾವಿರವರ್ಷಕಾಲ ಸೇವೆ ಮಾಡಿ ಹೇಳಿದರು.

ದೇವಿ ನೋ ಮಾನುಷಂ ಪ್ರಾಪ್ಯಮನ್ಯಗಾತ್ವಂ ಚ ಸರ್ವಥಾ ।
ತತ್ರಾಪಿ ಮಾರುತಾದನ್ಯಂ ನ ಸ್ಪೃಶೇಮ ಕಥಂಚನ ॥೧೧೨॥

ದೇವಿ, ನಮಗೆ ಮನುಷ್ಯ ಜನ್ಮ ಬರಲಿದೆ. ಪರಪುರುಷಸ್ಪರ್ಶವೂ ಸರ್ವಥಾ ಉಂಟಾಗಲಿದೆ. ಆಗಲೂ ವಾಯುವಿಗಿಂತ ಬೇರೆಯವರನ್ನು ಯಾವ ರೀತಿಯಿಂದಲೂ ಸ್ಪರ್ಶಿಸಲಾರೆವು.

ಬ್ರಹ್ಮಣ್ಯೈವ ಚ ಶಪ್ತಾಃ ಸ್ಮಃ ಪೂರ್ವಂ ಚಾನ್ಯತ್ರ ಲೀಲಯಾ ।
ಏಕದೇಹತ್ವಮಾಪ್ಯೈನಂ ಯದಾ ವಂಚಯಿತುಂ ಗತಾಃ ॥೧೧೩॥

ಹಿಂದೆ ಇನ್ನೊಂದು ಸಂದರ್ಭದಲ್ಲಿ ನಾವು ವಿನೋದದಿಂದ ಒಂದೇ ದೇಹದಲ್ಲಿ ಜೊತೆಗಿದ್ದು ಬ್ರಹ್ಮನನ್ನು ವಂಚಿಸಲು ಹೋದಾಗ ಅವನಿಂದ ಶಪ್ತರಾದೆವು.

ಏಕದೇಹಾ ಮಾನುಷತ್ವಮಾಪ್ಸ್ಯಥ ತ್ರಿಶ ಉದ್ಧತಾಃ ।
ತ್ರಿಶೋ ಮದ್ವಂಚನಾಯೇತಾ ಇತಿ ತೇನೋದಿತಾ ವಯಮ್ ॥೧೧೪॥

'ಉದ್ಧತರಾಗಿ ನೀವು ಮೂರು ಬಾರಿ ನನ್ನನ್ನು ವಂಚಿಸಲು ಬಂದಿರಿ. ಅದರಿಂದ ಮೂರು ಬಾರಿ ಒಂದೇ ದೇಹದಲ್ಲಿ ಮನುಷ್ಯ ಜನ್ಮ ಪಡೆಯಿರಿ' ಹೀಗೆ ಬ್ರಹ್ಮ ನಮಗೆ ಶಾಪ ನೀಡಿದ್ದಾನೆ.

ಅತಸ್ತ್ವಯೈಕ ದೇಹತ್ವಮಿಚ್ಛಾಮೋ ದೇವಿ ಜನ್ಮಸು ।
ಚತುರ್ಷ್ವಪಿ ಯತೋಽಸ್ಮಾಕಂ ಶಾಪದ್ವಯ ನಿಮಿತ್ತತಃ ॥೧೧೫॥

ಚತುರ್ಜನ್ಮ ಭವೇದ್ಭೂಮೌ ತ್ವಾಂ ನಾನ್ಯೋ ಮಾರುತಾದ್ ವ್ರಜೇತ್ ।
ನಿಯಮೋಽಯಂ ಹರೇರ್ಯಸ್ಮಾದನಾದಿರ್ನಿತ್ಯ ಏವ ಚ ॥೧೧೬॥

ನಮಗೆ ಬ್ರಹ್ಮನ ಎರಡು ಶಾಪಗಳಿರುವುದರಿಂದ ನಾಲ್ಕು ಜನ್ಮಗಳು ಭೂಮಿಯಲ್ಲಿ ಸಂಭವಿಸುವ ಪ್ರಯುಕ್ತ ನಾಲ್ಕು ಜನ್ಮಗಳಲ್ಲಿಯೂ ನಿನ್ನ ಜೊತೆಗೇ ಒಂದು ದೇಹದಲ್ಲಿ ಜನಿಸಲು ನಾವು ಬಯಸುವೆವು. ಏಕೆಂದರೆ ನಿನ್ನನ್ನು ವಾಯುವಿಗಿಂತ ಬೇರೆ ಯಾರೂ ಹೊಂದಲಾರ. ಇದು ಹರಿ ಮಾಡಿರುವ ಅನಾದಿನಿತ್ಯವಾದ ನಿಯಮ.

ಅತಸ್ತ್ವಯೈಕದೇಹಾ ನೋ ನಾನ್ಯ ಆಪ್ನೋತಿ ಮಾರುತಾತ್ ।
ಇತೀರಿತೇ ತಥೇತ್ಯುಕ್ತ್ವಾ ಪಾರ್ವತ್ಯಾದಿ ಯುತೈವ ಸಾ
ವಿಪ್ರಕನ್ಯಾऽಭವತ್ ತತ್ರ ಚತಸ್ರಃ ಪಾರ್ವತೀಯುತಾಃ ॥೧೧೭॥

ಏಕದೇಹಸ್ಥಿತಾಶ್ಚಕ್ರುರ್ಗಿರೀಶಾಯ ತಪೋ ಮಹತ್ ।
ತದ್ದೇಹಸ್ಥಾ ಭಾರತೀ ತು ರುದ್ರದೇಹಸ್ಥಿತಂ ಹರಿಮ್ ।
ತೋಷಯಾಮಾಸ ತಪಸಾ ಕರ್ಮೈಕ್ಯಾರ್ಥಂ ಧೃತವ್ರತಾ ॥೧೧೮॥

'ಅದರಿಂದ ನಿನ್ನ ಜೊತೆಗೆ ನಾವು ಏಕದೇಹಿಗಳಾದರೆ ವಾಯು ಹೊರತು ಇನ್ನಾರೂ ನಮ್ಮನ್ನು ಹೊಂದಲಾರ' - ಹೀಗೆ ದೇವಿಯು ಹೇಳಿದಾಗ 'ಹಾಗೇ ಆಗಲಿ' ಎಂದು ಹೇಳಿ ಭಾರತೀದೇವಿ ಪಾರ್ವತಿ ಮುಂತಾದವರಿಂದ ಯುಕ್ತಳಾಗಿಯೆ ಒಬ್ಬ ಬ್ರಾಹ್ಮಣನ ಮಗಳಾಗಿ ಜನಿಸಿದಳು. ಆ ಜನ್ಮದಲ್ಲಿ ಪಾರ್ವತಿ ಮುಂತಾದ ನಾಲ್ವರು ದೇವಿಯರು ಏಕದೇಹಿಗಳಾಗಿ ಶಿವನನ್ನು ಒಲಿಸಲು ದೊಡ್ಡ ತಪಸ್ಸನ್ನು ಮಾಡಿದರು. ಕರ್ಮೈಕ್ಯಕ್ಕಾಗಿ ಆ ದೇಹದಲ್ಲಿದ್ದ ಭಾರತಿಯೂ ವ್ರತನಿಷ್ಠಳಾಗಿ ಶಿವನ ಶರೀರದಲ್ಲಿದ್ದ ಹರಿಯನ್ನು ಒಲಿಸಿಕೊಂಡಳು.

ತಸ್ಯೈ ಸ ರುದ್ರದೇಹಸ್ಥೋ ಹರಿಃ ಪ್ರಾದಾದ್ ವರಂ ಪ್ರಭುಃ ।
ಅನಂತತೋಷಣಂ ವಿಷ್ಣೋಃ ಸ್ವಭರ್ತ್ರಾ ಸಹ ಜನ್ಮಸು ॥೧೧೯॥

ಸರ್ವೇಷ್ವಪೀತಿ ಚಾನ್ಯಾಸಾಂ ದದೌ ಶಂಕರ ಏವ ಚ ।
ವರಂ ಸ್ವ ಭರ್ತೃ ಸಂಯೋಗಂ ಮಾನುಷೇಷ್ವಪಿ ಜನ್ಮಸು ॥೧೨೦॥

ಭಾರತಿಗೆ ರುದ್ರದೇಹಸ್ಥನಾದ ಹರಿ ವರವನ್ನಿತ್ತು- 'ಎಲ್ಲ ಜನ್ಮಗಳಲ್ಲಿಯೂ ನೀನು ನಿನ್ನ ಪತಿಯೊಂದಿಗೆ ನನ್ನನ್ನು ಬಹಳ ತೃಪ್ತಿ ಪಡಿಸುವಿ' ಎಂದು. ಬೇರೆ ದೇವಿಯರಿಗೆ ಶಿವನೆ ಮನುಷ್ಯ ಜನ್ಮಗಳ ಪೈಕಿ ಒಂದರಲ್ಲಿ ತಮ್ಮ ಪತಿಗಳ ಸಮಾಗಮದ ವರವನ್ನಿತ್ತ.

ತತಸ್ತದೈವ ದೇಹಂ ತಾ ವಿಸೃಜ್ಯ ನಲನಂದಿನೀ ।
ಬಭೂವುರಿಂದ್ರಸೇನೇತಿ ದೇಹೈಕ್ಯೇನ ಸುಸಂಗತಾಃ ॥೧೨೧॥

ಬಳಿಕ ಬೇಗನೆ ಆ ದೇವಿಯರು ವಿಪ್ರಕನ್ಯಾಶರೀರವನ್ನು ತೊರೆದು ಏಕದೇಹಿಗಳಾಗಿಯೆ ನಲಮಹಾರಾಜನ ಕುಮಾರಿಯಾಗಿ ಜನಿಸಿದರು. ಬಳಿಕ ಆ ಶರೀರವನ್ನೂ ತೊರೆದು ಏಕದೇಹರಾಗಿ ಇಂದ್ರಸೇನೆ ಎಂಬ ಹೆಸರಿನವರಾಗಿಯೂ ಜನಿಸಿದರು.

ತದಾऽऽಸೀನ್ಮುದ್ಗಲೋ ನಾಮ ಮುನಿಸ್ತಪಸಿ ಸಂಸ್ಥಿತಃ ।
ಚಕಮೇ ಪುತ್ರಿಕಾಂ ಬ್ರಹ್ಮೇತ್ಯಶೃಣೋತ್ ಸ ಕಥಾಂತರೇ ॥೧೨೨॥

ಆದ ಮುದ್ಗಲನೆಂಬ ಮುನಿ ತಪಸ್ಸು ಮಾಡುತ್ತಿದ್ದ. ಅವನು ಬ್ರಹ್ಮನು ತನ್ನ ಮಗಳನ್ನು ಮೋಹಿಸಿದನೆಂದು ಒಂದು ಕಥೆಯಲ್ಲಿ ಕೇಳಿದ.

ಅಪಾಹಸತ್ ಸೋऽಬ್ಜಯೋನಿಂ ಶಶಾಪೈನಂ ಚತುರ್ಮುಖಃ ।
ಭಾರತ್ಯಾದ್ಯಾಃ ಪಂಚ ದೇವೀರ್ಗಚ್ಛ ಮಾನಿನ್ನಭೂತಯೇ ॥೧೨೩॥

ಮುದ್ಗಲ ಬ್ರಹ್ಮನನ್ನು ಅಪಹಾಸ ಗೈದ. ಅದರಿಂದ ಬ್ರಹ್ಮ ಅವನಿಗೆ 'ಅಹಂಕಾರಿಯೆ, ನೀನು ಭಾರತೀ ಮುಂತಾದ ಐದು ಮಂದಿ ದೇವಿಯರ ಸಂಗ ಮಾಡು. ಅದು ನರಕಾದಿ ಅನರ್ಥ.

ಇತೀರಿತಸ್ತಂ ತಪಸಾ ತೋಷಯಾಮಾಸ ಮುದ್ಗಲಃ ।
ಶಾಪಾನುಗ್ರಹಮಸ್ಯಾಥ ಚಕ್ರೇ ಕಂಸಮುದ್ಭವಃ ॥೧೨೪॥

ಹೀಗೆ ಶಾಪ ಪಡೆದ ಮುದ್ಗಲ ತಪಸ್ಸಿನಿಂದ ಬ್ರಹ್ಮನನ್ನು ಒಲಿಸಿಕೊಂಡ. ಅದರಿಂದ ಬ್ರಹ್ಮ ಅವನಿಗೆ ಶಾಪಕ್ಕೆ ಪ್ರತಿಯಾಗಿ ಅನುಗ್ರಹ ಮಾಡಿದ.

ನ ತ್ವಂ ಯಾಸ್ಯಸಿ ತಾ ದೇವೀರ್ಮಾರುತಸ್ತ್ವಚ್ಛರೀರಗಃ ।
ಯಾಸ್ಯತಿ ತ್ವಂ ತದಾ ಮೂರ್ಛಾಂ ಗತೋ ನೈವ ವಿಬುಧ್ಯಸೇ ॥೧೨೫॥

'ನೀನು ಆ ದೇವಿಯರ ಸಂಗ ಮಾಡುವುದಿಲ್ಲ. ನಿನ್ನ ಶರೀರದಲ್ಲಿದ್ದು ವಾಯು ಇಂದ್ರಸೇನೆಯ ಸಂಗ ಮಾಡುತ್ತಾನೆ. ನೀನು ಆಗ ಮೂರ್ಛೆ ಹೊಂದಿರುತ್ತಿ. ನೀನೇನೂ ತಿಳಿಯುವುದಿಲ್ಲ.

ನ ಚ ಪಾಪಂ ತತಸ್ತೇ ಸ್ಯಾದಿತ್ಯುಕ್ತೇ ಚೈನಮಾವಿಶತ್ ।
ಮಾರುತೋಽಥೇಂದ್ರಸೇನಾಂ ಚ ಗೃಹೀತ್ವಾಥಾಭವದ್ ಗೃಹೀ ॥೧೨೬॥

ಅದರಿಂದ ನಿನಗೆ ಪಾಪ ಬರಲಾರದು ಎಂದು ಬ್ರಹ್ಮ ಮುದ್ಗಲನಿಗೆ ಅನುಗ್ರಹಿಸಿದಾಗ ವಾಯು ಮುದ್ಗಲನನ್ನು ಪ್ರವೇಶಿಸಿದ. ಬಳಿಕ ಇಂದ್ರಸೇನೆಯನ್ನು ಮದುವೆಯಾಗಿ ಗೃಹಸ್ಥನಾದ.

ರೇಮೇ ಚ ಸ ತಯಾ ಸಾರ್ಧಂ ದೀರ್ಘಕಾಲಂ ಜಗತ್ಪ್ರಭುಃ ।
ತತೋ ಮುದ್ಗಲಮುದ್ಭೋಧ್ಯ ಯಯೌ ಚ ಸ್ವಂ ನಿಕೇತನಮ್ ॥೧೨೭॥

ಜಗದೊಡೆಯನಾದ ವಾಯು ದೀರ್ಘಕಾಲ ಇಂದ್ರಸೇನೆಯೊಡನೆ ವಿಹರಿಸಿ ಮುದ್ಗಲನನ್ನು ಎಚ್ಚರಿಸಿ ತನ್ನ ಲೋಕಕ್ಕೆ ತೆರಳಿದ.

ತತೋ ದೇಶಾಂತರಂ ಗತ್ವಾ ತಪಶ್ಚಕ್ರೇ ಸ ಮುದ್ಗಲಃ ।
ಸೇಂದ್ರಸೇನಾ ವಿಯುಕ್ತಾಥ ಭರ್ತಾ ಚಕ್ರೇ ಮಹತ್ತಪಃ ॥೧೨೮॥

ಬಳಿಕ ಮುದ್ಗಲ ದೇಶಾಂತರಕ್ಕೆ ಹೋಗಿ ತಪಸ್ಸು ಮಾಡಿದ. ಇಂದ್ರಸೇನೆ ಪತಿಯಿಂದ ವಿಯುಕ್ತಳಾಗಿ ಮಹಾತಪಸ್ಸನ್ನಾಚರಿಸಿದಳು.

ತದ್ದೇಹಗಾ ಭಾರತೀ ತು ಕೇಶವಂ ಶಂಕರೇ ಸ್ಥಿತಮ್ ।
ತೋಷಯಾಮಾಸ ತಪಸಾ ಕರ್ಮೈಕ್ಯಾರ್ಥಂ ಹಿ ಪೂರ್ವವತ್ ॥೧೨೯॥

ಇಂದ್ರಸೇನೆಯ ಶರೀರದಲ್ಲಿದ್ದ ಭಾರತಿ ಶಿವನಲ್ಲಿ ಅಂತರ್ಗತನಾದ ಹರಿಯನ್ನು ತಪಸ್ಸಿನಿಂದ ಒಲಿಸಿಕೊಂಡಳು. ಇದು ಹಿಂದಿನಂತೆಯೆ ಕರ್ಮೈಕ್ಯಕ್ಕಾಗಿ.

ಉಮಾದ್ಯಾ ರೌದ್ರಮೇವಾತ್ರ ತಪಶ್ಚಕ್ರುರ್ಯಥಾ ಪುರಾ ।
ಪ್ರತ್ಯಕ್ಷೇ ಚ ಶಿವೇ ಜಾತೇ ತದ್ದೇಹಸ್ಥೇ ಚ ಕೇಶವೇ ॥೧೩೦॥

ಪೃಥಕ್ ಪೃಥಕ್ ಸ್ವಭರ್ತ್ರಾಪ್ತ್ಯೈ ತಾಃ ಪಂಚಾಪ್ಯೇಕದೇಹಗಾಃ ।
ಪ್ರಾರ್ಥಯಾಮಾಸುರಭವತ್ ಪಂಚ ಕೃತ್ವೋ ವಚೋ ಹಿ ತತ್ ॥೧೩೧॥

ಪಾರ್ವತಿ ಮುಂತಾದ ದೇವಿಯರು ಹಿಂದಿನಂತೆಯೆ ಶಿವನನ್ನು ಕುರಿತು ತಪಸ್ಸು ಮಾಡಿದರು. ವಟು ರೂಪದಿಂದ ಶಿವನೂ ಅವನೊಳಗಿನ ಹರಿಯೂ ಪ್ರತ್ಯಕ್ಷನಾದಾಗ

ಒಂದೇ ಶರೀರದಲ್ಲಿದ್ದ ಐದು ದೇವಿಯರೂ ತಮ್ಮ ಪತಿಗಳನ್ನು ಹೊಂದುವುದಕ್ಕೆ ಬೇರೆ ಬೇರೆಯಾಗಿ ವರವನ್ನು ಬೇಡಿದರು. ಅದರಿಂದ ವರವನ್ನು ಬೇಡುವ ಮಾತು ಐದು ಬಾರಿ ಕೇಳಿಸಿತು.

ಶಿವದೇಹಸ್ಥಿತೋ ವಿಷ್ಣುರ್ಭಾರತ್ಯೈತು ದದೌ ಪತಿಮ್ ।
ಅನ್ಯಾಸಾಂ ಶಿವ ಏವಾಥ ಪ್ರದದೌ ಚತುರಃ ಪತೀನ್ ॥೧೩೨॥

ಶಿವದೇಹಾಂತರ್ಗತನಾದ ವಿಷ್ಣು ಭಾರತಿಗೆ ಪತಿಪ್ರಾಪ್ತಿ ವರ ನೀಡಿದ. ಬೇರೆ ದೇವಿಯರಿಗೆ ಶಿವನೆ ನಾಲ್ಕು ಪತಿಗಳನ್ನು ವರವಾಗಿ ಇತ್ತ.

ದೇವ್ಯಶ್ಚತಸ್ರಸ್ತು ತದಾ ದತ್ತಮಾತ್ರೇ ವರೇಽಮುನಾ ।
ದೇವಾನಾಮವತಾರಾರ್ಥಂ ಪಂಚದೇವ್ಯಃ ಸ್ಮ ಇತ್ಯಥ ॥೧೩೩॥

ನಾಜಾನನ್ನೇಕದೇಹತ್ವಾಚ್ಚಿದ್ಯೋಗಾತ್ ಕ್ಷೀರ ನೀರವತ್ ।
ತಾಃ ಶ್ರುತ್ವಾ ಸ್ವಪತಿಂ ದೇವಿ ನ ಚಿರಾತ್ ಪ್ರಾಪ್ಸ್ಯಸೀತಿ ಚ ॥೧೩೪॥

ವಿಷ್ಣೋಕ್ತಂ ಶಂಕರೋಕ್ತಂ ಚ ಚತ್ವಾರಃ ಪತಯಃ ಪೃಥಕ್ ।
ಭವಿಷ್ಯತೀತ್ಯಧೈಕಸ್ಯಾಂ ಮೇನಿರೇ ಪಂಚ ಭರ್ತೃತಾಮ್ ॥೧೩೫॥

ಶಿವನೂ ವಿಷ್ಣುವೂ ವರವನ್ನು ಕೊಟ್ಟಾಗ ದೇವಿಯರು ತಾವು ದೇವತೆಗಳ ಅವತಾರಕ್ಕಾಗಿ ಹುಟ್ಟಿದ ಬೇರೆ ಬೇರೆ ಐದುಮಂದಿ ದೇವಿಯರೆಂಬುದನ್ನು ಮರೆತಿದ್ದರು. ಏಕೆಂದರೆ ಒಂದೇ ದೇಹದಲ್ಲಿ ಹಾಲು ನೀರುಗಳಂತೆ ಆ ಚೇತನರು ಒಂದಾಗಿ ಬೆರೆತಿದ್ದರು. 'ದೇವಿ, ನೀನು ನಿನ್ನ ಪತಿಯನ್ನು ಬೇಗನೆ ಪಡೆಯುವಿ' ಎಂದು ಒಮ್ಮೆ ವಿಷ್ಣು ಹೇಳಿದ್ದನ್ನೂ ನಾಲ್ಕುಬಾರಿ ಶಿವ ಹೇಳಿದ್ದನ್ನೂ ಕೇಳಿ ನಾಲ್ಕು ಮಂದಿ ಪತಿಗಳು ಬೇರೆ ಸಿಗುವರು ಬೇರೆ ಬೇರೆಯಾಗಿ ಒಬ್ಬಳಿಗೇ ಐದುಮಂದಿ ಪತಿಗಳೆಂದು ತಪ್ಪಾಗಿ ತಿಳಿದರು.

ರುರುದುಶ್ಚೈಕದೇಹಸ್ಥಾ ಏಕೈವಾಹಮಿತಿ ಸ್ಥಿತಾಃ ।
ಅಥಾಪ್ಯಗಾನ್ಮಹೇಂದ್ರೋಽತ್ರ ಸೋಽಬ್ರವೀತ್ ತಾಂ ವರಸ್ತ್ರಿಯಮ್ ॥

ಕಿಮರ್ಥಂ ರೋದಿಷೀತ್ಯೇವ ಸಾಬ್ರವೀದ್ ವಟುರೂಪಿಣಮ್ ।
ಶಂಕರಂ ದರ್ಶಯಿತ್ವೈವ ಪಂಚಭರ್ತೃತ್ವಮೇಷ ಮೇ ॥೧೩೭॥

ವರಾರ್ಥಮರ್ಥಿತಃ ಪ್ರಾದಾದಿತಿ ತಂ ಶಿವ ಇತ್ಯಥ ।
ಅಜಾನನ್ ಶಕ್ರ ಆಹೋಚ್ಚೈಃ ಕಿಮೇತದ್ ಭುವನತ್ರಯೇ ।
ಮತ್ಪಾಲಿತೇ ಯೋಷಿತಂ ತ್ವಂ ವೃಥಾ ಶಪಸಿ ದುರ್ಮತೇ ॥೧೩೮॥

ಒಂದು ದೇಹದಲ್ಲಿರುವ ದೇವಿಯರು 'ನಾನೊಬ್ಬಳೆ' ಎಂದು ತಿಳಿದು ಅತ್ತರು. ಆಗ ದೇವೇಂದ್ರ ಅಲ್ಲಿಗೆ ಬಂದ. 'ಏಕೆ ಅಳುವೆ?' ಎಂದು ಆ ಉತ್ತಮ ಸ್ತ್ರೀಯನ್ನು ಕೇಳಿದ. ಅವಳು ವಟುರೂಪಿ ಶಿವನನ್ನು ತೋರಿಸಿ ಹೇಳಿದಳು. 'ಪತಿಪ್ರಾಪ್ತಿಗಾಗಿ ನಾನು ಬೇಡಿದಾಗ ಇವನು ನನಗೆ ಐದು ಮಂದಿ ಪತಿಗಳಾಗುವರೆಂದು ವರ ನೀಡಿದ'. ಆ ವಟುವನ್ನು ಶಿವನೆಂದರಿಯದೆ ಇಂದ್ರ ಗಟ್ಟಿಯಾಗಿ ನುಡಿದ, 'ದುರ್ಬುದ್ಧಿಯವನೆ, ಇದೇನು, ನಾನು ಈ ಮೂರ್ಲೋಕವನ್ನು ಆಳುತ್ತಿರುವಾಗ ಒಂದು ಹೆಣ್ಣನ್ನು ವಿನಾಕಾರಣ ಶಪಿಸುತ್ತಿರುವೆ?'

ಇತೀರಿತೇ ಶಿವಃ ಪ್ರಾಹ ಪತ ಮಾನುಷಮಾಪ್ನುಹಿ ॥೧೩೯॥

ಹೀಗೆ ಹೇಳಿದಾಗ ಶಿವನೆಂದ, 'ನೀನು ಸ್ವರ್ಗದಿಂದ ಚ್ಯುತನಾಗು, ಮನುಷ್ಯನಾಗಿ ಹುಟ್ಟು'.

ಅಸ್ಯಾಶ್ಚ ಭರ್ತಾ ಭವಸಿ ತ್ವಾಮೇವೈಷಾ ವರಿಷ್ಯತಿ ॥೧೪೦॥

ಪಶ್ಯಾತ್ರ ಮದವಜ್ಞಾನಾತ್ ಪತಿಸಾಂಸ್ತ್ವದೃಶಾನ್ ಸುರಾನ್ ।
ಗಿರೇರಧಸ್ತಾದಸ್ಯೈವೇತ್ಯುಕ್ತೋಽಸೌ ಪಾಕಶಾಸನಃ ।
ಉದ್ಬಬರ್ಹ ಗಿರಿಂ ತಂ ತು ದದರ್ಶಾತ್ರ ಚ ತಾನ್ ಸುರಾನ್ ॥೧೪೧॥

ಇವಳಿಗೆ ನೀನು ಪತಿಯಾಗುವೆ. ನಿನ್ನನ್ನೆ ಇವಳು ವರಿಸುವಳು. ನನ್ನನ್ನು ಅಪಮಾನಿಸಿದ ಕಾರಣ ಸ್ವರ್ಗದಿಂದ ಪತಿತರಾಗಿರುವ ನಿನ್ನಂಥ ದೇವತೆಗಳನ್ನು ಇಲ್ಲಿ ಇದೇ ಪರ್ವತದ ಕೆಳಗೆ ನೋಡು' ಹೀಗೆ ಶಿವ ಹೇಳಿದಾಗ ಇಂದ್ರ ಆ ಬೆಟ್ಟವನ್ನೆತ್ತಿದ. ಅಲ್ಲಿ ಆ ದೇವತೆಗಳನ್ನು ಕಂಡ.

ಪೂರ್ವೇಂದ್ರಾನ್ ಮಾರುತವೃಷನಾಸತ್ಯಾಂಶ್ಚತುರಃ ಸ್ಥಿತಾನ್ ।
ಮಾನುಷೇಷ್ವವತಾರಾಯ ಮಂತ್ರಂ ರಹಸಿ ಕುರ್ವತಃ ॥೧೪೨॥

ಹಿಂದಿನ ಮನ್ವಂತರಗಳಲ್ಲಿ ಇಂದ್ರಪದವಿಯನ್ನಾಳಿದ್ದ ವಾಯು ಯಮ ಮತ್ತು ಇಬ್ಬರು ಅಶ್ವಿನೀದೇವತೆಗಳು ಎಂದು ನಾಲ್ವರು ಮನುಷ್ಯರಲ್ಲಿ ಅವತರಿಸಲು ರಹಸ್ಯವಾಗಿ ಮಂತ್ರಾಲೋಚನೆ ಮಾಡುತ್ತ ಅಲ್ಲಿ ಕುಳಿತಿದ್ದರು.

ತತೋ ವರೇಣ್ಯಂ ವರದಂ ವಿಷ್ಣುಂ ಪ್ರಾಪ್ಯ ಸ ವಾಸವಃ ।
ತತ್ಪ್ರಸಾದಾನ್ನರಾಂಶೇನ ಯುಕ್ತೋ ಭೂಮಾವಜಾಯತ ॥೧೪೩॥

ಬಳಿಕ ದೇವೇಂದ್ರ ವರದಾಯಕನಾದ ಸರ್ವೋತ್ತಮನಾದ ಹರಿಯನ್ನು ತಪಸ್ಸಿನಿಂದ ಒಲಿಸಿಕೊಂಡು ಅವನ ಅನುಗ್ರಹದಿಂದ ನರಾಂಶಯುಕ್ತನಾಗಿ ಭೂಮಿಯಲ್ಲಿ ಹುಟ್ಟಿದ.

ಮದವಜ್ಞಾನಿಮಿತ್ತೇನ ಪತಿತಾಂ ಇತಿ ತಾನ್ ಸುರಾನ್ ।
ಮಾರುತಾದೀನ್ ಮೃಷಾವಾದೀರಿತಿ ಬ್ರಹ್ಮಾ ಶಿವಂ ತದಾ ॥೧೪೪॥

ಶಶಾಪ ಮಾನುಷೇಷು ತ್ವಂ ಜಾತಃ ಪರಾಭವಮ್ ।
ಶಕ್ರಾನ್ನರತನೋರ್ಯಾಸಿ ಯಸ್ಯೈತ್ವಂ ತು ಮೃಷಾವದಃ ॥೧೪೫॥

'ತನ್ನನ್ನು ಅಪಮಾನಿಸಿದ ಪ್ರಯುಕ್ತ ಆ ವಾಯು ಮುಂತಾದ ದೇವತೆಗಳು ಸ್ವರ್ಗದಿಂದ ಚ್ಯುತರಾಗಿದ್ದಾರೆ' ಎಂದು ಸುಳ್ಳು ಹೇಳಿದಿ ಎಂದು ಕೋಪದಿಂದ ಬ್ರಹ್ಮ ಶಿವನನ್ನು ಶಪಿಸಿದ, 'ನೀನು ಕೂಡಲೆ ಮನುಷ್ಯನಾಗಿ ಹುಟ್ಟಿ, ಮನುಷ್ಯನಾಗಿ ಹುಟ್ಟುವ ಇಂದ್ರನಿಂದ ಪರಾಭವ ಹೊಂದುವಿ, ನೀನು ಅವನ ಮುಂದೆ ಸುಳ್ಳಾಡಿರುವಿ'.

ಮಚ್ಛಪ್ತಾನಾಂ ಚ ದೇವೀನಾಮವಿಚಾರ್ಯ ಮಯಾ ಯತಃ ।
ಪತಿಯೋಗವರಂ ಪ್ರಾದಾ ನಾವಾಪ್ಸ್ಯಸಿ ತತಃ ಪ್ರಿಯಾಮ್ ॥೧೪೬॥

ಮಾನುಷೇಷು ತತಃ ಪಶ್ಚಾದ್ ಭಾರತೀದೇಹನಿರ್ಗತಾಮ್ ।
ಸ್ವಲೋಕೇ ಪ್ರಾಪ್ಸ್ಯಸಿ ಸಾರ್ಥೇ ವರೋಽಯಂತೇ ಮೃಷಾ ಭವೇತ್ ॥

ನನ್ನಿಂದ ಶಪ್ತರಾದ ದೇವಿಯರಿಗೆ ನೀನು ನನ್ನೊಡನೆ ವಿಚಾರಿಸದೆ ಪತಿಪ್ರಾಪ್ತಿವರ ನೀಡಿರುವಿ. ಆದರಿಂದ ನೀನು ಮನುಷ್ಯ ಜನ್ಮದಲ್ಲಿ ನಿನ್ನ ಸತಿಯನ್ನು ಹೊಂದಲಾರೆ. ಅವಳು ಭಾರತೀದೇಹದಿಂದ ನಿರ್ಗಮಿಸಿದ ಬಳಿಕ ನಿನ್ನ ಲೋಕದಲ್ಲಿ ಅವಳನ್ನು ಹೊಂದುವಿ. ನೀನು ದೇವಿಯರಿಗೆ ಕೊಟ್ಟವರ ನಿನ್ನ ವಿಷಯದಲ್ಲಿ ವಿಫಲವಾಗುವುದು.

ಏಸಾ ಸಾ ದ್ರೌಪದೀ ನಾಮ ಪಂಚದೇವಿತನುರ್ಭವೇತ್ ।
ಮೃಷಾ ವಾಗ್ ಯೇಷು ತೇ ಪ್ರೋಕ್ತಾ ಮಾರುತಾದ್ಯಾಸ್ತು ತೇऽಖಿಲಾಃ ॥

ತಾಸಾಂ ಪತಿತ್ವಮಾಪ್ಸ್ಯಂತಿ ಭಾರತ್ಯೈವ ತು ಪಾರ್ವತೀ ।
ಸಂಯುಕ್ತಾ ವ್ಯವಹಾರೇಷು ಪ್ರವರ್ತೇತ ನ ಚಾನ್ಯಥಾ ॥೧೪೯॥

'ಐದು ಮಂದಿ ದೇವಿಯರ ಅವತಾರ ಭೂತಳಾದ ಈ ಇಂದ್ರಸೇನೆ ದ್ರೌಪದಿ ಎನಿಸಿ ಜನಿಸುವಳು. ನೀನು ಯಾರ ವಿಷಯದಲ್ಲಿ ಸುಳ್ಳಾಡಿದೆಯೋ ಆ ದೇವತೆಗಳು ವಾಯು ಮುಂತಾದವರೆಲ್ಲರೂ ಆ ದೇವಿಯರ ಪತಿಗಳಾಗುವರು. ಪಾರ್ವತಿ ಭಾರತಿಯೊಡನೆ ಕೂಡಿಕೊಂಡು ಬೇರೆ ಎಲ್ಲ ವ್ಯವಹಾರಗಳಲ್ಲಿ ಮಾತ್ರವೇ ಪ್ರವೃತ್ತಿ ಮಾಡುವಳು. ತನ್ನ ಪಾತಿವ್ರತ್ಯಕ್ಕೆ ಭಂಗ ತರುವ ವ್ಯವಹಾರಗಳಲ್ಲಿ ಅಲ್ಲ.

ಏತೇ ಹಿ ಮಾರುತಾದ್ಯಾಸ್ತೇ ದೇವಕಾರ್ಯಾರ್ಥ ಗೌರವಾತ್ ।
ಜಾತಾ ಇತಿ ಶ್ರುತಿಸ್ತತ್ರ ನಾವಜ್ಞಾ ತೇऽತ್ರಕಾರಣಮ್ ॥೧೫೦॥

'ಈ ವಾಯು ಮುಂತಾದ ದೇವತೆಗಳು ದೇವಕಾರ್ಯರೂಪವಾದ ಫಲದಲ್ಲಿ ಗೌರವ ಬುದ್ಧಿಯಿಂದ ಮಾನವರಾಗಿ ಹುಟ್ಟಿದರೆಂದು ಶ್ರುತಿ ಇದೆ. ಅವರು ಹುಟ್ಟುವುದಕ್ಕೆ ನಿನ್ನನ್ನು ಅಪಮಾನಿಸಿದುದು ಕಾರಣವಲ್ಲ.

ದೀರ್ಘಕಾಲಂ ಮನುಷ್ಯೇಷು ತತಸ್ತ್ವಂ ಸ್ಥಿತಿಮಾಪ್ಸ್ಯಸಿ ।
ಇತ್ಯುಕ್ತ್ವಾ ಪ್ರಯಯೌ ಬ್ರಹ್ಮಾ ಸೋऽಶ್ವತ್ಥಾಮಾ ಶಿವೋऽಭವತ್ ॥
ಪಂಚಾದೇವೀತನುಸ್ತ್ವೇಷಾ ದ್ರೌಪದೀ ನಾಮ ಚಾಭವತ್ ॥೧೫೧॥

'ಅದರಿಂದ ದೀರ್ಘಕಾಲ ನೀನು ಮನುಷ್ಯನಾಗಿ ಇರುತ್ತಿ'. ಹೀಗೆ ಹೇಳಿ ಬ್ರಹ್ಮ ಹೊರಟುಹೋದ. ಬಳಿಕ ಶಿವ ಅಶ್ವತ್ಥಾಮನಾಗಿ ಜನಿಸಿದ. ಪಂಚದೇವಿಯರ ಅವತಾರಭೂತಳಾದ ಇಂದ್ರಸೇನೆ ದ್ರೌಪದಿಯಾಗಿ ಜನಿಸಿದಳು.

ವೇದೇಷು ಸಪುರಾಣೇಷು ಭಾರತೇ ಚಾವಗಮ್ಯತೇ ।
ಉಕ್ತೋऽರ್ಥಃ ಸರ್ವ ಏವಾಯಂ ತಥಾ ಪೂರ್ವೋದಿತಾಶ್ಚ ಯೇ ॥

ಹಿಂದಿನ ಮನ್ವಂತರಗಳಲ್ಲಿ ಇಂದ್ರಪದವಿಯನ್ನಾಳಿದ್ದ ವಾಯು ಯಮ ಮತ್ತು ಇಬ್ಬರು ಅಶ್ವಿನೀದೇವತೆಗಳು ಎಂದು ನಾಲ್ವರು ಮನುಷ್ಯರಲ್ಲಿ ಅವತರಿಸಲು ರಹಸ್ಯವಾಗಿ ಮಂತ್ರಾಲೋಚನೆ ಮಾಡುತ್ತ ಅಲ್ಲಿ ಕುಳಿತಿದ್ದರು.

ತತೋ ವರೇಣ್ಯಂ ವರದಂ ವಿಷ್ಣುಂ ಪ್ರಾಪ್ಯ ಸ ವಾಸವಃ ।
ತತ್ಪ್ರಸಾದಾನ್ನರಾಂಶೇನ ಯುಕ್ತೋ ಭೂಮಾವಜಾಯತ ॥೧೪೩॥

ಬಳಿಕ ದೇವೇಂದ್ರ ವರದಾಯಕನಾದ ಸರ್ವೋತ್ತಮನಾದ ಹರಿಯನ್ನು ತಪಸ್ಸಿನಿಂದ ಒಲಿಸಿಕೊಂಡು ಅವನ ಅನುಗ್ರಹದಿಂದ ನರಾಂಶಯುಕ್ತನಾಗಿ ಭೂಮಿಯಲ್ಲಿ ಹುಟ್ಟಿದ.

ಮದವಜ್ಞಾನಿಮಿತ್ತೇನ ಪತಿತಾಂ ಇತಿ ತಾನ್ ಸುರಾನ್ ।
ಮಾರುತಾದೀನ್ ಮೃಷಾವಾದೀರಿತಿ ಬ್ರಹ್ಮಾ ಶಿವಂ ತದಾ ॥೧೪೪॥

ಶಶಾಪ ಮಾನುಷೇಷು ತ್ವಂ ಜಾತಃ ಪರಾಭವಮ್ ।
ಶಕ್ರಾನ್ನರತನೋರ್ಯಾಸಿ ಯಸ್ಯೈತ್ವಂ ತು ಮೃಷಾವದಃ ॥೧೪೫॥

'ತನ್ನನ್ನು ಅಪಮಾನಿಸಿದ ಪ್ರಯುಕ್ತ ಆ ವಾಯು ಮುಂತಾದ ದೇವತೆಗಳು ಸ್ವರ್ಗದಿಂದ ಚ್ಯುತರಾಗಿದ್ದಾರೆ' ಎಂದು ಸುಳ್ಳು ಹೇಳಿದಿ ಎಂದು ಕೋಪದಿಂದ ಬ್ರಹ್ಮ ಶಿವನನ್ನು ಶಪಿಸಿದ, 'ನೀನು ಕೂಡಲೆ ಮನುಷ್ಯನಾಗಿ ಹುಟ್ಟಿ, ಮನುಷ್ಯನಾಗಿ ಹುಟ್ಟುವ ಇಂದ್ರನಿಂದ ಪರಾಭವ ಹೊಂದುವಿ, ನೀನು ಅವನ ಮುಂದೆ ಸುಳ್ಳಾಡಿರುವಿ'.

ಮಚ್ಛಪ್ತಾನಾಂ ಚ ದೇವೀನಾಮವಿಚಾರ್ಯ ಮಯಾ ಯತಃ ।
ಪತಿಯೋಗವರಂ ಪ್ರಾದಾ ನಾವಾಪ್ಸ್ಯಸಿ ತತಃ ಪ್ರಿಯಾಮ್ ॥೧೪೬॥

ಮಾನುಷೇಷು ತತಃ ಪಶ್ಚಾದ್ ಭಾರತೀದೇಹನಿರ್ಗತಾಮ್ ।
ಸ್ವರ್ಲೋಕೇ ಪ್ರಾಪ್ಸ್ಯಸಿ ಸ್ವಾರ್ಥೇ ವರೋಽಯಂತೇ ಮೃಷಾ ಭವೇತ್ ॥

ನನ್ನಿಂದ ಶಪ್ತರಾದ ದೇವಿಯರಿಗೆ ನೀನು ನನ್ನೊಡನೆ ವಿಚಾರಿಸದೆ ಪತಿಪ್ರಾಪ್ತಿವರ ನೀಡಿರುವಿ. ಅದರಿಂದ ನೀನು ಮನುಷ್ಯ ಜನ್ಮದಲ್ಲಿ ನಿನ್ನ ಸತಿಯನ್ನು ಹೊಂದಲಾರೆ. ಅವಳು ಭಾರತೀದೇಹದಿಂದ ನಿರ್ಗಮಿಸಿದ ಬಳಿಕ ನಿನ್ನ ಲೋಕದಲ್ಲಿ ಅವಳನ್ನು ಹೊಂದುವಿ. ನೀನು ದೇವಿಯರಿಗೆ ಕೊಟ್ಟ ವರ ನಿನ್ನ ವಿಷಯದಲ್ಲಿ ವಿಫಲವಾಗುವುದು.

ಏಸಾ ಸಾ ದ್ರೌಪದೀ ನಾಮ ಪಂಚದೇವಿತನುರ್ಭವೇತ್ ।
ಮೃಷಾ ವಾಗ್ ಯೇಷು ತೇ ಪ್ರೋಕ್ತಾ ಮಾರುತಾದ್ಯಾಸ್ತು ತೇಽಖಿಲಾಃ ॥

ತಾಸಾಂ ಪತಿತ್ವಮಾಪ್ಸ್ಯಂತಿ ಭಾರತ್ಯೈವ ತು ಪಾರ್ವತೀ ।
ಸಂಯುಕ್ತಾ ವ್ಯವಹಾರೇಷು ಪ್ರವರ್ತೇತ ನ ಚಾನ್ಯಥಾ ॥೧೪೯॥

'ಐದು ಮಂದಿ ದೇವಿಯರ ಅವತಾರ ಭೂತಳಾದ ಈ ಇಂದ್ರಸೇನೆ ದ್ರೌಪದಿ ಎನಿಸಿ ಜನಿಸುವಳು. ನೀನು ಯಾರ ವಿಷಯದಲ್ಲಿ ಸುಳ್ಳಾಡಿದೆಯೋ ಆ ದೇವತೆಗಳು ವಾಯು ಮುಂತಾದವರೆಲ್ಲರೂ ಆ ದೇವಿಯರ ಪತಿಗಳಾಗುವರು. ಪಾರ್ವತಿ ಭಾರತಿಯೊಡನೆ ಕೂಡಿಕೊಂಡು ಬೇರೆ ಎಲ್ಲ ವ್ಯವಹಾರಗಳಲ್ಲಿ ಮಾತ್ರವೇ ಪ್ರವೃತ್ತಿ ಮಾಡುವಳು. ತನ್ನ ಪಾತಿವ್ರತ್ಯಕ್ಕೆ ಭಂಗ ತರುವ ವ್ಯವಹಾರಗಳಲ್ಲಿ ಅಲ್ಲ.

ಏತೇ ಹಿ ಮಾರುತಾದ್ಯಾಸ್ತೇ ದೇವಕಾರ್ಯಾರ್ಥ ಗೌರವಾತ್ ।
ಜಾತಾ ಇತಿ ಶ್ರುತಿಸ್ತತ್ರ ನಾವಜ್ಞಾ ತೇಽತ್ರಕಾರಣಮ್ ॥೧೫೦॥

'ಈ ವಾಯು ಮುಂತಾದ ದೇವತೆಗಳು ದೇವಕಾರ್ಯರೂಪವಾದ ಫಲದಲ್ಲಿ ಗೌರವ ಬುದ್ಧಿಯಿಂದ ಮಾನವರಾಗಿ ಹುಟ್ಟಿದರೆಂದು ಶ್ರುತಿ ಇದೆ. ಅವರು ಹುಟ್ಟುವುದಕ್ಕೆ ನಿನ್ನನ್ನು ಅಪಮಾನಿಸಿದುದು ಕಾರಣವಲ್ಲ.

ದೀರ್ಘಕಾಲಂ ಮನುಷ್ಯೇಷು ತತಸ್ತ್ವಂ ಸ್ಥಿತಿಮಾಪ್ಸ್ಯಸಿ ।
ಇತ್ಯುಕ್ತ್ವಾ ಪ್ರಯಯೌ ಬ್ರಹ್ಮಾ ಸೋಽಶ್ವತ್ಥಾಮಾ ಶಿವೋಽಭವತ್ ॥
ಪಂಚಾದೇವೀತನುಸ್ತ್ವೇಷಾ ದ್ರೌಪದೀ ನಾಮ ಚಾಭವತ್ ॥೧೫೧॥

'ಅದರಿಂದ ದೀರ್ಘಕಾಲ ನೀನು ಮನುಷ್ಯನಾಗಿ ಇರುತ್ತಿ'. ಹೀಗೆ ಹೇಳಿ ಬ್ರಹ್ಮ ಹೊರಟುಹೋದ. ಬಳಿಕ ಶಿವ ಅಶ್ವತ್ಥಾಮನಾಗಿ ಜನಿಸಿದ. ಪಂಚದೇವಿಯರ ಅವತಾರಭೂತಳಾದ ಇಂದ್ರಸೇನೆ ದ್ರೌಪದಿಯಾಗಿ ಜನಿಸಿದಳು.

ವೇದೇಷು ಸಪುರಾಣೇಷು ಭಾರತೇ ಚಾವಗಮ್ಯತೇ ।
ಉಕ್ತೋಽರ್ಥಃ ಸರ್ವ ಏವಾಯಂ ತಥಾ ಪೂರ್ವೋದಿತಾಶ್ಚ ಯೇ ॥

ನಾವು ಹೇಳಿದ ಈ ಪ್ರಮೇಯವೆಲ್ಲವೂ ವೇದಗಳಲ್ಲಿ ಪುರಾಣಗಳಲ್ಲಿ ಮತ್ತು ಮಹಾಭಾರತದಲ್ಲಿ ತಿಳಿದು ಬರುತ್ತದೆ. ಹಿಂದೆ ಹೇಳಿದ ಪ್ರಮೇಯಗಳೂ ಹಾಗೆಯೇ.

ಮುಮುದುಃ ಸರ್ವಪಾಂಚಾಲಾ ಜಾತಯೋಃ ಸುತಯೋಸ್ತಯೋಃ ॥

ಮಾನುಷಾನ್ನೋಪಭೋಗೇನ ಸಂಸರ್ಗಾನ್ಮಾನುಷೇಷು ಚ ।
ಮನುಷ್ಯಪುತ್ರತಾಯಾಶ್ಚ ಭಾವೋ ಮಾನುಷ ಏತಯೋಃ ।
ಅಭೂನ್ನಾತಿತರಾಮಾಸೀತ್ ತದಯೋನಿತ್ವಹೇತುತಃ ॥೧೫೫॥

ದ್ರುಪದನಿಗೆ ಆ ಇಬ್ಬರು ಮಕ್ಕಳು ಹುಟ್ಟಿದಾಗ ಪಾಂಚಾಲದೇಶದ ಎಲ್ಲ ಜನರೂ ಸಂತಸಪಟ್ಟರು. ಆ ಮಕ್ಕಳು ಮನುಷ್ಯರ ಮಕ್ಕಳಾದುದರಿಂದ, ಮನುಷ್ಯರ ಅನ್ನ ಉಂಡುದರಿಂದ ಮತ್ತು ಮನುಷ್ಯರ ಸಹವಾಸ ಮಾಡಿದ್ದರಿಂದ ಅವರಲ್ಲಿ ಸ್ವಲ್ಪಮಟ್ಟಿಗೆ ಮನುಷ್ಯ ಸ್ವಭಾವ ಕಂಡು ಬಂದಿತು. ಹೆಚ್ಚಾಗಿ ಅಲ್ಲ. ಏಕೆಂದರೆ ಅವರು ಮನುಷ್ಯ ಯೋನಿಯಲ್ಲಿ ಹುಟ್ಟಿರಲಿಲ್ಲ.

ಯಾಜೋಪಯಾಜೌ ತಾವೇವ ದಯಿತಾ ದ್ರುಪದಸ್ಯ ಚ ।
ಮಾತೃಸ್ನೇಹಾರ್ಥಮನಯೋರ್ಯಯಾಚೇ ದದತುಶ್ಚ ತೌ ॥೧೫೬॥

ದ್ರುಪದರಾಜನ ಪತ್ನಿ ಆ ಮಕ್ಕಳಿಗೆ ತನ್ನಲ್ಲಿ ಮಾತೆ ಎಂಬ ಪ್ರೀತಿ ಉಂಟಾಗುವುದಕ್ಕಾಗಿ ಯಾಜ ಉಪಯಾಜರನ್ನೇ ಬೇಡಿದಳು. ಅವರು ಆ ಅಭೀಷ್ಟವನ್ನು ನೀಡಿದರು.

ಜಾತಮಾತ್ಮ ನಿಹಂತಾರಂ ಭಾರದ್ವಾಜೋ ನಿಶಮ್ಯ ತಮ್ ।
ಯಶೋಽರ್ಥಮಸ್ತ್ರಾಣಿ ದದಾವಗ್ರಹೀತ್ ಸೋಽಪಿ ಲೋಭತಃ
ರಾಮಾಸ್ತ್ರಾಣಾಂ ದುರ್ಲಭತ್ವಾತ್ ತ್ರಿದಶೇಷ್ವಪಿ ವೀರ್ಯವಾನ್ ॥೧೫೭॥

ದ್ರೋಣರು ತನ್ನನ್ನು ಕೊಲ್ಲುವುದಕ್ಕಾಗಿಯೇ ಜನಿಸಿದವ ಧೃಷ್ಟದ್ಯುಮ್ನ ಎಂದು ಕೇಳಿಯೂ ಕೀರ್ತಿಯ ಸಲುವಾಗಿ ಅವನಿಗೆ ಅಸ್ತ್ರಗಳನ್ನು ಉಪದೇಶಿಸಿದರು. ಅವನು ಸ್ವತಃ ವೀರ್ಯಶಾಲಿಯಾಗಿದ್ದರೂ ಲೋಭದಿಂದ ಆ ಅಸ್ತ್ರಗಳನ್ನು ಸ್ವೀಕರಿಸಿದ. ಏಕೆಂದರೆ ಪರಶುರಾಮರ ಆ ಅಸ್ತ್ರಗಳು ದೇವತೆಗಳಲ್ಲಿಯೂ ದುರ್ಲಭ.

★ ★ ★ ★

ನೂರ ಮೂವತ್ತೆಂಟನೆಯ ಅಧ್ಯಾಯ

(ದ್ರುಪದನಿಂದ ಯಾಜಾನುಯಾಜರ ವರಣ, ಧೃಷ್ಟದ್ಯುಮ್ನ ಮತ್ತು ದ್ರೌಪದಿಯರ ಉತ್ಪತ್ತಿ)

ವೈಶಂಪಾಯನಃ

ದ್ರೋಣೇನ ವೈರಂ ದ್ರುಪದೋ ನ ಸುಷ್ವಾಪ ಸ್ಮರಂಸ್ತದಾ ।
ಕ್ಷಾತ್ರೇಣ ಚ ಬಲೇನಾಸ್ಯ ನಾಶಶಂಸೇ ಪರಾಜಯಮ್ ॥೧॥

ದ್ರುಪದನು ದ್ರೋಣರ ವೈರವನ್ನು ಸ್ಮರಿಸುತ್ತಾ ನಿದ್ರೆಯನ್ನು ಬಿಟ್ಟನು. ಕ್ಷತ್ರಿಯ ಬಲದಿಂದ ಅವರನ್ನು ಜಯಿಸುವುದು ಸಾಧ್ಯವಿಲ್ಲವೆಂದು ತಿಳಿದನು.

ಹೀನಂ ವಿದಿತ್ವಾ ಚಾತ್ಮಾನಂ ಬ್ರಾಹ್ಮಣೇನ ಬಲೇನ ಚ ।
ದ್ರುಪದಸ್ತ್ವಮರ್ಷಣಾದ್ ರಾಜಾ ಕರ್ಮಸಿದ್ಧ್ಯೈ ದ್ವಿಜೋತ್ತಮಾನ್ ।
ಅನ್ವಿಚ್ಛನ್ ಪರಿಚಕ್ರಾಮ ಬ್ರಾಹ್ಮಣಾವಸಥಾನ್ ಬಹೂನ್ ॥೨॥

ತಾನು ಬ್ರಾಹ್ಮಣರಾದ ದ್ರೋಣರಿಗಿಂತ ಸಾಮರ್ಥ್ಯದಲ್ಲಿ ಹೀನನೆಂದು ತಿಳಿದ ದ್ರುಪದನು ಕೋಪದಿಂದ ಕೂಡಿದವನಾಗಿ ತನ್ನ ಉದ್ದೇಶದ ಸಿದ್ಧಿಗಾಗಿ ಬ್ರಾಹ್ಮಣಶ್ರೇಷ್ಠರನ್ನು ಹುಡುಕುತ್ತಾ ಅನೇಕ ಬ್ರಾಹ್ಮಣರ ಅಗ್ರಹಾರಗಳಲ್ಲಿ ಸಂಚರಿಸಿದನು.

ನಾಸ್ತಿ ಶ್ರೇಷ್ಠಂ ಮಮಾಪತ್ಯಂ ಧಿಗ್ಬಂಧೂನಿತಿ ಚ ಬ್ರುವನ್ ।
ನಿಶ್ಶ್ವಸಪರಮೋ ಹ್ಯಾಸೀದ್ ದ್ರೋಣಪ್ರತಿಚಿಕೀರ್ಷಯಾ ॥೩॥

ನನಗೆ ಒಳ್ಳೆಯ ಪುತ್ರನಿಲ್ಲ. ನನ್ನ ಬಂಧುಗಳಿಗೆ ಧಿಕ್ಕಾರವಿರಲಿ ಎಂದು ಯೋಚಿಸಿ ದ್ರೋಣರಿಗೆ ಪ್ರತೀಕಾರವನ್ನು ಮಾಡಲು ಬಯಸಿ ನಿಟ್ಟುಸಿರನ್ನು ಬಿಡುತ್ತಿದ್ದನು.

ನ ಸಂತಿ ಮಮ ಮಿತ್ರಾಣಿ ಲೋಕೇಽಸ್ಮಿನ್ ನಾಸ್ತಿ ವೀರ್ಯವಾನ್ ।
ನ ಸಂತಿ ಬಲಿನಃ ಪುಂಸಃ ಸಂಗ್ರಾಮೇ ವಿಜಿಗೀಷವಃ ।
ಇತಿ ಚಿಂತಾಕುಲೋ ರಾಜಾ ನಿಶ್ಶ್ವಸಪರಮೋಽಭವತ್ ॥೪॥

ನನಗೆ ಒಳ್ಳೆಯ ಸ್ನೇಹಿತರಿಲ್ಲ. ಲೋಕದಲ್ಲಿ ಯಾರೂ ಪರಾಕ್ರಮಿಗಳೂ ಇಲ್ಲ. ಬಲಿಷ್ಠರಾದ ಪುರುಷರನ್ನು ಯುದ್ಧದಲ್ಲಿ ಸೋಲಿಸುವ ಆಸೆಯೂ ಯಾರಿಗೂ ಇಲ್ಲ ಎಂದು ಚಿಂತಾಕುಲನಾದ ರಾಜನು ಯಾವಾಗಲೂ ನಿಟ್ಟುಸಿರನ್ನು ಬಿಡುತ್ತಿದ್ದನು.

ಅಸುಖಶ್ಚ ವಿನಿದ್ರಶ್ಚ ದ್ರೋಣಾಪ್ರಿಯಚಿಕೀರ್ಷಯಾ ।
ಪುತ್ರಜನ್ಮ ಪರೀಪ್ಸನ್ ವೈ ಪೃಥಿವೀಮನ್ವಯಾದಿಮಾಮ್ ॥೫॥

ನಿದ್ರೆಯನ್ನು ಕಳೆದುಕೊಂಡು ದುಃಖದಿಂದ ಕೂಡಿದವನಾಗಿ ದ್ರೋಣರಿಗೆ ಅಪಕಾರವನ್ನು ಮಾಡುವ ಪುತ್ರನ ಉತ್ಪತ್ತಿಯನ್ನು ಬಯಸಿ ಈ ಭೂಮಿಯಲ್ಲೆಲ್ಲಾ ಸಂಚರಿಸಿದನು.

ಪೃಥ್ವೀಮನ್ವಚರತ್ ಸರ್ವಾಂ ದ್ರೋಣಹಂತೃಪರೀಪ್ಸಯಾ ।
ಪ್ರಭಾವಶಿಕ್ಷಾವಿನಯಾದ್ ದ್ರೋಣಸ್ಯಾಸ್ಯ ಬಲೇನ ಚ ।
ಕರ್ತುಂ ಪ್ರಯತಮಾನೋಽಪಿ ನ ಶಶಾಕ ಪರಾಜಯಮ್ ॥೬॥

ದ್ರೋಣರನ್ನು ಸಂಹರಿಸುವವನನ್ನು ಪಡೆಯುವ ಇಚ್ಛೆಯಿಂದ ಎಲ್ಲಾ ಭೂಮಿಯನ್ನೂತಿರುಗಿದನು. ದ್ರೋಣರ ಬಲ, ಪ್ರಭಾವ, ಅಭ್ಯಾಸ ಮತ್ತು ವಿನಯಗಳ ನಿಮಿತ್ತದಿಂದ ಅವರನ್ನು ಪರಾಭವಗೊಳಿಸಲು ಪ್ರಯತ್ನಪಟ್ಟರೂ ಅವನಿಗೆ ಅದು ಸಾಧ್ಯವಾಗಲಿಲ್ಲ.

ಅಥಿತಃ ಸೋಽಥ ಕಲ್ಮಾಷೀಂ ಗಂಗಾತೀರೇ ಪರಿಭ್ರಮನ್ ।
ಬ್ರಾಹ್ಮಣಾವಸಥಂ ಪುಣ್ಯಮಾಸಸಾದ ಮಹೀಪತಿಃ ।
ತತ್ರ ನಾಸ್ನಾತಕಃ ಕಶ್ಚಿನ್ನಚಾಸೀದವ್ರತೀ ದ್ವಿಜಃ ॥೭॥

ಎಲ್ಲಾ ಸ್ಥಳಗಳಲ್ಲಿಯೂ ಸಂಚಾರ ಮಾಡುತ್ತಾ ಆ ರಾಜನು ಗಂಗಾತೀರದಲ್ಲಿ ಋಷಿಗಳ ಆಹಾರವಾದ ಫಲಗಳನ್ನು ಕೊಡುವ ಕಲ್ಮಾಷ ವೃಕ್ಷಗಳಿರುವ ಒಂದು ಪವಿತ್ರವಾದ ಬ್ರಾಹ್ಮಣರ ಅಗ್ರಹಾರವನ್ನು ತಲುಪಿದನು. ಆ ಬ್ರಾಹ್ಮಣರ ಅಗ್ರಹಾರದಲ್ಲಿ ವೇದಾಧ್ಯಯನವನ್ನು ಮಾಡದವನಾಗಲೀ, ವ್ರತನಿಷ್ಠನಾಗದವನಾಗಲೀ ಒಬ್ಬ ಬ್ರಾಹ್ಮಣನೂ ಇರಲಿಲ್ಲ.

ತದೈವ ತೌ ಮಹಾಭಾಗೌ ಸೋಽಪಶ್ಯತ್ ಸಂಶಿತವ್ರತೌ ।
ಯಾಜೋಪಯಾಜೌ ಬ್ರಹ್ಮರ್ಷೀ ಶಾಮ್ಯಂತೌ ಪೃಷತಾತ್ಮಜಃ ॥೮೪॥

ಆಗ ಪೃಷತಪುತ್ರನಾದ ದ್ರುಪದನು ಆ ಅಗ್ರಹಾರದಲ್ಲಿ ಮಹಾನುಭಾವರಾದ ಶ್ರೇಷ್ಠರಾದ ವ್ರತಧಾರಿಗಳಾದ ಶಾಂತರಾದ ಬ್ರಹ್ಮರ್ಷಿಗಳಾದ ಯಾಜೋಪಯಾಜರನ್ನು ನೋಡಿದನು.

ಸಂಹಿತಾಧ್ಯಯನೇ ಯುಕ್ತೌ ಗೋತ್ರತಶ್ಚಾಪಿ ಕಾಶ್ಯಪೌ ।
ಅರಣ್ಯೇ ಯುಕ್ತರೂಪೌ ತೌ ಬ್ರಾಹ್ಮಣಾವೃಷಿಸತ್ತಮೌ ॥೯॥

ವೇದಾಧ್ಯಯನವನ್ನು ಮಾಡುತ್ತಿದ್ದ ಅವರಿಬ್ಬರೂ ಕಾಶ್ಯಪ ಗೋತ್ರದವರು. ಅರಣ್ಯಕ್ಕೆ ಉಚಿತವಾದ ಆಕಾರವನ್ನು ಹೊಂದಿದ ಶ್ರೇಷ್ಠಋಷಿಗಳಾದ ಬ್ರಾಹ್ಮಣರು.

ಸ ಉಪಾಮಂತ್ರಯಾಮಾಸ ಸರ್ವಕಾಮೈರತಂದ್ರಿತಃ ।
ಬುದ್ಧ್ವಾ ತಯೋರ್ಬಲಂ ಬುದ್ಧಿಂ ಕನೀಯಾಂಸಮುಪಹ್ವರೇ ॥೧೦॥

ಪ್ರಪೇದೇ ಚ್ಛಂದಯನ್ ಕಾಮೈರುಪಯಾಜಂ ಧೃತವ್ರತಮ್ ।
ಗುರುಶುಶ್ರೂಷಣೇ ಯುಕ್ತಃ ಪ್ರಿಯಕೃತ್ ಸರ್ವಕಾಮದಃ ॥೧೧॥

ಅವನು ಅವರ ಮಂತ್ರಬಲವನ್ನೂ ಮತ್ತು ಜ್ಞಾನವನ್ನೂ ತಿಳಿದು ಏಕಾಂತದಲ್ಲಿ ತಮ್ಮನಾದ ಉಪಯಾಜರನ್ನು ಸಂಧಿಸಿ ಆಲಸ್ಯ ಮಾಡದೇ ಅವರು ಅಪೇಕ್ಷಿಸಿದ ಎಲ್ಲವನ್ನೂ ಕೊಡುವ ಆಶ್ವಾಸನೆಯನ್ನು ನೀಡಿ ಅವರನ್ನು ಆಹ್ವಾನಿಸಿದನು. ಧೃತವ್ರತರಾದ ಉಪಯಾಜರನ್ನು ಅನೇಕ ವಸ್ತುಗಳಿಂದ ಸಂತೋಷಪಡಿಸಿ ಸಮೀಪಿಸಿದನು.

ಪಾದ್ಯೇನಾಸನದಾನೇನ ತಥಾಽರ್ಘ್ಯೇಣ ಫಲೈಶ್ಚ ತಮ್ ।
ಹರ್ಷಯಿತ್ವಾ ಯಥಾನ್ಯಾಯಮುಪಯಾಜೋಽಬ್ರವೀತ್ ತತಃ ॥೧೨॥

ಗುರುಶುಶ್ರೂಷೆಯಲ್ಲಿ ರತರಾದ ಪ್ರಿಯಕಾರ್ಯಗಳಾದ ಕೇಳಿದ ಎಲ್ಲವನ್ನೂ ಕೊಡುವ ಸಾಮರ್ಥ್ಯವುಳ್ಳ ಉಪಯಾಜರು, ಆಸನ, ಪಾದ್ಯ, ಅರ್ಘ್ಯ ಮತ್ತು ಫಲಗಳಿಂದ ಅವನನ್ನು ಸಂತೋಷಪಡಿಸಿ ಯೋಗ್ಯವಾದ ರೀತಿಯಲ್ಲಿ ಮಾತನಾಡಿದರು.

ಕೇನ ಕಾರ್ಯವಿಶೇಷೇಣ ತ್ವಮಸ್ಮಾನಭಿಕಾಂಕ್ಷಸೇ ।
ಕುತಶ್ಚಾಯಂ ಸಮುದ್ಯೋಗಸ್ತದ್ ಬ್ರವೀತು ಭವಾನಿತಿ ॥೧೩॥

ರಾಜನೇ, ನೀನು ಯಾವ ಉದ್ದೇಶದಿಂದ ನನ್ನನ್ನು ಬಯಸುತ್ತಿದ್ದೀಯೆ? ಯಾವ ಕಾರಣಕ್ಕೋಸ್ಕರ ಈ ಪ್ರಯತ್ನವನ್ನು ಮಾಡುತ್ತಿದ್ದೀಯೆ ಎಂಬುದನ್ನು ನನಗೆ ಹೇಳು.

ವೈಶಂಪಾಯನಃ

ಸ ಬುದ್ಧ್ವಾ ಪ್ರೀತಿಸಂಯುಕ್ತಮೃಷೀನಾಮುತ್ತಮಂ ತದಾ ।
ಉವಾಚ ಚ್ಛಂದಯನ್ ಕಾಮೈರ್ದ್ರುಪದಃ ಸ ತಪಸ್ವಿನಮ್ ॥೧೪॥

ದ್ರುಪದನು ಆ ಋಷಿಶ್ರೇಷ್ಠರು ತನ್ನಲ್ಲಿ ಪ್ರೀತಿಯಿಂದ ಇರುವುದನ್ನು ಗಮನಿಸಿ ಆ ತಪಸ್ವಿಗಳನ್ನು ಅವರಿಗೆ ಅಪೇಕ್ಷಿತವಾದ ವಸ್ತುಗಳಿಂದ ಸಂತೋಷಪಡಿಸುತ್ತಾ ಮಾತನಾಡಿದನು.

ಯೇನ ಮೇ ಕರ್ಮಣಾ ಬ್ರಹ್ಮನ್ ಪುತ್ರಃ ಸ್ಯಾದ್ ದ್ರೋಣಮೃತ್ಯವೇ।
ಅರ್ಜುನಸ್ಯ ತಥಾ ಭಾರ್ಯಾ ಭವೇದ್ ಯಾ ವರವರ್ಣಿನೀ ।
ಉಪಯಾಜ ಚರಸ್ಯೈವತ್ ಪ್ರದಾಸ್ಯಾಮ್ಯರ್ಬುದಂ ಗವಾಮ್ ॥೧೫॥

ಉಪಯಾಜರೇ, ಯಾವ ಕರ್ಮವನ್ನು ಮಾಡಿದರೆ ನನಗೆ ದ್ರೋಣರನ್ನು ಕೊಲ್ಲುವ ಪುತ್ರನು ಜನಿಸುವನೋ ಮತ್ತು ಅರ್ಜುನನ ಪತ್ನಿಯಾಗುವ ಸುಂದರಿಯಾದ ಪುತ್ರಿಯ ಜನಿಸುವಳೋ, ಅಂತಹ ಕರ್ಮವನ್ನು ಮಾಡಿ. ನಾನು ನಿಮಗೆ ಹತ್ತು ಕೋಟಿ ಗೋವುಗಳನ್ನು ಕೊಡುವೆನು.

ವೈಶಂಪಾಯನಃ

ಏವಮುಕ್ತಸ್ತು ತೇನರ್ಷಿಃ ಪ್ರತ್ಯುವಾಚ ಪುನಶ್ಚ ತಮ್ ।
ನಾಹಂ ಫಲಾರ್ಥೀ ದ್ರುಪದ ಯೋಽರ್ಥೀ ಸ್ಯಾತ್ ತತ್ರ ಗಮ್ಯತಾಮ್ ॥

ರಾಜನು ಹೀಗೆ ಹೇಳಿದಾಗ ಆ ಋಷಿಗಳು ಪುನಃ ಅವನನ್ನು ಕುರಿತು ದ್ರುಪದನೇ, ನನಗೆ ಯಾವ ಫಲದ ಅಪೇಕ್ಷೆಯೂ ಇಲ್ಲ. ಯಾರಿಗೆ ಫಲದ ಅಪೇಕ್ಷೆ ಇದೆಯೋ ಅಂತಹವರ ಬಳಿಗೆ ನೀನು ಹೋಗು ಎಂದುಹೇಳಿದರು.

ವೈಶಂಪಾಯನಃ

ಪ್ರತ್ಯಾಖ್ಯಾತಸ್ತು ತೇನೈವಂ ಸ ವೈ ಸಜ್ಜನಸನ್ನಿಧೌ ।
ಆರಾಧಯಿಷ್ಯನ್ ದ್ರುಪದಃ ಸ ತಂ ಪರ್ಯಚರತ್ ಪುನಃ ॥೧೭॥

ಸಜ್ಜನರ ಸನ್ನಿಧಿಯಲ್ಲಿ ಹೀಗೆ ಅವರಿಂದ ನಿರಾಕೃತನಾದರೂ ಅವರನ್ನು ಸಂತೋಷಪಡಿಸುವ ದೃಷ್ಟಿಯಿಂದ ದ್ರುಪದನು ಅವರನ್ನು ಪುನಃ ಪರಿಚರಿಸಿದನು.

ತತಃ ಸಂವತ್ಸರಸ್ಯಾಂತೇ ದ್ರುಪದಂ ದ್ವಿಜಸತ್ತಮಃ ।
ಉಪಯಾಜೋಽಬ್ರವೀದ್ ವಾಕ್ಯಂ ಕಾಲೇ ಮಧುರಯಾ ಗಿರಾ ॥೧೮॥

ಆಗ ಒಂದು ವರ್ಷವು ಕಳೆದ ಮೇಲೆ ಋಷಿಶ್ರೇಷ್ಠರಾದ ಉಪಯಾಜರು ಯೋಗ್ಯವಾದ ಕಾಲದಲ್ಲಿ ದ್ರುಪದನನ್ನು ಕುರಿತು ಮಧುರವಾದ ಮಾತುಗಳಿಂದ ಹೀಗೆ ಹೇಳಿದರು.

ಜ್ಯೇಷ್ಠೋ ಭ್ರಾತಾ ಮಮಾಗೃಹ್ಣಾದ್ ವಿಚಿನ್ವನ್ ವನನಿರ್ಝರೇ ।
ಅಪರಿಜ್ಞಾತಶೌಚಾಯಾಂ ಭೂಮೌ ನಿಪತಿತಂ ಫಲಮ್ ॥೧೯॥

ಕಾಡಿನಲ್ಲಿ ಒಂದು ತೊರೆಯ ಬಳಿಯಲ್ಲಿ ಹುಡುಕುತ್ತಾ ನನ್ನ ಅಣ್ಣನು ಶುದ್ಧಿಯು ತಿಳಿಯದಿದ್ದ ಭೂಮಿಯಲ್ಲಿ ಬಿದ್ದ ಒಂದು ಫಲವನ್ನು ತೆಗೆದುಕೊಂಡನು.

ತದಪಶ್ಯಮಹಂ ಭ್ರಾತುರಸಾಂಪ್ರತಮನುವ್ರಜನ್ ।
ವಿಮರ್ಶಂ ಸಂಕ ರಾದಾನೇ ನಾಯಂ ಕುರ್ಯಾತ್ ಕಥಂಚನ ॥೨೦॥

ನಾನು ಅಣ್ಣನ ಹಿಂದೆಯೇ ಹೋಗುತ್ತಾ ಅವನು ಮಾಡಿದ ಅನುಚಿತ ಕರ್ಮವನ್ನು ನೋಡಿ, ಇವನು ಅಶುದ್ಧವಾದ ಪದಾರ್ಥಗಳನ್ನು ಸ್ವೀಕರಿಸುವುದಕ್ಕೂ ಸಹ ಎಂದೂ ವಿಮರ್ಶೆ ಮಾಡುವುದಿಲ್ಲ ಎಂದು ತಿಳಿದೆನು.

ಯೋ ನಾಪಶ್ಯತ್ ಫಲಂ ದೃಷ್ಟ್ವಾ ದೋಷಾಂಸ್ತಸ್ಯಾನುಬಂಧಿಕಾನ್ ।
ವಿವಿನಕ್ತಿ ನ ಶೌಚಾರ್ಥೀ ಸೋಽನ್ಯತ್ರಾಪಿ ಕಥಂ ಭವೇತ್ ॥೨೧॥

ಯಾರು ಭೂಮಿಯಲ್ಲಿ ಬಿದ್ದಿದ್ದ ಫಲವನ್ನು ನೋಡಿ ಅದರಲ್ಲಿ ಇರಬಹುದಾದ ದೋಷಗಳನ್ನು ಶುದ್ಧಿಯ ದೃಷ್ಟಿಯಿಂದ ವಿಚಾರ ಮಾಡುವುದಿಲ್ಲವೋ ಅವನು ಬೇರೆ ವಿಷಯಗಳಲ್ಲಿಯೂ ಹೀಗೆಯೇ ನಡೆದುಕೊಳ್ಳತ್ತಾನೆ (ಎಂದು ಯೋಚಿಸಿದೆ).

ಸಂಹಿತಾಧ್ಯಯನಸ್ಯಾಂತೇ ಪಂಚಯಜ್ಞಾನ್ ನಿರೂಪ್ಯ ಚ ।
ಭೈಕ್ಷಮುಂಛೇನ ಸಹಿತಂ ಭುಂಜಾನಸ್ತು ತದಾ ತತಃ ।
ಕೀರ್ತಯತ್ಯೇವ ರಾಜರ್ಷೇ ಭೋಜನಸ್ಯ ರಸಂ ಪುನಃ ॥೨೨॥

ರಾಜರ್ಷಿಯೇ, ಸಂಹಿತಾಧ್ಯಯನವನ್ನು ಮಾಡುವ ಕಾಲದಲ್ಲಿ ಪಂಚಯಜ್ಞಗಳನ್ನು ಮಾಡಿ ಮುಂಛವೃತ್ತಿಯಿಂದ ಭಿಕ್ಷಾನ್ನವನ್ನು ಸಂಪಾದಿಸಿ ಭೋಜನವನ್ನು ಮಾಡುವಾಗ ಅವನು ಮತ್ತೆ ಮತ್ತೆ ಆ ಭೋಜನದ ರುಚಿಯ ಬಗ್ಗೆ ಮಾತನಾಡುತ್ತಾನೆ.

ಸಂಹಿತಾಧ್ಯಯನಂ ಕುರ್ವನ್ ವನೇ ಗುರುಕುಲೇ ವಸನ್ ।
ಭೈಕ್ಷಮುಚ್ಛಿಷ್ಟಮನ್ಯೇಷಾಂ ಭುಂಕ್ತೇ ಸ್ಮ ಸತತಂ ತದಾ ।
ಕೀರ್ತಯನ್ ಗುಣಮನ್ನಾನಾಮಘೃಣೇ ಯೋ ಮುಹುರ್ಮುಹುಃ ॥

ಕಾಡಿನಲ್ಲಿ ಗುರುಕುಲದಲ್ಲಿ ವಾಸಮಾಡಿ ಸಂಹಿತಾಧ್ಯಯನವನ್ನು ಮಾಡುತ್ತಾ ಯಾವಾಗಲೂ ಇನ್ನೊಬ್ಬರು ತಿಂದ ಮೇಲೆ ಉಳಿದ ಭೈಕ್ಷಾನ್ನವನ್ನು ಮತ್ತೆ ಮತ್ತೆ ಆ ಅನ್ನವನ್ನು ಕೊಂಡಾಡುತ್ತಾ ಜುಗುಪ್ಸೆಯಿಲ್ಲದೆ ಭುಂಜಿಸುತ್ತಾನೆ.

ತಮಹಂ ಫಲಾರ್ಥಿನಂ ಮನ್ಯೇ ಭ್ರಾತರಂ ತರ್ಕಚಕ್ಷುಷಾ ।
ತಂ ವೈ ಗಚ್ಛಸ್ವ ನೃಪತೇ ಸ ತ್ವಾಂ ಸಂಯಾಜಯಿಷ್ಯತಿ ॥೨೪॥

ನನ್ನ ತರ್ಕಬುದ್ಧಿಯಿಂದ ನಮ್ಮ ಅಣ್ಣನು ಫಲಾಪೇಕ್ಷಿಯೆಂದು ಊಹಿಸುತ್ತೇನೆ. ರಾಜನೇ, ನೀನು ಅವನ ಬಳಿಗೆ ಹೋಗು. ಅವನು ನಿನಗೆ ಒಂದು ಯಾಗವನ್ನು ಮಾಡಿಸುವನು.

ವೈಶಂಪಾಯನ ಃ

ಅಜುಗುಪ್ಸಮಾನೋ ನೃಪತಿಃ ಫಲಾನಾಂ ಕಲುಷಾಂ ಗತಿಮ್ ।
ಉಪಯಾಜವಚಃ ಶ್ರುತ್ವಾ ದ್ರುಪದಃ ಸರ್ವಧರ್ಮವಿತ್ ।
ಭೃಶಂ ಸಂಪೂಜ್ಯ ಪೂಜಾರ್ಹಮೃಷಿಂ ಯಾಜಮುವಾಚ ಚ ॥೨೫॥

ರಾಜನು ಕಾರ್ಯಗಳ ಕುಟಿಲಗತಿಯನ್ನು ನೋಡಿ ಬೇಸರಗೊಳ್ಳಲಿಲ್ಲ. ಸರ್ವಧರ್ಮವನ್ನೂ ತಿಳಿದ ದ್ರುಪದರಾಜನು ಉಪಯಾಜರ ಮಾತುಗಳನ್ನು ಕೇಳಿ ಅವರನ್ನು ಚೆನ್ನಾಗಿ ಪೂಜಿಸಿ ಯಾಜರ ಸಮೀಪಕ್ಕೆ ಬಂದನು.

ಗೋಽಯುತಾನಿ ದದಾಮ್ಯಷ್ಟೌ ಯಾಜ ಯಾಜಯ ಮಾಂ ವಿಭೋ।
ದ್ರೋಣವೈರಾಂತರೇ ತಪ್ತಂ ವಿಷಣ್ಣಂ ಶರಣಾಗತಮ್ ॥೨೬॥

ಯಾಜರೇ, ದ್ರೋಣರ ವಿರೋಧದಿಂದ ತಪ್ತನಾದ ಮತ್ತು ವಿಷಾದದಿಂದ ನಿಮಗೆ ಶರಣಾಗತನಾದ ನನಗೆ ಒಂದು ಯಾಗವನ್ನು ಮಾಡಿಸಿ. ನಾನು ನಿಮಗೆ ಹತ್ತು ಸಹಸ್ರ ಗೋವುಗಳನ್ನು ಕೊಡುತ್ತೇನೆ.

ಬ್ರಹ್ಮಬಂಧುಪ್ರಣಿಹಿತಂ ನ ಕ್ಷತ್ರಂ ಕ್ಷಾತ್ರಿಯೋ ಜಯೇತ್ ।
ತಸ್ಮಾದ್ ದ್ರೋಣಭಯಾರ್ತಂ ಮಾಂ ಭವಾಂಸ್ತ್ರಾತುಮಿಹಾರ್ಹತಿ ॥

ಕ್ಷತ್ರಿಯನಾದವನು ಬ್ರಾಹ್ಮಣರ ಬಲವುಳ್ಳ ಕ್ಷತ್ರಿಯನನ್ನು ಎಂದೂ ಜಯಿಸಲಾರ. ಆದ್ದರಿಂದ ದ್ರೋಣರ ಭಯದಿಂದ ಆರ್ತನಾದ ನನ್ನನ್ನು ತಾವು ರಕ್ಷಿಸಬೇಕು.

ಭಾರದ್ವಾಜಾಗ್ನಿನಾ ದಗ್ಧಂ ಸಂಹ್ಲಾದಯಿತುಮರ್ಹಸಿ ।
ಸ ಹಿ ಬ್ರಹ್ಮವಿದಾಂ ಶ್ರೇಷ್ಠಃ ಶಸ್ತ್ರಾಸ್ತ್ರೇಷ್ವಸಮೋ ಭುವಿ ॥೨೮॥

ದ್ರೋಣರು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದವರು. ಭೂಮಿಯಲ್ಲಿ ಶಸ್ತ್ರಾಸ್ತ್ರಗಳನ್ನು ತಿಳಿದವರಲ್ಲಿ ಅಸದೃಶರಾದವರು. ದ್ರೋಣರೆಂಬ ಅಗ್ನಿಯಿಂದ ಬೆಂದ ನನ್ನನ್ನು ತಾವು ಉಜ್ಜೀವನಗೊಳಿಸಬೇಕು.

ತತೋ ದ್ರೋಣಸ್ತಥಾಽಜೈಷೀತ್ ಸ ಹಿ ವಿಗ್ರಹಕಾರಣಾತ್ ।
ಕ್ಷತ್ರಿಯೋ ನಾಸ್ತಿ ತುಲ್ಯೋಽಸ್ಯ ಪೃಥಿವ್ಯಾಂ ಕಶ್ಚಿದರ್ಹಣಃ ॥೨೯॥

ಅವರ ಜ್ಞಾನ ಮತ್ತು ಅಸ್ತ್ರವಿದ್ಯೆ ಬಲದಿಂದ ಅವರು ನನಗೆ ವಿರೋಧವನ್ನು ಮಾಡಿ ಜಯಿಸಿದರು. ಅವರಿಗೆ ಸಮಾನನಾದ ಕ್ಷತ್ರಿಯನು ಭೂಮಿಯಲ್ಲಿ ಯಾವನೂ ಇಲ್ಲ.

ಭಾರತಾಚಾರ್ಯಮುಖ್ಯಸ್ಯ ಭಾರದ್ವಾಜಸ್ಯ ಧೀಮತಃ ।
ದ್ರೋಣಸ್ಯ ಶರಜಾಲಾನಿ ರಿಪುದೇಹಹರಾಣಿ ಚ ॥೩೦॥

ಭಾರತಕುಮಾರರಿಗೆ ಆಚಾರ್ಯರಾದ, ಶ್ರೇಷ್ಠರಾದ, ಮೇಧಾವಿಗಳಾದ, ಭರದ್ವಾಜರ ಪುತ್ರರಾದ ದ್ರೋಣರು ಪ್ರಯೋಗಿಸಿದ ಬಾಣಗಳ ಸಮೂಹವು ಶತ್ರುದೇಹವನ್ನು ನಾಶಮಾಡುತ್ತವೆ.

ಷಡರತ್ನಿ ಧನುಶ್ಚಾಸ್ಯ ಖಡ್ಗಮಪ್ರತಿಮಂ ಮಹತ್ ।
ಸ ಹಿ ಬ್ರಾಹ್ಮಣವೇಗೇನ ಕ್ಷಾತ್ರಂ ವೇಗಮಸಂಶಯಮ್ ॥೩೧॥

ಪ್ರತಿಹತ್ಯ ಚರತ್ಯೇವ ಭಾರದ್ವಾಜೋ ಮಹಾಮನಾಃ ।
ಕಾರ್ತವೀರ್ಯಸಮೋ ಹ್ಯೇಷ ಖಟ್ವಾಂಗಪ್ರತಿಮೋಽಪಿ ವಾ ॥೩೨॥

ಅವನ ಧನುಸ್ಸು ಆರು ಮೊಳ ಎತ್ತರವಿದೆ. ಅವರ ದೊಡ್ಡ ಖಡ್ಗವು ಅಸದೃಶವಾದದು. ಭರದ್ವಾಜರಪುತ್ರರೂ, ಧೈರ್ಯಶಾಲಿಗಳೂ ಆದ ಅವರು ತಮ್ಮ ಬ್ರಾಹ್ಮಣವೇಗದಿಂದ ಕ್ಷತ್ರಿಯವೇಗವನ್ನು ಅಳಿಸಿ ಹಾಕಿ ಸಂಚರಿಸುತ್ತಾರೆ. ಅವರು ಕಾರ್ತವೀರ್ಯಾರ್ಜುನನಿಗೂ, ಖಟ್ವಾಂಗ ರಾಜನಿಗೂ ಸದೃಶವಾದ ಪರಾಕ್ರಮವುಳ್ಳವರು.

ಕ್ಷತ್ರೋಚ್ಛೇದಪರಾಯತ್ತಂ ಜಾಮದಗ್ನ್ಯಮಿವೋದ್ಯತಮ್ ।
ಸಹಿತಂ ಕ್ಷತ್ರವೇಗೇನ ಬ್ರಾಹ್ಮವೇಗೇನ ಸಾಂಪ್ರತಮ್ ॥೩೩॥

ಅವರು ಕ್ಷತ್ರಿಯಕುಲವನ್ನು ನಾಶಮಾಡುವುದರಲ್ಲಿ ತತ್ಪರರಾದ ಪರಶುರಾಮರಂತೆ ಈಗ ಕ್ಷತ್ರಿಯವೇಗವನ್ನೂ ಬ್ರಾಹ್ಮಣವೇಗವನ್ನೂ ಹೊಂದಿದವರಾಗಿ ಉದ್ಯುಕ್ತರಾಗಿದ್ದಾರೆ.

ನೇಷವಸ್ತಂ ಪರಾಕುರ್ಯುರ್ನ ಚ ಪ್ರಾಸಾ ನ ಚಾಸಯಃ ।
ಬ್ರಾಹ್ಮಂ ತಸ್ಯ ಹರೇತ್ ತೇಜೋ ಮಂತ್ರಾಹುತಿಹುತಂ ಯಥಾ ॥೩೪॥

ಬಾಣಗಳಾಗಲೀ, ಪ್ರಾಸಗಳಾಗಲೀ ಅಥವಾ ಖಡ್ಗಗಳಾಗಲೀ ಎಂದೂ ಅವರನ್ನು ಸೋಲಿಸಲಾರವು. ಮಂತ್ರಾಹುತಿಗಳಿಂದ ಮಾಡಿದ ಹೋಮದಂತೆ ಬ್ರಹ್ಮತೇಜಸ್ಸು ಮಾತ್ರ ಅವರನ್ನು ಸೋಲಿಸಬಹುದು (ಅವರ ಬ್ರಹ್ಮತೇಜಸ್ಸೇ ಅವೆಲ್ಲವನ್ನೂ ಸೋಲಿಸುತ್ತದೆ).

ತಸ್ಯ ಹ್ಯಸ್ತ್ರಬಲಂ ಘೋರಮಪ್ರಸಹ್ಯಂ ಪರೈರ್ಭುವಿ ।
ಶತ್ರೂನ್ ಸಮೇತ್ಯ ಜಯತಿ ಕ್ಷತ್ರಂ ಬ್ರಹ್ಮಪುರಸ್ಕೃತಮ್ ॥೩೫॥

ಅವರ ಅಸ್ತ್ರಬಲವು ಭೂಮಿಯಲ್ಲಿ ಸಹಿಸಲು ಅಸಾಧ್ಯವಾದುದೂ ಮತ್ತು ಘೋರವಾದುದೂ ಆಗಿದೆ. ಅವರು ಬ್ರಾಹ್ಮಣಪುರಸ್ಸರರಾದ ಕ್ಷತ್ರಿಯರನ್ನೂ ಎದುರಿಸಿ ಜಯಿಸುತ್ತಾರೆ.

ಬ್ರಹ್ಮಕ್ಷತ್ರೇ ಚ ಸಹಿತೇ ಬ್ರಹ್ಮತೇಜೋ ವಿಶಿಷ್ಯತೇ ।
ಸೋಽಹಂ ಕ್ಷತ್ರಬಲಾದ್ ದೀನೋ ಬ್ರಹ್ಮತೇಜಃ ಪ್ರಪೇದಿವಾನ್ ॥೩೬॥

ಬ್ರಹ್ಮತೇಜಸ್ಸು ಮತ್ತು ಕ್ಷತ್ರಿಯ ತೇಜಸ್ಸು ಒಟ್ಟಿಗೆ ಸೇರಿದರೆ ಬ್ರಹ್ಮತೇಜಸ್ಸೇ ಶ್ರೇಷ್ಠವಾಗುತ್ತದೆ. ನನ್ನ ಕ್ಷತ್ರಿಯ ಬಲದಿಂದ ದೀನಬಲನಾದ ನಾನು ತಮ್ಮನ್ನು ಹೊಂದಿ ಬ್ರಹ್ಮತೇಜಸ್ಸನ್ನು ಹೊಂದುತ್ತಿದ್ದೇನೆ.

ದ್ರೋಣಾದ್ ವಿಶಿಷ್ಟಮಾಸಾದ್ಯ ಭವಂತಂ ವೇದವಿತ್ತಮಮ್ ।
ದ್ರೋಣಾಂತಕಮಹಂ ಪುತ್ರಂ ಲಭೇಯಂ ಯುಧಿ ದುರ್ಜಯಮ್ ॥

ದ್ರೋಣರಿಗಿಂತಲೂ ವೇದಜ್ಞರಾದ ಮತ್ತು ಶ್ರೇಷ್ಠರಾದ ತಮ್ಮನ್ನು ಹೊಂದಿ ಯುದ್ಧದಲ್ಲಿ ದುರ್ಜಯನಾದಂತಹ, ದ್ರೋಣರನ್ನು ಸಂಹಾರ ಮಾಡುವಂತಹ ಪುತ್ರನನ್ನು ಪಡೆಯುತ್ತೇನೆ.

ದ್ರೋಣಮೃತ್ಯುರ್ಯಥಾ ಮೇಽದ್ಯ ಪುತ್ರೋ ಜಾಯೇತ ವೀರ್ಯವಾನ್ ।
ತತ್ಕರ್ಮ ಕುರು ಮೇ ಯಾಜ ನಿರ್ವಪಾಮ್ಯರ್ಬುದಂ ಗವಾಮ್ ॥೩೮॥

ಯಾಜರೇ ಯಾವ ಕರ್ಮವನ್ನು ಮಾಡಿದರೆ ನನಗೆ ದ್ರೋಣರಿಗೆ ಮೃತ್ಯುವಾಗುವ ಪರಾಕ್ರಮಶಾಲಿಯಾದ ಪುತ್ರನು ಜನಿಸುವನೋ ಅಂತಹ ಕರ್ಮವನ್ನು ಮಾಡಿ. ನಾನು ನಿಮಗೆ ಹತ್ತು ಕೋಟಿ ಗೋವುಗಳನ್ನು ಕೊಡುತ್ತೇನೆ.

ವೈಶಂಪಾಯನಃ

ತಥೇತ್ಯುಕ್ತ್ವಾ ತು ತಂ ಯಾಜೋ ಯಾಜ್ಯಾರ್ಥಂ ವಾಕ್ಯಮಬ್ರವೀತ್ ।
ಗುರ್ವರ್ಥ ಇತಿ ಚಾಕಾಮಮುಪಯಾಜಮಚೋದಯತ್ ॥೩೯॥

''ಹಾಗೆಯೇ ಆಗಲಿ'' ಎಂದು ಹೇಳಿ ಯಾಜರು ಯಾಗ ಮಾಡಲಿರುವ ದ್ರುಪದನ ಪ್ರಯೋಜನವನ್ನು ಉದ್ದೇಶಿಸಿ ''ಅಣ್ಣನಾದ ನನ್ನ ಮಾತನ್ನು ಕೇಳಬೇಕು'' ಎಂದು ಇಷ್ಟವಿಲ್ಲದಿದ್ದ ಉಪಯಾಜರನ್ನು ಒತ್ತಾಯ ಮಾಡಿದರು.

ಯಾಜಃ

ಮಾ ಭೈಸ್ತ್ವಂ ಸಂಪ್ರದಾತಾಸ್ಮಿ ಕರ್ಮಣಾ ಭವತಃ ಸುತಮ್ ।
ಕ್ಷಿಪ್ರಮುತ್ತಿಷ್ಠ ಚಾವ್ಯಗ್ರಃ ಸಂಭಾರಾಂಶ್ಚೋಪಕಲ್ಪಯ ॥೪೦॥

ರಾಜನೇ, ಹೆದರಬೇಡ. ನಾನು ಕರ್ಮವನ್ನು ಮಾಡಿಸಿ ನೀನು ಅಪೇಕ್ಷಿಸುವ ಮಗನನ್ನು ನಿನಗೆ ಕೊಡುವೆನು. ಬೇಗ ಎದ್ದು ಸಾವಧಾನ ಮನಸ್ಸಿನಿಂದ ಯಜ್ಞಸಾಮಗ್ರಿಗಳೆಲ್ಲವನ್ನೂ ಅಣಿಗೊಳಿಸು.

ವೈಶಂಪಾಯನಃ

ಏವಮುಕ್ತ್ವಾ ಪ್ರತಿಜ್ಞಾಯ ಕರ್ಮ ಚಾಸ್ಯಾದದೇ ಮುನಿಃ ।
ಬ್ರಾಹ್ಮಣೋ ದ್ವಿಪದಾಂ ಶ್ರೇಷ್ಠೋ ಯಥಾವಿಧಿ ಯಥಾಕ್ರಮಮ್ ॥೪೧॥

ದ್ವಿಪದರಲ್ಲಿ ಶ್ರೇಷ್ಠರಾದ ಬ್ರಾಹ್ಮಣರಾದ ಯಾಜರು ಹೀಗೆ ಪ್ರತಿಜ್ಞಾಪೂರ್ವಕವಾಗಿ ದ್ರುಪದನಿಗೆ ಆಶ್ವಾಸನೆಯನ್ನು ಕೊಟ್ಟು ವಿಧಿವತ್ತಾಗಿ ಮತ್ತು ಕ್ರಮಪುರಸ್ಸರವಾಗಿ ಯಾಗವನ್ನು ಮಾಡಲು ಉಪಕ್ರಮಿಸಿದರು.

ಯಾಜೋ ದ್ರೋಣವಿನಾಶಾಯ ಯಾಜಯಾಮಾಸ ತಂ ನೃಪಮ್ ।
ಗುರ್ವರ್ಥಂ ಯೋಜಯನ್ ಕರ್ಮ ಯಾಜಸ್ಯಾಪಿ ಸಮೀಪಗಃ ॥೪೨॥

ಯಾಜರು ದ್ರುಪದನಿಗೆ ದ್ರೋಣರ ವಿನಾಶವನ್ನು ಮಾಡುವ ಸಲುವಾಗಿ ಯಾಗವನ್ನು ಮಾಡಿಸಿದರು. ಅಣ್ಣನ ಪ್ರೀತಿಗಾಗಿ ಉಪಯಾಜರೂ ಸಹ ಅಣ್ಣನ ಸಮೀಪದಲ್ಲಿದ್ದು ಸಹಕಾರವನ್ನು ನೀಡಿದರು.

ತತಸ್ತಸ್ಯ ನರೇಂದ್ರಸ್ಯ ಉಪಯಾಜೋ ಮಹಾಮನಾಃ ।
ಆಚಖ್ಯೌ ಕರ್ಮ ವೈತಾನಂ ತದಾ ಪುತ್ರಫಲಾಯ ವೈ ॥೪೩॥

ಆಗ ಮಹರ್ಷಿಗಳಾದ ಉಪಯಾಜರು, ರಾಜನಿಗೆ ಪುತ್ರಫಲವನ್ನು ಪಡೆಯಲು ಮಾಡಬೇಕಾದ ಯಜ್ಞಸಂಬಂಧಿ ಕಾರ್ಯಗಳನ್ನೆಲ್ಲಾ ವಿವರಿಸಿದರು.

ಉಪಯಾಜಃ

ಇಹ ಪುತ್ರೋಮಹಾವೀರ್ಯೋ ಮಹಾತೇಜಾ ಮಹಾಬಲಃ ।
ಇಷ್ಯತೇ ಯದ್ವಿಧೋ ರಾಜನ್ ಭವಿತಾ ತೇ ತಥಾವಿಧಃ ॥೪೪॥

ರಾಜನೇ, ಇಂತಹ ಯಾಗವನ್ನು ಮಾಡಿದರೆ ಎಂತಹ ಮಹಾಪರಾಕ್ರಮಿಯೂ, ಮಹಾತೇಜಸ್ವಿಯೂ, ಮಹಾಬಲವುಳ್ಳವನೂ ಆದ ಪುತ್ರನನ್ನು ಬಯಸತ್ತೀಯೋ ಅಂತಹ ಮಗನೇ ಜನಿಸುತ್ತಾನೆ.

ವೈಶಂಪಾಯನಃ

ಭಾರದ್ವಾಜಸ್ಯ ಹಂತಾರಂ ಸೋಽಭಿಸಂಧಾಯ ಭೂಮಿಪಃ ।
ಆಜಹ್ರೇಽಯಂ ತಥಾ ಯಜ್ಞಂ ದ್ರುಪದಃ ಕರ್ಮಸಿದ್ಧಯೇ ॥೪೫॥

ರಾಜನು ದ್ರೋಣರನ್ನು ಸಂಹರಿಸುವ ಪುತ್ರನನ್ನು ಸಂಕಲ್ಪಿಸಿ ಆ ಪ್ರಯೋಜನದ ಸಿದ್ಧಿಗಾಗಿ ಅಂತಹ ಯಜ್ಞವನ್ನೇ ಮಾಡಿದನು.

ಬ್ರಾಹ್ಮಣೋ ದ್ವಿಪದಾಂ ಶ್ರೇಷ್ಠೋ ಜುಹಾವ ಚ ಯಥಾವಿಧಿ ।
ಕೋಕಿಲಾನಾಮತಾಂ ತಸ್ಯ ಚಕ್ರೇ ವೈ ಪುತ್ರಗೃದ್ಧಿನಃ ॥೪೬॥

ದ್ವಿಪದರಲ್ಲಿ ಶ್ರೇಷ್ಠರಾದ ಬ್ರಾಹ್ಮಣರಾದ ಯಾಜರು ಮಗನನ್ನು ಬಯಸುವ ರಾಜನ ಸಲುವಾಗಿ ವಿಧಿವತ್ತಾಗಿ ಯಾಗವನ್ನು ಮಾಡಿ ಆ ಯಾಗವನ್ನು 'ಕೋಕಿಲ' ಎಂಬ ಹೆಸರಿನಿಂದ ಕರೆದರು.

ಕೋಗಿಲೆಗಳು ಮೊಟ್ಟೆ ಇಡುತ್ತವೆ. ಆದರೆ ಅವುಗಳನ್ನು ಸಾಕುವುದಿಲ್ಲ. ಕಾಗೆಗಳು ಸಾಕುತ್ತವೆ. ಇಲ್ಲಿಯೂ ಸಹ ಅಗ್ನಿಯಿಂದಲೂ ವೇದಿ ಮಧ್ಯದಿಂದಲೂ ಬಂದ ಮಕ್ಕಳನ್ನು ಅಗ್ನಿಯಾಗಲೀ, ವೇದಿಯಾಗಲೀ ಸಾಕದೇ ದ್ರುಪದನ ಪತ್ನಿಯು ಸಾಕುತ್ತಾಳೆ ಎಂಬ ಭವಿಷ್ಯಜ್ಞಾನದಿಂದ ಯಾಗಕ್ಕೆ ಯಾಜರು ಕೋಕಿಲ ಎಂಬ ಹೆಸರನ್ನು ಇಟ್ಟರು.

ಸೌತ್ರಾಮಣಿಂ ತಾಂ ತು ಪತ್ನೀಂ ತತಃ ಕಾಲೇऽಭ್ಯಧಾತ್ ತದಾ ।
ಯಾಜಸ್ತು ಸವನಸ್ಯಾಂತೇ ದೇವೀಮಾಹ್ವಾಪಯತ್ ತದಾ ॥೪೭॥

ಮಣಿಗಳ ಹಾರವನ್ನು ಧರಿಸಿದ್ದ ದ್ರುಪದನ ಪತ್ನಿಯನ್ನು ಹೋಮಾವಸಾನದಲ್ಲಿ ಯಾಜರು ಕರೆದರು.

ಸೌತ್ರಾಮಣಿ ಎಂದರೆ ಮಣಿಗಳ ಮಾಲೆಯನ್ನು ಧರಿಸಿದವಳು ಎಂದೂ ಒಂದು ಅರ್ಥ. ಸೂತ್ರಾಮಣಿ ಯಾಗಕ್ಕೆ ಸಂಬಂಧಿಸಿದುದು ಎಂದೂ ಒಂದು ಅರ್ಥ. ಸೂತ್ರಾಮಣಿ ಯಾಗದಲ್ಲಿ ಮದ್ಯಪಾನವು ಉಕ್ತವಾಗಿದೆ. ದ್ರುಪದನ ಪತ್ನಿಯು ಮದ್ಯಪಾನವನ್ನು ಮಾಡಿ ಮತ್ತಳಾಗಿದ್ದಾಳೆ ಎಂಬ ಸೂಚನೆಯೂ ಇಲ್ಲಿದೆ. ಆದ್ದರಿಂದಲೇ ಅವಳು ಋಷಿಗಳನ್ನು ಕುರಿತು ವಿನಯದಿಂದ ಮಾತನಾಡುವುದಿಲ್ಲ.

ಪ್ರೇಹಿ ಮಾಂ ರಾಜ್ಞಿ ಪೃಷತಿ ಮಿಥುನಂ ತ್ವಾಮುಪಸ್ಥಿತಮ್ ।
ಕುಮಾರಶ್ಚ ಕುಮಾರೀ ಚ ಪಿತೃವಂಶವಿವೃದ್ಧಯೇ ॥೪೮॥

ಪೃಷತನ ರಾಣಿಯೇ, ಬೇಗ ನನ್ನ ಬಳಿಗೆ ಬಾ. ಪಿತೃವಂಶ ವಿವರ್ಧನರಾದ ಒಬ್ಬ ಕುಮಾರ ಮತ್ತು ಒಬ್ಬ ಕುಮಾರಿಯು ನಿನ್ನನ್ನು ನಿರೀಕ್ಷಿಸುತ್ತಿದ್ದಾರೆ.

ಪೃಷತೀ

ನಾಲಿಪ್ತಂ ವೈ ಮಮ ಮುಖಂ ಪುಣ್ಯಾನ್ ಗಂಧಾನ್ ಬಿಭರ್ಮಿ ಚ ।
ನ ಪತ್ನೀ ತೇऽಸ್ತಿ ಸೂತ್ಯರ್ಥಂ ತಿಷ್ಠ ಯಾಜ ಮಮ ಪ್ರಿಯೇ ॥೪೯॥

ನಾನು ನನ್ನ ಮುಖಕ್ಕೆ ಇನ್ನೂ ದ್ರವ್ಯಗಳನ್ನು ಲೇಪಿಸಿಕೊಂಡಿಲ್ಲ. ಸುಗಂಧದ್ರವ್ಯಗಳನ್ನು ಧರಿಸಿಲ್ಲ. ಮಕ್ಕಳನ್ನು ಪಡೆಯುವುದಕ್ಕೋಸ್ಕರ ನನ್ನ ಬಳಿಗೆ ಬಾ ಎಂದು ಕರೆಯುವುದಕ್ಕೆ ನಾನು ನಿನ್ನ ಪತ್ನಿಯಲ್ಲ. ಯಾಜನೇ ಸ್ವಲ್ಪ ಸಮಯ ತಡೆದು ನನಗೆ ಪ್ರಿಯವನ್ನುಂಟು ಮಾಡು.

ಯಾಜಃ

ಯಾಜೇನಾಶ್ರಪಿತಂ ಹವ್ಯಮುಪಯಾಜೇನ ಮಂತ್ರಿತಮ್ ।
ಕಥಂ ಕಾಮಂ ನ ಸಂದಧ್ಯಾತ್ ಪೃಷತಿ ಪ್ರೇಹಿ ತಿಷ್ಠ ವಾ ॥೫೦॥

ಯಾಜರು ಸಿದ್ಧಪಡಿಸಿ ಉಪಯಾಜರು ಅಭಿಮಂತ್ರಿಸಿದ ಹವ್ಯ ಪದಾರ್ಥವು ಹೇಗೆ ಅಪೇಕ್ಷಿತ ಫಲವನ್ನು ಕೊಡದೇ ಇದ್ದೀತು? ದ್ರುಪದ ಪತ್ನಿಯೇ ನೀನು ಬೇಕಾದರೆ ಬಾ ಇಲ್ಲದಿದ್ದರೆ, ಬಿಡು.

ವೈಶಂಪಾಯನಃ

ಏವಮುಕ್ತೇ ತು ಯಾಜೇನ ಹುತೇ ಹವಿಷಿ ಸಂಸ್ಕೃತೇ ।
ಉತ್ತಸ್ಥೌ ಪಾವಕಾತ್ ತಸ್ಮಾತ್ ಕುಮಾರೋ ದೇವಸಮ್ಮಿತಃ ॥೫೧॥

ಯಾಜರು ಹೀಗೆ ಮಾತನಾಡಿದಾಗ ಸಂಸ್ಕೃತವಾದ ಹವಿಸ್ಸನ್ನು ಅಗ್ನಿಯೊಳಗೆ ಹಾಕಲು ಅಗ್ನಿಕುಂಡದಿಂದ ದೇವಕಾಂತಿಯುಳ್ಳ ಕುಮಾರನು ಹೊರಬಂದನು.

ಜ್ವಾಲಾರೂಪೀ ಘೋರವರ್ಣಃ ಕಿರೀಟೀ ವರ್ಮ ಧಾರಯನ್ ।
ವೀರಃ ಸಖಿಡ್ಗಃ ಸಶರೋ ಧನುಷ್ಮಾನ್ ವಿನದನ್ ಮುಹುಃ ॥೫೨॥

ಜ್ವಾಲಾರೂಪಿಯಾದ ಅವನು ಘೋರವರ್ಣವನ್ನು ಹೊಂದಿ ಕಿರೀಟವನ್ನೂ, ಕವಚವನ್ನೂ ಧರಿಸಿ, ಖಡ್ಗವನ್ನೂ ಮತ್ತು ಬಿಲ್ಲು ಬಾಣಗಳನ್ನೂ ಹಿಡಿದು ಮತ್ತೆ ಮತ್ತೆ ಗರ್ಜಿಸುತ್ತಾ ಧೀರನಾದ ಅವನು ಹೊರಬಂದನು.

ಸೋಽಧ್ಯಾರೋಹದ್ ರಥವರಂ ತೇನ ಚ ಪ್ರಯಯೌ ತದಾ ।
ಜಾತಮಾತ್ರೇ ಕುಮಾರೇ ಚ ವಾಕ್ ಕಿಲಾಂತರ್ಹಿತಾಽಬ್ರವೀತ್ ॥೫೩॥

ಅವನು ಆಗಲೇ ಒಂದು ರಥವನ್ನು ಏರಿ ಹೊರಟು ಹೋದನು. ಅವನು ಜನಿಸುತ್ತಿರಲು ಒಂದು ಅಶರೀರವಾಣಿಯಾಯಿತು.

ಏಷ ಶಿಷ್ಯಶ್ಚ ಮೃತ್ಯುಶ್ಚ ಭಾರದ್ವಾಜಸ್ಯ ಧೀಮತಃ ।
ಭಯಾಪಹೋ ರಾಜಪುತ್ರಃ ಪಾಂಚಾಲಾನಾಂ ಯಶಸ್ಕರಃ ॥೫೪॥

ಇವನು ಮೇಧಾವಿಗಳಾದ ದ್ರೋಣರಿಗೆ ಶಿಷ್ಯನೂ ಹೌದು, ಮೃತ್ಯುವೂ ಹೌದು. ಪಾಂಚಾಲರಿಗೆ ಯಶಸ್ಸನ್ನು ತರುವ ಈ ರಾಜಕುಮಾರನು ಅವರ ಭಯವನ್ನು ನಿವಾರಿಸುತ್ತಾನೆ.

ರಾಜ್ಞಃ ಶೋಕಾಪಹೋ ಜಾತ ಏಷ ದ್ರೋಣವಧಾಯ ಹಿ ।
ಇತ್ಯವೋಚನ್ಮಹದ್ಭೂತಮದೃಶ್ಯಂ ಖೇಚರಂ ತದಾ ॥೫೫॥

ಇವನು ದ್ರುಪದನ ಶೋಕವನ್ನು ಪರಿಹರಿಸಿ, ದ್ರೋಣರ ವಧೆಯನ್ನು ಮಾಡಲು ಜನಿಸಿದ್ದಾನೆ. ಹೀಗೆ ಆಕಾಶಚಾರಿಯಾದ ಒಂದು ಮಹಾಭೂತವು ಅದೃಶ್ಯವಾಗಿ ಹೇಳಿತು.

ದ್ವಿತೀಯಾಯಾಂ ಚ ಹೋತ್ರಾಯಾಂ ಹುತೇ ಹವಿಷಿ ಮಂತ್ರತಃ ।
ಕುಮಾರೀ ಚಾಪಿ ಪಾಂಚಾಲೀ ವೇದಿಮಧ್ಯಾತ್ ಸಮುತ್ಥಿತಾ ॥೫೬॥

ಎರಡನೆಯ ಆಹುತಿಯನ್ನು ಮಂತ್ರಪೂರ್ವಕವಾಗಿ ಅಗ್ನಿಯಲ್ಲಿ ಹೋಮ ಮಾಡಿದಾಗ ವೇದಿಮಧ್ಯದಿಂದ ಕುಮಾರಿ ಪಾಂಚಾಲಿಯು ಎದ್ದು ಬಂದಳು.

ಪ್ರತ್ಯಾಖ್ಯಾತೇ ಪೃಷತ್ಯಾ ಚ ಯಾಜಕೇ ಭರತರ್ಷಭ ।
ಪುನಃ ಕುಮಾರೀ ಪಾಂಚಾಲೀ ಸುಭಗಾ ವೇದಿಮಧ್ಯಗಾ ॥೫೭॥

ಅಂತರ್ವೇದ್ಯಾಂ ಸಮುದ್ಭೂತಾ ಕನ್ಯಾ ಸಾ ಸುಮನೋಹರಾ ।
ಶ್ಯಾಮಾ ಪದ್ಮಪಲಾಶಾಕ್ಷೀ ನೀಲಕುಂಚಿತಮೂರ್ಧಜಾ ॥೫೮॥

ಭರತಶ್ರೇಷ್ಠನೇ, ದ್ರುಪದಪತ್ನಿಯು ಯಾಜರನ್ನು ಪುನಃ ನಿರಾಕರಿಸಿದ ಮೇಲೆ ಸುಂದರಿಯೂ, ಸೂಕ್ಷ್ಮಕಟಿಯೂ, ಮನೋಹರಳೂ, ಶ್ಯಾಮವರ್ಣದವಳೂ, ಪದ್ಮನೇತ್ರೆಯೂ, ಕಪ್ಪಾದ ಗುಂಗುರುಕೂದಲು ಉಳ್ಳವಳೂ ಆದ ಕನ್ಯೆಯು ವೇದಿಯ ಮಧ್ಯದಿಂದ ಎದ್ದು ಬಂದಳು.

ಮಾನುಷೀ ವಿಗ್ರಹಂ ಕೃತ್ವಾ ಸಾಕ್ಷಾದಮರವರ್ಣಿನೀ ।
ನೀಲೋತ್ಪಲಸಮೋ ಗಂಧೋ ಯಸ್ಯಾಃ ಕ್ರೋಶಾತ್ ಪ್ರವಾಯತಿ ॥೫೯॥

ದೇವಲೋಕದ ಸುಂದರಿಯು ಮನುಷ್ಯರೂಪವನ್ನು ಧರಿಸಿ ಬಂದಂತೆ ಅವಳು ಬಂದಳು. ಅವಳ ದೇಹದ ನೀಲೋತ್ಪಲಪುಷ್ಪಗಂಧವು ಒಂದು ಕ್ರೋಶ ದೂರದವರೆಗೂ ಬರುತ್ತಿತ್ತು.

ಯಾ ಬಿಭರ್ತಿ ಪರಂ ರೂಪಂ ಯಸ್ಯಾ ನಾಸ್ತ್ಯುಪಮಾ ಭುವಿ ।
ದೇವದಾನವಯಕ್ಷಾಣಾಮೀಪ್ಸಿತಾ ದೇವವರ್ಣಿನೀ ॥೬೦॥

ಅವಳಿಗೆ ಅತ್ಯಂತವಾದ ಸುಂದರ ರೂಪವಿದ್ದಿತು. ದೇವಸುಂದರಿಯಾದ ಅವಳಿಗೆ ಭೂಲೋಕದಲ್ಲಿ ಸಮಾನರಾದ ರೂಪವತಿಯರು ಯಾರೂ ಇರಲಿಲ್ಲ. ಅವಳು ದೇವತೆಗಳಿಗೂ, ದಾನವರಿಗೂ ಮತ್ತು ಯಕ್ಷರಿಗೂ ಸಹ ಅಪೇಕ್ಷಿತಳಾಗಿದ್ದಳು.

ತಾಂ ಸುಜಾತಾಂ ಗುರುಶ್ರೋಣೀಂ ವಾಗುವಾಚಾಶರೀರಿಣೀ ।
ಸರ್ವಯೋಷಿದ್ವರಾ ಕೃಷ್ಣಾ ಕ್ಷಯಂ ಕ್ಷತ್ರಂ ನಿನೀಷತಿ ॥೬೧॥

ಅವಳು ಜನಿಸಿದಾಗ ಆ ಸುಂದರಿಯಾದ, ನಿತಂಬಿನಿಯನ್ನು ಕುರಿತು ಅಶರೀರವಾಣಿಯಾಯಿತು. ಇವಳು ಎಲ್ಲಾ ಸ್ತ್ರೀಯರಿಗಿಂತ ಶ್ರೇಷ್ಠಳಾದವಳು. ಕೃಷ್ಣೆಯಾದ ಇವಳು ಕ್ಷತ್ರಿಯಕುಲವನ್ನು ನಾಶಮಾಡುತ್ತಾಳೆ.

ಸುರಕಾರ್ಯಮಿಯಂ ಕಾಲೇ ಕರಿಷ್ಯತಿ ಸುಮಧ್ಯಮಾ ।
ತಚ್ಛ್ರುತ್ವಾ ಸರ್ವಪಾಂಚಾಲಾಃ ಪ್ರಣೇದುಃ ಸಿಂಹಸಂಘವತ್ ॥೬೨॥

ನ ಚೈನಾನ್ ಹರ್ಷಸಂಪೂರ್ಣಾನಿಯಂ ಸೇಹೇ ವಸುಂಧರಾ ।
ತಥಾ ತು ಮಿಥುನಂ ಜಜ್ಞೇ ದ್ರುಪದಸ್ಯ ಮಹಾತ್ಮನಃ ॥೬೩॥

ಈ ಸುಮಧ್ಯಮಳಾದ ಕನ್ಯೆಯು ಯೋಗ್ಯವಾದ ಕಾಲದಲ್ಲಿ ದೇವತಾಕಾರ್ಯವನ್ನು ಮಾಡುವಳು. ಈ ಶುಭ ಸಮಾಚಾರವನ್ನು ಕೇಳಿದ ಎಲ್ಲಾ ಪಾಂಚಾಲರೂ ಸಿಂಹಗರ್ಜನೆಯನ್ನು ಮಾಡಿದರು. ಭೂಮಿಗೆ ಅವರ ಸಂತೋಷದ ಭಾರವನ್ನು ಹೊರಲು ಸಾಧ್ಯವಾಗಲಿಲ್ಲ.

ಕುಮಾರಶ್ಚ ಕುಮಾರೀ ಚ ಮನೋಜ್ಞೌ ಚ ನರರ್ಷಭ ।
ಶ್ರಿಯಾ ಪರಮಯಾ ಯುಕ್ತೌ ಕ್ಷಾತ್ರೇಣ ವಪುಷಾ ತಥಾ ॥೬೪॥

ರಾಜನೇ ಹೀಗೆ ಮಹಾತ್ಮನಾದ ದ್ರುಪದನಿಗೆ ಅವಳಿ ಮಕ್ಕಳಾದ, ಮನೋಹರರಾದ, ಪರಮಕಾಂತಿಯಿಂದ ಕೂಡಿದ ಕ್ಷಾತ್ರತೇಜಸ್ಸಿನಿಂದ ಕೂಡಿದ ಒಬ್ಬ ಕುಮಾರ ಮತ್ತು ಒಬ್ಬ ಕುಮಾರಿಯು ಜನಿಸಿದರು.

ತೌ ದೃಷ್ಟ್ವಾ ಪೃಷತೀ ಯಾಜಂ ಪ್ರಪೇದೇ ಸಾ ಸುತಾರ್ಥಿನೀ ।
ನ ಮಾಂ ವಿನಾऽನ್ಯಾಂ ಜನನೀಂ ಜಾನೀಯೇತಾಮಿಮಾವಿತಿ ॥೬೫॥

ಆ ಮಕ್ಕಳನ್ನು ನೋಡಿದ ದ್ರುಪದಪತ್ನಿಯು ಆ ಮಕ್ಕಳ ಮೇಲಿನ ಆಸೆಯಿಂದ ಯಾಜರನ್ನು ಸಮೀಪಿಸಿ, ಪೂಜ್ಯರೇ, ನನ್ನನ್ನು ಬಿಟ್ಟು ಬೇರೆಯವರನ್ನು ಈ ಮಕ್ಕಳು ತಾಯಿ ಎಂದು ಕರೆಯಬಾರದು. ಅಂತಹ ವರವನ್ನು ಕೊಡಿ ಎಂದು ಕೇಳಿದಳು.

ತಥೇತ್ಯುವಾಚ ತಾಂ ಯಾಜೋ ರಾಜ್ಞಃ ಪ್ರಿಯಚಿಕೀರ್ಷಯಾ ।
ತಯೋಸ್ತು ನಾಮಾನೀ ಚಕ್ರುರ್ದ್ವಿಜಾಃ ಸಂಪೂರ್ಣಮಾನಸಾಃ ॥೬೬॥

ಯಾಜರು ದ್ರುಪದರಾಜನಿಗೆ ಸಂತೋಷವನ್ನು ಉಂಟು ಮಾಡುವ ಸಲುವಾಗಿ ಹಾಗೆಯೇ ಆಗಲಿ ಎಂದು ಹೇಳಿದರು. ಬ್ರಾಹ್ಮಣರು ಹರ್ಷಪೂರ್ಣವಾದ ಮನಸ್ಸಿನಿಂದ ಆ ಮಕ್ಕಳಿಗೆ ನಾಮಕರಣವನ್ನು ಮಾಡಿದರು.

ಧೃಷ್ಟತ್ವಾದತಿಧೃಷ್ಣುತ್ವಾತ್ ಧರ್ಮಾತ್ ದ್ಯುತ್ಸಂಭವಾದಪಿ ।
ಧೃಷ್ಟದ್ಯುಮ್ನಃ ಕುಮಾರೋऽಯಂ ದ್ರುಪದಸ್ಯ ಭವತ್ವಿತಿ ॥೬೭॥

ಸ್ವಯಂ ಧೈರ್ಯಶಾಲಿಯಾದುದರಿಂದಲೂ, ಶತ್ರುನಾಶಕ- ನಾದುದರಿಂದಲೂ ಯಜ್ಞವನ್ನು ಮಾಡಿದ ಪುಣ್ಯದಿಂದ ಕಾಂತಿಯುತನಾದುದರಿಂದಲೂ ದ್ರುಪದನ ಈ ಕುಮಾರನು ಧೃಷ್ಟದ್ಯುಮ್ನ ಎಂದು ಕರೆಯಲ್ಪಡಲಿ.

ಕೃಷ್ಣೇತ್ಯೇವಾಭವತ್ ಕೃಷ್ಣಾ ರಾಜನ್ಯೇಷಾ ಚ ಪಾರ್ಷತೀ ।
ತಥಾ ತನ್ನಿಧನಂ ಜಜ್ಞೇ ದ್ರುಪದಸ್ಯ ಮಹಾಮಖೇ ॥೬೮॥

.ವೈದಿಕಾಧ್ಯಯನೇ ಪಾರಂ ಧೃಷ್ಟದ್ಯುಮ್ನೋ ಗತಸ್ತತಃ ।
ಧೃಷ್ಟದ್ಯುಮ್ನಂ ತು ಪಾಂಚಾಲ್ಯಮಾನೀಯ ದ್ರುಪದಾತ್ಮಜಮ್ ।
ಉಪಾಕರೋದಸ್ತ್ರಹೇತೋರ್ಭಾರದ್ವಾಜಃ ಪ್ರತಾಪವಾನ್ ॥೬೯॥

ರಾಜನೇ, ಕೃಷ್ಣವರ್ಣದವಳಾದ ಈ ದ್ರುಪದನ ಮಗಳು ಕೃಷ್ಣಾ ಎಂದೇ ಕರೆಯಲ್ಪಡಲಿ.

ಹೀಗೆ ದೊಡ್ಡ ಯಾಗದಲ್ಲಿ ದ್ರುಪದನಿಗೆ ಅವಳಿ ಮಕ್ಕಳು ಜನಿಸಿದವು. ಅನಂತರ ಧೃಷ್ಟದ್ಯುಮ್ನನು ವೇದವೈದಿಕಾಧ್ಯಯನದಲ್ಲಿ ಪಾರಂಗತನಾದನು. ಭಾರದ್ವಾಜರ ಪುತ್ರರಾದ, ಪ್ರತಾಪಶಾಲಿಗಳಾದ ದ್ರೋಣರು ದ್ರುಪದನ ಪುತ್ರನಾದ ಧೃಷ್ಟದ್ಯುಮ್ನನನ್ನು ಕರೆಸಿ ಅವನಿಗೂ ಅಸ್ತ್ರವಿದ್ಯೆಯನ್ನು ಕಲಿಸಿದರು.

ಅಮೋಕ್ಷಣೀಯಂ ದೈವಂ ಹಿ ಏವಂ ಮತ್ವಾ ಮಹಾಮತಿಃ ।
ಯಥಾವತ್ ಕೃತವಾನ್ ದ್ರೋಣ ಆತ್ಮಕೀರ್ತ್ಯರ್ಥಕಾರಣಾತ್ ।
ಸರ್ವಾಸ್ತ್ರಾಣಿ ಸ ತು ಕ್ಷಿಪ್ರಮಾಪ್ತವಾನ್ ಪರಯಾ ಮುದಾ ॥೭೦॥

ವಿಧಿಯನ್ನು ಮೀರಲು ಯಾರಿಗೂ ಸಾಧ್ಯವಿಲ್ಲ ಎಂದು ತಿಳಿದ ಮೇಧಾವಿಗಳಾದ ದ್ರೋಣರು ತಮ್ಮ ಕೀರ್ತಿಯನ್ನು ರಕ್ಷಿಸಿಕೊಳ್ಳುವ ಕಾರಣದಿಂದಲೂ ಧೃಷ್ಟದ್ಯುಮ್ನನಿಗೆ ಕ್ರಮಪ್ರಕಾರವಾಗಿ ಎಲ್ಲಾ ಅಸ್ತ್ರವಿದ್ಯೆಯನ್ನೂ ಕಲಿಸಿದರು. ಧೃಷ್ಟದ್ಯುಮ್ನನಾದರೋ ಬಹಳ ಸಂತೋಷದಿಂದ ಶೀಘ್ರವಾಗಿ ಎಲ್ಲಾ ಅಸ್ತ್ರಗಳನ್ನೂ ಸಂಪಾದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಅಷ್ಟತ್ರಿಂಶ್ಯಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ಷಡಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೧

ಕಾಲೇ ಚ ತಸ್ಮಿನ್ ಪೃಷತೋಽನಪತ್ಯೋ
ವನೇ ತು ಪಾಂಚಾಲ ಪತಿಶ್ಚಚಾರ ।
ತಪೋ ಮಹತ್ ತಸ್ಯ ತಥಾ ವರಾಪ್ಸರಾ-
ವಲೋಕನಾತ್ ಸ್ಕಂದಿತಮಾಶು ರೇತಃ ॥೬೭॥

ಅದೇ ಸಮಯದಲ್ಲಿ ಪಾಂಚಾಲದೇಶದ ದೊರೆ ಪೃಷತ ಮಕ್ಕಳಿಲ್ಲದವನಾದ್ದರಿಂದ ಅರಣ್ಯದಲ್ಲಿ ದೊಡ್ಡ ತಪಸ್ಸು ಮಾಡಿದ. ಅವನಿಗೆ ಓರ್ವ ಉತ್ತಮ ಅಪ್ಸರೆಯ ದರ್ಶನದಿಂದ ತಕ್ಷಣ ವೀರ್ಯ ಕೆಳಗೆ ಬಿದ್ದಿತು.

ಸ ತದ್ ವಿಲಜ್ಜಾವಶತಃ ಪದೇನ
ಸಮಾಕ್ರಮತ್ ತಸ್ಯ ಬಭೂವ ಸೂನುಃ ।
ಹಹೂ ತು ನಾಮ್ನಾ ಸ ವಿರಿಂಚಗಾಯಕೋ
ನಾಮ್ನಾವಹೋ ಯೋ ಮರುತಾಂ ತದಂಶಯುಕ್ ॥೬೮॥

ಪೃಷತ ನಾಚಿಕೆಯಿಂದ ವೀರ್ಯವನ್ನು ಕಾಲಿಂದ ಮುಚ್ಚಿದ. ಆ ವೀರ್ಯದಿಂದ ಅವನಿಗೆ ಒಬ್ಬ ಮಗ ಜನಿಸಿದ. ಅವನು ವಿಶೇಷವಾಗಿ ಬ್ರಹ್ಮನ ಗಾಯಕ. ಹೆಸರು ಹಹೂ ಎಂದು. ಮರುತ್ತುಗಳಲ್ಲಿ ಒಬ್ಬನಾದ ಆವಹನ ಅಂಶಯುಕ್ತನಾಗಿದ್ದ.

★ ★ ★ ★

ನೂರ ಮೂವತ್ತೊಂಭತ್ತನೆಯ ಅಧ್ಯಾಯ

(ತಪಸ್ಸು ಮಾಡುತ್ತಿದ್ದ ಪಾಂಚಾಲರಾಜನಾದ ಪೃಷತನಿಗೆ ಮೇನಕೆಯ ದರ್ಶನದಿಂದ ದ್ರುಪದನ ಉತ್ಪತ್ತಿ.)

ಜನಮೇಜಯಃ

ದ್ರುಪದಸ್ಯಾಪಿ ಬ್ರಹ್ಮರ್ಷೇ ಶ್ರೋತುಮಿಚ್ಛಾಮಿ ಸಂಭವಮ್ ।
ಕಥಂ ಚಾಪಿ ಸಮುತ್ಪನ್ನಃ ಕಥಮಸ್ತ್ರಾಣ್ಯವಾಪ್ತವಾನ್ ॥೧॥

ಬ್ರಹ್ಮರ್ಷಿಗಳಾದ ವೈಶಂಪಾಯನರೇ, ನಾನು ದ್ರುಪದನ ಜನ್ಮವನ್ನು ಕೇಳಬಯಸುತ್ತೇನೆ. ಅವನು ಹೇಗೆ ಜನಿಸಿದನು ಮತ್ತು ಹೇಗೆ ಅಸ್ತ್ರಗಳನ್ನು ಪಡೆದನು.

ಏತದಿಚ್ಛಾಮಿ ಭಗವನ್ ತತ್ತ್ವತಃ ಶ್ರೋತುಂ ದ್ವಿಜೋತ್ತಮ ।
ಕೌತೂಹಲಂ ಜನ್ಮಸು ಮೇ ಕಥ್ಯಮಾನೇಷ್ವತೀವ ಹಿ ॥೨॥

ಪೂಜ್ಯರಾದ ಬ್ರಾಹ್ಮಣಶ್ರೇಷ್ಠರೇ, ನಿಮ್ಮಿಂದ ಈ ವಿಷಯವನ್ನು ಕೇಳಲು ಬಯಸುತ್ತೇನೆ. ನೀವು ಇಂತಹ ವಿಚಿತ್ರವಾದ ಜನನಗಳನ್ನು ಹೇಳುತ್ತಿರುವಾಗ ನನಗೆ ಕುತೂಹಲವುಂಟಾಗಿದೆ.

ವೈಶಂಪಾಯನಃ

ರಾಜಾ ಬಭೂವ ಪಾಂಚಾಲಃ ಪುತ್ರಾರ್ಥೀ ಪುತ್ರಕಾರಣಾತ್ ।
ವನಂ ಗತೋ ಮಹಾರಾಜ ತಪಸ್ತೇಪೇ ಸುದಾರುಣಮ್ ॥೩॥

ಪಾಂಚಾಲದೇಶದಲ್ಲಿ ಪೃಷತನೆಂಬ ರಾಜನಿದ್ದನು..ಎಲೈ ರಾಜನೇ, ಮಗನನ್ನು ಬಯಸಿದ ಅವನು ಮಗನನ್ನು ಪಡೆಯುವ ಕಾರಣಕ್ಕಾಗಿ ಕಾಡಿಗೆ ಹೋಗಿ ಉಗ್ರವಾದ ತಪಸ್ಸನ್ನು ಮಾಡಿದನು.

ಆರಾಧಯನ್ ಪ್ರಯತ್ನೇನ ತಸ್ಯಾಪತ್ಯಸ್ಯ ಕಾರಣಾತ್ ।
ತಸ್ಯ ಸಂತಪ್ಯಮಾನಸ್ಯ ವನೇ ಮೃಗಗಣಾಯುತೇ ।
ಕಾಲಸ್ತು ಸುಮಹಾನ್ ರಾಜನ್ ವ್ಯತ್ಯಯಾತ್ ಸುತಕಾರಣಾತ್ ॥೪॥

ಮಗನನ್ನು ಪಡೆಯುವ ಉದ್ದೇಶದಿಂದ ಮೃಗಸಮೂಹದಿಂದ ಕೂಡಿದ ಕಾಡಿನಲ್ಲಿ ತಪಸ್ಸನ್ನು ಮಾಡುತ್ತಾ ದೇವತೆಗಳನ್ನು ಸಂತೋಷಪಡಿಸುತ್ತಿದ್ದ ಅವನಿಗೆ ಬಹಳ ಕಾಲವು ಕಳೆದುಹೋಯಿತು.

ಸ ತು ರಾಜನ್ ಮಹಾತೇಜಾಃ ತಪಸ್ತೀವ್ರಂ ಸಮಾದದೇ ।
ಕಂಚಿತ್ಕಾಲಂ ವಾಯುಭಕ್ಷೋ ನಿರಾಹಾರಸ್ತಥೈವ ಚ ॥೫॥

ರಾಜನೇ, ಮಹಾತೇಜಸ್ವಿಯಾದ ಅವನು ತೀವ್ರವಾದ ತಪಸ್ಸನ್ನು ಪ್ರಾರಂಭಿಸಿ ಸ್ವಲ್ಪಕಾಲ ವಾಯುಭಕ್ಷನಾಗಿಯೂ, ಅನಂತರ ನಿರಾಹಾರನಾಗಿಯೂ ಉಗ್ರವಾದ ತಪಸ್ಸನ್ನು ಮಾಡಿದನು.

ತಸ್ಯೈವಂ ಸುಮಹಾಬಾಹೋರ್ವರ್ತಮಾನಸ್ಯ ಭಾರತ ।
ದಶವರ್ಷಸಹಸ್ರಾಂತೇ ತದ್ವನೇ ಸಮಭೂನ್ನೃಪ ।
ವಸಂತಃ ಸುಖದಃ ಕಾಲಃ ಸ ತು ಕಾಮಪ್ರದೀಪನಃ ॥೬॥

ಭಾರತನೇ, ಹೀಗೆ ಮಹಾ ತಪಸ್ಸಿನಲ್ಲಿ ಅವನು ನಿರತನಾಗಿರುತ್ತಿರಲು ಆ ಕಾಡಿನಲ್ಲಿ ಹತ್ತು ಸಾವಿರ ವರ್ಷಗಳು ಕಳೆದ ಮೇಲೆ ಒಮ್ಮೆ ಕಾಮೋದ್ದೀಪಕವಾದ ಸುಖಕರವಾದ ವಸಂತಕಾಲವು ಬಂದಿತು.

ಫುಲ್ಲಾಶೋಕವನೇ ಚೈವ ಪ್ರಾಣಿನಾಂ ಸುಮನೋರಮೇ ।
ನದ್ಯಾಸ್ತೀರಮಥೋ ಗತ್ವಾ ಗಂಗಾಯಾಃ ಪದ್ಮಲೋಚನಃ ।
ನಿಯಮಸ್ಥಶ್ಚ ರಾಜಾऽऽಸೀತ್ ತಥಾ ಭರತಸತ್ತಮ ॥೭॥

ಎಲೈ ಭರತಶ್ರೇಷ್ಠನೇ, ಅರಳಿದ ಅಶೋಕವನದಲ್ಲಿ ಮನೋಹರವಾದ ಗಂಗೆಯ ತೀರದಲ್ಲಿ ಕಮಲನಯನನಾದ ಆ ರಾಜನು ಹೋಗಿ ನಿಯಮಗಳನ್ನು ಸ್ವೀಕರಿಸಿ ತಪಸ್ಸನ್ನು ಮಾಡಿದನು.

ತತೋ ನಾತಿಚಿರಾತ್ ಕಾಲಾದ್ ವನಂ ತನ್ಮನುಜೇಶ್ವರ ।
ಸಂಪ್ರಾಪ್ತಾ ಹ್ಯಪ್ಸರಾ ರಾಜನ್ ಮೇನಕೇತ್ಯಭಿವಿಶ್ರುತಾ ॥೮॥

ಮನುಜೇಶ್ವರನೇ, ಅನಂತರ ಅಲ್ಪಕಾಲದಲ್ಲಿ ಅಲ್ಲಿಗೆ ಮೇನಕೆ ಎಂದು ಪ್ರಖ್ಯಾತಳಾದ ಅಪ್ಸರೆಯು ಬಂದಳು.

ನದ್ಯಾಸ್ತೀರೇ ಚರಂತೀ ವೈ ಕ್ರೀಡಂತೀ ಚ ಪುನಃ ಪುನಃ ।
ತಸ್ಯಾಂ ಚ ವಿಲಪಂತ್ಯಾಂ ವೈ ರಾಜ್ಞೋ ದರ್ಶನಮಾಗತಾ ।
ದದರ್ಶ ಸಾ ತು ರಾಜನಂ ತಥಾ ಸ್ಥಾನಗತಂ ನೃಪಃ ॥೯॥

ಅವಳು ನದಿಯ ತೀರದಲ್ಲಿ ತಿರುಗಾಡುತ್ತಾ ಮತ್ತೆ ಮತ್ತೆ ಆಟವಾಡುತ್ತಿರುವಾಗ ಅವಳು ರಾಜನ ದೃಷ್ಟಿಗೆ ಬಿದ್ದಳು. ಅವಳೂ ಸಹ ಆ ಸ್ಥಾನದಲ್ಲಿ ತಪಸ್ಸು ಮಾಡುತ್ತಿರುವ ರಾಜನನ್ನು ನೋಡಿದಳು.

ದೃಷ್ಟ್ವಾ ಚಾಪ್ಸರಸಂ ತಾಂ ತು ಶುಕ್ರಂ ರಾಜ್ಞೋಽಪತದ್ ಭುವಿ ।
ತಚ್ಚ ರಾಜಾ ತು ರಾಜೇಂದ್ರ ಲಜ್ಜಯಾ ನೃಪತಿಃ ಸ್ವಯಮ್ ॥೧೦॥

ಪದ್ಭ್ಯಾಮಾಕ್ರಮದಾಯುಷ್ಮಂಸ್ತಸ್ಮಾತ್ ತು ದ್ರುಪದೋಽಭವತ್ ।
ತತಸ್ತು ತಸ್ಯ ತಪಸಾ ರಾಜರ್ಷೇರ್ಭಾವಿತಾತ್ಮನಃ ॥೧೧॥

ಅವಳನ್ನು ನೋಡಿದ ರಾಜನಿಗೆ ವೀರ್ಯಸ್ಖಲನವಾಗಿ ಅದು ಭೂಮಿಯ ಮೇಲೆ ಬಿದ್ದಿತು. ರಾಜೇಂದ್ರನೇ, ಆ ರಾಜನು ನಾಚಿಕೆಯಿಂದ ಅದನ್ನು ಕಾಲುಗಳಿಂದ ತುಳಿದನು. ಆಯುಷ್ಮಂತನೇ, ಅದರಿಂದ ದ್ರುಪದನು ಜನಿಸಿದನು.

ಪುತ್ರಃ ಸಮಭವದ್ ರಾಜ್ಞಃ ಪಾದಾತ್ ತಸ್ಯಾಂತರೇಣ ತು ।
ತೇ ತಸ್ಯ ಋಷಯಃ ಸರ್ವೇ ಸಮಾಗಮ್ಯ ತಪೋಧನಾಃ ॥೧೨॥

ತಪಸ್ಸಿನಿಂದ ಮನಶುದ್ಧಿಯನ್ನು ಪಡೆದಿದ್ದ ಮನಸ್ಸಿನಿಂದ ಯುಕ್ತನಾದ ರಾಜನು ಕಾಲಿನಿಂದ ತನ್ನ ವೀರ್ಯವನ್ನು ತುಳಿಯುತ್ತಿರಲು ಬೆರಳುಗಳ ಸಂದಿಯಿಂದ ಕುಮಾರನು ಜನಿಸಿದನು.

ನಾಮ ಚಕ್ರುರ್ಹಿ ವಿದ್ವಾಂಸೋ ದ್ರುಪದೋಽಸ್ತ್ವಿತಿ ಭೂಮಿಪ ।

ಎಲೈ ರಾಜನೇ, ಅಲ್ಲಿಗೆ ತಪೋಧನರಾದ ಎಲ್ಲಾ ಋಷಿಗಳೂ ಬಂದು ಜ್ಞಾನಿಗಳಾದ ಅವರು ಅವನು ಕಾಲಿನಿಂದ ಹುಟ್ಟಿಬಂದ ಕಾರಣದಿಂದ ಅವನನ್ನು ದ್ರುಪದ ಎಂದು ಕರೆದರು.

ಸ ತಸ್ಯೈವಾಶ್ರಮೇ ರಾಜನ್ ಭರದ್ವಾಜಸ್ಯ ಭಾರತ ।
ವವೃಧೇ ಚ ಸುಖಂ ತತ್ರ ಕಾಮ್ಯೈಃ ಸರ್ವೈರ್ನರಪೋತ್ತಮ ॥೧೪॥

ರಾಜಶ್ರೇಷ್ಠನೇ, ದ್ರುಪದನು ಅಲ್ಲಿಯೇ ಭರದ್ವಾಜರ ಆಶ್ರಮದಲ್ಲಿ ಎಲ್ಲಾ ಸುಖಗಳಿಂದಲೂ ಎಲ್ಲಾ ಕಾಮ್ಯ ಪದಾರ್ಥಗಳಿಂದಲೂ ಬೆಳೆದನು.

ಪಾಂಚಾಲೋಽಪಿ ಹಿ ರಾಜೇಂದ್ರ ಸ್ವರಾಜ್ಯಂ ಗತವಾನ್ ಪ್ರಭುಃ ।
ಭರದ್ವಾಜಾಯ ಶಿಷ್ಯಾರ್ಥಂ ಸುತಂ ದತ್ತ್ವಾ ಮಹಾತ್ಮನೇ ।
ಸ ಕುಮಾರಸ್ತತೋ ರಾಜನ್ ದ್ರೋಣೇನ ಸಹಿತೋ ವನೇ ॥೧೫॥

ಪೃಷತನು ಮಹಾತ್ಮರಾದ ಭರದ್ವಾಜರ ವಶಕ್ಕೆ ತನ್ನ ಪುತ್ರನನ್ನು ಶಿಷ್ಯನನ್ನಾಗಿ ಕೊಟ್ಟು ತಾನಾದರೋ ತನ್ನ ಸ್ವದೇಶವಾದ ಪಾಂಚಾಲದೇಶಕ್ಕೆ ಹಿಂತಿರುಗಿದನು.

ವೇದಾಂಶ್ಚಾಧಿಜಗೇ ಸಾಂಗಾನ್ ಧನುರ್ವೇದಂ ಚ ಭಾರತ ।
ಪರಯಾ ಚ ಮುದಾ ಯುಕ್ತೋ ವಿಚಚಾರ ವನೇ ಸುಖಮ್ ॥೧೬॥

ರಾಜನೇ, ಭಾರತಶ್ರೇಷ್ಠನೇ, ಆ ಕುಮಾರನಾದರೋ ಅಲ್ಲಿಯೇ ಕಾಡಿನಲ್ಲಿ ದ್ರೋಣರ ಜೊತೆಯಲ್ಲಿ ಸಾಂಗವೇದಾಧ್ಯಯನವನ್ನು ಮಾಡಿದನು. ಧನುರ್ವೇದವನ್ನೂ ಕಲಿತನು. ಆ ಕಾಡಿನಲ್ಲಿ ಬಹಳ ಸಂತೋಷದಿಂದ ಯುಕ್ತನಾಗಿ ತಿರುಗಾಡಿದನು.

ತಸ್ಯೈವಂ ವರ್ತಮಾನಸ್ಯ ವನೇ ವನಚರೈಃ ಸಹ ।
ಕಾಲಾನ್ನಾತಿಚಿರಾದ್ ರಾಜನ್ ಪಿತಾ ಸ್ವರ್ಗಮುಪೇಯಿವಾನ್ ॥೧೭॥

ರಾಜನೇ, ಅವನು ಹೀಗೆ ಕಾಡಿನಲ್ಲಿ ವನಚರರ ಜೊತೆಯಲ್ಲಿ ತಿರುಗುತ್ತಿರುವಾಗ ಅಲ್ಪಕಾಲದಲ್ಲಿಯೇ ಅವನ ತಂದೆಯು ಮೃತನಾದನು.

ಸ ಸಮಾಗಮ್ಯ ಪಾಂಚಾಲೈಃ ಪಾಂಚಾಲೇಷ್ವಭಿಷೇಚಿತಃ ।
ಪ್ರಾಪ್ತಶ್ಚ ರಾಜ್ಯಂ ರಾಜೇಂದ್ರ ಸುಹೃದಾಂ ಪ್ರೀತಿವರ್ಧನಃ ॥೧೮॥

ಪ್ರಜಾ ರರಕ್ಷ ಧರ್ಮೇಣ ಯಥಾ ಚೇಂದ್ರಸ್ತ್ರಿವಿಷ್ಟಪೇ ।
ಏತನ್ಮಯಾ ತೇ ರಾಜೇಂದ್ರ ಯಥಾವತ್ ಪರಿಕೀರ್ತಿತಮ್ ।
ದ್ರುಪದಸ್ಯ ಜನ್ಮ ರಾಜರ್ಷೇರ್ಧೃಷ್ಟದ್ಯುಮ್ನಸ್ಯ ಚೈವ ಹಿ ॥೧೯॥

ರಾಜೇಂದ್ರನೇ, ಅವನು ಪಾಂಚಾಲದೇಶಕ್ಕೆ ಹಿಂದಿರುಗಿ ಪ್ರಜೆಗಳಿಂದ ಮತ್ತು ಮಂತ್ರಿಗಳಿಂದ ಅಭಿಷೇಕ ಮಾಡಲ್ಪಟ್ಟು ರಾಜ್ಯವನ್ನು ಪಡೆದು ಎಲ್ಲಾ ಪ್ರಜೆಗಳಿಗೂ ಸಂತೋಷವನ್ನುಂಟು ಮಾಡುತ್ತಾ ಇಂದ್ರನು ಸ್ವರ್ಗವನ್ನು ಆಳಿದಂತೆ ಧರ್ಮದಿಂದ ಪ್ರಜೆಗಳನ್ನು ಪಾಲಿಸಿದನು. ರಾಜೇಂದ್ರನೇ, ನಾನು ನಿನಗೆ ರಾಜರ್ಷಿಯಾದ ದ್ರುಪದನ ಮತ್ತು ಧೃಷ್ಟದ್ಯುಮ್ನನ ಜನನವನ್ನು ಯಥಾವತ್ತಾಗಿ ತಿಳಿಸಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕೋ ನವತ್ವಾರಿಂಶ್ಯಧಿಕಶತತಮೋಽಧ್ಯಾಯಃ ॥
॥ ಸಂಭವಪರ್ವಣಿ ಸಪ್ತಾಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ಮೂವತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೮೮

ಭೀಮಾರ್ಜುನಾಭ್ಯಾಂ ಬದ್ಧಂ ತಂ ಶ್ರುತ್ವಾ ಪಾಂಚಾಲಭೂಪತಿಮ್ ।
ಪ್ರಾಹಿಣೋತ್ ಕೃತವರ್ಮಾಣಂ ಪಾಂಡವಾನಾಂ ಜನಾರ್ದನಃ ॥೧೫೮॥

ಪಾಂಡವೇಷ್ವತುಲಾಂ ಪ್ರೀತಿಂ ಲೋಕೇ ಖ್ಯಾಪಯಿತುಂ ಪ್ರಭುಃ ॥೧೫೯॥

ದ್ರುಪದರಾಜ ಭೀಮಾರ್ಜುನರಿಂದ ಬಂಧಿತನಾದುದನ್ನು ಕೇಳಿ ಪ್ರಭು ಶ್ರೀಕೃಷ್ಣ ಪಾಂಡವರ ಬಳಿಗೆ ಕೃತವರ್ಮನನ್ನು ಕಳಿಸಿಕೊಟ್ಟ. ಇದು ತನಗೆ ಪಾಂಡವರಲ್ಲಿ ಅನುಪಮವಾದ ಪ್ರೀತಿ ಇದೆ ಎಂಬುದನ್ನು ಲೋಕದಲ್ಲಿ ಖ್ಯಾತವಾಗುವಂತೆ ಮಾಡುವುದಕ್ಕಾಗಿ.

ಸಮ್ಮಾನ್ಯ ಪಾಂಡವಾನ್ ಸೋಽಪಿ ಶೂರಾನುಜ ಸುತಾಸುತಃ ।
ತೈರ್ಮಾನಿತಃ ಕೃಷ್ಣಭಕ್ತ್ಯಾ ಭ್ರಾತೃತ್ವಾಚ್ಚ ಹರಿಂ ಯಯೌ ॥೧೬೦॥

ಕೃತವರ್ಮ ಪಾಂಡವರನ್ನು ಸನ್ಮಾನಿಸಿದ. ಅವನು ಶೂರಸೇನ ರಾಜನ ತಮ್ಮನ ಮಗಳ ಮಗ. ಪಾಂಡವರಿಗೆ ಸೋದರ. ಈ ಕಾರಣದಿಂದಲೂ ಕೃಷ್ಣನ ಮೇಲಿನ ಭಕ್ತಿಭಾವದಿಂದಲೂ ಪಾಂಡವರು ಅವನನ್ನು ಸತ್ಕರಿಸಿದರು. ಬಳಿಕ ಅವನು ಕೃಷ್ಣನ ಬಳಿಗೆ ಹಿಂತಿರುಗಿದ.

ತತಃ ಪ್ರಭೃತಿ ಸಂತ್ಯಜ್ಯ ದೇವಪಕ್ಷಾ ಜರಾಸುತಮ್ ।
ಪಾಂಡವಾನಾಶ್ರಿತಾ ಭೂಪಾ ಜ್ಞಾತ್ವಾಭೈಮಾರ್ಜುನಂ ಬಲಮ್ ।
ವಿಶೇಷತಶ್ಚ ಕೃಷ್ಣಸ್ಯ ವಿಜ್ಞಾಯ ಸ್ನೇಹಮೇಷು ಹಿ ॥೧೬೧॥

ಪರಾಜಿತಾಶ್ಚ ಬಹುಶಃ ಕೃಷ್ಣೇನಾಚಿಂತ್ಯ ಕರ್ಮಣಾ ॥೧೬೨॥

ಪ್ರತಾಪಾದೇವ ತೇ ಪೂರ್ವಂ ಜರಾಸಂಧವಶಂ ಗತಾಃ ॥೧೬೩॥

ನ ಸ್ನೇಹಾತ್ ತದ್ ಬಲಂ ಜ್ಞಾತ್ವಾ ಪಾರ್ಥಾನಾಂ ಕೇಶವಸ್ಯ ಚ ।
ಜನ್ಮಾಂತರಾಭ್ಯಾಸವಶಾತ್ ಸ್ನಿಗ್ಧಾಃ ಕೃಷ್ಣೇ ಚ ಪಾಂಡುಷು
ಜರಾಸಂಧ ಭಯಂ ತ್ಯಕ್ತ್ವಾ ತಾನೇವ ಚ ಸಮಾಶ್ರಿತಾಃ ॥೧೬೪॥

ಅಂದಿನಿಂದ ದೇವತೆಗಳ ಪಕ್ಷದವರಾದ ರಾಜರುಗಳು ಭೀಮಾರ್ಜುನರ ಬಲವನ್ನು ಕಂಡು ಮತ್ತು ವಿಶೇಷವಾಗಿ ಪಾಂಡವರಲ್ಲಿ ಕೃಷ್ಣನಿಗೆ ಪ್ರೀತಿ ಇರುವುದನ್ನು ಕಂಡು ಜರಾಸಂಧನನ್ನು ತೊರೆದು ಪಾಂಡವರನ್ನು ಆಶ್ರಯಿಸಿದರು. ಅವರೆಲ್ಲರೂ ಹಿಂದೆ ಅನೇಕ ಬಾರಿ ಅಚಿಂತ್ಯಕಾರ್ಯಗಳನ್ನು ಮಾಡುವ ಕೃಷ್ಣನಿಂದ ಪರಾಜಿತರಾಗಿದ್ದರು. ಆದರೂ ಜರಾಸಂಧನ ಪ್ರತಾಪಕ್ಕೆ ಹೆದರಿಯೇ ಅವನ ವಶದಲ್ಲಿದ್ದರು, ಪ್ರೀತಿಯಿಂದಲ್ಲ. ಜನ್ಮಾಂತರ ಸಂಸ್ಕಾರದಿಂದ ಕೃಷ್ಣನಲ್ಲಿಯೂ ಪಾಂಡವರಲ್ಲಿಯೂ ಪ್ರೀತಿಯುಕ್ತರಾಗಿಯೇ ಇದ್ದ ಅವರು ಈಗ ಪಾಂಡವರ ಮತ್ತು ಕೃಷ್ಣನ ಬಲವನ್ನು ಅರಿತ ಮೇಲೆ ಜರಾಸಂಧನ ಭಯವನ್ನು ತೊರೆದು ಅವರನ್ನೇ ಆಶ್ರಯಿಸಿದರು.

ಅಪಿ ತಂ ಬಹುಶಃ ಕೃಷ್ಣವಿಜಿತಂ ನೈವ ತತ್ಯಜುಃ ।
ಆಸುರಾಃ ಪೂರ್ವಸಂಸ್ಕಾರಾತ್ ಸಂಸ್ಕಾರೋ ಬಲವಾನ್ ಯತಃ॥೧೬೫॥

ಜರಾಸಂಧ ಅನೇಕ ಬಾರಿ ಕೃಷ್ಣನಿಂದ ಪರಾಜಿತನಾಗಿದ್ದರೂ ಅಸುರರು ಪೂರ್ವಜನ್ಮ ಸಂಸ್ಕಾರದಿಂದಲೆ ಅವನನ್ನು ಬಿಡಲಿಲ್ಲ. ಏಕೆಂದರೆ ಸಂಸ್ಕಾರ ಬಲವತ್ತಾಗಿರುತ್ತದೆ.

ದೇವಾ ಹಿ ಕಾರಣಾದನ್ಯಾನಾಶ್ರಯಂತೋಽಪಿ ನಾಂತರಮ್ ।
ಸ್ನೇಹಂ ತ್ಯಜಂತಿ ದೇವೇಷು ತಥಾನ್ಯೇಷ್ವಪಿ ಚ ಸ್ಫುಟಮ್ ॥೧೬೬॥

ದೇವತೆಗಳು ಕಾರಣಾಂತರದಿಂದ ಅಸುರರನ್ನು ಆಶ್ರಯಿಸಿದರೂ ದೇವತೆಗಳಲ್ಲಿ ಅಂತರಂಗದ ಸ್ನೇಹವನ್ನು ಬಿಡಲಾರರು. ಹಾಗೇ ಅಸುರರೂ ಅಸುರರ ಮೇಲಿನ ಸ್ನೇಹವನ್ನು ಬಿಡಲಾರರು.

ಧೃತರಾಷ್ಟ್ರೋ ಬಲಂ ಜ್ಞಾತ್ವಾ ಬಹುಶೋ ಭೀಮಪಾರ್ಥಯೋಃ ।
ದೈವತ್ವಾಚ್ಚ ಸ್ವಭಾವೇನ ಜ್ಯೇಷ್ಠತ್ವಾದ್ ಧರ್ಮಜಸ್ಯ ಚ ।
ಸುಪ್ರೀತ ಏವ ತಂ ಚಕ್ರೇ ಯೌವರಾಜ್ಯೇಽಭಿಷೇಕಿಣಮ್ ॥೧೬೭॥

ಧೃತರಾಷ್ಟ್ರ ಭೀಮಾರ್ಜುನರ ಬಲವನ್ನು ಅನೇಕ ಪ್ರಸಂಗಗಳಲ್ಲಿ ಅರಿತುಕೊಂಡು, ಸ್ವತಃ ದೇವತೆಯಾದ್ದರಿಂದ ಸ್ವಭಾವದಿಂದಲೂ, ಧರ್ಮರಾಜ ಮಕ್ಕಳಲ್ಲಿ ಹಿರಿಯನಾದ್ದರಿಂದಲೂ ಪ್ರೀತಿಪೂರ್ವಕವಾಗಿಯೇ ಅವನನ್ನು ಯುವರಾಜ ಪದವಿಯಲ್ಲಿ ಅಭಿಷೇಕ ಮಾಡಿದ.

ಭೀಮಾರ್ಜುನಾವಥೋ ಜಿತ್ವಾ ಸರ್ವದಿಕ್ಷು ಚ ಭೂಪತೀನ್ ।
ಚಕ್ರತುಃ ಕರದಾನ್ ಸರ್ವಾನ್ ಧೃತರಾಷ್ಟ್ರಸ್ಯ ದುರ್ಜಯೌ ॥೧೬೮॥

ಬಳಿಕ ಯಾರಿಗೂ ಸೋಲದಿದ್ದ ಭೀಮಾರ್ಜುನರು ಎಲ್ಲ ದಿಕ್ಕುಗಳಲ್ಲಿ ರಾಜರನ್ನು ಗೆದ್ದು ಅವರು ಧೃತರಾಷ್ಟ್ರನಿಗೆ ಕಪ್ಪ ಕೊಡುವಂತೆ ಮಾಡಿದರು.

ತಯೋಃ ಪ್ರೀತೋಽಭವತ್ ಸೋಽಪಿ ಪೌರಜಾನಪದಾಸ್ತಥಾ ।
ಭೀಷ್ಮದ್ರೋಣ ಮುಖಾಃ ಸರ್ವೇಪ್ಯತಿಮಾನುಷ ಕರ್ಮಣಾ ॥೧೬೯॥

ಭೀಮಾರ್ಜುನರ ಅತಿಮಾನುಷ ಕರ್ಮದಿಂದ ಧೃತರಾಷ್ಟ್ರ ಸಂತುಷ್ಟನಾದ. ಎಲ್ಲ ನಾಗರಿಕರೂ ದೇಶವಾಸಿಗಳೂ ಭೀಷ್ಮ ದ್ರೋಣಾದಿಗಳೂ ಸಂತುಷ್ಟರಾದರು.

★ ★ ★ ★

ನೂರ ನಲವತ್ತನೆಯ ಅಧ್ಯಾಯ

(ಯುಧಿಷ್ಠಿರನಿಗೆ ಯೌವರಾಜ್ಯಾಭಿಷೇಕ, ಬಲರಾಮನಲ್ಲಿ ಭೀಮಸೇನನ ಗದಾಭ್ಯಾಸ, ದ್ರೋಣರಿಂದ ಅರ್ಜುನನಿಗೆ ಬ್ರಹ್ಮಶಿರ ಅಸ್ತ್ರಪ್ರಾಪ್ತಿ. ಭೀಮಾರ್ಜುನ ವಿಜಯ, ದುರ್ಯೋಧನನ ಅಸೂಯೆ, ಧೃತರಾಷ್ಟ್ರನ ಬುದ್ಧಿಭೇದ)

ವೈಶಂಪಾಯನಃ

ಧೃತರಾಷ್ಟ್ರಸ್ತು ರಾಜೇಂದ್ರ ಯದಾ ಪೌರವನಂದನಃ ।
ಯುಧಿಷ್ಠಿರಮಜಾನಾದ್ ವೈ ಸಮರ್ಥಂ ರಾಜ್ಯರಕ್ಷಣೇ ॥೧॥

ಯೌವರಾಜ್ಯಾಭಿಷೇಕಾರ್ಥಮಮಂತ್ರಯತ ಮಂತ್ರಿಭಿಃ ।
ತೇ ತು ಬುದ್ಧ್ವಾऽನ್ವತಪ್ಯಂತ ಧೃತರಾಷ್ಟ್ರತ್ಮಜಾಸ್ತದಾ ॥೨॥

ರಾಜೇಂದ್ರನೇ, ಧೃತರಾಷ್ಟ್ರನು ಪೌರವನಂದನನಾದ ಯುಧಿಷ್ಠಿರನು ರಾಜ್ಯ ರಕ್ಷಣೆಯಲ್ಲಿ ಸಮರ್ಥನಾಗಿದ್ದಾನೆಂದು ತಿಳಿದ ಕೂಡಲೇ, ಅವನಿಗೆ ಯೌವರಾಜ್ಯದಲ್ಲಿ ಅಭಿಷೇಕ ಮಾಡಲು ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿದನು. ಆಗ ಅದನ್ನು ತಿಳಿದ ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳು ಅನುತಾಪಪಟ್ಟರು.

ತತಃ ಸಂವತ್ಸರಸ್ಯಾಂತೇ ಪಾಂಡುಪುತ್ರೋ ಮಹಾಯಶಾಃ ।
ಸ್ಥಾಪಿತೋ ಧೃತರಾಷ್ಟ್ರೇಣ ಯೌವರಾಜ್ಯೇ ಯುಧಿಷ್ಠಿರಃ ॥೩॥

ಅನಂತರ ಒಂದು ವರ್ಷವು ಕಳೆದ ಮೇಲೆ ಧೃತರಾಷ್ಟ್ರನು ಪಾಂಡು ಪುತ್ರನಾದ ಮಹಾಕೀರ್ತಿವಂತನಾದ ಯುಧಿಷ್ಠಿರನಿಗೆ ಯೌವರಾಜ್ಯದಲ್ಲಿ ಅಭಿಷೇಕ ಮಾಡಿ ಸ್ಥಾಪಿಸಿದನು.

ಅದೀರ್ಘೇಣ ಚ ಕಾಲೇನ ಕುಂತೀಪುತ್ರೋ ಯುಧಿಷ್ಠಿರಃ ।
ಪಿತ್ರ್ಯಮಂತರ್ದಧೇ ಕೀರ್ತಿಂ ಶೀಲವೃತ್ತಸಮಾಧಿಭಿಃ ॥೪॥

ಕುಂತೀಪುತ್ರನಾದ ಯುಧಿಷ್ಠಿರನು ಅಲ್ಪಕಾಲದಲ್ಲಿಯೇ ತನ್ನ ಶೀಲ, ವೃತ್ತ ಮತ್ತು ಶಾಂತಸ್ವಭಾವಗಳಿಂದ ತಂದೆಯ ಕೀರ್ತಿಯನ್ನು ಮೀರಿಸಿದನು.

ಅಸಿಯುದ್ಧೇ ರಣೋದ್ಯಾನೇ ಬಾಹುಯುದ್ಧೇ ಚ ಪಾಂಡವಃ ।
ಸಂಕರ್ಷಣಾತ್ ಶಿಕ್ಷಿತವಾನ್ ಶಶ್ವಚ್ಚಿಕ್ಷಾಂ ವೃಕೋದರಃ ।
ತೇ ತಂ ಬುದ್ಧ್ವಾಽನ್ವತಪ್ಯಂತ ಧೃತರಾಷ್ಟ್ರಾತ್ಮಜಾಸ್ತದಾ ॥೫॥

ಪಾಂಡುಪುತ್ರನಾದ ವೃಕೋದರನು ಬಲರಾಮನ ಬಳಿಯಲ್ಲಿ ಖಡ್ಗಯುದ್ಧದಲ್ಲಿ, ಯುದ್ಧದಲ್ಲಿ ಮುನ್ನುಗ್ಗುವುದನ್ನೂ, ಬಾಹುಯುದ್ಧವನ್ನೂ ಸತತವಾಗಿ ಅಭ್ಯಾಸ ಮಾಡಿದನು. ಅದನ್ನು ತಿಳಿದ ದುರ್ಯೋಧನಾದಿಗಳು ಅನುತಾಪವನ್ನು ಪಟ್ಟರು.

ಸಮಾಪ್ತವಿದ್ಯಃ ಸೋಽಭ್ಯಸ್ಯ ದ್ಯುಮತ್ಸೇನಸಮೋ ಬಲೇ ।
ತತಃ ಸಂವತ್ಸರಸ್ಯಾಂತೇ ಪಾಂಡುಪುತ್ರೋ ಮಹಾಯಶಾಃ ।
ಗದಾಬಲಾಭ್ಯಾಂ ಸಂಪನ್ನೋ ಭ್ರಾತೄಣಾಮಚರದ್ ವಶೇ ॥೬॥

ವಿದ್ಯಾಭ್ಯಾಸವನ್ನು ಮುಗಿಸಿ ಬಲದಲ್ಲಿ ದ್ಯುಮತ್ಸೇನನಿಗೆ ಸಮನಾದ ಮಹಾಕೀರ್ತಿವಂತನಾದ ಪಾಂಡುಪುತ್ರನಾದ ವೃಕೋದರನು ಒಂದು ವರ್ಷದ ನಂತರ ಗದಾವಿದ್ಯೆಯಿಂದಲೂ, ಬಲದಿಂದಲೂ ಸಂಪನ್ನನಾಗಿ ಹಿಂದಿರುಗಿ ಅಣ್ಣಂದಿರ ವಶದಲ್ಲಿದ್ದನು.

ಪ್ರಗಾಢದೃಢಮುಷ್ಟಿತ್ವೇ ಲಾಘವೇ ಚಾತಿವೇಧನೇ ।
ಲಕ್ಷವೇದ್ಯೇ ಚ ಮೋಕ್ಷೇ ಚ ತೋಮರಗ್ರಹಣೇಽಪಿ ಚ ॥೭॥

ಅಸಿಶಕ್ತಿಗದಾಯುದ್ಧೇ ಬಭೂವಾಪ್ರತಿಮೋಽರ್ಜುನಃ ।
ಕ್ಷುರನಾರಾಚಭಲ್ಲಾನಾಂ ವಿಪಾಠಾನಾಂ ಸುತೇಜಸಾಮ್ ॥೮॥

ಅರ್ಜುನನು ಧನುಸ್ಸನ್ನು ಗಾಢವಾಗಿ ಮತ್ತು ದೃಢವಾಗಿ ಹಿಡಿಯುವುದರಲ್ಲಿಯೂ, ವೇಗದಲ್ಲಿಯೂ, ಲಕ್ಷ್ಯವನ್ನು ಭೇದಿಸುವುದರಲ್ಲಿಯೂ, ಲಕ್ಷ್ಯವನ್ನು ತಿಳಿಯುವುದರಲ್ಲಿಯೂ, ಬಾಣವನ್ನು ಪ್ರಯೋಗಮಾಡುವುದರಲ್ಲಿಯೂ, ತೋಮರವನ್ನು ಹಿಡಿಯುವುದರಲ್ಲಿಯೂ, ಖಡ್ಗ ಶಕ್ತಿ ಮತ್ತು ಗದಾಯುದ್ಧಗಳಲ್ಲಿಯೂ ಅಪ್ರತಿಮನಾದನು.

ಋಜುವಕ್ರವಿಶಾಲಾನಾಂ ಪ್ರಯೋಕ್ತಾ ಪಾಂಡವೋಽಭವತ್ ।
ಲಾಘವಾತ್ ಸೌಷ್ಠವಾಚ್ಚೈವ ನಾನ್ಯಃ ಕಶ್ಚಿತ್ತು ವಿದ್ಯತೇ ॥೯॥

ಬೀಭತ್ಸುಸದೃಶೋ ಲೋಕ ಇತಿ ದ್ರೋಣೋಽಭ್ಯಭಾಷತ ।
ಗಜಯುದ್ಧೇಽಶ್ವಯುದ್ಧೇ ಚ ರಥಯುದ್ಧೇ ಚ ಪಾಂಡವಃ ॥೧೦॥

ಕ್ಷುರ (ಅಂದರೆ ಸಣ್ಣ ಚಾಕುಗಳು), ಭಲ್ಲಗಳು ತೀಕ್ಷ್ಣವಾದ, ನೇರವಾದ, ವಕ್ರವಾದ ಬಾಣಗಳು ಮತ್ತು ವಿಶಾಲವಾದ ವಿಪಾಠಗಳು, ಇವುಗಳನ್ನೆಲ್ಲಾ ಪ್ರಯೋಗಿಸುವುದನ್ನು ಅರ್ಜುನನು ಕಲಿತನು. ಲಾಘವದಲ್ಲಿಯೂ ಮತ್ತು ಸೌಷ್ಠವದಲ್ಲಿಯೂ ಅರ್ಜುನನಿಗೆ ಸಮಾನನಾದವನು ಲೋಕದಲ್ಲಿ ಯಾರೂ ಇಲ್ಲ ಎಂದು ದ್ರೋಣರು ಹೇಳಿದರು.

ಪಾರಗೋ ಭುಜಯುದ್ಧೇ ಚ ಬಭೂವೈಷ ಧನಂಜಯಃ ॥೧೧॥

ಪಾಂಡು ಪುತ್ರನಾದ ಧನಂಜಯನು ಅಶ್ವಯುದ್ಧದಲ್ಲಿಯೂ, ಗಜಯುದ್ಧದಲ್ಲಿಯೂ, ರಥಯುದ್ಧದಲ್ಲಿಯೂ ಮತ್ತು ಭುಜಯುದ್ಧದಲ್ಲಿಯೂ ಪಾರಂಗತನಾದನು.

ಸ್ವಭಾವಾದಗಮಚ್ಚಬ್ದೋ ಮಹೀಂ ಸಾಗರಮೇಖಲಾಮ್ ।
ನಾಸ್ಯರ್ಜುನಸಮಃ ಕಶ್ಚಿದಿತ್ಯೇವಂ ಮೇನಿರೇ ಜನಾಃ ॥೧೨॥

ಅವನ ಕೀರ್ತಿಯು ಸ್ವಾಭಾವಿಕವಾಗಿ ಸಾಗರ ಪರ್ಯಂತವಾದ ಭೂಮಿಯಲ್ಲಿ ಹರಡಿತು. ಜನರು ಅರ್ಜುನನಿಗೆ ಸಮಾನರಾದವರು ಯಾರೂ ಇಲ್ಲ ಎಂದು ತಿಳಿದರು.

ಅಥಾಬ್ರವೀತ್ ತದಾ ದ್ರೋಣಃ ಫಲ್ಗುನಂ ಜನಸಂಸದಿ ।
ಅಗಸ್ತ್ಯಸ್ಯ ಧನುರ್ವೇದೇ ಶಿಷ್ಯೋ ಮಮ ಗುರುಃ ಸದಾ ।
ಅಗ್ನಿವೇಶ್ಯ ಇತಿ ಖ್ಯಾತಸ್ತಸ್ಯ ಶಿಷ್ಯೋಽಸ್ಮಿ ಭಾರತ ॥೧೩॥

ಆಗ ದ್ರೋಣರು ಜನರ ಸಭೆಯಲ್ಲಿ ಅರ್ಜುನನನ್ನು ಉದ್ದೇಶಿಸಿ ಹೀಗೆ ಮಾತನಾಡಿದರು. ಎಲೈ ಭರತಕುಲೋತ್ತಮನೇ, ನನ್ನ ಗುರುಗಳಾದ ಪ್ರಖ್ಯಾತರಾದ ಅಗ್ನಿವೇಶ್ಯರು ಧನುರ್ವೇದದಲ್ಲಿ ಅಗಸ್ತ್ಯರ ಶಿಷ್ಯರು. ನಾನು ಅಗ್ನಿವೇಶ್ಯರ ಶಿಷ್ಯ .

ತೀರ್ಥಾತ್ ತೀರ್ಥಗತಂ ಪಾರ್ಥ ಮಯಾ ಸಂಕ್ರಮಿತಂ ತ್ವಯಿ ।
ತಪಸೇದಂ ಮಯಾ ಪ್ರಾಪ್ತಮಮೋಘಮಶನಿಪ್ರಭಮ್ ।
ಅಸ್ತ್ರಂ ಬ್ರಹ್ಮಶಿರೋ ನಾಮ ಯದ್ ದಹೇತ್ ಪೃಥಿವೀಮಪಿ ॥೧೪॥

ಗುರುಗಳಿಂದ ಗುರುಗಳಿಗೆ ಬಂದ ವಿದ್ಯೆಯನ್ನು ನಾನು ನಿನಗೆ ಕೊಡುತ್ತಿದ್ದೇನೆ. ನಾನು ಬ್ರಹ್ಮಶಿರ ಎಂಬ ಸಿಡಿಲಿನಂತಿರುವ ಈ ಅಮೋಘವಾದ ಅಸ್ತ್ರವನ್ನು ತಪಸ್ಸು ಮಾಡಿ ಪಡೆದಿದ್ದೇನೆ. ಈ ಅಸ್ತ್ರವು ಭೂಮಿಯನ್ನೇ ಸುಡಬಹುದು.

ದದತಾ ಚಾಸ್ಮಿ ಸಂದಿಷ್ಟೋ ನ ಮನುಷ್ಯೇಷ್ವಿದಂ ತ್ವಯಾ ।
ಭಾರದ್ವಾಜ ಪ್ರಮೋಕ್ತವ್ಯಮಸ್ತ್ರಂ ಸಂಯುಗಮೂರ್ಧನಿ ॥೧೫॥

ಅಸ್ತ್ರವನ್ನು ಕೊಡುವಾಗ ಗುರುಗಳು ಭಾರದ್ವಾಜನೇ, ಈ ಅಸ್ತ್ರವನ್ನು ಮನುಷ್ಯರ ಮೇಲೆ ಪ್ರಯೋಗಿಸಬಾರದು. ಘೋರವಾದ ಯುದ್ಧದಲ್ಲಿ ಮಾತ್ರ ಪ್ರಯೋಗಿಸಬೇಕು ಎಂದು ಸಂದೇಶವನ್ನು ನೀಡಿದರು.

ಯದ್ಯದಂತರ್ಹಿತಂ ಭೂತಂ ಕಿಂಚಿದ್ ಯುದ್ಧೇ ತ್ವಯಾ ಸಹ ।
ಮಹಾತೇಜಸ್ತದೇತೇನ ಹನ್ಯಾಃ ಶಸ್ತ್ರೇಣ ಸಂಯುಗೇ ।
ಅವಾಪ್ಯಂ ಚ ತ್ವಯಾ ವೀರ ದಿವ್ಯಂ ನಾನ್ಯಸ್ತದರ್ಹತಿ ॥೧೬॥

ಯುದ್ಧದಲ್ಲಿ ಮಹಾತೇಜಸ್ವಿಯಾದ ಭೂತವು ಅಂತರ್ಧಾನವನ್ನು ಹೊಂದಿ ನಿನ್ನ ಜೊತೆಯಲ್ಲಿ ಯುದ್ಧವನ್ನು ಮಾಡಿದರೆ ಆಗ ಮಾತ್ರ ಈ ಅಸ್ತ್ರವನ್ನು ಪ್ರಯೋಗಿಸಬೇಕು. ಈ ಅಸ್ತ್ರವನ್ನು ನೀನು ಅವಶ್ಯವಾಗಿ ಪಡೆಯಬೇಕು. ಎಲೈ ವೀರನೇ, ನಿನ್ನನ್ನು ಬಿಟ್ಟು ಬೇರೆ ಯಾರೂ ಸಹ ಈ ದಿವ್ಯವಾದ ಅಸ್ತ್ರವನ್ನು ಪಡೆಯಲು ಅರ್ಹರಲ್ಲ.

ಯುದ್ಧೇ ಹಿ ಪ್ರತಿಯೋದ್ಧವ್ಯೋ ಯುಧ್ಯಮಾನೇನ ಸಂಯುಗೇ ।
ಸಮಯಶ್ಚ ರಕ್ಷ್ಯೋ ಬಲವಾನ್ ಈದೃಶೋ ಹಿ ವಿಶಾಂಪತೇ ॥೧೭॥

ರಾಜನೇ, ಯುದ್ಧದಲ್ಲಿ ನಿನ್ನ ಜೊತೆಯಲ್ಲಿ ಯುದ್ಧ ಮಾಡುತ್ತಿರುವವನ ಮೇಲೆ ಮಾತ್ರ ನೀನು ಈ ಅಸ್ತ್ರವನ್ನು ಪ್ರಯೋಗಿಸಬೇಕು. ಇಂತಹ ಪ್ರಬಲವಾದ ನಿಯಮವನ್ನು ನೀನು ಯಾವಾಗಲೂ ಪಾಲಿಸಬೇಕು.

ಆಚಾರ್ಯದಕ್ಷಿಣಾಂ ದೇಹಿ ಜ್ಞಾತಿಗ್ರಾಮಸ್ಯ ಪಶ್ಯತಃ ।
ದದಾಮೀತಿ ಪ್ರತಿಜ್ಞಾತೇ ಫಲ್ಗುನೇನಾಬ್ರವೀದ್ ಗುರುಃ ।
ಯುದ್ಧೇ ಹಿ ಪ್ರತಿಯೋದ್ಧವ್ಯೋ ಯುಧ್ಯಮಾನೋಽಪ್ಯಹಂ ರಣೇ ॥

ನಿನ್ನ ಬಂಧುಗಳೆಲ್ಲರೂ ನೋಡುತ್ತಿರುವಂತೆ ನೀನು ಗುರುದಕ್ಷಿಣೆಯನ್ನು ಕೊಡು (ಎಂದು ಹೇಳಿದರು). ಅರ್ಜುನನು ''ಕೊಡುತ್ತೇನೆ'' ಎಂದು ಪ್ರತಿಜ್ಞೆ ಮಾಡಿದ ಮೇಲೆ ಗುರುಗಳಾದ ದ್ರೋಣರು ಅವನನ್ನು ಕುರಿತು ''ಯುದ್ಧದಲ್ಲಿ ನಿನಗೆ ಎದುರಾಗಿ ನಾನೇ ಯುದ್ಧ ಮಾಡಿದರೂ ಸಹ ನೀನು ನನ್ನ ಜೊತೆಯಲ್ಲಿ ಯುದ್ಧಮಾಡಬೇಕು''ಎಂದು ಹೇಳಿದರು.

ತತ್ ತಥೇತಿ ಪ್ರತಿಜ್ಞಾಯ ದ್ರೋಣಾಯ ಕುರುಪುಂಗವಃ ।
ಉಪಸಂಗೃಹ್ಯ ಚರಣೌ ಯುಧಿಷ್ಠಿರವಶೋಽಭವತ್ ।
ಉದ್ಧವಾತ್ ಸಕಲಾಂ ನೀತಿಂ ಭೋಜಾದ್ ಬುದ್ಧಿಮತಾಂ ವರಾತ್॥

ಗದಾಯುದ್ಧೇಽಸಿಯುದ್ಧೇ ಚ ರಥಯುದ್ಧೇ ಚ ಭಾರತ ।
ದಿವ್ಯಮಾನುಷಸಂಭೂತಾನ್ ಅವಾಪಾಸ್ತ್ರವಿದಾಂ ವರಃ ॥೨೦॥

ಕುರುಶ್ರೇಷ್ಠನಾದ ಅರ್ಜುನನು ''ಹಾಗೆಯೇ ಮಾಡುತ್ತೇನೆ'' ಎಂದು ದ್ರೋಣರಿಗೆ ಪ್ರತಿಜ್ಞೆಯನ್ನು ಮಾಡಿ ಅವರ ಪಾದಗಳನ್ನು ಹಿಡಿದು ನಮಸ್ಕರಿಸಿ ಯುಧಿಷ್ಠಿರನ ವಶವಾದನು. ಅಸ್ತ್ರವೇತ್ತರಲ್ಲಿ ಶ್ರೇಷ್ಠನಾದ ಅರ್ಜುನನು ಭೋಜವಂಶದಲ್ಲಿ ಜನಿಸಿದ ಮೇಧಾವಿಗಳಲ್ಲಿ ಶ್ರೇಷ್ಠನಾದ ಉದ್ಧವನಿಂದ ಸಮಗ್ರವಾದ ನೀತಿಶಾಸ್ತ್ರವನ್ನೂ, ಗದಾಯುದ್ಧದಲ್ಲಿ, ಖಡ್ಗಯುದ್ಧದಲ್ಲಿ ಮತ್ತು ರಥಯುದ್ಧದಲ್ಲಿ ಉಪಯೋಗಿಸುವ, ದೇವಲೋಕದ ಮತ್ತು ಮನುಷ್ಯಲೋಕದ ಎಲ್ಲಾ ಅಸ್ತ್ರಗಳನ್ನೂ ಸಂಗ್ರಹಿಸಿದನು.

ಸರ್ವಾಂಸ್ತಥಾಽಖಿಲಾನಸ್ತ್ರಾನ್ ಶಸ್ತ್ರಾಣಿ ಚ ತಥಾ ಗುರೋಃ ।
ಸರ್ವಾಂ ತಾಮಖಿಲಾಂ ನೀತಿಂ ಪಾತಾಲಾಧಿಪತೇಸ್ತಥಾ ॥೨೧॥

ಹಾಗೆಯೇ ಅರ್ಜುನನು ಗುರುಗಳಾದ ದ್ರೋಣರಿಂದಲೂ ಪಾತಾಲಾಧಿಪತಿಯಾದ ಶೇಷನ ಅವತಾರವಾದ ಬಲರಾಮರಿಂದಲೂ ಎಲ್ಲಾ ಅಸ್ತ್ರಶಸ್ತ್ರಗಳನ್ನೂ ಮತ್ತು ಸಮಗ್ರವಾದ ನೀತಿಯನ್ನೂ ಸಂಗ್ರಹಿಸಿದನು.

ಅಸ್ತ್ರೇ ಶಸ್ತ್ರೇ ಚ ಶಾಸ್ತ್ರೇ ಚ ರಥನಾಗಾಶ್ವಕರ್ಮಣಿ ।
ಅವಾಪ್ಯ ಸಹದೇವೋಽಪಿ ಭ್ರಾತೄಣಾಮಚರದ್ ವಶೇ ॥೨೨॥

ಸಹದೇವನೂ ಸಹ ದ್ರೋಣರಿಂದ ಅಸ್ತ್ರಗಳನ್ನೂ, ಶಸ್ತ್ರಗಳನ್ನೂ, ಶಾಸ್ತ್ರಗಳನ್ನೂ, ರಥ, ಗಜ, ಅಶ್ವಯುದ್ಧಗಳ ಪ್ರಬೇಧಗಳನ್ನೂ ಸಂಪಾದಿಸಿ ಸಹೋದರರ ವಶದಲ್ಲಿದ್ದನು.

ದ್ರೋಣೇನೈವಂ ವಿನೀತಶ್ಚ ಭ್ರಾತೄಣಾಂ ನಕುಲಃ ಪ್ರಿಯಃ ।
ಚಿತ್ರಯೋಧೀ ಸಮಾಜ್ಞಾತೋ ಬಭೂವಾಸ್ತ್ರವಿಶಾರದಃ ॥೨೩॥

ಹಾಗೆಯೇ ದ್ರೋಣರಿಂದ ಶಿಕ್ಷಿತನಾದ ವಿನಯಶೀಲನಾದ ಭ್ರಾತೃಪ್ರಿಯನಾದ ನಕುಲನೂ ಚಿತ್ರಯೋಧಿ ಎಂದು ಪ್ರಸಿದ್ಧನಾಗಿ ಅಸ್ತ್ರವಿಶಾರದನಾದನು.

ತ್ರಿವರ್ಷಕೃತಯತ್ನೈಸ್ತು ಗಾಂಧಾರಾಣಾಮುಪಪ್ಲವೇ ।
ಅರ್ಜುನಪ್ರಮುಖೈಃ ಪಾರ್ಥೈಃ ಸೌವೀರಾಃ ಸಮರೇ ಹತಾಃ ॥೨೪॥

ಮೂರುವರ್ಷ ಪ್ರಯತ್ನವನ್ನು ಮಾಡಿ ಅರ್ಜುನ ಮೊದಲಾದ ಪಾಂಡವರು ಗಾಂಧಾರದೇಶದ ಉಪಪ್ಲವ ನಗರದಲ್ಲಿ ಸೌವೀರ ರಾಜರನ್ನು ಯುದ್ಧದಲ್ಲಿ ಸಂಹರಿಸಿದರು.

ನ ಶಶಾಕ ವಶೇ ಕರ್ತುಂ ಯಂ ಪಾಂಡುರಪಿ ವೀರ್ಯವಾನ್ ।
ಸೋಽರ್ಜುನೇನ ವಶಂ ನೀತೋ ಸ ರಾಜಾ ಯವನಾಧಿಪಃ ॥೨೫॥

ಯಾವ ಸೌವೀರಾಧಿಪತಿಯಾದ ಯವನನನ್ನು ಪರಾಕ್ರಮಶಾಲಿಯಾದ ಪಾಂಡುವು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲವೋ ಅಂತಹ ಯವನ ರಾಜನನ್ನು ಅರ್ಜುನನು ವಶಪಡಿಸಿಕೊಂಡನು.

ಅತೀವ ಬಲಸಮ್ಮತ್ತಸ್ತ್ವತಿಮಾನೀ ಕುರೂನ್ ಪ್ರತಿ ।
ಕುಂತಲೋ ನಾಮ ಸೌವೀರೋ ದಾಂತಃ ಪಾರ್ಥೇನ ಧೀಮತಾ ॥೨೬॥

ತನ್ನ ಬಲದಿಂದ ಮತ್ತನಾದ, ಕುರುಗಳನ್ನು ನೋಡಿ ಬಹಳ ಗರ್ವವನ್ನು ಪಡುತ್ತಿದ್ದ ಸೌವೀರ ದೇಶದ ರಾಜನಾದ ಕುಂತಲನು ಮೇಧಾವಿಯಾದ ಅರ್ಜುನನಿಂದ ಸೋಲಿಸಲ್ಪಟ್ಟನು.

ದಂತವಕ್ರೇತಿ ವಿಖ್ಯಾತಂ ಪುರಂ ಪಾರ್ಥಸ್ಯ ತೇಜಸಾ ।
ಸುಮಿತ್ರಂ ನಾಮ ಸೌವೀರಮರ್ಜುನೋಽದಮಯನ್ಮೃಧೇ ॥೨೭॥

ದಂತವಕ್ರ ಎಂಬ ಪ್ರಖ್ಯಾತವಾದ ಪಟ್ಟಣದಲ್ಲಿದ್ದ ಸುಮಿತ್ರನೆಂಬ ಸೌವೀರರಾಜನನ್ನು ಅರ್ಜುನನು ತನ್ನ ಪರಾಕ್ರಮದಿಂದ ಯುದ್ಧದಲ್ಲಿ ಸೋಲಿಸಿದನು.

ಭೀಮಸೇನಸಹಾಯಶ್ಚ ಸರಥೋ ಮರುಧನ್ವಸು ।
ಪ್ರತೀಚ್ಯಾಂ ಸಮರೇ ರಾಜನ್ ಜಿಗಾಯ ಭರತರ್ಷಭಃ ॥೨೮॥

ಆ ಭರತಶ್ರೇಷ್ಠನಾದ ಅರ್ಜುನನು ಭೀಮಸೇನನ ಜೊತೆಯಲ್ಲಿ ರಥವನ್ನು ತೆಗೆದುಕೊಂಡು ಪಶ್ಚಿಮ ದಿಕ್ಕಿಗೆ ಹೋಗಿ ಮರುಭೂಮಿಯಲ್ಲಿದ್ದ ರಾಜರುಗಳನ್ನು ಗೆದ್ದನು.

ಅರ್ಜುನಃ ಸಮರೇ ಪ್ರಾಚ್ಯಾನ್ ಸರ್ವಾನೇಕರಥೋऽಜಯತ್ ।
ತಥೈವೈಕರಥೋ ಭೂತ್ವಾ ದಾಕ್ಷಿಣಾತ್ಯಾನ್ ನರಾಧಿಪಾನ್ ।
ಧನೌಘಂ ಪ್ರಾಪಯಾಮಾಸ ಕುರುರಾಷ್ಟ್ರಂ ಧನಂಜಯಃ ॥೨೯॥

ಅರ್ಜುನನು ಏಕರಥದಿಂದ ಹೊರಟು ಪೂರ್ವದಿಕ್ಕಿನ ಎಲ್ಲಾ ರಾಜರುಗಳನ್ನೂ ಹಾಗೆಯೇ ದಕ್ಷಿಣ ದಿಕ್ಕಿನ ಎಲ್ಲಾ ರಾಜರುಗಳನ್ನೂ ಗೆದ್ದು ನಿಜವಾಗಿ ಧನಂಜಯನಾಗಿ ಧನದ ರಾಶಿಯನ್ನು ಕುರುರಾಷ್ಟ್ರಕ್ಕೆ ತಲುಪಿಸಿದನು.

ಅತಃ ಪಂಚದಶೇ ವರ್ಷೇ ಸರ್ವಮೇತಚ್ಚಕಾರ ಸಃ ।
ತಂ ದೃಷ್ಟ್ವಾ ಧಾರ್ತರಾಷ್ಟ್ರಾಣಾಂ ತತೋ ಭಯಮಜಾಯತ ।
ಸ ಸರ್ವಾನ್ ಧೃತರಾಷ್ಟ್ರಸ್ಯ ಪುತ್ರಾನ್ ವಿಪ್ರಚಕಾರ ಹ ॥೩೦॥

ಕಾಡಿನಿಂದ ಹಸ್ತಿನಪುರಕ್ಕೆ ಬಂದ ಹದಿನೈದನೆಯ ವರ್ಷದಲ್ಲಿ ಅರ್ಜುನನು ಎಲ್ಲವನ್ನೂ ಸಾಧಿಸಿದನು. ಇದನ್ನು ನೋಡಿ ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳಿಗೆ ಭಯವುಂಟಾಯಿತು.

ಭೀಮಸೇನೋ ಮಹಾಬಾಹುರ್ಬಲಾದ್ ಬಲವತಾಂ ವರಃ ।
ಅದುಷ್ಟಭಾವಂ ತಂ ದೋಷೈರ್ಜಗೃಹುರ್ದುಷ್ಟಬುದ್ಧಯಃ ॥೩೧॥

ಮಹಾಬಾಹುವಾದ ಬಲಿಷ್ಠರಲ್ಲಿ ಶ್ರೇಷ್ಠರಾದ ಭೀಮಸೇನನು ತನ್ನ ಬಲದಿಂದ ಧೃತರಾಷ್ಟ್ರನ ಎಲ್ಲಾ ಮಕ್ಕಳನ್ನೂ ಪೀಡಿಸುತ್ತಿದ್ದನು. ದುಷ್ಟಭಾವವಿಲ್ಲದೇ ವಿನೋದಕ್ಕಾಗಿ

ಹಾಗೆ ಮಾಡುತ್ತಿದ್ದ ಭೀಮನನ್ನು ನೋಡಿ ದುಷ್ಟಬುದ್ಧಿಯುಳ್ಳ ದುರ್ಯೋಧನಾದಿಗಳು ಅವನಲ್ಲಿ ದೋಷವನ್ನೇ ಗ್ರಹಿಸಿದರು.

ಧಾರ್ತರಾಷ್ಟ್ರಾಸ್ತಥಾ ಸರ್ವೇ ಭಯಾದ್ ಭೀಮಸ್ಯ ಕರ್ಮಣಃ ।
ತಾನ್ ದೃಷ್ಟ್ವಾ ಕರ್ಮಭಿಃ ಪಾರ್ಥಾನ್ ಸರ್ವಾನಹತಲಕ್ಷಣಾನ್ ॥
ಬಲಾದ್ ಬಾಹುಬಲಾತ್ತೇಭ್ಯೋ ಬಿಭಿಯುರ್ದುಷ್ಟಬುದ್ಧಯಃ ।
ತತೋ ಬಲಮಭಿಖ್ಯಾತಂ ವಿಜ್ಞಾಯ ದೃಢಧನ್ವಿನಾಮ್ ।
ದೂಷಿತಃ ಸಹಸಾ ಭಾವೋ ಧೃತರಾಷ್ಟ್ರಸ್ಯ ಪಾಂಡುಷು ॥೩೩॥

ದುಷ್ಟಬುದ್ಧಿಯುಳ್ಳ ಧೃತರಾಷ್ಟ್ರನ ಪುತ್ರರೆಲ್ಲರೂ ಭೀಮನ ಕರ್ಮಗಳನ್ನು ನೋಡಿ ಹೆದರಿ ನಿರ್ದುಷ್ಟವಾದ ಲಕ್ಷಣಗಳನ್ನು ಹೊಂದಿದ್ದ ಎಲ್ಲಾ ಪಾಂಡವರ ಕರ್ಮಗಳನ್ನು ನೋಡಿ ಅವರ ಅಸ್ತ್ರಬಲದ ನಿಮಿತ್ತದಿಂದಲೂ, ಬಾಹುಬಲದ ನಿಮಿತ್ತದಿಂದಲೂ ಅವರಿಗೆ ಹೆದರಿದರು. ದೃಢಧನ್ವಿಗಳಾದ ಪಾಂಡವರ ಪ್ರಖ್ಯಾತವಾದ ಬಲವನ್ನು ತಿಳಿದ ಧೃತರಾಷ್ಟ್ರನಿಗೆ ಪಾಂಡವರ ವಿಷಯದಲ್ಲಿ ಮನಸ್ಸು ಕೆಟ್ಟು ಹೋಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಚತ್ವಾರಿಂಶತ್ಯಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ಅಷ್ಟಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರನಲವತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಸಂಪೂರ್ಣದುರ್ಮತಿರಥೋ ಧೃತರಾಷ್ಟ್ರಸೂನು-
ಸ್ತಾತಪ್ಯಮಾನಹೃದಯೋ ನಿಖಿಲಾನ್ಯಹಾನಿ ।
ದೃಷ್ಟ್ವಾ ಶ್ರಿಯಂ ಪರಮಿಕಾಂ ವಿಜಯಂ ಚ ಪಾರ್ಥೇ-
ಷ್ವಾಹೇದಮೇತ್ಯ ಪಿತರಂ ಸಹ ಸೌಬಲೇನ ॥೫॥

ಹೀಗೆ ದುಶ್ಶಾಸ್ತ್ರದಲ್ಲಿ ಸರ್ವಜ್ಞನೆನಿಸಿದ ದುರ್ಯೋಧನ ಪಾಂಡವರಲ್ಲಿ ಪರಮೈಶ್ವರ್ಯವನ್ನೂ ವಿಜಯವನ್ನೂ ಕಂಡು ದಿನವಿಡೀ ಎದೆಯೊಳಗೆ ಬೇಯುತ್ತ ಶಕುನಿಯೊಂದಿಗೆ ಧೃತರಾಷ್ಟ್ರನ ಬಳಿಗೆ ಬಂದು ನುಡಿದ.

ಜ್ಯೇಷ್ಠಸ್ಯ ತೇಽಪಿ ಹಿ ವಯಂ ಹೃದಯಪ್ರಜಾತಾ
ನಾರ್ಹತ್ವಮೇವ ಗಮಿತಾ ಭವತೈವ ರಾಜ್ಯೇ ।
ಭ್ರಾತುಃ ಕನೀಯಸ ಉತಾಪಿ ಹಿ ದಾರಜಾತಾ
ಅನ್ಯೈಶ್ಚ ರಾಜ್ಯಪದವೀಂ ಭವತೈವ ನೀತಾಃ ॥೬॥

ಹಿರಿಯನಾದ ನಿನಗೆ ಔರಸಪುತ್ರರು ನಾವು. ಆದರೆ ನೀನೆ ನಮ್ಮನ್ನು ರಾಜ್ಯಾರ್ಹರನ್ನಾಗಿ ಮಾಡದೆ ಹೋದೆ. ಕಿರಿಯ ಸೋದರನಿಗೆ ಅದರಲ್ಲಿಯೂ ಅವನ ಹೆಂಡತಿಯಲ್ಲಿ ಬೇರೆಯವರಿಗೆ ಹುಟ್ಟಿದವರು ಪಾಂಡವರು ಅವರಿಗೆ ರಾಜ್ಯಪದವಿಯನ್ನು ನೀನೆ ಕೊಟ್ಟೆ.

ರಾಜ್ಯಂ ಮಹಚ್ಚ ಸಮವಾಪ್ಸ್ಯತಿ ಧರ್ಮಸೂನು-
ಸ್ತ್ವತ್ತೋಽಥ ವಾನುಜಬಲಾತ್ ಪ್ರಸಭಂ ವಯಂ ತು ।
ದಾಸಾ ಭವೇಮ ನಿಜತಂತುಭಿರೇವ ಸಾಕಂ
ಕುಂತೀಸುತಸ್ಯ ಪರತೋಽಪಿ ತದನ್ವಯಸ್ಯ ॥೭॥

ಮುಂದೆ ಧರ್ಮರಾಜನೆ ನಿನ್ನಿಂದಾಗಲಿ ತಮ್ಮಂದಿರ ಬಲದಿಂದಾಗಲಿ ಈ ದೊಡ್ಡ ರಾಜ್ಯವನ್ನು ಬಲಾತ್ಕಾರವಾಗಿ ಹೊಂದುವನು. ಆಗ ನಾವು ಅವನಿಗೆ

ದಾಸರಾಗಬೇಕಾಗುತ್ತದೆ. ನಮ್ಮ ಸಂತತಿಯವರೂ ಮುಂದೆ ಅವನ ಸಂತತಿಯವರಿಗೆ ದಾಸರೇ ಆಗಬೇಕಾಗುತ್ತದೆ.

ನಾತ್ಮಾರ್ಥಮಸ್ತಿ ಮಮ ದುಃಖಮಥಾತಿಶುದ್ಧ-
ಲೋಕಪ್ರಸಿದ್ಧಯಶಸಸ್ತವ ಕೀರ್ತಿನಾಶಃ ।
ಅಸ್ಮನ್ನಿಮಿತ್ತ ಇತಿ ದುಃಖಮತೋ ಹಿ ಸರ್ವೇ-
ಪೀಚ್ಛಾಮ ಮರ್ತುಮಥ ನಃ ಕುರು ಚಾಪ್ಯನುಜ್ಞಾಂ ॥೮॥

ನನಗಾಗಿ ನಾನೇನೂ ದುಃಖಿಸುವುದಿಲ್ಲ. ಅತಿನಿರ್ಮಲವಾದ ಲೋಕಪ್ರಸಿದ್ಧವಾದ ಯಶಸ್ಸುಳ್ಳ ನಿನ್ನ ಈ ಕೀರ್ತಿ ನಮ್ಮ ನಿಮಿತ್ತವಾಗಿ ಹಾಳಾಗುವುದೆಂದು ದುಃಖ. ಅದರಿಂದ ನಾವೆಲ್ಲರೂ ಸಾಯಲು ಹೊರಟಿರುವೆವು. ಅದಕ್ಕೆ ನಮಗೆ ಅನುಜ್ಞೆ ನೀಡು.

ಏವಂ ಸ್ಮ ಪುತ್ರವಚನಂ ಸ ನಿಶಮ್ಯ ರಾಜಾ
ಪ್ರೋವಾಚ ನಾನುಗುಣಮೇತದಹೋ ಮನಸ್ತೇ ।
ಕೋ ನಾಮ ಪಾಂಡುತನಯೇಷು ಗುಣೋತ್ತಮೇಷು
ಪ್ರೀತಿಂ ನ ಯಾತಿ ನಿಜವೀರ್ಯ ಭವೋಚ್ಚಯೇಷು ॥೯॥

ತನ್ನ ಮಗನ ಈ ಮಾತನ್ನು ಕೇಳಿ ರಾಜಾ ಧೃತರಾಷ್ಟ್ರನುಡಿದ- 'ಪಾಂಡವರ ಬಗ್ಗೆ ನೀನು ಈ ರೀತಿ ಮನಸ್ಸಿನಲ್ಲಿ ಆಲೋಚಿಸುವುದು ಸರಿಯಲ್ಲ. ಉತ್ತಮ ಗುಣದವರಾಗಿದ್ದು ಸ್ವಂತ ಪರಾಕ್ರಮದಿಂದ ಉನ್ನತಿ ಹೊಂದುತ್ತಿರುವ ಪಾಂಡವರಲ್ಲಿ ಯಾರು ತಾನೆ ಪ್ರೀತಿ ಹೊಂದದಿರಲಾರರು?

ತೇ ಹಿ ಸ್ವಬಾಹುಬಲತೋಽಖಿಲಭೂಪಭೂತಿಂ
ಮಯ್ಯಾಕೃಷಂತಿ ನ ಚ ವಃ ಪ್ರತಿಷೇಧಕಾಸ್ತೇ ।
ತಸ್ಮಾಚ್ಛಮಂ ವ್ರಜ ಶುಭಾಯ ಕುಲಸ್ಯ ತಾತ
ಕ್ಷೇಮಾಯ ನೋ ಭವತಿ ವೋ ಬಲವದ್ವಿರೋಧಃ ॥೧೦॥

ಪಾಂಡವರು ತಮ್ಮ ಬಾಹುಬಲದಿಂದ ಎಲ್ಲ ರಾಜರುಗಳ ಸಂಪತ್ತನ್ನೂ ನನ್ನ ಬಳಿಗೆ ಸೆಳೆದು ತಂದುಕೊಡುವರು. ನಿಮಗೂ ಅವರು ವಿರೋಧಿಗಳಲ್ಲ. ಅದರಿಂದ ಮಗು,

ನೀನು ಅವರ ಬಗ್ಗೆ ಶಾಂತಚಿತ್ತನಾಗಿರು. ಅದರಿಂದ ಒಳ್ಳೆಯದಾಗುತ್ತದೆ. ಮತ್ತು ಬಲಿಷ್ಠರಾದ ಅವರೊಡನೆ ನೀವು ವಿರೋಧ ಕಟ್ಟಿಕೊಂಡರೆ ಕುಲಕ್ಕೆ ಕ್ಷೇಮವಾಗದು.

ಏವಂ ಬ್ರುವತ್ಯಪಿ ನೃಪೇ ಪುನರಾಹ ಪಾಪ
ಆಶ್ರಿತ್ಯ ಸೌಬಲಮತಂ ಯದಿ ನೈವ ಪಾರ್ಥಾನ್ ।
ಅನ್ಯತ್ರ ಯಾಪಯಸಿ ನಾಗಪುರಾತ್ ಪರೇತಾನ್
ದೃಷ್ಟ್ವಾ ಖಿಲಾನಪಿ ಹಿ ನೋ ಮುದಮೇಹಿ ಪಾರ್ಥೈಃ ॥೧೧॥

ಧೃತರಾಷ್ಟ್ರ ಹೀಗೆ ಬುದ್ಧಿವಾದ ಹೇಳಿದರೂ ಪಾಪಿ ದುರ್ಯೋಧನ ಶಕುನಿಯ ಅಭಿಪ್ರಾಯವನ್ನು ಅನುಸರಿಸಿ ನುಡಿದ- 'ನೀನು ಪಾಂಡವರನ್ನು ಹಸ್ತಿನಾವತಿಯಿಂದ ಬೇರೆ ಕಡೆಗೆ ಕಳಿಸದಿದ್ದರೆ ನಾವೆಲ್ಲ ಸಾಯುವೆವು. ಪಾಂಡವರೊಂದಿಗೆ ನೀನೂ ಅದನ್ನು ನೋಡಿ ಸಂತೋಷಪಡು'.

ಏವಂ ನಿಶಮ್ಯ ಗದಿತಂ ಸುತಹಾರ್ದಪಾಶೈ-
ರಾಕೃಷ್ಯತಾಶು ಸ ನೃಪೋಽರಿಧರೇಚ್ಛಯೈವ ।
ಪ್ರೋವಾಚ ಪುತ್ರಮಪಿ ತೇ ಬಲಿನೋ ಹಿ ಪಾರ್ಥಾಃ
ಶಕ್ಯಾಃ ಪುರಾತ್ ತನಯ ಯಾಪಯಿತುಂ ಕಥಂಚಿತ್ ॥೧೨॥

ಈ ಮಾತನ್ನು ಕೇಳಿ ಧೃತರಾಷ್ಟ್ರ ಹರೀಚ್ಛೆಯಿಂದಲೆ ಪುತ್ರಮೋಹದ ಪಾಶಕ್ಕೆ ಸಿಲುಕಿದ. 'ಮಗು, ಪಾಂಡವರು ಬಲಿಷ್ಠರು. ಅವರನ್ನು ಹಸ್ತಿನಾವತಿಯಿಂದ ಹೊರಗೆ ಹಾಕುವುದು ಯಾವ ರೀತಿಯಿಂದಲೂ ಸಾಧ್ಯವಾಗಲಾರದು' ಎಂದ.

ಇತ್ಯುಕ್ತ ಆಹ ಪಿತರಂ ಶಕುನಿಂ ನಿರೀಕ್ಷ್ಯ
ಸೃಷ್ಟೋ ಮಯಾ ವಿಧಿರಿಹಾದ್ಯ ಶೃಣುಷ್ವ ತಂ ಚ ।
ಆಸಂಸ್ಥ್ಯೋದಶ ಸಮಾ ನಗರಂ ಪ್ರವಿಷ್ಟೇ-
ಷ್ವೇತೇಷು ತಾವದಯಮೇವ ವಿಧಿರ್ಮಯೇಷ್ಟಃ ॥೧೩॥

ಈ ಮಾತನ್ನು ಕೇಳಿ ದುರ್ಯೋಧನ ಶಕುನಿಯ ಕಡೆಗೆ ನೋಡಿ ತಂದೆಗೆ ಹೇಳಿದ 'ಪಾಂಡವರನ್ನು ನಗರದಿಂದ ಹೊರಗೆ ಕಳಿಸಲು ನಾನೊಂದು ಉಪಾಯ ಮಾಡಿದ್ದೇನೆ.

ಅವರು ನಗರವನ್ನು ಪ್ರವೇಶಿಸಿ ಹದಿಮೂರು ವರ್ಷಗಳಾದುವು. ಅಂದಿನಿಂದಲೂ ನಾನು ಈ ಉಪಾಯವನ್ನು ಯೋಚಿಸಿದ್ದೇನೆ.

ದ್ರೌಣೇರ್ಹಿ ನಾಸ್ತಿ ಸದೃಶೋ ಬಲವಾನ್ ಪ್ರತಾಪೀ
ಸೋಽಯಂ ಮಯಾ ಬಹುವಿಧೈಃ ಪರಮೈರುಪಾಯೈಃ ।
ನೀತೋ ವಶಂ ವಶಗತೋಽಸ್ಯ ಚ ಮಾತುಲೇನ
ಸಾಕಂ ಪಿತಾ ತಮನು ಚೈಷ ನದೀಪ್ರಸೂತಃ ॥೧೪॥

ಅಶ್ವತ್ಥಾಮನಿಗೆ ಸಮಾನನಾದ ಬಲಿಷ್ಠ. ಪ್ರತಾಪಿ ಇನ್ನಾರೂ ಇಲ್ಲ. ಅಂಥವನನ್ನೂ ನಾನು ನಾನಾ ಬಗೆಯ ಶ್ರೇಷ್ಠ ಉಪಾಯಗಳಿಂದ ನನ್ನ ವಶಮಾಡಿಕೊಂಡಿದ್ದೇನೆ. ಇವನ ತಂದೆ ದ್ರೋಣನನ್ನೂ ಸೋದರಮಾವ ಕೃಪನನ್ನೂ ನನ್ನ ವಶಕ್ಕೆ ತೆಗೆದುಕೊಂಡಿದ್ದೇನೆ. ಇನ್ನು ಭೀಷ್ಮರಂತೂ ದ್ರೋಣರ ಕಡೆಗೇ ಇರುವರು.

ಏವಂ ಹಿ ಸೈನಿಕಗಣಾ ಅಪಿ ದಾನಮಾನೈಃ
ಪ್ರಾಯೋ ವಶಂ ಮಮ ಗತಾ ಅಪಿ ಚೈಷ ಕರ್ಣಃ ।
ಅಸ್ತ್ರೇ ಬಲೇಽಪ್ಯಧಿಕ ಏವ ಸುರೇಂದ್ರಸೂನೋ-
ರ್ಜೇಷ್ಠೇ ಚ ಮಂತ್ರಬಲತಸ್ತ್ವಹಮೇವ ಭೀಮಮ್ ॥೧೫॥

ಹೀಗೆಯೇ ಸೈನಿಕರ ಸಮೂಹಗಳನ್ನೂ ದಾನಮಾನಗಳಿಂದ ಹೆಚ್ಚಿನ ಮಟ್ಟಿಗೆ ನನ್ನ ವಶಕ್ಕೇ ತೆಗೆದುಕೊಂಡಿದ್ದೇನೆ. ಮತ್ತು ಈ ಕರ್ಣ ಅಸ್ತ್ರದಲ್ಲಿಯೂ ಬಲದಲ್ಲಿಯೂ ಅರ್ಜುನನನ್ನು ಮೀರಿಸುವವ, ನನ್ನ ವಶದಲ್ಲಿಯೇ ಇದ್ದಾನೆ. ಭೀಮನನ್ನು ಮಂತ್ರಬಲದಿಂದ ನಾನೇ ಗೆಲ್ಲಬಲ್ಲೆ.

ತ್ರಿಂಶಚ್ಛತಂ ಪರಮಕಾಃ ಸುರದುರ್ಲಭಾಶ್ಚ
ದುರ್ವಾಸಸೋ ಹಿ ಮನವೋಽದ್ಯ ಮಯಾ ಗೃಹೀತಾಃ ।
ಅನ್ಯತ್ರ ತೇ ಪ್ರವಿಹಿತಾ ನ ಹಿ ವೀರ್ಯವಂತಃ
ಸ್ಯುರ್ಭೀಮ ಇತ್ಯಹಮಮೂನ್ನ ನಿಯೋಜಯಾಮಿ ॥೧೬॥

ಏಕೆಂದರೆ ದೇವತೆಗಳಿಗೂ ದುರ್ಲಭವಾದ ನೂರಮೂವತ್ತು ಮಹಾಮಂತ್ರಗಳನ್ನು ದೂರ್ವಾಸರಿಂದ ಇಂದು ನಾನು ಹೊಂದಿದ್ದೇನೆ. ಬೇರೆಯವರ ಮೇಲೆ

ಪ್ರಯೋಗಿಸಿದರೆ ಮುಂದೆ ಅವು ಭೀಮನ ಮೇಲೆ ಪರಿಣಾಮಕಾರಿಯಾಗಲಾರವೆಂದು ಅವುಗಳನ್ನು ನಾನು ಇಂದು ಪ್ರಯೋಗಿಸುತ್ತಿಲ್ಲ.

ತೇ ವೀರ್ಯದಾ ವಿಜಯದಾ ಅಪಿ ವಹ್ನಿವಾರಿ-
ಸ್ತಂಭಾದಿದಾಃ ಸಕಲದೇವನಿಕಾಯರೋಧಾಃ ।
ವೃಷ್ಟ್ಯಾದ್ಯಭೀಪ್ಸಿತಸಮಸ್ತಕರಾ ಅಮೂಭಿ-
ರ್ಜೇಷ್ಯಾಮಿ ಭೀಮಮಮುಮೇಕಮಯಾತಯಾಮೈಃ ॥೧೭॥

ಆ ಮಂತ್ರಗಳು ವೀರ್ಯದಾಯಕ, ಹಾಗೂ ವಿಜಯದಾಯಕಗಳು. ವಹ್ನಿಸ್ತಂಭ ಜಲಸ್ತಂಭ ಮೃತಸಂಜೀವನಾದಿದಾಯಕಗಳು. ಎಲ್ಲ ದೇವ ಸಮೂಹಗಳನ್ನೂ ಇದಿರಿಸಬಲ್ಲವು. ಮಳೆ ಮುಂತಾದ ಸಕಲಾಭೀಷ್ಟ ನೀಡಬಲ್ಲವು. ನಾನು ಪ್ರತಿದಿನ ಜಪಿಸುತ್ತಿರುವುದರಿಂದ ಅವುಗಳ ಸಾಮರ್ಥ್ಯ ಕುಂದಿರುವುದಿಲ್ಲ. ಅದರಿಂದ ಈ ಮಂತ್ರಗಳಿಂದ ಭೀಮನೊಬ್ಬನನ್ನು ನಾನೇ ಪರಾಭವಗೊಳಿಸುವೆನು.

★ ★ ★ ★

ನೂರ ನಲವತ್ತೊಂದನೆಯ ಅಧ್ಯಾಯ

(ಯುಧಿಷ್ಠಿರನ ಅಭಿಷೇಕವನ್ನು ನೋಡಿ ದುರ್ಯೋಧನನ ಅಸೂಯೆ, ಧೃತರಾಷ್ಟ್ರನ ಜೊತೆಯಲ್ಲಿ ಸಂವಾದ, ಧೃತರಾಷ್ಟ್ರನ ಚಂಚಲಮನಸ್ಥಿತಿಃ)

ವೈಶಂಪಾಯನಃ

ಪ್ರಾಣಾಧಿಕಂ ಭೀಮಸೇನಂ ಕೃತವಿದ್ಯಂ ಧನಂಜಯಮ್ ।
ದುರ್ಯೋಧನೋ ಲಕ್ಷಯಿತ್ವಾ ಪರ್ಯತಪ್ಯತ ದುರ್ಮತಿಃ ॥೧॥

ದುರ್ಮತಿಯಾದ ದುರ್ಯೋಧನನು ಪ್ರಾಣಾಧಿಕನಾದ ಭೀಮಸೇನನನ್ನೂ, ಸರ್ವವಿದ್ಯಾಪಾರಂಗತನಾದ ಅರ್ಜುನನನ್ನೂ ಗಮನಿಸಿ ತಾಪಪಟ್ಟನು.

ದುರ್ಯೋಧನಶ್ಚ ಕರ್ಣಶ್ಚ ಶಕುನಿಶ್ಚಾಪಿ ಸೌಬಲಃ ।
ಅನೇಕೈರಭ್ಯುಪಾಯೈಸ್ತೈರ್ಜಿಘಾಂಸಂತಿ ಸ್ಮ ಪಾಂಡವಾನ್ ॥೨॥

ದುರ್ಯೋಧನನೂ, ಕರ್ಣನೂ ಸುಬಲಪುತ್ರನಾದ ಶಕುನಿಯೂ ಅನೇಕ ಉಪಾಯಗಳಿಂದ ಪಾಂಡವರನ್ನು ಕೊಲ್ಲಲು ಬಯಸಿದರು.

ಪಾಂಡವಾಶ್ಚಾಪಿ ತತ್ಸರ್ವಂ ಪ್ರತಿಚಕ್ರುರ್ಯಥಾಬಲಮ್ ।
ಉದ್ಭಾವನಮಕುರ್ವಾಣಾ ವಿದುರಸ್ಯ ಮತೇ ಸ್ಥಿತಾಃ ॥೩॥

ಪಾಂಡವರು ವಿದುರನ ಅಭಿಪ್ರಾಯದಂತೆ ನಡೆದುಕೊಂಡು ಬಾಯಲ್ಲಿ ಏನೂ ಮಾತನಾಡದೇ ಅವರ ಎಲ್ಲಾ ಉಪಾಯಗಳಿಗೂ ಯಥಾಶಕ್ತಿ ಪ್ರತೀಕಾರವನ್ನು ಮಾಡಿದರು.

ಗುಣೈಃ ಸಮುದಿತಾನ್ ದೃಷ್ಟ್ವಾ ಪೌರಾಃ ಪಾಂಡುಸುತಾಂಸ್ತದಾ ।
ಕಥಯಂತಿ ಸ್ಮ ತೇ ಭೂಯೋ ದೇಶೇದೇಶೇ ಸಭಾಸು ಚ ॥೪॥

ಪಾಂಡುಪುತ್ರರು ಗುಣಗಳಿಂದ ಸಮೃದ್ಧರಾಗಿರುವುದನ್ನು ನೋಡಿ ಪೌರರು ದೇಶದೇಶಗಳಲ್ಲಿಯೂ, ಸಭೆಗಳಲ್ಲಿಯೂ ಮತ್ತೆ ಮತ್ತೆ ಹೀಗೆ ಮಾತನಾಡಿದರು.

ಪ್ರಜ್ಞಾಚಕ್ಷುರಚಕ್ಷುಷ್ಮಾನ್ ಧೃತರಾಷ್ಟ್ರೋ ಜನಾಧಿಪಃ ।
ಅಶಕ್ತೋ ರಾಜ್ಯಕರಣೇ ಸ ಕಥಂ ಧಾರಯಿಷ್ಯತಿ ॥೫॥

ಪ್ರಜ್ಞಾಚಕ್ಷುವಾದ ಧೃತರಾಷ್ಟ್ರರಾಜನು ನೇತ್ರಹೀನನಾದುದರಿಂದ ರಾಜ್ಯವನ್ನು ಆಳಲು ಅಶಕ್ತನಾದ ಕಾರಣದಿಂದ ಹೇಗೆ ರಾಜ್ಯವನ್ನು ಧರಿಸಿ ಆಳುತ್ತಾನೆ?

ರಾಜ್ಯಂ ನ ಪ್ರಾಪ್ತವಾನ್ ಪೂರ್ವಂ ಸ ಕಥಂ ನೃಪತಿರ್ಭವೇತ್ ॥೬॥

ಮೊದಲೇ ರಾಜ್ಯವನ್ನು ಪಡೆಯದಿದ್ದ ಅವನು ಈಗ ಹೇಗೆ ರಾಜನಾಗುತ್ತಾನೆ?

ತಥಾ ಭೀಷ್ಮಃ ಶಾಂತನವಃ ಸತ್ಯಸಂಧೋ ಮಹಾವ್ರತಃ ।
ಪ್ರತ್ಯಾಖ್ಯಾಯ ಪುರಾ ರಾಜ್ಯಂ ನ ಸ ಜಾತು ಗ್ರಹೀಷ್ಯತಿ ॥೭॥

ಹಾಗೆಯೇ ಶಂತನುವಿನ ಮಗನಾದ ಸತ್ಯಸಂಧನೂ, ಮಹಾವ್ರತಧಾರಿಯೂ ಆದ ಭೀಷ್ಮನು ಮೊದಲೇ ರಾಜ್ಯವನ್ನು ನಿರಾಕರಣೆ ಮಾಡಿರುವುದರಿಂದ ಎಂದೂ ಪುನಃ ರಾಜ್ಯವನ್ನು ಸ್ವೀಕಾರ ಮಾಡುವುದಿಲ್ಲ.

ತೇ ವಯಂ ಪಾಂಡವಜ್ಯೇಷ್ಠಂ ತರುಣಂ ವೃದ್ಧದರ್ಶನಮ್ ।
ಅಭಿಷಿಂಚಾಮ ಸಾಧ್ವದ್ಯ ಸತ್ಯಕಾರುಣ್ಯವೇದಿನಮ್ ॥೮॥

ಆದ್ದರಿಂದ ನಾವು ಪಾಂಡುವಿನ ಮಕ್ಕಳಲ್ಲಿ ಜ್ಯೇಷ್ಠನಾದ, ವಯಸ್ಸಿನಿಂದ ಯುವಕನೂ, ಜ್ಞಾನದಿಂದ ವೃದ್ಧನೂ, ಸತ್ಯವಂತನೂ, ಕರುಣಾಶೀಲನೂ, ಧರ್ಮಜ್ಞನೂ ಆದ ಯುಧಿಷ್ಠಿರನನ್ನು ಇಂದೇ ಚೆನ್ನಾಗಿ ರಾಜ್ಯದಲ್ಲಿ ಅಭಿಷೇಕ ಮಾಡೋಣ.

ಪಿತಾಮಹಂ ಶಾಂತನವಂ ಧೃತರಾಷ್ಟ್ರಂ ಚ ಧರ್ಮವಿತ್ ।
ಸಪುತ್ರಂ ವಿವಿಧೈರ್ಭೋಗೈರ್ನಿಯತಂ ವಾಸಯಿಷ್ಯತಿ ॥೯॥

ಧರ್ಮರಾಜನು ಪಿತಾಮಹರಾದ ಭೀಷ್ಮರನ್ನೂ, ದೊಡ್ಡಪ್ಪನಾದ ಧೃತರಾಷ್ಟ್ರನನ್ನೂ, ಅವನ ಮಕ್ಕಳನ್ನೂ ವಿವಿಧ ಭೋಗಗಳಿಂದ ಸಂತೋಷಪಡಿಸಿ ತನ್ನ ಜೊತೆಯಲ್ಲಿ ಇರಿಸಿಕೊಳ್ಳುತ್ತಾನೆ.

ತೇಷಾಂ ದುರ್ಯೋಧನಃ ಶ್ರುತ್ವಾ ತಾನಿ ವಾಕ್ಯಾನಿ ಸರ್ವಶಃ ।
ಯುಧಿಷ್ಠಿರಾನುರಕ್ತಾನಾಂ ಪರ್ಯತಪ್ಯತ ದುರ್ಮತಿಃ ।
ಸ ತಪ್ಯಮಾನೋ ದುಷ್ಟಾತ್ಮಾ ತೇಷಾಂ ವಾಚೋ ನ ಚಕ್ಷಮೇ ॥೧೦॥

ಯುಧಿಷ್ಠಿರನಲ್ಲಿ ಅನುರಾಗವನ್ನು ಹೊಂದಿದ ಪೌರರ ಈ ಮಾತುಗಳನ್ನು ಎಲ್ಲ ಕಡೆಗಳಲ್ಲಿಯೂ ಕೇಳಿ ದುರ್ಮತಿಯಾದ ದುರ್ಯೋಧನನು ಪರಿತಾಪಪಟ್ಟನು.

ಈರ್ಷ್ಯಯಾ ಮುಹ್ಯಮಾನಸ್ತು ಧೃತರಾಷ್ಟ್ರಮುಪಾದ್ರವತ್ ।
ತತೋ ವಿರಹಿತಂ ದೃಷ್ಟ್ವಾ ಪಿತರಂ ಪರಿಪೂಜ್ಯ ಸಃ
ಪಾಂಡೋರ್ವೃತ್ತಂ ಪೂರ್ವಮುಕ್ತ್ವಾ ಪಶ್ಚಾದಿದಮಥಾಬ್ರವೀತ್ ॥೧೧

ಪರಿತಪ್ತನಾದ, ದುಷ್ಟಾತ್ಮನಾದ ಅವನು ಪೌರರ ಮಾತನ್ನು ಕೇಳಿ ಸಹಿಸದೆ ಅಸೂಯೆಯಂದ ಮೋಹಕ್ಕೆ ಒಳಗಾದವನಾಗಿ ಧೃತರಾಷ್ಟ್ರನ ಬಳಿಗೆ ಓಡಿದನು. ಅನಂತರ ತಂದೆಯು ಏಕಾಂತದಲ್ಲಿರುವುದನ್ನು ಗಮನಿಸಿ, ಅವನನ್ನು

ಯಥಾಯೋಗ್ಯವಾಗಿ ಪೂಜಿಸಿ ಮೊದಲು ಪಾಂಡುವಿನ ಗುಣಶೀಲಗಳನ್ನು ಹೇಳಿ ಅನಂತರ ಹೀಗೆ ಮಾತನಾಡಿದನು.

ದುರ್ಯೋಧನಃ

ಶ್ರುತಾ ಮೇ ಜಲ್ಪತಾಂ ತಾತ ಪೌರಾಣಾಂ ಚಾಶಿವಾ ಗಿರಃ ।
ತ್ವಾಮನಾದೃತ್ಯ ಭೀಷ್ಮಂ ಚ ಪತಿಮಿಚ್ಛಂತಿ ಪಾಂಡವಮ್ ॥೧೨॥

ತಂದೆಯೇ, ನಾನು ಅಲ್ಲಲ್ಲಿ ಮಾತನಾಡುವ ಪೌರರ ಅಮಂಗಳವಾದ ಮಾತುಗಳನ್ನು ಕೇಳಿದೆ. ನಿನ್ನನ್ನೂ ಮತ್ತು ಭೀಷ್ಮರನ್ನೂ ತಿರಸ್ಕರಿಸಿ ಅವರು ಧರ್ಮರಾಜನನ್ನು ರಾಜನನ್ನಾಗಿ ಬಯಸುತ್ತಿದ್ದಾರೆ.

ಸಮಮೇತಚ್ಚ ಭೀಷ್ಮಸ್ಯ ನ ಸ ರಾಜ್ಯಂ ಚಿಕೀರ್ಷತಿ ।
ಅಸ್ಮಾಕಂ ತು ಪರಾಂ ಪೀಡಾಂ ಚಿಕೀರ್ಷಂತಿ ಪುರೇ ಜನಾಃ ॥೧೩॥

ಈ ವಿಷಯವು ಭೀಷ್ಮರಿಗೂ ಸಮ್ಮತವಾಗಿದೆ. ಅವರಂತೂ ರಾಜ್ಯವನ್ನು ಆಳುವುದಿಲ್ಲ. ನಮಗೆ ಮಾತ್ರ ಪುರಜನರು ತುಂಬಾ ಪೀಡೆಯನ್ನು ಕೊಡಲು ಬಯಸುತ್ತಾರೆ.

ಪಿತೃತಃ ಪ್ರಾಪ್ತವಾನ್ ರಾಜ್ಯಂ ಪಾಂಡುರಾತ್ಮಗುಣೈಃ ಪುರಾ ।
ತ್ವಮಂಧಗುಣಸಂಯೋಗಾತ್ ಪ್ರಾಪ್ತಂ ರಾಜ್ಯಂ ನ ಲಬ್ಧವಾನ್ ॥೧೪॥

ತನ್ನ ಶ್ರೇಷ್ಠವಾದ ಗುಣಗಳಿಂದ ಪಾಂಡುವು ಹಿಂದೆ ತನ್ನ ತಂದೆಯಿಂದ ಬಂದ ರಾಜ್ಯವನ್ನು ಪಡೆದನು. ನೀನು ಅಂಧನಾದ ಕಾರಣದಿಂದ ಸಹಜವಾಗಿ ಬರುತ್ತಿದ್ದ ರಾಜ್ಯವು ನಿನ್ನ ಕೈಸೇರಲಿಲ್ಲ.

ಸ ಏಷ ಪಾಂಡೋರ್ದಾಯಾದ್ಯಂ ಯದಿ ಪ್ರಾಪ್ನೋತಿ ಪಾಂಡವಃ ।
ತಸ್ಯ ಪುತ್ರೋ ಧ್ರುವಂ ಪ್ರಾಪ್ತಸ್ತಸ್ಯ ತಸ್ಯಾಪಿ ಚಾಪರಃ ॥೧೫॥

ಪಾಂಡುಪುತ್ರನಾದ ಯುಧಿಷ್ಠಿರನು ಪಾಂಡುವಿನ ಅಧಿಕಾರವನ್ನೂ ಮತ್ತು ಸಂಪತ್ತನ್ನೂ ಪಡೆದರೆ, ಅವನಿಂದ ಯುಧಿಷ್ಠಿರನಪುತ್ರನೂ, ಅವನಿಂದ ಅವನ ಪುತ್ರನೂ ಪಡೆಯುತ್ತಾರೆ.

ತೇ ವಯಂ ರಾಜವಂಶೇನ ಹೀನಾಃ ಸಹ ಸುತೈರಪಿ ।
ಅವಿಜ್ಞಾತಾ ಭವಿಷ್ಯಾಮೋ ಲೋಕಸ್ಯ ಜಗತೀಪತೇ ॥೧೬॥

ಜಗತ್ಪತಿಯೇ, ನಾವು ಮತ್ತು ನಮ್ಮ ಮಕ್ಕಳು ರಾಜವಂಶದಿಂದ ಭ್ರಷ್ಟರಾಗಿ ಲೋಕದಲ್ಲಿ ಹೆಸರಿಲ್ಲದಂತೆ ಆಗುವೆವು.

ಸತತಂ ನಿರಯಂ ಪ್ರಾಪ್ತಾಃ ಪರಪಿಂಡೋಪಜೀವಿನಃ ।
ನ ಭವಾಮ ಯಥಾ ರಾಜನ್ ತಥಾ ಶೀಘ್ರಂ ವಿಧೀಯತಾಮ್ ॥೧೭॥

ರಾಜನೇ, ಇನ್ನೊಬ್ಬರ ಅನ್ನವನ್ನು ತಿಂದುಕೊಂಡು ಸತತವಾಗಿ ನಾವು ದುಃಖವನ್ನು ಅನುಭವಿಸದಂತೆ ಶೀಘ್ರವಾಗಿ ಏನಾದರೂ ಉಪಾಯವನ್ನು ಮಾಡು.

ಅಥ ತ್ವಮಪಿ ರಾಜೇಂದ್ರ ರಾಜವಂಶೋ ಭವಿಷ್ಯಸಿ ।
ಯದಿ ಹಿ ತ್ವಂ ಪುರಾ ರಾಜ್ಯೇ ಭವಾನಾಸ್ಥಾಪಿತೋ ನೃಪಃ ।
ಧ್ರುವಂ ಲಪ್ಸ್ಯಮಹೇ ರಾಜ್ಯಂ ವಯಮಪ್ಯವಶೇನ ತೇ ॥೧೮॥

ರಾಜೇಂದ್ರನೇ, ನೀನೂ ಸಹ ರಾಜವಂಶಕ್ಕೆ ಸೇರಿದವನು. ನೀನು ಹಿಂದೆ ರಾಜ್ಯದಲ್ಲಿ ಪ್ರತಿಷ್ಠಿತನಾಗಿದ್ದರೆ, ನಾವೂ ಸಹ ನಿಸ್ಸಂಶಯವಾಗಿ ರಾಜ್ಯವನ್ನು ಪಡೆಯುತ್ತಿದ್ದೆವು.

ಸ ತಥಾ ಕುರು ಕೌರವ್ಯ ರಕ್ಷ್ಯಾ ವಂಶ್ಯಾ ಯಥಾ ವಯಮ್ ॥೧೯॥

ಕುರುರಾಜನೇ, ನಾವೂ ಮತ್ತು ನಮ್ಮ ವಂಶದವರೂ ಹಾಳಾಗದಂತೆ ರಕ್ಷಣೆಯನ್ನು ಮಾಡಿ ನಾವೂ ಸಹ ರಾಜ್ಯವನ್ನು ಹೊಂದುವಂತೆ ನಿನ್ನ ಅನುಯಾಯಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ಏನಾದರೂ ಉಪಾಯವನ್ನು ಮಾಡು.

ವೈಶಂಪಾಯನಃ

ಧೃತರಾಷ್ಟ್ರಸ್ತು ಪುತ್ರಸ್ಯ ಶ್ರುತ್ವಾ ವಚನಮೀದೃಶಮ್ ।
ಮುಹೂರ್ತಮಿವ ಸಂಚಿಂತ್ಯ ದುರ್ಯೋಧನಮಥಾಬ್ರವೀತ್ ॥೨೦॥

ಧೃತರಾಷ್ಟ್ರನು ಮಗನ ಈ ಮಾತುಗಳನ್ನು ಕೇಳಿ ಒಂದು ಮಹೂರ್ತಕಾಲ ಚಿಂತಿಸಿ ದುರ್ಯೋಧನನನ್ನು ಕುರಿತು ಮಾತನಾಡಿದನು.

ಧರ್ಮವೃತ್ತಃ ಸದಾ ಪಾಂಡುಃ ಸುವೃತ್ತೋ ಮಯಿ ಗೌರವಾತ್ ।
ಸರ್ವೇಷು ಜ್ಞಾತಿಷು ತಥಾ ಮದೀಯೇಷು ವಿಶೇಷತಃ ॥೨೧॥

ಧರ್ಮಶೀಲನಾದ ಪಾಂಡುವು ನನ್ನಲ್ಲಿ ಯಾವಾಗಲೂ ಗೌರವದಿಂದ ಚೆನ್ನಾಗಿ ನಡೆದುಕೊಂಡನು. ನನ್ನ ಬಂಧುಗಳ ವಿಷಯದಲ್ಲಿಯೂ ಸಹ ವಿಶೇಷವಾಗಿ ಚೆನ್ನಾಗಿ ನಡೆದುಕೊಂಡನು.

ನಾತ್ರ ಕಿಂಚನ ಜಾನಾತಿ ಭೋಜನಾನಿ ಚಿಕೀರ್ಷತಿ ।
ನಿವೇದಯತಿ ತತ್ಸರ್ವಂ ಮಯಿ ಧರ್ಮಭೃತಾಂ ವರಃ ॥೨೨॥

ಅವನಿಗೆ ಬೇರೇನೂ (ಕಪಟವಾದುದು) ತಿಳಿಯದು. ನನ್ನನ್ನು ಬಿಟ್ಟು ಎಂದೂ ಅವನು ಭೋಜನವನ್ನು ಮಾಡುತ್ತಿರಲಿಲ್ಲ. ಧರ್ಮವನ್ನು ಆಚರಿಸುವವರಲ್ಲಿ ಶ್ರೇಷ್ಠನಾದ ಅವನು ತನ್ನ ಎಲ್ಲಾ ಸಂಪತ್ತನ್ನು ನನಗೆ ನಿವೇದಿಸುತ್ತಿದ್ದನು.

ತಸ್ಯ ಪುತ್ರೋ ಯಥಾ ಪಾಂಡುಸ್ತಥಾ ಧರ್ಮಪರಃ ಸದಾ ।
ಗುಣವಾಂಲ್ಲೋಕವಿಖ್ಯಾತೋ ನಗರೇ ಚ ಪ್ರತಿಷ್ಠಿತಃ ॥೨೩॥

ಅವನ ಪುತ್ರನಾದ ಯುಧಿಷ್ಠಿರನು ತಂದೆಯಂತೆಯೇ ಯಾವಾಗಲೂ ಧರ್ಮಪರನಾಗಿದ್ದಾನೆ. ಗುಣವಂತನೆಂದು ಲೋಕವಿಖ್ಯಾತನಾಗಿದ್ದಾನೆ. ಹಸ್ತಿನಪುರದಲ್ಲಿ ಪ್ರತಿಷ್ಠಿತನಾಗಿದ್ದಾನೆ.

ಸ ತಥಾ ವರ್ತಮಾನೋಽಸೌ ಧರ್ಮಸೂನುರ್ಯಥಾಽನುಜಃ ।
ರಾಜ್ಯಮೇಷ ಹಿ ಸಂಪ್ರಾಪ್ತಃ ಸಸಹಾಯೋ ವಿಶೇಷತಃ ॥೨೪॥

ಆ ರೀತಿಯಲ್ಲಿ ನನ್ನ ತಮ್ಮನಾದ ಪಾಂಡುವಿನಂತೆ ಇರುವ ಯುಧಿಷ್ಠಿರನು ತನ್ನ ಸಹೋದರರ ಸಹಾಯದಿಂದ ಕೂಡಿದವನಾಗಿ ವಿಶೇಷವಾಗಿ ರಾಜ್ಯವನ್ನು ಪಡೆದಿದ್ದಾನೆ.

ತೇ ತಥಾ ಸತ್ಕೃತಾಸ್ತಾತ ವಿಷಯೇ ಪಾಂಡುನಾ ನರಾಃ ।
ಕಥಂ ಯುಧಿಷ್ಠಿರಸ್ಯಾರ್ಥೇ ನ ನೋ ಹಸ್ಯುಃ ಸಬಾಂಧವಾನ್ ॥೨೫॥

ಪುತ್ರನೇ, (ನಾವೇನಾದರೂ ಅನ್ಯಾಯವನ್ನು ಮಾಡಿದರೆ) ಪಾಂಡುವಿನಿಂದ ಸತ್ಕೃತರಾದ ಪೌರರು ಯುಧಿಷ್ಠಿರನ ಸಲುವಾಗಿ ನಮ್ಮನ್ನೂ ಮತ್ತು ನಮ್ಮ ಬಂಧುಗಳನ್ನೂ ಹೇಗೆ ಹಾಸ್ಯಮಾಡದೇ ಇದ್ದಾರು?

ನೈತೇ ವಿಷಯಮಿಚ್ಛೇಯುರ್ಧರ್ಮತ್ಯಾಗೇ ವಿಶೇಷತಃ ।
ತೇ ವಯಂ ಕೌರವೇಯಾಣಾಮೇತೇಷಾಂ ಚ ಮಹಾತ್ಮನಾಮ್ ।
ಕಥಂ ನ ವಾಚ್ಯತಾಂ ತಾತ ಗಚ್ಛೇಮ ಜಗತಸ್ತಥಾ ॥೨೬॥

ನಾವು ಧರ್ಮತ್ಯಾಗವನ್ನು ಮಾಡಿದರೆ ಈ ಪೌರರು ಹಸ್ತಿನಪುರದಲ್ಲಿ ಇರಲು ಬಯಸುವುದಿಲ್ಲ. ಪುತ್ರನೇ, ಆಗ ನಾವು ಎಲ್ಲಾ ಕೌರವರಿಂದಲೂ, ಈ ಮಹಾತ್ಮರಾದ ಪೌರರಿಂದಲೂ ಮತ್ತು ಲೋಕದಲ್ಲಿ ಎಲ್ಲರಿಂದಲೂ ನಿಂದನೀಯರಾಗದೆ ಹೇಗಿರುತ್ತೇವೆ?

ದುರ್ಯೋಧನಃ

ಮಧ್ಯಸ್ಥಃ ಸತತಂ ಭೀಷ್ಮೋ ದ್ರೋಣಪುತ್ರೋ ಮಯಿ ಧ್ರುವಃ ।
ಯತಃ ಪುತ್ರಸ್ತತೋ ದ್ರೋಣೋ ಭವಿತಾ ನಾತ್ರ ಸಂಶಯಃ ॥೨೭॥

ಭೀಷ್ಮರು ಯಾವಾಗಲೂ ತಟಸ್ಥರು. ಅಶ್ವತ್ಥಾಮರು ನಿಶ್ಚಯವಾಗಿ ನನ್ನ ಪಕ್ಷದಲ್ಲೇ ಇರುತ್ತಾರೆ. ಎಲ್ಲಿ ಅಶ್ವತ್ಥಾಮರು ಇರುತ್ತಾರೋ ಅಲ್ಲಿಯೇ ದ್ರೋಣರೂ ಇರುತ್ತಾರೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಕೃಪಃ ಶಾರದ್ವತಶ್ಚೈವ ಯತ ಏತತ್ ತ್ರಯಂ ತತಃ ।
ಭಾಗಿನೇಯಂ ತತೋ ದ್ರೌಣಿಂ ನ ತ್ಯಕ್ಷ್ಯತಿ ಕಥಂಚನ ॥೨೮॥

ಶರದ್ವಂತರ ಪುತ್ರರಾದ ಕೃಪಾಚಾರ್ಯರು - ಭೀಷ್ಮ, ದ್ರೋಣ ಮತ್ತು ಅಶ್ವತ್ಥಾಮರು ಎಲ್ಲಿ ಇರುತ್ತಾರೋ ಅಲ್ಲಿಯೇ ಇರುತ್ತಾರೆ. ಅವರು ತಮ್ಮ ತಂಗಿಯ ಮಗನಾದ ಅಶ್ವತ್ಥಾಮರನ್ನು ಎಂದೂ ಬಿಡುವುದಿಲ್ಲ.

ಕ್ಷತ್ತಾ ತು ಬಂಧುರಸ್ಮಾಕಂ ಪ್ರಚ್ಛನ್ನಸ್ತು ತತಃ ಪರೈಃ ।
ನ ಚೈಕಃ ಸ ಸಮರ್ಥೋಽಸ್ಮಾನ್ ಪಾಂಡವಾರ್ಥೇ ವಿಬಾಧಿತುಮ್ ॥

ವಿದುರನು ಮೇಲುನೋಟಕ್ಕೆ ನಮಗೆ ಬಂಧುವಾಗಿದ್ದಾನೆ. ಆದರೆ ಪ್ರಚ್ಛನ್ನನಾಗಿ ಪಾಂಡವರ ಪಕ್ಷದಲ್ಲಿ ಇರುತ್ತಾನೆ. ಅವನು ಪಾಂಡವರ ಸಲುವಾಗಿ ಒಂಟಿಯಾಗಿ ನಮ್ಮನ್ನು ಬಾಧಿಸಲು ಸಾಧ್ಯವಿಲ್ಲ.

ಸುವಿಸ್ರಬ್ಧಾನ್ ಪಾಂಡುಸುತಾನ್ ಸಹ ಮಾತ್ರಾ ವಿವಾಸಯ ।
ವಾರಣಾವತಮದ್ಯೈವ ನಾತ್ರ ದೋಷೋ ಭವಿಷ್ಯತಿ ॥೩೦॥

ನಿನ್ನನ್ನು ಚೆನ್ನಾಗಿ ನಂಬಿರುವ ಪಾಂಡುಪುತ್ರರನ್ನು ಅವರ ತಾಯಿಯ ಜೊತೆಯಲ್ಲಿ ಈ ದಿನವೇ ವಾರಣಾವತಕ್ಕೆ ಕಳುಹಿಸು. ಇದರಲ್ಲಿ ಯಾವ ದೋಷವೂ ಇರುವುದಿಲ್ಲ.

ವಿನಿದ್ರಾಕರಣಂ ಘೋರಂ ಹೃದಿ ಶಲ್ಯಮಿವಾರ್ಪಿತಮ್ ।
ಶೋಕಪಾವಕಮುದ್ಭೂತಂ ಕರ್ಮಣಾ ತೇನ ನಾಶಯ ॥೩೧॥

ನಿದ್ರೆಯನ್ನು ಕೆಡಿಸಿ ಹೃದಯದಲ್ಲಿ ಘೋರವಾದ ಶಲ್ಯದಂತೆ ಚುಚ್ಚಿ ಜ್ವಲಿಸುತ್ತಿರುವ ಈ ಶೋಕಾಗ್ನಿಯನ್ನು ನಿನ್ನ ಕ್ರಿಯೆಯಿಂದ ನಾಶಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕಚತ್ವಾರಿಂಶತ್ಯಧಿಕಶತತಮೋऽಧ್ಯಾಯಃ ॥
॥ ಸಂಭವಪರ್ವಣಿ ಏಕೋನನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಓಂ ಏವಂ ಶುಭೋಚ್ಚಗುಣವತ್ಸು ಜನಾರ್ದನೇನ
ಯುಕ್ತೇಷು ಪಾಂಡುಷು ಚರತ್ಸ್ವಧಿಕಂ ಶುಭಾನಿ ।
ನಾಸ್ತಿಕ್ಯನೀತಿಮಖಿಲಾಂ ಗುರುದೇವತಾದಿ-
ಸತ್ಸ್ವಂಜಸೈವ ಜಗೃಹುರ್ಧೃತರಾಷ್ಟ್ರಪುತ್ರಾಃ ॥೧॥

ಮಂಗಳಮಯ ಮಹಾಗುಣಶಾಲಿಗಳಾದ ಪಾಂಡವರು ಕೃಷ್ಣನೊಂದಿಗೆ ಹೀಗೆ ಬಹಳ ಒಳ್ಳೆಯ ಕೆಲಸಗಳನ್ನು ನಡೆಸುತ್ತಿದ್ದಾಗ ಕೌರವರು ಗುರುದೇವತಾದಿ ಸಜ್ಜನರ ವಿಷಯದಲ್ಲಿ ಸಾಟಿಯಿಲ್ಲದ ನಾಸ್ತಿಕ್ಯ ನೀತಿಯನ್ನು ಅಧಿಕವಾಗಿ ಕೈಗೊಂಡರು.

ನಾಮ್ನಾ ಕಣಂಕ ಇತಿ ಚಾಸುರಕೋ ದ್ವಿಜೋಽಭೂತ್
ಶಿಷ್ಯಃ ಸುರೇತರುಗುರೋಃ ಶಕುನೇರ್ಗುರುಃ ಸಃ ।
ನೀತಿಂ ಸ ಕುತ್ಸಿತತಮಾಂ ಧೃತರಾಷ್ಟ್ರಪುತ್ರೇ-
ಷ್ವಾಧಾದ್ ರಹೋವಚನತಃ ಶಕುನೇ ಸಮಸ್ತಾಂ ॥೨॥

ಕಣಂಕನೆಂಬ ಹೆಸರಿನ ಅಸುರ ಸ್ವಭಾವದ ಬ್ರಾಹ್ಮಣ ದೈತ್ಯಗುರು ಶುಕ್ರಾಚಾರ್ಯ
ಶಿಷ್ಯ . ಶಕುನಿಗೆ ಈತ ಗುರುವಾಗಿದ್ದ. ಶಕುನಿಯ ಮಾತಿನಿಂದ ಅವನು ರಹಸ್ಯದ
ಕೌರವರಿಗೆ ಬಹಳ ಕೆಟ್ಟದಾದ ಎಲ್ಲ ನೀತಿಯನ್ನೂ ಉಪದೇಶಿಸಿದ.

ಧರ್ಮ್ಯೈವ ಯತ್ರ ಪರಮಂ ನ ಸುರಾಶ್ಚ ಪೂಜ್ಯಾಃ
ಸ್ವಾರ್ಥೇನ ವಂಚನಕೃತೇ ಜಗತೋಽಖಿಲಂ ಚ ।
ಧರ್ಮಾದಿಕಾರ್ಯಮಪಿ ಯಸ್ಯ ಮಹೌಷಧಿಃ ಸ್ಯಾತ್
ಶ್ರೇಷ್ಠಃ ಸ ಏವ ನಿಖಿಲಾಸುರದೈತ್ಯಸಂಘಾತ್ ॥೩॥

ಆ ನೀತಿಯಲ್ಲಿ ವಂಚನೆಗೇ ಅಗ್ರಸ್ಥಾನ. ದೇವತೆಗಳನ್ನೂ ಪೂಜಿಸಕೂಡದು. ಎ
ಧರ್ಮಾದಿಕಾರ್ಯವನ್ನು ಸ್ವಾರ್ಥದಿಂದ ಲೋಕವನ್ನು ವಂಚಿಸುವುದಕ್ಕಾಗಿಯೆ
ನಡೆಸಬೇಕು. ಹೀಗೆ ಮಹಾಕಪಟಿಯಾಗಿ ಎಲ್ಲ ಅಸುರ ದೈತ್ಯ ಸಮೂಹವನ
ಮೀರಿಸುತ್ತಿರಬೇಕು ಇಂಥವನೇ ಶ್ರೇಷ್ಠ.

ಇತ್ಯಾದಿಕುತ್ಸಿತತಮಾಂ ಜಗೃಹುಃ ಸ್ಮ ವಿದ್ಯಾ-
ಮಜ್ಞಾತ ಏವ ಧೃತರಾಷ್ಟ್ರಮುಖೈಃ ಸಮಸ್ತೈಃ ।
ತೇಷಾಂ ಸ್ವಭಾವಬಲತೋ ರುಚಿತಾ ಚ ಸೈವ
ವಿಸ್ತಾರಿತಾ ಚ ನಿಜಬುದ್ಧಿಬಲಾದತೋಽಪಿ ॥೪॥

ಇದೇ ಮುಂತಾದ ಬಲು ಕೆಟ್ಟದಾದ ಆ ವಿದ್ಯೆಯನ್ನು ಕೌರವರು ಧೃತರಾಷ್ಟ್ರಾದಿಗಳಿ
ಯಾರಿಗೂ ತಿಳಿಯದಂಥ ರಹಸ್ಯ ಸ್ಥಳದಲ್ಲಿ ಕಣಂಕನಿಂದ ಉಪದೇಶ ಪಡೆದರು
ಅದು ಅವರ ಸ್ವಭಾವ ಬಲದಿಂದಾಗಿ ಅವರಿಗೆ ಬಹಳ ಹಿಡಿಸಿತು. ತಮ್ಮ ಬುದ್
ಬಲದಿಂದ ಅವರು ಆ ವಿದ್ಯೆಯನ್ನು ಇನ್ನೂ ಹೆಚ್ಚು ಬೆಳೆಸಿಕೊಂಡರು.

★ ★ ★ ★

ನೂರ ನಲವತ್ತೆರಡನೆಯ ಅಧ್ಯಾಯ

(ಕಣಿಕ ನೀತಿ)

ವೈಶಂಪಾಯನಃ

ದುರ್ಯೋಧನೋಽಥ ಶಕುನಿಃ ಕರ್ಣೋ ದುಶ್ಶಾಸನಸ್ತಥಾ ।
ಕಣಿಂಕ ಮುಪಸಂಕ್ರಮ್ಯ ಮಂತ್ರಿಣಂ ಸೌಬಲಸ್ಯ ಚ ।
ಪಪ್ರಚ್ಛ ಭರತಶ್ರೇಷ್ಠ ಪಾಂಡವಾನ್ ಪ್ರತಿ ನೈಕಧಾ ॥೧॥

ಭರತಶ್ರೇಷ್ಠನೇ, ದುರ್ಯೋಧನ, ಶಕುನಿ, ಕರ್ಣ ಮತ್ತು ದುಶ್ಶಾಸನರು, ಶಕುನಿಯ ಮಂತ್ರಿಯಾದ ಕಣಿಂಕನನ್ನು ಕರೆಸಿ ಪಾಂಡವರ ವಿಷಯದಲ್ಲಿ ಅನೇಕ ಪ್ರಶ್ನೆಗಳನ್ನು ಕೇಳಿದರು.

ದುರ್ಯೋಧನಃ

ಪ್ರವೃದ್ಧಾಃ ಪಾಂಡವಾ ಹ್ಯೇತೇ ನಿತ್ಯಂ ತೇಭ್ಯಸ್ತ್ರಸಾಮ್ಯಹಮ್ ।
ತತ್ರ ಮೇಽಪಿ ಸಪಕ್ಷಸ್ಯ ಯದ್ ಭವೇತ್ ಕ್ಷೇಮಕಾರಕಮ್ ।
ಭಾರದ್ವಾಜ ತ್ವಮಾಚಕ್ಷ್ವ ಕರಿಷ್ಯಾಮಃ ಕಥಂ ವಯಮ್ ॥೨॥

ಈ ಪಾಂಡವರು ದಿನದಿನಕ್ಕೆ ಬಲದಿಂದ ಬೆಳೆಯುತ್ತಿದ್ದಾರೆ. ನಾನು ಅವರಿಗೆ ನಿತ್ಯವೂ ಹೆದರಿಕೊಂಡಿದ್ದೇನೆ. ಭರದ್ವಾಜಕುಲೋತ್ಪನ್ನನಾದ ಕಣಿಂಕನೇ ನನಗೂ ಮತ್ತು ನನ್ನ ಪಕ್ಷಕ್ಕೂ ಕ್ಷೇಮಕಾರಕವಾದುದು ಯಾವುದು ಮತ್ತು ಅದನ್ನು ನಾನು ಹೇಗೆ ಮಾಡಬೇಕು ಎಂಬುದನ್ನು ತಿಳಿಸು.

ವೈಶಂಪಾಯನಃ

ಸಂಪ್ರಪನ್ನಾಯ ತಸ್ಮೈ ಸ ಪರಿಮೃಶ್ಯಾರ್ಥಚಿಂತಯಾ ।
ಉವಾಚ ವಚನಂ ತೀಕ್ಷ್ಣಂ ರಾಜಶಾಸ್ತ್ರನಿದರ್ಶನಮ್ ॥೩॥

ಆಗ ಕಣಿಂಕನು ಶರಣಾಗತನಾದ ಅವನನ್ನು ಕುರಿತು ರಾಜಶಾಸ್ತ್ರನಿದರ್ಶನ ಪೂರ್ವಕವಾಗಿ ಅರ್ಥಪ್ರಾಪ್ತಿ ದೃಷ್ಟಿಯನ್ನು ಚಿಂತಿಸಿ ತೀಕ್ಷ್ಣವಾದ ಮಾತುಗಳನ್ನು ಹೇಳಿದನು.

ಕಣಿಂಕಃ

ನಿತ್ಯಮುದ್ಯತದಂಡಃ ಸ್ಯಾನ್ನಿತ್ಯಂ ವಿವೃತಪೌರುಷಃ ।
ಅಚ್ಛಿದ್ರಃ ಛಿದ್ರದರ್ಶೀ ಸ್ಯಾತ್ ಪರೇಷಾಂ ವಿವರಾನುಗಃ ॥೪॥

ನಿತ್ಯವೂ ದಂಡೋದ್ಯುಕ್ತನಾಗಿರಬೇಕು. ನಿತ್ಯವೂ ತನ್ನ ಪರಾಕ್ರಮವನ್ನು ತೋರಿಸಬೇಕು. ತನ್ನ ದೋಷವನ್ನು ಆಚ್ಛಾದಿಸಿಕೊಂಡು ಶತ್ರುಗಳ ದೋಷವನ್ನು ಹುಡುಕುತ್ತಿರಬೇಕು.

ನಿತ್ಯಮುದ್ಯತದಂಡಾದ್ಧಿ ಭೃಶಮುದ್ವಿಜತೇ ಜನಃ ।
ತಸ್ಮಾತ್ ಸರ್ವಾಣಿ ಭೂತಾನಿ ದಂಡೇನೈವಾನುಪಾಲಯೇತ್ ॥೫॥

ದಂಡೋದ್ಯತನಾದ ಪುರುಷನಿಗೆ ಲೋಕವೆಲ್ಲವೂ ಬಹಳ ಹೆದರುತ್ತದೆ. ಆದ್ದರಿಂದ ಎಲ್ಲರನ್ನೂ ದಂಡೋಪಾಯದಿಂದಲೇ ಪಾಲಿಸಬೇಕು.

ನಾಸ್ಯ ಚ್ಛಿದ್ರಂ ಪರಃ ಪಶ್ಯೇತ್ ಚ್ಛಿದ್ರೇಣ ಪರಮನ್ವಿಯಾತ್ ।
ಗೂಹೇತ್ ಕೂರ್ಮ ಇವಾಂಗಾನಿ ರಕ್ಷೇದ್ ವಿವೃತಮಾತ್ಮನಃ ॥೬॥

ತನ್ನ ಛಿದ್ರವನ್ನು ಶತ್ರುವು ನೋಡಬಾರದು. ಶತ್ರುಗಳ ಛಿದ್ರವನ್ನು ಗಮನಿಸಿ ಅವರ ಮೇಲೆ ಎರಗಬೇಕು. ಕೂರ್ಮವು ತನ್ನ ಅವಯವಗಳನ್ನು ಮರೆಮಾಡಿಕೊಂಡಂತೆ ತನ್ನ ದೋಷಗಳನ್ನು ಮರೆಮಾಡಿಕೊಳ್ಳಬೇಕು.

ನ ಶತ್ರುರಕ್ಷಪತಿತೋ ನ ಮೋಕ್ತವ್ಯಃ ಕಥಂಚನ ।
ಕಂಟಕೋ ಹಿ ದುರುಚ್ಛಿನ್ನ ಆಸ್ರಾವಂ ಜನಯೇಚ್ಚಿರಮ್ ॥೭॥

ದೃಷ್ಟಿಗೆ ಬಿದ್ದ ಶತ್ರುಗಳನ್ನು ಎಂದೂ ಬಿಡಬಾರದು. ಮುಳ್ಳನ್ನು ತೆಗೆಯದಿದ್ದರೆ ಅದು ಬಹುಕಾಲ ರಕ್ತವನ್ನು ಸುರಿಸುತ್ತದೆ.

ವಧಮೇವ ಪ್ರಶಂಸಂತಿ ಶತ್ರೂಣಾಮಪಕಾರಿಣಾಮ್ ।
ನಿರುದ್ವಿಗ್ನೋ ಹಿ ಭವತಿ ಹತ್ವಾ ಚ ರಿಪುಮೋಜಸಾ ॥೮೪॥

ಅಪಕಾರವನ್ನು ಮಾಡುವ ಶತ್ರುಗಳಿಗೆ ವಧೆಯೇ ಶ್ರೇಷ್ಠವೆಂದು ರಾಜನೀತಿಯನ್ನು ತಿಳಿದವರು ಹೇಳುತ್ತಾರೆ. ಶತ್ರುವನ್ನು ತನ್ನ ಪರಾಕ್ರಮದಿಂದ ಕೊಂದವನು ಉದ್ವೇಗರಹಿತನಾಗುತ್ತಾನೆ.

ಹನ್ಯಾದಮಿತ್ರಂ ದಂಡೇನ ಹನ್ಯಾತ್ ಪೂರ್ವಾಪಕಾರಿಣಮ್ ।
ಹನ್ಯಾತ್ ತ್ರೀನ್ ಪಂಚ ಸಪ್ತೇತಿ ಪರಪಕ್ಷಸ್ಯ ಸರ್ವಶಃ ॥೯॥

ಶತ್ರುಗಳನ್ನು ದಂಡದಿಂದ ಕೊಲ್ಲಬೇಕು. ಹಿಂದೆ ಅಪಕಾರವನ್ನು ಮಾಡಿದವರನ್ನೂ ಸಹ ದಂಡದಿಂದಲೇ ಕೊಲ್ಲಬೇಕು. ಹಾಗೆ ಕೊಲ್ಲುವಾಗ ಪರಪಕ್ಷದ ಎಲ್ಲರನ್ನೂ ಒಟ್ಟಿಗೆ ಕೊಲ್ಲದೆ ಮೂರು ಜನ, ಐದು ಜನ, ಏಳು ಜನ ಎಂದು ವಿಭಾಗಿಸಿ ಎಲ್ಲರನ್ನೂ ಕ್ರಮವಾಗಿ ಸಂಹಾರ ಮಾಡಬೇಕು. (ರಾಜನೀತಿಯ ದೃಷ್ಟಿಯಿಂದ ಶತ್ರುಗಳ ಪ್ರಭುಶಕ್ತಿ, ಉತ್ಸಾಹಶಕ್ತಿ ಮತ್ತು ಮಂತ್ರಶಕ್ತಿಯನ್ನು ನಾಶಮಾಡಬೇಕು. ಸಾಮ, ದಾನ, ಭೇದ, ದಂಡ, ಯುದ್ಧಸಿದ್ಧತೆ ಎಂಬ ಐದನ್ನೂ ನಾಶಮಾಡಬೇಕು. ಸ್ವಾಮಿ, ಅಮಾತ್ಯ, ಜನಪದ, ದಂಡ, ದುರ್ಗ, ಕೋಶ, ಮತ್ತು ಅಮಿತ್ರ ಎಂಬ ಈ ಏಳನ್ನೂ ನಾಶ ಮಾಡಬೇಕು.)

ಮೂಲಮೇವಾದಿತಶ್ಛಿಂದ್ಯಾತ್ ಪರಪಕ್ಷಸ್ಯ ನಿತ್ಯಶಃ ।
ತತೋಽನ್ಯಾನಂತರಾನ್ ಪಕ್ಷಾನ್ ಛಿಂದ್ಯಾತ್ ಸರ್ವಾನಶೇಷತಃ ॥೧೦॥

ಪರಪಕ್ಷದ ಮೂಲವನ್ನೇ ಮೊದಲು ಛೇದಿಸಬೇಕು. ಅನಂತರ ಆ ಪ್ರಧಾನರಾದವರಿಗೆ ಸಹಾಯಭೂತರಾದ ಮತ್ತು ಸಮೀಪರಾದ ಎಲ್ಲರನ್ನೂ ನಿಶ್ಶೇಷವಾಗಿ ಛೇದಿಸಬೇಕು.

ಛಿನ್ನಮೂಲೇ ಹ್ಯಧಿಷ್ಠಾನೇ ಸರ್ವೇ ತಜ್ಜೀವಿನೋ ಹತಾಃ ।
ಕಥಂ ನು ಶಾಖಾ ಜೀವೇಯುಶ್ಛಿನ್ನಮೂಲೇ ವನಸ್ಪತೌ ॥೧೧॥

ಆಧಾರವಾದ ವಸ್ತುವು ಮೂಲದಲ್ಲಿಯೇ ಛೇದಿಸಲ್ಪಟ್ಟರೆ, ಅದನ್ನು ಉಪಜೀವಿಸಿಕೊಂಡಿರುವರೆಲ್ಲರೂ ಹತರಾಗುತ್ತಾರೆ. ವೃಕ್ಷದ ಮೂಲವನ್ನು ಕತ್ತರಿಸದ ಮೇಲೆ ಕೊಂಬೆಗಳು ಹೇಗೆ ಉಳಿಯಲು ಸಾಧ್ಯ ?

ಸುವಿಕ್ರಾಂತಂ ಸುವಿಸ್ತೀರ್ಣಂ ಸುಯುದ್ಧಮಪಲಾಯಿನಮ್ ।
ಆಪದಾಮಥ ಕಾಲೇಷು ಕಾರ್ಯಾ ನಾತ್ರ ವಿಚಾರಣಾ ॥೧೨॥

ಪರಾಕ್ರಮಶಾಲಿಯಾದ, ಬಹಳ ಜನರಲ್ಲಿ ಮನ್ನಣೆಯನ್ನು ಪಡೆದ, ಯುದ್ಧಕೌಶಲವುಳ್ಳ, ಯುದ್ಧದಿಂದ ಎಂದೂ ಹಿಮ್ಮೆಟ್ಟದಿರುವ ಅಪಕಾರಿಯನ್ನು ಅವನ ಆಪತ್ತಿನ ಕಾಲವನ್ನು ನೋಡಿ ತಕ್ಷಣ ಕೊಲ್ಲಬೇಕು. ಇದರಲ್ಲಿ ಬೇರೆ ಏನನ್ನೂ ವಿಚಾರ ಮಾಡಬಾರದು.

ಬಕವಚ್ಚಿಂತಯೇದರ್ಥಾನ್ ಸಿಂಹವಚ್ಚ ಪರಾಕ್ರಮೇತ್ ।
ವೃಕವಚ್ಚಾವಲುನ್ವೀತ ಶರವಚ್ಚ ವಿನಿಷ್ಪತೇತ್ ॥೧೩॥

ಬಕಪಕ್ಷಿಯಂತೆ ವಿಷಯಗಳನ್ನು ನಿಧಾನವಾಗಿ ಆಲೋಚಿಸಬೇಕು. ಸಿಂಹದಂತೆ ತಕ್ಷಣದಲ್ಲಿ ಎರಗಬೇಕು. ತೋಳಗಳಂತೆ ಅಪಕಾರಿಯನ್ನು ಹರಿದು ಹಾಕಬೇಕು. ಬಾಣದಂತೆ ಯಾವಾಗಲೂ ಉದ್ದಿಷ್ಟವಾದ ಗುರಿಯನ್ನು ತಲುಪಬೇಕು.

ನಿಸ್ತ್ರಿಂಶಂ ಹೃದಯಂ ಕೃತ್ವಾ ವಾಚಮಿಕ್ಷುರಸೋಪಮಾಮ್ ।
ಗೃಹ್ಣೀಯಾದ್ ದ್ವಿಷತಃ ಪಾದೌ ಹಾರ್ಯಮುನ್ನಾಯ ತಚ್ಛಿರಃ ॥೧೪॥

ಹೃದಯವನ್ನು ಕತ್ತಿಯಂತೆ ಕ್ರೂರವಾಗಿ ಮಾಡಿಕೊಂಡು, ಬಾಯಿಯಲ್ಲಿ ಕಬ್ಬಿನ ರಸದಂತೆ ಸಿಹಿಯಾದ ಮಾತುಗಳನ್ನು ಆಡಬೇಕು. ಸಮಯ ಬಂದಾಗ ಶತ್ರುಗಳ ಪಾದವನ್ನೂ ಹಿಡಿಯಬೇಕು. ಅನಂತರ, ಅವನ ತಲೆಯನ್ನು ಎತ್ತಿ ಕತ್ತರಿಸಬೇಕು.

ಕಥಂ ನು ಪರಿಯಾಸ್ಯಾಮೋ ನ ಜ್ಞಾಯಾಮಹೇ ವಯಮ್ ।
ದಾತೃತ್ವೇನ ಗ್ರಹೀಷ್ಯಾಮೋ ಭೇದತೋ ದಂಡತೋऽಪಿವಾ ॥೧೫॥

ನಾವು ಹೇಗೆ ಈ ಉಪಾಯ ಮಾರ್ಗದ ಅಂತವನ್ನು ತಲುಪುವುದಿಲ್ಲವೋ ತಿಳಿಯುವುದಿಲ್ಲ ಎಂಬ ಭಾವನೆ ಇದ್ದಾಗ ದಾನದಿಂದಲಾಗಲೀ, ಭೇದದಿಂದಾಗಲೀ, ದಂಡದಿಂದಾಗಲೀ ವ್ಯವಹರಿಸಬೇಕು.

ಅಂಧಃ ಸ್ಯಾದಂಧವೇಲಾಯಾಂ ಬಾಧಿರ್ಯಮಪಿ ಸಂಶ್ರಯೇತ್ ।
ಕುರ್ಯಾತ್ ತೃಣಮಯಂ ಚಾಶು ಶಯೀತ ಮೃತಶಾಯಿಕಾಮ್ ॥೧೬॥

ಅಂಧನಾಗಬೇಕಾಗಿ ಬಂದಾಗ ಅಂಧನಾಗಬೇಕು, ಕಿವುಡನಾಗಬೇಕಾದಾಗ, ಕಿವುಡನ್ನು ಆಶ್ರಯಿಸಬೇಕು. ಹುಳಕಡ್ಡಿ ಎಂಬ ಹುಳುವು ಕಾಷ್ಠಮಯವಾದ ಗೂಡನ್ನು ಮಾಡಿ ಒಳಗೆ ಸೇರಿಕೊಳ್ಳುವಂತೆ ಸಮಯದಲ್ಲಿ ಬೇಗ ಸತ್ತವರಂತೆ ಮಲಗಬೇಕು.

ಏಕಾಗ್ರಾಚ್ಚಾಪಿ ವಸತೋ ನಿತ್ಯಂ ವಿವರದರ್ಶಕಃ ।
ರಾಜನ್ ಕ್ಷತ್ರಸಪತ್ನಾತ್ ತು ನಿತ್ಯೋದ್ವಿಗ್ನಃ ಸಮಾಚರೇತ್ ॥೧೭॥

ಶತ್ರುವು ಎಷ್ಟು ಏಕಾಗ್ರತೆಯಿಂದ ವಾಸ ಮಾಡಿದರೂ, ಯಾವಾಗಲೂ ಅವನ ಛಿದ್ರವನ್ನು ಗಮನಿಸುತ್ತಿರಬೇಕು. ರಾಜನೇ, ಕ್ಷತ್ರಿಯನಾದ ಶತ್ರುವಿಗೆ ಯಾವಾಗಲೂ ಹೆದರಿ, ಉಚಿತವಾದ ಪ್ರತಿಕ್ರಿಯೆಯನ್ನು ಮಾಡಬೇಕು.

ಅಗ್ನ್ಯಾಧಾನೇನ ಯಜ್ಞೇನ ಕಾಷಾಯೇಣ ಜಟಾಜಿನೈಃ ।
ಲೋಕಾನ್ ಪ್ರಸ್ತಾಯಿತ್ವೈವಂ ತತೋ ಲುಂಪೇದ್ ಯಥಾ ವೃಕಃ ॥೧೮॥

ಅಗ್ನ್ಯಾಧಾನವನ್ನು ಮಾಡಿ, ಯಜ್ಞವನ್ನು ಮಾಡಿ, ಕಾಷಾಯ ವಸ್ತ್ರಗಳನ್ನು ಧರಿಸಿ ಅಥವಾ ಜಟಾಜಿನಗಳನ್ನು ಧರಿಸಿ ಜನರನ್ನು ನಂಬಿಸಬೇಕು. ಅನಂತರ ತೋಳಗಳಂತೆ ಅವರನ್ನು ಸೂರೆ ಮಾಡಬೇಕು.

ಅಂಕುಶಂ ಶೌಚಮಿತ್ಯಾಹುರರ್ಥಾನಾಮುಪಧಾರಣೇ ।
ಅನಾಮ್ಯ ಫಲಿನೀಂ ಶಾಖಾಂ ಪಕ್ವಂ ಪಕ್ವಂ ಪ್ರಶಾತಯೇತ್ ॥೧೯॥

ಅರ್ಥವನ್ನು ಗಳಿಸಿ ಉಳಿಸಿಕೊಳ್ಳುವುದರಲ್ಲಿ ಕಪಟದಿಂದ ಮಾಡಿದ ಧರ್ಮಾಚರಣೆಯನ್ನು ಅಂಕುಶವೆಂದು ಕರೆಯುತ್ತಾರೆ. ಫಲಗಳಿಂದ ತುಂಬಿದ ಶಾಖೆಯನ್ನು ಬಗ್ಗಿಸಿ ಪಕ್ವವಾದ ಫಲಗಳನ್ನು ಒಂದೊಂದಾಗಿ ಉರುಳಿಸಬೇಕು.

ವಹೇದಮಿತ್ರಂ ಸ್ಕಂಧೇನ ಯಾವತ್ ಕಾಲಸ್ಯ ಪರ್ಯಯಃ ।
ತತಃ ಸಾರಮುಪಾದಾಯ ಭಿಂದ್ಯಾದ್ ಘಟಮಿವಾಶ್ಮನಿ ॥೨೦॥

ಕಾಲವು ಅನುಕೂಲವಾಗುವವರೆಗೆ ಶತ್ರುವನ್ನು ಹೆಗಲ ಮೇಲೆ ಹೊರಬೇಕು. ಅನಂತರ ಕಾಲವು ಅನುಕೂಲವಾದಾಗ ಅವನ ಸರ್ವಸ್ವವನ್ನೂ ತಿಳಿದುಕೊಂಡು, ಕಲ್ಲಿನ ಮೇಲೆ ಮಡಕೆಯನ್ನು ಒಡೆದಂತೆ ಅವನನ್ನು ನಾಶಮಾಡಬೇಕು.

ಅಮಿತ್ರಸ್ತು ನ ಮೋಕ್ತವ್ಯಃ ಕೃಪಣಂ ಬಹ್ವಪಿ ಬ್ರುವನ್ ।
ದುಃಖಮಸ್ಮಿನ್ ನ ಕರ್ತವ್ಯಂ ವಿಧ್ಯಾದೇವಾಪಕಾರಿಣಮ್ ॥೨೧॥

ಶತ್ರುವಾದವನು ಎಷ್ಟೇ ದೈನ್ಯದ ಮಾತುಗಳನ್ನಾಡಿದರೂ ಅವನನ್ನು ಬಿಡಬಾರದು. ಅವನಲ್ಲಿ ಎಂದೂ ಕೃಪೆಯನ್ನು ತೋರಿಸಬಾರದು. ಅಪಕಾರ ಮಾಡಿದವನನ್ನು ಸಂಹಾರವನ್ನೇ ಮಾಡಬೇಕು.

ಹನ್ಯಾದಮಿತ್ರಂ ಸಾಂತ್ವೇನ ಸಾಮಭೇದನದಂಡನೈಃ ।
ತಥಾ ಭೇದೇನ ದಂಡೇನ ಭೇದೈರ್ದಂಡೈರಥಾಪಿ ವಾ ॥೨೨॥

ಶತ್ರುಗಳನ್ನು ಸಾಮದಿಂದ ಕೊಲ್ಲಬೇಕು ಅಥವಾ ಸಾಮಭೇದ ದಂಡಗಳಿಂದ ಕೊಲ್ಲಬೇಕು ಅಥವಾ ಕೇವಲ ಭೇದದಿಂದ ಅಥವಾ ದಂಡದಿಂದ ಕೊಲ್ಲಬೇಕು ಅಥವಾ ಭೇದಗಳಿಂದಲೂ ಮತ್ತು ದಂಡಗಳಿಂದಲೂ ಕೊಲ್ಲಬೇಕು.

ದುರ್ಯೋಧನಃ

ಕಥಂ ಸಾಂತ್ವೇನ ದಾನೇನ ಭೇದೈರ್ದಂಡೈರಥಾಪಿ ಚ ।
ಅಮಿತ್ರಃ ಶಕ್ಯತೇ ಹಂತುಂ ತನ್ಮೇ ಬ್ರೂಹಿ ಯಥಾತಥಮ್ ॥೨೩॥

ಸಾಮದಿಂದ ಅಥವಾ ದಾನದಿಂದ ಅಥವಾ ಭೇದದಿಂದ ಅಥವಾ ದಂಡದಿಂದ ಶತ್ರುವನ್ನು ಕೊಲ್ಲುವುದು ಹೇಗೆ. ಅದನ್ನು ನನಗೆ ಯಥಾರ್ಥವಾಗಿ ತಿಳಿಸು.

ಕಣಿಂಕಃ

ಶೃಣು ರಾಜನ್ ಯಥಾ ವೃತ್ತಂ ವನೇ ವಸತಿ ಜಂಬುಕಃ ।
ಸಖಾಯಸ್ತಸ್ಯ ವ್ಯಾಘ್ರಶ್ಚ ವೃಕೋ ನಕುಲಮೂಷಿಕೌ ॥೨೪॥

ರಾಜನೇ ಹಿಂದೆ ನಡೆದ ಒಂದು ವೃತ್ತಾಂತವನ್ನು ಹೇಳುತ್ತೇನೆ. ಅದನ್ನು ಕೇಳು. ಒಂದು ಕಾಡಿನಲ್ಲಿ ಒಂದು ನರಿಯು ವಾಸಿಸುತ್ತಿತ್ತು. ಅದಕ್ಕೆ ಒಂದು ವ್ಯಾಘ್ರವೂ,

ಒಂದು ತೋಳವೂ, ಒಂದು ಮುಂಗುಸಿಯೂ (ನಕುಲ), ಒಂದು ಇಲಿಯೂ ಸ್ನೇಹಿತರಾಗಿದ್ದರು.

ತೇ ಪಶ್ಯಂತಿ ವನೇ ತಸ್ಮಿನ್ ಬಲಿನಂ ಮೃಗಯೂಥಪಮ್ ।
ಅಶಕ್ತಾ ಗ್ರಹಣೇ ತಸ್ಯ ತತೋ ಮಂತ್ರಮಕುರ್ವತ ॥೨೫॥

ಅವರೆಲ್ಲರೂ ಆ ಕಾಡಿನಲ್ಲಿ ಬಲಿಷ್ಠವಾದ ಒಂದು ನಾಯಕಜಿಂಕೆಯನ್ನು ನೋಡಿದರು. ಅದನ್ನು ಹಿಡಿಯುವುದರಲ್ಲಿ ಅಶಕ್ತರಾದ ಅವರು ಆಗ ಒಂದು ಮಂತ್ರಾಲೋಚನೆಯನ್ನು ನಡೆಸಿದರು.

ಜಂಬುಕಃ

ಅಸಕೃದ್ ಯತಿತೋ ಹ್ಯೇಷ ಹಂತುಂ ವ್ಯಾಘ್ರ ತ್ವಯಾऽನಘ ।
ಅಸೌ ವೈ ಜವಸಂಪನ್ನೋ ಬುದ್ಧಿಶಾಲೀ ನ ಶಕ್ಯತೇ ॥೨೬॥

ಎಲೈ ನಿರ್ದುಷ್ಟನಾದ ವ್ಯಾಘ್ರನೇ, ನಾನು ಈ ಜಿಂಕೆಯನ್ನು ಕೊಲ್ಲಲು ಅನೇಕ ಬಾರಿ ಪ್ರಯತ್ನ ಮಾಡಿದೆ. ಆದರೆ ವೇಗದಿಂದ ಕೂಡಿದ ಬುದ್ಧಿಶಾಲಿಯಾದ ಈ ಜಿಂಕೆಯನ್ನು ಕೊಲ್ಲಲು ಸಾಧ್ಯವಿಲ್ಲ.

ಮೂಷಿಕೋऽಸ್ಯ ಶಯಾನಸ್ಯ ಚರಣೌ ಭಕ್ಷಯತ್ವಯಮ್ ।
ಅಥೈನಂ ಭಕ್ಷಿತೇ ಪಾದೇ ಮೃಗಂ ವ್ಯಾಘ್ರೋ ಹನೇತ್ ತದಾ ।
ತತಸ್ತಂ ಭಕ್ಷಯಿಷ್ಯಾಮಃ ಸರ್ವೇ ಮುದಿತಮಾನಸಾಃ ॥೨೭॥

ಜಿಂಕೆಯು ಮಲಗಿರುವಾಗ ಈ ಇಲಿಯು ಅದರ ಪಾದಗಳನ್ನು ಕಚ್ಚಿ ತಿನ್ನಲಿ. ಜಿಂಕೆಯ ಪಾದಗಳು ಗಾಯಗೊಂಡರೆ, ವ್ಯಾಘ್ರವು ಅದನ್ನು ಸಂಹರಿಸುತ್ತದೆ. ಆಗ ನಾವೆಲ್ಲರೂ ಸಂತೋಷದಿಂದ ಆ ಜಿಂಕೆಯನ್ನು ತಿನ್ನೋಣ.

ಕಣಿಂಕಃ

ಜಂಬುಕಸ್ಯ ತು ತೇ ವಾಕ್ಯಂ ತಥಾ ಚಕ್ರುಃ ಸಮಾಹಿತಾಃ ।
ಮೂಷಿಕಾಭಕ್ಷಿತೈಃ ಪಾದೈರ್ಮೃಗಂ ವ್ಯಾಘ್ರೋऽಹನತ್ ತದಾ ॥೨೮॥

ಅವೆಲ್ಲಾ ಪ್ರಾಣಿಗಳು ಜಂಬುಕನ (ನರಿ) ಮಾತಿನಂತೇ ನಡೆದುಕೊಂಡವು. ಜಿಂಕೆಯ ಪಾದಗಳನ್ನು ಮೂಷಿಕವು ಭಕ್ಷಿಸುತ್ತಿರಲು, ಹುಲಿಯು ಅದನ್ನು ಕೊಂದಿತು.

ಜಂಬುಕಃ

ಸ್ನಾತ್ವಾऽಗಚ್ಛತ ಭದ್ರಂ ವೋ ರಕ್ಷಾಮಿ ಮೃಗಯೂಥಪಮ್ ।

ನಿಮಗೆಲ್ಲರಿಗೂ ಒಳ್ಳೆಯದಾಗಲಿ. ನೀವೆಲ್ಲರೂ ಸ್ನಾನ ಮಾಡಿ ಬನ್ನಿ. ಅಲ್ಲಿಯವರೆಗೆ ನಾನು ಜಿಂಕೆಯನ್ನು ರಕ್ಷಿಸಿಕೊಂಡಿರುತ್ತೇನೆ.

ಕಣಂಕಃ

ಸೃಗಾಲವಚನಾಚ್ಚಾಪಿ ಗತಾಃ ಸರ್ವೇ ನದೀಂ ತತಃ ॥೨೯॥

ಸಂಚಿಂತಯಂತೋ ಮನಸಾ ಮಾಂಸತೃಪ್ತಿಂ ಪುನಃಪುನಃ ।
ಅಥಾಗಚ್ಛತ್ ಪೂರ್ವಮೇವ ಸ್ನಾತ್ವಾ ವ್ಯಾಘ್ರೋ ಮಹಾಬಲಃ ।
ಜಂಬುಕಶ್ಚಾಭವತ್ ತತ್ರ ತದಾ ಚಿಂತಾಪರೋ ಭೃಶಮ್ ॥೩೦॥

ನರಿಯ ಮಾತುಗಳನ್ನು ಕೇಳಿ ಎಲ್ಲಾ ಪ್ರಾಣಿಗಳು ಮನಸ್ಸಿನಲ್ಲಿ ಮಾಂಸತೃಪ್ತಿಯನ್ನು ಪುನಃ ಪುನಃ ಚಿಂತಿಸುತ್ತಾ ನದಿಗೆ ಹೋದವು.

ಅನಂತರ ಮಹಾಬಲವುಳ್ಳ ವ್ಯಾಘ್ರವು ಮೊದಲು ಸ್ನಾನ ಮಾಡಿ ಬಂದಿತು. ಅದನ್ನು ನೋಡಿ, ನರಿಗೆ ತುಂಬಾ ಚಿಂತೆಯಾಯಿತು.

ವ್ಯಾಘ್ರಃ

ಕಿಂ ಶೋಚಸಿ ಮಹಾಪ್ರಾಜ್ಞ ತ್ವಂ ನೋ ಬುದ್ಧಿಮತಾಂ ವರಃ ।
ಪಿಶಿತಸ್ಯಾಶಿತಾರೋऽದ್ಯ ವಿಹರಿಷ್ಯಾಮಹೇ ಸುಖಮ್ ॥೩೧॥

ಮಹಾಪ್ರಾಜ್ಞನೇ, ನೀನು ನಮ್ಮೆಲ್ಲರಿಗಿಂತಲೂ ಬುದ್ಧಿವಂತನಾದವನು. ಏನನ್ನು ಯೋಚಿಸುತ್ತಿದ್ದೀಯೆ. ಮಾಂಸವನ್ನು ತಿಂದು ನಾವೆಲ್ಲರೂ ಸಂತೋಷದಿಂದ ವಿಹಾರವನ್ನು ಮಾಡೋಣ.

ಜಂಬುಕಃ

ಅವಮತ್ಯ ಮಹಾಪ್ರಾಜ್ಞ ಮೂಷಿಕಸ್ತ್ವಾಂ ವಚೋಽಬ್ರವೀತ್ ।
ಧಿಗ್ಬಲಂ ಮೃಗರಾಜಸ್ಯ ಮಯಾಽದ್ಯಾಯಂ ಮೃಗೋ ಹತಃ ॥೩೨॥

ಮಹಾಪ್ರಾಜ್ಞನೇ, ನಿನ್ನನ್ನು ಅವಮಾನ ಮಾಡಿ ಮೂಷಿಕವು ಹೀಗೆ ಹೇಳಿತು. ಮೃಗರಾಜನಾದ ವ್ಯಾಘ್ರನ ಬಲಕ್ಕೆ ಧಿಕ್ಕಾರವಿರಲಿ. ಈ ಜಿಂಕೆಯು ಈ ದಿನ ನನ್ನಿಂದ ಹತವಾಗಿದೆ.

ಮದ್ಬಾಹುಬಲಮಾಶ್ರಿತ್ಯ ತೃಪ್ತಿರ್ಯಸ್ಯ ಭವಿಷ್ಯತಿ ।
ತಸ್ಯೈವಂ ಗದತಸ್ತ್ವದ್ಯ ತತೋ ಭಕ್ಷ್ಯಂ ನ ರೋಚಯೇ ॥೩೩॥

ಏಕೆಂದರೆ, ನನ್ನ ಬಾಹುಬಲದಿಂದ ಈ ದಿನ ವ್ಯಾಘ್ರನಿಗೆ ತೃಪ್ತಿ ಉಂಟಾಗುತ್ತದೆ. ಹೀಗೆ ಮೂಷಿಕವು ಹೇಳಿದ್ದರಿಂದ ನನಗೆ ಮಾಂಸ ಭಕ್ಷಣದಲ್ಲಿ ಉತ್ಸಾಹವಿಲ್ಲ.

ವ್ಯಾಘ್ರಃ

ಯದ್ಯೇವಮಬ್ರವೀತ್ ಸೋಽಸ್ಮಾನ್ ಕಾಲೇ ಚಾಸ್ಮ್ಯವಬೋಧಿತಃ ।
ಸ್ವಬಾಹುಬಲಮಾಶ್ರಿತ್ಯ ಹನಿಷ್ಯಾಮಿ ವನೇಚರಾನ್ ।
ಖಾದಿಷ್ಯಾಮಿ ಚ ಮಾಂಸಾನೀತ್ಯುಕ್ತ್ವಾ ಸ ಪ್ರಾದ್ರವದ್ ವನಮ್ ॥೩೪॥

ಒಂದು ಪಕ್ಷ ಮೂಷಿಕವು ಹೀಗೆ ಹೇಳಿದ್ದರೆ, ನನ್ನನ್ನು ಸರಿಯಾದ ಕಾಲದಲಿ ಎಚ್ಚರಿಸಿದ್ದೀಯೆ. ನನ್ನ ಬಾಹುಬಲವನ್ನೇ ಆಶ್ರಯಿಸಿ, ವನಚರ ಪ್ರಾಣಿಗಳನ್ನು ಕೊಂದು ಅವುಗಳ ಮಾಂಸವನ್ನು ತಿನ್ನುವೆನು ಎಂದು ಹೇಳಿ ಹುಲಿಯು ಓಡಿ ಹೋಯಿತು.

ಕಣಿಂಕಃ

ಏತಸ್ಮಿನ್ನೇವ ಕಾಲೇ ತು ಮೂಷಿಕೋಽಪ್ಯಾಜಗಾಮ ಹ ।

ಈ ಸಮಯಕ್ಕೆ ಸರಿಯಾಗಿ ಮೂಷಿಕವೂ ಅಲ್ಲಿಗೆ ಬಂದಿತು.

ಜಂಬುಕಃ

ಶೃಣು ಮೂಷಿಕ ಭದ್ರಂ ತೇ ಅಬ್ರವೀನ್ನಕುಲೋ ಯಥಾ ॥೩೫॥

ಮೃಗಮಾಂಸಂ ನ ಖಾದೇಯಂ ಪರಮಸ್ಮದ್ವಿಧಸ್ಯ ತತ್ ।
ಮೂಷಿಕಂ ಭಕ್ಷಯಿಷ್ಯಾಮಿ ತದ್ ಭವಾನನುಮನ್ಯತಾಮ್ ॥೩೬॥

ಎಲೈ ಮೂಷಿಕವೇ, ನಿನಗೆ ಒಳ್ಳೆಯದಾಗಲಿ. ಮುಂಗುಸಿಯು ಏನು ಹೇಳಿತೆಂದು ನಿನಗೆ ತಿಳಿಸುತ್ತೇನೆ. ಜಿಂಕೆಯ ಮಾಂಸವನ್ನು ನಾನು ತಿನ್ನುವುದಿಲ್ಲ. ಏಕೆಂದರೆ, ಅದು ಸಸ್ಯಾಹಾರಿಯ ಮಾಂಸ. ನಾನು ಮೂಷಿಕವನ್ನೇ ಭಕ್ಷಿಸುವೆನು. ಅದಕ್ಕೆ ನೀನು ಅನುಮತಿಯನ್ನು ಕೊಡು.

ಕಣಿಂಕಃ

ತಚ್ಛ್ರುತ್ವಾ ಮೂಷಿಕೋ ವಾಕ್ಯಂ ಸಂತ್ರಸ್ತಃ ಪ್ರಾದ್ರವದ್ ಭಯಾತ್ ।
ತತಃ ಸ್ನಾತ್ವಾ ಚ ತಂ ದೇಶಮಾಜಗಾಮ ವೃಕೋ ನೃಪ ॥೩೭॥

ರಾಜನೇ, ಅದನ್ನು ಕೇಳಿ ಮೂಷಿಕವು ಭಯದಿಂದ ನಡುಗುತ್ತಾ, ಓಡಿಹೋಯಿತು. ಅನಂತರ ಅಲ್ಲಿಗೆ ಸ್ನಾನವನ್ನು ಮಾಡಿದ ವೃಕವು (ತೋಳವು) ಬಂದಿತು.

ಜಂಬುಕಃ

ಮೃಗರಾಜೋ ಹಿ ಸಂಕ್ರುದ್ಧೋ ನ ನಃ ಸಾಧು ಭವಿಷ್ಯತಿ ।
ಸಕಲತ್ರಃ ಸಮಾಯಾತಿ ಕುರುಷ್ವ ಯದನಂತರಮ್ ॥೩೮॥

ಮೃಗರಾಜನಾದ ವ್ಯಾಘ್ರನು ಕೋಪಗೊಂಡಿದ್ದಾನೆ. ಅದರಿಂದ ನಮಗೆ ಕ್ಷೇಮವಾಗುವುದಿಲ್ಲ. ವ್ಯಾಘ್ರನು ತನ್ನ ಪತ್ನಿಯೊಡನೆ ಬರುತ್ತಿದ್ದಾನೆ. ಏನು ಮಾಡಬೇಕೆಂದು ನೀನೇ ಯೋಚಿಸು.

ಕಣಿಂಕಃ

ಏವಂ ಸಂಚೋದಿತಸ್ತೇನ ಜಂಬುಕೇನ ತದಾ ವೃಕಃ ।
ವ್ಯಾಘ್ರೋದ್ವಿಗ್ನಮನಾ ಭೂತ್ವಾ ಪ್ರಯಾತಃ ಪಿಶಿತಾಶನಃ ॥೩೯॥

ಹೀಗೆ ಆ ನರಿಯಿಂದ ಪ್ರೇರಿಸಲ್ಪಟ್ಟ ಮಾಂಸಾಹಾರಿಯಾದ ಆ ವೃಕವು ಹುಲಿಗೆ ಮನಸ್ಸಿನಲ್ಲಿ ಹೆದರಿ ಓಡಿ ಹೋಯಿತು.

ಏತಸ್ಮಿನ್ನೇವ ಕಾಲೇ ತು ನಕುಲೋಽಪ್ಯಾಜಗಾಮ ಹ ।
ತಮುವಾಚ ಮಹಾರಾಜ ನಕುಲಂ ಜಂಬುಕೋ ವನೇ ॥೪೦॥

ಆ ಕಾಲಕ್ಕೆ ಸರಿಯಾಗಿ ಮುಂಗುಸಿಯು ಅಲ್ಲಿಗೆ ಬಂದಿತು. ಮಹಾರಾಜನೇ, ಆ ನರಿಯು ಕಾಡಿನಲ್ಲಿ ಮುಂಗುಸಿಯನ್ನು ಕುರಿತು ಹೀಗೆ ಹೇಳಿತು.

ಜಂಬುಕಃ

ಸ್ವಬಾಹುಬಲಮಾಶ್ರಿತ್ಯ ನಿರ್ಜಿತಾಸ್ತೇ ಮಯಾ ಗತಾಃ ।
ಮಮ ದತ್ತಾ ನಿಯುದ್ಧಂ ಸ್ವಂ ಭುಂಕ್ಷ್ವ ಮಾಂಸಂ ಯಥೇಪ್ಸಿತಮ್ ॥೪೧॥

ನನ್ನ ಬಾಹುಬಲದಿಂದ ಅವರೆಲ್ಲರನ್ನೂ ಸೋಲಿಸಿದ್ದೇನೆ. ಅವರು ಹೊರಟು ಹೋದರು. ನೀನೂ ನನ್ನ ಜೊತೆಯಲ್ಲಿ ಯುದ್ಧವನ್ನು (ಕುಸ್ತಿಯನ್ನು) ಮಾಡಿ ಅನಂತರ, ನಿನಗೆ ಇಷ್ಟ ಬಂದಂತೆ ಮಾಂಸವನ್ನು ತಿನ್ನು.

ನಕುಲಃ

ಮೃಗರಾಜೋ ವೃಕಶ್ಚೈವ ಬುದ್ಧಿಮಾಂಶ್ಚೈವ ಮೂಷಿಕಃ ।
ನಿರ್ಜಿತಾಶ್ಚ ತ್ವಯಾ ವೀರ ತಸ್ಮಾದ್ ವೀರತರೋ ಭವಾನ್ ।
ನಾಹಮಪ್ಯುತ್ಸಹೇ ಯೋದ್ಧುಮಿತ್ಯುಕ್ತ್ವಾ ಗಾಂ ವಿವೇಶ ಹ ॥೪೨॥

ಎಲೈ ವೀರನೇ, ನೀನು ಮೃಗರಾಜನಾದ ವ್ಯಾಘ್ರವನ್ನೂ, ವೃಕವನ್ನೂ ಮತ್ತು ಬುದ್ಧಿಶಾಲಿಯಾದ ಮೂಷಿಕವನ್ನೂ ಸೋಲಿಸಿದ್ದೀಯೆ. ಆದ್ದರಿಂದ ನೀನು ಎಲ್ಲರಿಗಿಂತ ಪರಾಕ್ರಮಶಾಲಿ. ನಾನು ನಿನ್ನ ಜೊತೆಯಲ್ಲಿ ಯುದ್ಧಮಾಡಲು ಬಯಸುವುದಿಲ್ಲ ಎಂದು ಹೇಳಿ ಭೂಮಿಯಲ್ಲಿದ್ದ ಬಿಲದೊಳಗೆ ಹೋಯಿತು.

ಕಣಿಂಕಃ

ಏವಂ ತೇಷ್ವಪಯಾತೇಷು ಜಂಬುಕೋ ಹೃಷ್ಟಮಾನಸಃ ।
ಖಾದತಿ ಸ್ಮ ತದಾ ಮಾಂಸಮಿತ್ಯೇವಂ ಮಂತ್ರನಿಶ್ಚಯಾತ್ ॥೪೩॥

ಹೀಗೆ ಉಳಿದ ಪ್ರಾಣಿಗಳೆಲ್ಲವೂ ಹೋದ ಮೇಲೆ ನರಿಯು ಸಂತುಷ್ಟವಾದ ಮನಸ್ಸಿನಿಂದ ಈ ಮಂತ್ರಾಲೋಚನೆಯಿಂದ ಮಾಂಸವನ್ನು ತಿಂದಿತು.

ಏವಂ ತೇ ಕಥಿತಂ ರಾಜನ್ ಶೃಣು ಚಾಪ್ಯಪರಂ ನೃಪ ।
ಪುತ್ರಃ ಸಖಾ ವಾ ಭ್ರಾತಾ ವಾ ಪಿತಾ ವಾ ಯದಿ ವಾ ಗುರುಃ ॥೪೪॥

ಅರ್ಥೇ ಪರ್ಯವತಿಷ್ಠೇರನ್ ಕರ್ತವ್ಯಾ ಭೂತಿವರ್ಧನಾಃ ।
ಶಪಥೇನಾಪ್ಯರಿಂ ಹನ್ಯಾನ್ನ ದೋಷ ಇತಿ ಭಾರ್ಗವಃ ॥೪೫॥

ರಾಜನೇ, ಈ ಕಥೆಯನ್ನು ನಿನಗೆ ಹೇಳಿದ್ದೇನೆ. ಇನ್ನೂ ಒಂದು ವಿಷಯವನ್ನು ಕೇಳು. ಪುತ್ರನಾಗಲೀ, ಸ್ನೇಹಿತನಾಗಲೀ, ಸಹೋದರನಾಗಲೀ, ತಂದೆಯಾಗಲೀ ಅಥವಾ ಗುರುವಾಗಲೀ, ನಮ್ಮ ಕಾರ್ಯಕ್ಕೆ ಸಹಕಾರಿಗಳಾಗಿ ನಮ್ಮ ಐಶ್ವರ್ಯವನ್ನು ಹೆಚ್ಚಿಸುವಂತೆ ನೋಡಿಕೊಳ್ಳಬೇಕು. ಶಪಥದಿಂದಲಾದರೂ ಶತ್ರುವನ್ನು ಕೊಲ್ಲುವುದರಲ್ಲಿ ದೋಷವಿಲ್ಲ ಎಂದು ಶುಕ್ರಾಚಾರ್ಯರು ಹೇಳಿದ್ದಾರೆ.

ವಿಷೇಣ ಮಾಯಯಾ ವಾऽಪಿ ನೋಪೇಕ್ಷೇತ ಕಥಂಚನ ।
ಉಭೌ ಯದಿ ಶಪೇಯಾತಾಂ ಶ್ರದ್ದಧಾನಸ್ತು ವಧ್ಯತೇ ॥೪೬॥

ವಿಷದಿಂದಲಾಗಲೀ ಅಥವಾ ವಂಚನೆಯಿಂದಾಗಲೀ ಶತ್ರುವನ್ನು ಕೊಲ್ಲಬೇಕು. ಎಂದೂ ಉಪೇಕ್ಷೆ ಮಾಡಬಾರದು. ಇಬ್ಬರೂ ಶಪಥವನ್ನು ಮಾಡಿದರೆ, ಅವರಲ್ಲಿ ಯಾರು ಶ್ರದ್ಧಾಳುವೇ ಅವನು ವಧ್ಯನಾಗುತ್ತಾನೆ.

ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ ।
ಉತ್ಪಥಂ ಪ್ರತಿಪನ್ನಸ್ಯ ದಂಡೋ ಭವತಿ ಶಾಸನಮ್ ॥೪೭॥

ಗುರುವಾದರೂ ಸಹ ಅಹಂಕಾರದಿಂದ ಕೂಡಿ ಕಾರ್ಯಾಕಾರ್ಯವನ್ನು ತಿಳಿಯದೆ ದುಮಾರ್ಗಗಾಮಿಯಾದರೆ, ಅವನಿಗೂ ದಂಡರೂಪ ಶಾಸನವನ್ನು ವಿಧಿಸಬೇಕಾಗುತ್ತದೆ.

ಕ್ರುದ್ಧೋऽಪ್ಯಕ್ರುದ್ಧರೂಪಃ ಸ್ಯಾಚ್ಛುಕ್ಲಃ ಪೂರ್ವಾಭಿಭಾಷಿತಾ ।
ನ ಚೈನಂ ಕ್ರೋಧಸಂದೀಪ್ತಂ ವಿದ್ಯಾತ್ ಕಶ್ಚಿತ್ ಕಥಂಚನ ॥೪೮॥

ಕೋಪವಿದ್ದರೂ ಕೋಪವಿಲ್ಲದೇ ಶಾಂತನಾಗಿ ತೋರಿಸಿಕೊಳ್ಳಬೇಕು. ಮೊದಲೇ ಮಾತನಾಡಿಸಬೇಕು. ತಾನು ಕ್ರೋಧದಿಂದ ಉರಿಯುತ್ತಿರುವುದನ್ನು ಯಾರೂ ತಿಳಿಯಬಾರದು.

ಪ್ರಹರಿಷ್ಯನ್ ಪ್ರಿಯಂ ಬ್ರೂಯಾತ್ ಪ್ರಹರನ್ನಪಿ ಭಾರತ ।
ಪ್ರಹೃತ್ಯ ಚ ಪ್ರಿಯಂ ಬ್ರೂಯಾಚ್ಛೋಚನ್ನಿವ ರುದನ್ನಿವ ॥೪೯॥

ಅಪಕಾರಿಯನ್ನು ಹೊಡೆಯಲು ಉದ್ದೇಶಿಸಿದರೂ ಹಿತವಾದುದನ್ನೇ ಮಾತನಾಡಬೇಕು. ಭಾರತನೇ ಹೊಡೆಯುವಾಗಲೂ ಹಿತವನ್ನೇ ಮಾತನಾಡಬೇಕು. ಹೊಡೆದ ಮೇಲೆಯೂ ಸಹ ಶೋಕವನ್ನೂ ಮತ್ತು ರೋದನವನ್ನೂ ನಟಿಸಿ ಪ್ರಿಯವನ್ನೇ ಮಾತನಾಡಬೇಕು.

ವಿಶ್ವಾಸಯೇಚ್ಚೈವ ಪರಂ ಸಾಮದಾನಾರ್ಯವೃತ್ತಿಭಿಃ ।
ಅಥ ತಂ ಪ್ರಹರೇತ್ ಕಾಲೇ ಯದಾ ವಿಚಲಿತಃ ಪಥಿ ॥೫೦॥

ಶತ್ರುವನ್ನು ಸಾಮ ದಾನ ಮತ್ತು ಉದಾರವೃತ್ತಿಗಳಿಂದ ನಂಬಿಕೆಯುಳ್ಳವನನ್ನಾಗಿ ಮಾಡಬೇಕು. ಯಾವಾಗ ಅವನು ಮಾರ್ಗದಲ್ಲಿ ನಡೆಯುವುದಕ್ಕೆ ಅಸಮರ್ಥನಾಗುತ್ತಾನೋ ಆಗ ಯೋಗ್ಯವಾದ ಕಾಲದಲ್ಲಿ ಅವನನ್ನು ಸಂಹರಿಸಬೇಕು.

ಅಪಿ ಘೋರಾಪರಾಧಸ್ಯ ಧರ್ಮಮಾಶ್ರಿತ್ಯ ತಿಷ್ಠತಃ ।
ಸ ಹಿ ಪ್ರಚ್ಛಾದ್ಯತೇ ದೋಷಃ ಶೈಲೋ ಮೇಘೈರಿವಾಸಿತೈಃ ॥೫೧॥

ತಾನು ಘೋರವಾದ ಅಪರಾಧವನ್ನು ಮಾಡಿದರೂ, ಧರ್ಮವನ್ನು ಆಶ್ರಯಿಸಿಕೊಂಡು ಇದ್ದರೆ (ಇರುವಂತೆ ತೋರಿಸಿಕೊಂಡರೆ) ಆ ಧರ್ಮವು ಮೋಡಗಳು ಪರ್ವತವನ್ನು ಮುಚ್ಚಿದಂತೆ ಅವನ ಅಪರಾಧವನ್ನು ಮುಚ್ಚುತ್ತದೆ.

ಯಸ್ಯ ಸ್ಯಾತ್ತು ವಧಃ ಪ್ರಾಪ್ತಃ ತಸ್ಯಾಗಾರಾವದಾಹನೇ ।
ಅಧನಾನ್ ಭಿಕ್ಷುಕಾಂಶ್ಚೋರಾನ್ ವಿಷಕರ್ಮಸು ಯೋಜಯೇತ್ ॥೫೨॥

ಯಾವ ಅಪಕಾರಿಯನ್ನು ಅಥವಾ ಶತ್ರುವನ್ನು ವಧೆ ಮಾಡಬೇಕಾಗಿದೆಯೋ, ಅಂತಹವನ ಮನೆಗೆ ಬೆಂಕಿಯನ್ನು ಹಚ್ಚಲು ಅಥವಾ ಅವನಿಗೆ ವಿಷವನ್ನು ಉಣಿಸಲು ನಿರ್ಧನರಾದ ಭಿಕ್ಷುಕರನ್ನೂ, ಕಳ್ಳರನ್ನೂ ನಿಯೋಜಿಸಬೇಕು.

ಪ್ರತ್ಯುತ್ಥಾನಾಸನಾದ್ಯೇನ ಸಂಪ್ರದಾನೇನ ಕೇನಚಿತ್ ।
ಪ್ರತಿಪ್ರಚ್ಛನ್ನಘಾತೀ ಸ್ಯಾತ್ ತೀಕ್ಷ್ಣದಂಷ್ಟ್ರ ಇವೋರಗಃ ॥೫೩॥

ಎದ್ದು ನಿಲ್ಲವುದು, ಆಸನವನ್ನು ನೀಡುವುದು ಅಥವಾ ದಾನವನ್ನು ಮಾಡುವುದು ಇಂತಹವುಗಳಿಂದ ವಂಚನೆಯನ್ನು ಮಾಡಿ ತೀಕ್ಷ್ಣದಂಷ್ಟ್ರವುಳ್ಳ ಸರ್ಪದಂತೆ ಪ್ರಚ್ಛನ್ನವಾಗಿ ಕೊಲ್ಲಬೇಕು.

ಅಶಂಕಿತೇಭ್ಯಃ ಶಂಕೇತ ಶಂಕಿತೇಭ್ಯಶ್ಚ ಸರ್ವದಾ ।
ಅಶಂಕ್ಯಾದ್ ಭಯಮುತ್ಪನ್ನಮಪಿ ಮೂಲಾನ್ನಿಕೃತಂತಿ ॥೫೪॥

ಯಾರ ವಿಷಯದಲ್ಲಿ ಸಂಶಯವಿಲ್ಲವೋ ಅವರಿಗೂ ಹೆದರಬೇಕು. ಯಾರ ವಿಷಯದಲ್ಲಿ ಸಂಶಯವಿದೆಯೋ ಅವರಿಗೆ ಯಾವಾಗಲೂ ಹೆದರಬೇಕು. ನಾವು ಶಂಕಿಸದಿರುವವರಿಂದ ಭಯ ಉತ್ಪನ್ನವಾದರೂ ಅದು ನಮ್ಮನ್ನು ಮೂಲಸಹಿತವಾಗಿ ನಾಶವನ್ನು ಮಾಡುತ್ತದೆ.

ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾತಿವಿಶ್ವಸೇತ್ ।
ವಿಶ್ವಾಸಾದ್ ಭಯಮಾಪ್ನೋತಿ ತಸ್ಮಾತ್ ಸರ್ವಂ ನ ವಿಶ್ವಸೇತ್ ॥೫೫॥

ಯಾರಲ್ಲಿ ವಿಶ್ವಾಸವಿಲ್ಲವೋ ಅವರಲ್ಲಿ ಎಂದೂ ವಿಶ್ವಾಸವನ್ನು ಮಾಡಬಾರದು. ಯಾರಲ್ಲಿ ವಿಶ್ವಾಸವಿದೆಯೋ ಅವರಲ್ಲೂ ಅತಿಯಾಗಿ ವಿಶ್ವಾಸ ಮಾಡಬಾರದು. ವಿಶ್ವಾಸದಿಂದ ಭಯವುಂಟಾಗುತ್ತದೆ. ಆದ್ದರಿಂದ ಯಾರನ್ನೂ ನಂಬಬಾರದು.

ಚಾರಾಃ ಸುವಿಹಿತಾಃ ಕಾರ್ಯಾ ಆತ್ಮನಶ್ಚ ಚರಸ್ಯ ಚ ।
ಪಾಷಂಡಾನ್ ಬ್ರಾಹ್ಮಣಾದೀಂಶ್ಚ ಪರರಾಷ್ಟ್ರೇಷು ಯೋಜಯೇತ್ ॥೫೬॥

ತನ್ನವರ ಮೇಲೆಯೂ ಗೂಢಚಾರರನ್ನು ಚೆನ್ನಾಗಿ ನಿಯೋಜಿಸಬೇಕು. ಗೂಢಚಾರರ ಮೇಲೆಯೂ ಗೂಢಚಾರರನ್ನು ಇಡಬೇಕು. ಅನ್ಯ ರಾಷ್ಟ್ರಗಳಲ್ಲಿ ಪಾಷಂಡರನ್ನು ಮತ್ತು ಬ್ರಾಹ್ಮಣರನ್ನು ಗೂಢಚಾರರಾಗಿ ನೇಮಿಸಬೇಕು.

ಉದ್ಯಾನೇಷು ವಿಹಾರೇಷು ದೇವತಾಯತನೇಷು ಚ ।
ಪಾನಾಗಾರೇಷು ವೇಶೇಷು ಚತ್ವರೇಷು ಸಭಾಸು ಚ ॥೫೭॥

ಬ್ರಾಹ್ಮಣಾಯತನೇ ದ್ಯೂತೇ ಪರ್ವತೇಷು ವನೇಷು ಚ ।
ಸಮವಾಯೇಷು ಸರ್ವೇಷು ಸರಿತ್ಸು ಚ ವಿಚಾರಯೇತ್ ॥೫೮॥

ಗೂಢಚಾರರು ಉದ್ಯಾನಗಳಲ್ಲಿಯೂ, ವಿಹಾರ ಸ್ಥಾನಗಳಲ್ಲಿಯೂ, ದೇವಾಲಯಗಳಲ್ಲಿಯೂ, ಪಾನಾಗಾರಗಳಲ್ಲಿಯೂ, ವೇಶ್ಯಾಗೃಹ- ಗಳಲ್ಲಿಯೂ, ನಾಲ್ಕು ಬೀದಿಗಳು ಸೇರುವ ಸ್ಥಳದಲ್ಲಿಯೂ, ಸಭೆಗಳಲ್ಲಿಯೂ, ಬ್ರಾಹ್ಮಣ ನಿವಾಸಗಳಲ್ಲಿಯೂ, ದ್ಯೂತಸ್ಥಳಗಳಲ್ಲಿಯೂ, ಪರ್ವತ ಮತ್ತು ಕಾಡುಗಳಲ್ಲಿಯೂ, ಜನಸಂದಣಿ ಇರುವ ಕಡೆಯಲ್ಲಿಯೂ, ನದಿಗಳ ಸಮೀಪದಲ್ಲಿಯೂ, ಸಂಚರಿಸುವಂತೆ ಮಾಡಬೇಕು.

ವಾಚಾ ಭೃಶಂ ವಿನೀತಃ ಸ್ಯಾದ್ ಹೃದಯೇಷು ತಥಾ ಕ್ಷುರಃ ।
ಮೃದುಪೂರ್ವಾಭಿಭಾಷೀ ಸ್ಯಾತ್ ಸೃಷ್ಟೋ ರೌದ್ರಾಯ ಕರ್ಮಣೇ॥೫೯॥

ಉಗ್ರವಾದ ಕರ್ಮಕ್ಕಾಗಿ ಸೃಷ್ಟನಾದ ಕ್ಷತ್ರಿಯನು ಹೃದಯದಲ್ಲಿ ಕ್ರೂರನಾಗಿದ್ದು, ಮಾತಿನಲ್ಲಿ ಬಹಳ ವಿನಯವನ್ನು ತೋರಿಸಬೇಕು. ಮಾತನಾಡುವಾಗ ಮೃದುವಾಗಿ ತಾನೇ ಮೊದಲು ಮಾತಾಡಿಸಬೇಕು.

ಅಂಜಲಿಃ ಶಪಥಃ ಸಾಂತ್ವಂ ಶಿರಸಾ ಪಾದವಂದನಮ್ ।
ಆಶಾಕರಣಮಿತ್ಯೇತತ್ ಕರ್ತವ್ಯಂ ಭೂತಿಮಿಚ್ಛತಾ ॥೬೦॥

ತನ್ನ ಐಶ್ವರ್ಯವನ್ನು ಬಯಸುವವನು ಕೈಗಳನ್ನು ಮುಗಿಯುವುದು, ಶಪಥವನ್ನು ಮಾಡಿ ಆಶ್ವಾಸನೆ ಕೊಡುವುದು, ಸಮಾಧಾನದ ಮಾತುಗಳನ್ನು ಆಡುವುದು, ಶಿರಸಾ ನಮಸ್ಕಾರವನ್ನು ಮಾಡುವುದು ಮೊದಲಾದ ಇನ್ನೊಬ್ಬನಲ್ಲಿ ಆಸೆಯನ್ನು ಮೂಡಿಸುವ ಕಾರ್ಯಗಳನ್ನು ಮಾಡಬೇಕು.

ಸುಪುಷ್ಪಿತಃ ಸ್ಯಾದಫಲೋ ದುರಾರೋಹಃ ಫಲಾನ್ವಿತಃ ।
ಆಮಃ ಸ್ಯಾತ್ ಪಕ್ವಸಂಕಾಶೋ ನ ಚ ಜೀರ್ಯೇತ ಕಸ್ಯ ಚಿತ್ ॥೬೧॥

ಒಳ್ಳೆಯ ಪುಷ್ಪವನ್ನು ಹೊಂದಿದ ಮರವು ಫಲರಹಿತವಾಗಿದ್ದರೆ, ಫಲದಿಂದ ತುಂಬಿದ ಮರವು ಹತ್ತಲು ಅಸಾಧ್ಯವಾಗಿದ್ದರೆ, ಹಣ್ಣಾಗಿ ತೋರುತ್ತಿರುವುದು ಕಾಯಿಯಾಗಿದ್ದರೆ, ಅದು ಎಂದೂ ನಾಶವನ್ನು ಹೊಂದುವುದಿಲ್ಲ.

ತ್ರಿವರ್ಗೇ ತ್ರಿವಿಧಾ ಪೀಡಾ ಅನುಬಂಧಾಸ್ತಥೈವ ಚ ।
ಅನುಬಂಧಾಂಸ್ತು ಸೇವೇತ ಪೀಡಾಸ್ತು ಪರಿವರ್ಜಯೇತ್ ॥೬೨॥

ಧರ್ಮ, ಅರ್ಥ, ಕಾಮಗಳಲ್ಲಿ ಮೂರು ವಿಧವಾದ ಪೀಡೆಯೂ, ಮೂರು ವಿಧವಾದ ಸಹಕಾರಿಸುಖಗಳೂ ಇವೆ. ಸುಖಗಳನ್ನು ಸೇವಿಸಬೇಕು, ಪೀಡೆಗಳನ್ನು ವರ್ಜಿಸಬೇಕು.

ಧರ್ಮೋऽತಿಚರಿತಃ ಪೀಡಾಂ ಸಹ ದ್ವಾಭ್ಯಾಂ ಪ್ರಯಚ್ಛತಿ ।
ಅರ್ಥಶ್ಚಾಪ್ಯರ್ಥಲುಬ್ಧಸ್ಯ ಕಾಮಶ್ಚಾತಿಪ್ರಸಂಗಿನಃ ॥೬೩॥

ಧರ್ಮವನ್ನು ಅತಿಯಾಗಿ ಆಚರಿಸಿದರೆ, ಅವನಿಗೆ ಅರ್ಥ ಕಾಮಗಳು ನಷ್ಟವಾಗಿ ಧರ್ಮವೇ ಹಿಂಸೆಯನ್ನು ಕೊಡುತ್ತದೆ. ಅರ್ಥ ಲೋಭವಿರುವವನಿಗೆ, ಅರ್ಥವೂ ಪೀಡೆಯನ್ನು ಕೊಡುತ್ತದೆ. ಅತಿಯಾದ ಆಸೆಯಿರುವವನಿಗೆ ಕಾಮವೂ ಪೀಡೆಯನ್ನು ಕೊಡುತ್ತದೆ.

ಅಗರ್ವಿತಾತ್ಮಾ ಯುಕ್ತಶ್ಚ ಸಾಂತ್ವಯುಕ್ತೋ ನ ಚೇರ್ಷ್ಯಿತಃ ।
ಅವೇಕ್ಷಿತಾರ್ಥಂ ಶುದ್ಧಾತ್ಮಾ ಮಂತ್ರಯೇತ ದ್ವಿಜೈಃ ಸಹ ॥೬೪॥

ಗರ್ವವನ್ನು ಹೊಂದದೆ, ಈರ್ಷ್ಯೆಯನ್ನು ಹೊಂದದೆ, ಸಮಾಧಾನದ ಮಾತುಗಳಿಂದ ಯುಕ್ತನಾಗಿ ಮಾಡಬೇಕಾದ ಕೆಲಸವನ್ನು ಶುದ್ಧವಾದ ಮನಸ್ಸಿನಿಂದ ಬ್ರಾಹ್ಮಣರ ಜೊತೆಯಲ್ಲಿ ವಿಚಾರ ಮಾಡಬೇಕು.

ಮೃದುನಾ ಕೇನಚಿದ್ ರಾಜನ್ ಕರ್ಮಣಾ ದಾರುಣೇನ ವಾ ।
ಉದ್ಧರೇದ್ ದೀನಮಾತ್ಮಾನಂ ಸಮರ್ಥೋ ಧರ್ಮಮಾಚರೇತ್ ॥

ರಾಜನೇ ಕೆಲವರ ಜೊತೆಯಲ್ಲಿ ಮೃದುವಾಗಿ ವರ್ತಿಸಿ, ಕೆಲವರ ಜೊತೆಯಲ್ಲಿ ಉಗ್ರವಾಗಿ ವರ್ತಿಸಿ, ತನ್ನನ್ನು ತಾನು ಉದ್ಧರಿಸಿಕೊಳ್ಳಬೇಕು. ಸಮರ್ಥನಾದವನು ಮಾತ್ರ ಧರ್ಮಾಚರಣೆಯನ್ನು ಮಾಡಬೇಕು.

ನ ಸಂಶಯಮನಾರುಹ್ಯ ನರೋ ಭದ್ರಾಣಿ ಪಶ್ಯತಿ ।
ಸಂಶಯಂ ತು ಸಮಾರುಹ್ಯ ಗದೀ ಜೀವತಿ ಪಶ್ಯತಿ ॥೬೬॥

ಸಂಶಯವನ್ನು ಪಡದ ಮನುಷ್ಯನು ಸುಖವನ್ನು ಕಾಣುವುದಿಲ್ಲ. ರೋಗಿ ಮೊದಲಾದವರು ಸಂಶಯವನ್ನು ಹೊಂದಿ ಸುಖವನ್ನು ಕಾಣುತ್ತಾರೆ.

ನದೀ ಪ್ರವಾಹವು ಇದ್ದಾಗ ಅಥವಾ ಶತ್ರುಸೇನೆಯು ಬಂದಾಗ ಈ ನದಿಯನ್ನು ನನಗೆ ದಾಟಲು ಸಾಧ್ಯವೋ ಇಲ್ಲವೋ, ಈ ಶತ್ರುಸೈನ್ಯವನ್ನು ನಿರ್ವಹಿಸಲು ನನಗೆ ಸಾಧ್ಯವೋ ಇಲ್ಲವೋ ಎಂಬ ಸಂಶಯವನ್ನು ಹೊಂದದೆ, ಔದ್ಧತ್ಯದಿಂದ ಮುಂದುವರೆಯುವವನು ವಿನಾಶವನ್ನು ಹೊಂದುತ್ತಾನೆ. ವ್ಯಾಧಿಗ್ರಸ್ತನಾದವನು ತನ್ನ ವ್ಯಾಧಿಯು ಹೋಗುವುದೋ ಇಲ್ಲವೋ ಎಂದು ಯೋಚಿಸಿ ಸಂಶಯವನ್ನು ಹೊಂದಿ ಸೂಕ್ತವಾದ ಔಷಧಿಯನ್ನು ತೆಗೆದುಕೊಂಡು ಸುಖವನ್ನು ಕಾಣುತ್ತಾನೆ. ಆದ್ದರಿಂದ ಎಲ್ಲಾ ಕಾರ್ಯಗಳಲ್ಲಿಯೂ ವಿಚಾರ ಮಾಡಬೇಕು ಎಂದು ತಾತ್ಪರ್ಯ.

ಯಸ್ಯ ಬುದ್ಧಿಃ ಪರಿಭವೇತ್ ತಮತೀತೇನ ಸಾಂತ್ವಯೇತ್ ।
ಅನಾಗತೇನ ದುರ್ಬುದ್ಧಿಂ ಪ್ರತ್ಯುತ್ಪನ್ನೇನ ಪಂಡಿತಮ್ ॥೬೭॥

ಯಾವ ಅಜ್ಞನಿಗೆ ಮನಸ್ಸು ಮುಂದೆ ಮಾಡಬೇಕಾದ ಕಾರ್ಯದಿಂದ ಫಲವು ದೊರೆಯುವುದೋ ಇಲ್ಲವೋ ಎಂಬ ಸಂಶಯದಿಂದ ಹಿಂದಿರುಗುತ್ತದೆಯೋ, ಅವನಿಗೆ ಮೊದಲು ಮಾಡಿದ ಕರ್ಮವು ಫಲವನ್ನು ಕೊಟ್ಟಂತೆ ಇದೂ ಫಲವನ್ನು ಕೊಡುತ್ತದೆ ಎಂದು ಹೇಳಿ ಕಾರ್ಯದಲ್ಲಿ ಹುರಿದುಂಬಿಸಬೇಕು. ಹಿಂದಿನ ಕಾರ್ಯದಂತೆ, ಈ ಕಾರ್ಯದಲ್ಲಿ ಫಲವೇ ದೊರೆಯುವುದಿಲ್ಲ ಎಂಬ ದುರ್ಬುದ್ಧಿಯಿಂದ ನಿವೃತ್ತನಾದವನಿಗೆ ಹಿಂದಿನ ಕಾರ್ಯದಲ್ಲಿ ನಿನ್ನ ದೋಷವಿದ್ದುದರಿಂದ ಫಲವು ದೊರೆಯಲಿಲ್ಲ. ಈ ಕಾರ್ಯವು ನಿಶ್ಚಯವಾಗಿ ಫಲವನ್ನು ಕೊಡುತ್ತದೆ ಎಂದು ಹೇಳಿ ಪ್ರೇರಿಸಬೇಕು. ಪಂಡಿತನಾದವನನ್ನು ತಾತ್ಕಾಲಿಕಫಲದಿಂದ ಸಮಾಧಾನ ಮಾಡಬೇಕು.

ವೈರಿಣಾ ಸಂಧಿಮಾಸ್ಥಾಯ ಶಯೀತ ಕೃತಕೃತ್ಯವತ್ ।
ಸ ವೃಕ್ಷಾಗ್ರೇ ಯಥಾ ಸುಪ್ತಃ ಪತತ್ಯೇವ ನ ಬುಧ್ಯತೇ ॥೬೮॥

ಯಾವನು ಶತ್ರುಗಳ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಂಡು ತಾನು ಕೃತಕೃತ್ಯನೆಂದು ತಿಳಿದು ಮಲಗಿ ನಿದ್ರಿಸುತ್ತಾನೋ ಅವನು ಮರದ ಮೇಲೆ ಮಲಗಿದವನಂತೆ ತನಗೆ ಅರಿವಿಲ್ಲದೆಯೇ ಬೀಳುತ್ತಾನೆ.

ಮಂತ್ರಸಂವರಣೇ ಯತ್ನಃ ಸದಾ ಕಾರ್ಯೋ೯ನಸೂಯತಾ ।
ಆಕಾರಶ್ಚಾತ್ಮನೋ ರಕ್ಷ್ಯಃ ಚಾರಃ ಪ್ರಾಪ್ಯಶ್ಚ ಸರ್ವದಾ ॥೬೯॥

ಮಂತ್ರವನ್ನು ರಹಸ್ಯವಾಗಿಡಲು ಯಾವಾಗಲೂ ಪ್ರಯತ್ನವನ್ನು ಪಡಬೇಕು. ಅಸೂಯೆಯನ್ನು ವರ್ಜಿಸಿ ತನ್ನ ನಿಜವಾದ ಆಕಾರವು ಯಾರಿಗೂ ತಿಳಿಯದಂತೆ ತನ್ನನ್ನು ರಕ್ಷಿಸಿಕೊಳ್ಳಬೇಕು. ಗೂಢಚಾರರು ಯಾವಾಗ ಬೇಕಾದರೂ ಸಂಪರ್ಕಿಸಲು ಸಾಧ್ಯವಾಗುವಂತೆ ಇರಬೇಕು.

ನಾಚ್ಛಿತ್ವಾ ಪರಮರ್ಮಾಣಿ ನಾಕೃತ್ವಾ ಕರ್ಮ ದುಷ್ಕರಮ್ ।
ನಾಹತ್ವಾ ಮತ್ಸ್ಯಘಾತೀವ ಪ್ರಾಪ್ನೋತಿ ಪರಮಾಂ ಶ್ರಿಯಮ್ ॥೭೦॥

ಪರರ ಮರ್ಮಗಳನ್ನು ಭೇದಿಸದೆ, ದುಷ್ಕರವಾದ ಕರ್ಮವನ್ನು ಮಾಡದೆ, ಕೊಲ್ಲದೆ, ಮೀನು ಹಿಡಿಯುವವನು ಹೇಗೆ ಸುಖವನ್ನು ಹೊಂದುವುದಿಲ್ಲವೋ ಹಾಗೆಯೇ ರಾಜನು ಶ್ರೇಷ್ಠವಾದ ಸಂಪತ್ತನ್ನು ಪಡೆಯುವುದಿಲ್ಲ.

ಕರ್ಶಿತಂ ವ್ಯಾಧಿತಂ ಶ್ರಾಂತಮಪನೀತಮನಾಯಕಮ್ ।
ಪರಿವಿಶ್ವಸ್ತಮಲ್ಪಂ ಚ ಪ್ರಹರ್ತವ್ಯಂ ರಿಪೋರ್ಬಲಮ್ ॥೭೧॥

ಶತ್ರುಸೇನೆಯು ದುಃಖದಿಂದ ಬಳಲಿದ್ದರೂ, ವ್ಯಾಧಿಗ್ರಸ್ತವಾದರೂ, ಶ್ರಮದಿಂದ ಕೂಡಿದ್ದರೂ, ನಾಯಕರಹಿತನಾಗಿದ್ದರೂ, ಹಿಂದೆ ಸರಿಯುತ್ತಿದ್ದರೂ, ಇನ್ನು ಪ್ರಹಾರ ಮಾಡುವುದಿಲ್ಲ ಎಂಬ ವಿಶ್ವಾಸದಿಂದ ಕೂಡಿದ್ದರೂ, ಅಥವಾ ಅಲ್ಪವಾಗಿದ್ದರೂ ಸಹ ಅದನ್ನು ಸಂಹರಿಸಲೇಬೇಕು.

ನಾನರ್ಥಕೇಽರ್ಥಬಂಧೋಽಸ್ತಿ ಕೃತಾರ್ಥೇ ನಾಸ್ತಿ ಸಂಗತಮ್ ।
ತಸ್ಮಾತ್ ಸರ್ವಾಣಿ ಕಾರ್ಯಾಣಿ ಸಾವಶೇಷಾಣಿ ಕಾರಯೇತ್ ॥೭೨॥

ಪ್ರಯೋಜನದ ಉದ್ದೇಶವಿಲ್ಲದವನ ಜೊತೆಯಲ್ಲಿ ಅರ್ಥಮೂಲವಾದ ಸಂಬಂಧವು ಉಂಟಾಗುವುದಿಲ್ಲ. ಇನ್ನೊಬ್ಬನ ಕೆಲಸವನ್ನು ಪೂರ್ಣವಾಗಿ ಮಾಡಿಕೊಟ್ಟ ಮೇಲೆ ಅವನಿಂದಲೂ ಸಂಬಂಧ ಉಂಟಾಗುವುದಿಲ್ಲ. ಆದ್ದರಿಂದ ಯಾವ ಕಾರ್ಯವನ್ನೂ ಪೂರ್ಣವಾಗಿ ಮಾಡಬಾರದು, ಸ್ವಲ್ಪ ಸ್ವಲ್ಪ ಉಳಿಸಬೇಕು.

ಸಂಗ್ರಹೇ ನಿಗ್ರಹೇ ಚೈವ ಯತ್ನಃ ಕಾರ್ಯೋ೯ನಸೂಯತಾ ।
ವಿಗ್ರಹಃ ಕಾಲಯುಕ್ತಶ್ಚ ಕರ್ತವ್ಯೋ ಭೂತಿಮಿಚ್ಛತಾ ॥೭೩॥

ತನ್ನ ಸಂಪತ್ತನ್ನು ಬಯಸುವವನು ತನಗೆ ಬೇಕಾದವರನ್ನು ಸಂಗ್ರಹ ಮಾಡುವುದರಲ್ಲಿಯೂ, ಬೇಡದವರನ್ನು ನಿಗ್ರಹ ಮಾಡುವುದರಲ್ಲಿಯೂ ಎಚ್ಚರಿಕೆಯಿಂದ ಪ್ರವೃತ್ತನಾಗಬೇಕು. ಯೋಗ್ಯವಾದ ಕಾಲದಲ್ಲಿ ಮಾತ್ರ ವಿರೋಧವನ್ನಾಗಲೀ ಯುದ್ಧವನ್ನಾಗಲೀ ಮಾಡಬೇಕು.

ನಾಸ್ಯ ಕೃತ್ಯಾನಿ ಪಶ್ಯೇಯುರ್ಮಿತ್ರಾಣಿ ರಿಪವಸ್ತಥಾ ।
ಆರಬ್ಧಾನ್ಯೇವ ಪಶ್ಯೇಯುಃ ಸುಪರ್ಯವಸಿತಾನಿ ಚ ॥೭೪॥

ತಾನು ಪ್ರಾರಂಭಿಸಿ ಮುಗಿಸದಿದ್ದ ಕಾರ್ಯಗಳನ್ನು, ಮಿತ್ರರಾಗಲೀ ಅಥವಾ ಶತ್ರುಗಳಾಗಲೀ ನೋಡುವಂತೆ ಇರಬಾರದು. ಅವರು ತಾನು ಆರಂಭಿಸಿ ಚೆನ್ನಾಗಿ ಮುಗಿಸಿದ ಕಾರ್ಯಗಳನ್ನು ಮಾತ್ರ ನೋಡುವಂತೆ ವ್ಯವಸ್ಥೆ ಮಾಡಬೇಕು.

ಭೀತವತ್ ಸಂವಿಧಾತವ್ಯಂ ಯಾವದ್ ಭಯಮನಾಗತಮ್ ।
ಆಗತಂ ತು ಭಯಂ ದೃಷ್ಟ್ವಾ ಪ್ರಹರ್ತವ್ಯಮಭೀತವತ್ ॥೭೫॥

ಭಯವು ಉಂಟಾಗುವವರೆಗೆ ಭಯಗೊಂಡವನಂತೆ ಕಾರ್ಯವನ್ನು ಮಾಡಬೇಕು. ಭಯವು ಉಂಟಾದಾಗ, ಉಂಟಾದ ಭಯವನ್ನು ನೋಡಿ ಭೀತಿಯಿಲ್ಲದೆ ಪ್ರಹಾರ ಮಾಡಬೇಕು.

ದೈವೇನೋಪಹತಂ ಶತ್ರುಂ ಪ್ರಗೃಹ್ಣಾತಿ ಚ ಯೋ ನೃಪಃ ।
ಸ ಮೃತ್ಯುಮುಪಗೃಹ್ಣಾತಿ ಗರ್ಭಮಶ್ವತರೀ ಯಥಾ ॥೭೬॥

ಯಾವ ರಾಜನು ದೈವಹತನಾದ ಶತ್ರುವನ್ನು ಸಂಗ್ರಹಿಸಿ ಸ್ವೀಕರಿಸುತ್ತಾನೋ, ಅವನು ಅಶ್ವತರಿಯು ಗರ್ಭವನ್ನು ಸ್ವೀಕರಿಸಿದಂತೆ ಮೃತ್ಯುವನ್ನೇ ಸ್ವೀಕರಿಸುತ್ತಾನೆ. (ಅಶ್ವತರಿಯು ಗರ್ಭವನ್ನು ಧರಿಸುವುದಿಲ್ಲ. ಒಂದು ಪಕ್ಷ ಧರಿಸಿದರೆ, ಅದು ಮರಣವನ್ನೇ ಹೊಂದುತ್ತದೆ.)

ಅನಾಗತಂ ಚ ಬುದ್ಧ್ಯೇತ ಯಚ್ಚ ಕಾರ್ಯಮುಪಸ್ಥಿತಮ್ ।
ನ ತು ಬುದ್ಧಿಕ್ಷಯಾತ್ ಕಿಂಚಿದತಿಕ್ರಾಂತಮವೇಕ್ಷ್ಯತೇ ॥೭೭॥

ಪ್ರಕೃತದಲ್ಲಿ ಮಾಡಬೇಕಾದ ಕಾರ್ಯವನ್ನು ಕುರಿತು ಯೋಚಿಸಬೇಕು. ಮುಂದೆ ಮಾಡಬೇಕಾದ ಕಾರ್ಯವನ್ನು ಕುರಿತು ಯೋಚಿಸಬೇಕು. ಅದನ್ನು ಬಿಟ್ಟು ಬುದ್ಧಿಕ್ಷಯವನ್ನು ಹೊಂದಿ ಹಿಂದೆ ನಡೆದ ಕಾರ್ಯಗಳನ್ನು ಕುರಿತು ಯೋಚಿಸುತ್ತಾ ಇರಬಾರದು.

ಉತ್ಸಾಹಶ್ಚಾಪಿ ಯತ್ನೇನ ಕರ್ತವ್ಯೋ ಭೂತಿಮಿಚ್ಛತಾ ।
ವಿಭಜ್ಯ ದೇಶಕಾಲೌ ತು ಸೇವ್ಯಾ ಧರ್ಮಾದಯಸ್ತ್ರಯಃ ॥೭೮॥

ನಿಃಶ್ರೇಯಸಾಯ ತೇ ಜ್ಞೇಯಾ ಇಹ ಚಾಮುತ್ರ ಚ ಸ್ಥಿತಾಃ ।
ಬಲವತ್ ಕುರುತೇ ರೂಪಂ ಬಾಲ್ಯಾಚ್ಛತ್ರುರುಪೇಕ್ಷಿತಃ ॥೭೯॥

ಸಂಪತ್ತನ್ನು ಬಯಸುವವನು ಪ್ರಯತ್ನದ ಜೊತೆಯಲ್ಲಿ ಉತ್ಸಾಹವನ್ನೂ ಹೊಂದಿರಬೇಕು. ದೇಶಕಾಲಗಳ ವಿಭಾಗವನ್ನು ಮಾಡಿಕೊಂಡು ಧರ್ಮಾರ್ಥಕಾಮಗಳನ್ನು ಸೇವಿಸಬೇಕು. ಧರ್ಮಾರ್ಥಕಾಮಗಳು ಈ ಲೋಕದಲ್ಲೂ ಮತ್ತು ಪರಲೋಕದಲ್ಲಿಯೂ, ಸುಖಪ್ರದವಾದಂತಹವು.

ಗಹನೇऽಗ್ನಿರಿವೋತ್ಸೃಷ್ಟಃ ಕ್ಷಿಪ್ರಂ ಸಂಜಾಯತೇ ಮಹಾನ್ ।
ಅಗ್ನಿಸ್ತೋಕಮಿವಾತ್ಮಾನಂ ಸಂಧುಕ್ಷಯತಿ ಪಂಡಿತಃ ।
ಸ ವರ್ಧಮಾನೋ ಗ್ರಸತೇ ಮಹಾಂತಮಪಿ ಸಂಚಯಮ್ ॥೮೦॥

ಶತ್ರುವನ್ನು ಬಾಲಕನೆಂದು ಉಪೇಕ್ಷೆಯನ್ನು ಮಾಡಿದರೆ, ಕಾಡಿನಲ್ಲಿ ಬಿದ್ದ ಅಗ್ನಿಯ ಕಣವು ಬೇಗ ದೊಡ್ಡದಾಗಿ ಬೆಳೆಯುವಂತೆ ಶತ್ರುವು ಬಲಿಷ್ಠನಾಗಿ ಬೆಳೆಯುತ್ತಾನೆ. ಪಂಡಿತನಾದವನು ಬೇಗ ವ್ಯಾಪಿಸುವ ಅಗ್ನಿಯ ಕಣವನ್ನು ನಾಶ ಮಾಡಿದಂತೆ ಶತ್ರುಕಣವನ್ನು ನಾಶ ಮಾಡುತ್ತಾನೆ. ಇಲ್ಲದಿದ್ದರೆ, ಅಗ್ನಿಯಂತೆ ದೊಡ್ಡದಾಗಿ ಬೆಳೆದು ದೊಡ್ಡ ರಾಶಿಯನ್ನೂ ಸಹ ದಹಿಸುತ್ತಾನೆ.

ಆದಾವೇವ ದದಾನೀತಿ ಪ್ರಿಯಂ ಬ್ರೂಯಾನ್ನಿರರ್ಥಕಮ್ ।
ಆಶಾಂ ಕಾಲವತೀಂ ಕುರ್ಯಾತ್ ಕಾಲಂ ವಿಘ್ನೇನ ಯೋಜಯೇತ್ ।
ವಿಘ್ನಂ ನಿಮಿತ್ತತೋ ಬ್ರೂಯಾನ್ನಿಮಿತ್ತಾನಿ ಚ ಹೇತುತಃ ॥೮೧॥

ಮೊದಲು ನಿನಗೆ ಕೊಡುತ್ತೇನೆ ಎಂದು ಪ್ರಿಯವಾದ ಸುಳ್ಳು ಮಾತನ್ನು ಹೇಳಿ, ಆಸೆಯನ್ನು ಉಂಟು ಮಾಡಬೇಕು. ಉಂಟಾದ ಆಸೆಗೆ ಒಂದು ಕಾಲದ ಅವಧಿಯನ್ನು ಸೂಚಿಸಬೇಕು. ಆ ಕಾಲ ಬಂದಾಗಲೂ ಕೊಡದೆ ಅದಕ್ಕೆ ವಿಘ್ನಗಳನ್ನು ಕಾರಣವಾಗಿ ಹೇಳಬೇಕು. ಆ ವಿಘ್ನಗಳಿಗೆ ಏನಾದರೂ ನಿಮಿತ್ತಗಳನ್ನು ಹುಡುಕಿ ಹೇಳಬೇಕು. ಆ ನಿಮಿತ್ತಗಳಿಗೆ ಏನಾದರೂ ತರ್ಕಗಳನ್ನು ಹೇಳಬೇಕು. (ಒಟ್ಟಿನಲ್ಲಿ ಪ್ರತಿಜ್ಞೆ ಮಾಡಿದ ವಸ್ತುವನ್ನು ಎಂದೂ ಕೊಡಬಾರದು. ತನ್ನಲ್ಲಿ ಮಾತ್ರ ದೋಷವಿಲ್ಲವೆಂದು ತೋರಿಸಿಕೊಳ್ಳಬೇಕು.)

ಕ್ಷುರೋ ಭೂತ್ವಾ ದಹನ್ನೇವ ನಿಶಿತಃ ಕಾಲಚಾರತಃ ।
ಪ್ರಚ್ಛನ್ನೋ ಮೂಲವಾಪೀ ಸ್ಯಾದ್ ದ್ವಿಷತಾಂ ಚಾವಕರ್ತನಃ ॥೮೨॥

ಕತ್ತಿಯಂತೆ ಹರಿತವಾಗಿದ್ದು ಶತ್ರುವನ್ನು ಸುಡುತ್ತಾ ಸೂಕ್ತಕಾಲವು ಬಂದಾಗ ಪ್ರಚ್ಛನ್ನನಾಗಿ (ಮರೆಯಾಗಿದ್ದು) ಮೂಲವನ್ನೇ ಕತ್ತರಿಸಬೇಕು. ಹೀಗೆ ಶತ್ರುಗಳನ್ನು ಕತ್ತರಿಸಬೇಕು.

ಪಾಂಡವಾಂಶ್ಚ ತಥಾ ರಾಜನ್ ಅನ್ಯಾಂಶ್ಚಾಪಿ ಗುರೂನ್ ಪ್ರತಿ ।
ವರ್ತಮಾನೋ ನ ಮಜ್ಜೇಸ್ತ್ವಂ ತಥಾ ಕೃತ್ಯಂ ಸಮಾಚರ ॥೮೩॥

ರಾಜನೇ, ನೀನು ಪಾಂಡವರ ವಿಷಯದಲ್ಲಿಯೂ ಮತ್ತು ಅನ್ಯಗುರುಹಿರಿಯರ ವಿಷಯದಲ್ಲಿಯೂ ಹೇಗೆ ನಡೆದುಕೊಂಡರೆ, ಮುಳುಗುವುದಿಲ್ಲವೋ ಹಾಗೆ ನಡೆದುಕೊಳ್ಳಬೇಕು.

ನ ಹಿ ಕುರ್ಯಾತ್ ಸಮುತ್ಸನ್ನಾನ್ ವಿನಷ್ಟಾ ಇತಿ ನಿಶ್ಚಯಮ್ ।
ತಸ್ಮಾತ್ ತ್ವಂ ಪಾಂಡುಪುತ್ರೇಭ್ಯೋ ರಕ್ಷಾತ್ಮಾನಂ ನರಾಧಿಪ ॥೮೪॥

ವಿನಷ್ಟರಾದವರನ್ನು ವಿನಷ್ಟರು ಎಂದು ತಿಳಿದುಕೊಂಡು ಸುಮ್ಮನಿರಬಾರದು. ರಾಜನೇ ಆದ್ದರಿಂದ ಪಾಂಡವರಿಂದ ನಿನ್ನನ್ನು ನೀನು ರಕ್ಷಣೆ ಮಾಡಿಕೋ.

ಭ್ರಾತೃವ್ಯಾ ಬಲವಂತಸ್ತೇ ಪಾಂಡುಪುತ್ರಾ ನರಾಧಿಪ ।
ಬ್ರವೀಮಿ ತಸ್ಮಾದ್ ವಿಸ್ಪಷ್ಟಂ ಯತ್ ಕರ್ತವ್ಯಮರಿಂದಮ ॥೮೫॥

ಎಲೈ ರಾಜನೇ, ನಿನ್ನ ಅಣ್ಣತಮ್ಮಂದಿರೂ, ಶತ್ರುಗಳೂ ಆದ ಪಾಂಡವರು ಬಲಿಷ್ಠರಾಗಿದ್ದಾರೆ. ಅರಿಂದಮನೇ ಆ ಕಾರಣದಿಂದ ನೀನು ಏನು ಮಾಡಬೇಕೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ವೈಶಂಪಾಯನಃ

ಏವಮುಕ್ತ್ವಾ ಸಂಪ್ರತಸ್ಥೇ ಕಣಿಂಕಃ ಸ್ವಗೃಹಂ ತತಃ ॥೮೬॥

ಹೀಗೆ ಹೇಳಿ ಕಣಿಂಕನು ತನ್ನ ಮನೆಗೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವ್ಯಚಶ್ಚತ್ವಾರಿಂಶತ್ಯಧಿಕಶತತಮೋऽಧ್ಯಾಯಃ ॥

॥ ಸಂಭವಪರ್ವಣಿ ನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಸೌಹಾರ್ದಮೇಷು ಯದಿ ವಾऽತಿತರಾಂ ಕರೋಷಿ
ತತ್ರಾಪಿ ನೈವ ಹಿ ಮಯಾ ಕ್ರಿಯತೇ ವಿರೋಧಃ ।
ವತ್ಸ್ಯಂತು ವಾರಣವತೇ ಭವತು ಸ್ಮ ರಾಷ್ಟ್ರಂ
ತೇಷಾಂ ತದೇವ ಮಮ ನಾಗಪುರಂ ತ್ವದರ್ಥೇ ॥೧೮॥

ಪಾಂಡವರಲ್ಲಿ ನೀನು ಬಹಳ ಸೌಹಾರ್ದ ವಿರಿಸಿಕೊಳ್ಳುವಿಯಾದರೆ ಅದಕ್ಕೂ ನಾನು ಸರ್ವಥಾ ವಿರೋಧ ಮಾಡುವುದಿಲ್ಲ. ನಿನ್ನ ಸಂತೋಷಕ್ಕಾಗಿ ಅವರು ವಾರಣವತದಲ್ಲಿ ವಾಸ ಮಾಡಲಿ. ಅದು ಅವರದೇ ರಾಜ್ಯವಾಗಲಿ. ಹಸ್ತಿನಾಪುರ ಮಾತ್ರವೆ ನನ್ನದಾಗಿರಲಿ.

ಏವಂ ಸ್ವಪುತ್ರ ಪರಿಪಾಲನತೋ ಯಶಸ್ತೇ
ಭೂಯಾದ್ ವಿನಶ್ಯತಿ ಪರಪ್ರಸವಾತಿಪುಷ್ಟೌ ।
ಜಾತೇ ಬಲೇ ತವ ವಿರೋಧಕೃತಶ್ಚ ತೇ ಸ್ಯುಃ
ಸ್ವಾರ್ಥಂ ಹಿ ತಾವದನುಯಾಂತ್ಯಪಿ ಕೇವಲಂ ತ್ವಾಂ ॥೧೯॥

ಹೀಗೆ ಮಾಡಿದರೆ ನಿನ್ನ ಮಕ್ಕಳನ್ನು ಕಾಪಾಡಿದ ಯಶಸ್ಸು ನಿನ್ನದಾಗುತ್ತದೆ. ಇಲ್ಲದಿದ್ದರೆ ಬೇರೆಯವರ ಮಕ್ಕಳನ್ನು ಅತಿಯಾಗಿ ಬೆಳೆಸಿದ್ದರಿಂದ ನಿನ್ನ ಕೀರ್ತಿ ನಶಿಸುತ್ತದೆ. ಈಗ ಅವರು ಕೇವಲ ಸ್ವಪ್ರಯೋಜನಕ್ಕಾಗಿ ನಿನ್ನನ್ನು ಒಲೈಸುತ್ತಿದ್ದಾರೆ. ಮುಂದೆ ಬಲಶಾಲಿಗಳಾಗಿ ನಿನಗೇ ವಿರೋಧ ಮಾಡುತ್ತಾರೆ.

ಕ್ಷತ್ತೈಕ ಏವ ಸತತಂ ಪರಿಪೋಷಕೋऽಲಂ
ತೇಷಾಂ ಮಮ ದ್ವಿಡಥ ಮಂತ್ರಬಲಾದಮುಷ್ಯ ।
ಪೌರಾಶ್ಚ ಜಾನಪದಕಾಃ ಸತತಂ ದ್ವಿಷಂತಿ
ಮಾಂ ತೇಷ್ವತೀವ ದೃಢಸೌಹೃದಚೇತಸಶ್ಚ ॥೨೦॥

ವಿದುರನೊಬ್ಬ ಪಾಂಡವರಿಗೆ ಸದಾ ಪೋಷಣೆ ನೀಡುತ್ತ ನನಗೆ ವಿರೋಧಿಯಾಗಿದ್ದಾನೆ. ಅವನ ಪಿಸುಮಾತಿನ ಅಪಪ್ರಚಾರದ ಬಲದಿಂದಲೆ ನಾಗರಿಕರೂ ಹಳ್ಳಿಗರೂ ಸದಾ ನನ್ನನ್ನು ದ್ವೇಷಿಸುತ್ತಾರೆ. ಪಾಂಡುವರಲ್ಲಿ ಸದಾ ಅತ್ಯಂತ ದೃಢ ಸೌಹಾರ್ದಯುಕ್ತ ಅಂತಃಕರಣದವರಾಗಿದ್ದಾರೆ.

ತೇ ತೇಷು ದೂರಗಮಿತೇಷು ನಿರಾಶ್ರಯತ್ವಾತ್
ಮಾಮೇವ ದುರ್ಬಲತಯಾ ಪರಿತಃ ಶ್ರಯಂತೇ ।
ಭೀಷ್ಮಾದಯಶ್ಚ ನ ಹಿ ತನ್ನಿಕಟೇ ವಿರೋಧಂ
ಕುರ್ಯುರ್ವಿನಶ್ಯತಿ ಗತೇಷು ಹಿ ಸೌಹೃದಂ ತತ್ ॥೨೧॥

ಪಾಂಡವರನ್ನು ದೂರಕಳಿಸಿದರೆ ಜನರು ಅವರ ಆಸರೆ ಇಲ್ಲದೆ ದುರ್ಬಲರಾಗುವುದರಿಂದ ನನ್ನನ್ನೇ ಆಶ್ರಯಿಸುತ್ತಾರೆ. ಭೀಷ್ಮಾದಿಗಳೂ, ಪಾಂಡವರು ನಮ್ಮ ಬಳಿಯಲ್ಲಿದ್ದರೆ, ಅವರಲ್ಲಿ ವಿರೋಧ ಮಾಡಲಾರರು. ದೂರಹೋದರೆ ಅವರಲ್ಲಿ ಸೌಹಾರ್ದ ಕಡಿಮೆಯಾಗುವುದು.

ಭೇದಃ ಕುಲಸ್ಯ ಭವಿತಾ ಕುಲನಾಶಹೇತು-
ರಸ್ಮಾಭಿರೇಷು ಸಹಿತೇಷು ಪುರೇ ವಸತ್ಸು ।
ತಸ್ಮಾದುಪಾಯಬಲತಃ ಪ್ರತಿಯಾತನೀಯಾ-
ಸ್ತೇ ವಾರಣಾವತಮಿತೋ ವಿಹಿತೋಽಪ್ಯುಪಾಯಃ ॥೨೨॥

ಪಾಂಡವರು ನಮ್ಮೊಡನೆ ಹಸ್ತಿನಾವತಿಯಲ್ಲಿಯೆ ವಾಸವಾಗಿದ್ದರೆ ಮನೆತನದಲ್ಲಿ ಒಡಕು ಹುಟ್ಟುವುದು ನಿಶ್ಚಿತ. ಆ ಒಡಕು ಕುಲನಾಶಕ್ಕೆ ಕಾರಣವಾಗುವುದು. ಅದರಿಂದ ಉಪಾಯ ಬಲದಿಂದ ಅವರನ್ನು ಹಸ್ತಿನಾವತಿಯಿಂದ ದೂರ ವಾರಣಾವತಕ್ಕೆ ಕಳಿಸುವುದೇ ಯೋಗ್ಯ. ಅದಕ್ಕೆ ಒಂದು ಉಪಾಯ ಮಾಡಿದ್ದೇನೆ.

ವಿಷ್ಣುರ್ಜಯಂತ ಇತಿ ಶಂಭುಸಹಾಯ ಆಸ್ತೇ
ದೇವೋತ್ಸವಶ್ಚ ಸುಮಹಾನ್ ಭವಿತಾತ್ರ ಸುಷ್ಠು ।
ಭಕ್ತಾಶ್ಚತೇ ಹಿ ನಿತರಾಮರಿಶಂಖಪಾಣೌ
ತ್ವಚ್ಚೋದಿತಾಃ ಸಮುಪಯಾಂತಿ ತಮುತ್ಸವಂ ದ್ರಾಕ್ ॥೨೩॥

ವಾರಣಾವತದಲ್ಲಿ ಶಿವನೊಂದಿಗೆ ವಿಷ್ಣು ಜಯಂತ ಎಂಬ ಲಿಂಗರೂಪದಿಂದ ನೆಲೆಸಿದ್ದಾನೆ. ಅಲ್ಲಿ ದೇವರಿಗೆ ಬಹಳ ದೊಡ್ಡ ಉತ್ಸವ ಚೆನ್ನಾಗಿ ನಡೆಯುತ್ತದೆ. ಪಾಂಡವರು ವಿಷ್ಣುವಿನಲ್ಲಿ ಬಹಳ ಭಕ್ತಿಯುಳ್ಳವರು. ಆದರಿಂದ ನೀನು ಹೇಳಿದರೆ ಅವರು ಆ ಉತ್ಸವಕ್ಕೆ ಬೇಗನೆ ಹೊರಡುವರು.

ಅಜ್ಞಾಪ್ಯ ಮತ್ಪುರುಷತಾಂ ಪುರುಷೈರ್ಮದೀಯೈ-
ರ್ಮಧ್ಯಸ್ಥವದ್ ಬಹುಗುಣಾ ಉದಿತಾಶ್ಚ ತತ್ರ ।
ತೇಷಾಂ ಪುರೋಽತ್ರ ಗಮನಾಭಿರುಚಿಶ್ಚ ಜಾತಾ
ದ್ರಷ್ಟುಂ ಪುರಂ ಬಹುಗುಣಂ ನನು ಪಾಂಡವಾನಾಂ ॥೨೪॥

ನನ್ನ ಕಡೆಯ ಜನರು ಅವರು ನನ್ನವರೆಂಬುದನ್ನೇ ತೋರಿಕೊಳ್ಳದೆ ಮಧ್ಯಸ್ಥರಂತಿದ್ದು ಪಾಂಡವರ ಮುಂದೆ ವಾರಣಾವತ ಕ್ಷೇತ್ರವನ್ನು ಬಹುವಾಗಿ ಹೊಗಳಿದ್ದಾರೆ. ಆದರಿಂದ ಪಾಂಡವರಿಗೆ ಬಹುಗುಣವುಳ್ಳ ಈ ಪಟ್ಟಣವನ್ನು ನೋಡಲು ಹೋಗುವ ಉತ್ಸುಕತೆಯೂ ಉಂಟಾಗಿದೆ.

ಇತ್ಯುಕ್ತವತ್ಯಥ ಸುತೇ ಸ ತಥೇತ್ಯುವಾಚ
ಪ್ರಾಪ್ತೇಷು ಪಾಂಡುತನಯೇಷು ತಥೈವ ಚೋಚೇ ।
ಜ್ಞಾತ್ವೈವ ತೇಽಪಿ ನೃಪತೇರ್ಹೃದಯಂ ಸಮಸ್ತಂ
ಜಗ್ಮುಃ ಪಿತೇತಿ ಪೃಥಯಾ ಸಹ ನೀತಿಹೇತೋಃ ॥೨೫॥

ದುರ್ಯೋಧನ ಹೀಗೆ ಹೇಳಿದಾಗ 'ಹಾಗೇ ಆಗಲಿ' ಎಂದು ಧೃತರಾಷ್ಟ್ರ. ಪಾಂಡವರು ಬಂದಾಗ ಅವರ ಮುಂದೆಯೂ ಹಾಗೇ ಹೇಳಿದ. ಅವರು ಅವನ ಅಭಿಪ್ರಾಯವನ್ನೆಲ್ಲ ತಿಳಿದು, ಅವನು ತಮಗೆ ತಂದೆ ಎಂಬ ಭಾವನೆಯಿಂದ ನೀತಿಯ ಪಾಲನೆಗಾಗಿ ಕುಂತಿಯೊಂದಿಗೆ ವಾರಣಾವತಕ್ಕೆ ನಡೆದರು.

ಭೀಮಸ್ತದಾ ಹ ಭವಿತಾತ್ರ ಹಿ ಭೈಕ್ಷಚಾರ
ಇತ್ಯೇವ ಸಮ್ಯಗನುವಿದ್ಯ ನಿಜಂ ನ ಕರ್ಮ ।
ತ್ಯಾಜ್ಯಂ ತ್ವಿತಿ ಪ್ರತಿಜಗಾದ ನಿಜಾಗ್ರಜಾಯ
ಯಾಮೋ ವಯಂ ನ ಹಿ ಗೃಹಾತ್ ಸ ಹಿ ನಃ ಸ್ವಧರ್ಮಃ ॥೨೬॥

ಆಗ ಭೀಮ ಹೇಳಿದ- 'ನಾವು ಅಲ್ಲಿಗೆ ಹೋದರೆ ಭಿಕ್ಷೆ ಬೇಡಬೇಕಾದೀತು. ಅದರಿಂದ ನಾವು ನಮ್ಮ ಊರನ್ನು ಬಿಟ್ಟು, ಬೇರೆ ಕಡೆಗೆ ಹೋಗಕೂಡದು. ಅದು ನಮಗೆ ಸ್ವಧರ್ಮ'. ಸ್ವಧರ್ಮವನ್ನು ಬಿಡಬಾರದು ಎಂದು ಚೆನ್ನಾಗಿ ತಿಳಿದೇ ಭೀಮ ತನ್ನ ಅಣ್ಣನ ಮುಂದೆ ಹೀಗೆ ಹೇಳಿದ.

ನಿಷ್ಕಾಸಯಂತಿ ಯದಿ ನೋ ನಿಜಧರ್ಮಸಂಸ್ಥಾನ್
ಯೋತ್ಸ್ಯಾಮಹೇऽತ್ರ ನ ಹಿ ದಸ್ಯುವಧೋऽಪ್ಯಧರ್ಮಃ ।
ಇತ್ಯೂಚಿವಾಂಸಮಮುಮಾಹ ಚ ಧರ್ಮಸೂನುಃ
ಕೀರ್ತಿರ್ವಿನಶ್ಯತಿ ಹಿ ನೋ ಗುರುಭಿರ್ವಿರೋಧೇ ॥೨೭॥

'ಸ್ವಧರ್ಮದಲ್ಲಿರುವ ನಮ್ಮನ್ನು ಅವರು ಹೊರಗೆ ಕಳಿಸುವುದಾದರೆ ನಾವು ಇಲ್ಲಿಯೆ ಯುದ್ಧ ಮಾಡೋಣ. ದುಷ್ಟರನ್ನು ವಧಿಸುವುದೂ ಅಧರ್ಮವಲ್ಲ ತಾನೆ?' - ಹೀಗೆ ಭೀಮ ನುಡಿದಾಗ ಧರ್ಮರಾಜನೆಂದ- 'ಗುರು ಹಿರಿಯರೊಡನೆ ವಿರೋಧ ಮಾಡಿದರೆ ನಮ್ಮ ಕೀರ್ತಿ ನಶಿಸುವುದು'.

ಇತ್ಯುಕ್ತವ್ಯಾಕ್ಯಮಮುಮಗ್ರಜಮನ್ವಗಾತ್ಸ
ಭೀಮಃ ಪ್ರದರ್ಶ್ಯ ನಿಜಧರ್ಮಮಥಾನುವೃತ್ತ್ಯೈ ।
ದೋಷೋ ಭವೇದುಭಯತೋ ಯತ ಏವ ತೇನ
ವಾಚ್ಯಃ ಸ್ವಧರ್ಮ ಉತ ನ ಸ್ಥಿತಿರತ್ರ ಕಾರ್ಯಾ ॥೨೮॥

ಹೀಗೆ ಅಣ್ಣ ನುಡಿದಾಗ ಭೀಮಸೇನ ಅಣ್ಣನ ಆಜ್ಞೆ ಎಂದು ಒಪ್ಪಿ ಅವನನ್ನು ಹಿಂಬಾಲಿಸಿದ. ಅದಕ್ಕೆ ಮೊದಲು ಸ್ವಧರ್ಮವನ್ನು ಹೇಳಿದ. ಏಕೆಂದರೆ ಸ್ವಧರ್ಮವನ್ನು ತಿಳಿದೂ ಹೇಳದಿರುವುದು ಅಧರ್ಮವಾಗುತ್ತದೆ. ಅಣ್ಣನ ಆಜ್ಞೆಯನ್ನು ಮೀರುವುದೂ ಅಧರ್ಮವಾಗುತ್ತದೆ. ಅದರಿಂದ ತಾನು ತಿಳಿದ ಸ್ವಧರ್ಮವನ್ನು ಹೇಳಬೇಕು, ಅಣ್ಣನ ಆಜ್ಞೆಗೆ ವಿರೋಧವಾಗಿ ಹಸ್ತಿನಾವತಿಯಲ್ಲಿ ಇರಲೂಕೂಡದು.

ಕೀರ್ತ್ಯರ್ಥಮೇವ ನಿಜಧರ್ಮಪರಿಪ್ರಹಾಣೇ
ಪ್ರಾಪ್ತೇऽಗ್ರಜಸ್ಯ ವಚನಾತ್ ಪ್ರವಿಹಾತುಮೇವ ।
ಭೀಮಸ್ಯ ದೋಷಮುಭಯಂ ಪ್ರತಿಹಂತುಮೀಶೋ
ಜ್ಯೇಷ್ಠಂ ಚಕಾರ ಹರಿರತ್ರ ಸುತಂ ವೃಷಸ್ಯ ॥೨೯॥

ದೊಡ್ಡಪ್ಪನ ಆಜ್ಞೆಯನ್ನು ನಡೆಸಿದ ಕೀರ್ತಿಗಾಗಿ ಸ್ವಧರ್ಮವನ್ನು ಬಿಡಬೇಕಾಗಿ ಬಂದಾಗ ಅಣ್ಣನ ಮಾತಿನಿಂದಾಗಿ ಬಿಡಬೇಕು. ಹೀಗೆ ಎರಡೂ ಅಧರ್ಮವನ್ನು ಭೀಮ ಪರಿಹರಿಸಿಕೊಳ್ಳಬೇಕೆಂದೇ ಶ್ರೀಹರಿ ಧರ್ಮರಾಜನನ್ನು ಭೀಮನಿಗೆ ಅಣ್ಣನಾಗಿ ಹುಟ್ಟಿಸಿದ.

ಹಂತವ್ಯತಾಮುಪಗತೇಷು ಸುಯೋಧನಾದಿ-
ಷ್ವನ್ಯೋಪಧಾನ್ನ ಹಿ ಭವೇನ್ನಿಜಧರ್ಮ ಏವ ।
ಪೂರ್ವಂ ವಧೇ ನ ಹಿ ಸಮಸ್ತಶ ಏವ ದೋಷಾ-
ಸ್ತೇಷಾಂ ಪ್ರಯಾಂತಿ ವಿವೃತಿಂ ಚ ತದರ್ಥತೋಽಪಿ ॥೩೦॥

ದುರ್ಯೋಧನಾದಿಗಳು ವಧಾರ್ಹರೆನಿಸಿರುವಾಗ ಅವರನ್ನು ವಧಿಸುವುದು ಬಿಟ್ಟು ಬೇರೇನೂ ಸ್ವಧರ್ಮವಾಗುವುದೇ ಇಲ್ಲ. ಆದರೆ ಮೊದಲಿಗೇ ಕೊಂದರೆ ಅವರ ಎಲ್ಲ ದುರ್ಗುಣಗಳು ಬೆಳಕಿಗೆ ಬರುವುದಿಲ್ಲ. ಅದಕ್ಕಾಗಿಯೂ ಶ್ರೀಹರಿ ಧರ್ಮರಾಜನನ್ನು ಅಣ್ಣನನ್ನಾಗಿ ಹುಟ್ಟಿಸಿದ.

ಕ್ಷತ್ತಾಥ ಚಾಹ ಸುವಚೋಽಂತ್ಯಜಭಾಷಯೈವ
ಧರ್ಮಾತ್ಮಜಂ ವಿಷಹುತಾಶಭಯಾತ್ ಪ್ರತೀತಾಃ ।
ಆಧ್ವಂ ತ್ವಿತಿ ಸ್ಮ ಸ ತಥೇತಿ ವಚೋಽಪ್ಯುದೀರ್ಯ
ಪ್ರಾಯಾಚ್ಚ ವಾರಣವತಂ ಪೃಥಯಾನುಜೈಶ್ಚ ॥೩೧॥

ವಿದುರ ಪಾಂಡವರಿಗೆ ಅಂತ್ಯಜ ಭಾಷೆಯಿಂದ 'ವಿಷ ಅಗ್ನಿಗಳ ಬಾಧೆಯ ಬಗ್ಗೆ ಎಚ್ಚರದಿಂದಿರಿ' ಎಂದು ಹಿತನುಡಿ ನುಡಿದ. ಧರ್ಮರಾಜ 'ಹಾಗೇ ಆಗಲಿ' ಎಂದು ಹೇಳಿ ಕುಂತಿಯ ಮತ್ತು ತಮ್ಮಂದಿರ ಜೊತೆಗೆ ವಾರಣಾವತಕ್ಕೆ ಹೊರಟುಹೋದ.

★ ★ ★ ★

೭. ಜತುಗೃಹದಾಹಪರ್ವ

ನೂರ ನಲವತ್ಮೂರನೆಯ ಅಧ್ಯಾಯ

(ಕಣಿಂಕನ ನೀತಿಯ ಪ್ರಭಾವದಿಂದ ಪಾಂಡವರನ್ನು ವಾರಣಾವತಕ್ಕೆ ಕಳುಹಿಸುವಂತೆ ದುರ್ಯೋಧನನ ಆಗ್ರಹ, ಧೃತರಾಷ್ಟ್ರನ ಲೋಕಾಪವಾದ ಭೀತಿ, ಕೊನೆಗೆ ಪಾಂಡವರಿಗೆ ವಾರಣಾವತಕ್ಕೆ ಹೋಗಲು ಆದೇಶ)

ವೈಶಂಪಾಯನಃ

ಕಣಿಂಕಸ್ಯ ಮತಂ ಜ್ಞಾತ್ವಾ ಕಾರ್ತ್ಸ್ನ್ಯೇನ ಭರತರ್ಷಭ ।
ದುರ್ಯೋಧನಶ್ಚ ಕರ್ಣಶ್ಚ ಶಕುನಿಃ ಸೌಬಲಸ್ತಥಾ ॥೧॥

ದುಃಶಾಸನಚತುರ್ಥಾಸ್ತೇ ಮಂತ್ರಯಾಮಾಸುರೇಕತಃ ।
ತತೋ ದುರ್ಯೋಧನೋ ರಾಜನ್ ಧೃತರಾಷ್ಟ್ರಮಭಾಷತ ।
ಪಾಂಡವೇಭ್ಯೋ ಭಯಂ ನಾಸ್ತಿ ವಿಧತ್ಸ್ವ ಯದನಂತರಮ್ ॥೨॥

ಭರತರ್ಷಭನೇ, ಕಣಿಂಕನ ಅಭಿಪ್ರಾಯವನ್ನು ಸಮಗ್ರವಾಗಿ ತಿಳಿದು ದುರ್ಯೋಧನ, ಕರ್ಣ, ಸೌಬಲನಾದ ಶಕುನಿ ಮತ್ತು ದುಶ್ಶಾಸನ, ಈ ನಾಲ್ಕು ಜನರೂ ಒಂದು ಕಡೆ ಸೇರಿ ಮಂತ್ರಾಲೋಚನೆಯನ್ನು ಮಾಡಿದರು.

ರಾಜನೇ, ಅನಂತರ ದುರ್ಯೋಧನನು ಧೃತರಾಷ್ಟ್ರನನ್ನುದ್ದೇಶಿಸಿ, ''ಪಾಂಡವರಿಗೆ ಭಯಪಡಬೇಕಾಗಿಲ್ಲ. ಈಗ ಮಾಡಬೇಕಾದ ಕಾರ್ಯವನ್ನು ಮಾಡು. ಅವರನ್ನು ವಾರಣಾವತಕ್ಕೆ ಕಳುಹಿಸು'' ಎಂದು ಹೇಳಿದನು.

ವೈಶಂಪಾಯನಃ

ಧೃತರಾಷ್ಟ್ರಸ್ತು ಪುತ್ರಸ್ಯ ಶ್ರುತ್ವಾವಾಕ್ಯಮುವಾಚಹ ।
ಯಥಾ ನ ವಾಚ್ಯತಾಂ ಪುತ್ರ ಗಚ್ಛೇಯ ಕುರು ತತ್‌ಕಥಾ ॥೩॥

ಧೃತರಾಷ್ಟ್ರನಾದರೋ ದುರ್ಯೋಧನನ ಮಾತನ್ನು ಕೇಳಿ ಎಲೈ ಪುತ್ರನೇ ನಮ್ಮ ಮೇಲೆ ಅಪವಾದ ಬರದಂತೆ ಏನಾದರೂ ಮಾಡು ಎಂದು ಹೇಳಿದನು.

ಧರ್ಮನಿತ್ಯಃ ಸದಾ ಪಾಂಡುಸ್ತಥಾ ಧರ್ಮಪರಾಯಣಃ ।
ಸರ್ವೇಷು ಜ್ಞಾತಿಷು ತಥಾ ಮಮಾಸೀತ್ ಪ್ರಿಯಕೃದ್ ಹಿತಃ ॥೪॥

ಪಾಂಡುವು ಯಾವಾಗಲೂ ಧರ್ಮವನ್ನೇ ಆಶ್ರಯಿಸಿ ಧರ್ಮಾನುಷ್ಠಾನ ಪರನಾಗಿದ್ದನು. ನನಗೂ ಮತ್ತು ಎಲ್ಲಾ ಬಂಧುಗಳೂ ಹಿತನಾಗಿದ್ದು ಪ್ರಿಯವನ್ನೇ ಮಾಡುತ್ತಿದ್ದನು.

ನಾಸ್ಯ ಕಿಂಚಿನ್ನಜಾನಾಮಿ ಭೋಜನಾದಿ ಚಿಕೀರ್ಷಿತಮ್ ।
ನಿವೇದಯತಿ ನಿತ್ಯಂ ಹಿ ಮಮ ರಾಜ್ಯಂ ಧೃತವ್ರತಃ ॥೫॥

ಅವನ ಸಮಗ್ರವಾದ ವಿಷಯವು ನನಗೆ ತಿಳಿದಿದೆ. ನನ್ನನ್ನು ಬಿಟ್ಟು ಅವನು ಭೋಜನಾದಿಗಳನ್ನು ಮಾಡಲೂ ಬಯಸುತ್ತಿರಲಿಲ್ಲ. ಅನೇಕ ವ್ರತಗಳನ್ನು ಧರಿಸಿದ ಅವನು ರಾಜ್ಯವನ್ನು ನಿತ್ಯವೂ ನನಗೆ ನಿವೇದಿಸುತ್ತಿದ್ದನು.

ತಸ್ಯ ಪುತ್ರೋ ಯಥಾ ಪಾಂಡುಃ ತಥಾ ಧರ್ಮಪರಾಯಣಃ ।
ಗುಣವಾನ್ ಲೋಕವಿಖ್ಯಾತಃ ಪೌರಾಣಾಂ ಚ ಸುಸಮ್ಮತಃ ॥೬॥

ಅವನ ಪುತ್ರನಾದ ಯುಧಿಷ್ಠಿರನೂ ಪಾಂಡುವಿನಂತೆ ಧರ್ಮಪರಾಯಣನಾಗಿದ್ದಾನೆ. ಅವನು ಗುಣವಂತ, ಲೋಕದಲ್ಲಿ ಬಹಳ ಪ್ರಖ್ಯಾತನಾದವನು ಮತ್ತು ಎಲ್ಲಾ ಪೌರರಿಗೂ ಬಹಳ ಸಮ್ಮತನಾದವನು.

ಸ ಕಥಂ ಶಕ್ಯತೇಽಸ್ಮಾಭಿರಪಾಕರ್ತುಂ ಬಲಾದಿಕಃ ।
ಪಿತೃಪರ್ಯಾಗತಾದ್ ರಾಜ್ಯಾತ್ ಸಸಹಾಯೋ ವಿಶೇಷತಃ ॥೭॥

ಅಂತಹ, ವಿಶೇಷವಾಗಿ ತನ್ನ ತಮ್ಮಂದಿರ ಸಹಾಯವನ್ನು ಹೊಂದಿರುವ ಅವನನ್ನು ನಾವು ಅವನು ತನ್ನ ತಂದೆಯಿಂದ ಪಡೆದ ಈ ರಾಜ್ಯದಿಂದ ಹೇಗೆ ಬಲಾತ್ಕಾರ ಮಾಡಿ ಕಳುಹಿಸಲು ಸಾಧ್ಯ.

ಭೃತಾ ಹಿ ಪಾಂಡುನಾऽಮಾತ್ಯಾ ಬಲಂ ಚ ಸತತಂ ಭೃತಮ್ ।
ಭೃತಾಃ ಪುತ್ರಾಶ್ಚ ಪೌತ್ರಾಶ್ಚ ತೇಷಾಮಪಿ ವಿಶೇಷತಃ ॥೮॥

ಪಾಂಡುವು ಅಮಾತ್ಯರನ್ನೂ, ಸೈನ್ಯವನ್ನೂ ಅವರ ಮಕ್ಕಳು ಮತ್ತು ಮೊಮ್ಮಕ್ಕಳನ್ನೂ ವಿಶೇಷವಾಗಿ ಪೋಷಿಸಿದ್ದಾನೆ.

ತೇನೈವ ಸತ್ಕೃತಾಸ್ತ್ರಾತಾಃ ಪಾಂಡುನಾ ಪೌರವಾ ಜನಾಃ ।
ಕಥಂ ಯುಧಿಷ್ಠಿರಸ್ಯಾರ್ಥೇ ನ ನೋ ಹನ್ಯುಃ ಸಬಾಂಧವಾನ್ ॥೯॥

ಅಂತಹ ಪಾಂಡುವಿನಿಂದ ಹೀಗೆ ಸತ್ಕೃತರಾದ ಪುರವಾಸಿಗಳಾದ ಜನರು ನಾವು ಯುಧಿಷ್ಠಿರನಿಗೆ ಅಪರಾಧವನ್ನು ಮಾಡಿದರೆ, ನಮ್ಮನ್ನೂ ಮತ್ತು ನಮ್ಮ ಬಂಧುಗಳನ್ನೂ ಹೇಗೆ ಕೊಲ್ಲದೇ ಇದ್ದಾರು.

ದುರ್ಯೋಧನಃ

ಏವಮೇವ ತ್ವಯಾ ತಾತ ಭಾವಿತಂ ದೋಷಮಾತ್ಮನಿ ।
ದೃಷ್ಟ್ವಾ ಪ್ರಕೃತಯೋ ನಿತ್ಯಮರ್ಥದಾನೈಶ್ಚ ಪೂಜಿತಾಃ ॥೧೦॥

ತಂದೆ ನೀನು ಯಾವಾಗಲೂ ನಿನ್ನಲ್ಲೇ ದೋಷವನ್ನು ಎಣಿಸುತ್ತೀಯೆ. ನಾನು ಪ್ರಜೆಗಳನ್ನು ಸಂದರ್ಶಿಸಿ ಯಾವಾಗಲೂ ಅವರಿಗೆ ಧನವನ್ನೂ ಮತ್ತು ಬೇರೆಯ ದಾನವನ್ನೂ ಕೊಟ್ಟು ಸತ್ಕರಿಸಿದ್ದೇನೆ.

ಧ್ರುವಮಸ್ಮತ್ಸಹಾಯಾಸ್ತೇ ಭವಿಷ್ಯಂತಿ ನ ಸಂಶಯಃ ।
ಅರ್ಥವರ್ಗಃ ಸಹಾಮಾತ್ಯೋ ಮತ್ಸಂಸ್ಥೋऽದ್ಯ ಮಹೀಪತೇ ॥೧೧॥

ರಾಜನೇ ನಿಶ್ಚಯವಾಗಿ ಅವರು ನಮ್ಮ ಸಹಾಯಕ್ಕೇ ಬರುತ್ತಾರೆ. ಇದರಲ್ಲಿ ಸಂಶಯವಿಲ್ಲ. ಅರ್ಥವರ್ಗವೂ (ಕೋಶವು) ಮತ್ತು ಅಮಾತ್ಯರೂ, ಈ ದಿನವೂ ನನ್ನ ವಶದಲ್ಲಿಯೇ ಇದ್ದಾರೆ.

ಸ ಭವಾನ್ ಪಾಂಡವಾನಾಶು ವಿವಾಸಯಿತುಮರ್ಹಸಿ ।
ಮೃದುನೈವಾಭ್ಯುಪಾಯೇನ ನಗರಂ ವಾರಣಾವತಮ್ ॥೧೨॥

ಆದ್ದರಿಂದ ನೀನು ಮೃದುವಾದ ಮಾತುಗಳಿಂದಲೇ ಪಾಂಡವರನ್ನು ಇಲ್ಲಿಂದ ವಾರಣಾವತನಗರಕ್ಕೆ ಕಳುಹಿಸಬೇಕು.

ಯದಾ ಪ್ರತಿಷ್ಠಿತಂ ರಾಜ್ಯಂ ಮಯಿ ರಾಜನ್ ಭವಿಷ್ಯತಿ ।
ತದಾ ಕುಂತೀ ಸಹಾಪತ್ಯಾ ಪುನರೇಷ್ಯತಿ ಪಾರ್ಥಿವ ॥೧೩॥

ರಾಜನೇ, ರಾಜ್ಯವು ನನ್ನಲ್ಲಿ ಸ್ಥಿರವಾದ ಮೇಲೆ ಕುಂತಿಯೂ ಮತ್ತು ಅವಳ ಮಕ್ಕಳೂ ಪುನಃ ಇಲ್ಲಿಗೆ ಬರುತ್ತಾರೆ.

ಧೃತರಾಷ್ಟ್ರಃ

ದುರ್ಯೋಧನ ಮಮಾಪ್ಯೇತತ್ ಸತತಂ ಹೃದಿ ವರ್ತತೇ ।
ಅಭಿಪ್ರಾಯಸ್ಯ ಪಾಪತ್ವಾನ್ನ ತೇ ವಿವೃತವಾನಹಮ್ ॥೧೪॥

ದುರ್ಯೋಧನ, ಈ ಅಭಿಪ್ರಾಯವು ನನ್ನ ಮನಸ್ಸಿನಲ್ಲಿ ಯಾವಾಗಲೂ ಇದೆ. ಆದರೆ ಅಭಿಪ್ರಾಯವು ದುಷ್ಟವಾದುದರಿಂದ ನಾನು ಅದನ್ನು ನಿನಗೂ ಬಿಚ್ಚಿ ತಿಳಿಸಿಲ್ಲ.

ನಹಿ ಭೀಷ್ಮೋ ನ ವಿದುರೋ ನ ದ್ರೋಣೋ ನಚ ಗೌತಮಃ ।
ವಿವಾಸ್ಯಮಾನಾನ್ ಕೌಂತೇಯಾನನುಮಂಸ್ಯಂತಿ ಕಥಂಚನ ॥೧೫॥

ಪಾಂಡವರನ್ನು ಇಲ್ಲಿಂದ ಹೊರಗೆ ಕಳುಹಿಸಿದರೆ, ಭೀಷ್ಮರಾಗಲೀ, ವಿದುರನಾಗಲೀ, ದ್ರೋಣರಾಗಲೀ, ಅಥವಾ ಕೃಪಾಚಾರ್ಯರಾಗಲೀ ಯಾವ ಪ್ರಕಾರದಿಂದಲೂ ಸಮ್ಮತಿಸುವುದಿಲ್ಲ.

ಸಮಾ ಹಿ ಕೌರವೇಯಾಣಾಮೇತೇ ಪುರುಷಸತ್ತಮಾಃ ।
ನೈತೇ ವಿಷಮಮಿಚ್ಛೇಯುರ್ಧರ್ಮನಿತ್ಯಾ ಯಶಸ್ವಿನಃ ॥೧೬॥

ಈ ಪುರುಷಶ್ರೇಷ್ಠರು ಎಲ್ಲಾ ಕೌರವರಿಗೂ (ಕೌರವರಿಗೂ ಮತ್ತು ಪಾಂಡವರಿಗೂ) ಸಮಾನರಾದವರು. ಯಶಸ್ವಿಗಳೂ, ಧರ್ಮನಿತ್ಯರೂ ಆದ ಇವರು ಕೌರವೇಯರ ಮಧ್ಯದಲ್ಲಿ ವೈಷಮ್ಯ ಉಂಟಾಗುವುದನ್ನು ಬಯಸುವುದಿಲ್ಲ.

ತೇ ವಯಂ ಕೌರವೇಯಾಣಾಮೇತೇಷಾಂ ಚ ಮಹಾತ್ಮನಾಮ್ ।
ಕಥಂ ನು ವಾಚ್ಯತಾಂ ತಾತ ಗಚ್ಛಾಮ ಜಗತಸ್ತಥಾ ॥೧೭॥

ಪುತ್ರನೇ ನಾವು ಎಲ್ಲಾ ಕೌರವರಿಂದಲೂ ಮತ್ತು ಈ ಎಲ್ಲಾ ಮಹಾತ್ಮರಿಂದಲೂ ಮತ್ತು ಜಗತ್ತಿನಿಂದಲೂ ನಿಂದ್ಯರಾಗುತ್ತೇವೆ.

ದುರ್ಯೋಧನಃ

ಮಧ್ಯಸ್ಥಃ ಸತತಂ ಭೀಷ್ಮೋ ದ್ರೋಣಪುತ್ರೋ ಮಯಿ ಸ್ಥಿತಃ ।
ಯತಃ ಪುತ್ರಸ್ತತೋ ದ್ರೋಣೋ ಭವಿತಾ ನಾತ್ರ ಸಂಶಯಃ ॥೧೮॥

ಭೀಷ್ಮರು ಯಾವಾಗಲೂ ತಟಸ್ಥರಾದವರು. ಅಶ್ವತ್ಥಾಮರು ನನ್ನ ಪಕ್ಷದಲ್ಲಿಯೇ ಇದ್ದಾರೆ. ಅವರು ಎಲ್ಲಿ ಇರುತ್ತಾರೋ ದ್ರೋಣರೂ ಅಲ್ಲಿಯೇ ಇರುತ್ತಾರೆ. ಈ ವಿಷಯದಲ್ಲಿ ಸಂಶಯವಿಲ್ಲ.

ಕೃಪಃ ಶಾರದ್ವತಶ್ಚೈವ ಯತ ಏತೌ ತತೋ ಭವೇತ್ ।
ಭಾಗಿನೇಯಂ ತಥಾ ದ್ರೋಣಂ ನ ತ್ಯಕ್ಷ್ಯತಿ ಕಥಂಚನ ॥೧೯॥

ದ್ರೋಣ ಮತ್ತು ಅಶ್ವತ್ಥಾಮರು ಎಲ್ಲಿ ಇರುತ್ತಾರೋ ಆ ಪಕ್ಷವನ್ನು ಶಾರದ್ವತರಾದ ಕೃಪಾಚಾರ್ಯರು ತಮ್ಮ ಭಾವನಾದ ದ್ರೋಣರನ್ನೂ, ತಂಗಿಯ ಮಗನಾದ ಅಶ್ವತ್ಥಾಮರನ್ನೂ ಎಂದೂ ಬಿಡುವುದಿಲ್ಲ.

ಕ್ಷತ್ತಾಽಽರ್ತಬಂಧುರಸ್ಮಾಕಂ ಪ್ರಚ್ಛನ್ನಸ್ತು ಯತಃ ಪರೇ ।
ನ ಚೈಕಃ ಸ ಸಮರ್ಥೋಽಸ್ಮಾನ್ ಪಾಂಡವಾರ್ಥೇ ವಿಬಾಧಿತುಮ್ ॥

ವಿದುರನು ನಮ್ಮ ವಿಷಯದಲ್ಲಿ ಹೃದಯದಲ್ಲಿ ಕ್ಲೇಶವನ್ನು ಅನುಭವಿಸುವ ಬಂಧು. ಪಾಂಡವರ ವಿಷಯದಲ್ಲಿ ಹೊರಗೆ ತೋರಿಸಿಕೊಳ್ಳದೇ ಬಹಳ ಸ್ನೇಹವನ್ನು ಹೊಂದಿರುವ ಬಂಧುವಾಗಿದ್ದಾನೆ. ಅವನೊಬ್ಬನೇ ಪಾಂಡವರ ಸಲುವಾಗಿ ನಮ್ಮನ್ನು ಪೀಡಿಸಲು ಶಕ್ತನಾಗುವುದಿಲ್ಲ.

ಸುವಿಸ್ರಬ್ಧಾನ್ ಪಾಂಡುಪುತ್ರಾನ್ ಸಹ ಮಾತ್ರಾ ಪ್ರವಾಸಯ ।
ವಾರಣಾವತಮದ್ಯೈವ ನಾತ್ರ ದೋಷೋ ಭವಿಷ್ಯತಿ ॥೨೧॥

ನಿನ್ನಲ್ಲಿ ಒಳ್ಳೆಯ ನಂಬಿಕೆ ಇಟ್ಟಿರುವ ಪಾಂಡುಪುತ್ರರನ್ನು, ಅವರ ತಾಯಿಯ ಜೊತೆಯಲ್ಲಿ ಈ ದಿನವೇ ವಾರಣಾವತಕ್ಕೆ ಕಳುಹಿಸು. ಇದರಲ್ಲಿ ದೋಷವಿಲ್ಲ.

ವಿನಿದ್ರಾಕರಣಂ ಘೋರಂ ಹೃದಿ ಶಲ್ಯಮಿವಾರ್ಪಿತಮ್ ।
ಶೋಕಪಾವಕಮುದ್ಭೂತಂ ಕರ್ಮಣಾऽನೇನ ನಾಶಯ ॥೨೨॥

ನನ್ನ ನಿದ್ರೆಯನ್ನು ಕೆಡಿಸಿ ಹೃದಯದಲ್ಲಿ ಘೋರವಾದ ಶಲ್ಯದಂತೆ ನೆಟ್ಟಿರುವ ಈ ಉದ್ಭುದ್ಧವಾದ ಶೋಕಾಗ್ನಿಯನ್ನು ನಿನ್ನ ಕರ್ಮದಿಂದ ನಾಶ ಮಾಡು.

ವೈಶಂಪಾಯನಃ

ತತಸ್ತು ದುರ್ಯೋಧನವಚಃ ಕುತ್ಸಯಿತ್ವಾ ಜನೇಶ್ವರಃ ।
ಹೃದಯೇನ ತು ಸಂಶ್ರಿತ್ಯ ಚಿಂತಯಾಮಾಸ ನೈಕಧಾ ॥೨೩॥

ಆಗ ರಾಜನಾದ ಧೃತರಾಷ್ಟ್ರನು ದುರ್ಯೋಧನನ ಮಾತುಗಳನ್ನು ಹೊರಗೆ ನಿಂದಾಪೂರ್ವಕವಾಗಿ ನಿರಾಕರಿಸಿ, ಮನಸ್ಸಿನಲ್ಲಿ ಮಾತ್ರ ಅದನ್ನು ಆಶ್ರಯಿಸಿ ಅನೇಕ ರೀತಿಯಾಗಿ ಚಿಂತಿಸಿದನು.

ತತೋ ದುರ್ಯೋಧನೋ ರಾಜನ್ ಸರ್ವಾಸ್ತು ಪ್ರಕೃತೀಃ ಶನೈಃ ।
ಅರ್ಥಮಾನಪ್ರದಾನೇನ ಸಂಜಗ್ರಾಹ ಸಹಾನುಜಃ ॥೨೪॥

ರಾಜನೇ ದುರ್ಯೋಧನನೂ ಮತ್ತು ಅವನ ತಮ್ಮಂದಿರೂ ಸೇರಿ ಎಲ್ಲಾ ಪ್ರಜೆಗಳನ್ನೂ ನಿಧಾನವಾಗಿ ಅರ್ಥ ಮತ್ತು ಮಾನಗಳನ್ನು ಕೊಡುವುದರಿಂದ ತಮ್ಮ ಪಕ್ಷಕ್ಕೆ ಸೇರಿಸಿಕೊಂಡರು.

ಧಾರ್ತರಾಷ್ಟ್ರಪ್ರಯುಕ್ತಾಸ್ತೇ ಕೇಚಿತ್ ಕುಶಲಮಂತ್ರಿಣಃ ।
ಕಥಯಾಂಚಕ್ರಿರೇ ರಮ್ಯಂ ನಗರಂ ವಾರಣಾವತಮ್ ॥೨೫॥

ದುರ್ಯೋಧನನಿಂದ ನಿಯೋಜಿಸಲ್ಪಟ್ಟ ಕುಶಲರಾದ ಕೆಲವು ಮಂತ್ರಿಗಳು ವಾರಣಾವತನಗರವು ತುಂಬಾ ರಮ್ಯವಾಗಿದೆ ಎಂಬ ವಾರ್ತೆಯನ್ನು ಹಬ್ಬಿಸಿದರು.

ಅಯಂ ಸಮಾಜಃ ಸುಮಹಾನ್ ರಮಣೀಯತರೋ ಭುವಿ ।
ಉಪಸ್ಥಿತಃ ಪಶುಪತೇರ್ನಗರೇ ವಾರಣಾವತೇ ॥೨೬॥

ಪಶುಪತಿಯ ನಗರವಾದ ವಾರಣಾವತದಲ್ಲಿ ನಡೆಯಲಿರುವ ಈ ದೊಡ್ಡ ಜಾತ್ರೆಯು ಭೂಮಿಯಲ್ಲಿಯೇ ಅತ್ಯಂತ ಮನೋಹರವಾದುದು. ಅದು ಸದ್ಯದಲ್ಲಿಯೇ ಜರುಗುತ್ತದೆ.

ಸರ್ವರತ್ನಸಮಾಕೀರ್ಣೇ ಪುಣ್ಯೇ ದೇಶೇ ಮನೋರಮೇ ।
ಇತ್ಯೇವಂ ಧಾರ್ತರಾಷ್ಟ್ರಸ್ಯ ವಚನಾಚ್ಚಕ್ರಿರೇ ಕಥಾಃ ॥೨೭॥

ಸರ್ವರತ್ನಗಳಿಂದ ತುಂಬಿದ ಮನೋಹರವಾದ ಪುಣ್ಯದೇಶದಲ್ಲಿ ಈ ಜಾತ್ರೆಯು ನಡೆಯುತ್ತದೆ ಎಂದು ಮಂತ್ರಿಗಳು ದುರ್ಯೋಧನನ ಆದೇಶದಂತೆ ಮಾತನಾಡುತ್ತಿದ್ದರು.

ಕಥ್ಯಮಾನೇ ತದಾ ರಮ್ಯೇ ನಗರೇ ವಾರಣಾವತೇ ।
ಗಮನೇ ಪಾಂಡುಪುತ್ರಾಣಾಂ ಜಜ್ಞೇ ತತ್ರ ಮತಿರ್ನೃಪ ॥೨೮॥

ರಾಜನೇ, ವಾರಣಾವತವು ಸುಂದರವಾದ ನಗರ ಎಂಬ ವಾರ್ತೆಯನ್ನು ಕೇಳಿದ ಪಾಂಡುಪುತ್ರರಿಗೆ ಅಲ್ಲಿಗೆ ಹೋಗುವ ಮನಸ್ಸು ಉಂಟಾಯಿತು.

ಯದಾ ತ್ವಶಂಕಿತಾನ್ ರಾಜನ್ ಕೃತಕೌತೂಹಲಾನಿವ ।
ಉವಾಚೈನಾನಿತಿ ತದಾ ಪಾಂಡವಾನಂಬಿಕಾಸುತಃ ॥೨೯॥

ರಾಜನೇ, ಪಾಂಡವರು ಯಾವ ಶಂಕೆಯೂ ಇಲ್ಲದೇ ವಾರಣಾವತಕ್ಕೆ ಹೋಗುವ ಕುತೂಹಲವುಳ್ಳವರಾಗಿರುವುದನ್ನು ಗಮನಿಸಿ ಅಂಬಿಕಾಸುತನಾದ ಧೃತರಾಷ್ಟ್ರನು ಪಾಂಡವರನ್ನು ಕುರಿತು ಹೀಗೆ ಹೇಳಿದನು.

ಧೃತರಾಷ್ಟ್ರಃ

ಅಧೀತಾನಿ ಚ ಶಾಸ್ತ್ರಾಣಿ ಯುಷ್ಮಾಭಿರಿಹ ಕೃತ್ಸ್ನಶಃ ।
ಅಸ್ತ್ರಾಣಿ ಚ ತಥಾ ದ್ರೋಣಾದ್ ಗೌತಮಾಚ್ಚ ಶರದ್ವತಾತ್ ॥

ಪಾಂಡವರೇ, ನೀವು ಇಲ್ಲಿ ಸಮಗ್ರವಾಗಿ ಶಾಸ್ತ್ರಾಧ್ಯಯನವನ್ನು ಮಾಡಿದ್ದೀರಿ. ದ್ರೋಣಾಚಾರ್ಯರಿಂದಲೂ ಶಾರದ್ವತರಾದ ಕೃಪಾಚಾರ್ಯರಿಂದಲೂ ಅಸ್ತ್ರವಿದ್ಯೆಯನ್ನು ಸಂಪಾದಿಸಿದ್ದೀರಿ.

ಸೋಹಮೇವಂ ಗತೇ ತಾತಾಶ್ಚಿಂತಯಾಮಿ ಸಮಂತತಃ ।
ರಕ್ಷಣೇ ವ್ಯವಹಾರೇ ಚ ರಾಜ್ಯಸ್ಯ ಸತತಂ ಹಿತೇ ॥೩೧॥

ಮಕ್ಕಳೇ ಪರಿಸ್ಥಿತಿಯು ಹೀಗಿರುವಾಗ ರಾಜ್ಯದ ರಕ್ಷಣೆ, ವ್ಯವಹಾರ ಮತ್ತು ಹಿತದ ದೃಷ್ಟಿಯಿಂದ ನಾನು ಎಲ್ಲಾ ರೀತಿಯಿಂದಲೂ ಯೋಚಿಸುತ್ತಿದ್ದೇನೆ.

ಇಮೇ ಹಿ ಪುರುಷಾಸ್ತಾತ ಕಥಯಂತಿ ಪುನಃ ಪುನಃ ।
ರಮಣೀಯತರಂ ಲೋಕೇ ನಗರಂ ವಾರಣಾವತಮ್ ॥೩೨॥

ಪ್ರಿಯ ಯುಧಿಷ್ಠಿರನೇ, ಈ ಜನರೆಲ್ಲರೂ ವಾರಣಾವತನಗರವು ಲೋಕದಲ್ಲಿ ಅತ್ಯಂತ ಮನೋಹರವಾದುದೆಂದು ಮತ್ತೆ ಮತ್ತೆ ಹೇಳುತ್ತಿದ್ದಾರೆ.

ತೇ ತಾತಾ ಯದಿ ಮನ್ಯಧ್ವಮುತ್ಸವಂ ವಾರಣಾವತೇ ।
ಸಗಣಾಃ ಸಾನುಯಾತ್ರಾಶ್ಚ ವಿಹರಧ್ವಂ ಯಥಾऽಮರಾಃ ॥೩೩॥

ಪುತ್ರರೇ, ಅಲ್ಲಿ ನಡೆಯಲಿರುವ ಉತ್ಸವವು ನಿಮ್ಮ ಮನಸ್ಸಿಗೆ ಬಂದರೆ, ನಿಮ್ಮ ಗುಂಪಿನವರು ಮತ್ತು ಅನುಚರರನ್ನೆಲ್ಲಾ ಕರೆದುಕೊಂಡು ಅಲ್ಲಿಗೆ ಹೋಗಿ ದೇವತೆಗಳಂತೆ ವಿಹಾರ ಮಾಡಿ.

ಬ್ರಾಹ್ಮಣೇಭ್ಯಶ್ಚ ರತ್ನಾನಿ ನಟೇಭ್ಯಶ್ಚ ವಿಶೇಷತಃ ।
ಸಂಪ್ರದಧ್ವಂ ಯಥಾಕಾಮಂ ದೇವಾ ಇವ ಸುವರ್ಚಸಃ ॥೩೪॥

ದೇವತೆಗಳಂತೆ ಕಾಂತಿಯುಕ್ತರಾಗಿ ಬ್ರಾಹ್ಮಣರಿಗೂ ಮತ್ತು ನಟರಿಗೂ ನಿಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ವಿಶೇಷವಾಗಿ ದಾನವನ್ನು ಮಾಡಿ.

ಕಂಚಿತ್ಕಾಲಂ ವಿಹೃತ್ಯೈವಮವಾಪ್ಯ ಚ ಪರಾಂ ಮುದಮ್ ।
ಇಹೈವ ಹಸ್ತಿನಪುರೇ ಸುಖೇನ ಪುನರೇಷ್ಯಥ ॥೩೫॥

ವಾರಣಾವತದಲ್ಲಿ ಹೀಗೆ ಸ್ವಲ್ಪ ಸಮಯ ವಿಹರಿಸಿ ತುಂಬಾ ಸಂತೋಷಪಟ್ಟು ಪುನಃ ಹಸ್ತಿನಪುರಕ್ಕೆ ಸುಖವಾಗಿ ಬನ್ನಿ.

ನಿವಸಧ್ವಂ ಚ ತತ್ರೈವ ಪುರೇಕ್ಷಣಪರಾಯಣಾಃ ।
ವೈಲಕ್ಷಣ್ಯಂ ಹಿ ವಸ್ತತ್ರ ಭವಿಷ್ಯತಿ ಪರಂತಪಾಃ ।
ನಗರಂ ಪುನರೇವೇದಮುಪಯಾಸ್ಯಥ ಪಾಂಡವಾಃ ॥೩೬॥

ಅಥವಾ ನಗರವನ್ನು ನೋಡುವ ದೃಷ್ಟಿಯಿಂದ ಅಲ್ಲಿಯೇ ವಾಸ ಮಾಡಿ. ಪರಂತಪರೇ ಆ ನಗರವು ನಿಮಗೆ ಇಲ್ಲಿಗಿಂತ ಭಿನ್ನವಾಗಿ ಮತ್ತು ಹೊಸದಾಗಿ ಇರುತ್ತದೆ. ಪಾಂಡವರೇ, ಅನಂತರ ನೀವು ಪುನಃ ಹಸ್ತಿನಪುರಕ್ಕೆ ಬನ್ನಿ.

ವೈಶಂಪಾಯನಃ

ಧೃತರಾಷ್ಟ್ರಸ್ಯ ತಂ ಕಾಮಮಬುಧ್ಯತ ಯುಧಿಷ್ಠಿರಃ ।
ಆತ್ಮನಶ್ಚಾಸಹಾಯತ್ವಂ ತಥೇತಿ ಪ್ರತ್ಯುವಾಚ ಹ ॥೩೭॥

ಯುಧಿಷ್ಠಿರನು ಧೃತರಾಷ್ಟ್ರನ ಮನಸ್ಸಿನ ಅಭಿಪ್ರಾಯವನ್ನೂ ತನ್ನ ಅಸಹಾಯಕತೆಯನ್ನೂ ತಿಳಿದು ''ಹಾಗೆಯೇ ಆಗಲಿ'' ಎಂದು ಹೇಳಿದನು.

ತತೋ ಭೀಷ್ಮಂ ಮಹಾಪ್ರಾಜ್ಞಂ ವಿದುರಂ ಚ ಮಹಾಮತಿಮ್ ।
ದ್ರೋಣಂ ಚ ಬಾಹ್ಲಿಕಂ ಚೈವ ಸೋಮದತ್ತಂ ಚ ಕೌರವಮ್ ॥೩೮॥
ಕೃಪಮಾಚಾರ್ಯಪುತ್ರಂ ಚ ಗಾಂಧಾರೀಂ ಚ ಯಶಸ್ವಿನೀಮ್ ।
ಯುಧಿಷ್ಠಿರಃ ಶನೈರ್ದೀನಮುವಾಚೇದಂ ವಚಸ್ತಥಾ ॥೩೯॥

ಅನಂತರ, ಯುಧಿಷ್ಠಿರನು ಮಹಾಪ್ರಾಜ್ಞರಾದ ಭೀಷ್ಮರನ್ನೂ, ಮೇಧಾವಿಯಾದ ವಿದುರನನ್ನೂ, ದ್ರೋಣರನ್ನೂ, ಬಾಹ್ಲೀಕರನ್ನೂ, ಕೌರವನಾದ ಸೋಮದತ್ತನನ್ನೂ, ಕೃಪರನ್ನೂ, ಅಶ್ವತ್ಥಾಮರನ್ನೂ, ಯಶಸ್ವಿನಿಯಾದ ಗಾಂಧಾರಿಯನ್ನೂ ಸಮೀಪಿಸಿ ದೀನನಾಗಿ ಈ ಮಾತುಗಳನ್ನು ಆಡಿದನು.

ರಮಣೀಯೇ ಜನಾಕೀರ್ಣೇ ನಗರೇ ವಾರಣಾವತೇ ।
ಸಗಣಾಸ್ತಾತ ಯಾಸ್ಯಾಮೋ ಧೃತರಾಷ್ಟ್ರಸ್ಯ ಶಾಸನಾತ್ ॥೪೦॥

ಪೂಜ್ಯರೇ ಧೃತರಾಷ್ಟ್ರನ ಅಪ್ಪಣೆಯಂತೆ ನಾವು ಜನರಿಂದ ತುಂಬಿದ ರಮಣೀಯವಾದ ವಾರಣಾವತನಗರಕ್ಕೆ ಪರಿವಾರ ಸಹಿತರಾಗಿ ಹೋಗುವೆವು.

ಪ್ರಸನ್ನವದನಾಃ ಸರ್ವೇ ಪುಣ್ಯಾ ವಾಚೋ ವಿಮುಂಚತ ।
ಆಶೀರ್ಭಿರ್ವರ್ಧಿತಾನಸ್ಮಾನ್ ನ ಪಾಪಾನ್ ವೈ ಪ್ರವಕ್ಷ್ಯಥ ॥೪೧॥

ಎಲ್ಲರೂ ಪ್ರಸನ್ನರಾಗಿ ನಮಗೆ ಶುಭ ಹಾರೈಕೆಗಳನ್ನು ಹೇಳಿ. ನಿಮ್ಮ ಆಶೀರ್ವಾದದಿಂದ ನಾವು ಅಭಿವೃದ್ಧಿಯನ್ನು ಪಡೆಯುತ್ತೇವೆ. ಯಾವ ಕೆಟ್ಟ ಮಾತನ್ನೂ ಆಡಬೇಡಿ.

ವೈಶಂಪಾಯನಃ

ಏವಮುಕ್ತಾಸ್ತು ತೇ ಸರ್ವೇ ಪಾಂಡುಪುತ್ರೇಣ ಕೌರವಾಃ ।
ಪ್ರಸನ್ನವದನಾ ಭೂತ್ವಾ ತೇऽಭ್ಯವರ್ಧಂತ ಪಾಂಡವಾನ್ ॥೪೨॥

ಯುಧಿಷ್ಠಿರನಿಂದ ಹೀಗೆ ಹೇಳಲ್ಪಟ್ಟ ಕೌರವರೆಲ್ಲರೂ ಪ್ರಸನ್ನವದನರಾಗಿ ಪಾಂಡವರಿಗೆ ಶುಭಹಾರೈಕೆಗಳನ್ನು ಹೇಳಿ, ಅವರನ್ನು ಅಭಿವೃದ್ಧಿಯನ್ನು ಹೊಂದುವಂತೆ ಮಾಡಿದರು.

ಸ್ವಸ್ತಿಸ್ತು ವಃ ಪಥಿ ಸದಾ ಭೂತೇಭ್ಯಶ್ಚೈವ ಸರ್ವಶಃ ।
ಮಾ ವೋಚಂಸ್ತ್ವಶುಭಂ ಕಿಂಚಿತ್ ಸರ್ವತಃ ಪಾಂಡುನಂದನಾನ್ ॥೪೩॥

ಮಾರ್ಗದಲ್ಲಿ ನಿಮಗೆ ಕ್ಷೇಮವಾಗಲಿ. ಯಾವ ಭೂತಗಳಿಂದಲೂ ನಿಮಗೆ ಉಪದ್ರವವಾಗುವುದು ಬೇಡ. ಪಾಂಡುನಂದನರಾದ ನಿಮ್ಮನ್ನು ಕುರಿತು ಯಾರೂ ಅಶುಭವಚನಗಳನ್ನು ಆಡದಿರಲಿ.

ತೇ ತಥಾ ವರ್ಧಿತಾ ವೃದ್ಧೈ ರಾಜ್ಯಲಾಭಾಯ ಪಾಂಡವಾಃ ।
ಕೃತ್ವಾ ಸರ್ವಾಣಿ ಕಾರ್ಯಾಣಿ ಪ್ರಯಯುರ್ವಾರಣಾವತಮ್ ॥೪೪॥

ವೃದ್ಧರಿಂದ ಹೀಗೆ ರಾಜ್ಯಲಾಭದ ಆಶೀರ್ವಚನಗಳಿಂದ ಅಭಿವೃದ್ಧರಾದ ಪಾಂಡವರು ಹೊರಡಲು ಮಾಡಬೇಕಾದ ಎಲ್ಲಾ ಕಾರ್ಯಗಳನ್ನು ಮಾಡಿ ವಾರಣಾವತಕ್ಕೆ ಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರಿಚತ್ವಾರಿಂಶತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಜತುಗೃಹದಾಹಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರನಲವತ್ಮೂರನೆಯ ಅಧ್ಯಾಯ ಮುಗಿಯಿತು.

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ತಾನ್ ಹಂತುಮೇದ ಚ ತದಾ ಧೃತರಾಷ್ಟ್ರಸೂನು-
ರ್ಲಾಕ್ಷಾಗೃಹಂ ಸಪದಿ ಕಾಂಚನರತ್ನಗೂಢಂ ।
ಕೃತ್ವಾಭ್ಯಯಾತಯದಮುತ್ರ ಹಿ ವಿಷ್ಣುಪದ್ಯಾ
ಸ್ವಾಮಾತ್ಯಮೇವ ಚ ಪುರೋಚನನಾಮಧೇಯಂ ॥೩೨॥

ಪಾಂಡವರನ್ನು ಕೊಲ್ಲುವ ಉದ್ದೇಶದಿಂದಲೆ ದುರ್ಯೋಧನ ಪುರೋಚನನ ಮೂಲಕ ಚಿನ್ನ ರತ್ನಗಳಿಂದ ಆವೃತವಾದ ಅರಗಿನ ಮನೆಯನ್ನು ಬೇಗನೆ ಸಿದ್ಧಪಡಿಸಿ ಗಂಗಾನದೀ ಮಾರ್ಗದಿಂದ ಪಾಂಡವರನ್ನು ವಾರಣಾವತದ ಕಡೆಗೆ ಕಳಿಸಿದ. ಜೊತೆಗೆ ಪುರೋಚನನೆಂಬ ತನ್ನ ಮಂತ್ರಿಯನ್ನೂ ಕಳಿಸಿದ.

ಪೂರ್ವಂ ಪ್ರಹಸ್ತ ಇತಿ ಯಸ್ತ ಭವತ್ ಸುಪಾಪಃ
ಸೋಽಭ್ಯೇತ್ಯ ಪಾಂಡುತನಯಾನಭವಚ್ಚ ಮಂತ್ರೀ ।
ದುರ್ಯೋಧನಂ ಪ್ರತಿವಿಹಾಯ ಭವತ್ಸಕಾಶ-
ಮಾಯಾತ ಇತ್ಯವದದೇಷು ಸ ಕೂಟವಾಕ್ಯಂ ॥೩೩॥

ಆ ಪುರೋಚನ ಹಿಂದೆ ಪ್ರಹಸ್ತನೆಂಬ ಮಹಾಪಾಪಿ. ಅವನು ಪಾಂಡವರ ಒಳಗೆ ಬಂದು 'ದುರ್ಯೋಧನನನ್ನು ಬಿಟ್ಟು ನಿಮ್ಮಲ್ಲಿಗೆ ಬಂದಿದ್ದೇನೆ' ಎಂದು ಕಪಟದ ಮಾತನ್ನಾಡಿದ ಅವರಿಗೆ ಮಂತ್ರಿಯಾದ.

ದಿವ್ಯಂ ಗೃಹಂ ಚ ಭವತಾಂ ಹಿ ಮಯೋಪನೀತಂ
ಪ್ರೀತ್ಯೈವ ಪಾಪಮನುಯಾತುಮಹಂ ನ ಶಕ್ತಃ ।
ಯುಷ್ಮಾಸು ಧರ್ಮಧೃತಿಮತ್ಸು ಸದಾ ನಿವತ್ಸ್ಯ
ಇತ್ಯೂಚಿವಾಂಸಮಮುಮಾಹುರಹೋ ಸುಭದ್ರಂ ॥೩೪॥

'ದಿವ್ಯವಾದ ಒಂದು ಮನೆಯನ್ನು ನಾನು ನಿಮಗಾಗಿ ಪ್ರೀತಿಯಿಂದ ಕಟ್ಟಿಸಿದ್ದೇನೆ. ಪಾಪಿ ದುರ್ಯೋಧನನ ಬೆನ್ನ ಹಿಂದೆ ತಿರುಗುವುದು ನನ್ನಿಂದಾಗದು. ಧರ್ಮದಲ್ಲಿ ಸ್ಥಿರತೆಯುಳ್ಳ ನಿಮ್ಮಲ್ಲಿಯೆ ನಾನು ಸದಾ ಇರುವೆನು' ಎಂದು ಪುರೋಚನ ನುಡಿದಾಗ ಪಾಂಡವರು 'ನೀನು ನಮ್ಮಲ್ಲಿಗೆ ಬಂದುದು ಬಹಳ ಆಶ್ಚರ್ಯ! ಬಹಳ ಒಳ್ಳೆಯದಾಯಿತು ಎಂದರು.

ದೃಷ್ಟ್ವೈವ ಜಾತುಷಗೃಹಂ ವಸಯಾ ಸಮೇತಂ
ತದ್ಗಂಧತೋ ವೃಷಸುತಃ ಪವಮಾನಜಾತಂ ।
ತಂ ಜಾತಿಪಾಪಮವದತ್ ಸುಮುಖೈಷ ಪಾಪೋ
ಹಂತುಂ ನ ಇಚ್ಛತಿ ಸದಾ ಭವ ಚ ಪ್ರತೀತಃ ॥೩೫॥

ಮೀನಿನ ಕೊಬ್ಬು ಮತ್ತು ಅರಗುಗಳಿಂದ ಮಾಡಿದ ಆ ಮನೆಯನ್ನು ಅದರ ವಾಸನೆಯಿಂದಲೆ ತಿಳಿದ ಧರ್ಮರಾಜ ಭೀಮನಿಗೆ ಹೇಳಿದ 'ಪುರೋಚನ ಮಹಾಪಾಪಿ. ಮಂಗಲಮುಖನಾದ ಭೀಮಸೇನನೆ! ಈ ಪಾಪಿ ನಮ್ಮನ್ನು ಕೊಲ್ಲಲು ಬಯಸಿದ್ದಾನೆ. ಸದಾ ಜಾಗರೂಕನಾಗಿರು'.

★ ★ ★ ★

ನೂರ ನಲವತ್ನಾಲ್ಕನೆಯ ಅಧ್ಯಾಯ

(ದುರ್ಯೋಧನನ ಹರ್ಷ, ವಾರಣಾವತದಲ್ಲಿ ಅರಗಿನ ಮನೆಯನ್ನು ಕಟ್ಟಲು ಪುರೋಚನನಿಗೆ ಆದೇಶ)

ವೈಶಂಪಾಯನಃ

ಧೃತರಾಷ್ಟ್ರಪ್ರಯುಕ್ತೇಷು ಪಾಂಡವೇಷು ಮಹಾತ್ಮಸು ।
ದುರ್ಯೋಧನಃ ಪರಂ ಹರ್ಷಮಾಜಗಾಮ ದುರಾತ್ಮವಾನ್ ॥೧॥

ಧೃತರಾಷ್ಟ್ರನು ಮಹಾತ್ಮರಾದ ಪಾಂಡವರನ್ನು ವಾರಣಾವತಕ್ಕೆ ಕಳುಹಿಸುತ್ತಿರಲು ದುರಾತ್ಮನಾದ ದುರ್ಯೋಧನನು ಬಹಳ ಸಂತೋಷಪಟ್ಟನು.

ತತಃ ಸುಬಲಪುತ್ರಶ್ಚ ಕರ್ಣೋ ದುರ್ಯೋಧನಸ್ತಥಾ ।
ದಹನೇ ಸಹಪುತ್ರಾಯಾಃ ಕುಂತ್ಯಾ ಮತಿಮಕುರ್ವತ ॥೨॥

ಅನಂತರ ಶಕುನಿಯೂ, ಕರ್ಣನೂ, ದುರ್ಯೋಧನನೂ ಸೇರಿ ಕುಂತಿಯನ್ನು, ಅವಳ ಮಕ್ಕಳ ಜೊತೆಯಲ್ಲಿ ವಾರಣಾವತದಲ್ಲಿ ಸುಟ್ಟುಬಿಡಲು ತೀರ್ಮಾನಿಸಿದರು.

ಮಂತ್ರಯಿತ್ವಾ ಚ ತೈಃ ಸಾರ್ಧಂ ದುರಾತ್ಮಾ ಧೃತರಾಷ್ಟ್ರಜಃ ।
ಸ ಪುರೋಚನಮೇಕಾಂತಮಾನೀಯ ಭರತರ್ಷಭ ।
ಗೃಹೀತ್ವಾ ದಕ್ಷಿಣೇ ಪಾಣೌ ಸಚಿವಂ ವಾಕ್ಯಮಬ್ರವೀತ್ ॥೩॥

ಭರತರ್ಷಭನೇ ದುರಾತ್ಮನಾದ ದುರ್ಯೋಧನನು, ಅವರ ಜೊತೆಯಲ್ಲಿ ಮಂತ್ರಾಲೋಚನೆಯನ್ನು ನಡೆಸಿ ತನ್ನ ಮಂತ್ರಿಯಾದ ಪುರೋಚನನನ್ನು ಏಕಾಂತದಲ್ಲಿ ಕರೆದು ಅವನ ಬಲಗೈಯನ್ನು ತನ್ನ ಕೈಯಿಂದ ಹಿಡಿದು ಮಾತನಾಡಿದನು.

ದುರ್ಯೋಧನಃ

ಮಮೇಯಂ ವಸುಸಂಪೂರ್ಣಾ ಪುರೋಚನ ವಸುಂಧರಾ ।
ಯಥೈವ ಭವಿತಾ ತಾತ ತಥಾ ತ್ವಂ ದ್ರಷ್ಟುಮರ್ಹಸಿ ॥೪॥

ಪುರೋಚನನೇ, ಈ ಧನಸಂಪೂರ್ಣವಾದ ಭೂಮಿಯು ನನಗೇ ದೊರೆಯುವಂತೆ ನೀನು ಆಲೋಚನೆ ಮಾಡಬೇಕು.

ನ ಹಿ ಮೇ ಕಶ್ಚಿದನ್ಯೋಽಸ್ತಿ ವೈಶ್ವಾಸಿಕತರಸ್ತ್ವಯಾ ।
ಸಹಾಯೋ ಮೇಽಸಿ ಸಂಧ್ಯಾಯಾಂ ಮಂತ್ರಯೇಯಂ ಯಥಾ ತ್ವಯಾ॥

ನಿನಗಿಂತ ವಿಶ್ವಾಸಪಾತ್ರರಾದವರು ನನಗೆ ಬೇರೆ ಯಾರೂ ಇಲ್ಲ. ನೀನೇ ನನಗೆ ಸಹಾಯನಾದವನು. ಅದರಿಂದ ಈ ಶುಭವಾದ ಸಂಧ್ಯಾಕಾಲದಲ್ಲಿ ನಿನ್ನ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡುತ್ತಿದ್ದೇನೆ.

ತ್ವಂ ರಕ್ಷ ತಾತ ಮಂತ್ರಂ ಚ ಸಪತ್ನಾಂಶ್ಚ ಮಮೋದ್ಧರ ।
ನಿಪುಣೇನಾಭ್ಯುಪಾಯೇನ ತವ ವಕ್ಷ್ಯಾಮಿ ತಚ್ಛೃಣು ॥೬॥

ಪ್ರೀತಿಪಾತ್ರನೇ, ಈ ಮಂತ್ರಾಲೋಚನೆಯನ್ನು ಗುಪ್ತವಾಗಿಟ್ಟು ನನ್ನ ಶತ್ರುಗಳನ್ನು ನಿಪುಣವಾದ ಉಪಾಯದಿಂದ ನಿರ್ಮೂಲಗೊಳಿಸು. ಅದಕ್ಕೆ ನಾನು ಉಪಾಯವನ್ನು ಹೇಳುತ್ತೇನೆ ಕೇಳು.

ಪಾಂಡವಾ ಧೃತರಾಷ್ಟ್ರೇಣ ಪ್ರೇಷಿತಾ ವಾರಣಾವತಮ್ ।
ಉತ್ಸವೇ ವಿಹರಿಷ್ಯಂತಿ ಧೃತರಾಷ್ಟ್ರಸ್ಯ ಶಾಸನಾತ್ ॥೭॥

ಪಾಂಡವರು ಧೃತರಾಷ್ಟ್ರನಿಂದ ವಾರಣಾವತಕ್ಕೆ ಕಳುಹಿಸಲ್ಪಟ್ಟಿದ್ದಾರೆ. ಧೃತರಾಷ್ಟ್ರನ ಆದೇಶದಂತೆ ಅಲ್ಲಿ ಅವರು ಉತ್ಸವದಲ್ಲಿ ವಿಹರಿಸುತ್ತಾರೆ.

ಸ ತ್ವಂ ರಾಸಭಯುಕ್ತೇನ ಸ್ಯಂದನೇನಾಶುಗಾಮಿನಾ ।
ವಾರಣಾವತಮದ್ಯೈವ ಯಥಾ ಯಾಸಿ ತಥಾ ಕುರು ॥೮॥

ನೀನು ಶೀಘ್ರವಾಗಿ ಹೋಗುವ ರಾಸಭಯುಕ್ತವಾದ ರಥವನ್ನು ತೆಗೆದುಕೊಂಡು ಈ ದಿನವೇ ವಾರಣಾವತವನ್ನು ತಲುಪುವಂತೆ ವ್ಯವಸ್ಥೆ ಮಾಡಿಕೋ.

ತತ್ರ ಗತ್ವಾ ಚತುಃಶಾಲಂ ಗೃಹಂ ಪರಮಸಂವೃತಮ್ ।
ಆಯುಧಾಗಾರಮಾಶ್ರಿತ್ಯ ಕಾರಯೇಥಾ ಮಹಾಧನಮ್ ॥೯॥

ಅಲ್ಲಿಗೆ ಹೋಗಿ ಆಯುಧಾಗಾರದ ಸಮೀಪದಲ್ಲಿ ಪರಮ ಸಮ್ಮತವಾದಂತಹ, ನಾಲ್ಕು ಶಾಲೆಗಳಿರುವ ಬೆಲೆ ಬಾಳುವ ಒಂದು ಮನೆಯನ್ನು ಕಟ್ಟಿಸು.

ಶಣಸರ್ಜರಸಾದೀನಿ ಯಾನಿ ದ್ರವ್ಯಾಣಿ ಕಾನಿ ಚಿತ್ ।
ಆಗ್ನೇಯಾನ್ಯತ್ರ ಕುಡ್ಯೇಷು ತಾನಿ ದ್ರವ್ಯಾಣಿ ದಾಪಯ ॥೧೦॥

ಬಲ್ವಜೇನ ಚ ಸಮ್ಮಿಶ್ರಂ ಮಧೂಚ್ಛಿಷ್ಟೇನ ಚೈವ ಹಿ ।
ಸರ್ಪಿಷಾ ಚ ಸತೈಲೇನ ಲಾಕ್ಷಯಾ ಚಾಪ್ಯನಲ್ಪಯಾ ।
ಮೃತ್ತಿಕಾಂ ಮಿಶ್ರಯಿತ್ವಾ ಚ ಲೇಪಂ ಕುಡ್ಯೇಷು ದಾಪಯ ॥೧೧॥

ಆ ಮನೆಯ ಗೋಡೆಗಳಲ್ಲಿ ಬೇಗ ಹೊತ್ತಿಕೊಳ್ಳುವ ಸೆಣಬು, ಸರ್ಜರಸ, ಮೊದಲಾದ ಆಗ್ನೇಯವಾದ ದ್ರವ್ಯಗಳನ್ನು ಸೇರಿಸು. ಬಲ್ವಜಗಳಿಂದಲೂ (ಹಂಚಿಕಡ್ಡಿಯಂತಹ ತೃಣಗಳಿಂದಲೂ), ಜೇನುಮೇಣದಿಂದಲೂ ಮತ್ತು ಬಹಳವಾದ ತುಪ್ಪ, ಎಣ್ಣೆ ಮತ್ತು ಅರಗಿನಿಂದಲೂ ಮಣ್ಣನ್ನು ಕಲೆಸಿ ಗೋಡೆಗಳಿಗೆ ಲೇಪಿಸು.''

ಶಾಣವಂಶಕಟಂ ದಾರು ವಸ್ತ್ರಾಣಿ ವಿವಿಧಾನಿ ಚ ।
ವೇಶ್ಮನಸ್ತಸ್ಯ ಸರ್ವತ್ರ ನಿಕ್ಷಿಪೇಥಾಃ ಸಮಂತತಃ ।
ಸಂಧಾದ್ಯ ತೂಲಮಿಶ್ರೈಶ್ಚ ಕ್ಷಿಪ್ರಂ ಪ್ರಜ್ವಲಿತಾನಿ ಚ ॥೧೨॥

ಶಾಣದಿಂದ ಮತ್ತು ಬಿದಿರಿನಿಂದ ಮಾಡಿದ ಚಾಪೆಗಳು, ಕಟ್ಟಿಗೆಗಳು ವಿವಿಧವಾದ ವಸ್ತ್ರಗಳು, ಆ ಮನೆಯ ಎಲ್ಲಾ ಕಡೆಯಲ್ಲಿಯೂ ಹರಡಿರಲಿ. ಹತ್ತಿಯನ್ನು ಬೆರೆಸಿದ ಬೇಗ ಬೆಂಕಿಯನ್ನು ಹಿಡಿಯುವ ಪದಾರ್ಥಗಳಿಂದ ಎಲ್ಲವನ್ನೂ ಮುಚ್ಚಿರು.

ಯಥಾ ಚ ತನ್ನ ಶಂಕೇರನ್ ಪರೀಕ್ಷಂತೋಽಪಿ ಪಾಂಡವಾಃ ।
ಆಗ್ನೇಯಮಿತಿ ತತ್ ಕಾರ್ಯಮಪಿ ಚಾನ್ಯೇಽಪಿ ಮಾನವಾಃ ॥೧೩॥

ಪಾಂಡವರಾಗಲೀ ಅಥವಾ ಬೇರೆ ಜನರಾಗಲೀ, ಪರೀಕ್ಷೆ ಮಾಡಿದರೂ, ಇದು ಆಗ್ನೇಯದ್ರವ್ಯ ಎಂಬ ಶಂಕೆಯು ಬರದಂತೆ ನೀನು ಆ ಕೆಲಸವನ್ನು ಮಾಡಬೇಕು.

ವೇಶ್ಮನ್ಯೇವಂ ಕೃತೇ ತತ್ರ ಕೃತ್ವಾ ತಾನ್ ಪರಮಾರ್ಚಿತಾನ್ ।
ವಾಸಯೇಥಾಃ ಪಾಂಡವೇಯಾನ್ ಕುಂತೀಂ ಚ ಸಸುಹೃಜ್ಜನಾಮ್ ॥

ಹೀಗೆ ಮನೆಯನ್ನು ಕಟ್ಟಿ ಅಲ್ಲಿ ಪಾಂಡವರನ್ನೂ, ಕುಂತಿಯನ್ನೂ, ಅವರ ಬಂಧುಗಳನ್ನೂ ವಾಸಿಸುವಂತೆ ಮಾಡಿ ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕು.

ತತ್ರಾಸನಾನಿ ಮುಖ್ಯಾನಿ ಯಾನಾನಿ ಶಯನಾನಿ ಚ ।
ವಿಧಾತವ್ಯಾನಿ ಪಾಂಡೂನಾಂ ಯಥಾ ತುಷ್ಯೇಚ್ಚ ಮೇ ಪಿತಾ ॥೧೫॥

ಆ ಮನೆಯಲ್ಲಿ ಶ್ರೇಷ್ಠವಾದ ಆಸನಗಳನ್ನೂ, ವಾಹನಗಳನ್ನೂ, ಶಯನಗಳನ್ನೂ ಪಾಂಡವರಿಗೆ ಕಲ್ಪಿಸಿ ನನ್ನ ತಂದೆಯಾದ ಧೃತರಾಷ್ಟ್ರನಿಗೆ ಸಂತೋಷವಾಗುವಂತೆ ಮಾಡಬೇಕು.

ತತೋ ರಮೇರನ್ ವಿಶ್ವಸ್ತಾ ನಗರೇ ವಾರಣಾವತೇ ।
ತಥಾ ಸರ್ವಂ ವಿಧಾತವ್ಯಂ ಯಾವತ್ ಕಾಲಸ್ಯ ಪರ್ಯಯಃ ॥೧೬॥

ಕಾಲಚಕ್ರವು ತಿರುಗುವವರೆಗೆ ವಾರಣಾವತನಗರದಲ್ಲಿ ಅವರು ಎಲ್ಲರನ್ನೂ ನಂಬಿ ವಿಹರಿಸುವಂತೆ ಎಲ್ಲವನ್ನೂ ಮಾಡಬೇಕು.

ಜ್ಞಾತ್ವಾ ಪರಮವಿಶ್ವಸ್ತಾನ್ ನಿತರಾಮಕುತೋಭಯಾನ್ ।
ಅಗ್ನಿಸ್ತತ್ರ ತ್ವಯಾ ದೇಯೋ ದ್ವಾರತಸ್ತಸ್ಯ ವೇಶ್ಮನಃ ॥೧೭॥

ಅವರು ಪರಮ ವಿಶ್ವಾಸದಿಂದ ಕೂಡಿದವರಾಗಿ ಯಾರನ್ನೂ ಶಂಕಿಸುವುದಿಲ್ಲವೆಂದು ತಿಳಿದಾಗ ನೀನು ಆ ಗೃಹದ ದ್ವಾರದೇಶದಲ್ಲಿ ಬೆಂಕಿಯನ್ನು ಕೊಡಬೇಕು.

ದಗ್ಧಾನೇವಂ ಸ್ವಕೇ ಗೇಹೇ ದಗ್ಧಾ ಇತಿ ತತೋ ಜನಾಃ ।
ಜ್ಞಾತಯೋ ನ ವದಿಷ್ಯಂತಿ ಪಾಂಡವಾರ್ಥಾಯ ಕರ್ಹಿಚಿತ್ ॥೧೮॥

ತಮ್ಮ ಮನೆಯಲ್ಲಿಯೇ ಸುಟ್ಟು ಹೋದ ಅವರನ್ನು ಪಾಂಡವರ ಮೇಲೆ ಪ್ರೀತಿಯುಳ್ಳ ಜನರು ನಾವು ಪಾಂಡವರನ್ನು ಸುಡಿಸಿದೆವು ಎಂದು ಎಂದೂ ಹೇಳುವುದಿಲ್ಲ.

ವೈಶಂಪಾಯನಃ

ಸ ತಥೇತಿ ಪ್ರತಿಜ್ಞಾಯ ಕೌರವಾಯ ಪುರೋಚನಃ ।
ಪ್ರಾಯಾದ್ ರಾಸಭಯುಕ್ತೇನ ನಗರಂ ವಾರಣಾವತಮ್ ॥೧೯॥

ಪುರೋಚನನು ''ಹಾಗೆಯೇ ಆಗಲಿ'' ಎಂದು ಪ್ರತಿಜ್ಞೆಮಾಡಿ ರಾಸಭಯುಕ್ತ ರಥದಿಂದ ವಾರಣಾವತಕ್ಕೆ ಹೋದನು.

ಸ ಗತ್ವಾ ತ್ವರಿತಂ ರಾಜನ್ ದುರ್ಯೋಧನಮತೇ ಸ್ಥಿತಃ ।
ಯಥೋಕ್ತಂ ರಾಜಪುತ್ರೇಣ ತಥಾ ಚಕ್ರೇ ಪುರೋಚನಃ ॥೨೦॥

ರಾಜನೇ, ದುರ್ಯೋಧನನ ಅಭಿಪ್ರಾಯದಂತೆ ಅವನು ವಾರಣಾವತಕ್ಕೆ ಹೋಗಿ ರಾಜಕುಮಾರನು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು.

ಯಥಾऽऽಜ್ಞಪ್ತಂ ನೃಪತಿನಾ ಕೌರವೇಣ ಯಶಸ್ವಿನಾ ।
ದಾಹಾರ್ಥಂ ಪಾಂಡವೇಯಾನಾಂ ಗೃಹಂ ರೌದ್ರಮಕಾರಯತ್ ॥೨೧॥

ಕೀರ್ತಿವಂತನಾದ ಕೌರವರಾಜನಿಂದ ಆದಿಷ್ಟನಾದ ರೀತಿಯಲ್ಲಿಯೇ ಪಾಂಡುಪುತ್ರರನ್ನು ಸುಡಲು ಒಂದು ಭಯಂಕರಗೃಹವನ್ನು ನಿರ್ಮಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಚತುಶ್ಚತ್ವಾರಿಂಶತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಜತುಗೃಹದಾಹಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರನಲವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ನೂರನಲವತ್ತೈದನೆಯ ಅಧ್ಯಾಯ

(ವಾರಣಾವತಕ್ಕೆ ಯುಧಿಷ್ಠಿರಾದಿಗಳ ಪ್ರಯಾಣ, ಪೌರರ ಅನುಗಮನ ಮತ್ತು ಪ್ರತಿನಿವೃತ್ತಿ, ಮ್ಲೇಚ್ಛಭಾಷೆಯಿಂದ ವಿದುರನ ಉಪದೇಶ)

ವೈಶಂಪಾಯನಃ

ಪಾಂಡವಾಸ್ತು ರಥಾನ್ ಯುಕ್ತ್ವಾ ಸದಶ್ವೈರನಿಲೋಪಮೈಃ ।
ಪ್ರಯಾಸ್ಯಂತಸ್ತು ಭೀಷ್ಮಸ್ಯ ಪಾದೌ ಜಗೃಹುರಾರ್ತವತ್ ॥೧॥

ಪಾಂಡವರು ವಾಯುವೇಗವುಳ್ಳ ಅಶ್ವಗಳನ್ನು ರಥಕ್ಕೆ ಹೂಡಿ ಹೊರಡುವವರಾಗಿ ಭೀಷ್ಮರ ಸಮೀಪಕ್ಕೆ ಹೋಗಿ ಆರ್ತರಂತೆ ಅವರ ಪಾದಗಳಿಗೆ ನಮಸ್ಕರಿಸಿದರು.

ರಾಜ್ಞಶ್ಚ ಧೃತರಾಷ್ಟ್ರಸ್ಯ ದ್ರೋಣಸ್ಯ ಚ ಮಹಾತ್ಮನಃ ।
ಅನ್ಯೇಷಾಂ ಚೈವ ವೃದ್ಧಾನಾಂ ವಿದುರಸ್ಯ ಕೃಪಸ್ಯ ಚ ॥೨॥

ಧೃತರಾಷ್ಟ್ರರಾಜನ, ಮಹಾತ್ಮರಾದ ದ್ರೋಣರ, ಉಳಿದ ವೃದ್ಧರ, ಕೃಪಾಚಾರ್ಯರ ಮತ್ತು ವಿದುರರ ಪಾದಗಳಿಗೂ ನಮಸ್ಕರಿಸಿದರು.

ಏವಂ ಸರ್ವಾನ್ ಕುರೂನ್ ವೃದ್ಧಾನಭಿವಾದ್ಯ ಧೃತವ್ರತಾಃ ।
ಸಮಾಲಿಂಗ್ಯ ಸಮಾಂಶ್ಚಾಪಿ ಬಾಲೈಶ್ಚಾಪ್ಯಭಿವಾದಿತಾಃ ॥೩॥

ಹೀಗೆ ಧೃತವ್ರತರಾದ ಪಾಂಡವರು ಎಲ್ಲಾ ಕುರುಗಳಿಗೂ ಮತ್ತು ವೃದ್ಧರಿಗೂ ನಮಸ್ಕರಿಸಿ, ಸಮಾನರಾದವರನ್ನು ಆಲಿಂಗಿಸಿ, ತಮಗಿಂತ ಚಿಕ್ಕವರಿಂದ ನಮಸ್ಕರಿಸಲ್ಪಟ್ಟರು.

ಸರ್ವಾನನ್ಯಾಂಸ್ತಥಾऽऽಪೃಚ್ಛ್ಯ ಯಥಾರ್ಹಮಮಿತೌಜಸಃ ।
ಶೋಚಂತಃ ಕೃಪಣಾಃ ಸರ್ವೇ ಕುರೂನ್ ಕೃತ್ವಾ ಪ್ರದಕ್ಷಿಣಮ್ ।
ಪ್ರಕೃತೀರಪಿ ಸರ್ವಾಶ್ಚ ಪ್ರಯಯುರ್ವಾರಣಾವತಮ್ ॥೪॥

ಅಮಿತಪರಾಕ್ರಮಿಗಳಾದ ಅವರು ಯಥೋಚಿತವಾಗಿ ಉಳಿದವರಿಗೆ ವಿದಾಯವನ್ನು ಹೇಳಿ, ಶೋಕ ಪಡುತ್ತಾ ಕೃಪಣರಾಗಿ ಕುರುದೇಶಕ್ಕೆ ಪ್ರದಕ್ಷಿಣೆಯನ್ನು ಮಾಡಿ, ಎಲ್ಲಾ ಪ್ರಜೆಗಳಿಗೂ ಪ್ರದಕ್ಷಿಣೆಯನ್ನು ಮಾಡಿ ವಾರಣಾವತಕ್ಕೆ ಹೊರಟರು.

ವಿದುರಶ್ಚ ಮಹಾಪ್ರಾಜ್ಞಸ್ತಥಾಽನ್ಯೇ ಕುರುಪುಂಗವಾಃ ।
ಪೌರಾಶ್ಚ ಪುರುಷವ್ಯಾಘ್ರಾನನ್ವಯುಃ ಶೋಕಕರ್ಶಿತಾಃ ।
ಶೋಚಮಾನಾಃ ಪಾಂಡುಪುತ್ರಾನತೀವ ಭರತರ್ಷಭ ॥೫॥

ಎಲೈ ಭರತರ್ಷಭನೇ, ಮಹಾಪ್ರಾಜ್ಞನಾದ ವಿದುರನೂ, ಉಳಿದ ಕುರುಶ್ರೇಷ್ಠರೂ, ಶೋಕತಪ್ತರಾದ ಪೌರರೂ ಸಹ, ಪಾಂಡು ಪುತ್ರರನ್ನು ಕುರಿತು ದುಃಖವನ್ನು ಪಡುತ್ತಾ ಪುರುಷವ್ಯಾಘ್ರರಾದ ಅವರನ್ನು ಹಿಂಬಾಲಿಸಿದರು.

ತತಃ ಕೇಚಿಚ್ಚಾವದನ್ ಸ್ಮ ಬ್ರಾಹ್ಮಣಾ ನಿರ್ಭಯಾಸ್ತದಾ ।
ಧೃತರಾಷ್ಟ್ರೋ ಮಹೀಪಾಲೋ ನ ಚ ಧರ್ಮಂ ಪ್ರಪಶ್ಯತಿ ॥೬॥

ಆಗ ನಿರ್ಭಯರಾದ ಕೆಲವು ಬ್ರಾಹ್ಮಣರು ರಾಜನಾದ ಧೃತರಾಷ್ಟ್ರನಿಗೆ ಧರ್ಮವು ಕಾಣಿಸುತ್ತಿಲ್ಲ ಎಂದು ಹೇಳಿದರು.

ನ ಹಿ ಪಾಪಮಪಾಪಾತ್ಮಾ ರೋಚಯಿಷ್ಯತಿ ಪಾಂಡವಃ ।
ಭೀಮೋ ವಾ ಬಲಿನಾಂ ಶ್ರೇಷ್ಠಃ ಕೌಂತೇಯೋ ವಾ ಧನಂಜಯಃ ॥೭॥

ಪಾಪವನ್ನು ಎಂದೂ ಚಿಂತಿಸದಿದ್ದ ಧರ್ಮರಾಜನಾಗಲೀ, ಬಲವಂತರಲ್ಲಿ ಶ್ರೇಷ್ಠನಾದ ಭೀಮನಾಗಲೀ ಅಥವಾ ಕುಂತೀಪುತ್ರನಾದ ಧನಂಜಯನಾಗಲೀ ಪಾಪವನ್ನು ಯೋಚಿಸುವುದಿಲ್ಲ.

ಕುತ ಏವ ಮಹಾಪ್ರಾಜ್ಞೌ ಮಾದ್ರೀಪುತ್ರೌ ಕರಿಷ್ಯತಃ ।
ಯದ್ ರಾಜ್ಯಂ ಪಿತೃತಃ ಪ್ರಾಪ್ತಂ ಧೃತರಾಷ್ಟ್ರಃ ಪ್ರಬಾಧತೇ ॥೮॥

ಮಹಾಪ್ರಾಜ್ಞರಾದ ಮಾದ್ರೀಪುತ್ರರಾದ ನಕುಲಸಹದೇವರು ಹೇಗೆ ಕೆಟ್ಟದ್ದನ್ನು ಯೋಚನೆ ಮಾಡುತ್ತಾರೆ? ಪಾಂಡವರಿಗೆ ತಂದೆಯಿಂದ ನ್ಯಾಯವಾಗಿ ಬಂದ ರಾಜ್ಯವನ್ನು ಧೃತರಾಷ್ಟ್ರನು ಬಾಧಿಸುತ್ತಿದ್ದಾನೆ.

ಅಧರ್ಮವಿಪುಲಂ ಕಿಂತು ಭೀಷ್ಮೋಽಯಮನುವರ್ತತೇ ।
ವಿವಾಸ್ಯಮಾನಾನಸ್ಥಾನೇ ಸ ಕೌಂತೇಯಾನ್ ನರರ್ಷಭಾನ್ ॥೯॥

ಇದರಲ್ಲಿ ಬಹಳ ಅಧರ್ಮವಿದೆ. ಆದರೆ, ಪುರುಷಶ್ರೇಷ್ಠರಾದ ಕೌಂತೇಯರನ್ನು ಅನುಚಿತವಾಗಿ ನಗರದಿಂದ ಹೊರಗೆ ಕಳುಹಿಸುವುದನ್ನು, ಈ ಭೀಷ್ಮನೂ ಅನುಮೋದಿಸುತ್ತಿದ್ದಾನೆ.

ಪಿತೇವ ಹಿ ಸಮೋಽಸ್ಮಾಕಮಭೂಚ್ಚಾಂತನವಃ ಪುರಾ ।
ವಿಚಿತ್ರವೀರ್ಯೋ ರಾಜರ್ಷಿಃ ಪಾಂಡುಶ್ಚ ಕುರುನಂದನಃ ॥೧೦॥

ಹಿಂದೆ ಶಂತನುವಿನ ಮಗನಾದ ಭೀಷ್ಮನು ನಮಗೆಲ್ಲರಿಗೂ ತಂದೆಯಂತೆ ಸಮವಾಗಿದ್ದನು. ರಾಜರ್ಷಿಯಾದ ವಿಚಿತ್ರವೀರ್ಯನೂ ಕುರುನಂದನನಾದ ಪಾಂಡುವೂ ಹಾಗೆಯೇ ಇದ್ದರು.

ಸ ತಸ್ಮಿನ್ ಪುರುಷವ್ಯಾಘ್ರೇಽದೃಷ್ಟಭಾವಂ ಗತೇ ಸತಿ ।
ರಾಜಪುತ್ರಾನಿಮಾನ್ ಬಾಲಾನ್ ಧೃತರಾಷ್ಟ್ರೋ ನ ಮೃಷ್ಯತಿ ॥೧೧॥

ಆದರೆ ಪುರುಷವ್ಯಾಘ್ರನಾದ ಆ ಪಾಂಡುವು ಸ್ವರ್ಗಸ್ಥನಾದ ಮೇಲೆ ಧೃತರಾಷ್ಟ್ರನು ಈ ಬಾಲಕರಾದ ರಾಜಕುಮಾರರನ್ನು ನೋಡಿ ಸಹಿಸುತ್ತಿಲ್ಲ.

ತೇ ವಯಂ ಸರ್ವಮೇವೇದಂ ತ್ಯಕ್ತ್ವಾ ಹ್ಯಾಶು ಪುರೋತ್ತಮಮ್ ।
ದಾರಾನಾದಾಯ ಗಚ್ಛಾಮೋ ಯತ್ರ ಯಾತಿ ಯುಧಿಷ್ಠಿರಃ ॥೧೨॥

ನಾವೆಲ್ಲರೂ ಈ ಶ್ರೇಷ್ಠವಾದ ಪಟ್ಟಣವನ್ನೂ ನಮ್ಮ ಎಲ್ಲಾ ಆಸ್ತಿಯನ್ನೂ ಬಿಟ್ಟು ಪತ್ನಿಯರನ್ನು ಕರೆದುಕೊಂಡು ಯುಧಿಷ್ಠಿರನು ಎಲ್ಲಿಗೆ ಹೋಗುತ್ತಾನೋ ಅಲ್ಲಿಗೇ ಹೋಗೋಣ.

ವೈಶಂಪಾಯನಃ

ತಾಂಸ್ತಥಾವಾದಿನಃ ಪೌರಾನ್ ದುಃಖಿತಾನ್ ಶೋಕಕರ್ಶಿತಾನ್ ।
ಉವಾಚ ಪರಮಪ್ರೀತೋ ಧರ್ಮರಾಜೋ ಯುಧಿಷ್ಠಿರಃ ॥೧೩॥

ಧರ್ಮರಾಜನಾದ ಯುಧಿಷ್ಠಿರನು ಪೌರರು ದುಃಖಶೋಕಗಳಿಂದ ಕರ್ಶಿತರಾಗಿ ಹಾಗೆ ಮಾತನಾಡುವುದನ್ನು ಕೇಳಿ ಪರಮಸಂತೋಷದಿಂದ ಅವರನ್ನು ಕುರಿತು ಮಾತನಾಡಿದನು.

ಪಿತಾ ಮಾನ್ಯೋ ಗುರುಃ ಶ್ರೇಷ್ಠೋ ಯದಾಹ ಪೃಥಿವೀಪತಿಃ ।
ಅಶಂಕಮಾನೈಸ್ತತ್ಕಾರ್ಯಮಸ್ಮಾಭಿರಿತಿ ನೋ ವ್ರತಮ್ ॥೧೪॥

ನಮ್ಮ ತಂದೆಯೂ, ಗುರುವೂ, ಶ್ರೇಷ್ಠನಾದ ರಾಜನೂ ಆದ ಧೃತರಾಷ್ಟ್ರನ ಆದೇಶವನ್ನು ನಾವು ಶಂಕೆಯಿಲ್ಲದೇ ಅನುಷ್ಠಾನ ಮಾಡಬೇಕು. ಇದು ನಮ್ಮ ವ್ರತ.

ಭವಂತಃ ಸುಹೃದೋಽಸ್ಮಾಕಮಸ್ಮಾನ್ ಕೃತ್ವಾ ಪ್ರದಕ್ಷಿಣಮ್ ।
ಆಶೀರ್ಭಿರಭಿನಂದ್ಯಾಸ್ಮಾನ್ ನಿವರ್ತಧ್ವಂ ಯಥಾಗೃಹಮ್ ॥೧೫॥

ನೀವೆಲ್ಲರೂ ನಮ್ಮಲ್ಲಿ ಸೌಹಾರ್ದವುಳ್ಳವರು. ನೀವು ನಮ್ಮನ್ನು ಪ್ರದಕ್ಷಿಣೆ ಮಾಡಿ ಆಶೀರ್ವಾದಗಳಿಂದ ನಮಗೆ ಶುಭವನ್ನು ಕೋರಿ ನಿಮ್ಮ ಮನೆಗಳಿಗೆ ಹಿಂದಿರುಗಿ.

ಯದಾ ತು ಕಾರ್ಯಮಸ್ಮಾಕಂ ಭವದ್ಭಿರುಪಪದ್ಯತೇ ।
ತದಾ ಕರಿಷ್ಯಥ ಮಮ ಪ್ರಿಯಾಣಿ ಚ ಹಿತಾನಿ ಚ ॥೧೬॥

ನಮಗೆ ನಿಮ್ಮಿಂದ ಏನಾದರೂ ಕಾರ್ಯವಾಗಬೇಕಾದಾಗ ಅಂತಹ ಹಿತವಾದ ಮತ್ತು ಪ್ರಿಯವಾದ ಕಾರ್ಯಗಳನ್ನು ಮಾಡಿಕೊಡಿ.

ವೈಶಂಪಾಯನಃ

ತೇ ತಥೇತಿ ಪ್ರತಿಜ್ಞಾಯ ಕೃತ್ವಾ ವೈ ತಾನ್ ಪ್ರದಕ್ಷಿಣಮ್ ।
ಆಶೀರ್ಭಿಶ್ಚಾಭಿನಂದ್ಯೈತಾನ್ ಜಗ್ಮುರ್ನಗರಮೇವ ಹ ॥೧೭॥

ಪೌರರು ''ಹಾಗೆಯೇ ಆಗಲಿ'' ಎಂದು ಪ್ರತಿಜ್ಞೆಯನ್ನು ಮಾಡಿ ಪಾಂಡವರಿಗೆ ಪ್ರದಕ್ಷಿಣೆಯನ್ನು ಮಾಡಿ, ಆಶೀರ್ವಾದಗಳಿಂದ ಅವರನ್ನು ಅಭಿನಂದಿಸಿ ಹಸ್ತಿನಪುರಕ್ಕೆ ತೆರಳಿದರು.

ಪೌರೇಷು ತು ನಿವೃತ್ತೇಷು ವಿದುರಃ ಸರ್ವಧರ್ಮವಿತ್ ।
ಅನುಗಚ್ಛನ್ ಸ ಕೌಂತೇಯಂ ಬೋಧಯಂಶ್ಚೇದಮಬ್ರವೀತ್ ॥೧೮॥

ಪೌರರು ನಿವೃತ್ತರಾದ ಮೇಲೆ, ಸರ್ವಧರ್ಮಗಳನ್ನೂ ತಿಳಿದ ವಿದುರನು ಪಾಂಡವರ ಹಿಂದೆ ಹೋಗುತ್ತಾ ಕೌಂತೇಯನನ್ನು ಎಚ್ಚರಿಸುವವನಾಗಿ ಈ ಮಾತನ್ನು ಆಡಿದನು.

ವಿದುರಃ

ಪ್ರಾಜ್ಞಃ ಪ್ರಾಜ್ಞಪ್ರಲಾಪಜ್ಞಃ ಸಮ್ಯಗ್ಧರ್ಮಾರ್ಥದರ್ಶಿವಾನ್ ।
ವಿಜ್ಞಾಯೇದಂ ತಥಾ ಕುರ್ಯಾದ್ ಆಪದಂ ನಿಸ್ತರೇದ್ ಯಯಾ ॥

ಸ್ವಯಂ ಕುಶಲನೂ, ಸಂಕೇತವಚನಗಳಿಂದ ಮಾಡಿದ ಸೂಚನೆಯನ್ನು ತಿಳಿದುಕೊಳ್ಳವವನೂ, ಧರ್ಮಾರ್ಥಗಳ ಸರಿಯಾದ ಜ್ಞಾನ ಇರುವವನೂ, ನನ್ನ ಈ ಮಾತುಗಳ ಅರ್ಥವನ್ನು ತಿಳಿದು ಆಪತ್ತಿನಿಂದ ಚೆನ್ನಾಗಿ ಪಾರಾಗಬೇಕು. (ಇದು ಧರ್ಮರಾಜನನ್ನು ಕುರಿತು ಆಡಿದ ವಚನ.)

ಅಲೋಹಂ ನಿಶಿತಂ ಶಸ್ತ್ರಂ ಶರೀರಪರಿಕೃಂತನಮ್ ।
ಯೇ ವಿದಂತಿ ನ ತಾನ್ ಘ್ನಂತಿ ಪ್ರತಿಘಾತವಿದಸ್ತಥಾ ॥೨೦॥

ಲೋಹಮಯವಲ್ಲದ, ಶರೀರವನ್ನು ಕತ್ತರಿಸುವ ಹರಿತವಾದ ಶಸ್ತ್ರವನ್ನು ಯಾರು ತಿಳಿಯುತ್ತಾರೋ, ಅವರನ್ನು ಪ್ರತಿಘಾತವನ್ನು ಮಾಡಲು ಬಯಸುವ ಶತ್ರುಗಳು ಕೊಲ್ಲಲು ಸಾಧ್ಯವಿಲ್ಲ. (ಇದು ವಿಷದಿಂದ ಜಾಗರೂಕರಾಗಿರಬೇಕು ಎಂದು ಸೂಚನೆ.)

ಕಕ್ಷಘ್ನಂ ಶಿಶಿರಘ್ನಂ ಚ ಮಹಾಕುಕ್ಷಿಬಲೌಜಸಮ್ ।
ನ ಸಹೇತೇತಿ ಚಾತ್ಮಾನಂ ಯೋ ರಕ್ಷತಿ ಸ ಜೀವತಿ ॥೨೧॥

ವನವನ್ನು ಸುಡುವ, ಹಿಮವನ್ನು ನಾಶ ಮಾಡುವ, ಕುಕ್ಷಿಯಲ್ಲಿದ್ದು, ಬಲ ಮತ್ತು ತಡೆಯುವ ಸಾಮರ್ಥ್ಯವನ್ನು ಕೊಡುವ (ಅಗ್ನಿಯನ್ನು) ಈ ಮನುಷ್ಯ ಶರೀರವು ಸಹಿಸಲಾರದು ಎಂದು ತಿಳಿದು ಯಾರು ತನ್ನನ್ನು ರಕ್ಷಿಸಿಕೊಳ್ಳುತ್ತಾನೋ ಅವನು ಬದುಕುತ್ತಾನೆ. (ಇದು ಅಗ್ನಿಯಿಂದ ಎಲ್ಲರನ್ನೂ ರಕ್ಷಿಸಬೇಕೆಂದು ಭೀಮನಿಗೆ ಸೂಚನೆ)

ನಾಚಕ್ಷುರ್ವೇತ್ತಿ ಪಂಥಾನಂ ನಾಚಕ್ಷುರ್ವೇತ್ತಿ ವೈ ದಿಶಃ ।
ನಾಧೃತಿರ್ಭೂತಿಮಾಪ್ನೋತಿ ಬುದ್ಧ್ಯಸ್ವೈನಂ ಪ್ರಬೋಧಿತಃ ॥೨೨॥

ಅಂಧನಾದವನು ದಾರಿಯನ್ನು ತಿಳಿಯುವುದಿಲ್ಲ. ಅಂಧನಾದವನು ದಿಕ್ಕುಗಳನ್ನೂ ತಿಳಿಯುವುದಿಲ್ಲ. ಧೈರ್ಯವಿಲ್ಲದವನು ಎಂದೂ ಐಶ್ವರ್ಯವನ್ನು ಹೊಂದುವುದಿಲ್ಲ. ನನ್ನ ಈ ಎಚ್ಚರಿಕೆಯ ಮಾತುಗಳನ್ನು ತಿಳಿದುಕೋ. (ಇದು ಮಾರ್ಗವನ್ನೂ, ದಿಕ್ಕುಗಳನ್ನೂ ತಿಳಿದುಕೊಂಡು ಹಸ್ತಿನಪುರದ ಮಾರ್ಗವನ್ನು ಹಿಡಿಯದೇ ಬೇರೆ ಮಾರ್ಗದಲ್ಲಿ ಹೋಗಬೇಕು ಎಂದು ಭೀಮನಿಗೆ ಸೂಚನೆ.)

ನಾನಾಪ್ತೈರ್ದತ್ತಮಾದತ್ತೇ ಧೀರಃ ಶಸ್ತ್ರಮಲೋಹಜಮ್ ।
ಶ್ವಾವಿಚ್ಛರಣಮಾಸಾದ್ಯ ಪ್ರಮುಚ್ಯೇತ ಹುತಾಶನಾತ್ ॥೨೩॥

ಧೀರನಾದವನು ಅನಾಪ್ತರು ಕೊಟ್ಟ ಲೋಹಮಯವಲ್ಲದ ಶಸ್ತ್ರವನ್ನು ಸ್ವೀಕರಿಸುವುದಿಲ್ಲ. ಮುಳ್ಳುಹಂದಿಯ ವಾಸವನ್ನು ತಲುಪಿದವನು ಅಗ್ನಿಯಿಂದ ಬಿಡುಗಡೆ ಹೊಂದುತ್ತಾನೆ. (ಅನಾಪ್ತರು ಕೊಟ್ಟ ವಿಷಮಿಶ್ರಿತವಾದ ಆಹಾರವನ್ನು ಸ್ವೀಕರಿಸಬಾರದು. ಅಗ್ನಿಭಯ ಉಂಟಾದಾಗ ಬಿಲದ ಮೂಲಕ ನಿರ್ಗಮಿಸಬೇಕು ಎಂದು ಭೀಮನಿಗೆ ಸೂಚನೆ.)

ಪರಂ ಮಾರ್ಗಾನ್ ವಿಜಾನಾತಿ ನಕ್ಷತ್ರೈರ್ವಿಂದತೇ ದಿಶಃ ।
ಆತ್ಮನಾ ಚಾತ್ಮನಃ ಪಂಚ ಪೀಡಯನ್ ನ ಸ ಪೀಡ್ಯತೇ ॥೨೪॥

ನಕ್ಷತ್ರಗಳ ಬೆಳಕಿನಿಂದ ಮಾರ್ಗವನ್ನು ತಿಳಿಯುತ್ತಾನೆ, ಅಭೀಷ್ಟವಾದ ದಿಕ್ಕುಗಳನ್ನೂ ಹೊಂದುತ್ತಾನೆ. ತಾನಾಗಿಯೇ ತನ್ನ ಸಂಬಂಧಿಯಾದ ಐವರನ್ನು ಪೀಡಿಸುವವನು ಪೀಡೆಗೆ ಒಳಗಾಗುವುದಿಲ್ಲ. (ರಾತ್ರಿವೇಳೆಯಲ್ಲಿ ನಕ್ಷತ್ರಗಳನ್ನು ಗಮನಿಸಿ, ಮಾರ್ಗಗಳನ್ನೂ ಮತ್ತು ದಿಕ್ಕುಗಳನ್ನೂ ತಿಳಿಯಬೇಕು. ತಮ್ಮ ಪ್ರತಿನಿಧಿಗಳಂತಿರುವ ಪುರೋಚನನ ಸಹೋದರಿಯ ಐದು ಮಕ್ಕಳನ್ನು ಪೀಡಿಸುವವನು ತಾನು ಪೀಡೆಗೆ ಒಳಗಾಗುವುದಿಲ್ಲ. ಅಥವಾ ತನ್ನ ಸಂಬಂಧಿಯಾದ ಐದು ಜ್ಞಾನೇಂದ್ರಿಯಗಳನ್ನೂ ಮತ್ತು ಐದು ಕರ್ಮೇಂದ್ರಿಯಗಳನ್ನೂ ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡವನು ಪೀಡೆಗೆ ಒಳಗಾಗುವುದಿಲ್ಲ ಎಂದು ಭೀಮನಿಗೆ ಸೂಚನೆ.)

ವೈಶಂಪಾಯನಃ

ಅನುಶಿಷ್ಯಾ ಚ ಗತ್ವಾ ಚ ಕೃತ್ವಾ ಚೈತಾನ್ ಪ್ರದಕ್ಷಿಣಮ್ ।
ಅಭಿವಾದ್ಯ ಪುನಃ ಕುಂತೀಂ ರುದನ್ ಪಾಂಡುಮಚಿಂತಯತ್ ।
ಪಾಂಡವಾನಾಭ್ಯನುಜ್ಞಾಯ ವಿದುರಃ ಪ್ರತ್ಯಯಾದ್ ಗೃಹಾನ್ ॥೨೫॥

ವಿದುರನು ಪಾಂಡವರಿಗೆ ಹೀಗೆ ಉಪದೇಶ ಮಾಡಿ ಅವರಿಗೆ ಪ್ರದಕ್ಷಿಣೆಯನ್ನು ಮಾಡಿ ಕುಂತಿಗೆ ನಮಸ್ಕಾರವನ್ನು ಮಾಡಿ, ಪಾಂಡುವನ್ನು ಚಿಂತಿಸಿ ಅಳುತ್ತಾ ಪಾಂಡವರ ಅನುಮತಿಯನ್ನು ಪಡೆದು ತನ್ನ ಮನೆಗೆ ಹಿಂದಿರುಗಿದನು.

ನಿವೃತ್ತೇ ವಿದುರೇ ಚಾಪಿ ಭೀಷ್ಮೇ ಪೌರಜನೇ ತಥಾ ।
ಅಜಾತಶತ್ರುಮಾಮಂತ್ರ್ಯ ಕುಂತೀ ವಚನಮಬ್ರವೀತ್ ॥೨೬॥

ವಿದುರನೂ, ಭೀಷ್ಮರೂ ಮತ್ತು ಪೌರಜನರು ಹಿಂದಿರುಗುತ್ತಿರಲು ಕುಂತಿಯು ಯುಧಿಷ್ಠಿರನನ್ನು ಕರೆದು ಮಾತನಾಡಿದಳು.

ಕ್ಷತ್ತಾ ಯದಬ್ರವೀದ್ ವಾಕ್ಯಂ ಜನಮಧ್ಯೇಽಬ್ರುವನ್ನಿವ ।
ತ್ವಯಾ ಚ ತತ್ತಥೇತ್ಯುಕ್ತಂ ಜಾನೀಮೋ ನ ಚ ತದ್ ವಯಮ್ ॥೨೭॥

ಯದಿ ತಚ್ಚಕ್ಯಮಸ್ಮಾಭಿಃ ಶ್ರೋತುಂ ನ ಚ ನ ದೋಷವತ್ ।
ಶ್ರೋತುಮಿಚ್ಛಾಮಿ ತತ್ ಸರ್ವಂ ಸಂವಾದಂ ತವ ತಸ್ಯ ಚ ॥೨೮॥

ಧರ್ಮರಾಜನೇ, ಜನಗಳ ಮಧ್ಯದಲ್ಲಿ ವಿದುರನು ಮಾತನಾಡಿದರೂ ಮಾತನಾಡದವನಂತೆ ನಿನಗೆ ಏನನ್ನೋ ಹೇಳಿದನು. ನೀನು ''ಹಾಗೆಯೇ ಆಗಲಿ'' ಎಂದು ಹೇಳಿದೆ. ನಾವು ಅದನ್ನು ತಿಳಿಯಬಹುದಾದರೆ ತಿಳಿಯುವುದರಿಂದ ದೋಷವಿಲ್ಲದಿದ್ದರೆ ನಿನ್ನ ಮತ್ತು ವಿದುರನ ಸಂವಾದವನ್ನು ಕೇಳಲು ಇಷ್ಟಪಡುತ್ತೇನೆ.

ಯುಧಿಷ್ಠಿರಃ

ವಿಷಾದಗ್ನೇಶ್ಚ ಬೋದ್ಧವ್ಯಮಿತಿ ಮಾಂ ವಿದುರೋಽಬವೀತ್ ।
ಪಂಥಾಶ್ಚ ವಿದಿತಃ ಕಶ್ಚಿತ್ ಸ್ಯಾತ್ ಶುದ್ಧ ಇತಿ ಚಾಬ್ರವೀತ್ ॥೨೯॥

ವಿಷದಿಂದಲೂ, ಅಗ್ನಿಯಿಂದಲೂ ಜಾಗರೂಕರಾಗಿರಬೇಕು. ಶುದ್ಧವಾದ ಮಾರ್ಗಗಳನ್ನು ತಿಳಿದುಕೊಂಡಿರಬೇಕು ಎಂದು ವಿದುರನು ನನಗೆ ಹೇಳಿದನು.

ಜಿತೇಂದ್ರಿಯಶ್ಚ ವಸುಧಾಂ ಪ್ರಾಪ್ಸ್ಯತೀತಿ ವಚೋಽಬ್ರವೀತ್ ।
ವಿಜ್ಞಾತಮಿತಿ ತತ್ ಸರ್ವಂ ಪ್ರತ್ಯುಕ್ತೋ ವಿದುರೋ ಮಯಾ ॥೩೦॥

ಜಿತೇಂದ್ರಿಯನಾದವನು ಭೂಮಿಯನ್ನು ಪಡೆಯುವನು ಎಂದೂ ಹೇಳಿದನು. ''ಅರ್ಥವಾಯಿತು'' ಎಂದು ನಾನು ಅವನಿಗೆ ಉತ್ತರವನ್ನು ಕೊಟ್ಟೆ.

ವೈಶಂಪಾಯನಃ

ಅಷ್ಟಮೇಽಹನಿ ರೋಹಿಣ್ಯಾಂ ಪ್ರಯಾತಾಃ ಫಲ್ಗುನಸ್ಯ ತೇ ।
ವಾರಣಾವತಮಾಸಾದ್ಯ ದದೃಶುರ್ನಾಗರಂ ಜನಮ್ ॥೩೧॥

ಫಾಲ್ಗುನ ಮಾಸದ ಎಂಟನೆಯ ದಿವಸ ರೋಹಿಣಿ ನಕ್ಷತ್ರದಲ್ಲಿ ಆ ಪಾಂಡವರು ಹೊರಟು ವಾರಣಾವತವನ್ನು ತಲುಪಿ ಅಲ್ಲಿಯ ಪುರಜನರನ್ನು ನೋಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚಚತ್ವಾರಿಂಶತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಜತುಗೃಹದಾಹಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರನಲವತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ನೂರ ನಲವತ್ತಾರನೆಯ ಅಧ್ಯಾಯ

(ವಾರಣಾವತನಿವಾಸಿಗಳಿಂದ ಪಾಂಡವರ ಸತ್ಕಾರ ಮತ್ತು ಸ್ವೀಕಾರ, ಹತ್ತು ದಿನಗಳು ಕಳೆದ ಮೇಲೆ ಜತುಗೃಹಪ್ರವೇಶ, ಭೀಮ ಯುಧಿಷ್ಠಿರರಿಗೆ ಗೃಹದ ಸತ್ಯತೆಯ ಜ್ಞಾನ, ಧರ್ಮರಾಜನ ಉಪದೇಶ)

ವೈಶಂಪಾಯನಃ

ತತಃ ಸರ್ವಾಃ ಪ್ರಕೃತಯೋ ನಗರಾದ್ ವಾರಣವತಾತ್ ।
ಸರ್ವಮಂಗಲಸಂಯುಕ್ತಾ ಯಥಾಶಾಸ್ತ್ರಮಲಂಕೃತಾಃ ॥೧॥

ಶ್ರುತ್ವಾऽऽಗತಾನ್ ಪಾಂಡವೇಯಾನ್ ನಾನಾಯಾನೈಃ ಸಹಸ್ರಶಃ ।
ಅಭಿಜಗ್ಮುರ್ನರಶ್ರೇಷ್ಠಾಃ ಪ್ರೀತ್ಯಾ ಪರಮಯಾ ಯುತಾಃ ॥೨॥

ಆಗ ವಾರಣಾವತನಗರವಾಸಿಗಳಾದ ಎಲ್ಲಾ ಪ್ರಜೆಗಳೂ, ಪಾಂಡವರು ಬರುತ್ತಿದ್ದಾರೆಂಬ ವಾರ್ತೆಯನ್ನು ಕೇಳಿ ಶಾಸ್ತ್ರೋಕ್ತ ರೀತಿಯಲ್ಲಿ ಅಲಂಕಾರವನ್ನು ಮಾಡಿಕೊಂಡು ಎಲ್ಲಾ ಮಂಗಳ ಪದಾರ್ಥಗಳನ್ನು ತೆಗೆದುಕೊಂಡು ಅನೇಕ ಯಾನಗಳಲ್ಲಿ ಸಹಸ್ರ ಸಂಖ್ಯೆಯಲ್ಲಿ ಪರಮ ಸಂತೋಷದಿಂದ ಪಾಂಡವರಿಗೆ ಅಭಿಮುಖವಾಗಿ ಬಂದರು.

ತೇ ಸಮಾಸಾದ್ಯ ಕೌಂತೇಯಾನ್ ವಾರಣಾವತನಾಗರಾಃ ।
ಕೃತ್ವಾ ಜಯಾಶಿಷಃ ಸರ್ವೇ ಪರಿವವ್ರುರ್ಯುಧಿಷ್ಠಿರಮ್ ॥೩॥

ವಾರಣಾವತನಗರವಾಸಿಗಳು ಪಾಂಡವರನ್ನು ಸಮೀಪಿಸಿ ಅವರಿಗೆ ಜಯಾಶೀರ್ವಾದಗಳನ್ನು ಮಾಡಿ ಯುಧಿಷ್ಠಿರನನ್ನು ಸುತ್ತುವರಿದರು.

ತೈರ್ವೃತಃ ಪುರುಷವ್ಯಾಘ್ರೋ ಧರ್ಮರಾಜೋ ಯುಧಿಷ್ಠಿರಃ ।
ವಿಬಭೌ ದೇವಸಂಕಾಶೋ ವಜ್ರಪಾಣಿರಿವಾಮರೈಃ ॥೪॥

ಪೌರರಿಂದ ಸುತ್ತುವರಿಯಲ್ಪಟ್ಟ ಪುರುಷವ್ಯಾಘ್ರನಾದ ಧರ್ಮರಾಜನಾದ ಯುಧಿಷ್ಠಿರನು ದೇವತೆಗಳಿಂದ ಸುತ್ತುವರಿಯಲ್ಪಟ್ಟ ಮಹೇಂದ್ರನಂತೆ ದೇವಕಾಂತಿಯಿಂದ ಬೆಳಗಿದನು.

ಸತ್ಕೃತಾಸ್ತತ್ರ ಪೌರೈಶ್ಚ ಪೌರಾನ್ ಸತ್ಕೃತ್ಯ ಚಾನಘಾಃ ।
ಅಲಂಕೃತಜನಾಕೀರ್ಣಂ ವಿವಿಶುರ್ವಾರಣಾವತಮ್ ॥೫॥

ನಿರ್ದುಷ್ಟರಾದ ಪಾಂಡವರು ಪೌರರಿಂದ ಸತ್ಕೃತರಾಗಿ ಪೌರರನ್ನೂ ಸತ್ಕರಿಸಿ, ಅಲಂಕೃತಜನರಿಂದ ತುಂಬಿದ ವಾರಣಾವತನಗರವನ್ನು ಪ್ರವೇಶಿಸಿದರು.

ತೇ ಪ್ರವಿಶ್ಯ ಪುರೀಂ ವೀರಾಸ್ತೂರ್ಣಂ ಯಯುರಥೋ ಗೃಹಾನ್।
ಬ್ರಾಹ್ಮಣಾನಾಂ ಮಹೀಪಾಲ ರತಾನಾಂ ಸ್ವೇಷು ಕರ್ಮಸು ॥೬॥

ಎಲೈ ಮಹೀಪಾಲನೇ, ಆ ವೀರರು ಪಟ್ಟಣವನ್ನು ಪ್ರವೇಶಿಸಿ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾದ ಬ್ರಾಹ್ಮಣರ ಮನೆಗಳಿಗೆ ಶೀಘ್ರವಾಗಿ ಹೋದರು.

ನಗರಾಧಿಕೃತಾನಾಂ ಚ ಗೃಹಾಣಿ ರಥಿನಾಂ ತದಾ ।
ಉಪತಸ್ಥುರ್ನರಶ್ರೇಷ್ಠಾ ವೈಶ್ಯಶೂದ್ರಗೃಹಾಣ್ಯಪಿ ॥೭॥

ಹಾಗೆಯೇ, ನಗರಾಧಿಕಾರಿಗಳಾದ ರಥಿಗಳ ಮನೆಗಳಿಗೂ, ವೈಶ್ಯಶೂದ್ರರ ಮನೆಗಳಿಗೂ ನರಶ್ರೇಷ್ಠರಾದ ಅವರು ಪ್ರವೇಶಿಸಿದರು.

ಅರ್ಚಿತಾಶ್ಚ ನರೈಃ ಪೌರೈಃ ಪಾಂಡವಾ ಭರತರ್ಷಭ ।
ಜಗ್ಮುರಾವಸಥಂ ಪಶ್ಚಾತ್ ಪುರೋಚನಪುರಸ್ಕೃತಾಃ ॥೮॥

ಭರತರ್ಷಭನೇ, ಪೌರರಿಂದ ಪೂಜಿತರಾದ ಪಾಂಡವರು, ಅನಂತರ ಪುರೋಚನನನ್ನು ಮುಂದೆ ಮಾಡಿಕೊಂಡು ತಮ್ಮ ವಾಸಸ್ಥಾನಕ್ಕೆ (ತಾತ್ಕಾಲಿಕ ಬಿಡಾರಕ್ಕೆ) ಹೋದರು.

ತೇಭ್ಯೋ ಭಕ್ಷ್ಯಾನ್ನಪಾನಾನಿ ಶಯನಾನಿ ಶುಭಾನಿ ಚ ।
ಆಸನಾನಿ ಚ ಮುಖ್ಯಾನಿ ಪ್ರದದೌ ಸ ಪುರೋಚನಃ ॥೯॥

ಆ ಪುರೋಚನನು ಅವರಿಗೆ ಭಕ್ಷ್ಯಾನ್ನಪಾನಗಳನ್ನೂ, ಶುಭವಾದ ಆಸನಗಳನ್ನೂ, ಶ್ರೇಷ್ಠವಾದ ಶಯನಗಳನ್ನೂ ಕೊಟ್ಟನು.

ತತ್ರ ತೇ ಸತ್ಕೃತಾಸ್ತೇನ ಸುಮಹಾರ್ಹಪರಿಚ್ಛದಾಃ ।
ಉಪಾಸ್ಯಮಾನಾಃ ಪುರುಷೈರೂಷುಃ ಪುರನಿವಾಸಿಭಿಃ ॥೧೦॥

ಅಲ್ಲಿ ಅವರು ಪುರೋಚನನಿಂದ ಸತ್ಕೃತರಾಗಿ ಅನರ್ಘ್ಯವಾದ ಗೃಹೋಪಕರಣಗಳನ್ನು ಹೊಂದಿ ಪುರವಾಸಿಗಳಾದ ಪುರುಷರಿಂದ ಉಪಾಸ್ಯರಾಗಿ ವಾಸವನ್ನು ಮಾಡಿದರು.

ದಶರಾತ್ರೋಷಿತಾನಾಂ ತು ತತ್ರ ತೇಷಾಂ ಪುರೋಚನಃ ।
ನಿವೇಶಯಾಮಾಸ ಗೃಹಂ ಶಿವಾಖ್ಯಮಶಿವಂ ತದಾ ॥೧೧॥

ಅವರು ಹತ್ತು ರಾತ್ರಿಗಳ ಕಾಲ ಆ ಮನೆಯಲ್ಲಿ ಕಳೆದ ಮೇಲೆ ಪುರೋಚನನು ದುರ್ಯೋಧನನ ಆದೇಶದಂತೆ ನಿರ್ಮಿಸಿದ್ದ ಶಿವ ಎಂಬ ಹೆಸರಿನ ಅಶಿವ(ಅಮಂಗಳ)ವಾದ ಮನೆಗೆ ಅವರನ್ನು ಕರೆದುಕೊಂಡು ಹೋದನು.

ತತಸ್ತೇ ಪುರುಷವ್ಯಾಘ್ರಾ ದದೃಶುಃ ಸಪರಿಚ್ಛದಾಃ ।
ಪುರೋಚನಸ್ಯ ವಚನಾತ್ ಕೈಲಾಸಮಿವ ಗುಹ್ಯಕಾಃ ॥೧೨॥

ಆ ಪುರುಷವ್ಯಾಘ್ರರು ಗುಹ್ಯಕರು ಕೈಲಾಸವನ್ನು ನೋಡಿದಂತೆ ಆ ಮನೆಯನ್ನೂ ಮತ್ತು ಅದರ ಸಲಕರಣೆಗಳನ್ನೂ ಪುರೋಚನನ ವಚನದಂತೆ ನೋಡಿದರು.

ತತ್ತ್ವಾಗಾರಮಭಿಪ್ರೇಕ್ಷ್ಯ ಸರ್ವಧರ್ಮವಿಶಾರದಃ ।
ಉವಾಚಾಗ್ನೇಯಮಿತ್ಯೇವಂ ಭೀಮಸೇನಂ ಯುಧಿಷ್ಠಿರಃ ।
ಜಿಘ್ರನ್ ಸಮ್ಯಗ್ವಸಾಗಂಧಂ ಸರ್ಜಿರ್ಲಾಕ್ಷವಿಮಿಶ್ರಿತಮ್ ॥೧೩॥

ಸರ್ವಧರ್ಮವಿಶಾರದನಾದ ಯುಧಿಷ್ಠಿರನು ಆ ಮನೆಯನ್ನು ಗಮನಿಸಿ ಕೊಬ್ಬಿನ ವಾಸನೆಯನ್ನೂ, ತುಪ್ಪ ಮತ್ತು ಅರಗಿನ ವಾಸನೆಯ ಮಿಶ್ರಣವನ್ನು ಗಮನಿಸಿ ಭೀಮಸೇನನನ್ನು ಕುರಿತು ಈ ಮನೆಯು ಆಗ್ನೇಯವೆಂದು ಹೇಳಿದನು. (ಆಗ್ನೇಯವೆಂದರೆ ಸುಲಭವಾಗಿ ಅಗ್ನಿಗೆ ಬಲಿಯಾಗುವ ಮನೆ.)

ಯುಧಿಷ್ಠಿರಃ

ಕೃತಂ ಹಿ ವ್ಯಕ್ತಮಾಗ್ನೇಯಮಿದಂ ವೇಶ್ಮ ಪರಂತಪ ।
ಮೃದೇಷಾ ವ್ಯಕ್ತಮಾಗ್ನೇಯೈರ್ದ್ರವ್ಯೈರ್ಮಿಶ್ರಸ್ಯ ವೇಶ್ಮನಃ ॥೧೪॥

ಪರಂತಪನೇ, ಸ್ಪಷ್ಟವಾಗಿ ಈ ಮನೆಯು ಆಗ್ನೇಯ ವಸ್ತುಗಳಿಂದ ಮಾಡಲ್ಪಟ್ಟಿದೆ. ಈ ಮನೆಯ ಮಣ್ಣೂ ಸಹ ಆಗ್ನೇಯ ದ್ರವ್ಯಗಳಿಂದ ಮಿಶ್ರಿತವಾಗಿದೆ ಎಂದು ಸ್ಪಷ್ಟವಾಗಿದೆ.

ಶಣಸರ್ಜರಸೋಪೇತಾ ಹ್ಯಾಲಿಪ್ತಾ ಗೃಹಭಿತ್ತಿಷು ।
ಮುಂಜಬಲ್ವಜವಂಶಾದಿ ನೂನಂ ಸರ್ವಂ ಘೃತೋಕ್ಷಿತಮ್ ॥೧೫॥

ಈ ಮನೆಯ ಗೋಡೆಗಳು, ಶಣ ಮತ್ತು ಸರ್ಜರಸದಿಂದ ಚೆನ್ನಾಗಿ ಲೇಪಿಸಲ್ಪಟ್ಟಿವೆ. ಈ ಮನೆಯಲ್ಲಿರುವ ಮುಂಜ (ದರ್ಭವಿಶೇಷ), ಬಲ್ವಜ (ಹೆಂಚಿಕಡ್ಡಿಯಂತಹ ಕಡ್ಡಿ), ಮತ್ತು ಬಿದಿರುಗಳು (ಆಸನಗಳಿಗೆ ಉಪಯೋಗಿಸಿದವು) ಎಲ್ಲವೂ ಘೃತದಲ್ಲಿ ಅದ್ದಲ್ಪಟ್ಟಿವೆ.

ಸಭಾ ಸರ್ಜಲಸಂಯುಕ್ತಮಾನೀತಂ ಗೃಹಕರ್ಮಣಿ ।
ಶಣಬಲ್ವಜಕಾರ್ಪಾಸವಂಶದಾರುಕಟಾನ್ಯಪಿ ॥೧೬॥

ಆಗ್ನೇಯಾನ್ಯತ್ರ ಕ್ಷಿಪ್ತಾನಿ ಪರಿತೋ ವೇಶ್ಮನಸ್ತಥಾ ।
ಶಿಲ್ಪಿಭಿಃ ಸ್ವಹಿತೈರಾಪ್ತೈರ್ವಿನೀತೈರ್ವೇಶ್ಮ ಕರ್ಮಣಿ ॥೧೭॥

ಗೃಹವನ್ನು ನಿರ್ಮಾಣ ಮಾಡುವುದಕ್ಕೆ ಸಭಾಸರ್ಜಲ ದ್ರವ್ಯಸಂಯುಕ್ತವಾದ ವಸ್ತುಗಳು ಇಲ್ಲಿಗೆ ತರಲ್ಪಟ್ಟಿವೆ. ಇಲ್ಲಿರುವ ಶಣ, ಬಲ್ವಜ, ಕಾರ್ಪಾಸ, ಬಿದಿರಿನ ಮತ್ತು ಮರದ ಚಾಪೆಗಳೆಲ್ಲವೂ ಆಗ್ನೇಯವಾಗಿವೆ. ಈ ಮನೆಯಲ್ಲಿ ದುರ್ಯೋಧನನ ವಶವರ್ತಿಗಳಾದ, ಗೃಹನಿರ್ಮಾಣದಲ್ಲಿ ಕುಶಲರಾದ, ದುರ್ಯೋಧನನಿಗೆ ಹಿತರಾದ ಶಿಲ್ಪಿಗಳು ಇವುಗಳನ್ನು ಮನೆಯ ಎಲ್ಲಾ ಕಡೆಯಲ್ಲಿಯೂ ಹರಡಿದ್ದಾರೆ.

ವಿಶ್ವಸ್ತಾನಿಹ ನಃ ಪಾಪೋ ದಗ್ಧುಕಾಮಃ ಪುರೋಚನಃ ।
ತಥಾ ಹಿ ವರ್ತತೇ ಮಂದಃ ಸುಯೋಧನಮತೇ ಸ್ಥಿತಃ ॥೧೮॥

ದುರ್ಯೋಧನನ ಅಭಿಪ್ರಾಯದಂತೆ ನಡೆದುಕೊಳ್ಳುವ ಪಾಪಿಯಾದ ಪುರೋಚನನು ನಮಗೆ ಇಲ್ಲಿ ನಂಬಿಕೆಯನ್ನು ಹುಟ್ಟಿಸಿ ನಮ್ಮನ್ನು ಸುಟ್ಟು ಬಿಡುವ ಅಭಿಪ್ರಾಯನ್ನು ಹೊಂದಿದವನಾಗಿದ್ದಾನೆ.

ಇಮಾಂ ತು ವೈ ಮಹಾಬುದ್ಧಿರ್ವಿದುರೋ ದೃಷ್ಟವಾನ್ ಕಿಲ ।
ಆಪದಂ ತೇನ ಮಾಂ ಪಾರ್ಥ ಸರ್ವಂ ಬೋಧಿತವಾಂಸ್ತದಾ ॥೧೯॥

ಮಹಾಬುದ್ಧಿಯಾದ ವಿದುರನು ಈ ಆಪತ್ತನ್ನು ಮೊದಲೇ ತಿಳಿದಿದ್ದನು. ಪಾರ್ಥನೇ, ಆದ್ದರಿಂದಲೇ ನನ್ನನ್ನು ಎಲ್ಲಾ ವಿಷಯಗಳಲ್ಲಿಯೂ ಎಚ್ಚರಿಸಿದ್ದಾನೆ.

ತೇ ವಯಂ ಬೋಧಿತಾಸ್ತೇನ ಬುದ್ಧಿಮಂತೋಽಶಿವಂ ಗೃಹಮ್ ।
ಆಚಾರ್ಯೈಃ ಸುಕೃತಂ ಗೂಢೈರ್ದುರ್ಯೋಧನವಶಾನುಗೈಃ ॥೨೦॥

ವಿದುರನಿಂದ ಬೋಧಿತರಾದ ಬುದ್ಧಿವಂತರಾದ ನಾವು ದುರ್ಯೋಧನನ ವಶವರ್ತಿಗಳಾದ ಶಿಲ್ಪಿಗಳಿಂದ ಚೆನ್ನಾಗಿ (ವಂಚನೆಗಾಗಿ) ನಿರ್ಮಿಸಲ್ಪಟ್ಟ ಈ ಅಶಿವ ಗೃಹವನ್ನು ನಾವು ಸೇರಿದ್ದೇವೆ.

ಭೀಮಸೇನಃ

ಯದಿದಂ ಗೃಹಮಾಗ್ನೇಯಂ ವಿದಿತಂ ಮನ್ಯತೇ ಭವಾನ್ ।
ತತ್ರೈವ ಸಾಧು ಗಚ್ಛಾಮೋ ಯತ್ರ ಪೂರ್ವೋಷಿತಾ ವಯಮ್ ॥೨೧॥

ಈ ಮನೆಯು ಆಗ್ನೇಯ ವಸ್ತುಗಳಿಂದ ನಿರ್ಮಿಸಲ್ಪಟ್ಟಿದೆ ಎಂದು ನೀನು ತಿಳಿದಿರುವ ಕಾರಣದಿಂದ ನಾವು ಮೊದಲು ವಾಸ ಮಾಡಿದ ಸ್ಥಳಕ್ಕೇ ಪುನಃ ಹೋಗೋಣ.

ಯುಧಿಷ್ಠಿರಃ

ಇಹ ಯತ್ತೈರ್ನಿರಾಕಾರೈರ್ವಸ್ತವ್ಯಮಿತಿ ರೋಚತೇ ।
ತುಷ್ಟೈರಿವ ವಿಚಿನ್ವದ್ಭಿರ್ಗತಿಮನ್ಯಾಂ ಧ್ರುವಾಮಿತಃ ॥೨೨॥

ಇಲ್ಲಿ ನಮ್ಮ ಅಸಮಾಧಾನವನ್ನು ತೋರಿಸಿಕೊಳ್ಳದೇ ಎಚ್ಚರಿಕೆಯಿಂದ ವಾಸ ಮಾಡಬೇಕೆಂದು ನನಗೆ ತೋರುತ್ತದೆ. ಇಲ್ಲಿ ಸಂತುಷ್ಟರಾದವರಂತೆ ಇದ್ದು ನಾವು ಇಲ್ಲಿಂದ ತಪ್ಪಿಸಿಕೊಳ್ಳಲು ಬೇರೆ ಒಂದು ಮಾರ್ಗವನ್ನು ಹುಡುಕಬೇಕು.

ಆಕಾರಂ ಯದಿ ಜಾನೀಯಾದಸ್ಮಾಕಂ ಸ ಪುರೋಚನಃ ।
ತಥಾ ಚ ವರ್ತತೇ ಭೂತ್ವಾ ಪ್ರಸಹ್ಯಾಪಿ ದಹೇತ್ ಪುನಃ ॥೨೩॥

ಆ ಪುರೋಚನನು ಒಂದು ಪಕ್ಷ ನಮ್ಮ ಅಸಮಾಧಾನವನ್ನು ತಿಳಿದರೆ, ಶೀಘ್ರಕಾರಿಯಾದ ಅವನು ಬಲಾತ್ಕಾರದಿಂದ ನಮ್ಮನ್ನು ಇಲ್ಲಿಸುಟ್ಟುಬಿಡಬಹುದು.

ನೈವಂ ಬಿಭೇತ್ಯುಪಕ್ರೋಶಾದಧರ್ಮಾಚ್ಚ ಪುರೋಚನಃ ।
ತಥಾ ಚ ವರ್ತತೇ ಮಂದೋ ದುರ್ಯೋಧನಮತೇ ಸ್ಥಿತಃ ॥೨೪॥

ಈ ಪುರೋಚನನು ಜನರ ನಿಂದೆಗಾಗಲೀ, ಅಧರ್ಮಕ್ಕಾಗಲೀ, ಹೆದರುವವನಲ್ಲ. ದುರ್ಯೋಧನನ ಅಭಿಪ್ರಾಯದಂತೆ ನಡೆದುಕೊಳ್ಳುತ್ತಾ ಈ ಮಂದನು ಹಾಗೆಯೇ ಇದ್ದಾನೆ.

ಅಪಿ ಚಾಸ್ಮಾಸು ದಗ್ಧೇಷು ಭೀಷ್ಮಃ ಕುರುಪಿತಾಮಹಃ ।
ನ ಕುಪ್ಯೇತ ಕಿಮರ್ಥಂ ವಾ ಕೌರವಾನ್ ಕೋಪಯೇತ ಸಃ ॥೨೫॥

ನಾವು ಇಲ್ಲಿಸುಟ್ಟುಹೋದರೆ, ಕುರುಪಿತಾಮಹರಾದ ಭೀಷ್ಮರು ಸಿಟ್ಟುಮಾಡದೇ ಇರಬಹುದು. ಏಕೆಂದರೆ, ಕೌರವರ ಮೇಲೆ ಸಿಟ್ಟುಮಾಡುವುದರಿಂದ ಆಗ ಅವರಿಗೆ ಏನು ಪ್ರಯೋಜನವಿದೆ?

ತಥಾ ಹಿ ಸಹದಗ್ಧೇಷು ವಿದುರಃ ಸಪಿತಾಮಹಃ ।
ಧರ್ಮೋ ನೇಹೇತಿ ಕುಪ್ಯೇತ ತಥಾಽನ್ಯೇ ಕುರುಪುಂಗವಾಃ ॥೨೬॥

ಹಾಗೆ ನಾವೆಲ್ಲರೂ ಒಟ್ಟಿಗೆ ಸುಟ್ಟುಹೋದರೆ, ವಿದುರನೂ, ಪಿತಾಮಹನಾದ ಭೀಷ್ಮನೂ ಹಾಗೆಯೇ ಉಳಿದ ಕುರುಶ್ರೇಷ್ಠರೂ ಇದು ಧರ್ಮವಲ್ಲ ಎಂದು ಕೋಪಗೊಳ್ಳಬಹುದು.

ಉಪಪನ್ನಂ ತು ದಗ್ಧೇಷು ಕುಲವಂಶಾನುಕೀರ್ತಿತಾಃ ।
ಕುಪ್ಯೇರನ್ ಯದಿ ಧರ್ಮಜ್ಞಾಸ್ತಥಾಽನ್ಯೇ ಕುರುಪುಂಗವಾಃ ॥೨೭॥

ನಾವು ದಗ್ಧರಾದರೆ, ಕುರುವಂಶದಲ್ಲಿ ಪ್ರಸಿದ್ಧರಾದ ಧರ್ಮಜ್ಞರಾದ ಉಳಿದ ಕುರುಶ್ರೇಷ್ಠರು ಕೋಪಗೊಂಡರೆ, ಅದು ಯುಕ್ತವೇ ಆಗುತ್ತದೆ.

ವಯಂ ತು ಯದಿ ದಾಹಾದ್ ವೈ ಬಿಭ್ಯಂತಃ ಪ್ರಾದ್ರವೇಮಹಿ ।
ಸ್ಪಶೈನೋ೯ ಘಾತಯೇತ್ ಸರ್ವಾನ್ ರಾಜ್ಯಲುಬ್ಧಃ ಸುಯೋಧನಃ ॥

ನಾವು ಒಂದು ಪಕ್ಷ ದಾಹಕ್ಕೆ ಹೆದರಿ ಇಲ್ಲಿಂದ ಓಡಿ ಹೋದರೆ, ರಾಜ್ಯಲುಬ್ಧನಾದ ಸುಯೋಧನನು ನಮ್ಮೆಲ್ಲರನ್ನೂ ಗೂಢಚಾರರಿಂದ ಕೊಲ್ಲಿಸಬಹುದು.

ಅಪದಸ್ಥಾನ್ ಪದೇ ತಿಷ್ಠನ್ನಪಕ್ಷಾನ್ ಪಕ್ಷಸಂಶ್ರಿತಃ ।
ಹೀನಕೋಶಾನ್ ಮಹಾಕೋಶಃ ಪ್ರಯೋಗೈರ್ಘಾತಯೇದ್ ಧ್ರುವಮ್॥

ಅಧಿಕಾರಸ್ಥಾನವನ್ನು ಆಕ್ರಮಿಸಿದವನೂ, ತನ್ನ ಪಕ್ಷವನ್ನು ಹೊಂದಿರುವವನೂ, ಆಢ್ಯವಾದ ಕೋಶವನ್ನು ಹೊಂದಿರುವವನೂ ಆದ ಅವನು ಅಧಿಕಾರ ರಹಿತರಾದ, ಯಾರ ಬೆಂಬಲವೂ ಇಲ್ಲದ, ಕೋಶಚ್ಯುತರಾದ ನಮ್ಮನ್ನು ಉಪಾಯಗಳಿಂದ ನಿಶ್ಚಿತವಾಗಿ ಕೊಲ್ಲಿಸುವನು.

ತದಸ್ಮಾಭಿರಿಮಂ ಪಾಪಂ ತಂ ಚ ಪಾಪಂ ಸುಯೋಧನಮ್ ।
ವಂಚಯದ್ಭಿರ್ನಿವಸ್ತವ್ಯಂ ಛನ್ನಂ ವಾಸಂ ಕ್ವಚಿತ್ಕ್ವಚಿತ್ ॥೩೦॥

ಆದ್ದರಿಂದ ನಾವು ಪಾಪಿಯಾದ ಈ ಪುರೋಚನನನ್ನೂ, ಪಾಪಿಯಾದ ಆ ಸುಯೋಧನನನ್ನೂ ವಂಚಿಸುತ್ತಾ ಸ್ವಲ್ಪ ಸಮಯದವರೆಗೆ ನಮ್ಮ ಅಭಿಪ್ರಾಯವನ್ನು ತೋರಗೊಡದೆ, ಇಲ್ಲಿ ವಾಸವನ್ನು ಮಾಡಬೇಕು.

ತೇ ವಯಂ ಮೃಗಯಾಶೀಲಾಶ್ಚರಾಮ ವಸುಧಾಮಿಮಾಮ್ ।
ತಥಾಽನ್ಯೇ ವಿದಿತಾ ಮಾರ್ಗಾ ಭವಿಷ್ಯಂತಿ ಪಲಾಯತಾಮ್ ॥೩೧॥

ಅಂತಹ ನಾವು ಬೇಟೆಯಾಡುವ ಸ್ವಭಾವವನ್ನು ಹೊಂದಿದವರಾಗಿ ಈ ಪ್ರದೇಶದಲ್ಲೆಲ್ಲಾ ತಿರುಗಾಡೋಣ. ಆಗ ಇಲ್ಲಿಂದ ತಪ್ಪಿಸಿಕೊಂಡು ಹೋಗಲು ನಮಗೆ ಬೇರೆ ಮಾರ್ಗಗಳು ತಿಳಿಯುವುವು.

ಭೌಮಂ ಚ ಬಿಲಮದ್ಯೈವ ಕಾರಯಾಮಃ ಸುಸಂವೃತಮ್ ।
ಗೂಢೋಚ್ಛ್ವಾಸಂ ನ ನಸ್ತತ್ರ ಹುತಾಶಃ ಸಂಪ್ರಧಕ್ಷ್ಯತಿ ॥೩೨॥

ಈ ದಿನವೇ ಭೂಮಿಯಲ್ಲಿ ಚೆನ್ನಾಗಿ ಛನ್ನವಾದ (ಮುಚ್ಚಲ್ಪಟ್ಟ) ಒಂದು ಸುರಂಗವನ್ನು ಮಾಡಿಸೋಣ. ನಮ್ಮ ಉಸಿರಾಟವು ತಿಳಿಯದಂತೆ, ಅಲ್ಲಿ ಅಡಗಿದ ನಮ್ಮನ್ನು ಅಗ್ನಿಯು ಸುಡುವುದಿಲ್ಲ.

ದ್ರವತೋಽತ್ರ ಯಥಾ ಚಾಸ್ಮಾನ್ ನ ಬುಧ್ಯೇತ ಪುರೋಚನಃ ।
ಪೌರೋ ವಾಽಪಿ ಜನಃ ಕಶ್ಚಿತ್ ತಥಾ ಕಾರ್ಯಮತಂದ್ರಿತೈಃ ॥೩೩॥

ನಾವು ಇಲ್ಲಿಂದ ಓಡಿ ಹೋಗುವಾಗ ಪುರೋಚನನಿಗಾಗಲೀ, ಪೌರರಿಗಾಗಲೀ ಅಥವಾ ಬೇರೆ ಜನರಿಗಾಗಲೀ, ಆ ವಿಷಯವು ತಿಳಿಯದಂತೆ ನಾವು ಎಚ್ಚರಿಕೆಯನ್ನು ವಹಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಷಟ್‌ಚತ್ವಾರಿಂಶತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಜತುಗೃಹದಾಹಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರನಲವತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಕ್ಷತ್ತಾಥ ನೀತಿಬಲತೋಽಖಿಲಲೋಕವೃತ್ತಂ
ಜಾನನ್ ಸ್ವಚಾರಮುಖತಃ ಖನಕಾಯ ಚೋಚೇ ।
ಉಕ್ತ್ಯೈವ ಧರ್ಮತನಯಾಯ ಮದೀಯವಾಕ್ಯಂ
ಪೂರ್ವೋಕ್ತಮಾಶು ಕುರು ತತ್ವ ಬಿಲಂ ಸುದೂರಂ ॥೩೬॥

ವಿದುರ ತನ್ನ ನೀತಿಯ ಬಲದಿಂದಲೂ ಗೂಢಚಾರರ ಮುಖದಿಂದಲೂ ಎಲ್ಲರ ಕಾರಸ್ಥಾನವನ್ನು ಅರಿವವನು. ನೆಲ ಅಗೆವ ಕೆಲಸದವನೊಬ್ಬನನ್ನು ಕರೆದು 'ಧರ್ಮರಾಜನಿಗೆ ನಾನು ಹಿಂದೆ ಹೇಳಿದ್ದ ಮಾತನ್ನು ಪುನರುಚ್ಚರಿಸಿಯೇ ಬೇಗನೆ ಬಲುದೂರದವರೆಗಿನ ಸುರಂಗಮಾರ್ಗವನ್ನು ವಾರಣಾವತದಲ್ಲಿ ಸಿದ್ಧಪಡಿಸು' ಎಂದ.

ಚಕ್ರೇ ಸ ಚೈವಮಥ ವರ್ತ್ಮವೃತ್ತಿಚ್ಛಲೇನ
ದ್ವಾರಂ ಚ ತಸ್ಯ ಸ ಪಿಧಾಯ ಯಯೌ ಗೃಹಂ ಸ್ವಂ ।
ಭೀಮಃ ಪುರೋಚನ ಉಭಾವಪಿ ತೌ ವಧಾಯ
ಛಿದ್ರಾರ್ಥಿನೌ ಮಿಥ ಉತೋಷತುರಬ್ದಕಾರ್ಧಂ ॥೩೭॥

ಬಳಿಕ ನೆಲ ಅಗೆಯುವವನು ಸುತ್ತಲೂ ಪ್ರಾಕಾರ ನಿರ್ಮಾಣ ಮಾಡುವ ನೆಪದಿಂದ ವಿದುರ ಹೇಳಿದಂತೆಯೆ ಒಂದು ಸುರಂಗಮಾರ್ಗ ನಿರ್ಮಾಣ ಮಾಡಿದ. ಬಳಿಕ ಅದರ ದ್ವಾರವನ್ನು ಮುಚ್ಚಿ ತನ್ನ ಮನೆಗೆ ಹೊರಟುಹೋದ. ಭೀಮ ಪುರೋಚನರಿಬ್ಬರೂ ಅರಗಿನ ಮನೆಯಲ್ಲಿದ್ದು ಪರಸ್ಪರ ಕೊಲ್ಲುವ ಅವಕಾಶಕ್ಕೆ ಕಾಯುತ್ತ ಅರ್ಧವರ್ಷದಷ್ಟು ಕಾಲ ಕಳೆದರು.

★★★★★

ನೂರನಲವತ್ತೇಳನೆಯ ಅಧ್ಯಾಯ

(ವಿದುರನ ಆಪ್ತನಾದ ಖನಕನಿಂದ ಸುರಂಗ ನಿರ್ಮಾಣ)

ವೈಶಂಪಾಯನಃ

ವಿದುರಸ್ಯ ಸುಹೃತ್ ಕಶ್ಚಿತ್ ಖನಕಃ ಕುಶಲಃ ಕ್ವಚಿತ್ ।
ವಿವಿಕ್ತೇ ಪಾಂಡವಾನ್ ರಾಜನ್ನಿದಂ ವಚನಮಬ್ರವೀತ್ ॥೧॥

ರಾಜನೇ ವಿದುರನಿಗೆ ಆಪ್ತನಾದ, ಕುಶಲನಾದ ಖನಕನೊಬ್ಬನು (ಮಣ್ಣನ್ನು ತೋಡುವವನು) ಏಕಾಂತದಲ್ಲಿ ಪಾಂಡವರನ್ನು ಸಂಧಿಸಿ ಹೀಗೆ ಮಾತನಾಡಿದನು.

ಪ್ರಹಿತೋ ವಿದುರೇಣಾಸ್ಮಿ ಖನಕಃ ಕುಶಲೋ ಭೃಶಮ್ ।
ಪಾಂಡವಾನಾಂ ಪ್ರಿಯಂ ಕಾರ್ಯಮಿತಿ ಕಿಂ ಕರವಾಣಿ ವಃ ॥೨॥

ನಾನು ಕುಶಲನಾದ ಖನಕ. ಪಾಂಡವರಿಗೆ ಪ್ರಿಯವನ್ನು ಮಾಡಬೇಕೆಂದು ವಿದುರನು ನನ್ನನ್ನು ಕಳುಹಿಸಿದ್ದಾನೆ. ನಿಮಗೆ ಏನು ಮಾಡಲಿ.

ಪ್ರಚ್ಛನ್ನಂ ವಿದುರೇಣೋಕ್ತಃ ಶ್ರೇಯಸ್ಕಾಮೋಽಸ್ಮಿ ಪಾಂಡವಾನ್ ।
ಪ್ರತಿಪಾದಯ ವಿಶ್ವಾಸಾದಿತಿ ಕಿಂ ಕರವಾಣಿ ವಃ ॥೩॥

ವಿದುರನು ಯಾರಿಗೂ ತಿಳಿಯದಂತೆ ನನ್ನ ಬಳಿ, ನನ್ನ ಮೇಲಿನ ವಿಶ್ವಾಸದಿಂದ ನಾನು ಪಾಂಡವರ ಶ್ರೇಯಸ್ಸನ್ನು ಬಯಸುತ್ತೇನೆ. ಅವರಿಗೆ ಹಿತವನ್ನು ಮಾಡು ಎಂದು ಹೇಳಿಕಳುಹಿಸಿದ್ದಾನೆ. ನಾನು ನಿಮಗೆ ಏನು ಮಾಡಲಿ.

ಕಿಂಚ ತ್ವಂ ವಿದುರೇಣೋಕ್ತೋ ಮ್ಲೇಚ್ಛವಾಚಾಽಸಿ ಪಾಂಡವ ।
ತ್ವಯಾ ಚ ತತ್ ತಥೇತ್ಯುಕ್ತಮೇತದಾಶ್ವಾಸಕಾರಣಮ್ ॥೪॥

ಧರ್ಮರಾಜನೇ, ಹೊರಡುವ ಸಮಯದಲ್ಲಿ ನಿನಗೆ ವಿದುರನು ಮ್ಲೇಚ್ಛಭಾಷೆಯಲ್ಲಿ ಏನನ್ನೋ ಹೇಳಿದನು. ನೀನೂ ಸಹ ಹಾಗೆಯೇ ಆಗಲಿ ಎಂದು ಹೇಳಿದೆ. ನನ್ನ ಮೇಲೆ ನಂಬಿಕೆ ಬರುವುದಕ್ಕೆ ಈ ವಿಷಯವನ್ನು ಹೇಳುತ್ತಿದ್ದೇನೆ.

ವೈಶಂಪಾಯನಃ

ಉವಾಚ ತಂ ಸತ್ಯಧೃತಿಃ ಕುಂತೀಪುತ್ರೋ ಯುಧಿಷ್ಠಿರಃ ।
ಅಭಿಜಾನಾಮಿ ಸೌಮ್ಯ ತ್ವಾಂ ಸುಹೃದಂ ವಿದುರಸ್ಯ ವೈ ॥೫॥

ಪ್ರಥಮಾಪ್ತಂ ಪ್ರಿಯಂ ಭಕ್ತಂ ಸದಾ ಪ್ರಿಯಹಿತೈಷಿಣಮ್ ।
ನ ವಿದ್ಯತೇ ಕವೇಃ ಕಿಂಚಿದವಿಜ್ಞಾತಂ ಪ್ರಯೋಜನಮ್ ॥೬॥

ಸತ್ಯಧೃತಿಯಾದ ಕುಂತೀಪುತ್ರನಾದ ಯುಧಿಷ್ಠಿರನು ಅವನನ್ನು ಕುರಿತು ಹೇಳಿದನು. ''ಸೌಮ್ಯನೇ, ನೀನು ವಿದುರನ ಮಿತ್ರನೆಂದು ನಾನು ತಿಳಿದಿದ್ದೇನೆ. ನೀನು ವಿದುರನಿಗೆ ಅತ್ಯಂತ ಆಪ್ತನೂ, ಪ್ರಿಯನೂ, ಭಕ್ತನೂ, ಅವನ ಪ್ರಿಯವನ್ನೂ ಮತ್ತು ಹಿತವನ್ನೂ ಬಯಸುವವನೂ ಆಗಿದ್ದೀಯೆ. ಜ್ಞಾನಿಯಾದ ಅವನಿಗೆ ತಿಳಿಯದ ಯಾವ ವಿಷಯವೂ ಇಲ್ಲ.''

ಯಥಾ ಕವಿಸ್ತಥಾ ನಸ್ತ್ವಂ ನಿರ್ವಿಶೇಷಾ ವಯಂ ತ್ವಯಿ ।
ಭವಿತಾಸ್ಮೋ ಯಥಾ ತಸ್ಯ ಪಾಲಯಾಸ್ಮಾನ್ ಯಥಾ ಕವಿಃ ॥೭॥

ನಮಗೆ ಜ್ಞಾನಿಯಾದ ವಿದುರನು ಹೇಗೋ, ನೀನೂ ಹಾಗೆಯೇ. ನಾವು ಅವನಿಗೆ ನಡೆದುಕೊಂಡಂತೆಯೇ ನಿನಗೂ ನಡೆದುಕೊಳ್ಳುತ್ತೇವೆ. ಅವನು ರಕ್ಷಿಸಿದಂತೆ ನೀನೂ ನಮ್ಮನ್ನು ರಕ್ಷಿಸು.

ಇದಂ ಶರಣಮಾಗ್ನೇಯಂ ಮದರ್ಥಮಿತಿ ಮೇ ಮತಿಃ ।
ಪುರೋಚನೇನ ವಿಹಿತಂ ಧಾರ್ತರಾಷ್ಟ್ರಸ್ಯ ಶಾಸನಾತ್ ॥೮॥

ದುರ್ಯೋಧನನ ಆದೇಶದಂತೆ ಪುರೋಚನನು ನಮ್ಮ ಸಲುವಾಗಿ ಈ ಜತುಗೃಹವನ್ನು ನಿರ್ಮಿಸಿದ್ದಾನೆ ಎಂದು ನನ್ನ ಅಭಿಪ್ರಾಯ.

ಸ ಪಾಪಃ ಕೋಶವಾಂಶ್ಚೈವ ಸಸಹಾಯಶ್ಚ ದುರ್ಮತಿಃ ।
ಅಸ್ಮಾನಪಿ ಚ ದುಷ್ಟಾತ್ಮಾ ನಿತ್ಯಕಾಲಂ ಪ್ರಬಾಧತೇ ॥೯॥

ಕೋಶವುಳ್ಳವನೂ, ಪಕ್ಷದ ಬಲವುಳ್ಳವನೂ, ಪಾಪಿಯೂ ಆದ, ಆ ದುರ್ಮತಿಯಾದ ದುರ್ಯೋಧನನು ದುಷ್ಟಮನಸ್ಸಿನಿಂದ ನಮ್ಮನ್ನು ಯಾವಾಗಲೂ ಪೀಡಿಸುತ್ತಾನೆ.

ಸ ಭವಾನ್ ಮೋಕ್ಷಯತ್ವಸ್ಮಾನುತ್ಪನ್ನಾದ್ ವೈ ಹುತಾಶನಾತ್ ।
ಅಸ್ಮಾಸ್ವಿಹ ಚ ದಗ್ಧೇಷು ಸಕಾಮಃ ಸ್ಯಾತ್ ಸುಯೋಧನಃ ॥೧೦॥

ಆದ್ದರಿಂದ ನೀನು ಇಲ್ಲಿರುವ ಅಗ್ನಿಭಯದಿಂದ ನಮ್ಮನ್ನು ವಿಮೋಚನೆಗೊಳಿಸು. ಇಲ್ಲದಿದ್ದರೆ, ನಮ್ಮನ್ನು ಇಲ್ಲಿ ಸುಟ್ಟು ದುರ್ಯೋಧನನು ಕೃತಕೃತ್ಯನಾದಾನು.

ಸಮೃದ್ಧಮಾಯುಧಾಗಾರಮಿದಂ ತಸ್ಯ ದುರಾತ್ಮನಃ ।
ಪ್ರವಾತಂ ನಿಷ್ಪ್ರತೀಕಾರಮಾಶ್ರಿತ್ಯೇಹ ಕೃತಂ ಮಹತ್ ॥೧೧॥

ಇದು ಆ ದುಷ್ಟನ ಸಮೃದ್ಧವಾದ ಶಸ್ತ್ರಾಗಾರ. ಇಲ್ಲಿ ಗಾಳಿಯು ಬಲವಾಗಿ ಬೀಸುತ್ತದೆ. ಇಲ್ಲಿ ಅಗ್ನಿ ಉಂಟಾದರೆ, ಅದನ್ನು ನಿವಾರಿಸಲು ಸಾಧ್ಯವಿಲ್ಲ. ಆದ್ದರಿಂದ ಆಯುಧಾಗಾರಕ್ಕೆ ಹೊಂದಿಕೊಂಡಂತೆ ಜತುಗೃಹವು ನಿರ್ಮಿಸಲ್ಪಟ್ಟಿದೆ.

ಇದಂ ತದಶುಭಂ ನೂನಂ ತಸ್ಯ ಕರ್ಮ ಚಿಕೀರ್ಷಿತಮ್ ।
ಪ್ರಾಗೇವ ವಿದುರೋ ವೇದ ತೇನಾಸ್ಮಾನ್ ಪೂರ್ವಮುಕ್ತವಾನ್ ॥೧೨॥

ದುರ್ಯೋಧನನು ಮಾಡಲು ಬಯಸಿದ ಈ ಅಶುಭ ಕರ್ಮವನ್ನು ವಿದುರನು ಮೊದಲೇ ತಿಳಿದಿದ್ದನು. ಆದ್ದರಿಂದ ನಮಗೆ ಮೊದಲೇ ಸೂಚನೆಯನ್ನು ನೀಡಿದ್ದಾನೆ.

ಸೇಯಮಾಪದನುಪ್ರಾಪ್ಯಾ ಕ್ಷತ್ತಾ ಯಾಂ ದೃಷ್ಟವಾನ್ ಪುರಾ ।
ಪುರೋಚನಸ್ಯಾವಿದಿತಮಸ್ಮಾಂಸ್ತ್ವಂ ವಿಪ್ರಮೋಚಯ ॥೧೩॥

ವಿದುರನು ಮೊದಲೇ ನಿರೀಕ್ಷಿಸಿದ ಆಪತ್ತು ಈಗ ನಮಗೆ ಪ್ರಾಪ್ತವಾಗಿದೆ. ಪುರೋಚನನಿಗೆ ತಿಳಿಯದಂತೆ ನೀನು ಇದರಿಂದ ನಮ್ಮನ್ನು ಪಾರು ಮಾಡು.

ವೈಶಂಪಾಯನಃ

ಸ ತಥೇತಿ ಪ್ರತಿಶ್ರುತ್ಯ ಖನಕೋ ಯತ್ನಮಾಸ್ಥಿತಃ ।
ಪರಿಖಾಮುತ್ಕಿರನ್ ನಾಮ ಚಕಾರ ಸುಮಹಾಬಿಲಮ್ ॥೧೪॥

ಖನಕನು ''ಹಾಗೆಯೇ ಆಗಲಿ'' ಎಂದು ವಚನವನ್ನು ನೀಡಿ ಪ್ರಯತ್ನವನ್ನು ವಹಿಸಿ ಪರಿಖಾ ಎಂಬ ದೊಡ್ಡ ಬಿಲವನ್ನು ಮಾಡಿದನು.

ಚಕ್ರೇ ಸ ವೇಶ್ಮನಸ್ತಸ್ಯ ಮಧ್ಯೇ ನಾತಿಮಹನ್ಮುಖಮ್ ।
ಕವಾಟಯುಕ್ತಮಜ್ಞಾತಂ ಸಮಂ ಭೂಮ್ಯಾಶ್ಚ ಭಾರತ ॥೧೫॥

ಎಲೈ ಭಾರತನೇ ಆ ಮನೆಯ ಮಧ್ಯದಲ್ಲಿ ಕಿರಿದಾದ ಮುಖವಿರುವಂತೆ ಇನ್ನೊಬ್ಬರಿಗೆ ತಿಳಿಯದಂತೆ ನೆಲದ ಮಟ್ಟಕ್ಕೆ ಸಮವಾದ ಮಟ್ಟದಲ್ಲಿ ಅದಕ್ಕೆ ಒಂದು ಬಾಗಿಲನ್ನೂ ಇಟ್ಟನು.

ಪುರೋಚನಭಯಾಚ್ಚೈವ ವ್ಯದಧಾತ್ ಸಂವೃತಂ ಮುಖಮ್ ।
ಸ ಚ ತಸ್ಮಿನ್ ಗೃಹದ್ವಾರಿ ವಸತ್ಯಶುಭಧೀಃ ಸದಾ ॥೧೬॥

ಪುರೋಚನನ ಭಯದಿಂದ ಅವನು ಆ ಬಿಲದ ದ್ವಾರದಲ್ಲಿದ್ದ ಕವಾಟವನ್ನು ಚೆನ್ನಾಗಿ ಮುಚ್ಚಿದನು. ದುಷ್ಟನಾದ ಪುರೋಚನನಾದರೋ ಆ ಮನೆಯ ಬಾಗಿಲಿನಲ್ಲಿ ಯಾವಾಗಲೂ ಕಾಯುತ್ತಿದ್ದನು.

ತತಸ್ತೇ ಸಾಯುಧಾಃ ಸರ್ವೇ ವಸಂತಿ ಸ್ಮ ಕ್ಷಪಾಂ ನೃಪ ।
ದಿವಾ ಚರಂತಿ ಮೃಗಯಾಂ ಪಾಂಡವೇಯಾ ವನಾದ್ ವನಮ್ ॥೧೬॥

ರಾಜನೇ ಅನಂತರ ಪಾಂಡವರೆಲ್ಲರೂ ರಾತ್ರಿಯಲ್ಲಿ ಆಯುಧಗಳನ್ನು ಹಿಡಿದು ಎಚ್ಚರವಾಗಿರುತ್ತಿದ್ದರು. ಹಗಲಿನಲ್ಲಿ ಕಾಡಿನಿಂದ ಕಾಡಿಗೆ ಹೋಗಿ ಬೇಟೆಯಾಡುತ್ತಿದ್ದರು.

ವಿಶ್ವಸ್ತವದವಿಶ್ವಸ್ತಾ ವಂಚಯಂತಃ ಪುರೋಚನಮ್ ।
ಅತುಷ್ಟಾಸ್ತುಷ್ಟವದ್ ರಾಜನ್ನೂಷುಃ ಪರಮದುಃಖಿತಾಃ ॥೧೭॥

ರಾಜನೇ, ವಿಶ್ವಾಸ ಇಲ್ಲದ ಪಾಂಡವರು ವಿಶ್ವಾಸ ಉಳ್ಳವರಂತೆ, ಅಸಂತುಷ್ಟರಾದ ಅವರು ಸಂತುಷ್ಟರಂತೆ ತೋರಿಸುತ್ತಾ ಪುರೋಚನನನ್ನು ವಂಚಿಸುತ್ತಾ ಪರಮದುಃಖದಿಂದ ಕಾಲವನ್ನು ಕಳೆದರು.

ನ ಚೈನಾನನ್ವಬುಧ್ಯಂತ ನರಾ ನಗರವಾಸಿನಃ ।
ಅನ್ಯತ್ರ ವಿದುರಾಮಾತ್ಯಾತ್ ತಸ್ಮಾತ್ ಖನಕಸತ್ತಮಾತ್ ॥೧೮॥

ಪಾಂಡವರ ಚಲನವಲನಗಳನ್ನು ವಿದುರನನ್ನೂ, ಅವನ ಅಮಾತ್ಯನಾದ ಖನಕನನ್ನೂ ಬಿಟ್ಟು ನಗರವಾಸಿಗಳಾದ ಯಾರೂ ತಿಳಿಯಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಸಪ್ತಚತ್ವಾರಿಂಶತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಜತುಗೃಹದಾಹಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ತಸ್ಯಾಗ್ರಜಾ ಚ ಸಹಿತಾ ಸುತಪಂಚಕೇನ
ತತ್ರಾಗಮತ್ ತದನು ಮಾರುತಿರೇಷ ಕಾಲಃ ।
ಇತ್ಥಂ ವಿಚಿಂತ್ಯ ಸ ನಿಶಾಮ್ಯ ಚ ತಾನ್ ಪ್ರಸುಪ್ತಾನ್
ಭ್ರಾತೄಂಶ್ಚ ಮಾತರಮಥಾಶು ಬಿಲೇ ನ್ಯಧಾತ್‌ಪ್ರಾಕ್ ॥೩೮॥

ಬಳಿಕ ಒಮ್ಮೆ ಪುರೋಚನನ ಅಕ್ಕ ತನ್ನ ಐದು ಮಕ್ಕಳ ಸಹಿತವಾಗಿ ಅಲ್ಲಿಗೆ ಬಂದಳು. ಇದೇ ತಕ್ಕ ಸಮಯವೆಂದು ಭೀಮ ನಿಶ್ಚಯಿಸಿ ಅವರು ಮಲಗಿ ನಿದ್ದೆ ಹೋದುದನ್ನು ಕಂಡು ಮೊದಲಿಗೆ ಸೋದರರನ್ನೂ ತಾಯಿಯನ್ನೂ ಸುರಂಗಮಾರ್ಗದಲ್ಲಿ ಇರಿಸಿದ.

ತಂ ಭಾಗಿನೇಯಸಹಿತಂ ಭಗಿನೀಂ ಚ ತಸ್ಯ
ಪಾಪಾನ್ ದದಾಹ ಸಗೃಹಾಂ ಪವಮಾನಸೂನುಃ ।
ಸಾಪ್ಯಾಗತಾ ಹಿ ಗರಳೇನ ನಿಹಂತುಮೇತಾನ್
ಭೀಮಸ್ಯ ಪೂರ್ವಭುಜಿತೋ ನ ಶಶಾಕ ಚೈತತ್ ॥೩೯॥

ಬಳಿಕ ಆ ಪುರೋಚನನನ್ನೂ ಪಾಪಾತ್ಮಳಾದ ಅವನ ಅಕ್ಕನನ್ನೂ ಅವಳ ಮಕ್ಕಳನ್ನೂ ಎಲ್ಲರನ್ನೂ ಮನೆ ಸಹಿತವಾಗಿ ಭೀಮ ಸುಟ್ಟುಬಿಟ್ಟ. ಅವಳು ಬಂದಿದ್ದುದು ಪಾಂಡವರನ್ನು ವಿಷವಿಕ್ಕಿ ಕೊಲ್ಲುವುದಕ್ಕಾಗಿ. ಭೀಮ ಮೊದಲು ಉಣ್ಣುತ್ತಿದ್ದುದರಿಂದ ಇದು ಶಕ್ಯವಾಗಲಿಲ್ಲ.

ತಪ್ತಂ ತಯಾ ಸಸುತಯಾ ಚ ತಪೋ ನಿಶಾಂತಂ
ಸ್ಯಾಂ ಸೂನುಭಿಃ ಸಹ ಬಲಾದದಿತಿಸ್ತಥಾಬ್ದಾತ್ ।
ತಸ್ಯಾ ಅದಾಚ್ಚ ಗಿರಿಶೋ ಯದಿ ಪುತ್ರಕೈಸ್ತ್ವಂ
ಯುಕ್ತಾ ನ ಯಾಸಿ ಮೃತಿಮೇಷ ವರಸ್ತವೇತಿ ॥೪೦॥

ಆ ಬೇಡಿಕೆ ತಾನು ತಪೋಬಲದಿಂದ ಅದಿತಿಯಾಗಬೇಕು ಮಕ್ಕಳು ದೇವತೆಗಳಾಗಬೇಕು ಎಂದು ಮಕ್ಕಳೊಂದಿಗೆ ಬಹಳ ತಪಸ್ಸು ಮಾಡಿದ್ದಳು. ಒಂದು

ವರ್ಷ ಕಳೆದಾಗ ಶಿವನೊಲಿದು ಅವಳಿಗೆ ವರವಿತ್ತ. 'ನೀನು ನಿನ್ನ ಮಕ್ಕಳೊಂದಿಗೆ ಸಾಯದಿದ್ದರೆ ನಿನಗೆ ನಿನ್ನ ಅಭೀಷ್ಟ ಸಿದ್ಧಿಸುವುದು' ಎಂದು.

ಜಾನನ್ನಿದಂ ಸಕಲಮೇವ ಸ ಭೀಮಸೇನೋ
ಹತ್ವಾ ಸುತೈಃ ಸಹ ಕುಬುದ್ಧಿಮಿಮಾಂ ಹಿ ತಂ ಚ ।
ಭ್ರಾತೄಂಶ್ಚ ಮಾತರಮುದೂಹ್ಯ ಯಯೌ ಬಿಲಾತ್ಸ
ನಿರ್ಗತ್ಯ ಭೀತಿವಶತೋಽಬಲತಾಂ ಪ್ರಯಾತಾನ್ ॥೪೧॥

ಇದೆಲ್ಲವನ್ನೂ ತಿಳಿದಿದ್ದ ಭೀಮ ದುಷ್ಟಬುದ್ಧಿಯವಳಾದ ಬೇಡತಿಯನ್ನು ಮಕ್ಕಳೊಂದಿಗೆ ಪುರೋಚನನ ಸಮೇತ ಕೊಂದು ಸೋದರರನ್ನೂ ತಾಯಿಯನ್ನೂ ಅವರು ಬಲಗುಂದಿದುದರಿಂದ, ಹೊತ್ತುಕೊಂಡೇ ಸುರಂಗ ಮಾರ್ಗದಿಂದ ಹೊರಗೆ ನಡೆದ.

ಜ್ಞಾತ್ವಾ ಪುರೋಚನ ವಧಂ ಯದಿ ಭೀಷ್ಮ ಮುಖ್ಯೈ-
ರ್ವೈಚಿತ್ರ ವೀರ್ಯತನಯಾ ಅಭಿಯೋಧಯೇಯುಃ ।
ಕಿಂ ನೋ ಭವೇದಿತಿ ಭಯಂ ಸುಮಹದ್ವಿವೇಶ
ಭೀಮಂ ತ್ವತೇ ಚ ತನಯಾನ್ ಸಕಲಾನ್ ಪೃಥಾಯಾಃ ॥೪೨॥

ಪುರೋಚನ ವಧೆಯನ್ನು ತಿಳಿದು ಕೌರವರು ಭೀಷ್ಮಾದಿಗಳೊಂದಿಗೆ ಬಂದು ಯುದ್ಧಮಾದಿದರೆ ನಮ ಗತಿಯೇನಾದೀತು ಎನ್ನುವ ಮಹತ್ತಾದ ಭೀತಿ ಭೀಮನನ್ನು ಹೊರತು ಇನ್ನೆಲ್ಲ ಪಾಂಡವರನ್ನು ಹೊಕ್ಕಿತ್ತು.

ಭೀಮೋಽಭಯೋಽಪಿ ಗುರುಭಿಃ ಸ್ವಮುಖೇನ ಯುದ್ಧ-
ಮಪ್ರೀಯಮಾಣ ಉತ ಧರ್ಮಜವಾಕ್ಯಹೇತೋಃ ।
ಊಹ್ಯೈವ ತಾನಪಿ ಯಯೌ ದ್ಯುನದೀಂ ಚ ತೀರ್ತ್ವಾ
ಕ್ಷತ್ತ್ರಾತಿಸೃಷ್ಟಮಧಿರುಹ್ಯ ಜಲಪ್ರಯಾಣಂ ॥೪೩॥

ಭೀಮ ಭಯರಹಿತನೇ ಆಗಿದ್ದರೂ ಗುರುಹಿಯರೊಡನೆ ನೇರವಾಗಿ ಯುದ್ಧ ಮಾಡುವುದನ್ನು ಅವನು ಇಷ್ಟಪಡುವುದಿಲ್ಲ. ಆದರಿಂದ ಧರ್ಮರಾಜನ ಮಾತಿನಂತೆ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ತಸ್ಯಾಗ್ರಜಾ ಚ ಸಹಿತಾ ಸುತಪಂಚಕೇನ
ತತ್ಯಾಗಮತ್ ತದನು ಮಾರುತಿರೇಷ ಕಾಲಃ ।
ಇತ್ಥಂ ವಿಚಿಂತ್ಯ ಸ ನಿಶಾಮ್ಯ ಚ ತಾನ್ ಪ್ರಸುಪ್ತಾನ್
ಭ್ರಾತೃಂಶ್ಚ ಮಾತರಮಥಾಶು ಬಿಲೇ ನ್ಯಧಾತ್‌ಪ್ರಾಕ್ ॥೩೮॥

ಬಳಿಕ ಒಮ್ಮೆ ಪುರೋಚನನ ಅಕ್ಕ ತನ್ನ ಐದು ಮಕ್ಕಳ ಸಹಿತವಾಗಿ ಅಲ್ಲಿಗೆ ಬಂದಳು. ಇದೇ ತಕ್ಕ ಸಮಯವೆಂದು ಭೀಮ ನಿಶ್ಚಯಿಸಿ ಅವರು ಮಲಗಿ ನಿದ್ದೆ ಹೋದುದನ್ನು ಕಂಡು ಮೊದಲಿಗೆ ಸೋದರರನ್ನೂ ತಾಯಿಯನ್ನೂ ಸುರಂಗಮಾರ್ಗದಲ್ಲಿ ಇರಿಸಿದ.

ತಂ ಭಾಗಿನೇಯಸಹಿತಂ ಭಗಿನೀಂ ಚ ತಸ್ಯ
ಪಾಪಾನ್ ದದಾಹ ಸಗೃಹಾಂ ಪವಮಾನಸೂನುಃ ।
ಸಾಪ್ಯಾಗತಾ ಹಿ ಗರಳೇನ ನಿಹಂತುಮೇತಾನ್
ಭೀಮಸ್ಯ ಪೂರ್ವಭುಜಿತೋ ನ ಶಶಾಕ ಚೈತತ್ ॥೩೯॥

ಬಳಿಕ ಆ ಪುರೋಚನನನ್ನೂ ಪಾಪಾತ್ಮಳಾದ ಅವನ ಅಕ್ಕನನ್ನೂ ಅವಳ ಮಕ್ಕಳನ್ನೂ ಎಲ್ಲರನ್ನೂ ಮನೆ ಸಹಿತವಾಗಿ ಭೀಮ ಸುಟ್ಟುಬಿಟ್ಟ. ಅವಳು ಬಂದಿದ್ದುದು ಪಾಂಡವರನ್ನು ವಿಷವಿಕ್ಕಿ ಕೊಲ್ಲುವುದಕ್ಕಾಗಿ. ಭೀಮ ಮೊದಲು ಉಣ್ಣುತ್ತಿದ್ದುದರಿಂದ ಇದು ಶಕ್ಯವಾಗಲಿಲ್ಲ.

ತಪ್ತಂ ತಯಾ ಸಸುತಯಾ ಚ ತಪೋ ನಿಶಾಂತಂ
ಸ್ಯಾಂ ಸೂನುಭಿಃ ಸಹ ಬಲಾದದಿತಿಸ್ತಥಾಬ್ದಾತ್ ।
ತಸ್ಯಾ ಅದಾಚ್ಚ ಗಿರಿಶೋ ಯದಿ ಪುತ್ರಕೈಸ್ತ್ವಂ
ಯುಕ್ತಾ ನ ಯಾಸಿ ಮೃತಿಮೇಷ ವರಸ್ತವೇತಿ ॥೪೦॥

ಆ ಬೇಡಿಕೆ ತಾನು ತಪೋಬಲದಿಂದ ಅದಿತಿಯಾಗಬೇಕು ಮಕ್ಕಳು ದೇವತೆಗಳಾಗಬೇಕು ಎಂದು ಮಕ್ಕಳೊಂದಿಗೆ ಬಹಳ ತಪಸ್ಸು ಮಾಡಿದ್ದಳು. ಒಂದು

ವರ್ಷ ಕಳೆದಾಗ ಶಿವನೊಲಿದು ಅವಳಿಗೆ ವರವಿತ್ತ. 'ನೀನು ನಿನ್ನ ಮಕ್ಕಳೊಂದಿಗೆ ಸಾಯದಿದ್ದರೆ ನಿನಗೆ ನಿನ್ನ ಅಭೀಷ್ಟ ಸಿದ್ಧಿಸುವುದು' ಎಂದು.

ಜಾನನ್ನಿದಂ ಸಕಲಮೇವ ಸ ಭೀಮಸೇನೋ
ಹತ್ವಾ ಸುತೈಃ ಸಹ ಕುಬುದ್ಧಿಮಿಮಾಂ ಹಿ ತಂ ಚ ।
ಭ್ರಾತೄಂಶ್ಚ ಮಾತರಮುದೂಹ್ಯ ಯಯೌ ಬಿಲಾತ್ಸ
ನಿರ್ಗತ್ಯ ಭೀತಿವಶತೋಽಬಲತಾಂ ಪ್ರಯಾತಾನ್ ॥೪೧॥

ಇದೆಲ್ಲವನ್ನೂ ತಿಳಿದಿದ್ದ ಭೀಮ ದುಷ್ಟಬುದ್ಧಿಯವಳಾದ ಬೇಡತಿಯನ್ನು ಮಕ್ಕಳೊಂದಿಗೆ ಪುರೋಚನನ ಸಮೇತ ಕೊಂದು ಸೋದರರನ್ನೂ ತಾಯಿಯನ್ನೂ ಅವರು ಬಲಗುಂದಿದುದರಿಂದ, ಹೊತ್ತುಕೊಂಡೇ ಸುರಂಗ ಮಾರ್ಗದಿಂದ ಹೊರಗೆ ನಡೆದ.

ಜ್ಞಾತ್ವಾ ಪುರೋಚನ ವಧಂ ಯದಿ ಭೀಷ್ಮ ಮುಖ್ಯೈ-
ರ್ವೈಚಿತ್ರ ವೀರ್ಯತನಯಾ ಅಭಿಯೋಧಯೇಯುಃ ।
ಕಿಂ ನೋ ಭವೇದಿತಿ ಭಯಂ ಸುಮಹದ್‌ವಿವೇಶ
ಭೀಮಂ ತ್ಯತೇ ಚ ತನಯಾನ್ ಸಕಲಾನ್ ಪೃಥಾಯಾಃ ॥೪೨॥

ಪುರೋಚನ ವಧೆಯನ್ನು ತಿಳಿದು ಕೌರವರು ಭೀಷ್ಮಾದಿಗಳೊಂದಿಗೆ ಬಂದು ಯುದ್ಧಮಾಡಿದರೆ ನಮ ಗತಿಯೇನಾದೀತು ಎನ್ನುವ ಮಹತ್ತಾದ ಭೀತಿ ಭೀಮನನ್ನು ಹೊರತು ಇನ್ನೆಲ್ಲ ಪಾಂಡವರನ್ನು ಹೊಕ್ಕಿತ್ತು.

ಭೀಮೋಽಭಯೋಽಪಿ ಗುರುಭಿಃ ಸ್ವಮುಖೇನ ಯುದ್ಧ-
ಮಪ್ರೀಯಮಾಣ ಉತ ಧರ್ಮಜವಾಕ್ಯಹೇತೋಃ ।
ಊಹ್ಯೈವ ತಾನಪಿ ಯಯೌ ದ್ಯುನದೀಂ ಚ ತೀರ್ತ್ವಾ
ಕೃತ್ತಾತ್ತಿಸೃಷ್ಟಮಧಿರುಹ್ಯ ಜಲಪ್ರಯಾಣಂ ॥೪೩॥

ಭೀಮ ಭಯರಹಿತನೇ ಆಗಿದ್ದರೂ ಗುರುಹಿಯರೊಡನೆ ನೇರವಾಗಿ ಯುದ್ಧ ಮಾಡುವುದನ್ನು ಅವನು ಇಷ್ಟಪಡುವುದಿಲ್ಲ. ಆದರಿಂದ ಧರ್ಮರಾಜನ ಮಾತಿನಂತೆ

ಭೀಮ ಅವರನ್ನು ಹೊತ್ತುಕೊಂಡೇ ಹೊರಟ ವಿಧುರ ಕಳಿಸಿದ್ದ ನೌಕೆಯನ್ನೇರಿ ಪ್ರಯಾಣ ಮಾಡಿದ.

ವಿಶ್ವಾಸಿತಾ ವಿದುರಪೂರ್ವವಚೋಭಿರೇವ
ದಾಶೋದಿತಾಭಿರಧಿರುಹ್ಯ ಚ ಭೀಮಪೃಷ್ಠಂ ।
ಸರ್ವೇ ಯಯುರ್ವನಮಥಾಭ್ಯುದಿತೇ ಚ ಸೂರ್ಯೇ
ದೃಷ್ಟ್ವೈವ ಸಪ್ತ ಮೃತಕಾನ್ ರುರುದುಶ್ಚ ಪೌರಾಃ ॥೪೪॥

ಅಂಬಿಗರ ಮುಖದಿಂದ ವಿದುರ ಹಿಂದೆ ಹೇಳಿದ್ದ ಮಾತನ್ನು ಕೇಳಿ ತಿಳಿದು ವಿಶ್ವಾಸಗೊಂಡು ಎಲ್ಲರನ್ನೂ ನೌಕೆಯನ್ನೇರಿ ನದಿ ದಾಟಿ ಬಳಿಕ ಭೀಮನ ಬೆನ್ನಮೇಲೇರಿ ಕಾಡಿಗೆ ಹೋದರು. ಸೂರ್ಯ ಉದಿಸಿದಾಗ ಏಳುಮಂದಿಯೂ ಸತ್ತಿದ್ದುದನ್ನು ಕಂಡು ಪಟ್ಟಣಿಗರು ಕಣ್ಣೀರಿಟ್ಟರು.

ಹಾ ಪಾಂಡವಾನದಹದೇಷ ಹಿ ಧಾರ್ತರಾಷ್ಟ್ರೋ
ಧರ್ಮಸ್ಥಿತಾನ್ ಕುಮತಿರೇವ ಪುರೋಚನೇನ ।
ಸೋಽಪ್ಯೇಷ ದಗ್ಧ ಇಹ ದೈವವಶಾತ್ ಸುಪಾಪಃ
ಕೋ ನಾಮ ಸತ್ಸು ವಿಷಮಃ ಪ್ರಭವೇತ್‌ಸುಖಾಯ ॥೪೫॥

ಅಯ್ಯೋ! ಈ ದುಷ್ಟಬುದ್ಧಿಯ ದುರ್ಯೋಧನ ಧರ್ಮನಿಷ್ಠರಾದ ಪಾಂಡವರನ್ನು ಪುರೋಚನ ಮೂಲಕ ಸುಟ್ಟುಬಿಟ್ಟ! ಮಹಾಪಾಪಿಯಾದ ಪುರೋಚನನೂ ದೈವವಶದಿಂದ ಇಲ್ಲಿ ಸುಟ್ಟುಹೋಗಿದ್ದಾನೆ. ಸಜ್ಜನರಲ್ಲಿ ದ್ರೋಹ ಬಗೆವವನು ಯಾರು ತಾನೆ ಸುಖ ಹೊಂದಿಯಾನು? ಎಂದರು ಪಟ್ಟಣಿಗರು.

ಪೌರೇಭ್ಯ ಏವ ನಿಖಿಲಂ ತ್ವಥ ಭೀಷ್ಮಮುಖ್ಯಾ
ವೈಚಿತ್ರವೀರ್ಯಸಹಿತಾಸ್ತು ನಿಶಮ್ಯ ಹೇತಿ ।
ಊಚುಃ ಸುದುಃಖಿತಧಿಯೋಽಥ ಸುಯೋಧನಾದ್ಯಾಃ
ಕ್ಷತ್ತಾ ಮೃಷೈವ ರುರುದುರ್ಯುಯುಜುಶ್ಚ ಕರ್ಮ ॥೪೬॥

ಪಟ್ಟಣಿಗರಿಂದಲೆ ಎಲ್ಲ ವಾರ್ತೆಯನ್ನೂ ಕೇಳಿ ತಿಳಿದು ಭೀಷ್ಮಾದಿಗಳೂ ಧೃತರಾಷ್ಟ್ರನೂ 'ಅಯ್ಯೋ!' ಎಂದರು. ಬಹಳ ಖಿನ್ನಮನಸ್ಕರಾದರು.

ದುರ್ಯೋಧನಾದಿಗಳೂ, ವಿದುರನೂ ಕೂಡ, ಅತ್ತಂತೆ ನಟಿಸಿದರು. ಉತ್ತರಕ್ರಿಯೆಗಳನ್ನು ಮಾಡಿದರು.

ಭೀಮೋಽಪ್ಯುದೂಹ್ಯ ವನಮಾಪ ಹಿಡಿಂಬಕಸ್ಯ
ಭ್ರಾತೄನ್ ಪೃಥಾಂ ಚ ತೃಷಿತೈರಭಿಯಾಚಿತಶ್ಚ।
ಪಾನೀಯಮುತ್ತರಪಟೇಽಂಬುಜಪತ್ರನದ್ಧಂ
ದೂರಾದುದೂಹ್ಯ ದದೃಶೇ ಸ್ವಪತೋಽಥಂತಾಂಶ್ಚ ॥೪೭॥

ಭೀಮಸೇನ ಸೋದರರನ್ನೂ ಕುಂತಿಯನ್ನೂ ಹೊತ್ತು ಹಿಡಿಂಬವನಕ್ಕೆ ಬಂದ. ಅವರು ಬಾಯಾರಿ ನೀರನ್ನು ಬೇಡಿದಾಗ ಭೀಮ ತಾವರೆ ಎಲೆಗಳಲ್ಲಿ ನೀರು ತುಂಬಿಸಿಕೊಂಡು ಉತ್ತರೀಯದಲ್ಲಿ ಹೊತ್ತು ತಂದ. ಮಲಗಿ ನಿದ್ರಿಸುತ್ತಿದ್ದ ತನ್ನ ಸೋದರರನ್ನು ಸ್ವಲ್ಪ ದೂರದಲ್ಲಿ ನಿಂತು ನೋಡಿದ.

★ ★ ★ ★

ನೂರನಲವತ್ತೆಂಟನೆಯ ಅಧ್ಯಾಯ

(ಜತುಗೃಹಕ್ಕೆ ಅಗ್ನಿಸ್ಪರ್ಶಮಾಡಿ ಪಾಂಡವರ ಪಲಾಯನ)

ವೈಶಂಪಾಯನಃ

ತಾಂಸ್ತು ದೃಷ್ಟ್ವಾ ಸುಮನಸಃ ಪರಿಸಂವತ್ಸರೋಷಿತಾನ್ ।
ವಿಶ್ವಸ್ತಾನಿತಿ ಸಂಪ್ರೇಕ್ಷ್ಯ ಹರ್ಷಂ ಚಕ್ರೇ ಪುರೋಚನಃ ॥೧॥

ಪಾಂಡವರು ಸಂತೋಷದಿಂದ ಹೆಚ್ಚುಕಡಿಮೆ ಒಂದು ವರ್ಷವನ್ನು ಕಳೆದಿದ್ದನ್ನು ನೋಡಿ ತನ್ನಲ್ಲಿ ವಿಶ್ವಾಸವುಳ್ಳವರಾಗಿದ್ದಾರೆ ಎಂದು ತಿಳಿದು ಪುರೋಚನನು ಹರ್ಷಪಟ್ಟನು.

ಪುರೋಚನೇ ತಥಾ ಹೃಷ್ಟೇ ಕೌಂತೇಯೋಽಥ ಯುಧಿಷ್ಠಿರಃ ।
ಭೀಮಸೇನಾರ್ಜುನೌ ತೌ ಚ ಯಮೌ ಪ್ರೋವಾಚ ಧರ್ಮವಿತ್ ॥೨॥

ಪುರೋಚನನು ಹಾಗೆ ಸಂತೋಷದಿಂದಿರಲು ಕುಂತೀಪುತ್ರನಾದ ಧರ್ಮಜ್ಞನಾದ ಯುಧಿಷ್ಠಿರನು ಭೀಮಸೇನಾರ್ಜುನರನ್ನೂ, ನಕುಲಸಹದೇವರನ್ನೂ ಕುರಿತು ಹೀಗೆ ಮಾತನಾಡಿದನು -

ಅಸ್ಮಾನಯಂ ಸುವಿಶ್ವಸ್ತಾನ್ ವೇತ್ತಿ ಪಾಪಃ ಪುರೋಚನಃ ।
ವಂಚಕೋಽಯಂ ನೃಶಂಸಾತ್ಮಾ ಕಾಲಂ ಮನ್ಯೇ ಪಲಾಯನೇ ॥೩॥

ಈ ಪಾಪಿಯಾದ ಪುರೋಚನನು ನಾವು ಅವನನ್ನು ನಂಬಿದ್ದೇವೆ ಎಂದ ತಿಳಿದಿದ್ದಾನೆ ಇವನು ವಂಚಕನೂ, ಕ್ರೂರಹೃದಯನೂ ಆಗಿದ್ದಾನೆ. ನಾವು ಇಲ್ಲಿಂದ ಪಲಾಯನ ಮಾಡುವುದಕ್ಕೆ ಇದು ಯೋಗ್ಯವಾದ ಕಾಲವೆಂದು ಭಾವಿಸುತ್ತೇನೆ.

ಜಾತುಷಾಗಾರಮಾದೀಪ್ಯ ದಗ್ಧ್ವಾ ಚೈವ ಪುರೋಚನಮ್ ।
ಷಟ್ ಪ್ರಾಣಿನೋ ನಿಧಾಯೇಹ ದ್ರವಾಮೋಽನುಪಲಕ್ಷಿತಾಃ ॥೪॥

ಈ ಜತುಗೃಹವನ್ನು ಅಗ್ನಿಗೆ ಅರ್ಪಿಸಿ ಪುರೋಚನನ್ನು ಸುಟ್ಟು ಇಲ್ಲಿ ಆರು ಪ್ರಾಣಿಗಳನ್ನು ಇಟ್ಟು ಯಾರಿಗೂ ತಿಳಿಯದಂತೆ ನಾವು ಓಡಿಹೋಗೋಣ. (ಪುರೋಚನನ ತಂಗಿ ಮತ್ತು ಅವಳ ಐದು ಮಕ್ಕಳು ಸೇರಿ ಆರು ಪ್ರಾಣಿಗಳು)

ವೈಶಂಪಾಯನಃ

ಅಥ ದಾನಾಪದೇಶೇನ ಕುಂತೀ ಬ್ರಾಹ್ಮಣಭೋಜನಮ್ ।
ಚಕ್ರೇ ನಿಶಿ ಮಹಾರಾಜ ಆಜಗ್ಮುಸ್ತತ್ರ ಯೋಷಿತಃ ॥೫॥

ಅನಂತರ ದಾನವಮಾಡುವ ನೆಪದಿಂದ ಕುಂತಿಯು ರಾತ್ರಿಯಲ್ಲಿ ಬ್ರಾಹ್ಮಣಭೋಜನವನ್ನು ಮಾಡಿಸಿದಳು. ಮಹಾರಾಜನೇ, ರಾತ್ರಿಯಲ್ಲಿ ಅಲ್ಲಿಗೆ ಅನೇಕ ಸ್ತ್ರೀಯರು ಬಂದರು.

ತಾ ವಿಹೃತ್ಯ ಯಥಾಕಾಮಂ ಭುಕ್ತ್ವಾ ಪೀತ್ವಾ ಚ ಭಾರತ ।
ಜಗ್ಮುರ್ನಿಶಿ ಗೃಹಾನೇವ ಸಮನುಜ್ಞಾಪ್ಯ ಮಾಧವೀಮ್ ॥೬॥

ಭಾರತನೇ ಆ ಸ್ತ್ರೀಯರು ತಮ್ಮ ಮನಸ್ಸಿಗೆ ಬಂದಂತೆ ತಿಂದು ಕುಡಿದು ವಿಹಾರವನ್ನು ಮಾಡಿ ಕುಂತಿಯ ಅನುಮತಿಯನ್ನು ಪಡೆದು ತಮ್ಮ ಮನೆಗಳಿಗೆ ಹಿಂದಿರುಗಿದರು.

ಪುರೋಚನಪ್ರಣಿಹಿತಾ ಪೃಥಾಂ ಸ್ಮ ಖಲು ಸೇವತೇ ।
ನಿಷಾದೀ ದುಷ್ಟಹೃದಯಾ ನಿತ್ಯಮಂತರಚಾರಿಣೀ ॥೭॥

ಪುರೋಚನನಿಂದ ನಿಯೋಜಿಸಲ್ಪಟ್ಟ ಅವನ ತಂಗಿಯಾದ ಒಬ್ಬ ನಿಷಾದಳು ದುಷ್ಟಮನಸ್ಸುಳ್ಳವಳಾಗಿ ಸೂಕ್ತ ಅವಕಾಶಕ್ಕಾಗಿ ಕಾಯುತ್ತಾ ಆಗಾಗ ಬಂದು ಕುಂತಿಯ ಸೇವೆಯನ್ನು ಮಾಡುತ್ತಿದ್ದಳು.

ನಿಷಾದೀ ಪಂಚಪುತ್ರಾ ತು ತಸ್ಮಿನ್ ಭೋಜ್ಯೇ ಯದೃಚ್ಛಯಾ ।
ಪುರಾಭ್ಯಾಸಕೃತಸ್ನೇಹಾ ಸಖೀ ಕುಂತ್ಯಾಃ ಸಮಂ ಸುತೈಃ ॥೮॥

ಆನೀಯ ಮಧುಮೂಲಾನಿ ಫಲಾನಿ ವಿವಿಧಾನಿ ಚ ।
ಅನ್ನಾರ್ಥಿನೀ ಸಮಭ್ಯಾಗಾತ್ ಸಪುತ್ರಾ ಕಾಲಚೋದಿತಾ ॥೯॥

ಆ ಭೋಜನದ ಸಮಯದಲ್ಲಿ ಆ ನಿಷಾದಿಯು ತನ್ನ ಐದು ಪುತ್ರರೊಡನೆ ಹಿಂದಿನ ಅಭ್ಯಾಸದಿಂದ ಕುಂತಿಯ ಸ್ನೇಹಿತಳೂ, ಸಖಿಯೂ ಆಗಿ ಅಕಸ್ಮತ್ತಾಗಿ ಅಲ್ಲಿಗೆ ಬಂದಳು. ಅವಳು ಮಧುವನ್ನೂ(ಮದ್ಯವನ್ನೂ), ಗೆಡ್ಡೆಗೆಣಸುಗಳನ್ನೂ, ಅನೇಕ ಫಲಗಳನ್ನೂ ತಂದು ಭೋಜನವನ್ನು ಬಯಸಿ ಕಾಲಚೋದಿತಳಾಗಿ ಮಕ್ಕಳನ್ನು ಕರೆದುಕೊಂಡು ಅಲ್ಲಿಗೆ ಬಂದಳು.

ಸಪಾಪಾ ಪಂಚಪುತ್ರಾ ಚ ಸಾ ಪೃಥಾಯಾಃ ಸಖೀ ಮತಾ ।
ಸಾ ಪೀತ್ವಾ ಮದಿರಾಂ ತತ್ರ ಸಪುತ್ರಾ ಮದವಿಹ್ವಲಾ ॥೧೦॥

ಸಾ ಹಿ ಸರ್ವೈಃ ಸುತೈ ರಾಜಂಸ್ತಸ್ಮಿನ್ನೇವ ನಿವೇಶನೇ ।
ಸುಷ್ವಾಪ ವಿಗತಜ್ಞಾನಾ ಮೃತಕಲ್ಪಾ ನರಾಧಿಪ ॥೧೧॥

ಐದು ಮಕ್ಕಳನ್ನು ಹೊಂದಿದ್ದ ಪಾಪಿಷ್ಠಳಾದ ಅವಳನ್ನು ಎಲ್ಲರೂ ಕುಂತಿಯ ಸಖಿ ಎಂದು ತಿಳಿದಿದ್ದರು. ಅವಳು ಮಕ್ಕಳ ಜೊತೆಯಲ್ಲಿ ಮದ್ಯಪಾನವನ್ನು ಮಾಡಿ ಮದವಿಹ್ವಲಳಾಗಿ ಮಕ್ಕಳ ಜೊತೆಯಲ್ಲಿಯೇ ಅದೇ ಜತುಗೃಹದಲ್ಲಿ ಜ್ಞಾನಹೀನಳಾಗಿ ಮೃತಳಂತೆ ಮಲಗಿ ನಿದ್ರೆ ಮಾಡಿದಳು.

ಅಥ ಪ್ರವಾತೇ ತುಮುಲೇ ನಿಶಿ ಸುಪ್ತೇ ಜನೇ ವಿಭೋ ।
ತನೂನಪಾದ್ಬಯಾದ್ ಭೀಮಃ ಶೇತೇ ಯತ್ರ ಪುರೋಚನಃ ॥೧೨॥

ಮಹಾರಾಜನೇ, ಆಗ ರಾತ್ರಿಯಲ್ಲಿ ಎಲ್ಲ ಜನರೂ ನಿದ್ರೆ ಮಾಡುತ್ತಿರಲು, ಗಾಳಿಯು ಬಲವಾಗಿ ಬೀಸುತ್ತಿರಲು, ಅಗ್ನಿಯ ಭಯದಿಂದ ಭೀಮನು ಪುರೋಚನನ ಜೊತೆಯಲ್ಲೇ ಮಲಗಿದ್ದನು.

ಪೂರ್ವಮೇವ ಬಿಲಂ ಶೋಧ್ಯ ಭೀಮಸೇನೋ ಮಹಾಮತಿಃ ।
ಪಾಂಡವೈಃ ಸಹಿತಾಂ ಕುಂತೀಂ ಪ್ರಾವೇಶಯತ ತದ್ಬಿಲಮ್ ॥೧೩॥

ಮೇಧಾವಿಯಾದ ಭೀಮಸೇನನು ಮೊದಲೇ ಸುರಂಗವನ್ನು ಶೋಧಿಸಿ ಉಳಿದ ಪಾಂಡವರನ್ನೂ ಮತ್ತು ಕುಂತಿಯನ್ನೂ ಆ ಬಿಲದೊಳಗೆ ಪ್ರವೇಶಿಸಿದನು.

ದತ್ತ್ವಾ ಽಗ್ನಿಂ ಸಹಸಾ ಭೀಮೋ ನಿರ್ಜಗಾಮ ಬಿಲೇನ ಸಃ ।
ತತಃ ಪ್ರವಾತಃ ಸುಮಹಾನ್‌ಶಬ್ದಶ್ಚೈವ ವಿಭಾವಸೋಃ ।
ಪ್ರಾದುರಾಸೀತ್ ತತಃ ಸರ್ವೋ ಬುಬುಧೇ ಸ ಜನವ್ರಜಃ ॥೧೪॥

ಭೀಮನು ಜತುಗೃಹಕ್ಕೆ ತಕ್ಷಣ ಬೆಂಕಿಯನ್ನು ಕೊಟ್ಟು ಬಿಲವನ್ನು ಸೇರಿ ಅಲ್ಲಿಂದ ಹೊರಗೆ ಹೊರಟನು. ಆಗ ಗಾಳಿಯು ಬಲವಾಗಿ ಬೀಸಿ ಅಗ್ನಿಯು ಉರಿಯುವ ದೊಡ್ಡ ಶಬ್ದ ಉಂಟಾಯಿತು. ಜನಸ್ತೋಮವೆಲ್ಲವೂ ಅದನ್ನು ಕೇಳಿ ಎಚ್ಚರಗೊಂಡರು.

ಪೌರಾಃ

ದುರ್ಯೋಧನಪ್ರಯುಕ್ತೇನ ಪಾಪೇನಾಕೃತಬುದ್ಧಿನಾ ।
ಗೃಹಮಾತ್ಮವಿನಾಶಾಯ ಕಾರಿತಂ ದಾಹಿತಂ ಚ ತತ್ ॥೧೫॥

ದುರ್ಯೋಧನನು ನಿಯೋಜಿಸಿದ ಪಾಪಿಯೂ, ಬುದ್ಧಿಶೂನ್ಯನೂ ಆದ ಪುರೋಚನನು ತನ್ನ ವಿನಾಶಕ್ಕಾಗಿಯೇ ಗೃಹವನ್ನು ನಿರ್ಮಾಣ ಮಾಡಿಸಿ ತಾನೇ ದಗ್ಧನಾಗಿದ್ದಾನೆ.

ಅಹೋ ಧಿಗ್ ಧೃತರಾಷ್ಟ್ರಸ್ಯ ಬುದ್ಧಿರ್ನಾತಿಸಮಂಜಸೀ ।
ಯಃ ಶುಚೀನ್ ಪಾಂಡವಾನ್ ಬಾಲಾನ್ ದಾಹಯಾಮಾಸ ನಿರ್ಘೃಣಃ॥

ಅಯ್ಯೋ, ಧಿಕ್ಕಾರವಿರಲಿ, ಶುದ್ಧರಾದ ಬಾಲಕರಾದ ಪಾಂಡವರನ್ನು ನಿರ್ದಯನಾಗಿ ಧೃತರಾಷ್ಟ್ರನು ಸುಡಿಸಿದ್ದಾನೆ. ಧೃತರಾಷ್ಟ್ರನ ಬುದ್ಧಿಯು ಸರಿಯಾಗಿಲ್ಲ.

ದಿಷ್ಟ್ಯಾ ತ್ವಿದಾನೀಂ ಪಾಪಾತ್ಮಾ ದಗ್ಧ್ವಾ ದಗ್ಧಃ ಪುರೋಚನಃ ।
ಅನಾಗಸಃ ಸುವಿಶ್ವಸ್ತಾನ್ ಯೋ ದದಾಹ ನರೋತ್ತಮಾನ್ ॥೧೭॥

ನಿರಪರಾಧಿಗಳಾದ, ತನ್ನ ಜೊತೆಯಲ್ಲಿ ನಂಬಿಕೆಯಿಂದ ವಾಸಮಾಡಿದ, ನರೋತ್ತಮರಾದ ಪಾಂಡವರನ್ನು ದಹಿಸಿದ ಪಾಪಾತ್ಮನಾದ ಪುರೋಚನನು ದೈವಬಲದಿಂದ ತಾನೂ ದಗ್ಧನಾಗಿದ್ದಾನೆ.

ವೈಶಂಪಾಯನಃ

ಏವಂ ತೇ ವಿಲಪಂತಿ ಸ್ಮ ವಾರಣಾವತಗಾ ಜನಾಃ ।
ಪರಿವಾರ್ಯ ಗೃಹಂ ಸರ್ವೇ ರಾತ್ರೌ ತಸ್ಥುಃ ಸಮಂತತಃ ॥೧೮॥

ಹೀಗೆ ವಾರಣಾವತದ ಜನರು ರಾತ್ರಿಯಲ್ಲಿ ಆ ಮನೆಯ ಸುತ್ತಲೂ ನೆರೆದು ಮಾತನಾಡಿದರು.

ಪಾಂಡವಾಶ್ಚಾಪಿ ತೇ ಸರ್ವೇ ಸಹ ಮಾತ್ರಾ ಪರಂತಪಾಃ ।
ಬಿಲೇನ ತೇನ ಮಹತಾ ಜಗ್ಮುರ್ವನಮಲಕ್ಷಿತಾಃ ॥೧೯॥

ಪರಂತಪರಾದ ಪಾಂಡವರಾದರೂ ಸಹ ತಾಯಿಯ ಜೊತೆಯಲ್ಲಿ ದೊಡ್ಡ ಬಿಲದ ಮಾರ್ಗದಿಂದ ಹೊರಗೆ ಬಂದು ಯಾರಿಗೂ ತಿಳಿಯದಂತೆ ವನವನ್ನು ಪ್ರವೇಶಿದರು.

ತೇ ತು ನಿದ್ರೋಪರೋಧೇನ ಸಾಧ್ವಸೇನ ಚ ಪಾಂಡವಾಃ ।
ನ ಶೇಕುಸ್ತ್ವರಿತಾ ಗಂತುಂ ಸಹ ಕುಂತ್ಯಾ ನರಾಧಿಪ ॥೨೦॥

ಎಲೈ ರಾಜನೇ, ಪಾಂಡವರು ನಿದ್ರೆಯಿಲ್ಲದುದರಿಂದಲೂ, ಭಯಗ್ರಸ್ತ-ರಾದುದರಿಂದಲೂ, ಕುಂತಿಯ ಜೊತೆಯಲ್ಲಿ ವೇಗವಾಗಿ ನಡೆಯಲು ಸಾಧ್ಯವಾಗಲಿಲ್ಲ.

ಭೀಮಸೇನಸ್ತು ರಾಜೇಂದ್ರ ಭೀಮವೇಗಪರಾಕ್ರಮಃ ।
ಜಗಾಮ ಸರ್ವಾನಾದಾಯ ಭ್ರಾತೄನ್ ಮಾತರಮೇವ ಚ ॥೨೧॥

ರಾಜೇಂದ್ರನೇ, ಭೀಮವೇಗವನ್ನೂ, ಭೀಮಪರಾಕ್ರಮವನ್ನು ಹೊಂದಿದ್ದ ಭೀಮಸೇನನು ಎಲ್ಲಾ ಅಣ್ಣತಮ್ಮಂದಿರನ್ನೂ ಮತ್ತು ತಾಯಿಯನ್ನೂ ಎತ್ತಿಕೊಂಡು ಹೊರಟನು.

ಸ್ಕಂಧಮಾರೋಪ್ಯ ಜನನೀಂ ಯಮಾವಂಕೇನ ವೀರ್ಯವಾನ್ ।
ಪಾರ್ಥೌ ಗೃಹೀತ್ವಾ ಪಾಣಿಭ್ಯಾಂ ಭ್ರಾತರೌ ಸುಮಹಾಬಲಃ ॥೨೨॥

ತರಸಾ ಪಾದಪಾನ್ ಭಂಜನ್ ಮಹೀಂ ಪದ್ಭ್ಯಾಂ ವಿದಾರಯನ್ ।
ಸ ಜಗಾಮಾಶು ತೇಜಸ್ವೀ ವಾತರಂಹಾ ವೃಕೋದರಃ ॥೨೩॥

ತಾಯಿಯನ್ನು ಹೆಗಲಿನ ಮೇಲೆ ಕೂಡಿಸಿಕೊಂಡು ನಕುಲಸಹದೇವರನ್ನು ತನ್ನ ತೊಡೆಯನ್ನು ಆಶ್ರಯಿಸುವಂತೆ ಮಾಡಿ ಧರ್ಮರಾಜ ಮತ್ತು ಅರ್ಜುನರನ್ನು ಕೈಯಲ್ಲಿ ಹಿಡಿದುಕೊಂಡು ಮಹಾಬಲನೂ, ವೀರ್ಯಶಾಲಿಯೂ ಆದ ಭೀಮಸೇನನು ತನ್ನ ವೇಗದಿಂದ ವೃಕ್ಷಗಳನ್ನು ಮುರಿಯುತ್ತಾ ತನ್ನ ಪಾದಕ್ಷೇಪದಿಂದ ಭೂಮಿಯನ್ನು ಸೀಳುತ್ತಾ ವಾಯುವೇಗದಿಂದ ಶೀಘ್ರವಾಗಿ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಅಷ್ಟಚತ್ವಾರಿಂಶತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಜತುಗೃಹದಾಹಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ನೂರನಲವತ್ತೊಂಭತ್ತನೆಯ ಅಧ್ಯಾಯ

(ವಿದುರನು ಕಳುಹಿಸಿದ ನಾವಿಕನಿಂದ ಪಾಂಡವರ ಗಂಗಾತರಣ ಮತ್ತು ವನಪ್ರವೇಶ)

ವೈಶಂಪಾಯನಃ

ಏತಸ್ಮಿನ್ನೇವ ಕಾಲೇ ತು ಯಥಾಸಂಪ್ರತ್ಯಯಂ ಕವಿಃ ।
ವಿದುರಃ ಪ್ರೇಷಯಾಮಾಸ ತದ್ವನಂ ಪುರುಷಂ ಶುಚಿಮ್ ॥೧॥

ಈ ಕಾಲದಲ್ಲಿಯೇ ತನ್ನ ನಂಬಿಕೆಗೆ ಅನುಗುಣವಾಗಿ ಕವಿಯಾದ ವಿದುರನು ಆ ವನಕ್ಕೆ ಶುದ್ಧನಾದ ಒಬ್ಬ ಪುರುಷನನ್ನು ಕಳುಹಿಸಿದನು.

ಸ ಗತ್ವಾ ತು ಯಥೋದ್ದೇಶಂ ವನೇ ಪ್ರೇಕ್ಷತ ಪಾಂಡವಾನ್ ।
ಸಹ ಮಾತ್ರಾ ನರವ್ಯಾಘ್ರಾನನಯಜ್ಜಾಹ್ನವೀಂ ತತಃ ॥೨॥

ಅವನು ಕಾಡಿನ ಆ ಭಾಗಕ್ಕೆ ಹೋಗಿ ಪಾಂಡವರನ್ನು ನೋಡಿ ಆ ನರಶ್ರೇಷ್ಠರನ್ನು ತಾಯಿಯ ಜೊತೆಯಲ್ಲಿ ಗಂಗಾನದಿಯ ಕಡೆಗೆ ಕರೆದುಕೊಂಡು ಬಂದನು.

ವಿದಿತಂ ತನ್ಮಹಾಬುದ್ಧೇರ್ವಿದುರಸ್ಯ ಮಹಾತ್ಮನಃ ।
ತತ್ರಸ್ಥಸ್ಯಾಪಿ ಚಾರೇಣ ಪಾಪಾನಾಂ ವೈ ಚಿಕೀರ್ಷಿತಮ್ ।
ತತೋ ಧರ್ಮವಿದಾ ತೇನ ಪ್ರಹಿತಃ ಪುರುಷಃ ಶಿವಃ ॥೩॥

ಹಸ್ತಿನಪುರದಲ್ಲಿದ್ದರೂ ಗೂಢಚಾರರ ಮೂಲಕ ಈ ಪಾಪಿಗಳ ನಿಶ್ಚಯವನ್ನು ಮಹಾಬುದ್ಧಿಯುಳ್ಳ ಮಹಾತ್ಮನಾದ ವಿದುರನು ತಿಳಿದಿದ್ದನು. ಆದ್ದರಿಂದ ಧರ್ಮಜ್ಞನಾದ ಅವನು ಇಲ್ಲಿಗೆ ಒಬ್ಬ ಶುಭಕರನಾದ ಪುರುಷನನ್ನು ಕಳುಹಿಸಿದನು.

ಸರ್ವವಾತಸಹಾಂ ನಾವಂ ಯುಕ್ತಾಂ ಚಿತ್ರಪತಾಕಿನೀಮ್ ।
ಶಿವೇ ಭಾಗೀರಥೀತೀರೇ ವಿಶ್ವಾಸ್ಯೈರನುಗೈರ್ವೃತಾಮ್ ।
ಪಾಂಡವಾನ್ ದರ್ಶಯಾಮಾಸ ವಚನಂ ಚೇದಮಬ್ರವೀತ್ ॥೪॥

ಆ ಪುರುಷನು ಪಾಂಡವರನ್ನು ಗಂಗೆಯ ದಡಕ್ಕೆ ಕರೆದುಕೊಂಡು ಹೋಗಿ ಎಲ್ಲಾ ಗಾಳಿಗಳನ್ನು ಸಹಿಸುವ ಚಿತ್ರಪತಾಕೆಯುಳ್ಳ ವಿಶ್ವಾಸಪಾತ್ರರಾದ ಅನುಚರರಿಂದ ಕೂಡಿದ ನಾವೆಯನ್ನು ಮಂಗಳವಾದ ಗಂಗಾತೀರದಲ್ಲಿ ಅವರಿಗೆ ತೋರಿಸಿ ಈ ಮಾತನ್ನಾಡಿದನು.

ಕಕ್ಷಘ್ನಂ ಶಿಶಿರಘ್ನಂ ಚ ಮಹಾಕುಕ್ಷಿ ಬಲೌಜಸಮ್ ।
ಬೋದ್ಧವ್ಯಮಿತಿ ಯತ್ ಪ್ರಾಹ ವಿದುರಸ್ತದಿದಂ ತಥಾ ।
ತೇನ ಮಾಂ ಪ್ರೇಷಿತಂ ವಿದ್ಧಿ ವಿಶ್ವಾಸಜನನಾಯ ವೈ ॥೫॥

ವಿದುರನು, ನೀನು ಹೊರಡುವಾಗ ಕಕ್ಷಘ್ನವಾದ, ಶಿಶಿರಘ್ನವಾದ, ಮಹಾಕುಕ್ಷಿಬಲಓಜಸ್ಸನ್ನುಳ್ಳ ವಸ್ತುಗಳನ್ನು ತಿಳಿಯಬೇಕೆಂದು ಏನು ಹೇಳಿದ್ದನೋ ಇದೇ ಆ ಪ್ರಸಂಗ. ಅವನು ನಿನಗೆ ವಿಶ್ವಾಸವುಂಟಾಗುವುದಕ್ಕೆ ಈ ಮಾತುಗಳನ್ನು ಹೇಳಿ ನನ್ನನ್ನು ಕಳುಹಿಸಿದ್ದಾನೆಂದು ತಿಳಿಯಿರಿ.

ಭೂಯಶ್ಚ ಸ್ಮಾಹ ವಃ ಕ್ಷತ್ತಾ ವಿದುರಃ ಸರ್ವಧರ್ಮವಿತ್ ।
ಅಧಿಕ್ಷಿಪನ್ ಧಾರ್ತರಾಷ್ಟ್ರಂ ಸಭ್ರಾತೃಕಮುದಾರಧೀಃ ।
ಕರ್ಣಂ ಚ ದುರ್ಮತಿಂ ಕ್ರೂರಂ ಶಕುನಿಂ ಚಾಪಿ ಸೌಬಲಮ್ ॥೬॥

ಸರ್ವಧರ್ಮವನ್ನೂ ತಿಳಿದ ವಿದುರನು ದುರ್ಯೋಧನನ್ನೂ, ಅವನ ತಮ್ಮಂದಿರನ್ನೂ, ದುರ್ಮತಿಯಾದ ಕರ್ಣನನ್ನೂ , ಸೌಬಲನಾದ ಶಕುನಿಯನ್ನೂ ನಿಂದಿಸುತ್ತಾ ನಿನ್ನನ್ನು ಕುರಿತು ಹೀಗೆ ಹೇಳಿದನು.

ದುರ್ಯೋಧನಃ ಕುಲಸ್ಯಾಸ್ಯ ಕೀರ್ತಿಧರ್ಮಪ್ರಣಾಶಕಃ ।
ಗಾಂಧಾರರಾಜಸಹಿತಃ ಪಿತರಂ ಪಾತಯಿಷ್ಯತಿ ॥೭॥

ದುರ್ಯೋಧನನು ಈ ಕುಲದ ಕೀರ್ತಿಯನ್ನೂ ಮತ್ತು ಧರ್ಮವನ್ನೂ ನಾಶಮಾಡುತ್ತಾನೆ. ಅವನು ಶಕುನಿಯಿಂದ ಸಹಿತನಾಗಿ ತಂದೆಯಾದ ಧೃತರಾಷ್ಟ್ರನನ್ನು ಅಧೋಗತಿಗೆ ತರುತ್ತಾನೆ.

ರಾಜಾ ಚಾಪ್ಯಪರಿಜ್ಞಾನಸ್ನೇಹಬದ್ಧೋ ದುರಾತ್ಮವಾನ್ ।
ಧೃತರಾಷ್ಟ್ರಃ ಪರೀತಾತ್ಮಾ ಧರ್ಮಂ ತ್ಯಜತಿ ಶಾಶ್ವತಮ್ ॥೮॥

ಧೃತರಾಷ್ಟ್ರನೂ ಸಹ ಪರಿಜ್ಞಾನವಿಲ್ಲದ ಸ್ನೇಹದಿಂದ ಬದ್ಧನಾಗಿ ದುಷ್ಟವಾದ ಮನಸ್ಸನ್ನು ಹೊಂದಿ ಕಾಲಚೋದಿತನಾಗಿ ಶಾಶ್ವತವಾದ ಧರ್ಮವನ್ನು ತ್ಯಜಿಸುತ್ತಿದ್ದಾನೆ.

ವೈಶಂಪಾಯನಃ

ಪಾಂಡವಾಶ್ಚಾಪಿ ಗತ್ವಾऽಥ ಗಂಗಾಯಾಸ್ತೀರಮುತ್ತರಮ್ ।
ನಿಷಾದಾಧಿಪತಿಂ ವೀರಂ ದಾಶಂ ಪರಮಧಾರ್ಮಿಕಮ್ ॥೯॥

ದೀಪಿಕಾಭಿಃ ಕೃತಾಲೋಕಂ ಮಾರ್ಗಮಾಣಂ ಚ ಪಾಂಡವಾನ್ ।
ದದೃಶುಃ ಪಾಂಡವೇಯಾಸ್ತೇ ನಾವಿಕಂ ತ್ವರಯಾऽನ್ವಿತಮ್ ॥೧೦॥

ಪಾಂಡವರಾದರೋ ಗಂಗೆಯ ತೀರಕ್ಕೆ ಹೋಗಿ, ಪರಮಧಾರ್ಮಿಕನಾದ ನಿಷಾದಾಧಿಪತಿಯಾದ ದಾಶವೀರನನ್ನು ನೋಡಿದರು. ಪಾಂಡವರು ದೀಪಗಳನ್ನು ಹಿಡಿದುಕೊಂಡು ತಮ್ಮನ್ನೇ ಹುಡುಕುತ್ತಿದ್ದ ತ್ವರೆಯಲ್ಲಿದ್ದ ಆ ನಾವಿಕನನ್ನು ನೋಡಿದರು.

ನಿಷಾದಸ್ತತ್ರ ಕೌಂತೇಯಾನಭಿಜ್ಞಾನಂ ನ್ಯವೇದಯತ್ ।
ವಿದುರಸ್ಯ ಮಹಾಬುದ್ಧೇರ್ಮ್ಲೇಚ್ಛಭಾಷಾದಿ ಯತ್ ತದಾ ॥೧೧॥

ಆ ನಿಷಾದನು ಪಾಂಡವರನ್ನು ಕುರಿತು ತನ್ನಲ್ಲಿ ವಿಶ್ವಾಸಕ್ಕೆ ಕಾರಣವಾಗಿ ವಿದುರನ ಮ್ಲೇಚ್ಛಭಾಷೆಯ ಮಾತುಗಳನ್ನು ಹೇಳಿದನು.

ನಾವಿಕಃ

ವಿದುರೇಣಾಪಿ ಸಂದಿಷ್ಟೋ ದತ್ತಾ ಬಹು ಧನಂ ಮಹತ್ ।
ಗಂಗಾತೀರೇ ನಿವಿಷ್ಟಸ್ತ್ವಂ ಪಾಂಡವಾನ್ ತಾರಯೇಸ್ತಿ ತಿ ॥೧೨॥

ವಿದುರನೂ ಸಹ ನನಗೆ ಬಹಳ ಧನವನ್ನು ಕೊಟ್ಟು ನೀನು ಗಂಗಾತೀರದಲ್ಲಿ ಇದ್ದು ಪಾಂಡವರನ್ನು ದಾಟಿಸಬೇಕು ಎಂಬ ಸಂದೇಶವನ್ನು ನೀಡಿದ್ದಾನೆ.

ಸೋऽಹಂ ಚತುರ್ದಶೀಮದ್ಯ ಗಂಗಾಯಾ ನವಿದೂರತಃ ।
ಚಾರೈರನ್ವೇಷಯಾಮ್ಯಸ್ಮಿನ್ ವನೇ ಮೃಗಗಣಾನ್ವಿತೇ ॥೧೩॥

ಅಂತಹ ನಾನು ಈ ಚತುರ್ದಶಿಯ ದಿವಸ ಮೃಗಗಣಗಳಿಂದ ಕೂಡಿದ ಈ ಕಾಡಿನಲ್ಲಿ ಗಂಗೆಯ ಸಮೀಪದಲ್ಲಿ ಚಾರರ ಸಹಾಯದಿಂದ ನಿಮ್ಮನ್ನು ಹುಡುಕುತ್ತಿದ್ದೇನೆ.

ಪ್ರಭವಂತೋऽತ್ರ ಭದ್ರಂ ವೋ ನಾವಮಾರುಹ್ಯ ಗಮ್ಯತಾಮ್ ।
ಯುಕ್ತಾರಿತ್ರಪತಾಕಾಂ ವೈ ನಿಶ್ಛಿದ್ರಾಂ ಮಂದಿರೋಪಮಾಮ್ ॥೧೪॥

ಪ್ರಭುಗಳಾದ ನಿಮಗೆ ಮಂಗಳವಾಗಲಿ. ನಿಶ್ಛಿದ್ರವಾದ ಮಂದಿರದಂತಿರುವ ಅರಿತ್ರಪತಾಕೆಗಳಿಂದ ಕೂಡಿದ ಈ ನಾವೆಯನ್ನು ಏರಿ ನೀವು ಪ್ರಯಾಣ ಮಾಡಿ.

ಇಯಂ ವಾರಿಪಥೇ ಯುಕ್ತಾ ನೌರಸ್ತು ಸುಖಗಾಮಿನೀ ।
ಮೋಚಯಿಷ್ಯತಿ ವಃ ಸರ್ವಾನ್ ಮೃತ್ಯುಪಾಶಾತ್ ಸಮಾತೃಕಾನ್ ॥

ವಾರಿಪಥದಲ್ಲಿ ಸಂಚರಿಸುವ ಈ ನಾವೆಯು ಸುಖಗಾಮಿನಿಯಾಗಿ ನಿಮ್ಮನ್ನೂ ಮತ್ತು ನಿಮ್ಮ ತಾಯಿಯನ್ನೂ, ಎಲ್ಲರನ್ನೂ ಮೃತ್ಯುಪಾಶದಿಂದ ಬಿಡಿಸುವುದು.

ತತಸ್ತಾನ್ ವ್ಯಥಿತಾನ್ ಸರ್ವಾನ್ ಸಹ ಮಾತ್ರಾ ಪರಂತಪಾನ್ ।
ನಾವಮಾರೋಪ್ಯ ಗಂಗಾಯಾಂ ಪ್ರಯಾತಾನ್ ಪುನರಬ್ರವೀತ್ ॥

ಅನಂತರ ವ್ಯಥೆಯಿಂದ ಕೂಡಿದ ಪರಂತಪರಾದ ಅವರು ತಾಯಿಯ ಜೊತೆಯಲ್ಲಿ ನಾವೆಯನ್ನು ಏರಿ ಹೊರಡುವುದನ್ನು ಕಂಡು ನಾವಿಕನು ಪುನಃ ಹೇಳಿದನು.

ವಿದುರೋ ಮೂರ್ಧ್ನ್ಯುಪಾಘ್ರಾಯ ಪರಿಷ್ವಜ್ಯ ವಚೋ ಮುಹುಃ ।
ಅರಿಷ್ಟಂ ಗಚ್ಛತಾವ್ಯಗ್ರಾಃ ಪಂಥಾನಮಿತಿ ಚಾಬ್ರವೀತ್ ॥೧೭॥

ವಿದುರನು ನೀವು ಹೊರಡುವ ಸಮಯದಲ್ಲಿ ನಿಮ್ಮನ್ನು ಆಲಿಂಗಿಸಿ ಮತ್ತೆ ಮತ್ತೆ ನಿಮ್ಮ ದಾರಿಯು ದೋಷಶೂನ್ಯವಾಗಿದ್ದು, ಅವ್ಯಗ್ರರಾಗಿ ಪ್ರಯಾಣ ಮಾಡಿ ಎಂದು ಹೇಳಿದನಷ್ಟೆ. (ತನ್ನಲ್ಲಿ ವಿಶ್ವಾಸವುಂಟಾಗುವುದಕ್ಕಾಗಿ ಪುನಃ ನಾವಿಕನು ಹಿಂದಿನ ಈ ಘಟನೆಯನ್ನು ಜ್ಞಾಪಿಸುತ್ತಾನೆ)

ಇತ್ಯುಕ್ತಾ ಸಹ ಮಾತ್ರಾ ತೇ ತಸ್ಮಾನ್ಮುಕ್ತಾ ಮಹಾಭಯಾತ್ ।
ಗಂಗಾಮುತ್ತೀರ್ಯ ಕೌಂತೇಯಾ ವನಂ ಜಗ್ಮುರ್ಯಥಾಸುಖಮ್ ॥

ಹೀಗೆ ಹೇಳಲ್ಪಟ್ಟ ಆ ಕುಂತೀಪುತ್ರರು ತಾಯಿಯ ಜೊತೆಯಲ್ಲಿ ಗಂಗೆಯನ್ನು ದಾಟಿ ಮಹಾಭಯದಿಂದ ಮುಕ್ತರಾಗಿ ಸುಖವಾಗಿ ವನವನ್ನು ಸೇರಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕೋನಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ಜತುಗೃಹದಾಹಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರನಲವತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ನೂರ ಐವತ್ತನೆಯ ಅಧ್ಯಾಯ

(ಪ್ರಾತಃಕಾಲದಲ್ಲಿ ಧೃತರಾಷ್ಟ್ರನಿಗೆ ಪಾಂಡವರ ಮರಣದ ವಾರ್ತೆಯ ಹರಣ. ಬಂಧುಗಳಿಂದ ಪಾಂಡವರಿಗೆ ಉದಕ ಕ್ರಿಯ, ಭೀಷ್ಮರ ರೋದನ, ವಿದುರನಿಂದ ಸಾಂತ್ವನ.)

ವೈಶಂಪಾಯನಃ

ಅಥ ರಾತ್ರ್ಯಾಂ ವ್ಯತೀತಾಯಾಂ ಸಶೋಕೋ ನಾಗರೋ ಜನಃ ।
ತತ್ರಾಜಗಾಮ ತ್ವರಿತೋ ದಿದೃಕ್ಷುಃ ಪಾಂಡುನಂದನಾನ್ ॥೧॥

ಅನಂತರ ರಾತ್ರಿಯು ಕಳೆಯುತ್ತಿರಲು ಶೋಕದಿಂದ ಕೂಡಿದ ನಗರವಾಸಿಗಳು ಪಾಂಡವರನ್ನು ನೋಡಲು ಬೇಗ ಅಲ್ಲಿಗೆ ಬಂದರು.

ನಿರ್ವಾಪಯಂತೋ ಜ್ವಲನಂ ತೇ ಜನಾ ದದೃಶುಸ್ತದಾ ।
ಜಾತುಷಂ ತದ್ಗೃಹಂ ದಗ್ಧಮಮಾತ್ಯಂ ಚ ಪುರೋಚನಮ್ ॥೨॥

ಆ ಜನರು ಬೆಂಕಿಯನ್ನು ಆರಿಸುತ್ತಾ ಜತುಗೃಹವೂ ಮತ್ತು ಅಮಾತ್ಯನಾದ ಪುರೋಹಿತನೂ ದಗ್ಧನಾಗಿರುವುದನ್ನು ನೋಡಿದರು.

ನೂನಂ ದುರ್ಯೋಧನೇನೇದಂ ವಿಹಿತಂ ಪಾಪಕರ್ಮಣಾ ।
ಪಾಂಡವಾನಾಂ ವಿನಾಶಾಯ ಇತ್ಯೇವಂ ಚುಕ್ರುಶುರ್ಜನಾಃ ॥೩॥

ನಿಶ್ಚಿತವಾಗಿ ಪಾಪಿಯಾದ ದುರ್ಯೋಧನನು ಪಾಂಡವರನ್ನು ಕೊಲ್ಲುವ ಸಲುವಾಗಿ ಹೀಗೆ ಮಾಡಿದ್ದಾನೆ ಎಂದು ಜನರು ಗೋಳಾಡಿದರು.

ವಿದಿತಂ ಧೃತರಾಷ್ಟ್ರಸ್ಯ ಧಾರ್ತರಾಷ್ಟ್ರೇ ನ ಸಂಶಯಃ ।
ದಗ್ಧವಾನ್ ಪಾಂಡವಾನ್ ಬಾಲಾನ್ ನ ಹ್ಯೇತತ್ ಪ್ರತಿಷಿದ್ಧವಾನ್ ॥

ಧೃತರಾಷ್ಟ್ರನು ತಿಳಿದಿರುವಂತೆಯೇ ದುರ್ಯೋಧನನು ಬಾಲಕರಾದ ಪಾಂಡವರನ್ನು ದಹಿಸಿದ್ದಾನೆ. ಧೃತರಾಷ್ಟ್ರನು ಇದನ್ನು ಪ್ರತಿಷೇಧಿಸಲಿಲ್ಲ.

ನೂನಂ ಶಾಂತನವೋ ಭೀಷ್ಮೋ ನ ಧರ್ಮಮನುವರ್ತತೇ ।
ದ್ರೋಣಶ್ಚ ವಿದುರಶ್ಚೈವ ಕೃಪಶಾಲ್ಯೇ ಚ ಕೌರವಾಃ ॥೫॥

ಶಂತನುವಿನ ಪುತ್ರನಾದ ಭೀಷ್ಮನೂ ಸಹ ಧರ್ಮವನ್ನು ಅನುಸರಿಸುತ್ತಿಲ್ಲ. ದ್ರೋಣರು, ಕೃಪರು, ವಿದುರ ಮೊದಲಾದ ಕೌರವರೂ ಧರ್ಮವನ್ನು ಅನುಸರಿಸುತ್ತಿಲ್ಲ.

ತೇ ವಯಂ ಧೃತರಾಷ್ಟ್ರಾಯ ಪ್ರೇಷಯಾಮೋ ದುರಾತ್ಮನೇ ।
ಸಂವೃತ್ತಸ್ತೇ ಪರಃ ಕಾಮಃ ಪಾಂಡವಾನ್ ದಗ್ಧವಾನಸಿ ॥೬॥

ನಾವು ದುಷ್ಟನಾದ ಧೃತರಾಷ್ಟ್ರನಿಗೆ ನಿನ್ನ ಆಸೆಯು ಪೂರ್ಣವಾಗಿದೆ, ಪಾಂಡವರನ್ನು ಸುಟ್ಟಿದ್ದೀಯೆ ಎಂದು ವಾರ್ತೆಯನ್ನು ಕಳುಹಿಸೋಣ.

ತತೋ ವ್ಯಪೋಹಮಾನಾಸ್ತೇ ಪಾಂಡವಾರ್ಥೇ ಹುತಾಶನಮ್ ।
ನಿಷಾದೀಂ ದದೃಶುರ್ದಗ್ಧಾಂ ಪಂಚಪುತ್ರಾಮನಾಗಸೀಮ್ ॥೭॥

ಅನಂತರ ಪಾಂಡವರನ್ನು ಹುಡುಕುವ ಸಲುವಾಗಿ ಅಗ್ನಿಯನ್ನು ಪಕ್ಕಕ್ಕೆ ಸರಿಸುತ್ತಾ ಅವರು ದಗ್ಧರಾದ, ನಿರಪರಾಧಿಯಾದ ನಿಷಾದಿಯನ್ನೂ ಮತ್ತು ಅವಳ ಐದು ಮಕ್ಕಳನ್ನೂ ನೋಡಿದರು.

ಖನಕೇನ ತು ತೇನೈವ ವೇಶ್ಮ ಶೋಧಯತಾ ಬಿಲಮ್ ।
ಪಾಂಸುಭಿಃ ಪ್ರತ್ಯಪಿಹಿತಂ ಪುರುಷೈಸ್ತೈರಲಕ್ಷಿತಮ್ ॥೮॥

ಖನಕನು ಆ ಮನೆಯನ್ನು ಶೋಧಿಸುವಾಗ ಸುರಂಗವನ್ನು ಮಣ್ಣಿನಿಂದ ಮುಚ್ಚಿದ್ದರಿಂದ ಯಾರಿಗೂ ಅದು ತಿಳಿಯಲಿಲ್ಲ.

ತತಸ್ತೇ ಪ್ರೇಷಯಾಮಾಸುರ್ಧೃತರಾಷ್ಟ್ರಸ್ಯ ನಾಗರಾಃ ।
ಪಾಂಡವಾನಗ್ನಿನಾ ದಗ್ಧಾನಮಾತ್ಯಂ ಚ ಪುರೋಚನಮ್ ॥೯॥

ಆಗ ನಗರವಾಸಿಗಳು ಧೃತರಾಷ್ಟ್ರನಿಗೆ ಪಾಂಡವರೂ ಮತ್ತು ಅಮಾತ್ಯನಾದ ಪುರೋಹಿತನೂ ಅಗ್ನಿಯಿಂದ ದಗ್ಧರಾದರೆಂಬ ವಾರ್ತೆಯನ್ನು ಕಳುಹಿಸಿದರು.

ಶ್ರುತ್ವಾ ತು ಧೃತರಾಷ್ಟ್ರಸ್ತಂ ರಾಜಾ ಸುಮಹದಪ್ರಿಯಮ್ ।
ವಿನಾಶಂ ಪಾಂಡವೇಯಾನಾಂ ವಿಲಲಾಪ ಸುದುಃಖಿತಃ ॥೧೦॥

ರಾಜನಾದ ಧೃತರಾಷ್ಟ್ರನು ಅತ್ಯಂತ ಅಪ್ರಿಯವಾದ ಪಾಂಡವರ ವಿನಾಶದ ವಾರ್ತೆಯನ್ನು ಕೇಳಿ ಬಹಳ ದುಃಖದಿಂದ ವಿಲಾಪಮಾಡಿದನು.

ಧೃತರಾಷ್ಟ್ರಃ

ಅದ್ಯ ಪಾಂಡುರ್ಮೃತೋ ರಾಜಾ ಭ್ರಾತಾ ಮಮ ಸುದುರ್ಲಭಃ ।
ತೇಷು ವೀರೇಷು ದಗ್ಧೇಷು ಮಾತ್ರಾ ಸಹ ವಿಶೇಷತಃ ॥೧೧॥

ವೀರರಾದ ಪಾಂಡವರು ತಾಯಿಯ ಜೊತೆಯಲ್ಲಿ ದಗ್ಧರಾಗುತ್ತಿರಲು, ಈ ದಿನ ಸುದುರ್ಲಭನಾದ ನನ್ನ ತಮ್ಮನಾದ ಪಾಂಡುವು ವಿಶೇಷವಾಗಿ ಮೃತನಾಗಿದ್ದಾನೆ.

ಗಚ್ಛಂತು ಪುರುಷಾಃ ಶೀಘ್ರಂ ನಗರಂ ವಾರಣಾವತಮ್ ।
ಸಂಸ್ಕಾರಯಂತು ತಾನ್ ವೀರಾನ್ ಕುಂತೀಂ ರಾಜಸುತಾಂ ತು ತಾಮ್ ॥

ನನ್ನ ಅನುಚರರಾದ ನೀವು ಶೀಘ್ರವಾಗಿ ವಾರಣಾವತನಗರಕ್ಕೆ ಹೋಗಿ ವೀರರಾದ ಪಾಂಡವರಿಗೂ ಮತ್ತು ರಾಜಸುತೆಯಾದ ಕುಂತಿಗೂ ಸಂಸ್ಕಾರಗಳನ್ನು ಮಾಡಿ.

ಯೇ ಚ ತತ್ರ ಮೃತಾಸ್ತೇಷಾಂ ಸುಹೃದೋಽರ್ಚಂತು ತಾನಪಿ ।
ಕಾರಯಂತು ಚ ಕುಲ್ಯಾನಿ ಶುಭ್ರಾಣಿ ಚ ಮಹಾಂತಿ ಚ ॥೧೩॥

ಅಲ್ಲಿ ಬೇರೆ ಯಾರಾದರೂ ಮೃತರಾಗಿದ್ದರೆ ಅವರಿಗೂ ಪ್ರೀತಿಪಾತ್ರರಾದವರು ವಿಶೇಷರೀತಿಯಿಂದ ಸಂಸ್ಕಾರವನ್ನು ಮಾಡಲಿ.

ಮಮ ದಗ್ಧಾ ಮಹಾತ್ಮಾನಃ ಕುಲವಂಶವಿವರ್ಧನಾಃ ।
ಏವಂ ಗತೇ ಮಯಾ ಶಕ್ಯಂ ಯದ್ಯತ್ ಕಾರಯಿತುಂ ವರಮ್ ।
ಪಾಂಡವಾನಾಂ ಚ ಕುಂತ್ಯಾಶ್ಚ ತತ್ಸರ್ವಂ ಕ್ರಿಯತಾಮಿತಿ ॥೧೪॥

ನನ್ನ ಕುಲವಿವರ್ಧನರಾದ ಮಹಾನುಭಾವರಾದ ಪಾಂಡವರು ದಗ್ಧರಾದರು. ಈ ಪರಿಸ್ಥಿತಿಯಲ್ಲಿ ನಾನು ಪಾಂಡವರ ಮತ್ತು ಕುಂತಿಯ ಸಲುವಾಗಿ ಏನೇನು ಮಾಡಬೇಕಾಗಿದೆಯೋ ಅವೆಲ್ಲವನ್ನೂ ಮಾಡಿ.

ವೈಶಂಪಾಯನಃ

ಸಮೇತಾಸ್ತು ತತಃ ಸರ್ವೇ ಭೀಷ್ಮೇಣ ಸಹ ಕೌರವಾಃ ।
ಧೃತರಾಷ್ಟ್ರಃ ಸಪುತ್ರಶ್ಚ ಗಂಗಾಮಭಿಮುಖಾ ಯಯುಃ ॥೧೫॥

ಆಗ ಕೌರವರೆಲ್ಲರೂ ಭೀಷ್ಮರ ಜೊತೆಯಲ್ಲಿ ಕೂಡಿಕೊಂಡು ಧೃತರಾಷ್ಟ್ರನನ್ನೂ ಅವನ ಪುತ್ರರನ್ನೂ ಕರೆದುಕೊಂಡು ಗಂಗೆಗೆ ಅಭಿಮುಖವಾಗಿ ಹೊರಟರು.

ಏಕವಸ್ತ್ರಾ ನಿರಾನಂದಾ ನಿರಾಭರಣವೇಷ್ಟನಾಃ ।
ಉದಕಂ ಕರ್ತುಕಾಮಾ ವೈ ಪಾಂಡವಾನಾಂ ಮಹಾತ್ಮನಾಮ್ ॥೧೬॥

ಮಹಾತ್ಮರಾದ ಪಾಂಡವರಿಗೆ ಉದಕಕ್ರಿಯೆಯನ್ನು ಮಾಡಲು ಬಯಸಿ ಅವರು ಏಕವಸ್ತ್ರವನ್ನು ಉಟ್ಟು ಆಭರಣಗಳನ್ನೂ, ಕವಚಗಳನ್ನೂ ತೆಗೆದು ನಿರಾನಂದರಾಗಿ ಹೊರಟರು.

ಏವಂ ಗತ್ವಾ ತತಶ್ಚಕ್ರೇ ಜ್ಞಾತಿಭಿಃ ಪರಿವಾರಿತಃ ।
ಉದಕಂ ಪಾಂಡುಪುತ್ರೇಭ್ಯೋ ಧೃತರಾಷ್ಟ್ರೋಽಂಬಿಕಾಸುತಃ ॥೧೭॥

ಅಂಬಿಕಾಸುತನಾದ ಧೃತರಾಷ್ಟ್ರನು ಹೀಗೆ ಜ್ಞಾತಿಗಳಿಂದ ಪರಿವೃತನಾಗಿ ಗಂಗೆಯನ್ನು ತಲುಪಿ ಪಾಂಡುಪುತ್ರರಿಗೆ ಉದಕಕ್ರಿಯೆಯನ್ನು ಮಾಡಿದನು.

ಚುಕ್ರುಶುಃ ಕುರವಃ ಸರ್ವೇ ಭೃಶಂ ಶೋಕಸಮನ್ವಿತಾಃ ।
ವಿದುರಸ್ತ್ವಲ್ಪಶಃ ಶೋಕಂ ಚಕ್ರೇ ವೇದ ಹಿ ತತ್ ಪರಮ್ ॥೧೮॥

ಬಹಳ ಶೋಕದಿಂದ ಕೂಡಿದವರಾಗಿ ಕುರುಗಳೆಲ್ಲರೂ ಗಟ್ಟಿಯಾಗಿ ಗೋಳಾಡಿದರು. ನಿಜಾಂಶವನ್ನು ತಿಳಿದ ವಿದುರನು ಅಲ್ಪಶೋಕವನ್ನು ಮಾಡಿದನು.

ತತಃ ಪ್ರವ್ಯಥಿತೋ ಭೀಷ್ಮಃ ಪಾಂಡುರಾಜಸುತಾನ್ ಮೃತಾನ್ ।
ಸಹ ಮಾತ್ರೇತಿ ತಚ್ಛ್ರುತ್ವಾ ವಿಲಲಾಪ ರುರೋದ ಚ ॥೧೯॥

ಅನಂತರ ತುಂಬಾ ವ್ಯಥೆಯಿಂದ ಕೂಡಿದ ಭೀಷ್ಮರು ಪಾಂಡುರಾಜನ ಮಕ್ಕಳು ತಾಯಿಯ ಜೊತೆಯಲ್ಲಿ ಮೃತರಾದರೆಂಬ ವಾರ್ತೆಯನ್ನು ಕೇಳಿ ವಿಲಾಪನ್ನು ಮಾಡಿ ಗಟ್ಟಿಯಾಗಿ ಅತ್ತರು.

ಭೀಷ್ಮಃ

ಹಾ ಯುಧಿಷ್ಠಿರ ಹಾ ಭೀಮ ಹಾ ಧನಂಜಯ ಹಾ ಯಮೌ ।
ಹಾ ಪೃಥೇ ಸಹ ಪುತ್ರೈಸ್ತ್ವಮೇಕರಾತ್ರೇಣ ಸ್ವರ್ಗತಾ ।
ಮಾತ್ರಾ ಸಹ ಕುಮಾರಾಸ್ತೇ ಸರ್ವೇ ತತ್ರೈವ ಸಂಸ್ಥಿತಾಃ ॥೨೦॥

ಅಯ್ಯೋ ಯುಧಿಷ್ಠಿರ, ಭೀಮ, ಧನಂಜಯ, ನಕುಲ ಸಹದೇವರೇ, ಅಯ್ಯೋ ಕುಂತಿಯೇ, ನೀನು ಮಕ್ಕಳ ಜೊತೆಯಲ್ಲಿ ಒಂದೇ ರಾತ್ರಿಯಲ್ಲಿ ಸ್ವರ್ಗವನ್ನು ತಲುಪಿದೆ. ತಾಯಿಯ ಜೊತೆಯಲ್ಲಿ ಎಲ್ಲಾ ಕುಮಾರರೂ ಅಲ್ಲೇ ಇದ್ದರಷ್ಟೇ.

ನ ಹಿ ತೌ ನೋತ್ಸಹೇಯಾತಾಂ ಭೀಮಸೇನಧನಂಜಯೌ ।
ತರಸಾऽವಹಿತಾತ್ಮಾನೌ ನಿರ್ಭೇತ್ತುಮಪಿ ಮಂದಿರಮ್ ॥೨೧॥

ಪರಾಸುತ್ವಂ ನ ಪಶ್ಯಾಮಿ ಪೃಥಾಯಾಃ ಸಹ ಪಾಂಡವೈಃ ।
ಸರ್ವಥಾ ವಿಕೃತಂ ತತ್ ತು ಯದಿ ತೇ ನಿಧನಂ ಗತಾಃ । ॥೨೨॥

ಅತಿಬಲವಂತರೂ, ಯಾವಾಗಲೂ ಎಚ್ಚರಿಕೆಯಿಂದ ಇರುವವರೂ ಆದ ಭೀಮಾರ್ಜುನರು ಆ ಮಂದಿರವನ್ನು ಒಡೆಯಲು ಪ್ರಯತ್ನ ಮಾಡಲಿಲ್ಲ ಎಂಬುದು ವಿಷಾದದ ಸಂಗತಿ. ಪಾಂಡವರಿಗೂ ಮತ್ತು ಕುಂತಿಗೂ ನಾನು ಮರಣವನ್ನು ಸಂಭಾವಿಸುವುದಿಲ್ಲ. ಒಂದು ಪಕ್ಷ ಅವರು ಮೃತರಾಗಿದ್ದರೆ ಅದು ಅತ್ಯಂತ ವಿರುದ್ದವೇ ಸರಿ.

ಧರ್ಮರಾಜಃ ಸ ನಿರ್ದಿಷ್ಟೋ ನನು ವಿಪ್ರೈರ್ಯುಧಿಷ್ಠಿರಃ ।
ಪೃಥಿವ್ಯಾಂ ಚ ರಥಿಶ್ರೇಷ್ಠೋ ಭವಿತಾ ಸ ಧನಂಜಯಃ ॥೨೩॥

ಸತ್ಯವ್ರತೋ ಧರ್ಮದತ್ತಃ ಸತ್ಯವಾಕ್ ಶುಭಲಕ್ಷಣಃ ।
ಕಥಂ ಕಾಲವಶಂ ಪ್ರಾಪ್ತಃ ಪಾಂಡವೇಯೋ ಯುಧಿಷ್ಠಿರಃ ॥೨೪॥

ಧರ್ಮರಾಜನು ಪೃಥಿವೀಪತಿಯಾಗುತ್ತಾನೆಂದು, ಧನಂಜಯನು ರಥಿಶ್ರೇಷ್ಠನಾಗುವನೆಂದು ವಿಪ್ರರು ನುಡಿದ್ದಿದರಷ್ಟೆ. ಸತ್ಯವ್ರತನೂ, ಯಮನಿಂದ ಕೊಡಲ್ಪಟ್ಟವನೂ, ಸತ್ಯವಚನನೂ ಶುಭಲಕ್ಷಣೋಪೇತನೂ ಆದ ಪಾಂಡುಪುತ್ರನಾದ ಯುಧಿಷ್ಠಿರನು ಹೇಗೆ ಮೃತ್ಯುವಶನಾದನು?

ಆತ್ಮಾನಮುಪಮಾಂ ಕೃತ್ವಾ ಪರೇಷಾಂ ವರ್ತತೇ ತು ಯಃ ।
ಸಹ ಮಾತ್ರಾ ತು ಕೌರವ್ಯಃ ಕಥಂ ಕಾಲವಶಂ ಗತಃ ॥೨೫॥

ತನ್ನನ್ನು ದೃಷ್ಟಾಂತವನ್ನಾಗಿ ಮಾಡಿಕೊಂಡು ಇನ್ನೊಬ್ಬರ ವಿಷಯದಲ್ಲಿ ನಡೆದುಕೊಳ್ಳುವ ಧರ್ಮರಾಜನು ತಾಯಿಯ ಜೊತೆಯಲ್ಲಿ ಹೇಗೆ ಮೃತನಾದನು?

ಪಾಲಿತಶ್ಚ ಚಿರಂ ಕಾಲಂ ಫಲಕಾಲೇ ಯಥಾ ದ್ರುಮಃ ।
ಭಗ್ನಃ ಸ್ಯಾದ್ ವಾಯುವೇಗೇನ ತಥಾ ರಾಜಾ ಯುಧಿಷ್ಠಿರಃ ॥೨೬॥

ಬಹಳ ಕಾಲದಿಂದ ಬೆಳೆಸಿದ ವೃಕ್ಷವು ಫಲಕಾಲದಲ್ಲಿ ವಾಯುವೇಗದಿಂದ ಭಗ್ನವಾಗುವಂತೆ ಈ ದಿನ ಯುಧಿಷ್ಠಿರನು ಮೃತನಾಗಿದ್ದಾನೆ.

ಯೌವರಾಜ್ಯೇऽಭಿಷಿಕ್ತೇನ ಪಿತುರ್ಯೋನಾಹೃತಂ ಯಶಃ ।
ಆತ್ಮನಶ್ಚ ಪಿತುಶ್ಚೈವ ಸತ್ಯಧರ್ಮಸ್ಯ ವೃತ್ತಿಭಿಃ ॥೨೭॥

ಬ್ರಹ್ಮಣ್ಯಸ್ತು ಪುರಪ್ರೇಕ್ಷೀ ಹೃದಿ ಶೋಕಂ ನಿಧಾಯ ಮೇ ।
ಕಾಲೇನ ಸ ಹಿ ಸಂಭಗ್ನೋ ಧಿಕ್ ಕೃತಾಂತಮನರ್ಥದಮ್ ॥೨೮॥

ಯುವರಾಜ್ಯದಲ್ಲಿ ಅಭಿಷಕ್ತನಾದಾಗಲೇ ಯಾರು ತನ್ನ ಸತ್ಯಧರ್ಮದ ನಡತೆಯಿಂದ ತಂದೆಯ ಕೀರ್ತಿಯನ್ನು ಅಪಹರಿಸಿದನೋ, ಬ್ರಹ್ಮಣ್ಯನಾದ, ಇನ್ನೊಬ್ಬರ ಬಗ್ಗೆ ಯಾವಾಗಲೂ ಚಿಂತಿಸುವ ಅಂತಹ ಯುಧಿಷ್ಠಿರನು ನನ್ನ ಹೃದಯದಲ್ಲಿ ಶೋಕವನ್ನು ತುಂಬಿ ಮೃತ್ಯುವಿನಿಂದ ಭಗ್ನನಾಗಿದ್ದಾನೆ. ಅಯ್ಯೋ, ಕಷ್ಟ. ವಿಧಿಯು ಅನರ್ಥದಾಯಕವಾಗಿದೆ.

ಯಚ್ಚ ಸಾ ವನವಾಸೇನ ದುಃಖಿತಾ ಕ್ಲೇಶಭಾಗಿನೀ ।
ಪುತ್ರಗೃಧ್ನುತಯಾ ಕುಂತೀ ನ ಭರ್ತಾರಂ ಮೃತಾ ತ್ವನು ॥೨೯॥

ಅಲ್ಪಕಾಲಂ ಕುಲೇ ಜಾತಾ ಭರ್ತುಃ ಪ್ರೀತಿಮವಾಪ ಯಾ ।
ದಗ್ಧಾಽದ್ಯ ಸಹ ಪುತ್ರೈಃ ಸಾ ಅಸಂಪೂರ್ಣಮನೋರಥಾ ॥೩೦॥

ಯಾವ ಕುಂತಿಯು ವನವಾಸದಿಂದ ದುಃಖಿತಳಾಗಿ, ಕ್ಲೇಶಗಳನ್ನು ಅನುಭವಿಸಿ ಮಕ್ಕಳ ಮೇಲಿನ ಆಸೆಯಿಂದ ಪತಿಯ ಜೊತೆಯಲ್ಲಿ ಸಹಗಮನವನ್ನು ಮಾಡದೇ ಶ್ರೇಷ್ಠಕುಲದಲ್ಲಿ ಜಾತಳಾದ ಅವಳು ಸ್ವಲ್ಪಕಾಲ ಪತಿಯ ಪ್ರೀತಿಯನ್ನು ಸಂಪಾದಿಸಿದಳೋ, ಅಂತಹ ಕುಂತಿಯು ಇಂದು ತನ್ನ ಮನೋರಥವು ಈಡೇರದೇ ಪುತ್ರರ ಜೊತೆಯಲ್ಲಿ ದಗ್ಧಳಾಗಿದ್ದಾಳೆ.

ಏತಚ್ಚ ಚಿಂತಯಾನಸ್ಯ ವ್ಯಥಿತಂ ಬಹುಧಾ ಮನಃ ।
ಅವಸೂರ್ಜ್ಯ ಚ ಮೇ ದೇಹಂ ಹೃದಯಾಗ್ನಿರುದೀರ್ಯತೇ ॥೩೧॥

ಇದನ್ನು ಚಿಂತಿಸುವ ನನ್ನ ಮನಸ್ಸಿಗೆ ಬಹಳ ದುಃಖವಾಗಿದೆ. ನನ್ನ ಹೃದಯದಲ್ಲಿ ಇರುವ ಶೋಕಾಗ್ನಿಯು ದೇಹವನ್ನು ಭೇದಿಸಿಕೊಂಡು ಉರಿಯುತ್ತಿದೆ.

ಪೀನಸ್ಕಂಧಶ್ಚಾರುಬಾಹುರ್ಮೇರುಕುಂಜಸಮೋ ಯುವಾ ।
ಮೃತೋ ಭೀಮ ಇತಿ ಶ್ರುತ್ವಾ ಮನೋ ನ ಶ್ರದ್ದಧಾತಿ ಮೇ ॥೩೨॥

ಪೀನಸ್ಕಂಧನೂ, ಮಹಾಬಾಹುವೂ, ಮೇರುಪರ್ವತದ ಸದೃಶನೂ, ಯುವಕನೂ ಆಗಿದ್ದ ಭೀಮನು ಮೃತನಾದನೆಂಬ ವಾರ್ತೆಯನ್ನು ಕೇಳಿ ನನ್ನ ಮನಸ್ಸು ನಂಬುತ್ತಿಲ್ಲ.

ಅನಿಂದ್ಯಾನಿ ಚ ಯೋ ಗಚ್ಛನ್ ಕ್ಷಿಪ್ರಹಸ್ತೋ ದೃಢಾಯುಧಃ ।
ಪ್ರಪತ್ತಿಮಾಂಲ್ಲಬ್ಧಲಕ್ಷೋ ರಥಯಾನವಿಶಾರದಃ ।
ದೂರಪಾತೀ ತ್ವಸಂಭ್ರಾಂತೋ ಮಹಾವೀರ್ಯೋ ಮಹಾಸ್ತ್ರವಿತ್ ॥

ಆ ಅರ್ಜುನನಾದರೋ ಅನಿಂದ್ಯ ಕರ್ಮಗಳನ್ನು ಮಾಡುವವನು, ಕ್ಷಿಪ್ರಹಸ್ತವುಳ್ಳವನು, ದೃಢಾಯುಧನಾದವನು, ಒಳ್ಳೆಯ ತಿಳುವಳಿಕೆಯುಳ್ಳವನು, ಯಾವಾಗಲೂ ಲಕ್ಷ್ಯವನ್ನು ಮುಟ್ಟುವವನು, ರಥಯಾನದಲ್ಲಿ ವಿಶಾರದನು, ಬಹುದೂರದವರೆಗೆ ಬಾಣವನ್ನು ಬಿಡುವವನು, ಮೋಹವಿಲ್ಲದವನು, ಮಹಾಪರಾಕ್ರಮಿಯು ಮತ್ತು ಮಹಾಸ್ತ್ರವಿತ್ತನು.

ಅದೀನಾತ್ಮಾ ನರವ್ಯಾಘ್ರಃ ಶ್ರೇಷ್ಠಃ ಸರ್ವಧನುಷ್ಮತಾಮ್ ।
ಯೇನ ಪ್ರಾಚ್ಯಾಃ ಸಸೌವೀರಾ ದಾಕ್ಷಿಣಾತ್ಯಾಶ್ಚ ನಿರ್ಜಿತಾಃ ॥೩೪॥

ಖ್ಯಾಪಿತಂ ಯೇನ ಶೂರೇಣ ತ್ರಿಷು ಲೋಕೇಷು ಪೌರುಷಮ್ ।
ಯಸ್ಮಿಂಜಾತೇ ವಿಶೋಕಾऽಭೂತ್ ಕುಂತೀ ಪಾಂಡುಶ್ಚ ವೀರ್ಯವಾನ್ ॥

ಪುರಂದರಸಮೋ ಜಿಷ್ಣುಃ ಕಥಂ ಕಾಲವಶಂ ಗತಃ ।
ಕಥಂ ತಾವೃಷಭಸ್ಕಂಧೌ ಸಿಂಹವಿಕ್ರಾಂತಗಾಮಿನೌ ।
ಮೃತ್ಯುಧರ್ಮಮನುಪ್ರಾಪ್ತೌ ಯಮಾವರಿನಿಬರ್ಹಣೌ ॥೩೬॥

ಎಂದೂ ಮನಸ್ಸಿನ ದೈನ್ಯವನ್ನು ಹೊಂದದವನು, ಎಲ್ಲಾ ಧನುರ್ಧಾರಿಗಳಲ್ಲಿ ಶ್ರೇಷ್ಠನಾದವನು, ನರವ್ಯಾಘ್ರನಾದವನು, ಯಾವನಿಂದ ಪೂರ್ವದಿಕ್ಕಿನ ಸೌವೀರರಾಜರು, ದಕ್ಷಿಣ ದಿಕ್ಕಿನ ರಾಜರುಗಳು ಗೆಲ್ಲಲ್ಪಟ್ಟರೋ, ಯಾವ ಶೂರನ ಪೌರುಷವು ಮೂರುಲೋಕಗಳಲ್ಲಿಯೂ ಮೆರೆಯಿತೋ, ಯಾವನು ಜನಿಸಿದಾಗ ಕುಂತಿಯು ಮತ್ತು ವೀರಶಾಲಿಯಾದ ಪಾಂಡುವು ಶೋಕರಹಿತರಾದರೋ ಅಂತಹ ಇಂದ್ರನಿಗೆ ಸಮನಾದ ಅರ್ಜುನನು ಹೇಗೆ ಕಾಲವಶನಾದನು? ಋಷಭಸ್ಕಂಧರಾದ,

ಸಿಂಹವಿಕ್ರಾಂತಗಾಮಿಗಳಾದ ಶತ್ರುಸೂದನರಾದ ನಕುಲಸಹದೇವರಾದರೂ ಹೇಗೆ ಮೃತ್ಯುವನ್ನು ಹೊಂದಿದರು?

ವೈಶಂಪಾಯನಃ

ತಸ್ಯ ವಿಕ್ರಂದಿತಂ ಶ್ರುತ್ವಾ ಉದಕಂ ಚ ಪ್ರಸಿಂಚತಃ ।
ದೇಶಕಾಲವಿದಾಸಾದ್ಯ ವಿದುರಃ ಪ್ರತ್ಯಭಾಷತ ॥೩೭॥

ಉದಕಕ್ರಿಯೆಯನ್ನು ಮಾಡುವ ಭೀಷ್ಮರ ಆಕ್ರಂದನವನ್ನು ಕೇಳಿ ದೇಶಕಾಲಗಳನ್ನು ತಿಳಿದ ವಿದುರನು ಅವರನ್ನು ಸಮೀಪಿಸಿ ಮಾತನಾಡಿದನು.

ಮಾ ಶೋಚೀಸ್ತ್ವಂ ನರವ್ಯಾಘ್ರ ಜಹಿ ಶೋಕಂ ಮಹಾವ್ರತ ।
ನ ತೇಷಾಂ ವಿದ್ಯತೇ ಪಾಪಂ ಪ್ರಾಪ್ತಕಾಲಂ ಕೃತಂ ಮಯಾ ।
ಯಚ್ಚ ತೇಭ್ಯಸ್ತ್ವಮುದಕಂ ವಿಪ್ರಸಿಂಚಸಿ ಭಾರತ ॥೩೮॥

ಸೋಽಬ್ರವೀತ್ ಕಿಂಚಿದುತ್ಸಾರ್ಯ ಕೌರವಾಣಾಮಶೃಣ್ವತಾಮ್ ।
ಕ್ಷತ್ತಾರಮುಪಸಂಗೃಹ್ಯ ಬಾಷ್ಪೋತ್ಪೀಡಕಲಸ್ವರಃ ॥೩೯॥

ಎಲೈ ಭಾರತನೇ, ಯಾವ ಪಾಂಡವರಿಗೆ ನೀನು ಉದಕಕ್ರಿಯೆಯನ್ನು ಮಾಡುತ್ತಿರುವೆಯೋ ಅಂತಹ ಪಾಂಡವರ ವಿಷಯದಲ್ಲಿ ಶೋಕವನ್ನು ಪಡಬೇಡ. ಎಲೈ ಮಹಾವ್ರತನಾದ ನರಶ್ರೇಷ್ಠನೇ, ಶೋಕವನ್ನು ತ್ಯಜಿಸು. ಆ ಪಾಂಡವರಿಗೆ ಎಂದೂ ಅಶುಭವುಂಟಾಗುವುದಿಲ್ಲ. ನಾನು ಅವರಿಗೆ ಯೋಗ್ಯವಾದ ಸಮಯದಲ್ಲಿ ಮಾಡಬೇಕಾದ ಕಾರ್ಯವನ್ನು ಮಾಡಿದ್ದೇನೆ.

ಆಗ ಭೀಷ್ಮರು ಸ್ವಲ್ಪ ಪಕ್ಕಕ್ಕೆ ಸರಿದು ವಿದುರನನ್ನು ಸಮೀಪಿಸಿ ಬಾಷ್ಪ ಗದ್ಗದವಾದ ಸ್ವರದಿಂದ ಕೌರವರಿಗೆ ಕೇಳಿಸದಂತೆ ಮಾತನಾಡಿದರು.

ಭೀಷ್ಮಃ

ಕಥಂ ತೇ ತಾತ ಜೀವಂತಿ ಪಾಂಡೋಃ ಪುತ್ರಾ ಮಹಾರಥಾಃ ।
ಕಥಮಸ್ಮತ್ಕೃತೇ ಪಕ್ಷಃ ಪಾಂಡೋರ್ನ ವಿನಿಪಾತಿತಃ ॥೪೦॥

ಪ್ರಿಯನೇ, ಪಾಂಡುಪುತ್ರರಾದ ಮಹಾರಥರು ಹೇಗೆ ಜೀವಿಸಿದ್ದಾರೆ? ನಮ್ಮ ಸಲುವಾಗಿ ಹೇಗೆ ಪಾಂಡುವಿನ ಪಕ್ಷವು ವಿನಾಶವನ್ನು ಹೊಂದಿಲ್ಲ?

ಕಥಂ ತ್ವತ್ಪಮುಖಾಃ ಸರ್ವೇ ಪ್ರಮುಕ್ತಾ ಮಹತೋ ಭಯಾತ್ ।
ಜನನೀ ಗರುಡೇನೇವ ಕುಮಾರಾಸ್ತೇ ಸಮುದ್ಧೃತಾಃ ॥೪೧॥

ಹೇಗೆ ನಿನ್ನ ವಶವರ್ತಿಗಳಾದ ಅವರು ಮಹಾಭಯದಿಂದ ಬಿಡುಗಡೆಯನ್ನು ಹೊಂದಿದರು? ಗರುಡನು ತಾಯಿಯನ್ನು ರಕ್ಷಿಸಿದಂತೆ ಹೇಗೆ ಆ ಕುಮಾರರು ರಕ್ಷಿಸಲ್ಪಟ್ಟರು?

ವೈಶಂಪಾಯನಃ

ಏವಮುಕ್ತಸ್ತು ಕೌರವ್ಯ ಕೌರವಾಣಾಮಶೃಣ್ವತಾಮ್ ।
ಆಚಚಕ್ಷೇ ಸ ಧರ್ಮಾತ್ಮಾ ಭೀಷ್ಮಾಯಾದ್ಭುತಕರ್ಮಣೇ ॥೪೨॥

ಎಲೈ ಕೌರವ್ಯನೇ, ಭೀಷ್ಮರು ಹೀಗೆ ಹೇಳಿದಾಗ ಧರ್ಮಾತ್ಮನಾದ ವಿದುರನು ಅದ್ಭುತಕರ್ಮವುಳ್ಳ ಭೀಷ್ಮರನ್ನು ಕುರಿತು ಕೌರವರಿಗೆ ಕೇಳಿಸದಂತೆ ಹೀಗೆ ಮಾತನಾಡಿದನು.

ಧೃತರಾಷ್ಟ್ರಸ್ಯ ಶಕುನೇ ರಾಜ್ಞೋ ದುರ್ಯೋಧನಸ್ಯ ಚ ।
ವಿನಾಶೇ ಪಾಂಡುಪುತ್ರಾಣಾಂ ಕೃತೋ ಮತಿವಿನಿಶ್ಚಯಃ ॥೪೩॥

ಧೃತರಾಷ್ಟ್ರನಿಗೂ, ಶಕುನಿಗೂ, ರಾಜನಾದ ದುರ್ಯೋಧನನಿಗೂ ಪಾಂಡವರನ್ನು ವಿನಾಶಮಾಡಬೇಕೆಂಬ ದೃಢನಿಶ್ಚಯವಿದ್ದಿತು.

ತಚ್ಚಾಹಮಪಿ ಚ ಜ್ಞಾತ್ವಾ ತಸ್ಯ ಪಾಪಸ್ಯ ನಿಶ್ಚಯಮ್ ।
ತಜ್ಜಿಘಾಂಸುರಹಂ ಚಾಪಿ ತೇಷಾಮನುಮತೇ ಸ್ಥಿತಃ ॥೪೪॥

ಅವರ ಆ ಪಾಪನಿಶ್ಚಯವನ್ನು ನಾನೂ ತಿಳಿದು ಅದಕ್ಕೆ ಪ್ರತೀಕಾರವನ್ನು ಮಾಡಲು ಬಯಸಿ ನಾನೂ ಅವರು ಸಮ್ಮತಿಸುವಂತೆ ನಡೆದುಕೊಂಡೆನು.

ತತೋ ಜತುಗೃಹಂ ಗತ್ವಾ ದಹನೇऽಸ್ಮಿನ್ ನಿಯೋಜಿತೇ ।
ಪೃಥಾಯಾಶ್ಚ ಸಪುತ್ರಾಯಾ ಧಾರ್ತರಾಷ್ಟ್ರಸ್ಯ ಶಾಸನಾತ್ ॥೪೫॥

ತತಃ ಖನಕಮಾಹೂಯ ಸುರಂಗಂ ವೈ ಬಿಲಂ ತದಾ ।
ಸಗುಹಾಂ ಕಾರಯಿತ್ವಾ ತೇ ಕುಂತ್ಯಾ ಪಾಂಡುಸುತಾಸ್ತದಾ ।
ನಿಷ್ಕ್ರಾಮಿತಾ ಮಯಾ ಪೂರ್ವಂ ಮಾ ಸ್ಮ ಶೋಕೇ ಮನಃ ಕೃಥಾಃ ॥೪೬॥

ಅನಂತರ ದುರ್ಯೋಧನನ ಆದೇಶದಂತೆ ಕುಂತಿಯನ್ನು ಮತ್ತು ಪಾಂಡವರನ್ನೂ ಜತುಗೃಹಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅವರ ದಹನವು ನಿಯೋಜಿಸಲ್ಪಡುತ್ತಿರಲು, ನಾನು ನನಗೆ ಆಪ್ತನಾದ ಖನಕನನ್ನು ಕರೆದು ಅಲ್ಲಿ ಕುಂತಿ ಮತ್ತು ಪಾಂಡುಸುತರ ಸಲುವಾಗಿ ಒಂದು ಗುಹೆಯಿಂದ ಕೂಡಿದ ಸುರಂಗ ಬಿಲವನ್ನು ಮಾಡಿಸಿ ಅವರನ್ನು ಅಲ್ಲಿಂದ ಮೊದಲೇ ದಾಟಿಸಿದ್ದೇನೆ. ಮನಸ್ಸಿನಲ್ಲಿ ಶೋಕವನ್ನು ಮಾಡಬೇಡ.

ತತಸ್ತು ನಾವಮಾರೋಪ್ಯ ಸಹಪುತ್ರಾಂ ಪೃಥಾಮಹಮ್ ।
ದತ್ತ್ವಾಽಭಯಂ ಸಪುತ್ರಾಯೈ ಕುಂತ್ಯೈ ಗೃಹಮದಾಹಯಮ್ ।
ತಸ್ಮಾತ್ ತೇ ಮಾ ಸ್ಮ ಭೂದ್ ದುಃಖಂ ಮುಕ್ತಾಃ ಪಾಪಾತ್ ತು
ಪಾಂಡವಾಃ ॥೪೭॥

ಅನಂತರ ಕುಂತಿಗೂ ಮತ್ತು ಅವಳ ಮಕ್ಕಳಿಗೂ ಅಭಯವನ್ನು ಕೊಟ್ಟು, ನಾವೆಯನ್ನು ಏರಿಸಿ, ಜತುಗೃಹವನ್ನು ನಾನೇ ಸುಡಿಸಿದ್ದೇನೆ. ಆದ್ದರಿಂದ ನೀನು ದುಃಖಪಡುವುದು ಬೇಡ. ಪಾಂಡವರು ಅನಿಷ್ಟದಿಂದ ಪಾರಾಗಿದ್ದಾರೆ.

ನಿರ್ಗತಾಃ ಪಾಂಡವಾ ರಾಜನ್ ಮಾತ್ರಾ ಸಹ ಪರಂತಪಾಃ ।
ಅಗ್ನಿದಾಹಾನ್ಮಹಾಘೋರಾನ್ಮಯಾ ತಸ್ಮಾದುಪಾಯತಃ ॥೪೮॥

ರಾಜನೇ, ಪರಂತಪರಾದ ಪಾಂಡವರನ್ನು ತಾಯಿಯ ಜೊತೆಯಲ್ಲಿ ಆ ಮಹಾಘೋರವಾದ ಅಗ್ನಿದಾಹದಿಂದ ನಾನು ಉಪಾಯವನ್ನು ಆಶ್ರಯಿಸಿ ದಾಟಿಸಿದ್ದೇನೆ.

ಮಾ ಶೋಕಂ ಕಾರ್ಷೀ ರಾಜಂಸ್ತ್ವಂ ಜೀವಂತ್ಯೇವ ಚ ಪಾಂಡವಾಃ ।
ಪ್ರಚ್ಛನ್ನಾ ವಿಚರಿಷ್ಯಂತಿ ಯಾವತ್ಕಾಲಸ್ಯ ಪರ್ಯಯಃ ॥೪೯॥

ರಾಜನೇ, ಶೋಕವನ್ನು ಮಾಡಬೇಡ, ಪಾಂಡವರು ಬದುಕಿಯೇ ಇದ್ದಾರೆ. ಯೋಗ್ಯವಾದ ಕಾಲವು ಬರುವವರೆಗೂ ಅವರು ಪ್ರಚ್ಛನ್ನರಾಗಿ ಸಂಚರಿಸುವರು.

ತಸ್ಮಿನ್ ಯುಧಿಷ್ಠಿರಂ ಕಾಲೇ ದ್ರಕ್ಷ್ಯಂತಿ ಭುವಿ ಭೂಮಿಪಾಃ ।
ವಿಮಲಂ ಕೃಷ್ಣಪಕ್ಷಾಂತೇ ಜಗಚ್ಚಂದ್ರಮಿವೋದಿತಮ್ ॥೫೦॥

ಯೋಗ್ಯವಾದ ಸಮಯವು ಬಂದಾಗ, ಕೃಷ್ಣಪಕ್ಷವು ಕಳೆದ ಮೇಲೆ ಜನರು ಚಂದ್ರನನ್ನು ನೋಡುವಂತೆ ಭೂಮಿಯಲ್ಲಿ ಎಲ್ಲಾ ಜನರೂ ಯುಧಿಷ್ಠಿರನನ್ನು ನೋಡುವರು.

ನ ತಸ್ಯ ನಾಶಂ ಪಶ್ಯಾಮಿ ಯಸ್ಯ ಭ್ರಾತಾ ಧನಂಜಯಃ ।
ಭೀಮಸೇನಶ್ಚ ದುರ್ಧರ್ಷೌ ಮಾದ್ರೀಪುತ್ರೌ ಚ ಭ್ರಾತರೌ ॥೫೧॥

ಯಾರಿಗೆ ದುರ್ಧರ್ಷರಾದ ಭೀಮಸೇನಾರ್ಜುನರು ಮತ್ತು ನಕುಲಸಹದೇವರು ತಮ್ಮಂದಿರೋ ಅವರಿಗೆ ನಾನು ಎಂದೂ ನಾಶವನ್ನು ಕಾಣಲಾರೆ.

ವೈಶಂಪಾಯನಃ

ತತಃ ಸಂಹೃಷ್ಟಸರ್ವಾಂಗೋ ಭೀಷ್ಮೋ ವಿದುರಮಬ್ರವೀತ್ ।
ದಿಷ್ಟ್ಯಾ ದಿಷ್ಟ್ಯೇತಿ ಸಂಹೃಷ್ಟಃ ಪೂಜಯಾನೋ ಮಹಾಮತಿಮ್ ॥೫೨॥

ಆಗ ಸರ್ವಾವಯವಗಳಲ್ಲಿ ಸಂತೋಷದಿಂದ ತುಂಬಿದವರಾಗಿ ಭೀಷ್ಮರು ಮಹಾಮತಿಯಾದ ವಿದುರನನ್ನು ಪೂಜಿಸುತ್ತಾ ದೇವರ ದಯೆ ದೇವರ ದಯೆಯೆಂದು ಸಂತೋಷದಿಂದ ಹೇಳಿದರು.

ಭೀಷ್ಮಃ

ಯುಕ್ತಂ ಚೈವಾನುರೂಪಂ ಚ ಕೃತಂ ತಾತ ಶುಭಂ ತ್ವಯಾ ।
ವಯಂ ವಿಮೋಕ್ಷಿತಾ ದುಃಖಾತ್ ಪಾಂಡುಪಕ್ಷೋ ನ ನಾಶಿತಃ ।
ತ್ವಂ ಗತಿಸ್ತ್ವಂ ಪಿತಾ ಮಾತಾ ಭ್ರಾತಾ ಮೇ ತ್ವಂ ಗುರುರ್ಹಿತಃ ॥೫೩॥

ಪ್ರೀತಿಪಾತ್ರನೇ, ನೀನು ಅವಶ್ಯಕವೂ, ಯೋಗ್ಯವೂ ಆದ ಶುಭಕಾರ್ಯವನ್ನು ಮಾಡಿ ನಮ್ಮನ್ನು ದುಃಖದಿಂದ ದಾಟಿಸಿದ್ದೀಯೆ. ಪಾಂಡುವಿನ ಪಕ್ಷವು ವಿನಾಶವನ್ನು ಹೊಂದಿಲ್ಲ. ನೀನೇ ನನಗೆ ಗತಿ. ನೀನೇ ನನಗೆ ತಂದೆ, ತಾಯಿ, ಸಹೋದರ, ಗುರು, ಪ್ರಿಯ ಎಲ್ಲವೂ ಸಹ.

ವೈಶಂಪಾಯನಃ

ಏವಮುಕ್ತ್ವಾ ನಮಸ್ಕೃತ್ವಾ ದೇವವದ್ ಹೃದಯಂ ಗತಃ ।
ಪ್ರವಿವೇಶ ಪ್ರಹೃಷ್ಟಃ ಸ ಪುರಂ ಜನಪದಾಕುಲಮ್ ।
ಕುರುಭಿಃ ಸಹಿತೋ ರಾಜನ್ ನಾಗರೈಶ್ಚ ಪಿತಾಮಹಃ ॥೫೪॥

ಎಲೈ ರಾಜನೇ, ಹೀಗೆ ಮಾತನಾಡಿ, ದೇವರಿಗೆ ನಮಸ್ಕಾರ ಮಾಡುವಂತೆ ವಿದುರನಿಗೆ ನಮಸ್ಕಾರವನ್ನು ಮಾಡಿ, ಮನಸ್ಸಿನಲ್ಲಿ ಸಂತೋಷಪಟ್ಟು, ಕುರುಗಳ ಮತ್ತು ನಗರವಾಸಿಗಳ ಜೊತೆಯಲ್ಲಿ ಪಿತಾಮಹರಾದ ಭೀಷ್ಮರು ಜನನಿಬಿಡವಾದ ಹಸ್ತಿನಪುರವನ್ನು ಪ್ರವೇಶಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ಜತುಗೃಹದಾಹಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ಐವತ್ತನೆಯ ಅಧ್ಯಾಯ ಮುಗಿಯಿತು.

★★★★★

ನೂರಐವತ್ತೊಂದನೆಯ ಅಧ್ಯಾಯ

(ದಾಹವನ್ನು ತಿಳಿದು ದುರ್ಯೋಧನಾದಿಗಳ ಹರ್ಷ, ಭೀಷ್ಮ ವಿದುರರಿಗೆ ಸತ್ಯವನ್ನು ತಿಳಿದು ಹರ್ಷ, ಕಾಡಿನಲ್ಲಿ ಭೀಮಸೇನನ ಧಾವನ)

ವೈಶಂಪಾಯನಃ

ಅಥಾಂಬಿಕೇಯಃ ಸಾಮಾತ್ಯಃ ಸಕರ್ಣಶ್ಚ ಸಸೌಬಲಃ ।
ಸಾತ್ಮಜಃ ಪಾರ್ಥನಾಶಸ್ಯ ಸ್ಮರಂಸ್ತಥ್ಯಂ ಜಹರ್ಷ ಚ ॥೧॥

ಆಗ ಅಂಬಿಕೆಯ ಪುತ್ರನಾದ ಧೃತರಾಷ್ಟ್ರನು ಅಮಾತ್ಯರಿಂದ, ಕರ್ಣನಿಂದ, ಶಕುನಿಯಿಂದ ಮತ್ತು ತನ್ನ ಪುತ್ರರಿಂದ ಸಹಿತನಾಗಿ ಪಾಂಡವರ ನಾಶವನ್ನು ಸತ್ಯವೆಂದು ತಿಳಿದು (ಮನಸ್ಸಿನಲ್ಲಿ) ಸಂತೋಷಪಟ್ಟನು.

ಭೀಷ್ಮಸ್ತು ರಾಜನ್ ದುರ್ಧರ್ಷೋ ವಿದುರಶ್ಚ ಮಹಾಮತಿಃ ।
ಜಹೃಷಾತೇ ಸ್ಮರಂತೌ ತೌ ಜಾತುಷಾಗ್ನೇರ್ವಿಮೋಚನಮ್ ॥೨॥

ದುರ್ಧರ್ಷರಾದ ಭೀಷ್ಮರೂ, ಮಹಾಮತಿಯಾದ ವಿದುರನೂ ಸಹ ಪಾಂಡವರು ಜತುಗೃಹದಿಂದ ಬಿಡುಗಡೆಯನ್ನು ಹೊಂದಿದುದನ್ನು ತಿಳಿದು ಸಂತೋಷಪಟ್ಟರು.

ಸತ್ಯಶೀಲಗುಣಾಚಾರೈ ರಾಗೈರ್ಜನಪದೋದ್ಭವೈಃ ।
ದ್ರೋಣಾದಯಶ್ಚ ಧರ್ಮ್ಯೈಶ್ಚ ತೇಷಾಂ ತನ್ಮೋಚಿತಂ ವಿದುಃ ॥೩॥

ಪಾಂಡವರ ಸತ್ಯಶೀಲಗುಣಾಚಾರಗಳ ನಿಮಿತ್ತದಿಂದಲೂ, ಪೌರಜಾನಪದರ ಅನುರಾಗದ ನಿಮಿತ್ತದಿಂದಲೂ, ಪಾಂಡವರು ಅನುಷ್ಠಾನ ಮಾಡುವ ಧರ್ಮದ ನಿಮಿತ್ತದಿಂದಲೂ, ದ್ರೋಣಾದಿಗಳು ಅವರನ್ನು ಜತುಗೃಹದಿಂದ ಮುಕ್ತರಾಗಿದ್ದಾರೆ ಎಂದೇ ತಿಳಿದರು.

ಶೌರ್ಯಲಾವಣ್ಯಮಾಹಾತ್ಮ್ಯರೂಪೈಃ ಪ್ರಾಣಬಲೈರಪಿ ।
ಸ್ವಸ್ಥಾನ್ ಪಾರ್ಥಾನಮನ್ಯಂತ ಪೌರಜಾನಪದಾಸ್ತದಾ ॥೪॥

ಪೌರಜಾನಪದರು ಪಾಂಡವರ ಶೌರ್ಯವನ್ನೂ, ಲಾವಣ್ಯವನ್ನೂ, ಮಹಾತ್ಮೆಯನ್ನೂ, ರೂಪವನ್ನೂ, ಪ್ರಾಣಬಲವನ್ನೂ ಗಮನಿಸಿ ಪಾಂಡವರು ಕ್ಷೇಮದಿಂದ ಇದ್ದಾರೆಂದೇ ಭಾವಿಸಿದರು.

ಅನ್ಯೇ ಜನಾಃ ಪ್ರಾಕೃತಾಶ್ಚ ಸ್ತ್ರಿಯಶ್ಚ ಬಹುಧಾ ತಥಾ ।
ಶಂಕಮಾನಾ ವದಂತಿ ಸ್ಮ ದಗ್ಧಾ ಜೀವಂತಿ ವಾ ನವಾ ॥೫॥

ಉಳಿದ ಪ್ರಾಕೃತರಾದ ಜನರು ಮತ್ತು ಸ್ತ್ರೀಯರು ಅನೇಕ ಸಂಶಯಗಳಿಗೆ ಒಳಗಾಗಿ ಪಾಂಡವರು ಬದುಕಿದ್ದಾರೆಯೋ ಅಥವಾ ಇಲ್ಲವೋ ಎಂದು ಶಂಕಿಸಿದರು.

ಪಾಂಡವಾಶ್ಚ ವಿನಿರ್ಗಮ್ಯ ನಗರಾದ್ವಾರಣಾವತಾತ್ ।
ನದೀಂ ಗಂಗಾಮನುಪ್ರಾಪ್ತಾ ಸಹ ಮಾತ್ರಾ ಪರಂತಪಾಃ ॥೬॥

ಪರಂತಪರಾದ ಪಾಂಡವರಾದರೋ ವಾರಣಾವತನಗರದಿಂದ ಹೊರಬಂದು ತಾಯಿಯ ಜೊತೆಯಲ್ಲಿ ಗಂಗಾನದಿಗೆ ಬಂದರು.

ದಾಶೇನಾದ್ಭುತವೇಗೇನ ನದೀಸ್ರೋತೋಬಲೇನ ಚ ।
ವಾಯುನಾ ಚಾನುಕೂಲೇನ ಶೀಘ್ರಂ ಪ್ರಾಪ್ತಾಸ್ತತಸ್ತು ತೇ ।
ಗುಲ್ಮಂ ನಳವನಂ ನಾಮ ನಾನಾದ್ರುಮವನಾನಿ ಚ ॥೭॥

ಅವರು ಒಳ್ಳೆಯ ವೇಗವುಳ್ಳ ದಾಶನ ಸಾಮರ್ಥ್ಯದಿಂದಲೂ, ನದಿಯ ಪ್ರವಾಹದ ಬಲದಿಂದಲೂ, ಅನುಕೂಲವಾದ ವಾಯುವಿನಿಂದಲೂ ಉಪಕೃತರಾಗಿ ನಳವನವೆಂಬ ಅನೇಕ ವೃಕ್ಷಗಳಿರುವ ಕಾಡನ್ನು ದಾಟಿದರು.

ಅಸಕೃಚ್ಚಾಪಿ ಸಂತೀರ್ಯ ಪರಂಪಾರಂ ಭುಜಪ್ಲವಾಃ ।
ಅವತೀರ್ಣಾಸ್ತತೋ ನಾವಮುತ್ಸೃಜ್ಯ ಭರತರ್ಷಭಾಃ ।
ಜವೇನ ಪ್ರಯಯೂ ರಾಜನ್ ದಕ್ಷಿಣಾಂ ದಿಶಮಾಸ್ಥಿತಾಃ ॥೮॥

ವಿಜ್ಞಾಯ ನಿಶಿ ಪಂಥಾನಂ ನಕ್ಷತ್ರೈರ್ದಕ್ಷಿಣಾಮುಖಾಃ ।
ಯತಮಾನಾ ವನಂ ರಾಜನ್ ಗಹನಂ ಪ್ರತಿಪೇದಿರೇ ॥೯॥

ಎಲೈ ರಾಜನೇ, ಭುಜಗಳೆಂಬ ನಾವೆಗಳಿಂದ ಅನೇಕ ಬಾರಿ ಅಪಾಯವೆಂಬ ಜಲವನ್ನು ದಾಟಿದ್ದ ಆ ಭರತರ್ಷಭರು ಗಂಗೆಯನ್ನು ದಾಟಿ ಆಚೆಯ ದಡವನ್ನು ತಲುಪಿ ನಾವೆಯನ್ನು ಬಿಟ್ಟು ಕೆಳಗೆ ಇಳಿದರು. ಅವರು ನಕ್ಷತ್ರದ ಬೆಳಕಿನಿಂದ ಮಾರ್ಗವನ್ನು ತಿಳಿದು ದಕ್ಷಿಣಾಭಿಮುಖವಾಗಿ ವೇಗದಿಂದ ಹೊರಟವರಾಗಿ ತಮ್ಮ ಪ್ರಯತ್ನದಿಂದ ಒಂದು ದಟ್ಟವಾದ ಕಾಡನ್ನು ಸೇರಿದರು.

ತತಃ ಶ್ರಾಂತಾಃ ಪಿಪಾಸಾರ್ತಾ ನಿದ್ರಾಂಧಾಃ ಪಾಂಡುನಂದನಾಃ ।
ಪುನರೂಚುರ್ಮಹಾವೀರ್ಯಂ ಭೀಮಸೇನಮಿದಂ ವಚಃ ॥೧೦॥

ಇತಃ ಕಷ್ಟತರಂ ಕಿನ್ನು ಯದ್ ವಯಂ ಗಹನೇ ವನೇ ।
ದಿಶಶ್ಚ ನ ಪ್ರಜಾನೀಮೋ ಗಂತುಂ ಚೈವ ನರರ್ಷಭಾಃ ॥೧೧॥

ಆಗ ಬಾಯಾರಿಕೆಯಿಂದ ದಣಿದ ನಿದ್ರಾಂಧರಾದ ಉಳಿದ ಪಾಂಡವರು ಮಹಾಪರಾಕ್ರಮಿಯಾದ ಭೀಮಸೇನನನ್ನು ಕುರಿತು ಪುನಃ ಮಾತನಾಡಿದರು. ಎಲೈ ನರರ್ಷಭನೇ, ಈ ದಟ್ಟವಾದ ಕಾಡಿನಲ್ಲಿ ದಿಕ್ಕುಗಳನ್ನು ತಿಳಿಯದೆ ನಡೆಯಲು ಶಕ್ತಿಯೂ ಇಲ್ಲದಿರುವ ನಮಗೆ ಇದಕ್ಕಿಂತ ಕಷ್ಟಕರವಾದದ್ದು ಇನ್ನೇನಿದೆ?

ತಂ ಚ ಪಾಪಂ ನ ಜಾನೀಮೋ ಯದ್ವಾದಗ್ಧಃ ಪುರೋಚನಃ ।
ಕಥಂ ನು ವಿಪ್ರಮುಚ್ಯೇಮ ಭಯಾದಸ್ಮಾದಲಕ್ಷಿತಾಃ ॥೧೨॥

ಆ ಪಾಪಿಯಾದ ಪುರೋಚನನು ದಗ್ಧನಾಗಿದ್ದಾನೋ ಇಲ್ಲವೋ ಎಂಬುದೂ ನಮಗೆ ತಿಳಿದಿಲ್ಲ. ಯಾರಿಗೂ ತಿಳಿಯದಂತೆ ನಾವು ಈ ಭಯದಿಂದ ಹೇಗೆ ಪಾರಾಗುತ್ತೇವೆ.

ಪುನರಸ್ಮಾನುಪಾದಾಯ ತಥೈವ ವ್ರಜ ಭಾರತ ।
ತ್ವಂ ಹಿ ನೋ ಬಲವಾನೇಕೋ ಯಥಾ ಸತತಗಸ್ತಥಾ ॥೧೩॥

ಭಾರತನಾದ ಭೀಮಸೇನನೇ, ನಮ್ಮನ್ನು ಪುನಃ ಮೊದಲಿನಂತೆಯೇ ಎತ್ತಿಕೊಂಡು ಹೊರಡು. ನಮ್ಮೆಲ್ಲರಲ್ಲಿ ನೀನೊಬ್ಬನೇ ವಾಯುದೇವರಂತೆ ಬಲಿಷ್ಠನಾದವನು.

ಇತ್ಯುಕ್ತೋ ಧರ್ಮರಾಜೇನ ಭೀಮಸೇನೋ ಮಹಾಬಲಃ ।
ಆದಾಯ ಕುಂತೀಂ ಭ್ರಾತೄಂಶ್ಚ ಜಗಾಮ ಸುಮಹಾಬಲಃ ॥೧೪॥

ಹೀಗೆ ಧರ್ಮರಾಜನ ಮಾತುಗಳನ್ನು ಕೇಳಿದ ಶ್ರೇಷ್ಠವಾದ ಮಹಾಬಲವುಳ್ಳ ಭೀಮಸೇನನು ಕುಂತಿಯನ್ನೂ ಅಣ್ಣತಮ್ಮಂದಿರನ್ನೂ ಎತ್ತಿಕೊಂಡು ಪುನಃ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ಜತುಗೃಹದಾಹವಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಐವತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ನೂರಐವತ್ತೆರಡನೆಯ ಅಧ್ಯಾಯ

(ತೃಷಾರ್ತರಾದ ತಾಯಿಯನ್ನೂ ಸಹೋದರರನ್ನೂ ಒಂದೆಡೆ ಕೂಡಿಸಿ ಜಲವನ್ನು ತರಲು ಭೀಮನ ಗಮನ, ಭೀಮನು ಜಲವನ್ನು ತರುವ ವೇಳೆಗೆ ಅವರ ನಿದ್ರೆ ಮತ್ತು ಭೀಮನ ವಿಲಾಪ)

ವೈಶಂಪಾಯನಃ

ತೇನ ವಿಕ್ರಮತಾ ತೂರ್ಣಮೂರುವೇಗಸಮೀರಿತಃ ।
ಪ್ರವವಾವನಿಲೋ ರಾಜನ್ ಶುಚಿಃ ಶುಕ್ರಾಗಮೇ ಯಥಾ ॥೧॥

ವೇಗವಾಗಿ ನಡೆಯುವ ಭೀಮನ ತೊಡೆಗಳ ವೇಗದಿಂದ ಉಂಟಾದ ಅನಿಲವು ಶುಚಿಶುಕ್ರಾಗಮದಲ್ಲಿ ಉಂಟಾಗುವ ಗಾಳಿಯಂತೆ ಪ್ರಬಲವಾಗಿ ಬೀಸುತ್ತಿತ್ತು.

ಸ ಮೃದ್ನನ್ ಪುಷ್ಪಿತಾಂಶ್ಚೈವ ಫಲಿನಶ್ಚ ವನಸ್ಪತೀನ್ ।
ಆರುಜನ್ ದಾರುಗುಲ್ಮಾಂಶ್ಚ ಪಥಸ್ತಸ್ಯ ಸಮೀಪಗಾನ್ ॥೨॥

ತಥಾ ವೃಕ್ಷಾನ್ ಭಂಜಮಾನೋ ಜಗಾಮಾಮಿತವಿಕ್ರಮಃ ।
ತಸ್ಯ ವೇಗೇನ ಪಂಚಾನಾಂ ಮೂರ್ಚ್ಛೇವ ಸಮಜಾಯತ ॥೩॥

ಭೀಮನು ಪುಷ್ಪಭರಿತವಾದ ಮತ್ತು ಫಲಭರಿತವಾದ ವೃಕ್ಷಗಳನ್ನು ಮುರಿಯುತ್ತಾ, ಅವನ ಮಾರ್ಗದ ಸಮೀಪದಲ್ಲಿರುವ ಗಿಡಗಳು ಮತ್ತು ಪೊದೆಗಳನ್ನು ಕಿತ್ತುಹಾಕುತ್ತಾ ದೊಡ್ಡಮರಗಳನ್ನು ಮುರಿಯುತ್ತಾ, ಅಮಿತವಿಕ್ರಮನಾಗಿ ಮುಂದೆ ಸಾಗಿದನು. ಅವನ ವೇಗದಿಂದ ಐದು ಜನರಿಗೂ ಮೂರ್ಛೆ ಉಂಟಾದಂತೆ ಆಯಿತು.

ಅಸಕೃಚ್ಚಾಪಿ ಸಂತೀರ್ಯ ದೂರಪಾರಂ ಭುಜಪ್ಲವೈಃ ।
ಪಥಾ ಪ್ರಚ್ಛನ್ನಮಾಸಾದ್ಯ ಧಾರ್ತರಾಷ್ಟ್ರಭಯಾತ್ ತದಾ ॥೪॥

ದೂರದಲ್ಲಿ ದಡವಿರುವ ಮಧ್ಯೆ ಮಧ್ಯೆ ಜಲವಿರುವ ಅನೇಕ ಪ್ರದೇಶಗಳನ್ನು ಭೀಮಸೇನನ ಭುಜಗಳೆಂಬ ನಾವೆಗಳಿಂದ ಅನೇಕ ಬಾರಿ ದಾಟಿ ದುರ್ಯೋಧನನ ಭಯದಿಂದ ಪ್ರಚ್ಛನ್ನರಾಗಿ ಅವರು ಮಾರ್ಗದಲ್ಲಿ ಸಾಗಿದರು.

ಕೃಚ್ಛ್ರೇಣ ಮಾತರಂ ಹ್ಯೇಕಾಂ ಸುಕುಮಾರೀಂ ಯಶಸ್ವಿನೀಮ್ ।
ಅವಹತ್ ತತ್ರ ಪೃಷ್ಠೇನ ರೋಧಸ್ಸು ವಿಷಮೇಷು ಚ ॥೫॥

ಸುಕುಮಾರಿಯೂ, ಯಶಸ್ವಿನಿಯೂ ಆದ, ಕಷ್ಟದಿಂದ ಬಳಲಿದ ತನ್ನ ತಾಯಿಯೊಬ್ಬಳನ್ನು ನದಿಯ ತೀರದಲ್ಲಿ ಮತ್ತು ವಿಷಮ ಪ್ರದೇಶದಲ್ಲಿ ಭೀಮಸೇನನು ಬೆನ್ನಿನ ಮೇಲೆ ಕೂಡಿಸಿಕೊಂಡು ಹೋದನು.

ಆಗಮ್ಯ ಚ ವನೋದ್ದೇಶಮಲ್ಪಮೂಲಫಲೋದಕಮ್ ।
ಕ್ರೂರಪಕ್ಷಿಮೃಗಂ ಘೋರಂ ಸಾಯಂ ಸಮುಪಚಕ್ರಮುಃ ॥೬॥

ಅವರು ಹೀಗೆ ನಡೆದು ಸಾಯಂಕಾಲದ ವೇಳೆಗೆ ಅಲ್ಪಮೂಲಫಲಗಳೂ, ಉದಕವೂ ಇರುವ, ಕ್ರೂರವಾದ ಮೃಗಪಕ್ಷಿಗಳಿಂದ ಸೇವಿತವಾದ ಘೋರವಾದ ಒಂದು ಅರಣ್ಯಪ್ರದೇಶಕ್ಕೆ ಬಂದರು.

ಘೋರಾ ಸಮಭವತ್ ಸಂಧ್ಯಾ ದಾರುಣಾ ಮೃಗಪಕ್ಷಿಣಃ ।
ಅಪ್ರಕಾಶಾ ದಿಶಃ ಸರ್ವಾಃ ವಾತೈರಾಸನ್ನನಾರ್ತವೈಃ ॥೭॥

ಘೋರವಾದ ಸಂಧ್ಯಾಕಾಲವಾಯಿತು, ಧಾರುಣವಾದ ಮೃಗಪಕ್ಷಿಗಳು ಸಂಚರಿಸತೊಡಗಿದವು. ದಿಕ್ಕುಗಳೆಲ್ಲವೂ ಕತ್ತಲೆಯಿಂದ ಕವಿದವು. ಅಕಾಲಿಕವಾದ ವಾಯುವು ಬಲವಾಗಿ ಬೀಸಿತು.

ತೇ ಶ್ರಮೇಣ ಚ ಕೌಂತೇಯಾಸ್ತೃಷಯಾ ಚ ಪ್ರಪೀಡಿತಾಃ ।
ನಾಶಕ್ನುವಂಸ್ತತೋ ಗಂತುಂ ನಿದ್ರಯಾ ಚ ಪ್ರವೃದ್ಧಯಾ ॥೮॥

ಪಾಂಡವರೆಲ್ಲರೂ ಶ್ರಮದಿಂದ ಕಲುಷಿತರಾಗಿ, ತೃಷೆಯಿಂದ ಬಳಲಿದವರಾಗಿ ನಿದ್ರೆಯಾವರಿಸುತ್ತಿರಲು ಮುಂದೆ ಹೋಗಲು ಸಾಧ್ಯವಾಗದೆ ಅಲ್ಲಿಯೇ ಉಳಿದರು.

ಶೀರ್ಣಪರ್ಣಫಲೈರ್ವೃಕ್ಷೈರ್ಬಹುಗುಲ್ಮಕ್ಷಪದ್ರುಮೈಃ ।
ಭಗ್ನಾಯತನಭೂಯಿಷ್ಠೇ ಶ್ವದಂಷ್ಟ್ರಿಬಹುಲೇ ಸದಾ ॥೯॥

ನ್ಯವಿಶಂತ ಹಿ ತೇ ತತ್ರ ನಿರಾಸ್ವಾದೇ ಮಹಾವನೇ ।
ರಾತ್ರ್ಯಾಮೇವ ಗತಾಸ್ತತ್ರ ಚತುರ್ವಿಂಶತಿಯೋಜನಮ್ ॥೧೦॥

ಉದುರಿದ ಎಲೆಗಳು ಮತ್ತು ಹಣ್ಣುಗಳಿಂದ ಕೂಡಿದ ವೃಕ್ಷಗಳಿಂದ ಕೂಡಿದಂತಹ, ಅನೇಕ ಪೊದೆಗಳು ಮತ್ತು ಅಂಧಕಾರವೂ ಇರುವ ವೃಕ್ಷಗಳಿಂದ ಕೂಡಿದಂತಹ ಯಾವೊಂದು ಆಶ್ರಯವೂ ಇಲ್ಲದಿರುವ, ಕ್ರೂರಮೃಗಗಳಿಂದ ಸೇವಿತವಾದಂತಹ, ಯಾವ ಸಂತೋಷವೂ ಇಲ್ಲದ ಮಹಾಕಾಡಿನ ಪ್ರದೇಶದಲ್ಲಿ ಅವರೆಲ್ಲರೂ ಕುಳಿತರು. ಒಂದೇ ರಾತ್ರಿಯಲ್ಲಿ ಅವರು ಇಪ್ಪತ್ತನಾಲ್ಕು ಯೋಜನ ದೂರವನ್ನು ಕ್ರಮಿಸಿದ್ದರು.

ಅಥ ತೃಷ್ಣಾಪರಿಮ್ಲಾನಾ ಕುಂತೀ ವಚನಮಬ್ರವೀತ್ ।
ಮಾತಾ ಸತೀ ಪಾಂಡವಾನಾಂ ಪಂಚಾನಾಂ ಮಧ್ಯತಃ ಸ್ಥಿತಾ ।
ತೃಷಯಾ ಪರಿತಪ್ತಾಽಸ್ಮಿ ಅನಾಥೇವ ಮಹಾವನೇ ॥೧೧॥

ಆಗ ಬಾಯಾರಿಕೆಯಿಂದ ಬಳಲಿದ ಪಾಂಡವರ ತಾಯಿಯಾದ ಸಾಧ್ವಿಯಾದ ಕುಂತಿಯು ಐದು ಮಕ್ಕಳ ಮಧ್ಯೆ ಕುಳಿತವಳಾಗಿ ದೊಡ್ಡ ಕಾಡಿನಲ್ಲಿ ಅನಾಥಳಂತೆ ನನಗೆ ತುಂಬಾ ಬಾಯಾರಿಕೆಯಾಗಿದೆ ಎಂದು ಹೇಳಿದಳು.

ವೈಶಂಪಾಯನಃ

ತಚ್ಛ್ರುತ್ವಾ ಭೀಮಸೇನಸ್ತು ಮಾತೃವಾಕ್ಯಮುದೀರಿತಮ್ ।
ಕಾರುಣ್ಯೇನ ಮನಶ್ಚಕ್ರೇ ಗಮನಾಯಾಥ ಸ ತ್ವರನ್ ॥೧೨॥

ತಾಯಿಯ ವಾಕ್ಯವನ್ನು ಕೇಳಿದ ಭೀಮಸೇನನು ಕರುಣೆಯಿಂದ ಬೇಗ ಅಲ್ಲಿಂದ ಹೊರಟು ನೀರನ್ನು ತರಲು ನಿರ್ಧರಿಸಿದನು.

ತತೋ ಭೀಮೋ ವನಂ ಘೋರಂ ಪ್ರವಿಶ್ಯ ವಿಜನಂ ಮಹತ್ ।
ನ್ಯಗ್ರೋಧಂ ವಿಪುಲಚ್ಛಾಯಂ ರಮಣೀಯಮುಪಾದ್ರವತ್ ॥೧೩॥

ಆಗ ಭೀಮನು ಘೋರವಾದ ಕಾಡನ್ನು ಪ್ರವೇಶಿಸಿ ಆ ನಿರ್ಜನವಾದ ಕಾಡಿನಲ್ಲಿ ಬಹಳ ಛಾಯೆಯಿರುವ ರಮಣೀಯವಾದ ಒಂದು ಆಲದಮರದ ಸಮೀಪಕ್ಕೆ ಹೋದನು.

ತತ್ರ ನಿಕ್ಷಿಪ್ಯ ತಾನ್ ಸರ್ವಾನುವಾಚ ಭರತರ್ಷಭಃ ।
ಪಾನೀಯಂ ಮೃಗಯೇ ಯಾವತ್ ತಾವದ್ ವಿಶ್ರಮ್ಯತಾಮಿಹ ॥೧೪॥

ಭರತರ್ಷಭನಾದ ಭೀಮಸೇನನು ಅಲ್ಲಿಗೆ ಅವರೆಲ್ಲರನ್ನೂ ಎತ್ತಿಕೊಂಡು ಹೋಗಿ ಇಟ್ಟು ನೀರನ್ನು ಹುಡುಕುತ್ತೇನೆ, ಅಲ್ಲಿಯವರೆಗೆ ಇಲ್ಲಿ ಸ್ವಲ್ಪ ವಿಶ್ರಾಂತಿಯನ್ನು ಪಡೆಯಿರಿ ಎಂದು ಹೇಳಿದನು.

ಏತೇ ರುವಂತಿ ಮಧುರಂ ಸಾರಸಾ ಜಲಚಾರಿಣಃ ।
ಧ್ರುವಮತ್ರ ಜಲಸ್ಥಾನಮರ್ಹತೀತಿ ಮತಿರ್ಮಮ ॥೧೫॥

ಜಲಚಾರಿಗಳಾದ ಈ ಸಾರಸಪಕ್ಷಿಗಳು ಮಧುರವಾಗಿ ಕಿರುಚುತ್ತಿವೆ. ನಿಶ್ಚಿತವಾಗಿ ಹತ್ತಿರದಲ್ಲಿಯೇ ಒಂದು ಜಲಸ್ಥಾನವಿದೆಯೆಂದು ನನ್ನ ಅಭಿಪ್ರಾಯ (ಎಂದು ಹೇಳಿದನು)

ಅನುಜ್ಞಾತಃ ಸ ಗಚ್ಛೇತಿ ಭ್ರಾತ್ರಾ ಜ್ಯೇಷ್ಠೇನ ಭಾರತ ।
ಜಗಾಮ ತತ್ರ ಯತ್ರ ಸ್ಮ ರುವಂತಿ ಜಲಚಾರಿಣಃ ।
ಅಪಶ್ಯತ್ ಪದ್ಮಿನೀಖಂಡಮಂಡಿತಂ ಸ ಸರೋವರಮ್ ॥೧೬॥

ಅಣ್ಣನಾದ ಯುಧಿಷ್ಠಿರನಿಂದ ಹೊರಡಲು ಅನುಮತಿಯನ್ನು ಪಡೆದ ಭೀಮಸೇನನು ಆ ಜಲಪಕ್ಷಿಗಳು ಶಬ್ದಮಾಡುತ್ತಿರುವ ಕಡೆಗೆ ಹೋಗಿ ಪದ್ಮಸಸ್ಯಗಳಿಂದ ಭೂಷಿತವಾದ ಒಂದು ಸರೋವರವನ್ನು ನೋಡಿದನು.

ಸ ತತ್ರ ಪೀತ್ವಾ ಪಾನೀಯಂ ಸ್ನಾತ್ವಾ ಚ ಭರತರ್ಷಭಃ ।
ಉತ್ತರೀಯೇಣ ಪಾನೀಯಮಾಜಹಾರ ಪರಂತಪಃ ॥೧೭॥

ಪರಂಪತನಾದ, ಭರತರ್ಷಭನಾದ ಭೀಮಸೇನನು ಅಲ್ಲಿ ಸ್ನಾನಮಾಡಿ ನೀರನ್ನು ಕುಡಿದು ತನ್ನ ಉತ್ತರೀಯದಿಂದ ನೀರನ್ನು ತೆಗೆದುಕೊಂಡು ಬಂದನು.

ಪಂಕಜಾನಾಮನೇಕೈಶ್ಚ ಪತ್ರೈರ್ಬದ್ಧ್ವಾ ಜಲಾಶಯಾತ್ ।
ಗವ್ಯೂತಿಮಾತ್ರಾದಾದಾಯ ತ್ವರಿತೋ ಮಾತರಂ ಪ್ರತಿ ॥೧೮॥

ತನ್ನ ಉತ್ತರೀಯದಲ್ಲಿ ಅನೇಕ ಕಮಲದ ಎಲೆಗಳನ್ನು ಹರಡಿ ಅದರಲ್ಲಿ ನೀರು ತುಂಬಿಕೊಂಡು ಒಂದು ಒಂದು ಹಸುಕೂಗು ಕೇಳುವಷ್ಟು ದೂರದಲ್ಲಿರುವ ಆ ಸರೋವರದಿಂದ ಹೊರಟು ಬೇಗ ತಾಯಿಯ ಕಡೆಗೆ ಬಂದನು.

ಸ ಸುಪ್ತಾಂ ಮಾತರಂ ಪ್ರೇಕ್ಷ್ಯ ಭ್ರಾತೄಂಶ್ಚ ವಸುಧಾತಲೇ ।
ಭೃಶಂ ದುಃಖಪರೀತಾತ್ಮಾ ವಿಲಲಾಪ ವೃಕೋದರಃ ॥೧೯॥

ಆ ವೃಕೋದರನು ತಾಯಿಯೂ ಮತ್ತು ಅಣ್ಣತಮ್ಮಂದಿರೂ ನೆಲದ ಮೇಲೆ ಮಲಗಿ ನಿದ್ರೆ ಮಾಡುತ್ತಿರುವದನ್ನು ನೋಡಿ ಬಹಳ ದುಃಖಭರಿತನಾಗಿ ವಿಲಾಪವನ್ನು ಮಾಡಿದನು.

ಭೀಮಸೇನಃ

ಶಯನೇಷು ಪರಾರ್ಘ್ಯೇಷು ಪ್ರಸುಪ್ತಾ ವಾರಣಾವತೇ ।
ನಾಧಿಜಗ್ಮುಸ್ತದಾ ನಿದ್ರಾಂ ತೇಽದ್ಯ ಸುಪ್ತಾ ಮಹೀತಲೇ ॥೨೦॥

ವಾರಣಾವತದಲ್ಲಿ ಅನರ್ಘ್ಯವಾದ ಹಾಸಿಗೆಗಳಲ್ಲಿ ಮಲಗಿ ನಿದ್ರೆಯನ್ನು ಪಡೆಯದ ನನ್ನ ತಾಯಿಯು ಮತ್ತು ತಮ್ಮಂದಿರೂ ಈ ದಿನ ನೆಲದ ಮೇಲೆ ಮಲಗಿ ನಿದ್ರಿಸುತ್ತಿದ್ದಾರೆ.

ಸ್ವಸಾರಂ ವಸುದೇವಸ್ಯ ಶತ್ರುಸಂಘವಿಮರ್ದಿನಃ ।
ಭೋಜರಾಜಸುತಾಂ ಕುಂತೀಂ ಸರ್ವಲಕ್ಷಣಪೂಜಿತಾಮ್ ॥೨೧॥

ಸ್ನುಷಾಂ ವಿಚಿತ್ರವೀರ್ಯಸ್ಯ ಪಾಂಡೋರ್ಭಾರ್ಯಾಂ ಮಹಾತ್ಮನಃ ।
ಪ್ರಾಸಾದಶಯನಾಂ ನಿತ್ಯಂ ಪುಂಡರೀಕಾಂತರಪ್ರಭಾಮ್ ॥೨೨॥

ಸುಕುಮಾರತರಾಂ ಸ್ತ್ರೀಣಾಂ ಮಹಾರ್ಹಶಯನೋಚಿತಾಮ್ ।
ಶಯಾನಾಮದ್ಯ ಪಶ್ಯಾಮಿ ಪೃಥಿವ್ಯಾಂ ಹಂತ ಭೋ ವಿಧೇ ॥೨೩॥

ಶತ್ರುಸಮೂಹವನ್ನು ನಾಶಮಾಡುವ ವಸುದೇವನ ತಂಗಿಯಾದ, ಭೋಜರಾಜನ ಸರ್ವಲಕ್ಷಣಸಂಪನ್ನಳಾದ ಮಗಳಾದ, ವಿಚಿತ್ರವೀರ್ಯನ ಸೊಸೆಯಾದ, ಮಹಾತ್ಮನಾದ ಪಾಂಡುವಿನ ಪತ್ನಿಯಾದ, ಯಾವಾಗಲೂ ಉಪ್ಪರಿಗೆಯಲ್ಲಿ ಮಲಗುವಂತಹವಳಾದ, ಕಮಲಗರ್ಭದ ಕಾಂತಿಯನ್ನು ಹೊಂದಿದ, ಸ್ತ್ರೀಯರಲ್ಲೆಲ್ಲಾ ಸುಕುಮಾರಿಯಾದಂತಹ, ಅನರ್ಘ್ಯವಾದ ಶಯನಕ್ಕೆ ಅರ್ಹಳಾದಂತಹ ಕುಂತಿಯು ಈ ದಿನ ಭೂಮಿಯ ಮೇಲೆ ಮಲಗಿರುವುದನ್ನು ನೋಡುತ್ತಿದ್ದೇನೆ. ಅಯ್ಯೋ ವಿಧಿಯೇ!

ಧರ್ಮಾದಿಂದ್ರಾಚ್ಚ ವಾಯೋಶ್ಚ ಸುಷುವೇ ಯಾ ಸುತಾನಿಮಾನ್ ।
ಸೇಯಂ ಭೂಮೌ ಪರಿಶ್ರಾಂತಾ ಶೇತೇ ಪ್ರಾಕೃತವದ್ ಯಥಾ ॥೨೪॥

ಯಾವ ಕುಂತಿಯು ಯಮಧರ್ಮನಿಂದಲೂ, ವಾಯುವಿನಿಂದಲೂ, ಇಂದ್ರನಿಂದಲೂ ಈ ಮಕ್ಕಳನ್ನು ಪಡೆದಳೋ ಅಂತಹ ಕುಂತಿಯು ಈ ದಿನ ದಣಿದು ಸಾಮಾನ್ಯ ಜನರಂತೆ ಭೂಮಿಯಲ್ಲಿ ಮಲಗಿದ್ದಾಳೆ.

ಅಯಂ ನೀಲಾಂಬುದಪ್ರಖ್ಯೋ ನರೇಷ್ವಪ್ರತಿಮೋ ಭುವಿ ।
ಶೇತೇ ಪ್ರಾಕೃತವದ್ ಭೂಮೌ ತತೋ ದುಃಖತರಂ ನು ಕಿಮ್ ॥೨೫॥

ನೀಲಾಂಬುದಶ್ಯಾಮನಾದಂತಹ ಮನುಷ್ಯರಲ್ಲೇ ಅಸದೃಶನಾದಂತಹ ಈ ಅರ್ಜುನನು ಸಾಮಾನ್ಯ ಜನರಂತೆ ಭೂಮಿಯಲ್ಲಿ ಮಲಗಿದ್ದಾನೆ. ಇದಕ್ಕಿಂತ ಹೆಚ್ಚಿನ ದುಃಖವು ಯಾವುದಿದೆ?

ಇಮೌ ನೀಲೋತ್ಪಲಶ್ಯಾಮೌ ನರೇಷ್ವಪ್ರತಿಮೌ ಭುವಿ ।
ಅಶ್ವಿನಾವಿವ ದೇವಾನಾಮಾಶ್ವಿನೌ ರೂಪಸಂಪದಾ ।
ತೌ ತು ಪ್ರಾಕೃತವಚ್ಚೋಭೌ ಪ್ರಸುಪ್ತೌ ಧರಣೀತಳೇ ॥೨೬॥

ನೀಲೋತ್ತಮಶ್ಯಾಮರಾದ, ಮನುಷ್ಯರಲ್ಲೇ ಅಸದೃಶರಾದ ರೂಪ- ಸಂಪತ್ತಿನಲ್ಲಿ ದೇವತೆಗಳ ಮಧ್ಯೆ ಅಶ್ವಿನೀದೇವತೆಗಳಂತೆ ಇರುವ, ಅಶ್ವಿನೀದೇವತೆಗಳ ಮಕ್ಕಳೇ ಆದ ಈ ನಕುಲಸಹದೇವರು ಸಾಮಾನ್ಯ ಜನರಂತೆ ಭೂಮಿಯಲ್ಲಿ ಮಲಗಿದ್ದಾರೆ.

ಜ್ಞಾತಯೋ ಯಸ್ಯ ನೈವ ಸ್ಯುರ್ವಿಷಮಾಃ ಕುಲಪಾಂಸನಾಃ ।
ಸ ಜೀವೇತ್ ಸುಖಿತೋ ಲೋಕೇ ಗ್ರಾಮದ್ರುಮ ಇವೈಕಲಃ ॥೨೭॥

ಯಾವನಿಗೆ ಕುಲಭೇದಕರೂ, ವಕ್ರರೂ ಆದ ಜ್ಞಾತಿಗಳು ಇರುವುದಿಲ್ಲವೋ ಅವನು ಗ್ರಾಮದಲ್ಲಿರುವ ಏಕೈಕ ವೃಕ್ಷದಂತೆ ಸುಖದಿಂದ ಜೀವಿಸುತ್ತಾನೆ.

ಏಕೋ ವೃಕ್ಷೋ ಹಿ ಯೋ ಗ್ರಾಮೇ ಭವೇತ್ ಪರ್ಣಫಲಾನ್ವಿತಃ ।
ಚೈತ್ಯೋ ಭವತಿ ನಿರ್ಜ್ಞಾತಿರರ್ಚನೀಯಃ ಸುಪೂಜಿತಃ ॥೨೮॥

ಗ್ರಾಮದಲ್ಲಿ ಫಲಪುಷ್ಪಭರಿತವಾದ ಒಂದೇ ಒಂದು ಮರವಿದ್ದರೆ ಅದು ದೇವಸ್ಥಾನವಾಗುತ್ತದೆ. ಯಾರೂ ಜ್ಞಾತಿಗಳಿರದೆ ಅರ್ಚನೀಯವಾದ ಆ ವೃಕ್ಷವು ಅರ್ಚಿಸಲ್ಪಡುತ್ತದೆ.

ಯೇಷಾಂ ಚ ಬಹವಃ ಶೂರಾ ಜ್ಞಾತಯೋ ಧರ್ಮವತ್ಸಲಾಃ ।
ತೇ ಜೀವಂತಿ ಚಿರಂ ಕಾಲಂ ಭವಂತಿ ಚ ನಿರಾಮಯಾಃ ॥೨೯॥

ಯಾರಿಗೆ ಶೂರರೂ ಮತ್ತು ಧರ್ಮಶೂರರೂ ಆದ ಅನೇಕ ಜ್ಞಾತಿಗಳು ಇರುತ್ತಾರೋ ಅಂತಹವರು ಬಹುಕಾಲ ಯಾವ ದುಃಖವೂ ಇಲ್ಲದೆ ಜೀವಿಸುತ್ತಾರೆ.

ಬಲವಂತಃ ಸಮೃದ್ಧಾರ್ಥಾ ಪಿತೃಬಾಂಧವನಂದನಾಃ ।
ಜೀವಂತ್ಯನ್ಯೋನ್ಯಮಾಶ್ರಿತ್ಯ ದ್ರುಮಾಃ ಕಾನನಜಾ ಇವ ॥೩೦॥

ಬಲವಂತರೂ, ಅರ್ಥಸಂವೃದ್ಧಿವುಳ್ಳವರೂ ಪಿತೃಬಾಂಧವರಿಗೆ ಸಂತೋಷವುಂಟುಮಾಡುವವರೂ ಆದ ಜನರು ಕಾಡಿನಲ್ಲಿರುವ ಮರಗಳಂತೆ ಒಬ್ಬರೊನ್ನೊಬ್ಬರು ಆಶ್ರಯಿಸಿ ಸುಖದಿಂದ ಜೀವಿಸುತ್ತಾರೆ.

ವಯಂ ಚ ಧೃತರಾಷ್ಟ್ರೇಣ ಸಪುತ್ರೇಣ ದುರಾತ್ಮನಾ ।
ವಿವಾಸಿತಾಶ್ಚ ದಗ್ಧಾಶ್ಚ ಕ್ಷತ್ತುರ್ಬುದ್ಧಿಪರಾಕ್ರಮಾತ್ ।
ತಸ್ಮಾನ್ಮುಕ್ತಾ ವಯಂ ದಾಹಾದಿಮಂ ವೃಕ್ಷಮುಪಾಶ್ರಿತಾಃ ॥೩೧॥

ನಾವಾದರೋ ದುರಾತ್ಮನಾದ ಪುತ್ರಸಹಿತನಾದ ಧೃತರಾಷ್ಟ್ರನಿಂದ ನಗರದಿಂದ ಹೊರದೂಡಲ್ಪಟ್ಟು ದಗ್ಧರಾಗಿ ವಿದುರನ ಬುದ್ಧಿಬಲದಿಂದ ಆ ದಾಹದಿಂದ ಮುಕ್ತರಾಗಿ ಈ ವೃಕ್ಷವನ್ನು ಆಶ್ರಯಿಸಿದ್ದೇವೆ.

ಕಾಂ ದಿಶಂ ಪ್ರತಿಪತ್ಸ್ಯಾಮಃ ಪ್ರಾಪ್ತಾಃ ಕ್ಲೇಶಮನುತ್ತಮಮ್ ।
ನಾತಿದೂರೇಣ ನಗರಂ ವನಾದಸ್ಮಾದ್ವಿ ಲಕ್ಷಯೇ ॥೩೨॥

ಇಂತಹ ದೊಡ್ಡಕ್ಲೇಶವನ್ನು ಹೊಂದಿದ ನಾವು ಯಾವ ದಿಕ್ಕಿಗೆ ಹೋಗೋಣ? ಈ ವನದ ಸಮೀಪದಲ್ಲಿಯೇ ಒಂದು ನಗರವಿರುವಂತೆ ತೋರುತ್ತದೆ.

ಜಾಗರ್ತವ್ಯೇ ಸ್ವಪಂತೀಮೇ ಹಂತ ಜಾಗರ್ಮ್ಯಹಂ ಸ್ವಯಮ್ ।
ಪ್ರಾಶ್ಯಂತೀಮೇ ಜಲಂ ಪಶ್ಚಾತ್ ಪ್ರತಿಬುದ್ಧಾ ಜಿತಕ್ಲಮಾಃ ।
ಇತಿ ಭೀಮೋ ವಿನಿಶ್ಚಿತ್ಯ ಜಜಾಗಾರ ಸ್ವಯಂ ತದಾ ॥೩೩॥

ಇವರೆಲ್ಲರೂ ಎಚ್ಚರವಾಗಿರಬೇಕಾದ ಸಮಯದಲ್ಲಿ ನಿದ್ರೆ ಮಾಡುತ್ತಿದ್ದಾರೆ. ಇರಲಿ, ನಾನಾದರೋ ಎಚ್ಚರವಾಗಿರುತ್ತೇನೆ. ಇವರು ನಿದ್ರೆಯಿಂದ ಎದ್ದ ಮೇಲೆ ಆಯಾಸವನ್ನು ಕಳೆದುಕೊಂಡು ನೀರನ್ನು ಕುಡಿಯುತ್ತಾರೆ. ಭೀಮಸೇನನು ಹೀಗೆ ನಿಶ್ಚಯಿಸಿ ಆಗ ತಾನು ಎಚ್ಚರದಿಂದಲೇ ಇದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವಿಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ಜತುಗೃಹದಾಹವಪರ್ವಣಿ ದಶಮೋऽಧ್ಯಾಯಃ ॥

॥ಜತುಗೃಹದಾಹಪರ್ವ ಸಮಾಪ್ತಮ್॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಐವತ್ತೆರಡನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಜತುಗೃಹದಾಹಪರ್ವವು ಮುಗಿಯಿತು.

★★★★★

೮. ಹಿಡಿಂಬವಧಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ರಕ್ಷಾರ್ಥಮೇವ ಪರಿಜಾಗ್ರತಿ ಭೀಮಸೇನೇ
ರಕ್ಷಃ ಸ್ವಸಾರಮಭಿಯಾಪಯತೇ ಹಿಡಿಂಬಂ ।
ಸಾ ರೂಪಮೇತ್ಯ ಶುಭಮೇವ ದದರ್ಶ ಭೀಮಂ
ಸಾಕ್ಷಾತ್ ಸಮಸ್ತಶುಭಲಕ್ಷಣಸಾರಭೂತಂ ॥೪೮॥

ಪಾಂಡವರ ರಕ್ಷಣೆಗಾಗಿ ಭೀಮನೆಚ್ಚೆತ್ತು ಕುಳಿತಿದ್ದಾಗ ಹಿಡಿಂಬ ರಾಕ್ಷಸ ತಂಗಿ ಹಿಡಿಂಬೆಯನ್ನು ಕಳಿಸಿದ. ಅವಳು ಸುಂದರ ರೂಪತಳೆದು ಸಾಕ್ಷಾತ್ ಸಮಸ್ತ ಶುಭಲಕ್ಷಣಸಾರಭೂತನಾದ ಭೀಮನನ್ನು ಕಂಡಳು.

ಸಾ ರಾಕ್ಷಸೀತನುಮವಾಪ ಸುರೇಂದ್ರಲೋಕ
ಶ್ರೀರೇವ ಶಕ್ರದಯಿತಾ ತ್ವಪರೈವ ಶಚ್ಯಾಃ ।
ಶಾಪಾತ್ ಸ್ಪೃಧಾ ಪತಿಮವಾಪ್ಯ ಚ ಮಾರುತಂ ಸಾ
ಪ್ರಾಪ್ತುಂ ನಿಜಾಂ ತನುಮಯಾಚತ ಭೀಮಸೇನಮ್ ॥೪೯॥

ಹಿಡಿಂಬಿ ಹಿಂದೆ ದೇವಲೋಕದ ಸಂಪತ್ತಿಗೆ ಅಭಿಮಾನಿನಿಯಾದ ಶ್ರೀ ಎಂಬ ಅಪ್ಸರೆ. ಅವಳು ಇಂದ್ರನ ಪತ್ನಿಯಾಗಿ ಶಚಿಯೊಡನೆ ಸ್ಪರ್ಧಿಸಿದುದರಿಂದ ಅವಳ ಶಾಪದಿಂದ ರಾಕ್ಷಸ ಜನ್ಮ ಪಡೆದಳು. ಈಗ ಭೀಮನನ್ನು ಪತಿಯನ್ನಾಗಿ ಪಡೆದು ತನ್ನ ನಿಜರೂಪ ಹೊಂದುವ ಉದ್ದೇಶದಿಂದ ಅವನಲ್ಲಿ ಪ್ರಣಯಭಿಕ್ಷೆ ಬೇಡಿದಳು.

ತಾಂ ಭೀಮ ಆಹ ಕಮನೀಯತನುಂ ನ ಪೂರ್ವಂ
ಜ್ಯೇಷ್ಠಾದುಪೈಮಿ ವನಿತಾಂ ನ ಹಿ ಧರ್ಮ ಏಷಃ ।
ಸಾ ಚಾಹ ಕಾಮವಶಗಾ ಪುನರೇತದೇವ
ಸ್ವಾವೇಶಯುಗ್ಧಿ ಮರುದಗ್ರ್ಯ ಪರಿಗ್ರಹಸ್ಯ ॥೫೦॥

ಸುಂದರ ಶರೀರದವಳಾದ ಹಿಡಿಂಬಿಯನ್ನು ಕುರಿತು ಭೀಮನೆಂದ, 'ಹಿರಿಯನಾದ ಅಣ್ಣನಿಗಿಂತ ಮೊದಲು ನಾನು ಯಾವ ಹೆಣ್ಣನ್ನೂ ಮದುವೆಯಾಗಲಾರೆ. ಅದು ಧರ್ಮವಲ್ಲ' ಎಂದು. ಆದರೂ ಹಿಡಿಂಬ ಕಾಮಪರವಶಳಾಗಿ ತಿರುಗಿ ಹೇಳಿದ್ದನ್ನೇ ಹೇಳತೊಡಗಿದಳು. ಏಕೆಂದರೆ ಅವಳು ಭಾರತೀದೇವಿಯ ಆವೇಶಯುಕ್ತಳಾಗಿದ್ದಳು.

ಸಾ ಭಾರತೀ ವರಮಿಮಂ ಪ್ರದದಾವಮುಷ್ಯೈ
ಸ್ವಾವೇಶಮಾತ್ಮ ದಯಿತಸ್ಯ ಚ ಸಂಗಮೇನ ।
ಶಾಪಾದ್ ವಿಮುಕ್ತಿಮತಿತೀವ್ರತಪಃ ಪ್ರಸನ್ನಾ
ತೇನಾಹ ಸಾ ನಿಜತನುಂ ಪವಮಾನಸೂನೋಃ ॥೫೧॥

ಹಿಂದೆ ಅವಳ ಅತ್ಯಂತ ತೀವ್ರ ತಪಸ್ಸಿಗೆ ಒಲಿದ ಭಾರತೀದೇವಿ 'ನಿನ್ನಲ್ಲಿ ನನ್ನ ಆವೇಶ ಬರುತ್ತದೆ. ಆಗ ನನ್ನ ಪತಿಯ ಅಂಗಸಂಗದಿಂದ ಶಾಪ ವಿಮುಕ್ತಿಯಾಗುತ್ತದೆ' ಎಂದು ವರವಿತ್ತಳು. ಅದರಿಂದ ತನ್ನ ನಿಜರೂಪ ಪಡೆಯುವುದಕ್ಕಾಗಿ ಅವಳು ಪುನಃ ಭೀಮನನ್ನು ಬೇಡಿದಳು.

ಜ್ಞಾನಂ ಚ ನಿಜಮಭಿದರ್ಶಯಿತುಂ ಪುನಶ್ಚ
ಪ್ರಾಹೇಶ್ವರೋಽಖಿಲಜಗದ್ಗುರುರಿಂದಿರೇಶಃ ।
ವ್ಯಾಸಸ್ವರೂಪ ಇಹ ಚೇತ್ಯ ಪರಶ್ವ ಏವ
ಮಾಂ ತೇ ಪ್ರದಾಸ್ಯತಿ ಸದಾ ಪ್ರಕರೋಷಿ ಮೇಽರ್ಥ್ಯಂ ॥೫೨॥

ಹಿಡಿಂಬಿ ತನ್ನ ಸ್ವಾಭಾವಿಕ ದಿವ್ಯಜ್ಞಾನವನ್ನು ತೋರುವುದಕ್ಕಾಗಿ ಪುನಃ ಹೇಳಿದಳು. 'ಸಕಲಲೋಕ ಗುರುಸರ್ವೇಶ್ವರನಾದ ವ್ಯಾಸರೂಪಿ ಶ್ರೀಹರಿ ಇಲ್ಲಿಗೆ ನಾಳೆಯೇ ಬಂದು ನನ್ನನ್ನು ನಿನಗೆ ನೀಡುವನು. ಆಗ ನೀನೆ ನನ್ನ ಅಭೀಷ್ಟವನ್ನು ನಡೆಸಿಕೊಡುವಿ' ಎಂದು.

★ ★ ★ ★

ನೂರ ಐವತ್ಮೂರನೆಯ ಅಧ್ಯಾಯ

(ಪಾಂಡವರು ಮಲಗಿದ್ದ ಕಡೆಗೆ ಹಿಡಿಂಬೆಯ ಪ್ರವೇಶ, ಭೀಮ ಹಿಡಿಂಬೆಯರ ಸಂವಾದ)

ವೈಶಂಪಾಯನಃ

ತತ್ರ ತೇಷು ಶಯಾನೇಷು ಹಿಡಿಂಬೋ ನಾಮ ರಾಕ್ಷಸಃ ।
ಅವಿದೂರೇ ವನಾತ್ ತಸ್ಮಾತ್ ಸಾಲವೃಕ್ಷಮುಪಾಶ್ರಿತಃ ॥೧॥

ಕ್ರೂರೋ ಮಾನುಷಮಾಂಸಾದೋ ಮಹಾವೀರ್ಯೋ ಮಹಾಬಲಃ ।
ಪಿಶಿತೇಪ್ಸುಃ ಕ್ಷುಧಾರ್ತಃ ಸನ್ ಜಿಘ್ರನ್ ಗಂಧಂ ಯದೃಚ್ಛಯಾ ॥೨॥

ಊಧ್ವಾಂಗುಲಿಃ ಸಕಂಡೂಯೋ ಧುನ್ವನ್ ರೂಕ್ಷಾನ್ ಶಿರೋರುಹಾನ್ ।
ಜೃಂಭಮಾಣೋ ಮಹಾವಕ್ತ್ರಃ ಪುನಃಪುನರವೇಕ್ಷ್ಯ ಚ ॥೩॥

ಆಘ್ರಾಯ ಮಾನುಷಂ ಗಂಧಂ ಭಗಿನೀಮಿದಮಬ್ರವೀತ್ ।
ಉಪಪನ್ನಂ ಚಿರಸ್ಯಾದ್ಯ ಭಕ್ಷೋಮಮ ಮನಃಪ್ರಿಯಃ ॥೪॥

ಪಾಂಡವರು ಅಲ್ಲಿ ಮಲಗಿರಲು ಸ್ವಲ್ಪ ದೂರದಲ್ಲಿ ಸಾಲವೃಕ್ಷದ ಕೆಳಗೆ ವಾಸಿಸುತ್ತಿದ್ದ ಕ್ರೂರನೂ, ಮನುಷ್ಯಮಾಂಸ ಭಕ್ಷಕನೂ ಮಹಾಪರಾಕ್ರಮಿಯೂ, ಮಹಾಬಲವುಳ್ಳವನೂ ಆದ ಹಿಡಿಂಬ ರಾಕ್ಷಸನು ಹಸಿವೆಯಿಂದ ಆರ್ತನಾಗಿ ಮಾಂಸವನ್ನು ಬಯಸಿ ಅಕಸ್ಮಾತ್ತಾಗಿ ಮಾನುಷಗಂಧವನ್ನು ಆಘ್ರಾಣಿಸಿ ಬೆರಳುಗಳನ್ನು ಮೇಲೆ ಮಾಡಿ ತಲೆಯನ್ನು ಕೆರೆದುಕೊಳ್ಳುತ್ತಾ ತನ್ನ ಒರಟಾದ ಕೂದಲುಗಳನ್ನು ಕೊಡವಿಕೊಳ್ಳುತ್ತಾ ತನ್ನ ದೊಡ್ಡಬಾಯಿಯಿಂದ ಆಕಳಿಸುತ್ತಾ ಮತ್ತೆ ಮತ್ತೆ ನೋಡಿ ಮನುಷ್ಯಗಂಧವನ್ನು ಆಘ್ರಾಣಿಸಿ ತಂಗಿಯನ್ನು ಕುರಿತು ಹೀಗೆ ಹೇಳಿದನು.

ಸ್ನೇಹಾತ್ ಸ್ರಾವಂ ವಿಸೃಜತಿ ಜಿಹ್ವಾ ಪರ್ಯೇತಿ ವೈ ಮುಖಮ್ ।
ಅಷ್ಟೌ ದಂಷ್ಟ್ರಾಃ ಸಿತಾಸ್ತೀಕ್ಷ್ಣಾಶ್ಚಿರಸ್ಯ ಬತ ದುಸ್ಸಹಾಃ ।
ದೇಹೇಷು ಮಜ್ಜಯಿಷ್ಯಂತಿ ಸ್ನಿಗ್ಧೇಷು ಪಿಶಿತೇಷು ಚ ॥೫॥

ಬಹುಕಾಲದ ಮೇಲೆ ನಮಗೆ ಪ್ರಿಯವಾದ ಭಕ್ಷ್ಯವು ದೊರಕಿದೆ. ಮನುಷ್ಯಮಾಂಸದ ಆಸೆಯಿಂದ ನಾಲಿಗೆಯು ಜೊಲ್ಲುಸುರಿಸಿ ನನ್ನ ಮುಖದ ಮೇಲೆಲ್ಲಾ ಓಡಾಡುತ್ತಿದೆ. ನಾನು ನನ್ನ ಎಂಟು ಹರಿತವಾದ ಮತ್ತು ದುಸ್ಸಹವಾದ ಕೋರೆಹಲ್ಲುಗಳನ್ನು ಗಟ್ಟಿಯಾದ ಮಾಂಸವಿರುವ ದೇಹಗಳಲ್ಲಿ ಮುಳುಗಿಸುತ್ತೇನೆ.

ಆಕ್ರಮ್ಯ ಮಾನುಷಂ ಕಂಠಮಾಚ್ಛಿದ್ಯ ಧಮನೀಮಪಿ ।
ಉಷ್ಣಂ ನವಂ ಪ್ರಪಾಸ್ಯಾಮಿ ಫೇನಿಲಂ ರುಧಿರಂ ಬಹು ।
ಗಚ್ಛ ಜಾನೀಹಿ ಕೇ ತ್ವೇತೇ ಶೇರತೇ ವನಮಾಶ್ರಿತಾಃ ॥೬॥

ಮನುಷ್ಯನ ಕಂಠವನ್ನು ಹಿಡಿದು ರಕ್ತನಾಳವನ್ನು ಕಿತ್ತು ಬಿಸಿಯಾದ ನೊರೆಯಿಂದ ಕೂಡಿದ ಹೊಸ ರಕ್ತವನ್ನು ಕುಡಿಯುವೆನು. ನೀನು ಹೋಗಿ ನಮ್ಮ ಕಾಡಿನಲ್ಲಿ ಮಲಗಿರುವವರು ಯಾರು ಎಂದು ತಿಳಿ?

ಮಾನುಷೋ ಬಲವಾನ್ ಗಂಧೋ ಘ್ರಾಣಂ ತರ್ಪಯತೀವ ಮೇ ।
ಹತ್ವಾ ತಾನ್ ಮಾನುಷಾನೇತಾನಾನಯಾಶು ಮಮಾಂತಿಕಮ್ ॥೭॥

ಪ್ರಬಲವಾದ ಮಾನುಷಗಂಧವು ನನ್ನ ಮೂಗಿಗೆಬಡಿದು ಸಂತೋಷವನ್ನು ಕೊಡುತ್ತಿದೆ. ಆ ಮನುಷ್ಯರನ್ನು ಕೊಂದು ನನ್ನ ಬಳಿಗೆ ಬೇಗ ತೆಗೆದುಕೊಂಡು ಬಾ.

ಅಸ್ಮದ್ವಿಷಯಸುಪ್ತೇಭ್ಯೋ ನೈತೇಭ್ಯೋ ಭಯಮಸ್ತಿ ತೇ ।
ತೇಷಾಂ ಮಾಂಸಾನಿ ಸಂಸೃತ್ಯ ಮಾನುಷಾಣಿ ಯಥೇಪ್ಸಿತಃ ॥೮॥

ಸಹಿತೌ ಭಕ್ಷಯಿಷ್ಯಾವಃ ಕುರು ಕ್ಷಿಪ್ರಂ ವಚೋ ಮಮ ।
ತತಸ್ತುಷ್ಟೌ ಪ್ರನೃತ್ಯಾವಃ ಪ್ರಗೀತೌ ತಳತಾಳಕೌ ॥೯॥

ನಮ್ಮ ರಾಜ್ಯದಲ್ಲಿ ಮಲಗಿರುವ ಅವರಿಂದ ನಿನಗೆ ಯಾವ ಭಯವೂ ಇಲ್ಲ. ಆ ಮನುಷ್ಯರ ಮಾಂಸವನ್ನು ನಮಗೆ ಬೇಕಾದಂತೆ ಬೇಯಿಸಿ ಇಬ್ಬರೂ ಜೊತೆಯಲ್ಲಿ ತಿನ್ನೋಣ. ಬೇಗ ನನ್ನ ಮಾತನ್ನು ನಡೆಸು. ಅನಂತರ ಸಂತೋಷದಿಂದ ಹಾಡುತ್ತಾ ಚಪ್ಪಾಳೆಯನ್ನು ತಟ್ಟುತ್ತಾ ನಾವಿಬ್ಬರೂ ಕುಣಿಯೋಣ.

ವೈಶಂಪಾಯನಃ

ಏವಮುಕ್ತಾ ಹಿಡಿಂಬೇನ ಹಿಡಿಂಬೀ ರಾಕ್ಷಸೀ ತದಾ ।
ಆಪ್ಲುತ್ಯಾಪ್ಲುತ್ಯ ಚ ತರೂನಾಗಚ್ಛತ್ ಪಾಂಡವಾನ್ ಪ್ರತಿ ॥೧೦॥

ಹಿಡಿಂಬನಿಂದ ಹೀಗೆ ಹೇಳಲ್ಪಟ್ಟ ರಾಕ್ಷಸಿಯಾದ ಹಿಡಿಂಬೆಯು ಆಗ ಮರಗಳನ್ನು ಹಾರುತ್ತಾ ಹಾರುತ್ತಾ ಪಾಂಡವರ ಬಳಿಗೆ ಬಂದಳು.

ಭ್ರಾತುರ್ವಚನಮಾಜ್ಞಾಯ ತ್ವರಮಾಣೇವ ರಾಕ್ಷಸೀ ।
ಜಗಾಮ ತತ್ರ ಯತ್ರ ಸ್ಮ ಶೇರತೇ ಪಾಂಡವಾ ವನೇ ॥೧೧॥

ಅಣ್ಣನ ಮಾತುಗಳನ್ನು ತಿಳಿದು ವೇಗವಾಗಿ ಬಂದ ಆ ರಾಕ್ಷಸಿಯು ಕಾಡಿನಲ್ಲಿ ಪಾಂಡವರು ಮಲಗಿರುವ ಸ್ಥಳಕ್ಕೆ ಬಂದಳು.

ದದರ್ಶ ತತ್ರ ಸಾ ಗತ್ವಾ ಪಾಂಡವಾನ್ ಪೃಥಯಾ ಸಹ ।
ಶಯಾನಾನ್ ಭೀಮಸೇನಂ ಚ ಜಾಗ್ರತಂ ಚಾಪರಾಜಿತಮ್ ॥೧೨॥

ಅವಳು ಕುಂತಿಯ ಜೊತೆಯಲ್ಲಿ ಮಲಗಿರುವ ಪಾಂಡವರನ್ನೂ ಎಚ್ಚರದಿಂದಿದ್ದು ಅಪರಾಜಿತನಾದ ಭೀಮಸೇನನನ್ನು ಅಲ್ಲಿ ನೋಡಿದಳು.

ಉಪಾಸ್ಯಮಾನಾನ್ ಭೀಮೇನ ರೂಪಯೌವನಶಾಲಿನಾ ।
ಸುಕುಮಾರಾಂಶ್ಚ ಪಾರ್ಥಾನ್ ಸಾ ವ್ಯಾಯಾಮೇನ ಚ ಕರ್ಶಿತಾನ್ ॥

ರೂಪಯೌವನಶಾಲಿಯಾದ ಭೀಮನಿಂದ ರಕ್ಷಿಸಲ್ಪಡುತ್ತಿರುವ ಆಯಾಸದಿಂದ ಬಳಲಿದ ಸುಕುಮಾರರಾದ ಪಾಂಡವರನ್ನು ನೋಡಿದಳು.

ದುಃಖೇನ ಸಂಪ್ರಯುಕ್ತಾಂಶ್ಚ ಸಹಜ್ಯೇಷ್ಠಾನ್ ಪ್ರಮಾದಿನಃ ।
ರೌದ್ರೀ ಸತೀ ರಾಜಪುತ್ರಂ ದರ್ಶನೀಯಪ್ರದರ್ಶನಮ್ ॥೧೪॥

ದುಃಖದಿಂದ ಕೂಡಿದವರಾಗಿ ಪ್ರಮಾದದಿಂದ ತಾಯಿಯ ಜೊತೆಯಲ್ಲಿ ಮಲಗಿರುವ ಪಾಂಡವರನ್ನೂ, ಸುಂದರ ರೂಪವನ್ನು ಹೊಂದಿ ಅವರನ್ನು ನೋಡಿಕೊಳ್ಳುತ್ತಿರುವ ರಾಜಪುತ್ರನಾದ ಭೀಮಸೇನನನ್ನೂ ಆ ಉಗ್ರವಾದ ರಾಕ್ಷಸಿಯು ನೋಡಿದಳು.

ದೃಷ್ಟ್ವೈವ ಭೀಮಸೇನಂ ಸಾ ಸಾಲಸ್ಕಂಧಮಿವೋದ್ಯತಮ್ ।
ರಾಕ್ಷಸೀ ಕಾಮಯಾಮಾಸ ರೂಪೇಣಾಪ್ರತಿಮಂ ಭುವಿ ॥೧೫॥

ಸಾಲಸ್ಕಂಧದಂತೆ ಉನ್ನತವಾಗಿದ್ದ ರೂಪದಲ್ಲಿ ಭೂಮಿಯಲ್ಲಿ ಅಸದೃಶನಾಗಿದ್ದ ಭೀಮಸೇನನನ್ನು ನೋಡಿದ ತಕ್ಷಣ ರಾಕ್ಷಸಿಗೆ ಅವನಲ್ಲಿ ಕಾಮವುಂಟಾಯಿತು.

ಅಂತರ್ಗತೇನ ಮನಸಾ ಚಿಂತಯಾಮಾಸ ರಾಕ್ಷಸೀ ।
ಅಯಂ ಶ್ಯಾಮೋ ಮಹಾಬಾಹುಃ ಸಿಂಹಸ್ಕಂಧೋ ಮಹಾದ್ಯುತಿಃ ।
ಕಂಬುಗ್ರೀವಃ ಪುಷ್ಕರಾಕ್ಷೋ ಭರ್ತಾ ಯುಕ್ತೋ ಭವೇನ್ಮಮ ॥೧೬॥

ಆ ರಾಕ್ಷಸಿಯು ಶ್ಯಾಮವರ್ಣೋಪೇತನೂ, ಮಹಾಬಾಹುವೂ, ಸಿಂಹಸ್ಕಂಧನೂ, ಮಹಾದ್ಯುತಿಯೂ, ಶಂಖದಂತಿರುವ ಕಂಠವುಳ್ಳವನೂ, ಕಮಲನಯನನೂ ಆದ ಇವನು ನನ್ನ ಪತಿಯಾಗಲು ಯೋಗ್ಯನಾಗಿದ್ದಾನೆ ಎಂದು ತನ್ನ ಮನಸ್ಸಿನಲ್ಲಿಯೇ ಚಿಂತಿಸಿದಳು.

ನಾಹಂ ಭ್ರಾತುರ್ವಚೋ ಜಾತು ಕುರ್ಯಾಂ ಕ್ರೂರಮಸಾಂಪ್ರತಮ್।
ಪತಿಹೇತುರ್ಹಿ ಬಲವಾನ್ ನ ತಥಾ ಭ್ರಾತೃಸಂಗಮಃ ॥೧೭॥

ನಾನು ಅಣ್ಣನ ಕ್ರೂರವಾದ ಮತ್ತು ಅಯೋಗ್ಯವಾದ ಮಾತಿನಂತೆ ನಡೆದುಕೊಳ್ಳುವುದಿಲ್ಲ. ಅಣ್ಣನ ಸೌಮನಸ್ಯಕ್ಕಿಂತ ಪತಿಯ ಪ್ರಾಪ್ತಿಯು ಪ್ರಬಲವಾದ ಕಾರಣವಾಗಿದೆ.

ಮುಹೂರ್ತಮಪಿ ಚಾದ್ಯಾಹಂ ಪ್ರಾಪ್ನುಯಾಂ ತೃಪ್ತಿಮುತ್ತಮಾಮ್ ।
ಭರ್ತ್ರಾ ತ್ವಹಮನೇನೈವ ಮೋದಿಷ್ಯೇ ಬಹುಳಾಃ ಸಮಾಃ ॥೧೮॥

ಈ ದಿನವೇ ನಾನು ಇವನಿಂದ ಒಂದು ಮಹೂರ್ತವಾದರೂ ಒಳ್ಳೆಯ ತೃಪ್ತಿಯನ್ನು ಪಡೆದು ಆನಂತರ ಪತಿಯಾದ ಅವನ ಜೊತೆಯಲ್ಲಿ ಅನೇಕ ವರ್ಷಗಳ ಕಾಲ ಸಂತೋಷದಿಂದ ಇರುತ್ತೇನೆ.

ಹಿಡಿಂಬೀ ತು ಮಹಾರೌದ್ರಾ ತದಾ ಭರತಸತ್ತಮಮ್ ।
ಉತ್ಸೃಜ್ಯ ರಾಕ್ಷಸಂ ರೂಪಂ ಮಾನುಷಂ ರೂಪಮಾಸ್ಥಿತಾ ॥೧೯॥

ಭರತಶ್ರೇಷ್ಠನೇ ಆಗ ಮಹಾಭಯಂಕರಳಾದ ಹಿಡಿಂಬೆಯು ರಾಕ್ಷಸರೂಪವನ್ನು ತ್ಯಜಿಸಿ ಮನುಷ್ಯರೂಪವನ್ನು ಧರಿಸಿದಳು.

ಸಾ ಕಾಮರೂಪಿಣೀ ರೂಪಂ ಕೃತ್ವಾ ಮದನಮೋಹಿತಾ ।
ಉಪತಸ್ಥೇ ಮಹಾತ್ಮಾನಂ ಭೀಮಸೇನಮನಿಂದಿತಾ ॥೨೦॥

ಕಾಮಮೋಹಿತಳಾದ, ಕಾಮರೂಪಿಣಿಯಾದ, ಅನಿಂದಿತಳಾದ ಅವಳು ಸುಂದರವಾದ ರೂಪವನ್ನು ಧರಿಸಿ ಮಹಾತ್ಮನಾದ ಭೀಮಸೇನನನ್ನು ಸಮೀಪಿಸಿದಳು.

ಇಂಗಿತಾಕಾರಕುಶಲಾ ಸೋಪಾಸರ್ಪಚ್ಛನೈಃ ಶನೈಃ ।
ವಿನಮ್ಯಮಾನೇವ ಲತಾ ಸರ್ವಾಭರಣಭೂಷಿತಾ ॥೨೧॥

ಇಂಗಿತವನ್ನು ತಿಳಿದುಕೊಳ್ಳುವುದರಲ್ಲಿ ಕುಶಲಳಾದ ಅವಳು ಸರ್ವಾಭರಣಭೂಷಿತಳಾಗಿ ಬಳುಕುವ ಬಳ್ಳಿಯಂತೆ ಮೆಲ್ಲಮೆಲ್ಲನೆ ನಡೆದುಬಂದಳು.

ಶನೈಶ್ಶನೈಃ ಸ ತಾಂ ಭೀಮಃ ಸಮೀಪಮುಪಸರ್ಪತೀಮ್ ।
ವೀಕ್ಷಮಾಣಸ್ತಥಾऽಪಶ್ಯತ್ ತನ್ವೀಂ ಪೀನಪಯೋಧರಾಮ್ ।
ಚಂದ್ರಾನನಾಂ ಪದ್ಮನೇತ್ರಾಂ ನೀಲಕುಂಚಿತಮೂರ್ಧಜಾಮ್ ॥೨೨॥

ಮೆಲ್ಲಮೆಲ್ಲನೆ ತನ್ನ ಬಳಿಗೆ ಬರುತ್ತಿರುವ ಅವಳನ್ನು ಗಮನಿಸುತ್ತಾ ಭೀಮನು, ಕೃಶಳಾಗಿ ಪೀನಪಯೋಧರಗಳನ್ನೂ, ಚಂದ್ರಮುಖವನ್ನೂ, ಕಮಲನಯನಗಳನ್ನೂ, ಕಪ್ಪಾದ ಗುಂಗುರು ಕೂದಲುಗಳನ್ನೂ ಹೊಂದಿದ್ದ ಅವಳನ್ನು ನೋಡಿದನು.

ಕೃಷ್ಣಾಂ ಸುಪಾಂಡರೈರ್ವಸ್ತ್ರೈಃ ಬಿಂಬೋಷ್ಠೀಂ ಚಾರುದರ್ಶನಾಮ್ ।
ದೃಷ್ಟ್ವಾ ತಾಂ ರೂಪಸಂಪನ್ನಾಂ ಭೀಮೋ ವಿಸ್ಮಯಮಾಗತಃ ॥೨೩॥

ಕೃಷ್ಣವರ್ಣದವಳಾದ ಶ್ವೇತವಸ್ತ್ರವನ್ನು ಧರಿಸಿದ್ದ ತೊಂಡೆಯ ಹಣ್ಣಿನಂತೆ ತುಟಿಯುಳ್ಳ, ನೋಡಲು ಮನೋಹರವಾದ ಆ ರೂಪಸಂಪನ್ನೆಯನ್ನು ನೋಡಿ ಭೀಮನಿಗೆ ವಿಸ್ಮಯವಾಯಿತು.

ಉಪಚಾರಗುಣೈರ್ಯುಕ್ತಾ ಲಲಿತೈರ್ಭಾವಸಂಸ್ಥಿತೈಃ ।
ಸಮೀಪಮುಪಸಂಪ್ರಾಪ್ಯ ಭೀಮಂ ಸಾऽಥ ವರಾನನಾ ।
ವಚೋ ವಚನವೇಲಾಯಾಮಿದಂ ಪ್ರೋವಾಚ ಪಾಂಡವಮ್ ॥೨೪॥

ಆ ಸುಂದರಿಯು ಲಲಿತವಾದ ಮತ್ತು ಪ್ರೀತಿಯುತವಾದ ಉಪಚಾರಗುಣಗಳಿಂದ ಕೂಡಿದವಳಾಗಿ ಭೀಮನ ಹತ್ತಿರ ಬಂದು ಆ ಪಾಂಡವನನ್ನು ಕುರಿತು ಮಾತನಾಡುವ ಸಮಯದಲ್ಲಿ ಹೀಗೆ ಹೇಳಿದಳು.

ಲಜ್ಜಯಾ ನಮ್ಯಮಾನೇವ ಸರ್ವಾಭರಣಭೂಷಿತಾ ।
ಸ್ಮಿತಪೂರ್ವಮಿದಂ ವಾಕ್ಯಂ ಭೀಮಸೇನಮಥಾಬ್ರವೀತ್ ।
ಕುತಸ್ತ್ವಮಸಿ ಸಂಪ್ರಾಪ್ತಃ ಕಶ್ಚಾಸಿ ಪುರುಷರ್ಷಭ ॥೨೫॥

ಸರ್ವಾಭರಣಭೂಷಿತಳಾದ ಅವಳು ನಾಚಿಕೆಯಿಂದ ಬಳುಕುತ್ತಾ ಮಂದಹಾಸಪೂರ್ವಕವಾಗಿ ಭೀಮಸೇನನನ್ನು ಕುರಿತು ಪುರುಷಶ್ರೇಷ್ಠನೇ, ನೀನು ಯಾರು ಮತ್ತು ಎಲ್ಲಿಂದ ಬಂದಿದ್ದೀಯೆ ಎಂದು ಕೇಳಿದಳು.

ಕ ಇಮೇ ಶೇರತೇ ಚೇಹ ಪುರುಷಾ ದೇವರೂಪಿಣಃ ।
ಕೇಯಂ ಚ ಬೃಹತೀ ಶ್ಯಾಮಾ ಸುಕುಮಾರೀ ತವಾನಘ ।
ಶೇತೇ ವನಮಿದಂ ಪ್ರಾಪ್ಯ ವಿಶ್ವಸ್ತಾ ಸ್ವಗೃಹೇ ಯಥಾ ॥೨೬॥

ದೇವರೂಪಿಗಳಂತಿದ್ದು, ಇಲ್ಲಿ ಮಲಗಿರುವ ಈ ಪುರುಷರು ಯಾರು? ಅನಘನೇ, ಈ ಕಾಡಿಗೆ ಬಂದು ತನ್ನ ಮನೆಯಲ್ಲಿ ಮಲಗಿದಂತೆ ವಿಶ್ವಾಸದಿಂದ ಮಲಗಿರುವ ಈ ಹಿರಿಯಳಾದ ಶ್ಯಾಮವರ್ಣದ ಸುಕುಮಾರಿ ಯಾರು?

ನೇದಂ ಜಾನೀಥ ಗಹನಂ ವನಂ ರಾಕ್ಷಸಸೇವಿತಮ್ ।
ವಸತಿ ಹ್ಯತ್ರ ಪಾಪಾತ್ಮಾ ಹಿಡಿಂಬೋ ನಾಮ ರಾಕ್ಷಸಃ ॥೨೭॥

ಈ ಕಾಡು ರಾಕ್ಷಸಸೇವಿತವಾದುದೆಂದು ನೀವು ತಿಳಿದಿಲ್ಲ. ಇಲ್ಲಿ ಪಾಪಾತ್ಮನಾದ ಹಿಡಿಂಬನೆಂಬ ರಾಕ್ಷಸನು ವಾಸಿಸುತ್ತಾನೆ.

ತೇನಾಹಂ ಪ್ರೇಷಿತಾ ಭ್ರಾತ್ರಾ ದುಷ್ಟಭಾವೇನ ರಕ್ಷಸಾ ।
ಬಿಭಕ್ಷಯಿಷತಾ ಮಾಂಸಂ ಯುಷ್ಮಾಕ ಮಮರೋಪಮ ॥೨೮॥

ದೇವೋಪಮನೇ, ದುಷ್ಟಭಾವವುಳ್ಳ ನನ್ನ ಅಣ್ಣನಾದ ಆ ರಾಕ್ಷಸನು ನಿಮ್ಮ ಮಾಂಸವನ್ನು ತಿನ್ನುವ ಇಚ್ಛೆಯಿಂದ ನನ್ನನ್ನು ಕಳುಹಿಸಿದ್ದಾನೆ.

ಸಾऽಹಂ ತ್ವಾಮಿಹ ಸಂಪ್ರೇಕ್ಷ್ಯ ದೇವಗರ್ಭಸಮಪ್ರಭಮ್ ।
ನಾನ್ಯಂ ಭರ್ತಾರಮಿಚ್ಛಾಮಿ ಸತ್ಯಮೇತದ್ ಬ್ರವೀಮಿ ತೇ ।
ಏತದ್ ವಿಜ್ಞಾಯ ಧರ್ಮಜ್ಞ ಯುಕ್ತಂ ಮಯಿ ಸಮಾಚರ ॥೨೯॥

ಅಂತಹ ನಾನು ಇಲ್ಲಿಗೆ ಬಂದು ದೇವಕುಮಾರನ ಕಾಂತಿಯಿರುವ ನಿನ್ನನ್ನು ನೋಡಿದ ಮೇಲೆ ಬೇರೆ ಯಾರನ್ನೂ ಪತಿಯನ್ನಾಗಿ ಬಯಸುವುದಿಲ್ಲ. ಇದು ಸತ್ಯವಾದ ಮಾತು. ಧರ್ಮಜ್ಞನಾದ ನೀನು ಇದನ್ನು ತಿಳಿದು ನನ್ನಲ್ಲಿ ಯೋಗ್ಯವಾಗಿ ನಡೆದುಕೋ.

ಕಾಮೋಪಹತಚಿತ್ತಾಂ ಹಿ ಭಜಮಾನಾಂ ಭಜಸ್ವ ಮಾಮ್ ।
ತ್ರಾಸ್ಯೇऽಹಂ ತ್ವಾಂ ಮಹಾರಾಜ ರಾಕ್ಷಸಾತ್ ಪುರುಷಾದಕಾತ್ ॥೩೦॥

ಕಾಮೋಪಹತಳಾಗಿ ನಿನ್ನನ್ನು ಒಲೈಸುತ್ತಿರುವ ನನ್ನನ್ನು ಸ್ವೀಕರಿಸು. ಮಹಾರಾಜನೇ, ನರಮಾಂಸಭಕ್ಷಕನಾದ ರಾಕ್ಷಸನಿಂದ ನಾನು ನಿನ್ನನ್ನು ರಕ್ಷಿಸುವೆನು.

ವತ್ಸ್ಯಾವೋ ಗಿರಿದುರ್ಗೇಷು ಭರ್ತಾ ಭವ ಮಮಾನಘ ।
ಇಚ್ಛಾಮಿ ವೀರ ಭದ್ರಂ ತೇ ಮಮ ಪ್ರಾಣಾನ್ ವಿಹಾಸಿಷುಃ ॥೩೧॥

ತ್ವಯಾ ಹ್ಯಹಂ ಪರಿತ್ಯಕ್ತಾ ನ ಜೀವೇಯಮರಿಂದಮ ।
ಅಂತರಿಕ್ಷಚರೀ ಚಾಸ್ಮಿ ಕಾಮರೂಪಧರಾऽಪಿ ಚ ।
ಅತುಲಾಮಾಪ್ನುಹಿ ಪ್ರೀತಿಂ ತತ್ರ ತತ್ರ ಮಯಾ ಸಹ ॥೩೨॥

ವೀರನೇ, ನಿನಗೆ ಮಂಗಳವಾಗಲಿ. ಅನಘನೇ, ನನ್ನ ಪತಿಯಾಗು. ನಾವಿಬ್ಬರೂ ಗಿರಿದುರ್ಗಗಳಲ್ಲಿ ವಾಸಿಸೋಣ. ನನ್ನ ಪ್ರಾಣಗಳನ್ನು ಬಿಡಲು ಹೊರಟಿರುವ ನಾನು ನಿನ್ನನ್ನೇ ಪತಿಯಾಗಿ ಬಯಸುತ್ತೇನೆ. ಅರಿಂದಮನೇ, ನೀನು ನನ್ನನ್ನು ಪರಿತ್ಯಜಿಸಿದರೆ ನಾನು ಖಂಡಿತವಾಗಿಯೂ ಬದುಕಿರುವುದಿಲ್ಲ. ನಾನು ಅಂತರಿಕ್ಷದಲ್ಲಿ ಹೋಗುವ ಮತ್ತು ಕಾಮರೂಪವನ್ನು ಧರಿಸುವ ಶಕ್ತಿಯನ್ನು ಹೊಂದಿದ್ದೇನೆ. ನನ್ನನ್ನು ಸ್ವೀಕರಿಸಿ ನನ್ನ ಜೊತೆಯಲ್ಲಿ ಅಸದೃಶವಾದ ಸಂತೋಷವನ್ನು ಹೊಂದು.

ಭೀಮಸೇನಃ

ಏಷ ಜ್ಯೇಷ್ಠೋ ಮಮ ಭ್ರಾತಾ ಮಾನ್ಯಃ ಪರಮಕೋ ಗುರುಃ ।
ಅನಿವಿಷ್ಟಶ್ಚ ತನ್ನಾಹಂ ಪರಿವೇತ್ತಾ ಕಥಂಚನ ॥೩೩॥

ಇವನು ನನ್ನ ಅಣ್ಣ, ನನಗೆ ಪೂಜ್ಯನಾದವನು. ನನಗೆ ಶ್ರೇಷ್ಠನಾದ ಗುರು. ಅವನಿಗೆ ಇನ್ನೂ ವಿವಾಹವಾಗಿಲ್ಲ. ನಾನು ಅವನಿಗಿಂತ ಮುಂಚೆ ಪತ್ನಿಯನ್ನು ಸ್ವೀಕರಿಸುವುದಿಲ್ಲ.

ಮಾತರಂ ಭ್ರಾತರಂ ಜ್ಯೇಷ್ಠಂ ಕನಿಷ್ಠಾನಪರಾಜಿತಾನ್ ।
ಪರಿತ್ಯಜೇದ್ಧಿ ಕೋ ನ್ವದ್ಯ ಭಯಾದಪಿ ಚ ರಾಕ್ಷಸಿ ॥೩೪॥

ರಾಕ್ಷಸಿಯೇ, ತಾಯಿಯನ್ನೂ ಅಣ್ಣನನ್ನೂ ಅಪರಾಜಿತರಾದ ತಮ್ಮಂದಿರನ್ನೂ ಭಯದಿಂದಲಾದರೂ ಸಹ ಈ ದಿನ ಯಾವನು ಪರಿತ್ಯಾಗ ಮಾಡುತ್ತಾನೆ ?

ಕೋ ಹಿ ಸುಪ್ತಾನಿಮಾನ್ ಭ್ರಾತ್ಸ್ತಾನ್ ದತ್ತ್ವಾ ರಾಕ್ಷಸಭೋಜನಮ್।
ಮಾತರಂ ಚ ನರೋ ಗಚ್ಛೇತ್ ಕಾಮಾರ್ತ ಇವ ಮದ್ವಿಧಃ ॥೩೫॥

ಮಲಗಿದ ಈ ಅಣ್ಣತಮ್ಮಂದಿರನ್ನೂ ಮತ್ತು ತಾಯಿಯನ್ನೂ ರಾಕ್ಷಸನಿಗೆ ಆಹಾರವಾಗಿ ಕೊಟ್ಟು ಯಾವ ನನ್ನಂತಹ ಮನುಷ್ಯನು ಕಾಮಾರ್ತನಾಗುತ್ತಾನೆ?

ಹಿಡಿಂಬೀ

ಏಕಂ ತ್ವಾಂ ಮೋಕ್ಷಯಿಷ್ಯಾಮಿ ಸಹ ಮಾತ್ರಾ ಪರಂತಪ ।
ಸೋದರಾನುತ್ಸೃಜೈನಾಂಸ್ತ್ವ ಮಾರೋಹ ಜಘನಂ ಮಮ ॥೩೬॥

ನಿನ್ನನ್ನೂ ಮತ್ತು ನಿನ್ನ ತಾಯಿಯನ್ನೂ ಬಿಟ್ಟುಬಿಡುತ್ತೇನೆ. ಉಳಿದ ನಿನ್ನ ಸಹೋದರರನ್ನು ನೀನು ಬಿಟ್ಟುನನ್ನ ಸೊಂಟದ ಮೇಲೆ ಕುಳಿತುಕೋ.

ಭೀಮಸೇನಃ

ನಾಹಂ ಜೀವಿತುಮಾಶಂಸೇ ಭ್ರಾತೄನುತ್ಸೃಜ್ಯ ರಾಕ್ಷಸಿ ।
ಯಥಾಶ್ರದ್ಧಂ ವ್ರಜೈಕಾ ಹಿ ವಿಪ್ರಿಯಂ ಮೇ ಪ್ರಭಾಷಸೇ ॥೩೭॥

ರಾಕ್ಷಸಿಯೇ, ಸಹೋದರರನ್ನು ಪರಿತ್ಯಾಗ ಮಾಡಿ ನಾನು ಬದುಕಲು ಬಯಸುವುದಿಲ್ಲ. ನನಗೆ ಅಪ್ರಿಯವಾಗಿ ಮಾತನಾಡುತ್ತಿರುವೆ. ನೀನೊಬ್ಬಳೇ ನಿನ್ನ ಮನಸ್ಸಿಗೆ ಬಂದಂತೆ ಹೊರಟು ಹೋಗು.

ರಾಕ್ಷಸೀ

ನ ತೇऽಪ್ರಿಯಂ ಚಿಕೀರ್ಷಾಮಿ ಸರ್ವಾನೇತಾನ್ ಪ್ರಬೋಧಯ ।
ಮೋಕ್ಷಯಿಷ್ಯಾಮಿ ವಃ ಕಾಮಂ ರಾಕ್ಷಸಾತ್ ಪುರುಷಾದಕಾತ್ ॥೩೮॥

ನಿನಗೆ ಯಾವ ಅಪ್ರಿಯವನ್ನೂ ಮಾಡಲು ಬಯಸುವುದಿಲ್ಲ. ಇವರೆಲ್ಲರನ್ನೂ ಎಬ್ಬಿಸು. ನಿಮ್ಮೆಲ್ಲರನ್ನೂ ಮನುಷ್ಯಭಕ್ಷಕನಾದ ರಾಕ್ಷಸನಿಂದ ಬಿಡುಗಡೆ ಗೊಳಿಸುತ್ತೇನೆ.

ಭೀಮಸೇನಃ

ನ ಭಯಾತ್ ಬೋಧಯಿಷ್ಯಾಮಿ ಭ್ರಾತುಸ್ತವ ದುರಾತ್ಮನಃ ।
ಸುಖಸುಪ್ತಾನಿಮಾನ್ ಭ್ರಾತೄನ್ ಮಾತರಂ ಚೈವ ರಾಕ್ಷಸಿ ॥೩೯॥

ರಾಕ್ಷಸಿಯೇ, ದುರಾತ್ಮನಾದ ನಿನ್ನ ಅಣ್ಣನ ಹೆದರಿಕೆಯಿಂದ ಸುಖವಾಗಿ ಮಲಗಿರುವ ಈ ಸಹೋದರರನ್ನಾಗಲೀ ಅಥವಾ ತಾಯಿಯನ್ನಾಗಲೀ ಎಬ್ಬಿಸುವುದಿಲ್ಲ.

ನ ಹಿ ಮೇ ರಾಕ್ಷಸಾ ಭೀರು ಸೋಢುಂ ಶಕ್ತಾಃ ಪರಾಕ್ರಮಮ್ ।
ನ ಮನುಷ್ಯಾ ನ ಗಂಧರ್ವಾ ನ ಯಕ್ಷಾಶ್ಚಾರುಲೋಚನೇ ॥೪೦॥

ಭೀರುವೇ ರಾಕ್ಷಸರು ನನ್ನ ಪರಾಕ್ರಮವನ್ನು ಸಹಿಸಲು ಸಮರ್ಥರಲ್ಲ. ಚಾರುನೇತ್ರೆಯೇ, ಮನುಷ್ಯರಾಗಲೀ, ಗಂಧರ್ವರಾಗಲೀ ಅಥವಾ ಯಕ್ಷರಾಗಲೀ ಸಹ ಸಮರ್ಥರಲ್ಲ.

ಗಚ್ಛ ವಾ ತಿಷ್ಠ ವಾ ಭದ್ರೇ ಯದ್ವಾऽಪೀಚ್ಛಸಿ ತತ್ ಕುರು ।
ತಂ ವಾ ಪ್ರೇಷಯ ತನ್ವಂಗಿ ರಾಕ್ಷಸಂ ಪುರುಷಾದಕಮ್ ॥೪೧॥

ಮಂಗಳಸ್ವರೂಪಳೇ, ನೀನು ಹೋಗು ಅಥವಾ ಇಲ್ಲಿಯೇ ಇರು, ನಿನಗೆ ಹೇಗೆ ಇಷ್ಟವೋ ಅದರಂತೆ ಮಾಡು. ಅಥವಾ ಕೃಶಾಂಗಿಯೇ ನರಭಕ್ಷಕನಾದ ಆ ರಾಕ್ಷಸನನ್ನು ಬೇಕಾದರೂ ಕಳುಹಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರಿಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ಹಿಡಿಂಬವಧಪರ್ವಣೀ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಐವತ್ತಮೂರನೆಯ ಅಧ್ಯಾಯ ಮುಗಿಯಿತು.

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಕಾಲೇ ತದೈವ ಕುಪಿತಃ ಪ್ರಯಯೌ ಹಿಡಿಂಬೋ
ಭೀಮಂ ನಿಹಂತುಮಪಿ ತಾಂ ಚ ನಿಜಸ್ವಸಾರಂ ।
ಭಕ್ಷಾರ್ಥಮೇವ ಹಿ ಪುರಾ ಸ ತು ತಾಂ ನ್ಯಯುಂಕ್ತ
ನೇತುಂ ಚ ತಾನಥ ಸಮಾಸದದಾಶು ಭೀಮಂ ॥೫೩॥

ಅದೇ ಸಮಯದಲ್ಲಿ ಕುಪಿತನಾದ ಹಿಡಿಂಬ ಭೀಮನನ್ನೂ, ಜೊತೆಗೆ ತಂಗಿಯಾದ ಹಿಡಿಂಬಿಯನ್ನೂ ಕೊಲ್ಲಲು ಹೊರಟ. ಏಕೆಂದರೆ ಅವನು ಪಾಂಡವರನ್ನು ತಿನ್ನಲು ತರಲೆಂದೇ ಅವಳನ್ನು ಕಳಿಸಿದ್ದ.

ಸಾ ಭೀಮಮೇವ ಶರಣಂ ಪ್ರಜಗಾಮ ತಾಂ ಚ
ಭ್ರಾತೄಂಶ್ಚ ಮಾತರಮಥಾವಿತುಮಭ್ಯಯಾತ್ತಂ ।
ಭೀಮಃ ಸುದೂರಮಪಕೃಷ್ಯ ಸಹೋದರಾಣಾಂ
ನಿದ್ರಾಪ್ರಭಂಗಭಯತೋ ಯುಯುಧೇಽಮುನಾ ಚ ॥೫೪॥

ಹಿಡಿಂಬಿ ಭೀಮನನ್ನೇ ಮೊರೆಹೊಕ್ಕಳು. ಭೀಮ ಅವಳನ್ನೂ ಸೋದರರನ್ನೂ ತಾಯಿಯನ್ನೂ ಕಾಪಾಡುವುದಕ್ಕಾಗಿ ಹಿಡಿಂಬನ ಮೇಲೇರಿಹೋದ. ಸೋದರರಿಗೆ ನಿದ್ರಾಭಂಗವಾದೀತೆಂದು ಭಯದಿಂದ ಅವನನ್ನು ಬಲುದೂರಕ್ಕೆ ಸೆಳೆದೊಯ್ದು ಅವನೊಡನೆ ಹೋರಾಟಕ್ಕೆ ಇಳಿದ.

★ ★ ★ ★

ನೂರ ಐವತ್ತನಾಲ್ಕನೆಯ ಅಧ್ಯಾಯ

(ಹಿಡಂಬಿಯು ವಿಳಂಬ ಮಾಡುತ್ತಿರಲು ಅಲ್ಲಿಗೆ ಹಿಡಿಂಬನ ಆಗಮನ)

ವೈಶಂಪಾಯನ

ತಾಂ ವಿದಿತ್ವಾ ಚಿರಗತಾಂ ಹಿಡಿಂಬೋ ರಾಕ್ಷಸೇಶ್ವರಃ ।
ಅವತೀರ್ಯ ದ್ರುಮಾತ್ ತಸ್ಮಾದಾಜಗಾಮಾಥ ಪಾಂಡವಾನ್ ॥೧॥

ಹಿಡಿಂಬೆಯು ಹೊರಟು ಬಹಳ ಸಮಯವಾದುದನ್ನು ಗಮನಿಸಿ ರಾಕ್ಷಸೇಶ್ವರನಾದ ಹಿಡಿಂಬನು ಆ ಸಾಲವೃಕ್ಷದಿಂದ ಇಳಿದು ಪಾಂಡವರಿದ್ದ ಕಡೆಗೆ ಬಂದನು.

ಲೋಹಿತಾಕ್ಷೋ ಮಹಾಬಾಹುರೂರ್ಧ್ವಕೇಶೋ ಮಹಾಬಲಃ ।
ಮೇಘಸಂಘಾತವರ್ಣಾ ಚ ತೀಕ್ಷ್ಣದಂಷ್ಟ್ರೋಜ್ಜ್ವಲಾನನಃ ॥೨॥

ತಳಂ ತಳೇನ ಸಂಹತ್ಯ ಬಾಹೂ ವಿಕ್ಷಿಪ್ಯ ಚಾಸಕೃತ್ ।
ಉದ್ವೃತ್ತನೇತ್ರಃ ಸಂಕ್ರುದ್ಧೋ ದಂತಾನ್ ದಂತೇಷು ನಿಷ್ಪಷನ್ ॥೩॥

ಕೋಽದ್ಯ ಮೇ ಭೋಕ್ತುಕಾಮಸ್ಯ ವಿಘ್ನಂ ಚರತಿ ದುರ್ಮತಿಃ ।
ನ ಬಿಭೇತಿ ಹಿಡಿಂಬೀ ಚ ಪ್ರೇಷಿತಾ ಕಿಮನಾಗತಾ ॥೪॥

ಕೆಂಪಾದ ಕಣ್ಣುಳ್ಳವನೂ, ಮಹಾಬಾಹುವೂ, ಊರ್ಧ್ವಕೇಶನೂ, ಮಹಾಬಲನೂ, ಮೇಘಸಮೂಹದ ಬಣ್ಣವುಳ್ಳವನೂ, ಹರಿತವಾದ ಕೋರೆದಾಡೆಯುಳ್ಳವನೂ, ಉಜ್ವಲವಾದ ಮುಖವುಳ್ಳವನೂ ಆದ ಅವನು ಕೈಯಿಂದ ಕೈಯನ್ನು ಹೊಸಕುತ್ತಾ ಮತ್ತೆ ಮತ್ತೆ ಬಾಹುಗಳನ್ನು ಎತ್ತಿ, ಕೋಪದಿಂದ ಅರಳಿದ ಕಣ್ಣುಳ್ಳವನಾಗಿ ಹಲ್ಲುಗಳಿಂದ ಕಡಿಯುತ್ತಾ, ಹಸಿದು ಆಹಾರವನ್ನು ಬಯಸುತ್ತಿರುವ ನನಗೆ ಈ ದಿನ ವಿಘ್ನವನ್ನು ಉಂಟುಮಾಡುತ್ತಿರುವ ಈ ದುಷ್ಟನು ಯಾರು? ನಾನು ಕಳುಹಿಸಿದ ಹಿಡಂಬಿಗೂ ಸಹ ಹೆದರಿಕೆ ಇಲ್ಲ. ಅವಳು ಏಕೆ ಬರಲಿಲ್ಲ? (ಎಂದು ಕಿರುಚಿದನು)

ತಮಾಪತಂತಂ ದೃಷ್ಟ್ವೈವ ತಥಾರೂಪಂ ಭಯಂಕರಮ್ ।
ಹಿಡಿಂಬ್ಯುವಾಚ ವಿತ್ರಸ್ತಾ ಭೀಮಸೇನಮಿದಂ ವಚಃ ॥೫॥

ಅಂತಹ ರೂಪವನ್ನು ಧರಿಸಿ ಭಯಂಕರನಾಗಿ ಎರಗುತ್ತಿರುವ ಅವನನ್ನು ನೋಡಿ ಹೆದರಿದ ಹಿಡಿಂಬೆಯು ಭೀಮಸೇನನನ್ನು ಕುರಿತು ಹೀಗೆ ಹೇಳಿದಳು.

ಆಪತತ್ಯೇವ ದುಷ್ಟಾತ್ಮಾ ಸಂಕ್ರುದ್ಧಃ ಪುರುಷಾದಕಃ ।
ತ್ವಂ ಚಾಪಿ ಭ್ರಾತೃಭಿಃ ಸಾರ್ಧಂ ಯದ್ ಬ್ರವೀಮಿ ತಥಾ ಕುರು ॥೬॥

ನರಭಕ್ಷಕನೂ, ದುಷ್ಟಾತ್ಮನೂ ಆದ ನನ್ನ ಅಣ್ಣನು ಕೋಪದಿಂದ ಮೇಲೆರಗುತ್ತಿದ್ದಾನೆ. ನೀನೂ ಮತ್ತು ನಿನ್ನ ಸಹೋದರರೂ ನಾನು ಹೇಳಿದಂತೆ ಮಾಡಿ.

ಅಹಂ ಕಾಮಗಮಾ ಚೈವ ರಕ್ಷೋಬಲಸಮನ್ವಿತಾ ।
ಆರುಹೇಮಾಂ ಮಮ ಶ್ರೋಣಿಂ ನೇಷ್ಯಾಮಿ ತ್ವಾಂ ವಿಹಾಯಸಾ ॥೭॥

ನಾನು ರಾಕ್ಷಸಬಲದಿಂದ ಯುಕ್ತಳಾಗಿ ಇಷ್ಟಬಂದ ಕಡೆಗೆ (ಇಷ್ಟಬಂದ ದಾರಿಯಲ್ಲಿ) ಹೋಗುವ ಸಾಮರ್ಥ್ಯವನ್ನು ಪಡೆದಿದ್ದೇನೆ. ನನ್ನ ಸೊಂಟದ ಮೇಲೆ ಕುಳಿತುಕೋ, ನಿನ್ನನ್ನು ಆಕಾಶಮಾರ್ಗದಲ್ಲಿ ಕರೆದುಕೊಂಡು ಹೋಗುವೆನು.

ಪ್ರಬೋಧಯೈನಾನ್ ಸೋದರ್ಯಾನ್ ಮಾತರಂ ಚ ನರರ್ಷಭ ।
ಸರ್ವಾನೇವ ಗಮಿಷ್ಯಾಮಿ ಗೃಹೀತ್ವಾ ವ್ಯೋಮಸಕ್ತವತ್ ॥೮॥

ನರಶ್ರೇಷ್ಠನೇ, ಈ ನಿನ್ನ ತಾಯಿಯನ್ನೂ ಮತ್ತು ಸೋದರರನ್ನೂ ಸಹ ಎಬ್ಬಿಸು. ನಾನು ಎಲ್ಲರನ್ನೂ ಎತ್ತಿಕೊಂಡು ಆಕಾಶಲಗ್ನಳಾದವಳಂತೆ ಆಕಾಶಮಾರ್ಗದಲ್ಲಿ ಕರೆದುಕೊಂಡು ಹೋಗುವೆನು.

ಭೀಮಸೇನಃ

ಮಾ ಭೈಸ್ತ್ವಂ ವಿಪುಲಶ್ರೋಣಿ ನೈವ ಕಿಂಚನ್ಮಯಿ ಸ್ಥಿತೇ ।
ಅಹಮೇನಂ ಹನಿಷ್ಯಾಮಿ ಪಶ್ಯಂತ್ಯಾಸ್ತೇ ಸುಮಧ್ಯಮೇ ॥೯॥

ವಿಪುಲಶ್ರೋಣಿಯೇ ಹೆದರಬೇಡ, ನನ್ನ ಎದುರಲ್ಲಿ ನಿನ್ನ ಅಣ್ಣನು ಏನೂ ಅಲ್ಲ. ಸುಮಧ್ಯಮೆಯೇ, ನಿನ್ನ ಕಣ್ಣೆದುರಿಗೇ ನಾನು ಅವನನ್ನು ಕೊಲ್ಲುವೆನು.

ನಾಯಂ ಪ್ರತಿಬಲೋ ಭೀರು ರಾಕ್ಷಸಾಪಶದೋ ಮಮ ।
ಸೋಢುಂ ಯುಧಿ ಪರಿಸ್ಪಂದಮಶಕ್ತಾಃ ಸರ್ವರಾಕ್ಷಸಾಃ ॥೧೦॥

ಭೀರುವೇ, ಈ ರಾಕ್ಷಸಾಧಮನು ನನಗೆ ಸರಿಸಾಟಿಯಲ್ಲ. ಎಲ್ಲ ರಾಕ್ಷಸರೂ ಸೇರಿದರೂ ಯುದ್ಧದಲ್ಲಿ ನನ್ನ ಒಂದು ಚಲನೆಯನ್ನು ಸಹಿಸಲು ಸಮರ್ಥರಲ್ಲ.

ಪಶ್ಯ ಬಾಹೂ ಸುವೃತ್ತೌ ಮೇ ಹಸ್ತಿಹಸ್ತೋಪಮೌ ಶುಭೌ ।
ಊರೂ ಪರಿಘಸಂಕಾಶೌ ಸಂಹತಂ ಚಾಪ್ಯುರೋ ಮಮ ॥೧೧॥

ಆನೆಯ ಸೊಂಡಿಲಿನಂತಿರುವ ಅತ್ಯಂತ ಪುಷ್ಪವಾದ, ಶುಭವಾದ ನನ್ನ ಬಾಹುಗಳನ್ನು ನೋಡು. ನನ್ನ ತೊಡೆಗಳು ಕಬ್ಬಿಣದ ತೊಲೆಗಳಂತಿವೆ. ನನ್ನ ಎದೆಯು ಸಂಹತವಾಗಿದೆ. (ಗಟ್ಟಿಯಾಗಿದೆ)

ವಿಕ್ರಮಂ ಮೇ ಮಹೇಂದ್ರಸ್ಯ ಯಥಾ ದ್ರಕ್ಷ್ಯಸಿ ಶೋಭನೇ ।
ಮಾऽವಸಂಸ್ಥಾಃ ಪೃಥುಶ್ರೋಣಿ ಮತ್ವಾ ಮಾಮಿಹ ಮಾನುಷಮ್॥೧೨॥

ಶೋಭನಳೇ, ನನ್ನ ವಿಕ್ರಮವು ಇಂದ್ರನ ವಿಕ್ರಮಕ್ಕೆ ಹೋಲುವುದನ್ನು ನೀನು ನೋಡುವಿ. ಪೃಥುಶ್ರೋಣಿಯೇ, ನನ್ನನ್ನು ಮನುಷ್ಯನೆಂದು ತಿಳಿದು ಅವಮಾನಿಸಬೇಡ.

ಹಿಡಿಂಬೀ

ನಾವಮನ್ಯೇ ನರವ್ಯಾಘ್ರ ತ್ವಾಮಹಂ ದೇವರೂಪಿಣಮ್ ।
ದೃಷ್ಟಾಪ್ರದಾನಾಸ್ತು ಮಯಾ ಮಾನುಷೇಷ್ವಿಹ ರಾಕ್ಷಸಾಃ ॥೧೩॥

ನರಶ್ರೇಷ್ಠನೇ, ದೇವರೂಪಿಯಾದ ನಿನ್ನನ್ನು ನಾನು ಅವಮಾನಿಸುವುದಿಲ್ಲ. ಆದರೆ ರಾಕ್ಷಸರು ಮನುಷ್ಯರಿಗೆ ತಮ್ಮ ಕನ್ಯೆಯನ್ನು ಕೊಡುವ ಪದ್ಧತಿ ಇಲ್ಲದಿರುವುದರಿಂದ ಹಿಡಿಂಬನು ನಿನಗೆ ನನ್ನನ್ನು ಕೊಡುವುದಿಲ್ಲ ಎಂದು ಹೆದರಿದ್ದೇನೆ.

ವೈಶಂಪಾಯನಃ

ತಥಾ ಸಂಜಲ್ಪತಸ್ತಸ್ಯ ಭೀಮಸೇನಸ್ಯ ಭಾರತ ।
ವಾಚಃ ಶ್ರುತ್ವಾ ಚ ತಾಃ ಕ್ರುದ್ಧೋ ರಾಕ್ಷಸಃ ಪುರುಷಾದಕಃ ।
ಪುಂಸ್ಕಾಮಾಂ ಶಂಕಮಾನಶ್ಚ ಚುಕೋಪ ಸ ನಿಶಾಚರಃ ॥೧೪॥

ತಮಾಪತಂತಂ ದೃಷ್ಟ್ವೈವ ತಥಾರೂಪಂ ಭಯಂಕರಮ್ ।
ಹಿಡಿಂಬ್ಯುವಾಚ ವಿತ್ರಸ್ತಾ ಭೀಮಸೇನಮಿದಂ ವಚಃ ॥೫॥

ಅಂತಹ ರೂಪವನ್ನು ಧರಿಸಿ ಭಯಂಕರನಾಗಿ ಎರಗುತ್ತಿರುವ ಅವನನ್ನು ನೋಡಿ ಹೆದರಿದ ಹಿಡಿಂಬೆಯು ಭೀಮಸೇನನನ್ನು ಕುರಿತು ಹೀಗೆ ಹೇಳಿದಳು.

ಆಪತತ್ಯೇವ ದುಷ್ಟಾತ್ಮಾ ಸಂಕ್ರುದ್ಧಃ ಪುರುಷಾದಕಃ ।
ತ್ವಂ ಚಾಪಿ ಭ್ರಾತೃಭಿಃ ಸಾರ್ಧಂ ಯದ್ ಬ್ರವೀಮಿ ತಥಾ ಕುರು ॥೬॥

ನರಭಕ್ಷಕನೂ, ದುಷ್ಟಾತ್ಮನೂ ಆದ ನನ್ನ ಅಣ್ಣನು ಕೋಪದಿಂದ ಮೇಲೆರಗುತ್ತಿದ್ದಾನೆ. ನೀನೂ ಮತ್ತು ನಿನ್ನ ಸಹೋದರರೂ ನಾನು ಹೇಳಿದಂತೆ ಮಾಡಿ.

ಅಹಂ ಕಾಮಗಮಾ ಚೈವ ರಕ್ಷೋಬಲಸಮನ್ವಿತಾ ।
ಆರುಹೇಮಾಂ ಮಮ ಶ್ರೋಣಿಂ ನೇಷ್ಯಾಮಿ ತ್ವಾಂ ವಿಹಾಯಸಾ ॥೭॥

ನಾನು ರಾಕ್ಷಸಬಲದಿಂದ ಯುಕ್ತಳಾಗಿ ಇಷ್ಟಬಂದ ಕಡೆಗೆ (ಇಷ್ಟಬಂದ ದಾರಿಯಲ್ಲಿ) ಹೋಗುವ ಸಾಮರ್ಥ್ಯವನ್ನು ಪಡೆದಿದ್ದೇನೆ. ನನ್ನ ಸೊಂಟದ ಮೇಲೆ ಕುಳಿತುಕೋ, ನಿನ್ನನ್ನು ಆಕಾಶಮಾರ್ಗದಲ್ಲಿ ಕರೆದುಕೊಂಡು ಹೋಗುವೆನು.

ಪ್ರಬೋಧಯೈನಾನ್ ಸೋದರ್ಯಾನ್ ಮಾತರಂ ಚ ನರರ್ಷಭ ।
ಸರ್ವಾನೇವ ಗಮಿಷ್ಯಾಮಿ ಗೃಹೀತ್ವಾ ವ್ಯೋಮಸಕ್ತವತ್ ॥೮॥

ನರಶ್ರೇಷ್ಠನೇ, ಈ ನಿನ್ನ ತಾಯಿಯನ್ನೂ ಮತ್ತು ಸೋದರರನ್ನೂ ಸಹ ಎಬ್ಬಿಸು. ನಾನು ಎಲ್ಲರನ್ನೂ ಎತ್ತಿಕೊಂಡು ಆಕಾಶಲಗ್ನಳಾದವಳಂತೆ ಆಕಾಶಮಾರ್ಗದಲ್ಲಿ ಕರೆದುಕೊಂಡು ಹೋಗುವೆನು.

ಭೀಮಸೇನಃ

ಮಾ ಭೈಸ್ತ್ವಂ ವಿಪುಲಶ್ರೋಣಿ ನೈವ ಕಿಂಚನ್ಮಯಿ ಸ್ಥಿತೇ ।
ಅಹಮೇನಂ ಹನಿಷ್ಯಾಮಿ ಪಶ್ಯಂತ್ಯಾಸ್ತೇ ಸುಮಧ್ಯಮೇ ॥೯॥

ವಿಪುಲಶ್ರೋಣಿಯೇ ಹೆದರಬೇಡ, ನನ್ನ ಎದುರಲ್ಲಿ ನಿನ್ನ ಅಣ್ಣನು ಏನೂ ಅಲ್ಲ. ಸುಮಧ್ಯಮೆಯೇ, ನಿನ್ನ ಕಣ್ಣೆದುರಿಗೇ ನಾನು ಅವನನ್ನು ಕೊಲ್ಲುವೆನು.

ನಾಯಂ ಪ್ರತಿಬಲೋ ಭೀರು ರಾಕ್ಷಸಾಪಶದೋ ಮಮ ।
ಸೋಢುಂ ಯುಧಿ ಪರಿಸ್ಪಂದಮಶಕ್ತಾಃ ಸರ್ವರಾಕ್ಷಸಾಃ ॥೧೦॥

ಭೀರುವೇ, ಈ ರಾಕ್ಷಸಾಧಮನು ನನಗೆ ಸರಿಸಾಟಿಯಲ್ಲ. ಎಲ್ಲ ರಾಕ್ಷಸರೂ ಸೇರಿದರೂ ಯುದ್ಧದಲ್ಲಿ ನನ್ನ ಒಂದು ಚಲನೆಯನ್ನು ಸಹಿಸಲು ಸಮರ್ಥರಲ್ಲ.

ಪಶ್ಯ ಬಾಹೂ ಸುವೃತ್ತೌ ಮೇ ಹಸ್ತಿಹಸ್ತೋಪಮೌ ಶುಭೌ ।
ಊರೂ ಪರಿಘಸಂಕಾಶೌ ಸಂಹತಂ ಚಾಪ್ಯುರೋ ಮಮ ॥೧೧॥

ಆನೆಯ ಸೊಂಡಿಲಿನಂತಿರುವ ಅತ್ಯಂತ ಪುಷ್ಟವಾದ, ಶುಭವಾದ ನನ್ನ ಬಾಹುಗಳನ್ನು ನೋಡು. ನನ್ನ ತೊಡೆಗಳು ಕಬ್ಬಿಣದ ತೊಲೆಗಳಂತಿವೆ. ನನ್ನ ಎದೆಯು ಸಂಹತವಾಗಿದೆ. (ಗಟ್ಟಿಯಾಗಿದೆ)

ವಿಕ್ರಮಂ ಮೇ ಮಹೇಂದ್ರಸ್ಯ ಯಥಾ ದ್ರಕ್ಷ್ಯಸಿ ಶೋಭನೇ ।
ಮಾऽವಸಂಸ್ಥಾಃ ಪೃಥುಶ್ರೋಣಿ ಮತ್ವಾ ಮಾಮಿಹ ಮಾನುಷಮ್॥೧೨॥

ಶೋಭನಳೇ, ನನ್ನ ವಿಕ್ರಮವು ಇಂದ್ರನ ವಿಕ್ರಮಕ್ಕೆ ಹೋಲುವುದನ್ನು ನೀನು ನೋಡುವಿ. ಪೃಥುಶ್ರೋಣಿಯೇ, ನನ್ನನ್ನು ಮನುಷ್ಯನೆಂದು ತಿಳಿದು ಅವಮಾನಿಸಬೇಡ.

ಹಿಡಿಂಬೀ

ನಾವಮನ್ಯೇ ನರವ್ಯಾಘ್ರ ತ್ವಾಮಹಂ ದೇವರೂಪಿಣಮ್ ।
ದೃಷ್ಟಾಪ್ರದಾನಾಸ್ತು ಮಯಾ ಮಾನುಷೇಷ್ವಿಹ ರಾಕ್ಷಸಾಃ ॥೧೩॥

ನರಶ್ರೇಷ್ಠನೇ, ದೇವರೂಪಿಯಾದ ನಿನ್ನನ್ನು ನಾನು ಅವಮಾನಿಸುವುದಿಲ್ಲ. ಆದರೆ ರಾಕ್ಷಸರು ಮನುಷ್ಯರಿಗೆ ತಮ್ಮ ಕನ್ಯೆಯನ್ನು ಕೊಡುವ ಪದ್ಧತಿ ಇಲ್ಲದಿರುವುದರಿಂದ ಹಿಡಿಂಬನು ನಿನಗೆ ನನ್ನನ್ನು ಕೊಡುವುದಿಲ್ಲ ಎಂದು ಹೆದರಿದ್ದೇನೆ.

ವೈಶಂಪಾಯನಃ

ತಥಾ ಸಂಜಲ್ಪತಸ್ತಸ್ಯ ಭೀಮಸೇನಸ್ಯ ಭಾರತ ।
ವಾಚಃ ಶ್ರುತ್ವಾ ಚ ತಾಃ ಕ್ರುದ್ಧೋ ರಾಕ್ಷಸಃ ಪುರುಷಾದಕಃ ।
ಪುಂಸ್ಕಾಮಾಂ ಶಂಕಮಾನಶ್ಚ ಚುಕೋಪ ಸ ನಿಶಾಚರಃ ॥೧೪॥

ಭಾರತನೇ, ಹೀಗೆ ಮಾತನಾಡುತ್ತಿದ್ದ ಭೀಮಸೇನನ ಮಾತುಗಳನ್ನು ಕೇಳಿ ನರಭಕ್ಷಕನಾದ ರಾಕ್ಷಸನು ಕೋಪಗೊಂಡು ತನ್ನ ತಂಗಿಯು ಮನುಷ್ಯನನ್ನು ಕಾಮಿಸುತ್ತಿರುವಳೆಂದು ಶಂಕಿಸಿ ಆ ನಿಶಾಚರನು ಇನ್ನೂ ಕೋಪಗೊಂಡನು.

ಸಂಕ್ರುದ್ಧೋ ರಾಕ್ಷಸಸ್ತಸ್ಯಾ ಭಗಿನ್ಯಾಃ ಕುರುಸತ್ತಮ ।
ಸ ದದರ್ಶಾಗ್ರತಸ್ತಸ್ಯ ಭಗಿನೀಂ ಪುರುಷಾದಕಃ ॥೧೫॥

ಕುರುಶ್ರೇಷ್ಠನೇ ತನ್ನ ತಂಗಿಯ ಮೇಲೆ ಸಂಕ್ರುದ್ಧನಾಗಿ ಬಂದ ಆ ನರಭಕ್ಷಕನಾದ ರಾಕ್ಷಸನು ಎದುರಿಗೆ ತನ್ನ ತಂಗಿಯನ್ನು ನೋಡಿದನು.

ವಿಷ್ಫಾರ್ಯ ವಿಪುಲೇ ನೇತ್ರೇ ತತಸ್ತಾಮಿದಮಬ್ರವೀತ್ ।
ಕಸ್ಮಾನ್ಮೇ ಭೋಕ್ತುಕಾಮಸ್ಯ ವಿಘ್ನಂ ಚರಸಿ ದುರ್ಮತೇ ।
ನ ಬಿಭೇಷಿ ಹಿಡಿಂಬೇ ಕಿಂ ಕಾಮಾದ್ ವೈ ವಿಪ್ರಮೋಹಿತಾ ॥೧೬॥

ತನ್ನ ದೊಡ್ಡ ಕಣ್ಣುಗಳನ್ನು ಇನ್ನೂ ಅರಳಿಸಿ ಹಿಡಿಂಬೆಯನ್ನು ಕುರಿತು ದುರ್ಮತಿಯೇ, ಭೋಜನವನ್ನು ಬಯಸಿದ ನನಗೆ ಏಕೆ ವಿಘ್ನವನ್ನು ಉಂಟು ಮಾಡುತ್ತಿರುವೆ? ಹಿಡಿಂಬೆಯೇ, ನಿನಗೆ ಹೆದರಿಕೆ ಇಲ್ಲ ಅಥವಾ ಕಾಮಮೋಹಿತಳಾಗಿದ್ದೀಯಾ?

ಧಿಕ್ ತ್ವಾಂ ಪುರುಷಕಾಮಾಂ ವೈ ಮಮ ವಿಪ್ರಿಯಕಾರಿಣೀಮ್ ।
ಕುಲಸ್ಯ ರಾಕ್ಷಸೇಂದ್ರಾಣಾಂ ಸರ್ವೇಷಾಮಯಶಸ್ಕರೀಮ್ ॥೧೭॥

ನನಗೆ ಅಪ್ರಿಯವನ್ನು ಉಂಟುಮಾಡಿ ಮನುಷ್ಯನನ್ನು ಕಾಮಿಸುವ ನಿನಗೆ ಧಿಕ್ಕಾರವಿರಲಿ. ನೀನು ರಾಕ್ಷಸೇಂದ್ರರ ಕುಲಕ್ಕೆ ಅಪಕೀರ್ತಿಯನ್ನು ತಂದವಳು.

ಯಾನಿಮಾನಾಶ್ರಿತಾऽಕಾರ್ಷೀರ್ಮಿಪ್ರಿಯಂ ಸುಮಹನ್ಮಮ ।
ಏಷ ತಾನಾಶು ಸರ್ವಾಂಸ್ತು ಹನಿಷ್ಯಾಮಿ ತ್ವಯಾ ಸಹ ॥೧೮॥

ಯಾವ ಇವರನ್ನು ಆಶ್ರಯಿಸಿ ನನಗೆ ನೀನು ದೊಡ್ಡ ಅಪ್ರಿಯವನ್ನು ಉಂಟು ಮಾಡಿದ್ದೀಯೋ, ಆ ಇವರೆಲ್ಲರನ್ನೂ ತಕ್ಷಣದಲ್ಲಿಯೇ ನಿನ್ನ ಜೊತೆಯಲ್ಲಿಯೇ ಕೊಲ್ಲುವೆನು.

ವೈಶಂಪಾಯನ:

ಏವಮುಕ್ತ್ವಾ ಹಿಡಿಂಬೀಂ ಸ ಹಿಡಿಂಬೋ ಲೋಹಿತೇಕ್ಷಣಃ ।
ವಧಾಯಾಭಿಪಪಾತೈನಾನ್ ದಂತಾನ್ ದಂತೇಷು ನಿಷ್ಪಷನ್ ॥೧೯॥

ಹಿಡಂಬಿಗೆ ಹೀಗೆ ಹೇಳಿ ರಕ್ತನೇತ್ರನಾದ ಹಿಡಿಂಬನು ಹಲ್ಲುಗಳಿಂದ ಹಲ್ಲುಗಳನ್ನು ಕಡಿಯುತ್ತಾ ಕೊಲ್ಲುವ ಉದ್ದೇಶದಿಂದ ಪಾಂಡವರ ಮೇಲೆ ಎರಗಿದನು.

ಗರ್ಜಂತಮೇವಂ ವಿಜನೇ ಭೀಮಸೇನೋಽಭಿವೀಕ್ಷ್ಯ ತಮ್ ।
ರಕ್ಷನ್ ಪ್ರಬೋಧಂ ಭ್ರಾತೄಣಾಂ ಮಾತುಶ್ಚ ಪರವೀರಹಾ ॥೨೦॥

ಕಾಡಿನಲ್ಲಿ ಹೀಗೆ ಗರ್ಜಿಸುತ್ತಿರುವ ಅವನನ್ನು ನೋಡಿ ಪರವೀರನಾಶಕನಾದ ಭೀಮಸೇನನು ತಾಯಿಯು ಮತ್ತು ಸಹೋದರರು ಎಚ್ಚರವಾಗದಂತೆ ನೋಡಿಕೊಂಡನು.

ಆಪತಂತಂ ಚ ಸಂಪ್ರೇಕ್ಷ್ಯ ಭೀಮಃ ಪ್ರಹರತಾಂ ವರಃ ।
ಭರ್ತ್ಸಯಾಮಾಸ ತೇಜಸ್ವೀ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೨೧॥

ಪ್ರಹಾರಮಾಡುವವರಲ್ಲಿ ಶ್ರೇಷ್ಠನಾದ, ತೇಜಸ್ವಿಯಾದ ಭೀಮಸೇನನು ಮೇಲೆರಗುತ್ತಿರುವ ಅವನನ್ನು ನೋಡಿ, ಮೂದಲಿಸಿ ನಿಲ್ಲು ನಿಲ್ಲು ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಚತುಃಪಂಚಾಶದಧಿಕಶತತಮೋಽಧ್ಯಾಯಃ ॥
॥ ಇತಿ ಹಿಡಿಂಬವಧಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಐವತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ನೂರ ಐವತ್ತೈದನೆಯ ಅಧ್ಯಾಯ

(ಭೀಮ ಹಿಡಿಂಬರ ವಿವಾದ, ಅವರ ಯುದ್ಧದ ಪ್ರಾರಂಭ, ಪಾಂಡವರ ಎಚ್ಚರಿಕೆ)

ವೈಶಂಪಾಯನಃ

ಭೀಮಸೇನಸ್ತು ತಂ ದೃಷ್ಟ್ವಾ ರಾಕ್ಷಸಂ ಪ್ರಹಸನ್ನಿವ ।
ಭಗಿನೀಂ ಪ್ರತಿ ಸಂಕ್ರುದ್ಧಮಿದಂ ವಚನಮಬ್ರವೀತ್ ॥೧॥

ಭೀಮಸೇನನಾದರೋ ಆ ರಾಕ್ಷಸನನ್ನು ನೋಡಿ ಹಾಸ್ಯವನ್ನು ಮಾಡುತ್ತಾ ತಂಗಿಯ ಮೇಲೆ (ಸಂ)ಕ್ರುದ್ಧನಾದ ಅವನನ್ನು ಕುರಿತು ಹೀಗೆ ಮಾತನಾಡಿದನು.

ಕಿಂ ತೇ ಪ್ರಿಯಂ ಹಿಡಿಂಬೈತೈಃ ಸುಖಸುಪ್ತೈಃ ಪ್ರಬೋಧಿತೈಃ ।
ಮಾಮಾಸಾದಯ ದುರ್ಬುದ್ಧೇ ತರಸಾ ತ್ವಂ ನರಾಶನ ॥೨॥

ಹಿಡಿಂಬನೇ ಸುಖವಾಗಿ ಮಲಗಿರುವ ಇವರನ್ನು ಎಬ್ಬಿಸುವುದರಿಂದ ನಿನಗೇನು ಲಾಭ? ದುರ್ಬುದ್ಧಿಯಾದ ನರಭಕ್ಷಕನೇ, ಬೇಗ ನನ್ನನ್ನು ಸಮೀಪಿಸು.

ಮಯ್ಯೇವ ಪ್ರಹರೈಹಿ ತ್ವಂ ನ ಸ್ತ್ರಿಯಂ ಹಂತುಮರ್ಹಸಿ ।
ವಿಶೇಷತೋ ನಾಪಕೃತೇ ಪರೇಣಾಪಕೃತೇ ಸತಿ ॥೩॥

ಬಂದು ನನಗೇ ಪ್ರಹಾರವನ್ನು ಮಾಡು. ಸ್ವತಃ ಅಪಕಾರ ಮಾಡದೇ ಕಾಮದಿಂದ ಅಪಕೃತಳಾದ ಸ್ತ್ರೀಯನ್ನು ಕೊಲ್ಲುವುದು ಯೋಗ್ಯವಲ್ಲ.

ನ ಹೀಯಂ ಸ್ವವಶಾ ಬಾಲಾ ಮಾಂ ತು ಕಾಮಯತೇऽದ್ಯ ವೈ ।
ಚೋದಿತೈಷಾ ಹ್ಯನಂಗೇನ ಶರೀರಾಂತರಚಾರಿಣಾ ॥೪॥

ಈ ಬಾಲೆಯು ತನ್ನ ಅಧೀನದಲ್ಲಿ ತಾನು ಇಲ್ಲ. ಶರೀರದ ಒಳಗಿರುವ ಮನ್ಮಥನಿಂದ ಪ್ರೇರಿತಳಾಗಿ ಈ ದಿನ ನನ್ನನ್ನು ಕಾಮಿಸುತ್ತಿದ್ದಾಳೆ.

ಭಗಿನೀ ತವ ದುರ್ಬುದ್ಧೇ ರಾಕ್ಷಾಸಾನಾಂ ಯಶೋಹರ ।
ತ್ವನ್ನಿಯೋಗೇನ ಚಾಯಾತಾ ರೂಪಂ ಮಮ ನಿರೀಕ್ಷ್ಯ ಚ ।
ಕಾಮಯತ್ಯೇವಮವಶಾ ನೈಷಾ ದೂಷಯತೇ ಕುಲಮ್ ॥೫॥

ರಾಕ್ಷಸರಿಗೆ ಅಪಕೀರ್ತಿಯನ್ನು ತರುವ ಎಲೈ ದುರ್ಬುದ್ಧಿಯೇ, ನಿನ್ನ ತಂಗಿಯು ನಿನ್ನ ಆದೇಶದಂತೆ ನನ್ನ ಬಳಿಗೆ ಬಂದು ನನ್ನ ರೂಪವನ್ನು ನೋಡಿ ನನ್ನನ್ನು ಕಾಮಿಸುತ್ತಿದ್ದಾಳೆ. ನಿನ್ನ ಕುಲವನ್ನು ದೂಷಿಸುತ್ತಿಲ್ಲ.

ಅನಂಗೇನ ಕೃತೇ ದೋಷೇ ನೇಮಾಂ ತ್ವಾಮಿಹ ರಾಕ್ಷಸ ।
ಮಯಿ ತಿಷ್ಠತಿ ದುಷ್ಟಾತ್ಮನ್ ಭಗಿನೀಂ ಹಂತುಮರ್ಹಸಿ ॥೬॥

ರಾಕ್ಷಸನೇ, ದುಷ್ಟಾತ್ಮನೇ, ಮನ್ಮಥನಿಂದ ದೋಷ ಉಂಟಾಗಿರುವಾಗ ನನ್ನ ಎದುರಿಗೆ ನೀನು ಇವಳನ್ನು ಕೊಲ್ಲಲು ಸಾಧ್ಯವಿಲ್ಲ.

ಸಮಾಗಚ್ಛ ಮಯಾ ಸಾರ್ಧಮೇಕೇನೈಕೋ ನರಾಶನ ।
ಅಹಮೇವ ತು ನೇಷ್ಯಾಮಿ ತ್ವಾಮದ್ಯ ಯಮಸಾದನಮ್ । ॥೭॥

ನರಭಕ್ಷಕನೇ, ನನ್ನನ್ನು ಸಮೀಪಿಸಿ ಒಬ್ಬನ ಎದುರಿಗೆ ಒಬ್ಬನಾಗಿ ಯುದ್ಧ ಮಾಡು. ನಾನೇ ನಿನ್ನನ್ನು ಈ ದಿನ ಯಮಪಟ್ಟಣಕ್ಕೆ ಕಳುಹಿಸುವೆನು.

ಅದ್ಯ ತೇ ತಳನಿಷ್ಪಿಷ್ಟಂ ಶಿರೋ ರಾಕ್ಷಸ ದೀರ್ಯತೇ ।
ಕುಂಜರಸ್ಯೇವ ನಿಷ್ಪಿಷ್ಟಂ ಸಿಂಹೇನೈವ ಬಲೀಯಸಾ । ॥೮॥

ರಾಕ್ಷಸನೇ, ಈ ದಿನ ನನ್ನ ಹಸ್ತದ ತಳಪ್ರಹಾರಕ್ಕೆ ಸಿಲುಕಿದ ನಿನ್ನ ಶಿರಸ್ಸು ಬಲಿಷ್ಠವಾದ ಸಿಂಹದ ಹೊಡೆತಕ್ಕೆ ಸಿಕ್ಕಿ ಸೀಳಿಹೋದ ಆನೆಯ ತಲೆಯಂತೆ ಸೀಳಿ ಹೋಗುತ್ತದೆ.

ಅದ್ಯ ಗಾತ್ರಾಣಿ ಗೃಧ್ರಾಶ್ಚ ಬಲಾ ಗೋಮಾಯವಸ್ತಥಾ ।
ಕರ್ಷಂತು ಭುವಿ ಸಂಹೃಷ್ಟಾ ನಿಹತಸ್ಯ ಮಯಾ ಮೃಧೇ ॥೯॥

ಈ ದಿನ ಯುದ್ಧದಲ್ಲಿ ನನ್ನಿಂದ ಕೊಲ್ಲಲ್ಪಡುವ ನಿನ್ನ ಶರೀರವನ್ನು ಹದ್ದುಗಳು, ಬಲಪಕ್ಷಿಗಳು, ನರಿಗಳು, ಭೂಮಿಯ ಮೇಲೆ ಸಂತೋಷದಿಂದ ಎಳೆದಾಡಲಿ.

ಕ್ಷಣೇನಾದ್ಯ ಕರಿಷ್ಯಾಮಿ ವನಂ ನಿಹತಕಂಟಕಮ್ ।
ಪುರಸ್ತಾದ್ ದೂಷಿತಂ ನಿತ್ಯಂ ತ್ವಯಾ ಭಕ್ಷಯತಾ ನರಾನ್ ॥೧೦॥

ಹಿಂದೆ ನೀನು ನರಭಕ್ಷಕನಾಗಿ ದೂಷಿಸಿದ ಈ ಕಾಡನ್ನು ಈ ದಿನ ಒಂದು ಕ್ಷಣದಲ್ಲಿ ನಿರ್ಬಾಧವನ್ನಾಗಿ ಮಾಡುವೆನು.

ಅದ್ಯ ತ್ವಾಂ ಭಗಿನೀ ಪಾಪಂ ಕೃಷ್ಯಮಾಣಂ ಮಯಾ ಭುವಿ ।
ದ್ರಕ್ಷ್ಯತ್ಯದ್ರಿಪ್ರತೀಕಾಶಂ ಸಿಂಹೇನೇವ ಮಹಾದ್ವಿಪಮ್ ॥೧೧॥

ಈ ದಿನ ಸಿಂಹವು ಆನೆಯನ್ನು ಎಳೆದಾಡಿದಂತೆ ಬೆಟ್ಟದಂತಿರುವ ನಿನ್ನನ್ನು ನಾನು ಭೂಮಿಯ ಮೇಲೆ ಎಳೆದಾಡುವುದನ್ನು ನಿನ್ನ ತಂಗಿಯು ನೋಡುವಳು.

ನಿರಾಬಾಧಂ ತ್ವಯಿ ಹತೇ ಮಯಾ ರಾಕ್ಷಸಪಾಂಸನ ।
ವನಮೇತಚ್ಚರಿಷ್ಯಂತಿ ಪುರುಷಾ ವನಚಾರಿಣಃ ॥೧೨॥

ರಾಕ್ಷಸಾಧಮನೇ, ನೀನು ನನ್ನಿಂದ ಕೊಲ್ಲಲ್ಪಟ್ಟ ಮೇಲೆ ವನಚಾರಿಗಳಾದ ಪುರುಷರು ಈ ಕಾಡಿನಲ್ಲಿ ನಿರ್ಬಾಧವಾಗಿ ಸಂಚರಿಸುವರು.

ರಾಕ್ಷಸಃ

ಗರ್ಜಿತೇನ ಭೃಶಂ ಕಿಂ ತೇ ಕತ್ಥನೇನ ಚ ಮಾನವ ।
ಕೃತ್ವಾ ತು ಕರ್ಮಣಾ ಸರ್ವಂ ಕತ್ಥೇಥಾ ಮಾ ಚಿರಂ ಕೃಥಾಃ ॥೧೩॥

ಮನುಷ್ಯನೇ, ಗಟ್ಟಿಯಾಗಿ ಗರ್ಜಿಸುವುದರಿಂದ ಅಥವಾ ಅಹಂಕಾರದ ಮಾತುಗಳಿಂದ ಏನು ಪ್ರಯೋಜನ? ಕ್ರಿಯೆಯಿಂದ ಎಲ್ಲವನ್ನೂ ಸಾಧಿಸಿ ಅನಂತರ ಜಂಭವನ್ನು ಕೊಚ್ಚಿಕ್ಕೋ. ತಡಮಾಡಬೇಡ.

ಬಲಿನಂ ಮನ್ಯಸೇ ಯಸ್ಮಾದಾತ್ಮಾನಂ ಸಪರಾಕ್ರಮಮ್ ।
ಜ್ಞಾಸ್ಯಸ್ಯದ್ಯ ಸಮಾಗಮ್ಯ ಮಯಾऽऽತ್ಮಾನಂ ಬಲಾಧಿಕಮ್ ॥೧೪॥

ನೀನು ನಿನ್ನನ್ನು ನನಗಿಂತ ಬಲಿಷ್ಠ ಮತ್ತು ಪರಾಕ್ರಮಶಾಲಿಯೆಂದು ತಿಳಿದಿರುವೆ. ಈ ದಿನ ನನ್ನ ಜೊತೆಯಲ್ಲಿ ಸೆಣೆಸಿ ನನ್ನನ್ನು ನಿನಗಿಂತ ಬಲಾಧಿಕನೆಂದು ತಿಳಿಯುವಿ.

ನೇಮಾಂಸ್ತಾವದ್ಧನಿಷ್ಯಾಮಿ ಸ್ವಪಂತ್ವೇತೇ ಯಥಾಸುಖಮ್ ।
ಏಷ ತ್ವಾಮೇವ ದುರ್ಬುದ್ಧೇ ಹನಿಷ್ಯೇಽಪ್ರಿಯವಾದಿನಮ್ ॥೧೫॥

ಮೊದಲು ಇವರುಗಳನ್ನು ಕೊಲ್ಲುವುದಿಲ್ಲ. ಇವರು ಸುಖವಾಗಿ ಮಲಗಿರಲಿ. ದುರ್ಬುದ್ಧಿಯೇ ಅಪ್ರಿಯವನ್ನು ಮಾತನಾಡುವ ನಿನ್ನನ್ನೇ ಮೊದಲು ಕೊಲ್ಲುವೆನು.

ಪೀತ್ವಾ ತವಾಸೃಗ್ಗಾತ್ರೇಭ್ಯಸ್ತತಃ ಪಶ್ಚಾದಿಮಾನಪಿ ।
ಹನಿಷ್ಯಾಮಿ ತತಃ ಕ್ಷುದ್ರಾಮಿಮಾಂ ವಿಪ್ರಿಯಕಾರಿಣೀಮ್ ॥೧೬॥

ನಿನ್ನ ಶರೀರದಿಂದ ಸೂಸುವ ರಕ್ತವನ್ನು ಕುಡಿದು ಅನಂತರ ಇವರನ್ನೂ ಮತ್ತು ನನಗೆ ಅಪ್ರಿಯವನ್ನುಂಟು ಮಾಡುವ ಕ್ಷುದ್ರಳಾದ ಇವಳನ್ನೂ ಕೊಲ್ಲುವೆನು.

ವೈಶಂಪಾಯನ ಃ

ಏವಮುಕ್ತ್ವಾ ಮಹಾಬಾಹುಃ ಸನ್ನದ್ಧಃ ಪುರುಷಾದಕ ಃ ।
ಅಭ್ಯಧಾವತ್ ಸುಸಂಕ್ರುದ್ಧೋ ಭೀಮಸೇನಮರಿಂದಮಮ್ ॥೧೭॥

ಹೀಗೆ ಮಾತನಾಡಿ ಆ ಮಹಾಬಾಹುವಾದ ನರಭಕ್ಷಕನು ಸನ್ನದ್ಧನಾಗಿ ಬಹಳ ಕೋಪದಿಂದ ಅರಿಂದಮನಾದ ಭೀಮಸೇನನ ಕಡೆಗೆ ಧಾವಿಸಿ ಬಂದನು.

ತಸ್ಯಾಭಿಪತತಸ್ತೂರ್ಣಂ ಭೀಮೋ ಭೀಮಪರಾಕ್ರಮಃ ।
ವೇಗೇನ ಪ್ರಸೃತಂ ಬಾಹುಂ ನಿಜಗ್ರಾಹ ಹಸನ್ನಿವ ॥೧೮॥

ಭೀಮಪರಾಕ್ರಮನಾದ ಭೀಮನು ಮೇಲೆ ಎರಗುತ್ತಿರುವ ಅವನನ್ನು ನೋಡಿ ನಗುತ್ತಾ, ಚಾಚಿದ ಅವನ ಬಾಹುವನ್ನು ಶೀಘ್ರವಾಗಿ ಹಿಡಿದನು.

ನಿಗೃಹ್ಯ ತಂ ಬಲಾದ್ ಭೀಮೋ ವಿಸ್ಫುರಂತಂ ಚಕರ್ಷ ಹ ।
ತಸ್ಮಾದ್ ದೇಶಾದ್ ಧನೂಂಷ್ಯಷ್ಟೌ ಸಿಂಹಃ ಕ್ಷುದ್ರಮೃಗಂ ಯಥಾ ॥೧೯॥

ಬಾಹುವನ್ನು ಹಿಡಿದು ಅವನನ್ನು ನಿಗ್ರಹಿಸಿದ ಭೀಮನು, ಬಿಡಿಸಿಕೊಳ್ಳಲು ಒದ್ದಾಡುತ್ತಿದ್ದ ಅವನನ್ನು ಸಿಂಹವು ಕ್ಷುದ್ರಮೃಗವನ್ನು ಎಳೆದಂತೆ ಆ ಸ್ಥಳದಿಂದ ಎಂಟು ಧನುಸ್ಸಿನಷ್ಟು ದೂರ ಎಳೆದುಕೊಂಡು ಹೋದನು.

ತದಾ ಸ ರಾಕ್ಷಸಃ ಕ್ರುದ್ಧಃ ಪಾಂಡವೇನ ಬಲಾದ್ ಹೃತಃ ।
ಭೀಮಸೇನಂ ಸಮಾಲಿಂಗ್ಯ ವ್ಯನದದ್ ಭೈರವಂ ಸ್ವನಮ್ ॥೨೦॥

ಪಾಂಡುಪುತ್ರನಾದ ಭೀಮಸೇನನಿಂದ ಬಲಾತ್ಕಾರದಿಂದ ಎಳೆಯುಲ್ಪಟ್ಟ ಆ ರಾಕ್ಷಸನು ಕ್ರುದ್ಧನಾಗಿ ಆಗ ಭೀಮಸೇನನನ್ನು ಆಲಿಂಗಿಸಿ ಭೈರವನಾದವನ್ನು ಮಾಡಿದನು.

ಪುನರ್ಭೀಮೋ ಬಲಾದೇವ ವಿಚಕರ್ಷ ಮಹಾಬಲಃ ।
ಮಾ ಶಬ್ದಃ ಸುಖಸುಪ್ತಾನಾಂ ಭ್ರಾತೄಣಾಂ ಮೇ ಭವೇದಿತಿ ॥೨೧॥

ಮಹಾಬಲನಾದ ಭೀಮನು ಸುಖಸುಪ್ತರಾದ ಸಹೋದರರಿಗೆ ಗಲಾಟೆಯಿಂದ ಎಚ್ಚರವಾಗದಿರಲಿ ಎಂದು ಆ ರಾಕ್ಷಸನನ್ನು ತನ್ನ ಬಲದಿಂದ ಪುನಃ ಎಳೆದನು.

ಅನ್ಯೋನ್ಯಂ ವೈ ಸಮಾಲಿಂಗ್ಯ ವಿಚಕರ್ಷತುರೋಜಸಾ ।
ರಾಕ್ಷಸೋ ಭೀಮಸೇನಶ್ಚ ವಿಕ್ರಮಂ ಚಕ್ರತುಃ ಪರಮ್ ॥೨೨॥

ರಾಕ್ಷಸಭೀಮಸೇನರಿಬ್ಬರೂ ಪರಸ್ಪರವಾಗಿ ಆಲಿಂಗಿಸಿ ತಮ್ಮ ಸಾಮರ್ಥ್ಯದಿಂದ ಪರಸ್ಪರವಾಗಿ ಎಳೆದಾಡಿ ತಮ್ಮ ವಿಕ್ರಮವನ್ನು ತೋರಿಸಿದರು.

ಬಭಂಜತುರ್ಮಹಾವೃಕ್ಷಾನ್ ಲತಾಶ್ಚ ವಿಚಕರ್ಷತುಃ ।
ಪ್ರಮತ್ತಾವಿವ ಸಂಕ್ರುದ್ಧೌ ಮಾತಂಗೌ ಷಷ್ಟಿಹಾಯನೌ ॥೨೩॥

ಸಿಟ್ಟಾದ ಮದಿಸಿದ ಅರವತ್ತು ವರ್ಷ ವಯಸ್ಸಿನ ಆನೆಗಳಂತೆ ಅವರು ಮಹಾವೃಕ್ಷಗಳನ್ನು ಮುರಿದು ಲತೆಗಳನ್ನು ಎಳೆದಾಡಿದರು.

ಪಾದಪಾನುದ್ವಹಂತೌ ತಾವೂರುವೇಗೇನ ವೇಗಿತೌ ।
ಸ್ಫೋಟಯಂತೌ ಲತಾಜಾಲಾನ್ಯೂರುಭ್ಯಾಂ ಪ್ರಾಪ್ಯ ಸರ್ವಶಃ ॥೨೪॥

ವಿತ್ರಾಸಯಂತೌ ಶಬ್ದೇನ ಸರ್ವತೋ ಮೃಗಪಕ್ಷಿಣಃ ।
ಬಲೇನ ಬಲಿನೌ ಮತ್ತಾವನ್ಯೋನ್ಯವಧಕಾಂಕ್ಷಿಣೌ ॥೨೫॥

ತೊಡೆಗಳ ವೇಗದಿಂದ ವೃಕ್ಷಗಳನ್ನು ವೇಗದಿಂದ ಉರುಳಿಸುತ್ತಾ ಲತೆಯ ಪೊದೆಗಳನ್ನು ಸಮೀಪಿಸಿ ಎಲ್ಲೆಡೆಯಲ್ಲಿಯೂ ತೊಡೆಗಳಿಂದ ಕಿತ್ತುಹಾಕುತ್ತಾ (ಯುದ್ಧ

ಮಾಡಿದರು) ತಮ್ಮ ಶಬ್ದಗಳಿಂದ ಕಾಡಿನಲ್ಲಿರುವ ಎಲ್ಲಾ ಮೃಗ ಪಕ್ಷಿಗಳನ್ನು ಬೆದರಿಸುತ್ತಾ ಬಲಿಷ್ಠರೂ ಮತ್ತು ಮತ್ತರೂ ಆದ ಅವರು ಪರಸ್ಪರರ ವಧೆಯನ್ನು ಬಯಸಿ ಯುದ್ಧ ಮಾಡಿದರು.

ಭೀಮರಾಕ್ಷಸಯೋರ್ಯುದ್ಧಂ ತದಾऽವರ್ತತ ದಾರುಣಮ್ ।
ಊರುಬಾಹುಪರಿಕ್ಲೇಶಾತ್ ಕರ್ಷತೋರಿತರೇತರಮ್ ।
ಉತ್ಕರ್ಷಣಂ ವಿಕರ್ಷಣಮಪಕರ್ಷಣಮೇವ ಚ ॥೨೬॥

ತೊಡೆ ಮತ್ತು ತೋಳುಗಳನ್ನು ಹಿಡಿದು ಪರಸ್ಪರವಾಗಿ ಎಳೆದಾಡುತ್ತಾ ಉತ್ಕರ್ಷಣ, ವಿಕರ್ಷಣ ಮತ್ತು ಅಪಕರ್ಷಣ ಮೊದಲಾದ ಕೌಶಲಗಳನ್ನು ತೋರಿಸುತ್ತಾ ಜರುಗಿದ ಭೀಮರಾಕ್ಷಸರ ಯುದ್ಧವು ಆಗ ದಾರುಣವಾಗಿದ್ದಿತು.

ತತಃ ಶಬ್ದೇನ ಮಹತಾ ಗರ್ಜಂತೌ ತೌ ಪರಸ್ಪರಮ್ ।
ಪಾಷಾಣಸಂಘಟ್ಟನಿಭೈಃ ಪ್ರಹಾರೈರಭಿಜಘ್ನತುಃ ।
ಅನ್ಯೋನ್ಯಂ ತೌ ಸಮಾಲಿಂಗ್ಯ ವಿಕರ್ಷಂತೌ ಪರಸ್ಪರಮ್ ॥೨೭॥

ಅವರು ಪರಸ್ಪರವಾಗಿ ಆಲಿಂಗಿಸಿ ಎಳೆದಾಡುತ್ತಾ ಮಹಾಶಬ್ದದಿಂದ ಗರ್ಜಿಸುತ್ತಾ ಕಲ್ಲಿಗೆ ಕಲ್ಲುಗಳು ಸಂಘಟ್ಟಿಸಿದಂತಹ ಶಬ್ದವುಳ್ಳ ಪ್ರಹಾರದಿಂದ ಪರಸ್ಪರವಾಗಿ ಹೊಡೆದಾಡಿದರು.

ತಯೋಃ ಶಬ್ದೇನ ಮಹತಾ ವಿಬುದ್ಧಾಸ್ತೇ ನರರ್ಷಭಾಃ ।
ಸಹ ಮಾತ್ರಾऽಥ ದದೃಶುರ್ಹಿಡಿಂಬೀಮಗ್ರತಃ ಸ್ಥಿತಾಮ್ ॥೨೮॥

ಆ ದೊಡ್ಡ ಶಬ್ದದಿಂದ ಎಚ್ಚರಗೊಂಡ ನರಶ್ರೇಷ್ಠರಾದ ಪಾಂಡವರು ಮತ್ತು ಕುಂತಿಯು ಎದುರಿನಲ್ಲಿ ಹಿಡಂಬಿಯು ನಿಂತಿರುವುದನ್ನು ನೋಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ಹಿಡಿಂಬವಧಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಐವತ್ತೈದನೆಯ
ಅಧ್ಯಾಯ ಮುಗಿಯಿತು.

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ತೌ ಮುಷ್ಟಿಭಿಸ್ತರುಭಿರಶ್ಮಭಿರದ್ರಿಭಿಶ್ಚ
ಯುಧ್ವಾ ನಿತಾಂತರವತಃ ಪ್ರತಿಬೋಧಿತಾಂಸ್ತಾನ್ ।
ಸಂಚಕ್ರತುಸ್ತದನು ಸೋದರಸಂಭ್ರಮಂ ತಂ
ದೃಷ್ಟ್ವೈವ ಮಾರುತಿರಹನ್ನುರಸಿ ಸ್ಮ ರಕ್ಷಃ ॥೫೫॥

ಭೀಮ ಹಿಡಿಂಬರಿಬ್ಬರೂ ಮುಷ್ಟಿಗಳಿಂದ ಮರಗಳಿಂದ ಕಲ್ಲುಗಳಿಂದ ಬೆಟ್ಟಗಳಿಂದ ಯುದ್ಧಮಾಡಿ ಆ ದೊಡ್ಡ ಶಬ್ದದಿಂದ ಪಾಂಡವರು ಎಚ್ಚೆತ್ತುಕೊಳ್ಳುವಂತೆ ಮಾಡಿದರು. ಬಳಿಕ ಸೋದರರ ಭಯವನ್ನು ಕಂಡು ಒಡನೆ ಭೀಮ ರಾಕ್ಷಸನ ಎದೆಗೆ ಗುದ್ದಿದ.

ತದ್ಭೀಮಬಾಹುಬಲತಾಡಿತಮೀಶವಾಕ್ಯಾತ್
ಸರ್ವೈರಜೇಯಮಪಿ ಭೂಮಿತಳೇ ಪಪಾತ ।
ವಕ್ತ್ರಸ್ರವದ್ಬಹುಲಶೋಣಿತಮಾಪ ಮೃತ್ಯುಂ
ಪ್ರಾಯಾತ್ತಮೋಽಂಧಮಪಿ ನಿತ್ಯಮಥ ಕ್ರಮೇಣ ॥೫೬॥

ಹಿಡಿಂಬ ಶಿವನ ವರಬಲದಿಂದ ಸರ್ವರಿಗೂ ಅಜೇಯನಾಗಿದ್ದರೂ ಭೀಮನ ತೋಳಿನ ಬಲದಿಂದ ಹೊಡೆತ ತಿಂದು ನೆಲದಲ್ಲಿ ಒರಗಿದ. ಬಾಯಿಂದ ಬಹಳ ರಕ್ತಕಾರಿ ಸತ್ತ. ಕ್ರಮೇಣ ನರಕಾದ್ಯನರ್ಥಗಳನ್ನು ಅನುಭವಿಸಿ ಕೊನೆಯಲ್ಲಿ ನಿತ್ಯವಾದ ಅಂಧಂತಮಸ್ಸನ್ನು ಹೊಂದಿದ.

★ ★ ★ ★

ನೂರ ಐವತ್ತಾರನೆಯ ಅಧ್ಯಾಯ

(ಕುಂತಿ ಹಿಡಿಂಬಾ ಸಂವಾದ, ಹಿಡಿಂಬ ಭೀಮ ಯುದ್ಧ, ಅರ್ಜುನನನ್ನು ನಿರಾಕರಿಸಿ ಭೀಮಸೇನನಿಂದ ಹಿಡಿಂಬನ ವಧೆ)

ವೈಶಂಪಾಯನಃ

ಪ್ರಬುದ್ಧಾಸ್ತೇ ಹಿಡಿಂಬಾಯಾ ರೂಪಮಾಲೋಕ್ಯ ಶೋಭನಮ್ ।
ವಿಸ್ಮಿತಾಃ ಪುರುಷವ್ಯಾಘ್ರಾ ಬಭೂವುಃ ಪೃಥಯಾ ಸಹ ॥೧॥

ತಾಯಿಯ ಜೊತೆಯಲ್ಲಿ ನಿದ್ದೆಯಿಂದ ಎಚ್ಚರಗೊಂಡ ಆ ಪುರುಷವ್ಯಾಘ್ರರು ಹಿಡಿಂಬೆಯ ಸುಂದರವಾದ ರೂಪವನ್ನು ನೋಡಿ ವಿಸ್ಮಿತರಾದರು.

ತತಃ ಕುಂತೀ ಸಮೀಕ್ಷ್ಯೈನಾಂ ವಿಸ್ಮಿತಾ ರೂಪಸಂಪದಾ ।
ಉವಾಚ ಮಧುರಂ ವಾಕ್ಯಂ ಸಾಂತ್ವಪೂರ್ವಮಿದಂ ಶನೈಃ ॥೨॥

ಆಗ ಬಹಳವಾದ ರೂಪಸಂಪತ್ತಿನಿಂದ ಯುಕ್ತಳಾದ ಹಿಡಿಂಬೆಯನ್ನು ನೋಡಿ ವಿಸ್ಮಿತಳಾದ ಕುಂತಿಯು ಸಮಾಧಾನಪೂರ್ವಕವಾಗಿ ಮೆಲ್ಲನೆ ಈ ಮಧುರವಾದ ಮಾತುಗಳನ್ನು ಆಡಿದಳು.

ಕಸ್ಯ ತ್ವಂ ಸುರಗರ್ಭಾಭೇ ಕಾ ಚಾಸಿ ವರವರ್ಣಿನಿ ।
ಕೇನ ಕಾರ್ಯೇಣ ಸುಭಗೇ ಕುತಶ್ಚಾಗಮನಂ ತವ ॥೩॥

ದೇವಕನ್ಯೆಯ ಕಾಂತಿಯನ್ನು ಹೊಂದಿರುವವಳೇ, ನೀನು ಯಾರ ಮಗಳು? ಸುಂದರಿಯೇ, ನೀನು ಯಾರು? ರೂಪವತಿಯೇ, ಯಾವ ಉದ್ದೇಶದಿಂದ (ಎಲ್ಲಿಂದ) ಇಲ್ಲಿಗೆ ಬಂದಿದ್ದೀಯೆ?

ಯದಿ ವಾಽಸಿ ವನಸ್ಯಾಸ್ಯ ದೇವತಾ ಯದಿ ವಾಽಪ್ಸರಾಃ ।
ಆಚಕ್ಷ್ವ ಭದ್ರೇ ತತ್ ಸರ್ವಂ ಕಿಮರ್ಥಂ ಚೇಹ ತಿಷ್ಠತಿ ॥೪॥

ಅಥವಾ ನೀನು ಈ ವನದ ದೇವತೆಯೆ? ಅಥವಾ ಅಪ್ಸರೆಯೆ? ಮಂಗಳಸ್ವರೂಪಳೇ, ನೀನು ಇಲ್ಲಿಗೆ ಏಕೆ ಬಂದಿದ್ದೀಯೆ ಎಂಬುದನ್ನು ಮತ್ತು ಎಲ್ಲಾ ವಿಷಯಗಳನ್ನೂ ನನಗೆ ಹೇಳು.

ಹಿಡಿಂಬೀ

ಯದೇತತ್ ಪಶ್ಯಸಿ ವನಂ ನೀಲಮೇಘನಿಭಂ ಮಹತ್ ।
ನಿವಾಸೋ ರಾಕ್ಷಸಸ್ಯೈತದ್ ಹಿಡಿಂಬಸ್ಯ ಮಮೈವ ಚ ॥೫॥

ನೀನು ನೋಡುತ್ತಿರುವ ಕಪ್ಪು ಮೋಡದ ಕಾಂತಿಯನ್ನು ಹೊಂದಿರುವ ಈ ಕಾಡು ಹಿಡಿಂಬರಾಕ್ಷಸನ ಮತ್ತು ನನ್ನ ನಿವಾಸಸ್ಥಾನ.

ತಸ್ಯ ಮಾಂ ರಾಕ್ಷಸೇಂದ್ರಸ್ಯ ಭಗಿನೀಂ ವಿದ್ಧಿ ಭಾಮಿನಿ ।
ಭ್ರಾತ್ರಾ ಸಂಪ್ರೇಷಿತಾಮಾರ್ಯೇ ತ್ವಾಂ ಸಪುತ್ರಾಂ ಜಿಘಾಂಸತಾ ॥೬॥

ಭಾಮಿನಿಯೇ, ನನ್ನನ್ನು ಆ ರಾಕ್ಷಸೇಂದ್ರನ ತಂಗಿ ಎಂದು ತಿಳಿ. ಪೂಜ್ಯೆಯೇ, ನಿನ್ನನ್ನೂ ಮತ್ತು ನಿನ್ನ ಮಕ್ಕಳನ್ನೂ ಕೊಲ್ಲುವ ಸಲುವಾಗಿ ಅಣ್ಣನು ನನ್ನನ್ನು ಇಲ್ಲಿಗೆ ಕಳುಹಿಸಿದನು.

ಕ್ರೂರಬುದ್ಧೇರಹಂ ತಸ್ಯ ವಚನಾದಾಗತಾ ತ್ವಿಹ ।
ಅದ್ರಾಕ್ಷಂ ಹೇಮವರ್ಣಾಭಂ ತವ ಪುತ್ರಂ ವೃಕೋದರಮ್ ॥೭॥

ಕ್ರೂರಬುದ್ಧಿಯುಳ್ಳ ಅವನ ಮಾತಿನಂತೆ ನಾನು ಇಲ್ಲಿಗೆ ಬಂದು ಸುವರ್ಣಕಾಂತಿಯನ್ನು ಹೊಂದಿರುವ ನಿನ್ನ ಪುತ್ರನಾದ ವೃಕೋದರನನ್ನು ನೋಡಿದೆ.

ತತೋಽಹಂ ಸರ್ವಭೂತಾನಾಂ ಭಾವೇ ವಿಚರತಾ ಶುಭೇ ।
ಚೋದಿತಾ ತವ ಪುತ್ರಾರ್ಥಂ ಮನ್ಮಥೇನ ವಶಾನುಗಾ ॥೮॥

ಶೋಭನಸ್ವರೂಪಳೇ ಆಗ ನಾನು ಎಲ್ಲರ ಮನಸ್ಸಿನಲ್ಲಿ ಸಂಚರಿಸುವ ಮನ್ಮಥನಿಗೆ ವಶಳಾಗಿ ನಿನ್ನ ಪುತ್ರನ ಸಲುವಾಗಿ ಅವನಿಂದ ಪ್ರೇರಿಸಲ್ಪಟ್ಟೆ.

ತತೋ ವೃತೋ ಮಯಾ ಭರ್ತಾ ತವ ಪುತ್ರಸ್ತ್ವನಿಂದಿತೇ ।
ಅಪನೇತುಂ ವ್ಯವಸಿತೋ ನ ಚೈವ ಕಥಿತೋ ಮಯಾ ॥೯॥

ಅನಿಂದಿತಳೇ, ಅನಂತರ ನಾನು ನಿನ್ನ ಪುತ್ರನನ್ನು ಪತಿಯಾಗಿ ವರಿಸಿದೆ. ಅವನು ನನ್ನನ್ನು ಪರಿತ್ಯಾಗ ಮಾಡಲು ನಿರ್ಧರಿಸಿದನು. ಅನಂತರ ನಾನು ಏನೂ ಮಾತನಾಡಲಿಲ್ಲ.

ಚಿರಾಯಮಾಣಾಂ ಮಾಂ ಜ್ಞಾತ್ವಾ ತತೋಽಯಂ ಪುರುಷಾದಕಃ ।
ಸ್ವಯಮೇವಾಗತೋ ಹಂತುಮಿಮಾನ್ ಸರ್ವಾಂಸ್ತವಾತ್ಮಜಾನ್ ॥೧೦॥

ಆಗ ಈ ನರಭಕ್ಷಕನಾದ ಹಿಡಿಂಬನು ನಾನು ತಡಮಾಡುತ್ತಿರುವುದನ್ನು ಗಮನಿಸಿ ಈ ನಿನ್ನ ಎಲ್ಲಾ ಮಕ್ಕಳನ್ನೂ ಕೊಲ್ಲಲು ತಾನೇ ಬಂದನು.

ಸ ತೇನ ತವ ಪುತ್ರೇಣ ಮಮ ಕಾಂತೇನ ಧೀಮತಾ ।
ಬಲಾದಿತೋ ವಿನಿಷ್ಪಿಷ್ಯ ವ್ಯಪಕೃಷ್ಟೋ ಮಹಾತ್ಮನಾ ॥೧೧॥

ಅವನನ್ನು ನನ್ನ ಕಾಂತನೂ, ಮೇಧಾವಿಯೂ, ಮಹಾತ್ಮನೂ ಆದ ನಿನ್ನ ಪುತ್ರನು ತನ್ನ ಶಕ್ತಿಯಿಂದ ಮರ್ದಿಸಿ ಇಲ್ಲಿಂದ ಎಳೆದುಕೊಂಡು ಹೋದನು.

ವಿಕರ್ಷಂತೌ ಮಹಾವೇಗೌ ಗರ್ಜಂತೌ ಚ ಪರಸ್ಪರಮ್ ।
ಪಶ್ಯ ತ್ವಂ ಯುಧಿ ವಿಕ್ರಾಂತೌ ತಾವೇತೌ ನರರಾಕ್ಷಸೌ ॥೧೨॥

ಅದೇ ಈ ಇಬ್ಬರು ಮನುಷ್ಯ ಮತ್ತು ರಾಕ್ಷಸರು ಮಹಾವೇಗವುಳ್ಳವರಾಗಿ ಪರಸ್ಪರವಾಗಿ ಎಳೆದಾಡುತ್ತಾ, ಪರಸ್ಪರವಾಗಿ ಗರ್ಜಿಸುತ್ತಾ, ಯುದ್ಧದಲ್ಲಿ ವಿಕ್ರಮವನ್ನು ತೋರಿಸುತ್ತಿರುವುದನ್ನು ನೀನು ನೋಡು.

ವೈಶಂಪಾಯನಃ

ತತಸ್ತಸ್ಯಾ ವಚಃ ಶ್ರುತ್ವಾ ಉತ್ಪಪಾತ ಯುಧಿಷ್ಠಿರಃ ।
ಅರ್ಜುನೋ ನಕುಲಶ್ಚೈವ ಸಹದೇವಶ್ಚ ವೀರ್ಯವಾನ್ ॥೧೩॥

ಆಗ ಅವಳ ಮಾತುಗಳನ್ನು ಕೇಳಿ ವೀರ್ಯವಂತರಾದ ಯುಧಿಷ್ಠಿರ, ಅರ್ಜುನ ಮತ್ತು ನಕುಲ ಸಹದೇವರು ಭೂಮಿಯಿಂದ ಹಾರಿದರು.

ತೇ ತೌ ದದೃಶುರಾಸಕ್ತೌ ವಿಕರ್ಷಂತೌ ಪರಸ್ಪರಮ್ ।
ಕಾಂಕ್ಷಮಾಣೌ ಜಯಂ ಚೈವ ಮತ್ತಾವಿವ ಮಹಾಗಜೌ ॥೧೪॥

ಅವರು ಪರಸ್ಪರವಾಗಿ ಎಳೆದಾಡುತ್ತಿರುವ ಪರಸ್ಪರವಾಗಿ ಜಯಾಕಾಂಕ್ಷಿಗಳಾದ ಮದಿಸಿದ ಎರಡು ಮಹಾಗಜಗಳಂತೆ ಪರಸ್ಪರ ಸಂಸಕ್ತರಾದ ಆ ಇಬ್ಬರನ್ನು ನೋಡಿದರು.

ತಾವನ್ಯೋನ್ಯಂ ಸಮಾಶ್ಲಿಷ್ಯ ನಿಷ್ಪತಂತೌ ಪರಸ್ಪರಮ್ ।
ದಾವಾಗ್ನಿಧೂಮಸಂಕಾಶಂ ಚಕ್ರತುಃ ಪಾರ್ಥಿವಂ ರಜಃ ॥೧೫॥

ಅವರಿಬ್ಬರೂ ಪರಸ್ಪರವಾಗಿ ಆಲಿಂಗಿಸಿ ಪರಸ್ಪರವಾಗಿ ಎಳೆದಾಡಿ ಭೂಮಿಯ ಧೂಳನ್ನು ಎಬ್ಬಿಸಿ ದಾವಾಗ್ನಿಯ ಧೂಮದಂತೆ ಕಾಣುವಂತೆ ಮಾಡಿದರು.

ವಸುಧಾರೇಣುಸಂವೀತೌ ವಸುಧಾಧರಸನ್ನಿಭೌ ।
ಬಿಭ್ರಾಜೇತೇ ಯಥಾ ಶೈಲೌ ನೀಹಾರೇಣಾಭಿಸಂವೃತೌ ॥೧೬॥

ಭೂಮಿಯ ರೇಣುಗಳಿಂದ ಸಂಲಿಪ್ತರಾದ ಅವರು ಮಂಜಿನಿಂದ ಮುಚ್ಚಲ್ಪಟ್ಟ ಎರಡು ಪರ್ವತಗಳಂತೆ ಶೋಭಿಸಿದರು.

ತೇ ಪಶ್ಯಂತೋ ಮಹದ್ಯುದ್ಧಂ ಸರ್ವೇ ವ್ಯಥಿತಚೇತಸಃ ।
ರಾಕ್ಷಸೇನ ಬಲಾದ್ ಭೀಮಂ ಕ್ಲಿಶ್ಯಮಾನಂ ನಿರೀಕ್ಷ್ಯ ತು ॥೧೭॥

ಚಿರಪ್ರಯುದ್ಧೌ ದೃಷ್ಟ್ವಾ ಚ ಅನ್ಯೋನ್ಯವಧಕಾಂಕ್ಷಯಾ ।
ಉವಾಚೇದಂ ವಚಃ ಪಾರ್ಥಃ ಪ್ರಹಸನ್ನಿವ ಭಾರತ ॥೧೮॥

ಅವರೆಲ್ಲರೂ ಈ ಮಹಾಯುದ್ಧವನ್ನು ನೋಡುತ್ತಾ ಮನಸ್ಸಿನಲ್ಲಿ ವ್ಯಥೆಪಟ್ಟರು. ಎಲೈ ಭಾರತನೇ ಅರ್ಜುನನು ಭೀಮನು ರಾಕ್ಷಸನಿಂದ, ಅವನ ಶಕ್ತಿಯಿಂದ ಪೀಡಿಸಲ್ಪಡುತ್ತಿರುವುದನ್ನು ನೋಡಿ ಅನ್ಯೋನ್ಯವಧಾಕಾಂಕ್ಷಿಗಳಾಗಿ ಅವರು ಬಹಳ ಸಮಯದಿಂದ ಯುದ್ಧಮಾಡುತ್ತಿರುವುದನ್ನೂ ನೋಡಿ ನಗುತ್ತಾ ಅಣ್ಣನನ್ನು ಕುರಿತು ಮಾತನಾಡಿದನು.

ಅರ್ಜುನಃ

ಭೀಮ ಮಾ ಭೈರ್ಮಹಾಬಾಹೋ ನ ತ್ವಾಂ ಬುಧ್ಯಾಮಹೇ ವಯಮ್।
ಸಮೇತಂ ಭೀಮರೂಪೇಣ ಪ್ರಸುಪ್ತಾಃ ಶ್ರಮಕರ್ಶಿತಾಃ ॥೧೯॥

ಮಹಾಬಾಹುವಾದ ಭೀಮನೇ, ಹೆದರಬೇಡ. ಶ್ರಮದಿಂದ ದಣಿದು ಮಲಗಿದ ನಮಗೆ ನಿನ್ನನ್ನು ಈ ಭಯಂಕರನಾದ ರಾಕ್ಷಸನು ಎದುರಿಸಿರುವ ವಿಷಯವು ತಿಳಿಯಲಿಲ್ಲ.

ಸಾಹಾಯ್ಯೇಽಸ್ಮಿ ಸ್ಥಿತಃ ಪಾರ್ಶ್ವೇ ಯೋಧಯಿಷ್ಯಾಮಿ ರಾಕ್ಷಸಮ್ ।
ಯಮೌ ಚ ರಾಜಾ ಕೌಂತೇಯೋ ಗೋಪಯಿಷ್ಯತಿ ಮಾತರಮ್ ॥೨೦॥

ನಾನು ನಿನಗೆ ಸಹಾಯಕನಾಗಿ ನಿನ್ನ ಪಕ್ಕದಲ್ಲಿ ನಿಂತು ರಾಕ್ಷಸನ ಜೊತೆಯಲ್ಲಿ ಯುದ್ಧ ಮಾಡುವೆನು. ಧರ್ಮರಾಜನು ಮತ್ತು ನಕುಲ ಸಹದೇವರು ತಾಯಿಯನ್ನು ರಕ್ಷಣೆ ಮಾಡುವರು.

ಭೀಮಃ

ಉದಾಸೀನೋ ನಿರೀಕ್ಷಸ್ವ ನ ಕಾರ್ಯಂ ಸಂಭ್ರಮಸ್ತ್ವಯಾ ।
ನ ಜಾತ್ವಯಂ ಪುನರ್ಜೀವೇನ್ಮದ್ಭುಜಾಂತರಮಾಗತಃ ॥೨೧॥

ತಟಸ್ಥನಾಗಿ ನಿರೀಕ್ಷಿಸು. ಗಡಿಬಿಡಿ ಮಾಡಬೇಡ. ನನ್ನ ಭುಜಮಧ್ಯದಲ್ಲಿ ಸಿಲುಕಿದ ಇವನು ಪುನಃ ಜೀವಂತನಾಗಿ ಉಳಿಯುವುದಿಲ್ಲ.

ಅಯಮಸ್ಮಾಂಸ್ತು ನೋ ಹನ್ಯಾಜ್ಜಾತು ವೈ ಪಾರ್ಥ ರಾಕ್ಷಸಃ ।
ಜೀವಂತಂ ನ ಪ್ರಮೋಕ್ಷ್ಯಾಮಿ ಮಾ ಭೈಷೀರ್ಭರತರ್ಷಭ ॥೨೨॥

ಅರ್ಜುನನೇ, ಈ ರಾಕ್ಷಸನು ನಮ್ಮನ್ನು ಎಂದೂ ಕೊಲ್ಲಲಾರ. ಭರತರ್ಷಭನೇ ಇವನನ್ನು ಜೀವಸಹಿತವಾಗಿ ಬಿಡುವುದಿಲ್ಲ. ನೀನು ಹೆದರಬೇಡ.

ಅರ್ಜುನಃ

ಪೂರ್ವರಾತ್ರೇ ಪ್ರಬುದ್ಧೋಽಸಿ ಭೀಮರೂಪೇಣ ರಕ್ಷಸಾ ।
ಕ್ಷಪಾ ವ್ಯುಷ್ಟಾ ನ ಚೇದಾನೀಂ ಸಮಾಪ್ನೋಷಿ ಮಹಾರಣಮ್ ॥೨೩॥

ನೀನು ಪೂರ್ವರಾತ್ರಿಯಲ್ಲಿಯೇ ಈ ಭಯಂಕರನಾದ ರಾಕ್ಷಸನ ನಿಮಿತ್ತದಿಂದ ಎಚ್ಚರಗೊಂಡಿದ್ದೀಯೆ. ಈಗ ರಾತ್ರಿಯು ಕಳೆಯುತ್ತಾ ಬಂದಿದೆ. ಇನ್ನು ರಾಕ್ಷಸ ಜೊತೆಯಲ್ಲಿ ದೊಡ್ಡ ಯುದ್ಧವು ದೊರೆಯುವುದಿಲ್ಲ.

ಕಿಮನೇನ ಚಿರಂ ಭೀಮ ಜೀವತಾ ದುಷ್ಟಚಾರಿಣಾ ।
ನಾಂತರೇಣ ಚಿರಂ ಸ್ಥಾತುಮಿಹ ಶಕ್ಯಂ ಪರಂತಪ ॥೨೪॥

ಭೀಮನೇ ಈ ದುಷ್ಟಚಾರಿಯಾದ ರಾಕ್ಷಸನನ್ನು ಇನ್ನು ಹೆಚ್ಚು ಹೊತ್ತು ಜೀವಂತನಾಗಿ ಉಳಿಸಿ ಏನು ಪ್ರಯೋಜನ? ಪರಂತಪನೇ, ನಾವು ಇಲ್ಲಿ ಬಹಳ ಹೊತ್ತು ಇರಲು ಸಾಧ್ಯವಿಲ್ಲ.

ಪುರಾ ಸಂರಜ್ಯತೇ ಪ್ರಾಚೀ ಪುರಾ ಸಂಧ್ಯಾ ಪ್ರವರ್ತತೇ ।
ರೌದ್ರೇ ಮುಹೂರ್ತೇ ರಕ್ಷಾಂಸಿ ಭವಂತಿ ಬಲವಂತಿ ಚ ॥೨೫॥

ಇನ್ನೇನು ಪೂರ್ವದಿಕ್ಕು ಕೆಂಪಾಗುತ್ತದೆ. ಸಂಧ್ಯಾಕಾಲವು ಪ್ರವೃತ್ತವಾಗುತ್ತದೆ. ರೌದ್ರಮುಹೂರ್ತದಲ್ಲಿ ರಾಕ್ಷಸರಿಗೆ ಬಲವು ಹೆಚ್ಚುತ್ತದೆ.

ತ್ವರಸ್ವ ಭೀಮ ಮಾ ಲೀಲಾ ಜಹಿ ರಕ್ಷೋ ವಿಭೀಷಣಮ್ ।
ಪುರಾ ಮಾಯಾಂ ವಿಕುರುತೇ ಭುಜಯೋಃ ಸಾರಮರ್ಪಯ ॥೨೬॥

ಭೀಮ ತ್ವರೆ ಮಾಡು. ಆಟವಾಡಬೇಡ. ಭಯಂಕರನಾದ ಈ ರಾಕ್ಷಸನನ್ನು ಸಂಹಾರ ಮಾಡು. ನಿನ್ನನ್ನು ಭುಜಬಲದಿಂದ ಗೆಲ್ಲಲಾರದೆ ಅವನು ಇನ್ನು ಮಾಯಾಯುದ್ಧವನ್ನು ಮಾಡುತ್ತಾನೆ. ನಿನ್ನ ಭುಜಗಳ ಶಕ್ತಿಯನ್ನು ಅವನಿಗೆ ಅರ್ಪಿಸು.

ಮಾಹಾತ್ಮ್ಯಮಾತ್ಮನೋ ವೇತ್ಥ ನರಾಣಾಂ ಹಿತಕಾಮ್ಯಯಾ ।
ರಕ್ಷೋ ಜಹಿ ಯಥಾ ಶಕ್ರಃ ಪುರಾ ವೃತ್ರಂ ಮಹಾಹವೇ ॥೨೭॥

ನಿನ್ನ ಬಲವನ್ನು ನೀನೇ ತಿಳಿದಿದ್ದೀಯೆ. ಮನುಷ್ಯರ ಮೇಲಿನ ಹಿತದೃಷ್ಟಿಯಿಂದ ಹಿಂದೆ ದೊಡ್ಡ ಯುದ್ಧದಲ್ಲಿ ಇಂದ್ರನು ವೃತ್ರಾಸುರನನ್ನು ಕೊಂದಂತೆ ಈಗ ನೀನು ರಾಕ್ಷಸನನ್ನು ಸಂಹಾರ ಮಾಡು.

ಅಥವಾ ಮನ್ಯಸೇ ಭಾರಂ ತ್ವಮಿಮಂ ರಾಕ್ಷಸಂ ಯುಧಿ ।
ಆತಿಷ್ಠೇ ತವ ಸಾಹಾಯ್ಯಂ ಶೀಘ್ರಮೇವ ತು ಹನ್ಯತಾಮ್ ॥೨೮॥

ಅಥವಾ ಯುದ್ಧದಲ್ಲಿ ಈ ರಾಕ್ಷಸನು ನಿನಗೆ ಭಾರವೆನಿಸಿದರೆ, ನಾನು ನಿನ್ನ ಸಹಾಯಕ್ಕೆ ಬರುತ್ತೇನೆ. ಬೇಗ ಇವನು ಕೊಲ್ಲಲ್ಪಡಲಿ.

ಅಥವಾ ಹ್ಯಹಮೇವೈನಂ ಹನಿಷ್ಯಾಮಿ ವೃಕೋದರ ।
ಕೃತಕರ್ಮಾ ಪರಿಶ್ರಾಂತಃ ಸಾಧು ತಾವದುಪಾರಮ ॥೨೯॥

ವೃಕೋದರನೇ, ಅಥವಾ ನಾನೇ ಇವನನ್ನು ಕೊಲ್ಲುವೆನು. ನಿನ್ನ ಕರ್ತವ್ಯವನ್ನು ಮಾಡಿ ದಣಿದಿರುವ ನೀನು ನಿವೃತ್ತನಾಗು. ಇದು ಒಳ್ಳೆಯದು.

ವೈಶಂಪಾಯನಃ

ಅರ್ಜುನೇನೈವಮುಕ್ತಸ್ತು ಭೀಮೋ ಭೀಮಸ್ಯ ರಕ್ಷಸಃ ।
ಉತ್ಕ್ಷಿಪ್ಯ ಭ್ರಾಮಯದ್ ದೇಹಂ ತೂರ್ಣಂ ಶತಗುಣಾಧಿಕಮ್ ॥೩೦॥

ಅರ್ಜುನನು ಹೀಗೆ ಹೇಳಿದಾಗ ಭೀಮನು ಆ ಭಯಂಕರನಾದ ರಾಕ್ಷಸನನ್ನು ಮೇಲಕ್ಕೆಸೆದು ನೂರು ಸಲ ಅದನ್ನು ತಿರುಗಿಸಿದನು.

ಇತಿ ಚೋವಾಚ ಸಂಕ್ರುದ್ಧೋ ಭ್ರಾಮಯನ್ ರಾಕ್ಷಸಂ ತು ಸಃ ।
ಭೀಮಸೇನೋ ಮಹಾಬಾಹುರಭಿಗರ್ಜನ್ ಮುಹುರ್ಮುಹುಃ ॥೩೧॥

ರಾಕ್ಷಸನನ್ನು ಗಿರಿಗಿಟ್ಟಲೆಯಂತೆ ತಿರುಗಿಸುತ್ತಾ ಮಹಾಬಾಹುವಾದ ಭೀಮಸೇನನು ಮತ್ತೆ ಮತ್ತೆ ಗರ್ಜಿಸುತ್ತಾ ಹೀಗೆ ಮಾತನಾಡಿದನು.

ಭೀಮಸೇನಃ

ವೃಥಾಮಾಂಸೋ ವೃಥಾಪುಷ್ಟೋ ವೃಥಾವೃದ್ಧೋ ವೃಥಾಮತಿಃ ।
ವೃಥಾಮರಣಮರ್ಹಸ್ತ್ವಂ ವೃಥೈವ ವಿನಶಿಷ್ಯಸಿ ॥೩೨॥

ನೀನು ವೃಥಾಮಾಂಸನೂ, ವೃಥಾಪುಷ್ಟನೂ, ವೃಥಾವೃದ್ಧನೂ, ವೃಥಾಮತಿಯೂ ಆಗಿದ್ದೀಯೇ. ನೀನು ವೃಥಾಮರಣಕ್ಕೆ ಅರ್ಹನಾಗಿದ್ದೀಯೆ. ವ್ಯರ್ಥವಾಗಿಯೇ ವಿನಾಶವನ್ನು ಹೊಂದುವಿ.

ಕ್ಷೇಮಮೇತತ್ ಕರಿಷ್ಯಾಮಿ ವನಂ ನಿಹತಕಂಟಕಮ್ ।
ನ ಪುನರ್ಮಾನುಷಾನ್ ಹತ್ವಾ ಭಕ್ಷಯಿಷ್ಯಸಿ ರಾಕ್ಷಸ ॥೩೩॥

ರಾಕ್ಷಸನೇ, ನಾನು ಈ ಕಾಡನ್ನು ನಿಹತಕಂಟಕವನ್ನಾಗಿ ಮಾಡಿ ಕ್ಷೇಮವನ್ನು ಉಂಟು ಮಾಡುವೆನು. ನೀನು ಇನ್ನು ಎಂದೂ ಮನುಷ್ಯರನ್ನು ಕೊಂದು ತಿನ್ನುವುದಿಲ್ಲ.

ವೈಶಂಪಾಯನಃ

ಇತ್ಯುಕ್ತ್ವಾ ಭೀಮಸೇನಸ್ತಂ ನಿಷ್ಪಿಷ್ಯ ಧರಣೀತಳೇ ।
ಬಾಹುಭ್ಯಾಮವಪೀಡ್ಯಾಶು ಪಶುಮಾರಮಮಾರಯತ್ ॥೩೪॥

ಹೀಗೆ ಹೇಳಿ ಭೀಮಸೇನನು ಅವನನ್ನು ಭೂಮಿಯ ಮೇಲೆ ಬಡಿದು ಬಾಹುಗಳಿಂದ ಮರ್ದಿಸಿ ಪಶುವು ಪಶುವನ್ನು ಕೊಲ್ಲುವಂತೆ ಕೊಂದನು.

ಸ ಮಾರ್ಯಮಾಣೋ ಭೀಮೇನ ನನಾದ ವಿಪುಲಂ ಸ್ವನಮ್ ।
ಪೂರಯಂಸ್ತದ್ವನಂ ಸರ್ವಂ ಜಲಾರ್ದ್ರ ಇವ ದುಂದುಭಿಃ ॥೩೫॥

ಭೀಮನಿಂದ ಮರಣಕ್ಕೆ ಒಳಗಾಗುವ ಸಮಯದಲ್ಲಿ ಅವನು ನೀರ್ನಿಂದ ಒದ್ದೆಯಾದ ದುಂದುಭಿ ನಾದದಂತಿರುವ ತನ್ನ ನಾದದಿಂದ ಆ ವಿಪುಲವಾದ ಕಾಡನ್ನು ತುಂಬುತ್ತಾ ನಾದ ಮಾಡಿದನು.

ಭುಜಾಭ್ಯಾಂ ಯೋಕ್ತ್ರಯಿತ್ವಾ ತು ಬಲವಾನ್ ಪಾಂಡುನಂದನಃ ।
ಸಮುದ್‌ಭ್ರಾಮ್ಯ ಶಿರಶ್ಚಾಸ್ಯ ಸುಗ್ರೀವಂ ತದುದಾವಹತ್ ॥೩೬॥

ಮಧ್ಯೇ ಭಿತ್ವಾ ಶಿರಶ್ಚಾಸ್ಯ ಸಗ್ರೀವಂ ತದುಪಾಕ್ಷಿಪತ್ ।
ತಸ್ಯ ನಿಷ್ಕರ್ಣನಯನಂ ನಿರ್ದಿಹ್ವಂ ರುಧಿರೋಕ್ಷಿತಮ್ ।
ಪ್ರವಿದ್ಧಂ ಭೀಮಸೇನೇನ ಶಿರೋ ವಿದಶನಂ ಬಭೌ ॥೩೭॥

ಬಲಿಷ್ಠನಾದ ಪಾಂಡುನಂದನನಾದ ಭೀಮನು ತನ್ನ ಭುಜಗಳಿಂದ ಅವನಿಗೆ ಪಟ್ಟು ಹಾಕಿ ಅವನನ್ನು ತಿರುಗಿಸಿ ಅವನ ತಲೆಯನ್ನು ಮೇಲಕ್ಕೆತ್ತಿ ದೇಹದಿಂದ ಬೇರ್ಪಡಿಸಿದನು. ಅನಂತರ ಕುತ್ತಿಗೆಯಿಂದ ಕೂಡಿದ್ದ ಆ ಶಿರಸ್ಸನ್ನು ಮಧ್ಯೆ ಒಡೆದು ಮೇಲಕ್ಕೆ ಎಸೆದನು. ಕಿವಿ, ಕಣ್ಣು, ನಾಲಿಗೆಗಳಿಲ್ಲದೆ ರಕ್ತಸಿಕ್ತವಾಗಿ ಭೀಮನ ಹೊಡೆತಕ್ಕೆ ಸಿಲುಕಿದ್ದ ಆ ಶಿರಸ್ಸು ಹಲ್ಲುಗಳೂ ಇಲ್ಲದೇ ಪ್ರಕಾಶಿಸುತ್ತಿತ್ತು.

ಪ್ರಸಾರಿತಭುಜೋದ್ಭ್ರಷ್ಟೋ ಭಿನ್ನಮಾಂಸತ್ವಗಂತರಃ ।
ಕಬಂಧಭೂತಸ್ತತ್ರಾಸೀದದ್ರಿರ್ವಜ್ರಹತೋ ಯಥಾ ॥೩೮॥

ಭುಜಗಳನ್ನು ಚಾಚಿದ, ಹರಿದ ಮಾಂಸ, ಚರ್ಮ ಮತ್ತು ಒಳಗಿನ ಅವಯವಗಳುಳ್ಳ ಆ ರಾಕ್ಷಸ ಮುಂಡವು ವಜ್ರದ ಏಟಿಗೆ ಸಿಲುಕಿದ ಪರ್ವತದಂತೆ ಅಲ್ಲಿ ಬಿದ್ದಿತು.

ಹಿಡಿಂಬಂ ನಿಹತಂ ದೃಷ್ಟ್ವಾ ಪ್ರಹೃಷ್ಟಾಸ್ತತ್ರ ಪಾಂಡವಾಃ ।
ಹಿಡಿಂಬೀ ಚೈವ ಸಂಪ್ರೇಕ್ಷ್ಯ ನಿಹತಂ ರಾಕ್ಷಸಂ ರಣೇ ॥೩೯॥

ಹಿಡಿಂಬನು ನಿಹತನಾದುದನ್ನು ನೋಡಿ ಪಾಂಡವರು ಸಂತುಷ್ಟರಾದರು. ಹಿಡಿಂಬಿಯೂ ಸಹ ರಾಕ್ಷಸನು ಯುದ್ಧದಲ್ಲಿ ಮಡಿದುದನ್ನು ನೋಡಿ ಸಂತೋಷಪಟ್ಟಳು.

ಅದೃಷ್ಟಾಶ್ಚೈವ ಯೇ ಖಸ್ಥಾಃ ಸಮೇತಾ ಭೂತಚಾರಕಾಃ ।
ಪೂಜಯಂತಿ ಸ್ಮ ಸಂಹೃಷ್ಟಾಃ ಸಾಧುಸಾಧ್ವಿತಿ ಪಾಂಡವಮ್ ॥೪೦॥

ಆಕಾಶದಲ್ಲಿ ಇದ್ದು ಅಂತರ್ಧಾನವನ್ನು ಹೊಂದಿದ ಭೂತಗಳು ಮತ್ತು ಚಾರಣರು ''ಸಾಧು, ಸಾಧು'' ಎಂದು ಹೇಳಿ ಪಾಂಡುಪುತ್ರನಾದ ಭೀಮಸೇನನ್ನು ಪ್ರಶಂಸಿಸಿದರು.

ಭ್ರಾತರಶ್ಚಾಪಿ ಸಂಹೃಷ್ಟಾ ಯುಧಿಷ್ಠಿರಪುರೋಗಮಾಃ ।
ಅಪೂಜಯನ್ ನರವ್ಯಾಘ್ರಂ ಭೀಮಸೇನಮರಿಂದಮಮ್ ॥೪೧॥

ಯುಧಿಷ್ಠಿರನೇ ಮೊದಲಾದ ಅಣ್ಣತಮ್ಮಂದಿರೂ ಸಹ ಸಂತೋಷದಿಂದ ಅರಿಂದಮನಾದ, ನರವ್ಯಾಘ್ರನಾದ ಭೀಮಸೇನನನ್ನು ಪೂಜಿಸಿದರು.

ಅಥ ಪೂಜ್ಯ ಮಹಾತ್ಮಾನಂ ಭೀಮಂ ಭೀಮಪರಾಕ್ರಮಮ್ ।
ಪುನರೇವಾರ್ಜುನೋ ವಾಕ್ಯಮುವಾಚೇದಂ ವೃಕೋದರಮ್ ॥೪೨॥

ಆಗ ಭಯಂಕರ ಪರಾಕ್ರಮವುಳ್ಳ ಮಹಾತ್ಮನಾದ ಭೀಮನನ್ನು ಪೂಜಿಸಿ ಅರ್ಜುನನು ಅವನನ್ನು ಕುರಿತು ಹೀಗೆ ಮಾತನಾಡಿದನು.

ಅದೂರೇ ನಗರಂ ಮನ್ಯೇ ವನಾದಸ್ಮಾದಹಂ ಪ್ರಭೋ ।
ಶೀಘ್ರಂ ಗಚ್ಛಾಮ ಭದ್ರಂ ತೇ ನ ನೋ ವಿದ್ಯಾತ್ ಸುಯೋಧನಃ ॥೪೩॥

ಪ್ರಭುವೇ, ಈ ಕಾಡಿಗೆ ಸಮೀಪದಲ್ಲಿಯೇ ನಗರವಿದೆ ಎಂದು ಭಾವಿಸುತ್ತೇನೆ. ನಿನಗೆ ಮಂಗಳವಾಗಲಿ, ನಾವು ಬೇಗ ಇಲ್ಲಿಂದ ಹೋಗೋಣ. ಸುಯೋಧನನು ನಮ್ಮನ್ನು ತಿಳಿಯುವುದು ಬೇಡ.

ವೈಶಂಪಾಯನಃ

ತತಃ ಸರ್ವೇ ತಥೇತ್ಯುಕ್ತ್ವಾ ಮಾತ್ರಾ ಸಹ ಮಹಾರಥಾಃ ।
ಪ್ರಯಯುಃ ಪುರುಷವ್ಯಾಘ್ರಾ ಹಿಡಿಂಬೀ ಚೈವ ರಾಕ್ಷಸೀ ॥೪೪॥

ಆಗ ಆ ಎಲ್ಲಾ ಮಹಾರಥರಾದ ಪುರುಷವ್ಯಾಘ್ರರು ''ಹಾಗೆಯೇ ಆಗಲಿ'' ಎಂದು ಹೇಳಿ ತಾಯಿಯನ್ನು ಕರೆದುಕೊಂಡು ಹೊರಟರು. ರಾಕ್ಷಸಿಯಾದ ಹಿಡಿಂಬಿಯೂ ಅವರನ್ನು ಹಿಂಬಾಲಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಷಟ್‌ಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ಹಿಡಿಂಬವಧಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಐವತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಹತ್ವೈವ ಶರ್ವವರರಕ್ಷಿತರಾಕ್ಷಸಂ ತಂ
ಸರ್ವೈರವಧ್ಯಮಪಿ ಸೋದರಮಾತೃಯುಕ್ತಃ ।
ಭೀಮೋ ಯಯೌ ತದನು ಸಾ ಪ್ರಯಯೌ ಹಿಡಿಂಬೀ
ಕುಂತೀಂ ಯುಧಿಷ್ಠಿರಮಥಾಸ್ಯ ಕೃತೇ ಯಯಾಚೇ ॥೫೭॥

ಶಿವವರದಿಂದ ರಕ್ಷಿತನಾಗಿದ್ದು ಸರ್ವರಿಗೂ ಅವಧ್ಯನೆನಿಸಿದ್ದ ಆ ರಾಕ್ಷಸನನ್ನು ಕೊಂದು ಸೋದರರಿಂದಲೂ ತಾಯಿಯಿಂದಲೂ ಕೂಡಿ ಭೀಮ ಮುಂದೆ ನಡೆದ. ಹಿಡಿಂಬಿ ಅವನ ಹಿಂದೆಯೇ ನಡೆದಳು. ಭೀಮನಿಗಾಗಿ ಕುಂತಿಯನ್ನೂ ಧರ್ಮರಾಜನನ್ನೂ ಬೇಡಿದಳು.

ತಾಭ್ಯಾಮನೂಕ್ತಮಪಿ ಯನ್ನ ಕರೋತಿ ಭೀಮಃ
ಪ್ರಾದುರ್ಬಭೂವ ನಿಖಿಲೋರುಗುಣಾಭಿಪೂರ್ಣಃ ।
ವ್ಯಾಸಾತ್ಮಕೋ ಹರಿರನಂತಸುಖಾಂಬುರಾಶಿ-
ರ್ವಿದ್ಯಾಮರೀಚಿವಿತತಃ ಸಕಲೋತ್ತಮೋಽಲಂ ॥೫೮॥

ಕುಂತಿ ಯುಧಿಷ್ಠಿರರು ಮತ್ತೂ ಮತ್ತೂ ಹೇಳಿದರೂ ಭೀಮ ಕೇಳದಿದ್ದಾಗ ಸಕಲ ಮಹಾಗುಣಪೂರ್ಣ ಅನಂತಸುಖಸಾಗರ ಜ್ಞಾನಪ್ರಕಾಶವ್ಯಾಪ್ತ ಸರ್ವೋತ್ತಮನಾದ ವ್ಯಾಸರೂಪಿ ಶ್ರೀಹರಿ ಚೆನ್ನಾಗಿ ಮೈದೋರಿದ.

ದೃಷ್ಟ್ವೈವ ತಂ ಪರಮಮೋದಿನ ಆಶು ಪಾರ್ಥಾ
ಮಾತ್ರಾ ಸಹೈವ ಪರಿಪೂಜ್ಯ ಗುರುಂ ವಿರಿಂಚೇಃ ।
ಉಲ್ಲಾಲಿತಾಶ್ಚ ಹರಿಣಾ ಪರಮಾತಿಹಾರ್ದ-
ಪ್ರೋತ್ಫುಲ್ಲಪದ್ಮ ನಯನೇನ ತದೋಪವಿಷ್ಟಾಃ ॥೫೯॥

ಬ್ರಹ್ಮನಿಗೂ ಗುರುವಾದ ಆ ವ್ಯಾಸರನ್ನು ಕಂಡೊಡನೆಯೆ ಪರಮಾನಂದಗೊಂಡು ಪಾರ್ಥರೂ ಕುಂತಿಯೂ ಅವರನ್ನು ಬೇಗನೆ ಚೆನ್ನಾಗಿ ಸತ್ಕರಿಸಿದರು. ಅತ್ಯಂತ ಪರಮಪ್ರೀತಿಯಿಂದ ಅರಳಿದ ತಾವರೆ ಕಣ್ಣಿನ ಆ ಹರಿಯಿಂದ ಚೆನ್ನಾಗಿ ಲಾಲಿತರಾಗಿ ಕುಳಿತರು.

ತಾನ್ ಭಕ್ತಿನಮ್ರಶಿರಸಃ ಸಮುದೀಕ್ಷ್ಯಕೃಷ್ಣೋ
ಭೀಮಂ ಜಗಾದ ನತ ಆಶು ಹಿಡಿಂಬಯಾ ಚ ।
ಏತಾಂ ಗೃಹಾಣ ಯುವತೀಂ ಸುರಸದ್ಮಶೋಭಾಂ
ಜಾತೇ ಸುತೇ ಸಹಸುತಾ ಪ್ರತಿಯಾತು ಚೈಷಾ ॥೬೦॥

ಪಾಂಡವರು ಭಕ್ತಿಯಿಂದ ತಲೆಬಾಗಿದರು. ಹಿಡಿಂಬೆಯೂ ನಮಿಸಿದಳು. ವ್ಯಾಸರು ಅದನ್ನು ಕಂಡು ಭೀಮನಿಗೆ ದೇವಲೋಕ ಶ್ರೀರೂಪಳಾದ ಈಕೆಯನ್ನು ಭಾರ್ಯೆಯಾಗಿ ಸ್ವೀಕರಿಸು, ಒಬ್ಬಮಗ ಹುಟ್ಟಿದೊಡನೆ ಮಗನೊಂದಿಗೆ ಅವಳು ಹೊರಟುಹೋಗಲಿ, ಎಂದರು.

ಏವಂ ಬ್ರುವತ್ಯಗಣಿತೋರುಗುಣೇ ರಮೇಶ
ಓಮಿತ್ಯುದೀರ್ಯ ಕೃತವಾಂಶ್ಚ ತಥೈವ ಭೀಮಃ ।
ಸ್ಕಂಧೇನ ಚೋಹ್ಯ ವಿಬುಧಾಚರಿತಪ್ರದೇಶಾನ್
ಭೀಮಂ ಪ್ರಯಾತ್ಯುದಯ ಏವ ರಮೇರ್ಹಿಡಿಂಬೀ ॥೬೧॥

ಅಗಣಿತ ಮಹಾಗುಣಶಾಲಿಯಾದ ಇಂದಿರೇಶ ಹೀಗೆ ನುಡಿದಾಗ ಭೀಮ 'ಆಗಲಿ' ಎನ್ನುತ್ತ ಹಾಗೇ ಮಾಡಿದ. ಅಂದಿನಿಂದ ಹಿಡಿಂಬೆ ಪ್ರತಿದಿನ ಸೂರ್ಯೋದಯವಾದೊಡನೆ ಭೀಮನನ್ನು ಹೆಗಲಮೇಲೆ ಹೊತ್ತು ದೇವತೆಗಳ ಸಂಚಾರಕ್ಕೆ ಯೋಗ್ಯವಾದ ಪ್ರದೇಶಗಳಿಗೆ ವಿಹಾರಕ್ಕಾಗಿ ಹೋಗುತ್ತಿದ್ದಳು.

★ ★ ★ ★

ನೂರಐವತ್ತೇಳನೆಯ ಅಧ್ಯಾಯ

(ಹಿಡಿಂಬೆಯಿಂದ ತನ್ನ ದಿವ್ಯಜ್ಞಾನದ ಆವಿಷ್ಕಾರ, ಭೀಮನು ಅವಳನ್ನು ಸ್ವೀಕರಿಸಲು ಕುಂತಿಯ ಸಮ್ಮತಿ ಮತ್ತು ಧರ್ಮರಾಜನ ಸಮಯಬಂಧ)

ವೈಶಂಪಾಯನಃ

ಸಾ ತಾನೇವಾಪತತ್ ತೂರ್ಣಂ ಭಗಿನೀ ರಾಕ್ಷಸಸ್ಯ ಹ ।
ಅಬ್ರುವಾಣಾ ಹಿಡಿಂಬೀ ತು ರಾಕ್ಷಸೀ ಪಾಂಡವಾನ್ ಪ್ರತಿ ॥೧॥

ರಾಕ್ಷಸನ ತಂಗಿಯಾದ ಹಿಡಿಂಬಿಯು ಮಾತನಾಡದೆ ಶೀಘ್ರವಾಗಿ ಪಾಂಡವರನ್ನು ಹಿಂಬಾಲಿಸಿದಳು.

ಅಭಿವಾದ್ಯ ಚ ತಾನ್ ಕುಂತೀಂ ಧರ್ಮರಾಜಂ ಚ ಪಾಂಡವಮ್ ।
ಅಭಿಪೂಜ್ಯ ಚ ತಾನ್ ಸರ್ವಾನ್ ಭೀಮಸೇನಮಭಾಷತ ॥೨॥

ಅವಳು ಪಾಂಡವರೆಲ್ಲರಿಗೂ ಕುಂತಿಗೂ ಮತ್ತು ಧರ್ಮರಾಜನಿಗೂ ನಮಸ್ಕಾರವನ್ನು ಮಾಡಿ ಅವರೆಲ್ಲರನ್ನೂ ಸತ್ಕರಿಸಿ ಭೀಮಸೇನನನ್ನು ಕುರಿತು ಮಾತನಾಡಿದಳು.

ಅಹಂ ತೇ ದರ್ಶನಾದೇವ ಮನ್ಮಥಸ್ಯ ವಶಂ ಗತಾ ।
ಕ್ರೂರಂ ಭ್ರಾತೃವಚೋ ಹಿತ್ವಾ ಸಾ ತ್ವಾಮೇವಾನಿರುಂಧತೀ ॥೩॥

ನಾನು ನಿನ್ನ ದರ್ಶನಮಾತ್ರದಿಂದ ಕಾಮವಶಳಾಗಿ ಕ್ರೂರನಾದ ಅಣ್ಣನ ಮಾತುಗಳನ್ನು ನಡೆಸದೆ ನಿನಗೆ ಯಾವ ವಿರೋಧವನ್ನೂ ಮಾಡದೆ ನಿನ್ನನ್ನು ಹಿಂಬಾಲಿಸಿದ್ದೇನೆ.

ರಾಕ್ಷಸೇ ರೌದ್ರಸಂಕಾಶೇ ತವಾಪಶ್ಯಂ ವಿಚೇಷ್ಟಿತಮ್ ।
ಅಹಂ ಶುಶ್ರೂಷುರಿಚ್ಛೇಯಂ ತವ ಗಾತ್ರಂ ನಿಷೇವಿತುಮ್ ॥೪॥

ಭಯಂಕರನಾದ ರಾಕ್ಷಸನಲ್ಲಿ ನೀನು ಬಲಪ್ರದರ್ಶನ ಮಾಡಿದುದನ್ನು ನೋಡಿದೆನು. ನಾನು ಪತ್ನಿಯಾಗಿ ನಿನ್ನ ಸೇವೆಯನ್ನು ಮಾಡಿ ನಿನ್ನ ಶರೀರ ಸುಖವನ್ನು ಸವಿಯಲು ಬಯಸುತ್ತೇನೆ.

ಭೀಮಸೇನಃ

ಸ್ಮರಂತಿ ವೈರಂ ರಕ್ಷಾಂಸಿ ಮಾಯಾಮಾಸ್ಥಾಯ ಮೋಹಿನೀಮ್ ।
ಹಿಡಿಂಬಿ ವ್ರಜ ಪಂಥಾನಂ ಮಾ ತ್ವಂ ಭ್ರಾತೃನಿಷೇವಿತಮ್ ॥೫॥

ಹಿಡಿಂಬಿ, ರಾಕ್ಷಸರು ಪೂರ್ವವೈರವನ್ನು ನೆನೆದು ಮೋಹಕವಾದ ಮಾಯಾರೂಪವನ್ನು ಧರಿಸಿ (ವಂಚಿಸುತ್ತಾರೆ). ನಿನ್ನ ದಾರಿ ಹಿಡಿದು ನೀನು ಹೋಗು. ನಿನ್ನ ಅಣ್ಣನ ದಾರಿಯನ್ನು ಹಿಡಿಯಬೇಡ.

ಯುಧಿಷ್ಠಿರಃ

ಕ್ರುದ್ಧೋಽಪಿ ಪುರುಷವ್ಯಾಘ್ರ ಭೀಮ ಮಾ ಚ ಸ್ತ್ರಿಯಂ ವಧೀಃ ।
ಶರೀರಗುಪ್ತ್ಯಭ್ಯಧಿಕಂ ಧರ್ಮಂ ಗೋಪಾಯ ಪಾಂಡವ ॥೬॥

ಪುರುಷವ್ಯಾಘ್ರನಾದ ಭೀಮನೇ, ಕೋಪಗೊಂಡರೂ ಸ್ತ್ರೀವಧೆಯನ್ನು ಮಾಡಬೇಡ. ಶರೀರರಕ್ಷಣೆಯು ದೊಡ್ಡ ಧರ್ಮ. ಪಾಂಡವನೇ, ಅದನ್ನು ಪಾಲಿಸು.

ವಧಾಭಿಪ್ರಾಯಮವಧೀಸ್ತ್ವಂ ಮಹಾಬಲರಾಕ್ಷಸಮ್ ।
ರಕ್ಷಸಸ್ತಸ್ಯ ಭಗಿನೀ ಕಿಂ ನಃ ಕ್ರುದ್ಧಾ ಕರಿಷ್ಯತಿ ॥೭॥

ಕೊಲ್ಲುವ ಅಭಿಪ್ರಾಯದಿಂದ ಬಂದಿದ್ದ ಮಹಾಬಲನಾದ ರಾಕ್ಷಸನನ್ನು ನೀನು ಕೊಂದೆ. ಈ ರಾಕ್ಷಸನ ತಂಗಿಯ ಕ್ರುದ್ಧಳಾದರೂ ನಮಗೇನು ಮಾಡಬಲ್ಲಳು.

ವೈಶಂಪಾಯನಃ

ಹಿಡಿಂಬೀ ತು ತತಃ ಕುಂತೀಮಭಿವಾದ್ಯ ಕೃತಾಂಜಲಿಃ ।
ಯುಧಿಷ್ಠಿರಂ ತು ಕೌಂತೇಯಮಿದಂ ವಚನಮಬ್ರವೀತ್ ॥೮॥

ಆಗ ಹಿಡಿಂಬಿಯು ಕುಂತಿಗೆ ನಮಸ್ಕರಿಸಿ ಕೈಗಳನ್ನು ಮುಗಿದು ಕುಂತೀಪುತ್ರನಾದ ಯುಧಿಷ್ಠಿರನ್ನು ಉದ್ದೇಶಿಸಿ ಮಾತನಾಡಿದಳು.

ಆರ್ಯೇ ಜಾನಾಸಿ ಯದ್ ದುಃಖಮಿಹ ಸ್ತ್ರೀಣಾಮನಂಗಜಮ್ ।
ತದಿದಂ ಮಾಮನುಪ್ರಾಪ್ತಂ ಭೀಮಸೇನಕೃತಂ ಶುಭೇ ॥೯॥

ಪೂಜ್ಯೆಯೇ, ಸ್ತ್ರೀಯರಿಗೆ ಕಾಮೋದ್ರೇಕದಿಂದ ಉಂಟಾಗುವ ದುಃಖವು ಏನೆಂದು ನೀನು ಬಲ್ಲೆ. ಶುಭಳಾದವಳೇ, ನನಗೆ ಈಗ ಭೀಮಸೇನನ ಸಲುವಾಗಿ ಆ ಸಂಕಟವು ಪ್ರಾಪ್ತವಾಗಿದೆ.

ಸಾऽಹಂ ತತ್ ಪರಮಂ ದುಃಖಂ ಸಹೇ ಕಾಲಪ್ರತೀಕ್ಷಯಾ ।
ಸೋऽಯಮಭ್ಯಾಗತಃ ಕಾಲೋ ಭವಿತಾ ಮೇ ಸುಖಾವಹಃ ॥೧೦॥

ನಾನು ಕಾಲವನ್ನು ನಿರೀಕ್ಷಿಸುತ್ತಾ ಇಷ್ಟು ದಿನ ಆ ಪರಮದುಃಖವನ್ನು ಸಹಿಸಿದೆ. ಈಗ ನನಗೆ ಸುಖವನ್ನು ಉಂಟು ಮಾಡುವ ಕಾಲವು ಒದಗಿದೆ.

ಮಯಾ ಹ್ಯುತ್ಸೃಜ್ಯ ಸುಹೃದೋ ಜ್ಞಾತೀನ್ ಸ್ವಂ ಧರ್ಮಮೇವ ಚ ।
ವೃತೋऽಯಂ ಪುರುಷವ್ಯಾಘ್ರಸ್ತವ ಪುತ್ರಃ ಪತಿಃ ಶುಭಃ ॥೧೧॥

ನಾನು ಸುಹೃದರನ್ನು, ಬಂಧುಗಳನ್ನು ಮತ್ತು ನನ್ನ ಧರ್ಮವನ್ನೂ ತೊರೆದು ಪುರುಷವ್ಯಾಘ್ರನಾದ ಈ ನಿನ್ನ ಶುಭಪುತ್ರನನ್ನು ಪತಿಯೆಂದು ವರಿಸಿದೆ.

ವರೇಣಾನೇನ ತು ವಿನಾ ನಾಹಂ ಜೀವಿತುಮುತ್ಸಹೇ ।
ತದರ್ಹಸಿ ಕೃಪಾಂ ಕರ್ತುಂ ಮಯಿ ತ್ವಂ ವರವರ್ಣಿನಿ ॥೧೨॥

ಈ ಪತಿಯನ್ನು ಬಿಟ್ಟು ನಾನು ಖಂಡಿತವಾಗಿ ಜೀವಿಸಿರಲಾರೆ. ಸುಂದರಿಯೇ ನೀನು ನನ್ನಲ್ಲಿ ಕೃಪೆಯನ್ನು ಮಾಡಬೇಕು.

ತ್ವಂ ಮಾಂ ಮೂಢೇತಿ ವಾ ಮತ್ವಾ ಭಕ್ತಾಂ ವಾऽನುಗತೇತಿ ವಾ ।
ಭರ್ತ್ರಾऽನೇನ ಮಹಾಭಾಗೇ ಯೋಜಯಸ್ವ ಸುತೇನ ತೇ ॥೧೩॥

ನೀನು ನನ್ನನ್ನು ಮೂಢಳೆಂದಾಗಲೀ ನಿಮ್ಮ ಭಕ್ತಳೆಂದಾಗಲೀ, ಅಥವಾ ನಿಮ್ಮನ್ನು ಹಿಂಬಾಲಿಸಿದವಳೆಂದಾಗಲೀ ತಿಳಿದುಕೋ. ಆದರೆ ಮಹಾನುಭಾವಳೇ, ನಿನ್ನ ಪುತ್ರನ ಜೊತೆಯಲ್ಲಿ ಮಾತ್ರ ನನಗೆ ಸಂಬಂಧವನ್ನು ಘಟನೆ ಮಾಡಬೇಕು.

ತಮುಪಾದಾಯ ಗಚ್ಛೇಯಂ ಯಥೇಷ್ಟಂ ದೇವರೂಪಿಣಮ್ ।
ಪುನಶ್ಚೈವಾನಯಿಷ್ಯಾಮಿ ವಿಶ್ವಾಸಂ ಕುರು ಮೇ ಶುಭೇ ॥೧೪॥

ನಾನು ದೇವರೂಪಿಯಾದ ಅವನನ್ನು ಕರೆದುಕೊಂಡು ಬೇಕಾದ ಕಡೆಗೆ ಹೋಗುತ್ತೇನೆ ಮತ್ತು ಪುನಃ ಅವನನ್ನು ತಂದು ನಿಮಗೆ ಒಪ್ಪಿಸುವೆನು. ಶುಭಳಾದವಳೇ, ನನ್ನ ಮಾತನ್ನು ನಂಬು.

ಅಹಂ ಹಿ ಸಮಯೇ ಲಿಪ್ಸೇ ಪ್ರಾಗ್ ಭ್ರಾತುರಪವರ್ಜನಾತ್ ।
ತತಃ ಸೋಽಭ್ಯಪತದ್ ರಾತ್ರೌ ಭೀಮಸೇನಜಿಘಾಂಸಯಾ ॥೧೫॥

ನಾನು ನನ್ನ ಅಣ್ಣನು ಬರುವುದಕ್ಕಿಂತ ಮುಂಚೆಯೇ ಇವನನ್ನು ಹೊಂದಲು ಬಯಸಿದೆ. ಆದರೆ, ಭೀಮಸೇನನನ್ನು ಕೊಲ್ಲುವ ಇಚ್ಛೆಯಿಂದ ರಾತ್ರಿಯೇ ನನ್ನ ಅಣ್ಣನು ಎರಗಿದನು.

ಯಥಾಯಥಾ ವಿಕ್ರಮತೇ ಯಥಾಽರಿಮಧಿತಿಷ್ಠತಿ ।
ತಥಾತಥಾ ಸಮಾಧಾಯ ಪಾಂಡವಂ ಕಾಮಮೋಹಿತಾ ॥೧೬॥

ಭೀಮಸೇನನು ಶತ್ರುವನ್ನು ಹೇಗೆ ಹೇಗೆ ಮೆಟ್ಟಿ ಅವನ ತಲೆಯ ಮೇಲೆ ನಿಂತನೋ, ಹಾಗೆ ಹಾಗೆ ನಾನು ಕಾಮಮೋಹಿತಳಾಗಿ ಮನಸ್ಸಿಗೆ ಸಮಾಧಾನವನ್ನು ಮಾಡಿಕೊಂಡೆ.

ನ ಯಾತುಧಾನ್ಯಹಂ ತ್ವಾರ್ಯೇ ನ ಚಾಸ್ಮಿ ರಜನೀಚರೀ ।
ಈಶಾ ರಕ್ಷಸ್ತನಾ ಯಾಸ್ಮಿ ರಾಜ್ಞಿ ಸಾಲಕಟಂಕಟೀ ॥೧೭॥

ಆರ್ಯಳೇ, ನಾನು ಶಾಶ್ವತನರಕದಲ್ಲಿ ಬೀಳುವಂತಹ ಅಯೋಗ್ಯಳಲ್ಲ. ನಾನು ಹಿಂದೆ ಎಂದೂ ರಾಕ್ಷಸಯೋನಿಯಲ್ಲಿ ಜನಿಸಿಲ್ಲ. ರಾಣಿಯೇ, ದೇವರ ಇಚ್ಛೆಯಂತೆ ನಾನು ಹಿಡಿಂಬನ ತಾಯಿಯ ಉದರದಲ್ಲಿ ಹುಟ್ಟಿ ರಾಕ್ಷಸಿಯಾಗಿದ್ದೇನೆ. (ಸಾಲಕಟಂಕಟ ಎಂದರೆ ನಡೆಯುವಾಗ ಸಾಲವೃಕ್ಷಗಳಿಗೆ ಡಿಕ್ಕಿ ಹೊಡೆದು ಕಟಕಟ ಶಬ್ದವನ್ನುಂಟು ಮಾಡುವವರು ಸಾಲಕಟಂಕಟರು. ಅವರ ತಂಗಿ ಅಥವಾ ಮಗಳು ಸಾಲಕಟಂಕಟಿ.)

ಪುತ್ರೇಣ ತವ ಸಂಯುಕ್ತಾ ಯುವತಿರ್ದೇವವರ್ಣಿನೀ ।
ಸರ್ವಾನ್ ವೋಽಹಮುಪಸ್ಥಾಸ್ಯೇ ಪುರಸ್ಕೃತ್ಯ ವೃಕೋದರಮ್ ॥೧೮॥

ದೇವಲೋಕದ ಕನ್ಯೆಯಾದ, ಯುವತಿಯಾದ ನಾನು, ನಿನ್ನ ಪುತ್ರನಿಂದ ಸಂಯುಕ್ತಳಾಗಿ ಭೀಮಸೇನನನ್ನು ಮುಂದೆ ಮಾಡಿಕೊಂಡು ನಿಮ್ಮೆಲ್ಲರ ಸೇವೆಯನ್ನು ಮಾಡುತ್ತೇನೆ.

ಅಪ್ರಮತ್ತಾ ಪ್ರಮತ್ತೇಷು ಶುಶ್ರೂಷುರನಹಂವದಾ ।
ವ್ರಜಿನಂ ತಾರಯಿಷ್ಯಾಮಿ ದಾಸೀವಚ್ಚ ನರರ್ಷಭಾಃ ॥೧೯॥

ನರರ್ಷಭರೇ, ನೀವು ಪ್ರಮತ್ತರಾದರೂ ನಾನು ಎಚ್ಚರಿಕೆಯಿಂದ ಇದ್ದು ಅಹಂಕಾರದ ಮಾತುಗಳನ್ನಾಡದೆ ನಿಮ್ಮ ಸೇವೆಯನ್ನು ಮಾಡಿಕೊಂಡು, ನಿಮ್ಮನ್ನು ದಾಸಿಯಂತೆ ಕಷ್ಟದಿಂದ ದಾಟಿಸುತ್ತೇನೆ.

ಪೃಷ್ಠೇನ ವೋ ವಹಿಷ್ಯಾಮಿ ವಿಮಾನಂ ಸುಕೃತಾನಿವ ।
ಯೂಯಂ ಪ್ರಸಾದಂ ಕುರುತ ಭೀಮಸೇನೋ ಭಜೇತ ಮಾಮ್ ॥

ಪುಣ್ಯವಂತರನ್ನು ವಿಮಾನವು ಹೊತ್ತುಕೊಂಡು ಹೋದಂತೆ ನಾನು ನಿಮ್ಮೆಲ್ಲರನ್ನೂ ನನ್ನ ಬೆನ್ನಿನ ಮೇಲೆ ಕೂರಿಸಿಕೊಂಡು ಕರೆದುಕೊಂಡು ಹೋಗುವೆನು. ನೀವೆಲ್ಲರೂ ಭೀಮಸೇನನು ನನ್ನನ್ನು ಸ್ವೀಕರಿಸುವಂತೆ ಅನುಗ್ರಹವನ್ನು ಮಾಡಿ.

ಏವಂ ಬ್ರುವಂತೀಹ ತಥಾ ಪ್ರತ್ಯಾಖ್ಯಾತಾ ಕ್ರಿಯಾಂ ಪ್ರತಿ ।
ಭೂಮ್ಯಾಂ ದುಷ್ಕೃತಿನೋ ಲೋಕಾನ್ ಗಮಿಷ್ಯೇಽಹಂ ನ ಸಂಶಯಃ ॥

ನಾನು ಹೀಗೆ ಮಾತನಾಡಿದರೂ ನನಗೆ ಉದ್ದಿಷ್ಟವಾದ ಕ್ರಿಯೆಯನ್ನು ನೀನು ನಿರಾಕರಿಸದರೆ, ನಾನು ಭೂಮಿಯಲ್ಲಿ ದುಷ್ಕರ್ಮಗಳನ್ನು ಮಾಡಿದವರು ಹೊಂದುವ ಲೋಕಗಳನ್ನು ಹೊಂದುವೆನು ಎಂಬ ವಿಷಯದಲ್ಲಿ ಸಂಶಯವಿಲ್ಲ. (ವಿವಾಹ ಪ್ರಸ್ತಾಪ ಪ್ರಸಂಗವಾದುದರಿಂದ 'ಆತ್ಮಹತ್ಯೆ' ಎಂಬ ಅಪಶಕುನದ ಶಬ್ದವನ್ನು ಆಡದೆ, ಹಿಡಿಂಬಿಯು ಧ್ವನಿಯಿಂದ ಸೂಚಿಸುತ್ತಾಳೆ)

ಅಹಂ ಹಿ ಮನಸಾ ಧ್ಯಾತ್ವಾ ಸರ್ವಂ ವೇತ್ಸ್ಯಾಮಿ ಸರ್ವದಾ ।
ಆಪನ್ನಿಸ್ತರಣೇ ಪ್ರಾಣಾನ್ ಧಾರಯೇದ್ ಯೇನ ಕೇನಚಿತ್ ॥೨೨॥

ನಾನು ಮನಸ್ಸಿನಿಂದಲೇ ಯೋಚಿಸಿ ಯಾವಾಗಲೂ ಎಲ್ಲವನ್ನೂ ತಿಳಿಯುತ್ತೇನೆ. ಆಪತ್ತನ್ನು ದಾಟಿ ಯಾವ ಉಪಾಯದಿಂದ ಪ್ರಾಣಗಳನ್ನು ರಕ್ಷಿಸಿಕೊಳ್ಳಬೇಕು ಎಂದೂ ನನಗೆ ತಿಳಿದಿದೆ.

ಸರ್ವಮಾಪತ್ಸು ಕರ್ತವ್ಯಂ ತದ್ ಧರ್ಮಮನುಪಶ್ಯತಾ ।
ಆಪತ್ಸು ಯೋ ಧಾರಯತಿ ಸ ವೈ ಧರ್ಮವಿದುತ್ತಮಃ ॥೨೩॥

ಧರ್ಮದಲ್ಲಿ ದೃಷ್ಟಿಯಿದ್ದವನು ಆಪತ್ತಿನಲ್ಲಿ ಎಲ್ಲವನ್ನೂ ಮಾಡಬೇಕಾಗುತ್ತದೆ. ಇನ್ನೊಬ್ಬರಿಗೆ ಆಪತ್ತು ಒದಗಿದಾಗ ಯಾವನು ಅವರ ಪ್ರಾಣಗಳನ್ನು ಉಳಿಸುತ್ತಾನೋ ಅವನು ಧರ್ಮಜ್ಞರಲ್ಲಿ ಶ್ರೇಷ್ಠನಾದವನು.

ವ್ಯಸನಂ ಹ್ಯೇವ ಧರ್ಮಸ್ಯ ಧರ್ಮಿಣಾಮಾಪದುಚ್ಯತೇ ।
ಪುಣ್ಯಾತ್ ಪ್ರಾಣಾನ್ ಧಾರಯತಿ ಪುಣ್ಯಂ ವೈ ಪ್ರಾಣಧಾರಣಮ್ ॥

ಧರ್ಮಿಷ್ಠರಾದವರಿಗೆ ಧರ್ಮಕ್ಕೆ ಉಂಟಾದ ವ್ಯಸನವೇ ಆಪತ್ತು ಎನಿಸುತ್ತದೆ. ಪ್ರಾಣಧಾರಣೆಯು ಪುಣ್ಯವಾದುದು. ಆದ್ದರಿಂದ ಧರ್ಮಾತ್ಮರು ಆಪತ್ತಿನಲ್ಲಿರುವವರಿಗೆ ಸಹಾಯವನ್ನು ಮಾಡಿ ಅವರ ಪ್ರಾಣಗಳನ್ನು ಉಳಿಸುತ್ತಾರೆ. (ನನ್ನನ್ನು ಪತ್ನಿಯಾಗಿ ಸ್ವೀಕರಿಸಿ ನನ್ನ ಸಂಕಟವನ್ನು ಪರಿಹರಿಸುವ ಯೋಗ್ಯತೆ ಮತ್ತು ಸಾಮರ್ಥ್ಯ ನಿಮಗಿದೆ. ನೀವು ಧರ್ಮಿಷ್ಠರು. ಹೀಗೆ ಮಾಡದಿದ್ದರೆ ನಿಮ್ಮ ಧರ್ಮಕ್ಕೆ ಆಪತ್ತು ಬರುತ್ತದೆ. ಆದ್ದರಿಂದ ನನ್ನನ್ನು ಸ್ವೀಕರಿಸಿ ನಿಮ್ಮ ಧರ್ಮವನ್ನು ರಕ್ಷಿಸಿಕೊಳ್ಳಿ.)

ಯೇನಯೇನ ಚರೇದ್ ಧರ್ಮಂ ತಸ್ಮಿನ್ ಗರ್ಹಾ ನ ವಿದ್ಯತೇ ।
ಮಹತೋಽತ್ರ ಸ್ತ್ರಿಯಂ ಕಾಮಾದ್ ಬಾಧಿತಾಂ ತ್ರಾಹಿ ಮಾಮಪಿ ॥

ಯಾವ ಯಾವ ರೀತಿಯಿಂದ ಧರ್ಮದ ಆಚರಣೆ ಉಂಟಾಗಿ ಧರ್ಮವು ಉಳಿಯುತ್ತದೆಯೋ ಅದು ಯಾವುದೂ ನಿಂದ್ಯವಲ್ಲ. ಅತಿಯಾದ ಕಾಮದಿಂದ ಪೀಡಿಸಲ್ಪಟ್ಟ ಸ್ತ್ರೀಯಾದ ನನ್ನನ್ನೂ ಸಹ ರಕ್ಷಿಸಿ.

ಧರ್ಮಾರ್ಥಕಾಮಮೋಕ್ಷೇಷು ದಯಾಂ ಕುರ್ವಂತಿ ಸಾಧವಃ ।
ತಂ ತು ಧರ್ಮಮಿತಿ ಪ್ರಾಹುರ್ಮುನಯೋ ಧರ್ಮವತ್ಸಲಾಃ ॥೨೬॥

ಸಜ್ಜನರು ತಮಗೆ ಧರ್ಮಾರ್ಥಕಾಮಮೋಕ್ಷಗಳು ಸಿದ್ಧವಾಗಿದ್ದರೂ ಅಧಮಜನರಲ್ಲಿ ದಯೆಯನ್ನು ಮಾಡುತ್ತಾರೆ. ಧರ್ಮತ್ಸಲರಾದ ಋಷಿಗಳು ದಯೆಯನ್ನು ಶ್ರೇಷ್ಠವಾದ ಧರ್ಮವೆಂದು ಹೇಳುತ್ತಾರೆ.

ದಿವ್ಯಜ್ಞಾನೇನ ಪಶ್ಯಾಮಿ ಅತೀತಾನಾಗತಾನಹಮ್ ।
ತಸ್ಮಾದ್ ವಕ್ಷ್ಯಾಮಿ ವಃ ಶ್ರೇಯ ಆಸನ್ನಂ ಸರ ಉತ್ತಮಮ್ ॥೨೭॥

ನಾನು ನನ್ನ ದಿವ್ಯಜ್ಞಾನದಿಂದ ಭೂತ ಮತ್ತು ಭವಿಷ್ಯತ್ತಿನ ಘಟನೆಗಳನ್ನು ನೋಡುತ್ತೇನೆ. ಆದ್ದರಿಂದ ನಿಮ್ಮ ಶ್ರೇಯಸ್ಸಿಗಾಗಿ ಹೇಳುತ್ತಿದ್ದೇನೆ. ಹತ್ತಿರದಲ್ಲಿಯೇ ದಿವ್ಯವಾದ ಸರೋವರವಿದೆ.

ಅತ್ರ ಶ್ರಾಂತಾಃ ಪುನಃ ಸ್ನಾತ್ವಾ ವಿಶ್ರಾಮ್ಯ ಚ ವನಸ್ಪತೌ ।
ಶ್ವಃ ಪ್ರಭಾತೇ ಮಹದ್ಭೂತಂ ಪ್ರಾದುರ್ಭೂತಂ ಜನಾರ್ದನಮ್ ।
ವ್ಯಾಸಂ ಕಮಲಪತ್ರಾಕ್ಷಂ ದೃಷ್ಟ್ವಾ ಶೋಕಂ ವಿಹಾಸ್ಯಥ ॥೨೮॥

ದಣಿದ ನೀವು ಇಲ್ಲಿ ಸ್ನಾನ ಮಾಡಿ ಈ ವನಸ್ಪತಿಯ ಕೆಳಗೆ ವಿಶ್ರಾಂತಿಯನ್ನು ತೆಗೆದುಕೊಳ್ಳಿ. ನಾಳೆಯ ಬೆಳಿಗ್ಗೆ ಶ್ರೇಷ್ಠವ್ಯಕ್ತಿತ್ವದವರಾದ ಜನಾರ್ದನರಾದ, ಕಮಲನಯನರಾದ ವ್ಯಾಸರನ್ನು ಸಂದರ್ಶನ ಮಾಡಿ ನಿಮ್ಮ ಶೋಕವನ್ನು ಕಳೆದುಕೊಳ್ಳುವಿರಿ.

ಧಾರ್ತರಾಷ್ಟ್ರಾದ್ ವಿವಾಸಶ್ಚ ದಹನಂ ವಾರಣಾವತೇ ।
ತ್ರಾಣಂ ಚ ವಿದುರಾತ್ ತುಭ್ಯಂ ವಿದಿತಂ ಜ್ಞಾನಚಕ್ಷುಷಾ ।
ಆವಾಸೇ ಶಾಲಿಹೋತ್ರಸ್ಯ ಸ ಚ ವಾಸಂ ವಿಧಾಸ್ಯತಿ ॥೨೯॥

ವರ್ಷವಾತಾತಪಸಹ ಅಯಂ ಪುಣ್ಯೋ ವನಸ್ಪತಿಃ ।
ಪೀತಮಾತ್ರೇ ತು ಪಾನೀಯೇ ಕ್ಷುತ್ಪಿಪಾಸೇ ವಿನಶ್ಯತಃ ॥೩೦॥

ದುರ್ಯೋಧನನಿಂದ ನಿಮ್ಮ ನಿಷ್ಕಾಸನ, ವಾರಣಾವತದಲ್ಲಿ ಅರಗಿನಮನೆಯಲ್ಲಿ ದಹನ, ವಿದುರನಿಂದ ನಿಮ್ಮ ರಕ್ಷಣೆ, ಎಲ್ಲವನ್ನೂ ನಾನು ಜ್ಞಾನಚಕ್ಷುಸ್ಸಿನಿಂದ ತಿಳಿದಿದ್ದೇನೆ. ವೇದವ್ಯಾಸರು ನಿಮ್ಮನ್ನು ಶಾಲಿಹೋತ್ರರ ಆಶ್ರಮದಲ್ಲಿ ವಾಸ ಮಾಡುವಂತೆ ಹೇಳುತ್ತಾರೆ. ಈ ಪವಿತ್ರವಾದ ವನಸ್ಪತಿಯು ಮಳೆ, ಬಿಸಿಲು, ಗಾಳಿಗಳಿಂದ ರಕ್ಷಣೆಯನ್ನು ಕೊಡುತ್ತದೆ. ಈ ಸರೋವರದ ನೀರನ್ನು ಕುಡಿದ ತಕ್ಷಣ ಹಸಿವು ಬಾಯಾರಿಕೆಗಳು ಮಾಯವಾಗುತ್ತವೆ.

ತಪಸಾ ಶಾಲಿಹೋತ್ರೇಣ ಸರೋ ವೃಕ್ಷಶ್ಚ ನಿರ್ಮಿತಃ ।
ಕಾದಂಬಾಃ ಸಾರಸಾ ಹಂಸಾಃ ಕುರರ್ಯಃ ಕುರರೈಃ ಸಹ ।
ರುವಂತಿ ಮಧುರಂ ಗೀತಂ ಗಾಂಧರ್ವಸ್ವನಮಿಶ್ರಿತಮ್ ॥೩೧॥

ಶಾಲಿಹೋತ್ರರು ತಮ್ಮ ತಪಸ್ಸಿನಿಂದ ಈ ಸರೋವರವನ್ನೂ ಮತ್ತು ವೃಕ್ಷವನ್ನೂ ನಿರ್ಮಿಸಿದ್ದಾರೆ. ಇಲ್ಲಿ ಕಾದಂಬಗಳು, ಸಾರಸಗಳು, ಹಂಸಗಳೂ, ಕುರರ ಕುರರಿಗಳು, ಮಧುರವಾಗಿ ಗಾನ ಮಾಡುತ್ತಿವೆ. ಇದರ ಜೊತೆಯಲ್ಲಿ ಗಂಧರ್ವಗಾನವೂ ಮಿಶ್ರಿತವಾಗಿದೆ.

ವೈಶಂಪಾಯನಃ

ತಸ್ಯಾಸ್ತದ್ವಚನಂ ಶ್ರುತ್ವಾ ಕುಂತೀ ವಚನಮಬ್ರವೀತ್ ।
ಯುಧಿಷ್ಠಿರಂ ಮಹಾಪ್ರಾಜ್ಞಂ ಸರ್ವಶಾಸ್ತ್ರವಿಶಾರದಮ್ ॥೩೨॥

ಅವಳ ಆ ಮಾತುಗಳನ್ನು ಕೇಳಿ ಕುಂತಿಯು ಸರ್ವಶಾಸ್ತ್ರವಿಶಾರದನಾದ, ಮಹಾಪ್ರಾಜ್ಞನಾದ ಯುಧಿಷ್ಠಿರನನ್ನು ಕುರಿತು ಮಾತನಾಡಿದಳು.

ತ್ವಂ ಹಿ ಧರ್ಮಭೃತಾಂ ಶ್ರೇಷ್ಠಃ ಮಯೋಕ್ತಂ ಶೃಣು ಭಾರತ ।
ರಾಕ್ಷಸ್ಯೇಷಾ ಹಿ ವಾಕ್ಯೇನ ಧರ್ಮಂ ವದತಿ ಸಾಧು ವೈ ॥೩೩॥

ಭಾರತನೇ, ಧರ್ಮಾಚರಣೆ ಮಾಡುವವರಲ್ಲಿ ನೀನೇ ಶ್ರೇಷ್ಠನಾದವನು. ನನ್ನ ಮಾತನ್ನು ಕೇಳು. ಈ ರಾಕ್ಷಸಿಯು ತನ್ನ ಮಾತುಗಳಿಂದ ಸರಿಯಾದ ಧರ್ಮವನ್ನೇ ನುಡಿಯುತ್ತಿದ್ದಾಳೆ.

ಭಾವೇನ ದುಷ್ಟಾ ಭೀಮಂ ಸಾ ಕಿಂ ಕರಿಷ್ಯತಿ ರಾಕ್ಷಸೀ ।
ಭಜತಾಂ ಪಾಂಡವಂ ವೀರಮಪತ್ಯಾರ್ಥಂ ಯದೀಚ್ಛಸಿ ॥೩೪॥

ಅವಳ ಮನಸ್ಸಿನಲ್ಲಿ ದುಷ್ಟಭಾವನೆ ಇದ್ದರೆ, ಅವಳು ಭೀಮಸೇನನಿಗೆ ಏನು ಮಾಡಬಲ್ಲಳು? ಆದ್ದರಿಂದ ನಿನ್ನ ಸಮ್ಮತಿಯಿದ್ದರೆ ಅವಳು ಪುತ್ರನನ್ನು ಪಡೆಯುವ ಸಲುವಾಗಿ ಭೀಮಸೇನನನ್ನು ಹೊಂದಲಿ.

ಯುಧಿಷ್ಠಿರಃ

ಏವಮೇತದ್ ಯಥಾऽऽತ್ಥ ತ್ವಂ ಹಿಡಿಂಬೇ ನಾತ್ರ ಸಂಶಯಃ ।
ಸ್ಥಾತವ್ಯಂ ತು ತ್ವಯಾ ಧರ್ಮೇ ಯಥಾ ಬ್ರೂಯಾಃ ಸುಮಧ್ಯಮೇ ॥

ಹಿಡಿಂಬಿಯೇ, ನೀನು ಹೇಳಿದಂತೆ ಎಲ್ಲವೂ ಸರಿ. ಇದರಲ್ಲಿ ಸಂಶಯವಿಲ್ಲ. ಸುಮಧ್ಯಮಳೇ, ನೀನು ಈಗ ಹೇಗೆ ಮಾತನಾಡುತ್ತಿರುವೆಯೋ ಹಾಗೆಯೇ ಮುಂದೆಯೂ ಧರ್ಮದಲ್ಲಿಯೇ ನಿಲ್ಲಬೇಕು.

ನಿತ್ಯಂ ಕೃತಾಹ್ನಿಕಾ ಸ್ನಾತಾ ಕೃತಶೌಚಾ ಸುರೂಪಿಣೀ ।
ಸ್ನಾತಂ ಕೃತಾಹ್ನಿಕಂ ಭದ್ರೇ ಕೃತಕೌತುಕಮಂಗಲಮ್ ।
ಭೀಮಸೇನಂ ಭಜೇಥಾಸ್ತ್ವಮುದಿತೇ ವೈ ದಿವಾಕರೇ ॥೩೬॥

ಭದ್ರೆಯೇ, ನೀನು ನಿತ್ಯವೂ ಪ್ರಾತಃಕಾಲದಲ್ಲಿ ಶುಚಿಯಾಗಿ ಸ್ನಾನವನ್ನು ಮಾಡಿ, ಆಹ್ನಿಕವನ್ನು ಮುಗಿಸಿ ಅಲಂಕೃತಳಾಗಿ. ಸ್ನಾನವನ್ನು ಮಾಡಿ ಆಹ್ನಿಕವನ್ನು ಮುಗಿಸಿ ಮಂಗಳ ಕಾರ್ಯಗಳನ್ನು ಮುಗಿಸಿದ ಭೀಮಸೇನನನ್ನು ಸೂರ್ಯೋದಯವಾದ ನಂತರ ಸೇವಿಸು.

ಅಹಸ್ಸು ವಿಚರಾನೇನ ಯಥಾಕಾಮಂ ಮನೋಜವಾ ।
ಆನೇತವ್ಯಸ್ತ್ವಯಾ ಭದ್ರೇ ಭೀಮಸೇನಃ ಸದಾ ನಿಶಿ ।
ಪ್ರಾಕ್ ಸಂಧ್ಯಾತೋ ವಿಮೋಕ್ತವ್ಯೋ ರಕ್ಷಿತವ್ಯಶ್ಚ ನಿತ್ಯಶಃ ॥೩೭॥

ಮನೋಜವಳಾದ ನೀನು ಹಗಲಿನಲ್ಲಿ ನಿನ್ನ ಇಚ್ಛೆಯಂತೆ ಇವನ ಜೊತೆಯಲ್ಲಿ ಸಂಚರಿಸು. ರಾತ್ರಿಯ ಹೊತ್ತಿಗೆ ಭೀಮಸೇನನನ್ನು ನೀನು ಪುನಃ ತಂದು ಒಪ್ಪಿಸಬೇಕು. ನಿತ್ಯವೂ ಸೂರ್ಯಾಸ್ತಮಯಕ್ಕಿಂತ ಮುಂಚೆಯೇ ನೀನು ಭೀಮಸೇನನನ್ನು ಬಿಡಬೇಕು ಮತ್ತು ನಿನ್ನ ಜೊತೆಯಲ್ಲಿರುವಾಗ ಅವನನ್ನು ರಕ್ಷಿಸಬೇಕು.

ಏವಂ ರಮಸ್ವ ಭೀಮೇನ ಯಾವದ್ ಗರ್ಭಸ್ಯ ವೇದನಮ್ ।
ಏಷ ತೇ ಸಮಯೋ ಭದ್ರೇ ಶುಶ್ರೂಷ್ಯಶ್ಚಾಪ್ರಮತ್ತಯಾ ।
ನಿತ್ಯಾನುಕೂಲಯಾ ಭೂತ್ವಾ ಕರ್ತವ್ಯಂ ಶೋಭನಂ ತ್ವಯಾ ॥೩೮॥

ಭದ್ರೆ, ಹೀಗೆ ಗರ್ಭಧಾರಣೆಯಾಗಿದೆ ಎಂದು ತಿಳಿಯುವವವರೆಗೂ ಭೀಮನ ಜೊತೆಯಲ್ಲಿ ರಮಿಸು. ಇದು ನಿನಗೆ ನನ್ನ ನಿಬಂಧನೆ. ನಿತ್ಯವೂ ಎಚ್ಚರಿಕೆಯಿಂದಿದ್ದು ಅವನಿಗೆ ಅನುಕೂಲಳಾಗಿ ಒಳ್ಳೆಯ ಕಾರ್ಯಗಳನ್ನೇ ಮಾಡಿಕೊಂಡು ಅವನ ಶುಶ್ರೂಷೆಯನ್ನು ಮಾಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಸಪ್ತಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ಹಿಡಿಂಬವಧಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಐವತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ನೂರ ಐವತ್ತೆಂಟನೆಯ ಅಧ್ಯಾಯ

(ಪಾಂಡವರಿಂದ ಶಾಲಿಹೋತ್ರಸರೋವರಪ್ರಾಪ್ತಿ, ಭೀಮಹಿಡಿಂಬಿಯರ ವಿಹಾರ, ವ್ಯಾಸರ ಆಗಮನ ಮತ್ತು ಆಶ್ವಾಸನ)

ವೈಶಂಪಾಯನಃ

ಯುಧಿಷ್ಠಿರೇಣೈವಮುಕ್ತಾ ಕುಂತ್ಯಾ ಚಾಂಕೇऽಧಿರೋಪಿತಾ ।
ಭೀಮಾರ್ಜುನಾಂತರಗತಾ ಯಮಾಭ್ಯಾಂ ಚ ಪುರಸ್ಕೃತಾ ॥೧॥

ತಿರ್ಯಗ್ ಯುಧಿಷ್ಠಿರಂ ಯಾತಿ ಹಿಡಿಂಬಾ ಭೀಮಗಾಮಿನೀ ।
ಶಾಲಿಹೋತ್ರಸರೋ ರಮ್ಯಮಾಸೇದುಸ್ತೇ ಜಲಾರ್ಥಿನಃ ॥೨॥

ಯುಧಿಷ್ಠಿರನ ಈ ಮಾತುಗಳನ್ನು ಕೇಳಿ ಕುಂತಿಯು ಹಿಡಿಂಬಿಯನ್ನು ತನ್ನ ತೊಡೆಯ ಮೇಲೆ ಕೂಡಿಸಿಕೊಂಡಳು. ಅನಂತರ ಹಿಡಿಂಬಿಯು ಧರ್ಮರಾಜನ ಹಿಂದೆ, ನಕುಲ ಸಹದೇವರ ಮುಂದೆ, ಭೀಮಾರ್ಜುನರ ಮಧ್ಯದಲ್ಲಿ ವೇಗವಾಗಿ ನಡೆದಳು. ಜಲಾರ್ಥಿಗಳಾದ ಅವರೆಲ್ಲರೂ ಮನೋಹರವಾದ ಶಾಲಿಹೋತ್ರ ಸರೋವರವನ್ನು ತಲುಪಿದರು.

ತತ್ ತಥೇತಿ ಪ್ರತಿಜ್ಞಾಯ ಹಿಡಿಂಬಾ ರಾಕ್ಷಸೀ ತದಾ ।
ವನಸ್ಪತಿತಳಂ ಗತ್ವಾ ಪರಿಮೃಜ್ಯ ಯಥಾ ಗೃಹಾನ್ ॥೩॥

ಪಾಂಡವಾನಾಂ ಚ ವಾಸಂ ಸಾ ಕೃತ್ವಾ ಪರ್ಣಮಯಂ ತಥಾ ।
ಆತ್ಮನಶ್ಚ ತಥಾ ಕುಂತ್ಯಾ ಏಕೋದ್ದೇಶೇ ಚಕಾರ ಸಾ ॥೪॥

''ನಿಮ್ಮ ಸೇವೆಯನ್ನು ಮಾಡುತ್ತೇನೆ'' ಎಂದು ಪ್ರತಿಜ್ಞೆಮಾಡಿದ ಹಿಡಿಂಬಿಯು ಬೇಗ ವೃಕ್ಷಮೂಲಕ್ಕೆ ಹೋಗಿ ಮನೆಯನ್ನು ಗುಡಿಸಿ, ಸಾರಿಸಿ ಶುದ್ಧ ಮಾಡುವಂತೆ ಭೂಮಿಯನ್ನು ಶುದ್ಧಮಾಡಿ ಪಾಂಡವರಿಗೆ ವಾಸಕ್ಕೆ ಒಂದು ಪರ್ಣಶಾಲೆಯನ್ನು ಮಾಡಿ, ತನಗೂ ಮತ್ತು ಕುಂತಿಗೂ ಇನ್ನೊಂದು ಶಾಲೆಯನ್ನು ಅಲ್ಲಿಯೇ ಸ್ವಲ್ಪ ಉನ್ನತಪ್ರದೇಶದಲ್ಲಿ ಮಾಡಿದಳು.

ಸಹಿತಂ ಪಾಂಡವಾನಾಂ ಸಾ ಕೃತ್ವಾ ಶಯನಪಂಚಕಮ್ ।
ಆತ್ಮನಶ್ಚ ತಥಾ ಕುಂತ್ಯಾ ಏಕೋದ್ದೇಶೇ ಕೃತಂ ದ್ವಿಧಾ ॥೫॥

ಪಾಂಡವರಿಗೆ ಒಟ್ಟಿಗೆ ಐದು ಶಯನಗಳನ್ನು ಸಿದ್ಧಮಾಡಿ ತನಗೂ ಮತ್ತು ಕುಂತಿಗೂ ಆ ಉನ್ನತ ಪ್ರದೇಶದಲ್ಲಿ ಎರಡು ಶಯನಗಳನ್ನು ಸಿದ್ಧಪಡಿಸಿದಳು.

ಪಾಂಡವಾಸ್ತು ತತಃ ಸ್ನಾತ್ವಾ ಶುದ್ಧಾಃ ಸಂಧ್ಯಾಮುಪಾಸ್ಯ ಚ ।
ತೃಷಿತಾಃ ಕ್ಷುತ್ಪಿಪಾಸಾರ್ತಾ ಜಲಮಾತ್ರೇಣ ವರ್ತಯನ್ ॥೬॥

ಪಾಂಡವರು ಆಗ ಸ್ನಾನವನ್ನು ಮಾಡಿ ಶುದ್ಧರಾಗಿ ಸಂಧ್ಯೋಪಾಸನೆಯನ್ನು ಮಾಡಿ ಹಸಿವುಬಾಯಾರಿಕೆಗಳಿಂದ ಕೂಡಿದ್ದರೂ, ಕೇವಲ ಜಲವನ್ನು ಸೇವಿಸಿದರು.

ಶಾಲಿಹೋತ್ರಸ್ತತೋ ಜ್ಞಾತ್ವಾ ಕ್ಷುಧಾರ್ತಾನ್ ಪಾಂಡವಾಂಸ್ತದಾ ।
ಮನಸಾ ಚಿಂತಯಾಮಾಸ ಪಾನೀಯಂ ಭೋಜನಂ ಮಹತ್ ।
ತತಸ್ತೇ ಪಾಂಡವಾಃ ಸರ್ವೇ ವಿಶ್ರಾಂತಾಃ ಪೃಥಯಾ ಸಹ ॥೭॥

ಶಾಲಿಹೋತ್ರರು ಪಾಂಡವರು ಹಸಿವಿನಿಂದ ಬಳಲಿರುವುದನ್ನು ತಿಳಿದು. ಮನಸ್ಸಿನಲ್ಲಿಯೇ ಚಿಂತಿಸಿ ಪಾನೀಯವನ್ನೂ ಮತ್ತು ಒಳ್ಳೆಯ ಭೋಜನವನ್ನೂ ಅವರಿಗೆ

ತಂದುಕೊಟ್ಟರು. ಅನಂತರ ಪಾಂಡವರೆಲ್ಲರೂ ಕುಂತಿಯ ಜೊತೆಯಲ್ಲಿ ವಿಶ್ರಾಂತರಾದರು.

ಯಥಾ ಜತುಗೃಹೇ ವೃತ್ತಂ ರಾಕ್ಷಸೇನ ಕೃತಂ ಚ ಯತ್ ।
ಕೃತ್ವಾ ಕಥಾ ಬಹುವಿಧಾಃ ಕಥಾಂತೇ ಪಾಂಡುನಂದನಮ್ ।
ಕುಂತೀ ರಾಜಸುತಾ ವಾಕ್ಯಂ ಭೀಮಸೇನಮಥಾಬ್ರವೀತ್ ॥೮೪॥

ಜತುಗೃಹದಲ್ಲಿ ನಡೆದ ಘಟನೆಗಳನ್ನೂ, ಹಿಡಿಂಬನ ಯುದ್ಧದ ವೈಖರಿಯನ್ನೂ ಬಹುವಿಧವಾಗಿ ಮಾತನಾಡಿ ರಾಜಸುತೆಯಾದ ಕುಂತಿಯು ಪಾಂಡುನಂದನನಾದ ಭೀಮನನ್ನು ಕುರಿತು ಹೀಗೆ ಹೇಳಿದಳು.

ಯಥಾ ಪಾಂಡುಸ್ತಥಾ ಮಾನ್ಯಸ್ತವ ಜ್ಯೇಷ್ಠೋ ಯುಧಿಷ್ಠಿರಃ ।
ಅಹಂ ಧರ್ಮವಿಧಾನೇನ ಮಾನ್ಯಾ ಗುರುತರೀ ತವ ॥೯॥

ಪಾಂಡುವು ಹೇಗೆ ಮಾನ್ಯನೋ ಹಾಗೆ ಅಣ್ಣನಾದ ಯುಧಿಷ್ಠಿರನು ನಿನಗೆ ಮಾನ್ಯನಾಗಿದ್ದಾನೆ. ನಾನೂ ಸಹ ನಿಮಗೆ ಧರ್ಮದ ಆದೇಶವನ್ನು ನೀಡುವುದರಿಂದ ಶ್ರೇಷ್ಠಳಾದ ಗುರುವೂ ಮತ್ತು ಮಾನ್ಯಳೂ ಆಗಿದ್ದೇನೆ.

ತಸ್ಮಾತ್ ಪಾಂಡುಹಿತಾರ್ಥಂ ಮೇ ಯುವರಾಜ ಹಿತಂ ಕುರು ।
ನಿಕೃತಾ ಧಾರ್ತರಾಷ್ಟ್ರೇಣ ಪಾಪೇನಾಕೃತಬುದ್ಧಿನಾ ॥೧೦॥

ಆದ್ದರಿಂದ ಯುವರಾಜನಾದ ಭೀಮನೇ ಪಾಂಡುವಿಗೆ ಹಿತವನ್ನುಂಟು ಮಾಡುವ ಸಲುವಾಗಿ ನನಗೆ ಹಿತವನ್ನು ಮಾಡು. ಪಾಪಿಯೂ ದುರ್ಬುದ್ಧಿಯೂ ಆದ ದುರ್ಯೋಧನನು ನಮಗೆ ಅನೇಕ ವಂಚನೆಗಳನ್ನು ಮಾಡಿದ್ದಾನೆ.

ದುಷ್ಕೃತಸ್ಯ ಪ್ರತೀಕಾರಂ ನ ಪಶ್ಯಾಮಿ ವೃಕೋದರ ।
ತಸ್ಮಾತ್ ಕತಿಪಯಾಹೇನ ಯೋಗಕ್ಷೇಮಂ ಭವಿಷ್ಯತಿ ॥೧೧॥

ವೃಕೋದರನೇ, ಅವನು ಮಾಡಿದ ವಂಚನೆಗಳಿಗೆ ಪ್ರತೀಕಾರವನ್ನು ಮಾಡುವ ರೀತಿಯು ನನಗೆ ಕಾಣುತ್ತಿಲ್ಲ. ಕೆಲವು ದಿವಸಗಳಲ್ಲಿಯೇ ನಮಗೆ ಯೋಗಕ್ಷೇಮ ಉಂಟಾಗುವುದೆಂದು ನನಗೆ ತೋರುತ್ತಿದೆ.

ಕ್ಷೇಮಂ ದುರ್ಗಮಿಮಂ ವಾಸಂ ವಸಿಷ್ಯಾಮೋ ಯಥಾಸುಖಮ್ ।
ಇದಮದ್ಯ ಮಹದ್ದುಃಖಂ ಧರ್ಮಕೃಚ್ಛ್ರಂ ವೃಕೋದರ ॥೧೨॥

ಈ ದುರ್ಗದಲ್ಲಿ(ಆಶ್ರಮದಲ್ಲಿ) ನಾವು ಸುಖವಾಗಿ ಸ್ವಲ್ಪಕಾಲ ವಾಸಮಾಡೋಣ. ಆದರೆ, ವೃಕೋದರನೇ ಈ ದಿನ ಧರ್ಮಸಂಕಟದಿಂದ ದೊಡ್ಡ ದುಃಖವು ಪ್ರಾಪ್ತವಾಗಿದೆ.

ದೃಷ್ಟ್ವೈವ ತ್ವಾಂ ಮಹಾಪಾಜ್ಞ ಅನಂಗಾಭಿಪ್ರಚೋದಿತಾ ।
ಯುಧಿಷ್ಠಿರಂ ಚ ಮಾಂ ಚೈವ ವರಯಾಮಾಸ ಧರ್ಮತಃ ॥೧೩॥

ಮಹಾಪ್ರಾಜ್ಞನೇ, ನಿನ್ನನ್ನು ನೋಡಿದ ಮಾತ್ರದಿಂದಲೇ ಕಾಮಮೋಹಿತಳಾದ ಈ ಹಿಡಿಂಬಿಯು ಯುಧಿಷ್ಠಿರನನ್ನೂ ಮತ್ತು ನನ್ನನ್ನೂ ಧರ್ಮದಿಂದಲೇ ಬೇಡುತ್ತಿದ್ದಾಳೆ.

ಧರ್ಮಾರ್ಥಂ ದೇಹಿ ಪುತ್ರಂ ತ್ವಂ ಸನಃ ಶ್ರೇಯಃ ಕರಿಷ್ಯತಿ ।
ಪ್ರತಿವಾಕ್ಯಂ ತು ನೇಚ್ಛಾಮಿ ಆವಾಭ್ಯಾಂ ವಚನಂ ಕುರು ॥೧೪॥

ನೀನು ಧರ್ಮಾರ್ಥವಾಗಿ ಅವಳಿಗೆ ಒಬ್ಬ ಪುತ್ರನನ್ನು ಕೊಡು. ಆ ಪುತ್ರನಿಂದ ನಮಗೆ ಶ್ರೇಯಸ್ಸು ಉಂಟಾಗುವುದು. ನನ್ನ ಮಾತಿಗೆ ಪ್ರತಿಯಾಗಿ ಮಾತನಾಡಬೇಡ. ನಮ್ಮಿಬ್ಬರ ಮಾತನ್ನು ನಡೆಸಿಕೊಡುತ್ತೇನೆ ಎಂದು ಮಾತನ್ನು ಕೊಡು.

ವೈಶಂಪಾಯನಃ

ತಥೇತಿ ತತ್ ಪ್ರತಿಜ್ಞಾಯ ಭೀಮಸೇನೋಽಬ್ರವೀದಿದಮ್ ।
ಶಾಸನಂ ತೇ ಕರಿಷ್ಯಾಮಿ ವೇದಶಾಸನಮಿತ್ಯಪಿ ॥೧೫॥

ಭೀಮಸೇನನು ''ಹಾಗೆಯೇ ಆಗಲಿ'' ಎಂದು ಪ್ರತಿಜ್ಞೆಮಾಡಿ, ನಿನ್ನ ಆದೇಶವನ್ನು ವೇದದ ಆದೇಶವೆಂದೇ ನೆರವೇರಿಸುವೆನು ಎಂದು ಹೇಳಿ ಈ ಮಾತುಗಳನ್ನು ಆಡಿದನು.

ಸಮಕ್ಷಂ ಭ್ರಾತೃಮಧ್ಯೇ ತು ಭೀಮಸೇನೋಽಬ್ರವೀದಿದಮ್ ।
ಶೃಣು ರಾಕ್ಷಸಿ ಸತ್ಯೇನ ಸಮಯಂ ತೇ ವದಾಮ್ಯಹಮ್ ॥೧೬॥

ತಾಯಿಯ ಎದುರಿನಲ್ಲಿ ಸಹೋದರರ ಮಧ್ಯದಲ್ಲಿ ಭೀಮಸೇನನು ಹೀಗೆ ಮಾತನಾಡಿದನು. ರಾಕ್ಷಸಿ ನನ್ನ ಮಾತನ್ನು ಕೇಳು. ನಾನು ಪ್ರಮಾಣಪೂರ್ವಕವಾಗಿ ನಿನಗೆ ಸಮಯವನ್ನು (ಷರತ್ತನ್ನು) ವಿಧಿಸುತ್ತೇನೆ.

ಯಾವತ್ಕಾಲೇನ ಭವತಿ ಅಪತ್ಯೋತ್ಪಾದನಂ ಶುಭೇ ।
ತಾವತ್ಕಾಲಂ ಚರಿಷ್ಯಾಮಿ ತ್ವಯಾ ಸಹ ಸುಮಧ್ಯಮೇ ॥೧೭॥

ಶುಭಳಾದವಳೇ ಮತ್ತು ಸುಮಧ್ಯಮಳೇ, ನಿನಗೆ ಪುತ್ರನು ಜನಿಸುವವರೆಗೆ ನಿನ್ನ ಜೊತೆಯಲ್ಲಿ ಸಂಚರಿಸುವೆನು.

ವಿಶೇಷತೋ ಮತ್ಸಕಾಶೇ ಮಾ ಪ್ರಕಾಶಯ ನೀಚತಾಮ್ ।
ಉತ್ತಮಸ್ತ್ರೀಗುಣೋಪೇತಾ ಭಜೇಥಾ ವರವರ್ಣಿನಿ ॥೧೮॥

ನನ್ನ ಎದುರಿನಲ್ಲಿ ನೀನು ಎಂದೂ ನೀಚತನವನ್ನು ತೋರಿಸಬಾರದು. ಸುಂದರಿಯೇ, ಉತ್ತಮ ಸ್ತ್ರೀಯರ ಗುಣಗಳಿಂದ ಕೂಡಿದವಳಾಗಿ ನನ್ನ ಜೊತೆಯಲ್ಲಿರು.

ಸಾ ತಥೇತಿ ಪ್ರತಿಜ್ಞಾಯ ಹಿಡಿಂಬೀ ರಾಕ್ಷಸೀ ತದಾ ।
ಗತಾಽಹನಿ ನಿವೇಶೇಷು ಭೋಜ್ಯಂ ರಾಜಾರ್ಹಮಾನಯತ್ ॥೧೯॥

ರಾಕ್ಷಸಿಯಾದ ಹಿಡಿಂಬಿಯು ''ಹಾಗೆಯೇ ಆಗಲಿ'' ಎಂದು ಪ್ರತಿಜ್ಞೆಯನ್ನು ಮಾಡಿ ಹಗಲಿನಲ್ಲಿ ಅಲ್ಲಲ್ಲಿ ಸಂಚಾರ ಮಾಡಿ ರಾಜಯೋಗ್ಯವಾದ ಭೋಜನವನ್ನು ತರುತ್ತಿದ್ದಳು.

ಸಾ ಕದಾಚಿದ್ ವಿಹಾರಾರ್ಥಂ ಹಿಡಿಂಬೀ ಕಾಮಚಾರಿಣೀ ।
ಭೀಮಸೇನಮುಪಾದಾಯ ಊರ್ಧ್ವಮಾಚಕ್ರಮೇ ತತಃ ॥೨೦॥

ಒಮ್ಮೆ ಕಾಮಚಾರಿಣಿಯಾದ ಹಿಡಿಂಬಿಯ ಭೀಮಸೇನನನ್ನು ಎತ್ತಿಕೊಂಡು ಆಕಾಶಕ್ಕೆ ಹಾರಿದಳು.

ವನೇಷು ಚ ಸಶೈಲೇಷು ದೇವತಾಯತನೇಷು ಚ ।
ಮೃಗಪಕ್ಷಿವಿಘುಷ್ಟೇಷು ರಮಣೀಯೇಷು ಸರ್ವತಃ ॥೨೧॥

ಕೃತ್ವಾ ಸಾ ಪರಮಂ ರೂಪಂ ಸರ್ವಾಭರಣಭೂಷಿತಾ ।
ಸಂಜಲ್ಪಂತೀ ಸುಮಧುರಂ ರಮಯಾಮಾಸ ಪಾಂಡವಮ್ ॥೨೨॥

ಅವಳು ಮೃಗಪಕ್ಷಿಗಳ ಸ್ವನದಿಂದ ಕೂಡಿದ ಸುಂದರ ವನಗಳಲ್ಲಿಯೂ, ಪರ್ವತಗಳಲ್ಲಿಯೂ, ದೇವತಾವಿಹಾರಸ್ಥಾನಗಳಲ್ಲಿಯೂ, ಭೀಮನನ್ನು ಕರೆದುಕೊಂಡು ಹೋಗಿ, ಪರಮಸೌಂದರ್ಯವನ್ನು ಹೊಂದಿ ಸರ್ವಾಭರಣ- ಭೂಷಿತಳಾಗಿ ಮಧುರವಾಗಿ ಮಾತನಾಡುತ್ತಾ ಭೀಮಸೇನನನ್ನು ರಮಿಸಿದಳು.

ತಥೈವ ವನದುರ್ಗೇಷು ಪರ್ವತದ್ರುಮಸಾನುಷು ।
ಸರಸ್ಸು ರಮಣೀಯೇಷು ಪದ್ಮೋತ್ಪಲವನೇಷು ಚ ॥೨೩॥

ನದೀದ್ವೀಪಪ್ರದೇಶೇಷು ಮಣಿಹೇಮಯುತೇಷು ಚ ।
ಪತ್ತನೇಷು ಚ ರಮ್ಯೇಷು ಮಹಾಸಾಲವನೇಷು ಚ ॥೨೪॥

ದೇವಾರಣ್ಯೇಷು ಪುಣ್ಯೇಷು ತಾಪಸಾಯತನೇಷು ಚ ।
ಗುಹ್ಯಕಾನಾಂ ನಿವಾಸೇಷು ಕುಲಪರ್ವತಸಾನುಷು ॥೨೫॥

ಸರ್ವರ್ತುಫಲವೃಕ್ಷೇಷು ಮಾನಸೇಷು ವನೇಷು ಚ ।
ಬಿಭ್ರತೀ ಪರಮಂ ರೂಪಂ ರಮಯಾಮಾಸ ಪಾಂಡವಮ್ ॥೨೬॥

ಹಾಗೆಯೇ, ವನದುರ್ಗಗಳಲ್ಲಿಯೂ, ಪರ್ವತದ ತಪ್ಪಲುಗಳಲ್ಲಿಯೂ, ರಮಣೀಯವಾದ ಪದ್ಮೋತ್ಪಲವನವಿರುವ ಸರೋವರಗಳಲ್ಲಿಯೂ, ನದಿಯ ದ್ವೀಪಗಳಲ್ಲಿಯೂ, ಮಣಿಹೇಮಯುಕ್ತವಾದ ಪಟ್ಟಣಗಳಲ್ಲಿಯೂ, ಮನೋಹರವಾದ ಸಾಲವನಗಳಲ್ಲಿಯೂ, ಪವಿತ್ರವಾದ ದೇವಾರಣ್ಯಗಳಲ್ಲಿಯೂ, ಋಷಿಗಳ ಆಶ್ರಮಗಳಲ್ಲಿಯೂ, ಗುಹ್ಯಕರ ವಾಸಸ್ಥಾನಗಳಲ್ಲಿಯೂ, ಕುಲಾಚಲಗಳ ತಪ್ಪಲುಗಳಲ್ಲಿಯೂ, ಎಲ್ಲಾ ಋತುಗಳಲ್ಲಿಯೂ ಫಲಪುಷ್ಪಗಳನ್ನು ಕೊಡುವ ಮಾನಸಸರೋವರದ ವನಗಳಲ್ಲಿಯೂ, ಸುಂದರವಾದ ರೂಪವನ್ನು ಧರಿಸಿ ಭೀಮಸೇನನನ್ನು ಸಂತೋಷಪಡಿಸಿದಳು.

ಯಥಾ ಚ ಸುಕೃತೀ ಸ್ವರ್ಗೇ ಮೋದತೇऽಪ್ಸರಸಾ ಸಹ ।
ಸ ತಥಾ ಪರಮಪ್ರೀತಸ್ತಯಾ ರೇಮೇ ಮಹಾದ್ಯುತಿಃ ॥೨೭॥

ಪುಣ್ಯವನ್ನು ಮಾಡಿದವನು ಸ್ವರ್ಗದಲ್ಲಿ ಅಪ್ಸರೆಯರ ಜೊತೆಯಲ್ಲಿ ಸಂತೋಷಪಡುವಂತೆ, ಮಹಾದ್ಯುತಿಯಾದ ಭೀಮನು ಪರಮಸಂತೋಷದಿಂದ ಅವಳ ಜೊತೆಯಲ್ಲಿ ರಮಿಸಿದನು.

ರಮಯಂತೀ ತತೋ ಭೀಮಂ ತತ್ರತತ್ರ ಮನೋಜವಾ ।
ಸಾ ರೇಮೇ ತೇನ ಸಂಹರ್ಷಾದತೃಪ್ಯಂತೀ ಮುಹುರ್ಮುಹುಃ ॥೨೮॥

ಮನೋಜವಳಾದ ಅವಳು ಅಲ್ಲಲ್ಲಿ ಭೀಮನಿಗೆ ಸುಖವನ್ನು ಕೊಡುತ್ತಾ ತಾನು ಭೀಮನನ್ನು ಪುನಃ ಪುನಃ ರಮಿಸಿ ತೃಪ್ತಿಯನ್ನು ಪಡೆಯದೇ ಸಂತೋಷಪಟ್ಟಳು.

ಅಹಸ್ಸು ವಿಚರಂತೀ ಸಾ ನಿಶಾಕಾಲೇಷು ಪಾಂಡವಮ್ ।
ಆನೀಯ ವೈ ಸ್ವಕೇ ಗೇಹೇ ದರ್ಶಯಾಮಾಸ ಮಾತರಮ್ ॥೨೯॥

ಹಗಲಿನಲ್ಲಿ ಈ ರೀತಿ ಸಂಚರಿಸಿ ರಾತ್ರಿ ವೇಳೆಗೆ ಭೀಮಸೇನನನ್ನು ಕರೆದುಕೊಂಡು ಬಂದು ತನ್ನ ಮನೆಯಲ್ಲಿದ್ದ ಕುಂತಿಗೆ ತೋರಿಸುತ್ತಿದ್ದಳು.

ಭ್ರಾತೃಭಿಃ ಸಹಿತೋ ನಿತ್ಯಂ ಸ್ವಪತೇ ಪಾಂಡವಸ್ತದಾ ।
ಕುಂತ್ಯಾಃ ಪರಿಚರಂತೀ ಸ ತಸ್ಯಾಃ ಪಾರ್ಶ್ವೇऽವಸನ್ನಿಶಾಮ್ ।
ಕಾಮಾಂಶ್ಚ ಮುಖವಾಸಾದೀನಾನಯಿಷ್ಯತಿ ಭೋಜನಮ್ ॥೩೦॥

ಭೀಮಸೇನನು ಪ್ರತಿದಿನವೂ ಸಹೋದರರ ಜೊತೆಯಲ್ಲಿಯೇ ನಿದ್ರಿಸುತ್ತಿದ್ದನು. ಹಿಡಿಂಬಿಯು ಕುಂತಿಯ ಪರಿಚಾರಿಕೆಯನ್ನು ಮಾಡುತ್ತಾ ಕುಂತಿಯ ಪಕ್ಕದಲ್ಲಿಯೇ ರಾತ್ರಿಯನ್ನು ಕಳೆಯುತ್ತಿದ್ದಳು. ಕುಂತಿಗೆ ಇಷ್ಟವಾದ ಮುಖ ಕೈ ಹಚ್ಚಿಕೊಳ್ಳುವ ಅಂಗರಾಗಗಳನ್ನೂ ಮತ್ತು ಆಹಾರವನ್ನೂ ತರುತ್ತಿದ್ದಳು.

ವೈಶಂಪಾಯನಃ

ತಸ್ಯಾಂ ರಾತ್ರ್ಯಾಂ ವ್ಯತೀತಾಯಾಮಾಜಗಾಮ ಮಹಾವ್ರತಃ ।
ಪಾರಾಶರ್ಯೋ ಮಹಾಪ್ರಾಜ್ಞೋ ದಿವ್ಯದರ್ಶೀ ಮಹಾತಪಾಃ ॥

ಆ ರಾತ್ರಿಯು ಕಳೆಯುತ್ತಿರಲು, ಮಹಾವ್ರತಧಾರಿಗಳೂ, ಮಹಾತಪಸ್ವಿಗಳೂ, ದಿವ್ಯದರ್ಶಿಗಳೂ, ಮಹಾಪ್ರಾಜ್ಞರೂ ಆದ ಪರಾಶರರ ಪುತ್ರರಾದ ವೇದವ್ಯಾಸರು ಅಲ್ಲಿಗೆ ಬಂದರು.

ತೇऽಭಿವಾದ್ಯ ಮಹಾತ್ಮಾನಂ ಕೃಷ್ಣದ್ವೈಪಾಯನಂ ತದಾ ।
ತಸ್ಥುಃ ಪ್ರಾಂಜಲಯಃ ಸರ್ವೇ ಸಸ್ನುಷಾ ಚೈವ ಮಾಧವೀ ॥೩೨॥

ಪಾಂಡವರು ಮಹಾತ್ಮರಾದ ವ್ಯಾಸರಿಗೆ ನಮಸ್ಕಾರವನ್ನು ಮಾಡಿ, ಕುಂತಿಯೂ ಹಿಡಿಂಬಿಯೂ ಸೇರಿ ಎಲ್ಲರೂ ಕೈಮುಗಿದು ನಿಂತರು.

ವ್ಯಾಸಃ

ಮಯೇದಂ ಮನಸಾ ಪೂರ್ವಂ ವಿದಿತಂ ಭರತರ್ಷಭಾಃ ।
ಯಥಾ ತು ತೈರಧರ್ಮೇಣ ಧಾರ್ತರಾಷ್ಟ್ರೈರಮರ್ಷಣೈಃ ॥೩೩॥

ಭರತಶ್ರೇಷ್ಠರೇ, ಅಸಹನಶೀಲರಾದ ದುರ್ಯೋಧನಾದಿಗಳು ನಿಮ್ಮ ವಿಷಯದಲ್ಲಿ ಹೇಗೆ ಅಧರ್ಮದಿಂದ ನಡೆದುಕೊಂಡರು ಎಂಬುದನ್ನು ನಾನು ಮೊದಲೇ ಮನಸ್ಸಿನಲ್ಲಿಯೇ ತಿಳಿದಿದ್ದೆ.

ತದ್ ವಿದಿತ್ವಾऽಸ್ಮಿ ಸಂಪ್ರಾಪ್ತಃ ಚಿಕೀರ್ಷನ್ ವೈ ಪರಂ ಹಿತಮ್ ।
ನ ವಿಷಾದೋऽಥ ಕರ್ತವ್ಯಃ ಸರ್ವಮೇವ ಸುಖಾಯ ವಃ ॥೩೪॥

ಅದನ್ನು ತಿಳಿದು ನಿಮಗೆ ಹಿತವನ್ನು ಮಾಡಲು ಬಯಸಿ ಇಲ್ಲಿಗೆ ಬಂದಿದ್ದೇನೆ. ನೀವು ವಿಷಾದ ಮಾಡಬೇಕಾದ ಅವಶ್ಯಕತೆಯಿಲ್ಲ. ಎಲ್ಲವೂ ಶುಭಪ್ರದವೇ ಆಗುತ್ತದೆ.

ಸುಹೃದ್ವಿರಂಜನಂ ಕರ್ಮ ಪುರಾ ಕೃತಮರಿಂದಮಾಃ ।
ತಸ್ಯ ಸಿದ್ಧಿರಿಯಂ ಪ್ರಾಪ್ತಾ ಮಾ ಶೋಚತ ಪರಂತಪಾಃ ॥೩೫॥

ಅರಿಂದಮರೇ, ನೀವು ಹಿಂದೆ ಪ್ರೀತಿಪಾತ್ರರನ್ನು ವಿಯೋಜಿಸಿದ್ದೀರಿ. ಅದರ ಫಲವು ಈಗ ಪ್ರಾಪ್ತವಾಗಿದೆ. ಪರಂತಪರೇ, ಶೋಕ ಪಡಬೇಡಿ.

ಸಮಾಪ್ತೇ ದುಷ್ಕೃತೇ ಚೈವಂ ಯೂಯಂ ಚೈವ ನ ಸಂಶಯಃ ।
ಸ್ವರಾಷ್ಟ್ರೇ ವಿಹರಿಷ್ಯಂತೋ ಭವಿಷ್ಯಥ ಸಬಾಂಧವಾಃ ॥೩೬॥

ಆ ಪಾಪಫಲವು ಕಳೆದ ಮೇಲೆ ನೀವು ನಿಸ್ಸಂಶಯವಾಗಿ ನಿಮ್ಮ ರಾಷ್ಟ್ರದಲ್ಲಿ ಬಂಧುಗಳೊಡನೆ ವಿಹರಿಸುವಿರಿ.

ಸಮಾಪ್ತೇ ಚೈವ ಮೇ ಸರ್ವೇ ಯೂಯಂ ಚೈವ ನ ಸಂಶಯಃ ।
ದೀನತೋ ಬಾಲತಶ್ಚೈವ ಸ್ನೇಹಂ ಕುರ್ವಂತಿ ಬಾಂಧವಾಃ ॥೩೭॥

ಆ ಕರ್ಮವು ಕಳೆದ ಮೇಲೆ ನೀವೆಲ್ಲರೂ ಶುಭವನ್ನು ಕಾಣುವಿರಿ ಎಂಬುದರಲ್ಲಿ ಸಂಶಯವಿಲ್ಲ. ಬಂಧುಗಳು ದೀನರಾದ ತಮ್ಮ ಸಂಬಂಧಿಗಳಾದ ಬಾಲಕರಲ್ಲಿ ಸ್ನೇಹವನ್ನು ಮಾಡುತ್ತಾರೆ.

ತಸ್ಮಾದಭ್ಯಧಿಕಃ ಸ್ನೇಹೋ ಯುಷ್ಮಾಸು ಮಮ ಸಂಪ್ರತಿ ।
ಸ್ನೇಹಪೂರ್ವಂ ಚಿಕೀರ್ಷಾಮಿ ಹಿತಂ ಯತ್ ತನ್ನಿಬೋಧತ ॥೩೮॥

ನೀವು ದೀನರೂ ಮತ್ತು ಬಾಲಕರಾದ ನನ್ನ ಪೌತ್ರರೂ ಆಗಿರುವುದರಿಂದ ಈಗ ನಿಮ್ಮಲ್ಲಿ ಅಧಿಕವಾದ ಸ್ನೇಹವಿದೆ. ಆ ಸ್ನೇಹದಿಂದ ನಾನು ನಿಮಗೆ ಏನು ಹಿತವನ್ನು ಮಾಡಲು ಬಯಸುತ್ತೇನೆ ಎಂಬುದನ್ನು ಕೇಳಿ.

ವಸತೇಹ ಪ್ರತಿಚ್ಛನ್ನಾ ಮಮಾಗಮನಕಾಂಕ್ಷಿಣಃ ।
ಏತದ್ ವೈ ಶಾಲಿಹೋತ್ರಸ್ಯ ತಪಸಾ ನಿರ್ಮಿತಂ ಸರಃ ॥೩೯॥

ಇದು ಶಾಲಿಹೋತ್ರರು ತಮ್ಮ ತಪಸ್ಸಿನಿಂದ ನಿರ್ಮಿಸಿದ ಸರೋವರ. ಇಲ್ಲಿ ಯಾರಿಗೂ ತಿಳಿಯದಂತೆ ನನ್ನ ಆಗಮನವನ್ನು ನಿರೀಕ್ಷಿಸುತ್ತಾ ವಾಸಮಾಡಿ.

ರಮಣೀಯಮಿದಂ ತೋಯಂ ಕ್ಷುತ್ತಿಪ್ಪಾಸಾಶ್ರಮಾಪಹಮ್ ।
ಕಾರ್ಯಾರ್ಥಿನಸ್ತು ಷಣ್ಮಾಸಾನ್ ವಿಹರಧ್ವಂ ಯಥಾಸುಖಮ್ ॥೪೦॥

ಈ ಸರೋವರದ ನೀರು ಹಸಿವು, ನೀರಡಿಕೆ ಮತ್ತು ಶ್ರಮವನ್ನು ಪರಿಹರಿಸುವುದಾಗಿ ರಮಣೀಯವಾಗಿದೆ. ಕಾರ್ಯಾರ್ಥಿಗಳಾದ ನೀವು ಇಲ್ಲಿ ಸುಖವಾಗಿ ಆರು ತಿಂಗಳ ಕಾಲ ವಿಹರಿಸಿ.

ವೈಶಂಪಾಯನಃ

ಏವಂ ಸ ತಾನ್ ಸಮಾಶ್ವಾಸ್ಯ ವ್ಯಾಸಃ ಪಾರ್ಥಾನರಿಂದಮಾನ್ ।
ಸ್ನೇಹಾತ್ ಪಾರ್ಥಾನ್ ಪರಿಷ್ವಜ್ಯ ಕುಂತೀಮಾಶ್ವಾಸಯತ್ ಪ್ರಭುಃ ।
ಸುಷ್ಠೇ ಮಾ ರೋದ ಮಾ ರೋದೇತ್ಯೇವಂ ವ್ಯಾಸೋಽಬ್ರವೀದ್ ವಚಃ॥

ವ್ಯಾಸರು ಅರಿಂದಮರಾದ ಪಾಂಡವರನ್ನು ಹೀಗೆ ಸಮಾಧಾನಪಡಿಸಿ ಸ್ನೇಹದಿಂದ ಅವರನ್ನು ಆಲಿಂಗಿಸಿ, ಪ್ರಭುಗಳಾದ ಅವರು ''ಸೊಸೆಯೇ ಅಳಬೇಡ, ಅಳಬೇಡ'' ಎಂದು ಹೇಳಿ ಕುಂತಿಗೆ ಸಮಾಧಾನದ ಮಾತುಗಳನ್ನು ಆಡಿದರು.

ವ್ಯಾಸಃ

ಜೀವಪುತ್ರೇ ಸುತಸ್ತೇಽಯಂ ಧರ್ಮನಿತ್ಯೋ ಯುಧಿಷ್ಠಿರಃ ।
ಪೃಥಿವ್ಯಾಂ ಪಾರ್ಥಿವಾನ್ ಸರ್ವಾನ್ ಪ್ರಶಾಸಿಷ್ಯತಿ ಧರ್ಮರಾಟ್ ॥

ಬದುಕಿರುವ ಪುತ್ರರನ್ನುಳ್ಳ ಸೊಸೆಯೇ, ನಿನ್ನ ಮಗನಾದ ಈ ಧರ್ಮನಿತ್ಯನಾದ ಯುಧಿಷ್ಠಿರನು ಭೂಮಿಯಲ್ಲಿ ರಾಜರುಗಳನ್ನು ಗೆದ್ದು ಧರ್ಮರಾಜನಾಗಿ ಎಲ್ಲರನ್ನೂ ಆಳುವನು.

ಧರ್ಮೇಣ ಜಿತ್ವಾ ಪೃಥಿವೀಮಖಿಲಾಂ ಧರ್ಮವಿದ್ ವಶೀ ।
ಸ್ಥಾಪಯಿತ್ವಾ ವಶೇ ಸರ್ವಾಂ ಸಪರ್ವತವನಾಂ ಶುಭಾಮ್ ।
ಭೀಮಸೇನಾರ್ಜುನಬಲಾದ್ ಭೋಕ್ಷ್ಯತ್ಯಯಮಸಂಶಯಮ್ ॥೪೩॥

ಆತ್ಮನಿಗ್ರಹವುಳ್ಳ ಧರ್ಮಜ್ಞನಾದ ಇವನು ಧರ್ಮದಿಂದ ಸಮಗ್ರವಾದ ಭೂಮಿಯನ್ನು ಜಯಿಸಿ, ಪರ್ವತವನಗಳಿಂದ ಸಹಿತವಾದ ಈ ಭೂಮಿಯನ್ನು ತನ್ನ ವಶದಲ್ಲಿಟ್ಟುಕೊಂಡು ಭೀಮಾರ್ಜುನರ ಬಲದಿಂದ ಭೂಮಿಯನ್ನು ರಕ್ಷಿಸುತ್ತಾನೆ ಎಂಬುದರಲ್ಲಿ ಸಂಶಯವಿಲ್ಲ.

ಪುತ್ರಾಸ್ತವ ಚ ಮಾದ್ರ್ಯಾಶ್ಚ ಪಂಚೈತೇ ಸುಮಹಾಬಲಾಃ ।
ಸ್ವರಾಷ್ಟ್ರೇ ವಿಹರಿಷ್ಯಂತಿ ಸುಖಂ ಸುಮನಸಃ ಸದಾ ॥೪೪॥

ನಿನ್ನ ಮತ್ತು ಮಾದ್ರಿಯ ಮಕ್ಕಳಾದ ಈ ಐದು ಜನರು ತಮ್ಮ ರಾಷ್ಟ್ರದಲ್ಲಿ ಯಾವಾಗಲೂ ಸಂತೋಷದಿಂದ ವಿಹರಿಸುವರು.

ಯಕ್ಷ್ಯಂತಿ ಚ ನರವ್ಯಾಘ್ರಾ ವಿಜಿತ್ಯ ಪೃಥಿವೀಮಿಮಾಮ್ ।
ರಾಜಸೂಯಾಶ್ವಮೇಧಾದ್ಯೈಃ ಕ್ರತುಭಿರ್ಭೂರಿದಕ್ಷಿಣೈಃ ॥೪೫॥

ನರವ್ಯಾಘ್ರರಾದ ನಿನ್ನ ಮಕ್ಕಳು ಸಮಗ್ರವಾದ ಭೂಮಿಯನ್ನು ಗೆದ್ದು ಬಹಳ ದಕ್ಷಿಣೆಗಳನ್ನು ಕೊಟ್ಟು ರಾಜಸೂಯಾಶ್ವಮೇಧ ಮೊದಲಾದ ಯಾಗಗಳನ್ನು ನೆರವೇರಿಸುವರು.

ಆ ಕರ್ಮವು ಕಳೆದ ಮೇಲೆ ನೀವೆಲ್ಲರೂ ಶುಭವನ್ನು ಕಾಣುವಿರಿ ಎಂಬುದರಲ್ಲಿ ಸಂಶಯವಿಲ್ಲ. ಬಂಧುಗಳು ದೀನರಾದ ತಮ್ಮ ಸಂಬಂಧಿಗಳಾದ ಬಾಲಕರಲ್ಲಿ ಸ್ನೇಹವನ್ನು ಮಾಡುತ್ತಾರೆ.

ತಸ್ಮಾದಭ್ಯಧಿಕಃ ಸ್ನೇಹೋ ಯುಷ್ಮಾಸು ಮಮ ಸಂಪ್ರತಿ ।
ಸ್ನೇಹಪೂರ್ವಂ ಚಿಕೀರ್ಷಾಮಿ ಹಿತಂ ಯತ್ ತನ್ನಿಬೋಧತ ॥೩೮॥

ನೀವು ದೀನರೂ ಮತ್ತು ಬಾಲಕರಾದ ನನ್ನ ಪೌತ್ರರೂ ಆಗಿರುವುದರಿಂದ ಈಗ ನಿಮ್ಮಲ್ಲಿ ಅಧಿಕವಾದ ಸ್ನೇಹವಿದೆ. ಆ ಸ್ನೇಹದಿಂದ ನಾನು ನಿಮಗೆ ಏನು ಹಿತವನ್ನು ಮಾಡಲು ಬಯಸುತ್ತೇನೆ ಎಂಬುದನ್ನು ಕೇಳಿ.

ವಸತೇಹ ಪ್ರತಿಚ್ಛನ್ನಾ ಮಮಾಗಮನಕಾಂಕ್ಷಿಣಃ ।
ಏತದ್ ವೈ ಶಾಲಿಹೋತ್ರಸ್ಯ ತಪಸಾ ನಿರ್ಮಿತಂ ಸರಃ ॥೩೯॥

ಇದು ಶಾಲಿಹೋತ್ರರು ತಮ್ಮ ತಪಸ್ಸಿನಿಂದ ನಿರ್ಮಿಸಿದ ಸರೋವರ. ಇಲ್ಲಿ ಯಾರಿಗೂ ತಿಳಿಯದಂತೆ ನನ್ನ ಆಗಮನವನ್ನು ನಿರೀಕ್ಷಿಸುತ್ತಾ ವಾಸಮಾಡಿ.

ರಮಣೀಯಮಿದಂ ತೋಯಂ ಕ್ಷುತ್ತಿಪ್ಪಾಸಾಶ್ರಮಾಪಹಮ್ ।
ಕಾರ್ಯಾರ್ಥಿನಸ್ತು ಷಣ್ಮಾಸಾನ್ ವಿಹರಧ್ವಂ ಯಥಾಸುಖಮ್ ॥೪೦॥

ಈ ಸರೋವರದ ನೀರು ಹಸಿವು, ನೀರಡಿಕೆ ಮತ್ತು ಶ್ರಮವನ್ನು ಪರಿಹರಿಸುವುದಾಗಿ ರಮಣೀಯವಾಗಿದೆ. ಕಾರ್ಯಾರ್ಥಿಗಳಾದ ನೀವು ಇಲ್ಲಿ ಸುಖವಾಗಿ ಆರು ತಿಂಗಳ ಕಾಲ ವಿಹರಿಸಿ.

ವೈಶಂಪಾಯನಃ

ಏವಂ ಸ ತಾನ್ ಸಮಾಶ್ವಾಸ್ಯ ವ್ಯಾಸಃ ಪಾರ್ಥಾನರಿಂದಮಾನ್ ।
ಸ್ನೇಹಾತ್ ಪಾರ್ಥಾನ್ ಪರಿಷ್ವಜ್ಯ ಕುಂತೀಮಾಶ್ವಾಸಯತ್ ಪ್ರಭುಃ ।
ಸುಷ್ಠೇ ಮಾ ರೋದ ಮಾ ರೋದೇತ್ಯೇವಂ ವ್ಯಾಸೋಽಬ್ರವೀದ್ ವಚಃ॥

ವ್ಯಾಸರು ಅರಿಂದಮರಾದ ಪಾಂಡವರನ್ನು ಹೀಗೆ ಸಮಾಧಾನಪಡಿಸಿ ಸ್ನೇಹದಿಂದ ಅವರನ್ನು ಆಲಿಂಗಿಸಿ, ಪ್ರಭುಗಳಾದ ಅವರು ''ಸೊಸೆಯೇ ಅಳಬೇಡ, ಅಳಬೇಡ'' ಎಂದು ಹೇಳಿ ಕುಂತಿಗೆ ಸಮಾಧಾನದ ಮಾತುಗಳನ್ನು ಆಡಿದರು.

ವ್ಯಾಸಃ

ಜೀವಪುತ್ರೇ ಸುತಸ್ತೇಽಯಂ ಧರ್ಮನಿತ್ಯೋ ಯುಧಿಷ್ಠಿರಃ ।
ಪೃಥಿವ್ಯಾಂ ಪಾರ್ಥಿವಾನ್ ಸರ್ವಾನ್ ಪ್ರಶಾಸಿಷ್ಯತಿ ಧರ್ಮರಾಟ್ ॥

ಬದುಕಿರುವ ಪುತ್ರರನ್ನುಳ್ಳ ಸೊಸೆಯೇ, ನಿನ್ನ ಮಗನಾದ ಈ ಧರ್ಮನಿತ್ಯನಾದ ಯುಧಿಷ್ಠಿರನು ಭೂಮಿಯಲ್ಲಿ ರಾಜರುಗಳನ್ನು ಗೆದ್ದು ಧರ್ಮರಾಜನಾಗಿ ಎಲ್ಲರನ್ನೂ ಆಳುವನು.

ಧರ್ಮೇಣ ಜಿತ್ವಾ ಪೃಥಿವೀಮಖಿಲಾಂ ಧರ್ಮವಿದ್ ವಶೀ ।
ಸ್ಥಾಪಯಿತ್ವಾ ವಶೇ ಸರ್ವಾಂ ಸಪರ್ವತವನಾಂ ಶುಭಾಮ್ ।
ಭೀಮಸೇನಾರ್ಜುನಬಲಾದ್ ಭೋಕ್ಷ್ಯತ್ಯಯಮಸಂಶಯಮ್ ॥೪೩॥

ಆತ್ಮನಿಗ್ರಹವುಳ್ಳ ಧರ್ಮಜ್ಞನಾದ ಇವನು ಧರ್ಮದಿಂದ ಸಮಗ್ರವಾದ ಭೂಮಿಯನ್ನು ಜಯಿಸಿ, ಪರ್ವತವನಗಳಿಂದ ಸಹಿತವಾದ ಈ ಭೂಮಿಯನ್ನು ತನ್ನ ವಶದಲ್ಲಿಟ್ಟುಕೊಂಡು ಭೀಮಾರ್ಜುನರ ಬಲದಿಂದ ಭೂಮಿಯನ್ನು ರಕ್ಷಿಸುತ್ತಾನೆ ಎಂಬುದರಲ್ಲಿ ಸಂಶಯವಿಲ್ಲ.

ಪುತ್ರಾಸ್ತವ ಚ ಮಾದ್ರ್ಯಾಶ್ಚ ಪಂಚೈತೇ ಸುಮಹಾಬಲಾಃ ।
ಸ್ವರಾಷ್ಟ್ರೇ ವಿಹರಿಷ್ಯಂತಿ ಸುಖಿಂ ಸುಮನಸಃ ಸದಾ ॥೪೪॥

ನಿನ್ನ ಮತ್ತು ಮಾದ್ರಿಯ ಮಕ್ಕಳಾದ ಈ ಐದು ಜನರು ತಮ್ಮ ರಾಷ್ಟ್ರದಲ್ಲಿ ಯಾವಾಗಲೂ ಸಂತೋಷದಿಂದ ವಿಹರಿಸುವರು.

ಯಕ್ಷ್ಯಂತಿ ಚ ನರವ್ಯಾಘ್ರಾ ವಿಜಿತ್ಯ ಪೃಥಿವೀಮಿಮಾಮ್ ।
ರಾಜಸೂಯಾಶ್ವಮೇಧಾದ್ಯೈಃ ಕ್ರತುಭಿರ್ಭೂರಿದಕ್ಷಿಣೈಃ ॥೪೫॥

ನರವ್ಯಾಘ್ರರಾದ ನಿನ್ನ ಮಕ್ಕಳು ಸಮಗ್ರವಾದ ಭೂಮಿಯನ್ನು ಗೆದ್ದು ಬಹಳ ದಕ್ಷಿಣೆಗಳನ್ನು ಕೊಟ್ಟು ರಾಜಸೂಯಾಶ್ವಮೇಧ ಮೊದಲಾದ ಯಾಗಗಳನ್ನು ನೆರವೇರಿಸುವರು.

ಅನುಗೃಹ್ಯ ಸುಹೃದ್ವರ್ಗಂ ಧನೇನ ಚ ಬಲೇನ ಚ ।
ಪಿತೃಪೈತಾಮಹಂ ರಾಜ್ಯಮಾಹರಿಷ್ಯಂತಿ ತೇ ಸುತಾಃ ।
ಸ್ನುಷಾ ಕಮಲಪತ್ರಾಕ್ಷೀ ನಾಮ್ನಾ ಕಮಲಮಾಲಿಕಾ ॥೪೬॥

ವಶವರ್ತಿನೀ ತು ಭೀಮಸ್ಯ ಪುತ್ರಮೇಷಾ ಜನಿಷ್ಯತಿ ।
ತೇನ ಪುತ್ರೇಣ ಕೃಚ್ಛ್ರೇಷು ಭವಿಷ್ಯಥ ಚ ತಾರಿತಾಃ ॥೪೭॥

ನಿನ್ನ ಮಕ್ಕಳು ಬಂಧುವರ್ಗವನ್ನು ಧನದಿಂದಲೂ ಮತ್ತು ತಮ್ಮ ಬಲದಿಂದಲೂ ಅನುಗ್ರಹಿಸಿ ಪಿತೃಪಿತಾಮಹರಿಂದ ಬಂದ ರಾಜ್ಯವನ್ನು ಪುನಃ ಪಡೆಯುವರು. ಈ ಕಮಲನಯನೆಯಾದ ನಿನ್ನ ಸೊಸೆಯ ಹೆಸರು 'ಕಮಲಮಾಲಿಕೆ' ಎಂದು. ಅವಳು ಭೀಮನಿಗೆ ವಶವರ್ತಿನಿಯಾಗಿದ್ದು ಒಬ್ಬ ಮಗನನ್ನು ಪಡೆಯುವಳು. ಆ ಪುತ್ರನು ನಿಮ್ಮನ್ನು ವಿಪತ್ತುಗಳಿಂದ ದಾಟಿಸುವನು.

ಇಹ ಮಾಸಂ ಪ್ರತೀಕ್ಷಧ್ವಮಾಗಮಿಷ್ಯಾಮ್ಯಹಂ ಪುನಃ ।
ದೇಶಕಾಲೌ ವಿದಿತ್ವೈವ ವೇತ್ಸ್ಯಧ್ವಂ ಪರಮಾಂ ಮುದಮ್ ॥೪೮॥

ನಾನು ಹಿಂದಿರುಗಿ ಬರುವವರೆಗೆ ಇಲ್ಲಿ ಒಂದು ತಿಂಗಳ ಕಾಲ ನನ್ನನ್ನು ನಿರೀಕ್ಷಿಸುತ್ತಾ ವಾಸಮಾಡಿ. ಸುತ್ತಮುತ್ತಲಿನ ದೇಶಕಾಲಗಳನ್ನು ತಿಳಿದು ಶ್ರೇಷ್ಠವಾದ ಸಂತೋಷವನ್ನು ಹೊಂದಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಅಷ್ಟಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ಹಿಡಿಂಬವಧಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಸಾ ನಂದನಾದಿಷು ವನೇಷು ವಿಹೃತ್ಯ ತೇನ
ಸಾಯಂ ಪ್ರಯಾತಿ ಪೃಥಯಾ ಸಹಿತಾಂಶ್ಚ ಪಾರ್ಥಾನ್ ।
ಏವಂ ಯಯಾವಪಿ ತಯೋರಿಹ ವತ್ಸರಾರ್ಧೋ
ಜಾತಶ್ಚ ಸೂನುರತಿವೀರ್ಯಬಲೋಪಪನ್ನಃ ॥೬೨॥

ಹಿಡಿಂಬೆ ನಂದನವನ ಮುಂತಾದ ಉದ್ಯಾನಗಳಲ್ಲಿ ಭೀಮನೊಂದಿಗೆ ವಿಹರಿಸಿ ಸಂಜೆಯ ಹೊತ್ತಿಗೆ ಕುಂತಿ ಪಾಂಡವರು ಇದ್ದೆಡೆಗೆ ಹಿಂತಿರುಗುತ್ತಿದ್ದಳು. ಹೀಗೆ ಆರು ತಿಂಗಳು ಕಳೆದುವು. ಅವರಿಗೆ ಅತಿ ವೀರ್ಯ ಬಲಯುಕ್ತನಾದ ಒಬ್ಬ ಮಗ ಹುಟ್ಟಿದ.

ದೇವೋಽಪಿ ರಾಕ್ಷಸತನುರ್ನಿರ್ಋತಿಃ ಪುರಾ ಯ
ಆವೇಶಯುಕ್ಚ ಗಿರಿಶಸ್ಯ ಘಟೋತ್ಕಚಾಖ್ಯಃ ।
ಪೂರ್ವಂ ಘಟೋಪಮಮಮುಷ್ಯ ಶಿರೋ ಬಭೂವ
ಕೇಶಾ ನಿಮೇಷತ ಉದಾಸುರತೋ ಹಿ ನಾಮ ॥೬೩॥

ಹಿಂದೆ ದೇವತೆಯಾಗಿದ್ದೂ ರಾಕ್ಷಸ ಶರೀರಿಯಾಗಿದ್ದ ನಿರ್ಋತಿ ಈಗ ಶಿವನ ಆವೇಶಯುಕ್ತನಾಗಿ ಘಟೋತ್ಕಚ ಎಂಬ ಹೆಸರಿನಿಂದ ಮಾತೃಜಾತಿ ಪ್ರಯುಕ್ತ ರಾಕ್ಷಸನಾಗಿ ಜನಿಸಿದ. ಹುಟ್ಟಿದಾಗ ತಲೆ ಮಡಿಕೆಯಂತೆ ಇತ್ತು . ಕೂದಲು ಇರಲಿಲ್ಲ. ನಿಮಿಷದಲ್ಲಿ ಮೇಲ್ಮುಖವಾಗಿ ಕೂದಲು ಬೆಳೆದುವು. ಅದರಿಂದ ಅವನಿಗೆ ಆ ಹೆಸರು.

ಜಾತೇ ಸುತೇ ಸಮಯತೋ ಭಗವತ್ಕೃತಾತ್ಸ
ಭೀಮೋ ಜಗಾದ ಸಸುತಾಂ ಗಮನಾಯ ತಾಂ ಚ ।
ಸ್ಮೃತ್ಯಾಭಿಯಾನ ಉಭಯೋರಪಿ ಸಾ ಪ್ರತಿಜ್ಞಾಂ
ತೇಷಾಂ ವಿಧಾಯ ಚ ಯಯೌ ಸುರಲೋಕಮೇವ ॥೬೪॥

ಮಗ ಹುಟ್ಟಿದಾಗ ಭೀಮಸೇನ ವೇದವ್ಯಾಸರ ಮಾತಿನಂತೆ ಹಿಡಿಂಬೆಗೆ ಮಗನೊಂದಿಗೆ ಹೊರಟು ಹೋಗಲು ಆಜ್ಞೆ ಮಾಡಿದ. ನೆನೆದಾಗ ತಾಯಿ ಮಕ್ಕಳಿಬ್ಬರೂ ಬರುವೆವೆಂದು ಪಾಂಡವರಿಗೆ ಮಾತುಕೊಟ್ಟು ಅವಳು ದೇವಲೋಕಕ್ಕೆ ಹೊರಟುಹೋದಳು.

ವ್ಯಾಸೋಽಪಿ ಪಾಂಡುತನಯೈಃ ಸಹಿತೋ ಬಕಸ್ಯ
ರೌದ್ರಾದ್ ವರಾಜ್ಜಯವಧಾಪಗತಸ್ಯ ನಿತ್ಯಂ ।
ಯಾತೋ ವಧಾಯ ಪರಮಾಗಣಿತೋರುಧಾಮಾ
ಪೂರ್ಣಾಕ್ಷಯೋರುಸುಖ ಆಶು ತದೈಕಚಕ್ರಾಂ ॥೬೫॥

ಉತ್ತಮ ಅಸಂಖ್ಯ ಮಹಾಪ್ರಕಾಶಶಾಲಿ ಪೂರ್ಣ ಅಕ್ಷಯ ಮಹಾಸುಖಶಾಲಿಯಾದ ವ್ಯಾಸರು ಶಿವವರದಿಂದ ಎಂದೂ ಪರಾಭವ ಮರಣರಹಿತನಾದ ಬಕಾಸುರನ ಸಂಹಾರಕ್ಕಾಗಿ ಪಾಂಡವರೊಂದಿಗೆ ಬೇಗನೆ ಏಕಚಕ್ರಾನಗರಿಗೆ ಹೋದರು.

★ ★ ★ ★

ನೂರ ಐವತ್ತೊಂಭತ್ತನೆಯ ಅಧ್ಯಾಯ

(ವ್ಯಾಸರ ನಿರ್ಗಮನ, ಶಾಲಿಹೋತ್ರಾಶ್ರಮದಲ್ಲಿ ಪಾಂಡವರ ವಾಸ, ಘಟೋತ್ಕಚನ ಜನನ)

ವೈಶಂಪಾಯನಃ

ಸ ತೈಃ ಪ್ರಾಂಜಲಿಭಿಃ ಸರ್ವೈಃ ತಥೇತ್ಯುಕ್ತೋ ಜನಾಧಿಪ ।
ಜಗಾಮ ಭಗವಾನ್ ವ್ಯಾಸೋ ಯಥಾಗತಮೃಷಿಃ ಪ್ರಭುಃ ॥೧॥

ಮಹಾರಾಜನೇ, ಅವರೆಲ್ಲರೂ ಕೈಗಳನ್ನು ಜೋಡಿಸಿ ''ಹಾಗೆಯೇ ಆಗಲಿ'' ಎಂದು ಹೇಳಿದ ಮೇಲೆ ಋಷಿಗಳೂ ಮತ್ತು ಪ್ರಭುಗಳೂ ಆದ ಭಗವಾನ್ ವ್ಯಾಸರು ಬಂದಂತೆಯೇ ಹೊರಟು ಹೋದರು.

ಗತೇ ಭಗವತಿ ವ್ಯಾಸೇ ಪಾಂಡವಾಃ ವಿಗತಜ್ವರಾಃ ।
ಊಷುಸ್ತತ್ರ ಚಿರಂ ಕಾಲಂ ವಟವೃಕ್ಷೇ ಯಥಾಸುಖಮ್ ॥೨॥

ಪೂಜ್ಯರಾದ ವೇದವ್ಯಾಸರು ಹೊರಟು ಹೋದಮೇಲೆ ಪಾಂಡವರು ನಿಶ್ಶಂಕೆಯಾಗಿ ಆ ವಟವೃಕ್ಷದ ಸಮೀಪದಲ್ಲಿ ಸುಖವಾಗಿ ಬಹುಕಾಲವನ್ನು ಕಳೆದರು.

ಶಾಕಮೂಲಫಲಾಹಾರಾಸ್ತಪಃ ಕುರ್ವಂತಿ ಪಾಂಡವಾಃ ।
ತತಃ ಪರಂ ಮಹಾರಾಜ ತದಾ ಕಮಲಮಾಲಿಕಾ ॥೩॥

ರಮಯಂತೀ ಸದಾ ಭೀಮಂ ತತ್ರತತ್ರ ಮನೋಜವಾ ।
ದಿವ್ಯಾಭರಣವಸ್ತ್ರಾಂಗೀ ದಿವ್ಯಸ್ರಗನುಲೇಪನಾ ॥೪॥

ಮಹಾರಾಜನೇ, ಪಾಂಡವರುಸೊಪ್ಪು ಗೆಡ್ಡೆ ಹಣ್ಣುಗಳನ್ನು ಆಹಾರ ಮಾಡಿಕೊಂಡು ತಪಸ್ಸನ್ನು ಮಾಡಿದರು. ಆಗ ಕಮಲಮಾಲಿಕೆಯು ದಿವ್ಯವಸ್ತ್ರಗಳನ್ನೂ, ದಿವ್ಯಾಭರಣ-ಗಳನ್ನೂ, ದಿವ್ಯಮಾಲೆಗಳನ್ನೂ, ದಿವ್ಯಗಂಧಗಳನ್ನೂ ಧರಿಸಿ ಮನೋಜವದಿಂದ ಭೀಮನನ್ನು ಅಲ್ಲಲ್ಲಿಗೆ ಕರೆದುಕೊಂಡು ಹೋಗಿ ಅವನ ಒಡನೆ ರಮಿಸಿದಳು.

ಏವಂ ಭ್ರಾತೄನ್ ಸಪ್ತ ಮಾಸಾನ್ ಹಿಡಿಂಬಾऽವಾಸಯದ್ ವನೇ ।
ಪಾಂಡವಾನ್ ಭೀಮಸೇನಾರ್ಥಂ ರಾಕ್ಷಸೀ ಕಾಮರೂಪಿಣೀ ॥೫॥

ಹೀಗೆ ಕಾಮರೂಪಿಯೂ, ರಾಕ್ಷಸಿಯೂ ಆದ ಹಿಡಿಂಬಿಯು ಆ ಕಾಡಿನಲ್ಲಿ ಭೀಮಸೇನನ ಸಲುವಾಗಿ ಪಾಂಡವರು ಮತ್ತು ಕುಂತಿಯನ್ನು ಏಳು ತಿಂಗಳ ಕಾಲ ವಾಸಮಾಡುವಂತೆ ಮಾಡಿದಳು.

ಅತೃಪ್ತಾ ಭೀಮಸೇನಸ್ಯ ಸಪ್ತಮಾಸೋಪಸಂಗತಾ ।
ಸುಖಂ ಸ ವಿಹರನ್ ಭೀಮಸ್ತಂ ಕಾಲಂ ಪರಿಣಾಮಯತ್ ॥೬॥

ಭೀಮಸೇನನ ಜೊತೆಯಲ್ಲಿ ಏಳು ತಿಂಗಳ ಕಾಲ ವಿಹರಿಸಿದರೂ ಅವಳು ತೃಪ್ತಳಾಗಲಿಲ್ಲ. ಅವಳ ಜೊತೆಯಲ್ಲಿ ಸುಖವಾಗಿ ವಿಹರಿಸುತ್ತಾ ಭೀಮಸೇನನು ಏಳು ತಿಂಗಳನ್ನು ಕಳೆದನು.

ತತೋऽಲಭತ ಸಾ ಗರ್ಭಂ ರಾಕ್ಷಸೀ ಕಾಮರೂಪಿಣೀ ।
ಪ್ರಜಜ್ಞೇ ರಾಕ್ಷಸೀ ಪುತ್ರಂ ಭೀಮಸೇನಾನ್ಮಹಾಬಲಾತ್ ॥೭॥

ಕಾಮರೂಪಿಣಿಯಾದ ಆ ರಾಕ್ಷಸಿಯು ಮಹಾಬಲನಾದ ಭೀಮಸೇನನಿಂದ ಗರ್ಭವನ್ನು ಧರಿಸಿ ತಕ್ಷಣದಲ್ಲಿಯೇ ಮಗನನ್ನು ಪಡೆದಳು.

ವಿರೂಪಾಕ್ಷಂ ಮಹಾವಕ್ತ್ರಂ ಶಂಕುಕರ್ಣಂ ವಿಭೀಷಣಮ್ ।
ಭೀಮರೂಪಂ ಸುತಾಮ್ರಾಕ್ಷಂ ತೀಕ್ಷ್ಣದಂಷ್ಟ್ರಂ ಮಹಾರವಮ್ ॥೮॥

ಮಹೇಷ್ವಾಸಂ ಮಹಾವೀರ್ಯಂ ಮಹಾಸತ್ವಂ ಮಹಾಜವಮ್ ।
ಮಹಾಕಾಯಂ ಮಹಾಕಾಲಂ ಮಹಾಪಾದಂ ಮಹಾಭುಜಮ್ ।
ಅಮಾನುಷಂ ಮಾನುಷಜಂ ಭೀಮವೇಗಮರಿಂದಮಮ್ ॥೯॥

ವಿರೂಪಾಕ್ಷನೂ, ದೊಡ್ಡ ವದನವುಳ್ಳವನೂ, ಶಂಕುಕರ್ಣನೂ, ವಿಭೀಷಣನೂ, ಭಯಂಕರವಾದ ರೂಪವನ್ನು ಹೊಂದಿದವನೂ, ಕೆಂಪಾದ ಕಣ್ಣುಳ್ಳವನೂ, ಹರಿತವಾದ ಕೋರೆದಾಡೆಯುಳ್ಳವನೂ, ಮಹಾರವವುಳ್ಳವನೂ, ಮಹಾಧನುರ್ಧಾರಿಯೂ, ಮಹಾವೀರ್ಯನೂ, ಮಹಾಸತ್ವನೂ, ಮಹಾಜವನೂ, ಮಹಾಕಾಯನೂ, ಮಹಾಪಾದನೂ, ಮಹಾಭುಜನೂ, ಮಹಾಕಪ್ಪುಬಣ್ಣದಿಂದ ಕೂಡಿದವನೂ, ಭೀಮವೇಗವುಳ್ಳವನೂ,ಅರಿಂದಮನೂ, ಅಮಾನುಷನೂ, ಆದರೆ ಮಾನುಷ ಶರೀರವುಳ್ಳ ಭೀಮನಿಂದ ಜನಿಸಿದವನೂ ಆದ ಪುತ್ರನನ್ನು ಪಡೆದಳು.

ಬಾಲೋಽಪಿ ವಿಕ್ರಮಂ ಪ್ರಾಪ್ತೋ ಮಾನುಷೇಷು ವಿಶಾಂಪತೇ ।
ಸರ್ವಾಸ್ತ್ರೇಷು ಪರಂ ವೀರಃ ಪ್ರಕರ್ಷಮಗಮದ್ ಬಲೀ ॥೧೦॥

ರಾಜನೇ, ಅವನು ಬಾಲನಾಗಿದ್ದಾಗಲೇ ಮನುಷ್ಯರಲ್ಲಿ ವಿಕ್ರಮವನ್ನು ಸಾಧಿಸಿ ಎಲ್ಲಾ ಅಸ್ತ್ರಗಳಲ್ಲಿಯೂ ನಿಪುಣತೆಯನ್ನು ಹೊಂದಿ ವೀರನೂ ಬಲಿಷ್ಠನೂ ಆದನು.

ಸದ್ಯೋ ಹಿ ಗರ್ಭಂ ರಾಕ್ಷಸ್ಯೋ ಲಭಂತೇ ಪ್ರಸವಂತಿ ಚ ।
ಕಾಮರೂಪಧರಾಶ್ಚೈವ ಭವಂತಿ ಬಹುರೂಪಿಣಃ ॥೧೧॥

ರಾಕ್ಷಸಿಯರು ತಕ್ಷಣ ಗರ್ಭವನ್ನು ಧರಿಸುತ್ತಾರೆ ಮತ್ತು ಆ ಕ್ಷಣದಲ್ಲಿಯೇ ಪ್ರಸವಿಸುತ್ತಾರೆ. ರಾಕ್ಷಸರು ಅನೇಕ ರೂಪವುಳ್ಳವರೂ ಮತ್ತು ಕಾಮರೂಪ- ವುಳ್ಳವರೂ ಆಗಿರುತ್ತಾರೆ.

ಪ್ರಣಮ್ಯ ವಿಕಚಃ ಪಾದಾವಗೃಹ್ಣಾತ್ ಸ ಪಿತುಸ್ತದಾ ।
ಮಾತುಶ್ಚ ಪರಮೇಷ್ವಾಸಃ ತೌ ಚ ನಾಮಾಸ್ಯ ಚಕ್ರತುಃ ॥೧೨॥

ತಲೆಯ ಮೇಲೆ ಕೂದಲಿಲ್ಲದ ಪರಮೇಶ್ವಾಸನಾದ ಅವನು ಹುಟ್ಟಿದ ತಕ್ಷಣ ತಂದೆ ತಾಯಿಗಳಿಗೆ ನಮಸ್ಕಾರವನ್ನು ಮಾಡಿದನು. ಅವರು ಅವನಿಗೆ ಹೆಸರಿಟ್ಟರು.

ಘಟೋಽಹಮುತ್ಕಚೋಽಸ್ಮೀತಿ ಮಾತರಂ ಸೋಽಭ್ಯಭಾಷತ । ಅಭವತ್
ತೇನ ನಾಮಾಸ್ಯ ಘಟೋತ್ಕಚ ಇತಿ ಸ್ಮ ಹ ॥೧೩॥

ಜನಿಸಿದ ತಕ್ಷಣ ಕನ್ನಡಿಯಲ್ಲಿ ತನ್ನ ಮುಖವನ್ನೂ ಮತ್ತು ತಲೆಯನ್ನೂ ನೋಡಿಕೊಂಡ ಅವನು ತನ್ನ ತಲೆಯು ಘಟದಂತೆ ಕೆಂಪಾಗಿರುವುದನ್ನು ಗಮನಿಸಿ ತಾಯಿಯನ್ನು ಕುರಿತು ನಾನು ಘಟನೂ, ಉತ್ಕಚನೂ (ಶಿರಸ್ಸಿನಲ್ಲಿ ಮೇಲ್ಮುಖವಾದ ಕೂದಲು ಉಳ್ಳವನು) ಆಗಿದ್ದೇನೆ ಎಂದು ಹೇಳಿದನು. ಅದರಿಂದ ಅವನಿಗೆ ಘಟೋತ್ಕಚನೆಂದೇ ಹೆಸರಾಯಿತು.

ಅನುರಕ್ತಶ್ಚ ತಾನಾಸೀತ್ ಪಾಂಡವಾನ್ ಸ ಘಟೋತ್ಕಚಃ ।
ತೇಷಾಂ ಚ ದಯಿತೋ ನಿತ್ಯಮಾತ್ಮಭೂತೋ ಬಭೂವ ಹ ॥೧೪॥

ಆ ಘಟೋತ್ಕಚನು ಪಾಂಡವರಲ್ಲಿ ಅನುರಕ್ತನಾಗಿದ್ದು, ನಿತ್ಯವೂ ಅವರಿಗೆ ಪ್ರಿಯನಾಗಿದ್ದು, ಅವರಿಗೆ ಆತ್ಮಭೂತನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕೋನಷಷ್ಟ್ಯಧಿಕಶತತಮೋಽಧ್ಯಾಯಃ ॥
॥ ಇತಿ ಹಿಡಿಂಬವಧಪರ್ವಣಿ ಸಪ್ತಮೋಽಧ್ಯಾಯಃ ॥

॥ಹಿಡಿಂಬವಧಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಐವತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಹಿಡಿಂಬವಧ ಪರ್ವವು ಮುಗಿಯಿತು

★★★★★

೯. ಬಕವಧಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಜಾತೇ ಸುತೇ ಸಮಯತೋ ಭಗವತ್ಯತಾತ್‌ಸ
ಭೀಮೋ ಜಗಾದ ಸಸುತಾಂ ಗಮನಾಯ ತಾಂ ಚ ।
ಸ್ಮೃತ್ಯಾಭಿಯಾನ ಉಭಯೋರಪಿ ಸಾ ಪ್ರತಿಜ್ಞಾಂ
ತೇಷಾಂ ವಿಧಾಯ ಚ ಯಯೌ ಸುರಲೋಕಮೇವ ॥೬೪॥

ಮಗ ಹುಟ್ಟಿದಾಗ ಭೀಮಸೇನ ವೇದವ್ಯಾಸರ ಮಾತಿನಂತೆ ಹಿಡಿಂಬೆಗೆ ಮಗನೊಂದಿಗೆ ಹೊರಟು ಹೋಗಲು ಆಜ್ಞೆ ಮಾಡಿದ. ನೆನೆದಾಗ ತಾಯಿ ಮಕ್ಕಳಿಬ್ಬರೂ ಬರುವೆವೆಂದು ಪಾಂಡವರಿಗೆ ಮಾತುಕೊಟ್ಟು ಅವಳು ದೇವಲೋಕಕ್ಕೆ ಹೊರಟುಹೋದಳು.

ವ್ಯಾಸೋಽಪಿ ಪಾಂಡುತನಯೈಃ ಸಹಿತೋ ಬಕಸ್ಯ
ರೌದ್ರಾದ್ ವರಾಜ್ಜಯವಧಾಪಗತಸ್ಯ ನಿತ್ಯಂ ।
ಯಾತೋ ವಧಾಯ ಪರಮಾಗಣಿತೋರುಧಾಮಾ
ಪೂರ್ಣಾಕ್ಷಯೋರುಸುಖ ಆಶು ತದೈಕಚಕ್ರಾಂ ॥೬೫॥

ಉತ್ತಮ ಅಸಂಖ್ಯ ಮಹಾಪ್ರಕಾಶಶಾಲಿ ಪೂರ್ಣ ಅಕ್ಷಯ ಮಹಾಸುಖಶಾಲಿಯಾದ ವ್ಯಾಸರು ಶಿವವರದಿಂದ ಎಂದೂ ಪರಾಭವ ಮರಣರಹಿತನಾದ ಬಕಾಸುರನ ಸಂಹಾರಕ್ಕಾಗಿ ಪಾಂಡವರೊಂದಿಗೆ ಬೇಗನೆ ಏಕಚಕ್ರಾನಗರಿಗೆ ಹೋದರು.

ತಾನ್ ಬ್ರಾಹ್ಮಣಸ್ಯ ಚ ಗೃಹೇ ಪ್ರಣಿಧಾಯ ಕೃಷ್ಣಃ
ಶಿಷ್ಯಾ ಮಮೈತ ಇತಿ ವಿಪ್ರಕುಮಾರರೂಪಾನ್ ।
ಆಯಾಮಿ ಕಾಲ ಇತಿ ತಾನನುಶಾಸ್ಯ ಚಾಯಾತ್
ತೇ ತತ್ರ ವಾಸಮಥ ಚಕ್ರುರನೂಚ್ಯ ವೇದಾನ್ ॥೬೬॥

ಬ್ರಾಹ್ಮಣಕುಮಾರರ ವೇಷ ಧರಿಸಿದ್ದ ಪಾಂಡವರನ್ನು ವೇದವ್ಯಾಸರು 'ಇವರು ನನ್ನ ಶಿಷ್ಯರು' ಎನ್ನುತ್ತ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಇರಿಸಿ 'ಯೋಗ್ಯಕಾಲದಲ್ಲಿ ತಿರುಗಿ ಬರುತ್ತೇನೆ' ಎಂದು ಹೇಳಿಹೋದರು. ಪಾಂಡವರು ಅಲ್ಲಿ ವೇದಪಾರಾಯಣ ಮಾಡುತ್ತ ವಾಸಮಾಡಿದರು.

★ ★ ★ ★

ನೂರ ಅರವತ್ತನೆಯ ಅಧ್ಯಾಯ

(ಘಟೋತ್ಕಚ ಮತ್ತು ಹಿಡಿಂಬಿಯರ ಗಮನ, ಬ್ರಾಹ್ಮಣ ವೇಷದಿಂದ ಪಾಂಡವರ ಏಕಚಕ್ರನಗರ ಗಮನ, ಮಾರ್ಗದಲ್ಲಿ ವ್ಯಾಸರ ದರ್ಶನ, ಏಕಚಕ್ರನಗರದಲ್ಲಿ ಬ್ರಾಹ್ಮಣನ ಮನೆಯಲ್ಲಿ ಅವರನ್ನಿಟ್ಟು ವ್ಯಾಸರ ಗಮನ)

ವೈಶಂಪಾಯನಃ

ಘಟೋತ್ಕಚೋ ಮಹಾಕಾಯಃ ಪಾಂಡವಾನ್ ಪೃಥಯಾ ಸಹ ।
ಅಭಿವಾದ್ಯ ಯಥಾನ್ಯಾಯಮಬ್ರವೀಚ್ಚ ಪ್ರಸಾದ್ಯ ತಾನ್ ॥೧॥

ಮಹಾಕಾಯನಾದ ಘಟೋತ್ಕಚನು ಪಾಂಡವರಿಗೂ ಮತ್ತು ಕುಂತಿಗೂ ನಮಸ್ಕಾರವನ್ನು ಮಾಡಿ ಅವರನ್ನು ಸಂತೋಷಪಡಿಸಿ ನ್ಯಾಯಯುಕ್ತವಾಗಿ ಹೀಗೆ ಮಾತನಾಡಿದನು.

ಕಿಂ ಕರೋಮ್ಯಹಮಾರ್ಯಾಣಾಂ ನಿಃಶಂಕಂ ವದತಾನಘಾಃ ।
ಇತಿ ಬ್ರುವಂತಂ ಭೈಮಸೇನಿಂ ಕುಂತೀ ವಚನಮಬ್ರವೀತ್ ॥೨॥

ಅನಘರೇ, ಪೂಜ್ಯರಾದ ನಿಮಗೆ ನಾನು ಏನು ಮಾಡಬೇಕು ಎಂದು ನಿಶ್ಶಂಕೆಯಿಂದ ಹೇಳಿ. ಹೀಗೆ ಹೇಳಿದ ಭೀಮಸೇನನ ಮಗನಾದ ಘಟೋತ್ಕಚನನ್ನು ಕುರಿತು ಕುಂತಿಯು ಹೇಳಿದಳು.

ತ್ವಂ ಕುರೂಣಾಂ ಕುಲೇ ಜಾತಃ ಸಾಕ್ಷಾದ್ ಭೀಮಸುತೋ ಹ್ಯಸಿ ।
ಜ್ಯೇಷ್ಠಪುತ್ರಸ್ತು ಪಂಚಾನಾಂ ಸಾಹಾಯ್ಯಂ ಕುರು ಪುತ್ರಕ ॥೩॥

ನೀನು ಕುರುಗಳ ವಂಶದಲ್ಲಿ ಸಾಕ್ಷಾತ್ ಭೀಮಸೇನನ ಮಗನಾಗಿ ಜನಿಸಿದ್ದೀಯೆ. ನೀನು ಐದು ಜನ ಪಾಂಡವರಿಗೂ ಜ್ಯೇಷ್ಠಪುತ್ರನಾದವನು. ಪುತ್ರನೇ, ನಮಗೆ ಸಹಾಯವನ್ನು ಮಾಡು.

ವೈಶಂಪಾಯನಃ

ಪೃಥಯಾಪ್ಯೇವಮುಕ್ತಸ್ತು ಪ್ರಣಮ್ಯೈವಂ ವಚೋಽಬ್ರವೀತ್ ।
ಯಥಾ ಹಿ ರಾವಣೋ ಲೋಕೇ ಇಂದ್ರಜಿದ್ ವಾ ಮಹಾಬಲಃ ॥೪॥

ತೇಷಾಂ ವೀರ್ಯಸಮೋ ವೀರ್ಯೇ ವಿಶಿಷ್ಟಶ್ಚಾಭವಂ ನೃಷು ।
ಕೃತ್ಯಕಾಲ ಉಪಸ್ಥಾಸ್ಯೇ ಪಿತೄನಿತಿ ಘಟೋತ್ಕಚಃ ।
ಆಮಂತ್ರ್ಯ ರಾಕ್ಷಸಶ್ರೇಷ್ಠಃ ಪ್ರತಸ್ಥೇ ಚೋತ್ತರಾಂ ದಿಶಮ್ ॥೫॥

ಕುಂತಿಯು ಹೀಗೆ ಹೇಳಿದಾಗ ಘಟೋತ್ಕಚನು ಅವಳಿಗೆ ನಮಸ್ಕಾರವನ್ನು ಮಾಡಿ ಹೀಗೆ ಮಾತನಾಡಿದನು. ಲೋಕದಲ್ಲಿ ರಾವಣನೂ, ಇಂದ್ರಜಿತುವೂ ಹೇಗೆ ಮಹಾಬಲರಾಗಿದ್ದರೋ, ನಾನು ಮನುಷ್ಯರಲ್ಲಿ, ಪರಾಕ್ರಮದಲ್ಲಿ ಅವರಿಗೆ ಸಮನಾಗಿ ಅಥವಾ ಅವರಿಗಿಂತಲೂ ಶ್ರೇಷ್ಠನಾಗಿದ್ದೇನೆ. ನಿಮಗೆ ಕಾರ್ಯವಾಗಬೇಕಾದಾಗ ನಾನು ನಿಮ್ಮ ಬಳಿಗೆ ಬರುವೆನು ಎಂದು ಹೇಳಿ ಪಿತೃಗಳ ಅನುಮತಿಯನ್ನು ಪಡೆದು ರಾಕ್ಷಸಶ್ರೇಷ್ಠನಾದ ಘಟೋತ್ಕಚನು ಉತ್ತರದಿಕ್ಕಿಗೆ ಅಭಿಮುಖವಾಗಿ ಹೊರಟನು.

ಸ ಹಿ ಸೃಷ್ಟೋ ಭಗವತಾ ಶಕ್ತಿಹೇತೋರ್ಮಹಾತ್ಮನಾ ।
ಕರ್ಣಸ್ಯಾಪ್ರತಿವೀರ್ಯಸ್ಯ ವಿನಾಶಾಯ ಮಹಾತ್ಮನಃ ॥೬॥

ಮಹಾತ್ಮನಾದ ಮತ್ತು ಪ್ರತಿವೀರರಹಿತನಾದ ಕರ್ಣನ ವಿನಾಶಕ್ಕಾಗಿ ಮಹಾತ್ಮರಾದ ಬ್ರಹ್ಮದೇವರಿಂದ ಅವನು ಶಕ್ತ್ಯಾಯುಧಕ್ಕೆ ಬಲಿಯಾಗುವುದಕ್ಕಾಗಿ ಸೃಷ್ಟಿಸಲ್ಪಟ್ಟವನು.

ಸಂವಾಸಸಮಯೋಽತೀತಃ ತ್ವಯಾ ಕಮಲಮಾಲಿಕೇ ।
ಪುನರ್ದ್ರಕ್ಷ್ಯಸಿ ರಾಜ್ಯಸ್ಥಾನಿತ್ಯಭಾಷತ ತಾಂ ತತಃ ॥೭॥

ಆಗ ಭೀಮಸೇನನು ಹಿಡಿಂಬಿಯನ್ನು ಕುರಿತು ಕಮಲಮಾಲಿಕೆ ನಿನ್ನ ಜೊತೆಯಲ್ಲಿ ಇರುವ ಸಮಯವು ಮುಗಿಯಿತು. ನಾವು ರಾಜ್ಯವನ್ನು ಪಡೆದ ಮೇಲೆ ನೀನು ನಮ್ಮನ್ನು ನೋಡುವಿ ಎಂದು ಹೇಳಿದನು.

ಹಿಡಿಂಬಾ

ಯದಾ ಮೇ ತ್ವಂ ಸ್ಮರೇಃ ಕಾಂತ ರಿರಂಸೂ ರಹಸಿ ಪ್ರಭೋ ।
ತದಾ ತವ ವಶಂ ಭೂಯ ಆಗಂತಾಸ್ಮ್ಯಶು ಭಾರತ ॥೮॥

ಕಾಂತನೇ, ಪ್ರಭುವೇ, ನೀನು ಯಾವಾಗ ನನ್ನನ್ನು ಸ್ಮರಿಸುವೆಯೋ ಆಗ ಏಕಾಂತದಲ್ಲಿ ನನ್ನನ್ನು ರಮಿಸಲು ಬಯಸಿದರೆ, ನಾನು ಬೇಗ ಬಂದು ಪುನಃ ನಿನ್ನ ವಶಳಾಗುವೆನು.

ವೈಶಂಪಾಯನಃ

ಇತ್ಯುಕ್ತ್ವಾ ಸಾ ಜಗಮಾऽಶು ಭಾವಮಾಸಜ್ಯ ಪಾಂಡವೇ ।
ಹಿಡಿಂಬಾ ಸಮಯಂ ಸ್ಮೃತ್ವಾ ಸ್ವಾಂ ಗತಿಂ ಪ್ರತ್ಯಪದ್ಯತ ॥೯॥

ಹಿಡಿಂಬಿಯು ಹೀಗೆ ಹೇಳಿ ಭೀಮಸೇನನಲ್ಲಿ ಪ್ರೀತಿಯನ್ನು ತುಂಬಿ ಮೊದಲು ಮಾಡಿದ ನಿಬಂಧನೆಯನ್ನು ಸ್ಮರಿಸಿ ಬೇಗ ಅಲ್ಲಿಂದ ಹೊರಟು ತನ್ನ ಗತಿಯನ್ನು ಹೊಂದಿದಳು.

ತತಸ್ತೇ ಪಾಂಡವಾಃ ಸರ್ವೇ ಶಾಲಿಹೋತ್ರಾಶ್ರಮೇ ಸದಾ ।
ಪೂಜಿತಾಸ್ತೇನ ವನ್ಯೇನ ತಮಾಮಂತ್ರ್ಯ ಮಹಾಮುನಿಮ್ ॥೧೦॥

ಅನಂತರ ಪಾಂಡವರು ಆ ಶಾಲಿಹೋತ್ರರ ಆಶ್ರಮದಲ್ಲಿ ಯಾವಾಗಲೂ ವನದಲ್ಲಿ ದೊರೆಯುವ ವಸ್ತುಗಳಿಂದ ಪೂಜಿತರಾಗಿ ಆ ಮಹಾಮುನಿಗಳ ಅಪ್ಪಣೆಯನ್ನು ಪಡೆದು ಹೊರಟರು.

ಜಟಾಃ ಕೃತ್ವಾ ऽऽತ್ಮನಃ ಸರ್ವೇ ವಲ್ಕಲಾಜಿನವಾಸಸಃ ।
ಕುಂತ್ಯಾ ಸಹ ಮಹಾತ್ಮಾನೋ ಬಿಭ್ರತಸ್ತಾಪಸಂ ವಪುಃ ॥೧೧॥

ಮಹಾತ್ಮರಾದ ಅವರೆಲ್ಲರೂ ಜಟೆಗಳನ್ನು ಮಾಡಿಕೊಂಡು, ನಾರು ಮಡಿಯನ್ನೂ ಮತ್ತು ಕೃಷ್ಣಾಜಿನವನ್ನೂ ಉಟ್ಟು ತಾಪಸವೇಷವನ್ನು ಧರಿಸಿ ಕುಂತಿಯ ಜೊತೆಯಲ್ಲಿ (ಹೊರಟರು).

ಬ್ರಾಹ್ಮಂ ವೇದಮಧೀಯಾನಾ ವೇದಾಂಗಾನಿ ಚ ಸರ್ವಶಃ ।
ನೀತಿಶಾಸ್ತ್ರಂ ಚ ಧರ್ಮಜ್ಞ ಧರ್ಮಜ್ಞಾನಂ ಚ ಪಾಂಡವಾಃ ॥೧೨॥

ಧರ್ಮಜ್ಞನಾದ ಜನಮೇಜಯನೇ, ಪಾಂಡವರು ಪರಬ್ರಹ್ಮ ಪ್ರತಿಪಾದಕವಾದ ವೇದವನ್ನೂ ಮತ್ತು ಎಲ್ಲಾ ವೇದಾಂಗಗಳನ್ನೂ, ನೀತಿಶಾಸ್ತ್ರವನ್ನೂ ಮತ್ತು ಧರ್ಮಶಾಸ್ತ್ರವನ್ನೂ ಅಧ್ಯಯನ ಮಾಡುತ್ತಾ (ಹೊರಟರು).

ಶಾಲಿಹೋತ್ರಪ್ರಸಾದೇನ ಲಬ್ಧ್ವಾ ಪ್ರೀತಿಮನುತ್ತಮಾಮ್ ।
ತೇ ವನೇನ ವನಂ ಗತ್ವಾ ಘ್ನಂತೋ ಮೃಗಗಣಾನ್ ಬಹೂನ್ ॥೧೩॥

ಶಾಲಿಹೋತ್ರರ ಅನುಗ್ರಹದಿಂದ ಬಹಳ ಸಂತೋಷವನ್ನು ಹೊಂದಿ ಅನೇಕ ಮೃಗಸಮೂಹಗಳನ್ನು ಕೊಲ್ಲುತ್ತಾ ಅವರು ಕಾಡಿನಿಂದ ಕಾಡಿಗೆ ಪ್ರಯಾಣ ಮಾಡಿದರು.

ಅತಿಕ್ರಮ್ಯ ಯಯೂ ರಾಜಂಸ್ತ್ವರಮಾಣಾ ಮಹಾಬಲಾಃ ।
ಮತ್ಸ್ಯಾಂಸ್ತ್ರಿಗರ್ತಾನ್ ಪಾಂಚಾಲಾನ್ ಕೀಚಕಾನಾಂ ವನಾನ್ಯಪಿ ॥೧೪॥

ಮಹಾಬಲರಾದ ಅವರು ತ್ವರೆಯಿಂದ ನಡೆಯುತ್ತಾ, ಮತ್ಸದೇಶವನ್ನೂ, ತ್ರಿಗರ್ತದೇಶವನ್ನೂ, ಪಾಂಚಾಲದೇಶವನ್ನೂ, ಬಿದಿರಿನ ಕಾಡುಗಳನ್ನೂ ದಾಟುತ್ತಾ ಹೊರಟರು.

ರಮಣೀಯಾನ್ ವನೋದ್ದೇಶಾನ್ ಪ್ರೇಕ್ಷಮಾಣಾಃ ಸರಾಂಸಿ ಚ ।
ಕ್ವಚಿದ್ ವಹಂತೋ ಜನನೀಂ ತ್ವರಮಾಣಾ ಮಹಾರಥಾಃ ॥೧೫॥

ಮಹಾರಥರಾದ ಅವರು ರಮಣೀಯವಾದ ವನಪ್ರದೇಶವನ್ನೂ ಮತ್ತು ಸರೋವರಗಳನ್ನೂ ನೋಡುತ್ತಾ ಕೆಲವೊಮ್ಮೆ ತಾಯಿಯನ್ನು ಎತ್ತಿಕೊಂಡು, ತ್ವರೆಯಿಂದ ಹೊರಟರು.

ಕ್ವಚಿಚ್ಛನ್ನೇನ ಗಚ್ಛಂತಸ್ತೇ ಜಗ್ಮುಃ ಪೃಥಯಾ ಸಹ ।
ಪಥಿ ದ್ವೈಪಾಯನಂ ಸರ್ವೇ ದದೃಶುಸ್ತಂ ಪಿತಾಮಹಮ್ ॥೧೬॥

ವೇಷವನ್ನು ಮರೆಸಿಕೊಂಡು ತಾಯಿಯ ಜೊತೆಯಲ್ಲಿ ಹೊರಟ ಅವರೆಲ್ಲರೂ ಒಮ್ಮೆ ದಾರಿಯಲ್ಲಿ ಪಿತಾಮಹರಾದ ದ್ವೈಪಾಯನರನ್ನು ನೋಡಿದರು.

ಅಭಿಪ್ರಣಮ್ಯ ಶಿರಸಾ ಪಾರಾಶರ್ಯಮುಪೇತ್ಯ ಚ ।
ತೇ ಪಾದೌ ಜಗೃಹುಸ್ತಸ್ಯ ಸಹ ಮಾತ್ರಾ ಪರಂತಪ ॥೧೭॥

ಪರಂತಪನೇ, ಅವರು ಪರಾಶರರ ಪುತ್ರರಾದ ವ್ಯಾಸರನ್ನು ಸಮೀಪಿಸಿ ಶಿರಸಾ ಪ್ರಣಾಮವನ್ನು ಮಾಡಿ, ತಾಯಿಯ ಜೊತೆಯಲ್ಲಿ ಅವರ ಪಾದಗಳನ್ನು ಹಿಡಿದರು.

ವ್ಯಾಸಃ

ತದಾಶ್ರಮಾನ್ನಿರ್ಗಮನಂ ಮಯಾ ಜ್ಞಾತಂ ಪರಂತಪಾಃ ।
ಘಟೋತ್ಕಚಸ್ಯ ಚೋತ್ಪತ್ತಿಂ ಜ್ಞಾತ್ವಾ ಪ್ರೀತಿರವರ್ಧತ ॥೧೮॥

ಪರಂತಪರೇ, ನೀವು ಶಾಲಿಹೋತ್ರರ ಆಶ್ರಮದಿಂದ ಹೊರಟ ವಿಷಯವು ನನಗೆ ತಿಳಿಯಿತು. ಘಟೋತ್ಕಚನ ಜನನವನ್ನು ತಿಳಿದು ಬಹಳ ಸಂತೋಷವೂ ಆಯಿತು.

ಇದಂ ನಗರಮಭ್ಯಾಶೇ ರಮಣೀಯಂ ನಿರಾಮಯಮ್ ।
ವಸತೇಹ ಪ್ರತಿಚ್ಛನ್ನಾ ಮಮಾಗಮನಕಾಂಕ್ಷಿಣಃ ॥೧೯॥

ಸಮೀಪದಲ್ಲಿರುವ ಈ ನಗರವು ಮನೋಹರವೂ ಮತ್ತು ನಿರ್ಬಾಧವೂ ಆಗಿದೆ. ವೇಷವನ್ನು ಮರೆಸಿಕೊಂಡು ನನ್ನ ಆಗಮನವನ್ನು ನಿರೀಕ್ಷಿಸುತ್ತಾ ನೀವು ಇಲ್ಲಿ ವಾಸ ಮಾಡಿ.

ವೈಶಂಪಾಯನಃ

ಏವಂ ಸ ತಾನ್ ಸಮಾಶ್ವಾಸ್ಯ ವ್ಯಾಸಃ ಪಾರ್ಥಾನರಿಂದಮಾನ್ ।
ಏಕಚಕ್ರಾಮಭಿಗತಾನ್ ಕುಂತೀಮಾಶ್ವಾಸಯತ್ ಪ್ರಭುಃ ॥೨೦॥

ಹೀಗೆ ಏಕಚಕ್ರನಗರಕ್ಕೆ ಹೊರಟ ಅರಿಂದಮರಾದ ಪಾಂಡವರನ್ನು ಸಮಾಧಾನಪಡಿಸಿ ಪ್ರಭುಗಳಾದ ವ್ಯಾಸರು ಕುಂತಿಗೂ ಸಮಾಶ್ವಾಸನೆಯ ಮಾತುಗಳನ್ನು ಆಡಿದರು.

ವ್ಯಾಸಃ

ಕುರ್ಯಾನ್ನ ಕೇವಲಂ ಧರ್ಮಂ ದುಷ್ಕೃತಂ ಚ ತಥಾ ನರಃ ।
ಸುಕೃತಂ ದುಷ್ಕೃತಂ ಲೋಕೇ ನ ಕರ್ತಾ ನಾಪಿ ಶೋಭನೇ ।
ಅವಶ್ಯಂ ಲಭತೇ ಕರ್ತಾ ಫಲಂ ವೈ ಪುಣ್ಯಪಾಪಯೋಃ ॥೨೧॥

ಯಾವ ಮನುಷ್ಯನೂ ಕೇವಲ ಸತ್ಕರ್ಮವನ್ನಾಗಲೀ ಅಥವಾ ಕೇವಲ ದುಷ್ಕರ್ಮವನ್ನಾಗಲೀ ಮಾಡುವುದಿಲ್ಲ. ಶೋಭನಳೇ, ಲೋಕದಲ್ಲಿ ಸತ್ಕರ್ಮ ಮತ್ತು ದುಷ್ಕರ್ಮ ಎರಡನ್ನೂ ಮಾಡದೇ ಇರುವವರು ಇರುವುದಿಲ್ಲ. ಮಾಡಿದ ಪುಣ್ಯಪಾಪಗಳಿಗೆ ಕರ್ತೃವಾದವನು ಅವಶ್ಯವಾಗಿ ಫಲವನ್ನು ಪಡೆಯುತ್ತಾನೆ.

ದುಷ್ಕೃತಸ್ಯ ಫಲೇನೈವಂ ಪ್ರಾಪ್ತಾ ವ್ಯಸನಮುತ್ತಮಮ್ ।
ತಸ್ಮಾನ್ಮಾಧವಿ ಮಾ ರೋದಃ ಮಾ ಚ ಲೋಕೇ ಮನಃ ಕೃಥಾಃ ॥೨೨॥

ನೀವು ನಿಮ್ಮ ದುಷ್ಕರ್ಮದ ಫಲವಾಗಿ ಈ ಒಂದು ದೊಡ್ಡ ಕಷ್ಟವನ್ನು ಪಡೆದಿದ್ದೀರಿ. ಆದ್ದರಿಂದ ಮಾಧವಿಯೇ, ಅಳಬೇಡ. ದೇವರನ್ನು ಬಿಟ್ಟು ಲೋಕದ ವಿಷಯಗಳಲ್ಲಿ ಮನಸ್ಸನ್ನು ಇಡಬೇಡ.

ವೈಶಂಪಾಯನಃ

ಏವಮುಕ್ತ್ವಾ ನಿವೇಶ್ಯೈತಾನ್ ಬ್ರಾಹ್ಮಣಸ್ಯ ನಿವೇಶನೇ ।
ಜಗಾಮ ಭಗವಾನ್ ವ್ಯಾಸೋ ಯಥಾಕಾಮಮೃಷಿಃ ಪ್ರಭುಃ ॥೨೩॥

ಪೂಜ್ಯರಾದ ವ್ಯಾಸರು ಹೀಗೆ ಹೇಳಿ ಅವರನ್ನು ಒಬ್ಬ ಬ್ರಾಹ್ಮಣನ ಮನೆಯಲ್ಲಿ ಇಟ್ಟು, ಪ್ರಭುಗಳಾದ ಆ ಋಷಿಗಳು ತಮ್ಮ ಇಚ್ಛೆಯಂತೆ ಹೊರಟು ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಷಷ್ಟ್ಯಧಿಕಶತತಮೋऽಧ್ಯಾಯಃ ॥

॥ ಇತಿ ಬಕವಧಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಅರವತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಭಿಕ್ಷಾಮಟತ್ಸು ಸತತಂ ಪ್ರತಿಹುಂಕೃತೇನ
ಭೀಮೇ ವಿಶಾಂ ಸದನ ಏವ ಗೃಹಪ್ರಮಾಣಂ ।
ಭಾಂಡಂ ಕುಲಾಲವಿಹಿತಂ ಪ್ರತಿಗೃಹ್ಯ ಗಚ್ಛ-
ತ್ಯಾಶಂಕಯಾವಗಮನಸ್ಯ ತಮಾಹ ಧರ್ಮಃ ॥೬೭॥

ಪಾಂಡವರು ಭಿಕ್ಷಾಟನೆ ಮಾಡುತ್ತಿದ್ದಾಗ ಭೀಮ ಯಾವಾಗಲೂ ಒಬ್ಬ ಕುಂಬಾರ ಮಾಡಿಕೊಟ್ಟಿದ್ದ ಒಂದು ಮನೆಯಷ್ಟು ದೊಡ್ಡದಾದ ಮಡಿಕೆಯನ್ನು ಹಿಡಿದು ವೈಶ್ಯರ ಮನೆಗೇ ಭಿಕ್ಷೆಗೆ ಹೋಗುತ್ತಿದ್ದ. ಆಗ ಅವನು ಮಾಡುತ್ತಿದ್ದ ಪ್ರತಿ ಹುಂಕಾರದಿಂದಲೂ ಇವರು ಪಾಂಡವರೆಂದು ಜನ ತಿಳಿದಾರೆಂಬ ಭಯದಿಂದ ಧರ್ಮರಾಜ ಭೀಮನಿಗೆ ಹೇಳಿದ.

ಸ್ಥೂಲಂ ಹಿ ಸದ್ಮ ಪೃಥಿವೀಸಹಿತಂ ತ್ವರಕ್ಷ
ಉದ್ಧೃತ್ಯ ವಹ್ನಿಮುಖಿತಸ್ತದು ಚೈಕದೋಷ್ಣಾ ।
ಭಾಂಡಂ ತದರ್ಥಮುರು ಕುಂಭಕರೇಣ ದತ್ತಂ
ಭಿಕ್ಷಾಂ ಚ ತೇನ ಚರಸಿ ಪ್ರತಿಹುಂಕೃತೇನ ॥೬೮॥

ಒಂದು ದೊಡ್ಡ ಮನೆಯನ್ನು ಅದು ಇದ್ದ ಸ್ಥಳ ಸಹಿತವಾಗಿ ಒಂದು ಕೈಯಿಂದೆತ್ತಿ ಅಗ್ನಿಮುಖದಿಂದ ರಕ್ಷಿಸಿದಿ. ಅದಕ್ಕೆ ಮನೆಯೊಡನೆಯನಾದ ಕುಂಬಾರ ಮನೆಯಷ್ಟು ದೊಡ್ಡ ಮಡಿಕೆ ಮಾಡಿಕೊಟ್ಟ. ನೀನು ಪ್ರತಿಯೊಂದು ಹುಂಕಾರದಿಂದಲೂ ಆ ಮಡಿಕೆಯಿಂದ ಭಿಕ್ಷಾಟನೆ ಮಾಡುತ್ತಿರುವಿ.

ಧರ್ಮಸ್ಯ ತೇ ಸುನಿಯತೇರ್ಬಲತಶ್ಚ ಬೋಧೋ
ಭೂಯಾತ್ ಸುಯೋಧನಜನಸ್ಯ ತತೋ ಭಯಂ ಮೇ ।
ಮಾತ್ರಾ ಸಹೈವ ವಸ ಫಲ್ಗುನಪೂರ್ವಕೈಸ್ತ್ವ-
ಮಾನೀತಮೇವ ಪರಿಭುಂಕ್ಷ್ವ ನ ತು ವ್ರಜೇಥಾಃ ॥೬೯॥

ನಿನ್ನ ಧರ್ಮನಿಷ್ಠೆಯಿಂದಲೂ ಬಲದಿಂದಲೂ ದುರ್ಯೋಧನನ ಗೂಢಾಚಾರರಿಗೆ ನಮ್ಮ ಬಗ್ಗೆ ಸುಳಿವು ಸಿಗಬಹುದು. ಅದರಿಂದ ನನಗೆ ಭಯ ಉಂಟಾಗಿದೆ. ನೀನು ತಾಯಿಯೊಂದಿಗೇ ಇರು. ಅರ್ಜುನಾದಿಗಳು ತರುವ ಅನ್ನವನ್ನೆ ಉಣ್ಣು. ಹೋಗಬೇಡ.

ಇತ್ಯುಕ್ತ ಆಶು ಸ ಚಕಾರ ತಥೈವ ಭೀಮ-
ಸ್ತೇऽಪಿ ಸ್ವಧರ್ಮಪರಿರಕ್ಷಣಹೇತುಮೌನಾಃ ।
ಭಿಕ್ಷಾಂ ಚರಂತ್ಯಥ ಚತುರ್ಷ್ವಪಿ ತೇಷು ಯಾತೇ-
ಷ್ವೇಕತ್ರ ಮಾತೃಸಹಿತಃ ಸ ಕದಾಚಿದಾಸ್ತೇ ॥೭೦॥

ಧರ್ಮರಾಜ ಹೀಗೆ ಹೇಳಿದಾಗ ಭೀಮ ಒಡನೆಯೆ ಹಾಗೇ ಮಾಡಿದ. ಉಳಿದವರು ಸ್ವಧರ್ಮ ರಕ್ಷಣೆಗಾಗಿ ಮೌನದಿಂದಿದ್ದು ಭಿಕ್ಷಾಟನ ಮಾಡುತ್ತಿದ್ದರು. ಬಳಿಕ ಒಂದು ದಿನ ನಾಲ್ವರೂ ಭಿಕ್ಷಾಟನೆ ಹೋಗಿದ್ದಾಗ ಭೀಮನೊಬ್ಬನೇ ತಾಯಿಯೊಂದಿಗೆ ಕುಳಿತಿದ್ದ.

ತತ್ಕಾಲ ಏವ ರುದಿತಂ ನಿಜವಾಸಹೇತೋ-
ರ್ವಿಪ್ರಸ್ಯ ದಾರಸಹಿತಸ್ಯ ನಿಶಮ್ಯ ಭೀಮಃ ।
ಸ್ತ್ರೀಬಾಲಸಂಯುತಗೃಹೇ ಶಿಶುಲಾಳನಾದೌ
ಲಜ್ಜೇದಿತಿ ಸ್ಮ ಜನನೀಮವದನ್ನ ಚಾಗಾತ್ ॥೭೧॥

ಅದೇ ಸಮಯದಲ್ಲಿ ತಾವು ವಾಸವಾಗಿದ್ದ ಮನೆಯೊಡೆಯ ಬ್ರಾಹ್ಮಣ ಪತ್ನಿಯೊಂದಿಗೆ ಅಳುತ್ತಿದ್ದುದನ್ನು ಕೇಳಿ ಭೀಮ ಮಕ್ಕಳಿರುವ ಮನೆಯಲ್ಲಿ ಹೆಂಗಸು ಮಗುವಿನ ಲಾಲನಾದಿಗಳಲ್ಲಿ ಲಜ್ಜೆಪಡಬಹುದೆಂದು ತಾಯಿಯನ್ನೇ ಕಳಿಸಿದ. ತಾನು ಹೋಗಲಿಲ್ಲ.

ಜಾನೀಹಿ ವಿಪ್ರರುದಿತಂ ಕುತ ಇತ್ಯತಶ್ಚ
ಯೋಗ್ಯಂ ವಿಧಾಸ್ಯ ಇತಿ ಸಾ ಪ್ರಯಯೌ ಚ ಶೀಘ್ರಂ ।
ಸಾ ಸಂವೃತೈವ ಸಕಲಂ ವಚನಂ ಗೃಹೇऽಸ್ಯ
ಶುಶ್ರಾವ ವಿಪ್ರವರ ಆಹ ತದಾ ಪ್ರಿಯಾಂ ಸಃ ॥೭೨॥

'ಬ್ರಾಹ್ಮಣ ಯಾವ ಕಾರಣದಿಂದ ಅಳುತ್ತಿದ್ದಾನೆ ಎಂಬುದನ್ನು ತಿಳಿದುಕೊ, ಅದಕ್ಕೆ ತಕ್ಕ ಪರಿಹಾರವನ್ನು ನಾನು ಮಾಡುವೆನೆಂದು ಹೇಳಿ ಭೀಮ ಕುಂತಿಯನ್ನು ಕಳಿಸಿದ. ಕುಂತಿ ಬೇಗನೆ ಹೋದಳು ಮರೆಯಲ್ಲಿನಿಂತು ಮನೆಯೊಳಗೆ ಬ್ರಾಹ್ಮಣನಾಡಿದ ಎಲ್ಲ ಮಾತುಗಳನ್ನೂ ಕೇಳಿದಳು. ಬ್ರಾಹ್ಮಣ ತನ್ನ ಪತ್ನಿಗೆ ಹೀಗೆ ಹೇಳುತ್ತಿದ್ದ.

ದಾತವ್ಯ ಏವ ಹಿ ಕರೋಽದ್ಯ ಚ ರಕ್ಷಸೋಽಸ್ಯ
ಸಾಕ್ಷಾದ್‌ಬಕಸ್ಯ ಗಿರಿಸನ್ನಿಭಭಕ್ಷ್ಯಭೋಜ್ಯಃ ।
ಪುಂಸಾನಸಾ ಚ ಸಹಿತೋಽನಡುಹಾ ಪುಮಾಂಸ್ತು
ನೈವಾಸ್ತಿ ನೋಽಪ್ರದದತಾಂ ಚ ಸಮಸ್ತನಾಶಃ ॥೭೩॥

ಬೆಟ್ಟದಷ್ಟು ಗಾತ್ರದ ಭಕ್ಷ್ಯಭೋಜ್ಯಗಳ ರಾಶಿಯನ್ನು ಬಂಡಿಯಲ್ಲಿ ತುಂಬಿ ಎತ್ತುಗಳು ಮತ್ತು ಮನುಷ್ಯನೊಂದಿಗೆ ನಾವು ಇಂದೇ ಬಕ ರಾಕ್ಷಸನಿಗೆ ಕಪ್ಪವಾಗಿ ಕೊಡಬೇಕಾಗಿದೆ. ನಮ್ಮಲ್ಲಿ ಮನುಷ್ಯನಿಲ್ಲ. ಆದರೆ ಕೊಡದಿದ್ದರೆ ಸರ್ವನಾಶ ನಿಶ್ಚಿತ.

★ ★ ★ ★

ನೂರ ಅರವತ್ತೊಂದನೆಯ ಅಧ್ಯಾಯ

(ಪಾಂಡವರ ಭೈಕ್ಷಚರ್ಯೆ, ಪುರವಾಸಿಗಳ ಪ್ರೀತಿ, ಬ್ರಾಹ್ಮಣ ಗೃಹದಲ್ಲಿ ಆರ್ತನಾದ, ಕಾರಣವನ್ನು ತಿಳಿಯಲು ಕುಂತಿಯ ಪ್ರವೇಶ)

ಜನಮೇಜಯಃ

ಏಕಚಕ್ರಾಂ ಗತಾಃ ಪಾರ್ಥಾಃ ಕುಂತೀಪುತ್ರಾ ಮಹಾಬಲಾಃ ।
ಅತಃ ಪರಂ ದ್ವಿಜಶ್ರೇಷ್ಠ ಕಿಮಕುರ್ವತ ಕರ್ಶಿತಾಃ ॥೧॥

ಬ್ರಾಹ್ಮಣಶ್ರೇಷ್ಠರೇ, ಏಕಚಕ್ರನಗರವನ್ನು ತಲುಪಿದ ಮಹಾಬಲರೂ, ಕಷ್ಟಕ್ಕೆ ಸಿಲುಕಿದವರೂ ಆದ ಕುಂತೀಪುತ್ರರಾದ ಪಾಂಡವರು ಮುಂದೆ ಏನು ಮಾಡಿದರು?

ವೈಶಂಪಾಯನಃ

ಏಕಚಕ್ರಾಂ ಗತಾಃ ಪಾರ್ಥಾ ಬ್ರಾಹ್ಮಣಸ್ಯ ನಿವೇಶನೇ ।
ರಮಣೀಯಾನಿ ಪಶ್ಯಂತೋ ವನಾನ್ಯುಪವನಾನಿ ಚ ॥೨॥

ಪಾರ್ಥಿವಾನಪಿ ಚೋದ್ದೇಶಾನ್ ಸರಿತಶ್ಚ ಸರಾಂಸಿ ಚ ।
ಚೇರುರ್ಭೈಕ್ಷಂ ಸದಾ ತೇ ತು ಸರ್ವ ಏವ ವಿಶಾಂಪತೇ ॥೩॥

ಏಕಚಕ್ರನಗರವನ್ನು ತಲುಪಿದ ಪಾಂಡವರು, ಬ್ರಾಹ್ಮಣನ ಮನೆಯಲ್ಲಿ ವಾಸಮಾಡಿ ಸುತ್ತಮುತ್ತಲಿನ ರಮಣೀಯವಾದ ವನ ಉಪವನಗಳನ್ನೂ, ಸರೋವರ ನದಿಗಳನ್ನೂ, ಭೂಪ್ರದೇಶಗಳನ್ನೂ ನೋಡುತ್ತಾ ಭಿಕ್ಷಾನ್ನದಿಂದ ಜೀವನ ಮಾಡಿದರು.

ಯುಧಿಷ್ಠಿರಂ ಚ ಕುಂತೀಂ ಚ ಚಿಂತಯಂತ ಉಪಾಸತೇ ।
ಭೈಕ್ಷಂ ಚರಂತಸ್ತು ತದಾ ಜಟಿಲಾ ಬ್ರಹ್ಮಚಾರಿಣಃ ।
ಬಭೂವುರ್ನಾಗರಾಣಾಂ ತೇ ಸ್ವಗುಣೈಃ ಪ್ರಿಯದರ್ಶನಾಃ ॥೪॥

ಯುಧಿಷ್ಠಿರನನ್ನೂ ಮತ್ತು ಕುಂತಿಯನ್ನೂ ಸೇವಿಸುತ್ತಾ ಕೃಷ್ಣಾಜಿನಧಾರಿ- ಗಳಾದ, ಸುಂದರರಾದ ಬ್ರಹ್ಮಚಾರಿಗಳಾದ, ಅವರು ಭೈಕ್ಷ್ಯವನ್ನು ಆಚರಿಸುತ್ತಾ ತಮ್ಮ ಗುಣಗಳಿಂದ ನಗರವಾಸಿಗಳಿಗೆ ಪ್ರೀತಿಪಾತ್ರರಾದರು.

ನಾಗರಾಃ

ದರ್ಶನೀಯಾ ದ್ವಿಜಾಃ ಶುದ್ಧಾ ದೇವಗರ್ಭೋಪಮಾಃ ಶುಭಾಃ ।
ಭೈಕ್ಷಾನರ್ಹಾಶ್ಚ ರಾಜ್ಯಾರ್ಹಾಃ ಸುಕುಮಾರಾಸ್ತಪಸ್ವಿನಃ ॥೫॥

ಈ ಬ್ರಾಹ್ಮಣರೆಲ್ಲರೂ ಮಂಗಳಸ್ವರೂಪರಾಗಿ, ಶುದ್ಧರಾಗಿ, ಸುಂದರರಾಗಿ, ದೇವಕುಮಾರರಂತಿದ್ದಾರೆ. ಸುಕುಮಾರರೂ, ತಪಸ್ವಿಗಳೂ ಆದ ಇವರು, ರಾಜ್ಯವನ್ನು ಆಳಲು ಅರ್ಹರಾದವರು. ಭೈಕ್ಷ್ಯಚರ್ಯೆಯನ್ನು ಮಾಡಲು ಅರ್ಹರಾದವರಲ್ಲ.

ಸರ್ವಲಕ್ಷಣಸಂಪನ್ನಾ ಭೈಕ್ಷಂ ನಾರ್ಹಂತಿ ನಿತ್ಯಶಃ ।
ಕಾರ್ಯಾರ್ಥಿನಶ್ಚರಂತೀತಿ ತರ್ಕಯಂತ ಇತಿ ಬ್ರುವನ್ ॥೬॥

ಸರ್ವಲಕ್ಷಣಸಂಪನ್ನರಾದ ಇವರು ಭೈಕ್ಷ್ಯವನ್ನು ಬೇಡಲು ಅರ್ಹರಲ್ಲ. ಏನೋ ಕಾರ್ಯಾರ್ಥಿಗಳಾಗಿ ನಿತ್ಯವೂ ಭಿಕ್ಷವನ್ನು ಬೇಡುತ್ತಾರೆ ಎಂದು ಊಹಿಸಿ ಹೀಗೆ ಮಾತನಾಡಿದರು.

ಬಂಧೂನಾಮಾಗಮಾನ್ನಿತ್ಯಮುಪಚಿಂತ್ಯ ತು ನಾಗರಾಃ ।
ಭಾಜನಾನಿ ಚ ಪೂರ್ಣಾನಿ ಭಕ್ಷ್ಯಭೋಜ್ಯೈರಕಾರಯನ್ ॥೭॥

ಪಾಂಡವರು ಮನೆಗೆ ಭಿಕ್ಷೆಗೆ ಬಂದಾಗ ನಗರವಾಸಿಗಳು ತಮ್ಮ ಬಂಧುಗಳು ಮನೆಗೆ ಬಂದರೆಂದು ತಿಳಿದು ಅವರ ಪಾತ್ರೆಗಳನ್ನು ಭಕ್ಷ್ಯಭೋಜ್ಯಗಳಿಂದ ತುಂಬುತ್ತಿದ್ದರು.

ಮೌನವ್ರತೇನ ಸಂಪೂರ್ಣಾ ಭೈಕ್ಷಂ ಗೃಹ್ಣಂತಿ ಪಾಂಡವಾಃ ।
ಮಾತಾ ಚಿರಗತಾನ್ ದೃಷ್ಟ್ವಾ ಶೋಚತೀತಿ ಚ ಪಾಂಡವಾಃ ॥೮॥

ತ್ವರಮಾಣಾ ನಿವರ್ತಂತೇ ಮಾತೃಗೌರವಯಂತ್ರಿತಾಃ ।
ನಿವೇದಯಂತಿ ಸ್ಮ ಸದಾ ಭೈಕ್ಷಂ ಕುಂತ್ಯೈ ಚ ತೇ ನಿಶಿ ॥೯॥

ಪಾಂಡವರು ಪೂರ್ಣವಾದ ಮೌನವ್ರತವನ್ನು ಧರಿಸಿ ಭಿಕ್ಷೆಯನ್ನು ಸ್ವೀಕರಿಸುತ್ತಿದ್ದರು. ಹೊರಟು ಬಹಳ ಹೊತ್ತಾದರೇ ತಾಯಿಯು ಗಾಭರಿಯಾಗುವಳೆಂದು ಚಿಂತಿಸಿ, ತಾಯಿಯ ಮೇಲಿನ ಗೌರವದಿಂದ ಪಾಂಡವರು ಬೇಗ ಹಿಂತಿರುಗುತ್ತಿದ್ದರು. ರಾತ್ರಿಯ ವೇಳೆಯಲ್ಲಿ ತಂದ ಭಿಕ್ಷವನ್ನು ತಾಯಿಯಾದ ಕುಂತಿಗೆ ಒಪ್ಪಿಸುತ್ತಿದ್ದರು.

ತಯಾ ವಿಭಕ್ತಾನ್ ಭಿಕ್ಷಾನ್ ಭುಂಜತೇ ಸ್ಮ ಪೃಥಕ್ಪೃಥಕ್ ।
ಅರ್ಧಂ ತು ಭುಂಜತೇ ವೀರಾಃ ಸಹ ಮಾತ್ರಾ ಪರಂತಪಾಃ ॥೧೦॥

ಅವಳು ವಿಭಾಗಿಸಿದ ಭಿಕ್ಷಾನ್ನವನ್ನು ಅವರು ಬೇರೆ ಬೇರೆಯಾಗಿ ತಿನ್ನುತ್ತಿದ್ದರು. ಭಿಕ್ಷಾನ್ನದ ಅರ್ಧಭಾಗವನ್ನು ಕುಂತಿಯು ಮತ್ತು ಪರಂತಪರಾದ ನಾಲ್ಕು ಮಕ್ಕಳು ಸೇವಿಸುತ್ತಿದ್ದರು.

ಅರ್ಧಂ ಸರ್ವಸ್ಯ ಭೈಕ್ಷಸ್ಯ ಭೀಮೋ ಭುಂಕ್ತೇ ಮಹಾಭುಜಃ ।
ನ ಚಾಶಿತಂ ಸ್ಮ ಭವತಿ ಕಲ್ಯಾಣಾನ್ನಭೃತಃ ಪುರಾ ॥೧೧॥

ಉಳಿದ ಅರ್ಧವನ್ನು ಮಹಾಭುಜನಾದ ಭೀಮಸೇನನೊಬ್ಬನೇ ಸೇವಿಸುತ್ತಿದ್ದನು. ಇಷ್ಟಾದರೂ ಹಿಂದೆ ಒಳ್ಳೆಯ ಊಟವನ್ನು ಮಾಡಿದ ಭೀಮಸೇನನಿಗೆ ಊಟ ಮಾಡಿದಂತೆ ಆಗುತ್ತಿರಲಿಲ್ಲ.

ಭೀಮೋ ವಿಕ್ರೀಡಯಿತ್ವಾ ತು ಮಿಥೋ ಬ್ರಾಹ್ಮಣಬಂಧುಷು ।
ಕುಂಭಕಾರೇಣ ಸಂಬಂಧಂ ಕೃತ್ವಾ ಪಾತ್ರಂ ಬೃಹತ್ತತಃ ॥೧೨॥

ಭೀಮನು ಬ್ರಾಹ್ಮಣಬಂಧುಗಳ ಜೊತೆಯಲ್ಲಿ ಹೀಗೆ ಪರಸ್ಪರವಾಗಿ ಆಟವಾಡಿ ಒಬ್ಬ ಕುಂಬಾರನ ಉರಿಯುತ್ತಿದ್ದ ಮನೆಯನ್ನು ಎತ್ತಿ ಅವನನ್ನು ರಕ್ಷಿಸಿ ಅವನ ಪ್ರೀತಿಯನ್ನು ಪಡೆದು ಅವನಿಂದ ಒಂದು ದೊಡ್ಡ ಪಾತ್ರೆಯನ್ನು ಮಾಡಿಸಿದನು.

ಸ ದದಾತಿ ಮಹತ್ ಪಾತ್ರಂ ಭೀಮಾಯ ಪ್ರಹಸನ್ನಿವ ।
ತಸ್ಯಾದ್ಭುತಂ ಕರ್ಮ ಕೃತ್ವಾ ಮಹನ್ಮೃದ್ಭಾರಮಾದದೇ ॥೧೩॥

ತಸ್ಯ ಭಾರಃ ಶತಗುಣಃ ಕುಂಭಕಾರಮತೋಷಯತ್ ।
ಚಕ್ರೇ ಚಕ್ರೇ ತು ಮೃದ್ಭಾಂಡಂ ಸತತಂ ಭೈಕ್ಷಹಾರಕಮ್ ॥೧೪॥

ಕುಂಬಾರನು ಭೀಮನಿಗೆ ನಗುತ್ತಾ ದೊಡ್ಡ ಪಾತ್ರೆಯನ್ನು ಮಾಡಿಕೊಡುತ್ತಿದ್ದನು. ಒಂದು ಬಾರಿ ಭೀಮನು ಎತ್ತಿದ ನೂರುಮಣ ಭಾರವಾದ ಮಣ್ಣಿನ ಮುದ್ದೆಯನ್ನು ನೋಡಿ ಸಂತುಷ್ಟನಾದ ಕುಂಬಾರನು ಸತತವಾಗಿ ಅವನಿಗೆ ಭಿಕ್ಷೆಯನ್ನು ತರುವ ದೊಡ್ಡ ದೊಡ್ಡ ಮಣ್ಣಿನ ಪಾತ್ರೆಗಳನ್ನು ಮಾಡಿಕೊಡುತ್ತಿದ್ದನು.

ತದಾದಾಯಾಗತಂ ದೃಷ್ಟ್ವಾ ಹಸಂತಿ ಪ್ರಹಸಂತಿ ಚ ।
ಭಕ್ಷ್ಯಭೋಜ್ಯಾನಿ ವಿವಿಧಾನ್ಯಾದಾಯ ಪ್ರಕ್ಷಿಪಂತಿ ಚ ॥೧೫॥

ಅಷ್ಟು ದೊಡ್ಡಪಾತ್ರೆಯನ್ನು ತೆಗೆದುಕೊಂಡು ಭಿಕ್ಷೆಗೆ ಬಂದ ಭೀಮನನ್ನು ನೋಡಿ ನಗರ ವಾಸಿಗಳು ಚೆನ್ನಾಗಿ ನಕ್ಕು ಆ ಪಾತ್ರೆಯೊಳಗೆ ವಿವಿಧವಾದ ಭಕ್ಷ್ಯಭೋಜ್ಯಗಳನ್ನು ಹಾಕುತ್ತಿದ್ದರು.

ಫಲಮೂಲಾನಿ ಚಾನ್ಯಾನಿ ಸಖಾಯಶ್ಚಾಹರಂತಿ ಚ ।
ಏವಮೇಷ ಸದಾ ಭುಕ್ತ್ವಾ ಮಾತ್ರೇ ವದತಿ ವೈ ರಹಃ ॥೧೬॥

ನ ಚಾಶಿತೋಽಸ್ಮಿ ಭವತಿ ಕಲ್ಯಾಣಾನ್ನಭೃತಃ ಪುರಾ ।
ಸ ವೈವರ್ಣ್ಯಂ ಚ ಕಾರ್ಶ್ಯಂ ಚ ಜಗಾಮಾತೃಪ್ತಿಕಾರಿತಮ್ ॥೧೭॥

ಸ್ನೇಹಿತರು ಬೇರೆ ಫಲಗಳನ್ನೂ, ಗೆಡ್ಡೆಗೆಣಸುಗಳನ್ನೂ ತಂದು ಹಾಕುತ್ತಿದ್ದರು. ಅದೆಲ್ಲವನ್ನೂ ತಿಂದರೂ ಹಿಂದೆ ಒಳ್ಳೆಯ ಊಟವನ್ನು ಮಾಡಿದ ಭೀಮನು ತಾಯಿಯನ್ನು ಕುರಿತು ಏಕಾಂತದಲ್ಲಿ ''ಪೂಜ್ಯಳೇ ನಾನು ಊಟವನ್ನು ಮಾಡಿಲ್ಲ'' ಎಂದು ಹೇಳುತ್ತಿದ್ದನು. ಅವನು ತನ್ನ ಹೊಟ್ಟೆಯು ತುಂಬದ ಕಾರಣ ಕೃಶನಾಗಿ ಕಳೆಗುಂದಿದನು.

ತಥೈವ ವಸತಾಂ ತೇಷಾಂ ತತೋ ರಾಜನ್ ಮಹಾತ್ಮನಾಮ್ ।
ಅತಿಚಕ್ರಾಮ ಸುಮಹಾನ್ ಕಾಲೋಽಥ ಭರತರ್ಷಭ ॥೧೮॥

ಭರತಶ್ರೇಷ್ಠನಾದ ರಾಜನೇ, ಆ ಮಹಾತ್ಮರು ಅಲ್ಲಿ ಹಾಗೆ ವಾಸ ಮಾಡುತ್ತಿರಲು ಬಹಳ ಕಾಲವು ಕಳೆದು ಹೋಯಿತು.

ತತಃ ಕದಾಚಿದ್ ಭೈಕ್ಷಾರ್ಥಂ ಗತಾಸ್ತೇ ಪುರುಷರ್ಷಭಾಃ ।
ಸಂಗತ್ಯ ಭೀಮಸೇನಸ್ತು ತತ್ರಾಸ್ತೇ ಪೃಥಯಾ ಸಹ ॥೧೯॥

ಅನಂತರ ಒಮ್ಮೆ ಭಿಕ್ಷೆಯನ್ನು ತರಲು ಆ ಪುರುಷಶ್ರೇಷ್ಠರು ಮನೆಯಿಂದ ಹೊರಗೆ ಹೋದರು. ಭೀಮಸೇನನು ತಾಯಿಯ ಜೊತೆಯಲ್ಲಿ ಮನೆಯಲ್ಲಿಯೇ ಇದ್ದನು.

ಅಥಾರ್ತಿಜಂ ಮಹಾಶಬ್ದಂ ಬ್ರಾಹ್ಮಣಸ್ಯ ನಿವೇಶನೇ ।
ಭೃಶಮುತ್ಪತಿತಂ ಕ್ರೂರಂ ಕುಂತೀ ಶುಶ್ರಾವ ಭಾರತ ॥೨೦॥

ಭಾರತನೇ, ಆಗ ಆ ಬ್ರಾಹ್ಮಣನ ಮನೆಯಲ್ಲಿ ದುಃಖದಿಂದ ಒಮ್ಮೆಲೇ ಉಂಟಾದ ಕ್ರೂರವಾದ ಮಹಾಶಬ್ದವನ್ನು ಕುಂತಿಯು ಕೇಳಿದಳು.

ರೋರೂಯಮಾಣಾಂಸ್ತಾನ್ ಸರ್ವಾನ್ ಪರಿದೇವಯತಶ್ಚ ಸಾ ।
ಕಾರುಣ್ಯಾತ್ ಸಾಧುಭಾವಾಚ್ಚ ಕುಂತೀ ರಾಜನ್ ನ ಚಕ್ಷಮೇ ॥೨೧॥

ರಾಜನೇ, ಆ ಮನೆಯವರೆಲ್ಲರೂ ಮತ್ತೆ ಮತ್ತೆ ಅಳುವುದನ್ನೂ, ವಿಲಾಪ ಮಾಡುವುದನ್ನೂ ಕೇಳಿದ ಕುಂತಿಯು ಸಜ್ಜನಳಾದ ಕಾರಣ ಕರುಣೆಯಿಂದ ಕರಗಿ ಅದನ್ನು ಸಹಿಸಲಿಲ್ಲ.

ಮಥ್ಯಮಾನೇವ ದುಃಖೇನ ಹೃದಯೇನ ಪೃಥಾ ತತಃ ।
ಉವಾಚ ಭೀಮಂ ಕಲ್ಯಾಣೇ ಕೃಪಾನ್ವಿತಮಿದಂ ವಚಃ ॥೨೨॥

ಕಲ್ಯಾಣಿಯಾದ ಕುಂತಿಯು ದುಃಖದಿಂದ ಕೂಡಿದ ಹೃದಯದಿಂದ ಕಡೆಯಲ್ಪಟ್ಟವಳಂತೆ ಕೃಪೆಯಿಂದ ಕೂಡಿ ಭೀಮನನ್ನು ಕುರಿತು ಈ ಮಾತುಗಳನ್ನು ಆಡಿದಳು.

ವಸಾಮಃ ಸುಸುಖಂ ಪುತ್ರ ಬ್ರಾಹ್ಮಣಸ್ಯ ನಿವೇಶನೇ ।
ಅಜ್ಞಾತಾ ಧಾರ್ತರಾಷ್ಟ್ರಾಣಾಂ ಸತೃತಾ ವೀತಮನ್ಯವಃ ॥೨೩॥

ಪುತ್ರನೇ, ಈ ಬ್ರಾಹ್ಮಣನ ಮನೆಯಲ್ಲಿ ದುರ್ಯೋಧನಾದಿಗಳಿಗೆ ತಿಳಿಯದಂತೆ ನಾವು ಸತ್ಕೃತರಾಗಿ, ಶಾಂತರಾಗಿ ಸುಖದಿಂದ ವಾಸಿಸುತ್ತಿದ್ದೇವೆ.

ಸಾ ಚಿಂತಯೇ ಸದಾ ಪುತ್ರ ಬ್ರಾಹ್ಮಣಸ್ಯಾಸ್ಯ ಕಿಂ ನ್ವಹಮ್ ।
ಕದಾ ಪ್ರಿಯಂ ಕರಿಷ್ಯಾಮಿ ಯತ್ಕೃತ್ಯಾಮುಷಿತಾ ವಯಮ್ ॥೨೪॥

ಪುತ್ರನೇ, ಯಾವ ಬ್ರಾಹ್ಮಣನ ಮನೆಯಲ್ಲಿ ನಾವು ಸುಖವಾಗಿ ವಾಸಿಸುತ್ತಿದ್ದೇವೆಯೋ ಅವನಿಗೆ ಏನು ಉಪಕಾರವನ್ನು ಮಾಡಲಿ ಎಂದು ಯಾವಾಗಲೂ ಯೋಚಿಸುತ್ತಿರುತ್ತೇನೆ.

ಏತಾವಾನ್ ಪುರುಷಸ್ತಾತ ಕೃತಂ ಯಸ್ಮಿನ್ ನ ನಶ್ಯತಿ ।
ಯಾವಚ್ಚ ಕುರ್ಯಾದನ್ಯೋಽಸ್ಯ ಕುರ್ಯಾದಭ್ಯಧಿಕಂ ತತಃ ॥೨೫॥

ಯಾರಿಗೆ ಉಪಕಾರವನ್ನು ಮಾಡಿದರೆ ಅದು ಎಂದೂ ನಾಶವಾಗುವುದಿಲ್ಲವೋ ಈ ಬ್ರಾಹ್ಮಣನು ಅಂತಹ ವ್ಯಕ್ತಿ . ಪುತ್ರನೇ, ಇನ್ನೊಬ್ಬರು ನಮಗೆ ಏನು ಉಪಕಾರವನ್ನು ಮಾಡುತ್ತಾರೆಯೋ ನಾವು ಅವರಿಗೆ ಅದಕ್ಕಿಂತ ಹೆಚ್ಚಿನ ಉಪಕಾರವನ್ನು ಮಾಡಬೇಕು.

ತಥೇದಂ ಬ್ರಾಹ್ಮಣಸ್ಯಾಸ್ಯ ದುಃಖಮಾಪತಿತಂ ಧ್ರುವಮ್ ।
ತತ್ರಾಸ್ಯ ಯದಿ ಸಾಹಾಯ್ಯಂ ಕುರ್ಯಾಂ ಸಾಧು ಕೃತಂ ಭವೇತ್ ।
ಗತ್ವಾ ಜ್ಞಾಸ್ಯಾಮಿ ಯದ್ ದುಃಖಂ ಬ್ರಾಹ್ಮಣಸ್ಯಾಭವತ್ ತದಾ ॥೨೬॥

ಈಗ ಈ ಬ್ರಾಹ್ಮಣನಿಗೆ ನಿಶ್ಚಿತವಾಗಿ ದುಃಖವು ಒದಗಿದೆ. ಅವನಿಗೆ ಈಗ ಸಹಾಯ ಮಾಡಿದರೆ ಒಳ್ಳೆಯ ಕೆಲಸವನ್ನು ಮಾಡಿದಂತಾಗುತ್ತದೆ. ನಾನು ಹೋಗಿ ಬ್ರಾಹ್ಮಣನ ದುಃಖದ ಕಾರಣವನ್ನು ತಿಳಿಯುವೆನು.

ಭೀಮಸೇನಃ

ಜ್ಞಾಯತಾಮಸ್ಯ ಯದ್ ದುಃಖಂ ಯತಶ್ಚೈವ ಸಮುತ್ಥಿತಮ್ ।
ವಿದಿತ್ವಾ ವ್ಯವಸಿಷ್ಯಾಮಿ ಯದ್ಯಪಿ ಸ್ಯಾತ್ ಸುದುಷ್ಕರಮ್ ॥೨೭॥

ನೀನು ಹೋಗಿ ಅವನಿಗೆ ಏನು ದುಃಖವು ಬಂದಿದೆ ಮತ್ತು ಅದು ಯಾರಿಂದ ಉಂಟಾಗಿದೆ ಎಂದು ತಿಳಿ. ಅದನ್ನು ತಿಳಿದ ಮೇಲೆ ನಾನು ಆ ಕಾರ್ಯವು ದುಸ್ತರವಾಗಿದ್ದರೂ ಅದನ್ನು ಮಾಡಲು ನಿರ್ಧರಿಸುವೆನು.

ವೈಶಂಪಾಯನಃ

ತಥೈವ ಕಥಯಂತೌ ತೌ ಭೂಯಃ ಶುಶ್ರುವತುಃ ಸ್ವನಮ್ ।
ಆರ್ತಿಜಂ ತಸ್ಯ ದುಃಖಸ್ಯ ಸಭಾರ್ಯಸ್ಯ ವಿಶಾಂಪತೇ ॥೨೮॥

ರಾಜನೇ, ಹಾಗೆ ಮಾತನಾಡುತ್ತಿದ್ದ ಅವರು ಪುನಃ ಬ್ರಾಹ್ಮಣನ ಮತ್ತು ಅವನ ಪತ್ನಿಯ ದುಃಖದಿಂದ ಉಂಟಾದ ರೋದನ ಧ್ವನಿಯನ್ನು ಕೇಳಿದರು.

ಅಂತರ್ಗೃಹಂ ತತಸ್ತಸ್ಯ ಬ್ರಾಹ್ಮಣಸ್ಯ ಮಹಾತ್ಮನಃ ।
ವಿವೇಶ ಕುಂತೀ ತ್ವರಿತಾ ಬದ್ಧವತ್ಸೇವ ಸೌರಭೀ ॥೨೯॥

ಆಗ ಕುಂತಿಯು ಕರುವನ್ನು ಕಟ್ಟಿಹಾಕಿದ ಕಡೆಗೆ ತಾಯಿಯಾದ ಹಸುವು ಹೋಗುವಂತೆ ತ್ವರಿತವಾಗಿ ಆ ಮಹಾತ್ಮನಾದ ಬ್ರಾಹ್ಮಣನ ಗೃಹದ ಒಳಭಾಗವನ್ನು ಪ್ರವೇಶಿಸಿದಳು.

ತತಸ್ತಂ ಬ್ರಾಹ್ಮಣಂ ತತ್ರ ಭಾರ್ಯಯಾ ಚ ಸುತೇನ ಚ ।
ದುಹಿತ್ರಾ ಚೈವ ಸಹಿತಂ ದದರ್ಶ ವಿನತಾನನಮ್ ॥೩೦॥

ಅನಂತರ ಅವಳು ಆ ಬ್ರಾಹ್ಮಣನು ಪತ್ನಿ, ಪುತ್ರ ಮತ್ತು ಪುತ್ರಿಯರ ಜೊತೆಯಲ್ಲಿ ತಲೆಯನ್ನು ತಗ್ಗಿಸಿ ಕುಳಿತಿರುವುದನ್ನು ನೋಡಿದಳು.

ಬ್ರಾಹ್ಮಣಃ

ಧಿಗಿದಂ ಜೀವಿತಂ ಲೋಕೇ ಗತಸಾರಮನರ್ಥಕಮ್ ।
ದುಃಖಮೂಲಂ ಪರಾಧೀನಂ ಭೃಶಮಪ್ರಿಯಭಾವಿ ಚ ॥೩೧॥

ನನ್ನ ಜೀವನಕ್ಕೆ ಧಿಕ್ಕಾರವಿರಲಿ. ಇದು ಅನರ್ಥದಾಯಕವಾದುದು. ಇನ್ನು ಯಾವ ಶ್ರೇಷ್ಠವಾದ ವಿಷಯವೂ ಜೀವನದಲ್ಲಿ ಉಳಿದಿಲ್ಲ. ಪರಾಧೀನವಾದ ಈ ಜೀವನವು ಬಹಳ ದುಃಖಕ್ಕೆ ಕಾರಣವಾಗಿದೆ ಮತ್ತು ಮುಂದೆ ಯಾವ ಶುಭವೂ ಉಂಟಾಗುವ ಸೂಚನೆ ಇಲ್ಲ.

ಜೀವಿತೇ ಪರಮಂ ದುಃಖಂ ಜೀವಿತೇ ಪರಮೋ ಜ್ವರಃ ।
ಜೀವಿತೇ ವರ್ತಮಾನಸ್ಯ ದ್ವಂದ್ವಾನಾಮಾಗಮೋ ಧ್ರುವಃ ॥೩೨॥

ಜೀವಿಸುವವನಿಗೆ ಪರಮದುಃಖವೂ, ಪರಮಸಂತಾಪವೂ ಉಂಟಾಗುತ್ತದೆ. ಅವನಿಗೆ ಸುಖದುಃಖಾದಿದ್ವಂದ್ವಗಳ ಆಘಾತವು ನಿಶ್ಚಯವಾಗಿ ಉಂಟಾಗುತ್ತದೆ.

ಏಕಾತ್ಮನಾ ಚ ಧರ್ಮಾರ್ಥೌ ಕಾಮಂ ಚ ನ ನಿಷೇವ್ಯತೇ ।
ಏತೈಶ್ಚ ವಿಪ್ರಯೋಗೇऽಪಿ ದುಃಖಂ ಪರತರಂ ಮತಮ್ ॥೩೩॥

ಜೀವಿಸಿದ್ದವನು ಯಾವಾಗಲೂ ಧರ್ಮಾರ್ಥಕಾಮಗಳನ್ನು ಸೇವಿಸುತ್ತಾನೆ ಎಂಬ ನಿಯಮವಿಲ್ಲ. ಈ ಬಂಧುಗಳಿಂದ ವಿಯೋಗವನ್ನು ಪಡೆದರೆ ಅದು ಬಹಳ ದುಃಖಕರವಾದುದು.

ಆಹುಃ ಕೇಚಿತ್ ಪರಂ ಮೋಕ್ಷಂ ಸ ಚ ನಾಸ್ತಿ ಕಥಂಚನ ।
ಅರ್ಥಪ್ರಾಪ್ತೌ ಚ ನರಕಂ ಕೃತ್ಸ್ನಮೇವೋಪಲಭ್ಯತೇ ॥೩೪॥

ಅರ್ಥೇಷ್ವನಾ ಪರಂ ದುಃಖಮರ್ಥಪ್ರಾಪ್ತೌ ತತೋऽಧಿಕಮ್ ।
ಜಾತಸ್ನೇಹಸ್ಯ ಚಾರ್ಥೇಷು ವಿಪ್ರಯೋಗೇ ಮಹತ್ತರಮ್ ॥೩೫॥

ಕೆಲವರು ಮೋಕ್ಷವನ್ನು ಬಹಳ ಶ್ರೇಷ್ಠವೆಂದು ಹೇಳುತ್ತಾರೆ. ಅದು ಎಂದೂ ಇಲ್ಲ. ಧನವನ್ನು ಸಂಪಾದಿಸುವುದರಲ್ಲಿ ಸಮಸ್ತ ನರಕವು ಇಲ್ಲಿಯೇ ಅನುಭವಕ್ಕೆ ಬರುತ್ತದೆ. ಧನವನ್ನು ಸಂಪಾದಿಸಲು ಬಹಳ ದುಃಖವನ್ನು ಪಡಬೇಕು. ಧನವನ್ನು ಗಳಿಸಿದ

ಮೇಲೆ ಅದರ ರಕ್ಷಣೆಗಾಗಿ ಅದಕ್ಕಿಂತ ಹೆಚ್ಚಿನ ದುಃಖ. ಧನದಲ್ಲಿ ಮಮತೆ ಉಂಟಾದ ಮೇಲೆ ಅದನ್ನು ಕಳೆದುಕೊಂಡರೆ ಅದಕ್ಕಿಂತ ಹೆಚ್ಚಿನ ದುಃಖವು ಉಂಟಾಗುತ್ತದೆ.

ತದಿದಂ ಜೀವಿತಂ ಪ್ರಾಪ್ಯ ಕಲ್ಪಕಾಲಂ ಮಹಾಭಯಮ್ ।
ತ್ಯಾಗೋಽಪ್ಯಯಂ ಮಯಾ ಪ್ರಾಪ್ತೋ ಭಾರ್ಯಯಾ ಸಹಿತೇನ ಚ ॥

ನಾನು ಕುಪ್ತವಾದ ಆಯುಸ್ಸುಳ್ಳ ಮಹಾಭಯಪ್ರದವಾದ ಈ ಜೀವನವನ್ನು ಹೊಂದಿದೆ. ಈಗ ಪತ್ನಿಯಿಂದ ಸಹಿತನಾಗಿ ಜೀವನವನ್ನು ತೊರೆಯಬೇಕಾದ ಕಾಲವು ಬಂದಿದೆ.

ನ ಹಿ ಯೋಗಂ ಪ್ರಪಶ್ಯಾಮಿ ಯೇನ ಮುಚ್ಯೇಯಮಾಪದಃ ।
ಪುತ್ರದಾರೇಣ ವಾ ಸಾರ್ಧಂ ಪ್ರಾದ್ರವೇಯಮನಾಮಯಮ್ ॥೩೭॥

ನನಗೆ ಈ ಆಪತ್ತಿನಿಂದ ಬಿಡುಗಡೆಯನ್ನು ಹೊಂದುವ ಯಾವ ಉಪಾಯವೂ ಕಾಣುತ್ತಿಲ್ಲ. ಹೆಂಡತಿ ಮಕ್ಕಳ ಜೊತೆಯಲ್ಲಿ ನಿರಾತಂಕವಾಗಿ ಓಡಿಹೋಗುವ ಉಪಾಯವೂ ಕಾಣುತ್ತಿಲ್ಲ.

ಉದಿತಂ ಹಿ ಮಯಾ ಪೂರ್ವಂ ನ ಸ್ವಾರ್ಥಂ ವೇತ್ಥ ಬ್ರಾಹ್ಮಣಿ ।
ಕ್ಷೇಮಂ ಯತಸ್ತತೋ ಗಂತುಂ ತ್ವಯಾ ತು ಮಮ ನ ಶ್ರುತಮ್ ॥

ನಾನು ಹಿಂದೆ ನನ್ನ ಪತ್ನಿಯಾದ ನಿನಗೆ, ''ಬ್ರಾಹ್ಮಣಿ, ನಿನಗೆ ಸ್ವಾರ್ಥವು ತಿಳಿಯುತ್ತಿಲ್ಲ. ಎಲ್ಲಿನಮಗೆ ಕ್ಷೇಮವಿದೆಯೋ ಅಲ್ಲಿಗೆ ಹೋಗಬೇಕು'' ಎಂದು ಹೇಳಿದೆ. ನೀನು ನನ್ನ ಮಾತುಗಳನ್ನು ಕೇಳಲಿಲ್ಲ.

ಇಹ ಜಾತಾ ವಿವೃದ್ಧಾಽಸ್ಮಿ ಪಿತಾ ಮಾತಾ ಮಮೇತಿ ವೈ ।
ಉಕ್ತವತ್ಯಸಿ ದುರ್ಮೇಧೇ ಯಾಚ್ಯಮಾನಾ ಮಯಾಽಸಕೃತ್ ॥೩೯॥

ದುರ್ಬುದ್ಧಿಯುಳ್ಳವಳೇ, ನಾನು ಎಷ್ಟುಬಾರಿ ನಿನ್ನನ್ನು ಬೇಡಿಕೊಂಡರೂ ನೀನು ''ನಾನು ಇಲ್ಲಿಯೇ ಹುಟ್ಟಿ ಬೆಳೆದಿದ್ದೇನೆ. ನನ್ನ ತಂದೆತಾಯಿಗಳು ಇಲ್ಲಿಯೇ ಇದ್ದಾರೆ'' ಎಂದು ಹೇಳಿದೆ.

ಸ್ವರ್ಗತಶ್ಚ ಪಿತಾ ವೃದ್ಧಃ ತಥಾ ಮಾತಾ ಚಿರಂ ತವ ।
ಬಾಂಧವಾ ಭೂತಪೂರ್ವಾಶ್ಚ ತತ್ರ ವಾಸೋ ನ ಕಾರಿತಃ ॥೪೦॥

ನಿನ್ನ ವೃದ್ಧನಾದ ತಂದೆಯು ಸ್ವರ್ಗಸ್ಥನಾದನು. ತಾಯಿಯು ಮೊದಲೇ ಹೊರಟು ಹೋದಳು. ಬಾಂಧವರು ಯಾರು ಉಳಿಯಲಿಲ್ಲ. ಆದರೂ ಬೇರೆ ಕಡೆಗೆ ಹೋಗಿ ವಾಸ ಮಾಡಲಿಲ್ಲ.

ನ ಭೋಜನಂ ವಿರುದ್ಧಂ ಸ್ಯಾನ್ನ ಸ್ತ್ರೀದೇಶೋ ನಿಬಂಧನಃ ।
ಸುದೂರಮಪಿ ಕಾರ್ಯಾರ್ಥಂ ವ್ರಜೇದ್ ಗರುಡಹಂಸವತ್ ॥೪೧॥

ಎಲ್ಲಿಗೆ ಹೋದರೆ ನಮ್ಮ ಭೋಜನವು ನಿಷ್ಕಂಟಕವಾಗುತ್ತದೆಯೋ ಅಲ್ಲಿಗೆ ಹೋಗಬೇಕು. ಪತ್ನಿಯ ದೇಶವು ಎಂದೂ ಬಂಧಿಸಬಾರದು. ನಮ್ಮ ಕಾರ್ಯದ ಸಲುವಾಗಿ ಗರುಡಹಂಸಗಳಂತೆ ಬಹಳ ದೂರವಾದರೂ ಹೋಗಲೇ ಬೇಕು.

ಸೋಽಯಂ ತೇ ಬಂಧುಕಾಮಾಯಾ ಅಶೃಣ್ವಂತ್ಯಾ ವಚೋ ಮಮ ।
ಬಂಧುಪ್ರಣಾಶಃ ಸಂಪ್ರಾಪ್ತೋ ಭೃಶಂ ದುಃಖಕರೋ ಮಮ ॥೪೨॥

ಬಂಧುಗಳ ಮೇಲಿನ ಆಸೆಯಿಂದ ನನ್ನ ಮಾತನ್ನು ಕೇಳದಿದ್ದ ನಿನ್ನಿಂದ ಈಗ, ನನಗೆ ಅತ್ಯಂತ ದುಃಖಕರವಾದ ಬಂಧುನಾಶವು ಸಂಪ್ರಾಪ್ತವಾಗಿದೆ.

ಸೇಯಮಾಪದನುಪ್ರಾಪ್ತಾ ಭುಂಕ್ಷ್ವ ಬ್ರಾಹ್ಮಣಿ ತತ್ಫಲಮ್ ।
ಅಥವಾ ತ್ವದ್ವಿನಾಶಾಯ ನ ಹಿ ಶಕ್ಷ್ಯಾಮಿ ಕಂಚನ ॥೪೩॥

ಬ್ರಾಹ್ಮಣಿಯೇ, ಈ ಆಪತ್ತು ಬಂದೊದಗಿದೆ. ಅದರ ಫಲವನ್ನು ಭೋಗಿಸು ಅಥವಾ ನಿನ್ನನ್ನು ಕಳೆದುಕೊಳ್ಳಲು ನಾನು ಎಂದೂ ಬಯಸುವುದಿಲ್ಲ.

ಪರಿತ್ಯಕ್ತುಮಹಂ ಬಂಧುಂ ಸ್ವಯಂ ಶೀಘ್ರಂ ನೃಶಂಸವತ್ ।
ಸಹಧರ್ಮಚರೀಂ ದಾಂತಾಂ ಸದಾ ಮಾತೃಸಮಾಂ ತಥಾ ॥೪೪॥

ಸಹಧರ್ಮಚಾರಿಣಿಯಾದ, ಇಂದ್ರಿಯನಿಗ್ರಹವುಳ್ಳ, ತಾಯಿಯಂತೆ ನನ್ನನ್ನು ಪೋಷಿಸುವ ನಿನ್ನನ್ನು ಕೃತಘ್ನನಂತೆ ಶೀಘ್ರವಾಗಿ ನಾನೇ ಪರಿತ್ಯಾಗ ಮಾಡಲು ನನ್ನ ಮನಸ್ಸು ಒಪ್ಪುವುದಿಲ್ಲ.

ಸಖಾಯಂ ವಿಹಿತಂ ದೇವೈರ್ನಿತ್ಯಂ ಪರಮಿಕಾಂ ರತಿಮ್ ।
ಮಾತ್ರಾ ಪಿತ್ರಾ ವಿರಹಿತಾಂ ಸದಾ ದಾಕ್ಷಿಣ್ಯಭಾಗಿನೀಮ್ ॥೪೫॥

ವರಯಿತ್ವಾ ಯಥಾನ್ಯಾಯಂ ಮಂತ್ರವತ್ ಪರಿಗೃಹ್ಯ ಚ ।
ಕುಲೀನಾಂ ಶೀಲಸಂಪನ್ನಾಮಪತ್ಯಜನನೀಮಥ ॥೪೬॥

ತ್ವಾಮಹಂ ಜೀವಿತಸ್ಯಾರ್ಥೇ ಸಾಧ್ವೀಮನಪಕಾರಿಣೀಮ್ ।
ಪರಿತ್ಯಕ್ತುಂ ನ ಶಕ್ಷ್ಯಾಮಿ ಭಾರ್ಯಾಂ ನಿತ್ಯಮನುವ್ರತಾಮ್ ॥೪೭॥

ದೇವತೆಗಳಿಂದ ಸ್ನೇಹಿತೆ ಎಂದು ವಿಹಿತವಾದಂತಹ, ನನ್ನ ಪರಮರತಿಗೆ ಕಾರಣವಾದಂತಹ, ತಂದೆತಾಯಿಗಳಿಂದ ರಹಿತಳಾದಂತಹ, ಯಾವಾಗಲೂ ಕರುಣಾಶೀಲಳಾದಂತಹ, ಸತ್ಕುಲಪ್ರಸೂತಳಾದಂತಹ, ಶೀಲಸಂಪನ್ನಳಾ- ದಂತಹ, ನನಗೆ ನನ್ನ ಮಕ್ಕಳನ್ನು ನೀಡಿದಂತಹ, ನಿನ್ನನ್ನು ಮಂತ್ರ- ಪೂರ್ವಕವಾಗಿ ಧಾರ್ಮಿಕ ವಿಧಿಯಿಂದ ಪರಿಗ್ರಹಿಸಿ ಈಗ ನನ್ನ ಜೀವನದ ಸಲುವಾಗಿ ಎಂದೂ ಅಪಕಾರ ಮಾಡದಿರುವ ನಿತ್ಯವೂ ಅನುವ್ರತಳಾದ ಪತಿವ್ರತೆಯಾದ ನಿನ್ನನ್ನು ನಾನು ಪರಿತ್ಯಾಗ ಮಾಡಲಾರೆ.

ಪ್ರಾರ್ಥಯೇಽಹಂ ಪರಾಂ ಪ್ರೀತಿಂ ಯಸ್ಮಿನ್ ಸ್ವರ್ಗಫಲಾನಿ ಚ ।
ದಯಿತಂ ಮೇ ಕಥಂ ಬಾಲಮಹಂ ತ್ಯಕ್ತುಮಿಹೋತ್ಸಹೇ ॥೪೮॥

ನಾನು ಯಾರಿಂದ ಪರಮಸಂತೋಷವನ್ನೂ ಮತ್ತು ಸ್ವರ್ಗಫಲವನ್ನೂ ಬಯಸುತ್ತೇನೆಯೋ ಅಂತಹ ಪ್ರೀತಿಪಾತ್ರನಾದ ಚಿಕ್ಕ ವಯಸ್ಸಿನ ಪುತ್ರನನ್ನೂ ಪರಿತ್ಯಾಗ ಮಾಡಲು ಬಯಸುವುದಿಲ್ಲ.

ಯಸ್ಯ ಜಾತಸ್ಯ ಪಿತರೋ ಮುಖಂ ದೃಷ್ಟ್ವಾ ದಿವಂ ಗತಾಃ ।
ಪಿತೄಣಾಂ ಋಣನಿರ್ಮುಕ್ತೋ ಯಸ್ಯ ಜಾತಸ್ಯ ತೇಜಸಾ ॥೪೯॥

ತಮಹಂ ಜ್ಯೇಷ್ಠಪುತ್ರಂ ಮೇ ಕುಲನಿಸ್ತಾರಕಂ ಭುವಿ ।
ಮಮ ಪಿಂಡೋದಕನಿಧಿಂ ಕಥಂ ತ್ಯಕ್ಷ್ಯಾಮಿ ಪುತ್ರಕಮ್ ॥೫೦॥

ಯಾವ ಪುತ್ರನು ಜನಿಸಿದಾಗ ಪಿತೃಗಳು ಅವನ ಮುಖವನ್ನು ನೋಡಿ ಸ್ವರ್ಗಕ್ಕೆ ಪ್ರಯಾಣ ಮಾಡಿ ನನ್ನನ್ನು ಪಿತೃಋಣದಿಂದ ನಿರ್ಮುಕ್ತನನ್ನಾಗಿ ಮಾಡಿದರೋ, ಅಂತಹ ವಂಶೋದ್ಧಾರಕನಾದ ನನಗೆ ಭವಿಷ್ಯದಲ್ಲಿ ಪಿಂಡದಾನ ಮತ್ತು ತಿಲತರ್ಪಣವನ್ನು ಕೊಡಬೇಕಾದ ನನ್ನ ಜ್ಯೇಷ್ಠಪುತ್ರನನ್ನು ಹೇಗೆ ಪರಿತ್ಯಾಗ ಮಾಡಲಿ?

ಕುತ ಏವ ಪರಿತ್ಯಕ್ತುಂ ಪುತ್ರೀಂ ಶಕ್ಷ್ಯಾಮ್ಯಹಂ ಸ್ವಯಮ್ ।
ಭರ್ತುರರ್ಥಾಯ ನಿಕ್ಷಿಪ್ತಾಂ ನ್ಯಾಸಂ ಧಾತ್ರಾ ಮಹಾತ್ಮನಾ ॥೫೧॥

ಮಗಳನ್ನಾದರೋ ಹೇಗೆ ಪರಿತ್ಯಾಗ ಮಾಡಲಿ? ಅವಳು ಪತಿಯ ಮನೆಗೆ ಕಳುಹಿಸಿಕೊಡಬೇಕಾದ, ವಿಧಿಯು ನಮ್ಮಲ್ಲಿ ನ್ಯಾಸವಾಗಿ ಇಟ್ಟ ಒಂದು ವಸ್ತು.

ಯಸ್ಯಾಂ ದೌಹಿತ್ರಜಾಂಲ್ಲೋಕಾನಾಶಂಸೇ ಪಿತೃಭಿಃ ಸಹ ।
ಸ್ವಯಮುತ್ಪಾದಿತಾಂ ಬಾಲಾಂ ಕಥಮುತ್ಸೃಜ್ಯಮುತ್ಸಹೇ ॥೫೨॥

ಯಾರಿಂದ ನಾನು ದೌಹಿತ್ರರಿಂದ ಉಂಟಾದ ಪಿತೃಲೋಕಗಳನ್ನು ಪಿತೃಗಳ ಜೊತೆಯಲ್ಲಿ ಹೊಂದಲು ಆಸೆ ಪಡುತ್ತೇನೋ ಅಂತಹ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ಹೇಗೆ ಪರಿತ್ಯಾಗ ಮಾಡಲಿ?

ಮನ್ಯಂತೇ ಕೇಚಿದಧಿಕಂ ಸ್ನೇಹಂ ಪುತ್ರೇ ಪಿತುರ್ಜನಾಃ ।
ಕನ್ಯಾಯಾಂ ಕೇಚಿದಪರೇ ಮಮ ತುಲ್ಯಾವುಭೌ ಮತೌ ॥೫೩॥

ಕೆಲವರು ಪುತ್ರನಲ್ಲಿ ಅಧಿಕ ಪ್ರೀತಿ ಎಂದು ಹೇಳುತ್ತಾರೆ. ಕೆಲವರು ಪುತ್ರಿಯಲ್ಲಿ ಅಧಿಕ ಪ್ರೀತಿ ಎಂದು ಹೇಳುತ್ತಾರೆ. ನನಗೆ ಮಾತ್ರ ಇಬ್ಬರೂ ಸಮಾನರು ಎಂದು ತೋರುತ್ತದೆ.

ಯಸ್ಯಾಂ ಕಾಮಪ್ರತಿಷ್ಠಾ ಚ ವರಂ ನಿತ್ಯಮಥೋ ಸುಖಮ್ ।
ಅಪಾಪಾಂ ತಾಂ ಕಥಂ ಬಾಲಾಮಹಮುತ್ಸೃಜ್ಯಮುತ್ಸಹೇ ॥೫೪॥

ಯಾರಿಂದ ಮುಂದೆ ಒದಗಲಿರುವವರ ಪತಿಗೆ ಕಾಮವೂ, ಶ್ರೇಷ್ಠವಾದ ಸುಖವೂ ದೊರೆಯುವುದೋ, ಅಂತಹ ಪಾಪಶೂನ್ಯಳಾದ ಮಗಳನ್ನು ಹೇಗೆ ಪರಿತ್ಯಾಗ ಮಾಡಲಿ?

ಮೇಧಾವಿನೀಮದೋಷಾಂ ಚ ಶುಶ್ರೂಷುಮನಹಂಕೃತಾಮ್ ।
ಕಾಂಕ್ಷಮಾಣಾಂ ರತಿಂ ಚೇಹ ಸುಖಾನಿ ಚ ಬಹೂನಿ ಚ ॥೫೫॥

ಉತ್ಪಾದಯತ್ಯಪತ್ಯಾನಿ ಧರ್ಮಕಾಮಾರ್ಥಹೇತವೇ ।
ಆತ್ಮಾನಮಪಿ ಚೋತ್ಸೃಜ್ಯ ಮಯಿ ಪ್ರೇತವಶಂ ಗತೇ ॥೫೬॥

ಇನ್ನು ಮೇಧಾವಿಯೂ, ಸಾಧುಸ್ವಭಾವದವಳೂ, ಅಹಂಕಾರವಿಲ್ಲದವಳೂ, ಯಾವಾಗಲೂ ನನ್ನ ಸೇವೆಯನ್ನು ಮಾಡುವವಳೂ, ನನ್ನಿಂದ ರತಿಯನ್ನೂ ಮತ್ತು ಅನೇಕ ಸುಖವನ್ನೂ ಅಪೇಕ್ಷಿಸುವವಳೂ, ನನಗೆ ಧರ್ಮಕಾಮಾರ್ಥಸಿದ್ಧಿಗಾಗಿ ಮಕ್ಕಳನ್ನು ಕೊಡುವವಳೂ, ನಾನು ಮೃತನಾದರೆ ತನ್ನ ಜೀವವನ್ನೂ ಪರಿತ್ಯಾಗ ಮಾಡುವವಳೂ ಆದ ನನ್ನ ಪತ್ನಿಯನ್ನು ಹೇಗೆ ಪರಿತ್ಯಾಗ ಮಾಡಲಿ.

ತ್ಯಕ್ತಾ ಹ್ಯೇತೇ ಮಯಾ ಸರ್ವೇ ನೇಹ ಶಕ್ಷ್ಯಂತಿ ಜೀವಿತುಮ್ ।
ಏಷಾಂ ಚಾನ್ಯತಮತ್ಯಾಗೋ ನೃಶಂಸೋ ಗರ್ಹಿತೋ ಬುಧೈಃ ॥೫೭॥

ನಾನು ಇವರನ್ನು ಪರಿತ್ಯಾಗ ಮಾಡಿದರೆ ಇವರು ಯಾರೂ ಜೀವಿಸಿರುವುದಿಲ್ಲ. ನಾನು ಇವರಲ್ಲಿ ಯಾರೊಬ್ಬರನ್ನು ಪರಿತ್ಯಾಗ ಮಾಡಿದರೂ ಅದು ತುಂಬಾ ಕ್ರೂರವಾದುದು ಮತ್ತು ಜ್ಞಾನಿಗಳಿಂದ ನಿಂದ್ಯವಾದುದು.

ಸ ಕೃಚ್ಛ್ರಮಹಮಾಪನ್ನೋ ನ ಶಕ್ತಸ್ತರ್ತುಮಾಪದಮ್ ।
ಅಹೋ ಧಿಕ್ ಕಾಂ ಗತಿಂ ತ್ವದ್ಯ ಗಮಿಷ್ಯಾಮಿ ಸಬಾಂಧವಃ ।
ಸರ್ವೈಃ ಸಹ ಮೃತಿಃ ಶ್ರೇಯೋ ನ ಹಿ ಮೇ ಜೀವಿತುಂ ಕ್ಷಮಮ್ ॥೫೮॥

ನಾನು ಬಹಳ ದುಃಖಕರವಾದ ಆಪತ್ತಿನಲ್ಲಿ ಸಿಲುಕಿ ಅದನ್ನು ದಾಟುವ ಉಪಾಯವನ್ನು ಕಾಣುತ್ತಿಲ್ಲ. ಅಯ್ಯೋ ನನಗೆ ಧಿಕ್ಕಾರವಿರಲಿ. ಬಾಂಧವರ ಜೊತೆಯಲ್ಲಿ ಇರುವ ನನಗೆ ಏನು ಗತಿಯಾಗುವುದು? ನಾವೆಲ್ಲರೂ ಒಟ್ಟಿಗೆ ಮರಣ ಹೊಂದುವುದೇ ಲೇಸು. ಜೀವಿಸಿರುವುದು ಸಾಧ್ಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ಬಕವಧಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಅರವತ್ತೊಂದನೆಯ ಅಧ್ಯಾಯ ಮುಗಿಯಿತು.

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಅನ್ಯತ್ರ ಯಾಮ ಇತಿ ಪೂರ್ವಮುದಾಹೃತಂ ಮೇ
ನೈತತ್ ಪ್ರಿಯೇ ತವ ಮನೋಗತಮಾಸ ತೇನ ।
ಯಾಸ್ಯಾಮಿ ರಾಕ್ಷಸಮುಖಂ ಸ್ವಯಮೇವ ಮರ್ತುಂ
ಭಾರ್ಯೈನಮಾಹ ನ ಭವಾನಹಮತ್ರ ಯಾಮಿ ॥೭೪॥

'ನಾವು ಬೇರೆ ಕಡೆಗೆ ಹೋಗೋಣ್ಣ ಎಂದು ನಾನು ಹಿಂದೆ ಹೇಳಿದೆ. ಪ್ರಿಯೆ, ಅದು ನಿನ್ನ ಮನಸಿಗೆ ಬರಲಿಲ್ಲ. ಅದರಿಂದ ಈಗ ನಾನೇ ಸಾಯಲು ರಾಕ್ಷಸನ ಬಾಯಿಗೆ ಬೀಳುವೆ' ಎಂದ ಬ್ರಾಹ್ಮಣ. 'ನೀನಲ್ಲ, ನಾನು ಹೋಗುವೆನು' ಎಂದಳು ಪತ್ನಿ.

★ ★ ★ ★

ನೂರ ಅರವತ್ತೆರಡನೆಯ ಅಧ್ಯಾಯ

(ತನ್ನನ್ನು ಕಳುಹಿಸಿಕೊಡುವಂತೆ ಪತ್ನಿಯ ಒತ್ತಾಯ, ಬ್ರಾಹ್ಮಣನಿಂದ ನಿರಾಕರಣೆ)

ಬ್ರಾಹ್ಮಣೀ

ನ ಸಂತಾಪಸ್ತ್ವಯಾ ಕಾರ್ಯಃ ಪ್ರಾಕೃತೇನೇವ ಕರ್ಹಿಚಿತ್ ।
ನ ಹಿ ಸಂತಾಪಕಾಲೋಽಯಂ ವಿಶೇಷಾತ್ ಪುರುಷಸ್ಯ ಹ ॥೧॥

ಸಾಧಾರಣಪುರುಷರಂತೆ ನೀನು ಯಾವ ಕಾರಣದಿಂದಲೂ ಸಂತಾಪವನ್ನು ಮಾಡಬಾರದು. ಅದರಲ್ಲೂ ವಿಶೇಷವಾಗಿ ಪುರುಷನಿಗೆ ಈ ಸಂತಾಪಕಾಲವು ತರವಲ್ಲ.

ಅವಶ್ಯಂ ನಿಧನಂ ಸರ್ವೈರ್ಗಂತವ್ಯಮಿಹ ಮಾನವೈಃ ।
ಅವಶ್ಯಕರಣೀಯಾರ್ಥೇ ಸಂತಾಪೋ ನೈವ ವಿದ್ಯತೇ ॥೨॥

ಎಲ್ಲಾ ಮನುಷ್ಯರೂ ಒಂದು ದಿನ ಸಾಯಲೇ ಬೇಕು. ಅವಶ್ಯವಾಗಿ ನಡೆಯಲೇ ಬೇಕಾದ ಕಾರ್ಯದಲ್ಲಿ ಸಂತಾಪವನ್ನು ಮಾಡಬಾರದು.

ಭಾರ್ಯಾ ಪುತ್ರಶ್ಚ ದುಹಿತಾ ಸರ್ವಮಾತ್ಮಾರ್ಥಮಿಷ್ಯತೇ ।
ವ್ಯಥಾಂ ಚ ಜಹಿ ಬುದ್ಧ್ಯಾ ತ್ವಂ ಸ್ವಯಂ ಯಾಸ್ಯಾಮಿ ತತ್ರ ವೈ ॥೩॥

ಹೆಂಡತಿ, ಮಗ ಮತ್ತು ಮಗಳು ಎಲ್ಲರನ್ನೂ ತನ್ನ ಸಲುವಾಗಿ ಮನುಷ್ಯನು ಅಪೇಕ್ಷಿಸುತ್ತಾನೆ. ನೀನು ಬುದ್ಧಿಯಿಂದ ಯೋಚಿಸಿ ವ್ಯಥೆಯನ್ನು ಪರಿತ್ಯಜಿಸು. ನಾನೇ ಸ್ವತಃ ರಾಕ್ಷಸನ ಬಳಿ ಹೋಗುವೆನು.

ಏತದ್ಧಿ ಪರಮಂ ನಾರ್ಯಾಃ ಕಾರ್ಯಂ ಲೋಕೇ ಸನಾತನಮ್ ।
ಪ್ರಾಣಾನಪಿ ಪರಿತ್ಯಜ್ಯ ಭರ್ತುರ್ಹಿ ಹಿತಮಾಚರೇತ್ ॥೪॥

ಪ್ರಾಣವನ್ನಾದರೂ ಪರಿತ್ಯಾಗ ಮಾಡಿ ಪತಿಗೆ ಹಿತವನ್ನು ಮಾಡುವುದು ಲೋಕದಲ್ಲಿ ಸ್ತ್ರೀಯರ ಸನಾತನವಾದ ಪರಮಧರ್ಮವಾಗಿದೆ.

ತಚ್ಚ ತತ್ರ ಕೃತಂ ಕರ್ಮ ತವಾಪೀದಂ ಸುಖಾವಹಮ್ ।
ಭವತ್ಯಮುತ್ರ ಚಾಕ್ಷಯ್ಯಂ ಲೋಕೇಽಸ್ಮಿಂಶ್ಚ ಯಶಸ್ಕರಮ್ ॥೫॥

ನಾನು ಹಾಗೆ ಮಾಡಿದ ಕರ್ಮವು ನಿನಗೂ ಸುಖವನ್ನು ತಂದು ಕೊಡುತ್ತದೆ. ನನಗೂ ಈ ಲೋಕದಲ್ಲಿ ಕೀರ್ತಿಯನ್ನೂ, ಪರಲೋಕದಲ್ಲಿ ಅಕ್ಷಯವಾದ ಸುಖವನ್ನೂ ತಂದು ಕೊಡುತ್ತದೆ.

ಏಷ ಚೈವ ಗುರುರ್ಧರ್ಮೋ ಯಂ ಪ್ರವಕ್ಷ್ಯಾಮ್ಯಹಂ ತವ ।
ಕಾಮಶ್ಚ ತವ ಧರ್ಮಶ್ಚ ಭೂಯಾನರ್ಥಃ ಪ್ರದೃಶ್ಯತೇ ॥೬॥

ನಾನು ನಿನಗೆ ಹೇಳುತ್ತಿರುವುದೇ ಶ್ರೇಷ್ಠವಾದ ಧರ್ಮ. ನಿನಗೆ ಪುನಃ ಧರ್ಮವೂ, ಅರ್ಥವೂ ಮತ್ತು ಕಾಮವೂ ಉಂಟಾಗುತ್ತದೆ.

ಯದರ್ಥಮಿಷ್ಯತೇ ಭಾರ್ಯಾ ಪ್ರಾಪ್ತಃ ಸೋಽರ್ಥಸ್ತ್ವಯಾ ಮಯಿ ।
ಕುಮಾರಶ್ಚೈವ ಕನ್ಯಾ ಚ ಕೃತಾಽಹಮನೃಣಾ ತ್ವಯಾ ॥೭॥

ಯಾವ ಉದ್ದೇಶದಿಂದ ಜನರು ಪತ್ನಿಯನ್ನು ಪಡೆಯುತ್ತಾರೋ ಆ ಉದ್ದೇಶವು ಈಡೇರಿದೆ. ಪುತ್ರನೂ ಮತ್ತು ಪುತ್ರಿಯೂ ಜನಿಸಿದ್ದಾರೆ. ನನ್ನನ್ನು ನೀನು ಋಣಮುಕ್ತಳನ್ನಾಗಿ ಮಾಡಿದ್ದೀಯೆ.

ಸಮರ್ಥಃ ಪೋಷಣೇ ವಾಪಿ ಸುತಯೋರನ್ವವೇಕ್ಷಣೇ ।
ನ ತ್ವಹಂ ಸುತಯೋಃ ಶಕ್ತಾ ತಥಾ ರಕ್ಷಣಪೋಷಣೇ ॥೮॥

ನೀನು ಮಕ್ಕಳನ್ನು ಪೋಷಿಸುವುದಕ್ಕೂ ಮತ್ತು ರಕ್ಷಿಸುವುದಕ್ಕೂ ಸಮರ್ಥನಾಗಿದ್ದೀಯೆ. ನಾನು ನಿನ್ನಂತೆ ಮಕ್ಕಳ ಪೋಷಣೆರಕ್ಷಣೆಗಳನ್ನು ಮಾಡಲು ಸಮರ್ಥಳಲ್ಲ.

ಮಮಾಪಿ ತ್ವದ್ವಿಹೀನಾಯಾಃ ಸರ್ವಕಾಮಾರ್ಥಮಾನದ ।
ಕಥಂ ಸ್ಯಾತಾಂ ಯುತೌ ಬಾಲೌ ವೃತ್ತಿಶ್ಚಾಪಿ ಕಥಂ ಭವೇತ್ ॥೯॥

ನನಗೆ ಎಲ್ಲಾ ಕಾಮವನ್ನೂ, ಅರ್ಥವನ್ನೂ, ಮಾನವನ್ನೂ ತಂದು ಕೊಟ್ಟ ಪತಿಯೇ, ನೀನಿಲ್ಲದೇ ನಾನು ಈ ಮಕ್ಕಳಿಂದ ಕೂಡಿಕೊಂಡು ಬದುಕಲು ನನ್ನ ಜೀವನ ವೃತ್ತಿಯು ಹೇಗೆ ನಡೆಯುತ್ತದೆ?

ಕಥಂ ಹಿ ವಿಧವಾ ಬಾಲಾ ಬಾಲಪುತ್ರಾ ವಿನಾ ತ್ವಯಾ ।
ಮಿಥುನಂ ಜೀವಯಿಷ್ಯಾಮಿ ಸ್ಥಿತಾ ಸಾಧುಗತೇ ಪಥಿ ॥೧೦॥

ನಿನ್ನನ್ನು ಕಳೆದುಕೊಂಡು ಚಿಕ್ಕಮಕ್ಕಳನ್ನು ಹೊಂದಿ ಚಿಕ್ಕವಯಸ್ಸಿನ ವಿಧವೆಯಾದ ನಾನು ಸಜ್ಜನರ ಮಾರ್ಗದಲ್ಲಿದ್ದು ಹೇಗೆ ಮಕ್ಕಳನ್ನು ಬದುಕಿಸಿಕೊಳ್ಳುತ್ತೇನೆ?

ಅಹಂ ಕೃತಾವಲೇಪೈಶ್ಚ ಪ್ರಾರ್ಥ್ಯಮಾನಾಮಿಮಾಂ ಸುತಾಮ್ ।
ಅಯುಕ್ತೈಸ್ತತ್ರ ಸಂಬಂಧೇ ಕ್ಲಿಶ್ಯಮಾನಾ ದುರಾತ್ಮಭಿಃ ॥೧೧॥

ಸ್ಥಾತುಂ ಪಥಿ ನ ಶಕ್ಷ್ಯಾಮಿ ಸಜ್ಜನೇಷ್ಟೇ ದ್ವಿಜೋತ್ತಮ ।
ಸ್ತ್ರೀಜನ್ಮ ಗರ್ಹಿತಂ ನಾಥ ಲೋಕೇ ದುಷ್ಟಜನಾಕುಲೇ ॥೧೨॥

ಗರ್ವಿಷ್ಠರಾದ, ಅಯೋಗ್ಯರಾದ, ದುರಾತ್ಮರು ಈ ಮಗಳನ್ನು ಕೊಡು ಎಂದು ಒತ್ತಾಯ ಮಾಡಿ ನನ್ನನ್ನು ಕ್ಲೇಶಪಡಿಸಿದಾಗ ನಾನು ಸಜ್ಜನರ ಮಾರ್ಗದಲ್ಲಿ ನಡೆಯುವುದು ಸಾಧ್ಯವಾಗುವುದಿಲ್ಲ. ಎಲೈ ದ್ವಿಜೋತ್ತಮನೇ, ದುಷ್ಟಜನರು ತುಂಬಿರುವ ಲೋಕದಲ್ಲಿ ಸ್ತ್ರೀ ಜನ್ಮವು ನಿಂದನೀಯವಾದುದು.

ಮಾತಾಪಿತ್ರೋರ್ವಶೇ ಕನ್ಯಾ ಪ್ರೌಢಾ ಭರ್ತುರ್ವಶೇ ತಥಾ ।
ಅನಾಥತ್ವಂ ಸ್ತ್ರಿಯೋ ದ್ವಾರಂ ದುಷ್ಟಾನಾಂ ವಿವೃತಂ ಹಿ ತತ್ ।
ವಸ್ತ್ರಖಂಡಂ ಘೃತಾಕ್ತಂ ಹಿ ಯಥಾ ಸಂಕೃಷ್ಯತೇ ಶ್ವಭಿಃ ॥೧೩॥

ಸ್ತ್ರೀಯು ಕನ್ಯೆಯಾಗಿರುವಾಗ ಮಾತಾಪಿತೃಗಳ ರಕ್ಷಣೆಯಲ್ಲಿರುತ್ತಾಳೆ. ಪ್ರೌಢಳಾದಾಗ ಪತಿಯ ರಕ್ಷಣೆಯಲ್ಲಿರುತ್ತಾಳೆ. ಸ್ತ್ರೀಯು ಅನಾಥಳಾದರೆ, ದುಷ್ಟರಿಗೆ ಬಾಗಿಲನ್ನು ತೆರೆದಂತಾಗುತ್ತದೆ. ತುಪ್ಪದಲ್ಲಿ ಅದ್ದಿದ ವಸ್ತ್ರವನ್ನು ನಾಯಿಗಳು ಎಳೆದಾಡುವಂತೆ ಅವಳನ್ನು ಎಳೆದಾಡುತ್ತಾರೆ.

ಕಥಂ ತವ ಸುತಂ ಚೇಮಮೇಕಂ ಬಾಲಮಸಂಸ್ಕೃತಮ್ ।
ಪಿತೃಪೈತಾಮಹೇ ಮಾರ್ಗೇ ನಿಯಂತುಮಹಮುತ್ಸಹೇ ॥೧೪॥

ನಾನು ಇನ್ನೂ ಸಂಸ್ಕಾರವನ್ನು ಪಡೆಯದಿರುವ, ಈ ನಿನ್ನ ಏಕಮಾತ್ರ ಪುತ್ರನನ್ನು ಪಿತೃಪಿತಾಮಹರು ನಡೆದ ಮಾರ್ಗದಲ್ಲಿ ನಡೆಸಲು ಹೇಗೆ ಸಮರ್ಥಳಾಗುತ್ತೇನೆ?

ಕಥಂ ಶಕ್ಷ್ಯಾಮಿ ಬಾಲೇಽಸ್ಮಿನ್ ಗುಣಾನಾಧಾತುಮೀಪ್ಸಿತಾನ್ ।
ಅನಾಥೇ ಸರ್ವತೋ ಲುಪ್ತೇ ಯಥಾ ತ್ವಂ ಧರ್ಮನಂದನಃ ॥೧೫॥

ನಿನ್ನನ್ನು ಕಳೆದುಕೊಂಡು ಅನಾಥಳಾದರೆ, ಧರ್ಮನಂದನನಾದ ನಿನ್ನಂತೆ ನಾನು ಈ ಬಾಲನಲ್ಲಿ ಇಷ್ಟವಾದ ಗುಣಗಳನ್ನುಂಟು ಮಾಡಲು ಹೇಗೆ ಸಮರ್ಥಳಾಗುತ್ತೇನೆ?

ಸುತಾಮಪಿ ಚ ತೇ ಬಾಲಾಮನಾಥಾಂ ಪರಿಭೂಯ ಮಾಮ್ ।
ಅನರ್ಹಾಃ ಪ್ರಾರ್ಥಯಿಷ್ಯಂತಿ ಶೂದ್ರಾ ವೇದಶ್ರುತಿಂ ಯಥಾ ॥೧೬॥

ನಿನ್ನನ್ನು ಕಳೆದುಕೊಂಡು ನಾನು ಅನಾಥಳಾದರೆ ನಮ್ಮ ಸಂಬಂಧಕ್ಕೆ ಅನರ್ಹರಾದ ಜನರು ನನ್ನನ್ನು ಪರಾಭವಗೊಳಿಸಿ ಶೂದ್ರರು ವೇದವನ್ನು ಸ್ವೀಕರಿಸುವಂತೆ ಇವಳನ್ನು ತಾವು ಸ್ವೀಕರಿಸಲು ನನಗೆ ಒತ್ತಾಯವನ್ನು ತರುತ್ತಾರೆ.

ತಾಂ ಚೇದಹಂ ನ ದಿತ್ಸೇಯಂ ಸದ್ಭಿರ್ಯೈರುಪಬೃಂಹಿತಾಮ್ ।
ಪ್ರಮಥ್ಯೈನಾಂ ಹರೇಯುಸ್ತೇ ಹವಿರ್ವಾಂಕ್ಷಾ ಇವಾಧ್ವರೇ ॥೧೭॥

ಒಂದು ಪಕ್ಷ ನಾನು ಸದ್ಗುಣಭೂಷಿತಳಾದ ಇವಳನ್ನು ಕೊಡಲು ಇಷ್ಟಪಡದಿದ್ದರೆ, ತಮ್ಮ ಬಲದಿಂದ ನನ್ನನ್ನು ಸೋಲಿಸಿ ಯಜ್ಞದ ಹವಿಸ್ಸನ್ನು ಕಾಗೆಗಳು ಹೊತ್ತುಕೊಂಡು ಹೋದಂತೆ ಇವಳನ್ನು ಎತ್ತಿಕೊಂಡು ಹೋಗುತ್ತಾರೆ.

ಸಂಪ್ರೇಕ್ಷಮಾಣಾ ಪುತ್ರೀಂ ತೇ ನಾನುರೂಪಮಿವಾತ್ಮನಃ ।
ಅನರ್ಹವಶಮಾಪನ್ನಾಮಿಮಾಂ ಚಾಪಿ ಸುತಾಂ ತವ ।
ಅವಜ್ಞಾತಾ ನರೈರ್ಧರ್ಷ್ಯಾ ಮರಿಷ್ಯಾಮಿ ನ ಸಂಶಯಃ ॥೧೮॥

ನಿನ್ನ ಮಗಳಾದ ಇವಳು ನಮಗೆ ಅನುರೂಪರಲ್ಲದ ಅನರ್ಹರ ವಶವಾಗುವುದನ್ನು ನೋಡಿ, ಸಮಾಜದಿಂದ ಅವಮಾನ ಮಾಡಲ್ಪಟ್ಟು ನಾನು ಮರಣವನ್ನು ಹೊಂದುವೆನು. ಇದರಲ್ಲಿ ಸಂಶಯವಿಲ್ಲ.

ತೌ ಚ ಹೀನೌ ಮಯಾ ಬಾಲೌ ತ್ವಯಾ ಚೈವ ತಥಾऽऽತ್ಮಜೌ ।
ವಿನಶ್ಯೇತಾಂ ನ ಸಂದೇಹೋ ಮತ್ಸ್ಯಾವಿವ ಜಲಕ್ಷಯೇ ॥೧೯॥

ನಾನು ಮತ್ತು ನೀನು ಇಬ್ಬರೂ ಇಲ್ಲದಿದ್ದರೆ ಈ ಮಕ್ಕಳು ನೀರು ಇಂಗಿದ ಮೇಲೆ ಮೀನುಗಳು ನಾಶಹೊಂದುವಂತೆ ನಾಶವನ್ನು ಹೊಂದುವರು.

ತ್ರಿತಯಂ ಸರ್ವಥಾ ಸರ್ವಂ ವಿನಶಿಷ್ಯತ್ಯಸಂಶಯಮ್ ।
ತ್ವಯಾ ವಿಹೀನಂ ತಸ್ಮಾತ್ ತ್ವಂ ಮಾಂ ಪರಿತ್ಯಕ್ತುಮರ್ಹಸಿ ॥೨೦॥

ನೀನಿಲ್ಲದಿದ್ದರೆ, ನಾನು, ಮಗ ಮತ್ತು ಮಗಳು, ಈ ಮೂವರೂ ಖಂಡಿತವಾಗಿ ನಾಶವನ್ನು ಹೊಂದುವೆವು. ಆದ್ದರಿಂದ ನೀನು ನನ್ನನ್ನು ಬಿಟ್ಟುಕೊಡಬೇಕು.

ಇಷ್ಟಾ ಹ್ಯೇಷಾ ಕುಲಸ್ತ್ರೀಣಾಂ ಪೂರ್ವಂ ಭರ್ತುಃ ಪರಾ ಗತಿಃ ।
ಅನಿಷ್ಟಮಿಹ ಪುತ್ರಾಣಾಂ ವಿಷಯೇ ಪರಿವರ್ತಿತುಮ್ ॥೨೧॥

ಕುಲಸ್ತ್ರೀಯರಾದವರಿಗೆ ಪತಿಗಿಂತ ಮೊದಲು ಪರಲೋಕಕ್ಕೆ ಹೋಗುವುದು ಇಷ್ಟವಾದ ವಿಷಯ. ಪತಿಯ ಮರಣಾನಂತರ ಮಕ್ಕಳನ್ನು ನೋಡಿಕೊಳ್ಳುವುದು ಅನಿಷ್ಟವಾದ ವಿಷಯ.

ಮಿತಂ ದದಾತಿ ಹಿ ಪಿತಾ ಮಿತಂ ಮಾತಾ ಮಿತಂ ಸುತಃ ।
ಅಮಿತಸ್ಯ ಹಿ ದಾತಾರಂ ಕಾ ಪತಿಂ ನಾಭಿನಂದತಿ ॥೨೨॥

ತಂದೆಯು ಮಿತವಾದುದನ್ನು ಕೊಡುತ್ತಾನೆ. ತಾಯಿಯೂ, ಮಗನೂ ಮಿತವಾದುದನ್ನು ಕೊಡುತ್ತಾರೆ. ಅಮಿತವಾದುದನ್ನು ಕೊಡುವ ಪತಿಯನ್ನು ಯಾರು ಅಭಿನಂದಿಸುವುದಿಲ್ಲ.

ಪರಿತ್ಯಕ್ತಃ ಸುತಶ್ಚೈವ ದುಹಿತೇಯಂ ತಥಾ ಮಯಾ ।
ಬಾಂಧವಾಶ್ಚ ಪರಿತ್ಯಕ್ತಾಸ್ತ್ವದರ್ಥಂ ಜೀವಿತಂ ಚ ಮೇ ॥೨೩॥

ನಾನು ನಿನ್ನ ಸಲುವಾಗಿ ಮಗನನ್ನು ಬಿಟ್ಟಿದ್ದೇನೆ, ಮಗಳನ್ನು ಬಿಟ್ಟಿದ್ದೇನೆ, ಎಲ್ಲ ಬಂಧುಗಳನ್ನೂ ಬಿಟ್ಟಿದ್ದೇನೆ. ನಿನ್ನ ಸಲುವಾಗಿ ಜೀವಿಸಿದ್ದೇನೆ.

ಯಜ್ಞೈಸ್ತಪೋಭಿರ್ನಿಯಮೈರ್ದಾನೈಶ್ಚ ವಿವಿಧೈಸ್ತಥಾ ।
ವಿಶೇಷ್ಯತೇ ಸ್ತ್ರಿಯಾ ಭರ್ತುರ್ನಿತ್ಯಂ ಪ್ರಿಯಹಿತೇಪ್ಸುತಾ ॥೨೪॥

ಸ್ತ್ರೀಯರಿಗೆ ಯಜ್ಞ, ತಪಸ್ಸು, ನಿಯಮ, ವಿವಿಧ ದಾನಗಳಿಗಿಂತಲೂ ಯಾವಾಗಲೂ ಪತಿಗೆ ಪ್ರಿಯವನ್ನೂ ಮತ್ತು ಹಿತವನ್ನೂ ಬಯಸುವುದು ಶ್ರೇಷ್ಠವಾದ ಧರ್ಮವೆಂದು ಹೇಳಲ್ಪಡುತ್ತದೆ.

ತದಿದಂ ಯಚ್ಚಿಕೀರ್ಷಾಮಿ ಧರ್ಮ್ಯಂ ಪರತರಂ ಮಮ ।
ಇಷ್ಟಂ ಚೈವ ಹಿತಂ ಚೈವ ತವ ಚೈವ ಕುಲಸ್ಯ ನಃ ॥೨೫॥

ಆದ್ದರಿಂದ ನಾನು ನಿನಗೂ, ನಿಮ್ಮ ಕುಲಕ್ಕೂ ಮತ್ತು ನನ್ನ ಕುಲಕ್ಕೂ ಇಷ್ಟವೂ ಮತ್ತು ಹಿತವೂ ಆದ ಶ್ರೇಷ್ಠವಾದ ಧರ್ಮಕಾರ್ಯವನ್ನು ಆಚರಿಸಲು ಬಯಸುತ್ತೇನೆ.

ಇಷ್ಟಾನಿ ವಾಪ್ಯಪತ್ಯಾನಿ ದ್ರವ್ಯಾಣಿ ಸುಹೃದಃ ಪ್ರಿಯಾಃ ।
ಆಪದ್ಧರ್ಮಪ್ರಮೋಕ್ಷಾಯ ಭಾರ್ಯಾ ಚಾಪಿ ಮನಸ್ವಿನೀ ॥೨೬॥

ಇಷ್ಟವಾದ ಮಕ್ಕಳನ್ನೂ, ದ್ರವ್ಯವನ್ನೂ, ಸುಹೃದರನ್ನೂ, ಪ್ರಿಯೆಯನ್ನೂ ಪಡೆದಿದ್ದಾಯಿತು. ಆಪತ್ತಿನಿಂದ ಬಿಡುಗಡೆಗೊಳಿಸಲು ಧೈರ್ಯ- ಶಾಲಿನಿಯಾದ ಪತ್ನಿಯನ್ನೂ ಪಡೆದಿದ್ದಾಯಿತು. (ಆದ್ದರಿಂದ ನಾನು ನಿನ್ನನ್ನು ಆಪತ್ತಿನಿಂದ ಬಿಡಿಸುತ್ತೇನೆ.)

ಏಕತೋ ವಾ ಕುಲಂ ಕೃತ್ಸ್ನಮಾತ್ಮಾ ವಾ ಕುಲವರ್ಧನಃ ।
ನ ಸಮಂ ಸರ್ವಮೇವೇತಿ ಬುಧಾನಾಮೇಷ ನಿಶ್ಚಯಃ ॥೨೭॥

ಒಂದು ಕಡೆ ತನ್ನ ಸಮಗ್ರವಾದ ಕುಲ, ಇನ್ನೊಂದು ಕಡೆ ಕುಲವರ್ಧನನಾದ ತಾನೊಬ್ಬನೇ, ಇವೆರಡೂ ಎಂದೂ ಸಮವಲ್ಲವೆಂದು ಜ್ಞಾನಿಗಳು ನಿಶ್ಚಯಿಸಿರುತ್ತಾರೆ.

ಸ ಕುರುಷ್ವ ಮಯಾ ಕಾರ್ಯಂ ತಾರಯಾತ್ಮಾನಮಾತ್ಮನಾ ।
ಅನುಜಾನೀಹಿ ಮಾಮಾರ್ಯ ಸುತೌ ತೇ ಪರಿರಕ್ಷ ವೈ ॥೨೮॥

ಆದ್ದರಿಂದ ಅಂತಹ ನೀನು ನಿನ್ನಿಂದಲೇ ನಿನ್ನನ್ನು ದಾಟಿಸಿಕೋ. ಪೂಜ್ಯನೇ, ನನಗೆ ಅನುಮತಿಯನ್ನು ಕೊಡು. ನಿನ್ನ ಮಕ್ಕಳನ್ನು ರಕ್ಷಿಸು.

ಅವಧ್ಯಾಃ ಸ್ತ್ರಿಯ ಇತ್ಯಾಹುರ್ಧರ್ಮಜ್ಞಾ ಧರ್ಮನಿಶ್ಚಯೇ ।
ಧರ್ಮಜ್ಞಾನ್ ರಾಕ್ಷಸಾನಾಹುರ್ನ ಹನ್ಯಾತ್ ಸ ಚ ಮಾಮಪಿ ॥೨೯॥

ಧರ್ಮಜ್ಞರಾದವರು ಧರ್ಮವಿಚಾರವನ್ನು ಮಾಡುತ್ತಾ, ಸ್ತ್ರೀಯರು ಅವಧ್ಯರು ಎಂದು ಹೇಳುತ್ತಾರೆ. ರಾಕ್ಷಸರನ್ನೂ ಧರ್ಮಜ್ಞರೆಂದು ಹೇಳುತ್ತಾರೆ. ಆದ್ದರಿಂದ ಆ ರಾಕ್ಷಸನು ನನ್ನನ್ನು ಕೊಲ್ಲದೆಯೂ ಇರಬಹುದು.

ನಿಃಸಂಶಯಂ ವಧಃ ಪುಂಸಾಂ ಸ್ತ್ರೀಣಾಂ ಸಂಶಯಿತೋ ವಧಃ ।
ಅತೋ ಮಾಮೇವ ಧರ್ಮಜ್ಞ ಪ್ರಸ್ಥಾಪಯಿತುಮರ್ಹಸಿ ॥೩೦॥

ಪುರುಷರ ವಧೆಯು ನಿಶ್ಚಿತವಾದುದು. ಸ್ತ್ರೀಯರ ವಧೆಯಲ್ಲಿ ಸಂಶಯವಿದೆ. ಧರ್ಮಜ್ಞನೇ, ಆ ಕಾರಣದಿಂದಲೂ ನೀನು ನನ್ನನ್ನೇ ಕಳುಹಿಸಿಕೊಡಬೇಕು.

ಭುಕ್ತಂ ಪ್ರಿಯಾಣ್ಯವಾಪ್ತಾನಿ ಧರ್ಮತಶ್ಚರಿತೋ ಮಯಾ ।
ತ್ವತ್ಪ್ರಸೂತಿಃ ಪ್ರಿಯಾ ಪ್ರಾಪ್ತಾ ಮಾ ತಪ್ಯೇ ತ್ಯಜ್ಯ ಜೀವಿತಮ್ ॥೩೧॥

ನಿನ್ನ ಪತ್ನಿಯಾಗಿ ಅನೇಕ ಭೋಗಗಳನ್ನು ಭೋಗಿಸಿದೆ. ಪ್ರಿಯವಸ್ತುಗಳನ್ನು ಪಡೆದಿದ್ದಾಯಿತು. ಧರ್ಮವನ್ನು ಆಚರಿಸಿದ್ದಾಯಿತು. ನಿನಗೆ ಪ್ರಿಯವಾದ ಸಂತಾನವನ್ನೂ ನೀಡಿದೆ. ನಾನು ಜೀವಿತವನ್ನು ತೊರೆದು ಸಂತಾಪಪಡಬೇಕಾದ ಕಾರಣವಿಲ್ಲ.

ಸಮೀಕ್ಷ್ಯ ತದಹಂ ಸರ್ವಂ ವ್ಯವಸಾಯಂ ಕರೋಮಿ ಚ ।
ಉತ್ಸೃಜ್ಯಾಪಿ ಚ ಮಾಮಾರ್ಯ ವೇತ್ಸ್ಯಸ್ಯನ್ಯಾಮಪಿ ಸ್ತ್ರಿಯಮ್ ॥೩೨॥

ತತಃ ಪ್ರತಿಷ್ಠಿತೋ ಧರ್ಮೋ ಭವಿಷ್ಯತಿ ಪುನಸ್ತವ ।
ನ ಚಾಪ್ಯಧರ್ಮಃ ಕಲ್ಯಾಣ ಬಹುಪತ್ನೀಕತಾ ನೃಣಾಮ್ ।
ಸ್ತ್ರೀಣಾಂ ತ್ವಧರ್ಮಃ ಸುಮಹಾನ್ ಭರ್ತುಃ ಪೂರ್ವಸ್ಯ ಲಂಘನೇ॥೩೩॥

ನಾನು ಇವೆಲ್ಲವನ್ನೂ ವಿಮರ್ಶೆ ಮಾಡಿ ಈ ನಿರ್ಧಾರಕ್ಕೆ ಬಂದಿದ್ದೇನೆ. ಪೂಜ್ಯನಾದ ನೀನು ನನ್ನನ್ನು ಪರಿತ್ಯಾಗ ಮಾಡಿದರೂ ಪುನಃ ಇನ್ನೊಬ್ಬ ಪತ್ನಿಯನ್ನು ಪಡೆಯುತ್ತೀಯೆ. ಆಗ ನಿನ್ನ ಧರ್ಮವು ಪುನಃ ಪ್ರತಿಷ್ಠಿತವಾಗುತ್ತದೆ. ಕಲ್ಯಾಣನಾದವನೇ, ಪುರುಷರು ಪುನಃ ವಿವಾಹವಾದರೆ, ಅದು ಅಧರ್ಮವಲ್ಲ. ಆದರೆ ಸ್ತ್ರೀಯರು ಮೊದಲನೆಯ ಪತಿಯನ್ನು ಬಿಟ್ಟು ಪುನಃ ಮದುವೆಯಾದರೆ, ದೊಡ್ಡ ಅಧರ್ಮವಾಗುತ್ತದೆ.

ಏತತ್ ಸರ್ವಂ ಸಮೀಕ್ಷ್ಯ ತ್ವಮಾತ್ಮತ್ಯಾಗಂ ಚ ಗರ್ಹಿತಮ್।
ಆತ್ಮಾನಂ ತಾರಯ ಬ್ರಹ್ಮನ್ ಕುಲಂ ಚ ಮಮ ದಾರಕೌ ॥೩೪॥

ಬ್ರಾಹ್ಮಣನೇ, ಇವೆಲ್ಲವನ್ನೂ ವಿಚಾರಮಾಡಿ ನಿಂದನೀಯವಾದ ಆತ್ಮ ಪರಿತ್ಯಾಗವನ್ನು ಬಿಟ್ಟು ನನ್ನ ಕಾರಣದಿಂದ, ನಿನ್ನನ್ನೂ, ಕುಲವನ್ನೂ ಮತ್ತು ಮಕ್ಕಳನ್ನೂ ಆಪತ್ತಿನಿಂದ ದಾಟಿಸು.

ವೈಶಂಪಾಯನಃ

ಏವಮುಕ್ತಸ್ತಯಾ ಭರ್ತಾ ತಾಂ ಸಮಾಲಿಂಗ್ಯ ಭಾರತ ।
ಮುಮೋಚ ಬಾಷ್ಪಂ ಶನಕೈಃ ಸಭಾರ್ಯೋ ಭೃಶದುಃಖಿತಃ ॥೩೫॥

ಭಾರತನೇ, ಅವಳು ಹೀಗೆ ಹೇಳಿದಾಗ ಪತಿಯು ಅವಳನ್ನು ಆಲಿಂಗಿಸಿ ಬಹಳ ದುಃಖಿತನಾಗಿ ಪತ್ನಿಯ ಜೊತೆಯಲ್ಲಿ ನಿಧಾನವಾಗಿ ಕಣ್ಣೀರಿಟ್ಟನು.

ಮೈವಂ ವದೇಥಾಃ ಕಲ್ಯಾಣಿ ವಿಶಿಷ್ಟೋಽಹಂ ಸುಮಧ್ಯಮೇ ।
ವಿಶೇಷತಃ ಸ್ತ್ರಿಯಂ ರಕ್ಷೇತ್ ಪುರುಷೇಣೋಪಸರ್ಪಿಣಾ ।
ಯೋ ವೇತ್ತಿ ಧರ್ಮಮರ್ಥಂ ಚ ಕಾಮಂ ಮೋಹಂ ಚ ತತ್ತ್ವತಃ ॥೩೬॥

ಕಲ್ಯಾಣಿಯೇ, ಸುಂದರಿಯೇ, ಹೀಗೆ ಹೇಳಬೇಡ. ನಾನು ವಿಶಿಷ್ಟನಾದವನು. ಸ್ತ್ರೀಯರನ್ನು ಪರಪುರುಷನು ಸಮೀಪಿಸದಂತೆ ವಿಶೇಷವಾಗಿ ರಕ್ಷಣೆ ಮಾಡಬೇಕು. ಯಾವನು ಧರ್ಮವನ್ನೂ, ಅರ್ಥವನ್ನೂ, ಕಾಮವನ್ನೂ ಮತ್ತು ಮೋಹವನ್ನು ಯಥಾರ್ಥವಾಗಿ ತಿಳಿಯುತ್ತಾನೋ, ಅವನು ಹೀಗೆಯೇ ಮಾಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವಿಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ಬಕವಧಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಅರವತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಅರ್ಥೇ ತವಾದ್ಯ ತನುಸಂತ್ಯಜನಾದಹಂ ಸ್ಯಾಂ
ಲೋಕೇ ಸತೀಪ್ರಚರಿತೇ ತದೃತೇ ತ್ವಧಶ್ಚ ।
ಕನ್ಯಾಹ ಚೈನಮಹಮೇವ ನ ಕನ್ಯಯಾರ್ಥ
ಇತ್ಯುಕ್ತ ಆಹ ಧಿಗಿತಿ ಸ್ಮ ಸ ವಿಪ್ರವರ್ಯಃ ॥೭೫॥

'ನಿನಗಾಗಿ ನಾನೀನ ಶರೀರತ್ಯಾಗ ಮಾಡಿದರೆ ನಾನು ಪತಿವ್ರತೆ ಎಂಬ ಕೀರ್ತಿ ಹೊಂದಬಲ್ಲೆ. ಪತಿವ್ರತೆಯರ ಲೋಕವನ್ನೂ ಹೊಂದಬಲ್ಲೆ. ಇಲ್ಲದಿದ್ದರೆ ಅಧೋಲೋಕವನ್ನು ಪಡೆಯಬೇಕಾದೀತು' ಎಂದಳು ಪತ್ನಿ. ಆಗ ಮಗಳು ತಂದೆಗೆ ಹೇಳಿದಳು. 'ನಾನು ಹೋಗುವೆನು. ಕನ್ಯೆಯಿಂದ ಏನು ಪ್ರಯೋಜನವಿಲ್ಲ ತಾನೆ?' ಬ್ರಾಹ್ಮಣನೆಂದ 'ಛಿ ಹಾಗೆನ್ನಬೇಡ'.

ಕನ್ಯೋದಿತಾ ಬತ ಕುಲದ್ವಯತಾರಿಣೇತಿ
ಜಾಯಾ ಸಖೇತಿ ವಚನಂ ಶ್ರುತಿಗಂ ಸುತಶ್ಚ ।
ಆತ್ಮೈವ ತೇನ ನ ತು ಜೀವನಹೇತುತೋऽಹಂ
ಧೀಪೂರ್ವಕಂ ನೃಶನಕೇ ಪ್ರತಿಪಾದಯಾಮಿ ॥೭೬॥

ಕನ್ಯೆ 'ಎರಡೂ ಕುಲಗಳನ್ನು ಉದ್ಧರಿಸುವವಳು' ಎಂದು ವರ್ಣಿತಳಾಗಿದ್ದಾಳೆ. ಪತ್ನಿಯು ಸಖಿ ಎನ್ನುವ ವಚನ ಶ್ರುತಿಯಲ್ಲಿದೆ. ಮಗನೆಂದರೆ ತನ್ನದೆ ಆದ ಇನ್ನೊಂದು ರೂಪ. ಆದರಿಂದ ನನ್ನ ಪ್ರಾಣರಕ್ಷಣೆಗಾಗಿ ತಿಳಿದೂ ತಿಳಿದೂ ನಿಮ್ಮನ್ನು ನರಭಕ್ಷಕನ ಬಾಯಿಗೆ ಕೊಡಲಾರೆ.

ಏವಂ ರುದತ್ಸು ಸಹಿತೇಷು ಕುಮಾರಕೋಽಸ್ಯ
ಪ್ರಾಹ ಸ್ವಹಸ್ತಗತೃಣಂ ಪ್ರತಿದರ್ಶ್ಯ ಚೈಷಾಂ ।
ಏತೇನ ರಾಕ್ಷಸಮಹಂ ನಿಹನಿಷ್ಯ ಏವೇ-
ತ್ಯುಕ್ತೇ ಸುವಾಕ್ಯಮನು ಸಾ ಪ್ರವಿವೇಶ ಕುಂತೀ ॥೭೭॥

ಹೀಗೆ ಎಲ್ಲರೂ ಕೂಡಿ ಅಳುತ್ತಿದ್ದಾಗ ಎಳೆಯ ವಯಸ್ಸಿನ ಮಗ ತನ್ನ ಕೈಯಲ್ಲಿ ಒಂದು ಹುಲ್ಲುಕಡ್ಡಿಯನ್ನು ಎತ್ತಿ ತೋರಿಸಿ 'ಈ ಹುಲ್ಲುಕಡ್ಡಿಯಿಂದ ನಾನು ರಾಕ್ಷಸನನ್ನು ಕೊಲ್ಲುವೆ' ಎಂದ. ಈ ಮಾತು ಶುಭಶಕುನವೆಂದು ಕುಂತಿ ಕೂಡಲೆ ಒಳಗೆ ಪ್ರವೇಶಿಸಿದಳು.

ಪೃಷ್ಟಸ್ತಯಾಹ ಸ ತು ವಿಪ್ರವರೋ ಬಕಸ್ಯ
ವೀರ್ಯಂ ಬಲಂ ಚ ದಿತಿಜಾರಿಭಿರಪ್ಯಸಹ್ಯಂ ।
ಸಂವತ್ಸರತ್ರಯಯುತೇ ದಶಕೇ ಕರಂ ಚ
ಪ್ರಾತಿಸ್ವಿಕಂ ದಶಮುಖಸ್ಯ ಚ ಮಾತುಲಸ್ಯ ॥೭೮॥

ಕುಂತಿ ಕೇಳಿದಾಗ ಆ ಬ್ರಾಹ್ಮಣೋತ್ತಮ ದೇವತೆಗಳಿಗೂ ಇದಿರಿಸಲಾಗದಂಥ ಬಕನ ವೀರ್ಯಪರಾಕ್ರಮಗಳನ್ನೂ ಅವನು ರಾವಣನ ಸೋದರ ಮಾವನಾಗಿದ್ದುದನ್ನೂ ಹದಿಮೂರು ವರ್ಷಗಳಿಂದಲೂ ಪ್ರತಿದಿನ ಸರದಿಯಂತೆ ಒಂದೊಂದು ಮನೆಯವರು ಅವನಿಗೆ ಕೊಡಬೇಕಾಗಿದ್ದ ಕಪ್ಪವನ್ನೂ ವಿವರಿಸಿದ.

ಶ್ರುತ್ವಾ ತಮುಗ್ರಬಲಮತ್ಯುರವೀರ್ಯಮೇವ
ರಾಮಾಯಣೇ ರಘುವರೋರುಶರಾತಿಭೀತಂ ।
ವಿಷ್ಟಂ ಬಿಲೇಷ್ವಥ ನೃಪಾನ್ ವಶಮಾಶು ಕೃತ್ವಾ
ಭೀತ್ಯೈವ ತೈಸ್ತದನು ದತ್ತಕರಂ ನನಂದ ॥೭೯॥

'ಬಕ ಭಯಂಕರ ಬಲ ಉಳ್ಳವ. ಅತ್ಯಂತ ಮಹಾಪರಾಕ್ರಮಶಾಲಿ. ರಾಮಾಯಣ ಕಾಲದಲ್ಲಿ ಶ್ರೀರಾಮನ ಮಹಾಬಾಣಕ್ಕೆ ಬಲುಭೀತನಾಗಿ ಗುಹೆಯೊಳಗೆ ಅಡಗಿದವ. ಬಳಿಕ ಈಗ ರಾಜರುಗಳನ್ನು ತನ್ನ ವಶಮಾಡಿಕೊಂಡು ಅವರಿಂದ ತನಗಿಷ್ಟವಾದ ಕಪ್ಪವನ್ನು ತೆಗೆದುಕೊಳ್ಳುತ್ತಿದ್ದಾನೆ. ಅವರು ಭೀತಿಯಿಂದ ಕೊಡುತ್ತಿದ್ದಾರೆ' ಎಂದು ಬ್ರಾಹ್ಮಣ ಹೇಳಿದ್ದನ್ನು ಕೇಳಿ ಕುಂತಿ ಆನಂದಪಟ್ಟಳು.

★ ★ ★ ★

ನೂರ ಅರವತ್ಮೂರನೆಯ ಅಧ್ಯಾಯ

(ಕನ್ಯೆಯ ವಚನ, ಬಾಲಕನ ವಚನ, ಕುಂತಿಯ ಪ್ರವೇಶ, ಬ್ರಾಹ್ಮಣನಿಂದ ಬಕವೃತ್ತಾಂತ ಕಥನ)

ವೈಶಂಪಾಯನಃ

ತಯೋರ್ದುಃಖಿತಮಾಕರ್ಣ್ಯ ಅತಿಮಾತ್ರಂ ನಿಶಮ್ಯ ಸಾ ।
ಭೃಶಂ ದುಃಖಪರೀತಾಂಗೀ ಕನ್ಯಾ ತಾವಭ್ಯಭಾಷತ ॥೧॥

ತಂದೆತಾಯಿಗಳ ದುಃಖದ ಮಾತುಗಳನ್ನು ಕೇಳಿ ತಾನೂ ದುಃಖತಪ್ತಳಾದ ಅವರ ಕನ್ಯೆಯು ಅವರಿಬ್ಬರನ್ನು ಕುರಿತು ಮಾತನಾಡಿದಳು.

ಕಿಮಿದಂ ಭೃಶದುಃಖಾರ್ತೌ ಕರುಣಂ ವಿಲಪಿಷ್ಯಥಃ ।
ಮಮಾಪಿ ಶ್ರೂಯತಾಂ ಕಿಂಚಿತ್ ವಚನಂ ಯದಿ ರೋಚತೇ ॥೨॥

ನೀವೇಕೆ ಇಷ್ಟು ದುಃಖದಿಂದ ಕರುಣಾಜನಕವಾಗಿ ವಿಲಾಪವನ್ನು ಮಾಡುತ್ತಿದ್ದೀರಿ? ನಿಮಗೆ ಇಷ್ಟವಾಗುವುದಾದರೆ ನನ್ನ ಮಾತನ್ನೂ ಸ್ವಲ್ಪ ಕೇಳಿ.

ಧರ್ಮತೋಽಹಂ ಪರಿತ್ಯಾಜ್ಯಾ ಯುವಯೋರ್ನಾತ್ರ ಸಂಶಯಃ ।
ತ್ಯಕ್ತವ್ಯಾಂ ಮಾಂ ಪರಿತ್ಯಜ್ಯ ತ್ರಾತಂ ಸರ್ವಂ ಮಮೈಕಯಾ ॥೩॥

ಧರ್ಮದ ದೃಷ್ಟಿಯಿಂದ ನೀವಿಬ್ಬರೂ ನನ್ನನ್ನು ಎಂದಾದರೂ ಪರಿತ್ಯಾಗ ಮಾಡಲೇ ಬೇಕು ಎಂಬುದರಲ್ಲಿ ಸಂಶಯವಿಲ್ಲ. ಪರಿತ್ಯಾಗ ಮಾಡಬೇಕಾದ ನನ್ನನ್ನು ಈಗಲೇ ಪರಿತ್ಯಜಿಸಿ. ನನ್ನೊಬ್ಬಳಿಂದ ಎಲ್ಲವನ್ನೂ ರಕ್ಷಿಸಿಕೊಳ್ಳಿ.

ಇತ್ಯರ್ಥಮಿಷ್ಯತೇಽಪತ್ಯಂ ತಾರಯಿಷ್ಯತಿ ಮಾಮಿತಿ ।
ಅಸ್ಮಿನ್ನುಪಸ್ಥಿತೇ ಕಾಲೇ ಹರತಂ ವ್ಯಸನಂ ಮಯಾ ॥೪॥

ನಮ್ಮನ್ನು ಆಪತ್ತುಗಳಿಂದ ದಾಟಿಸುತ್ತಾರೆ ಎಂಬ ಕಾರಣದಿಂದ ಜನರು ಮಕ್ಕಳನ್ನು ಅಪೇಕ್ಷಿಸುತ್ತಾರೆ. ಈ ಉಪಸ್ಥಿತವಾದ ಆಪತ್ಕಾಲದಲ್ಲಿ ನನ್ನನ್ನು ಪರಿತ್ಯಾಗ ಮಾಡಿ ನಿಮ್ಮ ಈ ಆಪತ್ತನ್ನು ಪರಿಹರಿಸಿಕೊಳ್ಳಿ.

ಇಹ ವಾ ತಾರಯೇದ್ ದುಃಖಾದುತ ವಾ ಪ್ರೇತ್ಯ ತಾರಯೇತ್ ।
ಸರ್ವಥಾ ತಾರಯೇತ್‌ಪುತ್ರ ಆತ್ಮಾ ವೈ ಪುತ್ರ ಉಚ್ಯತೇ ॥೫॥

ಪುತ್ರನು ಈ ಲೋಕದಲ್ಲಾಗಲೀ ಅಥವಾ ಪರಲೋಕದಲ್ಲಾಗಲೀ ಸರ್ವಥಾ ದುಃಖದಿಂದ ಪಾರು ಮಾಡುತ್ತಾನೆ. ಪುತ್ರನನ್ನು ಆತ್ಮ ಎಂದೇ ಕರೆಯುತ್ತಾರೆ.

ಪುನ್ನಾಮ್ನೋ ನರಕಾತ್ ತ್ರಾಣಾತ್ ತನಯಃ ಪುತ್ರ ಉಚ್ಯತೇ ।
ಆಕಾಂಕ್ಷಂತೀಹ ದೌಹಿತ್ರಾನ್ ಯದಿ ನಿತ್ಯಂ ಪಿತಾಮಹಾಃ ।
ತಾನ್ ಸ್ವಯಂ ವೈ ಪರಿತ್ರಾಸ್ಯೇ ರಕ್ಷಂತೀ ಜೀವಿತಂ ಪಿತುಃ ॥೭॥

ಪುತಿ ಎಂಬ ನರಕದಿಂದ ರಕ್ಷಣೆ ಮಾಡುವ ಕಾರಣದಿಂದ ಸುತನನ್ನು ಪುತ್ರನೆಂದು ಕರೆಯುತ್ತಾರೆ. ಪಿತಾಮಹರು ಅದೇ ಕಾರಣಕ್ಕಾಗಿ ಯಾವಾಗಲೂ ದೌಹಿತ್ರರನ್ನು ಬಯಸುತ್ತಾರೆ. ನಾನು ತಂದೆಯ ಜೀವಿತವನ್ನು ರಕ್ಷಿಸಿ ಆ ಪಿತಾಮಹರನ್ನು ದೌಹಿತ್ರರ ಬದಲಾಗಿ ನಾನೇ ರಕ್ಷಿಸುವೆನು.

ಭ್ರಾತಾ ಹಿ ಮಮ ಬಾಲೋಽಯಂ ಗತೇ ಲೋಕಾಂತರಂ ತ್ವಯಿ ।
ಅಚಿರೇಣೈವ ಕಾಲೇನ ವಿನಶಿಷ್ಯತ್ಯಸಂಶಯಃ ॥೭॥

ನನ್ನ ತಮ್ಮನು ಇನ್ನೂ ಬಹಳ ಚಿಕ್ಕವನು. ನೀನು ಲೋಕಾಂತರಕ್ಕೆ ಹೋದರೆ, ಸ್ವಲ್ಪಕಾಲದಲ್ಲಿಯೇ ಅವನು ವಿನಾಶ ಹೊಂದುವುದು ನಿಶ್ಚಿತ.

ತಾತೇಽಪಿ ಹಿ ಗತೇ ಸ್ವರ್ಗಂ ವಿನಷ್ಟೇ ಚ ಮಮಾನುಜೇ ।
ಪಿಂಡಃ ಪಿತೄಣಾಂ ವ್ಯುಚ್ಛಿದ್ಯೇತ್ ತತ್ ತೇಷಾಂ ವಿಪ್ರಿಯಂ ಭವೇತ್ ॥

ನನ್ನ ತಂದೆಯೂ ಸ್ವರ್ಗಸ್ಥನಾಗಿ ತಮ್ಮನೂ ವಿನಾಶವನ್ನು ಹೊಂದಿದರೇ ಪಿತೃಗಳಿಗೆ ಪಿಂಡಲೋಪವಾಗುತ್ತದೆ. ಅದು ಅವರಿಗೆ ಅಪ್ರಿಯವಾದುದು.

ಪಿತ್ರಾ ತ್ಯಕ್ತಾ ತಥಾ ಮಾತ್ರಾ ಭ್ರಾತ್ರಾ ಚೈವ ನ ಸಂಶಯಃ ।
ದುಃಖಾದ್ ದುಃಖತರಂ ಪ್ರಾಪ್ಯ ಗಚ್ಛೇಯಮತಥೋಚಿತಾ ॥೯॥

ತಂದೆಯಿಂದಲೂ, ತಾಯಿಯಿಂದಲೂ ಮತ್ತು ತಮ್ಮನಿಂದಲೂ ಪರಿತ್ಯಕ್ತಳಾದ ದುಃಖವನ್ನು ಅನುಭವಿಸಲು ಅರ್ಹಳಲ್ಲದ ನಾನು, ಒಂದು ದುಃಖದಿಂದ ಅದಕ್ಕಿಂತ ಹೆಚ್ಚಿನ ಇನ್ನೊಂದು ದುಃಖವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

ತ್ವಯಿ ರೋಗವಿನಿರ್ಮುಕ್ತೇ ಭ್ರಾತ್ರಾ ಮಾತ್ರಾ ಸಹೈವ ತು ।
ಸಂತಾನಶ್ಚೈವ ಪಿಂಡಶ್ಚ ಪ್ರತಿಷ್ಠಾಸ್ಯತ್ಯಸಂಶಯಮ್ ॥೧೦॥

ನೀನು ತಾಯಿ ಮತ್ತು ತಮ್ಮನ ಜೊತೆಯಲ್ಲಿ ಈ ಸಂಕಟದಿಂದ ಪಾರಾದರೆ, ಕುಲದ ಸಂತತಿಯೂ, ಪಿತೃಗಳ ಪಿಂಡಪ್ರಾಪ್ತಿಯೂ ಸುಭದ್ರವಾಗಿರುವುದರಲ್ಲಿ ಸಂಶಯವಿಲ್ಲ.

ಆತ್ಮಾ ಪುತ್ರಃ ಸಖಾ ಭಾರ್ಯಾ ಕೃಚ್ಛ್ರಂ ತು ದುಹಿತಾ ಕಿಲ ।
ಸ ಕೃಚ್ಛ್ರಾನ್ಮೋಚಯಾತ್ಮಾನಂ ಮಾಂ ಚ ಧರ್ಮೇಣ ಯೋಜಯ ॥೧೧॥

ಪುತ್ರನೂ ಆತ್ಮನೇ (ತಾನೇ). ಹೆಂಡತಿಯು ಮಿತ್ರಳು. ಮಗಳು ಒಂದು ದುಃಖವೆಂದು ಹೇಳುತ್ತಾರಷ್ಟೇ. ಅಂತಹ ನೀನು ನಿನ್ನನ್ನು ಮಗಳೆಂಬ ದುಃಖದಿಂದ ಬಿಡಿಸಿಕೊಂಡು ನನ್ನನ್ನೂ ಧರ್ಮಮಾರ್ಗದಲ್ಲಿಡು.

ಅನಾಥಾ ಕೃಪಣಾ ಬಾಲಾ ಯತ್ರ ಕ್ವಚನ ಶಾಯಿನೀ ।
ಭವಿಷ್ಯಾಮಿ ತ್ವಯಾ ತಾತ ವಿಹೀನಾ ಕೃಪಣಾ ಬತ ॥೧೨॥

ತಂದೆಯೇ, ನೀನಿಲ್ಲದಿದ್ದರೆ ನಾನು ಅನಾಥಳೂ, ಕೃಪಣಳೂ ಆಗಿ ಎಲ್ಲೆಂದರಲ್ಲಿ ಮಲಗಿಕೊಂಡು ಕಾಲವನ್ನು ಕಳೆಯಬೇಕಾಗುತ್ತದೆ.

ಅತಸ್ತ್ವಹಂ ಕರಿಷ್ಯಾಮಿ ಕುಲಸ್ಯಾಸ್ಯ ವಿಮೋಕ್ಷಣಮ್ ।
ಫಲಸಂಸ್ಥಾ ಭವಿಷ್ಯಾಮಿ ಕೃತ್ವಾ ಕರ್ಮ ಸುದುಷ್ಕೃತಮ್ ॥೧೩॥

ಆದ್ದರಿಂದ ನಾನು ಈ ಕುಲವನ್ನು ಸಂಕಟದಿಂದ ಪಾರು ಮಾಡುವೆನು. ಸುದುಷ್ಕರವಾದ ಕರ್ಮವನ್ನು ಮಾಡಿ ಫಲಭಾಗಿಯಾಗುವೆನು.

ಅಥವಾ ಯಾಸ್ಯಸೇ ತತ್ರ ತ್ಯಕ್ತ್ವಾ ಮಾಂ ದ್ವಿಜಸತ್ತಮ ।
ಪೀಡಿತಾऽಹಂ ಭವಿಷ್ಯಾಮಿ ತಚ್ಚಾಪ್ಯವೇಕ್ಷಸ್ವ ಮಾಮಪಿ ॥೧೪॥

ಬ್ರಾಹ್ಮಣಶ್ರೇಷ್ಠನೇ, ಅಥವಾ ನೀನು ನನ್ನನ್ನು ಬಿಟ್ಟು ಪರಲೋಕಕ್ಕೆ ಹೋಗುವುದಾದರೆ, ನಾನು ದುಷ್ಟರಿಂದ ಪೀಡಿತಳಾಗುವೆನು ಎಂಬುದನ್ನೂ ಗಮನಿಸು.

ಅತೋऽಸ್ಮದರ್ಥಂ ಧರ್ಮಾರ್ಥಂ ಪ್ರಸವಾರ್ಥಂ ಚ ಸತ್ತಮ ।
ಆತ್ಮಾನಂ ಪರಿರಕ್ಷಸ್ವ ತ್ಯಕ್ತವ್ಯಾಂ ಮಾಂ ಪರಿತ್ಯಜ ॥೧೫॥

ಆದ್ದರಿಂದ ಸಜ್ಜನನಾದ ತಂದೆಯೇ, ನನ್ನ ಸಲುವಾಗಿ ಧರ್ಮದ ಸಲುವಾಗಿ ಮತ್ತು ಸಂತತಿಯ ಸಲುವಾಗಿ ನಿನ್ನನ್ನು ರಕ್ಷಿಸಿಕೋ. ಪರಿತ್ಯಾಗ ಮಾಡಬೇಕಾದ ನನ್ನನ್ನು ಪರಿತ್ಯಾಗ ಮಾಡು.

ಅವಶ್ಯಕರಣೀಯೇऽರ್ಥೇ ಮಾ ಸ್ಮ ಕಾಲವ್ಯತಿಕ್ರಮಃ ।
ತ್ವಯಾ ದತ್ತೇನ ತೋಯೇನ ಭವಿಷ್ಯತಿ ಹಿತಂ ಚ ಮೇ ॥೧೬॥

ಅವಶ್ಯವಾಗಿ ಮಾಡಲೇಬೇಕಾದ ಕೆಲಸದ ವಿಷಯದಲ್ಲಿ ವಿಳಂಬವನ್ನು ಮಾಡಬಾರದು. ನೀನು ಕೊಡುವ ತರ್ಪಣದಿಂದ ನನಗೆ ಹಿತವುಂಟಾಗುವುದು.

ಕಿಂ ನು ತಸ್ಮಾತ್ ಪರಂ ದುಃಖಂ ಯದ್ ವಯಂ ಸ್ವರ್ಗತೇ ತ್ವಯಿ ।
ಯಾಚಮಾನಾಃ ಪರಾದನ್ನಂ ಪರಿಧಾವೇಮಹಿ ಶ್ವವತ್ ॥೧೭॥

ನೀನು ಪರಲೋಕಕ್ಕೆ ಹೋದರೆ, ನಾವು ಅನ್ನಕ್ಕಾಗಿ ಪರರನ್ನು ಬೇಡಿ, ನಾಯಿಗಳಂತೆ ಅಲೆದಾಡುವುದಕ್ಕಿಂತ ಹೆಚ್ಚಿನ ದುಃಖವು ಯಾವುದಿದೆ?

ತ್ವಯಿ ರೋಗವಿನಿರ್ಮುಕ್ತೇ ಶೋಕಾದಸ್ಮಾತ್ ಸಬಾಂಧವೇ ।
ನಮೃತೇವ ಸತೀ ಲೋಕೇ ಭವಿಷ್ಯಾಮಿ ಸುಖಾನ್ವಿತಾ ॥೧೮॥

ನೀನು ಮತ್ತು ನಿನ್ನ ಬಂಧುಗಳು ಈ ಸಂಕಟವೆಂಬ ರೋಗದಿಂದ ಪಾರಾದರೆ, ನಾನು ಮರಣ ಹೊಂದಿದರೂ ಈ ಲೋಕದಲ್ಲಿ ಬದುಕಿರುವವರಂತೆ ಸುಖವಾಗಿರುವೆನು.

ಇತ್ಯೇತದುಭಯಂ ತಾತ ನಿಶಮ್ಯ ತವ ಯದ್ಧಿತಮ್ ।
ತದ್ ವ್ಯವಸ್ಯ ತಥಾऽಂಬಾಯಾ ಹಿತಂ ಸ್ವಸ್ಯ ಸುತಸ್ಯ ಚ ॥೧೯॥

ತಂದೆಯೇ, ಇವೆಲ್ಲವನ್ನೂ ವಿಚಾರ ಮಾಡಿ ನಿನಗೂ, ತಾಯಿಗೂ ಮತ್ತು ತಮ್ಮನಿಗೂ, ಯಾವುದು ಹಿತವೆಂದು ನಿರ್ಧರಿಸು.

ಮಾತಾಪಿತ್ರೋಃ ಪುನಃ ಪುತ್ರಾ ಭವಿತಾರೋ ಗುಣಾನ್ವಿತಾಃ ।
ನ ತು ಪುತ್ರಸ್ಯ ಪಿತರೌ ಪುನರ್ಜಾತು ಭವಿಷ್ಯತಃ ॥೨೦॥

ತಂದೆತಾಯಿಗಳಿಗೆ ಪುನಃ ಗುಣವಂತರಾದ ಮಕ್ಕಳು ಜನಿಸುವರು. ಆದರೆ ತಂದೆತಾಯಿಗಳನ್ನು ಕಳೆದುಕೊಂಡ ಪುತ್ರನು ಇನ್ನೊಮ್ಮೆ ತಂದೆತಾಯಿಗಳನ್ನು ಪಡೆಯುವುದಿಲ್ಲ.

ವೈಶಂಪಾಯನಃ

ಏವಂ ಬಹುವಿಧಂ ತಸ್ಯಾ ನಿಶಮ್ಯ ಪರಿದೇವಿತಮ್ ।
ಪಿತಾ ಮಾತಾ ಚ ಸಾ ಚೈವ ಕನ್ಯಾ ಪ್ರರುರುದುಸ್ತ್ರಯಃ ॥೨೧॥

ಹೀಗೆ ಅವಳು ಬಹುವಿಧವಾಗಿ ಗೋಳಾಡುವುದನ್ನು ಕೇಳಿ, ತಂದೆ, ತಾಯಿ ಮತ್ತು ಆ ಕನ್ಯೆಯೂ ಸಹ ಗಟ್ಟಿಯಾಗಿ ಅತ್ತರು.

ತಥಾ ಪ್ರರುದಿತಾನ್ ಸರ್ವಾನ್ ನಿಶಮ್ಯ ತು ಸುತಸ್ತಯೋಃ ।
ಉತ್ಫುಲ್ಲನಯನೋ ಬಾಲಃ ಕಲಮವ್ಯಕ್ತಮಬ್ರವೀತ್ ॥೨೨॥

ಹಾಗೆ ಎಲ್ಲರೂ ಅಳುತ್ತಿರುವುದನ್ನು ನೋಡಿದ ಅವರ ಚಿಕ್ಕಮಗುವಾದ ಪುತ್ರನು ಕಣ್ಣುಗಳನ್ನು ಅರಳಿಸಿ ಅವ್ಯಕ್ತ ಮಧುರವಚನಗಳಿಂದ ಮಾತನಾಡಿದನು.

ಮಾ ಪಿತಾ ರೋದ ಮಾ ಮಾತರ್ಮಾ ಸ್ವಸೇತಿ ಪುನಃಪುನಃ ।
ಪ್ರಹಸನ್ನಿವ ಸರ್ವಾಂಸ್ತಾನೇಕೈಕಂ ಸೋಪಸರ್ಪತಿ ॥೨೩॥

ತಂದೆಯೇ ಅಳಬೇಡ. ಅಮ್ಮಾ ಅಳಬೇಡ, ಅಕ್ಕಾ ಅಳಬೇಡ ಎಂದು ಹೇಳುತ್ತಾ, ನಗುತ್ತಾ ಅವನು ಒಬ್ಬೊಬ್ಬರ ಕಡೆಗೂ ಮತ್ತೆ ಮತ್ತೆ ಹೋದನು.

ತತಃ ಸ ತೃಣಮಾದಾಯ ಪ್ರಹೃಷ್ಟಃ ಪುನರಬ್ರವೀತ್ ।
ಅನೇನ ತಂ ಹನಿಷ್ಯಾಮಿ ರಾಕ್ಷಸಂ ಪುರುಷಾದನಮ್ ॥೨೪॥

ಅನಂತರ ಆ ಮಗುವು ಒಂದು ಕಡ್ಡಿಯನ್ನು ತೆಗೆದುಕೊಂಡು ಆ ನರಭಕ್ಷಕನಾದ ರಾಕ್ಷಸನನ್ನು ಈ ಕಡ್ಡಿಯಿಂದ ಕೊಲ್ಲುವೆನು ಎಂದು ಸಂತೋಷದಿಂದ ಹೇಳಿತು.

ವೈಶಂಪಾಯನಃ

ತಥಾऽಪಿ ತೇಷಾಂ ದುಃಖೇನ ಪರೀತಾನಾಂ ನಿರೀಕ್ಷ್ಯ ಚ ।
ತಥಾ ಬ್ರುವಂತಂ ತಂ ಬಾಲಂ ಹರ್ಷಃ ಸಮಭವತ್ ತದಾ ॥೨೫॥

ಆ ಮಾತುಗಳನ್ನು ಕೇಳಿ ದುಃಖದಿಂದ ಗೋಳಾಡುತ್ತಿದ್ದ ಆ ಮೂವರಿಗೂ ಸಂತೋಷವುಂಟಾಯಿತು.

ಇದಮಂತರಮಿತ್ಯೇವ ಕುಂತೀ ಸಮುಪಸೃತ್ಯ ತಾನ್ ।
ಗತಾಸೂನಮೃತೇನೇವ ಸಾಂತ್ವಯಾಮಾಸ ವೈ ಗಿರಾ ॥೨೬॥

ಇದೇ ಒಳ್ಳೆಯ ಸಮಯ ಎಂದು ತಿಳಿದು ಕುಂತಿಯು ಒಳಗೆ ಪ್ರವೇಶಿಸಿ, ಅವರನ್ನು ಸಮೀಪಿಸಿ, ಪ್ರಾಣಹೋದವರನ್ನು ಅಮೃತದಿಂದ ಉಜ್ಜೀವಿಸುವಂತೆ ತನ್ನ ಮಧುರವಾದ ಮಾತುಗಳಿಂದ ಸಮಾಧಾನಪಡಿಸಿದಳು.

ಕುಂತೀ

ಕುತೋಮೂಲಮಿದಂ ದುಃಖಂ ಜ್ಞಾತುಮಿಚ್ಛಾಮಿ ತತ್ತ್ವತಃ ।
ತದ್ ವಿದಿತ್ವಾऽಪಕರ್ಷೇಯಂ ಶಕ್ಯಂ ಚೇದಂ ಪರೀಕ್ಷಿತುಮ್ ॥೨೭॥

ಈ ದುಃಖಕ್ಕೆ ಏನು ಕಾರಣವೆಂದು ನಾನು ಸರಿಯಾಗಿ ತಿಳಿಯಲು ಬಯಸುತ್ತೇನೆ. ಅದನ್ನು ತಿಳಿದು ನಾನು ದುಃಖವನ್ನು ನಿವಾರಣೆ ಮಾಡುತ್ತೇನೆ. ಈ ದುಃಖವನ್ನು ನಿವಾರಣೆ ಮಾಡುವುದು ಸಾಧ್ಯವೆನಿಸುತ್ತದೆ.

ಬ್ರಾಹ್ಮಣಃ

ಉಪಪನ್ನಂ ಸತಾಮೇತದ್ ಯದ್ ಬ್ರವೀಷಿ ತಪೋಧನೇ ।
ನ ತು ದುಃಖಮಿದಂ ಶಕ್ಯಂ ಮಾನುಷೇಣ ವ್ಯಪೋಹಿತುಮ್ ॥೨೮॥

ತಪಸ್ವಿನಿಯೇ, ಹೀಗೆ ಮಾತನಾಡುವುದು ಸಜ್ಜನರಿಗೆ ಯೋಗ್ಯವಾಗಿಯೇ ಇದೆ. ಆದರೆ ಯಾವ ಮನುಷ್ಯನೂ ಈ ದುಃಖವನ್ನು ಪರಿಹಾರ ಮಾಡಲು ಸಾಧ್ಯವಿಲ್ಲ.

ತಥಾಽಪಿ ತತ್ತ್ವಮಾಖ್ಯಾಸ್ಯೇ ಏತದ್ದುಃಖಸ್ಯ ಸಂಭವಮ್ ।
ಶಕ್ಯಂ ವಾ ಯದಿ ವಾಽಶಕ್ಯಂ ಶೃಣು ಭದ್ರೇ ಯಥಾತಥಮ್ ॥೨೯॥

ಆದರೂ ಸಹ ಈ ದುಃಖಕ್ಕೆ ಏನು ಕಾರಣವೆಂದು ವಸ್ತುಸ್ಥಿತಿಯನ್ನು ಹೇಳುವೆನು. ಅದನ್ನು ಪರಿಹರಿಸಲು ಶಕ್ಯವೋ ಅಥವಾ ಅಶಕ್ಯವೋ ಅದು ಬೇರೆಯ ವಿಷಯ. ಮಂಗಳಸ್ವರೂಪಳೇ, ನಿಜಸ್ಥಿತಿಯನ್ನಂತೂ ಕೇಳು.

ಸಮೀಪೇ ನಗರಸ್ಯಾಸ್ಯ ಬಕೋ ನಾಮೇಹ ರಾಕ್ಷಸಃ ।
ಇತೋ ಗವ್ಯೂತಿಮಾತ್ರೇಽಸ್ತಿ ಯಮುನಾಗಹ್ವರೇ ಗುಹಾ ॥೩೦॥

ತಸ್ಯಾಂ ಘೋರಃ ಸ ವಸತಿ ಜಿಘಾಂಸುಃ ಪುರುಷಾದಕಃ ।
ಬಕೋ ನಾಮ ಸ ನಾಮ್ನಾ ವೈ ದುಷ್ಟಾತ್ಮಾ ರಾಕ್ಷಸಾಧಮಃ ॥೩೧॥

ಈ ನಗರದ ಸಮೀಪದಲ್ಲಿ ಇಲ್ಲಿಗೆ ಒಂದು ಗವ್ಯೂತಿ ದೂರದಲ್ಲಿ, ಯಮುನಾ ತೀರದ ಒಂದು ಗುಹೆಯಲ್ಲಿ ಘೋರನಾದ ಬಕನೆಂಬ ರಾಕ್ಷಸನು ವಾಸಿಸುತ್ತಾನೆ. ಆ ರಾಕ್ಷಸಾಧಮನು ದುಷ್ಟನೂ, ನರಭಕ್ಷಕನೂ ಮತ್ತು ಮನುಷ್ಯರನ್ನು ಕೊಲ್ಲುವವನೂ ಆಗಿದ್ದಾನೆ.

ಈಶೋ ಜನಪದಸ್ಯಾಸ್ಯ ಪುರಸ್ಯ ಚ ಮಹಾಬಲಃ ।
ಪ್ರಲಂಭಕಃ ಕಾಮರೂಪೀ ರಾಕ್ಷಸೋ ವೈ ಮಹಾಬಲಃ ॥೩೨॥

ಈ ದೇಶಕ್ಕೆ ಮತ್ತು ಪಟ್ಟಣಕ್ಕೆ ಮಹಾಬಲನಾದ ಅವನು ಒಡೆಯ. ಅವನು ಕಾಮರೂಪಿಯೂ, ವಂಚಕನೂ ಮಹಾಬಲಿಷ್ಠನೂ ಆದ ರಾಕ್ಷಸ.

ತೇನೋಪಸೃಷ್ಟಾ ನಗರೀ ವರ್ಷಮದ್ಯ ತ್ರಯೋದಶಮ್ ।
ಸ ಪುಷ್ಟೋ ಮಾನುಷೈರ್ಮಾಂಸೈರ್ದುರ್ಬುದ್ಧಿಃ ಪುರುಷಾದಕಃ ॥೩೩॥

ಈ ಪಟ್ಟಣವು ಹದಿಮೂರು ವರ್ಷದಿಂದ ಅವನ ಉಪದ್ರವಕ್ಕೆ ಒಳಗಾಗಿದೆ. ಆ ನರಭಕ್ಷಕನಾದ ದುರ್ಬುದ್ಧಿಯು ಮನುಷ್ಯಮಾಂಸದಿಂದ ಪುಷ್ಟನಾಗಿದ್ದಾನೆ.

ತೇನೇಯಂ ಪುರುಷಾದೇನ ಭಕ್ಷ್ಯಮಾಣಾ ದುರಾತ್ಮನಾ ।
ಅನಾಥಾ ನಗರೀ ನಾಥಂ ತ್ರಾತಾರಂ ನಾಧಿಗಚ್ಛತಿ ॥೩೪॥

ಆ ದುಷ್ಟನಾದ ನರಭಕ್ಷಕನಿಂದ ಭಕ್ಷಿಸಲ್ಪಟ್ಟು ಅನಾಥವಾದ ಈ ನಗರವು ಯಾವ ರಕ್ಷಕನನ್ನೂ ಕಾಣುತ್ತಿಲ್ಲ.

ಗುಹಾಯಾಂ ಚ ವಸಂಸ್ತತ್ರ ಬಾಧತೇ ಸತತಂ ಜನಮ್।
ಸ್ತ್ರಿಯೋ ಬಾಲಾಂಶ್ಚ ವೃದ್ಧಾಂಶ್ಚ ಯೂನಶ್ಚಾಪಿ ದುರಾತ್ಮವಾನ್ ॥೩೫॥

ಅಲ್ಲಿ ಗುಹೆಯಲ್ಲಿ ವಾಸಮಾಡುವ ದುಷ್ಟಾತ್ಮನಾದ ಅವನು ಸ್ತ್ರೀಯರನ್ನೂ, ಬಾಲರನ್ನೂ, ವೃದ್ಧರನ್ನೂ, ಯುವಕರನ್ನೂ ಸತತವಾಗಿ ಪೀಡಿಸುತ್ತಾನೆ.

ಅತ್ರ ಮಂತ್ರೈಶ್ಚ ಹೋಮೈಶ್ಚ ಭೋಜನೈಶ್ಚಾಪಿ ರಾಕ್ಷಸಃ ।
ಈಡಿತೋ ದ್ವಿಜಮುಖ್ಯೈಶ್ಚ ಪೂಜಿತಶ್ಚ ದುರಾತ್ಮವಾನ್ ॥೩೬॥

ಇಲ್ಲಿ ಅವನ ಸಲುವಾಗಿ ಮಂತ್ರಗಳನ್ನು ಜಪಿಸಿ, ಹೋಮಗಳನ್ನು ಮಾಡಿ, ಬ್ರಾಹ್ಮಣರು ಅವನಿಗೆ ಭೋಜನಗಳನ್ನು ಒದಗಿಸಿ ಸ್ತೋತ್ರಗಳನ್ನು ಮಾಡಿದ್ದಾರೆ.

ಯದಾ ಚ ಸಕಲಾನೇವಂ ಪ್ರಸೂದಯತಿ ರಾಕ್ಷಸಃ ।
ತದೈನಂ ಬ್ರಾಹ್ಮಣಾಃ ಸರ್ವೇ ಸಮಯೇ ಸನ್ನ್ಯಯೋಜಯನ್ ॥೩೭॥

ಯಾವಾಗ ಆ ರಾಕ್ಷಸನು ಎಲ್ಲರನ್ನೂ ಹೀಗೆ ಕೊಲ್ಲಲು ಪ್ರಾರಂಭಿಸಿದನೋ, ಆಗ ಬ್ರಾಹ್ಮಣರು ಅವನನ್ನು ಒಂದು ನಿಬಂಧನೆಗೆ ಒಳಪಡಿಸಿದರು.

ಮಾಽಸ್ಮಾನ್ ಕಾಮಾದ್ ವಧೀ ರಕ್ಷೋ ದಾಸ್ಯಾಮಸ್ತೇ ಬಲಿಂ ವಯಮ್ ।
ಪರ್ಯಾಯೇಣ ಯಥಾಕಾಮಮಿಹ ಮಾಂಸೋದನಂ ಪ್ರಭೋ ॥೩೮॥

ರಾಕ್ಷಸನೇ, ಮನಸ್ಸಿಗೆ ಬಂದಂತೆ ನಮ್ಮನ್ನು ಕೊಲ್ಲಬೇಡ. ನಾವೇ ನಿನಗೆ ಆಹಾರವನ್ನು ಒದಗಿಸುವೆವು. ಪ್ರಭುವೇ, ಪರ್ಯಾಯ ಕ್ರಮದಿಂದ ನಿನ್ನ ಮನಸ್ಸಿಗೆ ಒಪ್ಪುವ ಮಾಂಸೋದನವನ್ನು ಒದಗಿಸುವೆವು.

ಅನ್ನಂ ಮಾಂಸಸಮಾಯುಕ್ತಂ ತಿಲಚೂರ್ಣಸಮನ್ವಿತಮ್ ।
ಸರ್ಪಿಷಾ ಚ ಸಮಾಯುಕ್ತಂ ವ್ಯಂಜನೈಶ್ಚ ವಿಭೂಷಿತಮ್ ॥೩೯॥

ಪಿಂಡಾನ್ ಲಾಜಾಂಸ್ತಥಾऽಪೂಪಾನ್ ಸೂಪಂಬಹುವಿಧೋದನಮ್ ।
ಶತಾನ್ ಶತಾನ್ಪಾನಕುಂಭಾನ್ ಸೂಪಂ ಮಾಂಸಂ ಶತಾಶತಮ್ ।
ವನಮಾಹಿಷವಾರಾಹಾಭಾಲ್ಲೂಕಂ ಚ ಶತಾಶತಮ್ ॥೪೦॥

ಸರ್ಪಿಃಕುಂಭಾಂಶ್ಚ ವಿವಿಧಾನ್ ದಧಿಕುಂಭಾಂಸ್ತಥಾ ಬಹೂನ್ ।
ಆಜ್ಯಸಿಕ್ತೈಃ ಸಮಾಯುಕ್ತೈಸ್ತಿಲಚೂರ್ಣೈಃ ಸಮಾಕುಲಾನ್ ॥೪೧॥

ಮಾಂಸದಿಂದಲೂ, ಎಳ್ಳುಪುಡಿಯಿಂದಲೂ, ತುಪ್ಪದಿಂದಲೂ ಮತ್ತು ವ್ಯಂಜನಗಳಿಂದಲೂ ಕೂಡಿದ ಅನ್ನ, ಉಂಡೆಗಳು, ಅರಳು, ಅಪೂಪ, ತೊವ್ವೆ, ಬಹುವಿಧವಾದ ಅನ್ನಗಳು, ಚೆನ್ನಾಗಿ ಕಾಯಿಸಿದ ಪಾನಕುಂಭಗಳು, ಕಾಡೆಮ್ಮೆ, ವರಾಹ ಮತ್ತು ಕರಡಿ ಇವುಗಳ ಹಸಿಯ ಮತ್ತು ಬಿಸಿಯ ಮಾಂಸಗಳು, ಅನೇಕ ತುಪ್ಪದ ಕೊಡಗಳು, ಅನೇಕ ಮೊಸರಿನ ಮಡಿಕೆಗಳು, ತುಪ್ಪದಿಂದ ಕೂಡಿದ ತಿಲಚೂರ್ಣಗಳಿಂದ ಕೂಡಿದ ಬಹುವಿಧವಾದ ಖಾದ್ಯಪದಾರ್ಥಗಳು, (ಎಲ್ಲವನ್ನೂ ಒದಗಿಸುತ್ತೇವೆ).

ಕುಲಾತ್ ಕುಲಾಚ್ಚ ಪುರುಷಂ ಬಲೀವರ್ದೌ ಚ ಕಾಳಕೌ ।
ಏತದ್ಭಾಗಂ ಪ್ರದಾಸ್ಯಾಮಃ ಸಮಯೇ ಪರಿತಿಷ್ಠ ವೈ ॥೪೨॥

ಒಂದೊಂದು ಮನೆಯಿಂದ ಒಬ್ಬ ಮನುಷ್ಯ ಮತ್ತು ಎರಡು ಕಪ್ಪು ಎತ್ತುಗಳು ಇವನ್ನು ನಿನ್ನ ಭಾಗವಾಗಿ ಕೊಡುವೆವು. ನಮ್ಮ ನಿಬಂಧನೆಗೆ ಒಳಪಡುವವನಾಗು.

ಪ್ರಾಪ್ಸ್ಯಸಿ ತ್ವಮಸಂಕ್ರುದ್ಧೋರಕ್ಷೋ ಭಾಗಂ ಪ್ರಕಲ್ಪಿತಮ್ ।
ತಿಷ್ಠೇಹ ಸಮಯೇऽಸ್ಮಾಕಮಿತ್ಯಯಾಚಂತ ತಂ ದ್ವಿಜಾಃ ।
ಬಾಢಮಿತ್ಯೇವ ತದ್ರಕ್ಷೋ ವಚಸ್ತತ್ ಪ್ರತ್ಯಗೃಹ್ಣತ ॥೪೩॥

ರಾಕ್ಷಸನೇ. ನಿನ್ನ ಈ ಭಾಗವನ್ನು ನೀನು ಸಿಟ್ಟು ಮಾಡದೆ ಪಡೆಯುವೆ. ನಮ್ಮ ನಿಬಂಧನೆಗೆ ಒಳಪಡು ಎಂದು ಬ್ರಾಹ್ಮಣರು ಅವನನ್ನು ಬೇಡಿದರು. ಆ ರಾಕ್ಷಸನು ಹಾಗೆಯೇ ಆಗಲಿ ಎಂದು ಹೇಳಿ ಅವರ ಮಾತನ್ನು ಸ್ವೀಕರಿಸಿದನು.

ಪರಚಕ್ರಾನ್ನಬಿಭ್ಯಚ್ಚ ರಕ್ಷಣಂ ಸ ಕರೋತಿ ಚ ।
ತಸ್ಮಿನ್ ಭಾಗೇ ವಿನಿರ್ದಿಷ್ಟೇ ಚಾಸ್ಥಿತಃ ಸಮಯಂ ಬಲೀ ॥೪೪॥

ಏಕೈಕಂ ಚೈವ ಪುರುಷಂ ಸಂಪ್ರಯಚ್ಛಂತಿ ವೇತನಮ್ ।
ಸ ವಾರೋ ಬಹುಭಿರ್ವರ್ಷೈರ್ಭವಿಷ್ಯತ್ಯಸುಖಾಯ ವೈ ॥೪೫॥

ಅವನ ಭಾಗವು ಹೀಗೆ ಪ್ರತಿಜ್ಞೆ ಮಾಡಲ್ಪಡುತ್ತಿರಲು ಬಲಿಷ್ಠನಾದ ಅವನು ಆ ನಿಯಮವನ್ನು ಸ್ವೀಕರಿಸಿ ಪರರಾಷ್ಟ್ರಗಳ ರಾಜರುಗಳಿಗೆ ಹೆದರದೆ ನಮ್ಮ ರಕ್ಷಣೆಯನ್ನು ಮಾಡುತ್ತಾನೆ. ಪ್ರತಿಯೊಂದು ಮನೆಯೂ ಅವನಿಗೆ ಪರ್ಯಾಯದಿಂದ ಒಬ್ಬೊಬ್ಬ ಪುರುಷನನ್ನು ಆಹಾರವಾಗಿ ಕೊಡುತ್ತದೆ. ಪರ್ಯಾಯ ಕ್ರಮದಿಂದ ನಮ್ಮ ದುಃಖಕ್ಕಾಗಿ ಬರುವ ಆ ವಾರವು ಎಷ್ಟೋ ವರುಷಗಳಿಗೊಮ್ಮೆ ಬರುವುದು.

ತದ್ವಿಮೋಕ್ಷಾಯ ಯೇ ಚಾಪಿ ಯತಂತೇ ಪುರುಷಾಃ ಕ್ವಚಿತ್ ।
ಸಪುತ್ರದಾರಾಂಸ್ತಾನ್ ಹತ್ವಾ ತದ್ರಕ್ಷೋ ಭಕ್ಷಯಿಷ್ಯತಿ ॥೪೬॥

ಅದನ್ನು ತಪ್ಪಿಸಿಕೊಳ್ಳಲು ಯಾರಾದರೂ ಪ್ರಯತ್ನಪಟ್ಟರೆ ಆ ರಾಕ್ಷಸನು ಅವರ ಪತ್ನೀ ಪುತ್ರರನ್ನೆಲ್ಲಾ ಕೊಂದು ತಿನ್ನುವನು.

ನಗರಂ ಚೈವ ದೇಶಂ ಚ ರಕ್ಷೋ ಬಲಸಮನ್ವಿತಮ್ ।
ರಕ್ಷತ್ಯಸುರರಾಣ್ನೈತ್ಯಮಿಮಂ ಜನಪದಂ ಬಲೀ ॥೪೭॥

ವೇತ್ರಕೀಯಗೃಹೇ ರಾಜಾ ಯಥಾನ್ಯಾಯಮುಪಾಶ್ರಿತಃ ।
ಅನಾಮಯಂ ಜನಸ್ಯಾಸ್ಯ ನ ಕರೋತೀಹ ಶಾಶ್ವತಮ್ ॥೪೮॥

ಬಲಿಷ್ಠನಾದ ಅಸುರರಾಜನಾದ ರಾಕ್ಷಸನು ಈ ನಗರವನ್ನೂ, ದೇಶವನ್ನೂ ಮತ್ತು ಜನಪದವನ್ನೂ ರಕ್ಷಿಸುತ್ತಾನೆ. ಅವನು ಏಕಚಕ್ರನಗರದಲ್ಲಿ ಅವನ ನ್ಯಾಯದಂತೆ ಬೀಡುಬಿಟ್ಟಿದ್ದಾನೆ. (ಏಕಚಕ್ರನಗರಕ್ಕೆ ವೇತ್ರಕೀಯ ಎಂದೂ ಹೆಸರು). ಏಕಚಕ್ರನಗರದ ಜನರಿಗೆ ಅವನು ಶಾಶ್ವತವಾದ ಕ್ಷೇಮವನ್ನು ಮಾಡುವನಂತೂ ಅಲ್ಲ.

ಏತದರ್ಹಾ ವಯಂ ನೂನಂ ವಸಾಮೋ ದುರ್ಬಲಾಶ್ರಯೇ ।
ಸತ್ಸು ಚಾನ್ಯೇಷು ದೇಶೇಷು ಕುರಾಜವಿಷಯಂ ಗತಾಃ ॥೪೯॥

ನಾವು ಈ ದುಃಖಕ್ಕೆ ಯೋಗ್ಯರೆಂದು ತೋರುತ್ತದೆ. ಬೇರೆ ದೇಶಗಳು ಇರುವಾಗ ಈ ಕೆಟ್ಟ ರಾಜನ ದೇಶಕ್ಕೆ ಬಂದು ಧರ್ಮದಿಂದ ದುರ್ಬಲನಾದ ಅವನ ಆಶ್ರಯದಲ್ಲಿ ನಾವು ವಾಸಿಸುತ್ತಿದ್ದೇವೆ.

ಬ್ರಾಹ್ಮಣಾಃ ಕಸ್ಯ ವಕ್ತವ್ಯಾಃ ಕಸ್ಯ ನಾಚ್ಛಂದಚಾರಿಣಃ ।
ಗುಣೈರೇತೇ ವಸಂತ್ಯೇವ ಕಾಮಗಾಃ ಪಕ್ಷಿಣೋ ಯಥಾ ॥೫೦॥

ಬ್ರಾಹ್ಮಣರು ಯಾರ ಆದೇಶಕ್ಕೆ ತಲೆಬಾಗಬೇಕಾಗಿದೆ ಯಾರ ಮನಸ್ಸನ್ನು ಅನುಸರಿಸಿ ನಡೆಯಬೇಕಾಗಿದೆ? ಬೇಕಾದಲ್ಲಿಗೆ ಹೋಗುವ ಅವರು ಪಕ್ಷಿಗಳಂತೆ ಸಮೂಹದಲ್ಲಿ ಇಂತಹ ಗುಣಗಳನ್ನು ಹೊಂದಿ ವಾಸಮಾಡುತ್ತಾರೆ.

ರಾಜಾನಂ ಪ್ರಥಮಂ ವಿಂದೇತ್ ತತೋ ಭಾರ್ಯಾಂ ತತೋ ಧನಮ್ ।
ರಾಜನ್ಯಸತಿ ಲೋಕೇಽಸ್ಮಿನ್ ಕುತೋ ಭಾರ್ಯಾ ಕುತೋ ಧನಮ್ ॥೫೧॥

ಮೊದಲು ರಾಜನನ್ನು ಪಡೆಯಬೇಕು. ಅನಂತರ ಭಾರ್ಯೆಯನ್ನೂ, ಅನಂತರ ಧನವನ್ನೂ ಪಡೆಯಬೇಕು. ಈ ಲೋಕದಲ್ಲಿ ರಾಜನೇ ಇಲ್ಲದಿದ್ದರೆ, ಭಾರ್ಯೆ ಎಲ್ಲಿಂದ ಮತ್ತು ಧನವು ಎಲ್ಲಿಂದ?

ತ್ರಯೇಣ ಸಂಚಯೇನೇಹ ಜ್ಞಾತೀನ್ ಪುತ್ರಾಂಶ್ಚ ಧಾರಯೇತ್ ।
ವಿಪರೀತಂ ಮಯಾ ತ್ವೇತತ್ ತ್ರಯಂ ಚ ಸಮುಪಾರ್ಜಿತಮ್ ॥೫೨॥

ಮೊದಲು ಈ ಮೂರು ವಸ್ತುಗಳನ್ನು ಸಂಪಾದಿಸಿ ಅನಂತರ ಬಂಧುಗಳನ್ನೂ ಮತ್ತು ಪುತ್ರರನ್ನೂ ಸಂಪಾದಿಸಬೇಕು. ನಾನು ಇದನ್ನು ವಿಪರೀತವಾಗಿ ಮಾಡಿದೆ.

ತೇ ಚೇಮಮಾಪದಂ ಪ್ರಾಪ್ಯ ಭೃಶಂ ತಪ್ಯಾಮಹೇ ವಯಮ್ ।
ಸೋಽಯಮಸ್ಮಾನನುಪ್ರಾಪ್ತೋ ಕರಃ ಕುಲವಿನಾಶನಃ ॥೫೩॥

ನಾವು ಈ ಆಪತ್ತನ್ನು ಹೊಂದಿ ಸಂಕಟದಿಂದ ನರಳುತ್ತಿದ್ದೇವೆ. ಈ ದಿನ ಕುಲನಾಶಕವಾದ ಕಪ್ಪವನ್ನು ಕೊಡುವ ಸರದಿ ನಮ್ಮದಾಗಿದೆ.

ಭೋಜನಂ ಪುರುಷಂ ಪೇಯಂ ಪ್ರದೇಯಂ ವೇತನಂ ಮಯಾ ।
ನ ಚ ಮೇ ವಿದ್ಯತೇ ವಿತ್ತಂ ಸಂಕ್ರೇತುಂ ಪುರುಷಂ ಕ್ವಚಿತ್ ॥೫೪॥

ನಾನು ಅವನಿಗೆ ಭೋಜನವನ್ನೂ, ಪುರುಷನನ್ನೂ, ಪೇಯವಸ್ತುಗಳನ್ನೂ ವೇತನವಾಗಿ ಕೊಡಬೇಕು. ಇನ್ನೊಬ್ಬ ಪುರುಷನನ್ನು ಕೊಂಡುಕೊಂಡು ಕಳುಹಿಸಲು ನನ್ನ ಬಳಿ ಧನವಿಲ್ಲ.

ಸುಹೃಜ್ಜನಂ ಪ್ರದಾತುಂ ಚ ನ ಶಕ್ಷ್ಯಾಮಿ ಕಥಂಚನ ।
ಗತಿಂ ಚಾನ್ಯಾಂ ನ ಪಶ್ಯಾಮಿ ತಸ್ಮಾನ್ಮೋಕ್ಷಾಯ ರಾಕ್ಷಸಾತ್ ॥೫೫॥

ನನ್ನ ಆಪ್ತಬಂಧುಗಳಾದ ಕುಟುಂಬದ ಸದಸ್ಯರನ್ನು ಏನಾದರೂ ಕೊಡಲಾರೆ. ಆ ರಾಕ್ಷಸನಿಂದ ಬಿಡುಗಡೆ ಹೊಂದಲು ಬೇರೆ ಯಾವ ಉಪಾಯವೂ ಕಾಣುತ್ತಿಲ್ಲ.

ಸೋಽಹಂ ದುಃಖಾರ್ಣವೇ ಮಗ್ನೋ ಮಹತ್ಯಸುಕರೇ ಭೃಶಮ್ ।
ಸಹೈವಾಹಂ ಗಮಿಷ್ಯಾಮಿ ಬಾಂಧವೈರದ್ಯ ರಾಕ್ಷಸಮ್ ॥೫೬॥

ಆದ್ದರಿಂದ ಬಹಳ ಕಷ್ಟಕರವಾದ ದುಃಖಸಾಗರದಲ್ಲಿ ಮುಳುಗಿದ ನಾನು ಈ ದಿನ ಬಂಧುಗಳ ಜೊತೆಯಲ್ಲಿಯೇ ಆ ರಾಕ್ಷಸ ಬಳಿಗೆ ಹೋಗುವೆನು.

ತತೋ ನಃ ಸಹಿತಾನ್ ರಕ್ಷಃ ಸರ್ವಾನೇವೋಪಭೋಕ್ಷ್ಯತಿ ।
ದುಃಖಮೂಲಮಿದಂ ಭದ್ರೇ ಮಯೋಕ್ತಂ ಪ್ರಶ್ನತೋಽನಘೇ ॥೫೭॥

ಅನಂತರ ಆ ರಾಕ್ಷಸನು ನಮ್ಮೆಲ್ಲರನ್ನೂ ಒಟ್ಟಿಗೆ ತಿನ್ನುವನು. ಮಂಗಳಸ್ವರೂಪಳೇ ಮತ್ತು ಅನಘಳೇ, ನಿನ್ನ ಪ್ರಶ್ನೆಗೆ ಅನುಗುಣವಾಗಿ ನನ್ನ ದುಃಖದ ಕಾರಣವನ್ನು ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರಿಷಷ್ಟ್ಯಧಿಕಶತತಮೋಽಧ್ಯಾಯಃ ॥
॥ ಇತಿ ಬಕವಧಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಅರವತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಏವಂ ಬಲಾಢ್ಯಮಮುಮಾಶು ನಿಹತ್ಯ ಭೀಮಃ
ಕೀರ್ತಿಂ ಚ ಧರ್ಮಮಧಿಕಂ ಪ್ರತಿಯಾಸ್ಯತೀಹ ।
ಸರ್ವೇ ವಯಂ ಚ ತಮನು ಪ್ರಗೃಹೀತಧರ್ಮಾ
ಯಾಸ್ಯಾಮ ಇತ್ಯವದದಾಶು ಧರಾಸುರಂ ತಂ ॥೮೦॥

ಇಂತಹ ಬಲಾಢ್ಯನಾದ ಬಕನನ್ನು ಕೊಂದು ಭೀಮ ಬೇಗನೆ ಅಧಿಕ ಕೀರ್ತಿಯನ್ನೂ ಪುಣ್ಯವನ್ನೂ ಗಳಿಸುತ್ತಾನೆ. ನಾವೂ ಅವನಿಗೆ ಸಹಕರಿಸಿ ಪುಣ್ಯಭಾಗಿಗಳಾಗಿ ಕೀರ್ತಿಯನ್ನೂ ಪುಣ್ಯವನ್ನೂ ಗಳಿಸೋಣ ಎಂದು ಕುಂತಿ ಆಲೋಚಿಸಿ ಒಡನೆ ಬ್ರಾಹ್ಮಣಿಗೆ ಹೇಳಿದಳು.

ಸಂತಿ ಸ್ಮ ವಿಪ್ರವರ ಪಂಚ ಸುತಾ ಮಮಾದ್ಯ
ತೇಷ್ವೇಕ ಏವ ನರವೈರಿಮುಖಾಯ ಯಾತು ।
ಇತ್ಯುಕ್ತ ಆಹ ಸ ನ ತೇ ಸುತವಧ್ಯಯಾಹಂ
ಪಾಪೋ ಭವಾನಿ ತವ ಹಂತ ಮನೋಽತಿಧೀರಂ ॥೮೧॥

'ಬ್ರಾಹ್ಮಣೋತ್ತಮ, ನನಗೆ ಈಗ ಐದು ಮಂದಿ ಮಕ್ಕಳಿದ್ದಾರೆ. ಅವರಲ್ಲಿ ಒಬ್ಬ ರಾಕ್ಷಸನ ಬಾಯಿಗೆ ಹೋಗಲಿ' ಎಂದು ಕುಂತಿ ಹೇಳಿದಾಗ ಬ್ರಾಹ್ಮಣನೆಂದ, 'ನಿನ್ನ ಮಗನನ್ನು ಕೊಲ್ಲಿಸಿ ನಾನು ಪಾಪಕ್ಕೆ ಗುರಿಯಾಗಲಾರೆ, ಏನಿದ್ದರೂ ನಿನ್ನದು ಕಲ್ಲೆದೆಯೆ ಸರಿ!'

ಉಕ್ತೈವಮಾಹ ಚ ಪೃಥಾ ತನಯೇ ಮದೀಯೇ
ವಿದ್ಯಾಸ್ತಿ ದಿಕ್ಪತಿಭಿರಪ್ಯವಿಷಹ್ಯರೂಪಾ ।
ಉಕ್ತೋಽಪಿ ನೋ ಗುರುಭಿರೇಷ ನಿಯುಂಕ್ತ ಏತಾಂ
ವಧ್ಯಸ್ತಥಾಪಿ ನ ಸುರಾಸುರಪಾಲಕೈಶ್ಚ ॥೮೨॥

ಬ್ರಾಹ್ಮಣ ಹೀಗೆ ಹೇಳಿದಾಗ ಕುಂತಿ ಹೇಳಿದಳು, 'ನನ್ನ ಮಗನಲ್ಲಿ ದಿಕ್ಪಾಲಕರಾದ ಇಂದ್ರಾದಿ ದೇವತೆಗಳಿಗೂ ಇದಿರಿಸಲಾಗದಂಥ ಮಂತ್ರಬಲವಿದೆ. ಗುರುಗಳು ಹೇಳಿದರೂ ಇವನು ಮಂತ್ರವನ್ನು ಎಂದೂ ಆತ್ಮರಕ್ಷಣೆಗೆ ಬಳಸಿಕೊಳ್ಳುವುದಿಲ್ಲ. ಆದರೂ ದೇವಾಧಿಪತಿಗಳಿಂದಾಗಲಿ ದಾನವೇಂದ್ರರಿಂದಾಗಲಿ ಎಂದೂ ವಧ್ಯನೂ ಆಗುವುದಿಲ್ಲ.

ನೂರ ಐರವತ್ತಾಲ್ಕನೆಯ ಅಧ್ಯಾಯ

(ತನ್ನ ಒಬ್ಬ ಪುತ್ರನನ್ನು ಕಳುಹಿಸುವುದಾಗಿ ಹೇಳಿ ಬ್ರಾಹ್ಮಣನಿಗೆ ಕುಂತಿಯ ಆಶ್ವಾಸನೆ)

ಕುಂತೀ

ನ ವಿಷಾದಸ್ತ್ವಯಾ ಕಾರ್ಯೋ ಭಯಾದಸ್ಮಾತ್ ಕಥಂಚನ ।
ಉಪಾಯಃ ಪರಿದೃಷ್ಟೋಽತ್ರ ತಸ್ಮಾನ್ಮೋಕ್ಷಾಯ ರಾಕ್ಷಸಾತ್ ॥೧॥

ಬ್ರಾಹ್ಮಣನೇ, ನೀನು ಈ ಭಯದ ಕಾರಣದಿಂದ ವಿಷಾದವನ್ನು ಮಾಡಬಾರದು. ಆ ರಾಕ್ಷಸನಿಂದ ಬಿಡುಗಡೆ ಹೊಂದುವುದಕ್ಕೆ ನಾನು ಒಂದು ಉಪಾಯವನ್ನು ಕಂಡಿದ್ದೇನೆ.

ನೈವ ಸ್ವಯಂ ಸಪುತ್ರಸ್ಯ ಗಮನಂ ತತ್ರ ರೋಚಯೇ ।
ಏಕಸ್ತವ ಸುತೋ ಬಾಲಃ ಕನ್ಯಾ ಚೈಕಾ ತಪಸ್ವಿನೀ ॥೨॥

ಪುತ್ರಸಹಿತನಾಗಿ ನೀನು ಹೋಗುವುದು ನನಗೆ ಇಷ್ಟವಾಗುವುದಿಲ್ಲ. ನಿನಗೆ ಒಬ್ಬನೇ ಚಿಕ್ಕ ಪುತ್ರ ಮತ್ತು ಒಬ್ಬಳೇ ಶೋಚನೀಯಳಾದ ಪುತ್ರಿ.

ನ ಚೈತಯೋಸ್ತಥಾ ಪತ್ನ್ಯಾ ಗಮನಂ ತತ್ರ ರೋಚಯೇ ।
ಮಮ ಪಂಚ ಸುತಾ ಬ್ರಹ್ಮಂಸ್ತೇಷಾಮೇಕೋ ಗಮಿಷ್ಯತಿ ।
ತ್ವದರ್ಥಂ ಬಲಿಮಾದಾಯ ತಸ್ಯ ಪಾಪಸ್ಯ ರಕ್ಷಸಃ ॥೩॥

ಅಲ್ಲಿಗೆ ನಿನ್ನ ಪತ್ನಿಯು ಹೋಗುವುದಾಗಲೀ ಅಥವಾ ಈ ಇಬ್ಬರು ಮಕ್ಕಳು ಹೋಗುವುದಾಗಲೀ ನನಗೆ ಇಷ್ಟವಿಲ್ಲ. ಬ್ರಾಹ್ಮಣನೇ, ನನಗೆ ಐದು ಜನ ಪುತ್ರರಿದ್ದಾರೆ. ಅವರಲ್ಲಿ ಒಬ್ಬನು ಪಾಪಿಯಾದ ರಾಕ್ಷಸನ ಬಳಿಗೆ ಆಹಾರವನ್ನು ತೆಗೆದುಕೊಂಡು ಹೋಗುವನು.

ಬ್ರಾಹ್ಮಣಃ

ನಾಹಮೇತದ್ ವರಿಷ್ಯಾಮಿ ಜೀವಿತಾರ್ಥಂ ಕಥಂಚನ ।
ಬ್ರಾಹ್ಮಣಸ್ಯಾತಿಥೇಶ್ಚೈವ ಸ್ವಾರ್ಥೇ ಪ್ರಾಣೈರ್ವಿಯೋಜನಮ್ ॥೪॥

ಅತಿಥಿಯಾದ ಬ್ರಾಹ್ಮಣನನ್ನು ನನ್ನ ಸ್ವಾರ್ಥಕ್ಕಾಗಿ ಕೊಲ್ಲುವುದನ್ನು ನಾನು ಎಂದೂ ನನ್ನ ಜೀವನದ ಸಲುವಾಗಿ ಅಂಗೀಕರಿಸುವುದಿಲ್ಲ.

ನನ್ವೇತದ್ಧರ್ಮನಿತ್ಯಾನಾಂ ಕುಲೀನಾನಾಂ ಸುದುಷ್ಕರಮ್ ।
ಯದ್ ಬ್ರಾಹ್ಮಣಾರ್ಥಂ ವಿಸೃಜೇದಾತ್ಮಾನಂ ಚೈವ ವಾऽऽತ್ಮಜಮ್ ॥೫॥

ಬ್ರಾಹ್ಮಣರ ಸಲುವಾಗಿ ತನ್ನನ್ನೇ ಆಗಲಿ ಅಥವಾ ತನ್ನ ಪುತ್ರನನ್ನೇ ಆಗಲಿ ತ್ಯಾಗ ಮಾಡಬೇಕೆಂಬುದು ನಿತ್ಯವೂ ಧರ್ಮವನ್ನು ಆಚರಿಸುವ ಕುಲೀನರಾದವರಿಗೆ ಸುದುಷ್ಕರವಾದ ಧರ್ಮವಷ್ಟೆ.

ಆತ್ಮನಸ್ತು ಮಮ ಶ್ರೇಯೋ ಯೋಕ್ತವ್ಯಮಿತಿ ರೋಚಯೇ ।
ಬ್ರಹ್ಮವಧ್ಯಾತ್ಮವಧ್ಯಾಭ್ಯಾಂ ಶ್ರೇಯಾನಾತ್ಮವಧೋ ಮಮ ॥೬॥

ನಾನು ನನ್ನನ್ನು ಶ್ರೇಯೋಭಾಗಿಯಾಗಿ ಮಾಡಿಕೊಳ್ಳಬೇಕೆಂದು ಬಯಸುತ್ತೇನೆ. ಬ್ರಹ್ಮವಧೆ ಮತ್ತು ಆತ್ಮವಧೆ ಇವೆರಡರಲ್ಲಿ ಆತ್ಮವಧೆಯೇ ಒಳ್ಳೆಯದೆಂದು ನನ್ನ ಅಭಿಪ್ರಾಯ.

ಬ್ರಹ್ಮವಧ್ಯಾ ಪರಂ ಪಾಪಂ ನಿಷ್ಕೃತಿರ್ನಾತ್ರ ವಿದ್ಯತೇ ।
ಅಬುದ್ಧಿಪೂರ್ವಂ ಕೃತ್ವಾऽಪಿ ಪ್ರತ್ಯವಾಯೋ ನ ಬುಧ್ಯತೇ ॥೭॥

ಬ್ರಹ್ಮವಧೆಯು ಬಹಳ ದೊಡ್ಡ ಪಾಪ. ಅದಕ್ಕೆ ಪ್ರಾಯಶ್ಚಿತ್ತವೇ ಇಲ್ಲ. ಅದನ್ನು ತಿಳಿಯದೇ ಮಾಡಿದರೂ ಸಹ ಎಲ್ಲಿಯೂ ಪ್ರಾಯಶ್ಚಿತ್ತವು ಕಾಣುವುದಿಲ್ಲ.

ನ ತ್ವಹಂ ವಧಮಾಕಾಂಕ್ಷೇ ಸ್ವಯಮೇವಾತ್ಮನಃ ಶುಭೇ ।
ಪರೈಃ ಕೃತೇ ವಧೇ ಪಾಪಂ ನ ಕಿಂಚಿನ್ಮಮ ವಿದ್ಯತೇ ॥೮॥

ಶುಭಳಾದವಳೇ ನಾನು ನಾನಾಗಿಯೇ ನನ್ನ ವಧೆಯನ್ನು ಬಯಸುತ್ತಿಲ್ಲ. ಇನ್ನೊಬ್ಬರಿಂದ ನನ್ನ ವಧೆಯು ಉಂಟಾದರೆ ನನಗೆ ಪಾಪವಿಲ್ಲ.

ಅಭಿಸಂಧಿಕೃತೇ ತಸ್ಮಿನ್ ಬ್ರಾಹ್ಮಣಸ್ಯ ವಧೇ ಮಯಾ ।
ನಿಷ್ಕೃತಿಂ ನ ಹಿ ಪಶ್ಯಾಮಿ ಭೃಶಂ ಸಂತರ್ತುಮೇವ ಚ ॥೯॥

ಆದರೆ, ನಾನು ಉದ್ದೇಶಪೂರ್ವಕವಾಗಿ ಬ್ರಾಹ್ಮಣನ ವಧೆಯನ್ನು ಮಾಡಿಸಿದರೆ ಅದಕ್ಕೆ ಪ್ರಾಯಶ್ಚಿತ್ತವಿಲ್ಲ. ನಾನು ಆ ಪಾಪವನ್ನು ದಾಟಲಾರೆ.

ಆಗತಸ್ಯ ಗೃಹಾಭ್ಯಾಶೇ ತಥೈವ ಶರಣಾರ್ಥಿನಃ ।
ಯಾಚಮಾನಸ್ಯ ಚ ವಧೋ ನೃಶಂಸಂ ಪರಮಂ ಮತಮ್ ॥೧೦॥

ಆಶ್ರಯವನ್ನು ಬಯಸಿ ಮನೆಗೆ ಬಂದು ಬೇಡುತ್ತಿರುವ ಬ್ರಾಹ್ಮಣ ವಧೆಯು ಅತ್ಯಂತ ಕ್ರೂರವೆಂದು ನನ್ನ ಅಭಿಪ್ರಾಯ.

ಕುರ್ಯಾಚ್ಚ ವಿಹಿತಂ ಕರ್ಮ ನ ನೃಶಂಸಂ ಕಥಂಚನ ।
ಇತಿ ಪೂರ್ವೇ ಮಹಾತ್ಮಾನಃ ಪ್ರಾಹುರ್ಧರ್ಮವಿದೋ ಜನಾಃ ॥೧೧॥

ವಿಹಿತ ಕರ್ಮವನ್ನು ಮಾಡಬೇಕು. ಕ್ರೂರವಾದ ಕರ್ಮವನ್ನು ಎಂದೂ ಮಾಡಬಾರದು. ಧರ್ಮವನ್ನು ತಿಳಿದ ಹಿಂದಿದ್ದ ಮಹಾನುಭಾವರೆಲ್ಲರೂ ಹೀಗೆಯೇ ಹೇಳಿದ್ದಾರೆ.

ಶ್ರೇಯಸೇ ಸಹ ದಾರೇಣ ವಿನಾಶೋಽದ್ಯ ಮಮ ಸ್ವಯಮ್।
ಬ್ರಾಹ್ಮಣಸ್ಯ ವಧಂ ನಾಹಮನುಮಂಸ್ಯೇ ಕಥಂಚನ ॥೧೨॥

ನಾನು ಈ ದಿನ ನನ್ನ ಪತ್ನಿಯ ಜೊತೆಯಲ್ಲಿ ವಿನಾಶವನ್ನು ಹೊಂದಿದರೆ, ನನಗೆ ಶ್ರೇಯಸ್ಸಾಗುತ್ತದೆ. ನಾನು ಬ್ರಾಹ್ಮಣನ ವಧೆಗೆ ಯಾವ ರೀತಿಯಲ್ಲೂ ಸಮ್ಮತಿಸುವುದಿಲ್ಲ.

ಕುಂತೀ

ಮಮಾಪ್ಯೇಷಾ ಮತಿರ್ಬ್ರಹ್ಮನ್ ವಿಪ್ರಾ ರಕ್ಷ್ಯಾ ಇತಿ ಸ್ಥಿತಾ ।
ನ ಚಾಪ್ಯನಿಷ್ಟಃ ಪುತ್ರೋ ಮೇ ಯದಿ ಪುತ್ರಶತಂ ಭವೇತ್ ॥೧೩॥

ಬ್ರಾಹ್ಮಣನೇ, ನಾನೂ ಹೀಗೆಯೇ ತಿಳಿದಿದ್ದೇನೆ. ಬ್ರಾಹ್ಮಣರನ್ನು ರಕ್ಷಣೆ ಮಾಡಬೇಕೆಂದೇ ನನ್ನ ಅಭಿಪ್ರಾಯ ಮತ್ತು ನನಗೆ ನೂರು ಪುತ್ರರಿದ್ದರೂ ಯಾವ ಪುತ್ರನೂ ಅನಿಷ್ಟನಲ್ಲ.

ನ ಚಾಸೌ ರಾಕ್ಷಸಃ ಶಕ್ತೋ ಮಮ ಪುತ್ರವಿನಾಶನೇ ।
ವೀರ್ಯವಾನ್ ಮಂತ್ರಸಿದ್ಧಶ್ಚ ತೇಜಸ್ವೀ ಚ ಸುತೋ ಮಮ ॥೧೪॥

ನನ್ನ ಮಗನು ತೇಜಸ್ವಿಯೂ, ಪರಾಕ್ರಮಶಾಲಿಯೂ, ಮಂತ್ರಸಿದ್ಧನೂ ಆಗಿದ್ದಾನೆ. ಈ ರಾಕ್ಷಸನು ನನ್ನ ಮಗನನ್ನು ವಿನಾಶ ಮಾಡಲು ಸಮರ್ಥನಲ್ಲ.

ರಾಕ್ಷಸಾಯ ಚ ತತ್ಸರ್ವಂ ಪ್ರಾಪಯಿಷ್ಯತಿ ಭೋಜನಮ್ ।
ಮೋಕ್ಷಯಿಷ್ಯತಿ ಚಾತ್ಮಾನಮಿತಿ ಮೇ ನಿಶ್ಚಿತಾ ಮತಿಃ ॥೧೫॥

ಅವನು ರಾಕ್ಷಸನ ಬಳಿಗೆ ಎಲ್ಲಾ ಭೋಜನ ಪದಾರ್ಥಗಳನ್ನೂ ತೆಗೆದುಕೊಂಡು ಹೋಗುವನು. ಅಷ್ಟೇ ಅಲ್ಲದೇ ತನ್ನನ್ನು ಆ ರಾಕ್ಷಸನಿಂದ ಬಿಡಿಸಿಕೊಳ್ಳುವನು ಎಂದೂ ನನ್ನ ನಿಶ್ಚಿತವಾದ ಅಭಿಪ್ರಾಯ.

ಸಮಾಗತಾಶ್ಚ ವೀರ್ಯೇಣ ದೃಷ್ಟಪೂರ್ವಾಶ್ಚ ರಾಕ್ಷಸಾಃ ।
ಬಲವಂತೋ ಮಹಾಕಾಯಾ ನಿಹತಾಶ್ಚಾಪ್ಯನೇಕಶಃ ॥೧೬॥

ಹಿಂದೆ ಬಲಿಷ್ಠರೂ, ಮಹಾಕಾಯರೂ ಆದ ಅನೇಕ ರಾಕ್ಷಸರು ಇವನ ಜೊತೆಯಲ್ಲಿ ಯುದ್ಧಕ್ಕೆ ಬಂದು ಇವನ ಪರಾಕ್ರಮದಿಂದ ನಿಹತರಾಗಿದ್ದಾರೆ.

ನ ತ್ವಿದಂ ಕೇಷುಚಿದ್ ಬ್ರಹ್ಮನ್ ವ್ಯಾಹರ್ತವ್ಯಂ ಕಥಂಚನ ।
ವಿದ್ಯಾರ್ಥಿನೋ ಹಿ ಮೇ ಪುತ್ರಾನ್ ವಿಪ್ರಕುರ್ಯುಃ ಕುತೂಹಲಾತ್ ॥೧೭॥

ಬ್ರಾಹ್ಮಣನೇ, ಈ ವಿಷಯವನ್ನು ಯಾರಿಗೂ ಹೇಳಬಾರದು. ಬೇರೆಯವರು ಈ ವಿಷಯವನ್ನು ತಿಳಿದರೆ, ವಿದ್ಯಾರ್ಥಿಗಳಾದ ನನ್ನ ಮಕ್ಕಳಿಗೆ ತಮ್ಮ ಕುತೂಹಲದಿಂದ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡುವಂತೆ ಹೇಳಿ ಅವರ ವಿದ್ಯಾಭ್ಯಾಸಕ್ಕೆ ಭಂಗ ತರುತ್ತಾರೆ.

ಗುರುಣಾ ಚಾನನುಜ್ಞಾತೋ ಗ್ರಾಹಯೇದ್ ಯತ್ ಸುತೋ ಮಮ ।
ನ ಸ ಕುರ್ಯಾತ್ ತಥಾ ಕಾರ್ಯಂ ವಿದ್ಯಯೇತಿ ಸತಾಂ ಮತಮ್ ॥೧೮॥

ಗುರುಗಳಿಂದ ಅಥವಾ ಹಿರಿಯರಿಂದ ಅನುಜ್ಞೆಯನ್ನು ಪಡೆಯದೇ ನನ್ನ ಪುತ್ರನು ಎಂತಹ ಕೆಲಸವನ್ನು ಮಾಡುತ್ತಾನೋ ಅನುಜ್ಞೆಯನ್ನು ಪಡೆದರೆ ಅಂತಹ ಕೆಲಸವನ್ನು

ಮಾಡುವುದಿಲ್ಲ. (ತನ್ನ ಮನಸ್ಸಿಗೆ ತಕ್ಕಂತೆ ವರ್ತಿಸುತ್ತಾನೆ). ಇದು ಸಜ್ಜನರ ಅಭಿಪ್ರಾಯವೂ ಹೌದು.

ವೈಶಂಪಾಯನಃ

ಏವಮುಕ್ತಸ್ತು ಪೃಥಯಾ ಸ ವಿಪ್ರೋಃ ಭಾರ್ಯಯಾ ಸಹ ।
ಹೃಷ್ಟಃ ಸಂಪೂಜಯಾಮಾಸ ತದಾ ತ್ವಮಮೃತೋಪಮಮ್ ॥೧೯॥

ಕುಂತಿಯು ಹೀಗೆ ಹೇಳುತ್ತಿರಲಾಗಿ ಆ ಬ್ರಾಹ್ಮಣನು ಪತ್ನಿಯ ಜೊತೆಯಲ್ಲಿ ಬಹಳ ಸಂತೋಷಗೊಂಡು ಅವಳ ಅಮೃತದಂತಹ ಮಾತುಗಳನ್ನು ಸಮ್ಮಾನಿಸಿದನು.

ತತಃ ಕುಂತೀ ಚ ವಿಪ್ರಶ್ಚ ಸಹಿತಾವನಿಲಾತ್ಮಜಮ್ ।
ತಮಬ್ರೂತಾಂ ಕುರುಷ್ವೇತಿ ಪ್ರತಿಜಜ್ಞೇ ತಥೇತಿ ಸಃ ॥೨೦॥

ಅನಂತರ ಕುಂತಿಯೂ ಮತ್ತು ಬ್ರಾಹ್ಮಣನೂ ಭೀಮಸೇನನ ಬಳಿಗೆ ಹೋಗಿ ಈ ಕಾರ್ಯವನ್ನು ಮಾಡು ಎಂದು ಹೇಳಿದರು. ಭೀಮಸೇನನು ಸಹ ಮಾಡುತ್ತೇನೆ ಎಂದು ಪ್ರತಿಜ್ಞೆಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಚತುಃಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ಬಕವಧಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಅರವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಉಕ್ತ್ವೈವಮೇತ್ಯ ನಿಖಿಲಂ ಚ ಜಗಾದ ಭೀಮ
ಉದ್ದರ್ಷ ಆಸ ಸ ನಿಶಮ್ಯ ಮಹಾಸ್ವಧರ್ಮಂ ।
ಪ್ರಾಪ್ತಂ ವಿಲೋಕ್ಯ ತಮತೀವ ವಿಘೂರ್ಣನೇತ್ರಂ
ದೃಷ್ಟ್ವಾ ಜಗಾದ ಯಮಸೂನುರುಪೇತ್ಯ ಚಾನ್ಯೈಃ ॥೮೩॥

ಕುಂತಿ ಬ್ರಾಹ್ಮಣನಿಗೆ ಹೀಗೆ ಹೇಳಿ, ಭೀಮನ ಬಳಿಗೆ ಬಂದು ಎಲ್ಲವನ್ನೂ ಹೇಳಿದಳು. ಭೀಮ ತಾಯಿಯ ಮಾತನ್ನು ಕೇಳಿ ತನಗೆ ಮಹತ್ತಾದ ಸ್ವಧರ್ಮಸಾಧನೆಯ ಅವಕಾಶ ಲಭಿಸಿತೆಂದು ತಿಳಿದು ಹಿರಿಹಿರಿ ಹಿಗ್ಗಿದ. ಧರ್ಮರಾಜ ಅರ್ಜುನಾದಿಗಳೊಂದಿಗೆ ಬಂದು ಭೀಮನ ಕಣ್ಣುಗಳು ಹಿಗ್ಗಿನಿಂದ ಸುತ್ತುತ್ತಿರುವುದನ್ನು ಕಂಡು ತಾಯಿಯ ಮುಂದೆ ಪ್ರಶ್ನೆ ಮಾಡಿದ.

ಮಾತಃ ಕಿಮೇಷ ಮುದಿತೋ ಏತಿರಾಮಿತಿ ಸ್ಮ
ತಸ್ಮೈ ಚ ಸಾ ನಿಖಿಲಮಾಹ ಸ ಚಾಬ್ರವೀತ್ತಾಂ ।
ಕಷ್ಟಂ ತ್ವಯಾ ಕೃತಮಹೋ ಬಲಮೇವ ಯಸ್ಯ
ಸರ್ವೇಶ್ರಿತಾ ವಾಯುಮಮುಂ ಚ ನಿಹಂಸಿ ಭೀಮಂ ॥೮೪॥

'ಅಮ್ಮ, ಭೀಮ ಏಕೆ ಬಹಳ ಹಿಗ್ಗಿದ್ದಾನೆ?' ಎಂದು ಧರ್ಮರಾಜ ಕೇಳಿದ. ಆಗ ಕುಂತಿ ಅವನಿಗೆ ಎಲ್ಲವನ್ನೂ ವಿವರಿಸಿದಳು. ಅವನು ಹೇಳಿದ, 'ಆಶ್ಚರ್ಯ! ನೀನೀಗ ಎಂಥ ಅಪಾಯದ ಕಾರ್ಯಕ್ಕೆ ತೊಡಗಿರುವೆ! ಯಾರ ಬಲವನ್ನೇ ನಾವೆಲ್ಲರೂ ಅವಲಂಬಿಸಿರುವೆವೋ ಆ ಭೀಮನನ್ನೇ ಕೊಲ್ಲಿಸುತ್ತಿರುವೆಯಲ್ಲ!

ಯದ್ಬಾಹುವೀರ್ಯಪರಮಾಶ್ರಯತೋ ಹಿ ರಾಜ್ಯ-
ಮಿಚ್ಛಾಮ ಏವ ನಿಖಿಲಾರಿವಧಂ ಸ್ವಧರ್ಮಂ ।
ಸೋಽಯಂ ತ್ವಯಾದ್ಯ ನಿಶಿಚಾರಿಮುಖಾಯ ಮಾತಃ
ಪ್ರಸ್ಥಾಪ್ಯತೇ ವದ ಮಮಾಶುಕಯೈವ ಬುದ್ಧ್ಯಾ ॥೮೫॥

ಯಾರ ಬಾಹುಬಲದ ಮಹಾ ಅವಲಂಬನೆಯಿಂದಲೆ ನಾವು ರಾಜ್ಯವನ್ನೂ ಸಕಲ ಶತ್ರುಗಳ ನಾಶವನ್ನೂ ಸ್ವಧರ್ಮರಕ್ಷಣೆಯನ್ನೂ ಹೊಂದಲು ಬಯಸಿರುವೆವೋ ಆ

ಭೀಮನನ್ನು ಈಗ ರಾಕ್ಷಸ ಬಾಯಿಗೆ ಕಳಿಸುತ್ತಿರುವೆಯಲ್ಲ! ಬೇಗನೆ ನನಗೆ ಹೇಳು. ಯಾವ ಅಭಿಪ್ರಾಯದಿಂದ ನೀನು ಹೀಗೆ ಮಾಡುತ್ತಿರುವೆ?

ಇತ್ಯುಕ್ತವಂತಮಮುಮಾಹ ಸುಧೀರಬುದ್ಧಿಃ
ಕುಂತೀ ನ ಪುತ್ರಕ ನಿಹಂತುಮಯಂ ಹಿ ಶಕ್ಯಃ ।
ಸರ್ವೈಃ ಸುರೈರಸುರಯೋಗಿಭಿರಪ್ಯನೇನ
ಚೂರ್ಣೀಕೃತೋ ಹಿ ಶತಶೃಂಗಗಿರಿಃ ಪ್ರಸೂತ್ಯಾಂ ॥೮೬॥

ಧರ್ಮರಾಜ ಹೀಗೆ ಹೇಳಿದಾಗ ಒಳ್ಳೆಯ ಧೈರ್ಯ ತುಂಬಿದ ಹೃದಯದವಳಾದ್ದರಿಂದ ಕುಂತಿ ಹೇಳಿದಳು. ಮಗು, ಭೀಮನನ್ನು ಕೊಲ್ಲಲು ಯಾವ ದೇವತೆಗಳಿಗೂ ಅಸುರ ಜಾತಿಯವರಿಗೂ ಶಕ್ಯವಿಲ್ಲ. ಏಕೆಂದರೆ ಅವನು ಹುಟ್ಟಿದಾಗಲೇ ಶತಶೃಂಗ ಪರ್ವತವನ್ನು ಪುಡಿ ಮಾಡಿದನು.

ಏಷ ಸ್ವಯಂ ಹಿ ಮರುದೇವ ನರಾತ್ಮಕೋಽಭೂತ್
ಕೋ ನಾಮ ಹಂತುಮಿಮಮಾಪ್ತಬಲೋ ಜಗತ್ಸು ।
ಇತ್ಯೇವಮಸ್ತಿ ತಿ ಸ ತಾಮವದತ್ ಪರೇದ್ಯು-
ರ್ಭೀಮೋ ಜಗಾಮ ಶಕಟೇನ ಕೃತೋರುಭೋಗಃ ॥೮೭॥

'ಭೀಮ ಸಾಕ್ಷಾದ್ ವಾಯುದೇವನೆ ಮಾನವ ಶರೀರಿಯಾಗಿ ಜನಿಸಿದ್ದಾನೆ. ಇವನನ್ನು ಕೊಲ್ಲಲು ಪ್ರಪಂಚದಲ್ಲಿ ಯಾರು ತಾನೆ ಶಕ್ತಿ ಉಳ್ಳವನಿದ್ದಾನೆ?' ಎಂದಳು ಕುಂತಿ. 'ಹಾಗಾದರೆ ಹಾಗೇ ಆಗಲಿ' ಎಂದ ಧರ್ಮರಾಜ. ಮರುದಿನ ಭೀಮ ಅಭ್ಯಂಗಸ್ನಾನ ಗಂಧಮಾಲ್ಯಧಾರಣಾದಿ ಉತ್ತಮ ಸುಖಭೋಗಗಳನ್ನು ಮಾಡಿ ಮುಗಿಸಿ ಬಂಡಿಯನ್ನುಹೊಡೆದುಕೊಂಡು ಕಾಡಿಗೆ ಹೊರಟ.

ಗತ್ವಾ ತ್ವರನ್ ಬಕವನಸ್ಯ ಸಕಾಶಮ್ ಆಶು
ಭೀಮಃ ಸ ಪಾಯಸಸುಭಕ್ಷ್ಯಪಯೋಘಟಾದ್ಯೈಃ ।
ಯುಕ್ತಂ ಚ ಶೈಲನಿಭಮುತ್ತಮಮಾದ್ಯರಾಶಿಂ
ಸ್ಪರ್ಶಾತ್ ಪುರೈವ ನರಭಕ್ಷಿತುರತ್ತುಮೈಚ್ಛತ್ ॥೮೮॥

ಭೀಮ ಬೇಗನೆ ಬಕಾಸುರನಿದ್ದ ಕಾಡಿನ ಸಮೀಪಕ್ಕೆ ಹೋಗಿ ಒಳ್ಳೆಯ ಪಾಯಸ ಒಳ್ಳೆಯ ಭಕ್ಷ್ಯ, ಕೊಡಗಳಲ್ಲಿ ತುಂಬಿದ ಹಾಲು ಮುಂತಾದವುಗಳಿಂದ ಕೂಡಿದ ಬೆಟ್ಟದಷ್ಟು ಗಾತ್ರದ ಉತ್ತಮ ಅನ್ನದ ರಾಶಿಯನ್ನು ಆ ರಾಕ್ಷಸನ ಸ್ಪರ್ಶವಾಗುವ ಮುನ್ನ ಬೇಗನೆ ಉಣ್ಣಲು ಬಯಸಿದ.

ತೇನೈವ ಚಾನ್ನಸಮಿತೌ ಪರಿಭುಜ್ಯಮಾನ
ಉತ್ಪಾಟ್ಯ ವೃಕ್ಷಮಮುಮಾದ್ರವದಾಶು ರಕ್ಷಃ ।
ವಾಮೇನ ಮಾರುತಿರಪೋಹ್ಯ ತದಾ ಪ್ರಹಾರಾನ್
ಹಸ್ತೇನ ಭೋಜ್ಯಮಖಿಲಂ ಸಹಭಕ್ಷ್ಯಮಾದತ್ ॥೮೯॥

ಭೀಮನೇ ಅನ್ನದ ರಾಶಿಯನ್ನು ಉಣ್ಣಲು ತೊಡಗಿದಾಗ ಬಕರಾಕ್ಷಸ ಮರವನ್ನು ಕಿತ್ತುಹಿಡಿದು ಭೀಮನ ಬಳಿಗೆ ಓಡಿಬಂದ. ಭೀಮ ಎಡಗೈಯಿಂದ ಮರದ ಏಟನ್ನು ತಡೆದ. ಎಲ್ಲ ಅನ್ನವನ್ನೂ ಭಕ್ಷ್ಯ ಸಮೇತವಾಗಿ ಉಂಡ.

★ ★ ★ ★

ನೂರ ಅರವತ್ತೈದನೆಯ ಅಧ್ಯಾಯ

(ಭೀಮನ ಮುಖ ಅರಳಿರುವುದನ್ನು ನೋಡಿ ಧರ್ಮರಾಜನ ಶಂಕೆ, ಕುಂತಿಯಿಂದ ಸಮಾಧಾನ, ಬಂಡಿ ಅನ್ನವನ್ನು ತೆಗೆದುಕೊಂಡು ಬಕನ ಸಮೀಪಕ್ಕೆ ಹೋಗಿ ಭೀಮನಿಂದ ಭಕ್ಷಣ)

ವೈಶಂಪಾಯನಃ

ಪ್ರತಿಜ್ಞಾತೇऽಥ ಭೀಮೇನ ಕರಿಷ್ಯಾಮೀತಿ ಭಾರತ ।
ಆಜಗ್ಮುಃ ಸಹಿತಾಃ ಸರ್ವೇ ಭೈಕ್ಷಮಾದಾಯ ಪಾಂಡವಾಃ ॥೧॥

ಭಾರತನೇ, ಭೀಮಸೇನನು ನಾನು ಮಾಡುವೆನು ಎಂದು ಪ್ರತಿಜ್ಞೆ ಮಾಡುವ ಹೊತ್ತಿಗೆ ಎಲ್ಲಾ ಪಾಂಡವರು ಭಿಕ್ಷೆಯನ್ನು ತೆಗೆದುಕೊಂಡು ಜೊತೆಯಲ್ಲಿ ಬಂದರು.

ಭೀಮಸೇನಂ ತತೋ ದೃಷ್ಟ್ವಾ ಆಘೂರ್ಣ್ಣವದನಂ ತಥಾ ।
ಬುಬೋಧ ಧರ್ಮರಾಜಸ್ತು ಹೃಷಿತಂ ಭೀಮಮಚ್ಯುತಮ್ ॥೨॥

ಭೀಮಸೇನನ ಅರಳಿದ ಮುಖವನ್ನು ನೋಡಿ ಧರ್ಮರಾಜನು ಭಕ್ಷ್ಯಾದಿಗಳಿಂದಲೂ, ಬಲದಿಂದಲೂ ಎಂದೂ ಚ್ಯುತನಾಗದ ಭೀಮನು ಹರ್ಷಗೊಂಡಿದ್ದಾನೆ ಎಂದು ತಿಳಿದನು.

ಹರ್ಷಿತುಂ ಕಾರಣಂ ಯತ್ ತನ್ಮನಸಾऽಚಿಂತಯದ್ ಗುರುಃ ।
ಪ್ರಸಮೀಕ್ಷ್ಯ ತದಾ ರಾಜನ್ ಶ್ರೋತುಕಾಮೋ ವಿಶಾಂಪತಿಃ ॥೩॥

ಹರ್ಷಕ್ಕೆ ಕಾರಣವೇನೆಂದು ಹಿರಿಯನಾದ ಧರ್ಮರಾಜನು ಮನಸ್ಸಿನಲ್ಲಿಯೇ ಯೋಚಿಸಿದನು. ರಾಜನೇ, ಮನಸ್ಸಿನಲ್ಲಿ ಒಂದು ನಿರ್ಧಾರಕ್ಕೆ ಬಂದು ಅನಂತರ ಧರ್ಮರಾಜನು ಅದನ್ನು ಕೇಳಲು ಬಯಸಿದನು.

ಆಕಾರೇಣೈವ ತಂ ಜ್ಞಾತ್ವಾ ಪಾಂಡುಪುತ್ರೋ ಯುಧಿಷ್ಠಿರಃ ।
ರಹಃ ಸಮುಪವಿಶ್ಯೈಕಃ ತತಃ ಪಪ್ರಚ್ಛ ಮಾತರಮ್ ॥೪॥

ಭೀಮಸೇನನ ಆಕಾರದಿಂದಲೇ ಕಾರಣವನ್ನು ಊಹಿಸಿದ ಪಾಂಡುಸುತನಾದ ಯುಧಿಷ್ಠಿರನು ತಾಯಿಯ ಸಮೀಪದಲ್ಲಿ ಏಕಾಂತದಲ್ಲಿ ಒಬ್ಬನೇ ಕುಳಿತು ತಾಯಿಯನ್ನು ಕೇಳಿದನು.

ಕಿಂ ಚಿಕೀರ್ಷತ್ಯಯಂ ಕರ್ಮ ಭೀಮೋ ಭೀಮಪರಾಕ್ರಮಃ ।
ಭವತ್ಯನುಮತೇ ಕಚ್ಚಿತ್ ಸ್ವಯಂ ಕರ್ತುಮಿಹೇಚ್ಛತಿ ॥೫॥

ಭೀಮಪರಾಕ್ರಮವುಳ್ಳ ಈ ಭೀಮನು ಏನು ಮಾಡಲು ಹೊರಟಿದ್ದಾನೆ? ನಿನ್ನ ಅನುಮತಿಯಿಂದ ಮಾಡುತ್ತಿದ್ದಾನೋ ಅಥವಾ ತಾನೇ ಸ್ವಂತ ಇಚ್ಛೆಯಿಂದ ಮಾಡುತ್ತಿದ್ದಾನೋ?

ಕುಂತೀ

ಮಮೈವ ವಚನಾದೇವ ಕರಿಷ್ಯತಿ ಪರಂತಪಃ ।
ಬ್ರಾಹ್ಮಣಾರ್ಥೇ ಮಹತ್ ಕೃತ್ಯಂ ಮೋಕ್ಷಾಯ ನಗರಸ್ಯ ಚ ॥೬॥

ಪರಂತಪನಾದ ಭೀಮಸೇನನು ನನ್ನ ವಚನದಿಂದಲೇ ಮಾಡಲು ಹೊರಟಿದ್ದಾನೆ. ಬ್ರಾಹ್ಮಣರಿಗೆ ಸಹಾಯ ಮಾಡುವ ಸಲುವಾಗಿ ಮತ್ತು ಈ ನಗರದ ಸಂಕಟವನ್ನು ಬಿಡಿಸುವ ಸಲುವಾಗಿ ಮಹಾಕಾರ್ಯವನ್ನು ಮಾಡುವನು.

ಯುಧಿಷ್ಠಿರಃ

ಕಿಮಿದಂ ಸಾಹಸಂ ತೀಕ್ಷ್ಣಂ ಭವತ್ಯಾ ದುಷ್ಕರಂ ಕೃತಮ್ ।
ಪರಿತ್ಯಾಗಂ ಹಿ ಪುತ್ರಸ್ಯ ನ ಪ್ರಶಂಸಂತಿ ಸಾಧವಃ ॥೭॥

ತಾಯಿ, ನೀನು ಇದೇನು ದುಷ್ಕರವಾದ, ಉಗ್ರವಾದ, ವಿಚಾರಶೂನ್ಯವಾದ ಕಾರ್ಯವನ್ನು ಮಾಡುತ್ತಿದ್ದೀಯೆ? ಪುತ್ರನ ಪರಿತ್ಯಾಗವನ್ನು ಸಜ್ಜನರು ಹೊಗಳುವುದಿಲ್ಲ.

ಕಥಂ ಪರಸುತಸ್ಯಾರ್ಥೇ ಸ್ವಪುತ್ರಂ ತ್ಯಕ್ತುಮರ್ಹಸಿ ।
ಲೋಕವೃತ್ತವಿರುದ್ಧಂ ಚ ಪುತ್ರತ್ಯಾಗಃ ಕೃತಸ್ತ್ವಯಾ ॥೮॥

ಇನ್ನೊಬ್ಬನ ಮಗನ ಸಲುವಾಗಿ ನಿನ್ನ ಮಗನನ್ನು ಹೇಗೆ ಪರಿತ್ಯಾಗ ಮಾಡುತ್ತಿದ್ದೀಯೆ? ನೀನು ಮಾಡುತ್ತಿರುವ ಪುತ್ರತ್ಯಾಗವು ಲೋಕಾಚಾರಕ್ಕೆ ವಿರುದ್ಧವಾದುದು.

ಯಸ್ಯ ವಿಕ್ರಮಮಾಶ್ರಿತ್ಯ ಸುಖಿಂ ಸರ್ವೇ ಸ್ವಪಾಮಹೇ ।
ರಾಜ್ಯಂ ಚಾಪಹೃತಂ ಕ್ಷುದ್ರೈರಾಜಹೀರ್ಷ್ಯಾಮಹೇ ಪುನಃ ॥೯॥

ಅವನ ಪರಾಕ್ರಮವನ್ನು ಅವಲಂಬಿಸಿ ನಾವೆಲ್ಲರೂ ಸುಖವಾಗಿ ನಿದ್ದೆ ಮಾಡುತ್ತಿದ್ದೇವೆ ಮತ್ತು ಕ್ಷುದ್ರರು ಅಪಹರಿಸಿದ ನಮ್ಮ ರಾಜ್ಯವನ್ನು ಪುನಃ ಸಂಪಾದಿಸಲು ಬಯಸುತ್ತಿದ್ದೇವೆ.

ಯಸ್ಯ ದುರ್ಯೋಧನೋ ವೀರ್ಯಂ ಚಿಂತಯನ್ನಮಿತೌಜಸಃ ।
ನ ಶೇತೇ ವಸತೀಃ ಸರ್ವಾ ದುಃಖಾಚ್ಛಕುನಿನಾ ಸಹ ॥೧೦॥

ಅಮಿತಪರಾಕ್ರಮಿಯಾದ ಅವನ ಸಾಮರ್ಥ್ಯವನ್ನು ಚಿಂತಿಸಿ ದುರ್ಯೋಧನನು ಶಕುನಿಯ ಜೊತೆಯಲ್ಲಿ ಎಲ್ಲಾ ರಾತ್ರಿಗಳನ್ನೂ ದುಃಖದಿಂದ ಕಳೆಯುತ್ತಿದ್ದಾನೆ.

ಯಸ್ಯ ವೀರಸ್ಯ ವೀರ್ಯೇಣ ಮುಕ್ತಾ ಜತುಗೃಹಾದ್ ವಯಮ್ ।
ಅನ್ಯೇಭ್ಯಶ್ಚೈವ ಪಾಪೇಭ್ಯೋ ನಿಹತಶ್ಚ ಪುರೋಚನಃ ॥೧೧॥

ಆ ವೀರನ ಪರಾಕ್ರಮದಿಂದಲೇ ನಾವು ಜತುಗೃಹದಿಂದಲೂ, ಉಳಿದ ಸಂಕಟಗಳಿಂದಲೂ ಮುಕ್ತರಾಗಿ ಪುರೋಚನನನ್ನು ಕೊಂದಿದ್ದೇವೆ.

ಯಸ್ಯ ಬಾಹೂ ಸಮಾಶ್ರಿತ್ಯ ವಸುಪೂರ್ಣಾಂ ವಸುಂಧರಾಮ್ ।
ಇಮಾಂ ಮನ್ಯಾಮಹೇ ಪ್ರಾಪ್ತಾಂ ನಿಹತ್ಯ ಧೃತರಾಷ್ಟ್ರಜಾನ್ ॥೧೨॥

ಅವನ ಬಾಹುಬಲವನ್ನು ಆಶ್ರಯಿಸಿ ನಾವು ದುರ್ಯೋಧನಾದಿಗಳನ್ನು ಸಂಹರಿಸಿ ಈ ವಸುಪೂರ್ಣವಾದ ಭೂಮಿಯನ್ನು ನಾವು ಪಡೆದಿದ್ದೇವೆ ಎಂದು ತಿಳಿದಿದ್ದೇವೆ.

ತಸ್ಯ ವ್ಯವಸಿತಸ್ಯಾಗೋ ಬುದ್ಧಿಮಾಸ್ಥಾಯ ಕಾಂ ತ್ವಯಾ ।
ಕಚ್ಚಿನ್ನು ದುಃಖೈರ್ಬುದ್ಧಿಸ್ತೇ ವಿಪ್ಲುತಾ ಗತಚೇತಸಃ ॥೧೩॥

ಅಂತಹ ಭೀಮನ ಪರಿತ್ಯಾಗವನ್ನು ಮಾಡಲು ನೀನು ಯಾವ ಯೋಚನೆಯನ್ನು ಮಾಡಿ ನಿರ್ಧರಿಸಿದೆ. ಅನುಭವಿಸಿದ ಕಷ್ಟಗಳಿಂದ ನಿನ್ನ ಪ್ರಜ್ಞೆಯು ಮತ್ತು ಬುದ್ಧಿಯು ವಿಪ್ಲವವನ್ನು ಹೊಂದಿವೆಯೇ?

ಕುಂತೀ

ಯುಧಿಷ್ಠಿರ ನ ಸಂತಾಪಃ ಕಾರ್ಯಃ ಪ್ರತಿ ವೃಕೋದರಮ್ ।
ನ ಚಾಯಂ ಬುದ್ಧಿದೌರ್ಬಲ್ಯಾದ್ ವ್ಯವಸಾಯಃ ಕೃತೋ ಮಯಾ ।
ನ ಚ ಶೋಕೇನ ಬುದ್ಧಿರ್ಮೇ ವಿಪ್ಲುತಾ ಗತಚೇತನಾ ॥೧೪॥

ಯುಧಿಷ್ಠಿರನೇ, ಭೀಮನ ವಿಷಯದಲ್ಲಿ ನೀನು ಸಂತಾಪ ಪಡಬೇಕಾಗಿಲ್ಲ. ನಾನು ಬುದ್ಧಿದೌರ್ಬಲ್ಯದಿಂದ ಈ ನಿರ್ಧಾರವನ್ನು ತೆಗೆದುಕೊಂಡಿಲ್ಲ ಅಥವಾ ಶೋಕಗಳಿಂದ ನನ್ನ ಬುದ್ಧಿಯಾಗಲೀ, ಚೇತನವಾಗಲೀ ವಿಪ್ಲವವನ್ನು ಹೊಂದಿಲ್ಲ.

ಇಹ ವಿಪ್ರಸ್ಯ ಭವನೇ ವಯಂ ಪುತ್ರ ಸುಖೋಷಿತಾಃ ।
ತಸ್ಯ ಪ್ರತಿಕ್ರಿಯಾ ತಾತ ಮಯೈಷಾ ಪ್ರಸಮೀಕ್ಷಿತಾ ॥೧೫॥

ನಾವು ಈ ಬ್ರಾಹ್ಮಣನ ಮನೆಯಲ್ಲಿ ಸುಖವಾಗಿ ವಾಸಿಸುತ್ತಿದ್ದೇವೆ. ಅದಕ್ಕೆ ಪ್ರತ್ಯುಪಕಾರವನ್ನು ಮಾಡಲು ನಾನು ಈ ರೀತಿ ಆಲೋಚಿಸಿದ್ದೇನೆ.

ಏತಾವಾನೇವ ಪುರುಷಃ ಕೃತಂ ಯಸ್ಮಿನ್ನ ನಶ್ಯತಿ ।
ಯಾವಚ್ಚ ಕುರ್ಯಾದನ್ಯೋಽಸ್ಯ ಕುರ್ಯಾದ್ ಬಹುಗುಣಂ ತತಃ ।
ಬ್ರಾಹ್ಮಣಾರ್ಥೇ ಮಹಾಧರ್ಮಂ ಜಾನೀತಾರ್ಥಂ ವೃಕೋದರೇ ॥೧೬॥

ಯಾವನಿಗೆ ಮಾಡಿದ ಉಪಕಾರವು ನಾಶ ಹೊಂದುವುದಿಲ್ಲವೋ ಅವನು ಶ್ರೇಷ್ಠನಾದ ಪುರುಷ. ಇನ್ನೊಬ್ಬರು ನಮಗೆ ಏನು ಉಪಕಾರವನ್ನು ಮಾಡುತ್ತಾರೋ ಅದಕ್ಕಿಂತ ನೂರುಪಟ್ಟು ನಾವು ಅವರಿಗೆ ಪ್ರತ್ಯುಪಕಾರವನ್ನು ಮಾಡಬೇಕು. ಭೀಮಸೇನನು ಬ್ರಾಹ್ಮಣರ ಸಲುವಾಗಿ ಮಹಾಧರ್ಮ- ರೂಪವಾದ ಪ್ರಯೋಜನವನ್ನು ಪಡೆಯುವನೆಂದು ತಿಳಿಯಿರಿ.

ದೃಷ್ಟ್ವಾ ವೀರಸ್ಯ ವಿಕ್ರಾಂತಂ ತದಾ ಜತುಗೃಹೇ ಮಹತ್ ।
ಹಿಡಿಂಬಸ್ಯ ವಧಾಚ್ಚೈವಂ ಜಾನೀತಾರ್ಥಂ ವೃಕೋದರೇ ॥೧೭॥

ಆಗ ಜತುಗೃಹದಲ್ಲಿ ಈ ವೀರನ ಮಹಾಪರಾಕ್ರಮವನ್ನು, ಅನಂತರ ಹಿಡಿಂಬನ ವಧೆಯನ್ನು ನೋಡಿ ಭೀಮಸೇನನು ಇದನ್ನು ಸಾಧಿಸುವನೆಂದು ತಿಳಿಯಿರಿ.

ಬಾಹ್ವೋರ್ಬಲಂ ಹಿ ಭೀಮಸ್ಯ ನಾಗಾಯುತಸಮಂ ಮಹತ್ ।
ಯೇನ ಯೂಯಂ ಗಜಪ್ರಖ್ಯಾ ನಿರ್ವ್ಯೂಢಾ ವಾರಣಾವತಾತ್ ॥೧೮॥

ಈ ಭೀಮನ ಬಾಹುಗಳಲ್ಲಿ ಹತ್ತುಸಾವಿರ ಆನೆಗಳ ಮಹಾಬಲವು ತುಂಬಿದೆ. ಆದ್ದರಿಂದಲೇ ಆನೆಗಳಂತಿರುವ ನೀವೆಲ್ಲರೂ ವಾರಣಾವತದಿಂದ ಅವನಿಂದ ಹೊತ್ತು ತರಲ್ಪಟ್ಟಿರಿ.

ವೃಕೋದರಬಲಶ್ಚಾನ್ಯೋ ನ ಜಾತೋ ನ ಜನಿಷ್ಯತಿ ।
ಯೋಽಭ್ಯುದೀಯಾದ್ ಯುಧಿ ಶ್ರೇಷ್ಠಮಪಿ ವಜ್ರಧರಂ ಸ್ವಯಮ್ ॥

ವೃಕೋದರನ ಬಲವುಳ್ಳವನು ಇದುವರೆಗೆ ಹುಟ್ಟಲಿಲ್ಲ ಮತ್ತು ಮುಂದೆ ಹುಟ್ಟುವುದಿಲ್ಲ. ಅವನು ಬೇಕಾದರೆ, ಯುದ್ಧದಲ್ಲಿ ಶ್ರೇಷ್ಠನಾದ ವಜ್ರಧರನಾದ ಇಂದ್ರನನ್ನೂ ತಾನೊಬ್ಬನೇ ಎದುರಿಸುತ್ತಾನೆ.

ಜಾತಮಾತ್ರಃ ಪುರಾ ಚೈವ ಮಮಾಂಕಾತ್ ಪತಿತೋ ಗಿರೌ ।
ಶರೀರಗೌರವಾದ್ ಯಸ್ಯ ಶಿಲಾ ಗಾತ್ರೈರ್ವಿಚೂರ್ಣಿತಾ ॥೨೦॥

ಹಿಂದೆ ಅವನು ಹುಟ್ಟಿದಾಗ ನನ್ನ ತೊಡೆಯ ಮೇಲಿಂದ ಪರ್ವತದ ಮೇಲೆ ಬಿದ್ದಾಗ ಅವನ ಶರೀರದ ಭಾರದಿಂದ ಪರ್ವತಶಿಲೆಯು ವಿಚೂರ್ಣಿತವಾಯಿತು.

ತದಹಂ ಪ್ರಜ್ಞಯಾ ಜ್ಞಾತ್ವಾ ಬಲಂ ಭೀಮಸ್ಯ ಪಾಂಡವ ।
ಪ್ರತಿಕಾರೇ ಚ ವಿಪ್ರಸ್ಯ ತತಃ ಕೃತವತೀ ಮತಿಮ್ ॥೨೧॥

ಪಾಂಡವನೇ, ನಾನು ಭೀಮನ ಆ ಬಲವನ್ನು ನನ್ನ ಪ್ರಜ್ಞೆಯಿಂದ ಆಲೋಚಿಸಿ ಬ್ರಾಹ್ಮಣನಿಗೆ ಪ್ರತ್ಯುಪಕಾರವನ್ನು ಮಾಡುವುದಕ್ಕೋಸ್ಕರ ಹೀಗೆ ನಿಶ್ಚಯಿಸಿದೆ.

ನ ಚ ಮೋಹಾನ್ನ ಚಾಜ್ಞಾನಾನ್ನ ಚ ಲೋಭಾನ್ನ ಚ ಭ್ರಮಾತ್ ।
ಇದಂ ವ್ಯವಸಿತಂ ವೀರ ಬುದ್ಧಿಪೂರ್ವಮಿದಂ ಕೃತಮ್ ॥೨೨॥

ವೀರನೇ ಮೋಹದಿಂದಾಗಲೀ, ಅಜ್ಞಾನದಿಂದಾಗಲೀ, ಲೋಭ- ದಿಂದಾಗಲೀ ಅಥವಾ ಭ್ರಾಂತಿಯಿಂದಾಗಲೀ ನಾನು ಈ ನಿರ್ಧಾರಕ್ಕೆ ಬಂದಿಲ್ಲ. ಬುದ್ಧಿಪೂರ್ವಕವಾಗಿ ಈ ನಿರ್ಣಯಕ್ಕೆ ಬಂದಿದ್ದೇನೆ.

ಅರ್ಥೌ ದ್ವಾವಪಿ ನಿರ್ವೃತ್ತೌ ಯುಧಿಷ್ಠಿರ ಭವಿಷ್ಯತಃ ।
ಪ್ರತಿಕಾರಶ್ಚ ವಾಸಸ್ಯ ಧರ್ಮಶ್ಚ ಚರಿತೋ ಮಹಾನ್ ॥೨೩॥

ಯುಧಿಷ್ಠಿರನೇ, ಇದರಿಂದ ನಮಗೆ ಎರಡು ಪ್ರಯೋಜನಗಳು ಸಿದ್ಧಿಸುವವು. ಮೊದಲನೆಯದು, ನಾವು ವಾಸ ಮಾಡಿರುವುದಕ್ಕೆ ಪ್ರತ್ಯುಪಕಾರ ಮತ್ತು ಎರಡನೆಯದು ಮಹಾಧರ್ಮ ಸಂಪಾದನೆ.

ಯೋ ಬ್ರಾಹ್ಮಣಸ್ಯ ಸಾಹಾಯ್ಯಂ ಕುರ್ಯಾದರ್ಥೇಷು ಕೇಷುಚಿತ್ ।
ಕ್ಷತ್ರಿಯಃ ಸ ಶುಭಾಂಲ್ಲೋಕಾನಾಪ್ನುಯಾದಿತಿ ನಿಶ್ಚಿತಮ್ ॥೨೪॥

ಯಾವ ಕ್ಷತ್ರಿಯನು ಅವಶ್ಯಕವಾದ ವಿಷಯಗಳಲ್ಲಿ ಬ್ರಾಹ್ಮಣನಿಗೆ ಸಹಾಯ ಮಾಡುವನೋ, ಅವನಿಗೆ ಶುಭಲೋಕ ಪ್ರಾಪ್ತಿಯಾಗುವುದು ಎಂಬುದು ನಿಶ್ಚಿತವಾದುದು.

ಕ್ಷತ್ರಿಯಃ ಕ್ಷತ್ರಿಯಸ್ಯೈವ ಕುರ್ವಾಣೋ ವಧಮೋಕ್ಷಣಮ್ ।
ವಿಪುಲಾಂ ಕೀರ್ತಿಮಾಪ್ನೋತಿ ಲೋಕೇಽಸ್ಮಿಂಶ್ಚ ಪರತ್ರ ಚ ॥೨೫॥

ಕ್ಷತ್ರಿಯನು ಇನ್ನೊಬ್ಬ ಕ್ಷತ್ರಿಯನನ್ನು ವಧೆಯಿಂದ ಪಾರು ಮಾಡಿದರೆ ಈ ಲೋಕದಲ್ಲೂ ಮತ್ತು ಪರಲೋಕದಲ್ಲೂ ಅಪಾರವಾದ ಕೀರ್ತಿಯನ್ನು ಪಡೆಯುತ್ತಾನೆ.

ವೈಶ್ಯಸ್ಯೈವ ಚ ಸಾಹಾಯ್ಯಂ ಕುರ್ವಾಣಃ ಕ್ಷತ್ರಿಯೋ ಯುಧಿ ।
ಸ ಸರ್ವೇಷ್ವಪಿ ಲೋಕೇಷು ಪ್ರಜಾ ರಂಜಯತೇ ಧ್ರುವಮ್ ॥೨೬॥

ಕ್ಷತ್ರಿಯನಾದವನು ವೈಶ್ಯನಿಗೆ ಸಹಾಯವನ್ನು ಮಾಡಿದರೆ, ಅವನು ಎಲ್ಲಾ ಲೋಕಗಳಲ್ಲಿಯೂ ನಿಶ್ಚಿತವಾಗಿ ಪ್ರಜೆಗಳನ್ನು ರಂಜಿಸುತ್ತಾನೆ.

ಶೂದ್ರಂ ತು ಮೋಕ್ಷಯನ್ ಪುತ್ರ ಉದ್ವಿಗ್ನಂ ಶರಣಾರ್ಥಿನಮ್ ।
ಪ್ರಾಪ್ನೋತೀಹ ಕುಲೇ ಜನ್ಮ ಸದ್ರವ್ಯೇ ರಾಜಸತ್ಕೃತೇ ॥೨೭॥

ಸಂಕಟದಲ್ಲಿರುವ ಶರಣಾರ್ಥಿಯಾದ ಶೂದ್ರನನ್ನು ಸಂಕಟದಿಂದ ಮೋಚನೆ ಮಾಡಿದರೆ, ಸಂಪದ್ಯುಕ್ತವಾದ ರಾಜನಿಂದ ಸತ್ಕೃತವಾದ ಕುಲದಲ್ಲಿ ಜನ್ಮವನ್ನು ಪಡೆಯುತ್ತಾನೆ.

ಏವಂ ಹಿ ಭಗವಾನ್ ವ್ಯಾಸಃ ಪುರಾ ಕೌರವನಂದನ ।
ಪ್ರೋವಾಚ ಸುತರಾಂ ಪ್ರಾಜ್ಞಃ ತಸ್ಮಾದೇತಚ್ಚಿಕೀರ್ಷಿತಮ್ ॥೨೮॥

ಕೌರವನಂದನನೇ, ಹೀಗೆ ಪ್ರಾಜ್ಞರಾದ ಭಗವಾನ್ ವ್ಯಾಸರು ಹಿಂದೆ ಹೇಳಿದ್ದಾರೆ. ಆದ್ದರಿಂದ ಈ ಕೆಲಸವನ್ನು ಮಾಡಲು ಬಯಸುತ್ತಿದ್ದೇನೆ.

ಯುಧಿಷ್ಠಿರಃ

ಉಪಪನ್ನಮಿದಂ ಮಾತಸ್ತ್ವಯಾ ಸದ್ಬುದ್ಧಿಪೂರ್ವಕಮ್ ।
ಆರ್ತಸ್ಯ ಬ್ರಾಹ್ಮಣಸ್ಯೈವಮನುಕ್ರೋಶಾದಿದಂ ಕೃತಮ್ ॥೨೯॥

ತಾಯಿ, ಸಂಕಟದಲ್ಲಿ ಸಿಲುಕಿದ ಬ್ರಾಹ್ಮಣನ ಮೇಲಿನ ಕೃಪೆಯಿಂದ ಸದ್ಬುದ್ಧಿಪೂರ್ವಕವಾಗಿ ನೀನು ಮಾಡುತ್ತಿರುವ ಈ ಕಾರ್ಯವು ಯುಕ್ತವಾಗಿದೆ.

ಧ್ರುವಮೇಷ ಮಹಾಬಾಹುರ್ವಿಜಿತ್ಯ ಪುರುಷಾದಕಮ್ ।
ಆಗಂತಾ ನಗರಂ ಚೈವ ತಸ್ಮಾತ್ ಪಾಪಾದ್ ವಿಮೋಕ್ಷ್ಯತೇ ॥೩೦॥

ಖಂಡಿತವಾಗಿ ಈ ಮಹಾಬಾಹುವು ನರಭಕ್ಷಕನಾದ ಆ ರಾಕ್ಷಸನನ್ನು ಗೆದ್ದು (ಸಂಹರಿಸಿ) ನಗರಕ್ಕೆ ಹಿಂದಿರುಗುವನು ಮತ್ತು ಈ ನಗರವನ್ನು ಸಂಕಟದಿಂದ ವಿಮೋಚನೆಗೊಳಿಸುವನು.

ಯಥಾ ಚೈವ ನ ನೋ ವಿದ್ಯುರ್ನರಾ ನಗರವಾಸಿನಃ ।
ತಥಾऽಯಂ ಬ್ರಾಹ್ಮಣೋ ವಾಚ್ಯಃ ಪರಿಗೃಹ್ಯ ಚ ಯತ್ನತಃ ॥೩೧॥

ಈ ಬ್ರಾಹ್ಮಣನನ್ನು ಕರೆದು ನಗರವಾಸಿಗಳು ನಮ್ಮ ನಿಜಸ್ವರೂಪವನ್ನು ತಿಳಿಯದಂತೆ ಎಲ್ಲವನ್ನೂ ಮಾಡಬೇಕೆಂದು ಅವನಿಗೆ ಪ್ರಯತ್ನಪೂರ್ವಕವಾಗಿ ಹೇಳಬೇಕು.

ವೈಶಂಪಾಯನಃ

ಯುಧಿಷ್ಠಿರೇಣ ಸಮ್ಮಂತ್ರ್ಯ ಬ್ರಾಹ್ಮಣಾರ್ಥಮರಿಂದಮ ।
ಕುಂತೀ ಪ್ರವಿಶ್ಯ ತಾನ್ ಸರ್ವಾನ್ ಸಾಂತ್ವಯಾಮಾಸ ಭಾರತ ॥೩೨॥

ಅರಿಂದಮನಾದ ಭಾರತನೇ, ಕುಂತಿಯು ಯುಧಿಷ್ಠಿರನ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ, ಒಳಗೆ ಬಂದು ಬ್ರಾಹ್ಮಣನಿಗೆ ಉಪಕಾರವನ್ನು ಮಾಡುವ ಸಲುವಾಗಿ ಅವರೆಲ್ಲರನ್ನೂ ಸಮಾಧಾನ ಪಡಿಸಿದಳು.

ಅಥ ರಾತ್ರ್ಯಾಂ ವ್ಯತೀತಾಯಾಂ ಭೀಮಸೇನೋ ಮಹಾಬಲಃ ।
ಬ್ರಾಹ್ಮಣಂ ಸಮುಪಾಗಮ್ಯ ವಾಕ್ಯಮೇತದುವಾಚ ಹ ॥೩೩॥

ಅನಂತರ ರಾತ್ರಿಯು ಕಳೆಯುತ್ತಿರಲು, ಮಹಾಬಲನಾದ ಭೀಮಸೇನನು ಬ್ರಾಹ್ಮಣನ ಸಮೀಪಕ್ಕೆ ಬಂದು ಈ ಮಾತುಗಳನ್ನು ಆಡಿದನು.

ಆಪದಸ್ತ್ವಾಂ ಪ್ರಮುಚ್ಯೇಯಂ ಸಪುತ್ರಂ ಬ್ರಾಹ್ಮಣ ಪ್ರಿಯಮ್ ।
ಮಾ ಭೈಷೀ ರಾಕ್ಷಸಾತ್ ತಸ್ಮಾನ್ಮಾಂ ದದಾತು ಬಲಿಂ ಭವಾನ್ ॥೩೪॥

ಬ್ರಾಹ್ಮಣನೇ, ನಮಗೆ ಪ್ರಿಯನಾದ ನಿನ್ನನ್ನು ನಿನ್ನ ಕುಟುಂಬದ ಜೊತೆಯಲ್ಲಿ ಈ ಸಂಕಟದಿಂದ ಪಾರು ಮಾಡುತ್ತೇನೆ. ನೀನು ಆ ರಾಕ್ಷಸನಿಗೆ ಹೆದರಬೇಡ. ನನ್ನನ್ನು ನೀನು ಅವನಿಗೆ ಆಹಾರವಾಗಿ ಕೊಡು.

ಇಹ ಮಾಮಶಿತಂ ಕರ್ತುಂ ಪ್ರಯತಸ್ವ ಭವದ್ಗೃಹೇ ।
ಅಥಾತ್ಮಾನಂ ಪ್ರದಾಸ್ಯಾಮಿ ತಸ್ಮೈ ಘೋರಾಯ ರಕ್ಷಸೇ ॥೩೫॥

ಇಲ್ಲಿ ನಿನ್ನ ಮನೆಯಲ್ಲಿ ನನಗೆ ಭೋಜನವನ್ನು ಕೊಡಲು ಪ್ರಯತ್ನಿಸು. ಅನಂತರ ನಾನು ಆ ಘೋರನಾದ ರಾಕ್ಷಸನಿಗೆ ನನ್ನನ್ನೇ ಕೊಡುವೆನು.

ವೈಶ್ಯಸ್ಯೈವ ಚ ಸಾಹಾಯ್ಯಂ ಕುರ್ವಾಣಃ ಕ್ಷತ್ರಿಯೋ ಯುಧಿ ।
ಸ ಸರ್ವೇಷ್ವಪಿ ಲೋಕೇಷು ಪ್ರಜಾ ರಂಜಯತೇ ಧ್ರುವಮ್ ॥೨೬॥

ಕ್ಷತ್ರಿಯನಾದವನು ವೈಶ್ಯನಿಗೆ ಸಹಾಯವನ್ನು ಮಾಡಿದರೆ, ಅವನು ಎಲ್ಲಾ ಲೋಕಗಳಲ್ಲಿಯೂ ನಿಶ್ಚಿತವಾಗಿ ಪ್ರಜೆಗಳನ್ನು ರಂಜಿಸುತ್ತಾನೆ.

ಶೂದ್ರಂ ತು ಮೋಕ್ಷಯನ್ ಪುತ್ರ ಉದ್ವಿಗ್ನಂ ಶರಣಾರ್ಥಿನಮ್ ।
ಪ್ರಾಪ್ನೋತೀಹ ಕುಲೇ ಜನ್ಮ ಸದ್ರವ್ಯೇ ರಾಜಸತ್ಕತೇ ॥೨೭॥

ಸಂಕಟದಲ್ಲಿರುವ ಶರಣಾರ್ಥಿಯಾದ ಶೂದ್ರನನ್ನು ಸಂಕಟದಿಂದ ಮೋಚನೆ ಮಾಡಿದರೆ, ಸಂಪದ್ಯುಕ್ತವಾದ ರಾಜನಿಂದ ಸತ್ಕೃತವಾದ ಕುಲದಲ್ಲಿ ಜನ್ಮವನ್ನು ಪಡೆಯುತ್ತಾನೆ.

ಏವಂ ಹಿ ಭಗವಾನ್ ವ್ಯಾಸಃ ಪುರಾ ಕೌರವನಂದನ ।
ಪ್ರೋವಾಚ ಸುತರಾಂ ಪ್ರಾಜ್ಞಃ ತಸ್ಮಾದೇತಚ್ಚಿಕೀರ್ಷಿತಮ್ ॥೨೮॥

ಕೌರವನಂದನನೇ, ಹೀಗೆ ಪ್ರಾಜ್ಞರಾದ ಭಗವಾನ್ ವ್ಯಾಸರು ಹಿಂದೆ ಹೇಳಿದ್ದಾರೆ. ಆದ್ದರಿಂದ ಈ ಕೆಲಸವನ್ನು ಮಾಡಲು ಬಯಸುತ್ತಿದ್ದೇನೆ.

ಯುಧಿಷ್ಠಿರಃ

ಉಪಪನ್ನಮಿದಂ ಮಾತಸ್ತ್ವಯಾ ಸದ್ಬುದ್ಧಿಪೂರ್ವಕಮ್ ।
ಆರ್ತಸ್ಯ ಬ್ರಾಹ್ಮಣಸ್ಯೈವಮನುಕ್ರೋಶಾದಿದಂ ಕೃತಮ್ ॥೨೯॥

ತಾಯಿ, ಸಂಕಟದಲ್ಲಿ ಸಿಲುಕಿದ ಬ್ರಾಹ್ಮಣನ ಮೇಲಿನ ಕೃಪೆಯಿಂದ ಸದ್ಬುದ್ಧಿಪೂರ್ವಕವಾಗಿ ನೀನು ಮಾಡುತ್ತಿರುವ ಈ ಕಾರ್ಯವು ಯುಕ್ತವಾಗಿದೆ.

ಧ್ರುವಮೇಷ ಮಹಾಬಾಹುರ್ವಿಜಿತ್ಯ ಪುರುಷಾದಕಮ್ ।
ಆಗಂತಾ ನಗರಂ ಚೈವ ತಸ್ಮಾತ್ ಪಾಪಾದ್ ವಿಮೋಕ್ಷ್ಯತೇ ॥೩೦॥

ಖಂಡಿತವಾಗಿ ಈ ಮಹಾಬಾಹುವು ನರಭಕ್ಷಕನಾದ ಆ ರಾಕ್ಷಸನನ್ನು ಗೆದ್ದು (ಸಂಹರಿಸಿ) ನಗರಕ್ಕೆ ಹಿಂದಿರುಗುವನು ಮತ್ತು ಈ ನಗರವನ್ನು ಸಂಕಟದಿಂದ ವಿಮೋಚನೆಗೊಳಿಸುವನು.

ಯಥಾ ಚೈವ ನ ನೋ ವಿದ್ಯುರ್ನರಾ ನಗರವಾಸಿನಃ ।
ತಥಾऽಯಂ ಬ್ರಾಹ್ಮಣೋ ವಾಚ್ಯಃ ಪರಿಗೃಹ್ಯ ಚ ಯತ್ನತಃ ॥೩೧॥

ಈ ಬ್ರಾಹ್ಮಣನನ್ನು ಕರೆದು ನಗರವಾಸಿಗಳು ನಮ್ಮ ನಿಜಸ್ವರೂಪವನ್ನು ತಿಳಿಯದಂತೆ ಎಲ್ಲವನ್ನೂ ಮಾಡಬೇಕೆಂದು ಅವನಿಗೆ ಪ್ರಯತ್ನಪೂರ್ವಕವಾಗಿ ಹೇಳಬೇಕು.

ವೈಶಂಪಾಯನಃ

ಯುಧಿಷ್ಠಿರೇಣ ಸಮ್ಮಂತ್ರ್ಯ ಬ್ರಾಹ್ಮಣಾರ್ಥಮರಿಂದಮ ।
ಕುಂತೀ ಪ್ರವಿಶ್ಯ ತಾನ್ ಸರ್ವಾನ್ ಸಾಂತ್ವಯಾಮಾಸ ಭಾರತ ॥೩೨॥

ಅರಿಂದಮನಾದ ಭಾರತನೇ, ಕುಂತಿಯು ಯುಧಿಷ್ಠಿರನ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ, ಒಳಗೆ ಬಂದು ಬ್ರಾಹ್ಮಣನಿಗೆ ಉಪಕಾರವನ್ನು ಮಾಡುವ ಸಲುವಾಗಿ ಅವರೆಲ್ಲರನ್ನೂ ಸಮಾಧಾನ ಪಡಿಸಿದಳು.

ಅಥ ರಾತ್ರ್ಯಾಂ ವ್ಯತೀತಾಯಾಂ ಭೀಮಸೇನೋ ಮಹಾಬಲಃ ।
ಬ್ರಾಹ್ಮಣಂ ಸಮುಪಾಗಮ್ಯ ವಾಕ್ಯಮೇತದುವಾಚ ಹ ॥೩೩॥

ಅನಂತರ ರಾತ್ರಿಯು ಕಳೆಯುತ್ತಿರಲು, ಮಹಾಬಲನಾದ ಭೀಮಸೇನನು ಬ್ರಾಹ್ಮಣನ ಸಮೀಪಕ್ಕೆ ಬಂದು ಈ ಮಾತುಗಳನ್ನು ಆಡಿದನು.

ಆಪದಸ್ತ್ವಾಂ ಪ್ರಮುಚ್ಯೇಯಂ ಸಪುತ್ರಂ ಬ್ರಾಹ್ಮಣ ಪ್ರಿಯಮ್ ।
ಮಾ ಭೈಷೀ ರಾಕ್ಷಸಾತ್ ತಸ್ಮಾನ್ಮಾಂ ದದಾತು ಬಲಿಂ ಭವಾನ್ ॥೩೪॥

ಬ್ರಾಹ್ಮಣನೇ, ನಮಗೆ ಪ್ರಿಯನಾದ ನಿನ್ನನ್ನು ನಿನ್ನ ಕುಟುಂಬದ ಜೊತೆಯಲ್ಲಿ ಈ ಸಂಕಟದಿಂದ ಪಾರು ಮಾಡುತ್ತೇನೆ. ನೀನು ಆ ರಾಕ್ಷಸನಿಗೆ ಹೆದರಬೇಡ. ನನ್ನನ್ನು ನೀನು ಅವನಿಗೆ ಆಹಾರವಾಗಿ ಕೊಡು.

ಇಹ ಮಾಮಶಿತಂ ಕರ್ತುಂ ಪ್ರಯತಸ್ವ ಭವದ್‌ಗೃಹೇ ।
ಅಥಾತ್ಮಾನಂ ಪ್ರದಾಸ್ಯಾಮಿ ತಸ್ಮೈ ಘೋರಾಯ ರಕ್ಷಸೇ ॥೩೫॥

ಇಲ್ಲಿ ನಿನ್ನ ಮನೆಯಲ್ಲಿ ನನಗೆ ಭೋಜನವನ್ನು ಕೊಡಲು ಪ್ರಯತ್ನಿಸು. ಅನಂತರ ನಾನು ಆ ಘೋರನಾದ ರಾಕ್ಷಸನಿಗೆ ನನ್ನನ್ನೇ ಕೊಡುವೆನು.

ತ್ವರಧ್ವಂ ಕಿಂ ವಿಲಂಬಧ್ವಂ ಮಾ ಚಿರಂ ಕುರುತಾನಘಾಃ ।
ವ್ಯವಸ್ಯೇಯಂ ಮಮ ಪ್ರಾಣೈರ್ಯುಷ್ಮಾನ್ ರಕ್ಷಿತುಮದ್ಯ ವೈ ॥೩೬॥

ಅನಘರೇ, ತ್ವರೆ ಮಾಡಿ. ವಿಳಂಬವನ್ನು ಮಾಡಬೇಡಿ. ನನ್ನ ಪ್ರಾಣಗಳಿಂದ ಈ ದಿನ ನಿಮ್ಮನ್ನು ರಕ್ಷಿಸಲು ನಿರ್ಧರಿಸಿದ್ದೇನೆ.

ವೈಶಂಪಾಯನಃ

ಏವಮುಕ್ತಸ್ತು ಭೀಮೇನ ಬ್ರಾಹ್ಮಣೋ ಭರತರ್ಷಭ ।
ಸುಹೃದಾಂ ತತ್ ಸಮಾಖ್ಯಾಯ ದದಾವನ್ನಂ ಸುಸಂಸ್ಕೃತಮ್ ॥೩೭॥

ಭರತರ್ಷಭನೇ, ಭೀಮನು ಹೀಗೆ ಹೇಳುತ್ತಿರಲು ಆ ಬ್ರಾಹ್ಮಣನು ಆ ಎಲ್ಲಾ ವಿಷಯವನ್ನು ತನ್ನ ಸುಹೃದರಿಗೆ ತಿಳಿಸಿ ಭೀಮನಿಗೆ ಸುಸಂಸ್ಕೃತವಾದ ಅನ್ನವನ್ನು ನೀಡಿದನು.

ಪಿಶಿತೋದನಮಾಜಹ್ರುರಥಾಸ್ಯೈ ಪುರವಾಸಿನಃ ।
ಸಘೃತಂ ಸೋಪದಂಶಂ ಚ ಸೂಪೈರ್ನಾನಾವಿಧೈಃ ಸಹ ॥೩೮॥

ಅನಂತರ ನಗರವಾಸಿಗಳು ಭೀಮಸೇನನಿಗೆ ಘೃತದಿಂದ ಕೂಡಿದ ಉಪ್ಪಿನಕಾಯಿಗಳಿಂದ ಕೂಡಿದ ನಾನಾವಿಧ ಸೂಪಗಳಿಂದ ಕೂಡಿದ ಮಾಂಸಾನ್ನವನ್ನು ತಂದು ಕೊಟ್ಟರು.

ತದಾऽಶಿತ್ವಾ ಭೀಮಸೇನೋ ಮಾಂಸಾನಿ ವಿವಿಧಾನಿ ಚ ।
ಮೋದಕಾನಿ ಚ ಮುಖ್ಯಾನಿ ಚಿತ್ರೋದನಚಯಾನ್ ಬಹೂನ್ ।
ತತೋऽಪಿಬದ್ ದಧಿಘಟಾನ್ ಸುಬಹೂನ್ ದ್ರೋಣಸಮ್ಮಿತಾನ್ ॥

ಆಗ ಭೀಮಸೇನನು ವಿವಿಧವಾದ ಮಾಂಸಗಳನ್ನೂ, ಶ್ರೇಷ್ಠವಾದ ಕಡುಬುಗಳನ್ನೂ, ಅನೇಕ ವಿಧವಾದ ಚಿತ್ರಾನ್ನಗಳನ್ನೂ ತಿಂದು ಹಂಡೆಯಂತಿದ್ದ ಅನೇಕ ಮಡಕೆಗಳಲ್ಲಿದ್ದ ಮೊಸರನ್ನು ಕುಡಿದನು.

ತಸ್ಯ ಭುಕ್ತವತಃ ಪೌರಾ ಯಥಾರ್ಹಂ ಸಮುಪಾರ್ಜಿತಮ್ ।
ಉಪಜಹ್ರುರ್ಭೂತಭಾಗಂ ಸಮೃದ್ಧಂ ಸರ್ವಸಂಪದಾ ॥೪೦॥

ಭೀಮಸೇನನು ಊಟ ಮಾಡಿದ ಮೇಲೆ ನಗರವಾಸಿಗಳು ಸಮೃದ್ಧವಾದ ಎಲ್ಲ ವಿಶೇಷಗಳಿಂದಲೂ ಕೂಡಿದ ರಾಕ್ಷಸನ ಭಾಗವಾದ ಅನ್ನವನ್ನೂ ಯಥೋಚಿತವಾಗಿ ತಂದರು.

ತತೋ ರಾತ್ರ್ಯಾಂ ವ್ಯತೀತಾಯಂ ಸವ್ಯಂಜನದಧಿಪ್ಲುತಮ್ ।
ಸಮಾರುಹ್ಯಾನ್ನಸಂಪೂರ್ಣಂ ಶಕಟಂ ಸ ವೃಕೋದರಃ ।
ಪ್ರಯಯೌ ತೂರ್ಯನಿರ್ಘೋಷೈಃ ಪೌರೈಶ್ಚ ಪರಿವಾರಿತಃ ॥೪೧॥

ಅನಂತರ ರಾತ್ರಿಯು ಕಳೆಯುತ್ತಿರಲು ಭೀಮಸೇನನು ವ್ಯಂಜನ ದಧಿಗಳಿಂದ ಕೂಡಿದ ಅನ್ನದಿಂದ ಪೂರ್ಣವಾದ ಶಕಟವನ್ನೇರಿ ಪೌರರಿಂದ ಪರಿವಾರಿತನಾಗಿ ವಾದ್ಯಘೋಷಗಳೊಡನೆ ಹೊರಟನು.

ಆತ್ಮಾನಮೇಷೋಽನ್ನಭೂತೋ ರಾಕ್ಷಸಾಯ ಪ್ರದಾಸ್ಯತಿ ।
ತರುಣೋಽಪ್ರತಿರೂಪಶ್ಚ ದೃಢಮೌದರಿಕೋ ಯುವಾ ॥೪೨॥

ವಾಗ್ಭಿರೇವಂಪ್ರಕಾರಾಭಿಃ ಸ್ತೂಯಮಾನೋ ವೃಕೋದರಃ ।
ಚುಚೋದ ಸ ಬಲೀವರ್ದೌ ಯುಕ್ತೌ ಚಾಂಗಾರಕಾಳಕೌ ॥೪೩॥

ಈ ಅಸದೃಶನಾದ ಯುವಕನು ಒಳ್ಳೆಯ ಭೋಕ್ತೃ. ತನ್ನನ್ನೇ ರಾಕ್ಷಸನಿಗೆ ಅನ್ನವಾಗಿ ಕೊಡಲು ಹೊರಟಿದ್ದಾನೆ. ಇಂತಹ ಮಾತುಗಳಿಂದ ಪೌರರು ಹೊಗಳುತ್ತಿರಲು ಭೀಮಸೇನನು ಅಂಗಾರದಂತೆ ಕಪ್ಪಾದ ಎತ್ತುಗಳನ್ನು ಹೂಡಿದ ಗಾಡಿಯನ್ನು ನಡೆಸಿದನು.

ವಾದಿತ್ರಾಣಾಂ ಪ್ರಣಾದೇನ ತತಸ್ತಂ ಪುರುಷಾದಕಮ್ ।
ಅಭ್ಯಾಗಚ್ಛತ್ ಸುಸಂಹೃಷ್ಟಃ ಸ ತತ್ರ ಮನುಜೈರ್ವೃತಃ ॥೪೪॥

ಅನಂತರ ಬಹಳ ಸಂತೋಷಗೊಂಡ ಭೀಮನು ಪೌರರಿಂದ ಸುತ್ತುವರಿಯಲ್ಪಟ್ಟು ವಾದ್ಯಗಳ ಮಹಾಘೋಷದೊಂದಿಗೆ ಆ ನರಭಕ್ಷಕನು ಇದ್ದ ಸ್ಥಳವನ್ನು ಸಮೀಪಿಸಿದನು.

ಸಂಪ್ರಾಪ್ಯ ಸ ಚ ತಂ ದೇಶಮೇಕಾಕೀ ಸಮುಪಾಯಯೌ ।
ಪುರುಷಾದಭಯಾದ್ ಭೀತಃ ತತ್ರೈವಾಸೀಜ್ಜನವ್ರಜಃ ॥೪೫॥

ಆ ಪ್ರದೇಶವನ್ನು ತಲುಪಿದ ಅವನು ಒಬ್ಬನೇ ಮುಂದೆ ಹೊರಟನು. ರಾಕ್ಷಸನಿಗೆ ಹೆದರಿದ ಜನಸಮೂಹವು ಹಿಂದೆಯೇ ಉಳಿಯಿತು.

ಸ ಗತ್ವಾ ದೀರ್ಘಮಧ್ವಾನಂ ದಕ್ಷಿಣಾಮಭಿತೋ ದಿಶಮ್ ।
ಯಥೋಪದಿಷ್ಟಮುದ್ದೇಶೇ ದದರ್ಶ ವಿಪುಲಂ ದ್ರುಮಮ್ ॥೪೬॥

ಅವನು ದಕ್ಷಿಣಾಭಿಮುಖನಾಗಿ ದೀರ್ಘವಾಗಿ ಪ್ರಯಾಣಮಾಡಿ ಜನರು ತಿಳಿಸಿದ್ದಂತೆ ಸ್ವಲ್ಪ ಉನ್ನತ ಪ್ರದೇಶದಲ್ಲಿ ಒಂದು ದೊಡ್ಡ ವೃಕ್ಷವನ್ನು ನೋಡಿದನು.

ಕೇಶಾಸ್ಥಿಮಜ್ಜಾಮೇದೋಭಿರ್ಬಾಹೂರುಚರಣೈರಪಿ ।
ಆರ್ದ್ರೈಃ ಶುಷ್ಕೈಶ್ಚ ಸಂಕೀರ್ಣಮಭಿತೋऽಥ ವನಸ್ಪತಿಮ್ ॥೪೭॥

ಆ ವೃಕ್ಷದ ಸುತ್ತಲೂ ಒಣಗಿದ ಮತ್ತು ಹಸಿಯಾದ ಕೇಶ, ಅಸ್ಥಿ, ಮಜ್ಜ, ಮೇದಸ್ಸುಗಳು ಮತ್ತು ಬಾಹುಗಳು, ತೊಡೆಗಳು, ಪಾದಗಳು, ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

ಗೃಧ್ರಕಂಕ ವಳಚ್ಛನ್ನಂ ಗೋಮಾಯುಕುಲಸಂಕುಲಮ್ ।
ಉಗ್ರಗಂಧಮಚಕ್ಷುಷ್ಯಂ ಶ್ಮಶಾನಮಿವ ದಾರುಣಮ್ ॥೪೮॥

ಆ ವೃಕ್ಷಪ್ರದೇಶವು ಹದ್ದು, ಕಂಕ, ಬಳ ಮೊದಲಾದ ಕ್ರೂರಪಕ್ಷಿಗಳಿಂದಲೂ, ನರಿಗಳ ಸಮೂಹದಿಂದಲೂ ನಿಬಿಡವಾಗಿದ್ದು ದುರ್ವಾಸನೆಯಿಂದ ಕೂಡಿದ್ದು, ಕಣ್ಣಿನಿಂದ ನೋಡಲು ಅಸಾಧ್ಯವಾದ ದಾರುಣವಾದ ಸ್ಮಶಾನದಂತೆ ಇದ್ದಿತು.

ತಂ ಪ್ರವಿಶ್ಯ ಮಹಾವೃಕ್ಷಂ ಚಿಂತಯಾಮಾಸ ವೀರ್ಯವಾನ್ ।
ಯಾವನ್ನ ದೃಶ್ಯತೇ ರಕ್ಷೋ ಬಕಸ್ತು ಬಲದರ್ಪಿತಃ ॥೪೯॥

ರುಚಿರಂ ವಿವಿಧೈರ್ಭೋಜ್ಯೈರನ್ನೈರ್ಗಿರಿನಿಭೈರಿದಮ್ ।
ಶಕಟಂ ಸೂಪಸಂಪೂರ್ಣಂ ಯಾವದ್ ದ್ರಕ್ಷ್ಯತಿ ರಾಕ್ಷಸಃ ॥೫೦॥

ತಾವದೇವ ಪ್ರಭೋಕ್ಷ್ಯೇऽಹಂ ದುರ್ಲಭಂ ವೈ ಪುನರ್ಭವೇತ್ ।
ವಿಪ್ರಕೀರ್ಯೇತ ಸರ್ವಂ ಹಿ ಪ್ರಯುದ್ಧೇ ಮಯಿ ರಕ್ಷಸಾ ॥೫೧॥

ಪರಾಕ್ರಮಶಾಲಿಯಾದ ಭೀಮಸೇನನು ಆ ಮಹಾವೃಕ್ಷವನ್ನು ಸಮೀಪಿಸಿ ಹೀಗೆ ಯೋಚಿಸಿದನು. ಆ ಬಲದರ್ಪದಿಂದ ಕೂಡಿದ ರಾಕ್ಷಸನು ಎಲ್ಲಿಯವರೆಗೆ ಕಣ್ಣಿಗೆ ಬೀಳುವುದಿಲ್ಲವೋ ಮತ್ತು ಎಲ್ಲಿಯವರೆಗೆ ಆ ಬಕ ರಾಕ್ಷಸನು ವಿವಿಧ ಭೋಜ್ಯಗಳಿಂದಲೂ, ಅನ್ನಗಳಿಂದಲೂ, ಸೂಪಗಳಿಂದಲೂ ತುಂಬಿದ ಈ ಮನೋಹರವಾದ ಬಂಡಿಯನ್ನು ನೋಡುವುದಿಲ್ಲವೋ, ಅಷ್ಟರವರೆಗೆ ನಾನು ಎಲ್ಲವನ್ನೂ ತಿಂದು ಬಿಡುವೆನು. ಪುನಃ ಇಂತಹ ಅನ್ನವು ದೊರೆಯುವುದು ದುರ್ಲಭ. ನಾನು ರಾಕ್ಷಸನ ಜೊತೆಯಲ್ಲಿ ಹಾಗೆಯೇ ಯುದ್ಧವನ್ನು ಮಾಡಿದರೆ, ಎಲ್ಲವೂ ಚೆಲ್ಲಾಪಿಲ್ಲಿಯಾಗುತ್ತವೆ.

ಅಭೋಜ್ಯಂ ಚ ಶವಂ ಸ್ಪೃಷ್ಟ್ವಾ ನಿಗೃಹೀತೇ ಬಕೇ ಭವೇತ್ ।
ಸ ತ್ವೇವಂ ಭೀಮಕರ್ಮಾ ತು ಭೀಮಸೇನೋಽಭಿಲಕ್ಷ್ಯ ಚ ।
ಉಪವಿಷ್ಟಃ ಶನೈರನ್ನಂ ಭುಂಕ್ತೇ ಸ್ಮ ಪರಮಂ ವರಮ್ ॥೫೨॥

ನಾನು ಬಕನನ್ನು ನಿಗ್ರಹಿಸಿದರೆ, ಆಗ ಶವವನ್ನು ಮುಟ್ಟಿದ ಮೇಲೆ ಎಲ್ಲವೂ ಅಭೋಜ್ಯವಾಗುತ್ತದೆ. ಭೀಮಕರ್ಮನಾದ ಭೀಮಸೇನನು ಹೀಗೆ ಆಲೋಚಿಸಿ ಕುಳಿತುಕೊಂಡು ನಿಧಾನವಾಗಿ ಆ ಶ್ರೇಷ್ಠವಾದ ಅನ್ನವನ್ನು ತಿನ್ನಲು ಪ್ರಾರಂಭಿಸಿದನು.

ತಂ ತತಃ ಸರ್ವತೋಽಪಶ್ಯನ್ ದ್ರುಮಾನಾರುಹ್ಯ ನಾಗರಾಃ ।
ನಾರಕ್ಷ್ಯೋ ಬಲಿಮಶ್ನೀಯಾದೇವಂ ಬಹು ಚ ಮಾನವಾಃ ।
ಭುಂಕ್ತೇ ಬ್ರಾಹ್ಮಣರೂಪೇಣ ಬಕೋಽಯಮಿತಿ ಚಾಬ್ರುವನ್ ॥೫೩॥

ನಗರವಾಸಿಗಳು ಸುತ್ತಲೂ ಮರಗಳನ್ನೇರಿ ಭೀಮಸೇನನನ್ನು ನೋಡಿದರು. ಆ ಮನುಷ್ಯರೆಲ್ಲರೂ ರಾಕ್ಷಸನಲ್ಲದವನು ಹೀಗೆ ಆಹಾರವನ್ನು ತಿನ್ನಲು ಸಾಧ್ಯವಿಲ್ಲ. ಬಕನೇ ಬ್ರಾಹ್ಮಣರೂಪದಿಂದ ತಿನ್ನುತ್ತಿದ್ದಾನೆ ಎಂದು ಮಾತನಾಡಿಕೊಂಡರು.

ಸ ತಂ ಹಸತಿ ತೇಜಸ್ವೀ ತದನ್ನಮುಪಯೋಜಯನ್ ।
ಆಸಾದ್ಯ ಚ ವನಂ ತಸ್ಯ ರಕ್ಷಸಃ ಪಾಂಡವೋ ಬಲೀ ।
ಆಜುಹಾವ ತತೋ ನಾಮ್ನಾ ತದನ್ನಮುಪಯೋಜಯನ್ ॥೫೪॥

ಬಲಿಷ್ಠನೂ, ತೇಜಸ್ವಿಯೂ ಆದ ಪಾಂಡವನು ಆ ರಾಕ್ಷಸನ ಕಾಡನ್ನು ತಲುಪಿ, ಅವನನ್ನು ಹಾಸ್ಯ ಮಾಡುತ್ತಾ, ಆ ಅನ್ನವನ್ನು ತಿನ್ನುತ್ತಾ, ಹೆಸರನ್ನು ಹಿಡಿದು ಬಕನನ್ನು ಕರೆದನು.

ತತಃ ಸ ರಾಕ್ಷಸಃ ಶ್ರುತ್ವಾ ಭೀಮಸೇನಸ್ಯ ತದ್ವಚಃ ।
ಆಜಗಾಮ ಸುಸಂಕ್ರುದ್ಧೋ ಯತ್ರ ಭೀಮೋ ವ್ಯವಸ್ಥಿತಃ ।
ಮಹಾಕಾಯೋ ಮಹಾವೇಗೋ ದಾರಯನ್ನಿವ ಮೇದಿನೀಮ್ ॥೫೫॥

ಆಗ ಆ ಮಹಾಕಾಯನೂ, ಮಹಾವೇಗವುಳ್ಳವನೂ ಆದ ಆ ರಾಕ್ಷಸನು ಭೀಮಸೇನನ ಮಾತನ್ನು ಕೇಳಿ ಭೀಮಸೇನನು ಇದ್ದ ಕಡೆಗೆ ಭೂಮಿಯನ್ನು ಸೀಳುವವನಂತೆ ನಡೆದುಕೊಂಡು ಬಂದನು.

ತ್ರಿಶಿಖಾಂ ಭ್ರುಕುಟಿಂ ಕೃತ್ವಾ ಸಂದಶ್ಯ ದಶನಚ್ಛದಮ್ ।
ಭುಂಜಾನಮನ್ನಂ ತಂ ದೃಷ್ಟ್ವಾ ಭೀಮಸೇನಂ ಸ ರಾಕ್ಷಸಃ ।
ವಿವೃತ್ಯ ನೇತ್ರೇ ಸಂಕ್ರುದ್ಧ ಇದಂ ವಚನಮಬ್ರವೀತ್ ॥೫೬॥

ಆ ರಾಕ್ಷಸನು ತನ್ನ ಹುಬ್ಬುಗಳನ್ನು ಗಂಟಿಕ್ಕಿ, ಹಲ್ಲುಗಳನ್ನು ಕಡಿದು, ಕಣ್ಣುಗಳನ್ನು ಅರಳಿಸಿ, ಮಹಾಕೋಪದಿಂದ ಕೂಡಿದವನಾಗಿ ಅನ್ನವನ್ನು ತಿನ್ನುತ್ತಿದ್ದ ಭೀಮಸೇನನನ್ನು ಕುರಿತು ಈ ಮಾತನ್ನಾಡಿದನು.

ಕೋऽಯಮನ್ನಮಿದಂ ಭುಂಕ್ತೇ ಮದರ್ಥಂ ಸಮುಪಾಹೃತಮ್ ।
ಪಶ್ಯತೋ ಮಮ ದುರ್ಬುದ್ಧಿರ್ಯಿಯಾಸುರ್ಯಮಸಾದನಮ್ ॥೫೭॥

ದುರ್ಬುದ್ಧಿಯೂ, ಯಮಪಟ್ಟಣಕ್ಕೆ ಹೋಗಲು ಅಪೇಕ್ಷೆಯುಳ್ಳವನೂ ಆದ ಯಾವನು ನನ್ನ ಕಣ್ಣೆದುರಿಗೆ, ನನಗಾಗಿ ತಂದ ಈ ಅನ್ನವನ್ನು ತಿನ್ನುತ್ತಿದ್ದಾನೆ?

ವೈಶಂಪಾಯನಃ

ಭೀಮಸೇನಸ್ತು ತಚ್ಛ್ರುತ್ವಾ ಪ್ರಹಸನ್ನಿವ ಭಾರತ ।
ರಾಕ್ಷಸಂ ತಮನಾದೃತ್ಯ ಭುಂಕ್ತ ಏವ ಪರಾಙ್ಮುಖಃ ॥೫೮॥

ಭಾರತನೇ, ಭೀಮಸೇನನು ಅದನ್ನು ಕೇಳಿ ಆ ರಾಕ್ಷಸನನ್ನು ಗಣನೆಗೇ ತಂದುಕೊಳ್ಳದೆ ಅವನ ಕಡೆಗೆ ಬೆನ್ನು ಮಾಡಿ ತಿನ್ನುವುದನ್ನು ಮುಂದುವರಿಸಿದನು.

ತತಃ ಸ ಭೈರವಂ ಕೃತ್ವಾ ಸಮುದ್ಯಮ್ಯ ಕರಾವುಭೌ ।
ಅಭ್ಯದ್ರವದ್ ಭೀಮಸೇನಂ ಜಿಘಾಂಸುಃ ಪುರುಷಾದಕಃ ॥೫೯॥

ಆಗ ಆ ನರಭಕ್ಷಕನು ಭೈರವನಾದವನ್ನು ಮಾಡಿ ಎರಡೂ ಕೈಗಳನ್ನು ಎತ್ತಿ ಹೊಡೆಯಲು ಅಪೇಕ್ಷಿಸಿ ಭೀಮಸೇನನ ಕಡೆಗೆ ಓಡಿ ಬಂದನು.

ತಥಾऽಪಿ ಪರಿಭೂಯೈನಂ ನೇಕ್ಷಮಾಣೋ ವೃಕೋದರಃ ।
ರಾಕ್ಷಸಂ ಭುಂಕ್ತ ಏವಾನ್ನಂ ಪಾಂಡವಃ ಪರವೀರಹಾ ॥೬೦॥

ಆದರೂ ಸಹ ಪರವೀರನಾಶಕನಾದ ಪಾಂಡುಪುತ್ರನಾದ ಭೀಮಸೇನನು ಅವನನ್ನು ಲೆಕ್ಕಿಸದೆ, ಆ ರಾಕ್ಷಸನ ಕಡೆಗೆ ತಿರುಗಿ ನೋಡದೆ, ತನ್ನ ಊಟವನ್ನು ಮುಂದುವರೆಸಿದನು.

ಅಮರ್ಷೇಣ ತು ಸಂಪೂರ್ಣಃ ಕುಂತೀಪುತ್ರಸ್ಯ ರಾಕ್ಷಸಃ ।
ಜಘಾನ ಪೃಷ್ಠೇ ಪಾಣಿಭ್ಯಾಮುಭಾಭ್ಯಾಂ ಪೃಷ್ಠತಃ ಸ್ಥಿತಃ ॥೬೧॥

ಕ್ರೋಧದಿಂದ ಪೂರ್ಣನಾದ ರಾಕ್ಷಸನು ಹಿಂದೆ ನಿಂತು ತನ್ನ ಎರಡೂ ಕೈಗಳಿಂದ ಭೀಮಸೇನನ ಬೆನ್ನಿನ ಮೇಲೆ ಬಲವಾಗಿ ಹೊಡೆದನು.

ತಥಾ ಬಲವತಾ ಭೀಮಃ ಪಾಣಿಭ್ಯಾಂ ಭೃಶಮಾಹತಃ ।
ನೈವಾವಲೋಕಯಾಮಾಸ ಭುಂಕ್ತ ಏವ ಪರಾಙ್ಮುಖಃ ॥೬೨॥

ಆ ಬಲಿಷ್ಠನಾದ ರಾಕ್ಷಸನು ಎರಡೂ ಕೈಗಳಿಂದ ಜೋರಾಗಿ ಹೊಡೆದರೂ, ಭೀಮನು ಅವನನ್ನು ನೋಡದೆ, ಅವನ ಕಡೆಗೆ ಬೆನ್ನು ಮಾಡಿ ತಿನ್ನುತ್ತಲೇ ಇದ್ದನು.

ತತಃ ಸ ಭೂಯಃ ಸಂಕ್ರುದ್ಧೋ ವೃಕ್ಷಮಾದಾಯ ರಾಕ್ಷಸಃ ।
ತಾಡಯಿಷ್ಯಂಸ್ತದಾ ಭೀಮಂ ಪುನರಭ್ಯದ್ರವದ್ ಬಲೀ ॥೬೩॥

ಆಗ ಇನ್ನೂ ಸಿಟ್ಟಿಗೆದ್ದ ಆ ರಾಕ್ಷಸನು ಭೀಮಸೇನನನ್ನು ಹೊಡೆಯಲು ಬಯಸಿ, ಒಂದು ಮರವನ್ನು ಎತ್ತಿಕೊಂಡು ಭೀಮಸೇನನ ಕಡೆಗೆ ಓಡಿ ಬಂದನು.

ನ್ಯಸ್ತಂ ಕ್ರುದ್ಧೇನ ತಂ ವೃಕ್ಷಂ ಪ್ರತಿಜಗ್ರಾಹ ವೀರ್ಯವಾನ್ ।
ಸವ್ಯೇನ ಪಾಣಿನಾ ಭೀಮೋ ದಕ್ಷಿಣೇನಾಪಿ ಭುಕ್ತವಾನ್ ॥೬೪॥

ಪರಾಕ್ರಮಶಾಲಿಯಾದ ಭೀಮಸೇನನು ರಾಕ್ಷಸನು ತನ್ನ ಬಳಿ ಇಟ್ಟ ವೃಕ್ಷವನ್ನು ಎಡಗೈಯಲ್ಲಿ ಹಿಡಿದುಕೊಂಡು ಬಲಗೈಯಿಂದ ಊಟವನ್ನು ಮಾಡುತ್ತಲೇ ಇದ್ದನು.

ತತೋ ಭೀಮಃ ಶನೈರ್ಭುಕ್ತ್ವಾ ತದನ್ನಂ ಪುರಷರ್ಷಭ ।
ವಾರ್ಯುಪಸ್ಪೃಶ್ಯ ಸಂಹೃಷ್ಟಃ ತಸ್ಥೌ ಗಿರಿರಿವಾಚಲಃ ॥೬೫॥

ಪುರುಷರ್ಷಭನೇ ಅನಂತರ ಭೀಮನು ನಿಧಾನವಾಗಿ ಊಟ ಮಾಡಿ ಕೈ ತೊಳೆದು ಸಂತೋಷದಿಂದ ಅಲುಗಾಡದ ಪರ್ವತದಂತೆ ಎದ್ದು ನಿಂತನು.

ಭುಜವೇಗಂ ತಥಾऽऽಸ್ಫೋಟಂ ಕ್ಷ್ವೇಲಿತಂ ಚ ಮಹಾಸ್ವನಮ್ ।
ಕೃತ್ವಾऽऽಹ್ವಯತ ಸಂಕ್ರುದ್ಧೋ ಭೀಮಸೇನೋऽಥ ರಾಕ್ಷಸಮ್ ॥೬೬॥

ಅನಂತರ ಭೀಮಸೇನನು ಭುಜವೇಗವನ್ನು ಅಭ್ಯಾಸ ಮಾಡಿ ಭುಜಗಳಿಂದಲೂ ಕೈಗಳಿಂದಲೂ ಆಸ್ಫೋಟಶಬ್ದವನ್ನು ಮಾಡಿ ಮಹಾಸ್ವನವುಳ್ಳ ಸಿಂಹನಾದವನ್ನು ಮಾಡಿ ಕೋಪದಿಂದ ರಾಕ್ಷಸನನ್ನು ಕರೆದನು.

ಭೀಮಸೇನಃ

ಬಹುಕಾಲಂ ಸುಪುಷ್ಟಂ ತೇ ಶರೀರಂ ರಾಕ್ಷಸಾಧಮ ।
ಮದ್ಬಾಹುಬಲಮಾಶ್ರಿತ್ಯ ನ ತ್ವಂ ಭೂಯೋ ಭವಿಷ್ಯಸಿ ॥೬೭॥

ರಾಕ್ಷಸಾಧಮನೇ, ಬಹುಕಾಲದಿಂದ ನಿನ್ನ ಶರೀರವು ಚೆನ್ನಾಗಿ ಕೊಬ್ಬಿದೆ. ನನ್ನ ಬಾಹುಬಲಕ್ಕೆ ವಶನಾದ ನೀನು ಇನ್ನು ಉಳಿಯುವುದಿಲ್ಲ.

ಅದ್ಯಪ್ರಭೃತಿ ಸ್ವಪ್ಸ್ಯಂತಿ ವೈತ್ರಕೀಯನಿವಾಸಿನಃ ।
ನಿರುದ್ವಿಗ್ನಾಃ ಪುರಸ್ಯಾಸ್ಯ ಕಂಟಕೇ ಸೂದ್ಧೃತೇ ಮಯಾ ॥೬೮॥

ನಾನು ಏಕಚಕ್ರನಗರಕ್ಕೆ ಕಂಟಕಪ್ರಾಯನಾದ ನಿನ್ನನ್ನು ಕಿತ್ತೊಗೆದ ಮೇಲೆ ಇಂದಿನಿಂದ ಏಕಚಕ್ರನಗರವಾಸಿಗಳು ಉದ್ವೇಗವಿಲ್ಲದೆ ಮಲಗಿ ನಿದ್ರೆ ಮಾಡುತ್ತಾರೆ.

ಅದ್ಯ ಯುದ್ಧೇ ಶರೀರಂ ತೇ ಕಂಕ ಗೋಮಾಯುವಾಯಸಾಃ ।
ಮಯಾ ಹತಸ್ಯ ಖಾದಂತು ವಿಕುರ್ವಂತು ಚ ಭೂತಳೇ ॥೬೯॥

ಈ ದಿನ ನನ್ನಿಂದ ಯುದ್ಧದಲ್ಲಿ ಹತನಾದ ನಿನ್ನ ಶರೀರವನ್ನು ಕಂಕಗಳು, ನರಿಗಳು ಮತ್ತು ಕಾಗೆಗಳು ತಿನ್ನುತ್ತಾ ಭೂಮಿಯ ಮೇಲೆ ಎಳೆದಾಡಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ಬಕವಧಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಪೀತ್ವಾ ಪಯೋ ತ್ವರಿತ ಏನಮವೀಕ್ಷಮಾಣ
ಆಚಮ್ಯ ತೇನ ಯುಯುಧೇ ಗುರುವೃಕ್ಷಶೈಲೈಃ ।
ತೇನಾಹತೋऽಥ ಬಹುಭಿರ್ಗಿರಿಭಿರ್ಬಲೇನ
ಜಗ್ರಾಹ ಚೈನಮಥ ಭೂಮಿತಳೇ ಪಿಪೇಷ ॥೯೦॥

ಭೀಮ ರಾಕ್ಷಸನನ್ನು ನೋಡದೆ ಸಾವಧಾನವಾಗಿಯೆ ಹಾಲನ್ನು ಕುಡಿದು ಹಸ್ತ ಪ್ರಕ್ಷಾಲನಾದಿಗಳನ್ನೂ ಮಾಡಿ ಆಚಮನ ಮಾಡಿ ರಾಕ್ಷಸನೊಂದಿಗೆ ಯುದ್ಧ ಮಾಡಿದ. ಬಲಿಷ್ಠವಾದ ಮರ-ಬೆಟ್ಟಗಳಿಂದ ಹೊಡೆಯಲ್ಪಟ್ಟ ಬಕನು ಭೀಮನ ಬಲದಿಂದ ಹಿಡಿಯಲ್ಪಟ್ಟ. ಕೂಡಲೇ ಭೀಮನು ಭೂತಲದಲಿ ಹಾಕಿ ಬಕನನ್ನು ಬಡಿದ.

ಆಕ್ರಮ್ಯ ಪಾದಮಪಿ ಪಾದತಳೇನ ತಸ್ಯ
ದೋರ್ಭ್ಯಾಂ ಪ್ರಗೃಹ್ಯ ಚ ಪರಂ ವಿದದಾರ ಭೀಮಃ ।
ಮೃತ್ವಾ ಸ ಚೋರು ತಮ ಏವ ಜಗಾಮ ಪಾಪೋ
ವಿಷ್ಣುರ್ದ್ವಿಡೇವ ಹಿ ಶನೈರನಿವೃತ್ತಿ ಚೋಗ್ರಂ ॥೯೧॥

ಭೀಮ ಬಕರಾಕ್ಷಸನ ಒಂದು ಕಾಲನ್ನು ತನ್ನ ಕಾಲಿಂದ ಒತ್ತಿಹಿಡಿದು ಮತ್ತೊಂದು ಕಾಲನ್ನು ಎರಡು ಕೈಗಳಿಂದ ಹಿಡಿದು ಕುತ್ತಿಗೆವರೆಗೆ ಸೀಳಿದ. ಕೇವಲ ವಿಷ್ಣುದ್ವೇಷಿಯೆ ಆದ ಆ ಪಾಪಿ ಸತ್ತು ಕ್ರಮವಾಗಿ ಪುನರಾವೃತ್ತಿ ರಹಿತವಾದ ಘೋರವಾದ ಮಹಾತಮಸ್ಸನ್ನು ಹೊಂದಿದ.

ಹತ್ವಾ ತಮಕ್ಷತಬಲೋ ಜಗದಂತಕಂ ಸ
ಯೋ ರಾಕ್ಷಸೋ ನ ವಶ ಆಸ ಜರಾಸುತಸ್ಯ ।
ಭೌಮಸ್ಯ ಪೂರ್ವಮಪಿ ನೋ ಭರತಸ್ಯ ರಾಜ್ಞೋ
ಭೀಮೋ ನ್ಯಧಾಪಯದಮುಷ್ಯ ಶರೀರಮಗ್ರೇ ॥೯೨॥

ಬಕರಾಕ್ಷಸ ಜರಾಸಂಧನಿಗೂ ಮಣಿಯಲಿಲ್ಲ, ನರಕಾಸುರನಿಗೂ ವಶನಾಗಲಿಲ್ಲ, ಭರತರಾಜನಿಗೂ ವಶನಾಗಲಿಲ್ಲ, ಅಂಥ ಲೋಕಕಂಟಕನಾದ ಬಕನನ್ನು ಅಕ್ಷಯ ಬಲಶಾಲಿ ಭೀಮ ಕೊಂದು ಅವನ ಶರೀರವನ್ನು ಏಕಚಕ್ರನಗರದ ಮುಂಭಾಗದಲ್ಲಿ ಇರಿಸಿದ.

ದ್ವಾರ್ಯೇವ ತತ್ ಪ್ರತಿ ನಿಧಾಯ ಪುನಃ ಸ ಭೀಮಃ ।
ಸ್ನಾತ್ವಾ ಜಗಾಮ ನಿಜಸೋದರಪಾರ್ಶ್ವಮೇವ ।
ಶ್ರುತ್ವಾಸ್ಯ ಕರ್ಮ ಪರಮಂ ತುತುಷುಃ ಸಮೇತಾ
ಮಾತ್ರಾ ಚ ತೇ ತದನು ವವ್ರೈರತಃ ಪುರಸ್ಥಾಃ ॥೯೩॥

ದೃಷ್ಟ್ವೈವ ರಾಕ್ಷಸಶರೀರಮುರು ಪ್ರಭೀತಾ
ಜ್ಞಾತ್ವೈವ ಹೇತುಭಿರಥ ಕ್ರಮಶೋ ಮೃತಂ ಚ ।
ವಿಪ್ರಸ್ಯ ತಸ್ಯ ವಚನಾದಪಿ ಭೀಮಸೇನ-
ಭಗ್ನಂ ನಿಶಮ್ಯ ಪರಮಂ ತುತುಷುಶ್ಚ ತಸ್ಮೈ ॥೯೪॥

ಭೀಮಸೇನ ಬಕನ ಶವವನ್ನು ನಗರದ್ವಾರದಲ್ಲಿ ನಿಲ್ಲಿಸಿ ಸ್ನಾನಮಾಡಿ ಸೋದರರ ಬಳಿಗೆ ನಡೆದ. ಅವನು ಮಾಡಿದ ಮಹಾಕಾರ್ಯವನ್ನು ಕೇಳಿ ಅವರೂ ತಾಯಿಯೂ ಬಹಳ ಸಂತೋಷಗೊಂಡರು. ಬಕನ ಬಗ್ಗೆ ಮೊದಲೇ ಭಯಯುಕ್ತರಾಗಿದ್ದ ಪಟ್ಟಣಿಗರು ಅವನ ಶವವನ್ನು ಕಂಡು ಇನ್ನೂ ಭಯಗ್ರಸ್ತರಾದರು. ಕಲ್ಲಿಂದ ಹೊಡೆಯುವುದು

ಮುಂತಾದವುಗಳ ಮೂಲಕ ಶವಲಕ್ಷಣಗಳಿಂದ ಕ್ರಮವಾಗಿ ಶವವೆಂದು ನಿರ್ಧರಿಸಿ ಕೊನೆಗೆ ಬ್ರಾಹ್ಮಣನ ಮಾತಿನಿಂದ ಬಕ ಭೀಮನಿಂದ ಹತನಾಗಿರುವನೆಂದೂ ತಿಳಿದು ನಿರ್ಭೀತರಾಗಿ ಭೀಮನ ಬಗ್ಗೆ ಬಹಳ ಸಂತುಷ್ಟರಾದರು.

ಅನ್ನಾತ್ಮಕಂ ಕರಮಮುಷ್ಯ ಚ ಸಂಪ್ರಚಕ್ರುಃ
ಸೋಽಪ್ಯೇತಮಾಶು ನರಸಿಂಹವಪುರ್ಧರಸ್ಯ ।
ಚಕ್ರೇ ಹರೇಸ್ತದನು ಸತ್ಯವತೀಸುತಸ್ಯ
ವಿಷ್ಣೋರ್ಹಿ ವಾಕ್ ಪ್ರಚುದಿತಾಃ ಪ್ರಯಯುಸ್ತತಶ್ಚ ॥೯೫॥

ಪಟ್ಟಣಿಗರು ಅನ್ನದ ರೂಪದಲ್ಲಿ ಕಪ್ಪವನ್ನು ಭೀಮನಿಗೇ ನೀಡಿದರು. ಭೀಮ ಅದನ್ನು ನರಸಿಂಹರೂಪಧರನಾದ ಹರಿಗೆ ಅರ್ಪಿಸಿದ. ಬಳಿಕ ವೇದವ್ಯಾಸರೂಪನಾದ ಹರಿಯ ಆಜ್ಞೆಯಿಂದ ಪ್ರೇರಿತರಾಗಿ ಪಾಂಡವರು ನಗರದಿಂದ ಮುಂದೆ ನಡೆದರು.

★ ★ ★ ★

ನೂರ ಐರವತ್ತಾರನೆಯ ಅಧ್ಯಾಯ

(ಭೀಮ ಬಕರ ಯುದ್ಧ ಮತ್ತು ಬಕವಧೆ)

ವೈಶಂಪಾಯನಃ

ಏವಮುಕ್ತ್ವಾ ತು ಸಂಕ್ರುದ್ಧಃ ಪಾಥೋ೯ ಬಕಜಿಘಾಂಸಯಾ ।
ಉಪಾಧಾವದ್ ಬಕಶ್ಚಾಪಿ ಪಾರ್ಥಂ ಪಾರ್ಥಿವಸತ್ತಮ ॥೧॥

ಎಲೈ ರಾಜಶ್ರೇಷ್ಠನೇ, ಭೀಮಸೇನನು ಹೀಗೆ ಮಾತನಾಡಿ ಬಕನನ್ನು ಕೊಲ್ಲುವ ಅಪೇಕ್ಷೆಯಿಂದ ಬಕನ ಕಡೆಗೆ ಧಾವಿಸಿದನು. ಬಕನೂ ಸಹ ಭೀಮಸೇನನ ಕಡೆಗೆ ಧಾವಿಸಿದನು.

ಮಹಾಕಾಯೋ ಮಹಾವೇಗೋ ದಾರಯನ್ನಿವ ಮೇದಿನೀಮ್ ।
ವಿರೂಪರೂಪಃ ಪಿಂಗಾಕ್ಷೋ ಭೀಮಸೇನಮಭಿದ್ರವತ್ ॥೨॥

ಮಹಾಕಾಯನೂ, ಮಹಾವೇಗವುಳ್ಳವನೂ, ಕೆಂಪುಕಣ್ಣುಳ್ಳವನೂ, ವಿಕೃತರೂಪವುಳ್ಳವನೂ, ಆದ ಬಕನು ಭೂಮಿಯನ್ನು ಸೀಳುವಂತೆ ಭೀಮಸೇನನ ಕಡೆಗೆ ಓಡಿಬಂದನು.

ತ್ರಿಶಿಖಾಂ ಭ್ರುಕುಟೀಂ ಕೃತ್ವಾ ದಷ್ಟ್ವಾ ಚ ದಶನಚ್ಛದಮ್ ।
ತತಃ ಸ ಭೂಯಃ ಸಂಕ್ರುದ್ಧೋ ವೃಕ್ಷಮಾದಾಯ ರಾಕ್ಷಸಃ ।
ತಾಡಯಿಷ್ಯಂಸ್ತದಾ ಭೀಮಂ ತರಸಾऽಭ್ಯದ್ರವದ್ ಬಲೀ ॥೩॥

ತನ್ನ ಹುಬ್ಬುಗಳನ್ನು ಗಂಟಿಕ್ಕಿ ತುಟಿಯನ್ನು ಕಚ್ಚಿ ಆ ರಾಕ್ಷಸನು ತುಂಬಾ ಕೋಪದಿಂದ ಭೀಮಸೇನನನ್ನು ಹೊಡೆಯಲು ಪುನಃ ಇನ್ನೊಂದು ಮರವನ್ನು ಎತ್ತಿಕೊಂಡು ಭೀಮಸೇನನ ಕಡೆಗೆ ಓಡಿಬಂದನು.

ಕ್ಷಿಪ್ತಂ ಕ್ರುದ್ಧೇನ ತಂ ವೃಕ್ಷಂ ಪ್ರತಿಜಗ್ರಾಹ ವೀರ್ಯವಾನ್ ।
ಸವ್ಯೇನ ಪಾಣಿನಾ ಭೀಮಃ ಪ್ರಹಸನ್ನಿವ ಭಾರತ ॥೪॥

ಭಾರತನೇ, ಕ್ರುದ್ಧನಾದ ರಾಕ್ಷಸನು ಎಸೆದ ಆ ವೃಕ್ಷವನ್ನು ವೀರ್ಯವಂತನಾದ ಭೀಮನು ಅವನನ್ನು ಅಪಹಾಸ ಮಾಡುವಂತೆ ತನ್ನ ಎಡಗೈಯಿಂದ ಹಿಡಿದನು.

ತತಃ ಸ ಪುನರುದ್ಯಮ್ಯ ವೃಕ್ಷಾನ್ ಬಹುವಿಧಾನ್ ಬಲೀ ।
ಪ್ರಾಹಿಣೋದ್ ಭೀಮಸೇನಾಯ ತಸ್ಮೈ ತಾಂಶ್ಚೈವ ಪಾಂಡವ ॥೫॥

ಅನಂತರ ಆ ಬಲಿಷ್ಠನಾದ ರಾಕ್ಷಸನು ಅನೇಕ ವಿಧವಾದ ಮರಗಳನ್ನು ಕಿತ್ತು ಭೀಮನ ಮೇಲೆ ಎಸೆದನು. ಪಾಂಡುವಂಶದಲ್ಲಿ ಜನಿಸಿದ ಜನಮೇಜಯನೇ, ಭೀಮಸೇನನೂ ಅವುಗಳನ್ನು ತನ್ನ ಕೈಯಲ್ಲಿ ಹಿಡಿದು ಬಕನ ಮೇಲೆ ಎಸೆದನು.

ತದ್ವೃಕ್ಷ ಯುದ್ಧಮಭವನ್ಮಹೀರುಹವಿನಾಶನಮ್ ।
ಸುಘೋರಂ ವೈ ಮಹಾರಾಜ ಬಕಪಾಂಡವಯೋಸ್ತದಾ ॥೬॥

ಮಹಾರಾಜನೇ, ಆಗ ಭೀಮಸೇನನಿಗೂ ಮತ್ತು ಬಕನಿಗೂ ಅಲ್ಲಿದ್ದ ವೃಕ್ಷಗಳನ್ನೆಲ್ಲಾ ನಾಶಮಾಡುವಂತಹ ಘೋರವಾದ ವೃಕ್ಷಯುದ್ಧವಾಯಿತು.

ನಾಮ ವಿಶ್ರಾವ್ಯ ತು ಬಕಃ ಸಮಭಿದ್ರುತ್ಯ ಪಾಂಡವಮ್ ।
ಭುಜಾಭ್ಯಾಂ ಪರಿಜಗ್ರಾಹ ಭೀಮಸೇನಂ ಮಹಾಬಲಮ್ ॥೭॥

ಆಗ ಬಕನು ತನ್ನ ಹೆಸರನ್ನು ಗಟ್ಟಿಯಾಗಿ ಹೇಳುತ್ತಾ ಓಡಿಬಂದು ಮಹಾಬಲನಾದ ಭೀಮಸೇನನನ್ನು ತನ್ನ ಭುಜಗಳಿಂದ ಹಿಡಿದನು.

ಭೀಮಸೇನೋಽಪಿ ತದ್ರಕ್ಷಃ ಪರಿಗೃಹ್ಯ ಮಹಾಭುಜಃ ।
ವಿಸ್ಫುರಂತಂ ಮಹಾವೇಗಂ ವಿಚಕರ್ಷ ಬಲಾದ್ ಬಲೀ ॥೮॥

ಮಹಾಭುಜನಾದ ಭೀಮಸೇನನೂ ತನ್ನ ಬಲದಿಂದ ಆ ರಾಕ್ಷಸನನ್ನು ಹಿಡಿದು ಬಿಡಿಸಿಕೊಳ್ಳಲು ಒದ್ದಾಡುತ್ತಿದ್ದ ಮಹಾವೇಗವುಳ್ಳ ಆ ರಾಕ್ಷಸನನ್ನು ಭೂಮಿಯ ಮೇಲೆ ಎಳೆದನು.

ಸ ಕೃಷ್ಯಮಾಣೋ ಭೀಮೇನ ಕರ್ಷಮಾಣಶ್ಚ ಪಾಂಡವಮ್ ।
ಸಮಯುಧ್ಯತ ತೀವ್ರೇಣ ಕ್ಲಮೇನ ಪುರುಷಾದಕಃ ।
ತಯೋರ್ವೇಗೇನ ಮಹತಾ ಪೃಥಿವೀ ಸಮಕಂಪತ ॥೯॥

ಆ ರಾಕ್ಷಸನು ಭೀಮನಿಂದ ಎಳೆದಾಡಲ್ಪಟ್ಟು, ಭೀಮನನ್ನೂ ಎಳೆದಾಡುತ್ತಾ ಬಹಳ ಶ್ರಮದಿಂದ ಯುದ್ಧ ಮಾಡಿದನು. ಅವರ ಮಹಾವೇಗಕ್ಕೆ ಭೂಮಿಯು ನಡುಗಿತು.

ಪಾದಪಾಂಶ್ಚ ಮಹಾಕಾಯಾಂಶ್ಚೂರ್ಣಯಾಮಾಸತುಸ್ತದಾ ।
ಜಗ್ರಾಹ ಭೀಮಃ ಪಾಣಿಭ್ಯಾಂ ಗೃಹೀತ್ವಾ ಚೈನಮಾಕ್ಷಿಪತ್ ॥೧೦॥

ಅವರಿಬ್ಬರೂ ದೊಡ್ಡ ದೊಡ್ಡ ಮರಗಳನ್ನು ಮುರಿದು ಪುಡಿ ಮಾಡಿದರು. ಭೀಮನು ತನ್ನ ಎರಡೂ ಕೈಗಳಿಂದ ರಾಕ್ಷಸನನ್ನು ಹಿಡಿದು ಎಸೆದನು.

ಆಕ್ಷಿಪ್ತೋ ಭೀಮಸೇನೇನ ಪುನರೇವೋತ್ಥಿತೋ ಹಸನ್ ।
ಆಲಿಂಗ್ಯಾವಿಧ್ಯ ಚೈವೈನಂ ನ್ಯಹನದ್ ವಸುಧಾತಳೇ ॥೧೧॥

ಭೀಮನಿಂದ ಎಸೆಯಲ್ಪಟ್ಟ ರಾಕ್ಷಸನು ಪುನಃ ಎದ್ದುನಿಂತು ನಗುತ್ತಾ ಭೀಮಸೇನನನ್ನು ಆಲಿಂಗಿಸಿ ಭೂಮಿಯ ಮೇಲೆ ಅವನನ್ನು ಹೊಡೆದನು.

ಭೀಮೋ ವ್ಯಸರ್ಜಯಚ್ಚೈನಂ ಸಮಾಶ್ವಾಸಿಹಿ ಚೇತ್ಯಪಿ ।
ಆಸ್ಫೋಟಯಾಮಾಸ ಬಲೀ ಉತ್ತಿಷ್ಠಸ್ವೇತಿ ಚಾಬ್ರವೀತ್ ॥೧೨॥

ಭೀಮನು ಅವನನ್ನು ಸುಧಾರಿಸಿಕೋ ಎಂದು ಹೇಳಿ ಸ್ವಲ್ಪ ಸಮಯ ಬಿಟ್ಟು ತನ್ನ ಭುಜಗಳನ್ನು ತಟ್ಟಿ ಎದ್ದೇಳು ಎಂದು ಹೇಳಿದನು.

ಸಮುತ್ಪತ್ಯ ತತಃ ಕ್ರುದ್ಧೋ ರೂಪಂ ಕೃತ್ವಾ ಮಹತ್ತರಮ್ ।
ವಿರೂಪಃ ಸಹಸಾ ತಸ್ಥೌ ತರ್ಜಯಿತ್ವಾ ವೃಕೋದರಮ್ ॥೧೩॥

ಆ ಕ್ರುದ್ಧನಾದ ರಾಕ್ಷಸನು ಭಯಂಕರವಾದ ದೊಡ್ಡ ವಿಕಾರವಾದ ರೂಪವನ್ನು ಮಾಡಿಕೊಂಡು ಹಾರಿ ಬಂದು ಭೀಮನ ಎದುರಿಗೆ ನಿಂತು ಅವನನ್ನು ಹೆದರಿಸಿದನು.

ಅಹಸದ್ ಭೀಮಸೇನೋಽಥ ರಾಕ್ಷಸಂ ಭೀಮದರ್ಶನಮ್ ।
ಭೀಮಸೇನಸ್ತು ಜಗ್ರಾಹ ಗ್ರೀವಾಯಾಂ ಭೀಮದರ್ಶನಮ್ ।
ಭುಜಾಭ್ಯಾಂ ಜಾನುನೈಕೇನ ಪೃಷ್ಠೇ ಸಮಭಿಪೀಡಯತ್ ॥೧೪॥

ಆಗ ಭೀಮಸೇನನು ಭಯಂಕರವಾಗಿ ಕಾಣುತ್ತಿದ್ದ ಆ ರಾಕ್ಷಸನನ್ನು ನೋಡಿ ಅಪಹಾಸವನ್ನು ಮಾಡಿ ಅವನನ್ನು ಕತ್ತಿನಲ್ಲಿ ಹಿಡಿದುಕೊಂಡು, ತನ್ನ ಮಂಡಿಯನ್ನು ಅವನ ಬೆನ್ನಿನ ಕೆಳಬಾಗದಲ್ಲಿ ಇಟ್ಟು, ತನ್ನ ಭುಜಗಳಿಂದ ಅವನನ್ನು ಪೀಡಿಸಿದನು.

ತತಃ ಕ್ರುದ್ಧೋ ವಿಸೃಜ್ಯೈನಂ ಸ ಭೀಮಸ್ತಸ್ಯ ರಕ್ಷಸಃ ।
ಸ್ವಾಂ ಕಟೀಮೀಷದುತ್ಕ್ಷಿಪ್ಯ ಬಾಹೂ ಚೈವ ಪರಾಮೃಶತ್ ॥೧೫॥

ಅನಂತರ ಕ್ರುದ್ಧನಾದ ಭೀಮನು ಅವನನ್ನು ಬಿಟ್ಟು ತನ್ನ ಸೊಂಟವನ್ನು ಸ್ವಲ್ಪ ಮೇಲಕ್ಕೆತ್ತಿ ಆ ರಾಕ್ಷಸನ ಎರಡು ಬಾಹುಗಳನ್ನು ಹಿಡಿದನು.

ತಸ್ಯ ಬಾಹೂ ಸಮಾದಾಯ ತ್ವರಮಾಣೋ ವೃಕೋದರಃ ।
ಉತ್ಕ್ಷಿಪ್ಯ ಚಾವಧೂಯೈನಂ ಪಾತಯನ್ ಬಲವಾನ್ ಭುವಿ ॥೧೬॥

ತಂ ತು ವಾಮೇನ ಪಾದೇನ ಕ್ರುದ್ಧೋ ಭೀಮಪರಾಕ್ರಮಃ ।
ಉರಸ್ಯೇನಂ ಸಮಾಜಘ್ನೇ ಭೀಮಸ್ತು ಪತಿತಂ ಭುವಿ ॥೧೭॥

ವೇಗಶಾಲಿಯಾದ ಭೀಮನು ಅವನ ಎರಡು ಬಾಹುಗಳನ್ನೂ ಹಿಡಿದು ಅವನನ್ನು ಕೊಡವಿ ಮೇಲಕ್ಕೆಸೆದು ಭೂಮಿಯ ಮೇಲೆ ಬೀಳಿಸಿದನು. ಭೀಮಪರಾಕ್ರಮವುಳ್ಳ

ಕ್ರುದ್ಧನಾದ ಭೀಮನು ಭೂಮಿಯ ಮೇಲೆ ಬಿದ್ದ ಅವನಿಗೆ ತನ್ನ ಎಡಗಾಲಿನಿಂದ ಎದೆಯಲ್ಲಿ ಒದ್ದನು.

ಸ ಸಂಕ್ರುದ್ಧಃ ಸಮುತ್ಪತ್ಯ ಭೀಮಮಪ್ಯಹನದ್ ಭೃಶಮ್ ।
ವ್ಯಾತ್ತಾನನೋ ದೀಪ್ತಜಿಹ್ವೋ ಬಾಹುಮುದ್ಯಮ್ಯ ದಕ್ಷಿಣಮ್ ॥೧೮॥

ತೇನಾಭಿದ್ರುತ್ಯ ಕ್ರುದ್ಧೇನ ಭೀಮೋ ಮೂರ್ಧ್ನಿ ಸಮಾಹತಃ ।
ಮುಷ್ಟಿನಾ ಜಾನುನಾ ಚೈವ ವಾಮೇ ಪಾರ್ಶ್ವೇ ಸಮರ್ಪಿತಃ ॥೧೯॥

ಬಹಳ ಕೋಪಗೊಂಡ ಆ ರಾಕ್ಷಸನು ನೆಗೆದು ಬಾಯಿಯನ್ನು ಅಗಲವಾಗಿ ತೆಗೆದು ನಾಲಿಗೆಯನ್ನು ಚಾಚಿ ಬಲಬಾಹುವನ್ನು ಎತ್ತಿ ಭೀಮನಿಗೆ ಹೊಡೆದನು. ಮತ್ತೆ ಕೋಪದಿಂದ ಓಡಿಬಂದು ಭೀಮನ ತಲೆಗೆ ಹೊಡೆದನು. ತನ್ನ ಮುಷ್ಟಿಯಿಂದ ಮತ್ತು ಮಂಡಿಯಿಂದ ಭೀಮನ ಎಡಪಕ್ಕೆಗಳಿಗೆ ಹೊಡೆದನು.

ಏವಂ ನಿಹನ್ಯಮಾನಃ ಸ ರಾಕ್ಷಸೇನ ಬಲೀಯಸಾ ।
ರೋಷೇಣ ಮಹತಾऽऽವಿಷ್ಟೋ ಭೀಮೋ ಭೀಮಪರಾಕ್ರಮಃ ।
ಸ ಸಂಕ್ರುದ್ಧಃ ಸಮುತ್ಪತ್ಯ ಭೀಮೋ ಜಗ್ರಾಹ ರಾಕ್ಷಸಮ್ ॥೨೦॥

ಹೀಗೆ ಬಲಿಷ್ಠನಾದ ರಾಕ್ಷಸನಿಂದ ಚೆನ್ನಾಗಿ ಹೊಡೆಯಲ್ಪಟ್ಟ ಭೀಮಪರಾಕ್ರಮವುಳ್ಳ ಭೀಮನು ಮಹಾರೋಷದಿಂದ ಕೂಡಿದವನಾಗಿ ಹಾರಿ ಆ ರಾಕ್ಷಸನನ್ನು ಹಿಡಿದನು.

ತಾವನ್ಯೋನ್ಯಂ ಪೀಡಯಂತೌ ಪುರುಷಾದವೃಕೋದರೌ ।
ಮತ್ತಾವಿವ ಮಹಾನಾಗಾವನ್ಯೋನ್ಯಂ ವಿಚಕರ್ಷತುಃ ॥೨೧॥

ಭೀಮಬಕರಿಬ್ಬರೂ ಪರಸ್ಪರವಾಗಿ ಪೀಡಿಸುತ್ತಾ ಮದಿಸಿದ ಮಹಾಗಜಗಳಂತೆ ಒಬ್ಬರನ್ನೊಬ್ಬರು ಎಳೆದಾಡಿದರು.

ಬಾಹುವಿಕ್ಷೇಪಶಬ್ದೈಶ್ಚ ಭೀಮರಾಕ್ಷಸಯೋಸ್ತದಾ ।
ವೇತ್ರಕೀಯಪುರೀ ಸರ್ವಾ ವಿತ್ರಸ್ತಾ ಸಮಪದ್ಯತ ॥೨೨॥

ಆಗ ಭೀಮ ಮತ್ತು ರಾಕ್ಷಸರ ಬಾಹುಗಳ ಶಬ್ದದಿಂದಲೂ ಮತ್ತು ಎಸೆಯುವ ಶಬ್ದಗಳಿಂದಲೂ ಏಕಚಕ್ರನಗರದ ಎಲ್ಲಾ ಜನರೂ ಸಂತ್ರಸ್ತರಾದರು.

ತಯೋರ್ವೇಗೇನ ಮಹತಾ ತತ್ರ ಭೂಮಿರಕಂಪತ ।
ಪಾದಪಾನ್ ವೀರುಧಶ್ಚೈವ ಚೂರ್ಣಯಾಮಾಸತುಶ್ಚ ತೌ ॥೨೩॥

ಅವರ ಮಹಾವೇಗದಿಂದ ಅಲ್ಲಿ ಭೂಮಿಯು ನಡುಗಿತು. ಅವರು ವೃಕ್ಷಗಳನ್ನೂ ಮತ್ತು ಲತೆಗಳನ್ನೂ ಪುಡಿ ಮಾಡಿದರು.

ಸಮಾಗತೌ ಚ ತೌ ವೀರಾವನ್ಯೋನ್ಯವಧಕಾಂಕ್ಷಿಣೌ ।
ಅಶ್ಮಭಿಃ ಪಾದವೇಗೈಶ್ಚ ಚೂರ್ಣಯಾಮಾಸತುಸ್ತದಾ ॥೨೪॥

ಪರಸ್ಪರ ವಧೆಯನ್ನು ಬಯಸಿ ಯುದ್ಧ ಮಾಡಿದ ಅವರಿಬ್ಬರೂ ಕಲ್ಲುಗಳಿಂದಲೂ ಮತ್ತು ತಮ್ಮ ಪಾದದ ವೇಗಗಳಿಂದಲೂ ಎಲ್ಲವನ್ನೂ ಪುಡಿಮಾಡಿದರು.

ಅಥ ತಂ ಲೋಳಯಿತ್ವಾ ತು ಭೀಮಸೇನೋ ಮಹಾಬಲಃ ।
ಅಗೃಹ್ಣಾತ್ ಪರಿರಭ್ಯೈನಂ ಭುಜಾಭ್ಯಾಂ ಭರತರ್ಷಭ ॥೨೫॥

ಭರತರ್ಷಭನೇ, ಅನಂತರ ಮಹಾಬಲನಾದ ಭೀಮಸೇನನು ಅವನನ್ನು ತೂಗಾಡಿಸಿ ತನ್ನ ಭುಜಗಳಿಂದ ಆಲಿಂಗಿಸಿ ಗಟ್ಟಿಯಾಗಿ ಹಿಡಿದನು.

ಜಾನುಭ್ಯಾಂ ಪರಿಜಗ್ರಾಹ ಭೀಮಸೇನೋ ಬಕಂ ಬಲಾತ್ ।
ವಿಸ್ಫುರಂತಂ ಮಹಾಕಾಯಂ ವಿಚಕರ್ಷ ಮಹಾಬಲಃ ॥೨೬॥

ಮಹಾಬಲನಾದ ಭೀಮಸೇನನು ಮಹಾಕಾಯನಾದ ಬಕನನ್ನು ತನ್ನ ಬಲದಿಂದ ಮಂಡಿಗಳಲ್ಲಿ ಹಿಡಿದು ಬಿಡಿಸಿಕೊಳ್ಳಲು ಮಿಸುಕಾಡುತ್ತಿದ್ದ ಅವನನ್ನು ಎಳೆದಾಡಿದನು.

ವಿಕೃಷ್ಯಮಾಣೋ ಭೀಮೇನ ಚಕರ್ಷ ಯುಧಿ ಪಾಂಡವಮ್ ।
ಸಮಯುಜ್ಯತ ತೀವ್ರೇಣ ಶ್ರಮೇಣ ಪುರುಷಾದಕಃ ॥೨೭॥

ಭೀಮನಿಂದ ಎಳೆಯಲ್ಪಟ್ಟ ರಾಕ್ಷಸನು ಯುದ್ಧದಲ್ಲಿ ಭೀಮನನ್ನೂ ಎಳೆದನು. ಆದರೆ ಆ ನರಭಕ್ಷಕನಿಗೆ ತೀವ್ರವಾದ ಆಯಾಸವುಂಟಾಯಿತು.

ಕ್ಷೀಯಮಾಣಂ ತು ತಂ ಭೀಮೋ ನಿರೀಕ್ಷ್ಯ ಪುರುಷಾದಕಮ್ ।
ನಿಷ್ಪೀಡ್ಯ ಭೂಮೌ ಪದ್ಭ್ಯಾಂ ವೈ ಸಮಾಜಘ್ನೇ ವೃಕೋದರಃ ॥೨೮॥

ಆ ನರಭಕ್ಷಕನ ಶಕ್ತಿಯು ಕ್ಷೀಣಿಸುತ್ತಿರುವುದನ್ನು ಕಂಡ ಭೀಮನು ಅವನನ್ನು ಭೂಮಿಯ ಮೇಲೆ ಕೆಡವಿ ತನ್ನ ಪಾದಗಳಿಂದ ಒದ್ದನು.

ತತೋಽಸ್ಯ ಜಾನುನಾ ಪೃಷ್ಠಮವಪೀಡ್ಯ ಬಲಾದಿವ ।
ಬಾಹುನಾ ಪರಿಜಗ್ರಾಹ ದಕ್ಷಿಣೇನ ಶಿರೋಧರಾಮ್ ॥೨೯॥

ಅನಂತರ ತನ್ನ ಮಂಡಿಯಿಂದ ಅವನ ಬೆನ್ನನ್ನು ಬಲವಾಗಿ ಒತ್ತಿ ಹಿಡಿದು ಬಲಗೈಯಿಂದ ಅವನು ಕತ್ತನ್ನು ಹಿಡಿದನು.

ಸವ್ಯೇನ ಚ ಕಟೀದೇಶೇ ವಾಸಸ್ಯಾದಾಯ ಪಾಂಡವಃ ।
ಬಭಂಜ ತತ್ ತದಾ ರಕ್ಷೋ ವ್ಯನದದ್ ಭೈರವಂ ರವಮ್ ॥೩೦॥

ಪಾಂಡವನಾದ ಭೀಮನು ತನ್ನ ಎಡಗೈಯನ್ನು ವಸ್ತ್ರವನ್ನುಡುವ ಅವನ ಕಟಿದೇಶದಲ್ಲಿ ಊರಿ ಅವನನ್ನು ಹಿಂದುಕ್ಕೆ ಎಳೆದು ಮುರಿದನು. ಆಗ ಆ ರಾಕ್ಷಸನು ಭೈರವನಾದವನ್ನು ಮಾಡಿದನು.

ತತೋಽಸ್ಯ ರುಧಿರಂ ವಕ್ತ್ರಾತ್ ಪ್ರಸುಸ್ರಾವ ವಿಶಾಂಪತೇ ।
ಭಜ್ಯಮಾನಸ್ಯ ಭೀಮೇನ ತಸ್ಯ ಘೋರಸ್ಯ ರಕ್ಷಸಃ ॥೩೧॥

ರಾಜನೇ, ಭೀಮನಿಂದ ಆ ಘೋರನಾದ ರಾಕ್ಷಸನು ಮುರಿಯಲ್ಪಡುವಾಗ ಅವನು ಮುಖದಿಂದ ರಕ್ತವು ಸುರಿಯಿತು.

ತತೋ ಭೀಮಸ್ತಮಾದಾಯ ಗತಾಸುಂ ಪುರುಷಾದಕಮ್ ।
ನಗರದ್ವಾರಮಾಸಾದ್ಯ ಹ್ಯುತ್ಸಸರ್ಜ ಮಹಾಬಲಃ ॥೩೨॥

ಅನಂತರ ಮಹಾಬಲನಾದ ಭೀಮನು ಮೃತನಾದ ನರಭಕ್ಷಕನನ್ನು ಎಳೆದುಕೊಂಡು ನಗರದ್ವಾರಕ್ಕೆ ಬಂದು ಅಲ್ಲಿ ಅವನನ್ನು ವಿಸರ್ಜಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಷಟ್‌ಷಷ್ಯ್ಯಧಿಕಶತತಮೋಽಧ್ಯಾಯಃ ॥
॥ ಇತಿ ಬಕವಧಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಆರವತ್ತಾರನೆಯ ಅಧ್ಯಾಯ ಮುಗಿಯಿತು.

ನೂರ ಅರವತ್ತೇಳನೆಯ ಅಧ್ಯಾಯ

(ಶರಣಾಗತರಾದ ಬಕಪರಿವಾರಕ್ಕೆ ಭೀಮನಿಂದ ಅಭಯದಾನ ಮತ್ತು ನಿಯಮ ಬಂಧನ, ಪುನಃ ಕೆಲವು ಕಾಲ ಏಕಚಕ್ರನಗರದಲ್ಲಿ ವಾಸ)

ವೈಶಂಪಾಯನಃ

ತೇನ ಶಬ್ದೇನ ವಿತ್ರಸ್ತೋ ಜನಸ್ತಸ್ಯಾಥ ರಕ್ಷಸಃ ।
ನಿಷ್ಪಪಾತ ಗೃಹಾದ್ ರಾಜನ್ ಸಹೈವ ಪರಿಚಾರಿಭಿಃ ॥೧॥

ಭೀಮೇನ ದದೃಶುಶ್ಚೈನಂ ಬಕಂ ಚ ವಿನಿಪಾತಿತಮ್ ।
ತತಸ್ತು ನಿಹತಂ ದೃಷ್ಟ್ವಾ ರಾಕ್ಷಸೇಂದ್ರಂ ಮಹಾಬಲಮ್ ।
ಬಕಾಃ ಪರಮಸಂತ್ರಸ್ತಾ ಭೀಮಂ ಶರಣಮಾಯಯುಃ ॥೨॥

ರಾಜನೇ, ಬಕನನ್ನು ಮುರಿದ ಶಬ್ದದಿಂದ ಹೆದರಿದ ಬಕನ ಪರಿವಾರಜನರು ತಮ್ಮ ಪರಿಚಾರಕರೊಂದಿಗೆ ತಮ್ಮ ಬಿಡಾರಗಳಿಂದ ಹೊರಗೆ ಬಂದರು. ಅವರು ಭೀಮನಿಂದ ಕೆಳಗೆ ಉರುಳಿಸಲ್ಪಟ್ಟಿದ್ದ ಬಕನನ್ನು ನೋಡಿದರು. ಆನಂತರ ಮಹಾಬಲನಾದ ರಾಕ್ಷಸೇಂದ್ರನು ನಿಹತನಾದುದನ್ನು ನೋಡಿ ಬಕನ ಬಂಧುಗಳೆಲ್ಲರೂ ಬಹಳ ಹೆದರಿಕೆಯಿಂದ ಭೀಮನಿಗೆ ಶರಣಾಗತರಾದರು.

ತಾನ್ ಭೀತಾನ್ ವಿಗತಜ್ಞಾನಾನ್ ಭೀಮಃ ಪ್ರಹರತಾಂ ವರಃ ।
ಸಾಂತ್ವಯಾಮಾಸ ಬಲವಾನ್ ಸಮಯೇ ಚ ನ್ಯವೇಶಯತ್ ॥೩॥

ಭೀತರಾಗಿ ಜ್ಞಾನಶೂನ್ಯರಾದ ಅವರನ್ನು ನೋಡಿ ಬಲಿಷ್ಠನಾದ ಮತ್ತು ಪ್ರಹಾರಮಾಡುವವರಲ್ಲಿ ಶ್ರೇಷ್ಠನಾದ ಭೀಮನು ಸಮಾಧಾನದ ಮಾತುಗಳನ್ನಾಡಿ ಅವರನ್ನು ನಿಯಮದಲ್ಲಿ ಸ್ಥಾಪಿಸಿದನು.

ನ ಹಿಂಸ್ಯಾ ಮಾನುಷಾ ಭೂಯೋ ಯುಷ್ಮಾಭಿರಿಹ ಕರ್ಹಿಚಿತ್ ।
ಹಿಂಸತಾಂ ಚ ವಧಃ ಶೀಘ್ರಮೇವಮೇವ ಭವಿಷ್ಯತಿ ॥೪॥

ನೀವು ಇಲ್ಲಿ ಮನುಷ್ಯರಿಗೆ ಯಾವ ಕಾರಣದಿಂದಲೂ ಹಿಂಸೆಯನ್ನು ಕೊಡಬಾರದು. ಹಿಂಸೆಯನ್ನು ಕೊಟ್ಟವರಿಗೆ ಶೀಘ್ರವಾಗಿ ಇಂತಹ ವಧೆಯೇ ಉಂಟಾಗುವುದು.

ತಸ್ಯ ತದ್ವಚನಂ ಶ್ರುತ್ವಾ ತಾನಿ ರಕ್ಷಾಂಸಿ ಭಾರತ ।
ಏವಮಸ್ತ್ವಿತಿ ತಂ ಪ್ರಾಹುರ್ಜಗೃಹುಃ ಸಮಯಂ ಚ ತಮ್ ॥೫॥

ಭಾರತನೇ, ಭೀಮನ ಆ ಮಾತುಗಳನ್ನು ಕೇಳಿ ಆ ರಾಕ್ಷಸರು ಹಾಗೆಯೇ ಆಗಲಿ ಎಂದು ಒಪ್ಪಿ ಅವನ ನಿಯಮವನ್ನು ಸ್ವೀಕರಿಸಿದರು.

ಸಗಣಸ್ತು ಬಕಭ್ರಾತಾ ಪ್ರಾಣಮತ್ ಪಾಂಡವಂ ತದಾ ।
ತತಃ ಪ್ರಭೃತಿ ರಕ್ಷಾಂಸಿ ತತ್ರ ಸೌಮ್ಯಾನಿ ಭಾರತ ।
ನಗರೇ ಪ್ರತ್ಯದೃಶ್ಯಂತ ನರೈರ್ನಗರವಾಸಿಭಿಃ ॥೬॥

ಆಗ ಬಕನ ತಮ್ಮನು ತನ್ನ ಪರಿವಾರದೊಂದಿಗೆ ಭೀಮನಿಗೆ ನಮಸ್ಕಾರ ಮಾಡಿದನು. ಭಾರತನೇ, ಅಲ್ಲಿಂದ ಮುಂದಕ್ಕೆ ಆ ನಗರದಲ್ಲಿ ರಾಕ್ಷಸರು ಸೌಮ್ಯರೂಪದಿಂದ ಸಂಚರಿಸುವುದನ್ನು ನಗರವಾಸಿಗಳಾದ ಜನರು ನೋಡಿದರು.

ತತೋ ಭೀಮಸ್ತಮಾದಾಯ ಗತಾಸುಂ ಪುರುಷಾದಕಮ್ ।
ನಿಷ್ಕರ್ಣನೇತ್ರಂ ನಿರ್ಜಿಹ್ವಂ ನಿಃಸಂಜ್ಞಂ ಕಂಠಪೀಡನಾತ್ ।
ಕುರ್ವನ್ ಬಹುವಿಧಾಂ ಚೇಷ್ಟಾಂ ಪುರದ್ವಾರಮಕರ್ಷತ ॥೭॥

ಅನಂತರ ಭೀಮನು ಕಂಠಪೀಡೆಯ ಕಾರಣದಿಂದ ಕಣ್ಣು, ಕಿವಿ ಮತ್ತು ನಾಲಿಗೆಗಳನ್ನು ಕಳೆದುಕೊಂಡು, ಸಂಜ್ಞೆಯನ್ನೂ ಕಳೆದುಕೊಂಡು ಮೃತನಾಗಿದ್ದ ಆ ನರಭಕ್ಷಕನನ್ನು ಅನೇಕ ವಿಧ ಚೇಷ್ಟೆಯನ್ನು ಮಾಡುತ್ತಾ ಪುರದ್ವಾರದವರೆಗೆ ಎಳೆದು ತಂದನು.

ಸ ಏವ ರಾಕ್ಷಸೋ ನೂನಂ ಪುನರಾಯಾತಿ ನಃ ಪುರೀಮ್ ।
ಸಬಾಲವೃದ್ಧಾಃ ಪುರುಷಾ ಇತಿ ಭೀತಾಃ ಪ್ರದುದ್ರುವುಃ ॥೮॥

ಆ ರಾಕ್ಷಸನೇ ಪುನಃ ನಗರಕ್ಕೆ ಬರುತ್ತಿದ್ದಾನೆ ಎಂದು ತಿಳಿದು ಬಾಲರೂ ವೃದ್ಧರೂ ಸೇರಿದಂತೆ ಪುರುಷರು ಹೆದರಿಕೆಯಿಂದ ಓಡಿದರು.

ದ್ವಾರದೇಶೇ ವಿನಿಕ್ಷಿಪ್ಯ ನಗರಸ್ಯ ಜಗಾಮ ಹ ।
ತತಃ ಸ ಭೀಮಸ್ತಂ ಹತ್ವಾ ಗತ್ವಾ ಬ್ರಾಹ್ಮಣವೇಶ್ಮ ತತ್ ।
ಬಲೀವರ್ದೌ ಚ ಶಕಟಂ ಬ್ರಾಹ್ಮಣಾಯ ನ್ಯವೇದಯತ್ ॥೯॥

ಭೀಮನು ಬಕನ ಶವವನ್ನು ನಗರದ ಕೋಟೆಯ ಬಾಗಿಲಿನ ಹತ್ತಿರ ಇಟ್ಟು ಹೊರಟನು. ಅನಂತರ ಬಕನನ್ನು ಕೊಂದ ಆ ಭೀಮನು ಬ್ರಾಹ್ಮಣನ ಮನೆಗೆ ಹೋಗಿ ಎತ್ತುಗಳನ್ನು ಮತ್ತು ಗಾಡಿಯನ್ನು ಬ್ರಾಹ್ಮಣನಿಗೆ ಅರ್ಪಿಸಿದನು.

ಆಚಚಕ್ಷೇऽಥ ತತ್ಸರ್ವಂ ರಾತ್ರೌ ಯುದ್ಧಮಭೂದ್ ಯಥಾ ।
ತತೋ ನರಾ ವಿನಿಷ್ಕ್ರಮ್ಯ ನಾಗರಾಃ ಕಾಲ್ಯಮೇವ ತು ।
ದದೃಶುರ್ನಿಹಿತಂ ಭೂಮೌ ರಾಕ್ಷಸಂ ರುಧಿರೋಕ್ಷಿತಮ್ ॥೧೦॥

ರಾತ್ರಿ ನಡೆದ ಯುದ್ಧದ ವಿವರವನ್ನು ಅವನಿಗೆ ತಿಳಿಸಿದನು. ಅನಂತರ ಆ ನಗರವಾಸಿಗಳು ಪ್ರಾತಃಕಾಲದಲ್ಲಿ ಹೊತ್ತಿಗೆ ಮುಂಚೆಯೇ ಎದ್ದು, ದ್ವಾರದೇಶದಲ್ಲಿ ಸತ್ತು ಭೂಮಿಯಲ್ಲಿ ಬಿದ್ದಿರುವ ರಕ್ತದಿಂದ ತೊಯ್ದ ಆ ರಾಕ್ಷಸನನ್ನು ನೋಡಿದರು.

ತಮದ್ರಿಕೂಟಪ್ರತಿಮಂ ವಿನಿಷ್ಕೀರ್ಣಂ ಭಯಾವಹಮ್ ।
ಏಕಚಕ್ರಾಂ ಪುನರ್ಗತ್ವಾ ಪ್ರವೃತ್ತಿಂ ಪ್ರದದುಃ ಪುರೇ ॥೧೧॥

ಪರ್ವತದ ಸಮೂಹದಂತೆ ಇದ್ದ ಅವನು ಭಯಂಕರವಾಗಿ ಘಾಸಿಸಲ್ಪಟ್ಟಿರುವುದನ್ನು ನೋಡಿ ಏಕಚಕ್ರನಗರದೊಳಗೆ ಪ್ರವೇಶಿಸಿ ಎಲ್ಲರಿಗೂ ವಾರ್ತೆಯನ್ನು ತಿಳಿಸಿದರು.

ತತಃ ಸಹಸ್ರಶೋ ರಾಜನ್ ನರಾ ನಗರವಾಸಿನಃ ।
ತತ್ರಾಜಗ್ಮುರ್ಬಕಂ ದ್ರಷ್ಟುಂ ಸಸ್ತ್ರೀಕಾ ವೃದ್ಧಬಾಲಕಾಃ ॥೧೨॥

ರಾಜನೇ, ಅನಂತರ ಆ ನಗರವಾಸಿಗಳಾದ ಪುರುಷರೂ, ಸ್ತ್ರೀಯರೂ, ವೃದ್ದರೂ ಮತ್ತು ಬಾಲಕರೂ ಬಕನನ್ನು ನೋಡಲು ಸಹಸ್ರಸಂಖ್ಯೆಯಲ್ಲಿ ಬಂದರು.

ತತಸ್ತೇ ವಿಸ್ಮಿತಾಃ ಸರ್ವೇ ಕರ್ಮ ದೃಷ್ಟ್ವಾ ऽತಿಮಾನುಷಮ್ ।
ದೈವತಾನ್ಯರ್ಚಯಾಮಾಸುಃ ಸರ್ವ ಏವ ವಿಶಾಂಪತೇ ॥೧೩॥

ರಾಜನೇ, ಆಗ ಮನುಷ್ಯರಲ್ಲಿ ಮೀರಿದ ಸಾಮರ್ಥ್ಯದ ಆ ಕರ್ಮವನ್ನು ನೋಡಿ ಅವರೆಲ್ಲರೂ ವಿಸ್ಮಿತರಾಗಿ ಏಕಚಕ್ರನಗರದಲ್ಲಿದ್ದ ಎಲ್ಲಾ ದೇವಾಲಯಗಳಲ್ಲಿ ಪೂಜೆಯನ್ನು ಸಲ್ಲಿಸಿದರು.

ತತಃ ಪರೀಕ್ಷಯಾಮಾಸುಃ ಕಸ್ಯ ವಾರೋऽದ್ಯ ಭೋಜನೇ ।
ಜ್ಞಾತ್ವಾ ಚಾಗಮ್ಯ ತಂ ವಿಪ್ರಂ ಪಪ್ರಚ್ಛುಃ ಸರ್ವಮೇವ ತತ್ ॥೧೪॥

ಆನಂತರ ರಾಕ್ಷಸನಿಗೆ ಭೋಜನವನ್ನು ಒದಗಿಸಲು ಇವತ್ತು ಯಾರ ವಾರ ಎಂದು ವಿಚಾರಿಸಿ ಆ ಬ್ರಾಹ್ಮಣನ ಬಳಿಗೆ ಬಂದು ಎಲ್ಲ ವಿಷಯದಲ್ಲಿಯೂ ಅವನನ್ನು ಪ್ರಶ್ನಿಸಿದರು.

ಏವಂ ಪೃಷ್ಟೋ ಬಹುವಿಧಂ ರಕ್ಷಮಾಣಶ್ಚ ಪಾಂಡವಾನ್ ।
ಉವಾಚ ನಾಗರಾನ್ ಸರ್ವಾನ್ ಕಾಶ್ಯಪೋ ನಾಮತಸ್ತದಾ ॥೧೫॥

ಹೀಗೆ ಬಹುವಿಧವಾಗಿ ಕೇಳಲ್ಪಟ್ಟ ಆ ಕಾಶ್ಯಪ ಎಂಬ ಹೆಸರಿನ ಬ್ರಾಹ್ಮಣನು ಪಾಂಡವರ ರಹಸ್ಯವನ್ನು ರಕ್ಷಣೆ ಮಾಡುತ್ತಾ ನಗರವಾಸಿಗಳನ್ನು ಕುರಿತು ಹೇಳಿದನು.

ಆಜ್ಞಾಪಿತಂ ಮಾಮನಿಶಂ ರುದಂತಂ ಸಹ ಬಂಧುಭಿಃ ।
ದದರ್ಶ ಬ್ರಾಹ್ಮಣಃ ಕಶ್ಚಿನ್ಮಂತ್ರಸಿದ್ಧೋ ಮಹಾಬಲಃ ॥೧೬॥

ನಾಳೆಗೆ ಅನ್ನವನ್ನು ಒದಗಿಸಬೇಕೆಂಬ ಆದೇಶವನ್ನು ತಿಳಿದು ನಾನು ಬಂಧುಗಳ ಜೊತೆಯಲ್ಲಿ ಅಳುತ್ತಿರುವಾಗ ಮಂತ್ರಸಿದ್ಧನೂ, ಮಹಾಬಲನೂ ಆದ ಒಬ್ಬ ಬ್ರಾಹ್ಮಣನು ನನ್ನನ್ನು ನೋಡಿದನು.

ಪರಿಪೃಚ್ಛ್ಯ ಸ ಮಾಂ ಪೂರ್ವಂ ಪರಿಕ್ಲೇಶಂ ಪುರಸ್ಯ ಚ ।
ಆಬ್ರವೀದ್ ಬ್ರಾಹ್ಮಣಶ್ರೇಷ್ಠ ಆಶ್ವಾಸ್ಯ ಪ್ರಹಸನ್ನಿವ ॥೧೭॥

ಆ ಬ್ರಾಹ್ಮಣಶ್ರೇಷ್ಠನು ಮೊದಲು ನನ್ನನ್ನು ವಿಚಾರಿಸಿ ನಗರಕ್ಕೆ ಒದಗಿರುವ ಸಂಕಟವನ್ನು ಗಮನಿಸಿ ನಗುತ್ತಾ ಸಮಾಧಾನದ ಮಾತುಗಳನ್ನು ಆಡಿದನು.

ಪ್ರಾಪಯಿಷ್ಯಾಮ್ಯಹಂ ತಸ್ಮಾ ಇದಮನ್ನಂ ದುರಾತ್ಮನೇ ।
ಮನ್ನಿಮಿತ್ತಂ ಭಯಂ ಚಾಪಿ ನ ಕಾರ್ಯಮಿತಿ ವೀರ್ಯವಾನ್ ॥೧೮॥

ಆ ದುರಾತ್ಮನಿಗೆ ನಾನು ಅನ್ನವನ್ನು ತೆಗೆದುಕೊಂಡು ಹೋಗಿ ಕೊಡುವೆನು. ನನ್ನ ಸಲುವಾಗಿ ಭಯಪಡುವುದು ಬೇಡ ಎಂದೂ ಆ ಪರಾಕ್ರಮಶಾಲಿಯು ಹೇಳಿದನು.

ಸ ತದನ್ನಮುಪಾದಾಯ ಗತೋ ಬಕವನಂ ಪ್ರತಿ ।
ತೇನ ನೂನಂ ಭವೇದೇತತ್ ಕರ್ಮ ಲೋಕಹಿತಂ ಕೃತಮ್ ॥೧೯॥

ಅವನು ಆ ಅನ್ನವನ್ನು ತಗೆದುಕೊಂಡು ಬಕವನಕ್ಕೆ ಹೋದನು. ಪ್ರಾಯಶಃ ಅವನೇ ಈ ಲೋಕಹಿತವಾದ ಕಾರ್ಯವನ್ನು ಮಾಡಿರಬೇಕು.

ತತಸ್ತೇ ಬ್ರಾಹ್ಮಣಾಃ ಸರ್ವೇ ಕ್ಷತ್ರಿಯಾಶ್ಚ ಸುವಿಸ್ಮಿತಾಃ ।
ವೈಶ್ಯಾಃ ಶೂದ್ರಾಶ್ಚ ಮುದಿತಾಃ ಚಕ್ರುರ್ಬ್ರಹ್ಮಮಹಂ ತದಾ ॥೨೦॥

ಆಗ ಅಲ್ಲಿದ್ದ ಎಲ್ಲಾ ಬ್ರಾಹ್ಮಣರು ಮತ್ತು ಕ್ಷತ್ರಿಯರು ಬಹಳ ವಿಸ್ಮಿತರಾದರು. ಕ್ಷತ್ರಿಯರೂ, ವೈಶ್ಯರೂ ಮತ್ತು ಶೂದ್ರರೂ ಸೇರಿ ಸಂತೋಷದಿಂದ ಬ್ರಾಹ್ಮಣರಿಗೆ ಒಂದು ಉತ್ಸವವನ್ನು ಮಾಡಿದರು.

ತತೋ ಜಾನಪದಾಃ ಸರ್ವ ಆಜಗ್ಮುರ್ನಗರಂ ಪ್ರತಿ ।
ತಮದ್ಭುತತಮಂ ದ್ರಷ್ಟುಂ ಪಾರ್ಥಾಸ್ತತ್ರೈವ ಚಾಭವನ್ ॥೨೧॥

ಆನಂತರ ಆ ಅದ್ಭುತವಾದ ದೃಶ್ಯವನ್ನು ನೋಡಲು ಗ್ರಾಮಗಳಿಂದ ನಗರಕ್ಕೆ ಜನಗಳು ಬರಲು ಆರಂಭಿಸಿದರು. ಪಾಂಡವರೂ ಅಲ್ಲಿಯೇ ಇದ್ದರು.

ವೇತ್ರಕೀಯಗೃಹೇ ಸರ್ವೇ ಪರಿವಾರ್ಯ ವೃಕೋದರಮ್ ।
ವಿಸ್ಮಯಾದಭ್ಯಗಚ್ಛಂಸ್ತಂ ಭೀಮಂ ಭೀಮಪರಾಕ್ರಮಮ್ ॥೨೨॥

ಏಕಚಕ್ರನಗರದಲ್ಲಿ ಎಲ್ಲರೂ ಭೀಮಪರಾಕ್ರಮನಾದ ಭೀಮನನ್ನು ಸುತ್ತುವರೆದು ಆಶ್ಚರ್ಯದಿಂದ ಅವನ ಬಳಿ ನಿಂತರು.

ನ ವೈ ನ ಸಂಭವೇತ್ ಸರ್ವಂ ಬ್ರಾಹ್ಮಣೇಶು ಮಹಾತ್ಮಸು ।
ಇತಿ ಸತ್ಕೃತ್ಯ ತಂ ಪೌರಾಃ ಪರಿವವ್ರುಃ ಸಮಂತತಃ ॥೨೩॥

ಮಹಾತ್ಮರಾದ ಬ್ರಾಹ್ಮಣರಿಗೆ ಯಾವುದೂ ಅಸಾಧ್ಯವಲ್ಲ ಎಂದು ಹೇಳಿ ಪೌರರು ಭೀಮನಿಗೆ ಸತ್ಕಾರವನ್ನು ಮಾಡಿ ಅವನನ್ನು ಸುತ್ತುವರಿದರು.

ಅಯಂ ತ್ರಾತಾऽರ್ಥಿನಃ ಸರ್ವಾನ್ ಪಿತೇವ ಪರಮಾರ್ಥವಿತ್ ।
ಅಸ್ಯ ಶುಶ್ರೂಷಯಾ ಪಾದೌ ಪ್ರತಿವಾರಮುಪಾಸ್ಮಹೇ ।
ಪಶುಮದ್ದಧಿಮಚ್ಚಾಸ್ಯ ವಾರಂ ಭಕ್ತಮುಪಾಹರನ್ ॥೨೪॥

ಪರಮಾರ್ಥವನ್ನು ತಿಳಿದ ಈ ಬ್ರಾಹ್ಮಣನು ತಂದೆಯಂತೆ ಶರಣಾರ್ಥಿಗಳಾದ ನಮ್ಮೆಲ್ಲರನ್ನು ರಕ್ಷಿಸುವನು. ನಾವು ಪ್ರತಿದಿನವೂ ಇವನ ಸೇವೆಯನ್ನು ಮಾಡಿ ಇವನ

ಪಾದಗಳನ್ನು ಆರಾಧಿಸೋಣ ಎಂದು ತಿಳಿದು ಪ್ರತಿದಿನವೂ ಅವನಿಗೆ ಯೋಗ್ಯಪಶುಗಳಿಂದ ಮತ್ತು ದಧಿಯಿಂದ ಕೂಡಿದ ಅನ್ನವನ್ನು ತಂದು ಒಪ್ಪಿಸಿದರು.

ತಸ್ಮಿನ್ ಹತೇ ತೇ ಪುರುಷಾ ಭೀತಾಃ ಸಮನುಬೋಧನಾಃ ।
ತತಃ ಸಂಪ್ರಾದ್ರವನ್ ಪಾರ್ಥಾಃ ಸಹ ಮಾತ್ರಾ ಪರಂತಪಾಃ ॥೨೫॥

ಬಕನು ಮೃತನಾದ ಮೇಲೆ ಪಾಂಡವರು ಈ ಬ್ರಾಹ್ಮಣನೇ (ಭೀಮನೇ) ಬಕನನ್ನು ಕೊಂದನು ಎಂದು ಜನರಿಗೆ ತಿಳಿಯಬಹುದು ಎಂಬ ಹೆದರಿಕೆಯಿಂದ ನಗರದೊಳಗೆ ಓಡಿಹೋದರು.

ಆಗಚ್ಛನ್ನೇಕಚಕ್ರಾಂ ತೇ ಪಾಂಡವಾಃ ಸಂಶಿತವ್ರತಾಃ ।
ವೈದಿಕಾಧ್ಯಯನೇ ಯುಕ್ತಾ ಜಟಿಲಾ ಬ್ರಹ್ಮಚಾರಿಣಃ ॥೨೬॥

ಒಳ್ಳೆಯ ವ್ರತಧಾರಿಗಳಾದ ಪಾಂಡವರು ಏಕಚಕ್ರನಗರವನ್ನು ಪ್ರವೇಶಿಸಿ ಬ್ರಹ್ಮಚಾರಿಗಳಿಗೆ ಯೋಗ್ಯವಾದ ನಾರುಮಡಿಗಳನ್ನು ಉಟ್ಟು ವೇದಾಧ್ಯಯನದಲ್ಲಿ ತೊಡಗಿದರು.

ಅವಸಂಸ್ತೇ ಚ ಪತ್ರಾಪಿ ಬ್ರಾಹ್ಮಣಸ್ಯ ನಿವೇಶನೇ ।
ಮಾತ್ರಾ ಸಹೈಕಚಕ್ರಾಯಾಂ ದೀರ್ಘಕಾಲಂ ಸುಖೋಷಿತಾಃ ॥೨೭॥

ಅವರು ಏಕಚಕ್ರನಗರದಲ್ಲಿ ತಾಯಿಯ ಜೊತೆಯಲ್ಲಿ ಅದೇ ಬ್ರಾಹ್ಮಣನ ಮನೆಯಲ್ಲಿ ದೀರ್ಘಕಾಲ ಸುಖವಾಗಿ ವಾಸಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಸಪ್ತಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ಬಕವಧಪರ್ವಣಿ ಅಷ್ಟಮೋऽಧ್ಯಾಯಃ ॥

॥ ಬಕವಧಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಅರವತ್ತೇಳನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಬಕವಧಪರ್ವವು ಮುಗಿಯಿತು

★ ★ ★ ★

೧೦. ಚೈತ್ರರಥ ಪರ್ವ

ನೂರ ಅರವತ್ತೆಂಟನೆಯ ಅಧ್ಯಾಯ

(ಪಾಂಡವರು ವಾಸವಾಗಿದ್ದ ಮನೆಗೆ ಒಬ್ಬ ಬ್ರಾಹ್ಮಣನ ಪ್ರವೇಶ, ದ್ರೌಪದಿಯ ಸ್ವಯಂವರವನ್ನು ಪ್ರಸ್ತಾಪಿಸಿ ಅವನಿಂದ ಧೃಷ್ಟದ್ಯುಮ್ನ, ದ್ರೌಪದಿಯರ ಜನನ ಕಥನ.)

ಜನಮೇಜಯಃ

ತೇ ತದಾ ಪುರುಷವ್ಯಾಘ್ರಾ ನಿಹತ್ಯ ಬಕರಾಕ್ಷಸಮ್ ।
ಅತ ಊರ್ಧ್ವಂ ತದಾ ಬ್ರಹ್ಮನ್ ಕಿಮಕುರ್ವತ ಪಾಂಡವಾಃ ॥೧॥

ಬ್ರಾಹ್ಮಣರೇ, ಪುರುಷವ್ಯಾಘ್ರರಾದ ಆ ಪಾಂಡವರು ಬಕರಾಕ್ಷಸನನ್ನು ಸಂಹಾರ ಮಾಡಿ ಅಲ್ಲಿಂದ ಮುಂದೆ ಏನು ಮಾಡಿದರು?

ವೈಶಂಪಾಯನಃ

ತತ್ರೈವ ನ್ಯವಸನ್ ರಾಜನ್ ನಿಹತ್ಯ ಬಕರಾಕ್ಷಸಮ್ ।
ಅಧೀಯಾನಾ ನರವ್ಯಾಘ್ರಾ ಬ್ರಾಹ್ಮಣಸ್ಯ ನಿವೇಶನೇ ॥೨॥

ರಾಜನೇ, ನರವ್ಯಾಘ್ರರಾದ ಪಾಂಡವರು ಬಕರಾಕ್ಷಸನನ್ನು ಸಂಹಾರ ಮಾಡಿ ಅದೇ ಬ್ರಾಹ್ಮಣನ ಮನೆಯಲ್ಲಿ ವೇದಾಧ್ಯಯನವನ್ನು ಮಾಡುತ್ತಾ ವಾಸಮಾಡಿದರು.

ತತಃ ಕದಾಚಿತ್ ಕಾಲೇ ತು ಬ್ರಾಹ್ಮಣಃ ಸಂಶಿತವ್ರತಃ ।
ಪ್ರತಿಶ್ರಯಾರ್ಥಂ ತದ್ ವೇಶ್ಮ ಬ್ರಾಹ್ಮಣಸ್ಯಾಗಮತ್ ತದಾ ॥೩॥

ಅನಂತರ ಒಮ್ಮೆ ಒಬ್ಬ ವ್ರತನಿಷ್ಠನಾದ ಬ್ರಾಹ್ಮಣನು ಆಶ್ರಯವನ್ನು ಹುಡುಕಿಕೊಂಡು ಅತಿಥಿಯಾಗಿ ಅದೇ ಬ್ರಾಹ್ಮಣನ ಮನೆಗೆ ಬಂದನು.

ಸ ಸಮ್ಯಕ್ ಪೂಜಯಿತ್ವಾ ತು ವಿದ್ವಾನ್ ವಿಪ್ರರ್ಷಭಸ್ತದಾ ।
ದದೌ ಪ್ರತಿಶ್ರಯಂ ತಸ್ಮೈ ತದಾ ಸರ್ವಾತಿಥಿವ್ರತಃ ॥೪॥

ಸರ್ವಾತಿಥಿವ್ರತ ಧರಿಸಿದ್ದ ಮನೆಯ ಒಡೆಯನಾದ ವಿದ್ವಾಂಸನಾದ ಬ್ರಾಹ್ಮಣಶ್ರೇಷ್ಠನು ಅತಿಥಿಬ್ರಾಹ್ಮಣನಿಗೆ ಚೆನ್ನಾಗಿ ಸತ್ಕಾರ ಮಾಡಿ ಆಶ್ರಯವನ್ನು ನೀಡಿದನು.

ತತಸ್ತೇ ಪಾಂಡವಾಃ ಸರ್ವೇ ಕುಂತೀ ಚ ಭರತರ್ಷಭ ।
ಉಪಾಸಾಂಚಕ್ರಿರೇ ವಿಪ್ರಂ ಕಥಯಂತಃ ಕಥಾಃ ಶುಭಾಃ ॥೫॥

ಭರತರ್ಷಭನೇ, ಅನಂತರ ಆ ಎಲ್ಲ ಪಾಂಡವರೂ ಮತ್ತು ಕುಂತಿಯೂ ಬ್ರಾಹ್ಮಣನ ಸಮೀಪದಲ್ಲಿ ಕುಳಿತು ಅನೇಕ ಒಳ್ಳೆಯ ಕಥೆಗಳನ್ನು ಮಾತನಾಡಿದರು.

ಕಥಯಾಮಾಸ ದೇಶಾನ್ ಸ ತೀರ್ಥಾನಿ ವಿವಿಧಾನಿ ಚ ।
ರಾಜ್ಞಶ್ಚ ವಿವಿಧಾಕಾರಾನ್ ಪುರಾಣೆ ಚ ವನಾನಿ ಚ ॥೬॥

ಆ ಅತಿಥಿಬ್ರಾಹ್ಮಣನು ತಾನು ಸಂಚರಿಸಿದ ದೇಶಗಳನ್ನೂ, ಪಟ್ಟಣಗಳನ್ನೂ, ಅನೇಕ ವಿಧವಾದ ತೀರ್ಥಗಳನ್ನೂ, ವನಗಳನ್ನೂ, ಮತ್ತು ಅನೇಕಾಕಾರವುಳ್ಳ ರಾಜರುಗಳನ್ನೂ ಕುರಿತು ಕಥನ ಮಾಡಿದನು.

ಸ ತತ್ರಾಕಥಯದ್ ವಿಪ್ರಃ ಕಥಾಂತೇ ಜನಮೇಜಯ ।
ಪಾಂಚಾಲೇಷ್ವದ್ಭುತಾಕಾರಂ ಯಾಜ್ಞಸೇನ್ಯಾಃ ಸ್ವಯಂವರಮ್ ॥೭॥

ಜನಮೇಜಯನೇ, ಆ ಎಲ್ಲ ಕಥೆಗಳು ಮುಗಿದಮೇಲೆ ಆ ಬ್ರಾಹ್ಮಣನು ಪಾಂಚಾಲನಗರದಲ್ಲಿ ನಡೆಯಲಿರುವ ದ್ರುಪದನ ಮಗಳ ಅದ್ಭುತವಾದ ಸ್ವಯಂವರವನ್ನು ಉಲ್ಲೇಖಿಸಿದನು.

ಧೃಷ್ಟದ್ಯುಮ್ನಸ್ಯ ಚೋತ್ಪತ್ತಿಂ ದ್ರೋಣಸ್ಯ ಚ ಶಿಖಂಡಿನಃ ।
ಅಯೋನಿಜತ್ವಂ ಕೃಷ್ಣಾಯಾ ದ್ರುಪದಸ್ಯ ಮಹಾಮಖೇ ॥೮॥

ಶಿಖಂಡಿಯ ಉತ್ಪತ್ತಿಯನ್ನೂ, ದ್ರೋಣರ ಉತ್ಪತ್ತಿಯನ್ನೂ, ದ್ರುಪದನ ಮಹಾಯಜ್ಞದಲ್ಲಿ ಧೃಷ್ಟದ್ಯುಮ್ನನ ಉತ್ಪತ್ತಿಯನ್ನೂ ಮತ್ತು ಅಯೋನಿಜೆಯಾದ ದ್ರೌಪದಿಯ ಉತ್ಪತ್ತಿಯನ್ನೂ ಕುರಿತು ಹೇಳಿದನು.

ತದದ್ಭುತತಮಂ ಶ್ರುತ್ವಾ ಪಾಂಡವಾಃ ಸತ್ಯವಿಕ್ರಮಾಃ ।
ವಿಸ್ತರೇಣೈವ ಪಪ್ರಚ್ಛುಃ ಕಥಾಂ ತಾಂ ಪುರುಷರ್ಷಭಾಃ ॥೯॥

ಆ ಅದ್ಭುತವಾದ ವಿಷಯವನ್ನು ಕೇಳಿದ ಸತ್ಯವಿಕ್ರಮರಾದ, ಪುರುಷಶ್ರೇಷ್ಠರಾದ ಪಾಂಡವರ ಆ ಕಥೆಯನ್ನು ವಿಸ್ತಾರವಾಗಿ ಹೇಳಬೇಕೆಂದು ಆ ಬ್ರಾಹ್ಮಣನನ್ನು ಕೇಳಿದರು.

ಪಾಂಡವಾಃ

ಕಥಂ ದ್ರುಪದಪುತ್ರಸ್ಯ ಧೃಷ್ಟದ್ಯುಮ್ನಸ್ಯ ಪಾವಕಾತ್ ।
ಸಂಭವೋ ವೇದಿಮಧ್ಯೇ ಚ ಕಥಂ ಕೃಷ್ಣಾ ವ್ಯಜಾಯತ ॥೧೦॥

ದ್ರುಪದಪುತ್ರನಾದ ಧೃಷ್ಟದ್ಯುಮ್ನನು ಹೇಗೆ ಪಾವಕನಿಂದ ಜನಿಸಿದನು? ಕೃಷ್ಣೆಯು ಹೇಗೆ ವೇದಿಮಧ್ಯದಿಂದ ಜನಿಸಿದಳು?

ಕಥಂ ದ್ರೋಣಾನ್ಮಹೇಷ್ವಾಸಾತ್ ಸರ್ವಾಣ್ಯಸ್ತ್ರಾಣ್ಯಶಿಕ್ಷಯತ್ ।
ಧೃಷ್ಟದ್ಯುಮ್ನೋ ಮಹೇಷ್ವಾಸಃ ಕಥಂ ದ್ರೋಣಸ್ಯ ಮೃತ್ಯುತಾ ।
ಕಥಂ ಪ್ರಿಯಸಖಾಯೌ ತೌ ಭಿನ್ನೌ ಕಸ್ಯ ಕೃತೇऽನಘ ॥೧೧॥

ಧೃಷ್ಟದ್ಯುಮ್ನನು ಮಹೇಷ್ವಾಸರಾದ ದ್ರೋಣರಿಂದ ಹೇಗೆ ಎಲ್ಲಾ ಅಸ್ತ್ರಗಳನ್ನು ಪಡೆದನು? ಮಹೇಷ್ವಾಸನಾದ ಧೃಷ್ಟದ್ಯುಮ್ನನು ಹೇಗೆ ದ್ರೋಣರಿಗೆ ಮೃತ್ಯುವಾಗುವನು? ಅನಘನೇ, ಪ್ರಿಯಸ್ನೇಹಿತರಾದ ದ್ರೋಣದ್ರುಪದರಿಗೆ ಏಕೆ ವಿರೋಧವುಂಟಾಯಿತು?

ವೈಶಂಪಾಯನಃ

ಏವಂ ತೈಶ್ಚೋದಿತೋ ವಿಪ್ರೋ ರಾಜನ್ ಸ ಪುರುಷರ್ಷಭೈಃ ।
ಕಥಯಾಮಾಸ ತತ್ಸರ್ವಂ ದ್ರೌಪದೀಸಂಭವಂ ತದಾ ॥೧೨॥

ರಾಜನೇ, ಆ ಪುರುಷರ್ಷಭರಿಂದ ಹೀಗೆ ಪ್ರಶ್ನಿಸಲ್ಪಟ್ಟ ಆ ಬ್ರಾಹ್ಮಣನು ಆಗ ದ್ರೌಪದಿಯ ಉತ್ಪತ್ತಿ ಮೊದಲಾದ ಎಲ್ಲಾ ವಿಷಯಗಳನ್ನು ನಿರೂಪಿಸಿದನು.

ಬ್ರಾಹ್ಮಣಃ

ಗಂಗಾದ್ವಾರಂ ಪ್ರತಿ ಮಹಾನ್ ಬಭೂವರ್ಷಿರ್ಮಹಾತಪಾಃ ।
ಭರದ್ವಾಜೋ ಮಹಾಪ್ರಾಜ್ಞಃ ಸತತಂ ಸಂಶಿತವ್ರತಃ ॥೧೩॥

ಗಂಗಾದ್ವಾರದ ಸಮೀಪದಲ್ಲಿ ಮಹಾತಪಸ್ವಿಗಳೂ, ಮಹಾಪ್ರಾಜ್ಞರೂ, ಸಂತತವಾಗಿ ವ್ರತಧಾರಿಗಳೂ ಆದ ಭರದ್ವಾಜರೆಂಬ ಮಹರ್ಷಿಗಳು ಇದ್ದರು.

ಸೋಽಭಿಷೇಕ್ತುಂ ಗತೋ ಗಂಗಾಂ ಪೂರ್ವಮೇವಾಗತಾಂ ಸತೀಮ್।
ದದರ್ಶಾಪ್ಸರಸಂ ತತ್ರ ಘೃತಾಚೀಮಾಪ್ಲುತಾಮೃಷಿಃ ॥೧೪॥

ಆ ಋಷಿಗಳು ಗಂಗೆಯಲ್ಲಿ ಸ್ನಾನಕ್ಕಾಗಿ ಹೊರಟು ಅಲ್ಲಿ ತಮಗಿಂತ ಮೊದಲು ಬಂದು ಆಗತಾನೇ ಸ್ನಾನವನ್ನು ಮಾಡಿದ್ದ ಘೃತಾಚಿ ಎಂಬ ಅಪ್ಸರೆಯನ್ನು ನೋಡಿದರು.

ತಸ್ಯಾ ವಾಯುರ್ನದೀತೀರೇ ವಾಸೋ ವ್ಯಪಹರತ್ ತದಾ ।
ಆಪಕೃಷ್ಟಾಂಬರಾಂ ದೃಷ್ಟ್ವಾ ತಾಮೃಷಿಶ್ಚಕಮೇ ತದಾ ॥೧೫॥

ನದಿಯ ತೀರದ ವಾಯುವು ಅವಳ ಮೇಲಿನ ವಸ್ತ್ರವನ್ನು ಆಗ ಹಾರಿಸಿತು. ವಿವಸ್ತ್ರಳಾದ ಅವಳನ್ನು ನೋಡಿದ ಭರದ್ವಾಜ ಋಷಿಗಳು ಅವಳಲ್ಲಿ ಕಾಮವನ್ನು ಹೊಂದಿದರು.

ತಸ್ಯಾಂ ಸಂರಕ್ತಮನಸಃ ಕೌಮಾರಬ್ರಹ್ಮಚಾರಿಣಃ ।
ಹೃಷ್ಟಸ್ಯ ರೇತಶ್ಚಸ್ಕಂದ ತದೃಷಿರ್ದ್ರೋಣ ಆದಧೇ ॥೧೬॥

ಕೌಮಾರ ಬ್ರಹ್ಮಚಾರಿಗಳಾದ ಅವರಿಗೆ ಅವಳಲ್ಲಿ ಮನಸ್ಸು ನಾಟಿದಾಗ ಸಂತೋಷದಿಂದ ರೇತಃಸ್ಖಲನವಾಯಿತು. ಋಷಿಗಳು ಆ ರೇತಸ್ಸನ್ನು ದ್ರೋಣಪರಿಮಿತವಾದ ಕಲಶದಲ್ಲಿ ಹಿಡಿದುಕೊಂಡರು.

ತತಃ ಸಮಭವದ್ ದ್ರೋಣಃ ಕುಮಾರಸ್ತಸ್ಯ ಧೀಮತಃ ।
ಅಧ್ಯಗೀಷ್ಟ ಚ ವೇದಾಂಶ್ಚ ವೇದಾಂಗಾನಿ ಚ ಸರ್ವಶಃ ॥೧೭॥

ಮೇಧಾವಿಗಳಾದ ಆ ಋಷಿಗಳ ಕುಮಾರರಾಗಿ ದ್ರೋಣರು ಕಲಶದಿಂದ ಎದ್ದು ಬಂದರು. ಅವರು ಎಲ್ಲಾ ವೇದಗಳನ್ನೂ ಮತ್ತು ವೇದಾಂಗಗಳನ್ನೂ ಅಧ್ಯಯನ ಮಾಡಿದರು.

ಭರದ್ವಾಜಸಖಾ ಹ್ಯಾಸೀತ್ ಪೃಷತೋ ನಾಮ ಪಾರ್ಥಿವಃ ।
ತಸ್ಯಾಪಿ ದ್ರುಪದೋ ನಾಮ ತದಾ ಸಮಭವತ್ ಸುತಃ ॥೧೮॥

ಭರದ್ವಾಜರಿಗೆ ಪೃಷತ ಎಂಬ ರಾಜನು ಸ್ನೇಹಿತನಾಗಿದ್ದನು. ಅವನಿಗೂ ಸಹ ದ್ರುಪದನೆಂಬ ಪುತ್ರನು ಜನಿಸಿದನು.

ಸ ನಿತ್ಯಮಾಶ್ರಮಂ ಗತ್ವಾ ದ್ರೋಣೇನ ಸಹ ಪಾರ್ಷತಃ ।
ಚಿಕ್ರೀಡಾಧ್ಯಯನಂ ಚೈವ ಚಕಾರ ಕ್ಷತ್ರಿಯರ್ಷಭಃ ॥೧೯॥

ಆ ಕ್ಷತ್ರಿಯರ್ಷಭನಾದ ಪೃಷತನ ಮಗನಾದ ದ್ರುಪದನು ನಿತ್ಯವೂ ಭರದ್ವಾಜರ ಆಶ್ರಮಕ್ಕೆ ಹೋಗಿ ದ್ರೋಣರ ಜೊತೆಯಲ್ಲಿ ಅಧ್ಯಯನವನ್ನು ಮಾಡಿ ಆಟವಾಡುತ್ತಿದ್ದನು.

ತತಸ್ತು ಪೃಷತೇऽತೀತೇ ಸ ರಾಜಾ ದ್ರುಪದೋऽಭವತ್ ।
ದ್ರೋಣೋऽಪಿ ರಾಮಂ ಶುಶ್ರಾವ ದಿತ್ಸಂತಂ ವಸು ಸರ್ವಶಃ ॥೨೦॥

ಪೃಷತನು ಸ್ವರ್ಗಸ್ಥನಾಗಲು ದ್ರುಪದನು ರಾಜನಾದನು. ದ್ರೋಣರಿಗೆ ಪರುಶುರಾಮರು ತಮ್ಮ ಎಲ್ಲಾ ದ್ರವ್ಯವನ್ನು ಬ್ರಾಹ್ಮಣರಿಗೆ ದಾನ ಮಾಡಿ ಕಾಡಿಗೆ ಹೋಗುತ್ತಿದ್ದಾರೆ ಎಂಬ ಸುದ್ದಿಯು ತಿಳಿಯಿತು.

ವನಂ ತು ಪ್ರಸ್ಥಿತಂ ರಾಮಂ ಭರದ್ವಾಜಸುತೋऽಬ್ರವೀತ್ ।
ಆಗತಂ ವಿತ್ತಕಾಮಂ ಮಾಂ ವಿದ್ಧಿ ದ್ರೋಣಂ ದ್ವಿಜರ್ಷಭಮ್ ॥೨೧॥

ಕಾಡಿಗೆ ಹೊರಟಿದ್ದ ಪರಶುರಾಮರನ್ನು ಸಮೀಪಿಸಿ ಭರದ್ವಾಜರ ಪುತ್ರರಾದ ದ್ರೋಣರು, ಸ್ವಾಮಿ ನಾನು ದ್ರೋಣನೆಂಬ ಬ್ರಾಹ್ಮಣ. ಧನಕಾಮನೆಯಿಂದ ನಿಮ್ಮ ಬಳಿಗೆ ಬಂದಿದ್ದೇನೆ ಎಂದು ತಿಳಿಯಿರಿ ಎಂದು ಹೇಳಿದರು.

ರಾಮಃ

ಶರೀರಮಾತ್ರಮೇವಾದ್ಯ ಮಮೇದಮವಶೇಷಿತಮ್ ।
ಅಸ್ತ್ರಾಣಿ ವಾ ಶರೀರಂ ವಾ ಬ್ರಹ್ಮನ್ನನ್ಯತರಂ ವೃಣು ॥೨೨॥

ಈ ದಿನ ಎಲ್ಲವನ್ನೂ ದಾನಮಾಡಿದ ಮೇಲೆ ನನ್ನ ಶರೀರವು ಮಾತ್ರ ಉಳಿದಿದೆ, ಅಸ್ತ್ರಗಳು ಉಳಿದಿವೆ, ಬ್ರಾಹ್ಮಣನೇ, ಅಸ್ತ್ರ ಅಥವಾ ಶರೀರದಲ್ಲಿ ಯಾವುದಾದರೂ ಒಂದನ್ನು ಬೇಡು.

ದ್ರೋಣಃ

ಅಸ್ತ್ರಾಣಿ ಚೈವ ಸರ್ವಾಣಿ ತೇಷಾಂ ಸಂಹಾರಮೇವ ಚ ।
ಪ್ರಯೋಗಂ ಚೈವ ಸರ್ವೇಷಾಂ ದಾತುಮರ್ಹತಿ ಮೇ ಭವಾನ್ ॥೨೩॥

ನನಗೆ ಎಲ್ಲಾ ಅಸ್ತ್ರಗಳನ್ನೂ, ಅವುಗಳ ಸಂಹಾರ ಕ್ರಮವನ್ನೂ, ಅವುಗಳನ್ನು ಪ್ರಯೋಗಿಸುವ ರೀತಿಯನ್ನೂ ಉಪದೇಶಮೂಲಕವಾಗಿ ತಾವು ದಾನಮಾಡಬೇಕು.

ರಾಮಃ

ತಥೇತ್ಯುಕ್ತ್ವಾ ತತಸ್ತಸ್ಮೈ ಪ್ರದದೌ ಭೃಗುನಂದನಃ ।
ಪ್ರತಿಗೃಹ್ಯ ತದಾ ದ್ರೋಣಃ ಕೃತಕೃತ್ಯೋಽಭವತ್ ತದಾ ॥೨೪॥

ಭೃಗುನಂದನರಾದ ಪರಶುರಾಮರು ಹಾಗೆಯೇ ಆಗಲಿ ಎಂದು ಹೇಳಿ ದ್ರೋಣರಿಗೆ ಪರಿಕರಸಹಿತವಾಗಿ ಎಲ್ಲಾ ಅಸ್ತ್ರಗಳನ್ನೂ ನೀಡಿದರು. ಆಗ ದ್ರೋಣರು ಎಲ್ಲಾ ಅಸ್ತ್ರಗಳನ್ನೂ ಸ್ವೀಕರಿಸಿ ಕೃತಕೃತ್ಯರಾದರು.

ಸ ಪ್ರಹೃಷ್ಟಮನಾಶ್ಚಾಪಿ ರಾಮಾತ್ ಸದ್ಯೋ ನ್ಯವರ್ತತ ।
ಬ್ರಹ್ಮಾಸ್ತ್ರಂ ಸಮನುಪ್ರಾಪ್ಯ ನರೇಷ್ವಭ್ಯಧಿಕೋಽಭವತ್ ॥೨೫॥

ದ್ರೋಣರು ಸಂತುಷ್ಟಮನಸ್ಸಿನಿಂದ ತಕ್ಷಣದಲ್ಲಿಯೇ ಪರಶುರಾಮರ ಆಶ್ರಮದಿಂದ ಹಿಂದಿರುಗಿದರು. ಬ್ರಹ್ಮಾಸ್ತ್ರವನ್ನು ಹೊಂದಿ ಮನುಷ್ಯರಲ್ಲಿ ಅತಿ ಶ್ರೇಷ್ಠರಾದರು.

ತತೋ ದ್ರುಪದಮಾಸಾದ್ಯ ಭಾರದ್ವಾಜಃ ಪ್ರತಾಪವಾನ್ ।
ಅಬ್ರವೀತ್ ಪುರುಷವ್ಯಾಘ್ರ ಸಖಾಯಂ ವಿದ್ಧಿ ಮಾಮಿತಿ ॥೨೬॥

ಅನಂತರ ಪ್ರತಾಪಶಾಲಿಗಳಾದ ದ್ರೋಣರು ದ್ರುಪದನನ್ನು ಸಮೀಪಿಸಿ ಪುರುಷವ್ಯಾಘ್ರನೇ, ನನ್ನನ್ನು ನಿನ್ನ ಸ್ನೇಹಿತನೆಂದು ತಿಳಿ ಎಂದು ಹೇಳಿದರು.

ದ್ರುಪದಃ

ನಾಶ್ರೋತ್ರಿಯಃ ಶ್ರೋತ್ರಿಯಸ್ಯ ನಾರಥೀ ರಥಿನಃ ಸಖಾ ।
ನಾರಾಜಾ ಪಾರ್ಥಿವಸ್ಯಾಪಿ ಸಖಿಪೂರ್ವಂ ಕಿಮಿಷ್ಯತೇ ॥೨೭॥

ಶ್ರೋತ್ರಿಯನಲ್ಲದವನು ಶ್ರೋತ್ರಿಯನಿಗೂ, ರಥವಿಲ್ಲದವನು ರಥಿಕನಿಗೂ, ರಾಜನಲ್ಲದವನು ರಾಜನಿಗೂ ಸ್ನೇಹಿತನಾಗುವುದಿಲ್ಲ. ಜೀರ್ಣವಾದ ಸಖ್ಯವನ್ನು ಏಕೆ ಬಯಸುತ್ತಿದ್ದೀಯೆ?

ಬ್ರಾಹ್ಮಣಃ

ಸ ವಿನಿಶ್ಚಿತ್ಯ ಮನಸಾ ಪಾಂಚಾಲ್ಯಂ ಪ್ರತಿ ಬುದ್ಧಿಮಾನ್ ।
ಜಗಾಮ ಕುರುಮುಖ್ಯಾನಾಂ ನಗರಂ ನಾಗಸಾಹ್ವಯಮ್ ॥೨೮॥

ಮೇಧಾವಿಗಳಾದ ಆ ದ್ರೋಣರು ದ್ರುಪದನಿಗೆ ಏನು ಮಾಡಬೇಕೆಂದು ಮನಸ್ಸಿನಲ್ಲಿಯೇ ನಿಶ್ಚಯಿಸಿ ಕುರುಶ್ರೇಷ್ಠರ ಪಟ್ಟಣವಾದ ಹಸ್ತಿನಪುರಕ್ಕೆ ಬಂದರು.

ತಸ್ಮೈ ಪಾರ್ಥಾನ್ ಸಮಾದಾಯ ವಸೂನಿ ವಿವಿಧಾನಿ ಚ ।
ಪ್ರಾಪ್ತಾಯ ಪ್ರದದೌ ಭೀಷ್ಮಃ ಶಿಷ್ಯಾನ್ ದ್ರೋಣಾಯ ಧೀಮತೇ ॥೨೯॥

ಹಾಗೆ ಬಂದ ಮೇಧಾವಿಗಳಾದ ದ್ರೋಣರಿಗೆ ಭೀಷ್ಮರು ಎಲ್ಲಾ ಪಾಂಡವರನ್ನೂ ಕರೆದುಕೊಂಡು ಬಂದು ಅನೇಕ ವಿಧವಾದ ದ್ರವ್ಯಗಳನ್ನು ಕೊಟ್ಟು ಇವರು ನಿಮ್ಮ ಶಿಷ್ಯರು ಎಂದು ಒಪ್ಪಿಸಿದರು.

ದ್ರೋಣಃ ಶಿಷ್ಯಾಂಸ್ತತಃ ಸರ್ವಾನಿದಂ ವಚನಮಬ್ರವೀತ್ ।
ಸಮಾನೀಯ ತತಃ ಶಿಷ್ಯಾನ್ ದ್ರುಪದಸ್ಯಾಸುಖಾಯ ವೈ ॥೩೦॥

ಅನಂತರ ದ್ರೋಣರು ತಮ್ಮ ಎಲ್ಲಾ ಶಿಷ್ಯರನ್ನೂ ಒಟ್ಟುಗೂಡಿಸಿ ಕರೆದು ದ್ರುಪದನ ಅಹಿತಕ್ಕಾಗಿ ಈ ಮಾತನ್ನಾಡಿದರು.

ಗುರುಶುಶ್ರೂಷಣಂ ಚೈವ ತಥೈವ ಗುರುದಕ್ಷಿಣಾ ।
ಕೃತಾಸ್ತ್ರೈಸ್ತತ್ ಪ್ರದೇಯಾ ಸ್ಯಾತ್ ತದ್ ಋತಂ ವದತಾನಘಾಃ ॥೩೧॥

ನೀವು ಗುರುಶುಶ್ರೂಷೆಯನ್ನು ಮಾಡಿ ಅಸ್ತ್ರವಿದ್ಯೆಯನ್ನು ಸಂಪಾದಿಸಿದ ಮೇಲೆ ಗುರುದಕ್ಷಿಣೆಯನ್ನು ಕೊಡಬೇಕಾಗುತ್ತದೆ. ಅನಘರೇ, ನನ್ನ ಎದುರಿನಲ್ಲಿ ಪ್ರತಿಜ್ಞೆಯನ್ನು ಮಾಡಿ.

ಬ್ರಾಹ್ಮಣಃ

ತಥೇತ್ಯುವಾಚ ತಂ ಪಾರ್ಥಃ ಪಾದೌ ಜಗ್ರಾಹ ಬುದ್ಧಿಮಾನ್ ।
ಯದಾ ಚ ಪಾಂಡವಾಶ್ಚಾನ್ಯೇ ಕೃತಾಸ್ತ್ರಾಃ ಸರ್ವತೋಽಭವನ್ ।
ತತೋ ದ್ರೋಣೋಽಬ್ರವೀದ್ ಭೂಯೋ ದಾತವ್ಯಾ ಗುರುದಕ್ಷಿಣಾ॥

ಆಗ ಬುದ್ಧಿವಂತನಾದ ಅರ್ಜುನನು ದ್ರೋಣರ ಪಾದಗಳನ್ನು ಹಿಡಿದು ಹಾಗೆಯೇ ಆಗಲಿ ಎಂದು ಹೇಳಿದನು. ಪಾಂಡವರೂ ಉಳಿದ ರಾಜಕುಮಾರರೆಲ್ಲರೂ ಅಸ್ತ್ರವಿದ್ಯೆಯನ್ನು ಸಂಪಾದಿಸಿದ ಮೇಲೆ ದ್ರೋಣರು ನನಗೆ ಗುರುದಕ್ಷಿಣೆಯನ್ನು ಕೊಡಬೇಕು ಎಂದು ಪುನಃ ಹೇಳಿದರು.

ಪಾರ್ಷತೋ ದ್ರುಪದೋ ನಾಮ ವೇತ್ರವತ್ಯಾಂ ನರೇಶ್ವರಃ ।
ತಸ್ಮಾದಾಕೃಷ್ಯ ತದ್ರಾಜ್ಯಂ ಮಮ ಶೀಘ್ರಂ ಪ್ರದೀಯತಾಮ್ ॥೩೩॥

ಪೃಷತನ ಮಗನಾದ ದ್ರುಪದರಾಜನು ಪಾಂಚಾಲನಗರದಲ್ಲಿ ರಾಜನಾಗಿದ್ದಾನೆ. (ಪಾಂಚಾಲ ನಗರದ ಸುತ್ತಲೂ ಬೆತ್ತಗಳು ಬೆಳೆದಿರುವುದರಿಂದ ಅದಕ್ಕೆ ವೇತ್ರವತೀ ಎಂದೂ ಹೆಸರು) ಅವನ ರಾಜ್ಯವನ್ನು ಅವನಿಂದ ಸೆಳೆದುಕೊಂಡು ಶೀಘ್ರವಾಗಿ ನನಗೆ ತಂದು ಒಪ್ಪಿಸಬೇಕು.

ಬ್ರಾಹ್ಮಣಃ

ಧಾರ್ತರಾಷ್ಟ್ರೈಶ್ಚ ಸಹಿತಾಃ ಪಾಂಚಾಲಾನ್ ಪಾಂಡವಾ ಯಯುಃ ।
ಯಜ್ಞಸೇನೇನ ಸಂಗಮ್ಯ ಕರ್ಣದುರ್ಯೋಧನಾದಯಃ ।
ನಿರ್ಜಿತಾಃ ಸಂನ್ಯವರ್ತಂತ ತಥಾಽನ್ಯೇ ಕ್ಷತ್ರಿಯರ್ಷಭಾಃ ॥೩೪॥

ಪಾಂಡವರು ದುರ್ಯೋಧನಾದಿಗಳ ಜೊತೆಯಲ್ಲಿ ಪಾಂಚಾಲದೇಶಕ್ಕೆ ಹೋದರು. ಕರ್ಣದುರ್ಯೋಧನಾದಿಗಳು ಮತ್ತು ಉಳಿದ ಕ್ಷತ್ರಿಯಶ್ರೇಷ್ಠರು ಯಜ್ಞಸೇನನ ಜೊತೆಯಲ್ಲಿ ಯುದ್ಧಮಾಡಿ ಸೋತು ಹಿಂದಿರುಗಿದರು.

ತತಃ ಪಾಂಡುಸುತಾಃ ಪಂಚ ನಿರ್ಜಿತ್ಯ ದ್ರುಪದಂ ಯುಧಿ ।
ದ್ರೋಣಾಯ ದರ್ಶಯಾಮಾಸುರ್ಬದ್ಧ್ವಾ ಸಸಚಿವಂ ತದಾ ॥೩೫॥

ಅನಂತರ ಐವರು ಪಾಂಡುಪುತ್ರರು ಯುದ್ಧದಲ್ಲಿ ದ್ರುಪದನನ್ನು ಸೋಲಿಸಿ ಅವನನ್ನೂ ಅವನ ಮಂತ್ರಿಯನ್ನೂ ಕಟ್ಟಿತಂದು ದ್ರೋಣರಿಗೆ ತೋರಿಸಿದರು.

ಮಹೇಂದ್ರಪುತ್ರಃ ಪಾಂಚಾಲಂ ಜಿತವಾನರ್ಜುನಸ್ತದಾ ।
ತದ್ ದೃಷ್ಟ್ವಾ ತು ಮಹಾವೀರ್ಯಂ ಫಲ್ಗುನಸ್ಯಾಮಿತೌಜಸಃ ।
ಮಹೇಂದ್ರಮಿವ ದುರ್ಧರ್ಷಂ ಮಹೇಂದ್ರ ಇವ ದಾನವಮ್ ॥೩೬॥

ಮಹೇಂದ್ರಪುತ್ರನಾದ ಅರ್ಜುನನು ಮಹೇಂದ್ರನಂತೆ ದುರ್ಧರ್ಷನಾದ (ಸೋಲಿಸಲು ಅಸಾಧ್ಯನಾದ) ಪಾಂಚಾಲರಾಜನನ್ನು ಮಹೇಂದ್ರನು ದಾನವನನ್ನು ಗೆದ್ದಂತೆ ಗೆದ್ದುತಂದನು.

ವ್ಯಸ್ಮಯಂತ ಜನಾಃ ಸರ್ವೇ ಯಜ್ಞಸೇನಸ್ಯ ಬಾಂಧವಾಃ ।
ನಾಸ್ಯ ರ್ಜುನಸಮೋ ವೀರ್ಯೇ ರಾಜಪುತ್ರ ಇತಿ ಬ್ರುವನ್ ॥೩೭॥

ಅಮಿತಪರಾಕ್ರಮಿಯಾದ ಅರ್ಜುನನ ಮಹಾವೀರ್ಯವನ್ನು ನೋಡಿ ಯಜ್ಞಸೇನನ ಬಂಧುಜನರೆಲ್ಲರೂ ವಿಸ್ಮಯಪಟ್ಟು ಪರಾಕ್ರಮದಲ್ಲಿ ಅರ್ಜುನನಿಗೆ ಸಮಾನನಾದ ರಾಜಕುಮಾರನು ಇನ್ನೊಬ್ಬನಿಲ್ಲ ಎಂದು ಹೇಳಿದರು.

ದ್ರೋಣಃ

ಪ್ರಾರ್ಥಯಾಮಿ ತ್ವಯಾ ಸಖ್ಯಂ ಪುನರೇವ ನರಾಧಿಪ ।
ನಾರಾಜಾ ಕಿಲ ವೈ ರಾಜ್ಞಃ ಸಖಾ ಭವಿತುಮರ್ಹತಿ ॥೩೮॥

ರಾಜನೇ, ನಾನು ನಿನ್ನ ಜೊತೆಯಲ್ಲಿ ಪುನಃ ಮೈತ್ರಿಯನ್ನು ಪ್ರಾರ್ಥಿಸುತ್ತೇನೆ. ರಾಜನಲ್ಲದವನು ರಾಜನಿಗೆ ಮಿತ್ರನಾಗಲಾರನಷ್ಟೆ?

ಅತಃ ಪ್ರಯತಿತಂ ರಾಜ್ಯೇ ಯಜ್ಞಸೇನ ಮಯಾ ನೃಪ ।
ರಾಜಾಽಸಿ ದಕ್ಷಿಣೇ ತೀರೇ ಭಾಗೀರಥ್ಯಾಹಮುತ್ತರೇ ॥೩೯॥

ಯಜ್ಞಸೇನರಾಜನೇ, ಅದಕ್ಕಾಗಿ ನಾನು ರಾಜ್ಯವನ್ನು ಪಡೆಯಲು ಪ್ರಯತ್ನಿಸಿದೆ. ನೀನು ಭಾಗೀರಥಿಯ ದಕ್ಷಿಣತೀರದಲ್ಲಿ ರಾಜನಾಗಿರು, ನಾನು ಭಾಗೀರಥಿಯ ಉತ್ತರಭಾಗದಲ್ಲಿ ರಾಜನಾಗಿರುತ್ತೇನೆ.

ಕನ್ಯಾಕುಬ್ಜೇ ಚ ಕಾಂಪಿಲ್ಯೇ ವಸೇಥಾಸ್ತ್ವಂ ನರೋತ್ತಮ ।
ಬ್ರಾಹ್ಮಣೈಃ ಸಹಿತೋ ರಾಜಾನ್ನಹಿಚ್ಛತ್ರೇ ವಸಾಮ್ಯಹಮ್ ॥೪೦॥

ನರೋತ್ತಮನೇ, ನೀನು ಕನ್ಯಾಕುಬ್ಜದಲ್ಲಿಯೂ ಮತ್ತು ಕಾಂಪಿಲ್ಯದಲ್ಲಿಯೂ ವಾಸಮಾಡು. ನಾನು ಬ್ರಾಹ್ಮಣರ ಜೊತೆಯಲ್ಲಿ ಅಹಿಚ್ಛತ್ರದಲ್ಲಿ ವಾಸಮಾಡುತ್ತೇನೆ.

ಬ್ರಾಹ್ಮಣಃ

ಅಸತ್ಕಾರಃ ಸ ಸುಮಹಾನ್ ಮುಹೂರ್ತಮಪಿ ತಸ್ಯ ತು ।
ನಾಪೈತಿ ಹೃದಯಾದ್ ರಾಜ್ಞೋ ದುರ್ಮನಾಃ ಸ ಕೃಶೋಽಭವತ್ ॥

ದ್ರೋಣರಿಂದ ಅದ ಅವಮಾನವು ರಾಜನಿಗೆ ಒಂದು ಕ್ಷಣವೂ ಮನಸ್ಸನ್ನು ಬಿಟ್ಟು ಅಗಲಲಿಲ್ಲ. ರಾಜನು ಚಿಂತಾಕ್ರಾಂತನೂ ಮತ್ತು ಕೃಶನೂ ಆದನು.

ಅಮರ್ಷೀ ದ್ರುಪದೋ ರಾಜಾ ಕರ್ಮಸಿದ್ಧಾನ್ ದ್ವಿಜೋತ್ತಮಾನ್ ।
ಅನ್ವಿಚ್ಛನ್ ಪರಿಚಕ್ರಾಮ ಬ್ರಾಹ್ಮಣಾವಸಥಾನ್ ಬಹೂನ್ ॥೪೨॥

ಕ್ರೋಧಿಯಾದ ದ್ರುಪದರಾಜನು ಕರ್ಮಸಿದ್ಧಿಯುಳ್ಳ ಬ್ರಾಹ್ಮಣಶ್ರೇಷ್ಠರನ್ನು ಹುಡುಕುತ್ತಾ ಬ್ರಾಹ್ಮಣರ ಅನೇಕ ಅಗ್ರಹಾರಗಳಲ್ಲಿ ಸಂಚರಿಸಿದನು.

ದ್ರೋಣೇನ ವೈರಂ ದ್ರುಪದೋ ನ ಸುಷ್ವಾಪ ಸ್ಮರಂಸ್ತದಾ ।
ಪುತ್ರಜನ್ಮ ಪರೀಪ್ಸನ್ ಸ ಶೋಕೋಪಹತಚೇತನಃ ॥೪೩॥

ಶೋಕತಪ್ತವಾದ ಮನಸ್ಸುಳ್ಳ ಆ ದ್ರುಪದನು ಪುತ್ರಜನ್ಮವನ್ನು ನಿರೀಕ್ಷಿಸುತ್ತಾ ದ್ರೋಣರು ಮಾಡಿದ ವಿರೋಧವನ್ನು ಮರೆಯದೆ ನಿದ್ರೆಯನ್ನೇ ಮಾಡಲಿಲ್ಲ.

ಪುತ್ರಜನ್ಮ ಪರೀಪ್ಸನ್ ವೈ ಶೋಕೋಪಹತಚೇತನಃ ।
ನಾಸ್ತಿ ಶ್ರೇಷ್ಠಂ ಮಮಾಪತ್ಯಮಿತಿ ನಿಶ್ಚಿತ್ಯ ಚಿಂತಯನ್ ॥೪೪॥

ಜಾತಾನ್ ಪುತ್ರಾನ್ ಸ ನಿರ್ವೇದಾದ್ ಧಿಗ್ ಬಂಧೂನಿತಿ ಚಾಬ್ರವೀತ್।
ನಿರ್ವೇದಃ ಪರಮಶ್ಚಾಸೀದ್ ದ್ರೋಣಾಪ್ರಿಯಚಿಕೀರ್ಷಯಾ ॥೪೫॥

ಶೋಕತಪ್ತಮನಸ್ಸುಳ್ಳ ಅವನು ಪುತ್ರಜನ್ಮವನ್ನು ಬಯಸಿ ನನಗೆ ಶ್ರೇಷ್ಠನಾದ ಪುತ್ರನಿಲ್ಲ ಎಂದು ತಿಳಿದು ಮಕ್ಕಳನ್ನು ಪಡೆದ ತನ್ನ ಬಂಧುಗಳನ್ನು ಯೋಚಿಸಿ ಬೇಸರದಿಂದ ಅವರಿಗೆ ಧಿಕ್ಕಾರವನ್ನು ಹೇಳಿದನು. ದ್ರೋಣರಿಗೆ ಪ್ರತೀಕಾರವನ್ನು ಮಾಡಲು ಬಯಸಿದ ಅವನಿಗೆ ಬಹಳ ಬೇಸರವುಂಟಾಯಿತು.

ಪ್ರಭಾವಂ ವಿನಯಂ ಶಿಷ್ಯಾನ್ ದ್ರೋಣಸ್ಯ ಚರಿತಾನಿ ಚ ।
ಕ್ಷಾತ್ತ್ರೇಣ ಚ ಬಲೇನಾಸ್ಯ ಪರಾಜೇತುಂ ಹಿ ನಾಶಕತ್ ॥೪೬॥

ಅವನು ದ್ರೋಣರ ಪ್ರಭಾವವನ್ನೂ, ವಿನಯವನ್ನೂ, ಚರಿತೆಗಳನ್ನೂ ಮತ್ತು ಶಿಷ್ಯರನ್ನೂ ತನ್ನ ಕ್ಷಾತ್ರಬಲದಿಂದ ಸೋಲಿಸಲು ಸಮರ್ಥನಾಗಲಿಲ್ಲ.

ಅಪ್ರಾಪ್ತವಾನ್ ನರಶ್ರೇಷ್ಠೋ ಯತಮಾನೋಽಪಿ ಭಾರತ ।
ಅಥಿತಃ ಸೋಽಥ ಕಲ್ಮಾಷೀಂ ಗಂಗಾಕೂಲೇ ಪರಿಭ್ರಮನ್ ॥೪೭॥

ಬ್ರಾಹ್ಮಣಾವಸಥಂ ಪುಣ್ಯಮಾಸಸಾದ ಮಹೀಪತಿಃ ।
ತತ್ರ ನಾಸ್ನಾತಕಃ ಕಶ್ಚಿನ್ನ ಚಾಸೀದವ್ರತೀ ದ್ವಿಜಃ ॥೪೮॥

ಭಾರತನೇ, ಎಷ್ಟು ಪ್ರಯತ್ನ ಮಾಡಿದರೂ ಆ ನರಶ್ರೇಷ್ಠನಿಗೆ ಒಬ್ಬ ಅನುಕೂಲನಾದ ಬ್ರಾಹ್ಮಣನೂ ದೊರೆಯಲಿಲ್ಲ. ಅವನು ಗಂಗಾತೀರದ ಸಮೀಪದಲ್ಲಿ ಕಲ್ಮಾಷವರ್ಣದ ವನದಲ್ಲಿ ಸಂಚರಿಸುತ್ತಾ ಪವಿತ್ರವಾದ ಬ್ರಾಹ್ಮಣರ ಒಂದು ಅಗ್ರಹಾರವನ್ನು ತಲುಪಿದನು. ಆ ಅಗ್ರಹಾರದಲ್ಲಿ ಸ್ನಾತಕನಾಗದಿದ್ದ ಅಥವಾ ವ್ರತವನ್ನು ಧರಿಸದಿದ್ದ ಒಬ್ಬ ಬ್ರಾಹ್ಮಣನೂ ಇರಲಿಲ್ಲ.

ಅಧೀಯಾನೌ ಮಹಾಭಾಗೌ ಸೋಽಪಶ್ಯತ್ ಸಂಶಿತವ್ರತೌ ।
ಯಾಜೋಪಯಾಜೌ ಬ್ರಹ್ಮರ್ಷೀ ಶಾಮ್ಯಂತೌ ಪೃಷತಾತ್ಮಜಃ ॥೪೯॥

ಪೃಷತನ ಮಗನಾದ ಆ ದ್ರುಪದನು, ಆ ಅಗ್ರಹಾರದಲ್ಲಿ ವೇದಾಧ್ಯಯನವನ್ನು ಮಾಡುತ್ತಿದ್ದಂತಹ ಒಳ್ಳೆಯ ವ್ರತಧಾರಿಗಳಾದ, ಶಾಂತರಾದ ಮಹಾನುಭಾವರಾದ ಬ್ರಹ್ಮರ್ಷಿಗಳಾದ ಯಾಜೋಪಯಾಜರನ್ನು ನೋಡಿದನು.

ಸಂಹಿತಾಧ್ಯಯನೇ ಯುಕ್ತೌ ಗೋತ್ರತಶ್ಚಾಪಿ ಕಾಶ್ಯಪೌ ।
ತರುಣೌ ತೌ ಯುಕ್ತರೂಪೌ ಬ್ರಾಹ್ಮಣಾವೃಷಿಸತ್ತಮೌ ।
ಸ ಉಪಾಮಂತ್ರಯಾಮಾಸ ಸರ್ವಕಾಮೈರತಂದ್ರಿತಃ ॥೫೦॥

ತರುಣರೂ, ಸುಂದರರೂ, ಋಷಿಶ್ರೇಷ್ಠರೂ ಆಗಿದ್ದ ಆ ಇಬ್ಬರು ಬ್ರಾಹ್ಮಣರು ಕಾಶ್ಯಪಗೋತ್ರದವರಾಗಿದ್ದು ಸಂಹಿತಾಧ್ಯಯನದಲ್ಲಿ ನಿರತ- ರಾಗಿದ್ದರು. ರಾಜನು ಸ್ವಲ್ಪವೂ ತಡಮಾಡದೆ ಅವರಿಗೆ ಸರ್ವಕಾಮಗಳನ್ನೂ ಪ್ರತಿಜ್ಞೆ ಮಾಡಿ ಅವರನ್ನು ಆಹ್ವಾನಿಸಿದನು.

ಸ ಬುದ್ಧ್ವಾ ಬಲಬುದ್ಧಿಂ ತು ಕನೀಯಾಂಸಮುಪಹ್ವರೇ ।
ಪ್ರಪೇದೇ ಚ್ಛಂದಯನ್ ಕಾಮೈರುಪಯಾಜಂ ಧೃತವ್ರತಮ್ ॥೫೧॥

ರಾಜನು ಅವರಲ್ಲಿ ಚಿಕ್ಕವರಾದ ಉಪಯಾಜರ ತಪೋಬಲವನ್ನು ಮತ್ತು ಜ್ಞಾನವನ್ನೂ ಅರಿತು ಏಕಾಂತದಲ್ಲಿ ಧೃತವ್ರತರಾದ ಉಪಯಾಜರಿಗೆ ಅವರಿಗೆ ಇಷ್ಟವಾದ ಕಾಮವನ್ನು ಕೊಡುತ್ತೇನೆಂದು ಹೇಳಿ ಅವರನ್ನು ಸಮೀಪಿಸಿದನು.

ಪಾದಶುಶ್ರೂಷಣೇ ಯುಕ್ತಃ ಪ್ರಿಯವಾಕ್ ಸರ್ವಕಾಮದಃ ।
ಅರ್ಚಯಿತ್ವಾ ಯಥಾನ್ಯಾಯಮುಪಯಾಜಮುವಾಚ ಹ ॥೫೨॥

ಸರ್ವಕಾಮದನೂ, ಪ್ರಿಯವಚನನೂ ಆದ ಅವನು ಉಪಯಾಜರ ಪಾದಸೇವೆಯಲ್ಲಿ ನಿರತನಾಗಿ ಅವರನ್ನು ಶಾಸ್ತ್ರೋಕ್ತರೀತಿಯಿಂದ ಅರ್ಚಿಸಿ ಅವರನ್ನು ಕುರಿತು ಮಾತನಾಡಿದನು.

ಯೇನ ಮೇ ಕರ್ಮಣಾ ಬ್ರಹ್ಮನ್ ಪುತ್ರಃ ಸ್ಯಾದ್ ದ್ರೋಣಮೃತ್ಯವೇ।
ಅರ್ಜುನಸ್ಯ ತಥಾ ಭಾರ್ಯಾ ಭವೇದ್ ಯಾ ವರವರ್ಣಿನೀ ।
ಉಪಯಾಜ ಕೃತೇ ತಸ್ಮಿನ್ ಗವಾಂ ದಾಸ್ಯಾಮಿ ತೇऽರ್ಬುದಮ್ ॥೫೩॥

ಬ್ರಾಹ್ಮಣರೇ, ಯಾವ ಕರ್ಮದಿಂದ ನನಗೆ ದ್ರೋಣರಿಗೆ ಮೃತ್ಯುವಾಗುವ ಪುತ್ರನು ಜನಿಸುವನೋ ಹಾಗೆಯೇ ಅರ್ಜುನನಿಗೆ ಭಾರ್ಯೆಯಾಗುವ ಸುಂದರಿಯಾದ ಪುತ್ರಿಯು ಜನಿಸುವಳೋ ಅಂತಹ ಕರ್ಮವನ್ನು ಮಾಡಿಸಿ. ಅಂತಹ ಕರ್ಮವನ್ನು ಮಾಡಿದರೆ ನಿಮಗೆ ಒಂದು ಅರ್ಬುದ ಗೋದಾನವನ್ನು ಕೊಡುವೆನು.

ಯದನ್ಯತ್ ತೇ ದ್ವಿಜಶ್ರೇಷ್ಠ ಮನಸಃ ಸುಪ್ರಿಯಂ ಭವೇತ್ ।
ಸರ್ವಂ ತತ್ ತೇ ಪ್ರದಾಸ್ಯಾಮಿ ನ ಹಿ ಮೇಽಸ್ತ್ಯತ್ರ ಸಂಶಯಃ ॥೫೪॥

ಬ್ರಾಹ್ಮಣಶ್ರೇಷ್ಠರೇ, ಅದಲ್ಲದೇ ನಿಮ್ಮ ಮನಸ್ಸಿಗೆ ಪ್ರಿಯವಾದ ಏನೇನು ವಸ್ತುಗಳು ಇವೆಯೋ ಅವೆಲ್ಲವನ್ನೂ ನಿಮಗೆ ಕೊಡುವೆನು. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ.

ಇತ್ಯುಕ್ತೋ ನಾಹಮಿತ್ಯೇವಂ ತಮೃಷಿಃ ಪ್ರತ್ಯುವಾಚ ಹ ।
ಆರಾಧಯಿಷ್ಯನ್ ದ್ರುಪದಃ ಸ ತಂ ಪರ್ಯಚರತ್ ಪುನಃ ॥೫೫॥

ದ್ರುಪದನು ಹೀಗೆ ಹೇಳಿದಾಗ ಉಪಯಾಜರು ನಾನು ಮಾಡುವುದಿಲ್ಲ ಎಂದು ಅವನಿಗೆ ಉತ್ತರವನ್ನು ಕೊಟ್ಟರು. ದ್ರುಪದನು ಅವರನ್ನು ಒಲಿಸುವ ಸಲುವಾಗಿ ಪುನಃ ಅವರ ಪರಿಚರ್ಯೆಯನ್ನು ಮಾಡಿದನು.

ತತಃ ಸಂವತ್ಸರಸ್ಯಾಂತೇ ದ್ರುಪದಂ ಸ ದ್ವಿಜೋತ್ತಮಃ ।
ಉಪಯಾಜೋಽಬ್ರವೀದ್ ರಾಜನ್ ಕಾಲೇ ಮಧುರಯಾ ಗಿರಾ ॥೫೬॥

ರಾಜನೇ, ಅನಂತರ ಒಂದು ವರ್ಷವು ಕಳೆದ ಮೇಲೆ ದ್ವಿಜಶ್ರೇಷ್ಠರಾದ ಉಪಯಾಜರು ದ್ರುಪದನನ್ನು ಕುರಿತು ಯೋಗ್ಯವಾದ ಕಾಲದಲ್ಲಿ ಮಧುರವಾದ ಮಾತುಗಳಿಂದ ನುಡಿದರು.

ಜ್ಯೇಷ್ಠೋ ಭ್ರಾತಾ ಮಮಾಗೃಹ್ಣಾದ್ ವಿಚರನ್ ವನನಿರ್ಝರೇ ।
ಅಪರಿಜ್ಞಾತಶೌಚಾಯಾಂ ಭೂಮೌ ನಿಪತಿತಂ ಫಲಮ್ ॥೫೭॥

ನನ್ನ ಅಣ್ಣನು ಕಾಡಿನ ಝರಿಯ ಬಳಿಯಲ್ಲಿ ಸಂಚರಿಸುತ್ತಾ ಶುದ್ಧಿಯು ತಿಳಿಯದಿದ್ದ ಭೂಮಿಯ ಮೇಲೆ ಬಿದ್ದಿದ್ದ ಒಂದು ಫಲವನ್ನು ಎತ್ತಿ ಕೊಂಡನು.

ತದಪಶ್ಯಮಹಂ ಭ್ರಾತುರಸಾಂಪ್ರತಮನುವ್ರಜನ್ ।
ವಿಮರ್ಶಂ ಸಂಕರಾದಾನೇ ನಾಯಂ ಕುರ್ಯಾತ್ ಕಥಂಚನ ॥೫೮॥

ನಾನು ಅಣ್ಣನ ಹಿಂದೆ ಹೋಗುತ್ತಾ ಅವನು ಮಾಡಿದ ಆ ಅನುಚಿತಕಾರ್ಯವನ್ನು ನೋಡಿ ಶುದ್ಧಾಶುದ್ಧಿಗಳು ಬೆರೆತ ವಸ್ತುಗಳ ವಿಷಯದಲ್ಲಿ ಇವನು ಎಂದೂ ವಿಮರ್ಶೆ ಮಾಡುವುದಿಲ್ಲವೆಂದು ತಿಳಿದೆ.

ದೃಷ್ಟ್ವಾ ಫಲಸ್ಯಾಪಗಮಂ ದೋಷಾಂಸ್ತಸ್ಯಾನುಬಂಧಿಕಾನ್ ।
ವಿವಿನಕ್ತಿ ನಾಚಾಶೌಚಂ ಯಃ ಸೋಽನ್ಯತ್ರಾಪಿ ಕಥಂಚನ ॥೫೯॥

ಯಾರು ಕೆಳಗೆ ಬಿದ್ದ ಫಲವನ್ನು ನೋಡಿ ಅದರಲ್ಲಿರಬಹುದಾದ ಅಶುಚಿತ್ವ ಸಂಬಂಧಿಯಾದ ದೋಷಗಳನ್ನು ಪ್ರತ್ಯೇಕಮಾಡಿ ತಿಳಿಯುವುದಿಲ್ಲವೋ ಅವನು ಬೇರೆ ಕಡೆಯಲ್ಲಿಯೂ ಕೂಡ ಹಾಗೆಯೇ ಮಾಡುತ್ತಾನೆ.

ಸಂಹಿತಾಧ್ಯಯನಂ ಕುರ್ವನ್ ವಸನ್ ಗುರುಕುಲೇ ಚ ಯಃ ।
ಭೈಕ್ಷಮುಚ್ಛಿಷ್ಟಮನ್ಯೇಷಾಂ ಭುಂಜತಿ ಸ್ಮ ಸದಾ ಸದಾ ॥೬೦॥

ಅವನು ಗುರುಕುಲದಲ್ಲಿ ಸಂಹಿತಾಧ್ಯಯನವನ್ನು ಮಾಡುವ ಕಾಲದಲ್ಲಿ ಉಳಿದವರು ತಿಂದು ಬಿಟ್ಟ ಶೇಷವನ್ನು ಆಗಾಗ ಭುಂಜಿಸುತ್ತಿದ್ದನು.

ತಮಹಂ ಫಲಾರ್ಥಿನಂ ಮನ್ಯೇ ಭ್ರಾತರಂ ತರ್ಕಚಕ್ಷುಷಾ ।
ತಂ ವೈ ಗಚ್ಛಸ್ವ ನೃಪತೇ ಸ ತ್ವಾಂ ಸಂಯಾಜಯಿಷ್ಯತಿ ॥೬೧॥

ರಾಜನೇ, ನನ್ನ ತರ್ಕಬುದ್ಧಿಯಿಂದ ನನ್ನ ಅಣ್ಣನು ಫಲಾರ್ಥಿ ಎಂದು ಊಹಿಸುತ್ತೇನೆ. ನೀನು ಅವನ ಬಳಿಗೆ ಹೋಗು ಅವನು ನಿನಗೆ ಯಾಗವನ್ನು ಮಾಡಿಸುವನು.

ಜುಗುಪ್ಸಮಾನೋ ನೃಪತಿರ್ಮನಸಾಽನುವಿಚಿಂತಯನ್ ।
ಉಪಯಾಜವಚಃ ಶ್ರುತ್ವಾ ನೃಪತಿಃ ಸರ್ವಧರ್ಮವಿತ್ ।
ಅಭಿಸಂಪೂಜ್ಯ ಪೂಜಾರ್ಹಮೃಷಿಂ ಯಾಜಮುವಾಚ ಸಃ ॥೬೨॥

ಬೇಸರಗೊಂಡ, ಸರ್ವಧರ್ಮವನ್ನೂ ತಿಳಿದ, ರಾಜನು ಉಪಯಾಜನ ಮಾತುಗಳನ್ನು ಕೇಳಿ ಅದನ್ನೇ ಮನಸ್ಸಿನಲ್ಲಿ ಚಿಂತಿಸುತ್ತಾ ಪೂಜಾರ್ಹನಾದ ಯಾಜನನ್ನು ಸಮೀಪಿಸಿ ಅವನನ್ನು ಸತ್ಕರಿಸಿ ಮಾತನಾಡಿದನು.

ಅಯುತಾನಿ ದದಾನ್ಯಷ್ಟೌ ಗವಾಂ ಯಾಜಯ ಮಾಂ ವಿಭೋ ।
ದ್ರೋಣವೈರಾಭಿಸಂತಪ್ತಂ ಮಾಂ ಸಂಹ್ಲಾದಯಿತುಮರ್ಹಸಿ ॥೬೩॥

ವಿಭುಗಳೇ, ನನಗೆ ಯಾಗವನ್ನು ಮಾಡಿಸಿ. ನಿಮಗೆ ಎಂಭತ್ತುಸಾವಿರ ಗೋದಾನವನ್ನು ಮಾಡುತ್ತೇನೆ. ದ್ರೋಣವೈರದಿಂದ ಬೆಂದುಹೋದ ನನ್ನನ್ನು ನೀವು ಉಜ್ಜೀವಿಸಬೇಕು.

ಸ ಹಿ ಬ್ರಹ್ಮವಿದಾಂ ಶ್ರೇಷ್ಠೋ ಬ್ರಹ್ಮಾಸ್ತ್ರೇ ಚಾಪ್ಯನುತ್ತಮಃ ।
ತಸ್ಮಾದ್ ದ್ರೋಣಃ ಪರಾಜೈಷೀನ್ಮಾಂ ವೈ ಸ ಸಖಿವಿಗ್ರಹೇ ।
ಕ್ಷತ್ರಿಯೋ ನಾಸ್ತಿ ತುಲ್ಯೋಽಸ್ಯ ಪೃಥಿವ್ಯಾಂ ಕಶ್ಚಿದಗ್ರಣೀಃ ॥೬೪॥

ದ್ರೋಣರು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರು, ಬ್ರಹ್ಮಾಸ್ತ್ರವನ್ನು ಹೊಂದಿದವರಲ್ಲಿಯೂ ಶ್ರೇಷ್ಠರು. ಆದ್ದರಿಂದಲೇ ದ್ರೋಣರು ಸ್ನೇಹಿತನಾದ ನನ್ನ ಜೊತೆಯಲ್ಲಿ ಯುದ್ಧಮಾಡಿ ನನ್ನನ್ನು ಸೋಲಿಸಿದರು. ಭೂಮಿಯಲ್ಲಿ ಅವರಿಗೆ ಸಮನಾದ ಶ್ರೇಷ್ಠವಾದ ಕ್ಷತ್ರಿಯನು ಯಾವನೂ ಇಲ್ಲ.

ಕೌರವಾಚಾರ್ಯಮುಖ್ಯಸ್ಯ ಭಾರದ್ವಾಜಸ್ಯ ಧೀಮತಃ ।
ದ್ರೋಣಸ್ಯ ಶರಜಾಲಾನಿ ಪ್ರಾಣಿದೇಹಹರಾಣಿ ಚ ॥೬೫॥

ಕೌರವಾಚಾರ್ಯಶ್ರೇಷ್ಠರಾದ ಮೇಧಾವಿಗಳಾದ ಭರದ್ವಾಜರ ಪುತ್ರರಾದ ದ್ರೋಣರ ಬಾಣಸಮೂಹಗಳು ಪ್ರಾಣಿಗಳ ದೇಹವನ್ನು ವಿನಾಶಿಸುತ್ತವೆ.

ಷಡರತ್ನಿ ಧನುಶ್ಚಾಸ್ಯ ತಾಳಮಾತ್ರಮನುತ್ತಮಮ್ ।
ಸ ಹಿ ಬ್ರಾಹ್ಮಣವೇಗೇನ ಕ್ಷಾತ್ರಂ ವೇಗಮಸಂಶಯಮ್ ॥೬೬॥

ಪ್ರತಿಹಂತಿ ಮಹೇಷ್ವಾಸೋ ಭಾರದ್ವಾಜೋ ಮಹಾಮನಾಃ ।
ಕ್ಷತ್ರೋಚ್ಛೇದಾಯ ವಿಹಿತೋ ಜಾಮದಗ್ನ್ಯ ಇವೋತ್ಥಿತಃ ॥೬೭॥

ಆರು ಮೊಳ ಎತ್ತರದ ಅವರ ಶ್ರೇಷ್ಠವಾದ ಧನುಸ್ಸು ತಾಳೆಮರದಷ್ಟು ಎತ್ತರವಿದೆ. ಆ ಮಹೇಷ್ವಾಸರೂ, ಮಹಾಧೈರ್ಯಶಾಲಿಗಳೂ ಆದ ದ್ರೋಣರು ತಮ್ಮ ಬ್ರಾಹ್ಮಣವೇಗದಿಂದ ಕ್ಷತ್ರಿಯವೇಗವನ್ನು ನಿಸ್ಸಂಶಯವಾಗಿ ನಾಶಮಾಡುತ್ತಾರೆ. ಅವರು ಕ್ಷತ್ರಿಯಕುಲದ ನಾಶಕ್ಕೆ ಉದ್ಭವಿಸಿದ ಪರಶುರಾಮರಂತೆ ಬ್ರಹ್ಮದೇವರಿಂದ ಸೃಷ್ಟಿಸಲ್ಪಟ್ಟಿದ್ದಾರೆ.

ತಸ್ಯ ಹ್ಯಸ್ತ್ರಬಲಂ ಘೋರಮಪ್ರಸಹ್ಯಂ ನರೈರ್ಭುವಿ ।
ಬ್ರಾಹ್ಮಮುಚ್ಚಾವಚಂ ತೇಜೋ ಹುತಾಹುತಿರಿವಾನಲಃ ॥೬೮॥

ಅವರ ಘೋರವಾದ ಅಸ್ತ್ರಬಲವನ್ನು ಭೂಮಿಯಲ್ಲಿ ಯಾವ ನರರೂ ಸಹಿಸಲು ಸಾಧ್ಯವಿಲ್ಲ. ಅವರ ಉಚ್ಚಾವಚವಾದ ಅಸ್ತ್ರಗಳ ಬಲವೂ ಹಾಗೆಯೇ, ಅವರ ಬ್ರಾಹ್ಮತೇಜಸ್ಸು ಹಾಗೆಯೇ. ಅವರು ಆಹುತಿಯನ್ನು ಹಾಕಿದ ಅಗ್ನಿಯಂತೆ ಜ್ವಲಿಸುತ್ತಿದ್ದಾರೆ.

ಬ್ರಹ್ಮಕ್ಷತ್ರೇ ಚ ವಿಹಿತೇ ಬ್ರಹ್ಮತೇಜೋ ವಿಶಿಷ್ಯತೇ ।
ಸೋಽಹಂ ಕ್ಷಾತ್ರಾದ್ ಬಲಾದ್ದೀನೋ ಬ್ರಹ್ಮತೇಜಃ ಪ್ರಪೇದಿವಾನ್॥೬೯॥

ಬ್ರಾಹ್ಮಣರು ಮತ್ತು ಕ್ಷತ್ರಿಯರು ಒಂದು ಕಡೆ ಸೇರಿದರೆ ಬ್ರಹ್ಮತೇಜಸ್ಸೇ ಕ್ಷಾತ್ರತೇಜಸ್ಸಿಗಿಂತ ಶ್ರೇಷ್ಠವಾಗುತ್ತದೆ. ಆದ್ದರಿಂದ ನಾನು ಕ್ಷಾತ್ರಬಲದಿಂದಲೂ ಹೀನನಾಗಿ ಬ್ರಹ್ಮತೇಜಸ್ಸನ್ನು ಆಶ್ರಯಿಸಿ ಬಂದಿದ್ದೇನೆ.

ದ್ರೋಣಾದ್ ವಿಶಿಷ್ಟಮಾಸಾದ್ಯ ಭವಂತಂ ಬ್ರಹ್ಮವಿತ್ತಮಮ್ ।
ದ್ರೋಣಾಂತಕಮಹಂ ಪುತ್ರಂ ಲಭೇಯಂ ಯುಧಿ ದುರ್ಜಯಮ್ ॥

ದ್ರೋಣರಿಗಿಂತಲೂ ಶ್ರೇಷ್ಠರಾದ ಬ್ರಹ್ಮಜ್ಞಾನಿಗಳಾದ ತಮ್ಮನ್ನು ಸಮೀಪಿಸಿ ತಮ್ಮ ಅನುಗ್ರಹದಿಂದ ಯುದ್ಧದಲ್ಲಿ ದುರ್ಜಯನಾದ ದ್ರೋಣರಿಗೆ ಮೃತ್ಯುವಾಗುವ ಮಗನನ್ನು ನಾನು ಪಡೆಯಲು ಬಯಸುತ್ತೇನೆ.

ಪಾಂಡೋಃ ಸ್ನುಷಾರ್ಥಂ ಕನ್ಯಾ ಚ ಭವೇದಿತಿ ಮತಿರ್ಮಮ ।
ತತ್ಕರ್ಮ ಕುರು ಮೇ ಯಾಜ ಪ್ರದದಾಮ್ಯರ್ಬುದಂ ಗವಾಮ್ ॥೭೦॥

ಪಾಂಡುವಿಗೆ ಸೊಸೆಯಾಗುವ ಒಬ್ಬ ಮಗಳೂ ಬೇಕೆಂದು ನನ್ನ ಅಭಿಪ್ರಾಯ. ಯಾಜರೇ, ನನ್ನ ಸಲುವಾಗಿ ಅಂತಹ ಕರ್ಮವನ್ನು ಮಾಡಿ. ನಾನು ನಿಮಗೆ ಒಂದು ಹತ್ತು ಕೋಟಿ ಗೋದಾನವನ್ನು ಮಾಡುತ್ತೇನೆ.

ಯಾಜೋ ದ್ರೋಣವಿನಾಶಾಯ ಪ್ರತಿಜಜ್ಞೇ ತಥೈವ ಸಃ ।
ತಥೇತ್ಯುಕ್ತ್ವಾ ತು ತಂ ಯಜ್ಞಂ ಪುತ್ರಕಾಮೀಯಮಾರಭತ್ ॥೭೨॥

ಯಾಜರು ದ್ರೋಣವಿನಾಶದ ಸಲುವಾಗಿ ಹಾಗೆಯೇ ಮಾಡುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿ ಪುತ್ರಕಾಮೇಷ್ಟಿಯಾಗವನ್ನು ಮಾಡಲು ಆರಂಭಿಸಿದರು.

ಗುರ್ವರ್ಥ ಇತಿ ಚಾಕಾಮ ಉಪಯಾಜೋಽಪ್ಯಯೋಜಯತ್ ।
ಯಾಜಸ್ತು ಯಜತಾಂ ಶ್ರೇಷ್ಠೋ ಹವ್ಯವಾಹಮತರ್ಪಯತ್ ॥೭೩॥

ತಮಗೆ ಇಷ್ಟವಿಲ್ಲದಿದ್ದರೂ ಅಣ್ಣನ ಪ್ರೀತಿಗೋಸ್ಕರ ಉಪಯಾಜರು ಆ ಯಾಗದಲ್ಲಿ ಭಾಗವಹಿಸಿದರು. ಯಜ್ಞಮಾಡುವವರಲ್ಲಿ ಶ್ರೇಷ್ಠರಾದ ಯಾಜರು ತಮ್ಮ ಯಜ್ಞದಿಂದ ಅಗ್ನಿದೇವತೆಯನ್ನು ಸಂತೋಷಪಡಿಸಿದರು.

ತತಸ್ತಸ್ಯ ನರೇಂದ್ರಸ್ಯ ಉಪಯಾಜೋ ಮಹಾಯಶಾಃ ।
ಆಚಖ್ಯೌ ಕರ್ಮವೈತಾನಂ ತಥಾ ಪುತ್ರಫಲಸ್ಯ ವೈ ॥೭೪॥

ಆಗ ಮಹಾಕೀರ್ತಿವಂತರಾದ ಉಪಯಾಜರು ಆ ರಾಜನಿಗೆ ಪುತ್ರಫಲವನ್ನು ಪಡೆಯಲು ಮಾಡುವ ಆ ಯಜ್ಞದ ಸಂಬಂಧಿಯಾದ ಎಲ್ಲಾ ವಿವರಗಳನ್ನೂ ನೀಡಿದರು.

ಸ ಚ ಪುತ್ರೋ ಮಹಾವೀರ್ಯೋ ಮಹಾತೇಜಾ ಮಹಾಬಲಃ ।
ಇಷ್ಯತೇ ಯದ್ವಿಧೋ ರಾಜನ್ ಭವಿತಾ ವೈ ತಥಾವಿಧಃ ॥೭೫॥

ರಾಜನೇ, ನೀನು ಎಂತಹ ಮಹಾವೀರ್ಯನಾದ, ಮಹಾತೇಜಸ್ವಿಯಾದ, ಮಹಾಬಲನಾದ ಪುತ್ರನನ್ನು ಬಯಸುತ್ತೀಯೋ ನಾವು ಮಾಡುವ ಕರ್ಮದಿಂದ ಅಂತಹ ಪುತ್ರನೇ ಜನಿಸುವನು.

ಯಥೋಕ್ತಂ ಕಲ್ಪಯಾಮಾಸ ರಾಜಾ ವಿಪ್ರೇಣ ತಂ ಕ್ರತುಮ್ ।
ಭಾರದ್ವಾಜಸ್ಯ ಹಂತಾರಂ ಸೋಽಭಿಸಂಧಾಯ ಭೂಮಿಪಃ ॥೭೬॥

ಆ ರಾಜನು ದ್ರೋಣಾಚಾರ್ಯರ ಹಂತಕನನ್ನು ಉದ್ದೇಶಿಸಿ ಉಪಯಾಜರು ಹೇಳಿದಂತೆ ಆ ಯಾಗಕ್ಕೆ ಸಂಬಂಧಿಸಿದ ಎಲ್ಲಾ ವಸ್ತುಗಳನ್ನೂ ಅಣಿಮಾಡಿದನು.

ಆಜಹ್ರೇ ತತ್ ತಥಾ ಸರ್ವಂ ದ್ರುಪದಃ ಕರ್ಮಸಿದ್ಧಯೇ ।
ಯಾಜಸ್ತು ಸವನಸ್ಯಾಂತೇ ದೇವೀಮಾಹ್ವಯಾಪಯತ್ ತದಾ ॥೭೭॥

ದ್ರುಪದನು ತನ್ನು ಕರ್ಮದ ಸಿದ್ಧಿಗಾಗಿ ಆ ಎಲ್ಲಾ ವಸ್ತುಗಳನ್ನೂ ಹಾಗೆಯೇ ತಂದು ಒದಗಿಸಿದನು, ಹೋಮದ ಕೊನೆಯಲ್ಲಿ ಯಾಜರು ರಾಣಿಯನ್ನು ಕರೆಸಿದರು.

ಯಾಜಃ

ಪ್ರೇಹಿ ಮಾಂ ರಾಜ್ಞಿ ಪೃಷತಿ ಮಿಥುನಂ ತ್ವಾಮುಪಸ್ಥಿತಮ್ ।
ಕುಮಾರಶ್ಚ ಕುಮಾರೀ ಚ ಪತಿವಂಶವಿವೃದ್ಧಯೇ ॥೭೮॥

ದ್ರುಪದನ ಪತ್ನಿಯಾದ ರಾಣಿಯೇ, ಬೇಗ ನನ್ನ ಬಳಿಗೆ ಬಾ. ಪತಿವಂಶದ ಅಭಿವೃದ್ಧಿಗಾಗಿ ಅವಳಿಮಕ್ಕಳಾದ ಒಬ್ಬ ಪುತ್ರನೂ ಮತ್ತು ಪುತ್ರಿಯೂ ನಿನ್ನನ್ನು ಎದುರು ನೋಡುತ್ತಿದ್ದಾರೆ.

ದೇವೀ

ನಾಲಿಪ್ತಂ ವೈ ಮಮ ಮುಖಂ ಪುಣ್ಯಾನ್ ಗಂಧಾನ್ ಬಿಭರ್ಮಿ ಚ।
ನ ಪತ್ನೀ ತೇಽಸ್ಮಿ ಸೂತ್ಯರ್ಥಂ ತಿಷ್ಠ ಯಾಜ ಮಮ ಪ್ರಿಯೇ ॥೭೯॥

ನನ್ನ ಮುಖಕ್ಕೆ ಇನ್ನೂ ಲೇಪನವನ್ನು ಮಾಡಿಕೊಂಡಿಲ್ಲ. ಸುಗಂಧ ದ್ರವ್ಯಗಳನ್ನು ಹಾಕಿಕೊಂಡಿಲ್ಲ. ಪ್ರಸವದ ಸಲುವಾಗಿ ಬಾ ಎಂದು ಕರೆಯಲು ನಾನು ನಿನ್ನ ಪತ್ನಿಯಲ್ಲ. ಯಾಜನೇ, ಸ್ವಲ್ಪ ಸಮಯ ತಡೆದು ನನ್ನ ಪ್ರಿಯವನ್ನು ಸಾಧಿಸು.

ಯಾಜಃ

ಯಾಜೇನ ಶ್ರಪಿತಂ ಹವಿರುಪಯಾಜೇನ ಮಂತ್ರಿತಮ್ ।
ಕಥಂ ಕಾಮಂ ನ ಸಂದಧ್ಯಾತ್ ಪೃಷತಿ ಪ್ರೇಹಿ ತಿಷ್ಠ ವಾ ॥೮೦॥

ಯಾಜರು ಸಿದ್ಧಪಡಿಸಿ ಉಪಯಾಜರು ಮಂತ್ರಿಸಿದ ಹವಿಸ್ಸು ಹೇಗೆ ತನ್ನ ಫಲವನ್ನು ಕೊಡದೆ ಇದ್ದೀತು. ರಾಣಿಯೇ ಬೇಕಾದರೆ ಬಾ ಇಲ್ಲದಿದ್ದರೆ ಬಿಡು.

ಬ್ರಾಹ್ಮಣಃ

ಏವಮುಕ್ತ್ವಾ ತು ಯಾಜೇನ ಹುತೇ ಹವಿಷಿ ಸಂಸ್ಕೃತೇ ।
ಉತ್ತಸ್ಥೌ ಪಾವಕಾತ್ ತಸ್ಮಾತ್ ಕುಮಾರೋ ದೇವಸನ್ನಿಭಃ ॥೮೧॥

ಹೀಗೆ ಹೇಳಿ ಆ ಸಂಸ್ಕೃತವಾದ ಹವಿಸ್ಸು ಯಾಜರಿಂದ ಅಗ್ನಿಯಲ್ಲಿ ಹೋಮ ಮಾಡಲ್ಪಡುತ್ತಿರಲು ಅಗ್ನಿಯಿಂದಲೇ ದೇವಕಾಂತಿಯುಳ್ಳ ಕುಮಾರನು ಎದ್ದು ಬಂದನು.

ಜ್ವಾಲಾವರ್ಣೋ ಘೋರರೂಪಃ ಕಿರೀಟೀ ವರ್ಮ ಚೋತ್ತಮಮ್ ।
ಬಿಭ್ರತ್ ಸಖಡ್ಗಃ ಸಶರೋ ಧನುಷಾ ವಿನದನ್ ಮುಹುಃ ॥೮೨॥

ಅಧ್ಯಾರೋಹದ್ ದೃಢರಥಂ ತೇನ ಸ ಪ್ರಯಯೌ ತದಾ ।
ತತಃ ಪ್ರಣೇದುಃ ಪಾಂಚಾಲಾಃ ಪ್ರಹೃಷ್ಟಾಃ ಸಾಧುಸಾಧ್ವಿತಿ ॥೮೩॥

ಅವನು ಜ್ವಾಲಾವರ್ಣವುಳ್ಳವನೂ, ಘೋರರೂಪವುಳ್ಳವನೂ ಆಗಿ, ಶ್ರೇಷ್ಠವಾದ ಕಿರೀಟವನ್ನು ಧರಿಸಿ, ಕೈಯಲ್ಲಿ ಖಡ್ಗಚರ್ಮಗಳನ್ನೂ, ಧನುಸ್ಸನ್ನೂ ಮತ್ತು ಶರಗಳನ್ನೂ ಹಿಡಿದು, ಮತ್ತೆ ಮತ್ತೆ ಗರ್ಜನೆಯನ್ನು ಮಾಡುತ್ತಾ ಶ್ರೇಷ್ಠವಾದ ರಥವನ್ನು ಏರಿ ಅಲ್ಲಿಂದ ಹೊರಟನು. ಆಗ ಪಾಂಚಾಲರೆಲ್ಲರೂ ಸಂತೋಷದಿಂದ ಸಾಧು ಸಾಧು ಎಂದು ಸಿಂಹನಾದವನ್ನು ಮಾಡಿದರು.

ಭಯಾಪಹೋ ರಾಜಪುತ್ರಃ ಪಾಂಚಾಲಾನಾಂ ಯಶಸ್ಕರಃ ।
ರಾಜ್ಞಃ ಶೋಕಾಪಹೋ ಜಾತ ಏಷ ದ್ರೋಣವಧಾಯ ವೈ ।
ಇತ್ಯುವಾಚ ಮಹದ್ಭೂತಮದೃಶ್ಯಂ ಖೇಚರಂ ತದಾ ॥೮೪॥

ಈಗ ಜನಿಸಿದ ಕುಮಾರನು ಪಾಂಚಾಲರಿಗೆ ಯಶಸ್ಸನ್ನು ಕೊಟ್ಟು ರಾಜನಿಗೆ ಶೋಕವನ್ನೂ ಭಯವನ್ನೂ ಪರಿಹರಿಸಿ ದ್ರೋಣಸಂಹಾರ ಮಾಡುವನು ಎಂದು ಆಕಾಶ ಸಂಚಾರಿಯಾದ ಒಂದು ಮಹಾಭೂತವು ಆಗ ಅದೃಶ್ಯವಾಗಿ ನುಡಿಯಿತು.

ಕುಮಾರೀ ಚಾಪಿ ಪಾಂಚಾಲೀ ಅರ್ಜುನಾರ್ಥೇ ವಿನಿರ್ಮಿತಾ ।
ಸುಭಗಾ ದರ್ಶನೀಯಾಂಗೀ ವೇದಿಮಧ್ಯಾತ್ ಸಮುತ್ಥಿತಾ ।
ಮಾನುಷಂ ವಿಗ್ರಹಂ ಕೃತ್ವಾ ಶ್ರೀಃ ಸಾಕ್ಷಾದ್ ದೇವವರ್ಣಿನೀ ॥೮೫॥

ಕುಮಾರಿಯಾದ ಪಾಂಚಾಲಿಯು ಅರ್ಜುನನ ಸಲುವಾಗಿ ಜನಿಸಿದಳು. ಸುಂದರಿಯೂ ಮನೋಹರವಾದ ಅವಯವವುಳ್ಳವಳೂ ಆದ ಅವಳು ವೇದಿಮಧ್ಯದಿಂದ ಮೇಲೆದ್ದು ಬಂದಳು. ದೇವಸುಂದರಿಯಾದ, ಸಾಕ್ಷಾತ್ ಶ್ರೀದೇವಿಯಾದ ಅವಳು ಮಾನುಷ ಶರೀರವನ್ನು ಧರಿಸಿ ಮೇಲೆದ್ದು ಬಂದಳು.

(ದ್ರೌಪದಿಯ ದೇಹದಲ್ಲಿ ಭಾರತಿ, ಪಾರ್ವತಿ, ಶಚಿ, ಶ್ಯಾಮಲೆ ಮತ್ತು ಉಷೆಯರಿದ್ದಾರೆ. ಅವರೆಲ್ಲರಿಗೂ ತಮ್ಮ ತಮ್ಮ ಪತಿಗಳನ್ನು ಆಶ್ರಯಿಸುವ ಕಾರಣದಿಂದ ಶ್ರೀ ಎಂದು ಹೆಸರಿದೆ. ಆದ್ದರಿಂದ ಶ್ರೀದೇವಿಯು ಜನಿಸಿದಳು ಎಂದು ಹೇಳಿದ್ದಾರೆ)

ನೀಲೋತ್ಪಲಸಮೋ ಗಂಧೋ ಯಸ್ಯಾಃ ಕ್ರೋಶಾತ್ ಪ್ರವಾಯತಿ ।
ಯಾ ಬಿಭರ್ತಿ ಪರಂ ರೂಪಂ ಯಸ್ಯಾ ನಾಸ್ತಿ ಸಮಾ ಭುವಿ ॥೮೬॥

ಅವಳ ಶರೀರದ ನೀಲೋತ್ಪಲ ಗಂಧ ಸಮಾನವಾದ ಗಂಧವು ಒಂದು ಕ್ರೋಶದ ದೂರದಿಂದ ಗಾಳಿಯಲ್ಲಿ ಬರುತ್ತದೆ. ಅವಳ ಶ್ರೇಷ್ಠವಾದ ರೂಪಕ್ಕೆ ಸಮಾನವಾದ ರೂಪವುಳ್ಳವಳು ಭೂಮಿಯಲ್ಲಿ ಯಾರೂ ಇಲ್ಲ.

ಸದೃಶೀ ಪಾಂಡುಪುತ್ರಸ್ಯ ಅರ್ಜುನಸ್ಯಾತಿಭದ್ರಿಕಾ ।
ಊಚುಃ ಪ್ರಹೃಷ್ಟಮನಸೋ ರಾಜಭಕ್ತಿಪುರಸ್ಕೃತಾಃ ॥೮೭॥

ಅವಳು ಪಾಂಡುಪುತ್ರನಾದ ಅರ್ಜುನನಿಗೆ ಯೋಗ್ಯಳಾದವಳು ಮತ್ತು ಅತ್ಯಂತ ಮಂಗಲಸ್ವರೂಪಳಾದವಳು ಎಂದು. ರಾಜಭಕ್ತಿ ಪುರುಷರೆಲ್ಲಾ ಮನಸ್ಸಂತೋಷದಿಂದ ಹೇಳಿದರು.

ತಾಂ ಚಾಪಿ ಜಾತಾಂ ಸುಶ್ರೋಣೀಂ ವಾಗುವಾಚಾಶರೀರಿಣೀ ।
ಸರ್ವಯೋಷಿದ್ವರಾ ಕೃಷ್ಣಾ ಕ್ಷಯಂ ಕ್ಷತ್ರಂ ನಿನೀಷತಿ ॥೮೮॥

ಆ ಸುಂದರಿಯು ಜನಿಸಿದಾಗಲೂ ಅಶರೀರವಾಣಿಯಾಯಿತು. ಎಲ್ಲ ಸ್ತ್ರೀಯರಿಗಿರಿಂತ ಶ್ರೇಷ್ಠಳಾದ ಈ ಕೃಷ್ಣೆಯು ಕ್ಷತ್ರಿಯಕುಲವನ್ನು ನಾಶಮಾಡುತ್ತಾಳೆ.

ಸುರಕಾರ್ಯಮಿದಂ ಲೋಕೇ ಕರಿಷ್ಯತಿ ಸುಮಧ್ಯಮಾ ।
ಅಸ್ಯಾಃ ಹೇತೋಃ ಕ್ಷತ್ರಿಯಾಣಾಂ ಮಹದುತ್ಪತ್ಸ್ಯತೇ ಭಯಮ್ ॥೮೯॥

ಕ್ಷತ್ರಿಯಕುಲ ನಾಶವು ದೇವಕಾರ್ಯ. ಲೋಕದಲ್ಲಿ ಈ ಸುಂದರಿಯು ಅದನ್ನು ಮಾಡುವಳು. ಇವಳ ನಿಮಿತ್ತದಿಂದಾಗಿ ಕ್ಷತ್ರಿಯರಿಗೆ ದೊಡ್ಡ ಭಯವು ಉಂಟಾಗಲಿದೆ.

ತಚ್ಛ್ರುತ್ವಾ ಸರ್ವಪಾಂಚಾಲಾಃ ಪ್ರಣೇದುಃ ಸಿಂಹಸಂಘವತ್ ।
ತಚ್ಛ್ರುತ್ವಾ ದ್ರುಪದೋ ರಾಜಾ ಹರ್ಷಾದಶ್ರ್ಯುನ್ಯವರ್ತಯತ್ ॥೯೦॥

ಇದನ್ನು ಕೇಳಿದ ಎಲ್ಲಾ ಪಾಂಚಾಲರೂ ಸಿಂಹನಾದದಿಂದ ಗರ್ಜನೆಯನ್ನು ಮಾಡಿದರು. ಇದನ್ನು ಕೇಳಿದ ದ್ರುಪದರಾಜನು ಸಂತೋಷದಿಂದ ಕಣ್ಣೀರನ್ನು ಸುರಿಸಿದನು.

ಪರಿಷ್ವಜ್ಯ ಸುತಾಂ ಕೃಷ್ಣಾಂ ಸ್ನುಷಾ ಪಾಂಡೋರಿತಿ ಬ್ರುವನ್ ।
ಅಂಕಮಾರೋಪ್ಯ ಪಾಂಚಾಲೀಂ ರಾಜಾ ಹರ್ಷಮವಾಪ ಸಃ ॥೯೧॥

ಅವನು ಮಗಳನ್ನು ಆಲಿಂಗಿಸಿ, ಪಾಂಡುವಿನ ಸೊಸೆಯೆಂದು ಹೇಳಿ, ತೊಡೆಯ ಮೇಲೆ ಕೂಡಿಸಿಕೊಂಡು ಬಹಳ ಸಂತೋಷ ಪಟ್ಟನು.

ತಯೋಸ್ತು ನಾಮನೀ ಚಕ್ರುರ್ದ್ವಿಜಾಃ ಸಂಪೂರ್ಣಮಾನಸಾಃ ।
ಧೃಷ್ಟತ್ವಾದಪ್ರಧೃಷ್ಯತ್ವಾದ್ ದ್ಯುಮ್ನಾದ್ಯುತ್ಸಂಭವಾದಪಿ ॥೯೨॥

ಧೃಷ್ಟದ್ಯುಮ್ನಃ ಕುಮಾರೋಽಯಂ ದ್ರುಪದಸ್ಯ ಭವತ್ವಿತಿ ।
ಕೃಷ್ಣೇತ್ಯೇವಾಬ್ರುವನ್ ಕೃಷ್ಣಾಂ ಕೃಷ್ಣಾಽಭೂತ್ ಸಾ ಹಿ ವರ್ಣತಃ ॥೯೩॥

ಬ್ರಾಹ್ಮಣರು ತುಂಬಿದ ಮನಸ್ಸಿನಿಂದ ಅವರಿಬ್ಬರಿಗೂ ನಾಮಕರಣವನ್ನು ಮಾಡಿದರು. ಧೈರ್ಯಶಾಲಿಯಾದುದರಿಂದ ಶತ್ರುಗಳಿಂದ ಸೋಲಿಸಲ್ಪಡಲು ಸಾಧ್ಯವಾಗದುದರಿಂದ, ಕಾಂತಿಯುಕ್ತನಾದ್ದರಿಂದ ಮತ್ತು ಕಾಂತಿಯಿಂದ ಜನಿಸಿದುದರಿಂದ, ಈ ದ್ರುಪದನ ಕುಮಾರನಿಗೆ ಧೃಷ್ಟದ್ಯುಮ್ನ ಎಂದು ಹೆಸರಾಗಲಿ

(ಎಂದು ಹೇಳಿದರು). ಈ ಕುಮಾರಿಯು ಕೃಷ್ಣವರ್ಣದವಳಾದ್ದರಿಂದ ಬ್ರಾಹ್ಮಣರು ಅವಳನ್ನು ಕೃಷ್ಣಾ ಎಂದೇ ಕರೆದರು.

ತಥಾ ತನ್ಮಿಥುನಂ ಜಜ್ಞೇ ದ್ರುಪದಸ್ಯ ಮಹಾಮಖೇ ।
ಧೃಷ್ಟದ್ಯುಮ್ನಸ್ತು ಪಾಂಚಾಲಃ ಸಿಂಹನಾದೇನ ನಾದಯನ್ ॥೯೪॥

ಸೋಽಧ್ಯಾರೋಹದ್ ರಥವರಂ ತೇನ ಸಂಪ್ರಯಯೌ ಗೃಹಮ್ ।
ಕೃಷ್ಣಾ ಚ ಶಿಬಿಕಾಂ ಪ್ರಾಪ್ಯ ಪ್ರವಿವೇಶ ನಿವೇಶನಮ್ ॥೯೫॥

ದ್ರುಪದನ ಮಹಾಯಜ್ಞದಲ್ಲಿ ಹೀಗೆ ಆ ಅವಳಿ ಮಕ್ಕಳು ಜನಿಸಿದರು. ದ್ರುಪದನ ಮಗನಾದ ಧೃಷ್ಟದ್ಯುಮ್ನನು ಸಿಂಹನಾದದಿಂದ ಗರ್ಜಿಸುತ್ತಾ ಶ್ರೇಷ್ಠವಾದ ರಥವನ್ನೇರಿ ಮನೆಗೆ ಹೊರಟನು. ದ್ರೌಪದಿಯಾದರೋ ಪಲ್ಲಕ್ಕಿಯಲ್ಲಿ ಕುಳಿತು ಅರಮನೆಯನ್ನು ಪ್ರವೇಶಿಸಿದಳು.

ದ್ರೋಣಂ ಸಂಪೂಜ್ಯ ವಿಧಿವದ್ ಗುರುರಿತ್ಯೇವ ಧರ್ಮತಃ ।
ಪರಿದಾಯ ಸುತಂ ಶಿಷ್ಯಂ ಧೃಷ್ಟದ್ಯುಮ್ನಂ ತು ಸೋಮಕಃ ।
ಅಸ್ಯಾಸ್ತ್ರಾಣಿ ಪ್ರಸೀದೇತಿ ಪ್ರಬ್ರವೀತ್ ಪ್ರಿಯವಾದನಃ ॥೯೬॥

ಸೋಮಕರಾಜನಾದ ದ್ರುಪದನು ದ್ರೋಣರನ್ನು ಧರ್ಮದಿಂದ ಗುರುಗಳೆಂದೇ ವಿಧಿವತ್ತಾಗಿ ಪೂಜಿಸಿ, ತನ್ನ ಪುತ್ರನಾದ ಧೃಷ್ಟದ್ಯುಮ್ನನನ್ನು ಅವರಿಗೆ ಶಿಷ್ಯನನ್ನಾಗಿ ಒಪ್ಪಿಸಿ ಇವನಿಗೆ ಎಲ್ಲಾ ಅನುಗ್ರಹವನ್ನು ಮಾಡಿ, ಎಲ್ಲಾ ಅಸ್ತ್ರಗಳನ್ನು ಕಲಿಸಬೇಕು ಎಂದು ಪ್ರಿಯವಾದ ಮಾತುಗಳನ್ನು ಆಡಿದನು.

ಮಹಾಪ್ರಭಾವೋ ಬ್ರಹ್ಮರ್ಷಿಜ್ಞಾತ್ವಾ ತಸ್ಯ ತು ಸಂಭವಮ್ ।
ಉಪಾಕರೋದಸ್ತ್ರಹೇತೋರ್ಭಾರದ್ವಾಜಃ ಪ್ರತಾಪವಾನ್ ॥೯೭॥

ಮಹಾಪ್ರಭಾವಶಾಲಿಗಳಾದ ಬ್ರಹ್ಮರ್ಷಿಗಳಾದ ದ್ರೋಣರು ಅವನ ಉತ್ಪತ್ತಿಯನ್ನು ತಿಳಿದಿದ್ದರೂ, ಪ್ರತಾಪಶಾಲಿಗಳಾದ ಅವರು ಅವನನ್ನು ಅಸ್ತ್ರವಿದ್ಯೆಯಲ್ಲಿ ಶಿಷ್ಯನಾಗಿ ಸ್ವೀಕರಿಸಿ ಶಿಕ್ಷಣವನ್ನು ಪ್ರಾರಂಭಿಸಿದರು.

ಅಮೋಕ್ಷಣೀಯಂ ದೈವಂ ಹಿ ಭಾವಿ ಮತ್ವಾ ಮಹಾಮತಿಃ ।
ತಥಾ ತತ್ಕೃತವಾನ್ ದ್ರೋಣ ಆತ್ಮಕೀರ್ತ್ಯರ್ಥಕಾರಣಾತ್ ॥೯೮॥

ಮಹಾಮತಿಗಳಾದ ದ್ರೋಣರು ದೈವನಿಯತಿಯನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲವೆಂದು ತಿಳಿದು ಹಾಗೆಯೇ ತಮ್ಮ ಕೀರ್ತಿಯು ನಾಶವಾಗಬಾರದೆಂಬ ಕಾರಣದಿಂದಲೂ ಹಾಗೆ ಮಾಡಿದರು. (ಧೃಷ್ಟದ್ಯುಮ್ನನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು.)

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಅಷ್ಟಷಷ್ಟ್ಯಧಿಕಶತತಮೋऽಧ್ಯಾಯಃ॥
॥ ಇತಿ ಚೈತ್ರರಥಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ನೂರ ಅರವತ್ತೊಂಭತ್ತನೆಯ ಅಧ್ಯಾಯ

(ಜತುಗೃಹದಲ್ಲಿ ಪಾಂಡವರ ದಾಹವನ್ನು ಕೇಳಿ ದ್ರುಪದನ ವಿಷಾದ ಮತ್ತು ಅರ್ಜುನನ ಬಗ್ಗೆ ಚಿಂತೆ)

ಬ್ರಾಹ್ಮಣಃ

ಶ್ರುತ್ವಾ ಜತುಗೃಹೇ ವೃತ್ತಂ ಬ್ರಾಹ್ಮಣಾಃ ಸಪುರೋಹಿತಾಃ ।
ಪಾಂಚಾಲರಾಜಂ ದ್ರುಪದಮಿದಂ ವಚನಮಬ್ರುವನ್ ॥೧॥

ಜತುಗೃಹದಲ್ಲಿ ನಡೆದ ವೃತ್ತಾಂತವನ್ನು ಕೇಳಿ ಬ್ರಾಹ್ಮಣರು ಮತ್ತು ಪುರೋಹಿತರು ಪಾಂಚಾಲರಾಜನಾದ ದ್ರುಪದನನ್ನು ಕುರಿತು ಈ ಮಾತನ್ನಾಡಿದರು.

ಧಾರ್ತರಾಷ್ಟ್ರಾಃ ಸಹಾಮಾತ್ಯಾ ಮಂತ್ರಯಿತ್ವಾ ಪರಸ್ಪರಮ್ ।
ಪಾಂಡವಾನಾಂ ವಿನಾಶಾಯ ಮತಿಂ ಚಕ್ರುಃ ಸುದುಷ್ಕರಮ್ ॥೨॥

ಧೃತರಾಷ್ಟ್ರನ ಪುತ್ರರು ಮತ್ತು ಮಂತ್ರಿಗಳು ಸೇರಿ ಪರಸ್ಪರವಾಗಿ ಮಂತ್ರಾಲೋಚನೆಯನ್ನು ನಡೆಸಿ, ಪಾಂಡವರ ವಿನಾಶದ ಸಲುವಾಗಿ ದುಷ್ಕರವಾದ ಬುದ್ಧಿಯನ್ನು ತಳೆದರು.

ದುರ್ಯೋಧನೇನ ಪ್ರಹಿತಃ ಪುರೋಚನ ಇತಿ ಶ್ರುತಃ ।
ವಾರಣಾವತಮಾಸಾದ್ಯ ಕೃತ್ವಾ ಜತುಗೃಹಂ ಮಹತ್ ॥೩॥

ತಸ್ಮಿನ್ ಗೃಹೇ ಸುವಿಶ್ವಸ್ತಾನ್ ಪಾಂಡವಾನ್ ಪೃಥಯಾ ಸಹ ।
ಅರ್ಧರಾತ್ರೇ ಮಹಾರಾಜ ದಗ್ಧವಾನ್ ಸ ಪುರೋಚನಃ ॥೪॥

ಮಹಾರಾಜನೇ, ದುರ್ಯೋಧನನಿಂದ ಕಳುಹಿಸಲ್ಪಟ್ಟ ಪುರೋಚನ- ನೆಂಬುವನು ವಾರಣಾವತಕ್ಕೆ ಬಂದು ದೊಡ್ಡ ಜತುಗೃಹವನ್ನು ನಿರ್ಮಾಣ ಮಾಡಿಸಿ ನಂಬಿಕೆಯಲ್ಲಿದ್ದ ಪಾಂಡವರನ್ನು ಕುಂತಿಯ ಜೊತೆಯಲ್ಲಿ ಅರ್ಧರಾತ್ರಿಯಲ್ಲಿ ದಹನ ಮಾಡಿದನು.

ಅಗ್ನಿನಾ ತು ಸ್ವಯಮಪಿ ದಗ್ಧಃ ಕ್ಷುದ್ರೋ ನೃಶಂಸವತ್ ।
ಏತಚ್ಛ್ರುತ್ವಾ ಸುಸಂಹೃಷ್ಟೋ ಧಾರ್ತರಾಷ್ಟ್ರಃ ಸಬಾಂಧವಃ ॥೫॥

ಕ್ಷುದ್ರನಾದ ಅವನು ತಾನೂ ಕೂಡ ನೃಶಂಸನಂತೆ ಅಗ್ನಿಯಿಂದ ದಗ್ಧನಾದನು. ಇದನ್ನು ಕೇಳಿ ದುರ್ಯೋಧನನು ಮತ್ತು ಅವನ ಬಂಧುಗಳು ಸಂತುಷ್ಟರಾದರು.

ಶ್ರುತ್ವಾ ತು ಪಾಂಡವಾನ್ ದಗ್ಧಾನ್ ಧೃತರಾಷ್ಟ್ರೋಽಂಬಿಕಾಸುತಃ ।
ಅಲ್ಪಶೋಕಃ ಪ್ರಹೃಷ್ಟಾತ್ಮಾ ಶಶಾಸ ವಿದುರಂ ತದಾ ॥೬॥

ಪಾಂಡವರು ದಗ್ಧರಾದರೆಂಬ ವಾರ್ತೆಯನ್ನು ಕೇಳಿದ ಅಂಬಿಕಾಸುತನಾದ ಧೃತರಾಷ್ಟ್ರನು ಅಲ್ಪಶೋಕವುಳ್ಳವನಾಗಿ ಮನಸ್ಸಿನಲ್ಲಿ ಸಂತೋಷದಿಂದ ಕೂಡಿದವನಾಗಿ, ಆಗ ವಿದುರನಿಗೆ ಆದೇಶವನ್ನು ನೀಡಿದನು.

ಪಾಂಡವಾನಾಂ ಮಹಾಪ್ರಾಜ್ಞ ಕುರು ಪಿಂಡೋದಕಕ್ರಿಯಾಮ್ ।
ಅದ್ಯ ಪಾಂಡುರ್ಹತಃ ಕ್ಷತ್ತಃ ಪಾಂಡವಾನಾಂ ವಿನಾಶನೇ ॥೭॥

ಮಹಾಪ್ರಾಜ್ಞನೇ, ಪಾಂಡವರಿಗೆ ಪಿಂಡೋದಕಕ್ರಿಯೆಗಳನ್ನು ಮಾಡು. ಪಾಂಡವರು ನಾಶಹೊಂದಿರುವುದರಿಂದ ಈ ದಿನ ಪಾಂಡು ಮೃತನಾಗಿದ್ದಾನೆ.

ತಸ್ಮಾದ್ ಭಾಗೀರಥೀಂ ಗತ್ವಾ ಕುರು ಪಿಂಡೋದಕಕ್ರಿಯಾಮ್ ।
ಅಹೋ ವಿಧಿವಶಾದೇವ ಗತಾಸ್ತೇ ಯಮಸಾದನಮ್ ॥೮॥

ವಿದುರನೇ, ಆದ್ದರಿಂದ ಭಾಗೀರಥಿಗೆ ಹೋಗಿ ಪಿಂಡೋದಕ ಕ್ರಿಯೆಗಳನ್ನು ಮಾಡು. ಅಯ್ಯೋ, ವಿಧಿನಿಯತಿಯಂತೆಯೇ ಆ ಪಾಂಡವರು ಯಮಲೋಕವನ್ನು ತಲುಪಿದ್ದಾರೆ.

ಇತ್ಯುಕ್ತ್ವಾ ಪ್ರಾರುದತ್ ತತ್ರ ಧೃತರಾಷ್ಟ್ರಃ ಸಸೌಬಲಃ ।
ಶ್ರುತ್ವಾ ಭೀಷ್ಮೋಽಪಿ ವಿದುರಾತ್ ಕೃತವಾನೌರ್ಧ್ವದೇಹಿಕಮ್ ॥೯॥

ಹೀಗೆ ಹೇಳಿ ಧೃತರಾಷ್ಟ್ರನು ಶಕುನಿಯ ಜೊತೆಯಲ್ಲಿ ಅಲ್ಲಿ ರೋದನವನ್ನು ಮಾಡಿದನು. ಭೀಷ್ಮರೂ ಸಹ ವಿದುರನಿಂದ ವಿಷಯವನ್ನು ತಿಳಿದು ಉತ್ತರಕ್ರಿಯೆಗಳನ್ನು ಮಾಡಿದರು.

ಪಾಂಡವಾನಾಂ ವಿನಾಶಾಯ ಕೃತಂ ಕರ್ಮ ದುರಾತ್ಮನಾ ।
ಏತತ್ಕಾರ್ಯಸ್ಯ ಕರ್ತಾ ತು ನ ದೃಷ್ಟೋ ನ ಶ್ರುತಃ ಪುರಾ ।
ಏತದ್‌ವೃತ್ತಂ ಮಹಾಭಾಗ ಪಾಂಡವಾನ್ ಪ್ರತಿ ನಃ ಶ್ರುತಮ್ ॥೧೦॥

ದುರಾತ್ಮನಾದ ದುರ್ಯೋಧನನು ಪಾಂಡವರ ವಿನಾಶಕ್ಕೋಸ್ಕರ ಇಂತಹ ದುಷ್ಕಾರ್ಯವನ್ನು ಮಾಡಿದನು. ಇಂತಹ ಹೀನಕಾರ್ಯವನ್ನು ಮಾಡುವವನನ್ನು ಹಿಂದೆ ಯಾರೂ ನೋಡಲಿಲ್ಲ ಅಥವಾ ಕೇಳಲಿಲ್ಲ. ಮಹಾನುಭಾವನೇ, ಪಾಂಡವರ ವಿಷಯದಲ್ಲಿ ನಾವು ಈ ವೃತ್ತಾಂತವನ್ನು ಕೇಳಿದ್ದೇವೆ.

ಶ್ರುತ್ವಾ ತು ವಚನಂ ತೇಷಾಂ ಯಜ್ಞಸೇನೋ ಮಹಾಮತಿಃ ।
ಯಥಾ ಸ ಜನಕಃ ಶೋಚೇದೌರಸಸ್ಯ ವಿನಾಶನೇ ।
ತಥಾಽತಪ್ಯತ ಪಾಂಚಾಲಃ ಪಾಂಡವಾನಾಂ ವಿನಾಶನೇ ॥೧೧॥

ಈ ಬ್ರಾಹ್ಮಣರ ವಚನವನ್ನು ಕೇಳಿ ಮಹಾಮತಿಯಾದ ಯಜ್ಞಸೇನನು ಔರಸಪುತ್ರನನ್ನು ಕಳೆದುಕೊಂಡ ತಂದೆಯಂತೆ, ಪಾಂಡವರ ವಿನಾಶದ ವಿಷಯದಲ್ಲಿ ಪಾಂಡವರನ್ನು ನೆನೆದು ಶೋಕವನ್ನು ಮತ್ತು ತಾಪವನ್ನು ಪಟ್ಟನು.

ಸಮಾಹೂಯ ಪ್ರಕೃತಯಃ ಸಹಿತಾಃ ಸಹಬಾಂಧವೈಃ ।
ಕಾರುಣ್ಯಾದೇವ ಪಾಂಚಾಲಃ ಪ್ರೋವಾಚೇದಂ ವಚಸ್ತದಾ ॥೧೨॥

ಪಾಂಚಾಲರಾಜನಾದ ಅವನು ಬಂಧುಗಳಿಂದ ಕೂಡಿದ ತನ್ನ ಪ್ರಜೆಗಳನ್ನು ಕರೆದು ಕರುಣೆಯಿಂದಲೇ ಆಗ ಈ ಮಾತುಗಳನ್ನು ಆಡಿದನು.

ದ್ರುಪದಃ

ಅಹೋ ರೂಪಮಹೋ ಧೈರ್ಯಮಹೋ ವೀರ್ಯಂ ಚ ಶಿಕ್ಷಿತಮ್ ।
ಚಿಂತಯಾಮಿ ದಿವಾರಾತ್ರಮರ್ಜುನಂ ಪ್ರತಿ ಬಾಂಧವಾಃ ॥೧೩॥

ಬಾಂಧವರೇ ಆ ಅರ್ಜುನನ ರೂಪ, ಅವನ ಧೈರ್ಯ, ಅವನ ಪರಾಕ್ರಮ, ಅವನ ಶಿಕ್ಷಣ ಎಂತಹದು! (ಎಷ್ಟು ಆಶ್ಚರ್ಯಕರವಾದುದು.) ನಾನು ಹಗಲೂರಾತ್ರಿಯೂ ಅರ್ಜುನನನ್ನೇ ಚಿಂತಿಸುತ್ತಿದ್ದೇನೆ.

ಭ್ರಾತೃಭಿಃ ಸಹಿತೋ ಮಾತ್ರಾ ಸೋಽದಹ್ಯತ ಹುತಾಶನೇ ।
ಕಿಮಾಶ್ಚರ್ಯಮಿತೋ ಲೋಕೇ ಕಾಲೋ ಹಿ ದುರತಿಕ್ರಮಃ ॥೧೪॥

ಸೋದರರಿಂದಲೂ ಮತ್ತು ತಾಯಿಯಿಂದಲೂ ಸಹಿತನಾಗಿ ಅವನು ಅಗ್ನಿಯಲ್ಲಿ ದಗ್ಧನಾದನು. ಪ್ರಪಂಚದಲ್ಲಿ ಇದಕ್ಕಿಂತ ಯಾವುದು ಆಶ್ಚರ್ಯಕರವಾದುದು? ಕಾಲವನ್ನು ಯಾರೂ ಮೀರಲು ಸಾಧ್ಯವಿಲ್ಲ.

ಮಿಥ್ಯಾಪ್ರತಿಜ್ಞೋ ಲೋಕೇಷು ಕಿಂ ವದಿಷ್ಯಾಮಿ ಸಾಂಪ್ರತಮ್ ।
ಅಂತರ್ಗತೇನ ದುಃಖೇನ ದಹ್ಯಮಾನೋ ದಿವಾನಿಶಮ್ ॥೧೫॥

ಮನಸ್ಸಿನಲ್ಲಿರುವ ದುಃಖದಿಂದ ಹಗಲಿರುಳು ಬೇಯುತ್ತಿರುವ ನಾನು ಸುಳ್ಳು ಪ್ರತಿಜ್ಞೆಯನ್ನು ಮಾಡಿ ಈಗ ಜನರಿಗೆ ಏನು ಹೇಳಲಿ?

ಯಾಜೋಪಯಾಜೌ ಸತ್ಕೃತ್ಯ ಯಾಚಿತೌ ತೌ ಮಯಾऽನಘೌ ।
ಭಾರದ್ವಾಜಸ್ಯ ಹಂತಾರಂ ದೇವೀಂ ಚಾಪಿ ತಥಾऽರ್ಜುನೇ ॥೧೬॥

ನಾನು ಯಾಜೋಪಯಾಜರನ್ನು ಸತ್ಕರಿಸಿ ದ್ರೋಣನನ್ನು ಕೊಲ್ಲುವ ನಿರ್ದುಷ್ಟನಾದ ಮಗನನ್ನೂ, ಅರ್ಜುನನ ಪತ್ನಿಯಾಗುವ ನಿರ್ದುಷ್ಟಳಾದ ಪುತ್ರಿಯನ್ನೂ ಬೇಡಿದೆ.

ಲೋಕಸ್ತದ್ವೇದ ಯಚ್ಚಿವ ತಥಾ ಯಾಜೇನ ಮೇ ಶ್ರುತಮ್ ।
ಯಾಜೇನ ಪುತ್ರಕಾಮೀಯಂ ಹುತ್ವಾ ಚೋತ್ಪಾದಿತಾವುಭೌ ॥೧೭॥

ಧೃಷ್ಟದ್ಯುಮ್ನಶ್ಚ ಕೃಷ್ಣಾ ಚ ಮಮ ಪುಷ್ಟಿಕರಾವುಭೌ ।
ಕಿಂ ಕರಿಷ್ಯಾಮಿ ತೇ ನಷ್ಟಾಃ ಪಾಂಡವಾಃ ಪೃಥಯಾ ಸಹ ॥೧೮॥

ಯಾಜರು ನನಗೆ ಏನು ವಾಗ್ದಾನ ಮಾಡಿದರೆಂಬುದು ಎಲ್ಲ ಜನರಿಗೂ ತಿಳಿದಿದೆ. ಯಾಜರು ಪುತ್ರಕಾಮೇಷ್ಟಿಯಾಗವನ್ನು ಮಾಡಿ ನನಗೆ ಪುಷ್ಟಿಯನ್ನು ಕೊಡುವ ಧೃಷ್ಟದ್ಯುಮ್ನ ಮತ್ತು ದ್ರೌಪದಿ ಇವರಿಬ್ಬರನ್ನೂ ಕರುಣಿಸಿದರು. ಪಾಂಡವರೂ ಕುಂತಿಯೂ ನಷ್ಟವಾಗಿದ್ದಾರೆ. ಈಗ ನಾನೇನು ಮಾಡಲಿ?

ಬ್ರಾಹ್ಮಣಃ

ಇತ್ಯೇವಮುಕ್ತ್ವಾ ಪಾಂಚಾಲಃ ಶುಶೋಚ ಪರಮಾತುರಃ ॥೧೯॥

ಹೀಗೆ ಮಾತನಾಡಿ ದ್ರುಪದನು ಪರಮಾತುರನಾಗಿ ಶೋಕಪಟ್ಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕೋನಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ದ್ವಿತಿಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಅರವತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಪೂರ್ವಂ ಹಿ ಪಾರ್ಷತ ಇಮಾನ್ ಜತುಗೇಹದಗ್ಧಾನ್
ಶ್ರುತ್ವಾತಿದುಃಖಿತಮನಾಃ ಪುನರೇವ ಮಂತ್ರಃ ।
ಯಾಜೋಪಯಾಜಮುಖನಿಃಸೃತ ಏವಮೇಷ
ನಾಸತ್ಯತಾರ್ಹ ಇತಿ ಜೀವನಮೇಷು ಮೇನೇ ॥೯೭॥

ಪಾಂಡವರು ಅರಗಿನ ಮನೆಯಲ್ಲಿ ಸುಟ್ಟವಾರ್ತೆ ಕೇಳಿದಾಗ ದ್ರುಪದ ಮೊದಲಿಗೆ ಮನಸ್ಸಿನಲ್ಲಿ ಬಹಳ ದುಃಖಿತನಾದ. ಆದರೆ ಬಳಿಕ ಯಾಜೋಪಯಾಜರ ಮುಖದಿಂದ ಬಂದ ಮಂತ್ರ ಹೀಗೆ ಸುಳ್ಳಾಗಲಾರದು ಎಂದುಕೊಂಡು ಪಾಂಡವರು ಬದುಕಿಯೆ ಇರುತ್ತಾರೆ ಎಂದು ನಂಬಿದ.

ಯತ್ರ ಕ್ವಚಿತ್ ಪ್ರತಿವಸಂತಿ ನಿಲೀನರೂಪಾಃ
ಪಾರ್ಥಾಃ ಇತಿ ಸ್ಮ ಸ ತು ಫಲ್ಗುನಕಾರಣೇನ
ಚಕ್ರೇ ಸ್ವಯಂವರವಿಘೋಷಣಮಾಶು ರಾಜಾ
ತ್ವನ್ಯೈರಧಾರ್ಯಧನುರೀಶವರಾಚ್ಚ ಚಕ್ರೇ ॥೯೮॥

ಪಾಂಡವರು ಎಲ್ಲಿಯಾದರೂ ಮಾರುವೇಷದಿಂದ ಇರಲೇಬೇಕೆಂದು ಬಗೆದು ದ್ರುಪದರಾಜ ಅರ್ಜುನನ ಸಲುವಾಗಿ ಸ್ವಯಂವರ ಘೋಷಣೆಯನ್ನು ಮಾಡಿದ. ಮತ್ತು ರುದ್ರವರದಿಂದ ಅರ್ಜುನನಿಗೆ ಹೊರತು ಬೇರೆಯವರಿಗೆ ಎತ್ತಲಾಗದ ಧನುಸ್ಸನ್ನು ಸಂಪಾದಿಸಿದ.

★ ★ ★ ★

ನೂರ ಎಪ್ಪತ್ತನೆಯ ಅಧ್ಯಾಯ

(ಬ್ರಾಹ್ಮಣನಿಂದ ಪಾಂಡವರಿಗೆ ದ್ರುಪದನ ಪುರೋಹಿತರ ಸಮಾಧಾನ ವಚನಗಳ ಕಥನ. ಮತ್ತು ಸ್ವಯಂವರ ಘೋಷಣೆಯ ಸೂಚನೆಯ ಕಥನ.)

ವೈಶಂಪಾಯನಃ

ದೃಷ್ಟ್ವಾ ಶೋಚಂತಮತ್ಯರ್ಥಂ ಪಾಂಚಾಲಮಿದಮಬ್ರವೀತ್ ।
ಪುರೋಧಾಃ ಸತ್ವಸಂಪನ್ನಃ ಸಮ್ಯಗ್ವಿದ್ಯಾವಿಶೇಷವಾನ್ ॥೧॥

ಬಹಳ ಶೋಕಪಡುತ್ತಿರುವ ಪಾಂಚಾಲರಾಜನನ್ನು ಕುರಿತು ಸತ್ಯಸಂಪನ್ನನೂ ಮತ್ತು ಒಳ್ಳೆಯ ವಿದ್ಯಾವಿಶಾರದನೂ ಆದ ಅವನ ಪುರೋಹಿತನು ಮಾತನಾಡಿದನು.

ವೃದ್ಧಾನುಶಾಸನೇ ಸಕ್ತಾಃ ಪಾಂಡವಾ ಧರ್ಮಚಾರಿಣಃ ।
ತಾದೃಶಾ ನ ವಿನಶ್ಯಂತಿ ನೈವ ಯಾಂತಿ ಪರಾಭವಮ್ ॥೨॥

ಪಾಂಡವರು ಧರ್ಮಚಾರಿಗಳು ಮತ್ತು ಯಾವಾಗಲೂ ಹಿರಿಯರ ಆದೇಶವನ್ನು ಪಾಲಿಸುವವರು. ಅಂತಹವರು ಎಂದೂ ವಿನಾಶವನ್ನಾಗಲೀ, ಪರಾಭವವನ್ನಾಗಲೀ ಹೊಂದುವುದಿಲ್ಲ.

ಮಯಾ ದೃಷ್ಟಮಿದಂ ಸತ್ಯಂ ಶೃಣುಷ್ವ ಮನುಜಾಧಿಪ ।
ಬ್ರಾಹ್ಮಣೈಃ ಕಥಿತಂ ಸತ್ಯಂ ವೇದೇಷು ಚ ಮಯಾ ಶ್ರುತಮ್ ॥೩॥

ರಾಜನೇ, ನಾನು ಈ ಸತ್ಯವನ್ನು ನೋಡಿದ್ದೇನೆ. ನನ್ನ ಮಾತನ್ನು ಕೇಳು. ಈ ಸತ್ಯವಚನವನ್ನು ಬ್ರಾಹ್ಮಣರು ಹೇಳಿದ್ದಾರೆ ಮತ್ತು ವೇದಗಳಲ್ಲಿಯೂ ನಾನು ಕೇಳಿದ್ದೇನೆ.

ಬೃಹಸ್ಪತಿಮತೇನಾಥ ಪೌಲೋಮ್ಯಾ ಚ ಪುರಾ ಶ್ರುತಮ್ ।
ನಷ್ಟಮಿಂದ್ರಂ ಬಿಸಗ್ರಂಥ್ಯಾಮುಪಶ್ರುತ್ಯಾ ತು ದರ್ಶಿತಮ್ ॥೪॥

ಹಿಂದೆ ವೃತ್ರಾಸುರನನ್ನು ಕೊಂದು ಇಂದ್ರನು ಕಮಲದ ನಾಳದಲ್ಲಿ ಅಡಗಿಕೊಂದು ಕಣ್ಣಿಗೆ ಕಾಣಿಸದಿದ್ದಾಗ ಪೌಲೋಮಿಯು ಬೃಹಸ್ಪತ್ಯಾಚಾರ್ಯರ ಅಭಿಪ್ರಾಯದಂತೆ ಶುಭಶಕುನಗಳನ್ನು ಕೇಳಿ ಇಂದ್ರನು ಬದುಕಿರುವುದನ್ನು ನಿರ್ಧರಿಸಿದಳು.

ಉಪಶ್ರುತಿರ್ಮಹಾರಾಜ ಪಾಂಡವಾರ್ಥೇ ಮಯಾ ಶ್ರುತಾ ।
ಯತ್ರ ವಾ ತತ್ರ ಜೀವಂತಿ ಪಾಂಡವಾಸ್ತೇ ನ ಸಂಶಯಃ ॥೫॥

ಮಹಾರಾಜನೇ, ಪಾಂಡವರ ವಿಷಯದಲ್ಲಿಯೂ ನಾನು ಅಂತಹ ಉಪಶ್ರುತಿಯನ್ನು ಕೇಳಿದ್ದೇನೆ. ಎಲ್ಲಾದರೂ ಪಾಂಡವರು ಬದುಕಿಯೇ ಇದ್ದಾರೆ. ಇದರಲ್ಲಿ ಸಂಶಯವಿಲ್ಲ.

ಮಯಾ ದೃಷ್ಟಾನಿ ಲಿಂಗಾನಿ ಧ್ರುವಮೇಷ್ಯಂತಿ ಪಾಂಡವಾಃ ।
ಯನ್ನಿಮಿತ್ತಮಿಹಾಯಾಂತಿ ತಚ್ಛೃಣುಷ್ವ ನರಾಧಿಪ ॥೬॥

ನಾನು ಅನೇಕ ಶುಭನಿಮಿತ್ತಗಳನ್ನು ನೋಡಿದ್ದೇನೆ. ಪಾಂಡವರು ನಿಶ್ಚಯವಾಗಿ ಬಂದೇ ಬರುತ್ತಾರೆ. ರಾಜನೇ, ಪಾಂಡವರು ಯಾವ ಕಾರಣದಿಂದ ಇಲ್ಲಿಗೆ ಬರುತ್ತಾರೆಂಬುದನ್ನು ಹೇಳುತ್ತೇನೆ ಕೇಳು.

ಸ್ವಯಂವರಃ ಕ್ಷತ್ರಿಯಾಣಾಂ ಕನ್ಯಾದಾನೇ ಪ್ರತಿಶ್ರುತಃ ।
ಸ್ವಯಂವರಸ್ತು ನಗರೇ ಘುಷ್ಯತಾಂ ರಾಜಸತ್ತಮ ॥೭॥

ಕನ್ಯಾದಾನದ ವಿಷಯದಲ್ಲಿ ಕ್ಷತ್ರಿಯರಿಗೆ ಸ್ವಯಂವರವು ವಿಹಿತವಾಗಿದೆ. ರಾಜಶ್ರೇಷ್ಠನೇ, ನಗರದಲ್ಲಿ ಸ್ವಯಂವರವನ್ನು ಘೋಷಿಸು.

ಯತ್ರ ವಾ ನಿವಸಂತಸ್ತೇ ಪಾಂಡವಾಃ ಪೃಥಯಾ ಸಹ ।
ದೂರಸ್ಥಾ ವಾ ಸಮೀಪಸ್ಥಾಃ ಸ್ವರ್ಗಸ್ಥಾ ವಾऽಪಿ ಪಾಂಡವಾಃ ॥೮॥

ಶ್ರುತ್ವಾ ಸ್ವಯಂವರೇ ರಾಜನ್ ಸಮೇಷ್ಯಂತಿ ನ ಸಂಶಯಃ ।
ತಸ್ಮಾತ್ ಸ್ವಯಂವರೋ ರಾಜನ್ ಘುಷ್ಯತಾಂ ಮಾಚಿರಂ ಕೃಥಾಃ ॥೯॥

ಪಾಂಡವರು ಕುಂತಿಯ ಜೊತೆಯಲ್ಲಿ ಎಲ್ಲೇ ವಾಸಮಾಡುತ್ತಿದ್ದರೂ ಅವರು ದೂರದಲ್ಲಿರಲಿ ಅಥವಾ ಸಮೀಪದಲ್ಲಿರಲಿ, ಅಥವಾ ಸ್ವರ್ಗದಲ್ಲಿಯೇ ಇರಲಿ ಸ್ವಯಂವರದ ವಾರ್ತೆಯನ್ನು ಕೇಳಿ ನಿಸ್ಸಂಶಯವಾಗಿ ಬಂದೇ ಬರುವರು. ರಾಜನೇ, ಆದ್ದರಿಂದ ಸ್ವಯಂವರವನ್ನು ಘೋಷಿಸು, ತಡಮಾಡಬೇಡ.

ಬ್ರಾಹ್ಮಣಃ

ಶ್ರುತ್ವಾ ಪುರೋಹಿತೇನೋಕ್ತಂ ಪಾಂಚಾಲಃ ಪ್ರೀತಿಮಾಂಸ್ತದಾ ।
ಘೋಷಯಾಮಾಸ ನಗರೇ ದ್ರೌಪದ್ಯಾಸ್ತು ಸ್ವಯಂವರಮ್ ॥೧೦॥

ಪುರೋಹಿತನಿಂದ ಹೀಗೆ ಹೇಳಲ್ಪಟ್ಟ ಪಾಂಚಾಲನು ಸಂತೋಷದಿಂದ ಕೂಡಿದವನಾಗಿ ನಗರದಲ್ಲಿ ದ್ರೌಪದಿಯ ಸ್ವಯಂವರವನ್ನು ಘೋಷಿಸಿದನು.

ಪುಷ್ಯಮಾಸೇ ತು ರೋಹಿಣ್ಯಾಂ ಶುಕ್ಲಪಕ್ಷೇ ಶುಭೇ ತಿಥೌ ।
ದಿವಸೈಃ ಪಂಚಸಪ್ತತ್ಯಾ ಭವಿಷ್ಯತಿ ಸ್ವಯಂವರಃ ॥೧೧॥

ಪುಷ್ಯಮಾಸದಲ್ಲಿ ಶುಕ್ಲಪಕ್ಷದಲ್ಲಿ ಚಂದ್ರನು ರೋಹಿಣಿನಕ್ಷತ್ರ ಸಹಿತನಾಗಿರುವಾಗ ಶುಭತಿಥಿಯಲ್ಲಿ ಎಪ್ಪತ್ತೈದು ದಿವಸಗಳ ಅಂತರದಲ್ಲಿ (ಇಂದಿಗೆ ಎಪ್ಪತ್ತೈದು ದಿನಗಳ ಅನಂತರ) ಸ್ವಯಂವರವು ಜರುಗುವುದು.

ದೇವಗಂಧರ್ವಯಕ್ಷಾಶ್ಚ ಋಷಯಶ್ಚ ತಪೋಧನಾಃ ।
ಸ್ವಯಂವರಂ ದ್ರಷ್ಟುಕಾಮಾ ಗಚ್ಛಂತ್ಯೇವ ನ ಸಂಶಯಃ ॥೧೨॥

ಆ ಸ್ವಯಂವರವನ್ನು ನೋಡಲು ದೇವಗಂಧರ್ವಯಕ್ಷರು, ತಪೋಧನರಾದ ಋಷಿಗಳು ನಿಸ್ಸಂಶಯವಾಗಿ ಬಂದೇ ಬರುತ್ತಾರೆ.

ತವ ಪುತ್ರಾ ಮಹಾತ್ಮಾನೋ ದರ್ಶನೀಯಾ ವಿಶೇಷತಃ ।
ಯದೃಚ್ಛಯಾ ತು ಪಾಂಚಾಲೀ ಗಚ್ಛೇದ್ ವಾऽನ್ಯತಮಂ ಪತಿಮ್ ॥

ನಿನ್ನ ಮಕ್ಕಳು ಮಹಾನುಭಾವರೂ, ವಿಶೇಷವಾಗಿ ಸುಂದರರೂ ಆಗಿದ್ದಾರೆ. ದೇವೇಚ್ಛೆಯಿಂದ ಪಾಂಚಾಲಿಯು ಇವರಲ್ಲಿ ಒಬ್ಬನನ್ನು ಪತಿಯನ್ನಾಗಿ ವರಿಸಬಹುದು.

ಕೋ ಹಿ ಜಾನಾತಿ ಲೋಕೇಷು ಪ್ರಜಾಪತಿವಿಧಿಂ ಪರಮ್ ।
ತಸ್ಮಾತ್ ಸಪುತ್ರಾ ಗಚ್ಛೇಥಾ ಯದಿ ಬ್ರಾಹ್ಮಣಿ ರೋಚತೇ ॥೧೪॥

ಬ್ರಹ್ಮದೇವರ ಸಂಕಲ್ಪವು ಹೇಗಿದೆಯೆಂದು ಲೋಕದಲ್ಲಿ ಯಾರು ತಿಳಿದಿದ್ದಾರೆ? ಆದ್ದರಿಂದ ಬ್ರಾಹ್ಮಣಿಯೇ, ನಿನಗೆ ಸಮ್ಮತವಾದರೆ ಮಕ್ಕಳನ್ನು ಕರೆದುಕೊಂಡು ನೀನೂ ಹೋಗು.

ನಿತ್ಯಕಾಲಂ ಸುಭಿಕ್ಷಾಸ್ತೇ ಪಾಂಚಾಲಾಸ್ತು ತಪೋಧನೇ ।
ಯಜ್ಞಸೇನಸ್ತು ರಾಜಾऽಸೌ ಬ್ರಹ್ಮಣ್ಯಃ ಸತ್ಯಸಂಗರಃ ॥೧೫॥

ತಪೋಧನಳೇ, ಪಾಂಚಾಲದೇಶವು ಯಾವಾಗಲೂ ಸುಭಿಕ್ಷವಾದ ದೇಶ. ಅದೂ ಅಲ್ಲದೇ ಈ ಯಜ್ಞಸೇನರಾಜನು ಸತ್ಯಸಂಧನೂ ಮತ್ತು ಬ್ರಾಹ್ಮಣವತ್ಸಲನೂ ಆಗಿದ್ದಾನೆ.

ಬ್ರಹ್ಮಣ್ಯಾ ನಾಗರಾಶ್ಚಾಥ ಬ್ರಾಹ್ಮಣಾಶ್ಚಾತಿಥಿಪ್ರಿಯಾಃ ।
ನಿತ್ಯಕಾಲಂ ಪ್ರದಾಸ್ಯಂತಿ ಆಮಂತ್ರಣಮಯಾಚಿತಮ್ ॥೧೬॥

ಆ ನಗರವಾಸಿಗಳೆಲ್ಲರೂ ಬ್ರಾಹ್ಮಣವಾತ್ಸಲ್ಯವನ್ನು ಹೊಂದಿರುವವರು. ಅಲ್ಲಿಯ ಬ್ರಾಹ್ಮಣರು ಅತಿಥಿಪ್ರಿಯರು. ಅವರು ನೀವು ಯಾಚನೆಯನ್ನು ಮಾಡದೆಯೇ ನಿಮಗೆ ಯಾವಾಗಲೂ ಆಮಂತ್ರಣವನ್ನು ನೀಡುವರು.

ಅಹಂ ಚ ತತ್ರ ಗಚ್ಛಾಮಿ ಮಮೈಭಿಃ ಸಹ ಶಿಷ್ಯಕೈಃ ।
ಏಕಸಾರ್ಥಾ ಪ್ರಯಾತಾಃ ಸ್ಮ ಬ್ರಾಹ್ಮಣೆ ಯದಿ ರೋಚತೇ ॥೧೭॥

ನಾನೂ ಸಹ ನನ್ನ ಈ ಶಿಷ್ಯರ ಜೊತೆಯಲ್ಲಿ ಅಲ್ಲಿಗೆ ಹೋಗುತ್ತೇನೆ. ಬ್ರಾಹ್ಮಣಿಯೇ, ನಿನಗೆ ಸಮ್ಮತವಾದರೆ ನಾವೆಲ್ಲರೂ ಒಂದೇ ಗುಂಪಾಗಿ ಹೋಗೋಣ.

ವೈಶಂಪಾಯನಃ

ಏತಾವದುಕ್ತ್ವಾ ವಚನಂ ಬ್ರಾಹ್ಮಣೋ ವಿರರಾಮ ಹ ॥೧೮॥

ಆ ಬ್ರಾಹ್ಮಣನು ಇಷ್ಟು ಮಾತುಗಳನ್ನು ಹೇಳಿ ಸುಮ್ಮನಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ತೃತಿಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಉತ್ಪತ್ತಿ ಪೂರ್ವಕಕಥಾಂ ದ್ರುಪದಾತ್ಮಜಾಯಾ
ವ್ಯಾಸೋ ಹ್ಯನೂಚ್ಯ ಜಗತಾಂ ಗುರುರೀಶ್ವರಶ್ಚ।
ಯಾತೇತ್ಯಚೋದಯದಥಾಪ್ಯಪರೇ ದ್ವಿಜಾಗ್ರ್ಯ-
ಸ್ತಾನ್ ಬ್ರಾಹ್ಮಣಾ ಇತಿ ಭುಜಿರ್ನವಿತೇತಿ ಚೋಚುಃ ॥೯೬॥

ಜಗದ್ಗುರುವೂ ಸರ್ವೇಶ್ವರರೂ ಆದ ಶ್ರೀವೇದವ್ಯಾಸರು ಪಾಂಡವರಿಗೆ ದ್ರೌಪದಿಯ ಬಗ್ಗೆ ಅವಳ ಉತ್ಪತ್ತಿಯನ್ನು ಮೊದಲು ಮಾಡಿ ಎಲ್ಲ ಕಥೆಯನ್ನು ಹೇಳಿ ನೀವು ಸ್ವಯಂವರಕ್ಕೆ ಹೋಗಿರೆಂದು ಹೇಳಿದರು. ಬೇರೆ ಬ್ರಾಜಹ್ಮಣೋತ್ತಮರೂ ಪಾಂಡವರನ್ನು ಬ್ರಾಹ್ಮಣರೆಂದೇ ತಿಳಿದಿದ್ದರಿಂದ 'ಬನ್ನಿ, ನಾವೆಲ್ಲ ಹೋಗೋಣ, ಭೋಜನ ಲಭಿಸುತ್ತದೆ' ಎಂದರು.

★ ★ ★ ★

ನೂರ ಎಪ್ಪತ್ತೊಂದನೆಯ ಅಧ್ಯಾಯ

(ಬ್ರಾಹ್ಮಣರ ಜೊತೆಯಲ್ಲಿ ಪಾಂಚಾಲನಗರವನ್ನು ಕುರಿತು ಪಾಂಡವರ ಗಮನ. ವ್ಯಾಸರ ಆಶ್ವಾಸನ ಮತ್ತು ಬ್ರಾಹ್ಮಣರ ಸಂವಾದ)

ವೈಶಂಪಾಯನಃ

ಏತತ್ ಶ್ರುತ್ವಾ ವಚಃ ಸರ್ವೇ ಕೌಂತೇಯಾ ಸಂಶಿತವ್ರತಾಃ।
ಮನಸಾ ದ್ರೌಪದೀಂ ಜಗ್ಮುರನಂಗಶರಪೀಡಿತಾಃ ॥೧॥

ಈ ಮಾತುಗಳನ್ನು ಕೇಳಿದ ಕುಂತೀಪುತ್ರರಾದ ಸಂಶಿತವ್ರತರಾದ ಪಾಂಡವರೆಲ್ಲರೂ ಕಾಮಬಾಣಪೀಡಿತರಾಗಿ ಮನಸ್ಸಿನಲ್ಲಿಯೇ ದ್ರೌಪದಿಯನ್ನು ಚಿಂತಿಸಿದರು.

ಊಷುಸ್ತಾಂ ರಜನೀಂ ರಾಜನ್ ಶಲ್ಯವಿದ್ಧಾ ಇವಾಭವನ್।
ವ್ಯುಷ್ಟಾಯಾಂ ದುರ್ಮತೀಭೂತ್ವಾ ಅಸ್ವಸ್ಥಮನಸೋಽಭವನ್ ॥೨॥

ರಾಜನೇ ಅವರು ಆ ರಾತ್ರಿಯನ್ನು ಎದೆಯಲ್ಲಿ ಶಲ್ಯವನ್ನು ಚುಚ್ಚಿದಂತೆ ಕಳೆದರು. ರಾತ್ರಿಯ ಕಳೆಯುತ್ತಿರಲು ಎಲ್ಲರೂ ಕಲುಷಿತ ಮನಸ್ಸುಳ್ಳವರಾಗಿ ಮಾನಸಿಕ ಅಸ್ವಸ್ಥತೆಗೆ ಒಳಗಾದರು.

ತತಃ ಕುಂತೀ ಸುತಾನ್ ದೃಷ್ಟ್ವಾ ಸರ್ವಾನ್ ತಾನ್ ಹತಚೇತಸಃ ।
ಯುಧಿಷ್ಠಿರಮುವಾಚೇದಂ ವಚನಂ ಸತ್ಯಭಾಷಿಣೀ ॥೩॥

ಆಗ ಕುಂತಿಯು ತನ್ನ ಎಲ್ಲಾ ಮಕ್ಕಳು ಪ್ರಜ್ಞಾಹೀನರಾಗಿರುವುದನ್ನು ಗಮನಿಸಿ ಸತ್ಯವಚನವುಳ್ಳ ಅವಳು ಯುಧಿಷ್ಠಿರನನ್ನು ಕುರಿತು ಈ ಮಾತನ್ನು ಆಡಿದಳು.

ಚಿರರಾತ್ರೋಷಿತಾಃ ಸ್ಮೇಹ ಬ್ರಾಹ್ಮಣಸ್ಯ ನಿವೇಶನೇ ।
ರಮಮಾಣಾಃ ಪುರೇ ರಮ್ಯೇ ಲಬ್ಧ್ವಾ ಭೈಕ್ಷಾ ಯುಧಿಷ್ಠಿರ ॥೪॥

ಯುಧಿಷ್ಠಿರನೇ, ಈ ಸುಂದರವಾದ ಪಟ್ಟಣದಲ್ಲಿ ನಾವು ಭಿಕ್ಷೆಯನ್ನು ಪಡೆದು ಸಂತೋಷಪಡುತ್ತಾ ಈ ಬ್ರಾಹ್ಮಣನ ಮನೆಯಲ್ಲಿ ಬಹುಕಾಲವನ್ನು ಕಳೆದಿದ್ದೇವೆ.

ಯಾನೀಹ ರಮಣೀಯಾನಿ ವನಾನ್ಯುಪವನಾನಿ ಚ ।
ಸರ್ವಾಣಿ ತಾನಿ ದೃಷ್ಟಾನಿ ಪುನಃಪುನರರಿಂದಮ ॥೫॥

ಅರಿಂದಮನೇ, ಇಲ್ಲಿರುವ ರಮಣೀಯವಾದ ಎಲ್ಲಾ ವನಗಳನ್ನೂ ಮತ್ತು ಉಪವನಗಳನ್ನೂ ಮತ್ತೆ ಮತ್ತೆ ನೋಡಿದ್ದೇವೆ.

ಪುನರ್ದೃಷ್ಟಾನಿ ತಾನ್ಯೇವ ತಥಾ ನ ಪ್ರೀಣಯಂತಿ ನಃ ।
ಭೈಕ್ಷಂ ಚ ನ ತಥಾ ವೀರ ಲಭ್ಯತೇ ಕುರುನಂದನ ॥೬॥

ಮತ್ತೆ ಮತ್ತೆ ನೋಡಿದಾಗ ಅವು ನಮಗೆ ಮೊದಲಿನ ಸಂತೋಷವನ್ನುಂಟು ಮಾಡುವುದಿಲ್ಲ. ವೀರನಾದ ಕುರುನಂದನನೇ, ಮೊದಲಿನಂತೆಯೇ ಈಗ ಭಿಕ್ಷೆಯೂ ದೊರೆಯುತ್ತಿಲ್ಲ.

ತೇ ವಯಂ ಸಾಧು ಪಾಂಚಾಲಾನ್ ಗಚ್ಛಾಮ ಯದಿ ಮನ್ಯಸೇ ।
ಅಪೂರ್ವದರ್ಶನಂ ತಾತ ರಮಣೀಯಂ ಭವಿಷ್ಯತಿ ॥೭॥

ಅಂತಹ ನಾವು ನಿಮಗೆ ಸಮ್ಮತವಾದರೆ ಪಾಂಚಾಲದೇಶಕ್ಕೆ ಹೋಗೋಣ. ಪ್ರೀತಿಪಾತ್ರನೇ, ಹೊಸದಾಗಿ ನೋಡುವುದರಿಂದ ಆ ದೇಶವು ಮನೋಹರವಾಗಿರುವುದು.

ಸುಭಿಕ್ಷಶ್ಚೈವ ಪಾಂಚಾಲಾಃ ಶ್ರೂಯಂತೇ ಶತ್ರುಕರ್ಶನ ।
ಯಜ್ಞಸೇನಸ್ತು ರಾಜಾऽಸೌ ಬ್ರಹ್ಮಣ್ಯ ಇತಿ ಶುಶ್ರುಮ ॥೮॥

ಶತ್ರುಕರ್ಶನನೇ, ಪಾಂಚಾಲದೇಶವು ಸುಭಿಕ್ಷವಾದ ದೇಶ ಎಂದು ಕೇಳಿದ್ದೇವೆ. ಈ ಯಜ್ಞಸೇನರಾಜನೂ ಸಹ ಬ್ರಾಹ್ಮಣವತ್ಸಲನೆಂದೂ ಕೇಳಿದ್ದೇವೆ.

ಏಕತ್ರ ಚಿರವಾಸೋऽಯಂ ಕ್ಷಮೋ ನ ಚ ಮತೋ ಮಮ ।
ತಸ್ಮಾತ್ ತತ್ರೈವ ಗಚ್ಛಾಮೋ ವಯಂ ತು ಯದಿ ಮನ್ಯಸೇ ॥೯॥

ಒಂದೇಕಡೆಯಲ್ಲಿ ಬಹಳ ಕಾಲ ವಾಸಮಾಡುವುದು ಸರಿಯಲ್ಲ ಮತ್ತು ನನಗೆ ಆ ಅಭಿಪ್ರಾಯವೂ ಇಲ್ಲ. ಆದ್ದರಿಂದ ನಿನಗೆ ಸಮ್ಮತವಾದರೆ, ನಾವೆಲ್ಲರೂ ಅಲ್ಲಿಗೇ ಹೋಗೋಣ.

ಯುಧಿಷ್ಠಿರಃ

ಭವತ್ಯಾ ಯನ್ಮತಂ ಕಾರ್ಯಂ ತ್ವಿಹಾಸ್ಮಾಕಂ ಪರಂ ಹಿತಮ್ ।
ಅನುಜ್ಞಾಂಸ್ತು ನ ಜಾನಾಮಿ ಗಚ್ಛೇಯುರ್ನೇತಿ ವಾ ಪುನಃ ॥೧೦॥

ಪೂಜ್ಯಳಾದ ನಿನಗೆ ಅಭಿಮತವಾದುದೇ ನಮಗೆ ಅತ್ಯಂತ ಹಿತವಾದ ಕಾರ್ಯ. ಆದರೆ ತಮ್ಮಂದಿರು ಹೊರಡುವರೋ ಇಲ್ಲವೋ ನಾನು ತಿಳಿದಿಲ್ಲ.

ವೈಶಂಪಾಯನಃ

ತತಃ ಕುಂತೀ ಭೀಮಸೇನಮರ್ಜುನಂ ಚ ಯಮೌ ತಥಾ ।
ಉವಾಚ ಗಮನಂ ತೇ ಚ ತಾಂ ತಥೇತ್ಯಬ್ರುವಂಸ್ತದಾ ॥೧೧॥

ಅನಂತರ ಕುಂತಿಯು ಭೀಮಸೇನನನ್ನೂ, ಅರ್ಜುನನನ್ನೂ, ನಕುಲ ಸಹದೇವರನ್ನೂ ಕರೆದು, ಹೊರಡುವ ವಿಷಯವನ್ನು ಹೇಳಿದಳು. ಅವರೆಲ್ಲರೂ ಹಾಗೆಯೇ ಆಗಲಿ ಎಂದು ಒಪ್ಪಿದರು.

ತತ ಆಮಂತ್ರ್ಯ ತಂ ವಿಪ್ರಂ ಕುಂತೀ ರಾಜಸುತೈಃ ಸಹ ।
ಪ್ರತಸ್ಥೇ ನಗರಂ ರಮ್ಯಂ ದ್ರುಪದಸ್ಯ ಮಹಾತ್ಮನ ಃ ॥೧೨॥

ಅನಂತರ ಕುಂತಿಯು ರಾಜಕುಮಾರರ ಜೊತೆಯಲ್ಲಿ ಹೋಗಿ ಆ ಬ್ರಾಹ್ಮಣನ ಅನುಮತಿಯನ್ನು ಪಡೆದು ಮಹಾತ್ಮನಾದ ದ್ರುಪದನ ಸುಂದರ ನಗರವನ್ನು ಕುರಿತು ಹೊರಟಳು.

ವಸತ್ಸು ತೇಷು ಪ್ರಚ್ಛನ್ನಂ ಪಾಂಡವೇಷು ಮಹಾತ್ಮಸು ।
ಆಜಗಾಮ ತದಾ ದ್ರಷ್ಟುಂ ವ್ಯಾಸಃ ಸತ್ಯವತೀಸುತಃ ॥೧೩॥

ಮಹಾತ್ಮರಾದ ಪಾಂಡವರು ಬ್ರಾಹ್ಮಣನ ಮನೆಯಲ್ಲಿ ಪ್ರಚ್ಛನ್ನವಾಗಿ ವಾಸಮಾಡುತ್ತಿರುವಾಗಲೇ ಸತ್ಯವತೀಸುತರಾದ ವ್ಯಾಸರು ಅವರನ್ನು ನೋಡಲು ಬಂದಿದ್ದರು.

ತಮಾಗತಮಭಿಪ್ರೇಕ್ಷ್ಯ ಪ್ರತ್ಯುದ್ಗಮ್ಯ ಪರಂತಪಾಃ ।
ಪ್ರಣಿಪತ್ಯಾಭಿವಾದ್ಯೈನಂ ತಸ್ಥುಃ ಪ್ರಾಂಜಲಯೋಽಗ್ರತಃ ॥೧೪॥

ಅವರು ಬಂದುದನ್ನು ನೋಡಿ ಪರಂತಪರಾದ ಪಾಂಡವರೆಲ್ಲರೂ ಎದ್ದು, ಅಭಿಮುಖವಾಗಿ ಹೋಗಿ, ನಮಸ್ಕಾರವನ್ನು ಮಾಡಿ, ಕೈಗಳನ್ನು ಮುಗಿದು ಅವರ ಎದುರಿಗೆ ನಿಂತರು.

ಸಮನುಜ್ಞಾಯ ತಾನ್ ಸರ್ವಾನಾಸೀನಾನ್ ಮುನಿರಬ್ರವೀತ್ ।
ಪ್ರಸನ್ನಃ ಪೂಜಿತಃ ಪಾರ್ಥೈಃ ಪ್ರೀತಿಪೂರ್ವಮಿದಂ ವಚಃ ॥೧೫॥

ಅವರಿಗೆಲ್ಲಾ ಕುಳಿತುಕೊಳ್ಳಲು ಅನುಮತಿಯನ್ನು ನೀಡಿ ಅವರಿಂದ ಪೂಜಿಸಲ್ಪಟ್ಟು ಪ್ರಸನ್ನರಾದ ವ್ಯಾಸರು ಅವರಿಗೆ ಪ್ರೀತಿಪೂರ್ವಕವಾಗಿ ಈ ಮಾತನ್ನು ಹೇಳಿದರು.

ಅಪಿ ಧರ್ಮೇಣ ವರ್ತಧ್ವಂ ಶಾಸ್ತ್ರೇಣೈವ ಪರಂತಪಾಃ ।
ಅಪಿ ವಿಪ್ರೇಷು ವಃ ಪೂಜಾ ಪೂಜಾರ್ಹೇಷು ಯಥಾವಿಧಿ ॥೧೬॥

ಪರಂತಪರೇ, ನೀವು ಶಾಸ್ತ್ರೋಕ್ತವಾದ ಧರ್ಮದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದೀರಾ? ಪೂಜಾರ್ಹರಾದ ಬ್ರಾಹ್ಮಣರಿಗೆ ವಿಧಿವತ್ತಾಗಿ ಪೂಜೆಯನ್ನು ಮಾಡುತ್ತಿದ್ದೀರಾ?

ವೈಶಂಪಾಯನಃ

ಅಥ ಧರ್ಮಾರ್ಥವದ್ ವಾಕ್ಯಮುಕ್ತ್ವಾ ಸ ಭಗವಾನೃಷಿಃ ।
ವಿಚಿತ್ರಾರ್ಥಕಥಾಸ್ತಾಸ್ತಾಃ ಪುನರೇವೇದಮಬ್ರವೀತ್ ॥೧೭॥

ಅನಂತರ, ಭಗವಾನ್‌ವ್ಯಾಸರು ಧರ್ಮಾರ್ಥಯುಕ್ತವಾದ ವಿಚಿತ್ರವಾದ ಕಥೆಗಳನ್ನು ಹೇಳಿ ಪುನಃ ಹೀಗೆ ಮಾತನಾಡಿದರು.

ಆಸೀತ್ ತಪೋನಿಧೇಃ ಕಾಚಿದ್ ಋಷೇಃ ಕನ್ಯಾ ಮನಸ್ವಿನೀ ।
ವಿಲಗ್ನಮಧ್ಯಾ ಸುಶ್ರೋಣೀ ಸುಭ್ರೂಃ ಸರ್ವಗುಣಾನ್ವಿತಾ ॥೧೮॥

ಹಿಂದೆ ತಪೋನಿಧಿಯಾದ ಒಬ್ಬ ಋಷಿಗೆ ಧೈರ್ಯಶಾಲಿನಿಯಾದ ಕನ್ಯೆಯೊಬ್ಬಳಿದ್ದಳು. ಅವಳು ಕೃಶೋದರಿಯೂ, ಸುಶ್ರೋಣಿಯೂ, ಒಳ್ಳೆಯ ಹುಬ್ಬುಳ್ಳವಳೂ ಆಗಿ, ಎಲ್ಲ ಗುಣಗಳಿಂದ ಕೂಡಿದವಳೂ ಆಗಿದ್ದಳು.

ಕರ್ಮಭಿಃ ಸ್ವಕೃತೈಃ ಸಾ ತು ದುರ್ಭಗಾ ಸಮಪದ್ಯತ ।
ನಾಧ್ಯಗಚ್ಛತ್ ಪತಿಂ ಸಾ ತು ಕನ್ಯಾ ರೂಪವತೀ ಸತೀ ॥೧೯॥

ಅವಳು ತಾನು ಹಿಂದೆ ಮಾಡಿದ ಕರ್ಮಗಳ ಫಲವಾಗಿ ದೌರ್ಭಾಗ್ಯವನ್ನು ಹೊಂದಿ ರೂಪವತಿಯಾದರೂ ಸಹ ಪತಿಯನ್ನು ಪಡೆಯಲಿಲ್ಲ.

ತಪಸ್ತಪ್ತುಮಥಾರೇಭೇ ಪತ್ಯರ್ಥಮಸುಖಂ ತತಃ ।
ತೋಷಯಾಮಾಸ ಮಹತಾ ಭಗವಂತಂ ಮಹೇಶ್ವರಮ್ ॥೨೦॥

ಪತಿಯನ್ನು ಪಡೆಯುವ ಸಲುವಾಗಿ ಆಗ ಅವಳು ಉಗ್ರವಾದ ತಪಸ್ಸನ್ನು ಆಚರಿಸಲು ಆರಂಭಿಸಿದಳು. ದೊಡ್ಡ ತಪಸ್ಸನ್ನು ಮಾಡಿ ಭಗವಂತನಾದ ಮಹೇಶ್ವರನನ್ನು ಸಂತೋಷಪಡಿಸಿದಳು.

ತಸ್ಯಾಸ್ತು ಭಗವಾಂಸ್ತುಷ್ಟಃ ತಾಮುವಾಚ ತಪಸ್ವಿನೀಮ್ ।
ವರಂ ವರಯ ಭದ್ರೇ ತ್ವಂ ವರದೋಽಸ್ಮಿ ತವೇಪ್ಸಿತಮ್ ॥೨೧॥

ಮಹೇಶ್ವರನು ಅವಳಿಗೆ ಪ್ರಸನ್ನನಾಗಿ ಆ ತಪಸ್ವಿನಿಯನ್ನು ಕುರಿತು ಮಂಗಳಸ್ವರೂಪಳೇ, ವರವನ್ನು ಕೇಳು. ನೀನು ಕೇಳಿದ ವರವನ್ನು ನಾನು ಕೊಡುತ್ತೇನೆ ಎಂದು ಹೇಳಿದನು.

ಅಥೇಶ್ವರಮುವಾಚೇದಮಾತ್ಮಜೇನಾಭಿಚೋದಿತಾ ।
ಪತಿಂ ಸರ್ವಗುಣೋಪೇತಮಿಚ್ಛಾಮೀತಿ ಪುನಃಪುನಃ ॥೨೨॥

ಕಾಮದಿಂದ ಪೀಡಿತಳಾದ ಅವಳು ಈಶ್ವರನನ್ನು ಕುರಿತು ಎಲ್ಲ ಗುಣಗಳಿಂದ ಕೂಡಿದ ಪತಿಯನ್ನು ಬಯಸುತ್ತೇನೆ ಎಂದು ಮತ್ತೆ ಮತ್ತೆ ಹೇಳಿದಳು.

ತಾಮಥ ಪ್ರತ್ಯುವಾಚೇದಮೀಶಾನೋ ವದತಾಂ ವರಃ ।
ಪಂಚ ತೇ ಪತಯೋ ಭದ್ರೇ ಭವಿಷ್ಯಂತೀತಿ ಶಂಕರಃ ॥೨೩॥

ಮಾತನಾಡುವವರಲ್ಲಿ ಶ್ರೇಷ್ಠನಾದ ಈಶ್ವರನಾದ ಶಂಕರನು ಅವಳನ್ನು ಕುರಿತು, ಭದ್ರೇ ನಿನಗೆ ಐದು ಜನರು ಪತಿಗಳಾಗುವರು ಎಂದು ಹೇಳಿದನು.

ಪ್ರತಿಬ್ರುವಾಣಾಮೇಕಂ ಮೇ ಪತಿಂ ದೇಹೀತಿ ಶಂಕರಮ್ ।
ಪುನರೇವಾಬ್ರವೀದೇನಾಮಿದಂ ವಚನಮುತ್ತಮಮ್ ॥೨೪॥

ಅವಳು ನನಗೆ ಒಬ್ಬನೇ ಪತಿಯನ್ನು ಕೊಡು ಎಂದು ಹೇಳುತ್ತಿರುವಾಗ ಶಂಕರನು ಪುನಃ ಅವಳನ್ನು ಕುರಿತು ಈ ಶ್ರೇಷ್ಠವಾದ ಮಾತನ್ನು ಆಡಿದನು.

ಪಂಚಕೃತ್ವಸ್ತ್ವಯಾಪ್ಯುಕ್ತಃ ಪತಿಂ ದೇಹೀತ್ಯಹಂ ಪುನಃ ।
ದೇಹಮನ್ಯಂ ಗತಾಯಾಸ್ತೇ ಯಥೋಕ್ತಂ ವೈ ಭವಿಷ್ಯತಿ ॥೨೫॥

ನೀನು ಐದು ಬಾರಿ ಪತಿಯನ್ನು ಕೊಡು ಎಂದು ಕೇಳಿದೆ. ಆದ್ದರಿಂದ ನೀನು ದೇಹಾಂತರವನ್ನು ಹೊಂದಿದಾಗ ನಾನು ಹೇಳಿದಂತೆಯೇ ಆಗುವುದು.

ದ್ರುಪದಸ್ಯ ಕುಲೇ ಜಾತಾ ಕನ್ಯಾ ಸಾ ವರವರ್ಣಿನೀ ।
ನಿರ್ದಿಷ್ಟಾ ಭವತಾಂ ಕನ್ಯಾ ಕೃಷ್ಣಾ ಪಾರ್ಷತ್ಯನಿಂದಿತಾ ॥೨೬॥

ಆ ಸುಂದರಿಯು ದ್ರುಪದನ ಮಗಳಾಗಿ ಜನಿಸಿದ್ದಾಳೆ. ದ್ರುಪದನ ಮಗಳಾದ ಅನಿಂದಿತಳಾದ ಕೃಷ್ಣೆಯು ನಿಮಗೆ ಯುಕ್ತಳಾಗಿರುವ ಕನ್ಯೆ.

ಪಾಂಚಾಲನಗರೀಂ ತಸ್ಮಾತ್ ಪ್ರವಿಶಧ್ವಂ ಮಹಾಬಲಾಃ ।
ಸುಖಿನಸ್ತಾಮನುಪ್ರಾಪ್ಯ ಭವಿಷ್ಯಥ ನ ಸಂಶಯಃ ।
ರಾಜ್ಯಂ ಚೈವಾಗತಂ ಪ್ರಾಪ್ತಾ ಇಂದ್ರಪ್ರಸ್ಥಂ ಗಮಿಷ್ಯಥ ॥೨೭॥

ಆದ್ದರಿಂದ ಮಹಾಬಲರಾದ ನೀವು ಪಾಂಚಾಲನಗರಕ್ಕೆ ಹೋಗಿ. ಈಗ ದುಃಖದಲ್ಲಿರುವ ನೀವು ಅವಳನ್ನು ಪಡೆದು ಸುಖವನ್ನು ಹೊಂದುವುದರಲ್ಲಿ ಸಂಶಯವಿಲ್ಲ. ತಾನಾಗಿ ಒದಗುವ ರಾಜ್ಯವನ್ನು ಸ್ವೀಕರಿಸಿ ನೀವು ಇಂದ್ರಪ್ರಸ್ಥಕ್ಕೆ ಹೋಗುವಿರಿ.

ವೈಶಂಪಾಯನಃ

ಏವಮುಕ್ತ್ವಾ ಮಹಾಭಾಗಃ ಪಾಂಡವಾನಾಂ ಪಿತಾಮಹಃ ।
ಪಾರ್ಷ್ಣಾನಾಮಂತ್ರ್ಯ ಕುಂತೀಂ ಚ ಪ್ರಾತಿಷ್ಠತ ಮಹಾತಪಾಃ ॥೨೮॥

ಪಾಂಡವರ ಪಿತಾಮಹರಾದ ಆ ಮಹಾನುಭಾವರೂ, ಮಹಾತಪಸ್ವಿಗಳೂ ಆದ ವ್ಯಾಸರು ಹೀಗೆ ಹೇಳಿ, ಪಾಂಡವರ ಮತ್ತು ಕುಂತಿಯ ಅನುಮತಿಯನ್ನು ಪಡೆದು ಅಲ್ಲಿಂದ ಹೊರಟರು.

ವೈಶಂಪಾಯನಃ

ತತಸ್ತೇ ನರಶಾರ್ದೂಲಾ ಭ್ರಾತರಃ ಪಂಚ ಪಾಂಡವಾಃ ।
ಪ್ರಯಯುರ್ದ್ರೌಪದೀಂ ದ್ರಷ್ಟುಂ ತಂ ಚ ದೇಶಂ ಮಹೋತ್ಸವಮ್ ॥

ಅನಂತರ ನರಶಾರ್ದೂಲರಾದ ಮತ್ತು ಸಹೋದರರಾದ ಆ ಐದು ಜನ ಪಾಂಡವರು ದ್ರೌಪದಿಯನ್ನೂ, ಪಾಂಚಾಲನಗರವನ್ನೂ, ಸ್ವಯಂವರಮಹೋತ್ಸವವನ್ನೂ ನೋಡಲು ಅಲ್ಲಿಗೆ ಹೊರಟರು.

ತೇ ಪ್ರಯಾತಾ ನರವ್ಯಾಘ್ರಾ ಮಾತ್ರಾ ಸಹ ಪರಂತಪಾಃ ।
ಬ್ರಾಹ್ಮಣಾನ್ ದದೃಶುರ್ಮಾರ್ಗೇ ಗಚ್ಛತಃ ಸಹಿತಾನ್ ಬಹೂನ್ ॥೩೦॥

ತಾಯಿಯ ಜೊತೆಯಲ್ಲಿ ಹೊರಟ ಪರಂತಪರಾದ ಆ ನರವ್ಯಾಘ್ರರು ಮಾರ್ಗದಲ್ಲಿ ಜೊತೆಯಲ್ಲಿ ಹೋಗುತ್ತಿರುವ ಅನೇಕ ಬ್ರಾಹ್ಮಣರನ್ನು ನೋಡಿದರು.

ತಾನೂಚುರ್ಬ್ರಾಹ್ಮಣಾ ರಾಜನ್ ಪಾಂಡವಾನ್ ಬ್ರಹ್ಮಚಾರಿಣಃ ।
ಕ್ವ ಭವಂತೋ ಗಮಿಷ್ಯಂತಿ ಕುತೋ ವಾऽऽಗಚ್ಛತೇತಿ ಹ ॥೩೧॥

ರಾಜನೇ, ಆ ಬ್ರಾಹ್ಮಣರು, ಆ ಬ್ರಹ್ಮಚಾರಿಗಳಾದ ಪಾಂಡವರನ್ನು ಕುರಿತು, ನೀವು ಎಲ್ಲಿಗೆ ಹೋಗುತ್ತಿದ್ದೀರಿ ಮತ್ತು ಎಲ್ಲಿಂದ ಬರುತ್ತಿದ್ದೀರಿ ಎಂದು ಕೇಳಿದರು.

ಯುಧಿಷ್ಠಿರಃ

ಆಗತಾನೇಕಚಕ್ರಾಯಾಃ ಸೋದರ್ಯಾನ್ ದೇವದರ್ಶಿನಃ ।
ಭವಂತೋ ಹಿ ವಿಜಾನಂತು ಸಹಿತಾನ್ ಮಾತೃಚಾರಿಣಃ ॥೩೨॥

ಗಚ್ಛತೋ ನಸ್ತು ಪಾಂಚಾಲಾನ್ ದ್ರುಪದಸ್ಯ ಪುರಂ ಪ್ರತಿ ।
ಸ್ವಯಂವರೋ ಮಹಾಂಸ್ತತ್ರ ಭವಿತಾ ಸುಮಹೋತ್ಸವಃ ॥೩೩॥

ನಾವೆಲ್ಲರೂ ಸಹೋದರರು, ತಾಯಿಯ ಜೊತೆಯಲ್ಲಿ ಏಕಚಕ್ರನಗರದಿಂದ ಬಂದು ದೇವರ ದರ್ಶನಕ್ಕಾಗಿ ಪಾಂಚಾಲನಗರಕ್ಕೆ ಹೋಗುತ್ತಿದ್ದೇವೆಂದು ನೀವು ತಿಳಿಯಿರಿ. ಪಾಂಚಾಲದೇಶದಲ್ಲಿ ದ್ರುಪದನ ಪಟ್ಟಣಕ್ಕೆ ಹೋಗುವ ನಮಗೆ ಅಲ್ಲಿ ದೊಡ್ಡ ಸ್ವಯಂವರವೆಂಬ ಮಹೋತ್ಸವವು ಉಂಟಾಗುವುದು.

ಬ್ರಾಹ್ಮಣಾಃ

ಏಕಸಾರ್ಥಂ ಪ್ರಯಾತಾಃ ಸ್ಮ ವಯಮಪ್ಯತ್ರ ಗಾಮಿನಃ ।
ತತ್ರಾಪ್ಯುತ್ಸವಸಂಕಾಶೋ ಭವಿತಾ ಉತ್ಸವೋ ಮಹಾನ್ ॥೩೪॥

ನಾವೆಲ್ಲರೂ ಜೊತೆಯಾಗಿ ಹೊರಟು ಅಲ್ಲಿಗೇ ಹೋಗುತ್ತಿದ್ದೇವೆ. ಅಲ್ಲಿ ನಮ್ಮ ಮನಸ್ಸಿಗೆ ಸಂತೋಷವಾಗುವಂತಹ ದೊಡ್ಡ ಸ್ವಯಂವರ ಮಹೋತ್ಸವವು ನಡೆಯುವುದು.

ಯಜ್ಞಸೇನಸ್ಯ ದುಹಿತಾ ದ್ರುಪದಸ್ಯ ಮಹಾತ್ಮನಃ ।
ವೇದಿಮಧ್ಯಾತ್ ಸಮುತ್ಪನ್ನಾ ಪದ್ಮಪತ್ರನಿಭೇಕ್ಷಣಾ ॥೩೫॥

ಮಹಾತ್ಮನಾದ ದ್ರುಪದರಾಜನಾದ ಯಜ್ಞಸೇನನ ಮಗಳು ವೇದಿಮಧ್ಯದಿಂದ ಜನಿಸಿದವಳಾಗಿ, ಕಮಲನಯನೆಯಾಗಿದ್ದಾಳೆ.

ದರ್ಶನೀಯಾऽನವದ್ಯಾಂಗೀ ಸುಕುಮಾರೀ ಯಶಸ್ವಿನೀ ।
ಧೃಷ್ಟದ್ಯುಮ್ನಸ್ಯ ಭಗಿನೀ ದ್ರೋಣಶತ್ರೋಃ ಪ್ರತಾಪಿನಃ ॥೩೬॥

ದ್ರೋಣಶತ್ರುವಾದ, ಪ್ರತಾಪಶಾಲಿಯಾದ, ಧೃಷ್ಟದ್ಯುಮ್ನನ ತಂಗಿಯಾದ ಅವಳು ಸುಕುಮಾರಿಯೂ, ಸುಂದರಿಯೂ, ನಿರ್ದುಷ್ಟ ಶರೀರವುಳ್ಳವಳೂ ಮತ್ತು ಕೀರ್ತಿವಂತಳೂ ಆಗಿದ್ದಾಳೆ.

ಜಾತೋ ಯಃ ಪಾವಕಾತ್ ಕ್ರೂರಃ ಸಶರಃ ಸಶರಾಸನಃ ।
ಸುಸಮಿದ್ಧಾನ್ಮಹಾಭಾಗ ಪಾವಕಾತ್ತು ಮಹಾರಥಃ ॥೩೭॥

ಮಹಾನುಭಾವನೇ, ಆ ಮಹಾರಥನಾದ ಧೃಷ್ಟದ್ಯುಮ್ನನಾದರೋ ಉರಿಯುತ್ತಿರುವ ಅಗ್ನಿಯಿಂದ ಬಿಲ್ಲುಬಾಣಗಳನ್ನು ಧರಿಸಿ ಕ್ರೂರರೂಪದಿಂದ ಎದ್ದು ಬಂದವನು.

ಯಸ್ಮಿನ್ ಸ ಜಾಯಮಾನೇ ಚ ವಾಗುವಾಚಾಶರೀರಿಣೀ ।
ಏಷ ಮೃತ್ಯುಶ್ಚ ಶಿಷ್ಯಶ್ಚ ಭಾರದ್ವಾಜಸ್ಯ ಜಾಯತೇ ॥೩೮॥

ಅವನು ಜನಿಸಿದಾಗ ಇವನು ದ್ರೋಣರ ಶಿಷ್ಯನೂ ಮತ್ತು ಮೃತ್ಯುವೂ ಆಗುತ್ತಾನೆ ಎಂದು ಅಶರೀರವಾಣಿಯಾಯಿತು.

ಸ್ವಸಾ ತಸ್ಯ ತು ವೇದ್ಯಂತರ್ಜಾತಾ ತಸ್ಮಿನ್ ಮಹಾಮಖೇ ।
ಸ್ತ್ರೀರತ್ನಮತಿರೂಪಾಂಗೀ ಶ್ಯಾಮಾ ನೀಲೋತ್ಪಲಂ ಯಥಾ ॥೩೯॥

ಆ ದೊಡ್ಡ ಯಜ್ಞದಲ್ಲಿ ಈ ಕನ್ಯೆಯು ಅವನ ತಂಗಿಯಾಗಿ ವೇದಿಮಧ್ಯದಿಂದ ಜನಿಸಿ ಬಂದವಳು. ಮಹಾಸುಂದರಿಯಾದ ಅವಳು ಒಂದು ಸ್ತ್ರೀರತ್ನ. ಅವಳು ನೀಲೋತ್ಪಲದಂತೆ ಶ್ಯಾಮವರ್ಣದಿಂದ ಕೂಡಿದ್ದಾಳೆ.

ತಾಂ ಯಜ್ಞಸೇನಸ್ಯ ಸುತಾಂ ದ್ರೌಪದೀಂ ಪರಮಸ್ತ್ರಿಯಮ್ ।
ಗಚ್ಛಾಮಸ್ತತ್ರ ವೈ ದ್ರಷ್ಟುಂ ತಂ ಚೈವಾಸ್ಯಾಃ ಸ್ವಯಂವರಮ್ ॥೪೦॥

ನಾವು ಯಜ್ಞಸೇನನ ಮಗಳಾದ ಶ್ರೇಷ್ಠವನಿತೆಯಾದ ದ್ರೌಪದಿಯನ್ನೂ ಮತ್ತು ಅವಳ ಸ್ವಯಂವರವನ್ನೂ ನೋಡಲು ಅಲ್ಲಿಗೆ ಹೋಗುತ್ತಿದ್ದೇವೆ.

ರಾಜಾನೋ ರಾಜಪುತ್ರಾಶ್ಚ ಜ್ವಲಂತೋ ಭೂರಿದಕ್ಷಿಣಾಃ ।
ಸ್ವಾಧ್ಯಾಯವಂತಃ ಶುಚಯೋ ಮಹಾತ್ಮಾನೋ ಧೃತವ್ರತಾಃ ॥೪೧॥

ತರುಣಾ ದರ್ಶನೀಯಾಶ್ಚ ನಾನಾದೇಶಸಮಾಗತಾಃ ।
ಮಹಾರಥಾಃ ಕೃತಾಸ್ತ್ರಾಶ್ಚ ಸಮೇಷ್ಯಂತಿ ಚ ಭೂಮಿಪಾಃ ॥೪೨॥

ಅಲ್ಲಿಗೆ ಕಾಂತಿಯಿಂದ ಬೆಳಗುವ, ಬಹಳ ದಕ್ಷಿಣೆಯನ್ನು ಕೊಡುವ ಸ್ವಾಧ್ಯಾಯವನ್ನು ಮಾಡಿದವರೂ, ಶುಚಿರ್ಭೂತರೂ, ಮಹಾತ್ಮರೂ, ಧೃತವ್ರತರೂ, ಸುಂದರರೂ, ಅಸ್ತ್ರಜ್ಞರೂ, ಮಹಾರಥರೂ ಆದ ರಾಜರುಗಳು ನಾನಾದೇಶಗಳಿಂದ ಬರುತ್ತಾರೆ.

ತೇ ತತ್ರ ವಿವಿಧಾದಾನಾ ವಿಜಯಾರ್ಥಂ ನರರ್ಷಭಾಃ ।
ಪ್ರದಾಸ್ಯಂತಿ ಧನಂ ಗಾಶ್ಚ ಸರ್ವತಃ ಪ್ರತಿಗೃಹ್ಯ ಚ ।
ಸಹಾಸ್ಮಾಭಿರ್ಬಹೂನಬ್ದಾನ್ ಮಾತ್ರಾ ಸಹ ನಿವತ್ಸ್ಯಥ ॥೪೩॥

ಆ ನರಶ್ರೇಷ್ಠರು ಸ್ವಯಂವರದಲ್ಲಿ ವಿಜಯವನ್ನು ಸಾಧಿಸುವ ಸಲುವಾಗಿ ಧನ, ಗೋವು ಮೊದಲಾದ ಅನೇಕ ಶ್ರೇಷ್ಠವಾದ ದಾನಗಳನ್ನು ಕೊಡುವರು. ಅವೆಲ್ಲವನ್ನೂ ನಮ್ಮ ಜೊತೆಯಲ್ಲಿ ಸ್ವೀಕರಿಸಿ ನಿಮ್ಮ ತಾಯಿಯ ಜೊತೆಯಲ್ಲಿ ಬಹಳ ವರ್ಷಗಳ ಕಾಲ ವಾಸ ಮಾಡಿ.

ಪ್ರತಿಗೃಹ್ಯ ಚ ತತ್ಸರ್ವಂ ದೃಷ್ಟ್ವಾ ಚೈವ ಸ್ವಯಂವರಮ್ ।
ಅನುಭೂಯೋತ್ಸವಂ ಚೈವ ಗಮಿಷ್ಯಾಮೋ ಯಥೇಪ್ಸಿತಮ್॥೪೪॥

ಆ ಎಲ್ಲಾ ದಾನವನ್ನೂ ಸ್ವೀಕರಿಸಿ, ಸ್ವಯಂವರವನ್ನು ನೋಡಿ, ಉತ್ಸವವನ್ನು ಅನುಭವಿಸಿ, ನಮಗೆ ಇಷ್ಟವಾದ ಕಡೆಗೆ ನಾವು ಹೋಗುವೆವು.

ನಟಾ ವೈತಾಲಿಕಾಶ್ಚೈವ ನರ್ತಕಾಸ್ತತ್ರ ಮಾಗಧಾಃ ।
ನಿಯೋಧಕಾಶ್ಚ ದೇಶೇಭ್ಯಃ ಸಮೇಷ್ಯಂತಿ ಮಹಾಬಲಾಃ ॥೪೫॥

ನಟರೂ, ವೈತಾಲಿಕರೂ, ನರ್ತಕರೂ, ಮಾಗಧರೂ, ಬಲಿಷ್ಠರಾದ ಯೋಧರೂ, ಅನೇಕದೇಶಗಳಿಂದ ಅಲ್ಲಿಗೆ ಬರುತ್ತಾರೆ.

ಏವಂ ಕೌತೂಹಲಂ ದೃಷ್ಟ್ವಾ ಭುಕ್ತ್ವಾ ಚ ಪ್ರತಿಗೃಹ್ಯ ಚ ।
ಸಹಾಸ್ಮಾಭಿರ್ಮಹಾತ್ಮಾನೋ ರಂಗಂ ಪ್ರತಿ ನಿವತ್ಸ್ಯಥ ॥೪೬॥

ಹೀಗೆ ಅವರ ಚಮತ್ಕಾರಗಳನ್ನೆಲ್ಲಾ ನೋಡಿ ದಾನವನ್ನು ಸ್ವೀಕರಿಸಿ ಒಳ್ಳೆಯ ಭೋಜನವನ್ನು ಮಾಡಿ ಮಹಾತ್ಮರಾದ ನೀವು ಸ್ವಯಂವರ ರಂಗಮಂಟಪದ ಬಳಿಯಲ್ಲಿಯೇ ವಾಸ ಮಾಡಿ.

ದರ್ಶನೀಯಾಂಶ್ಚ ವಃ ಸರ್ವಾನೇಕರೂಪಾನಿವ ಸ್ಥಿತಾನ್ ।
ಸಮೀಕ್ಷ್ಯ ಕೃಷ್ಣಾ ವರಯೇತ್ ಸಂಗತ್ಯಾऽನ್ಯತರಂ ವರಮ್ ॥೪೭॥

ಮನೋಹರರಾದ ಒಳ್ಳೆಯ ರೂಪವನ್ನು ಹೊಂದಿರುವಂತೆ ಕಾಣುವ ನಿಮ್ಮನ್ನು ನೋಡಿ ದ್ರೌಪದಿಯು ನಿಮ್ಮಲ್ಲಿ ಯಾರಾದರೂ ಒಬ್ಬನನ್ನು ಸ್ವಯಂವರದಲ್ಲಿ ವರಿಸಬಹುದು.

ಅಯಮೇಕತರೋ ಭ್ರಾತಾ ದರ್ಶನೀಯೋ ಮಹಾಭುಜಃ ।
ನಿರ್ಯತ್ನವಾನಪಿ ಜಯೇತ್ ಸಂಗತ್ಯ ದ್ರವಿಣಂ ಮಹತ್ ॥೪೮॥

ನಿಮ್ಮಲ್ಲಿ ಒಬ್ಬನಾದ, ಸುಂದರನಾದ, ಮಹಾಭುಜನಾದ ಈ ಸಹೋದರನು (ಭೀಮನು) ಅನಾಯಾಸವಾಗಿ ದೊಡ್ಡ ದ್ರವ್ಯವನ್ನು (ಕನ್ಯೆಯನ್ನು) ಗಳಿಸಿಯಾನು.

ಯುಧಿಷ್ಠಿರಃ

ಪರಮಂ ಭೋಗಮಿಚ್ಛಾಮೋ ದ್ರಷ್ಟುಂ ತತ್ರ ಸ್ವಯಂವರಮ್ ।
ಭವದ್ಭಿಃ ಸಹಿತಾಃ ಸರ್ವೇ ಕನ್ಯಾಯಾಸ್ತಂ ಸ್ವಯಂವರಮ್ ॥೪೯॥

ನಾವೆಲ್ಲರೂ ನಿಮ್ಮ ಜೊತೆಯಲ್ಲಿ ಕನ್ಯೆಯ ಆ ಸ್ವಯಂವರವನ್ನು ನೋಡಿ ಶ್ರೇಷ್ಠವಾದ ಭೋಗವನ್ನು ಪಡೆಯಲು ಬಯಸುತ್ತೇವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಭೀಮೋಽಪಿ ರುದ್ರವರರಕ್ಷಿತರಾಕ್ಷಸಂ ತಂ
ಹತ್ವಾ ತೃಣೋಪಮತಯಾ ಹರಿಭಕ್ತವಂದ್ಯಃ ।
ಉಷ್ಯಾಥ ತತ್ರ ಕತಿಚಿದ್ದಿನಮಚ್ಯುತಸ್ಯ
ವ್ಯಾಸಾತ್ಮನೋ ವಚನತಃ ಪ್ರಯಯೌ ನಿಜೈಶ್ಚ ॥೧೦೫॥

ಹರಿಭಕ್ತರಿಗೆ ವಂದ್ಯನಾದ ಭೀಮಸೇನ ರುದ್ರದೇವರ ವರದಿಂದ ಸುರಕ್ಷಿತನಾಗಿದ್ದ ಬಕರಾಕ್ಷಸನನ್ನು ತೃಣೀಕರಿಸಿ ಕೊಂದು ಏಕಚಕ್ರನಗರದಲ್ಲಿ ಕೆಲವು ದಿನವಿದ್ದು ವ್ಯಾಸರೂಪಿ ಹರಿಯ ಮಾತಿನಂತೆ ತನ್ನವರೊಂದಿಗೆ ಪ್ರಯಾಣ ಮಾಡಿದ.

ಮಂಗಲ್ಯಮೇತದತುಲಂ ಪ್ರತಿಯಾತ ಶೀಘ್ರಂ
ಪಾಂಚಾಲಕಾನ್ ಪರಮಭೋಜನಮತ್ರ ಸಿಧ್ಯೇತ್ ।
ವಿಪ್ರೈರಿತಸ್ತತ ಇತೀರಿತವಾಕ್ಯಮೇತೇ
ಶೃಣ್ವಂತ ಏವ ಪರಿಚಕ್ರಮುರುತ್ತರಾಶಾಂ ॥೧೦೬॥

ಅನುಪಮವಾದ ವಿವಾಹ ಮಂಗಲ ಮಹೋತ್ಸವ ನಡೆಯಲಿದೆ. ಅದರಿಂದ ಬೇಗನೆ ಪಾಂಚಾಲದೇಶಕ್ಕೆ ಬನ್ನಿರಿ. ಅಲ್ಲಿ ಉತ್ತಮವಾದ ಭೋಜನ ಲಭಿಸುವುದು ಎಂದು ಅಲ್ಲಲ್ಲಿ ಬ್ರಾಹ್ಮಣರು ಹೇಳಿದ ಮಾತನ್ನು ಕೇಳುತ್ತ ಪಾಂಡವರು ಉತ್ತರದಿಕ್ಕಿಗೆ ನಡೆದರು.

ಷಣ್ಣಾಂ ಚ ಮಧ್ಯಗಮುದೀರ್ಣಭುಜಂ ವಿಶಾಲ-
ವಕ್ಷಸ್ಥಲಂ ಬಹಳಪೌರುಷಲಕ್ಷಣಂ ಚ ।
ದೃಷ್ಟ್ವೈವ ಮಾರುತಿಮಸಾವುಪಲಪ್ಸ್ಯತೀಹ
ಕೃಷ್ಣಾಮಿತಿ ಸ್ಮ ಚ ವಚಃ ಪ್ರವದಂತಿ ವಿಪ್ರಾಃ ॥೧೦೭॥

ಆರು ಜನರ ಮಧ್ಯದಲ್ಲಿ ಮಹಾಬಾಹು ವಿಶಾಲವಕ್ಷಃಸ್ಥಳ ಮತ್ತು ಮಹಾಪೌರುಷ ಲಕ್ಷಣಗಳಿಂದ ಒಪ್ಪುವ ಭೀಮನನ್ನು ಕಂಡು ಇವನೇ ದ್ರೌಪದಿಯನ್ನು ಪಡೆಯುತ್ತಾನೆ ಎಂದು ಬ್ರಾಹ್ಮಣರು ಹೇಳಿದರು.

ರಾತ್ರೌ ದಿವಾ ಚ ಸತತಂ ಪಥಿ ಗಚ್ಛಮಾನಾಃ
ಪ್ರಾಪುಃ ಕದಾಚಿದಥ ವಿಷ್ಣುಪದೀಂ ನಿಶಾಯಾಂ ।
ಸರ್ವಸ್ಯ ರಕ್ಷಿತುಮಗಾದಿಹ ಪೃಷ್ಠತಸ್ತು
ಭೀಮೋಽಗ್ರ ಏವ ಶತಮನ್ಯುಸುತೋಂತರಾನ್ಯೇ ॥೧೦೮॥

ರಾತ್ರಿಹಗಲು ಎಡೆಬಿಡದೆ ದಾರಿ ನಡೆಯುತ್ತ ಪಾಂಡವರು ಒಂದು ರಾತ್ರಿ ಗಂಗಾನದಿಯ ಬಳಿಗೆ ಬಂದರು. ಆಗ ಎಲ್ಲರ ರಕ್ಷಣೆಗಾಗಿ ಹಿಂದಿನಿಂದ ಭೀಮ ನಡೆಯುತ್ತಿದ್ದ. ಮುಂದೆ ಅರ್ಜುನ ನಡುವೆ ಇತರರು ನಡೆಯುತ್ತಿದ್ದರು.

ಪ್ರಾಪ್ತೇ ತದೋಲ್ಮುಕಧರೇಽರ್ಜುನ ಏವ ಗಂಗಾಂ
ಗಂಧರ್ವರಾಜ ಇಹ ಚಿತ್ರರಥೋಽರ್ಧರಾತ್ರೇ ।
ದೃಷ್ಟ್ವೈವ ವಿಪ್ರರಹಿತಾನುದಕಾಂತರಸ್ಥಃ
ಕ್ಷತ್ರಾತ್ಮಜಾ ಇತಿ ಹ ಧರ್ಷಯಿತುಂ ಸ ಚಾಗಾತ್ ॥೧೦೯॥

ಉರಿವ ಕೊಳ್ಳಿಯನ್ನು ಹಿಡಿದಿದ್ದ ಅರ್ಜುನ ಗಂಗೆಯ ಬಳಿಗೆ ಬಂದಾಗ ಅಲ್ಲಿ ನೀರಲ್ಲಿದ್ದ ಚಿತ್ರರಥನೆಂಬ ಗಂಧರ್ವ ಅರ್ಧರಾತ್ರಿಯಲ್ಲಿ, ಜೊತೆಗೆ ಬ್ರಾಹ್ಮಣರೂ ಇಲ್ಲದೆ ಬರುತ್ತಿದ್ದ ಪಾಂಡವರನ್ನು ಕಂಡು ಕ್ಷತ್ರಿಯರೆಂದು ಅವರನ್ನು ಆಕ್ರಮಿಸಲು ತೊಡಗಿದ.

ಹಂತಾಸ್ಮಿ ವೋ ಹ್ಯುಪಗತಾನುದಕಾಂತಮಸ್ಯಾ
ನದ್ಯಾಶ್ಚ ಮರ್ತ್ಯಚರಣಾಯ ನಿಷಿದ್ಧಕಾಲೇ ।
ಇತ್ಥಂ ವದಂತಮಮುಮಾಹ ಸುರೇಂದ್ರಸೂನು-
ರ್ಗಂಧರ್ವ ನಾಸ್ತ್ರವಿದುಷಾಂ ಭಯಮಸ್ತಿ ತೇಽದ್ಯ ॥೧೧೦॥

ಮಾನವರು ಸಂಚರಿಸಲು ನಿಷಿದ್ಧವಾದ ಈ ರಾತ್ರಿಕಾಲದಲ್ಲಿ ನದೀ ನೀರಿನ ಬಳಿಗೆ ಬಂದಿರುವ ನಿಮ್ಮನ್ನು ನಾನು ಕೊಲ್ಲುವೆನೆಂದು ಗಂಧರ್ವ ನುಡಿದಾಗ ಅರ್ಜುನನೆಂದ 'ಗಂಧರ್ವ! ಅಸ್ತ್ರಗಳನ್ನು ಬಲ್ಲ ನಮಗೆ ನಿನ್ನ ಭಯವಿಲ್ಲ'.

ಸರ್ವಂ ಹಿ ಫೇನವದಿದಂ ಬಹುಲಂ ಬಲಂ ತೇ
ನಾರ್ಥಪ್ರದಂ ಭವತಿ ಚಾಸ್ತ್ರವಿದಿ ಪ್ರಯುಕ್ತಂ ।
ಇತ್ಯುಕ್ತವಂತಮಮುಮುತ್ತಮಯಾನಸಂಸ್ಥೋ
ಬಾಣಾನ್ ಕ್ಷಿಪನ್ನಭಿಸಸಾರ ಸುರೇಶಭೃತ್ಯಃ ॥೧೧೧॥

'ನಿನ್ನ ಸಮಸ್ತ ಮಹಾಬಲವೂ ಕೂಡ ಅಸ್ತ್ರಜ್ಞರಾದ ನಮ್ಮ ಮೇಲೆ ಪ್ರಯೋಗಿಸಿದಾಗ, ಬಂಡೆಗಲ್ಲಿನ ಮೇಲೆ ನೀರಿನ ನೊರೆಯಂತೆ ಏನೂ ಪ್ರಯೋಜನವಾಗದು. 'ಹೀಗೆ ಅರ್ಜುನ ಹೇಳಿದಾಗ ಆ ಗಂಧರ್ವ ಉತ್ತಮವಾದ ರಥದಲ್ಲಿನಿಂತು ಬಾಣ ಎಸೆಯುತ್ತ ಪಾಂಡವರ ಮೇಲೇರಿ ಬಂದ.

ಆಗ್ನೇಯಮಸ್ತ್ರಮಭಿಮಂತ್ರ್ಯ ತದೋಲ್ಮುಕೇ ಸ
ಚಿಕ್ಷೇಪ ಶಕ್ರತನಯೋಽಸ್ಯ ರಥಶ್ಚ ದಗ್ಧಃ ।
ತಂ ಚಾಗ್ನಿನಾ ಪರಿಗೃಹೀತಮಭಿಪ್ರಗೃಹ್ಯ
ಕೇಶೇಷು ಸಂಚಕರ್ಷಾಶು ಸುರೇಂದ್ರಸೂನುಃ ॥೧೧೨॥

ಆಗ ಅರ್ಜುನ ಕೊಳ್ಳಿಯಲ್ಲಿ ಆಗ್ನೇಯಾಸ್ತ್ರವನ್ನು ಅಭಿಮಂತ್ರಿಸಿ ಎಸೆದ. ಗಂಧರ್ವನ ರಥ ಸುಟ್ಟುಹೋಯಿತು. ಅಗ್ನಿಯಿಂದ ಅಮೃತನಾದ ಗಂಧರ್ವನನ್ನು ಕೂದಲುಗಳಲ್ಲಿ ಹಿಡಿದು ಸೆಳೆದ, ಅರ್ಜುನ.

ಪಾರ್ಥೇನ ಸಂಧರ್ಷಿತಃ ಶರಣಂ ಜಗಾಮ
ಧರ್ಮಾತ್ಮಜಂ ತಮಪಿ ಸೋಽಥ ನಿಜಾಸ್ತ್ರಮುಗ್ರಂ ।
ಸಂಜಹ್ರ ಏವ ತತ ಆಸ ಚ ನಾಮತೋಽಸಾ-
ವಂಗಾರವರ್ಣ ಇತಿ ವರ್ಣವಿಪರ್ಯಯೇಣ ॥೧೧೩॥

ಅರ್ಜುನನಿಂದ ಆಕ್ರಮಿಸಲ್ಪಟ್ಟ ಚಿತ್ರರಥ ಧರ್ಮರಾಜನನ್ನೂ ಅರ್ಜುನನನ್ನೂ ಶರಣಾದ. ಆಗ ಅರ್ಜುನ ತನ್ನ ಭಯಂಕರ ಅಸ್ತ್ರವನ್ನು ಉಪಸಂಹರಿಸಿದ. ಚಿತ್ರರ್ಥ ಮೈಬಣ್ಣವ್ಯತ್ಯಾಸವಾದ್ದರಿಂದ ಅವನು ಅಂಗಾರವರ್ಣ ಎಂಬ ಹೆಸರು ಪಡೆದ.

ಗಂಧರ್ವ ಉಲ್ಬಣಸುರಕ್ತತನುಃ ಸ ಭೂತ್ವಾ
ಸ್ವರ್ಣಾವದಾತ ಉತ ಪೂರ್ವಮುಪೇತ್ಯ ಸಖ್ಯಂ ।
ಪಾರ್ಥೇನ ದುರ್ಲಭಮಹಾಸ್ತ್ರಮಿದಂ ಯಯಾಚೇ
ಜಾನನ್ನಪಿ ಸ್ಮ ನ ಹಿ ತಾದೃಶಮೇಷ ವೇದ ॥೧೧೪॥

ಗಂಧರ್ವ ಹಿಂದೆ ಬಂಗಾರದಂಥ ಸ್ವಚ್ಛವರ್ಣದವನಿದ್ದು ಈಗ ಕಡು ಕೆಂಪಾದ ಮೈಯವನಾಗಿ ಅರ್ಜುನನೊಡನೆ ಸಖ್ಯಮಾಡಿಕೊಂಡು ದುರ್ಲಭವಾದ ಮಹಾ

ಆಗ್ನೇಯಾಸ್ತ್ರವನ್ನು ಬೇಡಿದ. ಅದನ್ನು ಅವನು ಮೊದಲೆ ತಿಳಿದಿದ್ದರೂ ಅರ್ಜುನನು ತಿಳಿದಂತೆ ತಿಳಿದಿರಲಿಲ್ಲ.

ವಿದ್ಯಾ ಸುಶಿಕ್ಷಿತತಮಾ ಹಿ ಸುರೇಶ ಸೂನೌ
ತಾಮಸ್ಯ ಚಾವದದಸಾವಪಿ ಕಾಲತೋಽಸ್ಯೈ ।
ಗಂಧರ್ವಗಾಮವದದನ್ಯಗದೃಶ್ಯವಿದ್ಯಾಂ
ಪಶ್ಚಾದಿತಿ ಸ್ಮ ಪುರುಹೂತಸುತಸ್ಯ ವಾಕ್ಯಾತ್ ॥೧೧೫॥

ಅರ್ಜುನನಲ್ಲಿ ಆನ್ಗೇಯಾಸ್ತ್ರವಿದ್ಯೆ ಬಲು ಚೆನ್ನಾಗಿ ಸಾಧಿತವಾಗಿತ್ತು. ಅದನ್ನು ಅವನು ಗಂಧರ್ವನಿಗೆ ಉಪದೇಶಿಸಿದ. ಗಂಧರ್ವನೂ ಗಂಧರ್ವರಲ್ಲಿರುವ ಅದೃಶ್ಯ ವಿದ್ಯೆಯನ್ನು ಅರ್ಜುನನಿಗೆ ಕಾಲಾಂತರದಲ್ಲಿ ಉಪದೇಶಿಸಿದ. ಏಕೆಂದರೆ ಕಾಲಾಂತರದಲ್ಲಿಯೇ ನಾನು ಅದನ್ನು ಸ್ವೀಕರಿಸುವೆನೆಂದು ಅರ್ಜುನ ನುಡಿದ.

ಆಧಿಕ್ಯತಃ ಸ್ವಗತಸಂವಿದ ಏವ ಸಾಮ್ಯೇ
ನೈವೇಚ್ಛತಿ ಸ್ಮ ನಿಮಯಂ ಸ ಧನಂಜಯೋಽತ್ರ ।
ಧರ್ಮಾರ್ಥಮೇವ ಸ ತು ತಾಂ ಪರಿದಾಯ ತಸ್ಯೈ
ಕಾಲೇನ ಸಂವಿದಮಮುಷ್ಯ ಚ ಧರ್ಮತೋಽಯಾತ್ ॥೧೧೬॥

ಅರ್ಜುನ ತನ್ನಲ್ಲಿರುವ ವಿದ್ಯೆ ಹೆಚ್ಚು ಶ್ರೇಷ್ಠವಾದ್ದರಿಂದ ಇಬ್ಬರ ವಿದ್ಯೆಗಳಲ್ಲಿ ಸಾಮ್ಯವಿದ್ದರೆ ಮಾತ್ರ ಶಕ್ಯವಾಗುವಂಥ ವಿನಿಮಯವನ್ನು ಒಪ್ಪಲಿಲ್ಲ. ಅದರಿಂದ ಧರ್ಮಾರ್ಥವಾಗಿಯೆ ಅದನ್ನು ಗಂಧರ್ವನಿಗೆ ನೀಡಿ ಸ್ವಲ್ಪ ಕಾಲ ಕಳೆದ ಬಳಿಕ ಅವನ ವಿದ್ಯೆಯನ್ನು ಧರ್ಮಾರ್ಥವಾಗಿಯೆ ಪಡೆದ.

★ ★ ★ ★

ನೂರ ಎಪ್ಪತ್ತೆರಡನೆಯ ಅಧ್ಯಾಯ

(ಅರ್ಧರಾತ್ರಿಯಲ್ಲಿ ಪಾಂಡವರ ಗಂಗಾಪ್ರಾಪ್ತಿ. ಚಿತ್ರರಥಗಂಧರ್ವನ ಜೊತೆಯಲ್ಲಿ ಅರ್ಜುನನ ಯುದ್ಧ, ಚಿತ್ರರಥನ ಪರಾಜಯ. ಆಗ್ನೇಯಾಸ್ತ್ರವನ್ನು ಕೊಟ್ಟು ಗಂಧರ್ವನಿಂದ ಅರ್ಜುನನ ಗಾಂಧರ್ವಾಸ್ತ್ರಗ್ರಹಣ)

ವೈಶಂಪಾಯನಃ

ತೇ ಪ್ರತಸ್ಥುಃ ಪುರಸ್ಕೃತ್ಯ ಮಾತರಂ ಭರತರ್ಷಭಾಃ ।
ಸಮ್ಯೈರುದಙ್ಮುಖೈರ್ಮಾರ್ಗೈರ್ಯಥೋದ್ದಿಷ್ಟಂ ಮಹಾಬಲಾಃ ॥

ಆ ಮಹಾಬಲರಾದ ಭರತರ್ಷಭರು ತಾಯಿಯನ್ನು ಮುಂದೆ ಮಾಡಿಕೊಂಡು ಉತ್ತರಾಭಿಮುಖವಾದ ಸಮವಾದ ಮಾರ್ಗದಲ್ಲಿ ಉದ್ದೇಶಿಸಿದಂತೆ ಹೊರಟರು.

ತೇ ಗಚ್ಛಂತಸ್ತ್ವಹೋರಾತ್ರಂ ಪಾಂಚಾಲನಗರಂ ಪ್ರತಿ ।
ಅಭ್ಯಾಜಗ್ಮುರ್ಲೋಕನದೀಂ ಗಂಗಾಂ ಭಾಗೀರಥೀಂ ಪ್ರತಿ ॥೨॥

ಅವರು ಪಾಂಚಾಲನಗರವನ್ನು ಉದ್ದೇಶಿಸಿ ಹಗಲೂ ರಾತ್ರಿಯೂ ಪ್ರಯಾಣ ಮಾಡುತ್ತಾ ಲೋಕಪಾವನೆಯಾದ ಭಾಗೀರಥೀ ನದಿಯನ್ನು ತಲುಪಿದರು.

ಚಂದ್ರಾಸ್ತಮನವೇಲಾಯಾಮರ್ಧರಾತ್ರೇ ಸಮಾಗತೇ ।
ತೇ ಚೈವಾತ್ರಾನುಮಜ್ಜಂತಸ್ತೀರ್ಥಂ ಸೋಮಾಶ್ರಯಾಯಣಮ್ ॥೩॥

ಅರ್ಧರಾತ್ರಿಯಲ್ಲಿ ಚಂದ್ರಾಸ್ತ ಸಮಯದಲ್ಲಿ ಮಹೇಶ್ವರನು ತಲೆಯಲ್ಲಿ ಧರಿಸಿದ ಗಂಗಾತೀರ್ಥದಲ್ಲಿ ಸ್ನಾನ ಮಾಡಲು ಬಯಸಿದರು.

ಉಲ್ಮುಕಂ ತು ಸಮುದ್ಯಮ್ಯ ತೇಷಾಮಗ್ರೇ ಧನಂಜಯಃ ।
ಪ್ರಕಾಶಾರ್ಥಂ ಯಯೌ ತತ್ರ ರಕ್ಷಾರ್ಥಂ ಚ ಧನಂಜಯಃ ॥೪॥

ಅರ್ಜುನನು ಅವರ ಮುಂಭಾಗದಲ್ಲಿ ಬೆಳಕಿನ ಸಲುವಾಗಿ ಮತ್ತು ರಕ್ಷಣೆಯ ಸಲುವಾಗಿ ಉರಿಯುತ್ತಿರುವ ಒಂದು ಪಂಜನ್ನು ಹಿಡಿದುಕೊಂಡು ಹೊರಟನು.

ಅಥ ತತ್ರ ಜಲೇ ರಮ್ಯೇ ವಿಜನೇ ಕ್ರೀಡಯನ್ ಸ್ತ್ರಿಯಃ ।
ಈಕ್ಷ್ಯ ಗಂಧರ್ವರಾಜಸ್ತು ಜಲಕ್ರೀಡಾಮುಪಾಗತಃ ॥೫॥

ಆಗ ಅಲ್ಲಿ ಮನೋಹರವಾದ ಆ ನೀರಿನಲ್ಲಿ ನಿರ್ಜನವಾದ ಪ್ರದೇಶದಲ್ಲಿ ತನ್ನ ಸ್ತ್ರೀಯರ ಜೊತೆಯಲ್ಲಿ ಜಲಕ್ರೀಡೆಯಾಡಲು ಗಂಧರ್ವರಾಜನಾದ ಚಿತ್ರರಥನು ಬಂದಿದ್ದನು.

ಶಬ್ದಮೇಷಾಂ ಸ ಶುಶ್ರಾವ ನದೀಂ ಸಮುಪಸರ್ಪತಾಮ್ ।
ತೇನ ಶಬ್ದೇನ ಚೋದ್ರಿಕ್ತಃ ಚುಕ್ರೋಧ ಸಹಸಾ ಬಲೀ ॥೬॥

ಅವನು ನದಿಯ ಬಳಿಗೆ ಬರುತ್ತಿರುವ ಈ ಪಾಂಡವರ ಶಬ್ದವನ್ನು ಕೇಳಿದನು. ಬಲಿಷ್ಠನಾದ ಅವನು ಆ ಶಬ್ದವನ್ನು ಕೇಳಿದ ಕೂಡಲೇ ಕೋಪೋದ್ರಿಕ್ತನಾದನು.

ಸ ದೃಷ್ಟ್ವಾ ಪಾಂಡವಾಂಸ್ತತ್ರ ಸಹ ಮಾತ್ರಾ ಪರಂತಪಾನ್ ।
ವಿಷ್ಫಾರಯನ್ ಧನುಘೋರ್ಮಿದಂ ವಚನಮಬ್ರವೀತ್ ॥೭॥

ಅವನು ಅಲ್ಲಿ ತಾಯಿಯ ಜೊತೆಯಲ್ಲಿದ್ದ ಪರಂತಪರಾದ ಪಾಂಡವರನ್ನು ನೋಡಿ ತನ್ನ ಘೋರವಾದ ಧನುಸ್ಸನ್ನು ಬಗ್ಗಿಸುತ್ತಾ ಹೀಗೆ ಮಾತನಾಡಿದನು.

ಅಂಗಾರವರ್ಣಃ

ಸಂಧ್ಯಾ ಸಂರಜ್ಯತೇ ಘೋರಾ ಪರ್ವರಾತ್ರಾಗಮೇಷು ಯಾ ।
ಅಶೀತಿತ್ರುಟಿಭಿರ್ಹೀನಾನ್ ತ್ರೀನ್ ಮುಹೂರ್ತಾನ್ ಪ್ರಚಕ್ಷತೇ ॥೮॥

ಪರ್ವರಾತ್ರಿಗಳಲ್ಲಿ ಘೋರವಾದ ಸಂಧ್ಯಾಕಾಲವು ಸಂಬದ್ಧವಾಗುತ್ತದೆ. ಎಂಭತ್ತು ತ್ರುಟಿಗಳಿಂದ ಹೀನವಾದ ಮೂರು ಮುಹೂರ್ತಗಳನ್ನು ಘೋರವೆಂದು ಹೇಳುತ್ತಾರೆ.

ಅಷ್ಟಮಿ, ಅಮಾವಾಸ್ಯೆ ಮೊದಲಾದವು ಪರ್ವಕಾಲಗಳು. ರಾತ್ರಿಯ ಅರ್ಧಭಾಗಕ್ಕೆ ಪೂರ್ವದ ಕಾಲವನ್ನು ಪೂರ್ವರಾತ್ರಿ ಎಂತಲೂ, ಅನಂತರದ ಭಾಗವನ್ನು ಅಪರರಾತ್ರಿ ಎಂತಲೂ ಕರೆಯುತ್ತಾರೆ. ಆ ರಾತ್ರಿ ಮಧ್ಯಬಿಂದುವಿನಿಂದ ಎರಡೂ ಕಡೆಗಳಲ್ಲಿ ಒಂದೂವರೆ ಮುಹೂರ್ತಗಳು ಘೋರವಾದ ಕಾಲ. ಒಂದೂವರೆ ಮುಹೂರ್ತಗಳೆಂದರೆ ಮೂರು ಘಳಿಗೆಗಳು. ಒಂದು ಘಳಿಗೆಗೆ ಅರವತ್ತು ತ್ರುಟಿಗಳು.

ಪೂರ್ವರಾತ್ರದ ಕೊನೆಯ ಮೂರು ಘಳಿಗೆಗಳಲ್ಲಿ ಎರಡು ಘಳಿಗೆ ಮತ್ತು ಇಪ್ಪತ್ತು ತ್ರುಟಿಗಳು ಘೋರವಾದ ಕಾಲ. ಅಲ್ಲಿ ಇನ್ನೂ ನಲವತ್ತು ತ್ರುಟಿಗಳು ಉಳಿಯುತ್ತವೆ. ಅಪರರಾತ್ರದ ಮೊದಲನೇ ಘಳಿಗೆಯ ಇಪ್ಪತ್ತು ತ್ರುಟಿಗಳು ಮತ್ತು ಎರಡು ಘಳಿಗೆಗಳು ಇವು ಘೋರವಾದ ಕಾಲ. ಪೂರ್ವರಾತ್ರದ ಎರಡು ಘಳಿಗೆ ಮತ್ತು ಇಪ್ಪತ್ತು ತ್ರುಟಿಗಳೂ ಸಹ ಘೋರವಾದ ಕಾಲ. ಇನ್ನು ಪೂರ್ವರಾತ್ರದ ಕೊನೆಯಲ್ಲಿ ನಲವತ್ತು ತ್ರುಟಿಗಳು ಅಪರರಾತ್ರದ ಆರಂಭದಲ್ಲಿ ನಲವತ್ತು ತ್ರುಟಿಗಳೂ ಸೇರಿ ಮಧ್ಯದಲ್ಲಿ ಎಂಭತ್ತು ತ್ರುಟಿಗಳ ಕಾಲವಿದೆ. ಅದಂತೂ ಉಳಿದ ನಾಲ್ಕು ಘಳಿಗೆ ನಲವತ್ತು ತ್ರುಟಿಗಳಿಗಿಂದ ಬಹಳ ಘೋರವಾದ ಕಾಲ. ಈ ಆರು ಘಳಿಗೆಗಳನ್ನು ಒಟ್ಟಾಗಿ ಸಂಧ್ಯಾಕಾಲವೆಂದು ಕರೆಯುತ್ತಾರೆ.

ವಿಹಿತಾನ್ ಕಾಮಚಾರಾಯ ಯಕ್ಷಗಂಧರ್ವರಕ್ಷಸಾಮ್ ।
ಶೇಷಂ ಕಾಲಂ ಮನುಷ್ಯಾಣಾಂ ಕಾಮಚಾರಮಿಹ ಸ್ಮೃತಮ್ ॥೯॥

ಈ ಘೋರವಾದ ಕಾಲವು ಯಕ್ಷರಾಕ್ಷಸಗಂಧರ್ವರಿಗೆ ಕಾಮಚಾರದ ಕಾಲ ಎಂದು ವಿಹಿತವಾಗಿದೆ. ದಿವಸದಲ್ಲಿ ಉಳಿದ ಕಾಲವು ಮನುಷ್ಯರಿಗೆ ಕಾಮಚಾರದ ಕಾಲ ಎಂದು ಹೇಳಲ್ಪಡುತ್ತದೆ. (ಆ ಕಾಲವನ್ನು ಬಿಟ್ಟು ಬೇರೆ ಕಾಲದಲ್ಲಿ ಮನುಷ್ಯರು ಗಂಗೆಯನ್ನು ಮುಟ್ಟುವಂತಿಲ್ಲ.)

ಲೋಭಾತ್ ಪ್ರಚಾರಂ ಚರತಸ್ತಾಸು ವೇಲಾಸು ವೈ ನರಾನ್ ।
ಉಪಕ್ರಮ್ಯ ನಿಗೃಹ್ಣೀಮೋ ರಾಕ್ಷಸೈಃ ಸಹ ಬಾಲಿಶಾನ್ ॥೧೦॥

ಬಾಲಿಶರಾದ ಮನುಷ್ಯರು ಆ ನಿಷಿದ್ಧವಾದ ಕಾಲದಲ್ಲಿ ಗಂಗೆಯ ಸಮೀಪದಲ್ಲಿ ತಿರುಗಾಡಿದರೆ, ನಾವೂ ಮತ್ತು ರಾಕ್ಷಸರೂ ಸೇರಿ ಅವರ ಮೇಲೆ ಎರಗಿ ಅವರನ್ನು ನಿಗ್ರಹಿಸುತ್ತೇವೆ.

ಅತೋ ರಾತ್ರ್ಯಾಂ ಪ್ರಾಪ್ನುವಂತಿ ಭೂಯಿಷ್ಠಂ ಪಾಪಚೇತಸಃ ।
ನಿಘ್ನಂತ್ಯೇತೇ ನಿತ್ಯಮೇಷು ಕ್ಷಣೇಷು ನೃಪತೀನಪಿ ॥೧೧॥

ಆದ್ದರಿಂದ ರಾತ್ರಿಯ ವೇಳೆಯಲ್ಲಿ ಪಾಪಚೇತನರಾದ ರಾಕ್ಷಸರು ಹೆಚ್ಚಾಗಿ ಇಲ್ಲಿಗೆ ಬರುತ್ತಾರೆ. ಈ ಘೋರವಾದ ಮುಹೂರ್ತದ ಕಾಲದಲ್ಲಿ ಅವರು ಯಾವಾಗಲೂ ರಾಜರನ್ನೂ ಸಹ ಕೊಲ್ಲುತ್ತಾರೆ.

ಆರಾಚ್ಚ ತಿಷ್ಠತಾಸ್ಮಾಕಂ ಸಮೀಪಂ ನೋಪಗಚ್ಛತ ।
ಕಸ್ಮಾನ್ಮಾಂ ನಾಭಿಜಾನೀಥ ಪ್ರಾಪ್ತಂ ಭಾಗೀರಥೀಜಲಮ್ ॥೧೨॥

ನೀವು ದೂರ ನಿಲ್ಲಿ. ನಮ್ಮ ಸಮೀಪಕ್ಕೆ ಬರಬೇಡಿ. ಭಾಗೀರಥೀ ಜಲದಲ್ಲಿ ಪ್ರಾಪ್ತನಾಗಿರುವ ನನ್ನನ್ನು ನೀವು ಏಕೆ ಗಮನಿಸುತ್ತಿಲ್ಲ?

ಅಂಗಾರಪರ್ಣಂ ಗಂಧರ್ವಂ ವಿತ್ತ ಮಾಂ ಪ್ರಬಲಾಶ್ರಯಮ್ ।
ಅಹಂ ಹಿ ಮಾನೀ ಚೇರ್ಷ್ಯುಶ್ಚ ಕುಬೇರಸ್ಯ ಪ್ರಿಯಃ ಸಖಾ ॥೧೩॥

ನಾನು ಅಂಗಾರಪರ್ಣನೆಂಬ ಗಂಧರ್ವ. ನನಗೆ ಪ್ರಬಲನಾದ ಕುಬೇರನ ಆಶ್ರಯವಿದೆ. ನಾನು ಗರ್ವಿಷ್ಠ ಮತ್ತು ಅಸೂಯಾಪರ. ಕುಬೇರನು ನನ್ನ ಪ್ರಿಯಮಿತ್ರನಾಗಿದ್ದಾನೆ.

ಅಂಗಾರಪರ್ಣಮಿತಿ ಚ ವನಂ ಖ್ಯಾತಮಿದಂ ಮಮ ।
ಅನುಗಂಗಂ ಮಹಚ್ಚಿತ್ರಮಸ್ಮಿನ್ ನಿತ್ಯಂ ಚರಾಮ್ಯಹಮ್ ॥೧೪॥

ಗಂಗೆಯ ಸಮೀಪದಲ್ಲಿರುವ ಈ ದೊಡ್ಡದಾದ ಮತ್ತು ಸುಂದರವಾದ ವನವು ಅಂಗಾರಪರ್ಣವನ ಎಂದು ನನ್ನ ಹೆಸರಿನಿಂದಲೇ ಪ್ರಖ್ಯಾತವಾಗಿದೆ. ನಾನು ಇಲ್ಲಿ ಯಾವಾಗಲೂ ಸಂಚರಿಸುತ್ತೇನೆ.

ನ ಕೌಣಪಾಃ ಶೃಂಗಿಣೋ ವಾ ನ ಚ ದೇವಾ ಜನವ್ರಜಃ ।
ಇದಂ ಸಮುಪಸರ್ಪಂತಿ ತತ್ ಕಿಂ ಸಮುಪಸರ್ಪಥ ॥೧೫॥

ಈ ವನಕ್ಕೆ ರಾಕ್ಷಸರಾಗಲೀ, ಶೃಂಗವುಳ್ಳ ಪ್ರಾಣಿಗಳಾಗಲೀ, ದೇವತೆಗಳಾಗಲೀ, ಮನುಷ್ಯರಾಗಲೀ ಬರುವುದಿಲ್ಲ. ನೀವು ಏಕೆ ಬರುತ್ತಿದ್ದೀರಿ?

ಅರ್ಜುನಃ

ಸಮುದ್ರೇ ಹಿಮವತ್ಪಾರ್ಶ್ವೇ ನದ್ಯಾಮಸ್ಯಾಂ ಚ ದುರ್ಮತೇ ।
ರಾತ್ರ್ಯಾವಹನಿ ಸಂಧ್ಯಾಯಾಂ ಕಸ್ಯ ಕ್ಲೃಪ್ತಃ ಪರಿಗ್ರಹಃ ॥೧೬॥

ದುರ್ಬುದ್ಧಿಯೇ, ಸಮುದ್ರದಲ್ಲಾಗಲೀ, ಹಿಮಾಲಯದ ತಪ್ಪಲಿನಲ್ಲಾಗಲೀ, ಈ ನದಿಯಲ್ಲಾಗಲೀ, ರಾತ್ರಿಯಕಾಲದಲ್ಲಾಗಲೀ, ಹಗಲಿನಲ್ಲಾಗಲೀ ಅಥವಾ ಸಂಧ್ಯಾಕಾಲದಲ್ಲಾಗಲೀ ಇದು ಇಂತಹವನಿಗೆ ಸೇರಿದುದು, ಇನ್ನೊಬ್ಬನಿಗಲ್ಲ ಎಂಬ ನಿಯಮವು ಎಲ್ಲಿದೆ?

ಭಕ್ತೋ ವಾಪ್ಯರ್ಥವಾಽಭುಕ್ತೋ ರಾತ್ರಾವಹನಿ ಖೇಚರ ।
ನ ಕಾಲ ನಿಯಮೋಽಸ್ತಿ ಗಂಗಾಂ ಪ್ರಾಪ್ಯ ಸರಿದ್ವರಾಮ್ ॥೧೭॥

ಭೋಜನವಾಗಿರಲಿ, ಇಲ್ಲದಿರಲಿ, ರಾತ್ರಿ ಇರಲಿ, ಹಗಲಿರಲಿ, ನದಿಗಳಲ್ಲಿ ಶ್ರೇಷ್ಠವಾದ ಗಂಗೆ ಸಿಕ್ಕಿದಾಗ ಸ್ನಾನಕ್ಕೆ ಕಾಲ ನಿಯಮವಿಲ್ಲ.

ವಯಂ ಚ ಶಕ್ತಿಸಂಪನ್ನಾ ಅಕಾಲೇ ತ್ವಾಂ ಚ ಧೃಷ್ಣುಮಃ ।
ಅಶಕ್ತಾ ಹಿ ರಣೇ ಕ್ರೂರ ಯುಷ್ಮಾನರ್ಚಂತಿ ಮಾನವಾಃ ॥೧೭॥

ಶಕ್ತಿಸಂಪನ್ನರಾದ ನಾವು ಇಲ್ಲಿ ಅಕಾಲದಲ್ಲಿ ಬಂದರೂ ನಿನ್ನನ್ನು ಪರಾಭವಗೊಳಿಸುತ್ತೇವೆ. ಎಲೈ ಕ್ರೂರನೇ, ಯುದ್ಧ ಮಾಡಲು ಅಸಮರ್ಥರಾದ ಮನುಷ್ಯರು ಮಾತ್ರ ನಿಮ್ಮನ್ನು ಪೂಜಿಸುತ್ತಾರೆ.

ಪುರಾ ಹಿಮವತಶ್ಚೈಷಾ ಹೇಮಶೃಂಗಾದ್ ವಿನಿಸ್ಸೃತಾ ।
ಗಂಗಾ ಪ್ರತಿದಿಶಂ ಗತ್ವಾ ಸಪ್ತಧಾ ಪ್ರವಿಭಜ್ಯತೇ ॥೧೮॥

ಹಿಂದೆ ಹಿಮಾಲಯದ ಹೇಮಶೃಂಗದಿಂದ ಹೊರ ಬಂದ ಈ ಗಂಗೆಯು ಎಲ್ಲ ದಿಕ್ಕುಗಳಲ್ಲೂ ಹರಿದು ಏಳು ಕವಲುಗಳಾಗಿ ವಿಭಾಗವನ್ನು ಹೊಂದುತ್ತದೆ.

ಸ ಭೂತ್ವೈಕಪ್ರವಾಹಾ ಚ ಶುಚಿರಾಕಾಶಗಾ ಪುನಃ ।
ದೇವೇಷು ಗಂಗಾ ಗಂಧರ್ವ ಪ್ರಾಪ್ನೋತ್ಯಲಕನಂದತಾಮ್ ॥೧೯॥

ಅದೇ ಪವಿತ್ರವಾದ ಗಂಗೆಯು ಒಂದೇ ಪ್ರವಾಹವಾಗಿ ಪುನಃ ಸೇರಿ ಆಕಾಶದಲ್ಲಿ ಹರಿಯುತ್ತದೆ. ಗಂಧರ್ವನೇ, ದೇವಲೋಕದಲ್ಲಿ ಹರಿಯುವ ಆ ಗಂಗೆಯು ಅಲಕನಂದಾ ಎನಿಸಿಕೊಳ್ಳುತ್ತದೆ.

ತಥಾ ಪಿತೄನ್ ವೈತರಣೇ ದುಸ್ತರಾ ಪಾಪಕರ್ಮಭಿಃ ।
ಗಂಗಾ ಭುವಿ ಚ ಗಂಧರ್ವ ಯಥಾ ದ್ವೈಪಾಯನೋಽಬ್ರವೀತ್ ॥೨೦॥

ಹಾಗೆಯೇ, ಅದೇ ಗಂಗೆಯು ಪಿತೃಲೋಕದಲ್ಲಿ ಪಾಪಿಗಳು ದಾಟಲು ಅಸಾಧ್ಯವಾದ ವೈತರಣಿಯಾಗಿ ಹರಿಯುತ್ತದೆ. ಗಂಧರ್ವನೇ, ಹಾಗೆಯೇ, ಗಂಗೆಯು ಭೂಮಿಯಲ್ಲಿಯೂ ಹರಿಯುತ್ತದೆ ಎಂದು ವ್ಯಾಸರು ಹೇಳಿದ್ದಾರೆ.

ಅಸಂಬಾಧಾ ದೇವನದೀ ಸರ್ವೇಷಾಂ ಪಾವನೀ ಶುಭಾ ।
ಕಥಮಿಚ್ಛಸಿ ತಾಂ ರೋದ್ಧುಂ ನೈಷ ಧರ್ಮಃ ಸನಾತನಃ ॥೨೧॥

ದೇವನದಿಯು ಯಾರಿಗೂ ಬರಬೇಡವೆಂದು ಬಾಧಿಸುವವಳಲ್ಲ. ಅವಳು ಎಲ್ಲರನ್ನೂ ಪಾವನಗೊಳಿಸುವ ಪವಿತ್ರವಾದ ನದಿಯಾಗಿದ್ದಾಳೆ. ಅವಳನ್ನು ತಡೆಯಲು ಏಕೆ ಬಯಸುತ್ತಿದ್ದೀಯೆ? ಇದು ಸನಾತನ ಧರ್ಮವಲ್ಲ.

ಅನಾಶ್ಚರ್ಯಮಸಂಬಾಧಂ ತವ ವಾಚಾ ಕಥಂ ವಯಮ್ ।
ನ ಸ್ಪೃಶೇಮ ಯಥಾಕಾಮಂ ಪುಣ್ಯಂ ಭಾಗೀರಥೀಜಲಮ್ ॥೨೨॥

ಕೇವಲ ನಿನ್ನ ಮಾತಿಗೋಸ್ಕರವಾಗಿ ಬಹಳ ಆಶ್ಚರ್ಯಕರವಾದ ಮತ್ತು ನಿಷೇಧರಹಿತವಾದ ಈ ಪವಿತ್ರವಾದ ಭಾಗೀರಥೀಜಲವನ್ನು ನಮ್ಮ ಇಚ್ಛೆಯಂತೆ ನಾವು ಹೇಗೆ ಸ್ಪರ್ಶಮಾಡದೆ ಇರುತ್ತೇವೆ?

ಅಂಗಾರವರ್ಣಸ್ತಚ್ಛ್ರುತ್ವಾ ಕ್ರುದ್ಧ ಆಯಮ್ಯ ಕಾರ್ಮುಕಮ್ ।
ಮುಮೋಚ ಸಾಯಕಾನ್ ದೀಪ್ತಾನಹೀನ್ ದೀಪ್ತಾನನಾನಿವ ॥೨೩॥

ಅಂಗಾರವರ್ಣನು ಆ ಮಾತುಗಳನ್ನು ಕೇಳಿ ಕೋಪಗೊಂಡು ತನ್ನ ಬಿಲ್ಲನ್ನು ಬಗ್ಗಿಸಿ ಜ್ವಲಿಸುವ ಮುಖವುಳ್ಳ ಸರ್ಪಗಳಂತಿರುವ ಜ್ವಲಿಸುವ ಬಾಣಗಳನ್ನು ಅರ್ಜುನನ ಮೇಲೆ ಪ್ರಯೋಗಮಾಡಿದನು.

ಉಲ್ಮುಖಂ ಭ್ರಾಮಯಂಸ್ತೂರ್ಣಂ ಪಾಂಡವಶ್ಚ ನರೋತ್ತಮ ।
ವ್ಯಪೋವಾಹ ಶರಾಂಸ್ತಸ್ಯ ಸರ್ವಾನೇವ ಧನಂಜಯಃ ॥೨೪॥

ಎಲೈ ನರೋತ್ತಮನೇ, ಪಾಂಡುಪುತ್ರನಾದ ಧನಂಜಯನು ತನ್ನ ಕೈಯಲ್ಲಿದ್ದ ಪಂಜನ್ನು ಶೀಘ್ರವಾಗಿ ತಿರುಗಿಸುತ್ತಾ ಅವನ ಎಲ್ಲಾ ಬಾಣಗಳನ್ನು ನಿವಾರಿಸಿದನು.

ಅರ್ಜುನಃ

ವಿಭೀಷಿಕಾಂ ಹಿ ಗಂಧರ್ವ ನತು ಪ್ರಾಜ್ಞೇಷು ಯೋಜಯ ।
ಅಸ್ತ್ರಜ್ಞೇಷು ಪ್ರಯುಕ್ತೇಯಂ ಫೇನವತ್ ಪ್ರವಿಲೀಯತೇ ॥೨೫॥

ಗಂಧರ್ವನೇ, ಪ್ರಾಜ್ಞರಿಗೆ ಈ ಬೆದರಿಕೆಯನ್ನು ಹಾಕಬೇಡ. ಅಸ್ತ್ರಜ್ಞರಲ್ಲಿ ಪ್ರದರ್ಶಿಸಿದ ಈ ಬೆದರಿಕೆಯು ನೊರೆಯಂತೆ ಕರಗಿ ಹೋಗುತ್ತದೆ.

ಮಾನುಷಾನ್ನ ತು ಗಂಧರ್ವಾನ್ ಸರ್ವಾನ್ ಗಂಧರ್ವ ಲಕ್ಷಯೇಃ
ತಸ್ಮಾದಸ್ತ್ರೇಣ ದಿವ್ಯೇನ ಯೋತ್ಸ್ಯೇಽಹಂ ನ ತು ಮಾಯಯಾ ॥೨೬॥

ಗಂಧರ್ವನೇ, ಎಲ್ಲ ಗಂಧರ್ವರಿಗಿಂತ (ನನ್ನಂತಹ) ಮಾನುಷರೇ ಶ್ರೇಷ್ಠರೆಂದು ತಿಳಿಯುತ್ತೇನೆ. ಆದ್ದರಿಂದ ನಿನ್ನ ಜೊತೆಯಲ್ಲಿ ದಿವ್ಯಾಸ್ತ್ರಗಳಿಂದಲೇ ಯುದ್ಧವನ್ನು ಮಾಡುವೆನು. ಮಾಯಾಯುದ್ಧವನ್ನು ಮಾಡುವುದಿಲ್ಲ.

ತದಿದಂ ಜಾತವೇದಾಸ್ತು ಪ್ರಾದಾದಸ್ತ್ರಂ ಬೃಹಸ್ಪತೇಃ ।
ತಸ್ಮಾದಗಾದ್ ಭರದ್ವಾಜಂ ಗುರುಪುತ್ರಂ ಶತಕ್ರತೋಃ ॥೨೭॥

ಈ ಅಸ್ತ್ರವನ್ನು (ಆಗ್ನೇಯಾಸ್ತ್ರವನ್ನು) ಅಗ್ನಿಯು ಬೃಹಸ್ಪತಿಗಳಿಗೆ ಕೊಟ್ಟನು. ಬೃಹಸ್ಪತಿಗಳಿಂದ ಈ ಅಸ್ತ್ರವು ಇಂದ್ರನ ಗುರುಪುತ್ರರಾದ ಭರದ್ವಾಜರಿಗೆ ಬಂದಿತು.

ಭರದ್ವಾಜಾತ್ ತತೋ ರಾಮಂ ಭಾರ್ಗವಾಚ್ಚ ಗುರುಂ ಮಮ ।
ಸ ತ್ವಿದಂ ಮಹ್ಯಮದದಾದ್ ದ್ರೋಣೋ ಬ್ರಾಹ್ಮಣಸತ್ತಮಃ ॥೨೮॥

ಭರದ್ವಾಜರಿಂದ ಪರಶುರಾಮರಿಗೂ, ಪರಶುರಾಮರಿಂದ ನಮ್ಮ ಗುರುಗಳಾದ ದ್ರೋಣರಿಗೂ ಬಂದಿತು. ಆ ಬ್ರಾಹ್ಮಣಶ್ರೇಷ್ಠರಾದ ದ್ರೋಣರು ನನಗೆ ಈ ಅಸ್ತ್ರವನ್ನು ಕೊಟ್ಟಿದ್ದಾರೆ.

ವೈಶಂಪಾಯನಃ

ಇತ್ಯುಕ್ತ್ವಾ ಪಾಂಡವಃ ಕ್ರುದ್ಧೋ ಗಂಧರ್ವಾಯ ಮಮೋಚ ಹ ।
ಪ್ರದೀಪ್ತಮಸ್ತ್ರಮಾಗ್ನೇಯಂ ದದಾಹಾಸ್ಯ ರಥಂ ತತಃ ॥೨೯॥

ಹೀಗೆ ಹೇಳಿ ಪಾಂಡವನಾದ ಅರ್ಜುನನು ಕೋಪದಿಂದ ಪ್ರದೀಪ್ತವಾದ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದನು. ಆ ಅಸ್ತ್ರವು ಗಂಧರ್ವನ ರಥವನ್ನು ಸುಟ್ಟು ಹಾಕಿತು.

ರಥಾತ್ ತು ವಿಪ್ಲುತಂ ತಂ ತು ಗಂಧರ್ವಂ ಸುಮಹಾಬಲಮ್ ।
ಅಸ್ತ್ರತೇಜಃಪ್ರರೂಢಂ ಚ ಗಂಧರ್ವಂ ಸುಮಹಾಬಲಮ್ ॥೩೦॥

ಶಿರೋರುಹೇಷು ಜಗ್ರಾಹ ಮಾಲ್ಯವತ್ಸು ಧನಂಜಯಃ ।
ಭ್ರಾತೄನ್ ಪ್ರತಿ ಚಕರ್ಷಾಥ ಸೋಽಸ್ತ್ರಪ್ರಾತಾದಚೇತನಮ್ ॥೩೧॥

ಆ ಮಹಾಬಲಿಷ್ಠನಾದ ಗಂಧರ್ವನು ಅಸ್ತ್ರದ ತೇಜಸ್ಸಿಗೆ ಸಿಕ್ಕಿ ರಥದಿಂದ ಭೂಮಿಗೆ ಹಾರಿದಾಗ ಅರ್ಜುನನು ಪುಷ್ಪಮಾಲೆಗಳನ್ನು ಧರಿಸಿದ್ದ ಅವನನ್ನು ಕೇಶಗಳಲ್ಲಿ ಹಿಡಿದು ಅಸ್ತ್ರಸಂಯೋಗದಿಂದ ಅಚೇತನನಾಗಿದ್ದ ಅವನನ್ನು ತನ್ನ ಸಹೋದರರ ಕಡೆಗೆ ಎಳೆದನು.

ಯುಧಿಷ್ಠಿರಂ ತಸ್ಯ ಭಾರ್ಯಾ ಪ್ರಪೇದೇ ಶರಣಾರ್ಥಿನೀ ।
ನಾಮ್ನಾ ಕುಂಭೀನಸೀ ನಾಮ ಪತಿತ್ರಾಣಮಭೀಪ್ಸತೀ ॥೩೨॥

ಆಗ ಕುಂಭೀನಸೀ ಎಂಬ ಹೆಸರಿನ ಅವನ ಪತ್ನಿಯು ಪತಿಯ ರಕ್ಷಣೆಯನ್ನು ಮಾಡಲು ಬಯಸಿ ಯುಧಿಷ್ಠಿರನಿಗೆ ಶರಣಾಗತಳಾದಳು.

ಗಂಧರ್ವೀ

ತ್ರಾಹಿ ತ್ವಂ ಮಾಂ ಮಹಾರಾಜ ಪತಿಂ ಚೇಮಂ ವಿಮುಂಚ ಮೇ ।
ಗಂಧರ್ವೀಂ ಶರಣಂ ಪ್ರಾಪ್ತಾಂ ದೀನಾಂ ಕುಂಭೀನಸೀಂ ಪ್ರಭೋ ॥

ಮಹಾರಾಜನೇ ನನ್ನನ್ನು ರಕ್ಷಿಸು. ನಾನು ಕುಂಭೀನಸೀ ಎಂಬ ಗಂಧರ್ವಿ. ದೀನಳಾದ ನಾನು ನಿನಗೆ ಶರಣಾಗತಳಾಗಿದ್ದೇನೆ. ನನ್ನ ಪತಿಯನ್ನು ಬಿಡಿಸು.

ವೈಶಂಪಾಯನಃ

ಶ್ರುತ್ವಾಽನುಗ್ರಹಭಾವಾಚ್ಚ ಪಾರ್ಥಃ ಪಾರ್ಥಮುವಾಚ ಹ ।
ಅಭಯಂ ಪ್ರತಿಪದ್ಯಸ್ವ ಗಚ್ಛ ಗಂಧರ್ವ ಮಾ ಶುಚಃ ।
ಪ್ರದಿಶತ್ಯಭಯಂ ತೇಽತ್ರ ಕುರುರಾಜೋ ಯುಧಿಷ್ಠಿರಃ ॥೩೪॥

ಈ ಮಾತುಗಳನ್ನು ಕೇಳಿದ ಅರ್ಜುನನು ಕರುಣೆಯಿಂದ ಕೂಡಿದವನಾಗಿ ಯುಧಿಷ್ಠಿರನನ್ನು ನೋಡುತ್ತಾ ಗಂಧರ್ವನನ್ನು ಕುರಿತು ಹೇಳಿದನು. ಗಂಧರ್ವನೇ, ನೀನು

ಅಭಯವನ್ನು ಹೊಂದಿ ಹೊರಡು. ಶೋಕ ಪಡಬೇಡ. ಕುರುರಾಜನಾದ ಯುಧಿಷ್ಠಿರನು ನಿನಗೆ ಇಲ್ಲಿ ಅಭಯದಾನವನ್ನು ಮಾಡುತ್ತಿದ್ದಾನೆ.

ಗಂಧರ್ವಃ

ಜಿತೋಽಹಂ ಪೂರ್ವಕಂ ನಾಮ ಮುಂಚಾಮ್ಯಂಗಾರಪರ್ಣತಾಮ್।
ಯಶೋಹೀನಂ ನಚ ಶ್ಲಾಘ್ಯಂ ಸ್ವನಾಮ್ನಾ ಜನಸಂಸದಿ ॥೩೫॥

ನಿನ್ನಿಂದ ಪರಾಭವವನ್ನು ಹೊಂದಿದ ನಾನು ಚಿತ್ರರಥ ಎಂಬ ಮೊದಲಿನ ಹೆಸರನ್ನು ಬಿಡುತ್ತೇನೆ. ನಿನ್ನ ಅಸ್ತ್ರಪ್ರತಾಪಕ್ಕೆ ಸಿಲುಕಿ ಅಂಗಾರಪರ್ಣನಾದ ನಾನು ಅಂಗಾರವರ್ಣ ಎಂಬ ಹೆಸರನ್ನು ಬಿಡುವುದಿಲ್ಲ. ನಿನ್ನ ಅಸ್ತ್ರದಿಂದ ನನ್ನ ರಥವು ದಗ್ಧವಾದ ಮೇಲೆ ಜನರ ಸಮೂಹದಲ್ಲಿ ಚಿತ್ರರಥ ಎಂಬ ನನ್ನ ಮೊದಲಿನ ನಾಮವು ಎಂದೂ ಶ್ಲಾಘ್ಯವಾಗುವುದಿಲ್ಲ.

ಸಾಧಿದಂ ಲಬ್ಧವಾಂಲ್ಲಾಭಂ ಯೋ ಮೇ ದಿವ್ಯಾಸ್ತ್ರಧಾರಿಣಮ್ ।
ಗಾಂಧರ್ವ್ಯಾ ಮಾಯಯಾ ಯೋದ್ಧುಂ ದಿಶಾಮ್ಯಸ್ತ್ರಂ ಪರಾವರಮ್ ॥೩೬॥

ನಾನು ಆಧಿಯ ಜೊತೆಯಲ್ಲಿ (ಮಾನಸ ವ್ಯಥೆಯ ಜೊತೆಯಲ್ಲಿ) ಸುಖವನ್ನು ಕೊಡುವ ಈ ಲಾಭವನ್ನು ಪಡೆದಿದ್ದೇನೆ. ಈ ಲಾಭವೆಂದರೆ ದಿವ್ಯಾಸ್ತ್ರಧಾರಿಗಳಾದ ಗಂಧರ್ವರ ಜೊತೆಯಲ್ಲಿ ಗಾಂಧರ್ವಮಾಯೆಯಿಂದ ಯುದ್ಧವನ್ನು ಮಾಡಲು ನಿನಗೆ ಬಹಳ ಶ್ರೇಷ್ಠವಾದ ಗಂಧರ್ವಾಸ್ತ್ರವನ್ನು ಕೊಡುತ್ತಿರುವುದು.

ಅಸ್ತ್ರಾಗ್ನಿನಾ ವಿಚಿತ್ರೋಽಯಂ ದಗ್ಧೋ ಮೇ ರಥ ಉತ್ತಮಃ ।
ಸೋಽಹಂ ಚಿತ್ರರಥೋ ಭೂತ್ವಾ ನಾಮ್ನಾ ದಗ್ಧರಥೋಽಭವಮ್ ॥೩೭॥

ನಿನ್ನ ಅಸ್ತ್ರದ ಅಗ್ನಿಯಿಂದ ನನ್ನ ಶ್ರೇಷ್ಠವಾದ ಮತ್ತು ವಿಚಿತ್ರವಾದ ರಥವು ದಗ್ಧವಾಯಿತು. ಮೊದಲು ಚಿತ್ರರಥನಾಗಿದ್ದ ನಾನು ಈಗ ದಗ್ಧರಥನಾಗಿದ್ದೇನೆ.

ಸಂಭೃತಾ ತ್ವೇವ ವಿದ್ಯೇಯಂ ತಪಸ್ಯೈವ ಪುರಾ ಮಯಾ ।
ನಿವೇದಯಿಷ್ಯೇ ತಾಮದ್ಯ ಪ್ರಾಣದಾಯ ಮಹಾತ್ಮನೇ ॥೩೮॥

ಈ ಗಾಂಧರ್ವಾಸ್ತ್ರವಿದ್ಯೆಯನ್ನು ಹಿಂದೆ ನಾನು ತಪಸ್ಸಿನಿಂದಲೇ ಸಂಪಾದಿಸಿದ್ದೇನೆ. ಈ ದಿನ ನನ್ನ ಪ್ರಾಣವನ್ನು ಉಳಿಸಿದ ಮಹಾತ್ಮನಾದ ನಿನಗೆ ಆ ವಿದ್ಯೆಯನ್ನು ನಿವೇದಿಸುವೆನು.

ಸಂಸ್ತಂಭಿತಂ ಚ ತರಸಾ ಜಿತಂ ಶರಣಮಾಗತಮ್ ।
ಯೋಽರಿಂ ಸಂಯೋಜಯೇತ್ ಪ್ರಾಣೈಃ ಕಲ್ಯಾಣಂ ಕಿಂ ನ ಸೋಽರ್ಹತಿ ॥

ತನ್ನ ಬಲದಿಂದ ಶತ್ರುವನ್ನು ಸ್ತಂಭೀಭೂತನನ್ನಾಗಿ ಮಾಡಿ ಪರಾಭವಗೊಳಿಸಿ ಅನಂತರ ಶರಣಾಗತನಾದ ಆ ಶತ್ರುವನ್ನು ಯಾರು ಪ್ರಾಣಗಳಿಂದ ಸಂಯೋಜಿಸುತ್ತಾರೋ ಅವರು ಯಾವ ಕಲ್ಯಾಣಕ್ಕೆ ಅರ್ಹರಾಗುವುದಿಲ್ಲ?

ಚಾಕ್ಷುಷೀ ನಾಮ ವಿದ್ಯೇಯಂ ಯಾಂ ಸೋಮಾಯ ದದೌ ಮನುಃ ।
ದದೌ ಸ ವಿಶ್ವಾವಸವೇ ಮಮ ವಿಶ್ವಾವಸುರ್ದದೌ ॥೪೦॥

ಈ ವಿದ್ಯೆಗೆ ಚಾಕ್ಷುಷೀ ಎಂದು ಹೆಸರು. ಇದನ್ನು ಮನು ಚಂದ್ರನಿಗೆ ಕೊಟ್ಟನು. ಚಂದ್ರನು ವಿಶ್ವಾವಸುಗಂಧರ್ವನಿಗೆ ಕೊಟ್ಟನು. ವಿಶ್ವಾವಸು ಗಂಧರ್ವನಿಂದ ಅದು ನನಗೆ ಬಂದಿತು.

ಸೇಯಂ ಕಾಪುರುಷಂ ಪ್ರಾಪ್ತಾ ಗುರುದತ್ತಾ ಪ್ರಣಶ್ಯತಿ ।
ಆಗಾಮೋಽಸ್ಯಾ ಮಯಾ ಪ್ರೋಕ್ತಸ್ತಸ್ಯಾ ವೀರ್ಯಂ ನಿಬೋಧ ಮೇ ॥೪೧॥

ಗುರುಪರಂಪರೆಯಿಂದ ಬಂದ ಈ ವಿದ್ಯೆಯು ಅಯೋಗ್ಯ ಪುರುಷನನ್ನು ಹೊಂದಿದರೆ, ನಾಶವನ್ನು ಹೊಂದುತ್ತದೆ. ಈ ವಿದ್ಯೆಯ ಆಗತಿ ಪ್ರಕಾರವನ್ನು ಹೇಳಿದೆ. ಅದರ ಸಾಮರ್ಥ್ಯವನ್ನು ಕೇಳು.

ಯಚ್ಚಕ್ಷುಷಾ ದ್ರಷ್ಟುಮಿಚ್ಛೇತ್ ತ್ರಿಷು ಲೋಕೇಷು ಕಿಂಚನ ।
ತತ್ಪಶ್ಯೇದ್ ಯಾದೃಶಂ ರೂಪಂ ತಾದೃಶಂ ದ್ರಷ್ಟುಮರ್ಹತಿ ॥೪೨॥

ಮೂರುಲೋಕಗಳಲ್ಲಿರುವ ಯಾವ ವಸ್ತುವನ್ನು ಕಣ್ಣಿನಿಂದ ನೋಡಬೇಕೆಂದು ಬಯಸುತ್ತಾನೋ ಅಂತಹ ವಸ್ತುವನ್ನು ಮನುಷ್ಯರು ಕಾಣದ ಎಲ್ಲಾ ಸೂಕ್ಷ್ಮ ವಿವರಗಳೊಂದಿಗೆ ನೋಡುತ್ತಾನೆ.

ಏಕಪಾದೇನ ಷಣ್ಮಾಸಾನ್ ಸ್ಥಿತೋ ವಿದ್ಯಾಂ ಲಭೇದಿಮಾಮ್ ।
ಅನ್ವಾದೇಕ್ಷ್ಯಮ್ಯಹಂ ವಿದ್ಯಾಂ ಸ್ವಯಂ ತುಭ್ಯಂ ವ್ರತೇ ಕೃತೇ ॥೪೩॥

ಒಂದೇ ಪಾದದಲ್ಲಿ ನಿಂತು ಆರು ತಿಂಗಳು ತಪಸ್ಸನ್ನು ಮಾಡಿದರೆ ಈ ವಿದ್ಯೆಯು ಲಭಿಸುತ್ತದೆ. ನೀನು ಈ ವ್ರತವನ್ನು ಮಾಡಿದರೇ ನಾನಾಗಿಯೇ ನಿನಗೆ ಈ ವಿದ್ಯೆಯನ್ನು ಉಪದೇಶಿಸುವೆನು.

ವಿದ್ಯಯಾ ಹ್ಯನಯಾ ರಾಜನ್ ವಯಂ ನೃಭ್ಯೋ ವಿಶೇಷಿಣಃ ।
ಅನಾಹಾರ್ಯಾಶ್ಚ ದೇವಾನಾಮನುಭಾವಾತ್ ಪ್ರವರ್ತಿನಾಮ್ ॥೪೪॥

ರಾಜನೇ, ಈ ವಿದ್ಯೆಯ ಬಲದಿಂದಲೇ ನಾವು ಮನುಷ್ಯರಿಗಿಂತಲೂ ಶ್ರೇಷ್ಠರಾಗಿದ್ದೇವೆ. ಈ ವಿದ್ಯೆಯ ಸಾಮರ್ಥ್ಯದಿಂದಲೇ ಸತತ ಉದ್ಯಮಶೀಲರಾದ ದೇವತೆಗಳಿಂದ ಪರಾಭವವನ್ನು ಅನುಭವಿಸದೆಯೂ ಇದ್ದೇವೆ.

ಗಂಧರ್ವಜಾನಾಮಶ್ವಾನಾಮಹಂ ಪುರುಷಸತ್ತಮ ।
ಭ್ರಾತೃಭ್ಯಸ್ತವ ಪಂಚಭ್ಯಃ ಪೃಥಗ್ ದಾತಾ ಶತಂಶತಮ್ ॥೪೫॥

ಪುರುಷಶ್ರೇಷ್ಠನೇ, ಗಂಧರ್ವಜಾತಿಯ ನೂರು ನೂರು ಅಶ್ವಗಳನ್ನು ನಿನಗೂ ಮತ್ತು ನಿನ್ನ ಸಹೋದರರಿಗೂ ಪ್ರತ್ಯೇಕವಾಗಿ ಕೊಡುವೆನು.

ದೇವಗಂಧರ್ವವಾಹಾಸ್ತೇ ದಿವ್ಯಗಂಧಾ ಮನೋಜವಾಃ ।
ಕ್ಷೀಣೇಕ್ಷೀಣೇ ಭವಂತ್ಯನ್ಯೇ ನ ಹೀಯಂತೇ ಚ ರಂಹಸಃ ॥೪೬॥

ದೇವಗಂಧರ್ವರನ್ನು ಕೊಂಡೊಯ್ಯುವ ಈ ಅಶ್ವಗಳು ಮನೋಜವವನ್ನೂ ದಿವ್ಯಗಂಧವನ್ನೂ ಹೊಂದಿವೆ. ಉಳಿದ ಅಶ್ವಗಳು ಇವುಗಳೆದುರಿನಲ್ಲಿ ಶಕ್ತಿ ಹ್ರಾಸವನ್ನೂ, ಅದರಿಂದ ವೇಗ ಹ್ರಾಸವನ್ನೂ ಹೊಂದುತ್ತವೆ. ಈ ಅಶ್ವಗಳು ವೇಗ ಹ್ರಾಸವನ್ನು ಹೊಂದುವುದಿಲ್ಲ.

ಪುರಾ ಕೃತಂ ಮಹೇಂದ್ರಸ್ಯ ವಜ್ರಂ ವೃತ್ರನಿಬರ್ಹಣೇ ।
ದಶಧಾ ಶತಧಾ ಚೈವ ತಚ್ಚೀರ್ಣಂ ವೃತ್ರಮೂರ್ಧನಿ ॥೪೭॥

ಹಿಂದೆ ವೃತ್ರನನ್ನು ಸಂಹಾರ ಮಾಡುವ ಉದ್ದೇಶದಿಂದ ಇಂದ್ರನಿಗೆ ವಜ್ರಾಯುಧವು ಮಾಡಲ್ಪಟ್ಟಿತು. ಅದು ವೃತ್ರಾಸುರನ ತಲೆಯ ಮೇಲೆ ಬಿದ್ದು ನೂರಾರು ಚೂರುಗಳಾಗಿ ಒಡೆಯಿತು.

ತಸ್ಯ ಭಾಗಃ ಪೃಥಗ್ಭೂತಃ ಸರ್ವಭೂತೈರುಪಾಸ್ಯತೇ ।
ಲೋಕೇ ಯತ್ ಸಾಧನಂ ಕಿಂಚಿತ್ ಸಾ ವೈ ವಜ್ರತನುಃ ಸ್ಮೃತಾ ॥೪೮॥

ಆ ವಜ್ರದ ಭಾಗಗಳು ಬೇರೆ ಬೇರೆಯಾಗಿ ಎಲ್ಲರಿಂದಲೂ ಉಪಾಸನೆ ಮಾಡಲ್ಪಡುತ್ತವೆ. ಲೋಕದಲ್ಲಿ ಯಾವುದು ಶ್ರೇಷ್ಠವಾದ ಸಾಧನವೋ ಅದರಲ್ಲಿ ವಜ್ರದ ಒಂದು ಭಾಗವಿದೆ.

ಬ್ರಹ್ಮ ವಜ್ರಂ ಬ್ರಾಹ್ಮಣಾನಾಂ ಕ್ಷತ್ರಿಯಾಣಾಂ ರಥಂ ವಿದುಃ ।
ವೈಶ್ಯವಜ್ರಂ ತು ವೈ ಸೀರಂ ಶುಶ್ರೂಷಾ ಹೀನಯೋನಿಷು ॥೪೯॥

ಬ್ರಾಹ್ಮಣರಿಗೆ ವೇದವು ವಜ್ರ . ಕ್ಷತ್ರಿಯರಿಗೆ ರಥವನ್ನು ವಜ್ರವೆಂದು ಹೇಳುತ್ತಾರೆ. ವೈಶ್ಯರಿಗೆ ನೇಗಿಲೇ ವಜ್ರ . ಶೂದ್ರರಿಗೆ ಶುಶ್ರೂಷೆಯೇ ವಜ್ರ .

ಸಾಧನಂ ಕ್ಷತ್ರಧರ್ಮಸ್ಯ ಮನೋಜ್ಞಾ ವಾಜಿನಃ ಸ್ಮೃತಾಃ ।
ರಥಶ್ಚಾಪಿ ತಥಾ ಸೂತೋ ಧನುಶ್ಚ ಭರತರ್ಷಭ ॥೫೦॥

ಎಲೈ ಭರತರ್ಷಭನೇ, ಕ್ಷತ್ರಿಯಧರ್ಮ ಸಾಧನೆಗೆ ಮನೋಜ್ಞವಾದ ಅಶ್ವಗಳೂ, ರಥ, ಸೂತ ಮತ್ತು ಧನುಸ್ಸುಗಳೂ ಉಪಯುಕ್ತವಾದವು ಎಂದು ಹೇಳಲ್ಪಡುತ್ತವೆ.

ಕಾಮವರ್ಣಾಃ ಕಾಮಗಮಾಃ ಕಾಮತಃ ಸಮುಪಸ್ಥಿತಾಃ ।
ಇಮೇ ಗಂಧರ್ವಜಾಃ ಕಾಮಂ ಪೂರಯಿಷ್ಯಂತಿ ಮೇ ಹಯಾಃ ॥೫೧॥

ಕಾಮವರ್ಣವುಳ್ಳ, ಕಾಮಗಮನವುಳ್ಳ, ನಿನ್ನ ಇಚ್ಛಾಮಾತ್ರದಿಂದ ನಿನ್ನ ಎದುರಿಗೆ ಬಂದು ನಿಲ್ಲುವ ಈ ಗಂಧರ್ವಜಾತಿಯ ಕುದುರೆಗಳು ನಿನ್ನ ಎಲ್ಲಾ ಕ್ಷತ್ರಿಯಕಾಮಗಳನ್ನೂ ಪೂರ್ಣಗೊಳಿಸುತ್ತವೆ.

ಅರ್ಜುನಃ

ಯದಿ ಪ್ರೀತೇನ ದತ್ತಂ ವಾ ಸಂಶಯೇ ಜೀವಿತಸ್ಯ ವಾ ।
ವಿದ್ಯಾ ವಿತ್ತಂ ಶುಭಂ ವಾಽಪಿ ನ ತದ್ ಗಂಧರ್ವ ಕಾಮಯೇ ॥೫೨॥

ಗಂಧರ್ವನೇ, ನೀನು ಇವುಗಳನ್ನು ಪ್ರೀತಿಯಿಂದ ಕೊಟ್ಟರೂ ಅಥವಾ ಪ್ರಾಣಸಂಶಯದಿಂದ ಕೊಟ್ಟರೂ ಅಥವಾ ವಿದ್ಯೆಗೆ ಫಲವಾಗಿ ಕೊಟ್ಟರೂ ಈ ಶುಭವಾದ ಧನವನ್ನು ನಾನು ಬಯಸುವುದಿಲ್ಲ.

ಗಂಧರ್ವಃ

ಸಂಯೋಗೇ ವೈ ಪ್ರೀತಿಕರಃ ಸ ಸತ್ಸು ಪ್ರತಿದೃಶ್ಯತೇ ।
ಜೀವಿತಸ್ಯ ಪ್ರದಾನೇನ ಪ್ರೀತೋ ವಿದ್ಯಾಂ ದದಾನಿ ತೇ ॥೫೩॥

ಸಜ್ಜನರ ಸಂಯೋಗವೇ ಸಂತೋಷಕರವಾದುದು. ನನಗೆ ಜೀವಿತವನ್ನು ಪ್ರದಾನ ಮಾಡಿದುದರಿಂದ ಸಂತುಷ್ಟನಾಗಿ ನಿನಗೆ ಈ ವಿದ್ಯೆಯನ್ನು ಕೊಡುತ್ತಿದ್ದೇನೆ.

ತತ್ತೋ ಹ್ಯಹಂ ಗ್ರಹೀಷ್ಯಾಮಿ ಅಸ್ತ್ರಮಾಗ್ನೇಯಮುತ್ತಮಮ್ ।
ತಥೈವ ಸಖ್ಯಂ ಬೀಭತ್ಸೋ ಚಿರಾಯ ಭರತರ್ಷಭ ॥೫೪॥

ಭರತಶ್ರೇಷ್ಠನೇ, ನಿನ್ನಿಂದ ನಾನು ಶ್ರೇಷ್ಠವಾದ ಆಗ್ನೇಯಾಸ್ತ್ರವನ್ನು ಪಡೆಯುವೆನು ಮತ್ತು ಎಲೈ ಬೀಭತ್ಸುವೇ, ಬಹುಕಾಲದವರೆಗೆ ನಿನ್ನ ಸ್ನೇಹವನ್ನು ಬಯಸುವೆನು.

ಅರ್ಜುನಃ

ಅಸ್ತ್ರೇಣಾಸ್ತ್ರಂ ವೃಣೇ ವೃತ್ತಃ ಸಂಯೋಗಃ ಶಾಶ್ವತೋಽಸ್ತು ನೌ ।
ಸಖೇ ಗಂಧರ್ವ ತದ್ ಬ್ರೂಹಿ ಯುಷ್ಮಭ್ಯೋ ಯದ್ ಭಯಂ ತ್ಯಜೇತ್ ॥

ಅಸ್ತ್ರಗಳ ವಿನಿಮಯದಿಂದ ನಿನ್ನ ಅಸ್ತ್ರವನ್ನು ಸ್ವೀಕರಿಸುತ್ತೇನೆ. ನಮ್ಮಿಬ್ಬರ ಈ ಸ್ನೇಹಸಂಬಂಧ ಶಾಶ್ವತವಾಗಲಿ. ಮಿತ್ರನಾದ ಗಂಧರ್ವನೇ, ನಿಮಗೆ ಯಾವುದರಿಂದ ಭಯವು ದೂರವಾಗುತ್ತದೆ ಎಂದು ಹೇಳು. (ನಾನು ಅದನ್ನು ಸಾಧಿಸುತ್ತೇನೆ.)

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವಾಸಪ್ತತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ನೂರ ಎಪ್ಪತ್ಮೂರನೆಯ ಅಧ್ಯಾಯ

(ಬ್ರಾಹ್ಮಣ ಪುರಸ್ಕಾರವಿಲ್ಲದಿರುವುದು ಧರ್ಷಣಕ್ಕೆ ಕಾರಣ ಎಂದು ಹೇಳಿ ಪುರೋಹಿತರನ್ನು ಸಂಪಾದಿಸಲು ಗಂಧರ್ವನಿಂದ ಸೂಚನೆ.)

ಅರ್ಜುನಃ

ಕಾರಣಂ ಬ್ರೂಹಿ ಗಂಧರ್ವ ಕಿಂ ತದ್ ಯೇನಾದ್ಯ ಧರ್ಷಿತಾಃ ।
ಯತ್ ತದ್ ಬ್ರಹ್ಮವಿದಃ ಸಂತಃ ಸರ್ವೇ ರಾತ್ರಾವರಿಂದಮಾಃ ॥೧॥

ಗಂಧರ್ವನೇ, ವೇದಾಧ್ಯಯನವನ್ನು ಮಾಡುವವರೂ ಮತ್ತು ಶತ್ರುತಾಪನರೂ ಆದ ನಾವೆಲ್ಲರೂ ಈ ದಿನ ಧರ್ಷಣೆಯನ್ನು ಹೊಂದುವುದಕ್ಕೆ ಏನು ಕಾರಣ ಎಂದು ಹೇಳು.

ಗಂಧರ್ವಃ

ಅನಗ್ನಯೋಽನಾಹುತಯೋ ನ ಚ ವಿಪ್ರಪುರಸ್ಕೃತಾಃ ।
ಧರ್ಷಿತಾಃ ಸ್ಥ ತತೋ ಯೂಯಂ ಮಯಾ ಪಾಂಡವನಂದನ ॥೨॥

ಪಾಂಡುನಂದನನೇ, ನೀವು ಅಗ್ನಿಯಿಲ್ಲದೆ, ಆಹುತಿಗಳಿಲ್ಲದೆ, ಬ್ರಾಹ್ಮಣರನ್ನು ಮುಂದೆ ಮಾಡಿಕೊಳ್ಳದೆ ಬರುತ್ತಿದ್ದಿರಿ. ಆದ್ದರಿಂದ ನಾನು ನಿಮ್ಮ ಮೇಲೆ ಆಕ್ರಮಣವನ್ನು ಮಾಡಿದೆ.

ಯಕ್ಷರಾಕ್ಷಸಗಂಧರ್ವಪಿಶಾಚೋರಗಪನ್ನಗಾಃ ।
ಧರ್ಷಯಂತಿ ನರವ್ಯಾಘ್ರ ನಬ್ರಾಹ್ಮಣಪುರಸ್ಕೃತಾನ್ ॥೩॥

ನರಶ್ರೇಷ್ಠನೇ, ಬ್ರಾಹ್ಮಣನನ್ನು ಹಿಂಬಾಲಿಸದಿದ್ದರೆ ಯಕ್ಷರಾಕ್ಷಸ ಗಂಧರ್ವರು ಪಿಶಾಚಗಳು ಮತ್ತು ಸರ್ಪಗಳು ಆಕ್ರಮಣ ಮಾಡುತ್ತವೆ.

ಜಾನತಾ ಚ ಮಯಾ ತಸ್ಮಾತ್ ತೇಜಶ್ಚಾಭಿಜನಂ ಚ ವಃ ।
ಇಯಂ ಮತಿಮತಾಂ ಶ್ರೇಷ್ಠ ಧರ್ಷಿತುಂ ವೈ ಕೃತಾ ಮತಿಃ ॥೪॥

ಎಲೈ ಮೇಧಾವಿಗಳಲ್ಲಿ ಶ್ರೇಷ್ಠನೇ, ಇದನ್ನು ತಿಳಿದ ನಾನು ನಿಮ್ಮ ಶ್ರೇಷ್ಠವಾದ ಉತ್ಪತ್ತಿಯನ್ನು ಮತ್ತು ತೇಜಸ್ಸನ್ನು ತಿಳಿದಿದ್ದರೂ ನಿಮ್ಮ ಮೇಲೆ ಆಕ್ರಮಣ ಮಾಡಲು ನಿರ್ಧರಿಸಿದೆ.

ಕೋ ಹಿ ವಸ್ತ್ರಿಷು ಲೋಕೇಷು ನ ವೇದ ಭರತರ್ಷಭ ।
ಸ್ಪೈರ್ಗುಣೈರ್ವಿಸ್ತೃತಂ ಶ್ರೀಮದ್ ಯಶೋಽಗ್ರ್ಯಂ ಭೂರಿವರ್ಚಸಾಮ್ ॥೫॥

ಭರತರ್ಷಭನೇ, ಮಹಾವರ್ಚಸ್ವಿಗಳಾದ ನಿಮ್ಮ ಗುಣಗಳಿಂದಲೇ ವಿಸ್ತಾರವಾದ ನಿಮ್ಮ ಶ್ರೇಷ್ಠವಾದ ಕೀರ್ತಿಯನ್ನು ಮೂರುಲೋಕಗಳಲ್ಲಿ ಯಾವನು ತಿಳಿದಿಲ್ಲ?

ಯಕ್ಷರಾಕ್ಷಸಗಂಧರ್ವಾಃ ಪಿಶಾಚೋರಗಪನ್ನಗಾಃ ।
ವಿಸ್ತಾರಂ ಕುರುವಂಶಸ್ಯ ಶ್ರೀಮಂತಃ ಕಥಯಂತಿ ತೇ ॥೬॥

ಕಾಂತಿಯುತರಾದ ಯಕ್ಷರಾಕ್ಷಸಗಂಧರ್ವರೂ, ಪಿಶಾಚಿಗಳು, ಉರಗ, ಸರ್ಪಗಳೂ ಕುರುವಂಶದ ವಿಸ್ತಾರವನ್ನು ಹೇಳುತ್ತಾರೆ.

ನಾರದಪ್ರಭೃತೀನಾಂ ಚ ಮಹರ್ಷೀಣಾಂ ಮಯಾ ಪುರಾ ।
ಶ್ರುತಂ ಕಥಯತಾಂ ಪಾರ್ಥ ಕುರೂಣಾಂ ವಂಶಮಾದಿತಃ ॥೭॥

ನಾನು ನಾರದರೇ ಮೊದಲಾದ ಮಹರ್ಷಿಗಳು ಕುರುವಂಶವನ್ನು ಪ್ರಾರಂಭದಿಂದ ಹೇಳುವುದನ್ನು ಕೇಳಿದ್ದೇನೆ.

ಸ್ವಯಂ ಚಾಪಿ ಮಯಾ ದೃಷ್ಟಶ್ಚರತಾ ಸಾಗರಾಂಬರಾಮ್।
ಇಮಾಂ ವಸುಮತೀಂ ಕೃತ್ಸ್ನಾಂ ಪ್ರಭಾವಃ ಸುಕುಲಸ್ಯ ಚ ॥೮॥

ಅಲ್ಲದೆ, ಸಾಗರಾಂತವಾದ ಈ ಭೂಮಿಯನ್ನು ಸಮಗ್ರವಾಗಿ ಸಂಚರಿಸುವ ನಾನೂ ಸಹ ನಿಮ್ಮ ಶ್ರೇಷ್ಠವಾದ ಕುಲದ ಪ್ರಭಾವವನ್ನು ನೋಡಿದ್ದೇನೆ.

ವೇದೇ ಧನುಷಿ ಚಾಚಾರ್ಯಮಭಿಜಾನಾಮಿ ಚಾರ್ಜುನ ।
ವಿಶ್ರುತಂ ತ್ರಿಷು ಲೋಕೇಷು ಭಾರದ್ವಾಜಂ ಯಶಸ್ವಿನಮ್ ॥೯॥

ಅರ್ಜುನನೇ, ವೇದವಿದ್ಯೆಯಲ್ಲೂ ಮತ್ತು ಧನುರ್ವಿದ್ಯೆಯಲ್ಲಿಯೂ ಮೂರುಲೋಕಗಳೆಲ್ಲೂ ಪ್ರಖ್ಯಾತರಾದ ಕೀರ್ತಿವಂತರಾದ ನಿಮ್ಮ ಆಚಾರ್ಯರನ್ನು ತಿಳಿದಿದ್ದೇನೆ.

ಸರ್ವವೇದವಿದಾಂ ಶ್ರೇಷ್ಠಂ ಸರ್ವಶಸ್ತ್ರಭೃತಾಂ ವರಮ್ ।
ದ್ರೋಣಮಿಷ್ವಸ್ತ್ರಕುಶಲಂ ಧನುಷ್ಯಂಗಿರಸಾಂ ವರಮ್ ॥೧೦॥

ಎಲ್ಲಾ ವೇದಗಳಲ್ಲೂ ಶ್ರೇಷ್ಠರಾದ, ಎಲ್ಲಾ ಶಸ್ತ್ರಧಾರಿಗಳಲ್ಲಿಯೂ ಶ್ರೇಷ್ಠರಾದ, ಆಂಗಿರಸ ಕುಲೋತ್ಪನ್ನರಾದ, ಅಸ್ತ್ರಗಳಲ್ಲಿ ಮತ್ತು ಧನುರ್ವಿದ್ಯೆಯಲ್ಲಿ ಕುಶಲರಾದ ದ್ರೋಣರು ನಿಮ್ಮ ಆಚಾರ್ಯರೆಂದು ತಿಳಿದಿದ್ದೇನೆ.

ಧರ್ಮಂ ವಾಯುಂ ಚ ಶಕ್ರಂ ಚ ವಿಜಾನಾಮ್ಯಶ್ವಿನಾವಪಿ ।
ಪಾಂಡು ಚ ನೃಪಶಾರ್ದೂಲಂ ಷಡೇತಾನ್ ಕುಲವರ್ಧನಾನ್ ॥೧೧॥

ಕುರುವಂಶವರ್ಧನರಾದ ಧರ್ಮ, ವಾಯು, ಇಂದ್ರ, ಅಶ್ವಿನಿಗಳು ಮತ್ತು ನೃಪಶಾರ್ದೂಲನಾದ ಪಾಂಡು, ಈ ಆರು ಜನರನ್ನೂ ಚೆನ್ನಾಗಿ ತಿಳಿದಿದ್ದೇನೆ.

ಪುತ್ರಾನೇತಾನಹಂ ಪಾರ್ಥ ದೇವಮಾನುಷಸತ್ತಮಾನ್ ।
ದಿವ್ಯಾತ್ಮನೋ ಮಹಾತ್ಮನಃ ಸರ್ವಶಸ್ತ್ರಭೃತಾಂ ವರಾಃ ॥೧೨॥

ಅರ್ಜುನನೇ, ದೇವತೆಗಳು ಶ್ರೇಷ್ಠಮನುಷ್ಯರಾಗಿ ಅವತರಿಸಿದ ಈ ಎಲ್ಲಾ ಮಹಾತ್ಮರೂ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ,

ದೇವಲೋಕಸಂಬಂಧಿಗಳೂ ಆದ ಈ ಪುತ್ರರನ್ನೂ ತಿಳಿದಿದ್ದೇನೆ.

ಭವಂತೋ ಭ್ರಾತರಃ ಸರ್ವೇ ಶೂರಾಶ್ಚ ಚರಿತವ್ರತಾಃ ।
ಉತ್ತಮಾಂ ತು ಮನೋವೃತ್ತಿಂ ಭವತಾಂ ಭಾವಿತಾತ್ಮನಾಮ್ ॥೧೩॥

ಜಾನನ್ನಪಿ ಚ ವಃ ಪಾರ್ಥ ಕೃತವಾನಿಹ ಧರ್ಷಣಾಮ್ ।
ಸ್ತ್ರೀಸಕಾಶೇಷು ಕೌರವ್ಯ ನ ಪುಮಾನ್ ಕ್ಷಂತುಮರ್ಹತಿ ।
ಧರ್ಷಣಾಮಾತ್ಮನಃ ಪಶ್ಯನ್ ಬಾಹುದ್ರವಿಣಮಾತ್ಮನಃ ॥೧೪॥

ಅಣ್ಣತಮ್ಮಂದಿರಾದ ನೀವೆಲ್ಲರೂ ಶೂರರು ಮತ್ತು ಅನೇಕ ವ್ರತಗಳನ್ನು ಮಾಡಿದವರು. ಸುಸಂಸ್ಕೃತವಾದ ಮನಸ್ಸುಳ್ಳ ನಿಮ್ಮ ಶ್ರೇಷ್ಠವಾದ ಮನಃಸ್ಥಿತಿಯನ್ನು ತಿಳಿದಿದ್ದರೂ ಸಹ ನಾನು ನಿಮ್ಮ ಮೇಲೆ ಆಕ್ರಮಣ ಮಾಡಿದೆ. ಎಲೈ ಅರ್ಜುನನೇ, ತನ್ನ ಬಾಹುಬಲವನ್ನು ತಿಳಿದ ವ್ಯಕ್ತಿಯು ಸ್ತ್ರೀಯರ ಎದುರಿನಲ್ಲಿ ತನಗೆ ಅವಮಾನವಾದರೆ, ಅದನ್ನು ಸಹಿಸುವುದಿಲ್ಲ.

ನಕ್ತಂ ಚ ಬಲಮಸ್ಮಾಕಂ ಭೂಯ ಏವಾಭಿವರ್ಧತೇ ।
ಯತಸ್ತತೋ ಮಾಂ ಕೌಂತೇಯ ಸದಾರಂ ಮನ್ಯುರಾವಿಶತ್ ॥೧೫॥

ಕೌಂತೇಯನೇ, ರಾತ್ರಿಯ ವೇಳೆಯಲ್ಲಿ ನಮ್ಮ ಬಲವು ಹೆಚ್ಚುತ್ತದೆ. ಆದ್ದರಿಂದ ಪತ್ನಿಯರಿಂದ ಕೂಡಿದ ನನಗೆ ಕೋಪವುಂಟಾಯಿತು.

ಸೋಽಹಂ ತ್ವಯೇಹ ವಿಜಿತಃ ಸಂಖ್ಯೇ ತಾಪತ್ಯನಂದನ ।
ಕೇನೇಹ ವಿಧಿನಾ ಸರ್ವಂ ಕೀರ್ತ್ಯಮಾನಂ ನಿಬೋಧ ಮೇ ॥೧೬॥

ತಾಪತ್ಯನಂದನನೇ, ನಾನು ಯುದ್ಧದಲ್ಲಿ ನಿನಗೆ ಯಾವ ಕಾರಣದಿಂದ ಸೋತೆ ಎಂಬುದನ್ನು ಹೇಳುತ್ತೇನೆ ಕೇಳು.

ಬ್ರಹ್ಮಚರ್ಯಂ ಪರೋ ಧರ್ಮಃ ಸ ಚಾಪಿ ನಿಯತಸ್ತ್ವಯಿ ।
ಯಸ್ಮಾದಸ್ಮಾದಹಂ ಪಾರ್ಥ ರಣೇಽಸ್ಮಿನ್ ವಿಜಿತಸ್ತ್ವಯಾ ॥೧೭॥

ಪಾರ್ಥನೇ, ನಿನ್ನಲ್ಲಿ ಶ್ರೇಷ್ಠವಾದ ಬ್ರಹ್ಮಚರ್ಯಧರ್ಮವು ನಿಯತವಾಗಿ ಇರುವುದರಿಂದ ನಾನು ಯುದ್ಧದಲ್ಲಿ ನಿನ್ನಿಂದ ಪರಾಭವವನ್ನು ಹೊಂದಿದೆ.

ಯಸ್ತು ಸ್ಯಾತ್ ಕ್ಷತ್ರಿಯಃ ಕಶ್ಚಿತ್ ಕಾಮವೃತ್ತಃ ಪರಂತಪ ।
ನಕ್ತಂ ಚ ಯುಧಿ ಯುಧ್ಯೇತ ನ ಸ ಜೀವೇತ್ ಕಥಂಚನ ॥೧೮॥

ಪರಂತಪನೇ, ಯಾವ ಕ್ಷತ್ರಿಯನು ಬ್ರಹ್ಮಚರ್ಯವಿಲ್ಲದೆ ಕಾಮಲಂಪಟನಾಗಿರುತ್ತಾನೆಯೋ ಅವನು ರಾತ್ರಿಯಲ್ಲಿ ಯುದ್ಧಮಾಡಿದರೆ ಎಂದೂ ಬದುಕಿ ಉಳಿಯುವುದಿಲ್ಲ.

ಯಸ್ತು ಸ್ಯಾತ್ ಕಾಮವೃತ್ತೋಽಪಿ ರಾಜಾ ರಾಜೀವಲೋಚನ ।
ಜಯೇನ್ನಕ್ತಂಚರಾನ್ ಸರ್ವಾನ್ ಸ ಪುರೋಹಿತಧೂರ್ಗತಃ ॥೧೯॥

ರಾಜೀವಲೋಚನನೇ, ಯಾವ ರಾಜನು ಕಾಮವೃತ್ತನಾದರೂ ಪುರೋಹಿತನನ್ನು ಮುಂದೆ ಮಾಡಿಕೊಂಡು ನಡೆಯುತ್ತಾನೋ ಅವನು ಎಲ್ಲಾ ರಾತ್ರಿಚರರನ್ನೂ ಜಯಿಸುತ್ತಾನೆ.

ತಸ್ಮಾತ್ ತಾಪತ್ಯ ಯತ್ ಕಿಂಚಿನ್ನೃಣಾಂ ಶ್ರೇಯ ಇಹೇಪ್ಸಿತಮ್ ।
ತಸ್ಮಿನ್ ಕರ್ಮಣಿ ಯೋಕ್ತವ್ಯಾ ದಾಂತಾತ್ಮಾನಃ ಪುರೋಹಿತಾಃ ॥೨೦॥

ತಾಪತ್ಯನೇ, ಆದ್ದರಿಂದ ಮನುಷ್ಯರು (ರಾಜರು) ಏನಾದರೂ ಶ್ರೇಯಸ್ಸನ್ನು ಬಯಸಿದರೆ ಮೊದಲು ಅದಕ್ಕಾಗಿ ದಾಂತರಾದ ಪುರೋಹಿತರನ್ನು ಸಂಪಾದಿಸಬೇಕು.

ವೇದೇ ಷಡಂಗೇ ನಿಯತಾಃ ಶುಚಯಃ ಸತ್ಯವಾದಿನಃ ।
ಧರ್ಮಾತ್ಮಾನಃ ಕೃತಾತ್ಮಾನಃ ಸ್ಯುರ್ನ್ಯಪಸ್ಯ ಪುರೋಹಿತಾಃ ॥೨೧॥

ವೇದವೇದಾಂಗಗಳಲ್ಲಿ ಕುಶಲರಾದವರೂ, ಶುಚಿಯಾದವರೂ, ನಿಯಮವನ್ನು ಪಾಲಿಸುವವರೂ, ಸತ್ಯವನ್ನು ನುಡಿಯುವವರೂ, ಧರ್ಮಾತ್ಮರೂ, ತೃಪ್ತರಾದವರೂ ರಾಜನಿಗೆ ಪುರೋಹಿತರಾಗಲು ಅರ್ಹರಾಗುತ್ತಾರೆ.

ಜಯಶ್ಚ ನಿಯತೋ ರಾಜ್ಞಃ ಸ್ವರ್ಗಶ್ಚ ಸ್ಯಾದನಂತರಮ್ ।
ಯಸ್ಯ ಸ್ಯಾದ್ ಧರ್ಮವಿದ್ ವಾಗ್ಮೀ ಪುರೋಧಾಃ ಶೀಲವಾನ್ ಶುಚಿಃ॥೨೨॥

ಯಾವ ರಾಜನಿಗೆ ಧರ್ಮಜ್ಞನೂ, ವಾಗ್ಮಿಯೂ, ಶೀಲವಂತನೂ, ಶುಚಿಯೂ ಆದ ಪುರೋಹಿತನು ದೊರಕುತ್ತಾನೋ ಆ ರಾಜನು ಈ ಲೋಕದಲ್ಲಿ ಜಯವನ್ನೂ ಅನಂತರ ಪರಲೋಕದಲ್ಲಿ ಸ್ವರ್ಗವನ್ನೂ ಪಡೆಯುತ್ತಾನೆ.

ಅಲಬ್ಧಸ್ಯ ಚ ಲಾಭಾಯ ಲಬ್ಧಸ್ಯ ಪರಿರಕ್ಷಣೇ ।
ಪುರೋಹಿತಂ ಪ್ರಕುರ್ವೀತ ರಾಜಾ ಗುಣಸಮನ್ವಿತಮ್ ॥೨೩॥

ಪಡೆಯದಿದ್ದ ಲಾಭವನ್ನು ಪಡೆಯಲು ಮತ್ತು ಪಡೆದ ಸಂಪತ್ತನ್ನು ರಕ್ಷಿಸಿಕೊಳ್ಳಲು ರಾಜನು ಗುಣವಂತನಾದ ಪುರೋಹಿತನನ್ನು ಸಂಪಾದಿಸಬೇಕು.

ಪುರೋಹಿತಮತೇ ತಿಷ್ಠೇದ್ ಯ ಇಚ್ಛೇತ್ ಪೃಥಿವೀಂ ನೃಪಃ ।
ಪ್ರಾಪ್ತುಂ ಮೇರುವರೋತ್ತಂಸಾಂ ಸಾಗರಾಂಬರಧಾರಿಣೀಮ್ ॥೨೪॥

ಯಾವ ರಾಜನು ಮೇರುಸಹಿತವಾದ ಸಾಗರಾಂತವಾದ ಭೂಮಿಯನ್ನು ಬಯಸುತ್ತಾನೋ ಅವನು ಪುರೋಹಿತರ ಅಭಿಪ್ರಾಯದಂತೆ ನಡೆದು ಕೊಳ್ಳಬೇಕು.

ನ ಹಿ ಕೇವಲಶೌರ್ಯೇಣ ತಾಪತ್ಯಾಭಿಜನೇನ ಚ ।
ಜಯೇದಬ್ರಾಹ್ಮಣಃ ಕಶ್ಚಿದ್ ಭುವಿ ಭೂಮಿಪತಿಃ ಕ್ವಚಿತ್ ॥೨೫॥

ತಾಪತ್ಯನೇ, ಬ್ರಾಹ್ಮಣನಲ್ಲದ, ಭೂಮಿಯಲ್ಲಿರುವ ಯಾವ ರಾಜನೂ, ಕೇವಲ ಶೌರ್ಯದ ಕಾರಣದಿಂದ ಅಥವಾ ಕೇವಲ ಉತ್ತಮಜನ್ಮದ ಕಾರಣದಿಂದ ಎಂದೂ ಜಯಿಸುವುದಿಲ್ಲ.

ತಸ್ಮಾದೇವಂ ವಿಜಾನೀಹಿ ಕುರೂಣಾಂ ಕೀರ್ತಿವರ್ಧನ ।
ಬ್ರಾಹ್ಮಣಪ್ರಮುಖಂ ರಾಜ್ಯಂ ಶಕ್ಯಂ ಪಾಲಯಿತುಂ ಚಿರಮ್ ॥೨೬॥

ಕೌರವರ ಕೀರ್ತಿವರ್ಧನನಾದ ಅರ್ಜುನನೇ, ಆದ್ದರಿಂದ ಇದನ್ನು ತಿಳಿ. ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ಚಿರಕಾಲ ರಾಜ್ಯವನ್ನು ಆಳುವುದು ಸಾಧ್ಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರಿಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★★★★★

ನೂರ ಎಪ್ಪತ್ನಾಲ್ಕನೆಯ ಅಧ್ಯಾಯ

(ತಾಪತ್ಯೋಪಾಖ್ಯಾನ, ತಪತೀ ಮತ್ತು ಸಂವರಣರ ಸಮಾಗಮ. ಸಂವರಣನ ವಚನಗಳು, ತಪತಿಯ ಅಂತರ್ಧಾನ.)

ಅರ್ಜುನಃ

ತಾಪತ್ಯ ಇತಿ ಯದ್ವಾಕ್ಯಮುಕ್ತವಾನಸಿ ಮಾಮಿಹ ।
ತದಹಂ ಶ್ರೋತುಮಿಚ್ಛಾಮಿ ತಾಪತ್ಯಾರ್ಥವಿನಿಶ್ಚಯಮ್ ॥೧॥

ಗಂಧರ್ವನೇ, ನೀನು ನನ್ನನ್ನು ತಾಪತ್ಯ ಎಂದು ಕರೆದೆ. ತಾಪತ್ಯ ಶಬ್ದದ ಅರ್ಥವನ್ನು ನಾನು ನಿನ್ನಿಂದ ಕೇಳಿ ತಿಳಿಯಲು ಬಯಸುತ್ತೇನೆ.

ತಪತೀ ನಾಮ ಕಾ ಚೈಷಾ ತಾಪತ್ಯಾ ಯತ್ಕೃತೇ ವಯಮ್ ।
ಕೌಂತೇಯಾ ಹಿ ವಯಂ ಸಾಧೋ ಯತ್ ತದಿಚ್ಛಾಮಿ ವೇದಿತುಮ್ ॥

ಯಾರ ನಿಮಿತ್ತವಾಗಿ ನಾವು ತಾಪತ್ಯರೋ ಅಂತಹ ತಪತಿ ಎಂಬುವವಳು ಯಾರು. ಸಜ್ಜನನೇ, ನಾವು ಕುಂತಿಯ ಪುತ್ರರಾಗಿ ಕೌಂತೇಯರಷ್ಟೇ? ಇದನ್ನು ತಿಳಿದುಕೊಳ್ಳಲು ಬಯಸುತ್ತೇನೆ.

ವೈಶಂಪಾಯನಃ

ಏವಮುಕ್ತಃ ಸ ಗಂಧರ್ವಃ ಪ್ರತ್ಯುವಾಚ ಯಶಸ್ವಿನಮ್ ।
ಅರ್ಜುನಂ ತ್ರಿಷು ಲೋಕೇಷು ವಿಶ್ರುತಂ ಶ್ರುತವದ್ವಚಃ ॥೩॥

ಇದನ್ನು ಕೇಳಿದ ಆ ಗಂಧರ್ವನು ಮೂರುಲೋಕಗಳಲ್ಲಿಯೂ ಪ್ರಖ್ಯಾತನಾದ ಕೀರ್ತಿವಂತನಾದ ಅರ್ಜುನನನ್ನು ಕುರಿತು ಶ್ರುತಿಸಮ್ಮತವಾದ ಮಾತುಗಳನ್ನು ಆಡಿದನು.

ಅಹಂ ತೇ ಕಥಯಿಷ್ಯಾಮಿ ಕಥಾಮತಿಮನೋರಮಾಮ್ ।
ಯಥಾವದಖಿಲಾಂ ಪಾರ್ಥ ಧರ್ಮ್ಯಾಂ ಧರ್ಮಭೃತಾಂ ವರ ॥೪॥

ಪಾರ್ಥನೇ, ಧರ್ಮಭೃತರಲ್ಲಿ ಶ್ರೇಷ್ಠನೇ, ನಾನು ನಿನಗೆ ಈ ಧಾರ್ಮಿಕವಾದ, ಅತಿ ಮನೋಹರವಾದ ಕಥೆಯನ್ನು ಸಮಗ್ರವಾಗಿ ಹೇಳುವೆನು.

ಉಕ್ತವಾನಸ್ಮಿ ಪಾರ್ಥ ತ್ವಾಂ ತಾಪತ್ಯ ಇತಿ ಯದ್ವಚಃ ।
ತತ್ ತೇಽಹಂ ಕಥಯಿಷ್ಯಾಮಿ ಶೃಣು ಚೈಕಮನಾ ನೃಪ ॥೫॥

ಪಾರ್ಥನೇ, ನಾನು ನಿನ್ನನ್ನು ತಾಪತ್ಯನೆಂದು ಕರೆದೆನಷ್ಟೇ ? ರಾಜನೇ, ನಾನು ನಿನಗೆ ಅದನ್ನು ಹೇಳುವೆನು. ಏಕಾಗ್ರ ಮನಸ್ಸಿನಿಂದ ಕೇಳು.

ಯ ಏಷ ದಿವಿ ತೇಜಸ್ವೀ ನಾಕಂ ವ್ಯಾಪ್ನೋತಿ ತೇಜಸಾ ।
ಸಾ ತಸ್ಯ ತಪತೀ ನಾಮ ಬಭೂವ ಸದೃಶೀ ಸುತಾ ॥೬॥

ತನ್ನ ತೇಜಸ್ಸಿನಿಂದ ಸ್ವರ್ಗವನ್ನು ವ್ಯಾಪಿಸುವ, ಆಕಾಶದಲ್ಲಿ ಸಂಚರಿಸುವ, ತೇಜಸ್ವಿಯಾದ ಸೂರ್ಯನಿಗೆ 'ತಪತೀ' ಎಂಬ ಅನುರೂಪಳಾದ ಮಗಳು ಜನಿಸಿದಳು.

ವಿವಸ್ವತೋಽಥ ಕೌಂತೇಯ ಸಾವಿತ್ರ್ಯವರಜಾ ವಿಭೋ ।
ವಿಶ್ರುತಾ ತ್ರಿಷು ಲೋಕೇಷು ತಪತೀ ತಪಸಾ ಯುತಾ ॥೭॥

ಕೌಂತೇಯನೇ, ಅವಳು ವಿವಸ್ವಂತನ (ಸೂರ್ಯನ) ಮಗಳು ಮತ್ತು ಸಾವಿತ್ರಿಯ ತಂಗಿ. ವಿಭುವೇ, ಅವಳು ತಪಸ್ಸಿನಿಂದ ಕೂಡಿದವಳಾಗಿ ಮೂರುಲೋಕಗಳಲ್ಲಿಯೂ ತಪತೀ ಎಂದೇ ಪ್ರಸಿದ್ಧಳಾದಳು.

ನ ದೇವೀ ನಾಸುರೀ ಚೈವ ನ ಯಕ್ಷೀ ನ ಚ ಕಿನ್ನರೀ ।
ನಾಪ್ಸರಾ ನ ಚ ಗಂಧರ್ವೀ ತಥಾರೂಪಾ ನ ಕಾಚನ ॥೮॥

ದೇವತಾಸ್ತ್ರೀಯರಾಗಲೀ, ಅಸುರಸ್ತ್ರೀಯರಾಗಲೀ, ಯಕ್ಷಿಯರಾಗಲೀ, ಕಿನ್ನರಿಯರಾಗಲೀ, ಅಪ್ಸರೆಯರಾಗಲೀ, ಗಂಧರ್ವಿಯರಾಗಲೀ ಯಾರೂ ಅಂತಹ ರೂಪವನ್ನು ಹೊಂದಿರಲಿಲ್ಲ.

ಸುವಿವಿಕ್ತಾನವದ್ಯಾಂಗೀ ಸುಸ್ಮಿತಾಯತಲೋಚನಾ ।
ಸ್ವಾಚಾರಾ ಚೈವ ಸಾಧ್ವೀ ಚ ಸುವೇಷಾ ಚೈವ ಭಾಮಿನೀ ॥೯॥

ಅವಳು ಚೆನ್ನಾಗಿ ವಿಭಕ್ತವಾದ ಅವಯವಗಳಿಂದ ಕೂಡಿದವಳೂ, ಒಳ್ಳೆಯ ಮಂದಸ್ಮಿತವನ್ನೂ, ದೀರ್ಘವಾದ ನೇತ್ರವನ್ನೂ ಹೊಂದಿದವಳೂ, ಒಳ್ಳೆಯ ಆಚಾರವನ್ನು ಹೊಂದಿದವಳೂ, ಒಳ್ಳೆಯ ವೇಷವನ್ನು ಧರಿಸಿದವಳೂ ಆದ ಸಾಧ್ವಿಯಾದ ಭಾಮಿನಿ.

ನೂರ ಎಪ್ಪತ್ನಾಲ್ಕನೆಯ ಅಧ್ಯಾಯ

(ತಾಪತ್ಯೋಪಾಖ್ಯಾನ, ತಪತೀ ಮತ್ತು ಸಂವರಣರ ಸಮಾಗಮ. ಸಂವರಣನ ವಚನಗಳು, ತಪತಿಯ ಅಂತರ್ಧಾನ.)

ಅರ್ಜುನಃ

ತಾಪತ್ಯ ಇತಿ ಯದ್ವಾಕ್ಯಮುಕ್ತವಾನಸಿ ಮಾಮಿಹ ।
ತದಹಂ ಶ್ರೋತುಮಿಚ್ಛಾಮಿ ತಾಪತ್ಯಾರ್ಥವಿನಿಶ್ಚಯಮ್ ॥೧॥

ಗಂಧರ್ವನೇ, ನೀನು ನನ್ನನ್ನು ತಾಪತ್ಯ ಎಂದು ಕರೆದೆ. ತಾಪತ್ಯ ಶಬ್ದದ ಅರ್ಥವನ್ನು ನಾನು ನಿನ್ನಿಂದ ಕೇಳಿ ತಿಳಿಯಲು ಬಯಸುತ್ತೇನೆ.

ತಪತೀ ನಾಮ ಕಾ ಚೈಷಾ ತಾಪತ್ಯಾ ಯತ್ಕೃತೇ ವಯಮ್ ।
ಕೌಂತೇಯಾ ಹಿ ವಯಂ ಸಾಧೋ ಯತ್ ತದಿಚ್ಛಾಮಿ ವೇದಿತುಮ್ ॥

ಯಾರ ನಿಮಿತ್ತವಾಗಿ ನಾವು ತಾಪತ್ಯರೋ ಅಂತಹ ತಪತಿ ಎಂಬುವವಳು ಯಾರು. ಸಜ್ಜನನೇ, ನಾವು ಕುಂತಿಯ ಪುತ್ರರಾಗಿ ಕೌಂತೇಯರಷ್ಟೇ? ಇದನ್ನು ತಿಳಿದುಕೊಳ್ಳಲು ಬಯಸುತ್ತೇನೆ.

ವೈಶಂಪಾಯನಃ

ಏವಮುಕ್ತಃ ಸ ಗಂಧರ್ವಃ ಪ್ರತ್ಯುವಾಚ ಯಶಸ್ವಿನಮ್ ।
ಅರ್ಜುನಂ ತ್ರಿಷು ಲೋಕೇಷು ವಿಶ್ರುತಂ ಶ್ರುತವದ್ವಚಃ ॥೩॥

ಇದನ್ನು ಕೇಳಿದ ಆ ಗಂಧರ್ವನು ಮೂರುಲೋಕಗಳಲ್ಲಿಯೂ ಪ್ರಖ್ಯಾತನಾದ ಕೀರ್ತಿವಂತನಾದ ಅರ್ಜುನನನ್ನು ಕುರಿತು ಶ್ರುತಿಸಮ್ಮತವಾದ ಮಾತುಗಳನ್ನು ಆಡಿದನು.

ಅಹಂ ತೇ ಕಥಯಿಷ್ಯಾಮಿ ಕಥಾಮತಿಮನೋರಮಾಮ್ ।
ಯಥಾವದಖಿಲಾಂ ಪಾರ್ಥ ಧರ್ಮ್ಯಾಂ ಧರ್ಮಭೃತಾಂ ವರ ॥೪॥

ಪಾರ್ಥನೇ, ಧರ್ಮಭೃತರಲ್ಲಿ ಶ್ರೇಷ್ಠನೇ, ನಾನು ನಿನಗೆ ಈ ಧಾರ್ಮಿಕವಾದ, ಅತಿ ಮನೋಹರವಾದ ಕಥೆಯನ್ನು ಸಮಗ್ರವಾಗಿ ಹೇಳುವೆನು.

ಉಕ್ತವಾನಸ್ಮಿ ಪಾರ್ಥ ತ್ವಾಂ ತಾಪತ್ಯ ಇತಿ ಯದ್ವಚಃ ।
ತತ್ ತೇಽಹಂ ಕಥಯಿಷ್ಯಾಮಿ ಶೃಣು ಚೈಕಮನಾ ನೃಪ ॥೫॥

ಪಾರ್ಥನೇ, ನಾನು ನಿನ್ನನ್ನು ತಾಪತ್ಯನೆಂದು ಕರೆದೆನಷ್ಟೇ ? ರಾಜನೇ, ನಾನು ನಿನಗೆ ಅದನ್ನು ಹೇಳುವೆನು. ಏಕಾಗ್ರ ಮನಸ್ಸಿನಿಂದ ಕೇಳು.

ಯ ಏಷ ದಿವಿ ತೇಜಸ್ವೀ ನಾಕಂ ವ್ಯಾಪ್ನೋತಿ ತೇಜಸಾ ।
ಸಾ ತಸ್ಯ ತಪತೀ ನಾಮ ಬಭೂವ ಸದೃಶೀ ಸುತಾ ॥೬॥

ತನ್ನ ತೇಜಸ್ಸಿನಿಂದ ಸ್ವರ್ಗವನ್ನು ವ್ಯಾಪಿಸುವ, ಆಕಾಶದಲ್ಲಿ ಸಂಚರಿಸುವ, ತೇಜಸ್ವಿಯಾದ ಸೂರ್ಯನಿಗೆ 'ತಪತೀ' ಎಂಬ ಅನುರೂಪಳಾದ ಮಗಳು ಜನಿಸಿದಳು.

ವಿವಸ್ವತೋಽಥ ಕೌಂತೇಯ ಸಾವಿತ್ರ್ಯವರಜಾ ವಿಭೋ ।
ವಿಶ್ರುತಾ ತ್ರಿಷು ಲೋಕೇಷು ತಪತೀ ತಪಸಾ ಯುತಾ ॥೭॥

ಕೌಂತೇಯನೇ, ಅವಳು ವಿವಸ್ವಂತನ (ಸೂರ್ಯನ) ಮಗಳು ಮತ್ತು ಸಾವಿತ್ರಿಯ ತಂಗಿ. ವಿಭುವೇ, ಅವಳು ತಪಸ್ಸಿನಿಂದ ಕೂಡಿದವಳಾಗಿ ಮೂರುಲೋಕಗಳಲ್ಲಿಯೂ ತಪತೀ ಎಂದೇ ಪ್ರಸಿದ್ಧಳಾದಳು.

ನ ದೇವೀ ನಾಸುರೀ ಚೈವ ನ ಯಕ್ಷೀ ನ ಚ ಕಿನ್ನರೀ ।
ನಾಪ್ಸರಾ ನ ಚ ಗಂಧರ್ವೀ ತಥಾರೂಪಾ ನ ಕಾಚನ ॥೮॥

ದೇವತಾಸ್ತ್ರೀಯರಾಗಲೀ, ಅಸುರಸ್ತ್ರೀಯರಾಗಲೀ, ಯಕ್ಷಿಯರಾಗಲೀ, ಕಿನ್ನರಿಯರಾಗಲೀ, ಅಪ್ಸರೆಯರಾಗಲೀ, ಗಂಧರ್ವಿಯರಾಗಲೀ ಯಾರೂ ಅಂತಹ ರೂಪವನ್ನು ಹೊಂದಿರಲಿಲ್ಲ.

ಸುವಿವಿಕ್ತಾನವದ್ಯಾಂಗೀ ಸುಸ್ಮಿತಾಯತಲೋಚನಾ ।
ಸ್ವಾಚಾರಾ ಚೈವ ಸಾಧ್ವೀ ಚ ಸುವೇಷಾ ಚೈವ ಭಾಮಿನೀ ॥೯॥

ಅವಳು ಚೆನ್ನಾಗಿ ವಿಭಕ್ತವಾದ ಅವಯವಗಳಿಂದ ಕೂಡಿದವಳೂ, ಒಳ್ಳೆಯ ಮಂದಸ್ಮಿತವನ್ನೂ, ದೀರ್ಘವಾದ ನೇತ್ರವನ್ನೂ ಹೊಂದಿದವಳೂ, ಒಳ್ಳೆಯ ಆಚಾರವನ್ನು ಹೊಂದಿದವಳೂ, ಒಳ್ಳೆಯ ವೇಷವನ್ನು ಧರಿಸಿದವಳೂ ಆದ ಸಾಧ್ವಿಯಾದ ಭಾಮಿನಿ.

ನ ತಸ್ಯಾಃ ಸದೃಶಂ ಕಂಚಿತ್ ತ್ರಿಷು ಲೋಕೇಷು ಭಾರತ ।
ಭರ್ತಾರಂ ಸವಿತಾ ಮೇನೇ ರೂಪಶೀಲಗುಣಶ್ರುತೈಃ ॥೧೦॥

ಭಾರತನೇ, ತಂದೆಯಾದ ಸೂರ್ಯನು ರೂಪಶೀಲಗುಣವಿದ್ಯೆಗಳಲ್ಲಿ ಅವಳಿಗೆ ಅನುರೂಪನಾದ ಪತಿಯನ್ನು ಮೂರುಲೋಕಗಳಲ್ಲಿಯೂ ಕಾಣಲಿಲ್ಲ.

ಸಂಪ್ರಾಪ್ತಯೌವನಾಂ ಪಶ್ಯನ್ ದೇವೋ ದುಹಿತರಂ ಶುಭಾಮ್ ।
ದ್ವಿರಷ್ಟವರ್ಷಾಂ ತಾಂ ಪಶ್ಯನ್ ಸವಿತಾ ರೂಪಶಾಲಿನೀಮ್।
ನೋಪಲೇಭೇ ತತಃ ಶಾಂತಿಂ ಸಂಪ್ರದಾನಂ ವಿಚಿಂತಯನ್ ॥೧೧॥

ಸೂರ್ಯನು ರೂಪಶಾಲಿನಿಯಾದ, ಹದಿನಾರು ವರ್ಷವನ್ನು ಕಳೆದು ಯೌವನವನ್ನು ಹೊಂದಿದ, ಶುಭಳಾದ ತನ್ನ ಮಗಳನ್ನು ನೋಡಿ ಯಾರಿಗೆ ಕೊಡಬೇಕು ಎಂದು ವಿಚಾರ ಮಾಡುತ್ತಾ ಮನಸ್ಸಿನ ಶಾಂತಿಯನ್ನು ಕಳೆದುಕೊಂಡನು.

ಅಥರ್ಕ್ಷಪುತ್ರಃ ಕೌಂತೇಯ ಕುರೂಣಾಮೃಷಭೋ ಯುವಾ ।
ಸೂರ್ಯಮಾರಾಧಯಾಮಾಸ ನೃಪಃ ಸಂವರಣಸ್ತದಾ ।
ಅರ್ಘ್ಯಮಾಲ್ಯೋಪಹಾರೈಶ್ಚ ಶಶ್ವತ್ ಸ ನೃಪತಿಸ್ತದಾ ॥೧೨॥

ಕೌಂತೇಯನೇ, ಆಗ ಕುರುವಂಶದಲ್ಲಿ ಶ್ರೇಷ್ಠನಾದ ಋಕ್ಷರಾಜನ ಮಗನಾದ ಯುವಕನಾದ ಸಂವರಣನು ಅರ್ಘ್ಯಮಾಲ್ಯ ನೈವೇದ್ಯಗಳಿಂದ ಸೂರ್ಯನನ್ನು ಬಹುಕಾಲ ಆರಾಧಿಸಿದನು.

ನಿಯಮೈರುಪವಾಸೈಶ್ಚ ತಪೋಭಿರ್ವಿವಿಧೈರಪಿ ।
ಶುಶ್ರೂಷುರನಹಂವಾದೀ ಶಶ್ವತ್ ಪೌರವನಂದನ ।
ಅಂಶುಮಂತಂ ಸಮುದ್ಯಂತಂ ಪೂಜಯಾಮಾಸ ಭಕ್ತಿಮಾನ್ ॥೧೩॥

ಪೌರವನಂದನನೇ, ಅವನು ನಿಯಮಗಳನ್ನು ಧರಿಸಿ, ಉಪವಾಸಗಳನ್ನು ಮಾಡಿ, ಅನೇಕ ವಿಧವಾದ ತಪಸ್ಸುಗಳನ್ನು ಆಚರಿಸಿ, ಅಹಂಕಾರವನ್ನು ತೊರೆದು, ಸೇವಾತತ್ಪರನಾಗಿ, ಉದಯಿಸುವ ಸೂರ್ಯನನ್ನು ಭಕ್ತಿಯಿಂದ ಪೂಜಿಸಿದನು.

ಕೃತಜ್ಞಂ ಚ ಸುಧರ್ಮಜ್ಞಂ ರೂಪೇಣಾಸದೃಶಂ ಭುವಿ ।
ತಪತ್ಯಾಃ ಸದೃಶಂ ಮೇನೇ ಸೂರ್ಯಃ ಸಂವರಣಂ ಪತಿಮ್ ॥

ಸೂರ್ಯನು ಕೃತಜ್ಞನೂ, ಧರ್ಮವನ್ನು ಚೆನ್ನಾಗಿ ತಿಳಿದವನೂ, ಭೂಮಿಯಲ್ಲಿ ಅಸದೃಶರೂಪವುಳ್ಳವನೂ ಆದ ಸಂವರಣನನ್ನು ತಪತಿಗೆ ಯೋಗ್ಯನಾದ ಪತಿ ಎಂದು ಭಾವಿಸಿದನು.

ದಾತುಮೈಚ್ಛತ್ ತತಃ ಕನ್ಯಾಂ ತಸ್ಮೈ ಸಂವರಣಾಯ ತಾಮ್ ।
ನೃಪೋತ್ತಮಾಯ ಕೌರವ್ಯ ವಿಶ್ರುತಾಭಿಜನಾಯ ಚ ॥೧೫॥

ಕೌರವ್ಯನೇ, ಪ್ರಖ್ಯಾತವಾದ ವಂಶದಲ್ಲಿ ಜನಿಸಿದ ನೃಪಶ್ರೇಷ್ಠನಾದ ಸಂವರಣನಿಗೆ ಆ ತನ್ನ ಮಗಳನ್ನು ಕೊಡಲು ಬಯಸಿದನು.

ಯಥಾ ಹಿ ದಿವಿ ದೀಪ್ತಾಂಶುಃ ಪ್ರಭಾಸಯತಿ ತೇಜಸಾ ।
ತಥಾ ಭುವಿ ಮಹೀಪಾಲೋ ದೀಪ್ತ್ಯಾ ಸಂವರಣೋಽಭವತ್ ॥೧೬॥

ಆಕಾಶದಲ್ಲಿ ಹೇಗೆ ಸೂರ್ಯನು ತನ್ನ ತೇಜಸ್ಸಿನಿಂದ ಬೆಳಗುತ್ತಾನೋ ಹಾಗೆ ಭೂಮಿಯಲ್ಲಿ ಸಂವರಣರಾಜನು ತನ್ನ ತೇಜಸ್ಸಿನಿಂದ ಬೆಳಗುತ್ತಿದ್ದನು.

ಯಥಾಽರ್ಚಯಂತಿ ಚಾದಿತ್ಯಮುದ್ಯಂತಂ ಬ್ರಹ್ಮವಾದಿನಃ ।
ತಥಾ ಸಂವರಣಂ ಪಾರ್ಥ ಬ್ರಾಹ್ಮಣಾವರಜಾಃ ಪ್ರಜಾಃ । ॥೧೭॥

ಪಾರ್ಥನೇ, ಹೇಗೆ ಬ್ರಾಹ್ಮಣರು ಉದಯಿಸುವ ಸೂರ್ಯನನ್ನು ಅರ್ಚಿಸುತ್ತಾರೋ, ಹಾಗೆ ಬ್ರಾಹ್ಮಣೇತರ ಪ್ರಜೆಗಳೆಲ್ಲರೂ ಸಂವರಣನನ್ನು ಪೂಜಿಸುತ್ತಿದ್ದರು.

ಸ ಸೋಮಮತಿ ಕಾಂತತ್ವಾದ್ ಆದಿತ್ಯಮತಿ ತೇಜಸಾ ।
ಬಭೂವ ನೃಪತಿಃ ಶ್ರೀಮಾನ್ ಸುಹೃದಾಂ ದುರ್ಹೃದಾಮಪಿ ॥೧೮॥

ಆ ರಾಜನು ಸುಹೃಜ್ಜನರಿಗೆ ಚಂದ್ರನಿಗಿಂತ ಅಧಿಕ ಕಾಂತಿಯುಕ್ತನೂ, ಶತ್ರುಗಳಿಗೆ ಸೂರ್ಯನಿಗಿಂತ ಅಧಿಕ ತೇಜಸ್ವಿಯೂ ಆಗಿದ್ದನು.

ಏವಂಗುಣಾಯ ನೃಪತೇ ತಥಾವೃತ್ತಾಯ ನಿತ್ಯಶಃ ।
ತಸ್ಮೈ ದಾತುಂ ಮನಶ್ಚಕ್ರೇ ತಪತೀಂ ತಪನಃ ಸ್ವಯಮ್ ॥೧೯॥

ರಾಜನೇ, ಇಂತಹ ಗುಣವನ್ನು ಮತ್ತು ಇಂತಹ ನಡತೆಯನ್ನು ಯಾವಾಗಲೂ ಹೊಂದಿದ್ದ ಅವನಿಗೆ ತಪತಿಯನ್ನು ಕೊಡಲು ಸೂರ್ಯನು ತಾನೇ ನಿರ್ಧರಿಸಿದನು.

ಸ ಕದಾಚಿದಥೋ ರಾಜಾ ಶ್ರೀಮಾನುರುಹಯೋ ಭುಜಃ ।
ಚಚಾರ ಮೃಗಯಾಂ ಪಾರ್ಥ ಪರ್ವತೋಪವನೇ ಕಿಲ ॥೨೦॥

ಪಾರ್ಥನೇ, ಒಮ್ಮೆ ಮಹಾಭುಜನಾದ ಆ ರಾಜನು ಶ್ರೇಷ್ಠವಾದ ಕುದುರೆಯನ್ನೇ
ಪರ್ವತದ ಸಮೀಪದಲ್ಲಿ ಬೇಟೆಯಾಡುತ್ತಿದ್ದನು.

ಚರತೋ ಮೃಗಯಾಂ ತಸ್ಯ ಕ್ಷುತ್ಪಿಪಾಸಾಶ್ರಮಾನ್ವಿತಃ ।
ಮಮಾರ ರಾಜ್ಞಃ ಕೌಂತೇಯ ಗಿರಾವಪ್ರತಿಮೋ ಹಯಃ ॥೨೧॥

ಕೌಂತೇಯನೇ, ಅವನು ಬೇಟೆಯಾಡುತ್ತಿರುವಾಗ ಅವನ ಅಸದೃಶವಾ
ಕುದುರೆಯು ಹಸಿವುನೀರಡಿಕೆಗಳಿಂದ ಬಳಲಿ ಸತ್ತುಹೋಯಿತು.

ಸ ಮೃತಾಶ್ವಶ್ಚರನ್ ಪಾರ್ಥ ಪದ್ಭ್ಯಾಮೇವ ಗಿರೌ ನೃಪಃ ।
ದದರ್ಶಾಸದೃಶೀಂ ಲೋಕೇ ಕನ್ಯಾಮಾಯತಲೋಚನಾಮ್ ॥೨೨॥

ಪಾರ್ಥನೇ, ಆ ರಾಜನು ಕುದುರೆಯನ್ನು ಕಳೆದುಕೊಂಡು ಪರ್ವತದಲ್ಲಿ
ಪಾದಗಳಿಂದಲೇ ಸಂಚರಿಸುತ್ತಾ ದೀರ್ಘನೇತ್ರೆಯಾದ, ಲೋಕದಲ್ಲಿ ಅಸದೃಶೆಯಾದ
ಒಬ್ಬ ಕನ್ಯೆಯನ್ನು ನೋಡಿದನು.

ಸ ಏಕ ಏಕಾಮಾಸಾದ್ಯ ಕನ್ಯಾಂ ತಾಮರಿಮರ್ದನಃ ।
ತಸ್ಥೌ ನೃಪತಿಶಾರ್ದೂಲಃ ಪಶ್ಯನ್ನವಿಚಲೇಕ್ಷಣಃ ॥೨೩॥

ಶತ್ರುಮರ್ದನನಾದ, ನೃಪತಿಶಾರ್ದೂಲನಾದ ಅವನು ಏಕಾಕಿನಿ- ಯಾಗಿರುವ
ಆ ಕನ್ಯೆಯನ್ನು ನೋಡಿ ಏಕದೃಷ್ಟಿಯಿಂದ ಅವಳನ್ನು ನೋಡುತ್ತಾ ನಿಂತನು.

ಸ ಹಿ ತಾಂ ತರ್ಕಯಾಮಾಸ ರೂಪತೋ ನೃಪತಿಃ ಶ್ರಿಯಮ್ ।
ಪುನಃ ಸ ಕಾಮಯಾಮಾಸ ರವೇರಿಷ್ಟಾಮಿವ ಪ್ರಭಾಮ್ ॥೨೪॥

ಆ ರಾಜನು ಅವಳ ರೂಪವನ್ನು ನೋಡಿ ಅವಳು ಶ್ರೀದೇವಿ ಎಂದು ಊಹಿಸಿದನು.
ಪುನಃ ಅವಳನ್ನು ಸೂರ್ಯನ ಪ್ರಭೆ ಎಂದು ತಿಳಿದನು.

ಗಿರಿಪ್ರಸ್ಥೇ ತು ಸಾ ಯಸ್ಮಿನ್ ಸ್ಥಿತಾ ತತ್ಪಿತಲೋಚನಾ ।
ಸಸವೃಕ್ಷಲತಾಗುಲ್ಮೋ ಹಿರಣ್ಮಯ ಇವಾಭವತ್ ॥೨೫॥

ಕಪ್ಪಾದ ಕಣ್ಣುಳ್ಳ ಅವಳು ಗಿರಿಪ್ರಸ್ಥದಲ್ಲಿ ನಿಂತಿರುವಾಗ ವೃಕ್ಷಲತಾ- ಗುಲ್ಮಗಳಿಂದ ಕೂಡಿದ ಪರ್ವತದ ಆ ಪ್ರದೇಶವು ಸುವರ್ಣಮಯವಾಗಿ ಕಾಣುತ್ತಿದ್ದಿತು.

ಅವಮೇನೇ ಸ ತಾಂ ದೃಷ್ಟ್ವಾ ಸರ್ವಪ್ರಾಣಭೃತಾಂ ಸ್ತ್ರಿಯಃ ।
ಅವಾಪ್ತಂ ಚಾತ್ಮನೋ ಮೇನೇ ಸ ರಾಜಾ ಚಕ್ಷುಷಃ ಫಲಮ್ ॥೨೬॥

ಅವಳನ್ನು ನೋಡಿದ ರಾಜನು ಎಲ್ಲಾ ಮನುಷ್ಯಸ್ತ್ರೀಯರೂ ಸಹ ಅವಳಿಗಿಂತ ಹೀನರೆಂದು ತಿಳಿದು, ತಾನು ಕಣ್ಣುಗಳನ್ನು ಹೊಂದಿದುದ್ದಕ್ಕೆ ತನಗೆ ಫಲವು ದೊರೆಯಿತೆಂದು ತಿಳಿದನು.

ಜನ್ಮಪ್ರಭೃತಿ ಯತ್ಕಿಂಚಿದ್ ದೃಷ್ಟವಾನ್ ಸ ಮಹೀಪತಿಃ ।
ರೂಪಂ ನ ಸದೃಶಂ ತಸ್ಯಾಃ ತರ್ಕಯಾಮಾಸ ಕಿಂಚನ ॥೨೭॥

ಆ ರಾಜನು ಹುಟ್ಟಿದಾಗಿನಿಂದ ಏನೇನು ನೋಡಿದ್ದರೂ, ಅವಳ ರೂಪಕ್ಕೆ ಸದೃಶವಾದ ರೂಪವನ್ನು ಎಂದೂ ನೋಡಿರಲಿಲ್ಲ (ಅವಳ ರೂಪಕ್ಕೆ ಸದೃಶವಾದ ರೂಪವು ಎಲ್ಲಿಯೂ ಇಲ್ಲ) ಎಂದು ಭಾವಿಸಿದನು.

ತಸ್ಯಾಂ ಬದ್ಧಮನಶ್ಚಕ್ಷುಃ ಪಾಶೈರ್ಗುಣಮಯೈಸ್ತದಾ ।
ನಾತಿಚಕ್ರಾಮ ತಂ ದೇಶಂ ಬುಬುಧೇ ನ ಚ ಕಿಂಚನ ॥೨೮॥

ಅವಳ ಗುಣಗಳು ಎಂಬ ಪಾಶಗಳಿಂದ ಕಟ್ಟಲ್ಪಟ್ಟ ಚಕ್ಷುಸ್ಸನ್ನು ಮತ್ತು ಮನಸ್ಸನ್ನು ಹೊಂದಿದ ರಾಜನು ಆ ಪ್ರದೇಶವನ್ನು ಬಿಟ್ಟು ಕದಲಲಿಲ್ಲ. ಅವನಿಗೆ ಬೇರೆ ಯಾವ ವಿಷಯವೂ ತಿಳಿಯಲಿಲ್ಲ.

ಅಸ್ಯಾ ನೂನಂ ವಿಶಾಲಾಕ್ಷ್ಯಾಃ ಸದೇವಾಸುರಮಾನುಷಮ್ ।
ಲೋಕಂ ನಿರ್ಮಥ್ಯ ಧಾತ್ರೇದಂ ರೂಪಮಾವಿಷ್ಕೃತಂ ವರಮ್ ।
ಇತಿ ತಾಂ ತರ್ಕಯಾಮಾಸ ರೂಪದ್ರವಿಣಸಂಪದಾ ॥೨೯॥

ಅವನು ಅವಳ ರೂಪಸಂಪತ್ತನ್ನು ನೋಡಿ ಬ್ರಹ್ಮನು ದೇವಾಸುರ-ಮನುಷ್ಯಲೋಕವನ್ನು ಕಡೆದು ಈ ವಿಶಾಲಾಕ್ಷಿಯ ಶ್ರೇಷ್ಠವಾದ ರೂಪವನ್ನು ನಿರ್ಮಿಸಿದ್ದಾನೆ ಎಂದು ತಿಳಿದನು.

ಕನ್ಯಾಮಸದೃಶೀಂ ಲೋಕೇ ನೃಪಃ ಸಂವರಣಸ್ತದಾ ।
ತಾಂ ಚ ದೃಷ್ಟ್ವೈವ ಕಲ್ಯಾಣೀಂ ಕಲ್ಯಾಣಾಭಿಜನೋ ನೃಪಃ ।
ಜಗಾಮ ಮನಸಾ ಚಿಂತಾಂ ಕಾಮಮಾರ್ಗಣಪೀಡಿತಃ ॥೩೦॥

ಆಗ ಕಲ್ಯಾಣಾಭಿಜನವುಳ್ಳ ಸಂವರಣರಾಜನು ಆ ಕಲ್ಯಾಣಿಯಾದ, ಅಸದೃಶೆಯಾದ ಕನ್ಯೆಯನ್ನು ನೋಡಿದ ತಕ್ಷಣವೇ ಮನಸ್ಸಿನಲ್ಲಿ ಚಿಂತಾಕ್ರಾಂತನಾಗಿ ಕಾಮಬಾಣಗಳಿಂದ ಪೀಡಿತನಾದನು.

ತುದ್ಯಮಾನಃ ಸುತೀವ್ರೇಣ ನೃಪತಿರ್ಮನ್ಮಥಾಗ್ನಿನಾ ।
ಅಪ್ರಗಲ್ಭಃ ಪ್ರಗಲ್ಭಾಂ ತಾಮುವಾಚಾಥ ಯಶಸ್ವಿನೀಮ್ ॥೩೧॥

ತೀವ್ರವಾದ ಮನ್ಮಥಾಗ್ನಿಯಿಂದ ಹಿಂಸಿಸಲ್ಪಡುತ್ತಿದ್ದ ಆ ರಾಜನು ಗಂಭೀರಳಾದ ಮತ್ತು ಯಶಸ್ವಿನಿಯಾದ ಆ ಕನ್ಯೆಯನ್ನು ಕುರಿತು ಅಷ್ಟೇನೂ ಗಂಭೀರವಲ್ಲದ ಮಾತುಗಳನ್ನು ಆಡಿದನು.

ಸಂವರಣಃ

ಕಾಽಸಿ ಕಸ್ಯಾಸಿ ರಂಭೋರು ಕಿಮರ್ಥಂ ಚೇಹ ತಿಷ್ಠಸಿ ।
ಕಥಂ ಚ ನಿರ್ಜನೇಽರಣ್ಯೇ ಚರಸ್ಯೇಕಾ ಶುಚಿಸ್ಮಿತೇ ॥೩೨॥

ರಂಭೋರುವೇ, ನೀನು ಯಾರು? ಯಾರಿಗೆ ಸೇರಿದವಳು? ಇಲ್ಲಿ ಏಕೆ ನಿಂತಿದ್ದೀಯೇ? ಶುಚಿಸ್ಮಿತೆಯೇ, ಈ ನಿರ್ಜನವಾದ ಅರಣ್ಯದಲ್ಲಿ ಒಬ್ಬಳೇ ಏಕೆ ಸಂಚರಿಸುತ್ತಿದ್ದೀಯೇ?

ತ್ವಂ ಹಿ ಸರ್ವಾನವದ್ಯಾಂಗೀ ಸರ್ವಾಭರಣಭೂಷಿತಾ ।
ವಿಭೂಷಣಮಿವೈತೇಷಾಂ ಭೂಷಣಾನಾಮಭೀಪ್ಸಿತಮ್ ॥೩೩॥

ನಿರ್ದುಷ್ಟವಾದ, ಸರ್ವಾವಯವುಳ್ಳವಳೂ, ಸರ್ವಾಭರಣ- ಭೂಷಿತಳಾದ ನೀನು, ನೀನು ಧರಿಸಿರುವ ಆಭರಣಗಳಿಗೆ ಇಷ್ಟವಾದ ಆಭರಣದಂತೆ ಇದ್ದೀಯೆ.

ನ ದೇವೀಂ ನಾಸುರೀಂ ಚೈವ ನ ಯಕ್ಷೀಂ ನ ಚ ಕಿನ್ನರೀಮ್ ।
ನ ಚ ಭೋಗವತೀಂ ಮನ್ಯೇ ನ ಗಂಧರ್ವೀಂ ನ ಮಾನುಷೀಮ್ ॥

ನೀನು ದೇವಿಯಾಗಲೀ, ಆಸುರಿಯಾಗಲೀ, ಕಿನ್ನರಿಯಾಗಲೀ, ಯಕ್ಷಿಯಾಗಲೀ, ಅಪ್ಸರೆಯಾಗಲೀ, ಗಂಧರ್ವಿಯಾಗಲೀ, ಮಾನುಷಿಯಾಗಲೀ,, ನಾಗಕನ್ಯೆಯಾಗಲೀ ಯಾರೂ ಅಲ್ಲವೆಂದು ನಾನು ಭಾವಿಸಿದ್ದೇನೆ.

ಯಾ ಹಿ ದೃಷ್ಟಾ ಮಯಾ ಕಾಶ್ಚಿತ್ ಶ್ರುತಾಶ್ಚಾಪಿ ವರಾಂಗನಾಃ
ನ ತಾಸಾಂ ಸದೃಶೀಂ ಮನ್ಯೇ ತ್ವಾಮಹಂ ಮತ್ತಗಾಮಿನಿ ॥೩೫॥

ಮತ್ತಗಾಮಿನಿಯೇ, ನಾನು ಎಷ್ಟು ವರಾಂಗನೆಯರನ್ನು ನೋಡಿದ್ದೇನೆಯೋ ಅಥವಾ ಕೇಳಿದ್ದೇನೆಯೋ, ನೀನು ಅವರಾರಿಗೂ ಸಮಾನಳಲ್ಲ (ಬಹಳ ಶ್ರೇಷ್ಠಳು) ಎಂದು ಭಾವಿಸಿದ್ದೇನೆ.

ಗಂಧರ್ವಃ

ಏಷ ತಾಂ ಸ ಮಹೀಪಾಲೋ ಬಭಾಷೇ ನ ತು ಸಾ ತದಾ ।
ಕಾಮಾರ್ತಂ ನಿರ್ಜನೇಽರಣ್ಯೇ ಪ್ರತ್ಯಭಾಷತ ಕಿಂಚನ ॥೩೬॥

ಈ ರಾಜನು ಅವಳನ್ನು ಕುರಿತು ಹೀಗೆ ಮಾತನಾಡಿದನು. ಆದರೆ, ನಿರ್ಜನವಾದ ಆ ಅರಣ್ಯದಲ್ಲಿ ಕಾಮಾರ್ತನಾದ ರಾಜನನ್ನು ಕುರಿತು ಅವಳು ಏನನ್ನೂ ಮಾತನಾಡಲಿಲ್ಲ.

ತಥಾ ಲಾಲಪ್ಯಮಾನಸ್ಯ ಪಾರ್ಥಿವಸ್ಯಾಯತೇಕ್ಷಣಾ ।
ಸೌದಾಮಿನೀವ ಚಾಭ್ರೇಷು ತತ್ರೈವಾಂತರಧೀಯತ ॥೩೭॥

ರಾಜನು ಹಾಗೆ ಅಸಂಗತವಾಗಿ ಮಾತನಾಡುತ್ತಿರುವಾಗಲೇ, ದೀರ್ಘನೇತ್ರೆಯಾದ ಅವಳು ಮೋಡದಲ್ಲಿ ಮಿಂಚು ಮಾಯವಾದಂತೆ, ಅಲ್ಲಿಯೇ ಅಂತರ್ಧಾನ ಹೊಂದಿದಳು.

ತಾಮನ್ವಿಚ್ಛನ್ ಸ ನೃಪತಿಃ ಪರಿಚಕ್ರಾಮ ತತ್ ತದಾ ।
ವನಂ ವನಜಪತ್ರಾಕ್ಷೀಂ ಭ್ರಮನ್ನುನ್ಮತ್ತವತ್ ತದಾ ॥೩೮॥

ಆ ರಾಜನು ಆಗ ಆ ಕಮಲಾಕ್ಷಿಯನ್ನು ಹುಡುಕುತ್ತಾ ಹುಚ್ಚನಂತೆ ಕಾಡಿನಲ್ಲಿಯೇ ಅಲೆದಾಡಿದನು.

ಅಪಶ್ಯಮಾನಃ ಸ ತು ತಾಂ ಬಹು ತತ್ರ ವಿಲಪ್ಯ ಚ ।
ನಿಶ್ಚೇಷ್ಟಃ ಕೌರವಶ್ರೇಷ್ಠೋ ಮುಹೂರ್ತಂ ಸ ವ್ಯತಿಷ್ಠತ ॥೩೯॥

ಆ ಕೌರವಶ್ರೇಷ್ಠನು ಅವಳನ್ನು ಕಾಣದೇ ಬಹಳವಾಗಿ ವಿಲಾಪವನ್ನು ಮಾಡಿ ಒಂದು ಮುಹೂರ್ತದ ಕಾಲ ನಿಶ್ಚೇಷ್ಟನಾಗಿ ನಿಂತನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಚತುಃಸಪ್ತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಎಪ್ಪತ್ತೈದನೆಯ ಅಧ್ಯಾಯ

(ಭೂಮಿಯ ಮೇಲೆ ಬಿದ್ದ ಸಂವರಣನ ಬಳಿಗೆ ತಪತಿಯ ಆಗಮನ ಮತ್ತು ಅವರ ಸಂವಾದ)

ಗಂಧರ್ವಃ

ಅಥ ತಸ್ಯಾಮದೃಶ್ಯಾಯಾಂ ನೃಪತಿರ್ಭಾವಮೋಹಿತಃ ।
ಪಾತನಃ ಶತ್ರುಸಂಘಾನಾಂ ಪಪಾತ ಧರಣೀತಳೇ ॥೧॥

ಆಗ ಅವಳು ಅದೃಶ್ಯರಾಗುತ್ತಿರಲು ಶತ್ರುಗಳ ಸಮೂಹವನ್ನು ನೆಲದ ಮೇಲೆ ಉರುಳಿಸುವ ಆ ರಾಜನು ಕಾಮಮೋಹಿತನಾಗಿ ತಾನೇ ನೆಲದ ಮೇಲೆ ಉರುಳಿದನು.

ತಸ್ಮಿನ್ ನಿಪತಿತೇ ಭೂಮಾವಥ ಸಾ ಚಾರುವರ್ಣಿನೀ ।
ಪುನಃ ಪೀನಾಯತಶ್ರೋಣೀ ದರ್ಶಯಾಮಾಸ ತಂ ನೃಪಮ್ ॥೨॥

ರಾಜನು ಹಾಗೆ ಭೂಮಿಯ ಮೇಲೆ ಬೀಳುತ್ತಿರಲು ಆ ಪೀನಾಯತಶ್ರೋಣಿಯಾದ ಸುಂದರಿಯು ಪುನಃ ರಾಜನಿಗೆ ಕಾಣಿಸಿಕೊಂಡಳು.

ಆಬಭಾಷೇऽಥ ಕಲ್ಯಾಣೀ ವಾಚಾ ಮಧುರಯಾ ನೃಪಮ್ ।
ತಂ ಕುರೂಣಾಂ ಕುಲಕರಂ ಕಾಮಾಭಿಹತಚೇತಸಮ್ ॥೩॥

ಆ ಕಲ್ಯಾಣಿಯು ತನ್ನ ಮಧುರವಾದ ಮಾತುಗಳಿಂದ ಕುರುವಂಶ- ವರ್ಧನನಾದ ಕಾಮಮೋಹಿತನಾದ ಆ ರಾಜನನ್ನು ಕುರಿತು ಮಾತನಾಡಿದಳು.

ಉತ್ತಿಷ್ಠೋತ್ತಿಷ್ಠ ಭದ್ರಂ ತೇ ನ ತ್ವಮರ್ಹಸ್ಯರಿಂದಮ ।
ಮೋಹಂ ನೃಪತಿಶಾರ್ದೂಲ ಮೋಘಮಾವಿಷ್ಕೃತಂ ಕೃತಮ್ ॥೪॥

ಅರಿಂದಮನೇ, ನಿನಗೆ ಮಂಗಳವಾಗಲಿ. ಏಳು, ಏಳು. ನೃಪಶಾರ್ದೂಲನೇ, ನೀನು ವ್ಯರ್ಥವಾಗಿ ಮೋಹಕ್ಕೆ ಒಳಗಾಗಲು ಅರ್ಹನಲ್ಲ.

ಗಂಧರ್ವಃ

ಏವಮುಕ್ತಃ ಸ ನೃಪತಿರ್ವಾಚಾ ಮಧುರಯಾ ತದಾ ।
ದದರ್ಶ ವಿಪುಲಶ್ರೋಣೀಂ ತಾಮೇವಾಭಿಮುಖೇ ಸ್ಥಿತಾಮ್ ॥೫॥

ಹೀಗೆ ಮಧುರವಾದ ಮಾತುಗಳಿಂದ ಸಂಬೋಧಿಸಲ್ಪಟ್ಟ ಆ ರಾಜನು ಕಣ್ಣುಗಳನ್ನು ತೆರೆದು ತನ್ನ ಎದುರಿಗೆ ನಿಂತಿದ್ದ ವಿಪುಲಶ್ರೋಣಿಯಾದ ಆ ಸುಂದರಿಯನ್ನೇ ನೋಡಿದನು.

ಅಥ ತಾಮಸಿತಾಪಾಂಗೀಮಾಬಭಾಷೇ ನರಾಧಿಪಃ ।
ಮನ್ಮಥಾಭಿಪರೀತಾತ್ಮಾ ಸಂದಿಗ್ಧಾಕ್ಷರಯಾ ಗಿರಾ ॥೬॥

ಆಗ ಮನ್ಮಥಾಕ್ರಾಂತನಾದ ಆ ರಾಜನು ತೊದಲುವ ನುಡಿಗಳಿಂದ ಆ ಅಸಿತನೇತ್ರೆಯನ್ನು ಕುರಿತು ಮಾತನಾಡಿದನು.

ಸಾಧು ಮಾಮಸಿತಾಪಾಂಗೇ ಕಾಮಾರ್ತಂ ಮತ್ತಕಾಶಿನಿ ।
ಭಜಸ್ವೇಹ ಯಥಾ ನಾಹಂ ಪ್ರಾಣಾನ್ ಜಹ್ಯಾಂ ಶುಚಿಸ್ಮಿತೇ ॥೭॥

ಅಸಿತನೇತ್ರಳೇ, ಮತ್ತಕಾಶಿನಿಯೇ, ಶುಚಿಸ್ಮಿತೆಯೇ, ಕಾಮಾರ್ತನಾದ ನನ್ನನ್ನು, ನಾನು ಪ್ರಾಣವನ್ನು ಬಿಡದಿರುವಂತೆ ಅನುಕೂಲಳಾಗಿ ಭಜಿಸು.

ತ್ವದರ್ಥಂ ಹಿ ವಿಶಾಲಾಕ್ಷಿ ಮಾಮಯಂ ನಿಶಿತೈಃ ಶರೈಃ ।
ಕಾಮಃ ಕಮಲಪತ್ರಾಭೇ ಪ್ರತಿವಿಧ್ಯನ್ ನ ಶಾಮ್ಯತಿ ॥೮॥

ವಿಶಾಲಾಕ್ಷಿಯೇ, ಕಮಲನೇತ್ರೆಯೇ, ನಿನ್ನ ಸಲುವಾಗಿ ನನ್ನನ್ನು ತನ್ನ ಬಾಣಗಳಿಂ
ಪೀಡಿಸುತ್ತಿರುವ ಮನ್ಮಥನು ಶಾಂತನಾಗುತ್ತಿಲ್ಲ.

ಗ್ರಸ್ತಮೇವಮನಾಕ್ರಂದಂ ಭದ್ರೇ ಕಾಮಮಹಾಹಿನಾ ।
ಮಾಂ ಚ ಪೀನಘನಶ್ರೋಣಿ ಸಂಜೀವಯಿತುಮರ್ಹಸಿ ॥೯॥

ಭದ್ರೆಯೇ, ಪೀನಘನಶ್ರೋಣಿಯೇ, ಕಾಮವೆಂಬ ಮಹಾಸರ್ಪದಿಂ
ನಿಶ್ಶಬ್ದವಾಗಿ ಹಿಡಿಯಲ್ಪಟ್ಟ ನನ್ನನ್ನು ನೀನು ಬದುಕಿಸಲು ಅರ್ಹಳಾಗಿದ್ದೀಯೆ.

ತ್ವಯ್ಯಧೀನಾಶ್ಚ ಮೇ ಪ್ರಾಣಾಃ ಕಿನ್ನರೋದ್ಗೀತಭಾಷಿಣಿ ।
ಚಾರುಸರ್ವಾನವದ್ಯಾಂಗಿ ಪದ್ಮೇಂದುಸದೃಶಾನನೇ ॥೧೦॥

ಕಿನ್ನರಭಾಷಿಣಿಯೇ, ನಿರ್ದುಷ್ಟವಾದ ಮತ್ತು ಮನೋಹರವಾದ ಅವಯವಗಳನ್ನು
ಉಳ್ಳವಳೇ, ಪದ್ಮ ಮತ್ತು ಚಂದ್ರರಿಗೆ ಹೋಲುವ ಮುಖವುಳ್ಳವಳೇ, ನನ್ನ ಪ್ರಾಣಗಳು
ನಿನ್ನ ಅಧೀನವಾಗಿವೆ.

ನ ಹ್ಯಹಂ ತ್ವಾಮೃತೇ ಭೀರು ಶಕ್ಷ್ಯೇ ಜೀವಿತುಮಾತ್ಮನಾ ।
ಭಕ್ತಂ ಮಾಮಸಿತಾಪಾಂಗೇ ನ ಪರಿತ್ಯಕ್ತುಮರ್ಹಸಿ ॥೧೧॥

ಭೀರುವೇ, ನೀನಿಲ್ಲದೇ ನಾನು ಬದುಕಲಾರೆ. ಅಸಿತನೇತ್ರೆಯೇ, ನಿನ್ನ ಭಕ್ತನಾದ
ನನ್ನನ್ನು ಪರಿತ್ಯಾಗ ಮಾಡಬೇಡ.

ತ್ವಂ ಹಿ ಮಾಂ ಪ್ರೀತಿಯೋಗೇನ ತ್ರಾತುಮರ್ಹಸಿ ಭಾಮಿನಿ ।
ಗಾಂಧರ್ವೇಣ ಚ ಮಾಂ ಭೀರು ವಿವಾಹೇನೈಹಿ ಸುಂದರಿ ।
ವಿವಾಹಾನಾಂ ಹಿ ವಾಮೋರು ಗಾಂಧರ್ವಃ ಶ್ರೇಷ್ಠ ಉಚ್ಯತೇ ॥೧೨॥

ಭಾಮಿನಿಯೇ, ನೀನು ನಿನ್ನ ಪ್ರೀತಿಯನ್ನು ಕೊಟ್ಟು ನನ್ನನ್ನು ರಕ್ಷಿಸಬೇಕು.
ಸುಂದರಿಯೇ, ಭೀರುವೇ, ಗಾಂಧರ್ವವಿವಾಹ ಪದ್ಧತಿಯಂತೆ ನನ್ನ ಬಳಿಗೆ ಬಾ.
ವಾಮೋರುವೇ, ಎಲ್ಲಾ ವಿವಾಹಗಳಲ್ಲಿ ಗಾಂಧರ್ವವಿವಾಹವು ಶ್ರೇಷ್ಠವೆಂದು
ಹೇಳಲ್ಪಡುತ್ತದೆ.

ಕನ್ಯಾ

ನಾಹಮೀಶಾऽऽತ್ಮನೋ ರಾಜನ್ ಕನ್ಯಾ ಪಿತೃಮತೀ ಹ್ಯಹಮ್ ।
ಮಯಿ ಚೇದಸ್ತಿ ತೇ ಪ್ರೀತಿರ್ಯಾಚಸ್ವ ಪಿತರಂ ಮಮ ॥೧೩॥

ರಾಜನೇ, ನಾನು ಸ್ವತಂತ್ರಳಲ್ಲ. ನಾನು ತಂದೆಗೆ ಅಧೀನಳಾದ ಕನ್ಯೆ. ನಿನಗೆ ನನ್ನ ಮೇಲೆ ಪ್ರೀತಿ ಇದ್ದರೆ, ನನ್ನ ತಂದೆಯನ್ನು ಯಾಚಿಸು.

ಯಥಾ ಹಿ ತೇ ಮಯಾ ಪ್ರಾಣಾಃ ಸಂಭೃತಾಶ್ಚ ನರೇಶ್ವರ ।
ದರ್ಶನಾದೇವ ಭೂಯಸ್ತ್ವಂ ತಥಾ ಪ್ರಾಣಾನ್ ಮಮಾಹರ ॥೧೪॥

ನರೇಶ್ವರನೇ, ನಾನು ಹೇಗೆ ನಿನ್ನ ಪ್ರಾಣಗಳನ್ನು ತುಂಬಿ ನಿನ್ನನ್ನು ರಕ್ಷಿಸಿದ್ದೇನೆಯೋ, ಹಾಗೆಯೇ, ನೀನೂ ಸಹ ನಿನ್ನ ದರ್ಶನ ಮಾತ್ರದಿಂದ ಹೊರಟಿರುವ ನನ್ನ ಪ್ರಾಣಗಳನ್ನು ಆರಕ್ಷಿಸು.

ನ ಚಾಹಮೀಶ ದೇವಸ್ಯ ತಸ್ಮಾನ್ನೃಪತಿಸತ್ತಮ ।
ಸಮೀಪಂ ನೋಪಗಚ್ಛಾಮಿ ನ ಸ್ವತಂತ್ರಾ ಹಿ ಯೋಷಿತಃ ॥೧೫॥

ರಾಜಶ್ರೇಷ್ಠನೇ, ನಾನು ತಂದೆಯಾದ ಸೂರ್ಯದೇವನ ಮೇಲೆ ಅಧಿಕಾರವನ್ನು ಹೊಂದಿದವಳಲ್ಲ. ಆದ್ದರಿಂದ ನಿನ್ನ ಸಮೀಪಕ್ಕೆ ಬರುವುದಿಲ್ಲ. ಸ್ತ್ರೀಯರು ಸ್ವತಂತ್ರರಲ್ಲವಷ್ಟೇ?

ಕಾ ಹಿ ಸರ್ವೇಷು ಲೋಕೇಷು ವಿಶ್ರುತಾಭಿಜನಂ ನೃಪಮ್ ।
ಕನ್ಯಾ ನಾಭಿಲಷೇನ್ನಾಥಂ ಭರ್ತಾರಂ ಭಕ್ತವತ್ಸಲಮ್ ॥೧೬॥

ಯಾವ ಕನ್ಯೆಯು ತಾನೆ ಮೂರುಲೋಕಗಳಲ್ಲಿಯೂ ಪ್ರಖ್ಯಾತವಾದ ಕುಲದಲ್ಲಿ ಜನ್ಮವನ್ನು ಹೊಂದಿರುವ ಭಕ್ತವತ್ಸಲನಾದ ರಾಜನಾದ ನಿನ್ನಂತಹ ನಾಥನನ್ನು ಪತಿಯನ್ನಾಗಿ ಬಯಸುವುದಿಲ್ಲ?

ತಸ್ಮಾದೇವಂಗತೇ ಕಾಲೇ ಯಾಚಸ್ವ ಪಿತರಂ ಮಮ ।
ಆದಿತ್ಯಂ ಪ್ರಣಿಪಾತೇನ ತಪಸಾ ನಿಯಮೇನ ಚ ॥೧೭॥

ಆದ್ದರಿಂದ ಇಂತಹ ಪರಿಸ್ಥಿತಿ ಇರುವಾಗ ನೀನು ನಮಸ್ಕಾರ, ತಪಸ್ಸು ಮತ್ತು ನಿಯಮಗಳಿಂದ ನನ್ನ ತಂದೆಯಾದ ಸೂರ್ಯನನ್ನು ಯಾಚಿಸು.

ಸ ಚೇತ್ ಕಾಮಯತೇ ದಾತುಂ ತವ ಮಾಮರಿಮರ್ದನ ।
ಭವಿಷ್ಯಾಮ್ಯಥ ತೇ ರಾಜನ್ ಸತತಂ ವಶವರ್ತಿನೀ ॥೧೮॥

ಶತ್ರುಮರ್ದನನಾದ ರಾಜನೇ, ಅವನು ನನ್ನನ್ನು ನಿನಗೆ ಕೊಡಲು ಬಯಸಿದರೆ, ಅನಂತರ ನಾನು ನಿನಗೆ ಯಾವಾಗಲೂ ವಶವರ್ತಿನಿಯಾಗಿ ಇರುವೆನು.

ಅಹಂ ಹಿ ತಪತೀ ನಾಮ ಸಾವಿತ್ರ್ಯವರಜಾ ಸುತಾ ।
ಅಸ್ಯ ಲೋಕಪ್ರದೀಪಸ್ಯ ಸವಿತುಃ ಕ್ಷತ್ರಿಯರ್ಷಭ ॥೧೯॥

ಕ್ಷತ್ರಿಯಷರ್ಭನೇ, ನಾನು ಲೋಕಪ್ರದೀಪನಾದ ಸೂರ್ಯದೇವನ ತಪತಿ ಎಂಬ ಮಗಳು, ಸಾವಿತ್ರಿಯ ತಂಗಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ನೂರ ಎಪ್ಪತ್ತಾರನೆಯ ಅಧ್ಯಾಯ

(ತಪತಿಯ ಅಂತರ್ಧಾನ, ಸಂವರಣನ ವಿಲಾಪ ಮತ್ತು ಮೂರ್ಛೆ, ಮಂತ್ರಿಯಿಂದ ಸಮಾಧಾನ, ಸಂವರಣನ ತಪಸ್ಸು, ವಸಿಷ್ಠರ ಆಗಮನ)

ಗಂಧರ್ವಃ

ಏವಮುಕ್ತ್ವಾ ತತಸ್ತೂರ್ಣಂ ಜಗಾಮೋರ್ಧ್ವಮನಿಂದಿತಾ ।
ತಪತೀ ತಪತೀತ್ಯೇವ ವಿಲಲಾಪಾತುರೋ ನೃಪಃ ॥೧॥

ಅನಿಂದಿತಳಾದ ತಪತೀಯು ಹೀಗೆ ಹೇಳಿ ಶೀಘ್ರವಾಗಿ ಊರ್ಧ್ವಮುಖವಾಗಿ ಪ್ರಯಾಣ ಮಾಡಿದಳು. ರಾಜನು ಕಾಮಾತುರನಾಗಿ ತಪತೀ ತಪತೀ ಎಂದು ವಿಲಾಪ ಮಾಡಿದನು.

ಪ್ರಸ್ಖಲಂಶ್ಚಾಸಕೃದ್ ರಾಜಾ ಪುನರುತ್ಥಾಯ ಧಾವತಿ ।
ಧಾವಮಾನಸ್ತು ತಪತೀಮದೃಷ್ಟ್ವೈವ ಮಹೀಪತೇ ॥೨॥

ರಾಜನೇ, ರಾಜನು ತಪತೀಯನ್ನು ಕಾಣದೇ ಓಡಿದನು. ಅನೇಕ ಬಾರಿ ಎಡವಿ ಮತ್ತೆ ಎದ್ದು ಓಡಿದನು.

ಅಮಾತ್ಯಃ ಸಾನುಯಾತ್ರಸ್ತು ಸಂದದರ್ಶ ಮಹಾವನೇ ।
ಕ್ಷಿತೌ ನಿಪತಿತಂ ಕಾಲೇ ಶಕ್ರಧ್ವಜಮಿವೋಚ್ಛ್ರಿತಮ್ ॥೩॥

ಅನುಚರರಿಂದ ಕೂಡಿದ ಅವನ ಅಮಾತ್ಯನು ಕಾಡಿನಲ್ಲಿ ಎತ್ತರವಾದ ಇಂದ್ರಧ್ವಜದಂತೆ ಭೂಮಿಯ ಮೇಲೆ ಬಿದ್ದಿದ್ದ ಅವನನ್ನು ಸರಿಯಾದ ಸಮಯದಲ್ಲಿ ನೋಡಿದನು.

ತಂ ಹಿ ದೃಷ್ಟ್ವಾ ಮಹೇಷ್ವಾಸಂ ನಿರಸ್ತಂ ಪತಿತಂ ಕ್ಷಿತೌ ।
ಬಭೂವ ಸೋಽಸ್ಯ ಸಚಿವಃ ಸಂಪ್ರದೀಪ್ತ ಇವಾಗ್ನಿನಾ ॥೪॥

ಆ ಮಹೇಷ್ವಾಸನಾದ ರಾಜನು ಭೂಮಿಯ ಮೇಲೆ ಬಿದ್ದಿರುವುದನ್ನು ನೋಡಿ ಅವನ ಆ ಸಚಿವನು ಅಗ್ನಿಯಿಂದ ಸಂದೀಪ್ತನಾದಂತೆ ಆದನು.

ತ್ವರಯಾ ಚೋಪಸಂಗೃಹ್ಯ ಸ್ನೇಹಾದಾಗತಸಂಭ್ರಮಃ ।
ತಂ ಸಮುತ್ಥಾಪಯಾಮಾಸ ನೃಪತಿಂ ಕಾಮಮೋಹಿತಮ್ ।
ಭೂತಳಾದ್ ಭೂಮಿಪಾಲೇಶಂ ಪಿತೇವ ಪತಿತಂ ಸುತಮ್ ॥೫॥

ರಾಜನ ಮೇಲಿನ ಸ್ನೇಹದಿಂದ ಗಾಬರಿಯುಳ್ಳವನಾಗಿ ಆ ಮಂತ್ರಿಯು ಕಾಮಮೋಹಿತನಾದ ರಾಜನನ್ನು, ಬಿದ್ದ ಮಗನನ್ನು ತಂದೆಯು ಎತ್ತುವಂತೆ, ತನ್ನ ಕೈಗಳಿಂದ ಹಿಡಿದು ಭೂತಳದಿಂದ ಎಬ್ಬಿಸಿದನು.

ಪ್ರಜ್ಞಯಾ ತಪಸಾ ಚೈವ ವೃದ್ಧಃ ಕೀರ್ತ್ಯಾ ದಮೇನ ಚ ।
ಅಮಾತ್ಯಸ್ತಂ ಸಮುತ್ಥಾಪ್ಯ ಬಭೂವ ವಿಗತಜ್ವರಃ ।
ಉವಾಚ ಚೈನಂ ಕಲ್ಯಾಣಂ ವಾಚಾ ಮಧುರಯೋತ್ಥಿತಮ್ ॥೬॥

ಮಾ ಭೈರ್ಮನುಜಶಾರ್ದೂಲ ಭದ್ರಂ ಚಾಸ್ತು ತವಾನಘ ।
ಕ್ಷುತ್ಪಿಪಾಸಾಶ್ರಮಾರ್ತಂ ತು ತರ್ಕಯಾಮಾಸ ತಂ ನೃಪಮ್ ॥೭॥

ಪ್ರಜ್ಞೆಯಿಂದಲೂ, ತಪಸ್ಸಿನಿಂದಲೂ, ಕೀರ್ತಿಯಿಂದಲೂ ಮತ್ತು ಇಂದ್ರಿಯನಿಗ್ರಹದಿಂದಲೂ ಕೂಡಿದ ವೃದ್ಧನಾದ ಮಂತ್ರಿಯು ಅವನನ್ನು ಎಬ್ಬಿಸಿ ಮನಸ್ಸಿನ ಆತಂಕವನ್ನು ತೊರೆದನು. ಆ ಕಲ್ಯಾಣನಾದ ರಾಜನನ್ನುಕುರಿತು ಮಧುರವಾದ ಮಾತುಗಳಿಂದ ರಾಜಶಾರ್ದೂಲನೇ, ಹೆದರಬೇಡ. ಅನಘನೇ, ನಿನಗೆ ಮಂಗಳವಾಗಲಿ ಎಂದು ಹೇಳಿದನು. ರಾಜನು ಹಸಿವು ಮತ್ತು ಬಾಯಾರಿಕೆಗಳಿಂದ ಬಳಲಿದ್ದಾನೆ ಎಂದೂ ಊಹಿಸಿದನು.

ಪತಿತಂ ಪಾತನಂ ಸಂಖೇ ಶಾತ್ರವಾಣಾಂ ಮಹೀತಳೇ ।
ವಾರಿಣಾऽಥ ಸುಶೀತೇನ ಶಿರಸ್ತಸ್ಯಾವಸೇಚಯತ್ ॥೮॥

ಶತ್ರುಗಳನ್ನು ಯುದ್ಧದಲ್ಲಿ ಉರುಳಿಸುವ ರಾಜನು ತಾನೇ ಭೂತಳದಲ್ಲಿ ಉರುಳಿರುವುದನ್ನು ನೋಡಿ ಮಂತ್ರಿಯು ಅವನ ತಲೆಯ ಮೇಲೆ ಶೀತಲವಾದ ನೀರನ್ನು ಚಿಮುಕಿಸಿದನು.

ಅಸ್ಪೃಶನ್ಮಕುಟಂ ರಾಜ್ಞಃ ಪುಂಡರೀಕಸುಗಂಧಿನಾ ।
ತತಃ ಪ್ರತ್ಯಾಗತಪ್ರಾಣಃ ತದ್ಬಲಂ ಬಲವಾನ್ ನೃಪಃ ।
ಸರ್ವಂ ವಿಸರ್ಜಯಾಮಾಸ ತಮೇಕಂ ಸಚಿವಂ ವಿನಾ ॥೯॥

ಮಂತ್ರಿಯು ಕಮಲದಂತೆ ಸುಗಂಧಯುಕ್ತವಾದ ತನ್ನ ಹಸ್ತದಿಂದ ರಾಜನ ಶಿರಸ್ಸನ್ನು ಮುಟ್ಟಿದನು. ಆಗ ಪ್ರಜ್ಞೆಯನ್ನು ಮರಳಿ ಪಡೆದ ಬಲಿಷ್ಠನಾದ ಆ ರಾಜನು ಆ ಸಚಿವನೊಬ್ಬನನ್ನು ಬಿಟ್ಟು ಉಳಿದ ಸೈನ್ಯವನ್ನೆಲ್ಲಾ ಹಿಂದಕ್ಕೆ ಕಳುಹಿಸಿದನು.

ತತಸ್ತಸ್ಯಾಜ್ಞಯಾ ರಾಜ್ಞೋ ವಿಪ್ರತಸ್ಥೇ ಮಹದ್ಬಲಮ್ ।
ಸ ತು ರಾಜಾ ಗಿರಿಪ್ರಸ್ಥೇ ತಸ್ಮಿನ್ ಪುನರುಪಾವಿಶತ್ ॥೧೦॥

ಆಗ ಆ ರಾಜನ ಆಜ್ಞೆಯಂತೆ ಅವನ ದೊಡ್ಡ ಸೈನ್ಯವು ಅಲ್ಲಿಂದ ಹೊರಟಿತು. ಆ ರಾಜನಾದರೋ ಅಲ್ಲಿಯೇ ಗಿರಿಪ್ರಸ್ಥದಲ್ಲಿ ಪುನಃ ಕುಳಿತನು.

ಸ ತು ತಸ್ಮಿನ್ ಗಿರಿವರೇ ಶುಚಿರ್ಭೂತ್ವಾ ಕೃತಾಂಜಲಿಃ ।
ಆರಿರಾಧಯಿಷುಃ ಸೂರ್ಯಂ ತಸ್ಥಾವೂರ್ಧ್ವಭುಜಃ ಕ್ಷಿತೌ ॥೧೧॥

ಜಗಾಮ ಮನಸಾ ಚೈವಂ ವಸಿಷ್ಠಮೃಷಿಸತ್ತಮಮ್ ।
ಪುರೋಹಿತಮಮಿತ್ರಘ್ನಂ ತದಾ ಸಂವರಣೋ ನೃಪಃ ॥೧೨॥

ಆ ರಾಜನು ಆ ಶ್ರೇಷ್ಠಪರ್ವತದಲ್ಲಿ ಶುಚಿರ್ಭೂತನಾಗಿ ಭುಜಗಳನ್ನು ಮೇಲೆತ್ತಿ ಕೈಗಳನ್ನು ಮುಗಿದು ನೆಲದ ಮೇಲೆ ನಿಂತು ಸೂರ್ಯನನ್ನು ಆರಾಧಿಸಲು ಬಯಸಿದವನಾಗಿ ಮನಸ್ಸಿನಲ್ಲಿ ಕುಲಾಚಾರ್ಯರಾದ, ಶತ್ರುನಾಶಕರಾದ, ಋಷಿಶ್ರೇಷ್ಠರಾದ ವಸಿಷ್ಠರನ್ನು ಸ್ಮರಿಸಿದನು.

ನಕ್ತಂದಿವಮಥೈಕಸ್ಥೇ ಸ್ಥಿತೇ ತಸ್ಮಿನ್ ಜನಾಧಿಪೇ ।
ಅಥಾಜಗಾಮ ವಿಪ್ರರ್ಷಿಸ್ತದಾ ದ್ವಾದಶಮೇಽಹನಿ ॥೧೩॥

ಆ ರಾಜನು ಒಂದೇ ಕಡೆಯಲ್ಲಿ ಕುಳಿತು ಹಗಲೂ ರಾತ್ರಿಯೂ ಏಕಪ್ರಕಾರವಾಗಿ ವಸಿಷ್ಠರನ್ನು ಧ್ಯಾನ ಮಾಡುತ್ತಿರಲು ಹನ್ನೆರಡನೆಯ ದಿವಸ ವಸಿಷ್ಠರು ಅಲ್ಲಿಗೆ ಬಂದರು.

ಸ ವಿದಿತ್ವೈವ ನೃಪತಿಂ ತಪತ್ಯಾ ಕೃತಮಾನಸಮ್ ।
ದಿವ್ಯೇನ ಜಕ್ಷುಷಾ ಜ್ಞಾತ್ವಾ ಭಾವಿತಾತ್ಮಾ ಮಹಾನೃಷಿಃ ॥೧೪॥

ಪರಿಶುದ್ಧಮನಸ್ಸುಳ್ಳ ಆ ಮಹರ್ಷಿಗಳು ತಮ್ಮ ದಿವ್ಯದೃಷ್ಟಿಯಿಂದ ರಾಜನ ಮನಸ್ಸು ತಪತಿಯಿಂದ ಘಾಯಗೊಂಡಿದೆ ಎಂದು ತಿಳಿದೇ ಅಲ್ಲಿಗೆ ಬಂದರು.

ತಥಾ ತು ನಿಯತಾತ್ಮಾನಂ ತಂ ವೈ ನೃಪತಿಸತ್ತಮಮ್ ।
ಆಬಭಾಷೇ ಸ ಧರ್ಮಾತ್ಮಾ ತಸ್ಯೈವಾರ್ಥಚಿಕೀರ್ಷಯಾ ॥೧೫॥

ಆ ರೀತಿಯಲ್ಲಿ ಮನಸ್ಸನ್ನು ನಿಯಂತ್ರಿಸಿ ಧ್ಯಾನಮಾಡುತ್ತಿದ್ದ ರಾಜಶ್ರೇಷ್ಠನನ್ನು ಕುರಿತು ಧರ್ಮಾತ್ಮರಾದ ಅವರು ಅವನ ಕಾರ್ಯವನ್ನೇ ಸಾಧಿಸುವ ಸಲುವಾಗಿ ಅವನನ್ನು ಕುರಿತು ಮಾತನಾಡಿದರು.

ಸ ತಸ್ಯ ಮನುಜೇಂದ್ರಸ್ಯ ಪಶ್ಯತೋ ಭಗವಾನೃಷಿಃ ।
ಊರ್ಧ್ವಮಾಚಕ್ರಮೇ ದ್ರಷ್ಟುಂ ಭಾಸ್ಕರಂ ಭಾಸ್ಕರದ್ಯುತಿಃ ॥೧೬॥

ಸೂರ್ಯನ ತೇಜಸ್ಸುಳ್ಳ ಪೂಜ್ಯರಾದ ಆ ಋಷಿಗಳು, ರಾಜನು ನೋಡುತ್ತಿರುವಂತೆಯೇ ಸೂರ್ಯನನ್ನು ಸಂದರ್ಶಿಸಲು ಊರ್ಧ್ವಮಾರ್ಗದಲ್ಲಿ ಹೊರಟರು.

ಯೋಜನಾನಾಂ ತು ನಿಯುತಂ ಕ್ಷಣಾದ್ ಗತ್ವಾ ತಪೋಧನಃ ।
ಸಹಸ್ರಾಂಶುಂ ತತೋ ವಿಪ್ರಃ ಕೃತಾಂಜಲಿರುಪಸ್ಥಿತಃ ॥೧೭॥

ತಪೋಧನರಾದ ಅವರು ಒಂದು ಕ್ಷಣದಲ್ಲಿ ಒಂದು ಲಕ್ಷ ಯೋಜನಮಾರ್ಗವನ್ನು ಕ್ರಮಿಸಿ ಸಹಸ್ರಾಂಶುವಾದ ಸೂರ್ಯನ ಎದುರಿಗೆ ಕೈ ಮುಗಿದು ನಿಂತರು.

ವಸಿಷ್ಠೋಽಹಮಿತಿ ಪ್ರೀತ್ಯಾ ಸ ಚಾತ್ಮಾನಂ ನ್ಯವೇದಯತ್ ।
ತಮುವಾಚ ಮಹಾತೇಜಾ ವಿವಸ್ವಾನ್ ಮುನಿಸತ್ತಮಮ್ ।
ಮಹರ್ಷೇ ಸ್ವಾಗತಂ ತೇಽಸ್ತು ಕಥಯಸ್ವ ಯಥೇಪ್ಸಿತಮ್ ॥೨೦॥

ಅವರು ಸೂರ್ಯನನ್ನು ಕುರಿತು 'ನಾನು ವಸಿಷ್ಠ' ಎಂದು ತಮ್ಮನ್ನು ನಿವೇದಿಸಿಕೊಂಡರು. ಮಹಾತೇಜಸ್ವಿಯಾದ ಸೂರ್ಯನು ಆ ಋಷಿಶ್ರೇಷ್ಠರನ್ನು ಕುರಿತು

'ಮಹರ್ಷಿಗಳೇ, ನಿಮಗೆ ಸ್ವಾಗತ. ಏನು ಕಾರ್ಯವಾಗಬೇಕಾಗಿದೆ ಎಂದು ಹೇಳಿ' ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಷಟ್‌ಸಪ್ತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ನೂರ ಎಪ್ಪತ್ತೇಳನೆಯ ಅಧ್ಯಾಯ

(ಸೂರ್ಯನಿಂದ ತಪತಿಯನ್ನು ತಂದು ಸಂವರಣನ ಜೊತೆಯಲ್ಲಿ ವಿವಾಹ. ರಾಜನು ವನದಲ್ಲಿಯೇ ವಿಹರಿಸುತ್ತಿರಲು ರಾಜ್ಯದಲ್ಲಿ ಅನಾವೃಷ್ಟಿ. ವಸಿಷ್ಠರಿಂದ ರಾಜನ ಆನಯನ, ಸುಭಿಕ್ಷೆ.)

ಗಂಧರ್ವಃ

ಯೋಜನಾನಾಂ ಚತುಷ್ಷಷ್ಟಿಂ ನಿಮೇಷಾತ್ ತ್ರಿಶತಂ ತಥಾ ।
ಅಶ್ವೈರ್ಗಚ್ಛತಿ ನಿತ್ಯಂ ಯಸ್ತಂ ಪಾರ್ಶ್ವಸ್ಥೋಽಬ್ರವೀದಿದಮ್ ॥೧॥

ಯಾವ ಸೂರ್ಯನು ಒಂದು ನಿಮಿಷದಲ್ಲಿ ತನ್ನ ಕುದುರೆಗಳಿಂದ ಮುನ್ನೂರ ಅರವತ್ತನಾಲ್ಕು ಯೋಜನಗಳನ್ನು ಕ್ರಮಿಸುತ್ತಾನೋ ಅಂತಹ ಸೂರ್ಯನ ಪಾರ್ಶ್ವದಲ್ಲಿ ನಿಂತು ವಸಿಷ್ಠರು ಹೀಗೆ ಹೇಳಿದರು.

ಅಜಾಯ ಲೋಕತ್ರಯಭಾವನಾಯ
ಭೂತಾತ್ಮನೇ ಗೋಪತಯೇ ವೃಷಾಯ ।
ಸೂರ್ಯಾಯ ಸರ್ಗಪ್ರಳಯಾಲಯಾಯ
ನಮೋ ಮಹಾಕಾರುಣಿಕೋತ್ತಮಾಯ ॥೨॥

ಜನ್ಮರಹಿತನಾದ, ಮೂರುಲೋಕಗಳ ಸೃಷ್ಟಿಕರ್ತನಾದ ಸರ್ವಜೀವರ ಸ್ವಾಮಿಯಾದ, ರಶ್ಮಿಗಳಿಗೆ ಒಡೆಯನಾದ ಸರ್ವೋತ್ತಮನಾದ, ಮಹಾಕಾರುಣಿಕನಾದ, ಸೃಷ್ಟಿಸಂಹಾರಗಳಿಗೆ ಕಾರಣನಾದ ಸೂರ್ಯನಿಗೆ ನಮಸ್ಕಾರ.

ವಿವಸ್ವತೇ ಜ್ಞಾನಹೃದಂತರಾತ್ಮನೇ ಜಗತ್ಪ್ರದೀಪಾಯ ಜಗದ್ಧಿತೈಷಿಣೇ ।
ಸ್ವಯಂಭುವೇ ದೀಪ್ತಸಹಸ್ರಚಕ್ಷುಷೇ ಸುರೋತ್ತಮಾಯಾಮಿತ-
ತೇಜಸೇ ನಮಃ ॥೩॥

ಜ್ಞಾನಪೂರ್ಣವಾದ ಮನಸ್ಸುಳ್ಳ, ಜಗತ್ತನ್ನು ಬೆಳಗುವ, ಜಗತ್ತಿನ ಹಿತೈಷಿಯಾದ, ಸ್ವಯಂಭುವಾದ, ಪ್ರಕಾಶಮಾನವಾದ ಸಹಸ್ರಕಣ್ಣುಳ್ಳ, ಅಮಿತ ತೇಜಸ್ವಿಯಾದ, ದೇವಶ್ರೇಷ್ಠನಾದ ವಿವಸ್ವಂತನಿಗೆ ನಮಸ್ಕಾರ. (ಇಲ್ಲಿಯ ವಿಶೇಷಣಗಳನ್ನು ಸೂರ್ಯನಲ್ಲಿಯೂ, ಸೂರ್ಯನ ಅಂತರ್ಯಾಮಿಯಾದ ನಾರಾಯಣನಲ್ಲಿಯೂ ಯಥಾಯೋಗ್ಯವಾಗಿ ಅನ್ವಯ ಮಾಡಿಕೊಳ್ಳಬೇಕು.)

ಸೂರ್ಯಃ

ಸ್ತುತೋಽಹಂ ವರದಸ್ತೇನ ವರಂ ವರಯ ಸುವ್ರತ ।
ಸ್ತುತಿಸ್ತ್ವಯೋಕ್ತಾ ಭಕ್ತಾನಾಂ ಜಪ್ಯೇಯಂ ವರದೋಽಸ್ಮ್ಯಹಮ್ ॥

ಸುವ್ರತನೇ, ನೀನು ನನ್ನನ್ನು ಸ್ತೋತ್ರ ಮಾಡಿದ್ದೀಯೆ. ಆದ್ದರಿಂದ ವರವನ್ನು ಕೇಳು. ನಾನು ವರವನ್ನು ಕೊಡಲು ಸಿದ್ಧನಾಗಿದ್ದೇನೆ. ನೀನು ಮಾಡಿದ ಸ್ತುತಿಯು ಭಕ್ತರು ಜಪವನ್ನು ಮಾಡಲು ಯೋಗ್ಯವಾಗಿದೆ.

ವಸಿಷ್ಠಃ

ಯೈಷಾ ತೇ ತಪತೀ ನಾಮ ಸಾವಿತ್ರ್ಯವರಜಾ ಸುತಾ ।
ತಾಂ ತ್ವಾಂ ಸಂವರಣಸ್ಯಾರ್ಥೇ ವರಯಾಮಿ ವಿಭಾವಸೋ ॥೫॥

ಎಲೈ ಸೂರ್ಯನೇ, ಸಾವಿತ್ರಿಯ ತಂಗಿಯಾದ, ನಿನ್ನ ಮಗಳಾದ ತಪತಿಯನ್ನು ನಾನು ಸಂವರಣನ ಸಲುವಾಗಿ ಬೇಡುತ್ತಿದ್ದೇನೆ.

ಸ ಹಿ ರಾಜಾ ಬೃಹತ್ಕೀರ್ತಿರ್ಧರ್ಮಾರ್ಥವಿದುದಾರಧೀಃ ।
ಯುಕ್ತಃ ಸಂವರಣೋ ಭರ್ತಾ ದುಹಿತುಸ್ತೇ ವಿಹಂಗಮ ॥೬॥

ಎಲೈ ಆಕಾಶಸಂಚಾರಿಯಾದ ಸೂರ್ಯನೇ, ಆ ಸಂವರಣರಾಜನು ಬೃಹತ್ಕೀರ್ತಿಯುಳ್ಳವನೂ, ಧರ್ಮಾರ್ಥಗಳನ್ನು ತಿಳಿದವನೂ, ಉದಾರವಾದ ಬುದ್ಧಿಯುಳ್ಳವನೂ ಆಗಿ ನಿನ್ನ ಮಗಳಿಗೆ ಯೋಗ್ಯನಾದ ಪತಿಯಾಗಿದ್ದಾನೆ.

ಗಂಧರ್ವಃ

ಇತ್ಯುಕ್ತಃ ಸವಿತಾ ತೇನ ದದಾಮೀತ್ಯೇವ ನಿಶ್ಚಿತಃ ।
ಪ್ರತ್ಯಭಾಷತ ತಂ ವಿಪ್ರಂ ಪ್ರತಿನಂದ್ಯ ದಿವಾಕರಃ ॥೭॥

ವಸಿಷ್ಠರ ಈ ಮಾತನ್ನು ಕೇಳಿ ಸೂರ್ಯನು ಸಂತೋಷಪಟ್ಟು ಕೊಡುತ್ತೇನೆ ಎಂದು ನಿಶ್ಚಯಿಸಿ ವಸಿಷ್ಠರನ್ನು ಕುರಿತು ಮಾತನಾಡಿದನು.

ವರಃ ಸಂವರಣೋ ರಾಜ್ಞಾಂ ತ್ವಮೃಷೀಣಾಂ ವರೋ ಮುನೇ ।
ತಪತೀ ಯೋಷಿತಾಂ ಶ್ರೇಷ್ಠಾ ಕಿಮನ್ಯತ್ರಾಪಸರ್ಜನಾತ್ ॥೮॥

ಸಂವರಣನು ರಾಜರಲ್ಲಿ ಶ್ರೇಷ್ಠನಾದವನು. ಮುನಿಯೇ, ನೀವು ಋಷಿಗಳಲ್ಲಿ ಶ್ರೇಷ್ಠರಾದವರು. ತಪತಿಯು ಕನ್ಯೆಯರಲ್ಲಿ ಶ್ರೇಷ್ಠಳಾದವಳು. ಕೊಡುವುದನ್ನು ಬಿಟ್ಟು ಬೇರೆ ಏನು ಮಾಡಲು ಸಾಧ್ಯ.

ಗಂಧರ್ವಃ

ತತಃ ಸರ್ವಾನವದ್ಯಾಂಗೀಂ ತಪತೀಂ ತಪನಃ ಸ್ವಯಮ್ ।
ದದೌ ಸಂವರಣಸ್ಯಾರ್ಥೇ ವಸಿಷ್ಠಾಯ ಮಹಾತ್ಮನೇ ॥೯॥

ಅನಂತರ ನಿರ್ದುಷ್ಟವಾದ, ಸರ್ವಅವಯವಗಳುಳ್ಳ ತಪತಿಯನ್ನು ಸೂರ್ಯನು ತಾನೇ ಸಂವರಣನ ಸಲುವಾಗಿ ಮಹಾತ್ಮರಾದ ವಸಿಷ್ಠರಿಗೆ ಕೊಟ್ಟನು.

ಪ್ರತಿಜಗ್ರಾಹ ತಾಂ ಕನ್ಯಾಂ ಮಹರ್ಷಿಸ್ತಪತೀಂ ತದಾ ।
ವಸಿಷ್ಠೋಽಥ ವಿಸೃಷ್ಟಶ್ಚ ಪುನರೇವಾಜಗಾಮ ಹ ॥೧೦॥

ಯತ್ರ ವಿಖ್ಯಾತವೀರ್ಯಃ ಸ ಕುರೂಣಾಮೃಷಭೋಽಭವತ್ ।
ಸ ರಾಜಾ ಮನ್ಮಥಾವಿಷ್ಟಃ ತದ್ಗತೇನಾಂತರಾತ್ಮನಾ ॥೧೧॥

ಮಹರ್ಷಿಗಳಾದ ವಸಿಷ್ಠರು ಆಗ ಆ ಕನ್ಯೆಯನ್ನು ಸ್ವೀಕರಿಸಿದರು. ಅವರು ಸೂರ್ಯನ ಅನುಮತಿಯನ್ನು ಪಡೆದು ಎಲ್ಲಿ ಕೌರವಶ್ರೇಷ್ಠನಾದ, ವಿಖ್ಯಾತನಾದ ಸಂವರಣರಾಜನು ಅವಳಲ್ಲೇ ಅನುರಕ್ತವಾದ ಮನಸ್ಸಿನಿಂದ ಕಾಮಾವಿಷ್ಟನಾಗಿದ್ದನೋ, ಅಲ್ಲಿಗೆ ಪುನಃ ಬಂದರು.

ದೃಷ್ಟ್ವಾ ತು ದೇವಕನ್ಯಾಂ ತಾಂ ತಪತೀಂ ಚಾರುಹಾಸಿನೀಮ್ ।
ವಸಿಷ್ಠೇನ ಸಹಾಯಾಂತೀಂ ಸ ಹೃಷ್ಟೋಽಭ್ಯಧಿಕಂ ಬಭೌ ॥೧೨॥

ದೇವಕನ್ಯೆಯೂ, ಚಾರುಹಾಸಿನಿಯೂ ಆದ ಅವಳು ವಸಿಷ್ಠರ ಜೊತೆಯಲ್ಲಿ ಬರುತ್ತಿರುವುದನ್ನು ನೋಡಿ ರಾಜನು ಬಹಳ ಸಂತೋಷವನ್ನು ಹೊಂದಿ ಕಾಂತಿಯುಕ್ತನಾದನು.

ಕೃಚ್ಛ್ರಾದ್ ದ್ವಾದಶರಾತ್ರೇಷು ತಸ್ಯ ರಾಜ್ಞಃ ಸಮಾಹಿತೇ ।
ಆಜಗಾಮ ವಿಶುದ್ಧಾತ್ಮಾ ವಸಿಷ್ಠೋ ಭಗವಾನೃಷಿಃ ॥೧೩॥

ಹನ್ನೆರಡು ರಾತ್ರಿಗಳನ್ನು ಆ ರಾಜನು ಕಷ್ಟದಿಂದ ಕಳೆಯುತ್ತಿರಲು ಅವನ ಸಮಾಧಾನಕ್ಕೋಸ್ಕರವಾಗಿ ವಿಶುದ್ಧಾತ್ಮರಾದ ಮತ್ತು ಪೂಜ್ಯರಾದ ವಸಿಷ್ಠಋಷಿಗಳು ಅಲ್ಲಿಗೆ ಬಂದರು.

ತಪಸಾऽऽರಾಧ್ಯ ವಿಧಿವದ್ ದೇವಂ ಗೋಪತಿಮೀಶ್ವರಮ್ ।
ಲೇಭೇ ಸಂವರಣೋ ಭಾರ್ಯಾಂ ವಸಿಷ್ಠಸ್ಯ ಚ ತೇಜಸಾ ॥೧೪॥

ಸಂವರಣನು ಗೋಪತಿಯಾದ ಸೂರ್ಯದೇವನನ್ನು ವಿಧಿವತ್ತಾಗಿ ತಪಸ್ಸಿನಿಂದ ಆರಾಧಿಸಿ ಮತ್ತು ವಸಿಷ್ಠರ ತೇಜಸ್ಸಿನ ಕಾರಣದಿಂದಲೂ ಕೂಡ ಭಾರ್ಯೆಯನ್ನು ಪಡೆದನು.

ತತಸ್ತಸ್ಮಿನ್ ಗಿರಿಶ್ರೇಷ್ಠೇ ದೇವಗಂಧರ್ವಸೇವಿತೇ ।
ಜಗ್ರಾಹ ವಿಧಿವತ್ ಪಾಣಿಂ ತಪತ್ಯಾಃ ಸ ನರರ್ಷಭಃ ॥೧೫॥

ಅನಂತರ ಆ ರಾಜನು ದೇವಗಂಧರ್ವರಿಂದ ಸೇವಿತರಾದ ಆ ಶ್ರೇಷ್ಠವಾದ ಪರ್ವತದಲ್ಲಿ ತಪತಿಯನ್ನು ವಿಧಿಪೂರ್ವಕವಾಗಿ ಪಾಣಿಗ್ರಹಣ ಮಾಡಿದನು.

ವಸಿಷ್ಠೇನಾಭ್ಯನುಜ್ಞಾತಃ ತಸ್ಮಿನ್ನೇವ ಧರಾಧರೇ ।
ಸೋಽಕಾಮಯತ ರಾಜರ್ಷಿರ್ವಿಹರ್ತುಂ ಸಹ ಭಾರ್ಯಯಾ ॥೧೬॥

ಆ ರಾಜರ್ಷಿಯು ವಸಿಷ್ಠರ ಅನುಮತಿಯನ್ನು ಪಡೆದು, ಅದೇ ಪರ್ವತದಲ್ಲಿ ಪತ್ನಿಯ ಜೊತೆಯಲ್ಲಿ ವಿಹರಿಸಲು ಬಯಸಿದನು.

ತತಃ ಪುರೇಷು ರಾಷ್ಟ್ರೇಷು ವಾಹನೇಷು ಬಲೇಷು ಚ ।
ಆದಿದೇಶ ಮಹೀಪಾಲಃ ತಮೇವ ಸಚಿವಂ ತದಾ ॥೧೭॥

ಅನಂತರ ಆ ಮಂತ್ರಿಯನ್ನೇ ಪಟ್ಟಣಗಳಿಗೆ, ರಾಷ್ಟ್ರಕ್ಕೆ, ವಾಹನಗಳಿಗೆ ಮತ್ತು ಸೈನ್ಯಕ್ಕೂ ಅಧಿಪತಿಯನ್ನಾಗಿ ಆ ರಾಜನು ನೇಮಿಸಿದನು.

ನೃಪತಿಂ ತ್ವಭ್ಯನುಜ್ಞಾಪ್ಯ ವಸಿಷ್ಠೋಽಥಾಪಚಕ್ರಮೇ ।
ಸ ಹಿ ರಾಜಾ ಗಿರೌ ತಸ್ಮಿನ್ ವಿಜಹಾರಾಮರೋಪಮಃ ॥೧೮॥

ವಸಿಷ್ಠರು ರಾಜನ ಅನುಮತಿಯನ್ನು ಪಡೆದು ಅಲ್ಲಿಂದ ಹೊರಟುಹೋದರು. ದೇವಸದೃಶನಾದ ಆ ರಾಜನು ಆ ಪರ್ವತದಲ್ಲಿ ವಿಹಾರವನ್ನು ಮಾಡಿದನು.

ತತೋ ದ್ವಾದಶವರ್ಷಾಣಿ ಕಾನನೇಷು ಜಲೇಷು ಚ ।
ರೇಮೇ ತಸ್ಮಿನ್ ಗಿರೌ ರಾಜಾ ಸಹಿತೋ ಭಾರ್ಯಯಾ ಯದಾ ॥೧೯॥

ಅಲ್ಲಿಂದ ಹನ್ನೆರಡು ವರ್ಷಗಳಕಾಲ ಆ ರಾಜನು ತನ್ನ ಪತ್ನಿಯಿಂದ ಒಡಗೂಡಿ ಆ ಪರ್ವತದಲ್ಲಿ, ಕಾಡುಗಳಲ್ಲಿಯೂ, ಜಲಪ್ರವಾಹಗಳಲ್ಲಿಯೂ ವಿಹರಿಸಿದನು.

ತಸ್ಯ ರಾಜ್ಞಃ ಪುರೇ ತಸ್ಮಿನ್ ಸಮಾ ದ್ವಾದಶ ಸರ್ವಶಃ ।
ನ ವವರ್ಷ ಸಹಸ್ರಾಕ್ಷೋ ರಹಿತೇಽಥ ನೃಪೇ ತದಾ ॥೨೦॥

ಆಗ ರಾಜನು ಇಲ್ಲದಿದ್ದ ಕಾರಣದಿಂದ ದೇವೇಂದ್ರನು ರಾಜನ ಆ ಪಟ್ಟಣದಲ್ಲಿ ಹನ್ನೆರಡು ವರ್ಷಗಳಕಾಲ ಎಲ್ಲಿಯೂ ಮಳೆಯನ್ನು ಸುರಿಸಲಿಲ್ಲ.

ತತ್ ಕ್ಷುಧಾರ್ತೈರ್ನಿರಾನಂದೈಃ ಶವಭೂತೈಸ್ತದಾ ನರೈಃ ।
ಅಭವತ್ ಪ್ರೇತರಾಜಸ್ಯ ಪುರಂ ಪ್ರೇತೈರಿವಾವೃತಮ್ ॥೨೧॥

ಹಸಿವಿನಿಂದ ಬಳಲಿ, ಸುಖರಹಿತರಾಗಿ ಶವಗಳಂತೆ ಇದ್ದ ಮನುಷ್ಯರಿಂದ ತುಂಬಿದ ಆ ಪಟ್ಟಣವು ಪ್ರೇತಗಳಿಂದ ತುಂಬಿದ ಯಮಪಟ್ಟಣದಂತೆ ಆಯಿತು.

ತತಸ್ತಂ ತಾದೃಶಂ ದೃಷ್ಟ್ವಾ ಸ ಏವ ಭಗವಾನೃಷಿಃ ।
ಅಭ್ಯಪದ್ಯತ ಧರ್ಮಾತ್ಮಾ ವಸಿಷ್ಠೋ ನರಸತ್ತಮಮ್ ॥೨೨॥

ಆ ನಗರವು ಹಾಗಿರುವುದನ್ನು ನೋಡಿ ಪೂಜ್ಯರಾದ ಮತ್ತು ಧರ್ಮಾತ್ಮರಾದ ವಸಿಷ್ಠರೇ ಪುನಃ ರಾಜನ ಬಳಿಗೆ ಬಂದರು.

ತಂ ಚ ಪಾರ್ಥಿವಶಾರ್ದೂಲಮಾನಯಾಮಾಸ ತತ್ಪುರಮ್ ।
ತಪತ್ಯಾ ಸಹಿತಂ ತತ್ರ ವರ್ಷೇ ದ್ವಾದಶಮೇ ಗತೇ ।
ತತಃ ಪ್ರಹೃಷ್ಟಸ್ತತ್ರಾಸೀದ್ ಯಥಾಕಾಲಂ ಸುರಾರಿಹಾ ॥೨೩॥

ಹನ್ನೆರಡು ವರ್ಷಗಳು ಕಳೆದ ಮೇಲೆ ವಸಿಷ್ಠರು ತಪತಿಯ ಜೊತೆಯಲ್ಲಿ ಆ ರಾಜಶಾರ್ದೂಲನನ್ನು ಪುನಃ ನಗರಕ್ಕೆ ಕರೆಸಿದರು. ಆಗ ಇಂದ್ರನು ಯೋಗ್ಯವಾದ ಕಾಲದಲ್ಲಿ ಸಂತುಷ್ಟನಾದನು.

ತತಸ್ತು ರಾಜಶಾರ್ದೂಲೇ ಪ್ರವಿಷ್ಟೇ ನಗರಂ ಪುನಃ ।
ಪ್ರವವರ್ಷ ಸಹಸ್ರಾಕ್ಷಃ ಸಸ್ಯಾನಿ ಜನಯನ್ ಪ್ರಭುಃ ।
ತತಸ್ತು ರಾಷ್ಟ್ರಂ ಮುಮುದೇ ತತ್ ಪುರಂ ಪರಯಾ ಮುದಾ ॥೨೪॥

ಆ ರಾಜಶಾರ್ದೂಲನು ಪುನಃ ನಗರವನ್ನು ಪ್ರವೇಶಿಸಲು, ಪ್ರಭುವಾದ ಇಂದ್ರನು ಮಳೆಯನ್ನು ಸುರಿಸಿ ಸಸ್ಯಗಳನ್ನು ಅಭಿವೃದ್ಧಿ ಮಾಡಿದನು. ಆಗ ಶುದ್ಧಮನಸ್ಸುಳ್ಳ ರಾಜಶ್ರೇಷ್ಠನಿಂದ ಸತ್ಕೃತವಾದ ಆ ರಾಷ್ಟ್ರವು ಆ ರಾಜನ ನಿಮಿತ್ತದಿಂದಾಗಿ ಬಹಳ ಸಂತೋಷದಿಂದ ಕೂಡಿತು.

ತೇನ ಪಾರ್ಥಿವಮುಖ್ಯೇನ ಭಾವಿತಂ ಭಾವಿತಾತ್ಮನಾ ।
ತತೋ ದ್ವಾದಶ ವರ್ಷಾಣಿ ಪುನರೀಜೇ ಜನಾಧಿಪಃ ।
ಪತ್ನ್ಯಾ ತಪತ್ಯಾ ಸಹಿತೋ ಯಥಾ ಶಚ್ಯಾ ಮರುತ್ಪತಿಃ ॥೨೫॥

ಅನಂತರ ಆ ರಾಜನು ಪುನಃ ಹನ್ನೆರಡು ವರ್ಷಗಳಕಾಲ ತಪತಿಯ ಜೊತೆಯಲ್ಲಿ, ಶಚಿಯ ಜೊತೆಯಲ್ಲಿ ಇಂದ್ರನು ಯಾಗ ಮಾಡಿದಂತೆ, ಯಾಗಗಳನ್ನು ಮಾಡಿದನು.

ಏವಮಾಸೀನ್ಮಹಾಭಾಗ ತಪತೀ ನಾಮ ಪೂರ್ವಿಕಾ ।
ಸೈಷಾ ವೈವಸ್ವತೀ ಕನ್ಯಾ ಲಬ್ಧಾ ಸಂವರಣೇನ ಹ ॥೨೬॥

ಮಹಾನುಭಾವನೇ, ನಿನ್ನ ವಂಶದ ಪೂರ್ವಜಳಾದ ತಪತಿಯು ಹೀಗಿದ್ದಳು. ವಿವಸ್ವಂತನ ಮಗಳಾದ ಅವಳನ್ನು ಸಂವರಣನು ಪಡೆದನಷ್ಟೇ.

ತಸ್ಯಾಂ ಸ ಜನಯಾಮಾಸ ಕುರುಂ ಸಂವರಣೋ ನೃಪಃ ।
ತಪತ್ಯಾಂ ತಪತಾಂ ಶ್ರೇಷ್ಠ ತಾಪತ್ಯಸ್ತ್ವಂ ತತೋಽರ್ಜುನ ॥೨೭॥

ಸಂವರಣರಾಜನು ಆ ತಪತಿಯಲ್ಲಿ ಕುರು ಎಂಬ ಮಗನನ್ನು ಪಡೆದನು. ತಪಸ್ವಿಗಳಲ್ಲಿ ಶ್ರೇಷ್ಠನಾದ ಅರ್ಜುನನೇ, ಆದ್ದರಿಂದ ನೀನು ತಾಪತ್ಯನಾಗಿದ್ದೀಯೆ.

ಕುರೂದ್ಭವಾ ಯತೋ ಯೂಯಂ ಕೌರವಾಃ ಕುರವಸ್ತಥಾ ।
ಪೌರವಾ ಅಜಮೀಢಾಶ್ಚ ಭಾರತಾ ಭರತರ್ಷಭ ।
ತಸ್ಮಾತ್ ತ್ವಾಂ ಕೌರವೇತ್ಯಾಹುಃ ಕುರೂಣಾಂ ಪ್ರಥಿತೇನ ಚ ॥೨೮॥

ಕೌರವರಾದ ನೀವೆಲ್ಲರೂ ಕುರುವಂಶದಲ್ಲಿ ಜನಿಸಿದ ಕಾರಣದಿಂದ ಕುರುಗಳೂ ಹೌದು. ಭರತರ್ಷಭನೇ, ಹಾಗೆಯೇ ಪೌರವರೂ, ಅಜಮೀಢರೂ, ಭಾರತರೂ ಆಗಿದ್ದೀರಿ. ಆದ್ದರಿಂದ ನಿನ್ನನ್ನು ಪ್ರಖ್ಯಾತವಾದ ಕುರುವಂಶದ ನಾಮದಿಂದ ಕೌರವ ಎಂದು ಕರೆಯುತ್ತಾರೆ.

ತಾಪತ್ಯಮಖಿಲಂ ಪ್ರೋಕ್ತಂ ವೃತ್ತಾಂತಂ ತವ ಪೂರ್ವಿಕಮ್ ।
ಪುರೋಹಿತಮುಖಾ ಯೂಯಂ ಭುಂಕ್ಷ್ವಧ್ವಂ ಪೃಥಿವೀಮಿಮಾಮ್ ॥

ನಾನು ನಿನಗೆ ನಿನ್ನ ಪೂರ್ವಿಕಳಾದ ತಪತಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಹೇಳಿದ್ದೇನೆ. ಪುರೋಹಿತರನ್ನು ಮುಂದೆ ಮಾಡಿಕೊಂಡು ನೀವು ಈ ಭೂಮಿಯನ್ನು ಆಳಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಸಪ್ತಸಪ್ತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

ನೂರ ಎಪ್ಪತ್ತೆಂಟನೆಯ ಅಧ್ಯಾಯ

(ಗಂಧರ್ವನಿಂದ ವಿಶ್ವಾಮಿತ್ರೋಪಾಖ್ಯಾನ ಕಥನ. ವಸಿಷ್ಠ ವಿಶ್ವಾಮಿತ್ರರ ವಿರೋಧ, ವಿಶ್ವಾಮಿತ್ರರ ಪರಾಜಯ, ತಪಸ್ಸಿನಲ್ಲಿ ನಿಷ್ಠೆ.)

ವೈಶಂಪಾಯನಃ

ಸ ಗಂಧರ್ವವಚಃ ಶ್ರುತ್ವಾ ತತ್ ತದಾ ಭರತರ್ಷಭ ।
ಅರ್ಜುನಃ ಪರಯಾ ಪ್ರೀತ್ಯಾ ಪೂರ್ಣಚಂದ್ರ ಇವಾಬಭೌ ॥೧॥

ಭರತರ್ಷಭನೇ, ಆಗ ಅರ್ಜುನನು ಗಂಧರ್ವನ ಮಾತನ್ನು ಕೇಳಿ ಬಹಳ ಸಂತೋಷದಿಂದ ಪೂರ್ಣಚಂದ್ರನಂತೆ ಬೆಳಗಿದನು.

ಉವಾಚ ಚ ಮಹಾಪ್ರಾಜ್ಞೋ ಗಂಧರ್ವಂ ಕುರುಸತ್ತಮಃ ।
ಜಾತಕೌತೂಹಲೋಽತೀವ ವಸಿಷ್ಠಸ್ಯ ತಪೋಬಲಾತ್ ॥೨॥

ವಸಿಷ್ಠರ ತಪೋಬಲದಿಂದ ಕುತೂಹಲಗೊಂಡ ಮಹಾಪ್ರಾಜ್ಞನಾದ, ಕುರುಶ್ರೇಷ್ಠನಾದ ಅರ್ಜುನನು ಗಂಧರ್ವನನ್ನು ಕುರಿತು ಹೇಳಿದನು.

ವಸಿಷ್ಠ ಇತಿ ಯಸ್ಯೈತದ್ ಋಷೇರ್ನಾಮ ತ್ವಯೇರಿತಮ್ ।
ಏತದಿಚ್ಛಾಮ್ಯಹಂ ಶ್ರೋತುಂ ಯಥಾವತ್ ತದ್ ಬ್ರವೀತು ಮೇ ॥೩॥

ನೀನು ವಸಿಷ್ಠ ಎಂದು ಒಬ್ಬ ಋಷಿಯ ನಾಮವನ್ನು ಹೇಳಿದೆಯಷ್ಟೇ. ನಾನು ಅದನ್ನು ಯತಾರ್ಥವಾಗಿ ಮತ್ತು ವಿಸ್ತಾರವಾಗಿ ತಿಳಿಯಲು ಬಯಸುತ್ತೇನೆ.

ಸ ಏಷ ಗಂಧರ್ವಪತೇ ಪೂರ್ವೇಷಾಂ ನಃ ಪುರೋಹಿತಃ ।
ಆಸೀದೇತನ್ಮಮಾಚಕ್ಷ್ವ ಕ ಏಷ ಭಗವಾನ್ ಋಷಿಃ ॥೪॥

ಗಂಧರ್ವರಾಜನೇ, ವಸಿಷ್ಠರು ನಮ್ಮ ಪೂರ್ವಿಕರಿಗೆ ಪುರೋಹಿತ- ರಾಗಿದ್ದರು. ಪೂಜ್ಯರಾದ ಈ ಋಷಿಗಳು ಯಾರು ಎಂದು ತಿಳಿಸು.

ಗಂಧರ್ವಃ

ಬ್ರಹ್ಮಣೋ ಮಾನಸಃ ಪುತ್ರೋ ವಸಿಷ್ಠೋ‌ಽರುಂಧತೀಪತಿಃ ।
ಅಜಿತಾವೇತೌ ನರವ್ಯಾಘ್ರ ಅಜಿತಾಃ ಸರ್ವ ಏವ ತೇ ॥೫॥

ಕಾಮಕ್ರೋಧಾವುಭೌ ಯಸ್ಯ ಚರಣೌ ಸಂವವಾಹತುಃ ।
ಯಸ್ತು ನೋಚ್ಛೇದನಂ ಚಕ್ರೇ ಕುಶಿಕಾನಾಮುದಾರಧೀಃ ॥೬॥

ವಸಿಷ್ಠರು ಬ್ರಹ್ಮದೇವರ ಮಾನಸಪುತ್ರರು. ಅವರ ಪತ್ನಿ ಅರುಂಧತಿ. ನರವ್ಯಾಘ್ರನೇ, ಯಾರು ಕಾಮಕ್ರೋಧಗಳನ್ನು ಗೆದ್ದಿಲ್ಲವೋ ಅವರೆಲ್ಲರೂ ಪರಾಜಿತರೇ ಸರಿ. ಆದರೆ, ಕಾಮಕ್ರೋಧಗಳು ವಸಿಷ್ಠರ ಪಾದಸಂವಹನವನ್ನು ಮಾಡುತ್ತಿದ್ದವು. ಉದಾರಬುದ್ಧಿಯುಳ್ಳ ಅವರು ಕುಶಿಕರ ವಂಶವನ್ನು ನಿರ್ಮೂಲನ ಮಾಡಲಿಲ್ಲ.

ವಿಶ್ವಮಿತ್ರಾಪರಾಧೇನ ಧಾರಯನ್ ಮನ್ಯುಮುತ್ತಮಮ್ ।
ಪುತ್ರವ್ಯಸನಸಂತಪ್ತಃ ಶಕ್ತಿಮಾನಪಿ ಯತ್ ಪ್ರಭುಃ ।
ವಿಶ್ವಾಮಿತ್ರವಿನಾಶಾಯ ಮೇನೇ ಕರ್ಮ ನ ದಾರುಣಮ್ ॥೭॥

ವಿಶ್ವಾಮಿತ್ರನು ಮಾಡಿದ ಅಪರಾಧದಿಂದ ಉಂಟಾದ ದೊಡ್ಡ ಕೋಪವನ್ನು ತಡೆದು, ಯಾವ ಕಾರ್ಯವನ್ನು ಮಾಡುವುದಕ್ಕೂ ಶಕ್ತಿ ಇದ್ದರೂ, ಅವರು ಪುತ್ರಶೋಕದಿಂದ ಸಂತಪ್ತರಾಗಿದ್ದರೂ, ವಿಶ್ವಾಮಿತ್ರನ ವಿನಾಶವನ್ನು ಮಾಡಲು ಯಾವ ದಾರುಣವಾದ ಕರ್ಮವನ್ನೂ ಅಭಿಪ್ರಾಯ ಪಡಲಿಲ್ಲ.

ಮೃತಾಂಶ್ಚ ಪುನರಾಹರ್ತುಂ ಶಕ್ತಃ ಪುತ್ರಾನ್ ಯಮಕ್ಷಯಾತ್।
ಕೃತಾಂತಂ ನಾತಿಚಕ್ರಾಮ ವೇಲಾಮಿವ ಮಹೋದಧಿಃ ॥೮॥

ಮೃತರಾದ ಪುತ್ರರನ್ನು ಯಮಲೋಕದಿಂದ ಹಿಂದಕ್ಕೆ ಕರೆತರುವ ಸಾಮರ್ಥ್ಯವಿದ್ದ ಅವರು ಸಮುದ್ರವು ಹೇಗೆ ತೀರವನ್ನು ಮೀರುವುದಿಲ್ಲವೋ ಹಾಗೆ ಯಮನನ್ನು ಎಂದೂ ಮೀರಲಿಲ್ಲ.

ಯಂ ಪ್ರಾಪ್ಯ ವಿಜಿತಾತ್ಮಾನಂ ಮಹಾತ್ಮಾನಂ ನರಾಧಿಪಾಃ ।
ಇಕ್ಷ್ವಾಕವೋ ಮಹೀಪಾಲಾ ಲೇಭಿರೇ ಪೃಥಿವೀಮಿಮಾಮ್ ॥೯॥

ಇಕ್ಷ್ವಾಕುವಂಶದ ಮಹಾರಾಜರು ಅಂತಹ ಮನೋಜಯವುಳ್ಳ ಮಹಾತ್ಮರನ್ನು ಪುರೋಹಿತರನ್ನಾಗಿ ಪಡೆದು ಸಮಗ್ರವಾದ ಭೂಮಿಯನ್ನು ಸಂಪಾದಿಸಿದರು.

ಪುರೋಹಿತವರಂ ಪ್ರಾಪ್ಯ ವಸಿಷ್ಠಮೃಷಿಮುತ್ತಮಮ್।
ಈಜಿರೇ ಕ್ರತುಭಿಶ್ಚಾಪಿ ನೃಪಾಸ್ತೇ ಕುರುನಂದನ ॥೧೦॥

ಕುರುನಂದನನೇ, ಆ ರಾಜರು ವಸಿಷ್ಠರಂತಹ ಶ್ರೇಷ್ಠರಾದ ಋಷಿಗಳನ್ನು ಪುರೋಹಿತರನ್ನಾಗಿ ಪಡೆದು ಅನೇಕ ಯಾಗಗಳನ್ನು ಮಾಡಿದರು.

ಸ ಹಿ ತಾನ್ ಯಾಜಯಾಮಾಸ ಸರ್ವಾನ್ ನೃಪತಿಸತ್ತಮಾನ್ ।
ಮಹರ್ಷಿಃ ಪಾಂಡವಶ್ರೇಷ್ಠ ಬೃಹಸ್ಪತಿರಿವಾಮರಾನ್ ।
ಯಥಾ ವಸಿಷ್ಠೇನ ಸಹ ಸ ಸೌದಾಸಃ ಸುಸಂಗತಃ ।
ರಕ್ಷೋಭಿರ್ವಿಪ್ರಮುಕ್ತಸ್ತು ವಿಶ್ವಾಮಿತ್ರೇಣ ಯೋಜಿತೈಃ ॥೧೧॥

ಪಾಂಡವಶ್ರೇಷ್ಠನೇ, ಬೃಹಸ್ಪತಿಗಳು ದೇವತೆಗಳಿಗೆ ಯಾಗ ಮಾಡಿಸಿದಂತೆ, ಆ ಮಹರ್ಷಿಗಳಾದ ವಸಿಷ್ಠರು ಇಕ್ಷ್ವಾಕುವಂಶದ ರಾಜರುಗಳಿಗೆಲ್ಲಾ ಯಾಗವನ್ನು ಮಾಡಿಸಿದರು. ವಸಿಷ್ಠರ ಜೊತೆಯಲ್ಲಿ ಒಳ್ಳೆಯ ಸಂಬಂಧವನ್ನು ಹೊಂದಿದ್ದ ಸೌದಾಸನು ವಿಶ್ವಾಮಿತ್ರರು ನಿಯೋಜಿಸಿದ ರಾಕ್ಷಸರಿಂದ ವಿಮೋಚನೆಯನ್ನು ಹೊಂದಿದನು.

ತಥಾ ದ್ವಿಜಸಹಾಯಾನ್ ವೈ ನ ಗಂಧರ್ವಾ ನ ರಾಕ್ಷಸಾಃ ।
ಶಕ್ತಾಃ ಪ್ರಾರ್ದಯಿತುಂ ವೀರ ಮನಸಾऽಪಿ ಮಹಾಬಲಾಃ ॥೧೨॥

ಎಲೈ ವೀರನೇ, ಹಾಗೆ ದ್ವಿಜ ಸಹಾಯವುಳ್ಳವರನ್ನು ಮಹಾಬಲಿಷ್ಠರಾದ ಗಂಧರ್ವರಾಗಲೀ, ರಾಕ್ಷಸರಾಗಲೀ, ಮನಸ್ಸಿನಿಂದಲೂ ಕೂಡ ಪೀಡಿಸಲು ಸಮರ್ಥರಲ್ಲ.

ತಸ್ಮಾದ್ ಧರ್ಮಪ್ರಧಾನಾತ್ಮಾ ವೇದಶಾಸ್ತ್ರವಿದೀಪ್ಸಿತಃ ।
ಬ್ರಾಹ್ಮಣೋ ಗುಣವಾನ್ ಕಶ್ಚಿತ್ ಪುರೋಧಾಃ ಪರಿಗೃಹ್ಯತಾಮ್ ॥೧೩॥

ಆದ್ದರಿಂದ ಧರ್ಮಪ್ರಧಾನನಾದವನೂ, ವೇದಶಾಸ್ತ್ರವನ್ನು ತಿಳಿದವನೂ, ಗುಣವಂತನೂ ಆದ, ನಿನಗೆ ಇಷ್ಟವಾದ ಒಬ್ಬ ಬ್ರಾಹ್ಮಣನನ್ನು ಪುರೋಹಿತನನ್ನಾಗಿ ಸ್ವೀಕರಿಸು.

ಕ್ಷತ್ರಿಯೇಣ ತು ಜಾತೇನ ಪೃಥಿವೀಂ ಜೇತುಮಿಚ್ಛತಾ ।
ಪೂರ್ವಂ ಪುರೋಹಿತಃ ಕಾರ್ಯಃ ಪಾರ್ಥ ರಾಜ್ಯವಿವೃದ್ಧಯೇ ॥೧೪॥

ಎಲೈ ಪಾರ್ಥನೇ, ಕ್ಷತ್ರಿಯನಾಗಿ ಜನಿಸಿದವನು ಪೃಥಿವಿಯನ್ನು ಜಯಿಸಲು ಬಯಸಿ ರಾಜ್ಯವನ್ನು ಅಭಿವೃದ್ಧಿ ಮಾಡಲು ಬಯಸಿದರೇ, ಮೊದಲು ಪುರೋಹಿತನನ್ನು ಸಂಪಾದಿಸಬೇಕು.

ಮಹೀಂ ಜಿಹೀರ್ಷತಾ ರಾಜ್ಞಾ ಬ್ರಹ್ಮ ಕಾರ್ಯಂ ಪುರಸ್ಕೃತಮ್ ।
ನಾಬ್ರಹ್ಮಣ್ಯಂ ಭವೇತ್ ಕ್ಷತ್ರಮಬ್ರಹ್ಮಣ್ಯಂ ವಿನಶ್ಯತಿ ।
ಬ್ರಹ್ಮ ಕ್ಷತ್ರೇಣ ಸಂಯುಕ್ತಂ ಕ್ಷತ್ರಂ ಬ್ರಹ್ಮಣಿ ನಿಷ್ಠಿತಮ್ ॥೧೫॥

ಭೂಮಿಯನ್ನು ಗೆಲ್ಲಲು ಹೊರಟ ರಾಜನು ಬ್ರಾಹ್ಮಣನನ್ನು ಮುಂದಿಟ್ಟುಕೊಳ್ಳಬೇಕು. ಕ್ಷತ್ರಿಯಕುಲವು ಯಾವಾಗಲೂ ಬ್ರಾಹ್ಮಣ- ವತ್ಸಲರಾಗದೇ ಇರಬಾರದು. ಬ್ರಾಹ್ಮಣವಾತ್ಸಲ್ಯವನ್ನು ಹೊಂದದ ಕ್ಷತ್ರಿಯಕುಲವು ನಾಶವನ್ನು ಹೊಂದುತ್ತದೆ. ಬ್ರಾಹ್ಮಣಕುಲವು ಕ್ಷತ್ರಿಯ ಕುಲದಿಂದ ಸಂಯುಕ್ತವಾಗಿದೆ. ಕ್ಷತ್ರಿಯಕುಲವು ಬ್ರಾಹ್ಮಣಕುಲವನ್ನು ತನ್ನ ಆಧಾರವನ್ನಾಗಿ ಪಡೆದಿದೆ.

ಅರ್ಜುನಃ

ಕಿಂ ನಿಮಿತ್ತಮಭೂದ್ ವೈರಂ ವಿಶ್ವಾಮಿತ್ರವಸಿಷ್ಠಯೋಃ ।
ವಸತೋರಾಶ್ರಮೇ ರಮ್ಯೇ ಶಂಸ ತತ್ ಸರ್ವವೇಮ ಮೇ ॥೧೬॥

ಮನೋಹರವಾದ ಆಶ್ರಮದಲ್ಲಿ ವಾಸಿಸುವ ವಿಶ್ವಾಮಿತ್ರ ವಸಿಷ್ಠರಿಗೆ ಯಾವ ಕಾರಣದಿಂದ ವೈರವು ಉಂಟಾಯಿತು. ಎಲ್ಲವನ್ನೂ ನನಗೆ ಹೇಳು.

ಇದಂ ವಾಸಿಷ್ಠಮಾಖ್ಯಾನಂ ಪುರಾಣಂ ಪರಿಚಕ್ಷತೇ ।
ಪಾರ್ಥ ಸರ್ವೇಷು ಲೋಕೇಷು ಯಥಾವತ್ ತನ್ನಿಬೋಧ ಮೇ ॥೧೭॥

ಪಾರ್ಥನೇ, ಈ ವಸಿಷ್ಠರ ಕಥೆಯು ಬಹಳ ಹಿಂದಿನಕಾಲದಲ್ಲಿ ನಡೆಯಿತೆಂದು ಎಲ್ಲಾ ಲೋಕಗಳಲ್ಲಿಯೂ ಹೇಳುತ್ತಾರೆ. ಅದನ್ನು ನನ್ನಿಂದ ಸರಿಯಾಗಿ ಕೇಳಿ ತಿಳಿದುಕೋ.

ಕನ್ಯಾಕುಬ್ಜೇ ಮಹಾನಾಸೀತ್ ಪಾರ್ಥಿವೋ ಭರತರ್ಷಭ ।
ಗಾಧೀತಿ ವಿಶ್ರುತೋ ಲೋಕೇ ಸತ್ಯಧರ್ಮಪರಾಯಣಃ ॥೧೮॥

ಭರತರ್ಷಭನೇ, ಕನ್ಯಾಕುಬ್ಜದಲ್ಲಿ ಗಾಧೀ ಎಂದು ಪ್ರಖ್ಯಾತನಾದ ದೊಡ್ಡ ರಾಜನಿದ್ದನು. ಅವನು ಸತ್ಯಧರ್ಮಪರಾಯಣನಾಗಿದ್ದನು.

ತಸ್ಯ ಧರ್ಮಾತ್ಮನಃ ಪುತ್ರಃ ಸಮೃದ್ಧಬಲವಾಹನಃ ।
ವಿಶ್ವಾಮಿತ್ರ ಇತಿ ಖ್ಯಾತೋ ಬಭೂವ ರಿಪುನಾಶನಃ ॥೧೯॥

ಧರ್ಮಾತ್ಮನಾದ ಅವನಿಗೆ ವಿಶ್ವಾಮಿತ್ರನೆಂಬ ಪುತ್ರನು ಜನಿಸಿದನು. ಅವನು ಸಮೃದ್ಧವಾದ ಸೈನ್ಯ ಮತ್ತು ವಾಹನಗಳನ್ನು ಹೊಂದಿದವನಾಗಿ ರಿಪುನಾಶನನೆಂದು ಪ್ರಖ್ಯಾತನಾದನು.

ಸ ಚಚಾರ ಸಹಾಮಾತ್ಯೋ ಮೃಗಯಾಂ ಸುಮಹಾವನೇ ।
ಮೃಗಾನ್ ನಿಘ್ನನ್ ವರಾಹಾಂಶ್ಚ ಚಚಾರ ಮರುಧನ್ವಸು ॥೨೦॥

ಅವನು ಅಮಾತ್ಯರ ಜೊತೆಯಲ್ಲಿ ಒಂದು ದೊಡ್ಡ ಕಾಡಿನಲ್ಲಿ ಒಮ್ಮೆ ಬೇಟೆಯಾಡಿದನು. ಅವನು ಮೃಗಗಳನ್ನೂ, ವರಾಹಗಳನ್ನೂ ಕೊಲ್ಲುತ್ತಾ ಮರುಭೂಮಿಯಲ್ಲಿ ಸಂಚರಿಸಿದನು.

ವ್ಯಾಯಾಮಾರ್ತಸ್ತು ಸ ತದಾ ಮೃಗಲಿಪ್ಸುಃ ಪಿಪಾಸಿತಃ ।
ಆಜಗಾಮ ರಥಿಶ್ರೇಷ್ಠೋ ವಸಿಷ್ಠಸ್ಯಾಶ್ರಮಂ ಪ್ರತಿ ॥೨೧॥

ಮೃಗವನ್ನು ಹಿಡಿಯಲು ಹೋಗಿ ದಣಿದ ರಥಿಶ್ರೇಷ್ಠನಾದ ಅವನು ಬಾಯಾರಿಕೆಯಿಂದ ಕೂಡಿದವನಾಗಿ ವಸಿಷ್ಠರ ಆಶ್ರಮಕ್ಕೆ ಬಂದನು.

ವಸಿಷ್ಠಸ್ತು ಸ ತಂ ದೃಷ್ಟ್ವಾ ರಾಜರ್ಷಿಮತಿಥಿಂ ತದಾ ।
ವಿಶ್ವಾಮಿತ್ರಂ ಸಶಿಷ್ಯೋ ವೈ ಪ್ರತಿಜಗ್ರಾಹ ಪೂಜಯಾ ॥೨೨॥

ವಸಿಷ್ಠರಾದರೋ ಆ ರಾಜರ್ಷಿಯು ಅತಿಥಿಯಾಗಿ ಬಂದದ್ದನ್ನು ನೋಡಿ ತಮ್ಮ ಶಿಷ್ಯರ ಜೊತೆಯಲ್ಲಿ ವಿಶ್ವಾಮಿತ್ರರನ್ನು ಸತ್ಕಾರ ಪೂರ್ವಕವಾಗಿ ಸ್ವೀಕರಿಸಿದರು.

ಪಾದ್ಯೇನಾರ್ಘ್ಯಪ್ರದಾನೇನ ಸ್ವಾಗತೇನ ಚ ತಂ ನೃಪಮ್ ।
ಪ್ರತಿಜಗ್ರಾಹ ಧರ್ಮಾತ್ಮಾ ವನ್ಯೇನ ಹವಿಷಾ ತದಾ ॥೨೩॥

ಧರ್ಮಾತ್ಮರಾದ ಅವರು ಆ ರಾಜನಿಗೆ ಸ್ವಾಗತವನ್ನು ಹೇಳಿ, ಅರ್ಘ್ಯಪಾದ್ಯಗಳನ್ನು ನೀಡಿ, ಕಾಡಿನಲ್ಲಿಸಿಗುವ ಹವಿಷ್ಯ ಪದಾರ್ಥಗಳಿಂದ ಅವರನ್ನು ಸ್ವೀಕರಿಸಿದರು.

ತಸ್ಯೈವ ಕಾಮಧುಗ್ ಧೇನುರ್ವಸಿಷ್ಠಸ್ಯ ಮಹಾತ್ಮನಃ ।
ಉಕ್ತಾ ನಂದಿನಿ ಧತ್ಸ್ವೇತಿ ಸಾ ಕಾಮಾನ್ ದುದುಹೇ ತದಾ ॥೨೪॥

ಮಹಾತ್ಮರಾದ ವಸಿಷ್ಠರ, ಕೇಳಿದುದೆಲ್ಲವನ್ನೂ ಕೊಡುವ ನಂದಿನಿಯು, ನಂದಿನಿ ಕೊಡು ಎಂದು ಹೇಳಿದ ತಕ್ಷಣ ಅಭೀಷ್ಟವಾದ ಎಲ್ಲಾ ವಸ್ತುಗಳನ್ನು ಕೊಟ್ಟಿತು.

ಬಾಷ್ಪಾಢ್ಯಸ್ಯೌದನಸ್ಯಾತ್ರ ರಾಶಯಃ ಪರ್ವತೋಪಮಾಃ ।
ನಿಷ್ಠಾನಾನಿ ಚ ಸೂಪಾಂಶ್ಚ ದಧಿಕುಲ್ಯಾಸ್ತಥೈವ ಚ ॥೨೫॥

ಅಪೂಪಾನ್ ಘೃತಸಂಪೂರ್ಣಾನ್ ಭಕ್ಷ್ಯಾಣಾಂ ರಾಶಯಸ್ತಥಾ ।
ಭೋಜನಾನಿ ಮಹಾರ್ಹಾಣಿ ಗೌಡ್ಯಾನ್ನಾನಿ ಸಹಸ್ರಶಃ ॥೨೬॥

ಇಕ್ಷೂನ್ ಮಧೂನಿ ಲಾಜಾಂಶ್ಚ ಮೈರೇಯಾಂಶ್ಚ ವರಾಸವಾನ್ ।
ವಸ್ತ್ರಾಣಿ ಚ ಮಹಾರ್ಹಾಣಿ ಕಂಬಳಾನಿ ಸಹಸ್ರಶಃ ।
ಗ್ರಾಮ್ಯಾರಣ್ಯೌಷಧೀಶ್ಚೈವ ದುದುಹೇ ಪಯ ಏವ ಚ ॥೨೭॥

ಹಬೆ ಬರುತ್ತಿರುವ ಪರ್ವತದಂತಿರುವ ಅನ್ನರಾಶಿಗಳನ್ನೂ, ಪಾತ್ರೆಗಳಲ್ಲಿರುವ ಸೂಪಗಳನ್ನೂ, ಮೊಸರಿನ ಸರೋವರಗಳನ್ನೂ, ಅಪೂಪಗಳನ್ನೂ, ತುಪ್ಪದಲ್ಲಿಮಾಡಿದ ಭಕ್ಷ್ಯಗಳ ರಾಶಿಗಳನ್ನೂ, ಅನರ್ಘ್ಯವಾದ ಭೋಜನಗಳನ್ನೂ, ಸಹಸ್ರಸಂಖ್ಯೆಯಲ್ಲಿ ಗೂಡೋದನ ಮೊದಲಾದ ಅನ್ನಗಳನ್ನೂ, ಸಕ್ಕರೆ, ಜೇನುತುಪ್ಪ ಅರಳುಗಳನ್ನೂ, ಶ್ರೇಷ್ಠವಾದ ಪಾನದ್ರವ್ಯವಾದ ಮೈರೇಯವನ್ನೂ, ಬೆಲೆಬಾಳುವ ವಸ್ತುಗಳನ್ನು, ಸಹಸ್ರ ಸಂಖ್ಯೆಯಲ್ಲಿದ್ದ ಕಂಬಳಿಗಳನ್ನೂ, ಗ್ರಾಮ ಮತ್ತು ಅರಣ್ಯದ ಔಷಧಿಗಳನ್ನೂ ಮತ್ತು ಹಾಲನ್ನೂ ನೀಡಿತು.

ಷಡ್ರಸಂ ಚಾಮೃತರಸಂ ರಸಾಯನಮನುತ್ತಮಮ್ ।
ಭೋಜನೀಯಾನಿ ಪೇಯಾನಿ ಭಕ್ಷ್ಯಾಣಿ ವಿವಿಧಾನಿ ಚ ।
ಲೇಹ್ಯಾನ್ಯಮೃತಕಲ್ಪಾನಿ ಚೋಷ್ಯಾಣಿ ಚ ತಥಾ ಪುನಃ ॥೨೮॥

ಷಡ್ರಸೋಪೇತವಾದ, ಅಮೃತರಸದಿಂದ ಕುಡಿಯುವ ಶ್ರೇಷ್ಠವಾದ ರಸಾಯನವನ್ನೂ, ಅನೇಕ ಪೇಯಗಳನ್ನೂ, ವಿವಿಧವಾದ ಭಕ್ಷ್ಯಗಳನ್ನೂ, ಅಮೃತದಂತಿದ್ದ ಲೇಹ್ಯ ಮತ್ತು ಚೋಷ್ಯಗಳನ್ನೂ ಪುನಃ ನೀಡಿತು.

ತೈಃ ಕಾಮೈಃ ಸರ್ವಸಂಪನ್ನೈಃ ಪೂಜಿತಃ ಸ ಮಹೀಪತಿಃ ।
ಸಾಮಾತ್ಯಃ ಸಬಲಸ್ತತ್ರ ತುತೋಷ ಸುಭೃಶಂ ತದಾ ॥೨೯॥

ಸರ್ವಸಮೃದ್ಧವಾದ ಆ ಕಾಮಗಳಿಂದ ಸತ್ಕೃತನಾದ ರಾಜನು ತನ್ನ ಅಮಾತ್ಯರು ಮತ್ತು ಸೈನ್ಯದಿಂದೊಡಗೂಡಿ ಬಹಳ ಸಂತೋಷಪಟ್ಟನು.

ಷಡುನ್ನತಾಂ ಸುಪಾರ್ಶ್ವೋರುಂ ತ್ರಿಪೃಥುಂ ಪಂಚಸಂವೃತಾಮ್ ।
ಮಂಡೂಕನೇತ್ರಾಂ ಸ್ವಾಕಾರಾಂ ಪೀನೌಷ್ಠಮನಿಂದಿತಾಮ್ ॥೩೦॥

ಸುವಾಲಧಿಂ ಶಂಕುಕರ್ಣಾಂ ಚಾರುಶೃಂಗೀಂ ಮನೋರಮಾಮ್ ।
ಅಷ್ಟಾಯತಶಿರೋಗ್ರೀವಾಂ ವಿಸ್ಮಿತಃ ಸೋಽಭಿವೀಕ್ಷ್ಯ ತಾಮ್ ।
ಅಭ್ಯನಂದತ್ ಸ ತಾಂ ನಂದೀಂ ವಸಿಷ್ಠಸ್ಯ ಯಶಸ್ವಿನೀಮ್ ॥೩೧॥

ತೊಡೆಗಳು, ಪೃಷ್ಠ, ಲಲಾಟ, ಹಣೆ, ಹಿಣಿಲು, ಶ್ರೇಣಿ ಮತ್ತು ನಾಸಿಕ ಸ್ಥಾನಗಳಲ್ಲಿ ಉನ್ನತವಾಗಿದ್ದಂತಹ, ಒಳ್ಳೆಯ ಪಾರ್ಶ್ವಗಳನ್ನೂ ಮತ್ತು ತೊಡೆಗಳನ್ನೂ ಹೊಂದಿದ್ದಂತಹ, ವಿಸ್ತಾರವಾದ ಲಲಾಟ, ಪೃಷ್ಠ ಮತ್ತು ನೇತ್ರಗಳು ಈ ಮೂರನ್ನು ಹೊಂದಿದ್ದಂತಹ, ನಾಲಿಗೆ, ಹಲ್ಲುಗಳೂ, ಮೂಗು, ಯೋನಿ, ಗೊರಸುಗಳು ಈ ಸ್ಥಾನಗಳಲ್ಲಿ ಚಿಕ್ಕದಾಗಿದ್ದಂತಹ, ಕಪ್ಪೆಯ ನೇತ್ರದಂತೆ ಉಬ್ಬಿದನೇತ್ರವುಳ್ಳ, ಒಳ್ಳೆಯ ಆಕಾರವುಳ್ಳ, ದೊಡ್ಡ ಕೆಚ್ಚಲಿನಿಂದ ಕೂಡಿದ, ಅನಿಂದಿತವಾದ ಒಳ್ಳೆಯ ಬಾಲದಿಂದ ಕೂಡಿದ ಶಂಕುವಿನಿಂತೆ ಕರ್ಣವುಳ್ಳ, ಒಳ್ಳೆಯ ಶೃಂಗಗಳನ್ನು ಹೊಂದಿದ ಮನೋರಮವಾದ ಮೂಗು, ಸಾಸ್ನಾ (ಗಂಗೆದೊಗಲು), ಮುಖ, ಬಾಲ, ಕಾಲುಗಳು, ಗುಹ್ಯ, ಧ್ವನಿ ಮತ್ತು ಆಕಾರ ಈ ಎಂಟು ಸ್ಥಾನಗಳಲ್ಲಿ ದೀರ್ಘವಾಗಿದ್ದ, ದೀರ್ಘವಾದ ಶಿರಸ್ಸನ್ನೂ

ಮತ್ತು ಕತ್ತನ್ನೂ ಹೊಂದಿದ್ದ ವಸಿಷ್ಠರ ಯಶಸ್ವಿನಿಯಾದ ಆ ಗೋವನ್ನು ನೋಡಿ ವಿಸ್ಮಿತನಾಗಿ ಆ ಗೋವನ್ನು ಅಭಿನಂದಿಸಿದನು.

ಅಬ್ರವೀಚ್ಚ ಭೃಶಂ ತುಷ್ಟೋ ವಿಶ್ವಾಮಿತ್ರ ಋಷಿಂ ತದಾ ।
ಅರ್ಬುದೇನ ಗವಾಂ ಬ್ರಹ್ಮಂಸ್ತಥಾ ರಾಜ್ಯೇನ ವಾ ಪುನಃ ।
ಬ್ರಹ್ಮನ್ನಿಮಾಂ ಪ್ರಯಚ್ಛಸ್ವ ಭುಂಕ್ಷ್ವ ರಾಜ್ಯಂ ಮಹಾಮುನೇ ॥೩೨॥

ಬಹಳ ಸಂತೋಷಗೊಂಡ ವಿಶ್ವಾಮಿತ್ರನು ಆಗ ವಸಿಷ್ಠರನ್ನು ಕುರಿತು ಹೇಳಿದನು. ಬ್ರಾಹ್ಮಣರೇ, ಅರ್ಬುದ ಗೋವುಗಳನ್ನಾಗಲೀ ಅಥವಾ ನನ್ನ ರಾಜ್ಯವನ್ನೇ ಆಗಲಿ ಕೊಡುತ್ತೇನೆ. ಈ ಗೋವನ್ನು ನನಗೆ ಕೊಡಿ. ಮಹರ್ಷಿಗಳೇ, ನನ್ನ ರಾಜ್ಯವನ್ನು ನೀವೇ ಭೋಗಿಸಿ ಎಂದು ಹೇಳಿದನು.

ವಸಿಷ್ಠಃ

ದೇವತಾऽತಿಥಿಪಿತೃಥೇ೯ ಯಾಜ್ಯಾರ್ಥೇ೯ ಚ ಪಯಸ್ವಿನೀ ।
ಅದೇಯಾ ನಂದಿನೀ ಚೇಯಂ ರಾಜ್ಯೇನಾಪಿ ತವಾನಘ ॥೩೩॥

ಈ ಹಾಲನ್ನು ಕೊಡುವ ನಂದಿನಿ ಗೋವು, ದೇವತಾತಿಥಿ ಪಿತೃಗಳಿಗೋಸ್ಕರವಾಗಿ ಮತ್ತು ಹೋಮದ್ರವ್ಯಗಳಿಗೋಸ್ಕರವಾಗಿ ಇದೆ. ಇದನ್ನು ಯಾರಿಗೂ ಕೊಡುವಂತಿಲ್ಲ. ಅನಘನೇ, ನಿನ್ನ ರಾಜ್ಯಕ್ಕೋಸ್ಕರವಾಗಿಯೂ ನಾನು ಇದನ್ನು ಕೊಡುವುದಿಲ್ಲ.

ವಿಶ್ವಾಮಿತ್ರಃ

ರತ್ನಂ ಹಿ ಭಗವನ್ನೇತದ್ ರತ್ನಹಾರೀ ಚ ಪಾರ್ಥಿವಃ ।
ಕ್ಷತ್ರಿಯೋऽಹಂ ಭವಾನ್ ವಿಪ್ರಸ್ತಪಃಸ್ವಾಧ್ಯಾಯಸಾಧನಃ ॥೩೪॥

ಪೂಜ್ಯರೇ, ಈ ಗೋವು ಒಂದು ರತ್ನ. ರಾಜನನ್ನು ರತ್ನಹಾರೀ ಎಂದು ಹೇಳುತ್ತಾರೆ. ನಾನು ಕ್ಷತ್ರಿಯ. ತಾವು ಸ್ವಾಧ್ಯಾಯನಿರತರಾದ ಬ್ರಾಹ್ಮಣರು.

ಬ್ರಾಹ್ಮಣೇಷು ಕುತೋ ವೀರ್ಯಂ ಪ್ರಶಾಂತೇಷು ಧೃತಾತ್ಮಸು ।
ಅರ್ಬುದೇನ ಗವಾಂ ಯಸ್ತ್ವಂ ನ ದದಾಸಿ ಮಮೇಪ್ಸಿತಾಮ್ ।
ಸ್ವಧರ್ಮಂ ನ ಪ್ರಹಾಸ್ಯಾಮಿ ಸ ನೇಷ್ಯೇ ತೇ ಬಲೇನ ಗಾಮ್ ॥೩೫॥

ಪ್ರಶಾಂತರಾದ ಮತ್ತು ದಾಂತರಾದ ಬ್ರಾಹ್ಮಣರಲ್ಲಿ ಪರಾಕ್ರಮವು ಎಲ್ಲಿಂದ ಬರಬೇಕು. ನೀವು ನನಗೆ, ನನಗೆ ಇಷ್ಟವಾದ ಈ ಗೋವನ್ನು ಅರ್ಬುದ ಗೋವುಗಳ ಸಲುವಾಗಿಯೂ ಕೊಡದಿದ್ದರೇ, ನಾನು ನನ್ನ ಧರ್ಮವನ್ನು ಬಿಡುವುದಿಲ್ಲ. ನನ್ನ ಬಲದಿಂದ ಈ ಗೋವನ್ನು ತೆಗೆದುಕೊಂಡು ಹೋಗುವೆನು.

ಕ್ಷತ್ರಿಯೋಽಸ್ಮಿ ನ ವಿಪ್ರೋಽಹಂ ಬಾಹುವೀರ್ಯೋಽಸ್ಮಿ ಧರ್ಮತಃ ।
ತಸ್ಮಾದ್ ಭುಜಬಲೇನೇಮಾಂ ಹರಿಷ್ಯಾಮೀಹ ಪಶ್ಯತಃ ॥೩೬॥

ನಾನು ಕ್ಷತ್ರಿಯ. ಬ್ರಾಹ್ಮಣನಲ್ಲ. ಧರ್ಮದಿಂದಲೇ ನಾನು ಬಾಹುವೀರ್ಯವುಳ್ಳವನು. ಆದ್ದರಿಂದ ನೀವು ನೋಡುತ್ತಿರುವಂತೆಯೇ, ನನ್ನ ಭುಜಬಲದಿಂದ ಈ ಗೋವನ್ನು ಕರೆದುಕೊಂಡು ಹೋಗುವೆನು.

ವಸಿಷ್ಠಃ

ಅತ್ರ ಹವ್ಯಂ ಚ ಕವ್ಯಂ ಚ ಪ್ರಾಣಯಾತ್ರಾ ತಥೈವ ಚ ।
ಆಯತ್ತಮಗ್ನಿಹೋತ್ರಂ ಚ ಆತಿಥ್ಯಂ ಚ ನ ಸಂಶಯಃ ॥೩೭॥

ಹವ್ಯಕವ್ಯಗಳು ಹಾಗೆಯೇ ಜೀವನಯಾತ್ರೆ, ಅಗ್ನಿಹೋತ್ರ ಮತ್ತು ಆತಿಥ್ಯಗಳು ನಿಸ್ಸಂಶಯವಾಗಿ ಈ ಧೇನುವನ್ನು ಅವಲಂಬಿಸಿವೆ.

ಬಹುನಾ ಕಿಂ ಪ್ರಲಾಪೇನ ನ ದಾಸ್ಯೇ ಕಾಮದೋಹಿನೀಮ್ ।
ಬಲಸ್ಥಶ್ಚಾಪಿ ರಾಜಾ ಚ ವೀರ್ಯವಾಂಶ್ಚ ನೃಪೋತ್ತಮ ।
ಯಥೇಚ್ಛಸಿ ತಥಾ ಕ್ಷಿಪ್ರಂ ಕುರು ತ್ವಂ ಮಾ ವಿಚಾರಯ ॥೩೮॥

ಹೆಚ್ಚು ಮಾತಾಡಿ ಪ್ರಯೋಜನವೇನು. ಇಷ್ಟವಾದುದನ್ನೆಲ್ಲಾ ಕೊಡುವ ಈ ಗೋವನ್ನು ನಾನು ಕೊಡುವುದಿಲ್ಲ. ನೃಪೋತ್ತಮನೇ, ಬಲಿಷ್ಠನೂ ಪರಾಕ್ರಮಶಾಲಿಯೂ ಆದ ರಾಜನಾದ ನೀನು ಶೀಘ್ರವಾಗಿ ನಿನ್ನ ಮನಸ್ಸಿಗೆ ಬಂದಂತೆ ಮಾಡು. ವಿಚಾರ ಮಾಡಬೇಡ.

ಗಂಧರ್ವಃ

ಏವಮುಕ್ತಸ್ತದಾ ಪಾರ್ಥ ವಿಶ್ವಾಮಿತ್ರೋ ಬಲಾದಿವ ।
ಹಂಸಚಂದ್ರಪ್ರತೀಕಾಶಾಂ ನಂದಿನೀಂ ವೈ ಜಹಾರ ಗಾಮ್ ॥೩೯॥

ಪಾರ್ಥನೇ, ವಸಿಷ್ಠರು ಹೀಗೆ ಹೇಳುತ್ತಿರಲು ವಿಶ್ವಾಮಿತ್ರನು ಹಂಸದಂತೆ, ಚಂದ್ರನಂತೆ ಶುಭ್ರವಾಗಿದ್ದ ಆ ನಂದಿನಿಯನ್ನು ತನ್ನ ಬಲದಿಂದ ಎಳೆದನು.

ಸಾ ತದಾ ಹ್ರಿಯಮಾಣಾऽಪಿ ವಿಶ್ವಾಮಿತ್ರಬಲೈರ್ಬಲಾತ್ ।
ಕಶಾದಂಡಪ್ರಹಾರೈಶ್ಚ ಕಾಲ್ಯಮಾನಾ ಇತಸ್ತತಃ ॥೩೯॥

ಹ್ರಿಯಮಾಣಾ ತಥಾ ತೇನ ವಸಿಷ್ಠಸ್ಯಾಥ ನಂದಿನೀ ।
ಉದ್ಯಮ್ಯಾಭಿಮುಖೀ ಪಾರ್ಥ ತಸ್ಥೌ ಭಗವದುನ್ಮುಖೀ ॥೪೦॥

ವಿಶ್ವಾಮಿತ್ರನ ಸೈನ್ಯದಿಂದ ಬಲಾತ್ಕಾರದಿಂದ ಎಳೆಯಲ್ಪಡುತ್ತಿದ್ದರೂ, ಚಾವಟಿ ಮತ್ತು ದೊಣ್ಣೆಗಳ ಹೊಡೆತದಿಂದ ಪೀಡಿಸಲ್ಪಟ್ಟು ಈ ಕಡೆ ಮತ್ತು ಆ ಕಡೆಗಳಲ್ಲಿ ಎಳೆಯಲ್ಪಡುತ್ತಿದ್ದರೂ ವಸಿಷ್ಠರ ಗೋವಾದ ಆ ನಂದಿನಿಯು ಆಗ ತಿರುಗಿ ವಸಿಷ್ಠರಿಗೆ ಅಭಿಮುಖವಾಗಿ ಮುಖವನ್ನು ಎತ್ತಿ ನಿಂತಿತು.

ಭೃಶಂ ಸಂತಪ್ಯಮಾನಾऽಪಿ ನಾಜಗಾಮಾಶ್ರಮಾತ್ ತತಃ ।
ಆಶ್ರಮಾನ್ನೈವ ಗಚ್ಛಂತೀ ಹಂಭಾರಾವೈರ್ನನಾದ ಚ ॥೪೧॥

ಪಾರ್ಥನೇ, ಬಹಳ ತಾಪಗಳಿಂದ ಬಳಲುತ್ತಿದ್ದರೂ, ಅದು ಆಶ್ರಮವನ್ನು ಬಿಟ್ಟು ಕದಲಲಿಲ್ಲ. ಆಶ್ರಮವನ್ನು ಬಿಟ್ಟು ಚಲಿಸದೆ, ಅಂಬಾ ಶಬ್ದಗಳಿಂದ ಅದು ನಾದವನ್ನು ಮಾಡಿತು.

ಸಾ ತು ತೇಷಾಂ ಬಲಾನ್ನಂದೀ ಬಲಾನಾಂ ಭರತರ್ಷಭ ।
ವಿಶ್ವಾಮಿತ್ರಭಯೋದ್ವಿಗ್ನಾ ವಸಿಷ್ಠಂ ಸಮುಪಾಗತಮತ್ ॥೪೨॥

ಭರತರ್ಷಭನೇ, ವಿಶ್ವಾಮಿತ್ರನ ಭಯದಿಂದಲೂ, ಸೈನ್ಯದ ಬಲದಿಂದಲೂ, ಉದ್ವಿಗ್ನಳಾದ ನಂದಿನಿಯು ವಸಿಷ್ಠರನ್ನು ಸಮೀಪಿಸಿತು.

ವಸಿಷ್ಠಃ

ಶೃಣೋಮಿ ತೇ ರವಂ ಭದ್ರೇ ರುದಂತ್ಯಾ ವೈ ಮುಹುರ್ಮುಹುಃ ।
ಬಲಾದ್ ಹ್ರಿಯಸಿ ಮೇ ನಂದಿ ಕ್ಷಮಾವಾನ್ ಬ್ರಹ್ಮಣೋ ಹ್ಯಹಮ್ ॥೪೩॥

ಮಂಗಳಸ್ವರೂಪಳೇ, ಮತ್ತೆ ಮತ್ತೆ ಅಳುತ್ತಿರುವ ನಿನ್ನ ಶಬ್ದವನ್ನು ಕೇಳುತ್ತಿದ್ದೇನೆ. ನಂದಿನಿ, ನಿನ್ನನ್ನು ಬಲಾತ್ಕಾರದಿಂದ ತೆಗೆದುಕೊಂಡು ಹೋಗುತ್ತಿದ್ದಾರೆ. ನಾನು ಕ್ಷಮೆಯುಳ್ಳ ಬ್ರಾಹ್ಮಣ.

ನಂದಿನೀ

ಪಾಷಾಣದಂಡಾಭಿಹತಾಂ ಕ್ರಂದಂತೀಂ ಮಾಮನಾಥವತ್ ।
ವಿಶ್ವಾಮಿತ್ರತಪೋದಿಗ್ಧಾಂ ಭಗವಾನ್ ಕಿಮುಪೇಕ್ಷಸೇ ॥೪೪॥

ಪೂಜ್ಯರೇ, ಕಲ್ಲುಗಳಿಂದಲೂ ಮತ್ತು ದೊಣ್ಣೆಗಳಿಂದಲೂ ಹೊಡೆಯಲ್ಪಟ್ಟು ಅನಾಥಳಂತೆ ಮೊರೆಯಿಡುತ್ತಿರುವ ವಿಶ್ವಾಮಿತ್ರನು ಕೊಡುವ ತಾಪಗಳಿಂದ ಉದ್ವಿಗ್ನಳಾದ ನನ್ನನ್ನು ಉದಾಸೀನ ಮಾಡುತ್ತೀರಾ?

ಗಂಧವಃ

ಏವಂ ತಸ್ಯಾಂ ತಥಾ ಪಾರ್ಥ ಧರ್ಷಿತಾಯಾಂ ಮಹಾಮುನಿಃ ।
ನ ಚಾಕ್ಷುಭ್ಯತ ನ ಧೈರ್ಯಾಚ್ಚ ವಿಚಚಾಲ ಸಮಾದಧೇ ॥೪೫॥

ಪಾರ್ಥನೇ, ಹೀಗೆ ನಂದಿನಿಯು ಅಪಮಾನಕ್ಕೆ ಒಳಗಾದಾಗಲೂ, ಆ ಮಹರ್ಷಿಗಳು ಕ್ಷೋಭೆಯನ್ನು ಹೊಂದಲಿಲ್ಲ. ಧೈರ್ಯವನ್ನೂ ಕಳೆದುಕೊಳ್ಳಲಿಲ್ಲ. ಮನಸ್ಸಿನಲ್ಲಿ ಸಮಾಧಾನದಿಂದಲೇ ಇದ್ದರು.

ವಸಿಷ್ಠಃ

ಕ್ಷತ್ರಿಯಾಣಾಂ ಬಲಂ ವೀರ್ಯಂ ಬ್ರಾಹ್ಮಣಾನಾಂ ಬಲಂ ಕ್ಷಮಾ ।
ಕ್ಷಮಾ ಮಾಂ ಭಜತೇ ಯಸ್ಮಾದ್ ಗಮ್ಯತಾಂ ಯದಿ ರೋಚತೇ ॥೪೬॥

ಕ್ಷತ್ರಿಯರಿಗೆ ಪರಾಕ್ರಮವು ಬಲ. ಬ್ರಾಹ್ಮಣರಿಗೆ ಕ್ಷಮೆಯೇ ಬಲ. ನನ್ನನ್ನು ಕ್ಷಮೆಯು ಆವರಿಸಿದೆ. ಆ ಕಾರಣದಿಂದ ನಿನಗೆ ಇಷ್ಟವಿದ್ದರೇ ಹೋಗು.

ನಂದಿನೀ

ಕಿಂ ನು ತ್ಯಕ್ತಾಽಸ್ಮಿ ಭಗವನ್ ಯದೇವಂ ಮಾಂ ಪ್ರಭಾಷಸೇ ।
ನ ತ್ಯಕ್ತಾಽಹಂ ತ್ವಯಾ ಬ್ರಹ್ಮನ್ನ ಶಕ್ಯಾ ನಯಿತುಂ ಬಲಾತ್ ॥೪೭॥

ಪೂಜ್ಯರೇ, ನೀವು ಹೀಗೆ ಮಾತನಾಡುತ್ತಿರುವುದರಿಂದ ನನ್ನನ್ನು ಪರಿತ್ಯಾಗ ಮಾಡಿದ್ದೀರಾ. ಬ್ರಾಹ್ಮಣರೇ, ನೀವು ನನ್ನನ್ನು ಪರಿತ್ಯಾಗ ಮಾಡದಿದ್ದರೆ ನನ್ನನ್ನು ಯಾರೂ ತಮ್ಮ ಬಲದಿಂದ ಕರೆದುಕೊಂಡು ಹೋಗಲು ಸಾಧ್ಯವಿಲ್ಲ.

ವಸಿಷ್ಠಃ

ನ ತ್ವಾಂ ತ್ಯಜಾಮಿ ಕಲ್ಯಾಣಿ ಸ್ಥೀಯತಾಂ ಯದಿ ಶಕ್ಯತೇ ।
ದೃಢೇನ ದಾಮ್ನಾ ಬದ್ಧ್ವೈವ ವತ್ಸಸ್ತೇ ಹ್ರಿಯತೇ ಬಲಾತ್ ।
ಯೇನ ಕೇನಾಪ್ಯುಪಾಯೇನ ತ್ವಯಾ ವತ್ಸೋ ನಿವಾರ್ಯತಾಮ್ ॥೪೮॥

ಕಲ್ಯಾಣಿಯೇ, ನಾನು ನಿನ್ನನ್ನು ಪರಿತ್ಯಾಗ ಮಾಡುತ್ತಿಲ್ಲ. ಸಾಧ್ಯವಾದರೇ ನೀನು ಇಲ್ಲಿಯೇ ಇರು. ನಿನ್ನ ಕರುವನ್ನು ಬಲವಾದ ಹಗ್ಗದಿಂದ ಕಟ್ಟಿ ಬಲಾತ್ಕಾರದಿಂದ ಎಳೆದುಕೊಂಡು ಹೋಗುತ್ತಿದ್ದಾರೆ. ಯಾವ ಉಪಾಯ- ದಿಂದಲಾದರೂ ನೀನು ನಿನ್ನ ಕರುವನ್ನು ರಕ್ಷಿಸು.

ಗಂಧರ್ವಃ

ಸ್ಥೀಯತಾಮಿತಿ ತಚ್ಛ್ರುತ್ವಾ ವಸಿಷ್ಠಸ್ಯ ಯಶಸ್ವಿನೀ ।
ಊರ್ಧ್ವಾಂಚಿತಶಿರೋಗ್ರೀವಾ ಪ್ರಭಾವಾಚ್ಚಾರುದರ್ಶನಾ ॥೪೯॥

ಕ್ರೋಧರಕ್ತೇಕ್ಷಣಾ ಸಾ ಗೌಃ ಹಂಭಾರವಘನಸ್ವನೈಃ ।
ವಿಶ್ವಾಮಿತ್ರಸ್ಯ ತತ್ ಸೈನ್ಯಂ ವ್ಯದ್ರಾವಯತ ಸರ್ವಶಃ ॥೫೦॥

ಇಲ್ಲಿಯೇ ಇರು ಎಂಬ ವಸಿಷ್ಠರ ಮಾತನ್ನು ಕೇಳಿ ಮನೋಹರವಾದ ಯಶಸ್ವಿನಿಯಾದ ಆ ಗೋವು ತನ್ನ ಕತ್ತನ್ನು ಮತ್ತು ಶಿರಸ್ಸನ್ನು ಮೇಲ್ಮುಖವಾಗಿ ಮಾಡಿ, ಕೆಂಪಾದ ಕಣ್ಣುಗಳನ್ನು ಹೊಂದಿ, ತನ್ನ ಅಂಭಾರವದ ಘನನಾದಗಳಿಂದ ಮತ್ತು ತನ್ನ ಪ್ರಭಾವದಿಂದ ವಿಶ್ವಾಮಿತ್ರನ ಆ ಸೈನ್ಯವನ್ನು ಎಲ್ಲ ಕಡೆಗಳಲ್ಲಿಯೂ ಚದುರಿಸಿತು.

ಕಶಾಗ್ರದಂಡಾಭಿಹತಾ ಕಾಲ್ಯಮಾನಾ ಇತಸ್ತತಃ ।
ಕ್ರೋಧದೀಪ್ತೇಕ್ಷಣಾ ಕ್ರೋಧಂ ಭೂಯ ಏವ ಸಮಾದಧೇ ॥೫೧॥

ಚಾವಟಿಯ ತುದಿಯ ಮತ್ತು ದೊಣ್ಣೆಗಳ ಹೊಡೆತದಿಂದ ಹಿಂಸಿಸಲ್ಪಟ್ಟ, ಕ್ರೋಧದಿಂದ ಉರಿಯುವ ಕಣ್ಣುಳ್ಳ, ಆ ನಂದಿನಿಯು ಇನ್ನೂ ಹೆಚ್ಚಿನ ಕ್ರೋಧವನ್ನು ತಂದುಕೊಂಡಿತು.

ಆದಿತ್ಯ ಇವ ಮಧ್ಯಾಹ್ನೇ ಕ್ರೋಧದೀಪ್ತವಪುರ್ಬಭೌ ।
ಅಂಗಾರವರ್ಷಂ ಮುಂಚಂತೀ ಮುಹುರ್ವಾತಂ ಮುಖಾದ್ ವಮತ್॥

ಕ್ರೋಧದಿಂದ ಉರಿಯುವ ಅದರ ದೇಹವು ಮಧ್ಯಾಹ್ನದ ಸೂರ್ಯನಂತೆ ಪ್ರಕಾಶಿಸಿತು. ಅದು ತನ್ನ ಮುಖದಿಂದ ಕೆಂಡಗಳ ಮಳೆಯನ್ನು ಮತ್ತು ಬಿರುಗಾಳಿಯನ್ನು ಸೃಷ್ಟಿಸಿತು.

ಅಸೃಜತ್ ಪಹ್ಲವಾನ್ ಪುಚ್ಛಾತ್ ಪ್ರಸ್ರವಾಚ್ಛಂಬರಾಂಛಕಾನ್ ।
ಯೋನಿದೇಶಾಚ್ಚ ಯವನಾನ್ ಶಕೃದ್ದೇಶಾಚ್ಛಕಾಂಸ್ತಥಾ ॥೫೩॥

ಅದು ತನ್ನ ಮುಖದಿಂದ ವಮನವನ್ನು ಮಾಡಿ ಪಹ್ಲವರನ್ನೂ, ಪುಚ್ಛದಿಂದ ಪ್ರಸ್ರವರನ್ನೂ, ಶಂಛರರನ್ನೂ ಮತ್ತು ಶಕರನ್ನೂ, ಯೋನಿದೇಶದಿಂದ ಯವನರನ್ನೂ, ಗೋಮಯದೇಶದಿಂದ ಶಕರನ್ನೂ ಸೃಷ್ಟಿಮಾಡಿತು.

ಮೂತ್ರತಶ್ಚಸೃಜಚ್ಚಾಪಿ ನಂದಿನೀ ಕ್ರೋಧಮೂರ್ಛಿತಾ ।
ಪೌಂಡ್ರಾನ್ ಕಿರಾತಾನ್ ದ್ರಮಿಳಾನ್ ಸಿಂಹಳಾನ್ ಬರ್ಬರಾಂಸ್ತಥಾ ॥೫೬॥

ಕ್ರೋಧಮೂರ್ಛಿತವಾದ ಆ ನಂದಿಯು ಮೂತ್ರದಿಂದ ಪೌಂಡ್ರರನ್ನೂ, ಕಿರಾತರನ್ನೂ, ದ್ರಮಿಳರನ್ನೂ, ಸಿಂಹಳರನ್ನೂ, ಬರ್ಬರರನ್ನೂ ಸೃಷ್ಟಿಮಾಡಿತು.

ತಥೈವ ಬರ್ಬರಾನ್ ಮ್ಲೇಚ್ಛಾನ್ ಫೇನತಃ ಸಾ ಸಸರ್ಜ ಹ ।
ತೈರ್ವಿಸೃಷ್ಟೈರ್ಮಹಾಸೈನ್ಯೈರ್ನಾನಾಮ್ಲೇಚ್ಛಗಣೈಸ್ತಥಾ ॥೫೫॥

ನಾನಾವರಣಸಂಛನ್ನೈರ್ನಾನಾಯುಧಧರೈಸ್ತಥಾ ।
ಅದೀರ್ಯತ ಸುಸನ್ನದ್ಧೈರ್ವಿಶ್ವಾಮಿತ್ರಸ್ಯ ಪಶ್ಯತಃ ॥೫೬॥

ಹಾಗೆಯೇ ತನ್ನ ಬಾಯಿಯ ನೊರೆಯಿಂದ ಬರ್ಬರರನ್ನೂ, ಮ್ಲೇಚ್ಛರನ್ನೂ ಸೃಷ್ಟಿಮಾಡಿತು. ನಂದಿನಿಯು ಸೃಷ್ಟಿಸಿದ ನಾನಾಯುಧಧಾರಿಗಳಾದ, ಅನೇಕ

ಕವಚಗಳನ್ನು ಧರಿಸಿದ, ಮ್ಲೇಚ್ಛ ಮೊದಲಾದ ಸುಸನ್ನದ್ಧವಾದ ಮಹಾಸೈನ್ಯದಿಂದ ವಿಶ್ವಾಮಿತ್ರನು ನೋಡುತ್ತಿರುವಂತೆಯೇ ಅವನ ಸೈನ್ಯವು ಚೆಲ್ಲಾಪಿಲ್ಲಿಯಾಯಿತು (ಓಡೆದು ಹೋಯಿತು).

ಏಕೈಕಶಸ್ತಸ್ಯ ಯೋಧಾಃ ಪಂಚಭಿಃ ಸಪ್ತಭಿರ್ವೃತಾಃ ।
ಶಸ್ತ್ರವರ್ಷೇಣ ಮಹತಾ ಹನ್ಯಮಾನಂ ಬಲಂ ತತಃ ।
ಪ್ರಭಗ್ನದರ್ಪಂ ಸಂತ್ರಸ್ತಂ ವಿಶ್ವಾಮಿತ್ರಸ್ಯ ಪಶ್ಯತಃ ॥೫೭॥

ವಿಶ್ವಾಮಿತ್ರನ ಒಬ್ಬೊಬ್ಬ ಯೋಧನು ಈ ಸೈನ್ಯದ ಐದು ಅಥವಾ ಏಳು ಯೋಧರಿಂದ ಆವೃತನಾದನು. ದೊಡ್ಡ ಬಾಣದ ಮರೆಯಿಂದ ಪೀಡಿಸಲ್ಪಟ್ಟ ವಿಶ್ವಾಮಿತ್ರನ ಸೈನ್ಯವು ವಿಶ್ವಾಮಿತ್ರನ ಎದುರಿಗೇ ದರ್ಪವನ್ನು ಕಳೆದುಕೊಂಡು ಭಯಗ್ರಸ್ತವಾಯಿತು.

ತಸ್ಯ ತಚ್ಚತುರಂಗಂ ವೈ ಬಲಂ ಪರಮದುಃಸಹಮ್ ।
ಪ್ರಭಗ್ನಂ ಸರ್ವತೋ ಘೋರಂ ಪಯಸ್ವಿನ್ಯಾ ವಿನಿರ್ಜಿತಮ್ ॥೫೮॥

ವಿಶ್ವಾಮಿತ್ರನ ಪರಮ ದುಃಸಹವಾದ, ಘೋರವಾದ ಚತುರಂಗ ಬಲವು ಎಲ್ಲಾ ಕಡೆಗಳಲ್ಲಿಯೂ ಭಗ್ನಗೊಂಡು ನಂದಿನಿಯಿಂದ ಪರಾಜಿತವಾಯಿತು.

ನ ಚ ಪ್ರಾಣೈರ್ವಿಯುಜ್ಯಂತೇ ನಚ ಕೇಚನ ಸೈನಿಕಾಃ ।
ವಿಶ್ವಾಮಿತ್ರಸ್ಯ ಸಂಕ್ರುದ್ಧಾದ್ ವಸಿಷ್ಠಾದ್ ಭರತರ್ಷಭ ॥೫೯॥

ಭರತರ್ಷಭನೇ, ವಸಿಷ್ಠರ ಕೋಪದಿಂದ ವಿಶ್ವಾಮಿತ್ರನ ಯಾವ ಸೈನಿಕರೂ ಮೃತರಾಗಲಿಲ್ಲ.

ವಿಶ್ವಾಮಿತ್ರಸ್ಯ ತತ್ ಸೈನ್ಯಂ ಕಾಲ್ಯಮಾನಂ ತ್ರಿಯೋಜನಮ್ ।
ಕ್ರೋಶಮಾನಂ ಭೃಶೋದ್ವಿಗ್ನಂ ತ್ರಾತಾರಂ ನಾಧ್ಯಗಚ್ಛತ ॥೬೦॥

ಹೀಗೆ ಚದುರಿಸಲ್ಪಟ್ಟ ವಿಶ್ವಾಮಿತ್ರನ ಸೈನ್ಯವು ಮೂರುಯೋಜನದವರೆಗೆ ಭಯದಿಂದ ಓಡಿ ಕಿರುಚಿದರೂ, ಅದಕ್ಕೆ ಯಾರೂ ರಕ್ಷಕರು ದೊರೆಯಲಿಲ್ಲ.

ವಿಶ್ವಾಮಿತ್ರಸ್ತತೋ ದೃಷ್ಟ್ವಾ ಕ್ರೋಧಾವಿಷ್ಟಃ ಸ ರೋದಸೀ ।
ವವರ್ಷ ಶರವರ್ಷಾಣಿ ವಸಿಷ್ಠೇ ಮುನಿಸತ್ತಮೇ ॥೬೧॥

ಘೋರರೂಪಾಂಶ್ಚ ನಾರಾಚಾನ್ ಕ್ಷುರಾನ್ ಭಲ್ಲಾನ್ ಮಹಾಮುನಿಃ ।
ವಿಶ್ವಾಮಿತ್ರಪ್ರಯುಕ್ತಾಂಸ್ತಾನ್ ವೈಣವೇನ ವ್ಯಮೋಚಯತ್ ॥೬೨॥

ಅದನ್ನು ನೋಡಿದ ವಿಶ್ವಾಮಿತ್ರನು ಕ್ರೋಧಾವಿಷ್ಟನಾಗಿ ಭೂಮಿ- ಅಂತರಿಕ್ಷಗಳಲ್ಲಿ ಮತ್ತು ಮುನಿಶ್ರೇಷ್ಠರ ಮೇಲೆ ಬಾಣದ ಮಳೆಯನ್ನು ಕರೆದನು. ಮಹಾಮುನಿಗಳಾದ ವಸಿಷ್ಠರು ವಿಶ್ವಾಮಿತ್ರನು ಪ್ರಯೋಗಿಸಿದ ಘೋರವಾದ ಬಾಣಗಳನ್ನೂ, ಕ್ಷುರಗಳನ್ನೂ ಮತ್ತು ಭಲ್ಲಗಳನ್ನೂ ತನ್ನ ಬಿದಿರಿನಿಂದ ಮಾಡಿದ ಬ್ರಹ್ಮದಂಡದಿಂದ ವಿಮೋಚನೆಗೊಳಿಸಿದರು.

ವಸಿಷ್ಠಸ್ಯ ತದಾ ದೃಷ್ಟ್ವಾ ಕರ್ಮಕೌಶಲಮಾಹವೇ ।
ವಿಶ್ವಾಮಿತ್ರೋಽಪಿ ಕೋಪೇನ ಭೂಯಃ ಶತ್ರುನಿಪಾತನಃ ।
ದಿವ್ಯಾಸ್ತ್ರವರ್ಷಂ ತಸ್ಮೈ ತು ಪ್ರಾಹಿಣೋನ್ಮುನಯೇ ರುಷಾ ॥೬೩॥

ಆಗ ಶತ್ರುನಿಪಾತನನಾದ ವಿಶ್ವಾಮಿತ್ರನು, ಯುದ್ಧದಲ್ಲಿ ವಸಿಷ್ಠರ ಕೌಶಲವನ್ನು ನೋಡಿ ಇನ್ನೂ ಹೆಚ್ಚು ಕೋಪವನ್ನು ತಾಳಿ, ಆ ಋಷಿಗಳ ಮೇಲೆ ಕೋಪದಿಂದ ದಿವ್ಯಾಸ್ತ್ರಗಳ ಮಳೆಯನ್ನು ಕರೆದನು.

ಆಗ್ನೇಯಂ ವಾರುಣಂ ಚೈಂದ್ರಂ ಯಾಮ್ಯಂ ವಾಯವ್ಯಮೇವ ಚ ।
ವಿಸಸರ್ಜ ಮಹಾಭಾಗೇ ವಸಿಷ್ಠೇ ಬ್ರಹ್ಮಣಃ ಸುತೇ ॥೬೪॥

ಅವನು ಬ್ರಹ್ಮಪುತ್ರರಾದ ಮಹಾನುಭಾವರಾದ ವಸಿಷ್ಠರ ಮೇಲೆ ಆಗ್ನೇಯಾಸ್ತ್ರವನ್ನೂ, ವಾರುಣಾಸ್ತ್ರವನ್ನೂ, ಐಂದ್ರಾಸ್ತ್ರವನ್ನೂ, ಯಾಮ್ಯಾಸ್ತ್ರವನ್ನೂ, ವಾಯವ್ಯಾಸ್ತ್ರವನ್ನೂ ಪ್ರಯೋಗಿಸಿದನು.

ಅಸ್ತ್ರಾಣಿ ಸರ್ವತೋ ಜ್ವಾಲಾಂ ವಿಸೃಜಂತಿ ಪ್ರಪೇದಿರೇ ।
ಯುಗಾಂತಸಮಯೇ ಘೋರಾಃ ಪತಂಗಸ್ಯೇವ ರಶ್ಮಯಃ ॥೬೫॥

ಆ ಅಸ್ತ್ರಗಳೆಲ್ಲವೂ ಯುಗಾಂತಕಾಲದ ಸೂರ್ಯನ ಘೋರವಾದ ಕಿರಣಗಳಂತೆ ಎಲ್ಲಾ ದಿಕ್ಕುಗಳಲ್ಲಿಯೂ ಜ್ವಾಲೆಯನ್ನು ಕಾರುತ್ತಾ ವಸಿಷ್ಠರನ್ನು ಸಮೀಪಿಸಿದವು.

ವಸಿಷ್ಠೋಽಪಿ ಮಹಾತೇಜಾ ಬ್ರಹ್ಮಶಕ್ತಿಪ್ರಯುಕ್ತಯಾ ।
ಯಷ್ಟ್ಯಾ ನಿವಾರಯಾಮಾಸ ಸರ್ವಾಣ್ಯಸ್ತ್ರಾಣಿ ಸ ಸ್ಮಯನ್ ॥೬೬॥

ಮಹಾತೇಜಸ್ವಿಗಳಾದ ವಸಿಷ್ಠರೂ ಸಹ ಶಕ್ತಿಯಿಂದ ಕೂಡಿದ್ದ ತಮ್ಮ ದಂಡದಿಂದ ನಗುತ್ತಲೇ ಎಲ್ಲಾ ಅಸ್ತ್ರಗಳನ್ನು ನಿವಾರಣೆ ಮಾಡಿದರು.

ತತಸ್ತೇ ಭಸ್ಮಸಾದ್ಭೂತಾಃ ಪತಂತಿ ಸ್ಮ ಮಹೀತಳೇ ।
ಅಪೋಹ್ಯ ದಿವ್ಯಾನ್ಯಸ್ತ್ರಾಣಿ ವಸಿಷ್ಠೋ ವಾಕ್ಯಮಬ್ರವೀತ್ ॥೬೭॥

ಆಗ ವಿಶ್ವಾಮಿತ್ರನು ಪ್ರಯೋಗಿಸಿದ ಅಸ್ತ್ರಗಳೆಲ್ಲವೂ ಸುಟ್ಟುಬೂದಿಯಾಗಿ ಭೂಮಿಯಲ್ಲಿ ಬಿದ್ದವು. ಆ ಎಲ್ಲಾ ದಿವ್ಯಾಸ್ತ್ರಗಳನ್ನೂ ನಿವಾರಣೆ ಮಾಡಿ ವಸಿಷ್ಠರು ವಿಶ್ವಾಮಿತ್ರರನ್ನು ಕುರಿತು ಹೇಳಿದರು.

ನಿರ್ಜಿತೋಽಸಿ ಮಹಾರಾಜ ದುರಾತ್ಮನ್ ಗಾಧಿನಂದನ ।
ಯದಿ ತೇಽಸ್ತಿ ಪರಂ ಶೌರ್ಯಂ ತದ್ ದರ್ಶಯ ಮಯಿ ಸ್ಥಿತೇ ॥೬೮॥

ದುರಾತ್ಮನಾದ ಗಾಧೀಪುತ್ರನಾದ ಮಹಾರಾಜನೇ, ನೀನು ಪರಾಜಿತನಾಗಿದ್ದೀಯೇ. ನಿನಗೆ ಬೇರೆ ಏನಾದರೂ ಶೌರ್ಯವಿದ್ದರೇ ಅದನ್ನು ನನ್ನ ಎದುರಿಗೆ ತೋರಿಸು.

ಗಂಧರ್ವಃ

ವಿಶ್ವಾಮಿತ್ರಸ್ತಥಾ ಚೋಕ್ತೋ ವಸಿಷ್ಠೇನ ನರಾಧಿಪ ।
ನೋವಾಚ ಕಿಂಚಿದ್ ವ್ರೀಡಾಢ್ಯೋ ವಿದ್ರಾವಿತಮಹಾಬಲಃ ॥

ನರಾಧಿಪನೇ, ವಸಿಷ್ಠರು ಹೀಗೆ ಹೇಳುತ್ತಿರಲು ತನ್ನ ಮಹಾಸೈನ್ಯವೆಲ್ಲವೂ ದಿಕ್ಕಾಪಾಲಾಗಿ ಓಡಿದ ಆ ವಿಶ್ವಾಮಿತ್ರನು ನಾಚಿಕೆಯಿಂದ ಕೂಡಿದವನಾಗಿ ಏನನ್ನೂ ಮಾತನಾಡಲಿಲ್ಲ.

ತದ್ ದೃಷ್ಟ್ವಾ ಮಹದಾಶ್ಚರ್ಯಂ ಬ್ರಹ್ಮತೇಜೋಭವಂ ಬಲಮ್ ।
ವಿಶ್ವಾಮಿತ್ರಃ ಕ್ಷತ್ರಭಾವಾನ್ನಿರ್ವಿಣ್ಣೋ ವಾಕ್ಯಮಬ್ರವೀತ್ ॥೬೯॥

ಬ್ರಹ್ಮತೇಜಸ್ಸಿನಿಂದ ಉಂಟಾದ ಆಶ್ಚರ್ಯಕರವಾದ ಆ ಮಹಾಬಲವನ್ನು ನೋಡಿ ವಿಶ್ವಾಮಿತ್ರನು ತನ್ನ ಕ್ಷತ್ರಭಾವದಲ್ಲೇ ವೈರಾಗ್ಯವನ್ನು ಹೊಂದಿ ಮಾತನಾಡಿದನು.

ಧಿಗ್ ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂ ಬಲಮ್ ।
ಬಲಾಬಲೇ ವಿನಿಶ್ಚಿತ್ಯ ತಪ ಏವ ಪರಂ ಬಲಮ್ ॥೭೦॥

ಕ್ಷತ್ರಿಯಬಲಕ್ಕೆ ಧಿಕ್ಕಾರವಿರಲಿ. ಬ್ರಹ್ಮತೇಜಸ್ಸಿನ ಬಲವೇ ಬಲ. ಬಲಾಬಲಗಳನ್ನು ನಿಶ್ಚಯಿಸುವುದಾದರೇ, ತಪಸ್ಸೇ ಶ್ರೇಷ್ಠವಾದ ಬಲ.

ಸ ರಾಜ್ಯಂ ಸ್ಫೀತಮುತ್ಸೃಜ್ಯ ತಾಂ ಚ ದೀಪ್ತಾಂ ನೃಪಶ್ರಿಯಮ್ ।
ಭೋಗಾಂಶ್ಚ ಪೃಷ್ಠತಃ ಕೃತ್ವಾ ತಪ ಏವ ಸಮಾದದೇ ॥೭೧॥

ಅವನು ಸಮೃದ್ಧವಾದ ರಾಜ್ಯವನ್ನು, ಮೆರೆಯುವ ನೃಪಸಂಪತ್ತನ್ನೂ ಮತ್ತು ಭೋಗಗಳನ್ನೂ ತಿರಸ್ಕರಿಸಿ ತಪಸ್ಸನ್ನು ಮಾಡಲು ಪ್ರಾರಂಭಿಸಿದನು.

ಸ ಗತ್ವಾ ತಪಸಾ ಸಿದ್ಧಿಂ ಲೋಕಾನ್ ವಿಷ್ಟಭ್ಯ ತೇಜಸಾ ।
ತತಾಪ ಸರ್ವಾನ್ ಲೋಕಾಂಶ್ಚ ಬ್ರಾಹ್ಮಣತ್ವಮವಾಪ ಚ ॥೭೨॥

ಅವನು ತಪಸ್ಸಿನ ಸಿದ್ಧಿಯನ್ನು ಪಡೆದು ತನ್ನ ತೇಜಸ್ಸಿನಿಂದ ಲೋಕಗಳ ಸ್ತಂಭನೆಯನ್ನು ಮಾಡಿ, ಎಲ್ಲಾ ಲೋಕಗಳಿಗೂ ತಾಪವನ್ನು ಕೊಟ್ಟು ಕೊನೆಗೆ ಬ್ರಾಹ್ಮಣತ್ವವನ್ನು ಪಡೆದನು.

ಅಪಿಬಚ್ಚ ಸುತಂ ಸೋಮಮಿಂದ್ರೇಣ ಸಹ ಕೌಶಿಕಃ ।
ಏವಂವೀರ್ಯಸ್ತು ರಾಜರ್ಷಿರ್ವಿಪ್ರರ್ಷಿಃ ಸಂಬಭೂವ ಹ ॥೭೩॥

ಆ ಕೌಶಿಕನು (ವಿಶ್ವಾಮಿತ್ರನು) ಇಂದ್ರನ ಜೊತೆಯಲ್ಲಿ ಸೋಮಪಾನವನ್ನು ಮಾಡಿದನು. ರಾಜರ್ಷಿಯಾದ ಅವನು ಇಂತಹ ಪರಾಕ್ರಮಶಾಲಿಯಾದ ಬ್ರಹ್ಮರ್ಷಿಯಾದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಅಷ್ಟಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

ನೂರ ಎಪ್ಪತ್ತೊಂಭತ್ತನೆಯ ಅಧ್ಯಾಯ

(ವಸಿಷ್ಠ ವಿಶ್ವಾಮಿತ್ರರ ವಿರೋಧದ ವಿಸ್ತಾರ, ಕಲ್ಮಾಷಪಾದನ ಕಥೆ, ರಾಕ್ಷಸಾವಿಷ್ಟನಾದ ಕಲ್ಮಾಷಪಾದನಿಂದ ವಸಿಷ್ಠರ ಎಲ್ಲಾ ಮಕ್ಕಳ ಭಕ್ಷಣ. ಆತ್ಮಹತ್ಯೆಯನ್ನು ಮಾಡಿಕೊಳ್ಳಲು ವಸಿಷ್ಠರ ವಿಫಲ ಪ್ರಯತ್ನಗಳು.)

ಅರ್ಜುನಃ

ಋಷ್ಯೋಸ್ತು ಯತ್ಕೃತೇ ವೈರಂ ವಿಶ್ವಾಮಿತ್ರವಸಿಷ್ಠಯೋಃ ।
ಬಭೂವ ಗಂಧರ್ವಪತೇ ಶಂಸ ನಃ ಸರ್ವಮೇವ ತು ॥೧॥

ಗಂಧರ್ವಪತಿಯೇ, ವಿಶ್ವಾಮಿತ್ರ ಮತ್ತು ವಸಿಷ್ಠಋಷಿಗಳಿಗೆ ಯಾವ ನಿಮಿತ್ತದಿಂದ ವೈರವುಂಟಾಯಿತು ಎಂಬುದೆಲ್ಲವನ್ನೂ ನನಗೆ ವಿಸ್ತಾರವಾಗಿ ಹೇಳು.

ಮಾಹಾತ್ಮ್ಯಂ ಚ ವಸಿಷ್ಠಸ್ಯ ಬ್ರಾಹ್ಮಣ್ಯಂ ಬ್ರಹ್ಮತೇಜಸಃ ।
ವಿಶ್ವಾಮಿತ್ರಸ್ಯ ಚ ತಥಾ ಕ್ಷತ್ರಸ್ಯ ಚ ಮಹಾತ್ಮನಃ ॥೨॥

ಬ್ರಹ್ಮತೇಜಯುಕ್ತರಾದ ವಸಿಷ್ಠರ ಬ್ರಾಹ್ಮಣ್ಯ ಮತ್ತು ಮಹಾತ್ಮ್ಯವನ್ನೂ, ಮಹಾತ್ಮನಾದ ಕ್ಷತ್ರಿಯ ವಿಶ್ವಾಮಿತ್ರನ ಮಹಾತ್ಮೆಯನ್ನೂ ಹೇಳಿ.

ನ ಶೃಣ್ವಾನಸ್ತ್ವಹಂ ತೃಪ್ತಿಮುಪಗಚ್ಛಾಮಿ ಖೇಚರ ।
ಆಖ್ಯಾಹಿ ಗಂಧರ್ವಪತೇ ತತ್ಕಥಾಸಾರಮೇವ ಚ ।
ಮಾಹಾತ್ಮ್ಯಂ ಚ ವಸಿಷ್ಠಸ್ಯ ವಿಚಿತ್ರಾಣಿ ಚ ಭಾಷಸೇ ॥೩॥

ಖೇಚರನೇ, ಈ ಕಥೆಯನ್ನು ಕೇಳುವ ನನಗೆ ತೃಪ್ತಿಯೇ ಉಂಟಾಗುತ್ತಿಲ್ಲ. ಗಂಧರ್ವಪತಿಯೇ, ನೀನು ವಸಿಷ್ಠರ ಮಹಾತ್ಮ್ಯವನ್ನು ಮತ್ತು ವಿಚಿತ್ರವಾದ ಅವರ ಕಾರ್ಯಗಳನ್ನೂ ಹೇಳುತ್ತಿದ್ದೀಯೆ. ಆ ಕಥೆಯ ಸಾರವನ್ನು ಹೇಳು.

ಗಂಧರ್ವಃ

ಇದಂ ವಾಸಿಷ್ಠಮಾಖ್ಯಾನಂ ಪುರಾಣಂ ಪುಣ್ಯಮುತ್ತಮಮ್ ।
ಪಾರ್ಥ ಸರ್ವೇಷು ಲೋಕೇಷು ವಿಶ್ರುತಂ ತನ್ನಿಬೋಧ ಮೇ ॥೪॥

ಈ ಪವಿತ್ರವಾದ ಮತ್ತು ಶ್ರೇಷ್ಠವಾದ ವಸಿಷ್ಠರ ಕಥೆಯು ಪ್ರಾಚೀನವಾದುದು. ಪಾರ್ಥನೇ, ಇದು ಎಲ್ಲಾ ಲೋಕಗಳಲ್ಲಿಯೂ ಪ್ರಖ್ಯಾತವಾಗಿದೆ. ಅದನ್ನು ನನ್ನಿಂದ ತಿಳಿದುಕೊ.

ಕಲ್ಮಾಷಪಾದ ಇತ್ಯಸ್ಮಿನ್ ಲೋಕೇ ರಾಜಾ ಬಭೂವ ಹ ।
ಇಕ್ಷ್ವಾಕೂಣಾಂ ಕುಲೇ ಜಾತಸ್ತೇಜಸಾऽಸದೃಶೋ ಭುವಿ ॥೫॥

ಹಿಂದೆ ಭೂಮಿಯಲ್ಲಿ ಇಕ್ಷ್ವಾಕುವಂಶದಲ್ಲಿ ಜನಿಸಿದವನೂ, ಅಸದೃಶ ತೇಜಸ್ವಿಯೂ ಆದ ಕಲ್ಮಾಷಪಾದನೆಂಬ ರಾಜನಿದ್ದನು.

ಸ ಕದಾಚಿದ್ ವನೇ ರಮ್ಯೇ ಮೃಗಯಾಮಾಚರದ್ ಬಲೀ ।
ಮೃಗಾನ್ ನಿಘ್ನನ್ ವರಾಹಾಂಶ್ಚ ಚಚಾರ ರಿಪುಸೂದನಃ ॥೬॥

ಅವನು ಒಮ್ಮೆ ಮನೋಹರವಾದ ಕಾಡಿನಲ್ಲಿ ಬೇಟೆಯಾಡಿದನು. ಬಲಿಷ್ಠನಾದ, ಶತ್ರುಸಂಹಾರಕನಾದ ಅವನು, ಮೃಗಗಳನ್ನೂ ಮತ್ತು ವರಾಹಗಳನ್ನೂ ಕೊಲ್ಲುತ್ತಾ ಸಂಚರಿಸಿದನು.

ಸ ತು ರಾಜಾ ಮಹಾತ್ಮಾನಂ ವಾಸಿಷ್ಠಮೃಷಿಸತ್ತಮಮ್ ।
ಸುತೃಷ್ಣಾರ್ತಃ ಕ್ಷುಧಾರ್ತಶ್ಚ ಏಕಾಯನಗತಃ ಪಥಿ ॥೭॥

ಅಪಶ್ಯದಜಿತಃ ಸಂಖೇ ಮುನಿಂ ಪ್ರತಿಮುಖಾಗತಮ್ ।
ಶಕ್ತಿಂ ನಾಮ ಮಹಾಭಾಗಂ ವಸಿಷ್ಠಕುಲನಂದನಮ್ ॥೮॥

ಹಸಿವು ಮತ್ತು ಬಾಯಾರಿಕೆಗಳಿಂದ ಕೂಡಿದ ಆ ರಾಜನು, ಅವನು ಹೋಗುವ ದಾರಿಯಲ್ಲೇ ಎದುರಿಗೆ ಬರುತ್ತಿದ್ದ ವಸಿಷ್ಠಕುಲನಂದನನಾದ, ಮಹಾತ್ಮನಾದ, ಮಹಾನುಭಾವನಾದ ಶಕ್ತಿ ಎಂಬ ಋಷಿಶ್ರೇಷ್ಠರನ್ನು ಸಂಧಿಸಿದನು.

ಜ್ಯೇಷ್ಠಂ ಪುತ್ರಶತಾತ್ ಪುತ್ರಂ ವಸಿಷ್ಠಸ್ಯ ಮಹಾತ್ಮನಃ ।
ಅಪಗಚ್ಛ ಪಥೋಽಸ್ಮಾಕಮಿತ್ಯೇವಂ ಪಾರ್ಥಿವೋಽಬ್ರವೀತ್ ॥೯॥

ಆ ರಾಜನು ಮಹಾನುಭಾವರಾದ ವಸಿಷ್ಠರ ನೂರು ಮಕ್ಕಳಲ್ಲಿ ಜ್ಯೇಷ್ಠರೂ, ಶ್ರೇಷ್ಠರೂ ಆದ ಆ ಋಷಿಗಳನ್ನು ಕುರಿತು ನನ್ನ ಮಾರ್ಗದಿಂದ ದೂರ ಸರಿ ಎಂದು ಹೇಳಿದನು.

ಸ ಚಾಪ್ಯೃಷಿರುವಾಚೈನಂ ಸಾಂತ್ವಯಂಶ್ಲಕ್ಷ್ಣಯಾ ಗಿರಾ ।
ಮಮ ಪಂಥಾ ಮಹಾರಾಜ ಧರ್ಮ ಏಷ ಸನಾತನಃ ।
ರಾಜ್ಞಾ ಧರ್ಮೇಣ ಸಂಕಲ್ಪ್ಯ ದೇಯಃ ಪಂಥಾ ದ್ವಿಜಾತಯೇ ॥೧೦॥

ಆ ಋಷಿಗಳಾದರೋ ಮಧುರವಾದ ಮಾತುಗಳಿಂದ ಅವನಿಗೆ ಸಮಾಧಾನವನ್ನು ಮಾಡುತ್ತಾ ಮಹಾರಾಜನೇ, ಇದು ನನ್ನ ಮಾರ್ಗ. ರಾಜನು ಧರ್ಮವನ್ನು ಅಭಿವೀಕ್ಷಿಸಿ ಬ್ರಾಹ್ಮಣನಿಗೆ ಮಾರ್ಗವನ್ನು ಕೊಡಬೇಕು ಎಂಬುದು ಸನಾತನವಾದ ಧರ್ಮ ಎಂದು ಹೇಳಿದರು.

ಗಂಧರ್ವಃ

ಋಷಿಸ್ತು ನಾಪಚಕ್ರಾಮ ತಸ್ಮಿನ್ ಧರ್ಮಪಥೇ ಸ್ಥಿತಃ ।
ಅಪಿ ರಾಜಾ ಮುನೇರ್ಮಾರ್ಗಾತ್ ಕ್ರೋಧನ್ನಾಪಜಗಾಮ ಹ ॥೧೧॥

ಧರ್ಮಮಾರ್ಗದಲ್ಲಿದ್ದ ಋಷಿಗಳು ಆ ಮಾರ್ಗದಿಂದ ಸರಿಯಲಿಲ್ಲ. ಕ್ರೋಧದಿಂದ ಕೂಡಿದ ರಾಜನು ಸಹ ಋಷಿಗಳ ಮಾರ್ಗದಿಂದ ಸರಿಯಲಿಲ್ಲ.

ಅಮುಂಚಂತಂ ತು ಪಂಥಾನಂ ತಮೃಷಿಂ ನೃಪಸತ್ತಮಃ ।
ಜಘಾನ ಕಶಯಾ ಮೋಹಾನ್ನೃಪೋ ರಾಕ್ಷಸವನ್ಮುನಿಮ್ ॥೧೨॥

ಆಗ ಆ ರಾಜಶ್ರೇಷ್ಠನು ಮೋಹವಶನಾಗಿ ಮಾರ್ಗವನ್ನು ಬಿಡದಿದ್ದ ಆ ಋಷಿಗಳಿಗೆ ರಾಕ್ಷಸನಂತೆ ಚಾವಟಿಯಿಂದ ಹೊಡೆದನು.

ಕಶಾಪ್ರಹಾರಾಭಿಹತೋ ರಾಜಾನಮೃಷಿಸತ್ತಮಃ ।
ತಂ ಶಶಾಪ ನೃಪಶ್ರೇಷ್ಠಂ ವಾಸಿಷ್ಠಃ ಕ್ರೋಧಮೂರ್ಚ್ಛಿತಃ ॥೧೩॥

ಆ ಋಷಿಶ್ರೇಷ್ಠರಾದ ವಸಿಷ್ಠಪುತ್ರರು ಚಾವಟಿಯ ಏಟಿನಿಂದ ಕ್ರೋಧಮೂರ್ಛಿತರಾಗಿ ಆ ನೃಪಶ್ರೇಷ್ಠನಿಗೆ ಶಾಪವನ್ನು ಕೊಟ್ಟರು.

ಹಂಸಿ ರಾಕ್ಷಸವದ್ ಯನ್ಮಾಂ ರಾಜಾಪಶದ ತಾಪಸಮ್ ।
ತಸ್ಮಾತ್ ತ್ವಮದ್ಯಪ್ರಭೃತಿ ಪುರುಷಾದೋ ಭವಿಷ್ಯಸಿ ॥೧೪॥

ರಾಜಾಧಮನೇ, ತಾಪಸನಾದ ನನ್ನನ್ನು ರಾಕ್ಷಸನಂತೆ ಹೊಡೆಯುತ್ತಿರು- ವುದರಿಂದ ನೀನು ಈ ದಿನದಿಂದ ನರಭಕ್ಷಕನಾಗುವಿ.

ಮನುಷ್ಯಪಿಶಿತೇ ಸಕ್ತಶ್ಚರಿಷ್ಯಸಿ ಮಹೀಮಿಮಾಮ್ ।
ಗಚ್ಛ ರಾಜಾಧಮೇತ್ಯುಕ್ತಃ ಶಕ್ತಿನಾ ವೀರ್ಯಶಕ್ತಿನಾ ॥೧೫॥

ಮನುಷ್ಯಮಾಂಸದಲ್ಲಿ ಆಸಕ್ತನಾಗಿ ಈ ಭೂಮಿಯಲ್ಲಿ ಸಂಚರಿಸುವಿ. ರಾಜಾಧಮನೇ, ಹೊರಟುಹೋಗು ಎಂದು ವೀರ್ಯಶಾಲಿಗಳಾದ ಶಕ್ತಿಋಷಿಗಳಿಂದ ಶಪಿಸಲ್ಪಟ್ಟನು.

ತತೋ ಯಾಜ್ಯನಿಮಿತ್ತಂ ತು ವಿಶ್ವಾಮಿತ್ರವಸಿಷ್ಠಯೋಃ
ವೈರಮಾಸೀದ್ ತದಾ ತಂ ತು ವಿಶ್ವಾಮಿತ್ರೋಽನ್ವವಿಂದತ ॥೧೬॥

ಅನಂತರ ತ್ರಿಶಂಕುಮಹಾರಾಜನಿಗೆ ಯಾಗವನ್ನು ಮಾಡಿಸುವ ಸಲುವಾಗಿ ವಿಶ್ವಾಮಿತ್ರ ವಸಿಷ್ಠರಿಗೆ ವೈರ ಉಂಟಾಯಿತು. ಆಗ ವಿಶ್ವಾಮಿತ್ರರು ತ್ರಿಶಂಕುವನ್ನು ಪರಿಗ್ರಹಿಸಿದರು. (ಇದು ಇಲ್ಲಿ ಪ್ರಾಸಂಗಿಕವಾಗಿ ವಿಸ್ತಾರ ಮಾಡದೇ ಹೇಳಿದ ಕಥೆ.)

ತಯೋರ್ವಿವದತೋರೇವಂ ಸಮೀಪಮುಪಚಕ್ರಮೇ ।
ಋಷಿರುಗ್ರತಪಾಃ ಪಾರ್ಥ ವಿಶ್ವಾಮಿತ್ರಃ ಪ್ರತಾಪವಾನ್ ॥೧೭॥

ಪಾರ್ಥನೇ, ಶಕ್ತಿಋಷಿಗಳೂ ಮತ್ತು ಕಲ್ಮಾಷಪಾದನೂ ಹೀಗೆ ವಿವಾದ ಮಾಡುತ್ತಿರುವಾಗ ಪ್ರತಾಪಶಾಲಿಗಳೂ, ಉಗ್ರತಪಸ್ವಿಗಳೂ ಆದ ವಿಶ್ವಾಮಿತ್ರಋಷಿಗಳು ಅಲ್ಲಿಗೆ ಬಂದರು.

ತತಃ ಸ ಬುಬುಧೇ ಪಶ್ಚಾತ್ ತಮೃಷಿಂ ನೃಪಸತ್ತಮ ।
ಋಷೇಃ ಪುತ್ರಂ ವಸಿಷ್ಠಸ್ಯ ವಸಿಷ್ಠಮಿವ ತೇಜಸಾ ॥೧೮॥

ನೃಪಶ್ರೇಷ್ಠನೇ, ಅನಂತರ ಅವರು ವಸಿಷ್ಠರಂತೆಯೇ ತೇಜಸ್ವಿಗಳಾದ ಆ ಋಷಿಗಳನ್ನೂ ವಸಿಷ್ಠರ ಪುತ್ರರೆಂದು ತಿಳಿದರು.

ಅಂತರ್ಧಾಯ ತದಾऽऽತ್ಮಾನಂ ವಿಶ್ವಾಮಿತ್ರಸ್ತು ಭಾರತ ।
ತಾವುಭಾವುಪಚಕ್ರಾಮ ಚಿಕೀರ್ಷನ್ನಾತ್ಮನಃ ಪ್ರಿಯಮ್ ॥೧೯॥

ಭಾರತನೇ, ವಿಶ್ವಾಮಿತ್ರರು ಆಗ ತಮ್ಮ ನಿಜರೂಪವನ್ನು ಮರೆಮಾಚಿ ತಮಗೆ ಪ್ರಿಯವಾದುದನ್ನು ನೆರವೇರಿಸಿಕೊಳ್ಳಲು ಅವರಿಬ್ಬರನ್ನು ಸಮೀಪಿಸಿದರು.

ಸ ತು ಶಪ್ತಸ್ತದಾ ತೇನ ಶಕ್ತಿನಾ ವೈ ನೃಪೋತ್ತಮಃ ।
ಜಗಾಮ ಶರಣಂ ರಾಜಾ ಪ್ರಸಾದಯಿತುಮರ್ಹಯನ್ ॥೨೦॥

ಶಕ್ತಿಋಷಿಗಳಿಂದ ಶಾಪಕ್ಕೆ ಒಳಗಾದ ಆ ರಾಜಶ್ರೇಷ್ಠನು ಆಗ ವಿಶ್ವಾಮಿತ್ರರನ್ನು ಪ್ರಸನ್ನೀಕರಿಸಿಕೊಳ್ಳಲು ಅವರನ್ನು ಪೂಜಿಸಿ ಅವರಿಗೆ ಶರಣಾಗತನಾದನು.

ತಸ್ಯ ಭಾವಂ ವಿದಿತ್ವಾ ತು ನೃಪತೇಃ ಕುರುನಂದನ ।
ವಿಶ್ವಾಮಿತ್ರಸ್ತತೋ ರಕ್ಷ ಆದಿದೇಶ ನೃಪಂ ಪ್ರತಿ ॥೨೧॥

ಕುರುನಂದನನೇ, ರಾಜನ ಮನಸ್ಸಿನ ಅಭಿಪ್ರಾಯವನ್ನು ತಿಳಿದ ವಿಶ್ವಾಮಿತ್ರರು ರಾಜನನ್ನು ಪ್ರವೇಶಿಸುವಂತೆ ಒಬ್ಬ ರಾಕ್ಷಸನಿಗೆ ಆದೇಶವನ್ನು ನೀಡಿದರು.

ಸ ಶಾಪಾತ್ ತಸ್ಯ ವಿಪ್ರರ್ಷೇರ್ವಿಶ್ವಾಮಿತ್ರಸ್ಯ ಚಾಜ್ಞಯಾ ।
ರಾಕ್ಷಸಃ ಕಿನ್ನರೋ ನಾಮ ವಿವೇಶ ನೃಪತಿಂ ತದಾ ॥೨೨॥

ಆಗ ಶಕ್ತಿಋಷಿಗಳ ಶಾಪದಿಂದಲೂ ಮತ್ತು ವಿಶ್ವಾಮಿತ್ರರ ಆಜ್ಞೆಯಿಂದಲೂ ಕಿನ್ನರನೆಂಬ ರಾಕ್ಷಸನು ರಾಜನನ್ನು ಪ್ರವೇಶಿಸಿದನು.

ರಕ್ಷಸಾ ತು ಗೃಹೀತಂ ತಂ ವಿದಿತ್ವಾ ಮುನಿಸತ್ತಮಃ ।
ವಿಶ್ವಾಮಿತ್ರೋऽಪ್ಯಪಾಕ್ರಾಮತ್ ತಸ್ಮಾದ್ ದೇಶದರಿಂದಮ ॥೨೩॥

ಅರಿಂದಮನೇ, ರಾಜನು ರಾಕ್ಷಸನಿಂದ ಗ್ರಸ್ತನಾಗಿದ್ದಾನೆಂದು ತಿಳಿದ ಮುನಿಶ್ರೇಷ್ಠರಾದ ವಿಶ್ವಾಮಿತ್ರರು ಆ ಪ್ರದೇಶದಿಂದ ಹೊರಟುಹೋದರು.

ತತಶ್ಚ ನೃಪತಿರ್ವಿದ್ವಾನ್ ರಕ್ಷನ್ನಾತ್ಮಾನಮಾತ್ಮನಾ ।
ಬಲವತ್ ಪೀಡ್ಯಮಾನೋಽಪಿ ನಾನ್ವಬುಧ್ಯತ ಕಿಂಚನ ॥೨೪॥

ಆಗ ವಿವೇಕಿಯಾದ ಆ ರಾಜನು ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಪ್ರಯತ್ನಪಟ್ಟರೂ, ಬಲಿಷ್ಠನಾದ ರಾಕ್ಷಸನಿಂದ ಪೀಡಿತನಾಗಿ ಏನನ್ನೂ ತಿಳಿಯಲಿಲ್ಲ. (ರಾಜನ ಜ್ಞಾನವು ಅಸ್ಪಷ್ಟವಾಯಿತು.)

ದದರ್ಶ ತಂ ದ್ವಿಜಃ ಕಶ್ಚಿದ್ ರಾಜಾನಂ ಪುನರಾಗತಮ್ ।
ಅಯಾಚತ್ ಕ್ಷುಧಿತಶ್ಚೈನಂ ಸಮಾಂಸಂ ಭೋಜನಂ ತದಾ ॥೨೫॥

ಅದೇ ಮಾರ್ಗದಲ್ಲಿ ಪುನಃ ಬಂದ ರಾಜನನ್ನು ನೋಡಿದ ಹಸಿದಿದ್ದ ಒಬ್ಬ ಬ್ರಾಹ್ಮಣನು ಮಾಂಸಸಹಿತವಾದ ಭೋಜನವನ್ನು ಬೇಡಿದನು.

ತಮುವಾಚ ಸ ರಾಜರ್ಷಿರ್ದ್ವಿಜಂ ಮಿತ್ರಸಹಸ್ತದಾ ।
ಆಸ್ಸ್ವ ಬ್ರಹ್ಮಂಸ್ತ್ವಮತ್ರೈವ ಮುಹೂರ್ತಮಿವ ಸಾಂತ್ವಯನ್ ॥೨೬॥

ಆ ರಾಜರ್ಷಿಯಾದ ಮಿತ್ರಸಹನು ಆಗ ಆ ಬ್ರಾಹ್ಮಣನನ್ನು ಕುರಿತು ಬ್ರಾಹ್ಮಣನೇ, ನೀನು ಇಲ್ಲಿಯೇ ಒಂದು ಮುಹೂರ್ತದ ಕಾಲ ಇರು ಎಂದು ಸಮಾಧಾನ ಮಾಡಿದನು. (ಕಲ್ಮಾಷಪಾದನಿಗೆ ಮಿತ್ರಸಹ ಎಂದೂ ಹೆಸರು.)

ವಿನಿವೃತ್ತಃ ಪ್ರದಾಸ್ಯಾಮಿ ಭೋಜನಂ ತೇ ಯಥೇಪ್ಸಿತಮ್ ।
ಇತ್ಯುಕ್ತ್ವಾ ಪ್ರಯಯೌ ರಾಜಾ ತಸ್ಥೌ ಸ ದ್ವಿಜಸತ್ತಮಃ ॥೨೭॥

ನಾನು ಹಿಂದಿರುಗಿ ಬರುತ್ತಾ ನಿನಗೆ ಇಷ್ಟವಾದ ಭೋಜನವನ್ನು ಕೊಡುವೆನು ಎಂದು ಹೇಳಿ ರಾಜನು ಅಲ್ಲಿಂದ ಹೊರಟುಹೋದನು. ಆ ದ್ವಿಜಶ್ರೇಷ್ಠನು ಅಲ್ಲಿಯೇ ನಿಂತನು.

ಅಂತಃಪುರಂ ಗತೋ ರಾಜಾ ಶ್ರುತ್ವಾ ಬ್ರಾಹ್ಮಣಭಾಷಿತಮ್ ।
ಸೋಽಂತಃಪುರಂ ಪ್ರವಿಶ್ಯಾಥ ನ ಸಸ್ಮಾರ ನರಾಧಿಪಃ ॥೨೮॥

ಬ್ರಾಹ್ಮಣವಾಕ್ಯವನ್ನು ಕೇಳಿ ಅಂತಃಪುರಕ್ಕೆ ಹೋಗಿ ಅಂತಃಪುರವನ್ನು ಪ್ರವೇಶಮಾಡಿದ ರಾಜನು ಬ್ರಾಹ್ಮಣನ ಮಾತನ್ನು ಮರೆತುಬಿಟ್ಟನು.

ತತೋಽರ್ಧರಾತ್ರ ಉತ್ಥಾಯ ಸೂದಮಾನಾಯ್ಯ ಸತ್ತಮಃ ।
ಉವಾಚ ವಚನಂ ಸ್ಮೃತ್ಯ ಬ್ರಾಹ್ಮಣಸ್ಯ ಪ್ರತಿಶ್ರುತಮ್ ॥೨೯॥

ಸಜ್ಜನನಾದ ಆ ರಾಜನು ಅನಂತರ ಅರ್ಧರಾತ್ರಿಯಲ್ಲಿ ಎದ್ದು ತನ್ನ ಅಡಿಗೆಯವನನ್ನು ಕರೆಸಿ ಬ್ರಾಹ್ಮಣನಿಗೆ ತಾನು ಕೊಟ್ಟ ಮಾತನ್ನು ಸ್ಮರಿಸಿ ಹೀಗೆ ಮಾತನಾಡಿದನು.

ಗಚ್ಛಾಮುಷ್ಮಿನ್ನಸೌ ದೇಶೇ ಬ್ರಾಹ್ಮಣೋ ಮಾಂ ಪ್ರತೀಕ್ಷತೇ ।
ಅನ್ನಾರ್ಥಿನಂ ತ್ವಮನ್ನೇನ ಸಮಾಂಸೇನೋಪಪಾದಯ ॥೩೦॥

ಇಂತಹ ದೇಶದಲ್ಲಿ ಒಬ್ಬ ಬ್ರಾಹ್ಮಣನು ನನ್ನನ್ನು ನಿರೀಕ್ಷಿಸುತ್ತಿರುತ್ತಾನೆ. ನೀನು ಹೋಗಿ ಅನ್ನಾರ್ಥಿಯಾದ ಅವನಿಗೆ ಮಾಂಸೋದನವನ್ನು ಕೊಡು.

ಗಂಧರ್ವಃ

ಏವಮುಕ್ತಸ್ತದಾ ಸೂದಃ ಸೋಽನಾಸಾದ್ಯಾಮಿಷಂ ಕ್ವಚಿತ್ ।
ನಿವೇದಯಾಮಾಸ ಪುನಸ್ತಸ್ಮೈ ರಾಜ್ಞೇ ವ್ಯಥಾನ್ವಿತಃ ॥೩೧॥

ರಾಜನಿಂದ ಹೀಗೆ ಹೇಳಲ್ಪಟ್ಟ ಸೂದನು (ಪಾಚಕನು) ಎಲ್ಲಿಯೂ ಮಾಂಸವು ಸಿಗದಿರಲು ವ್ಯಥೆಯಿಂದ ಕೂಡಿದವನಾಗಿ ಪುನಃ ಆ ರಾಜನನ್ನು ಕಂಡು ನಿವೇದಿಸಿದನು.

ರಾಜಾ ತು ರಕ್ಷಸಾಽಽವಿಷ್ಟಃ ಸೂದಮಾಹ ಗತವ್ಯಥಃ ।
ಅಪ್ಯೇನಂ ನರಮಾಂಸೇನ ಭೋಜಯೇತಿ ಪುನಃಪುನಃ ॥೩೨॥

ರಾಜನು ರಾಕ್ಷಸನಿಂದ ಆವಿಷ್ಟನಾದ ಕಾರಣದಿಂದ ಯಾವ ಶಂಕೆಯೂ ಇಲ್ಲದೇ ಸೂದನನ್ನು ಕುರಿತು ನರಮಾಂಸದಿಂದಲಾದರೂ ಅವನಿಗೆ ಭೋಜನವನ್ನು ಕೊಡು ಎಂದು ಮತ್ತೆ ಮತ್ತೆ ಹೇಳಿದನು.

ತಥೇತ್ಯುಕ್ತ್ವಾ ತತಃ ಸೂದಃ ಸಂಸ್ಥಾನಂ ವಧ್ಯಘಾತಿನಾಮ್ ।
ಗತ್ವಾಽಽಜಹಾರ ತ್ವರಿತೋ ನರಮಾಂಸಮಪೇತಭೀಃ ॥೩೩॥

ಸೂದನು ಹಾಗೆಯೇ ಆಗಲಿ ಎಂದು ಹೇಳಿ ರಾಜಪುರುಷರು ಅಪರಾಧಿಗಳನ್ನು ವಧೆಮಾಡುವ ಸ್ಥಳಕ್ಕೆ ಶೀಘ್ರವಾಗಿ ಹೋಗಿ ಯಾವ ಭಯವೂ ಇಲ್ಲದೇ ನರಮಾಂಸವನ್ನು ತಂದನು.

ತತಃ ಸಂಸ್ಕೃತ್ಯ ವಿಧಿವದನ್ನಂ ಸಾಮಿಷಮಾಶು ವೈ ।
ತಸ್ಮೈ ಪ್ರಾದಾದ್ ಬ್ರಾಹ್ಮಣಾಯ ಕ್ಷುಧಿತಾಯ ತಪಸ್ವಿನೇ ॥೩೪॥

ಅನಂತರ ಆ ಮಾಂಸವನ್ನು ಯಥೋಕ್ತವಾಗಿ ಸಂಸ್ಕರಿಸಿ ಹಸಿದಿದ್ದ ತಪಸ್ವಿಯಾದ ಆ ಬ್ರಾಹ್ಮಣನಿಗೆ ಮಾಂಸಾನ್ನವನ್ನು ಕೊಟ್ಟನು.

ಸ ದಿವ್ಯಚಕ್ಷುರ್ದೃಷ್ಟ್ವಾ ತು ತದನ್ನಂ ದ್ವಿಜಸತ್ತಮಃ ।
ಅಭೋಜ್ಯಮಿತಿ ಮತ್ವಾऽऽಹ ಕ್ರೋಧಪರ್ಯಾಕುಲೇಕ್ಷಣಃ ॥೩೫॥

ಆ ಶ್ರೇಷ್ಠನಾದ ಬ್ರಾಹ್ಮಣನು ತನ್ನ ದಿವ್ಯದೃಷ್ಟಿಯಿಂದ ಆ ಅನ್ನವು ಅಭೋಜ್ಯವೆಂದು ತಿಳಿದು ಕ್ರೋಧಯುಕ್ತವಾದ ಕಣ್ಣುಗಳನ್ನು ಹೊಂದಿ ಹೀಗೆ ಹೇಳಿದನು.

ಯಸ್ಮಾದಭೋಜ್ಯಮನ್ನಂ ಮೇ ದದಾತಿ ಸ ನೃಪಾಧಮಃ ।
ತಸ್ಮಾತ್ ತಸ್ಯೈವ ಮೂಢಸ್ಯ ಭವಿಷ್ಯತ್ಯತ್ರ ಲೋಲುಪಃ ॥೩೬॥

ಸಕ್ತೋ ಮಾನುಷಮಾಂಸೇಷು ಯಥೋಕ್ತಂ ಶಕ್ತಿನಾ ಪುರಾ ।
ಉದ್ವೇಜನೀಯೋ ಭೂತಾನಾಂ ಚರಿಷ್ಯತಿ ಮಹೀಮಿಮಾಮ್ ॥೩೭॥

ಆ ರಾಜಾಧಮನು ನನಗೆ ಅಭೋಜ್ಯವಾದ ಅನ್ನವನ್ನು ಕೊಡುತ್ತಿರುವುದರಿಂದ ಅವನು ಶಕ್ತಿಋಷಿಗಳು ಹಿಂದೆ ಶಾಪವನ್ನು ಕೊಟ್ಟಂತೆ ನರಮಾಂಸಭಕ್ಷಣದಲ್ಲಿಯೇ ಲೋಲುಪನಾಗುವನು. ಎಲ್ಲರಿಗೂ ಭಯವನ್ನು ಉಂಟುಮಾಡುತ್ತಾ ಈ ಭೂಮಿಯಲ್ಲಿ ಸಂಚರಿಸುವನು.

ಗಂಧರ್ವಃ

ದ್ವಿರನುವ್ಯಾಹೃತೇ ವಾಕ್ಯೇ ಶಾಪೋ ಹಿ ಬಲವಾನಭೂತ್ ।
ರಕ್ಷೋಬಲಸಮಾವಿಷ್ಟೋ ವಿಸಂಜ್ಞಶ್ಚಾಭವತ್ ತದಾ ॥೩೮॥

ಶಾಪದ ವಾಕ್ಯವು ಎರಡು ಸಲ ಹೇಳಲ್ಪಡುತ್ತಿರಲು ಶಾಪವು ಬಲಿಷ್ಠವಾಯಿತು. ರಾಕ್ಷಸನಿಂದ ಗ್ರಸ್ತನಾದ ಆ ರಾಜನು ತನ್ನ ಎಲ್ಲಾ ಜ್ಞಾನವನ್ನೂ ಕಳೆದುಕೊಂಡನು.

ತತಃ ಸ ನೃಪತಿಃ ಪಾರ್ಥ ರಕ್ಷಸಾऽಪಹೃತೇಂದ್ರಿಯಃ ।
ಉವಾಚ ಶಕ್ತಿಂ ದೃಷ್ಟ್ವಾ ತು ನಚಿರಾದಿವ ಭಾರತ ॥೩೯॥

ಭಾರತನೇ, ಆಗ ರಾಕ್ಷಸನಿಂದ ಆಕ್ರಾಂತವಾದ ಇಂದ್ರಿಯಗಳುಳ್ಳ ಆ ರಾಜನು ಅಲ್ಪ ಸಮಯದಲ್ಲಿಯೇ ಶಕ್ತಿಋಷಿಗಳನ್ನು ನೋಡಿ ಹೀಗೆ ಮಾತನಾಡಿದನು.

ಯಸ್ಮಾದಸದೃಶಃ ಶಾಪಃ ಪ್ರಯುಕ್ತೋऽಯಂ ಮಯಿ ತ್ವಯಾ ।
ತಸ್ಮಾತ್ ತ್ವತ್ತಃ ಪ್ರವರ್ತಿಷ್ಯೇ ಖಾದಿತುಂ ಮಾನುಷಾನಹಮ್ ॥೪೦॥

ನೀನು ನನಗೆ ಅಸದೃಶವಾದ ಶಾಪವನ್ನು ಕೊಟ್ಟಕಾರಣದಿಂದ ನಿನ್ನನ್ನೇ ಆರಂಭಿಸಿ ನಾನು ಮನುಷ್ಯರನ್ನು ತಿನ್ನಲು ಪ್ರವೃತ್ತನಾಗುವೆನು.

ಏವಮುಕ್ತ್ವಾ ತತಃ ಸದ್ಯಃ ತಂ ಪ್ರಾಣೈರ್ವಿಪ್ರಯೋಜ್ಯ ಸಃ ।
ಶಕ್ತಿನಂ ಭಕ್ಷಯಾಮಾಸ ವ್ಯಾಘ್ರಃ ಪಶುಮಿವೇಪ್ಸಿತಮ್ ॥೪೧॥

ಹೀಗೆ ಹೇಳಿ ತಕ್ಷಣ ಶಕ್ತಿಋಷಿಗಳನ್ನು ಕೊಂದು ಹುಲಿಯು ಇಷ್ಟವಾದ ಹಸುವನ್ನು ತಿಂದಂತೆ ರಾಜನು ಭಕ್ಷಿಸಿದನು.

ಶಕ್ತಿನಂ ತು ಹತಂ ದೃಷ್ಟ್ವಾ ವಿಶ್ವಾಮಿತ್ರಸ್ತತಃ ಪುನಃ ।
ವಸಿಷ್ಠಸ್ಯೈವ ಪುತ್ರೇಷು ತದ್ರಕ್ಷಃ ಸಂದಿದೇಶ ಹ ॥೪೨॥

ಶಕ್ತಿಋಷಿಗಳು ನಿಹತವಾದುದನ್ನು ನೋಡಿದ ವಿಶ್ವಾಮಿತ್ರರು ಆ ರಾಕ್ಷಸನನ್ನು ಪುನಃ ವಸಿಷ್ಠಋಷಿಗಳ ಉಳಿದ ಪುತ್ರರ ಮೇಲೆ ನಿದೇಶಿಸಿದರು.

ಸ ತಾನ್ ಶತಾವರಾನ್ ಪುತ್ರಾನ್ ವಸಿಷ್ಠಸ್ಯ ಮಹಾತ್ಮನಃ ।
ಭಕ್ಷಯಾಮಾಸ ಸಂಕ್ರುದ್ಧಃ ಸಿಂಹಃ ಕ್ಷುದ್ರಮೃಗಾನಿವ ॥೪೩॥

ಆಗ ಆ ರಾಜನು ಮಹಾತ್ಮರಾದ ವಸಿಷ್ಠರ ನೂರಕ್ಕಿಂತ ಒಂದು ಕಡಿಮೆಯಾದ ಎಲ್ಲಾ ಮಕ್ಕಳನ್ನೂ ಕೋಪಗೊಂಡ ಸಿಂಹವು ಕ್ಷುದ್ರಮೃಗಗಳನ್ನು ತಿನ್ನುವಂತೆ ತಿಂದುಬಿಟ್ಟನು.

ವಸಿಷ್ಠೋ ಘಾತಿತಾನ್ ಶ್ರುತ್ವಾ ವಿಶ್ವಾಮಿತ್ರೇಣ ಸ್ವಾನ್ ಸುತಾನ್ ।
ಧಾರಯಾಮಾಸ ಸಂಶೋಕಂ ಮಹಾದ್ರಿರಿವ ಮೇದಿನೀಮ್ ॥೪೪॥

ವಸಿಷ್ಠರು ವಿಶ್ವಾಮಿತ್ರರಿಂದ ತನ್ನ ಎಲ್ಲಾ ಮಕ್ಕಳು ನಿಹತರಾದುದನ್ನು ಕೇಳಿ ಉಂಟಾದ ಮಹಾಶೋಕವನ್ನು ಪರ್ವತವು ಭೂಮಿಯನ್ನು ಧರಿಸಿದಂತೆ ಮನಸ್ಸಿನಲ್ಲಿಯೇ ಧರಿಸಿದರು.

ಚಕ್ರೇ ಚಾತ್ಮವಿನಾಶಾಯ ಬುದ್ಧಿಂ ಸ ಮುನಿಪುಂಗವಃ ।
ನ ತ್ವೇವ ಕುಶಿಕೋಚ್ಛೇದಂ ಮೇನೇ ಮತಿಮತಾಂ ವರಃ ॥೪೫॥

ಆ ಋಷಿಶ್ರೇಷ್ಠರು ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಮನಸ್ಸಿನಲ್ಲಿ ಯೋಚಿಸಿದರು. ಆದರೆ, ಸದ್ಬುದ್ಧಿಯನ್ನು ಹೊಂದಿದವರಲ್ಲಿ ಶ್ರೇಷ್ಠರಾದ ಅವರು ವಿಶ್ವಾಮಿತ್ರರ ವಂಶವನ್ನು ನಿರ್ಮೂಲನ ಮಾಡುವುದಕ್ಕೆ ಬಯಸಲಿಲ್ಲ.

ಸ ಮೇರುಕೂಟಾದಾತ್ಮಾನಂ ಮುಮೋಚ ಭಗವಾನೃಷಿಃ ।
ಶಿರಸ್ತಸ್ಯ ಶಿಲಾಯಾಂ ಚ ತೂಲರಾಶಾವಿವಾಪತತ್ ॥೪೬॥

ಪೂಜ್ಯರಾದ ಆ ಋಷಿಗಳು ಮೇರುಪರ್ವತದ ಶಿಖರದಿಂದ ತಲೆಕೆಳಕಾಗಿ ಬಿದ್ದರು. ಬಂಡೆಯ ಮೇಲೆ ಬಿದ್ದ ಅವರ ಶಿರಸ್ಸು ಹತ್ತಿಯ ರಾಶಿಯಲ್ಲಿ ಬಿದ್ದಂತಾಯಿತು. ಪಾತದಿಂದ ಆ ಋಷಿಶ್ರೇಷ್ಠರು ಮೃತರಾಗಲಿಲ್ಲ.

ನ ಮಮಾರ ಚ ಪಾತೇನ ತದಾ ಸ ಮುನಿಸತ್ತಮಃ ।
ಅಥಾऽಗ್ನಿಮಿದ್ಧ್ವಾ ಭಗವಾನ್ ಸಂವಿವೇಶ ಮಹಾವನೇ ॥೪೭॥

ತಂ ತದಾ ಸುಸಮಿದ್ಧೋऽಪಿ ನ ದದಾಹ ಹುತಾಶನಃ ।
ದೀಪ್ಯಮಾನೋऽಪ್ಯಮಿತ್ರಘ್ನ ಶೀತೋऽಗ್ನಿರಭವತ್ ತದಾ ॥೪೮॥

ಅನಂತರ ದೊಡ್ಡ ಕಾಡಿನಲ್ಲಿ ಅಗ್ನಿಯನ್ನು ಪ್ರಜ್ವಲಿಸಿ ಅದರಲ್ಲಿ ಪ್ರವೇಶ ಮಾಡಿದರು. ಅಗ್ನಿಯು ಬಹಳವಾಗಿ ಜ್ವಲಿಸುತ್ತಿದ್ದರೂ ಆಗ ಅವರನ್ನು ದಹಿಸಲಿಲ್ಲ. ಶತ್ರುಸಂಹಾರಕನೇ, ಆಗ ಉರಿಯುತ್ತಿದ್ದ ಅಗ್ನಿಯು ಶೀತಲವಾಯಿತು.

ಸ ಸಮುದ್ರಮಭಿಪ್ರೇತ್ಯ ಶೋಕಾವಿಷ್ಟೋ ಮಹಾಮುನಿಃ ।
ಬದ್ಧ್ವಾ ಕಂಠೇ ಶಿಲಾಂ ಗುರ್ವೀಂ ನಿಪಪಾತ ತದಂಭಸಿ ॥೪೯॥

ಮಹಾಮುನಿಗಳಾದ ವಸಿಷ್ಠರು ಶೋಕಾವಿಷ್ಟರಾಗಿ ಸಮುದ್ರಕ್ಕೆ ಹೋಗಿ ತಮ್ಮ ಕಂಠಕ್ಕೆ ಒಂದು ದೊಡ್ಡ ಶಿಲೆಯನ್ನು ಕಟ್ಟಿಕೊಂಡು ಸಮುದ್ರದ ನೀರಿನಲ್ಲಿ ಬಿದ್ದರು.

ಸ ಸಮುದ್ರೋರ್ಮಿವೇಗೇನ ಸ್ಥಲೇ ನ್ಯಸ್ತೋ ಮಹಾಮುನಿಃ ।
ಜಗಾಮ ಸತತಂ ಖಿನ್ನಃ ಪುನರೇವಾಶ್ರಮಂ ಪ್ರತಿ ॥೫೦॥

ತನ್ನ ಅಲೆಗಳ ವೇಗದಿಂದ ಸಮುದ್ರರಾಜನು ಆ ಮಹರ್ಷಿಗಳನ್ನು ದಡಕ್ಕೆ ತಂದುಹಾಕಿದನು. ಎಲ್ಲಾ ಪ್ರಯತ್ನಗಳೂ ವಿಫಲವಾದುದರಿಂದ ಖಿನ್ನರಾದ ಅವರು ಪುನಃ ತಮ್ಮ ಆಶ್ರಮಕ್ಕೆ ಬಂದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕೋನಾಶೀತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಎಪ್ಪತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ನೂರ ಎಂಭತ್ತನೆಯ ಅಧ್ಯಾಯ

(ಪುನಃ ಆತ್ಮಹತ್ಯೆಗೆ ವಸಿಷ್ಠರ ವಿಫಲ ಪ್ರಯತ್ನಗಳು. ಅದೃಶ್ಯಂತಿಯ ಜೊತೆಯಲ್ಲಿ ಸಂವಾದ. ಆಶ್ರಮಕ್ಕೆ ಪ್ರತಿನಿವೃತ್ತಿ. ಕಲ್ಮಾಷಪಾದನನ್ನು ರಾಕ್ಷಸನಿಂದ ವಿಮೋಚನೆಗೊಳಿಸಿ ಮದಯಂತಿಯಲ್ಲಿ ಪುತ್ರೋತ್ಪಾದನೆ)

ಗಂಧರ್ವಃ

ಸ ಆಶ್ರಮಪದಂ ದೃಷ್ಟ್ವಾ ರಹಿತಂ ತೈರ್ಮಹಾಮುನಿಃ ।
ನಿರ್ಜಗಾಮ ಸುದುಃಖಾರ್ತಃ ಪುನರೇವಾಶ್ರಮಾತ್ ತತಃ ॥೧॥

ಮಹರ್ಷಿಗಳಾದ ವಸಿಷ್ಠರು ತಮ್ಮ ಆಶ್ರಮಕ್ಕೆ ಹಿಂದಿರುಗಿ ಪುತ್ರರಿಲ್ಲದ ಆಶ್ರಮವನ್ನು ನೋಡಿ ಬಹಳ ದುಃಖದಿಂದ ಕೂಡಿದವರಾಗಿ ಪುನಃ ಆಶ್ರಮದಿಂದ ಹೊರಟರು.

ಸೋಽಪಶ್ಯತ್ ಸರಿತಂ ಪೂರ್ಣಾಂ ಪ್ರಾವೃಟ್‌ಕಾಲೇ ನವಾಂಭಸಾ ।
ವೃಕ್ಷಾನ್ ವಂಜುಲನೀಪಾದೀನ್ ವಹಂತೀಂ ತೀರಜಾನ್ ಬಹೂನ್॥೨॥

ಅವರು ಮಳೆಗಾಲದಲ್ಲಿ ಹೊಸ ನೀರಿನಿಂದ ಪೂರ್ಣವಾಗಿ ತೀರದಲ್ಲಿದ್ದ ವಂಜುಲ, ನೀಪ ಮೊದಲಾದ ಅನೇಕ ಮರಗಳನ್ನು ಕೊಚ್ಚಿಕೊಂಡು ಹೋಗುತ್ತಿದ್ದ ನದಿಯನ್ನು ನೋಡಿದರು.

ಅಂಭಸ್ಯಸ್ಯಾ ನಿಮಜ್ಜೇಯಮಿತಿ ದುಃಖಸಮನ್ವಿತಃ ।
ತಥಾ ಪಾಶೈಸ್ತದಾऽऽತ್ಮಾನಂ ಗಾಢಂ ಬದ್ಧ್ವಾ ಮಹಾಮುನಿಃ ।
ತಸ್ಯಾ ಜಲೇ ಮಹಾನದ್ಯಾ ನಿಮಮಜ್ಜ ಸುದುಃಖಿತಃ ॥೩॥

ದುಃಖಸಮನ್ವಿತರಾದ ಅವರು ಈ ನದಿಯ ನೀರಿನಲ್ಲಿ ಮುಳುಗುತ್ತೇನೆ ಎಂದು ಯೋಚಿಸಿ ತಮ್ಮನ್ನು ತಾವೇ ಪಾಶಗಳಿಂದ ದೃಢವಾಗಿ ಕಟ್ಟಿಕೊಂಡು ದುಃಖದಿಂದ ಆ ಮಹಾನದಿಯ ನೀರಿನಲ್ಲಿ ಮುಳುಗಿದರು.

ಅಥ ಚಿತ್ತ್ವಾ ನದೀ ಪಾಶಂ ತಸ್ಯಾರಿಬಲಮರ್ದನ ।
ಸ್ಥಲಸ್ಥಂ ತಮೃಷಿಂ ಕೃತ್ವಾ ವಿಪಾಶಂ ಸಾ ಸಮಾಸೃಜತ್ ॥೪॥

ಶತ್ರುಸೈನ್ಯ ಮರ್ದನನಾದ ಅರ್ಜುನನೇ, ಆಗ ಆ ನದಿಯು ಪಾಶಗಳನ್ನು ಕತ್ತರಿಸಿ ಪಾಶರಹಿತರಾದ ಆ ಋಷಿಗಳನ್ನು ದಡಕ್ಕೆ ತಂದುಹಾಕಿದಳು.

ಉತ್ತತಾರ ತತಃ ಪಾಶೈರ್ವಿಮುಕ್ತಃ ಸ ಮಹಾನೃಷಿಃ ।
ವಿಪಾಶೇತಿ ಚ ನಾಮಾಸ್ಯಾ ನದ್ಯಾಶ್ಚಕ್ರೇ ಮಹಾಮುನಿಃ ॥೫॥

ಪಾಶಗಳಿಂದ ಮುಕ್ತರಾದ ಆ ಮಹರ್ಷಿಗಳು ನದಿಯನ್ನು ದಾಟಿ ಹೊರಗೆ ಬಂದರು. ಆ ಮಹಾಮುನಿಗಳು ಆ ನದಿಗೆ ವಿಪಾಶ ಎಂದೇ ನಾಮಕರಣ ಮಾಡಿದರು.

ಸಾ ವಿಪಾಶೇತಿ ವಿಖ್ಯಾತಾ ನದೀ ಲೋಕೇಷು ಭಾರತ ।
ಋಷೇಸ್ತ ಸ್ಯ ನರವ್ಯಾಘ್ರ ವಚನಾತ್ ತಸ್ಯ ಧೀಮತಃ ॥೬॥

ಎಲೈ ಭಾರತನೇ, ಆ ನದಿಯು ಈಗಲೂ ಲೋಕದಲ್ಲಿ ಆ ಮೇಧಾವಿಗಳಾದ ಋಷಿಗಳ ವಚನದಂತೆ ವಿಪಾಶ ಎಂಬ ಹೆಸರಿನಿಂದಲೇ ಪ್ರಖ್ಯಾತವಾಗಿದೆ.

ಉತ್ತೀರ್ಯ ಚ ತತೋ ರಾಜನ್ ದುಃಖಿತೋ ಭಗವಾನೃಷಿಃ ।
ಶೋಕೇ ಬುದ್ಧಿಂ ತು ತಾಂ ಚಕ್ರೇ ನ ಚೈಕತ್ರ ವ್ಯತಿಷ್ಠತ ।
ಸೋಽಪಶ್ಯತ್ ಪರ್ವತಾಂಶ್ಚೈವ ಸರಿತಶ್ಚ ಸರಾಂಸಿ ಚ ॥೭॥

ರಾಜನೇ, ಪೂಜ್ಯರಾದ ಆ ಋಷಿಗಳು ದುಃಖದಿಂದ ನದಿಯನ್ನು ದಾಟಿ, ಪುನಃ ಶೋಕಹತರಾಗಿ ಒಂದು ಕಡೆಯಲ್ಲಿ ನಿಲ್ಲದೇ, ಪರ್ವತಗಳನ್ನೂ, ನದಿಗಳನ್ನೂ ಮತ್ತು ಸರೋವರಗಳನ್ನೂ ನೋಡಿದರು.

ದೃಷ್ಟ್ವಾ ಸ ಪುನರೇವರ್ಷಿರ್ನದೀಂ ಹೈಮವತೀಂ ತದಾ ।
ಚಂಡಗ್ರಾಹವತೀಂ ದೃಷ್ಟ್ವಾ ಸ್ರೋತಸ್ಯಾತ್ಮಾನಮಾತ್ಮನಾ ।
ಮಜ್ಜಯಾಮಾಸ ಶೋಕಾರ್ತೋ ಮರಣೇ ಕೃತನಿಶ್ಚಯಃ ॥೮॥

ಆ ಋಷಿಗಳು ಹಿಮಾಲಯದಿಂದ ಹರಿದುಬರುತ್ತಿರುವ ಉಗ್ರವಾದ ಮೊಸಳೆಗಳಿಂದ ಕೂಡಿದ ನದಿಯನ್ನು ನೋಡಿ ಶೋಕಾರ್ತರಾಗಿ ತಮ್ಮ ಮರಣವನ್ನು ನಿಶ್ಚಯಿಸಿ ಅದರ ಪ್ರವಾಹದಲ್ಲಿ ಮುಳುಗಿದರು.

ಸಾ ತಮಗ್ನಿಸಮಂ ವಿಪ್ರಮುಪಲಭ್ಯ ಸರಿದ್ವರಾ ।
ಶತಧಾ ವಿದ್ರುತಾ ತಸ್ಮಾಚ್ಛತದ್ರುರಿತಿ ವಿಶ್ರುತಾ ॥೯॥

ಆ ಶ್ರೇಷ್ಠಳಾದ ನದಿಯು ಅಗ್ನಿಯಂತಿರುವ ಆ ಋಷಿಗಳನ್ನು ನೋಡಿ ನೂರು ಕವಲುಗಳಾಗಿ ಹರಿದು ಶತದ್ರು ಎಂದು ಪ್ರಖ್ಯಾತಳಾದಳು.

ತತಃ ಸ್ಥಲಗತಂ ದೃಷ್ಟ್ವಾ ಆತ್ಮಾನಾಮೃಷಿಸತ್ತಮಃ
ಮರ್ತುಂ ನ ಶಕ್ಯಮಿತ್ಯುಕ್ತ್ವಾ ಪುನರೇವಾಶ್ರಮಂ ಯಯೌ ॥೧೦॥

ತಾವು ಮರಳಿನ ಮೇಲೆ ಬಿದ್ದಿರುವುದನ್ನು ಗಮನಿಸಿ ಆ ಋಷಿಶ್ರೇಷ್ಠರು ಮರಣವನ್ನು ಹೊಂದಲು ಸಾಧ್ಯವಿಲ್ಲ ಎಂದು ಹೇಳಿ ಪುನಃ ಆಶ್ರಮಕ್ಕೆ ಹಿಂದಿರುಗಿದರು.

ವಧ್ವಾಽದೃಶ್ಯಂತ್ಯಾಽನುಗತ ಆಶ್ರಮಾಭಿಮುಖಂ ವ್ರಜನ್ ।
ಅಥ ಶುಶ್ರಾವ ಸಾಂಗಸ್ಯ ವೇದಾಧ್ಯಯನನಿಸ್ವನಮ್ ।
ಪೃಷ್ಠತಃ ಪರಿಪೂರ್ಣಾರ್ಥೈಃ ಷಡ್ಭಿರಂಗೈರಲಂಕೃತಮ್ ॥೧೧॥

ಸೊಸೆಯಾದ ಅದೃಶ್ಯಂತಿಯಿಂದ (ಅದೃಶ್ಯಂತಿ ಇದು ಸೊಸೆಯ ಹೆಸರು) ಹಿಂಬಾಲಿಸಲ್ಪಟ್ಟ ಅವರು ಆಶ್ರಮಾಭಿಮುಖವಾಗಿ ಹೋಗುತ್ತಾ ತಮ್ಮ ಹಿಂದಿನಿಂದ ಪರಿಪೂರ್ಣಾರ್ಥವುಳ್ಳ ಆರು ಅಂಗಗಳಿಂದಲೂ ಕೂಡಿದ ಸಾಂಗವೇದಾಧ್ಯಯನ ಧ್ವನಿಯನ್ನು ಕೇಳಿದರು.

ಅನುವ್ರಜತಿ ಕೋ ನ್ವೇಷ ಮಾಮಿತ್ಯೇವ ಚ ಸೋಽಬ್ರವೀತ್ ।
ಅದೃಶ್ಯಂತ್ಯಹಮಿತ್ಯೇವ ತಂ ಸ್ನುಷಾ ಪ್ರತ್ಯುವಾಚ ಹ ।
ಭಾರ್ಯಾ ಶಕ್ತೇರ್ಮಹಾಭಾಗಾ ತಪೋಯುಕ್ತಾ ಮನಸ್ವಿನೀ ॥೧೨॥

ನನ್ನ ಹಿಂದೆ ಬರುತ್ತಿರುವವರು ಯಾರು ಎಂದು ಅವರು ಕೇಳಿದರು. ಶಕ್ತಿಋಷಿಗಳ ಪತ್ನಿಯಾದ ಮಹಾನುಭಾವಳೂ, ತಪಸ್ವಿನಿಯೂ, ಧೈರ್ಯಶಾಲಿನಿಯೂ ಆದ ಸೊಸೆಯಾದ ಅದೃಶ್ಯಂತಿಯು 'ನಾನು' ಎಂದು ಉತ್ತರವನ್ನು ಕೊಟ್ಟಳು.

ವಸಿಷ್ಠಃ

ಪುರುಃ ಕಸ್ಯೈಷ ಸಾಂಗಸ್ಯ ವೇದಾಧ್ಯಯನನಿಸ್ವನಃ
ಪುತ್ರಿ ಸಾಂಗಸ್ಯ ದೇದಸ್ಯ ಶಕ್ತೇರಿವ ಮಯಾ ಶ್ರುತಃ ॥೧೩॥

ಈ ಪೂರ್ಣವಾದ ಸಾಂಗವೇದ ವೇದಾಧ್ಯಯನ ಧ್ವನಿ ಯಾರದು. ಮಗಳೇ, ಈ ಸಾಂಗವೇದಾಧ್ಯಯನ ಧ್ವನಿಯು ನಾನು ಹಿಂದೆ ಕೇಳಿದ ಶಕ್ತಿಋಷಿಗಳ ಧ್ವನಿಯಂತಿದೆ.

ಅದೃಶ್ಯಂತೀ

ಅಯಂ ಕುಕ್ಷೌ ಸಮುತ್ಪನ್ನಃ ಶಕ್ತೇರ್ಗರ್ಭಃ ಸುತಸ್ಯ ತೇ ।
ಸಮಾ ದ್ವಾದಶ ತಸ್ಯೇಹ ವೇದಾನಭ್ಯಸ್ಯತೋ ಗತಾಃ ॥೧೪॥

ನನ್ನ ಉದರದಲ್ಲಿ ತಮ್ಮ ಮಕ್ಕಳಾದ ಶಕ್ತಿಋಷಿಗಳ ಗರ್ಭವು ಉತ್ಪನ್ನವಾಗಿದೆ. ಗರ್ಭದಲ್ಲಿರುವ ಆ ಶಿಶುವು ಹನ್ನೆರಡು ವರ್ಷಗಳಿಂದಲೂ ವೇದಾಧ್ಯಯನವನ್ನು ಮಾಡುತ್ತಿದೆ.

ಗಂಧರ್ವಃ

ಏವಮುಕ್ತಸ್ತತೋ ಹೃಷ್ಟೋ ವಸಿಷ್ಠಃ ಶ್ರೇಷ್ಠಭಾಗಿನೀಮ್ ।
ಅಸ್ತಿ ಸಂತಾನಮಿತ್ಯುಕ್ತ್ವಾ ಮೃತ್ಯೋಃ ಪಾರ್ಥ ನ್ಯವರ್ತತ ॥೧೫॥

ಪಾರ್ಥನೇ, ಈ ಮಾತುಗಳನ್ನು ಕೇಳಿದ ವಸಿಷ್ಠರು ಹರ್ಷಿತರಾಗಿ ಶ್ರೇಷ್ಠಭಾಗಿನಿಯಾದ ತಮ್ಮ ಸೊಸೆಯನ್ನು ಕುರಿತು 'ಓಹೋ ಸಂತಾನವಿದೆ' ಎಂದು ಹೇಳಿ ಮರಣಪ್ರಯತ್ನದಿಂದ ನಿವೃತ್ತರಾದರು.

ತತಃ ಪ್ರತಿನಿವೃತ್ತಃ ಸ ತಯಾ ವಧ್ವಾ ಸಹಾನಘ ।
ಕಲ್ಮಾಷಪಾದಮಾಸೀನಂ ದದರ್ಶ ವಿಜನೇ ತದಾ ॥೧೬॥

ಅನಘನೇ, ತಮ್ಮ ಸೊಸೆಯ ಜೊತೆಯಲ್ಲಿ ಹಿಂದೆ ಬರುತ್ತಿದ್ದ ಅವರು ದಾರಿಯಲ್ಲಿ ನಿರ್ಜನವಾದ ಪ್ರದೇಶದಲ್ಲಿ ಕಲ್ಮಾಷಪಾದನು ಕುಳಿತಿರುವುದನ್ನು ನೋಡಿದರು.

ಸ ತು ದೃಷ್ಟ್ವೈವ ತಂ ರಾಜಾ ಕ್ರುದ್ಧ ಉತ್ಥಾಯ ಭಾರತ ।
ಆವಿಷ್ಟೋ ರಕ್ಷಸೋಗ್ರೇಣ ಇಯೇಷಾತ್ತುಮಥೌಜಸಾ ॥೧೭॥

ಭಾರತನೇ, ಅವರನ್ನು ನೋಡಿದ ತಕ್ಷಣವೇ ಉಗ್ರನಾದ ರಾಕ್ಷಸನಿಂದ ಆವಿಷ್ಟನಾದ ಆ ರಾಜನು ಕ್ರುದ್ಧನಾಗಿ ಎದ್ದು ತನ್ನ ಬಲದಿಂದ ಅವರನ್ನು ತಿನ್ನಲು ಬಯಸಿದನು.

ಅದೃಶ್ಯಂತೀ ತು ತಂ ದೃಷ್ಟ್ವಾ ಘೋರಕರ್ಮಾಣಮಗ್ರತಃ ।
ಭಯಸಂವಿಗ್ನಯಾ ವಾಚಾ ವಸಿಷ್ಠಮಿದಮಬ್ರವೀತ್ ॥೧೮॥

ಅದೃಶ್ಯಂತಿಯು ಘೋರಕರ್ಮವನ್ನು ಮಾಡಲು ಹೊರಟಿರುವ ಅವನನ್ನು ನೋಡಿ ಭಯದಿಂದ ಕೂಡಿದ ಮಾತುಗಳಿಂದ ವಸಿಷ್ಠರನ್ನು ಕುರಿತು ಹೇಳಿದಳು.

ಅಸೌ ಮೃತ್ಯುರಿವೋಗ್ರೇಣ ದಂಡೇನ ಭಗವನ್ನಿಹ ।
ಪ್ರಗೃಹೀತೋಽತಿಘೋರೇಣ ರಾಕ್ಷಸೋಽಭ್ಯೇತಿ ಭೀಷಣಃ ॥೧೯॥

ಪೂಜ್ಯನಾದ ಯಮನು ಉಗ್ರವಾದ ದಂಡವನ್ನು ಹಿಡಿದು ಬಂದಂತೆ ಈ ಭಯಂಕರನಾದ ರಾಜನು ಘೋರನಾದ ರಾಕ್ಷಸನಿಂದ ಗ್ರಹೀತನಾಗಿ ಎದುರಿಗೆ ಬರುತ್ತಿದ್ದಾನೆ.

ತಂ ನಿವಾರಯಿತುಂ ಶಕ್ತೋ ನಾನ್ಯೋಽಸ್ತಿ ಭುವಿ ಕಶ್ಚನ ।
ತ್ವದೃತೇಽದ್ಯ ಮಹಾಭಾಗ ಸರ್ವವೇದವಿದಾಂ ವರ ॥೨೦॥

ಮಹಾನುಭಾವರೇ, ಸರ್ವವೇದಜ್ಞರಲ್ಲಿ ಶ್ರೇಷ್ಠರೇ, ಅವನನ್ನು ನಿವಾರಿಸಲು ನಿಮ್ಮನ್ನು ಬಿಟ್ಟು ಬೇರೆ ಯಾರಿಗೂ ಶಕ್ತಿಯಿಲ್ಲ.

ತ್ರಾಹಿ ಮಾಂ ಭಗವನ್ ಪಾಪಾದಸ್ಮಾದ್ ದಾರುಣದರ್ಶನಾತ್ ।
ರಾಕ್ಷಸಾದ್ ಭಕ್ಷಿತುಂ ಯಾವದ್ ಯತ್ನಮೇತಚ್ಚಿಕೀರ್ಷತಿ ॥೨೧॥

ಈ ಭಯಂಕರ ರೂಪವನ್ನು ಧರಿಸಿದ ರಾಕ್ಷಸನು ನನ್ನನ್ನು ತಿನ್ನಲು ಪ್ರಯತ್ನ ಮಾಡುವುದಕ್ಕಿಂತ ಮೊದಲೇ ಪೂಜ್ಯರಾದ ನೀವು ನನ್ನನ್ನು ಆ ರಾಕ್ಷಸನಿಂದ ರಕ್ಷಿಸಿ.

ವಸಿಷ್ಠಃ

ಮಾ ಭೈಃ ಪುತ್ರಿ ನ ಭೇತವ್ಯಂ ರಕ್ಷಸೋಽಸ್ಮಾತ್ ಕಥಂಚನ ।
ನೈತದ್ರಕ್ಷೋ ಭಯಂ ಯಸ್ಮಾತ್ ಪಶ್ಯಸಿ ತ್ವಮುಪಸ್ಥಿತಮ್ ॥೨೨॥

ಮಗಳೇ, ಈ ರಾಕ್ಷಸನಿಗೆ ಹೆದರಬೇಡ. ನೀನು ನೋಡುತ್ತಿರುವ ಯಾವನಿಂದ ನಿನಗೆ ಭಯವುಂಟಾಗಿದೆಯೋ ಅವನು ರಾಕ್ಷಸನಲ್ಲ.

ರಾಜಾ ಕಲ್ಮಾಷಪಾದೋಽಯಂ ವೀರ್ಯೇಣ ಪ್ರಥಿತೋ ಭುವಿ ।
ಸ ಏಷೋಽಸ್ಮಿನ್ ವನೋದ್ದೇಶೇ ನಿವಸತ್ಯತಿಭೀಷಣಃ ॥೨೩॥

ಇವನು ಭೂಮಿಯಲ್ಲಿ ತನ್ನ ಪರಾಕ್ರಮದಿಂದ ಪ್ರಖ್ಯಾತನಾದ ಕಲ್ಮಾಷಪಾದರಾಜ. ಅವನು ಅತಿಭಯಂಕರನಾಗಿ ಕಾಡಿನ ಈ ಪ್ರದೇಶದಲ್ಲಿ ವಾಸಿಸುತ್ತಿದ್ದಾನೆ.

ಗಂಧರ್ವಃ

ತಮಾಪತಂತಂ ಸಂಕ್ರುದ್ಧಂ ವಸಿಷ್ಠೋ ಭಗವಾನೃಷಿಃ ।
ವಾರಯಾಮಾಸ ತೇಜಸ್ವೀ ಹುಂಕಾರೇಣೈವ ಭಾರತ ॥೨೪॥

ಭಾರತನೇ, ಕೋಪದಿಂದ ಮೇಲೆ ಎರಗುತ್ತಿದ್ದ ಅವನನ್ನು ಪೂಜ್ಯರೂ, ತೇಜಸ್ವಿಗಳೂ ಆದ ವಸಿಷ್ಠಋಷಿಗಳು ಹುಂಕಾರದಿಂದಲೇ ನಿವಾರಿಸಿದರು.

ಮಂತ್ರಪೂತೇನ ಚ ಪುನಃ ಸ ತಮಭ್ಯುಕ್ಷ್ಯ ವಾರಿಣಾ ।
ಮೋಕ್ಷಯಾಮಾಸ ಘೋರಾದ್ ವೈ ರಾಕ್ಷಸಾದ್ ರಾಜಸತ್ತಮ ॥೨೫॥

ರಾಜಶ್ರೇಷ್ಠನೇ, ಅವರು ಪುನಃ ಮಂತ್ರಪೂತವಾದ ಜಲವನ್ನು ಅವನ ಮೇಲೆ ಪ್ರೋಕ್ಷಿಸಿ ಅವನನ್ನು ಆ ಘೋರನಾದ ರಾಕ್ಷಸನಿಂದ ಬಿಡುಗಡೆ ಮಾಡಿದರು.

ಸ ಹಿ ದ್ವಾದಶ ವರ್ಷಾಣಿ ವಾಸಿಷ್ಠಸ್ಯೈವ ತೇಜಸಾ ।
ಗ್ರಸ್ತ ಆಸೀದ್ ಗ್ರಹೇಣೇವ ಪರ್ವಕಾಲೇ ದಿವಾಕರಃ ॥೨೬॥

ಆ ರಾಜನಾದರೋ, ವಸಿಷ್ಠಪುತ್ರರಾದ ಶಕ್ತಿಋಷಿಗಳ ತಪಃಪ್ರಭಾವದಿಂದ ಪರ್ವಕಾಲದಲ್ಲಿ ಸೂರ್ಯನು ರಾಹುವಿನಿಂದ ಗ್ರಸ್ತವಾದಂತೆ ಹನ್ನೆರಡು ವರ್ಷಗಳ ಕಾಲ ರಾಕ್ಷಸನಿಂದ ಗ್ರಸ್ತನಾಗಿದ್ದನು.

ರಕ್ಷಸಾ ವಿಪ್ರಮುಕ್ತೋಽಥ ಸ ನೃಪಸ್ತದ್ವನಂ ಮಹತ್ ।
ತೇಜಸಾ ರಂಜಯಾಮಾಸ ಸಂಧ್ಯಾಭ್ರಮಿವ ಭಾಸ್ಕರಃ ॥೨೭॥

ರಾಕ್ಷಸನಿಂದ ವಿಮುಕ್ತನಾದ ಆ ರಾಜನು ಆ ದೊಡ್ಡ ಕಾಡನ್ನು ಸಂಧ್ಯಾಕಾಲದಲ್ಲಿ ಸೂರ್ಯನು ಮೋಡಗಳನ್ನು ಬೆಳಗಿಸಿದಂತೆ ತನ್ನ ತೇಜಸ್ಸಿನಿಂದ ಬೆಳಗಿಸಿದನು.

ಪ್ರತಿಲಭ್ಯ ತತಃ ಸಂಜ್ಞಾಮಭಿವಾದ್ಯ ಕೃತಾಂಜಲಿಃ ।
ಉವಾಚ ನೃಪತಿಃ ಕಾಲೇ ವಸಿಷ್ಠಮೃಷಿಸತ್ತಮಮ್ ॥೨೮॥

ರಾಜನು ತನ್ನ ಜ್ಞಾನವನ್ನು ಮರಳಿ ಪಡೆದು ವಸಿಷ್ಠರಿಗೆ ನಮಸ್ಕಾರವನ್ನು ಮಾಡಿ ಕೈಗಳನ್ನು ಮುಗಿದು ಯೋಗ್ಯವಾದ ಕಾಲದಲ್ಲಿ ಆ ಋಷಿಶ್ರೇಷ್ಠರನ್ನು ಕುರಿತು ಮಾತನಾಡಿದನು.

ಸೌದಾಸೋಽಹಂ ಮಹಾಭಾಗ ಯಾಜ್ಯಸ್ತೇ ದ್ವಿಜಸತ್ತಮ ।
ಅಸ್ಮಿನ್ ಕಾಲೇ ಯದಿಷ್ಟಂ ತೇ ಬ್ರೂಹಿ ಕಿಂ ಕರವಾಣಿ ತೇ ॥೨೯॥

ದ್ವಿಜಶ್ರೇಷ್ಠರೇ, ಮಹಾನುಭಾವರೇ, ನಾನು ನೀವು ಯಾಗ ಮಾಡಿಸಲು ಯೋಗ್ಯನಾದ ಸೌದಾಸ. (ಕಲ್ಮಾಷಪಾದನಿಗೆ ಸೌದಾಸ ಎಂದೂ ಹೆಸರು.) ಈಗ ನಿಮಗೆ ಏನು ಇಷ್ಟವಾಗಿದೆ ಅದನ್ನು ಹೇಳಿ. ನಾನು ನಿಮಗೆ ಏನು ಮಾಡಲಿ.

ನಾವಮಂಸ್ಯಾಮಿ ವೈ ಬ್ರಹ್ಮನ್ ಕದಾಚಿದ್ ಬ್ರಾಹ್ಮಣಾನಹಮ್ ।
ತ್ವನ್ನಿದೇಶೇ ಸ್ಥಿತಃ ಶಶ್ವತ್ ಪೂಜಯಿಷ್ಯಾಮ್ಯಹಂ ದ್ವಿಜಾನ್ ॥೩೦॥

ಬ್ರಾಹ್ಮಣರೇ, ನಾನು ಇನ್ನು ಮುಂದೆ ಎಂದೂ ಬ್ರಾಹ್ಮಣರನ್ನು ಅಪಮಾನ ಮಾಡುವುದಿಲ್ಲ. ನಿಮ್ಮ ಆಜ್ಞೆಯನ್ನು ಯಾವಾಗಲೂ ಶಿರಸಾಧರಿಸಿ ಬ್ರಾಹ್ಮಣರನ್ನು ಪೂಜಿಸುವೆನು.

ಇಕ್ಷ್ವಾಕೂಣಾಂ ತು ಯೇನಾಹಮನೃಣಃ ಸ್ಯಾಂ ದ್ವಿಜೋತ್ತಮ ।
ತತ್ ತತ್ತಃ ಪ್ರಾಪ್ತುಮಿಚ್ಛಾಮಿ ಸರ್ವವೇದವಿದಾಂ ವರ ॥೩೧॥

ಅಪತ್ಯಾಯೇಪ್ಸಿತಾಯ ತ್ವಂ ಮಹಿಷೀಂ ಗಂತುಮರ್ಹಸಿ ।
ಶೀಲರೂಪಗುಣೋಪೇತಾಮಿಕ್ಷ್ವಾಕೂಣಾಂ ಹಿ ವೃದ್ಧಯೇ ॥೩೨॥

ದ್ವಿಜಶ್ರೇಷ್ಠರೇ, ನಾನು ಇಕ್ಷ್ವಾಕುವಂಶದ ನನ್ನ ಪೂರ್ವಜರ ಋಣದಿಂದ ಮುಕ್ತನಾಗುವ ಪುತ್ರನನ್ನು ಪಡೆಯಲು ಇಚ್ಛಿಸುತ್ತೇನೆ. ಸರ್ವವೇದಜ್ಞರಲ್ಲಿ ಶ್ರೇಷ್ಠರಾದವರೇ, ಅಂತಹ ಪುತ್ರನನ್ನು ಪಡೆದು ಇಕ್ಷ್ವಾಕುಗಳ ವಂಶವನ್ನು ಬೆಳೆಸುವ ಸಲುವಾಗಿ ತಾವು ಶೀಲರೂಪಗುಣೋಪೇತಳಾದ ನನ್ನ ಪತ್ನಿಯ ಸಮಾಗಮವನ್ನು ಮಾಡಬೇಕು.

ಗಂಧರ್ವಃ

ದದಾನೀತ್ಯೇವ ತಂ ತತ್ರ ರಾಜಾನಂ ಪ್ರತ್ಯುವಾಚ ಹ ।
ವಸಿಷ್ಠಃ ಪರಮೇಷ್ವಾಸಂ ಸತ್ಯಸಂಧೋ ಮಹಾತಪಾಃ ॥೩೩॥

ಆ ಸತ್ಯಸಂಧರೂ, ಮಹಾತಪಸ್ವಿಗಳೂ ಆದ ವಸಿಷ್ಠರು ವೀರನಾದ ಆ ರಾಜನನ್ನು ಕುರಿತು 'ಪುತ್ರನನ್ನು ಕೊಡುತ್ತೇನೆ' ಎಂದು ಹೇಳಿದರು.

ತತಃ ಪ್ರತಿಯಯೌ ಕಾಲೇ ವಸಿಷ್ಠಸಹಿತೋಽನಘ ।
ಖ್ಯಾತಂ ಪುರವರಂ ಲೋಕೇಷ್ವಯೋಧ್ಯಾಂ ಮನುಜೇಶ್ವರಃ ॥೩೪॥

ಅನಘನೇ, ಅನಂತರ ಕಲ್ಮಾಷಪಾದರಾಜನು ವಸಿಷ್ಠರ ಸಹಿತವಾಗಿ ಲೋಕದಲ್ಲಿ ಪ್ರಖ್ಯಾತವಾದ ಅಯೋಧ್ಯಾಪಟ್ಟಣಕ್ಕೆ ಯೋಗ್ಯವಾದ ಕಾಲದಲ್ಲಿ ಹೋದನು.

ಪ್ರಜಾಸ್ತಂ ಪ್ರತಿನಂದಂತ್ಯಃ ಸರ್ವಾಃ ಪ್ರತ್ಯುದ್ಯಯುಸ್ತದಾ ।
ವಿಪಾಪ್ಮಾನಂ ಮಹಾತ್ಮಾನಂ ದಿವೌಕಸ ಇವೇಶ್ವರಮ್ ॥೩೫॥

ಪಾಪರಹಿತನಾಗಿ ದೇವತೆಗಳಂತೆ ಕಂಗೊಳಿಸುವ ಮಹಾನುಭಾವನಾದ ತಮ್ಮ ರಾಜನನ್ನು ಕಂಡು ಎಲ್ಲಾ ಪ್ರಜೆಗಳು ಅವನನ್ನು ಪ್ರತಿನಂದಿಸುತ್ತಾ ಅವನನ್ನು ಸ್ವೀಕರಿಸಲು ಅವನ ಎದುರಿನಲ್ಲಿ ಬಂದರು.

ಅಚಿರಾತ್ ಸ ಮನುಷ್ಯೇಂದ್ರೋ ನಗರೀಂ ಪುಣ್ಯಕರ್ಮಣಾಮ್ ।
ವಿವೇಶ ಸಹಿತಸ್ತೇನ ವಸಿಷ್ಠೇನ ಮಹಾತ್ಮನಾ ॥೩೬॥

ಆ ರಾಜನು ಮಹಾತ್ಮರಾದ ವಸಿಷ್ಠರ ಜೊತೆಯಲ್ಲಿ ಬಹಳ ಶೀಘ್ರವಾಗಿ ಪುಣ್ಯವಂತರ ನಗರಿಯಾದ ಅಯೋಧ್ಯೆಯನ್ನು ಪ್ರವೇಶಿಸಿದನು.

ದದೃಶುಸ್ತಂ ತತೋ ರಾಜಾನ್ನಯೋಧ್ಯಾಪುರವಾಸಿನಃ ।
ಪುಷ್ಯೇಣ ಸಹಿತಂ ಕಾಲೇ ನಿಶಾಕರಮಿವೋದಿತಮ್ ॥೩೭॥

ರಾಜನೇ, ಆಗ ಅಯೋಧ್ಯಾಪುರವಾಸಿಗಳು ಪುಷ್ಯನಕ್ಷತ್ರದಲ್ಲಿ ಉದಯಿಸಿದ ಚಂದ್ರನಂತಿರುವ ಅವನನ್ನು ನೋಡಿದರು.

ಪ್ರತಿಲಭ್ಯ ತತಃ ಸಂಜ್ಞಾಮಭಿವಾದ್ಯ ಕೃತಾಂಜಲಿಃ ।
ಉವಾಚ ನೃಪತಿಃ ಕಾಲೇ ವಸಿಷ್ಠಮೃಷಿಸತ್ತಮಮ್ ॥೨೮॥

ರಾಜನು ತನ್ನ ಜ್ಞಾನವನ್ನು ಮರಳಿ ಪಡೆದು ವಸಿಷ್ಠರಿಗೆ ನಮಸ್ಕಾರವನ್ನು ಮಾಡಿ ಕೈಗಳನ್ನು ಮುಗಿದು ಯೋಗ್ಯವಾದ ಕಾಲದಲ್ಲಿ ಆ ಋಷಿಶ್ರೇಷ್ಠರನ್ನು ಕುರಿತು ಮಾತನಾಡಿದನು.

ಸೌದಾಸೋಽಹಂ ಮಹಾಭಾಗ ಯಾಜ್ಯಸ್ತೇ ದ್ವಿಜಸತ್ತಮ ।
ಅಸ್ಮಿನ್ ಕಾಲೇ ಯದಿಷ್ಟಂ ತೇ ಬ್ರೂಹಿ ಕಿಂ ಕರವಾಣಿ ತೇ ॥೨೯॥

ದ್ವಿಜಶ್ರೇಷ್ಠರೇ, ಮಹಾನುಭಾವರೇ, ನಾನು ನೀವು ಯಾಗ ಮಾಡಿಸಲು ಯೋಗ್ಯನಾದ ಸೌದಾಸ. (ಕಲ್ಮಾಷಪಾದನಿಗೆ ಸೌದಾಸ ಎಂದೂ ಹೆಸರು.) ಈಗ ನಿಮಗೆ ಏನು ಇಷ್ಟವಾಗಿದೆ ಅದನ್ನು ಹೇಳಿ. ನಾನು ನಿಮಗೆ ಏನು ಮಾಡಲಿ.

ನಾವಮಂಸ್ಯಾಮಿ ವೈ ಬ್ರಹ್ಮನ್ ಕದಾಚಿದ್ ಬ್ರಾಹ್ಮಣಾನಹಮ್ ।
ತ್ವನ್ನಿದೇಶೇ ಸ್ಥಿತಃ ಶಶ್ವತ್ ಪೂಜಯಿಷ್ಯಾಮ್ಯಹಂ ದ್ವಿಜಾನ್ ॥೩೦॥

ಬ್ರಾಹ್ಮಣರೇ, ನಾನು ಇನ್ನು ಮುಂದೆ ಎಂದೂ ಬ್ರಾಹ್ಮಣರನ್ನು ಅಪಮಾನ ಮಾಡುವುದಿಲ್ಲ. ನಿಮ್ಮ ಆಜ್ಞೆಯನ್ನು ಯಾವಾಗಲೂ ಶಿರಸಾಧರಿಸಿ ಬ್ರಾಹ್ಮಣರನ್ನು ಪೂಜಿಸುವೆನು.

ಇಕ್ಷ್ವಾಕೂಣಾಂ ತು ಯೇನಾಹಮನೃಣಃ ಸ್ಯಾಂ ದ್ವಿಜೋತ್ತಮ ।
ತತ್ ತ್ವತ್ತಃ ಪ್ರಾಪ್ತುಮಿಚ್ಛಾಮಿ ಸರ್ವವೇದವಿದಾಂ ವರ ॥೩೧॥

ಅಪತ್ಯಾಯೇಪ್ಸಿತಾಯ ತ್ವಂ ಮಹಿಷೀಂ ಗಂತುಮರ್ಹಸಿ ।
ಶೀಲರೂಪಗುಣೋಪೇತಾಮಿಕ್ಷ್ವಾಕೂಣಾಂ ಹಿ ವೃದ್ಧಯೇ ॥೩೨॥

ದ್ವಿಜಶ್ರೇಷ್ಠರೇ, ನಾನು ಇಕ್ಷ್ವಾಕುವಂಶದ ನನ್ನ ಪೂರ್ವಜರ ಋಣದಿಂದ ಮುಕ್ತನಾಗುವ ಪುತ್ರನನ್ನು ಪಡೆಯಲು ಇಚ್ಛಿಸುತ್ತೇನೆ. ಸರ್ವವೇದಜ್ಞರಲ್ಲಿ ಶ್ರೇಷ್ಠರಾದವರೇ, ಅಂತಹ ಪುತ್ರನನ್ನು ಪಡೆದು ಇಕ್ಷ್ವಾಕುಗಳ ವಂಶವನ್ನು ಬೆಳೆಸುವ ಸಲುವಾಗಿ ತಾವು ಶೀಲರೂಪಗುಣೋಪೇತಳಾದ ನನ್ನ ಪತ್ನಿಯ ಸಮಾಗಮವನ್ನು ಮಾಡಬೇಕು.

ಗಂಧರ್ವಃ

ದದಾನೀತ್ಯೇವ ತಂ ತತ್ರ ರಾಜಾನಂ ಪ್ರತ್ಯುವಾಚ ಹ ।
ವಸಿಷ್ಠಃ ಪರಮೇಷ್ವಾಸಂ ಸತ್ಯಸಂಧೋ ಮಹಾತಪಾಃ ॥೩೩॥

ಆ ಸತ್ಯಸಂಧರೂ, ಮಹಾತಪಸ್ವಿಗಳೂ ಆದ ವಸಿಷ್ಠರು ವೀರನಾದ ಆ ರಾಜನನ್ನು ಕುರಿತು 'ಪುತ್ರನನ್ನು ಕೊಡುತ್ತೇನೆ' ಎಂದು ಹೇಳಿದರು.

ತತಃ ಪ್ರತಿಯಯೌ ಕಾಲೇ ವಸಿಷ್ಠಸಹಿತೋಽನಘ ।
ಖ್ಯಾತಂ ಪುರವರಂ ಲೋಕೇಷ್ವಯೋಧ್ಯಾಂ ಮನುಜೇಶ್ವರಃ ॥೩೪॥

ಅನಘನೇ, ಅನಂತರ ಕಲ್ಮಾಷಪಾದರಾಜನು ವಸಿಷ್ಠರ ಸಹಿತವಾಗಿ ಲೋಕದಲ್ಲಿ ಪ್ರಖ್ಯಾತವಾದ ಅಯೋಧ್ಯಾಪಟ್ಟಣಕ್ಕೆ ಯೋಗ್ಯವಾದ ಕಾಲದಲ್ಲಿ ಹೋದನು.

ಪ್ರಜಾಸ್ತಂ ಪ್ರತಿನಂದಂತ್ಯಃ ಸರ್ವಾಃ ಪ್ರತ್ಯುದ್ಯಯುಸ್ತದಾ ।
ವಿಪಾಪ್ಮಾನಂ ಮಹಾತ್ಮಾನಂ ದಿವೌಕಸ ಇವೇಶ್ವರಮ್ ॥೩೫॥

ಪಾಪರಹಿತನಾಗಿ ದೇವತೆಗಳಂತೆ ಕಂಗೊಳಿಸುವ ಮಹಾನುಭಾವನಾದ ತಮ್ಮ ರಾಜನನ್ನು ಕಂಡು ಎಲ್ಲಾ ಪ್ರಜೆಗಳು ಅವನನ್ನು ಪ್ರತಿನಂದಿಸುತ್ತಾ ಅವನನ್ನು ಸ್ವೀಕರಿಸಲು ಅವನ ಎದುರಿನಲ್ಲಿ ಬಂದರು.

ಅಚಿರಾತ್ ಸ ಮನುಷ್ಯೇಂದ್ರೋ ನಗರೀಂ ಪುಣ್ಯಕರ್ಮಣಾಮ್ ।
ವಿವೇಶ ಸಹಿತಸ್ತೇನ ವಸಿಷ್ಠೇನ ಮಹಾತ್ಮನಾ ॥೩೬॥

ಆ ರಾಜನು ಮಹಾತ್ಮರಾದ ವಸಿಷ್ಠರ ಜೊತೆಯಲ್ಲಿ ಬಹಳ ಶೀಘ್ರವಾಗಿ ಪುಣ್ಯವಂತರ ನಗರಿಯಾದ ಅಯೋಧ್ಯೆಯನ್ನು ಪ್ರವೇಶಿಸಿದನು.

ದದೃಶುಸ್ತಂ ತತೋ ರಾಜಾನ್ನಯೋಧ್ಯಾಪುರವಾಸಿನಃ ।
ಪುಷ್ಯೇಣ ಸಹಿತಂ ಕಾಲೇ ನಿಶಾಕರಮಿವೋದಿತಮ್ ॥೩೭॥

ರಾಜನೇ, ಆಗ ಅಯೋಧ್ಯಾಪುರವಾಸಿಗಳು ಪುಷ್ಯನಕ್ಷತ್ರದಲ್ಲಿ ಉದಯಿಸಿದ ಚಂದ್ರನಂತಿರುವ ಅವನನ್ನು ನೋಡಿದರು.

ಸ ಹಿ ತಾಂ ಪೂರಯಾಮಾಸ ಲಕ್ಷ್ಮ್ಯಾ ಲಕ್ಷ್ಮೀವತಾಂ ವರಃ ।
ಅಯೋಧ್ಯಾಂ ವ್ಯೋಮ ಶೀತಾಂಶುಃ ಶರತ್ಕಾಲ ಇವೋದಿತಃ ॥೩೮॥

ಸಂಪದ್ಭುಕ್ತರಲ್ಲಿ ಶ್ರೇಷ್ಠನಾದ ಅವನು ಶರತ್ಕಾಲದ ಚಂದ್ರನು ತನ್ನ ಕಾಂತಿಯಿಂದ ಆಕಾಶವನ್ನು ತುಂಬಿದಂತೆ ಅಯೋಧ್ಯಾಪಟ್ಟಣವನ್ನು ಸಂಪತ್ತಿನಿಂದ ತುಂಬಿದನು.

ಸಂಸಿಕ್ತಮೃಷ್ಟಪಂಥಾನಂ ಪತಾಕೋಚ್ಛ್ರಿತಭೂಷಿತಮ್ ।
ಮನಃ ಪ್ರಹ್ಲಾದಯಾಮಾಸ ತಸ್ಯ ತತ್ಪುರಮುತ್ತಮಮ್ ॥೩೯॥

ಅವನ ಆ ಶ್ರೇಷ್ಠವಾದ ಪಟ್ಟಣವು ಸಾರಿಸಿದ ನಿರ್ಮಲವಾದ ಮಾರ್ಗಗಳಿಂದಲೂ, ಉನ್ನತವಾದ ಪತಾಕೆಗಳಿಂದಲೂ ಭೂಷಿತವಾಗಿ ಮನಸ್ಸಿಗೆ ಸಂತೋಷವನ್ನುಂಟು ಮಾಡುತ್ತಿತ್ತು.

ಹೃಷ್ಟಪುಷ್ಟಜನಾಕೀರ್ಣಾ ಸಾ ಪುರೀ ಕುರುನಂದನ ।
ಅಶೋಭತ ತದಾ ತೇನ ಶಕ್ರೇಣೇವಾಮರಾವತೀ ॥೪೦॥

ಕುರುನಂದನನೇ, ಹೃಷ್ಟಪುಷ್ಟ ಜನರಿಂದ ತುಂಬಿದ ಆ ಪಟ್ಟಣವು ಆಗ ಅವನಿಂದ ಇಂದ್ರನಿಂದ ಅಮರಾವತಿಯು ಶೋಭಿಸುವಂತೆ ಶೋಭಿಸಿತು.

ತತಃ ಪ್ರವಿಷ್ಟೇ ಕೌಂತೇಯ ತಸ್ಮಿನ್ ರಾಜನಿ ತಾಂ ಪುರೀಮ್ ।
ತಸ್ಯ ರಾಜ್ಞೋಽಥ ಸಾ ದೇವೀ ವಸಿಷ್ಠಮುಪಚಕ್ರಮೇ ॥೪೧॥

ಋತಾವಥ ಮಹರ್ಷಿಸ್ತು ಸಂಬಭೂವ ತಯಾ ಸಹ ।
ದೇವ್ಯಾ ದಿವ್ಯೇನ ವಿಧಿನಾ ವಸಿಷ್ಠಃ ಶ್ರೇಷ್ಠಭಾಗೃಷಿಃ ॥೪೨॥

ಕೌಂತೇಯನೇ, ರಾಜನು ತನ್ನ ಪಟ್ಟಣವನ್ನು ಪ್ರವೇಶಿಸುತ್ತಿರಲು ರಾಣಿಯು ಯೋಗ್ಯವಾದ ಋತುಕಾಲದಲ್ಲಿ ವಸಿಷ್ಠರನ್ನು ಸಮೀಪಿಸಿದಳು. ಶ್ರೇಷ್ಠವಾದ ಫಲವನ್ನು ನೀಡುವ ವಸಿಷ್ಠಋಷಿಗಳು ದಿವ್ಯವಿಧಾನದಿಂದ ಆ ದೇವಿಯ ಸಮಾಗಮವನ್ನು ಮಾಡಿದರು.

ರಾಜ್ಞಾಽಭಿವಾದಿತಸ್ತೇನ ಜಗಾಮ ಪುನರಾಶ್ರಮಮ್ ।
ದೀರ್ಘಕಾಲಧೃತಂ ಗರ್ಭಂ ಸುಷಾವ ನ ತು ತಂ ಯದಾ ॥೪೩॥

ಪ್ರಾತಃಕಾಲದಲ್ಲಿ ರಾಜನಿಂದ ನಮಸ್ಕರಿಸಲ್ಪಟ್ಟ ಅವರು ತಮ್ಮ ಆಶ್ರಮಕ್ಕೆ ಹೊರಟು ಹೋದರು. ರಾಣಿಯು ದೀರ್ಘಕಾಲದಲ್ಲಿ ಆ ಗರ್ಭವನ್ನು ಧರಿಸಿದರೂ ಪ್ರಸವಿಸಲಿಲ್ಲ.

ಸಾऽಥ ದೇವ್ಯಶ್ಮನಾ ಕುಕ್ಷಿಂ ನಿರ್ಬಿಭೇದ ತದಾ ಸ್ವಕಮ್ ।
ದ್ವಾದಶೇऽಥ ತತೋ ವರ್ಷೇ ಸಂಜಜ್ಞೇ ಮನುಷರ್ಷಭ ।
ಅಶ್ಮಕೋ ನಾಮ ರಾಜರ್ಷಿಃ ಪತ್ತನಂ ಯೋ ನ್ಯವೇಶಯತ್ ॥೪೪॥

ಆಗ ಆ ದೇವಿಯಾದ ಮದಯಂತಿಯು ಕಲ್ಲಿನಿಂದ ತನ್ನ ಉದರವನ್ನು ಕುಟ್ಟಿಕೊಂಡಳು. ಪುರಷರ್ಷಭನೇ, ಆಗ ಗರ್ಭವನ್ನು ಧರಿಸಿದ ಹನ್ನೆರಡನೆಯ ವರ್ಷದಲ್ಲಿ ಶಿಶುವನ್ನು ಪ್ರಸವಿಸಿದಳು. ಆ ಶಿಶುವು ಅಶ್ಮಕನೆಂಬ ರಾಜರ್ಷಿಯಾಗಿ ಈ ಪಟ್ಟಣವನ್ನು ನಿರ್ಮಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಅಶೀತ್ಯಧಿಕಶತತಮೋऽಧ್ಯಾಯಃ ॥

॥ ಇತಿ ಚೈತ್ರರಥಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಎಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ನೂರ ಎಂಭತ್ತೊಂದನೆಯ ಅಧ್ಯಾಯ

(ಆಶ್ರಮದಲ್ಲಿ ಪರಾಶರರ ಜನನ. ವಸಿಷ್ಠರಿಂದ ಅವರ ಸಾಂತ್ವನ ಕಾರ್ತವೀರ್ಯನ ವಂಶಸ್ಥರಿಂದ ಭೃಗುಕುಲದ ವಧೆ. ಔರ್ವರ ಜನ್ಮ. ಮತ್ತು ಕ್ಷತ್ರಿಯರ ಅಂಧತ್ವ.)

ಗಂಧರ್ವಃ

ಆಶ್ರಮಸ್ಥಾ ತತಃ ಪುತ್ರಮದೃಶ್ಯಂತೀ ವ್ಯಜಾಯತ ।
ಶಕ್ತೇಃ ಕುಲಕರಂ ರಾಜನ್ ದ್ವಿತೀಯಮಿವ ಶಕ್ತಿನಮ್ ॥೧॥

ರಾಜನೇ, ಅದೃಶ್ಯಂತಿಯು ಆಶ್ರಮದಲ್ಲಿ ಶಕ್ತಿಯ ವಂಶಕರನಾದ ಎರಡನೆಯ ಶಕ್ತಿಯಂತಿದ್ದ ಪುತ್ರನನ್ನು ಪ್ರಸವಿಸಿದಳು.

ಜಾತಕರ್ಮಾದಿಕಾಸ್ತಸ್ಯ ಕ್ರಿಯಾಃ ಸ ಮುನಿಪುಂಗವಃ ।
ಪೌತ್ರಸ್ಯ ಭರತಶ್ರೇಷ್ಠ ಚಕಾರ ಭಗವಾನ್ ಸ್ವಯಮ್ ॥೨॥

ಭರತಶ್ರೇಷ್ಠನೇ, ಋಷಿಶ್ರೇಷ್ಠರಾದ ಪೂಜ್ಯರಾದ ವಸಿಷ್ಠರು ಮೊಮ್ಮಗನಿಗೆ ಜಾತಕರ್ಮಾದಿಕ್ರಿಯೆಗಳನ್ನು ತಾವೇ ಮಾಡಿದರು.

ಪರಾಸುತ್ವಮಯನ್ ಯೇನ ವಸಿಷ್ಠಸ್ಥಾಪಿತಸ್ತದಾ ।
ಗರ್ಭಸ್ತೇನ ತತೋ ಲೋಕೇ ಪರಾಶರ ಇತಿ ಸ್ಮೃತಃ ॥೩॥

ಪರಾಸುತ್ವವನ್ನು ಹೊಂದುತ್ತಿದ್ದ ಗರ್ಭವು ವಸಿಷ್ಠರಿಂದ ಸ್ಥಾಪಿಸಲ್ಪಟ್ಟಿದ್ದರಿಂದ ಆ ಕುಮಾರನಿಗೆ ಪರಾಶರ ಎಂದೇ ಹೆಸರಾಯಿತು. ('ಪರ' ಎಂದರೆ ವಸಿಷ್ಠರಿಂದ 'ಅಶರ' ಹಿಂಸೆಯಾಗದಂತೆ ರಕ್ಷಿಸಲ್ಪಟ್ಟವನು ಎಂಬರ್ಥದಲ್ಲಿ ಪರಾಶರ ಶಬ್ದವು ಇದೆ.)

ಅಮನ್ಯತ ಸ ಧರ್ಮಾತ್ಮಾ ವಸಿಷ್ಠಂ ಪಿತರಂ ತದಾ ।
ಜನ್ಮಪ್ರಭೃತಿ ತಸ್ಮಿಂಸ್ತು ಪಿತರೀವ ವ್ಯವರ್ತತ ॥೪॥

ಧರ್ಮಾತ್ಮರಾದ ಪರಾಶರರು ವಸಿಷ್ಠರನ್ನೇ ತಂದೆಯೆಂದು ತಿಳಿದು ಹುಟ್ಟಿದಾಗಿನಿಂದ ತಂದೆಯಂತೆಯೇ ಅವರಲ್ಲಿ ನಡೆದುಕೊಂಡರು.

ಸ ತಾತ ಇತಿ ವಿಪ್ರರ್ಷಿಂ ವಸಿಷ್ಠಂ ಪ್ರತ್ಯಭಾಷತ ।
ಮಾತುಃ ಸಮೀಪೇ ಕೌಂತೇಯ ಅದೃಶ್ಯಂತ್ಯಾ ನರಾಧಿಪ ॥೫॥

ನರಾಧಿಪನಾದ ಕೌಂತೇಯನೇ, ಅವನು ತನ್ನ ತಾಯಿ ಅದೃಶ್ಯಂತಿಯ ಸಮೀಪದಲ್ಲಿ ವಿಪ್ರರ್ಷಿಗಳಾದ ವಸಿಷ್ಠರನ್ನು ಅಪ್ಪಾ ಎಂದು ಕರೆಯುತ್ತಿದ್ದನು.

ತಾತೇತಿ ಪರಿಪೂರ್ಣಾರ್ಥಂ ತಸ್ಯೇದಂ ಮಧುರಂ ವಚಃ ।
ಅದೃಶ್ಯಂತ್ಯಶ್ರುಪೂರ್ಣಾಕ್ಷೀ ಶೃಣ್ವಂತೀ ತಮುವಾಚ ಹ ॥೬॥

ಮಗನ ಮುಖದಿಂದ ಅಪ್ಪಾ ಎಂಬ ಅರ್ಥಪೂರ್ಣವಾದ ಮಧುರವಾದ ಶಬ್ದವನ್ನು ಕೇಳಿ ಅದೃಶ್ಯಂತಿಯು ಕಣ್ಣುಗಳಲ್ಲಿ ನೀರು ತುಂಬಿಕೊಂಡು ಅವನನ್ನು ಕುರಿತು ಹೇಳಿದಳು.

ಮಾ ತಾತ ತಾತತಾತೇತಿ ನ ತೇ ತಾತೋ ಮಹಾಮುನಿಃ ।
ರಕ್ಷಸಾ ಭಕ್ಷಿತಸ್ತಾತ ತವ ತಾತೋ ಮಹಾಮುನಿಃ ॥೭॥

ಮಗು, (ಇವರನ್ನು) ಅಪ್ಪಾ ಅಪ್ಪಾ ಎಂದು ಕರೆಯಬೇಡ. ಈ ಮಹರ್ಷಿಗಳು ನಿನ್ನ ತಂದೆಯಲ್ಲ. ಮಹರ್ಷಿಗಳಾದ ನಿನ್ನ ತಂದೆಯು ಒಬ್ಬ ರಾಕ್ಷಸನಿಂದ ಭಕ್ಷಿಸಲ್ಪಟ್ಟರು.

ಮನ್ಯಸೇ ಯಂ ತು ತಾತಂ ತ್ವಂ ನೈವ ತಾತಸ್ತವಾನಘ ।
ಆರ್ಯಸ್ತೇ ಽಪಿ ಪಿತಾ ತಸ್ಯ ಪಿತುಸ್ತವ ಮನಸ್ವಿನಃ ॥೮॥

ಅನಘನೇ, ನೀನು ಯಾರನ್ನು ಅಪ್ಪಾ ಎಂದು ಕರೆಯುತ್ತಿದ್ದೀಯೋ, ಅವರು ನಿನ್ನ ಅಪ್ಪನಲ್ಲ. ಅವರು ಧೈರ್ಯಶಾಲಿಯಾದ ನಿನ್ನ ತಂದೆಯ ತಂದೆ ನಿನ್ನ ಅಜ್ಜ.

ಗಂಧರ್ವಃ

ಸ ಏವಮುಕ್ತೋ ದುಃಖಾರ್ತಃ ಸತ್ಯವಾಗೃಷಿಸತ್ತಮಃ ।
ಸರ್ವಲೋಕವಿನಾಶಾಯ ಮತಿಂ ಚಕ್ರೇ ಮಹಾತಪಾಃ ।
ವಸಿಷ್ಠೋ ವಾರಯಾಮಾಸ ಹೇತುನಾ ಯೇನ ತಚ್ಛೃಣು ॥೯॥

ತಾಯಿಯು ಹೀಗೆ ಹೇಳಿದಾಗ ದುಃಖಾರ್ತರಾದ, ಮಹಾತಪಸ್ವಿಗಳಾದ, ಸತ್ಯವಚನರಾದ ಆ ಋಷಿಶ್ರೇಷ್ಠರು ಎಲ್ಲ ಲೋಕಗಳನ್ನೂ ವಿನಾಶ ಮಾಡಲು ನಿರ್ಧರಿಸಿದರು. ವಸಿಷ್ಠರು ಅವರನ್ನು ಯಾವ ಕಾರಣದಿಂದ ತಡೆದರು ಎಂದು ಹೇಳುತ್ತೇನೆ ಕೇಳು.

ವಸಿಷ್ಠಃ

ಕೃತವೀರ್ಯ ಇತಿ ಖ್ಯಾತೋ ಬಭೂವ ನೃಪತಿಃ ಕ್ಷಿತೌ ।
ಯಾಜ್ಯೋ ವೇದವಿದಾಂ ಲೋಕೇ ಭೃಗೂಣಾಂ ಪಾರ್ಥಿವರ್ಷಭ ॥೧೦॥

ಪಾರ್ಥಿವಶ್ರೇಷ್ಠನೇ, ಹಿಂದೆ ಭೂಮಿಯಲ್ಲಿ ಯಾಗಜ್ಞರಾದ ಭೃಗುಕುಲೋತ್ಪನ್ನರಿಂದ ಯಾಜ್ಯನಾದ ಕಾರ್ತವೀರ್ಯನೆಂಬ ರಾಜನಿದ್ದನು.

ಸ ತಾನನ್ವಗ್ರಹೀತ್ ತಾತ ಧಾನ್ಯೇನ ಚ ಧನೇನ ಚ ।
ಸೋಮೇನ ತರ್ಪಯಾಮಾಸ ವಿಪುಲೇನ ವಿಶಾಂಪತಿಃ ॥೧೧॥

ಆ ರಾಜನು ಸೋಮಯಾಗವನ್ನು ಮಾಡಿ, ಆ ಭೃಗುಕುಲದ ಬ್ರಾಹ್ಮಣರಿಗೆ ಧನ, ಧಾನ್ಯಗಳ ದಾನವನ್ನು ಮಾಡಿ, ಅನುಗ್ರಹವನ್ನು ಮಾಡಿ ಅವರನ್ನು ಸಂತೋಷ ಪಡಿಸಿದನು.

ತಸ್ಮಿಂಸ್ತು ನೃಪಶಾರ್ದೂಲೇ ಸ್ವರ್ಯಾತೇಽಥ ಕದಾಚನ ।
ಬಭೂವ ತತ್ಕುಲೇ ರಾಜ್ಞಾಂ ದ್ರವ್ಯಕಾರ್ಯಮುಪಸ್ಥಿತಮ್ ॥೧೨॥

ಆ ರಾಜಶಾರ್ದೂಲನು ಸ್ವರ್ಗಸ್ಥನಾಗುತ್ತಿರಲು ಒಮ್ಮೆ ಆ ವಂಶದ ರಾಜರುಗಳಿಗೆ ಧನದ ಅವಶ್ಯಕತೆಯುಂಟಾಯಿತು.

ತೇ ಭೃಗೂಣಾಂ ಧನಂ ಜ್ಞಾತ್ವಾ ರಾಜಾನಃ ಸರ್ವ ಏವ ಹಿ ।
ಯಾಚಿಷ್ಣವೋಽಭಿಜಗ್ಮುಸ್ತಾನ್ ತಾತ ಭಾರ್ಗವನಂದನಾನ್ ॥೧೩॥

ಎಲೈ ಮಗುವೇ, ಆ ರಾಜರೆಲ್ಲರೂ ಭೃಗುಗಳ ಬಳಿ ಧನವಿದೆಯೆಂದು ತಿಳಿದು ಆ ಭಾರ್ಗವನಂದನರನ್ನು ಬೇಡುವ ಉದ್ದೇಶದಿಂದ ಅವರ ಬಳಿಗೆ ಹೋದರು.

ಭೂಮೌ ತು ನಿದಧುಃ ಕೇಚಿದ್ ಭೃಗವೋ ಧನಮಕ್ಷಯಮ್ ।
ದದುಃ ಕೇಚಿದ್ ದ್ವಿಜಾತಿಭ್ಯೋ ಜ್ಞಾತ್ವಾ ಕ್ಷತ್ರಿಯತೋ ಭಯಮ್ ॥೧೪॥

ಭೃಗುಗಳಾದರೋ ಕೆಲವರು ಆ ಅಪಾರವಾದ ಧನವನ್ನು ಭೂಮಿಯಲ್ಲಿ ಮುಚ್ಚಿಟ್ಟಿದ್ದರು. ಇನ್ನು ಕೆಲವು ಭೃಗುಗಳು ಕ್ಷತ್ರಿಯರಿಂದ ಉಂಟಾಗಬಹುದಾದ ಭಯವನ್ನು ಗಮನಿಸಿ, ಬ್ರಾಹ್ಮಣರಿಗೆ ದಾನವನ್ನು ಕೊಟ್ಟಿದ್ದರು.

ಭೃಗವಸ್ತು ದದುಃ ಕೇಚಿತ್ ತೇಷಾಂ ವಿತ್ತಂ ಯಥೇಪ್ಸಿತಮ್ ।
ಕ್ಷತ್ರಿಯಾಣಾಂ ತದಾ ತಾತ ಕಾರಣಾಂತರದರ್ಶನಾತ್ ॥೧೫॥

ಪ್ರೀತಿಪಾತ್ರನೇ, ಇನ್ನೂ ಕೆಲವರು ಕಾರಣಾಂತರದಿಂದ ಕ್ಷತ್ರಿಯರಿಗೆ ಅವರ ಇಷ್ಟದಂತೆ ಧನವನ್ನು ಕೊಟ್ಟರು.

ತತೋ ಮಹೀತಳಂ ತಾತ ಕ್ಷತ್ರಿಯೇಣ ಯದೃಚ್ಛಯಾ ।
ಖನತಾಽಧಿಗತಂ ವಿತ್ತಂ ಕಸ್ಮಿಂಶ್ಚಿದ್ ಭೃಗುವೇಶ್ಮನಿ ॥೧೬॥

ಪ್ರೀತಿಪಾತ್ರನೇ, ಅನಂತರ ಒಬ್ಬ ಕ್ಷತ್ರಿಯನು ಭೂಮಿಯನ್ನು ಅಗೆಯುತ್ತಿದ್ದಾಗ ಒಬ್ಬ ಭೃಗುವಂಶದವನ ಗೃಹದಲ್ಲಿ ಧನವು ದೊರೆಯಿತು.

ತದ್ವಿತ್ತಂ ದದೃಶುಃ ಸರ್ವೇ ಸಮೇತಾಃ ಕ್ಷತ್ರಿಯರ್ಷಭ ।
ಅವಮತ್ಯ ತತಃ ಕ್ರೋಧಾದ್ ಭೃಗೂಂಸ್ತೇ ಶರಣಾಗತಾನ್ ॥೧೭॥

ನಿಜಘ್ನುಸ್ತೇ ಮಹೇಷ್ವಾಸ ಬಹೂನ್ ವೈ ನಿಶಿತೈಃ ಶರೈಃ ।
ಆಗರ್ಭಾದನುಕೃಂತಂತಶ್ಚೇರುಶ್ಚೈವ ವಸುಂಧರಾಮ್ ॥೧೮॥

ಕ್ಷತ್ರಿಯಶ್ರೇಷ್ಠನೇ, ಎಲ್ಲಾ ಕ್ಷತ್ರಿಯರೂ ಜೊತೆಯಾಗಿ ಆ ಧನವನ್ನು ನೋಡಿದರು. ಮಹೇಷ್ವಾಸನೇ, ಆಗ ಆ ಕ್ಷತ್ರಿಯರು ಭೃಗುಗಳು ಶರಣಾದರೂ ಸಹ ಅವರನ್ನು ಅನೇಕವಿಧವಾದ ಬಾಣಗಳಿಂದ ಕೊಂದರು. ಅವರು ಭೃಗುವಂಶದವರ ಗರ್ಭದಲ್ಲಿರುವ ಶಿಶುವನ್ನೂ ಸಹ ಬಿಡದೆ ಭೂಮಿಯಲ್ಲಿ ತಿರುಗಾಡಿದರು.

ತತ ಉತ್ಸಾದ್ಯಮಾನೇಷು ಭೃಗುಷ್ವೇವಂ ಭಯಾತ್ ತದಾ ।
ಭೃಗುಪತ್ನ್ಯೋ ಗಿರಿಂ ತಾತ ಹಿಮವಂತಂ ಪ್ರಪೇದಿರೇ ॥೧೯॥

ಭೃಗುಕುಲೋತ್ಪನ್ನರು ಹೀಗೆ ವಿನಾಶ ಮಾಡಲ್ಪಡುತ್ತಿರಲು ಭೃಗುಪತ್ನಿಯರು ಭಯದಿಂದ ಹಿಮಾಲಯ ಪರ್ವತವನ್ನು ಸೇರಿದರು.

ತಾಸಾಮನ್ಯತಮಾ ಗರ್ಭಂ ಧಾರಯಾಮಾಸ ತೇಜಸಾ ।
ಊರುಣೈಕೇನ ವಾಮೋರೂಃ ಭರ್ತುಃ ಕುಲವಿವೃದ್ಧಯೇ ॥೨೦॥

ಅವರಲ್ಲಿ ಒಬ್ಬ ವಾಮೋರುವು (ಸುಂದರಿಯು) ತನ್ನ ಸಾಮರ್ಥ್ಯದಿಂದ ಪತಿಯ ಕುಲದ ಅಭಿವೃದ್ಧಿಗಾಗಿ ತನ್ನ ಒಂದು ತೊಡೆಯಲ್ಲಿ ಗರ್ಭವನ್ನು ಧರಿಸಿದಳು.

ತಂ ಗರ್ಭಮುಪಲಭ್ಯಾಥ ಬ್ರಾಹ್ಮಣ್ಯೋಽನ್ಯಾ ಭಯಾರ್ದಿತಾಃ ।
ಗತ್ವಾ ವೈ ಕಥಯಾಮಾಸುಃ ಕ್ಷತ್ರಿಯಾಣಾಮುಪಾಂತಿಕೇ ॥೨೧॥

ಆಗ ಉಳಿದ ಬ್ರಾಹ್ಮಣಸ್ತ್ರೀಯರು ಆ ಗರ್ಭವನ್ನು ನೋಡಿ ಭಯದಿಂದ ಕೂಡಿದವರಾಗಿ ಕ್ಷತ್ರಿಯರ ಸಮೀಪಕ್ಕೆ ಹೋಗಿ ಆ ವೃತ್ತಾಂತವನ್ನು ತಿಳಿಸಿದರು.

ತತಸ್ತೇ ಕ್ಷತ್ರಿಯಾ ಜಗ್ಮುಃ ತಂ ಗರ್ಭಂ ಹಂತುಮುದ್ಯತಾಃ ।
ದದೃಶುರ್ಬ್ರಾಹ್ಮಣೀಂ ತಾಂ ತೇ ದೀಪ್ಯಮಾನಾಂ ಸ್ವತೇಜಸಾ ॥೨೨॥

ಆಗ ಆ ಕ್ಷತ್ರಿಯರು ಗರ್ಭವನ್ನು ಕೊಲ್ಲುವ ಉದ್ದೇಶದಿಂದ ಬಂದು ತನ್ನ ತೇಜಸ್ಸಿನಿಂದ ಬೆಳಗುತ್ತಿರುವ ಆ ಬ್ರಾಹ್ಮಣಿಯನ್ನು ನೋಡಿದರು.

ಅಥ ಗರ್ಭಃ ಸ ಭಿತ್ತ್ವೋರುಂ ಬ್ರಾಹ್ಮಣ್ಯಾ ನಿರ್ಜಗಾಮ ಹ ।
ಮುಷ್ಣನ್ ದೃಷ್ಟೀಃ ಕ್ಷತ್ರಿಯಾಣಾಂ ಮಧ್ಯಾಹ್ನ ಇವ ಭಾಸ್ಕರಃ ॥೨೩॥

ಆಗ ಆ ಗರ್ಭವು ಆ ಬ್ರಾಹ್ಮಣಿಯ ತೊಡೆಯನ್ನು ಭೇದಿಸಿ ಹೊರಗೆ ಬಂದು ಮಧ್ಯಾಹ್ನಕಾಲದ ಸೂರ್ಯನಂತೆ ಆ ಕ್ಷತ್ರಿಯರ ದೃಷ್ಟಿಯನ್ನೆಲ್ಲಾ ಅಪಹಾರ ಮಾಡಿತು.

ತತಶ್ಚಕ್ಷುರ್ವಿಹೀನಾಸ್ತೇ ಗಿರಿದುರ್ಗೇಷು ಬಭ್ರಮುಃ ।
ತತಸ್ತೇ ಮೋಘಸಂಕಲ್ಪಾ ಭಯಾರ್ತಾಃ ಕ್ಷತ್ರಿಯಾಃ ಪುನಃ ॥೨೪॥

ಬ್ರಾಹ್ಮಣೀಂ ಶರಣಂ ಜಗ್ಮುಃ ದೃಷ್ಟ್ಯರ್ಥಂ ತಾಮನಿಂದಿತಾಮ್ ।
ಊಚುಶ್ಚೈನಾಂ ಮಹಾಭಾಗಾಂ ಕ್ಷತ್ರಿಯಾಸ್ತೇ ವಿಚೇತಸಃ ॥೨೫॥

ಅನಂತರ ನೇತ್ರಹೀನರಾದ ಆ ಕ್ಷತ್ರಿಯರು ಗಿರಿದುರ್ಗಗಳಲ್ಲಿ ಅಲೆದಾಡಿದರು. ಆಗ ಆ ಕ್ಷತ್ರಿಯರು ಭ್ರಷ್ಟಸಂಕಲ್ಪರಾಗಿ, ಭಯಾರ್ತರಾಗಿ ತಮ್ಮ ದೃಷ್ಟಿಯನ್ನು ಮರಳಿ ಪಡೆಯಲು ಆ ಅನಿಂದಿತಳಾದ ಬ್ರಾಹ್ಮಣ ವನಿತೆಗೇ ಶರಣಾಗತರಾದರು.

ಜ್ಯೋತಿಃಪ್ರಹೀಣಾ ದುಃಖಾರ್ತಾಃ ಶಾಂತಾರ್ಚಿಷ ಇವಾಗ್ನಯಃ ।
ತವಾಪತ್ಯಪ್ರಸಾದೇನ ಗಚ್ಛೇತ್ ಕ್ಷತ್ರಂ ನಿರಾಮಯಮ್ ॥೨೬॥

ಇದ್ದ ನೇತ್ರವನ್ನು ಕಳೆದುಕೊಂಡು ಶಾಂತವಾದ ಅಗ್ನಿಯಂತೆ ದುಃಖಾರ್ತರಾದ, ವಿಚೇತನರಾದ ಆ ಕ್ಷತ್ರಿಯರು ಆ ಮಹಾನುಭಾವಳಾದ ಬ್ರಾಹ್ಮಣಿಯನ್ನು ಕುರಿತು ನಿನ್ನ ಮಗನ ಅನುಗ್ರಹದಿಂದ ಕ್ಷತ್ರಿಯಕುಲವು ಸಂಕಟದಿಂದ ಪಾರಾಗಬೇಕು ಎಂದು ಮಾತನಾಡಿದರು.

ಪಾಪಾದಸ್ಮಾದುಪಾರಮ್ಯ ಪಶ್ಯೇಮ ಚ ತಥಾ ಪುನಃ ।
ಸಪುತ್ರಾ ತ್ವಂ ಪ್ರಸಾದಂ ನಃ ಸರ್ವೇಷಾಂ ಕರ್ತುಮರ್ಹಸಿ ।
ಪುನರ್ದೃಷ್ಟಿಪ್ರಸಾದೇನ ಕ್ಷತ್ರಿಯಾಂಸ್ತ್ರಾತುಮರ್ಹಸಿ ॥೨೭॥

ನಾವು ಈ ಸಂಕಟದಿಂದ ನಿರ್ಮುಕ್ತರಾಗಿ ನಿಮ್ಮನ್ನು ಪೂಜ್ಯಭಾವನೆ- ಯಿಂದ ನೋಡುತ್ತೇವೆ. ಪುತ್ರಸಹಿತಳಾದ ನೀನು ನಮಗೆ ಪುನಃ ದೃಷ್ಟಿಯನ್ನು ಕೊಟ್ಟು ಕ್ಷತ್ರಿಯರಾದ ನಮ್ಮನ್ನು ಅನುಗ್ರಹಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ಏಕಾಶೀತ್ಯಧಿಕಶತತಮೋऽಧ್ಯಾಯಃ ॥

॥ ಇತಿ ಚೈತ್ರರಥಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರಎಂಭತ್ತೊಂದನೆಯ ಅಧ್ಯಾಯ ಮುಗಿಯಿತು.

★★★★★

ನೂರ ಎಂಭತ್ತೆರಡನೆಯ ಅಧ್ಯಾಯ

(ಔರ್ವರ ಅನುಗ್ರಹದಿಂದ ಕ್ಷತ್ರಿಯರಿಗೆ ದೃಷ್ಟಿಪ್ರಾಪ್ತಿ. ಲೋಕವಿನಾಶಕ್ಕಾಗಿ ಔರ್ವರ ತಪಸ್ಸು. ಪಿತೃಗಳ ಮಾತಿನಂತೆ ತಪಸ್ಸನ್ನು ನಿಲ್ಲಿಸಿ, ಸಮುದ್ರದಲ್ಲಿ ಕ್ರೋಧಾಗ್ನಿಯ ವಿಸರ್ಜನೆ. ಪರಾಶರರು ಮಾಡಿದ ರಾಕ್ಷಸ ಸತ್ರ.)

ಬ್ರಾಹ್ಮಣೇ

ನಾಹಂ ಮುಷ್ಣಾಮಿ ವಸ್ತಾತಾ ದೃಷ್ಟಿಂ ನಾಸ್ಮಿ ರುಷಾऽನ್ವಿತಾ ।
ಅಯಂ ತು ಭಾರ್ಗವೋ ನಾಮ ಊರುಜಃ ಕುಪಿತೋ ಧ್ರುವಮ್॥

ತೇನ ಚಕ್ಷೂಂಷಿ ವಸ್ತಾತಾ ಕುಪಿತೇನ ಮಹಾತ್ಮನಾ ।
ಸ್ಮರತಾ ನಿಹತಾನ್ ಬಂಧೂನಾರ್ತಾನಿಹ ಕಥಂಚನ ॥೨॥

ಪ್ರೀತಿಪಾತ್ರರೇ ನಾನು ರೋಷದಿಂದ ನಿಮ್ಮ ದೃಷ್ಟಿಯನ್ನು ಅಪಹರಿಸುತ್ತಿಲ್ಲ. ನನ್ನ ತೊಡೆಯಿಂದ ಹುಟ್ಟಿದ ಈ ಮಹಾತ್ಮನಾದ ಭಾರ್ಗವನು ತನ್ನ ಆರ್ತರಾದ ಬಂಧುಗಳು ನಿಹತರಾದ ಕಾರಣದಿಂದ ಕೋಪಗೊಂಡು ನಿಮ್ಮ ದೃಷ್ಟಿಯನ್ನು ಅಪಹರಿಸಿದ್ದಾನೆ.

ಗರ್ಭಾನಪಿ ಯದಾ ಯೂಯಂ ಭೃಗೂಣಾಂ ಹತ ಪೂರ್ವಕಾನ್ ।
ತದಾऽಯಮೂರುಣಾ ಗರ್ಭೋ ಮಯಾ ವರ್ಷಶತಂ ಧೃತಃ ॥೩॥

ಯಾವಾಗ ನೀವು ಹಿಂದೆ ಭೃಗುಗಳ ಗರ್ಭಗಳನ್ನೂ ಕೊಲ್ಲಲು ಆರಂಭಿಸಿದರೋ ಆಗ ನಾನು ಇವನನ್ನು ನೂರುವರ್ಷಗಳ ಕಾಲ ನನ್ನ ತೊಡೆಯಲ್ಲಿ ಧರಿಸಿದೆ.

ಷಡಂಗಶ್ಚಾಖಿಲೋ ವೇದ ಇಮಂ ಗರ್ಭಸ್ಥಮೇವ ಚ ।
ವಿವೇಶ ಭೃಗುವಂಶಸ್ಯ ಭೂಯಃ ಪ್ರಿಯಚಿಕೀರ್ಷಯಾ ॥೪॥

ಭೃಗುವಂಶಕ್ಕೆ ಪುನಃ ಹಿತವನ್ನು ಮಾಡುವ ಅಪೇಕ್ಷೆಯಿಂದ ಷಡಂಗಸಹಿತವಾದ ವೇದಗಳು ಗರ್ಭಸ್ಥನಾದ ಇವನಿಗೆ ತಾವಾಗಿಯೇ ಬಂದವು.

ಸೋಽಯಂ ಪಿತೃವಧಾನ್ನೂನಂ ಕ್ರೋಧಾದ್ ವೋ ಹಂತುಮಿಚ್ಛತಿ ।
ತೇಜಸಾ ಯಸ್ಯ ದಿವ್ಯೇನ ಚಕ್ಷೂಂಷಿ ಮುಷಿತಾನಿ ವಃ ॥೫॥

ಅಂತಹ ಇವನು ನೀವು ಅವನ ತಂದೆಯ ವಧೆಯನ್ನು ಮಾಡಿದ ಕಾರಣದಿಂದ ನಿಮ್ಮ ಮೇಲೆ ಕ್ರುದ್ಧನಾಗಿ ನಿಮ್ಮನ್ನು ಕೊಲ್ಲಲು ಬಯಸುತ್ತಾನೆ. ಅವನ ದಿವ್ಯವಾದ ತೇಜಸ್ಸಿನಿಂದ ನಿಮ್ಮ ದೃಷ್ಟಿಯನ್ನು ಕಳೆದುಕೊಂಡಿದ್ದೀರಿ.

ತಮೇವ ಯೂಯಂ ಯಾಚಧ್ವಮೌರ್ವಂ ಮಮ ಸುತೋಪಮಮ್।
ಅಯಂ ವಃ ಪ್ರಣಿಪಾತೇನ ದೃಷ್ಟಿಂ ತುಷ್ಟಃ ಪ್ರದಾಸ್ಯತಿ ॥೬॥

ನೀವು ನನ್ನ ಮಗನಾದ ಔರ್ವನನ್ನೇ ಬೇಡಿಕೊಳ್ಳಿ. ನಿಮ್ಮ ಪ್ರಣಾಮಗಳಿಂದ ಸಂತುಷ್ಟನಾದ ಅವನು ನಿಮಗೆ ದೃಷ್ಟಿಯನ್ನು ನೀಡುವನು.

ಗಂಧರ್ವಃ

ಏವಮುಕ್ತಾಸ್ತತಃ ಸರ್ವೇ ರಾಜಾನಸ್ತೇ ತಮೂರುಜಮ್ ।
ಊಚುಃ ಪ್ರಸೀದೇತಿ ತದಾ ಪ್ರಸಾದಂ ಚ ಚಕಾರ ಸಃ ॥೭॥

ಔರ್ವನ ತಾಯಿಯು ಹೀಗೆ ಹೇಳುತ್ತಿರಲು ಆ ಎಲ್ಲಾ ರಾಜರೂ ಆ ಔರ್ವರನ್ನು ಕುರಿತು ಪ್ರಸನ್ನನಾಗು ಎಂದು ಹೇಳಿದರು. ಆಗ ಔರ್ವರು ಅನುಗ್ರಹವನ್ನು ಮಾಡಿದರು.

ಏತೇನೈವ ತು ವಿಖ್ಯಾತೋ ನಾಮ್ನಾ ಲೋಕೇಷು ಸತ್ತಮಃ ।
ಸ ಔರ್ವ ಇತಿ ವಿಖ್ಯಾತ ಊರುಂ ಭಿತ್ತ್ವಾ ವಿನಿಸ್ಸೃತಃ ॥೮॥

ಸಜ್ಜನರಲ್ಲಿ ಅಗ್ರಗಣ್ಯರಾದ ಅವರು ತೊಡೆಯನ್ನು ಭೇದಿಸಿಕೊಂಡು ಬಂದದ್ದರಿಂದ ಔರ್ವ ಎಂಬ ನಾಮದಿಂದಲೇ ಲೋಕದಲ್ಲಿ ವಿಖ್ಯಾತರಾದರು.

ಚಕ್ಷೂಂಷಿ ಪ್ರತಿಲಭ್ಯಾಥ ಪ್ರತಿಜಗ್ಮುಸ್ತತೋ ನೃಪಾಃ ।
ಭಾರ್ಗವಸ್ತು ಮುನಿರ್ನೂನಂ ಮೇನೇ ಲೋಕೇ ಪರಾಭವಮ್ ॥೯॥

ತಮ್ಮ ದೃಷ್ಟಿಯನ್ನು ಮರಳಿ ಪಡೆದು, ರಾಜರು ಅಲ್ಲಿಂದ ಹೊರಟರು. ಭಾರ್ಗವರಾದ ಔರ್ವರು ಮಾತ್ರ ತಮಗೆ ಅವಮಾನವಾಯಿತೆಂದು ತಿಳಿದರು.

ಸ ಚಕ್ರೇ ತತ್ರ ಲೋಕಾನಾಂ ವಿನಾಶಾಯ ಮನಸ್ತದಾ ।
ಸರ್ವೇಷಾಮೇವ ಕಾರ್ತ್ಸ್ನ್ಯೇನ ಮನಃಪ್ರವಣಮಾತ್ಮನಃ ॥೧೦॥

ಅವರು ಸರ್ವಲೋಕಗಳನ್ನು ಸಮಗ್ರವಾಗಿ ವಿನಾಶ ಮಾಡಲು ನಿರ್ಧರಿಸಿ ಭಗವಂತನ ಮನನವನ್ನು ಮಾಡಿದರು.

ಇಚ್ಛನ್ನಪಚಿತಿಂ ಕರ್ತುಂ ಭೃಗೂಣಾಂ ಭೃಗುಸತ್ತಮಃ ।
ಸರ್ವಲೋಕವಿನಾಶಾಯ ತೇಪೇ ತೂಗ್ರತರಂ ತಪಃ ॥೧೧॥

ಭೃಗುಗಳಿಗೆ ಆದ ಅವಮಾನಕ್ಕೆ ಪ್ರತೀಕಾರವನ್ನು ಮಾಡಲು ಇಚ್ಛಿಸಿ ಆ ಭೃಗುವಂಶೋತ್ಪನ್ನರಾದ ಶ್ರೇಷ್ಠರಾದ ಔರ್ವರು ಸರ್ವಲೋಕ ವಿನಾಶವನ್ನು ಉದ್ದೇಶಿಸಿ ಉಗ್ರವಾದ ತಪಸ್ಸನ್ನು ಆಚರಿಸಿದರು.

ತಾಪಯಾಮಾಸ ತಾಂಲ್ಲೋಕಾನ್ ಸಸುರಾಸುರಮಾನವಾನ್ ।
ತಪಸೋಗ್ರೇಣ ಮಹತಾ ಮಾನಯಿಷ್ಯನ್ ಪಿತಾಮಹಾನ್ ॥೧೨॥

ತನ್ನ ಪಿತಾಮಹರ ಮೇಲಿನ ಗೌರವದಿಂದ ದೊಡ್ಡ ಉಗ್ರತಪಸ್ಸನ್ನು ಮಾಡಿ ದೇವಾಸುರಮನುಷ್ಯಸಹಿತವಾದ ಲೋಕಗಳಿಗೆ ತಾಪವನ್ನುಂಟು ಮಾಡಿದರು.

ತತಸ್ತಂ ಪಿತರಸ್ತಾತ ವಿಜ್ಞಾಯ ಭೃಗುಸತ್ತಮಮ್ ।
ಪಿತೃಲೋಕಾದಿಹಾಗತ್ಯ ಸರ್ವ ಊಚುರಿದಂ ವಚಃ ॥೧೩॥

ಆಗ ಪಿತೃಗಳು ಇದನ್ನು ತಿಳಿದು ಪಿತೃಲೋಕದಿಂದ ಇಲ್ಲಿಗೆ ಬಂದು ಭೃಗುಶ್ರೇಷ್ಠರಾದ ಔರ್ವರನ್ನು ಕುರಿತು ಎಲ್ಲರೂ ಹೀಗೆ ಮಾತನಾಡಿದರು.

ಪಿತರಃ

ಔರ್ವ ದೃಷ್ಟಃ ಪ್ರಭಾವಸ್ತೇ ತಪಸೋಗ್ರಸ್ಯ ಪುತ್ರಕ ।
ಪ್ರಸಾದಂ ಕುರು ಲೋಕಾನಾಂ ನಿಯಚ್ಛ ಕ್ರೋಧಮಾತ್ಮನಃ ॥೧೪॥

ಪುತ್ರನಾದ ಔರ್ವನೇ ನಿನ್ನ ಉಗ್ರವಾದ ತಪಸ್ಸಿನ ಪ್ರಭಾವವನ್ನು ನೋಡಿದೆವು. ಲೋಕಗಳಿಗೆ ಅನುಗ್ರಹವನ್ನು ಮಾಡು. ನಿನ್ನ ಕ್ರೋಧವನ್ನು ನಿಯಂತ್ರಿಸಿಕೋ.

ನಾನೀಶೈರ್ಹಿ ತದಾ ತಾತ ಭೃಗುಭಿರ್ಭಾವಿತಾತ್ಮಭಿಃ ।
ವಧೋಽಪ್ಯಪೇಕ್ಷಿತಃ ಸರ್ವೈಃ ಕ್ಷತ್ರಿಯಾಣಾಂ ವಿಹಿಂಸತಾಮ್ ॥೧೫॥

ಪ್ರೀತಿಪಾತ್ರನೇ ಹಿಂದೆ ಕ್ಷತ್ರಿಯರು ಹಿಂಸೆಮಾಡಿದಾಗ ಸುಸಂಸ್ಕೃತ ಮನಸ್ಸುಳ್ಳ ಭೃಗುಗಳಾದ ನಾವು ಆ ವಧೆಯನ್ನು ಉಪೇಕ್ಷೆ ಮಾಡಿದುದು ನಾವು ಅಸಮರ್ಥರು ಎಂಬ ಕಾರಣಕ್ಕಾಗಿ ಅಲ್ಲ.

ಆಯುಷಾ ಹಿ ಪ್ರಕೃಷ್ಟೇನ ಯದಾ ನಃ ಖೇದ ಆವಿಶತ್ ।
ತದಾಽಸ್ಮಾಭಿರ್ವಧೋ ಘೋರಃ ಕ್ಷತ್ರಿಯೈರೀಪ್ಸಿತಃ ಸ್ವಯಮ್ ॥೧೬॥

ನಮ್ಮ ದೀರ್ಘಾಯುಷ್ಯದಿಂದ ನಮಗೆ ಖೇದವಾಯಿತು. (ನಿರಾಶರಾದ ನಮಗೂ ಆಯುಸ್ಸು ಮುಗಿಯುವ ವೇಳೆಯಲ್ಲಿ ಧನವಿಲ್ಲದ ನಿಮಿತ್ತವಾಗಿ ಬಂದ ದುಃಖದ ಕಾರಣದಿಂದ ಧನದಲ್ಲಿ ಆಸೆಯುಂಟಾಯಿತು.) ಆಗ ಕ್ಷತ್ರಿಯರ ಕೈಯಲ್ಲಿ ಘೋರವಾದ ವಧೆಯನ್ನು ನಾವೇ ಬಯಸಿದೆವು.

ನಿಖಾತಂ ತದ್ಧಿ ವೈ ವಿತ್ತಂ ಕಸ್ಮಿಂಶ್ಚಿದ್ ಭೃಗುವೇಶ್ಮನಿ ।
ವೈರಾಯೈವ ತತೋ ನ್ಯಸ್ತಂ ಕ್ಷತ್ರಿಯಾನ್ ಕೋಪಯಿಷ್ಣುಭಿಃ ॥೧೭॥

ನಾವು ಕ್ಷತ್ರಿಯರನ್ನು ಕೋಪಗೊಳಿಸುವುದಕ್ಕಾಗಿಯೇ ಮತ್ತು ಅವರಿಗೆ ವೈರವನ್ನುಂಟುಮಾಡುವುದಕ್ಕಾಗಿಯೇ ಒಬ್ಬ ಭೃಗುವಿನ ಮನೆಯಲ್ಲಿ ಧನವನ್ನು ಹೂತಿಟ್ಟೆವು.

ಕಿಂ ಹಿ ವಿತ್ತೇನ ನಃ ಕಾರ್ಯಂ ಸ್ವರ್ಗೇಪ್ಸೂನಾಂ ದ್ವಿಜರ್ಷಭ ।
ಯದಾ ಹಿ ಮೃತ್ಯುರಾಯಾತಿ ನ ಶಕ್ನೋತಿ ಚ ಸರ್ವಶಃ ॥೧೮॥

ದ್ವಿಜಶ್ರೇಷ್ಠನೇ ಸ್ವರ್ಗವನ್ನು ಬಯಸುವ ನಮಗೆ ಧನದಿಂದ ಏನು ಆಗಬೇಕಾಗಿದೆ? ಮೃತ್ಯುವು ಬರುವಾಗ ಮೃತ್ಯುವು ಕೊಡುವ ಬುದ್ಧಿಯನ್ನು ನಿವಾರಣೆ ಮಾಡಲು ಯಾರೂ ಶಕ್ತರಲ್ಲ.

ತದಾऽಸ್ಮಾಭಿರಯಂ ದೃಷ್ಟ ಉಪಾಯಸ್ತತ್ರ ಧರ್ಮತಃ ।
ಆತ್ಮಹಾ ಚ ಪುನಸ್ತಾತ ನ ಲೋಕಾಂಲ್ಲಭತೇ ಶುಭಾನ್ ॥೧೯॥

ತತೋऽಸ್ಮಾಭಿಃ ಸಮೀಕ್ಷ್ಯೈವಮಾತ್ಮನಾऽऽತ್ಮಾ ವಿನಾಶಿತಃ ।
ನ ಚೈತನ್ನಃ ಪ್ರಿಯಂ ತಾತ ಯದಿದಂ ಕರ್ತುಮಿಚ್ಛಸಿ ॥೨೦॥

ಆಗ ನಾವು ಈ ಧರ್ಮಸಮ್ಮತವಾದ ಉಪಾಯವನ್ನು ಚಿಂತಿಸಿದೆವು. ಆತ್ಮಹತ್ಯೆಯನ್ನು ಮಾಡಿಕೊಂಡರೆ ಶುಭಲೋಕಗಳ ಪ್ರಾಪ್ತಿಯಾಗುವುದಿಲ್ಲ. ಇದನ್ನು ಗಮನಿಸಿ ನಾವು ನಮ್ಮ ಪ್ರಯತ್ನದಿಂದಲೇ ಈ ರೀತಿಯಲ್ಲಿ ದೇಹವನ್ನು ನಾಶಮಾಡಿಕೊಂಡೆವು. ನೀನು ಏನು ಮಾಡಲು ಹೊರಟಿರುವೆಯೋ ಅದು ನಮಗೆ ಇಷ್ಟವಲ್ಲ.

ನಿಯಚ್ಛೈದಂ ಮನಃ ಪಾಪಾತ್ ಸರ್ವಲೋಕಪರಾಭವಾತ್ ।
ನ ಹಿ ನಿಃಕ್ಷತ್ರಿಯಾಃ ಕೇಚಿಲ್ಲೋಕಾಃ ಸಂತಿ ಸುಪುತ್ರಕ ।
ದೂಷಯಂತಿ ಚ ನಸ್ತೇಜಃ ಕ್ರೋಧಮುತ್ಪತಿತಂ ಜಹಿ ॥೨೧॥

ಸರ್ವಲೋಕವನ್ನು ವಿನಾಶಮಾಡುವುದರಿಂದ ಉಂಟಾಗುವ ಪಾಪದಿಂದ ನಿನ್ನ ಮನಸ್ಸನ್ನು ಹಿಂದಕ್ಕೆ ತೆಗೆ. ಪ್ರಿಯ ಪುತ್ರನೇ ರಾಜರಿಲ್ಲದಿರುವ ಲೋಕಗಳು ಯಾವವೂ ಇಲ್ಲ. ರಾಜನಿಲ್ಲದಿದ್ದರೆ ಪಾಪಿಷ್ಠರೂ ಮತ್ತು ಚೋರರೂ ನಮ್ಮ ಮೇಲೆ ಆಕ್ರಮಣವನ್ನು ಮಾಡಿ ದೂಷಿಸುತ್ತಾರೆ. ನಿನ್ನಲ್ಲಿ ಉಂಟಾದ ಕ್ರೋಧವನ್ನು ಸಂಹರಿಸು.

ಪೌರ್ವಃ

ಉಕ್ತವಾನಸ್ಮಿ ಯಾಂ ಕ್ರೋಧಾತ್ ಪ್ರತಿಜ್ಞಾಂ ಪಿತರಸ್ತಥಾ ।
ಸರ್ವಲೋಕವಿನಾಶಾಯ ನ ಸಾ ಮೇ ವಿತಥಾ ಭವೇತ್ ॥೨೨॥

ಪಿತೃಗಳೇ ನಾನು ಸರ್ವಲೋಕವಿನಾಶಕ್ಕಾಗಿ ಏನು ಪ್ರತಿಜ್ಞೆಯನ್ನು ಮಾಡಿದ್ದೇನೆಯೋ ಆ ನನ್ನ ಪ್ರತಿಜ್ಞೆಯು ಸುಳ್ಳಾಗಬಾರದು.

ವೃಥಾರೋಷಪ್ರತಿಜ್ಞೋಽಹಂ ನ ತು ಜೀವಿತುಮುತ್ಸಹೇ ।
ಅನಿಸ್ತೀರ್ಣೋ ಹಿ ಮೇ ರೋಷೋ ದಹೇದಗ್ನಿರಿವಾರಣಿಮ್ ॥೨೩॥

ನಾನು ವ್ಯರ್ಥವಾದ ರೋಷವನ್ನು ಹೊಂದಿ, ವ್ಯರ್ಥವಾದ ಪ್ರತಿಜ್ಞೆಯನ್ನು ಮಾಡಿ ಜೀವಿಸಲು ಇಷ್ಟಪಡುವುದಿಲ್ಲ. ಪ್ರತೀಕಾರವನ್ನು ಪಡೆಯದ ನನ್ನ ರೋಷವು ಅಗ್ನಿಯು ಅರಣಿಯನ್ನು ಸುಡುವಂತೆ ನನ್ನನ್ನೇ ಸುಟ್ಟೀತು.

ದೇಶಕಾಲೇನ ಸಂಜಾತಂ ಕ್ರೋಧಂ ಯಃ ಕ್ಷಂತುಮರ್ಹತಿ ।
ನಾಲಂ ಸ ಮನುಜಃ ಸಮ್ಯಕ್ ತ್ರಿವರ್ಗಂ ಪರಿರಕ್ಷಿತುಮ್ ।
ಸ್ಥಾನೇ ರೋಷಃ ಪ್ರಯುಕ್ತಃ ಸ್ಯಾನ್ನೃಪೈಃ ಸ್ವರ್ಗಜಿಗೀಷುಭಿಃ ॥೨೪॥

ದೇಶಕಾಲೋಚಿತವಾಗಿ ಉಂಟಾದ ಕ್ರೋಧವನ್ನು ಯಾವ ಮನುಷ್ಯನು ಕ್ಷಮೆಯಿಂದ ಪರಿಹರಿಸಿಕೊಳ್ಳುವನೋ, ಅವನು ಧರ್ಮಾರ್ಥ ಕಾಮಗಳನ್ನು ಚೆನ್ನಾಗಿ ರಕ್ಷಿಸಲು ಅಶಕ್ತನಾಗುತ್ತಾನೆ. ಆದ್ದರಿಂದ ಸ್ವರ್ಗವನ್ನು ಗೆಲ್ಲುವ ಇಚ್ಛೆಯಿಂದ ಹಿಂದಿನ ರಾಜರು ಹೊಂದಿದ ರೋಷವು ಯುಕ್ತವಾಗಿಯೇ ಇದೆ.

ಅಶ್ರೌಷಮಹಮೂರುಸ್ಥೋ ಗರ್ಭಶಯ್ಯಾಗತಸ್ತದಾ ।
ಆರಾವಂ ತು ಭೃಶಂ ತತ್ರ ಭೃಗೂಣಾಂ ಕ್ಷತ್ರಿಯೈರ್ವಧೇ ॥೨೫॥

ಭೃಗುಗಳನ್ನು ಕ್ಷತ್ರಿಯರು ಕೊಲ್ಲುವಾಗ ನಾನು ನನ್ನ ತಾಯಿಯ ತೊಡೆಯಲ್ಲಿಯೇ ಗರ್ಭಶಯ್ಯಾಗತನಾಗಿ ಆ ಆರ್ತನಾದವನ್ನು ಕೇಳಿದೆ.

ಸಾಮರ್ಷೈರ್ಹಿ ತದಾ ಲೋಕೇ ಭೃಗೂಣಾಂ ಕ್ಷತ್ರಿಯಾಧಮೈಃ ।
ಆಗರ್ಭೋತ್ಸಾದನಂ ಜಾತಂ ತದಾ ಮಾಂ ಮನ್ಯುರಾವಿಶತ್ ॥೨೬॥

ಕ್ಷತ್ರಿಯಾಧಮರು ಸಿಟ್ಟಿನಿಂದ ಕೂಡಿದವರಾಗಿ ಭೃಗುಕುಲವನ್ನು ಗರ್ಭದ ಪರ್ಯಂತವೂ ನಾಶ ಮಾಡಿದರು. ಆಗ ನನಗೆ ಕ್ರೋಧವು ಉಂಟಾಯಿತು.

ಪ್ರಕೀರ್ಣಕೇಶಾಃ ಕಿಲ ಮೇ ಮಾತರಃ ಪಿತರಸ್ತಥಾ ।
ಭಯಾತ್ ಸರ್ವೇಷು ಲೋಕೇಷು ನಾಧಿಜಗ್ಮುಃ ಪರಾಯಣಮ್ ॥೨೭॥

ನನ್ನ ತಾಯಿಯರು ಮತ್ತು ತಂದೆಗಳು ತಲೆಕೂದಲುಗಳನ್ನು ಕೆದರಿಕೊಂಡು ಭಯದಿಂದ ಓಡಿದರೂ ಲೋಕಗಳಲ್ಲಿ ಯಾವ ರಕ್ಷಕನನ್ನೂ ಕಾಣಲಿಲ್ಲ.

ತಾನ್ ಭೃಗೂಣಾಂ ಪರಾನ್ ದಾರಾನ್ ಕಶ್ಚಿನ್ನಾಭ್ಯುಪಪದ್ಯತ ।
ಮಾತಾ ತದಾ ದಧಾರೇಯಮೂರುಣೈಕೇನ ಮಾಂ ಶುಭಾ ॥೨೮॥

ಆ ಭೃಗುಗಳ ಶ್ರೇಷ್ಠವಾದ ಪತ್ನಿಯರನ್ನು ರಕ್ಷಿಸಲು ಯಾರೂ ಮುಂದೆ ಬರಲಿಲ್ಲ. ಆಗ ಈ ನನ್ನ ಶುಭಳಾದ ತಾಯಿಯು ನನ್ನನ್ನು ತನ್ನ ಒಂದು ತೊಡೆಯಲ್ಲಿ ಧರಿಸಿದಳು.

ಪ್ರತಿಷೇದ್ಧಾ ಹಿ ಪಾಪಸ್ಯ ಯದಾ ಲೋಕೇ ನ ವಿದ್ಯತೇ ।
ತದಾ ಸರ್ವೇಷು ಲೋಕೇಷು ಪಾಪಕೃನ್ನೋಪಶಾಮ್ಯತಿ ॥೨೯॥

ಲೋಕದಲ್ಲಿ ಪಾಪವನ್ನು ಪ್ರತಿಷೇಧ ಮಾಡುವವರು ಯಾರೂ ಇಲ್ಲದಿದ್ದರೆ ಆಗ ಯಾವಲೋಕದಲ್ಲಿಯೂ ಪಾಪವನ್ನು ಮಾಡುವವನು ಪಾಪದಿಂದ ಹಿಂದೆ ಸರಿಯುವುದಿಲ್ಲ.

ಯದಾ ತು ಪ್ರತಿಷೇದ್ಧಾರಂ ಪಾಪಂ ನ ಲಭತೇ ಕ್ವಚಿತ್ ।
ತಿಷ್ಠಂತಿ ಬಹವೋ ಲೋಕಾಸ್ತದಾ ಪಾಪೇಷು ಕರ್ಮಸು ॥೩೦॥

ಪಾಪವನ್ನು ಪ್ರತಿಷೇಧ ಮಾಡುವವನು ಇಲ್ಲದಿದ್ದರೆ ಅನೇಕ ಜನರು ಆ ಪಾಪಕರ್ಮಗಳಲ್ಲಿಯೇ ನಿರತರಾಗುತ್ತಾರೆ.

ಜಾನನ್ನಪಿ ಚ ಯಃ ಪಾಪಂ ಶಕ್ತಿಮಾನ್ನ ನಿಯಚ್ಛತಿ ।
ಈಶಃ ಸ ಚಾಪಿ ತೇನೈವ ಕರ್ಮಣಾ ಸಂಪ್ರಯುಜ್ಯತೇ ॥೩೧॥

ಪಾಪವನ್ನು ನೋಡಿ ಅದನ್ನು ನಿವಾರಿಸಲು ಶಕ್ತಿಯಿದ್ದವನೂ ಸಹ ಪಾಪವನ್ನು ನಿಯಂತ್ರಿಸದಿದ್ದರೆ ಆ ಪಾಪಕರ್ಮದ ಫಲವು ಅವನಿಗೂ ಸೇರುತ್ತದೆ.

ರಾಜಭಿಶ್ಚೇತರೈಶ್ಚೈವ ಯದಾ ವೈ ಪಿತರೋ ಮಮ ।
ಶಕ್ಯೈರ್ನ ಶಂಕಿತಾಸ್ತ್ರಾತುಮಿಷ್ಟಮದ್ಯೇಹ ಜೀವಿತಮ್ ॥೩೨॥

ನನ್ನ ಪಿತೃಗಳು ಸಮರ್ಥರಾದ ರಾಜರುಗಳಿಂದಲೂ ಮತ್ತು ಇತರರಿಂದಲೂ ನಿಸ್ಸಂಶಯವಾಗಿ ಇಷ್ಟವಾದ ಜೀವನವು ರಕ್ಷಿಸಲ್ಪಡಲಿಲ್ಲವೋ ಅದರಿಂದ ನನಗೆ ಕ್ರೋಧವುಂಟಾಯಿತು.

ಅತ ಏಷಾಮಹಂ ಕ್ರುದ್ಧೋ ಲೋಕಾನಾಮೀಶ್ವರೋದ್ಯ ಸನ್ ।
ಭವತಾಂ ಚ ವಚೋ ನಾಹಮಲಂ ಸಮತಿವರ್ತಿತುಮ್ ॥೩೩॥

ನಾನು ಲೋಕವನ್ನು ನಿಯಂತ್ರಿಸಲು ಸಮರ್ಥನಾದ್ದರಿಂದ ಈ ಕ್ಷತ್ರಿಯರ ಮೇಲೆ ಕೋಪಗೊಂಡಿದ್ದೇನೆ. ಆದರೆ ನಾನು ನಿಮ್ಮ ಮಾತನ್ನೂ ಮೀರುವಂತಿಲ್ಲ.

ಮಮ ಚಾಪಿ ಭವೇದೇವಮೀಶ್ವರಸ್ಯ ಸತೋ ಮಹತ್ ।
ಉಪೇಕ್ಷಮಾಣಸ್ಯ ಪುನರ್ಲೋಕಾನಾಂ ಕಿಲ್ಬಿಷಂ ಭಯಮ್ ॥೩೪॥

ಸಮರ್ಥನಾದ ನಾನು ಈ ಅನ್ಯಾಯವನ್ನು ಉದಾಸೀನ ಮಾಡಿದರೆ ಲೋಕಕ್ಕೆ ಭಯವೂ, ನನಗೆ ಪಾಪವೂ ಉಂಟಾಗುತ್ತದೆ.

ಯಶ್ಚಾಯಂ ಮನ್ಯುನಾ ಮೇऽಗ್ನಿರ್ಲೋಕಾನಾದಾತುಮಿಚ್ಛತಿ ।
ದಹೇದೇವ ಚ ಮಾಮೇಷ ನಿಗೃಹೀತಃ ಸ್ವತೇಜಸಾ ॥೩೫॥

ಭವತಾಂ ಚ ವಿಜಾನಾಮಿ ಸರ್ವಲೋಕಹಿತೇಪ್ಸಿತಾಮ್ ।
ತಸ್ಮಾದ್ ವಿದಧ್ವಂ ಯಚ್ಛ್ರೇಯೋ ಲೋಕಾನಾಂ ಮಮ ಚೇಪ್ಸಥ ॥೩೬॥

ನನ್ನ ಕ್ರೋಧದಿಂದ ಉತ್ಪನ್ನವಾದ ಯಾವ ಈ ಅಗ್ನಿಯು ಲೋಕಗಳನ್ನೇ ಸುಡಲು ಬಯಸುತ್ತಿದೆಯೋ, ಅದನ್ನು ನಾನು ನಿಗ್ರಹಿಸಿದರೆ, ಅದು ತನ್ನ ತೇಜಸ್ಸಿನಿಂದ ನನ್ನನ್ನೇ ಸುಡುತ್ತದೆ. ನಿಮಗಿರುವ ಸರ್ವಲೋಕಹಿತದ ಇಚ್ಛೆಯನ್ನು ನಾನು ತಿಳಿದಿದ್ದೇನೆ. ಆದ್ದರಿಂದ ಲೋಕಗಳಿಗೂ ಮತ್ತು ನನಗೂ ಯಾವುದು ಶ್ರೇಯಸ್ಸೆಂದು ನೀವೇ ವಿಧಾನ ಮಾಡಿ.

ಪಿತರಃ

ಯ ಏಷ ಮನ್ಯುಜಸ್ತೇऽಗ್ನಿರ್ಲೋಕಾನಾದಾತುಮಿಚ್ಛತಿ ।
ಅಪ್ಸು ತಂ ಮುಂಚ ಭದ್ರಂ ತೇ ಲೋಕಾ ಹ್ಯಪ್ಸು ಪ್ರತಿಷ್ಠಿತಾಃ ॥೩೭॥

ಪುತ್ರನೇ, ನಿನಗೆ ಮಂಗಳವಾಗಲಿ. ಲೋಕಗಳನ್ನೇ ದಹಿಸಲು ಇಚ್ಛಿಸುತ್ತಿರುವ ನಿನ್ನ ಕ್ರೋಧಾಗ್ನಿಯನ್ನು ನೀರಿನಲ್ಲಿ ವಿಸರ್ಜಿಸು. ಲೋಕಗಳೆಲ್ಲವೂ ನೀರಿನಲ್ಲಿಯೇ ಪ್ರತಿಷ್ಠಿತವಾಗಿವೆಯಷ್ಟೆ?

ತಸ್ಮಾದಪ್ಸು ಪ್ರಮುಂಚೇದಂ ಕ್ರೋಧಾಗ್ನಿಂ ದ್ವಿಜಸತ್ತಮ ।
ಅಯಂ ತಿಷ್ಠತು ತೇ ವಿಪ್ರ ಯದೀಚ್ಛಸಿ ಮಹೋದಧೌ ॥೩೮॥

ದ್ವಿಜಶ್ರೇಷ್ಠನೇ, ಆ ಕಾರಣದಿಂದ ನಿನ್ನ ಕ್ರೋಧಾಗ್ನಿಯನ್ನು ವಿಸರ್ಜಿಸು. ನಿನಗೆ ಸಮ್ಮತವಾದರೆ ಈ ಕ್ರೋಧಾಗ್ನಿಯು ಸಮುದ್ರದಲ್ಲಿಯೇ ಇರಲಿ.

ಮನ್ಯುಜೋऽಗ್ನಿರ್ದಹನ್ನಾಪೋ ಲೋಕಾಶ್ಚೈವಾಮ್ಮಯಾಃ ಸ್ಮೃತಾಃ ।
ಏವಂ ಪ್ರತಿಜ್ಞಾ ಸತ್ಯೇಯಂ ಭವಿಷ್ಯತಿ ತವಾನಘ ।
ನ ಚೈವ ಸಾಮರಾ ಲೋಕಾ ಭವಿಷ್ಯಂತಿ ಪರಾಭವಮ್ ॥೩೯॥

ನೀರಿನಲ್ಲಿರುವ ಕ್ರೋಧಾಗ್ನಿಯು ನೀರನ್ನೇ ಸುಡುತ್ತಿರುತ್ತದೆ. ಎಲ್ಲ ಲೋಕಗಳು ಜಲಮಯವಾದುವೆಂದು ಹೇಳುತ್ತಾರೆ. ಅನಘನೇ, ಆಗ ನಿನ್ನ ಪ್ರತಿಜ್ಞೆಯೂ ರಕ್ಷಿತವಾಗುತ್ತದೆ. ಮತ್ತು ದೇವತೆಗಳಿಂದ ಸಹಿತವಾದ ಲೋಕಗಳು ಪರಾಭವವನ್ನು ಹೊಂದುವುದಿಲ್ಲ.

ವಸಿಷ್ಠಃ

ತತಸ್ತಂ ಕ್ರೋಧಜಂ ತಾತ ಔರ್ವೋऽಗ್ನಿಂ ವರುಣಾಲಯೇ ।
ಉತ್ಸಸರ್ಜ ಸ ಚೈವಾಪ ಉಪಯುಂಕ್ತೇ ಮಹೋದಧೌ ॥೪೦॥

ಪ್ರೀತಿಪಾತ್ರನೇ, ಆಗ ಅವರು ತಮ್ಮ ಕ್ರೋಧಾಗ್ನಿಯನ್ನು ವರುಣಾಲಯದಲ್ಲಿ ವಿಸರ್ಜಿಸಿದರು. ಆ ಅಗ್ನಿಯು ಸಮುದ್ರದಲ್ಲಿ ನೀರನ್ನು ದಹಿಸುತ್ತಾ ಇರುತ್ತದೆ.

ಮಹದ್ಧಯಶಿರೋ ಭೂತ್ವಾ ಯತ್ತದ್ ವೇದವಿದೋ ವಿದುಃ ।
ತಮಗ್ನಿಮುದ್ಗಿರನ್ ವಕ್ತ್ರಾತ್ ಪಿಬತ್ಯಾಪೋ ಮಹೋದಧೌ ॥೪೧॥

ವೇದವೇತ್ತರು ತಿಳಿದಿರುವ ದೊಡ್ಡಕುದುರೆಯ ರೂಪವನ್ನು ತೆಗೆದುಕೊಂಡು ಅಗ್ನಿಯು ಮುಖದಿಂದ ಅಗ್ನಿಯನ್ನು ಉಗುಳುತ್ತಾ ಸಮುದ್ರದಲ್ಲಿ ಜಲವನ್ನು ಕುಡಿಯುತ್ತಾನೆ.

ತಸ್ಮಾತ್ ತ್ವಮಪಿ ಭದ್ರಂ ತೇ ನ ಲೋಕಾನ್ ಹಂತುಮರ್ಹಸಿ ।
ಪರಾಶರ ಪರಂ ಧರ್ಮಂ ಜ್ಞಾತ್ವಾ ಜ್ಞಾನವಿದಾಂ ವರ ॥೪೨॥

ಆದ್ದರಿಂದ ಪರಾಶರನೇ, ನಿಮಗೆ ಮಂಗಳವಾಗಲಿ. ಜ್ಞಾನಿಗಳಲ್ಲಿ ಶ್ರೇಷ್ಠನಾದವನೇ, ನೀನು ಈ ಶ್ರೇಷ್ಠವಾದ ಧರ್ಮವನ್ನು ತಿಳಿದು ಲೋಕಗಳನ್ನು ವಿನಾಶ ಮಾಡಬಾರದು.

ಗಂಧರ್ವಃ

ಏವಮುಕ್ತಃ ಸ ವಿಪ್ರರ್ಷಿರ್ವಸಿಷ್ಠೇನ ಮಹಾತ್ಮನಾ ।
ನಿಯಚ್ಛದಾತ್ಮನಃ ಕ್ರೋಧಂ ಸರ್ವಲೋಕಪರಾಭವಾತ್ ॥೪೩॥

ಮಹಾತ್ಮರಾದ ವಸಿಷ್ಠರು ಹೀಗೆ ಹೇಳಿದಾಗ ವಿಪ್ರರ್ಷಿಗಳಾದ ಪರಾಶರರು ಸರ್ವಲೋಕವಿನಾಶದ ಉದ್ದೇಶದಿಂದ ಉತ್ಪನ್ನವಾದ ತಮ್ಮ ಕ್ರೋಧವನ್ನು ಶಮನಗೊಳಿಸಿದರು.

ಈಜೇ ಚ ಸ ಮಹಾತೇಜಾಃ ಸರ್ವವೇದವಿದಾಂ ವರಃ ।
ಋಷೀ ರಾಕ್ಷಸಸತ್ರೇಣ ಶಾಕ್ತೇಯೋಽಥ ಪರಾಶರಃ ॥೪೪॥

ಮಹಾತೇಜಸ್ವಿಗಳೂ, ಸರ್ವವೇದಜ್ಞರಲ್ಲಿ ಶ್ರೇಷ್ಠರಾದವರೂ ಆದ ಶಕ್ತಿಪುತ್ರರಾದ ಪರಾಶರರು ರಾಕ್ಷಸಸತ್ರವನ್ನು ಮಾತ್ರ ಮಾಡಿಯೇ ಮಾಡಿದರು.

ತತೋ ವೃದ್ಧಾಂಶ್ಚ ಬಾಲಾಂಶ್ಚ ರಾಕ್ಷಸಾನ್ ಸ ಮಹಾಮತಿಃ ।
ದದಾಹ ವಿತತೇಂ ಸತ್ರೇ ಶಕ್ತೇರ್ವಧಮನುಸ್ಮರನ್ ॥೪೫॥

ಆ ಮಹಾಮತಿಗಳಾದ ಪರಾಶರರು ತಮ್ಮ ತಂದೆಗಳಾದ ಶಕ್ತಿಋಷಿಗಳ ವಧೆಯನ್ನು ಸ್ಮರಿಸುತ್ತಾ ವಿಸ್ತಾರವಾದ ಯಜ್ಞದಲ್ಲಿ ವೃದ್ಧರೂ ಬಾಲರೂ ಆದ ರಾಕ್ಷಸರನ್ನು ದಹನ ಮಾಡಿದರು.

ನ ಹಿ ತಂ ವಾರಯಾಮಾಸ ವಸಿಷ್ಠೋ ರಕ್ಷಸಾಂ ವಧಾತ್ ।
ದ್ವಿತೀಯಾಮಸ್ಯ ಮಾ ಜಘ್ನೇ ಪ್ರತಿಜ್ಞಾಮಿತಿ ಚಿಂತಯನ್ ॥೪೬॥

ವಸಿಷ್ಠರು ಅವರನ್ನು ರಾಕ್ಷಸವಧೆಯಿಂದ ನಿವಾರಣೆ ಮಾಡಲಿಲ್ಲ. ಪರಾಶರರ ಎರಡನೆಯ ಪ್ರತಿಜ್ಞೆಯನ್ನೂ ನಾನು ವ್ಯರ್ಥ ಮಾಡುವುದು ಬೇಡ ಎಂದು ಅವರು ಚಿಂತಿಸಿದರು. (ಲೋಕವಿನಾಶವು ಮೊದಲನೆಯ ಪ್ರತಿಜ್ಞೆ. ತಂದೆಯನ್ನು ಕೊಂದ ರಾಕ್ಷಸರ ವಿನಾಶವು ಪರಾಶರರ ಎರಡನೆಯ ಪ್ರತಿಜ್ಞೆ.)

ತ್ರಯಾಣಾಂ ಪಾವಕಾನಾಂ ಸ ಸತ್ರೇ ತಸ್ಮಿನ್ ಮಹಾಮುನಿಃ ।
ಆಸೀತ್ ಪುರಸ್ತಾದ್ ದೇವಾನಾಂ ಚತುರ್ಥ ಇವ ಪಾವಕಃ ॥೪೭॥

ಮಹರ್ಷಿಗಳಾದ ಪರಾಶರರು ಯಜ್ಞದಲ್ಲಿರುವ ಮೂರು ಅಗ್ನಿಗಳ ಜೊತೆಯಲ್ಲಿ ದೇವತೆಗಳ ಎದುರಿನಲ್ಲಿ ನಾಲ್ಕನೆಯ ಅಗ್ನಿಯಂತೆ ಶೋಭಿಸಿದರು.

ತೇನ ಯಜ್ಞೇನ ಶುದ್ಧೇನ ಹೂಯಮಾನೇನ ಯುಕ್ತಿತಃ ।
ತದ್ ವಿದೀಪಿತಮಾಕಾಶಂ ಸೂರ್ಯೇಣೇವ ಘನಾತ್ಯಯೇ ॥೪೮॥

ಪರಾಶರರು ತಮ್ಮ ಯೋಗದಿಂದ ಹಾಗೆ ಶುದ್ಧವಾಗಿ ಯಜ್ಞವನ್ನು ಮಾಡುತ್ತಿರಲು ಮೋಡವಿಲ್ಲದಾಗ ಸೂರ್ಯನಿಂದ ಬೆಳಗುವಂತೆ ಆಕಾಶವು ಬೆಳಗಿತು.

ತಂ ವಸಿಷ್ಠಾದಯಃ ಸರ್ವೇ ಮುನಯಸ್ತ್ವೇವ ಮೇನಿರೇ ।
ತೇಜಸಾ ದೀಪ್ಯಮಾನಂ ತು ದ್ವಿತೀಯಮಿವ ಭಾಸ್ಕರಮ್ ॥೪೯॥

ವಸಿಷ್ಠಾದಿ ಋಷಿಗಳು ತೇಜಸ್ಸಿನಿಂದ ಬೆಳಗುತ್ತಿದ್ದ ಅವರನ್ನು ಎರಡನೆಯ ಸೂರ್ಯನೆಂದೇ ತಿಳಿದರು.

ತತಃ ಪರಮದುಷ್ಪ್ರಾಪಮನ್ಯೈ ಋಷಿರುದಾರಧೀಃ ।
ಸಮಾಪಿಪಯಿಷುಃ ಸತ್ರಂ ತಮತ್ರಿಃ ಸಮುಪಾಗಮತ್ ॥೫೦॥

ತಂ ನಿವಾರಯಿಷುಃ ಸತ್ರಂ ನಿಋತೇಃ ಪ್ರಿಯಕಾಮ್ಯಯಾ ।
ತತಃ ಪುಲಸ್ತ್ಯಃ ಪುಲಹಃ ಕ್ರತುಶ್ಚೈವ ಮಹಾತಪಾಃ ।
ತದಾऽऽಜಗ್ಮುರಮಿತ್ರಘ್ನ ರಕ್ಷಸಾಂ ಜೀವಿತೇಪ್ಸಯಾ ॥೫೧॥

ಆಗ ನಿಋತಿಗೆ ಹಿತವನ್ನು ಮಾಡುವ ಸಲುವಾಗಿ ಆ ಯಜ್ಞವನ್ನು ನಿಲ್ಲಿಸಲು ಉದಾರಬುದ್ಧಿಯುಳ್ಳ ಅತ್ರಿಋಷಿಗಳು ಪರಮದುಷ್ಕಾಪರಾದ ಪರಾಶರರ ಸಮೀಪಕ್ಕೆ ಬಂದರು. ಆಗ ರಾಕ್ಷಸರ ಜೀವವನ್ನು ಉಳಿಸುವ ಸಲುವಾಗಿ ಮಹಾತಪಸ್ವಿಗಳಾದ ಪುಲಸ್ತ್ಯರೂ, ಪುಲಹರೂ ಮತ್ತು ಕ್ರತುಗಳೂ ಸಹ ಅಲ್ಲಿಗೆ ಬಂದರು.

ಪುಲಸ್ತ್ಯಸ್ತು ವಧಾತ್ ತೇಷಾಂ ರಕ್ಷಸಾಂ ಭರತರ್ಷಭ ।
ಉವಾಚೇದಂ ವಚಃ ಪಾರ್ಥ ಪರಾಶರಮರಿಂದಮಮ್ ॥೫೨॥

ಭರತರ್ಷಭನೇ, ಪಾರ್ಥನೇ, ಪುಲಸ್ತ್ಯರು ಆ ರಾಕ್ಷಸರ ವಧೆಯ ನಿಮಿತ್ತದಿಂದ ಅರಿಂದಮರಾದ ಪರಾಶರರನ್ನು ಕುರಿತು ರಾಕ್ಷಸರನ್ನು ರಕ್ಷಿಸಲು ಬಯಸಿ ಹೀಗೆ ಮಾತನಾಡಿದರು.

ಕಚ್ಚಿತ್ ತಪಸ್ಯವಿಘ್ನಂ ತೇ ಕಚ್ಚಿನ್ನಂದಸಿ ಪುತ್ರಕ ।
ಅಜಾನತಾಮದೋಷಾಣಾಂ ಸರ್ವೇಷಾಂ ರಕ್ಷಸಾಂ ವಧಾತ್ ।
ಪ್ರಜೋಚ್ಛೇದಮಿಮಂ ಮಹ್ಯಂ ಮಾ ಕಾರ್ಷೀಸ್ತಾಪಸೋತ್ತಮ ॥೫೩॥

ಪುತ್ರನೇ, ನಿನ್ನ ತಪಸ್ಸು ನಿರ್ವಿಘ್ನವಾಗಿ ನಡೆದಿದೆಯೇ? ನೀನು ಸಂತೋಷವಾಗಿದ್ದೀಯಾ? ತಾಪಸೋತ್ತಮನೇ, ನಿರಪರಾಧಿಗಳಾದ ಏನನ್ನೂ ತಿಳಿಯದ ಅನೇಕ ರಾಕ್ಷಸರ ವಧೆಯನ್ನು ಮಾಡಿ ನನ್ನ ಪ್ರಜೆಗಳನ್ನು ವಿನಾಶ ಮಾಡಬೇಡ.

ಅಧರ್ಮಿಷ್ಠಂ ವರಿಷ್ಠಃ ಸನ್ ಕುರುಷೇ ತ್ವಂ ಪರಾಶರ ।
ಶಕ್ತಿನಂ ಚಾಪಿ ಧರ್ಮಜ್ಞಂ ನಾತಿಕ್ರಾಂತುಮಿಹಾರ್ಹಸಿ ॥೫೪॥

ಪರಾಶರನೇ ನೀನು ಶ್ರೇಷ್ಠನಾದವನಾಗಿ ಇಂತಹ ಅಧರ್ಮದ ಕಾರ್ಯವನ್ನು ಮಾಡುತ್ತಿದ್ದೀಯೆ, ನೀನು ಧರ್ಮಜ್ಞರಾದ ಶಕ್ತಿಋಷಿಗಳನ್ನು ಮೀರಿ ನಡೆಯುತ್ತಿದ್ದೀಯೆ.

ಪ್ರಜಾನಾಂ ಚ ಮಮೋಚ್ಛೇದಂ ನ ವೈ ಕರ್ತುಂ ತ್ವಮರ್ಹಸಿ ।
ಶಾಪಾದ್ಧಿ ಶಕ್ತೇರ್ವಾಸಿಷ್ಠ ತದಾ ತದುಪಪಾದಿತಮ್ ॥೫೫॥

ನೀನು ನನ್ನ ಪ್ರಜೆಗಳ ವಿನಾಶವನ್ನು ಮಾಡಬಾರದು. ವಸಿಷ್ಠ- ಕುಲೋದ್ಭವನೇ ಶಕ್ತಿಋಷಿಗಳ ಶಾಪ (ದೋಷ)ದಿಂದಲೇ ಆಗ ಆ ಘಟನೆಯು (ಶಕ್ತಿವಧೆಯು) ನಡೆಯಿತು.

ಆತ್ಮಜೇನ ಸ ದೋಷೇಣ ಶಕ್ತಿರ್ನೀತ ಇತೋ ದಿವಮ್ ।
ನ ಹಿ ತಂ ರಾಕ್ಷಸಃ ಕಶ್ಚಿಚ್ಛಕ್ತೋ ಭಕ್ಷಯಿತುಂ ಮುನೇ ॥೫೬॥

ಶಕ್ತಿಋಷಿಗಳು ತಮ್ಮ ದೋಷದಿಂದಲೇ ಸ್ವರ್ಗಸ್ಥರಾದರು. ಮುನಿಯೇ, ಯಾವ ರಾಕ್ಷಸನೂ ಶಕ್ತಿಋಷಿಗಳನ್ನು ಭಕ್ಷಿಸಲು ಸಮರ್ಥನಲ್ಲ.

ವಾಸಿಷ್ಠಾ ಭಕ್ಷಿತಾಶ್ಚಾಸನ್ ಕೌಶಿಕೋತ್ಸೃಷ್ಟರಕ್ಷಸಾ ।
ಶಾಪಂ ನ ಕುರ್ವಂತಿ ತದಾ ವಾಗಸ್ತ್ರಾ ನರವಾರಣಾಃ ॥೫೭॥

ವಿಶ್ವಾಮಿತ್ರರು ನಿಯೋಜಿಸಿದ ರಾಕ್ಷಸನಿಂದ ವಸಿಷ್ಠಪುತ್ರರೆಲ್ಲರೂ ಭಕ್ಷಿತರಾದರು. ಮನುಷ್ಯರೂಪದ ದಿಗ್ಗಜಗಳಂತಿದ್ದ ವಾಗಸ್ತ್ರರಾದ ಅವರು ಆಗ ಶಾಪವನ್ನು ಕೊಡಲಿಲ್ಲ.

ಕ್ಷಮಾವಂತಂ ದಹೇದ್ ದೇಹಮಹಮ್ಮನ್ಯಂ ಧ್ರುವಂ ತ್ವಿತಿ ।
ಆತ್ಮನೈವಾತ್ಮತಸ್ತೇನ ತತೋ ಮೃತ್ಯುಸ್ತದಾऽಭವತ್ ॥೫೮॥

ದೇಹವನ್ನು ಕ್ಷಮಾವಂತವನ್ನಾಗಿ ಮಾಡಿ ಅಹಂಕಾರದಿಂದ ಉಂಟಾದ ಕ್ರೋಧವನ್ನು ನಿಶ್ಚಿತವಾಗಿ ಸುಡಬೇಕು ಎಂದು ತಿಳಿದ ಶಕ್ತಿಋಷಿಗಳು ಶಾಪವನ್ನು ಕೊಡದೆ ಇರುತ್ತಿರಲು ತನ್ನ ಹಂತಕನಲ್ಲಿ ಕ್ಷಮೆಯನ್ನು ತೋರಿದ ಆತ್ಮಾಪರಾಧದಿಂದಲೇ ಶಕ್ತಿಋಷಿಗಳು ಮೃತ್ಯುವಶರಾದರು.

ನಿಮಿತ್ತಭೂತಸ್ತತ್ರಾಸೀದ್ ವಿಶ್ವಾಮಿತ್ರಃ ಪರಾಶರ ।
ರಾಜಾ ಕಲ್ಮಾಷಪಾದಸ್ತು ದಿವಮಾರೋಢುಮಿಚ್ಛತಿ ॥೫೯॥

ಪರಾಶರರೇ, ವಿಶ್ವಾಮಿತ್ರರು ಈ ವಧೆಯಲ್ಲಿ ನಿಮಿತ್ತಮಾತ್ರರು. ಕಲ್ಮಾಷಪಾದರಾಜನು ಈಗ ಸ್ವರ್ಗವನ್ನು ಹೊಂದಲು ಬಯಸುತ್ತಾನೆ.

ಯೇ ಚ ಶಕ್ತ್ಯವರಾಃ ಪುತ್ರಾ ವಸಿಷ್ಠಸ್ಯ ಮಹಾಮುನೇ ।
ತೇ ಚ ಸರ್ವೇ ಮುದಾ ಯುಕ್ತಾ ಮೋದಂತೇ ಸಹಿತಾಃ ಸುರೈಃ ॥೬೦॥

ಮಹರ್ಷಿಯೇ, ವಸಿಷ್ಠರ ಮಕ್ಕಳಾದ ಶಕ್ತಿಯ ತಮ್ಮಂದಿರೆಲ್ಲರೂ ಈಗ ಸ್ವರ್ಗದಲ್ಲಿ ದೇವತೆಗಳ ಜೊತೆಯಲ್ಲಿ ಸುಖವಾಗಿದ್ದಾರೆ.

ಸರ್ವಮೇತದ್ ವಸಿಷ್ಠಸ್ಯ ವಿದಿತಂ ವೈ ಮಹಾತ್ಮನಃ ।
ರಕ್ಷಸಾಂ ಚ ಸಮುಚ್ಛೇದ ಏಷ ತಾತ ತಪಸ್ವಿನಾಮ್ ॥೬೧॥

ಈ ಶೋಚನೀಯರಾದ ರಾಕ್ಷಸರವಧೆ ಮುಂತಾದ ಎಲ್ಲವೂ ಮಹಾತ್ಮರಾದ ವಸಿಷ್ಠರಿಗೆ ತಿಳಿದಿದೆ.

ನಿಮಿತ್ತಭೂತಸ್ತ್ವಂ ಚಾತ್ರ ಕ್ರತೌ ವಾಸಿಷ್ಠನಂದನ ।
ಸ ಸತ್ರಂ ಮುಂಚ ಭದ್ರಂ ತೇ ಸಮಾಪ್ತಮಿದಮಸ್ತು ತೇ ॥೬೨॥

ವಾಸಿಷ್ಠನಂದನನೇ, ಈ ಯಾಗದಲ್ಲಿ ನೀನೂ ಸಹ ಕೇವಲ ನಿಮಿತ್ತಮಾತ್ರನಾದವನು. ನಿನಗೆ ಮಂಗಳವಾಗಲಿ. ಈ ಸತ್ರವನ್ನು ನಿಲ್ಲಿಸು. ಇದು ಸಮಾಪ್ತಿಯನ್ನು ಹೊಂದಲಿ.

ಗಂಧರ್ವಃ

ಏವಮುಕ್ತಃ ಪುಲಸ್ತ್ಯೇನ ವಸಿಷ್ಠೇನ ಚ ಧೀಮತಾ ।
ತದಾ ಸಮಾಪಯಾಮಾಸ ಸತ್ರಂ ಶಾಂತಃ ಪರಾಶರಃ ॥೬೩॥

ಪುಲಸ್ತ್ಯರು ಮತ್ತು ಮೇಧಾವಿಗಳಾದ ವಸಿಷ್ಠರು ಹೀಗೆ ಹೇಳುತ್ತಿರಲು ಪರಾಶರರು ಶಾಂತರಾಗಿ ಯಜ್ಞವನ್ನು ಸಮಾಪ್ತಿಗೊಳಿಸಿದರು.

ಸರ್ವರಾಕ್ಷಸಸತ್ರಾಯ ಸಂಭೂತಂ ಪಾವಕಂ ಮುನಿಃ ।
ಉತ್ತರೇ ಹಿಮವತ್ಪಾರ್ಶ್ವೇ ಉತ್ಸಸರ್ಜ ಮಹಾವನೇ ॥೬೪॥

ಸರ್ವರಾಕ್ಷಸರ ವಿನಾಶಕ್ಕಾಗಿ ಉತ್ಪಾದಿಸಿದ ಆ ಅಗ್ನಿಯನ್ನು ಆ ಋಷಿಗಳು ಹಿಮಾಲಯಪರ್ವತದ ಉತ್ತರಭಾಗದ ಮಹಾವನದಲ್ಲಿ ವಿಸರ್ಜನೆ ಮಾಡಿದರು.

ಸ ತತ್ರಾದ್ಯಾಪಿ ರಕ್ಷಾಂಸಿ ವೃಕ್ಷಾನಶ್ಮನ ಏವ ಚ ।
ಭಕ್ಷಯನ್ ದೃಶ್ಯತೇ ವಹ್ನಿಃ ಸದಾ ಪರ್ವಣಿಪರ್ವಣಿ ॥೬೫॥

ಅಲ್ಲಿ ಆ ವಹ್ನಿಯು ಪ್ರತಿ ಪರ್ವಕಾಲದಲ್ಲಿ ರಾಕ್ಷಸರನ್ನೂ, ವೃಕ್ಷಗಳನ್ನೂ ಮತ್ತು ಪಾಷಾಣಗಳನ್ನೂ ಭಕ್ಷಿಸುವುದು ಈಗಲೂ ಕಾಣುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವ್ಯಶೀತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ಎಂಭತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ನೂರ ಎಂಭತ್ಮೂರನೆಯ ಅಧ್ಯಾಯ

(ಸೌದಾಸನು ತನ್ನ ಭಾರ್ಯೆಯಲ್ಲಿ ವಸಿಷ್ಠರನ್ನು ನಿಯೋಜಿಸಲು ಬ್ರಾಹ್ಮಣನ ಶಾಪ ಮೊದಲಾದ ವೃತ್ತಾಂತ ಕಥನ.)

ಅರ್ಜುನಃ

ರಾಜ್ಞಾ ಕಲ್ಮಷಪಾದೇನ ಗುರೌ ಬ್ರಹ್ಮವಿದಾಂ ವರೇ ।
ಕಾರಣಂ ಕಿಂ ಪುರಸ್ಕೃತ್ಯ ಭಾರ್ಯಾ ವೈ ಸನ್ನಿಯೋಜಿತಾ ॥೧॥

ಕಲ್ಮಾಷಪಾದರಾಜನು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ, ಗುರುಗಳಾದ ವಸಿಷ್ಠರಲ್ಲಿ ಯಾವ ಕಾರಣದಿಂದ ತನ್ನ ಪತ್ನಿಯನ್ನು ನಿಯೋಗ ಮಾಡಿದನು?

ಜಾನತಾ ಚ ಪರಂ ಧರ್ಮಂ ಲೌಕ್ಯಂ ತೇನ ಮಹರ್ಷಿಣಾ ।
ಅಗಮ್ಯಾಗಮನಂ ಕಸ್ಮಾದ್ ವಸಿಷ್ಠೇನ ಮಹಾತ್ಮನಾ ।
ಕೃತಂ ತೇನ ಪುರಾ ಸರ್ವಂ ವಕ್ತುಮರ್ಹಸಿ ಪೃಚ್ಛತಃ ॥೨॥

ಲೋಕದ ಪರಮಧರ್ಮವನ್ನು ತಿಳಿದ ಮಹಾತ್ಮರಾದ ಮಹರ್ಷಿಗಳಾದ ವಸಿಷ್ಠರು ಹಿಂದೆ ಏಕೆ ಅಗಮ್ಯಾಗಮನವನ್ನು ಮಾಡಿದರು? ನನ್ನ ಪ್ರಶ್ನೆಗೆ ಉತ್ತರವಾಗಿ ನೀನು ಎಲ್ಲವನ್ನೂ ಹೇಳು.

ಗಂಧರ್ವಃ

ಧನಂಜಯ ನಿಬೋಧೇದಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ವಸಿಷ್ಠಂ ಪ್ರತಿ ದುರ್ಧರ್ಷಂ ತಥಾ ಮಿತ್ರಸಹಂ ನೃಪಮ್ ॥೩॥

ಧನಂಜಯನೇ, ಮಹರ್ಷಿಗಳಾದ ವಸಿಷ್ಠರ ಮತ್ತು ದುರ್ಧರ್ಷನಾದ ಮಿತ್ರಸಹ (ಕಲ್ಮಾಷಪಾದ) ರಾಜನ ವಿಷಯದಲ್ಲಿ ಏನು ಪ್ರಶ್ನೆಗಳನ್ನು ಕೇಳಿದ್ದೀಯೋ ಅದಕ್ಕೆ ಉತ್ತರವಾಗಿ ನನ್ನ ಮಾತನ್ನು ಕೇಳು.

ಕಥಿತಂ ತೇ ಮಯಾ ಸರ್ವಂ ಯಥಾ ಶಪ್ತಃ ಸ ಪಾರ್ಥಿವಃ ।
ಶಕ್ತಿನಾ ಭರತಶ್ರೇಷ್ಠ ವಾಸಿಷ್ಠೇನ ಮಹಾತ್ಮನಾ ॥೪॥

ಭರತಶ್ರೇಷ್ಠನೇ, ಆ ರಾಜನು ವಸಿಷ್ಠಪುತ್ರರಾದ ಮಹಾತ್ಮರಾದ ಶಕ್ತಿಋಷಿಗಳಿಂದ ಹೇಗೆ ಶಪಿತನಾದನು ಎಂಬ ಎಲ್ಲಾ ವಿಷಯವನ್ನು ನಿನಗೆ ಹೇಳಿದ್ದೇನೆ.

ಸ ತು ಶಾಪವಶಂ ಪ್ರಾಪ್ತಃ ಕ್ರೋಧಪರ್ಯಾಕುಲೇಕ್ಷಣಃ ।
ನಿರ್ಜಗಾಮ ಪುರಾದ್ ರಾಜನ್ ಸಹದಾರಃ ಪರಂತಪಃ ॥೫॥

ಶಾಪವಶನಾದ ಪರಂತಪನಾದ ಆ ರಾಜನು ಕ್ರೋಧದಿಂದ ತುಂಬಿದ ಕಣ್ಣುಗಳುಳ್ಳವನಾಗಿ ತನ್ನ ಪತ್ನಿಯ ಜೊತೆಯಲ್ಲಿ ನಗರದಿಂದ ಹೊರಗೆ ಹೊರಟನು.

ಅರಣ್ಯಂ ನಿರ್ಜನಂ ಗತ್ವಾ ಸದಾರಃ ಪರಿಚಕ್ರಮೇ ।
ನಾನಾಮೃಗಸಮಾಕೀರ್ಣಂ ನಾನಾಪಕ್ಷಿಸಮಾಕುಲಮ್ ॥೬॥

ಅವನು ಅನೇಕ ಮೃಗಗಳಿಂದಲೂ ಮತ್ತು ಅನೇಕ ಪಕ್ಷಿಗಳಿಂದಲೂ ತುಂಬಿದ ನಿರ್ಜನವಾದ ಅರಣ್ಯಕ್ಕೆ ಪತ್ನಿಯ ಹೋಗಿ ಜೊತೆಯಲ್ಲಿ ಅಲ್ಲಿ ತಿರುಗಾಡಿದನು.

ನಾನಾಗುಲ್ಮಲತಾಚ್ಛನ್ನಂ ನಾನಾದ್ರುಮಸಮಾಕುಲಮ್ ।
ಅರಣ್ಯಂ ಘೋರಸನ್ನಾದಂ ಶಾಪಗ್ರಸ್ತಃ ಪರಿಭ್ರಮನ್ ॥೭॥

ಅನೇಕ ಲತೆಗಳಿಂದ ಮತ್ತು ಪೊದೆಗಳಿಂದ ತುಂಬಿದ, ಅನೇಕ ವೃಕ್ಷಗಳಿಂದ ನಿಬಿಡವಾದ, ಘೋರಶಬ್ದದಿಂದ ಕೂಡಿದ ಅರಣ್ಯದಲ್ಲಿ ಅವನು ಶಾಪಗ್ರಸ್ತನಾಗಿ ಸಂಚರಿಸಿದನು.

ಸ ಕದಾಚಿತ್ ಕ್ಷುಧಾऽऽವಿಷ್ಟೋ ಮೃಗಯನ್ ಭಕ್ಷ್ಯಮಾತ್ಮನಃ ।
ದದರ್ಶ ಸುಪರಿಕ್ಲಿಷ್ಟಃ ಕಸ್ಮಿಂಶ್ಚಿದ್ ವನನಿರ್ಝರೇ ॥೮॥

ಬ್ರಾಹ್ಮಣಂ ಬ್ರಾಹ್ಮಣೀಂ ಚೈವ ಮಿಥುನಾಯೋಪಸಂಗತೌ ।
ತೌ ಸಮೀಕ್ಷ್ಯ ಚ ಸಂತ್ರಸ್ತಾವಕೃತಾರ್ಥೌ ಪ್ರಧಾವಿತೌ ।
ತಯೋಃ ಪ್ರದ್ರವತೋರ್ವಿಪ್ರಂ ಜಗೃಹೇ ನೃಪತಿರ್ಬಲಾತ್ ॥೯॥

ಅವನು ಒಮ್ಮೆ ಹಸಿವಿನಿಂದ ಕೂಡಿದವನಾಗಿ ಬಹಳ ಕ್ಲೇಶವನ್ನು ಅನುಭವಿಸಿ ತನ್ನ ಆಹಾರವನ್ನು ಹುಡುಕುತ್ತಾ ಕಾಡಿನ ಒಂದು ಮೂಲೆಯಲ್ಲಿ ಮೈಥುನದಲ್ಲಿ ಉದ್ಯುಕ್ತರಾದ ಬ್ರಾಹ್ಮಣದಂಪತಿಗಳನ್ನು ನೋಡಿದನು. ಅವನನ್ನು ನೋಡಿದ ಆ ದಂಪತಿಗಳು ಅರ್ಧದಲ್ಲಿಯೇ ಎದ್ದು ಓಡಿದರು. ಅವರು ಹಾಗೆ ಓಡುತ್ತಿರುವಾಗ ರಾಜನು ತನ್ನ ಬಲದಿಂದ ಆ ಬ್ರಾಹ್ಮಣನನ್ನು ಹಿಡಿದುಕೊಂಡನು.

ದೃಷ್ಟ್ವಾ ಗೃಹೀತಂ ಭರ್ತಾರಮಥ ಬ್ರಾಹ್ಮಣ್ಯಭಾಷತ ।
ಶೃಣು ರಾಜನ್ ವಚೋ ಮಹ್ಯಂ ಯತ್ ತ್ವಾಂ ವಕ್ಷ್ಯಾಮಿ ಸುವ್ರತ ॥

ತನ್ನ ಪತಿಯು ರಾಜನಿಂದ ಗ್ರಸ್ತನಾದುದನ್ನು ನೋಡಿ ಬ್ರಾಹ್ಮಣಿಯು ಮಾತನಾಡಿದಳು. ಸುವ್ರತನಾದ ರಾಜನೇ, ನಾನು ಹೇಳುವ ಮಾತುಗಳನ್ನು ಕೇಳು.

ಆದಿತ್ಯವಂಶಪ್ರಭವಸ್ತ್ವಂ ಹಿ ಲೋಕೇ ಚ ವಿಶ್ರುತಃ ।
ಅಪ್ರಮತ್ತಃ ಸ್ಥಿತೋ ಧರ್ಮೇ ಗುರುಶುಶ್ರೂಷಣೇ ರತಃ ।
ಶಾಪಂ ಪ್ರಾಪ್ತೋऽಸಿ ದುರ್ಧರ್ಷ ನ ಪಾಪಂ ಕರ್ತುಮರ್ಹಸಿ ॥೧೧॥

ನೀನು ಆದಿತ್ಯ ವಂಶದಲ್ಲಿ ಜನಿಸಿದ ಲೋಕದಲ್ಲಿ ಪ್ರಖ್ಯಾತನಾದ ರಾಜ. ನೀನು ಯಾವಾಗಲೂ ಪ್ರಮಾದರಹಿತನಾಗಿ ಧರ್ಮವನ್ನು ಆಚರಿಸುವವನು ಮತ್ತು ಗುರುಗಳ ಶುಶ್ರೂಷೆಯಲ್ಲಿ ನಿರತನಾದವನು. ದುರ್ಧರ್ಷನೇ, ನೀನು ಶಾಪಕ್ಕೆ ಒಳಗಾಗಿದ್ದೀಯೆ. ಪಾಪಕಾರ್ಯವನ್ನು ಮಾಡಬೇಡ.

ಋತುಕಾಲೇ ತು ಸಂಪ್ರಾಪ್ತೇ ಭರ್ತ್ರಾऽಹಂ ಸಮುಪಾಗತಾ ।
ಅಕೃತಾರ್ಥಿನ್ಯಹಂ ಭದ್ರ ಪ್ರಸವಾರ್ಥಶ್ಚ ಮೇ ಭವೇತ್ ।
ಪ್ರಸೀದ ನೃಪತಿಶ್ರೇಷ್ಠ ಭರ್ತಾ ಮಮ ವಿಸೃಜ್ಯತಾಮ್ ॥೧೨॥

ನಾನು ಋತುಕಾಲದಲ್ಲಿ ಪತಿಯ ಜೊತೆಯಲ್ಲಿ ಸೇರಿದ್ದೇನೆ. ಮಂಗಳಸ್ವರೂಪನೇ, ಅಕೃತಾರ್ಥಳಾದ ನನಗೆ ಸಂತತಿಯ ಅಪೇಕ್ಷೆಯಿದೆ. ರಾಜಶ್ರೇಷ್ಠನೇ, ನೀನು ಪ್ರಸನ್ನನಾಗಿ ನನ್ನ ಪತಿಯನ್ನು ಬಿಟ್ಟುಬಿಡು.

ಗಂಧರ್ವಃ

ಏವಂ ವಿಕ್ರೋಶಮಾನಾಯಾಂ ತಸ್ಯಾಂ ಸ ಸುನೃಶಂಸಕೃತ್ ।
ಭರ್ತಾರಂ ಭಕ್ಷಯಾಮಾಸ ವ್ಯಾಘ್ರೋ ಮೃಗಮಿವೇಪ್ಸಿತಮ್ ॥೧೩॥

ಆ ಬ್ರಾಹ್ಮಣಿಯು ಹೀಗೆ ಗೋಳಾಡುತ್ತಿದ್ದರೂ ಅತ್ಯಂತ ಕ್ರೂರಕರ್ಮವನ್ನು ಮಾಡುವ ಆ ರಾಜನು ವ್ಯಾಘ್ರವು ಇಷ್ಟವಾದ ಜಿಂಕೆಯನ್ನು ಹಿಡಿದು ತಿನ್ನುವಂತೆ ಆ ಬ್ರಾಹ್ಮಣನನ್ನು ತಿಂದನು.

ತಸ್ಯಾಃ ಕ್ರೋಧಾಭಿಭೂತಾಯಾಸ್ತತ್ರಾಶ್ರೂಣ್ಯಪತನ್ ಭುವಿ ।
ಸೋऽಗ್ನಿಃ ಸಮಭವದ್ ದೀಪ್ತಃ ತಂ ಚ ದೇಶಂ ವ್ಯದೀಪಯತ್ ॥೧೪॥

ಕ್ರೋಧವಶಳಾದ ಆ ಬ್ರಾಹ್ಮಣಿಯ ಕಣ್ಣೀರಿನ ಹನಿಗಳು ಭೂಮಿಯ ಮೇಲೆ ಬಿದ್ದವು ಅವು ಅಗ್ನಿಯ ರೂಪವನ್ನು ತಳೆದು ಪ್ರಜ್ವಲಿಸಿ ಆ ಪ್ರದೇಶವನ್ನೆಲ್ಲಾ ಸುಟ್ಟುಹಾಕಿದವು.

ತತಃ ಸಾ ಶೋಕಸಂತಪ್ತಾ ಭರ್ತೃವ್ಯಸನದುಃಖಿತಾ ।
ಕಲ್ಮಾಷಪಾದಂ ರಾಜರ್ಷಿಮಶಪದ್ ಬ್ರಾಹ್ಮಣೀ ರುಷಾ ॥೧೫॥

ಭರ್ತೃವಿಯೋಗದಿಂದ ದುಃಖಿತಳಾದ ಶೋಕಸಂತಪ್ತಳಾದ ಆ ಬ್ರಾಹ್ಮಣಿಯು ಆಗ ಕೋಪದಿಂದ ರಾಜರ್ಷಿಯಾದ ಕಲ್ಮಾಷಪಾದನಿಗೆ ಶಾಪವನ್ನು ಕೊಟ್ಟಳು.

ಯಸ್ಮಾನ್ಮಮಾಕೃತಾರ್ಥಾಯಾಃ ತ್ವಯಾ ಕ್ಷುದ್ರ ನೃಶಂಸವತ್ ।
ಪ್ರೇಕ್ಷಂತ್ಯಾ ಭಕ್ಷಿತೋ ಮೇऽದ್ಯ ಪ್ರಭುರ್ಭರ್ತಾ ಮಹಾಯಶಾಃ ॥೧೬॥

ಕ್ಷುದ್ರನೇ, ಅಕೃತಾರ್ಥಳಾದ ನನ್ನ ಕಣ್ಣೆದುರಿಗೆ ನನ್ನ ಪ್ರಭುವೂ, ಮಹಾಕೀರ್ತಿವಂತನೂ ಆದ ನನ್ನ ಪತಿಯನ್ನು ಕ್ರೂರನಂತೆ ನೀನು ಇಂದು ಭಕ್ಷಿಸಿದ್ದಿಯೆ.

ತಸ್ಮಾತ್ ತ್ವಮಪಿ ದುರ್ಬುದ್ಧೇ ಮಚ್ಛಾಪಪರಿವಿಕ್ಷತಃ ।
ಪತ್ನೀಮೃತಾವನುಪ್ರಾಪ್ಯ ಸಮ್ಯಕ್ ತ್ಯಕ್ಷ್ಯಸಿ ಜೀವಿತಮ್ ॥೧೭॥

ದುರ್ಬುದ್ಧಿಯೇ, ಆದ್ದರಿಂದ ನೀನೂ ಸಹ ನನ್ನ ಶಾಪದಿಂದ ಗ್ರಸ್ತನಾಗಿ ಋತುಕಾಲದಲ್ಲಿ ನಿನ್ನ ಪತ್ನಿಯನ್ನು ಸೇರಿದಾಗ ಪ್ರಾಣವನ್ನು ತ್ಯಜಿಸುವೆ.

ತೇನ ಪ್ರಸಾದ್ಯಮಾನಾ ಸಾ ಪ್ರಸಾದಮಕರೋದ್ ತದಾ ।
ಯಸ್ಯ ಚರ್ಷೇರ್ವಸಿಷ್ಠಸ್ಯ ತ್ವಯಾ ಪುತ್ರಾ ವಿನಾಶಿತಾಃ ॥೧೮॥

ತೇನ ಸಂಗತ್ಯ ತೇ ಭಾರ್ಯಾ ತನಯಂ ಜನಯಿಷ್ಯತಿ ।
ಸ ತೇ ವಂಶಕರಃ ಪುತ್ರೋ ಭವಿಷ್ಯತಿ ನೃಪಾಧಮ ॥೧೯॥

ಕಲ್ಮಾಷಪಾದನು ಅವಳ ಅನುಗ್ರಹವನ್ನು ಬೇಡುತ್ತಿರಲು ಆಗ ಬ್ರಾಹ್ಮಣಿಯು ಹೀಗೆ ಅನುಗ್ರಹ ಮಾಡಿದಳು - ಯಾವ ವಸಿಷ್ಠಋಷಿಯ ಪುತ್ರನನ್ನು ನೀನು ವಿನಾಶಮಾಡಿದ್ದೀಯೋ ಅಂತಹ ವಸಿಷ್ಠರ ಜೊತೆಯಲ್ಲಿ ಸಂಗವನ್ನು ಮಾಡಿ ನಿನ್ನ ಪತ್ನಿಯು ಪುತ್ರನನ್ನು ಪಡೆಯುವಳು. ನೃಪಾಧಮನೇ, ಆ ಪುತ್ರನು ನಿನಗೆ ವಂಶಕರನಾಗುವನು.

ಗಂಧರ್ವಃ

ಏವಂ ಶಪ್ತ್ವಾ ತು ರಾಜಾನಂ ಸಾ ತದಾऽऽಂಗಿರಸೀ ಶುಭಾ ।
ತಸ್ಯೈವ ಸನ್ನಿಧೌ ದೀಪ್ತಂ ಪ್ರವಿವೇಶ ಹುತಾಶನಮ್ ॥೨೦॥

ರಾಜನನ್ನು ಕುರಿತು ಹೀಗೆ ಮಾತನಾಡಿ ಆಂಗಿರಸಗೋತ್ರದ ಆ ಪವಿತ್ರಳಾದ ಬ್ರಾಹ್ಮಣಿಯು ರಾಜನ ಸನ್ನಿಧಿಯಲ್ಲಿಯೇ ಅಗ್ನಿಯನ್ನು ಪ್ರಜ್ವಲಿಸಿ (ತನ್ನ ಪತಿಯ ಅಸ್ಥಿಗಳ ಜೊತೆಯಲ್ಲಿ) ಅಗ್ನಿಪ್ರವೇಶವನ್ನು ಮಾಡಿದಳು.

ವಸಿಷ್ಠಶ್ಚ ಮಹಾಭಾಗಃ ಸರ್ವಮೇತದಪಶ್ಯತ ।
ಜ್ಞಾನಯೋಗೇನ ಮಹತಾ ತಪಸಾ ಚ ಪರಂತಪ ॥೨೧॥

ಪರಂತಪನೇ, ಮಹಾನುಭಾವರಾದ ವಸಿಷ್ಠರು ತಮ್ಮ ಜ್ಞಾನಯೋಗ- ದಿಂದಲೂ ಮತ್ತು ಮಹಾತಪಸ್ಸಿನಿಂದಲೂ ಇದೆಲ್ಲವನ್ನೂ ತಿಳಿದರು.

ಮುಕ್ತಶಾಪಶ್ಚ ರಾಜರ್ಷಿಃ ಕಾಲೇನ ಮಹತಾ ತತಃ ।
ಋತುಕಾಲೇ ನಿಪತಿತೋ ಭಾರ್ಯಯಾ ಸನ್ನಿವಾರಿತಃ ॥೨೨॥

ಬಹುಕಾಲವು ಕಳೆದ ಬಳಿಕ ಶಾಪಮುಕ್ತನಾದ ಆ ರಾಜರ್ಷಿಯು ಋತುಕಾಲದಲ್ಲಿ ತನ್ನ ಪತ್ನಿಯ ಬಳಿಗೆ ಹೋದಾಗ ಅವಳು ಸಂಗವನ್ನು ನಿರಾಕರಿಸಿದಳು.

ನ ಹಿ ಸಸ್ಮಾರ ನೃಪತಿಸ್ತಂ ಶಾಪಂ ಕಾಮಮೋಹಿತಃ ।
ದೇವ್ಯಾಃ ಸೋಽಥ ವಚಃ ಶ್ರುತ್ವಾ ವಿಸಂಜ್ಞಃ ಸಮಪದ್ಯತ ।
ತಂ ಶಾಪಮನುಸಂಸ್ಮೃತ್ಯ ಪರ್ಯತಪ್ಯದ್ ಭೃಶಂ ತದಾ ॥೨೩॥

ಕಾಮಮೋಹಿತನಾದ ರಾಜನು ಬ್ರಾಹ್ಮಣಿಯು ಕೊಟ್ಟಿದ್ದ ಆ ಶಾಪವನ್ನು ಮರೆತಿದ್ದನು. ರಾಣಿಯ ಮಾತುಗಳನ್ನು ಕೇಳಿ ಅವನು ವಿಸಂಜ್ಞನಾದನು. ಅನಂತರ ಬ್ರಾಹ್ಮಣಿಯ ಆ ಶಾಪದ ಸ್ಮೃತಿಯನ್ನು ಹೊಂದಿ ಬಹಳವಾಗಿ ಪರಿತಾಪಪಟ್ಟನು.

ಏತಸ್ಮಾತ್ ಕಾರಣಾದ್ ರಾಜಾ ವಸಿಷ್ಠಂ ಸನ್ನ್ಯಯೋಜಯತ್ ।
ಸ್ವದಾರೇ ಭರತಶ್ರೇಷ್ಠ ಶಾಪದೋಷಸಮನ್ವಿತಃ ॥೨೪॥

ಭರತಶ್ರೇಷ್ಠನೇ, ಈ ಶಾಪದೋಷದಿಂದ ಕೂಡಿದ ಕಾರಣದಿಂದ ಆ ರಾಜನು ತನ್ನ ಪತ್ನಿಯಲ್ಲಿ ವಸಿಷ್ಠರನ್ನು ನಿಯೋಜಿಸಿದನು.

ಯದಾ ಕಲ್ಮಾಷಪಾದಸ್ತು ರಾಕ್ಷಸತ್ವಮವಾಪ ಸಃ ।
ತದಾ ವಸಿಷ್ಠಃ ಕುರುಣಾ ಯಜ್ಞಾರ್ಥೇ ಸ ವೃತೋಽಭವತ್ ॥೨೫॥

ಯದಾ ಕಲ್ಮಾಷಪಾದಸ್ತು ರಾಕ್ಷಸತ್ವಂ ವಿಸೃಷ್ಟವಾನ್ ।
ತದಾ ತೇನೈವ ರಾಜ್ಞಾತು ವಸಿಷ್ಠಃ ಸ ವೃತೋಽಭವತ್ ॥೨೬॥

ಯಾವಾಗ ಕಲ್ಮಾಷಪಾದ ರಾಜನು ರಾಕ್ಷಸಭಾವವನ್ನು ಹೊಂದಿದನೋ ಆಗ ವಸಿಷ್ಠರು ಕುರುರಾಜನಿಂದ ಯಜ್ಞಾರ್ಥವಾಗಿ ವರಣ ಮಾಡಲ್ಪಟ್ಟಿದ್ದರು.

ಕಲ್ಮಾಷಪಾದರಾಜನು ತನ್ನ ರಾಕ್ಷಸಭಾವವನ್ನು ತ್ಯಜಿಸಿದಾಗ ಅವನೇ ವಸಿಷ್ಠರನ್ನು ವರಣ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರ್ಯಶೀತ್ಯದಧಿಕಶತತಮೋऽಧ್ಯಾಯಃ ॥
॥ ಇತಿ ಚೈತ್ರರಥಪರ್ವಣಿ ಷೋಡಶೋऽಧ್ಯಾಯಃ ॥

ಚೈತ್ರರಥಪರ್ವ ಸಮಾಪ್ತಮ್

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರ ಎಂಭತ್ತ್ಮೂರನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಚೈತ್ರರಥ ಪರ್ವವು ಸಮಾಪ್ತವಾಯಿತು.

★★★★★

೧೧. ಸ್ವಯಂವರಪರ್ವ

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಪಾರ್ಥೇನ ಸೋಽಪಿ ಬಹುಲಾಶ್ಚ ಕಥಾಃ ಕಥಿತ್ವಾ
ಧೌಮ್ಯಸ್ಯ ಸಂಗ್ರಹಣಮಾಹ ಪುರೋಹಿತತ್ವೇ ।
ದಾಸ್ಯಾಮಿ ದಿವ್ಯತುರಗಾನಿತಿ ಸೋಽರ್ಜುನಾಯ
ವಾಚಂ ನಿಗದ್ಯ ದಿವಮಾರುಹದಪ್ಯಗುಸ್ತೇ ॥೧೧೭॥

ಗಂಧರ್ವ ಅರ್ಜುನನೊಡನೆ ಬಹಳ ಸಂಭಾಷಣೆ ನಡೆಸಿ ಧೌಮ್ಯರನ್ನು ಪೌರೋಹಿತ್ಯಕ್ಕೆ ಸ್ವೀಕರಿಸಿರೆಂದು ಸಲಹೆ ನೀಡಿದ. ಅರ್ಜುನನಿಗೆ ದಿವ್ಯವಾದ ದೇವಲೋಕದ ಕುದುರೆಗಳನ್ನು ಕೊಡುವೆನೆಂದು ಮಾತುಕೊಟ್ಟು ಅಂತರಿಕ್ಷಕ್ಕೆ ಏರಿದ. ಬಳಿಕ ಪಾಂಡವರು ಮುಂದೆ ನಡೆದರು.

ತೇ ಧೌಮ್ಯಮಾಪ್ಯ ಚ ಪುರೋಧಸಮುತ್ತಮಜ್ಞಂ
ವಿಪ್ರಾತ್ಮಜೋಪಮತಯಾ ವಿವಿಶುಃ ಪುರಂ ಚ ।
ಪಾಂಚಾಲಕಸ್ಯ ನಿಖಿಲಾಂ ದದೃಶುಶ್ಚ ತತ್ರ
ಮೂರ್ಧಾವಸಿಕ್ತಸಮಿತಂ ಸಮಲಂಕೃತಾಂ ಚ ॥೧೧೮॥

ಪಾಂಡವರು ಉತ್ತಮ ಜ್ಞಾನಿಯಾದ ಧೌಮ್ಯನನ್ನು ಪುರೋಹಿತನನ್ನಾಗಿ ಪಡೆದು ಬ್ರಾಹ್ಮಣಕುಮಾರರಂಥ ವೇಷದಿಂದ ದ್ರುಪದನ ನಗರವನ್ನು ಪ್ರದೇಶಿಸಿದರು. ಅಲ್ಲಿ ಅಲಂಕೃತವಾದ ಸರ್ವರಾಜರ ಸಮೂಹವನ್ನು ಕಂಡರು.

★ ★ ★ ★

ನೂರ ಎಂಭತ್ನಾಲ್ಕನೆಯ ಅಧ್ಯಾಯ

(ಗಂಧರ್ವವಚನದಂತೆ ಪಾಂಡವರಿಂದ ಧೌಮ್ಯರ ವರಣ, ಪಾಂಡವರ ಮತ್ತು ಧೌಮ್ಯರ ಹರ್ಷ. ಜೊತೆಯಲ್ಲಿ ಪಾಂಚಾಲದೇಶಕ್ಕೆ ಗಮನ.)

ಅರ್ಜುನಃ

ಅಸ್ಮಾಕಮನುರೂಪಂ ವೈ ಯಸ್ತಂ ಗಂಧರ್ವಸತ್ತಮ ।
ಪುರೋಹಿತಂ ಮಮಾಚಕ್ಷ್ವ ಸರ್ವಂ ಹಿ ವಿದಿತಂ ತವ ॥೧॥

ಗಂಧರ್ವಶ್ರೇಷ್ಠನೇ, ನೀನು ಎಲ್ಲವನ್ನೂ ತಿಳಿದಿದ್ದೀಯೆ. ನಮಗೆ ಅನುರೂಪರಾದ ಪುರೋಹಿತರು ಯಾರು ಎಂದು ಹೇಳು.

ಗಂಧರ್ವಃ

ಯವೀಯಾನ್ ದೇವಲಸ್ಯೈಷ ವನೇ ಭ್ರಾತಾ ತಪಸ್ಯತಿ ।
ಧೌಮ್ಯ ಉತ್ಕಚಕೇ ತೀರ್ಥೇ ತಂ ವೃಣೀಷ್ವ ಯದೀಚ್ಛಸಿ ॥೨॥

ದೇವಲಋಷಿಗಳ ತಮ್ಮಂದಿರಾದ ಧೌಮ್ಯರು ಉತ್ಕಚಕತೀರ್ಥದ ಸಮೀಪದಲ್ಲಿ ತಪಸ್ಸು ಮಾಡುತ್ತಿದ್ದಾರೆ. ನಿನಗೆ ಸಮ್ಮತವಾದರೆ ಅವರನ್ನು ಪುರೋಹಿತರಾಗಿ ಸ್ವೀಕರಿಸು.

ವೈಶಂಪಾಯನಃ

ತತೋಽರ್ಜುನೋಽಸ್ತ್ರಮಾಗ್ನೇಯಂ ಪ್ರದದೌ ತದ್ ಯಥಾವಿಧಿ ।
ಗಂಧರ್ವಾಯ ದದೌ ಪ್ರೀತೋ ವಚನಂ ಚೇದಮಬ್ರವೀತ್ ॥೩॥

ಅನಂತರ ಅರ್ಜುನನು ಗಂಧರ್ವನಿಗೆ ಸಂತೋಷದಿಂದ ವಿಧಿವತ್ತಾಗಿ ಆಗ್ನೇಯಾಸ್ತ್ರವನ್ನು ಕೊಟ್ಟು ಈ ಮಾತನ್ನಾಡಿದನು.

ತ್ವಯ್ಯೇವ ತಾವತ್ ತಿಷ್ಠಂತು ಹಯಾ ಗಂಧರ್ವಸತ್ತಮ ।
ಕಾರ್ಯಕಾಲೇ ಗ್ರಹೀಷ್ಯಾಮಿ ಸ್ವಸ್ತಿ ತೇಽಸ್ತ್ವಿತಿ ಚಾಬ್ರವೀತ್ ॥೪॥

ಗಂಧರ್ವಶ್ರೇಷ್ಠನೇ, ಅಶ್ವಗಳು ನಿನ್ನ ಬಳಿಯಲ್ಲಿಯೇ ಇರಲಿ. ನನಗೆ ಬೇಕಾದಾಗ ಅವುಗಳನ್ನು ತೆಗೆದುಕೊಳ್ಳುವೆನು. ನಿನಗೆ ಮಂಗಳವಾಗಲಿ. ಎಂದು ಹೇಳಿದನು.

ತೇऽನ್ಯೋನ್ಯಮಭಿಸಂಪೂಜ್ಯ ಗಂಧರ್ವಃ ಪಾಂಡವಶ್ಚ ಹ ।
ರಮ್ಯಾದ್ ಭಾಗೀರಥೀಕಚ್ಛಾದ್ ಯಥಾಕಾಮಂ ಪ್ರತಸ್ಥಿರೇ ॥೫॥

ಆ ಪಾಂಡವನೂ ಮತ್ತು ಗಂಧರ್ವನೂ ಪರಸ್ಪರವಾಗಿ ಸತ್ಕರಿಸಿ ರಮ್ಯವಾದ ಭಾಗೀರಥೀತೀರದಿಂದ ತಮಗೆ ಇಷ್ಟವಾದ ಕಡೆಗೆ ಹೊರಟರು.

ತತ ಉತ್ಕಚಕಂ ತೀರ್ಥಂ ಗತ್ವಾ ಧೌಮ್ಯಾಶ್ರಮಾಂತಿಕೇ ।
ತಂ ವವ್ರುಃ ಪಾಂಡವಾ ಧೌಮ್ಯಂ ಪೌರೋಹಿತ್ಯಾಯ ಪಾಂಡವ ॥

ಎಲೈ ಪಾಂಡವನೇ, ಅನಂತರ ಪಾಂಡವರು ಹೋಗಿ ಉತ್ಕಚಕತೀರ್ಥದ ಸಮೀಪದ ಆಶ್ರಮದಲ್ಲಿ ಧೌಮ್ಯರನ್ನು ಕಂಡು ಅವರನ್ನು ಪುರೋಹಿತನನ್ನಾಗಿ ವರಣ ಮಾಡಿದರು.

ತಾಂಶ್ಚಾಪಿ ಪ್ರತಿಜಗ್ರಾಹ ಸರ್ವವೇದವಿದಾಂ ವರಃ ।
ಪಾದ್ಯೇನ ಫಲಮೂಲೇನ ಪೌರೋಹಿತ್ಯೇನ ಚೈವ ಹ ।
ತೇನ ಚಾಶಂಸಿರೇ ಲಬ್ಧಾಂ ಶ್ರಿಯಂ ರಾಜ್ಯಂ ಚ ಪಾಂಡವಾಃ ॥೭॥

ಸರ್ವವೇದಜ್ಞರಲ್ಲಿ ಶ್ರೇಷ್ಠರಾದ ಧೌಮ್ಯರು ಆ ಪಾಂಡವರನ್ನು ಪಾದ್ಯ-ಫಲಮೂಲಗಳಿಂದ ಸತ್ಕರಿಸಿ, ಪೌರೋಹಿತ್ಯವನ್ನು ಸಮ್ಮತಿಸಿ ಸ್ವೀಕರಿಸಿದರು. ಪಾಂಡವರು ಅವರನ್ನು ಪುರೋಹಿತರನ್ನಾಗಿ ಪಡೆದು ತಾವು ರಾಜ್ಯವನ್ನೂ ಮತ್ತು ರಾಜಲಕ್ಷ್ಮಿಯನ್ನೂ ಪಡೆದಂತೆಯೇ ಭಾವಿಸಿದರು.

ಬ್ರಾಹ್ಮಣಂ ತಂ ಪುರಸ್ಕೃತ್ಯ ಪಾಂಚಾಲ್ಯಾಶ್ಚ ಸ್ವಯಂವರೇ ।
ಮಾತೃಷಷ್ಠಾಸ್ತತಸ್ತೇನ ಗುರುಣಾ ಸಹ ಸಂಗತಾಃ ।
ನಾಥವಂತಮಿವಾತ್ಮಾನಂ ಮೇನಿರೇ ಭರತರ್ಷಭಾಃ ॥೮॥

ಪಾಂಚಾಲಿಯ ಸ್ವಯಂವರಕ್ಕೆ ಹೋಗಲು ಉದ್ದೇಶಿಸಿದ್ದ ಆ ಭರತರ್ಷಭರು ಗುರುಗಳಾದ ಆ ಬ್ರಾಹ್ಮಣರ ಜೊತೆಯಲ್ಲಿ ಸಂಗತರಾಗಿ ತಾಯಿಯ ಜೊತೆಯಲ್ಲಿ ತಾವು ಇಂದು ಸನಾಥರಾಗಿದ್ದೇವೆ ಎಂದು ತಿಳಿದರು.

ಸ ಹಿ ವೇದಾರ್ಥತತ್ತ್ವಜ್ಞಸ್ತೇಷಾಂ ಗುರುರುದಾರಧೀಃ ।
ವೇದವಿಚ್ಚೈವ ವಾಗ್ಮೀ ಚ ಧೌಮ್ಯಃ ಶ್ರೀಮಾನ್ ದ್ವಿಜೋತ್ತಮಃ ॥೯॥

ಆ ಧೌಮ್ಯರು ವೇದವನ್ನೂ, ವೇದಾರ್ಥವನ್ನೂ ತಿಳಿದ ಕಾಂತಿಯುಕ್ತರಾದ ಉದಾರಬುದ್ಧಿಯುಳ್ಳವಾಗ್ಮಿಗಳಾದ ಬ್ರಾಹ್ಮಣಶ್ರೇಷ್ಠರು.

ತೇಜಸಾ ಚೈವ ಬುದ್ಧ್ಯಾ ಚ ರೂಪೇಣ ಯಶಸಾ ಶ್ರಿಯಾ ।
ಮಂತ್ರೈಶ್ಚ ವಿವಿಧೈರ್ಧೌಮ್ಯಸ್ತುಲ್ಯ ಆಸೀದ್ ಬೃಹಸ್ಪತೇಃ ॥೧೦॥

ಧೌಮ್ಯರು ತೇಜಸ್ಸಿನಿಂದಲೂ, ಬುದ್ಧಿಯಿಂದಲೂ, ರೂಪದಿಂದಲೂ, ಕೀರ್ತಿಯಿಂದಲೂ, ಕಾಂತಿಯಿಂದಲೂ, ಅನೇಕ ಮಂತ್ರಗಳಿಂದಲೂ ಬೃಹಸ್ಪತಿಗಳಿಗೆ ಸಮಾನರಾಗಿದ್ದರು.

ಸ ಚಾಪಿ ವಿಪ್ರಸ್ತಾನ್ ಮೇನೇ ಸ್ವಭಾವಾಭ್ಯಧಿಕಾನ್ ಭುವಿ ।
ತೇನ ಧರ್ಮವಿದಾ ಪಾರ್ಥಾ ಯೋಜ್ಯಾಃ ಸರ್ವವಿದಾ ವೃತಾಃ ॥೧೧॥

ಬ್ರಾಹ್ಮಣರಾದ ಆ ಧೌಮ್ಯರಾದರೋ ಆ ಪಾಂಡವರನ್ನು ಸ್ವಭಾವದಿಂದಲೇ ತಮಗಿಂತ ಉತ್ತಮರಾದವರೆಂದು ತಿಳಿದರು. ಧರ್ಮಜ್ಞರೂ, ಸರ್ವಜ್ಞರೂ ಆದ ಅವರು ಪಾಂಡವರನ್ನು ಶಿಷ್ಯರನ್ನಾಗಿ ಸ್ವೀಕರಿಸಿದರು.

ಮೇನಿರೇ ಸಹಿತಾ ವೀರಾಃ ಪ್ರಾಪ್ತಂ ರಾಜ್ಯಂ ಸ್ವಧರ್ಮತಃ ।
ಬುದ್ಧಿವೀರ್ಯಬಲೋತ್ಸಾಹೈರ್ಯುಕ್ತಾ ದೇವಾ ಇವಾಪರಾಃ ॥೧೨॥

ಧೌಮ್ಯರನ್ನು ಗುರುಗಳಾಗಿ ಹೊಂದಿ ಬುದ್ಧಿ, ವೀರ್ಯ, ಬಲೋತ್ಸಾಹ- ಗಳಿಂದ ಯುಕ್ತರಾಗಿ ದೇವತೆಗಳಂತಿದ್ದ ಆ ವೀರರಾದ ಪಾಂಡವರು ಧರ್ಮದಿಂದ ರಾಜ್ಯವನ್ನು ಸಂಪಾದಿಸಿದಂತೆಯೇ ಭಾವಿಸಿದರು.

ಮೇನಿರೇ ಸಹಿತಾ ಗಂತುಂ ಪಾಂಚಾಲ್ಯಾಸ್ತಂ ಸ್ವಯಂವರಮ್ ।
ತತಸ್ತೇ ನರಶಾರ್ದೂಲಾ ಭ್ರಾತರಃ ಪಂಚ ಪಾಂಡವಾಃ ।
ಪ್ರಯಯುರ್ದ್ರೌಪದೀಂ ದ್ರಷ್ಟುಂ ತಂ ಚ ದೇವಮಹೋತ್ಸವಮ್ ॥೧೩॥

ಪಾಂಚಾಲಿಯ ಸ್ವಯಂವರಕ್ಕೆ ಜೊತೆಯಲ್ಲಿಯೇ ಹೋಗಲು ನಿರ್ಧರಿಸಿ. ನರಶಾರ್ದೂಲರಾದ, ಅಣ್ಣತಮ್ಮಂದಿರಾದ ಆ ಪಂಚಪಾಂಡವರು ದ್ರೌಪದಿಯನ್ನೂ ಮತ್ತು ಆ ದೇವಮಹೋತ್ಸವವನ್ನೂ ನೋಡುವುದಕ್ಕಾಗಿ ಹೊರಟರು.

ತೇ ಪ್ರಯಾತಾ ನರವ್ಯಾಘ್ರಾ ಮಾತ್ರಾ ಸಹ ಪರಂತಪಾಃ ।
ಬ್ರಾಹ್ಮಣಾನ್ ದದೃಶುರ್ಮಾರ್ಗೇ ಗಚ್ಛತಃ ಸಗಣಾನ್ ಬಹೂನ್ ॥೧೪॥

ತಾನೂಚುರ್ಬ್ರಾಹ್ಮಣಾ ರಾಜನ್ ಪಾಂಡವಾನ್ ಬ್ರಹ್ಮಚಾರಿಣಃ ।
ಕ್ವ ಭವಂತೋ ಗಮಿಷ್ಯಂತಿ ಕುತೋ ವಾऽऽಗಚ್ಛತೇತಿ ಹ ॥೧೫॥

ಪರಂತಪರಾದ ಆ ನರವ್ಯಾಘ್ರರು ತಾಯಿಯ ಜೊತೆಯಲ್ಲಿ ಹೊರಟು ಮಾರ್ಗದಲ್ಲಿ ಹೋಗುತ್ತಿದ್ದ ಅನೇಕ ಬ್ರಾಹ್ಮಣ ಸಮೂಹಗಳನ್ನು ನೋಡಿದರು. ರಾಜನೇ, ಬ್ರಹ್ಮಚಾರಿಗಳಾದ ಆ ಪಾಂಡವರನ್ನು ನೋಡಿ, ಆ ಬ್ರಾಹ್ಮಣರು ನೀವು ಎಲ್ಲಿಗೆ ಹೋಗುತ್ತಿರುವಿರಿ, ಎಲ್ಲಿಂದ ಬಂದಿದ್ದೀರಿ ಎಂದು ಕೇಳಿದರು.

ಯುಧಿಷ್ಠಿರಃ

ಆಗತಾನೇಕಚಕ್ರಾಯಾಃ ಸ್ಮೋದರ್ಯಾನ್ ದೇವದರ್ಶಿನಃ ।
ಭವಂತೋ ಹಿ ವಿಜಾನಂತು ಸಹಿತಾನ್ ಮಾತೃಚಾರಿಣಃ ॥೧೬॥

ನಾವೆಲ್ಲರೂ ಏಕಚಕ್ರನಗರದಿಂದ ಬಂದ ಅಣ್ಣ-ತಮ್ಮಂದಿರು. ನಾವು ತಾಯಿಯ ಜೊತೆಯಲ್ಲಿ ಒಟ್ಟಿಗೆ ದೇವರ ದರ್ಶನಕ್ಕಾಗಿ ಹೋಗುತ್ತಿದ್ದೇವೆಂದು ತಿಳಿಯಿರಿ.

ಬ್ರಾಹ್ಮಣಾಃ

ಗಚ್ಛತಾದ್ಯೈವ ಪಾಂಚಾಲಾನ್ ದ್ರುಪದಸ್ಯ ನಿವೇಶನಮ್ ।
ಸ್ವಯಂವರೋ ಮಹಾನತ್ರ ಭವಿತಾ ಸುಮಹೋತ್ಸವಃ ॥೧೭॥

ಈ ದಿನವೇ ಪಾಂಚಾಲದೇಶದಲ್ಲಿ ದ್ರುಪದನ ಮನೆಗೆ ಹೋಗಿ. ಅಲ್ಲಿ ದೊಡ್ಡ ಸ್ವಯಂವರವೂ, ದೊಡ್ಡ ಉತ್ಸವವೂ ನಡೆಯಲಿದೆ.

ಏಕಸಾರ್ಥಂ ಪ್ರಯಾತಾಃ ಸ್ಮೋ ವಯಮಪ್ಯತ್ರ ಗಾಮಿನಃ ।
ತತ್ರ ಹ್ಯದ್ಭುತಸಂಕಾಶೋ ಭವಿತಾ ಸುಮಹೋತ್ಸವಃ ॥೧೮॥

ನಾವೆಲ್ಲರೂ ಜೊತೆಯಾಗಿ ಅಲ್ಲಿಗೇ ಹೋಗುತ್ತಿದ್ದೇವೆ. ಅಲ್ಲಿ ಅದ್ಭುತವಾದ ಮಹೋತ್ಸವವು ನಡೆಯಲಿದೆ.

ಯಜ್ಞಸೇನಸ್ಯ ದುಹಿತಾ ದ್ರುಪದಸ್ಯ ಮಹಾತ್ಮನಃ ।
ವೇದಿಮಧ್ಯಾತ್ ಸಮುತ್ಪನ್ನಾ ಪದ್ಮಪತ್ರನಿಭೇಕ್ಷಣಾ ॥೧೯॥

ಮಹಾತ್ಮನಾದ ದ್ರುಪದನ ಮಗಳು ವೇದಿಮಧ್ಯದಿಂದ ಜನಿಸಿದ್ದಾಳೆ. ಯಜ್ಞಸೇನನ ಮಗಳಾದ ಅವಳು ಪದ್ಮನೇತ್ರೆ.

ದರ್ಶನೀಯಾನವದ್ಯಾಂಗೀ ಸುಕುಮಾರೀ ಮನಸ್ವಿನೀ ।
ಧೃಷ್ಟದ್ಯುಮ್ನಸ್ಯ ಭಗಿನೀ ದ್ರೋಣಶತ್ರೋಃ ಪ್ರತಾಪಿನಃ ॥೨೦॥

ಅವಳು ಮನೋಹರವಾದ, ನಿರ್ದುಷ್ಟವಾದ ಅಂಗಗಳಿಂದ ಕೂಡಿದವಳು. ಸುಕಮಾರಿ ಮತ್ತು ಧೈರ್ಯಶಾಲಿನಿ. ಪ್ರತಾಪಶಾಲಿಯಾದ ದ್ರೋಣಶತ್ರುವಾದ ಧೃಷ್ಟದ್ಯುಮ್ನನ ತಂಗಿ.

ಯೋ ಜಾತಃ ಕವಚೀ ಖಡ್ಗೀ ಸಶರಃ ಸಶರಾಸನಃ ।
ಸುಸಮಿದ್ಧೇ ಮಹಾಬಾಹುಃ ಪಾವಕೇ ಪಾವಕಪ್ರಭಃ ॥೨೧॥

ಸ್ವಸಾ ತಸ್ಯಾನವದ್ಯಾಂಗೀ ದ್ರೌಪದೀ ತನುಮಧ್ಯಮಾ ।
ನೀಲೋತ್ಪಲಸಮೋ ಗಂಧೋ ಯಸ್ಯಾಃ ಕ್ರೋಶಾತ್ ಪ್ರವಾಯತಿ ॥೨೨॥

ಯಾವ ಧೃಷ್ಟದ್ಯುಮ್ನನು ಸುಸಮಿದ್ಧವಾದ ಅಗ್ನಿಕುಂಡದಿಂದ ಕವಚವನ್ನು ಧರಿಸಿ, ಧನುಸ್ಸು, ಬಿಲ್ಲು-ಬಾಣಗಳನ್ನು ಹಿಡಿದು ಅಗ್ನಿಯ ಕಾಂತಿಯನ್ನು ಹೊಂದಿ, ಮಹಾಬಾಹುವಾಗಿ ಜನಿಸಿದನೋ, ಕೃಶೋದರಿಯಾದ ಅನವದ್ಯಾಂಗಿಯಾದ ದ್ರೌಪದಿಯು ಅವನ ತಂಗಿ. ಅವಳ ನೀಲೋತ್ಪಲ- ಸಮಾನವಾದ ಗಂಧವು ಒಂದು ಕ್ರೋಶದ ದೂರದಿಂದಲೂ ಬೀಸುತ್ತದೆ.

ತಾಂ ಯಜ್ಞಸೇನಸ್ಯ ಸುತಾಂ ಸ್ವಯಂವರಕೃತಕ್ಷಣಾಮ್ ।
ಗಚ್ಛಾಮಹೇ ವಯಂ ದ್ರಷ್ಟುಂ ತಂ ಚ ದೇವಮಹೋತ್ಸವಮ್ ॥೨೩॥

ಪಾಂಚಾಲಿಯ ಸ್ವಯಂವರಕ್ಕೆ ಜೊತೆಯಲ್ಲಿಯೇ ಹೋಗಲು ನಿರ್ಧರಿಸಿ. ನರಶಾರ್ದೂಲರಾದ; ಅಣ್ಣತಮ್ಮಂದಿರಾದ ಆ ಪಂಚಪಾಂಡವರು ದ್ರೌಪದಿಯನ್ನೂ ಮತ್ತು ಆ ದೇವಮಹೋತ್ಸವವನ್ನೂ ನೋಡುವುದಕ್ಕಾಗಿ ಹೊರಟರು.

ತೇ ಪ್ರಯಾತಾ ನರವ್ಯಾಘ್ರಾ ಮಾತ್ರಾ ಸಹ ಪರಂತಪಾಃ ।
ಬ್ರಾಹ್ಮಣಾನ್ ದದೃಶುರ್ಮಾರ್ಗೇ ಗಚ್ಛತಃ ಸಗಣಾನ್ ಬಹೂನ್ ॥೧೪॥

ತಾನೂಚುರ್ಬ್ರಾಹ್ಮಣಾ ರಾಜನ್ ಪಾಂಡವಾನ್ ಬ್ರಹ್ಮಚಾರಿಣಃ ।
ಕ್ವ ಭವಂತೋ ಗಮಿಷ್ಯಂತಿ ಕುತೋ ವಾऽऽಗಚ್ಛತೇತಿ ಹ ॥೧೫॥

ಪರಂತಪರಾದ ಆ ನರವ್ಯಾಘ್ರರು ತಾಯಿಯ ಜೊತೆಯಲ್ಲಿ ಹೊರಟು ಮಾರ್ಗದಲ್ಲಿ ಹೋಗುತ್ತಿದ್ದ ಅನೇಕ ಬ್ರಾಹ್ಮಣ ಸಮೂಹಗಳನ್ನು ನೋಡಿದರು. ರಾಜನೇ, ಬ್ರಹ್ಮಚಾರಿಗಳಾದ ಆ ಪಾಂಡವರನ್ನು ನೋಡಿ, ಆ ಬ್ರಾಹ್ಮಣರು ನೀವು ಎಲ್ಲಿಗೆ ಹೋಗುತ್ತಿರುವಿರಿ, ಎಲ್ಲಿಂದ ಬಂದಿದ್ದೀರಿ ಎಂದು ಕೇಳಿದರು.

ಯುಧಿಷ್ಠಿರಃ

ಆಗತಾನೇಕಚಕ್ರಾಯಾಃ ಸೋದರ್ಯಾನ್ ದೇವದರ್ಶಿನಃ ।
ಭವಂತೋ ಹಿ ವಿಜಾನಂತು ಸಹಿತಾನ್ ಮಾತೃಚಾರಿಣಃ ॥೧೬॥

ನಾವೆಲ್ಲರೂ ಏಕಚಕ್ರನಗರದಿಂದ ಬಂದ ಅಣ್ಣ-ತಮ್ಮಂದಿರು. ನಾವು ತಾಯಿಯ ಜೊತೆಯಲ್ಲಿ ಒಟ್ಟಿಗೆ ದೇವರ ದರ್ಶನಕ್ಕಾಗಿ ಹೋಗುತ್ತಿದ್ದೇವೆಂದು ತಿಳಿಯಿರಿ.

ಬ್ರಾಹ್ಮಣಾಃ

ಗಚ್ಛತಾದ್ಯೈವ ಪಾಂಚಾಲಾನ್ ದ್ರುಪದಸ್ಯ ನಿವೇಶನಮ್ ।
ಸ್ವಯಂವರೋ ಮಹಾನತ್ರ ಭವಿತಾ ಸುಮಹೋತ್ಸವಃ ॥೧೭॥

ಈ ದಿನವೇ ಪಾಂಚಾಲದೇಶದಲ್ಲಿ ದ್ರುಪದನ ಮನೆಗೆ ಹೋಗಿ. ಅಲ್ಲಿ ದೊಡ್ಡ ಸ್ವಯಂವರವೂ, ದೊಡ್ಡ ಉತ್ಸವವೂ ನಡೆಯಲಿದೆ.

ಏಕಸಾರ್ಥಂ ಪ್ರಯಾತಾಃ ಸ್ಮೋ ವಯಮಪ್ಯತ್ರ ಗಾಮಿನಃ ।
ತತ್ರ ಹ್ಯದ್ಭುತಸಂಕಾಶೋ ಭವಿತಾ ಸುಮಹೋತ್ಸವಃ ॥೧೮॥

ನಾವೆಲ್ಲರೂ ಜೊತೆಯಾಗಿ ಅಲ್ಲಿಗೇ ಹೋಗುತ್ತಿದ್ದೇವೆ. ಅಲ್ಲಿ ಅದ್ಭುತವಾದ ಮಹೋತ್ಸವವು ನಡೆಯಲಿದೆ.

ಯಜ್ಞಸೇನಸ್ಯ ದುಹಿತಾ ದ್ರುಪದಸ್ಯ ಮಹಾತ್ಮನಃ ।
ವೇದಿಮಧ್ಯಾತ್ ಸಮುತ್ಪನ್ನಾ ಪದ್ಮಪತ್ರನಿಭೇಕ್ಷಣಾ ॥೧೯॥

ಮಹಾತ್ಮನಾದ ದ್ರುಪದನ ಮಗಳು ವೇದಿಮಧ್ಯದಿಂದ ಜನಿಸಿದ್ದಾಳೆ. ಯಜ್ಞಸೇನನ ಮಗಳಾದ ಅವಳು ಪದ್ಮನೇತ್ರೆ.

ದರ್ಶನೀಯಾನವದ್ಯಾಂಗೀ ಸುಕುಮಾರೀ ಮನಸ್ವಿನೀ ।
ಧೃಷ್ಟದ್ಯುಮ್ನಸ್ಯ ಭಗಿನೀ ದ್ರೋಣಶತ್ರೋಃ ಪ್ರತಾಪಿನಃ ॥೨೦॥

ಅವಳು ಮನೋಹರವಾದ, ನಿರ್ದುಷ್ಟವಾದ ಅಂಗಗಳಿಂದ ಕೂಡಿದವಳು. ಸುಕಮಾರಿ ಮತ್ತು ಧೈರ್ಯಶಾಲಿನಿ. ಪ್ರತಾಪಶಾಲಿಯಾದ ದ್ರೋಣಶತ್ರುವಾದ ಧೃಷ್ಟದ್ಯುಮ್ನನ ತಂಗಿ.

ಯೋ ಜಾತಃ ಕವಚೀ ಖಡ್ಗೀ ಸಶರಃ ಸಶರಾಸನಃ ।
ಸುಸಮಿದ್ಧೇ ಮಹಾಬಾಹುಃ ಪಾವಕೇ ಪಾವಕಪ್ರಭಃ ॥೨೧॥

ಸ್ವಸಾ ತಸ್ಯಾನವದ್ಯಾಂಗೀ ದ್ರೌಪದೀ ತನುಮಧ್ಯಮಾ ।
ನೀಲೋತ್ಪಲಸಮೋ ಗಂಧೋ ಯಸ್ಯಾಃ ಕ್ರೋಶಾತ್ ಪ್ರವಾಯತಿ ॥೨೨॥

ಯಾವ ಧೃಷ್ಟದ್ಯುಮ್ನನು ಸುಸಮಿದ್ಧವಾದ ಅಗ್ನಿಕುಂಡದಿಂದ ಕವಚವನ್ನು ಧರಿಸಿ, ಧನುಸ್ಸು, ಬಿಲ್ಲು-ಬಾಣಗಳನ್ನು ಹಿಡಿದು ಅಗ್ನಿಯ ಕಾಂತಿಯನ್ನು ಹೊಂದಿ, ಮಹಾಬಾಹುವಾಗಿ ಜನಿಸಿದನೋ, ಕೃಶೋದರಿಯಾದ ಅನವದ್ಯಾಂಗಿಯಾದ ದ್ರೌಪದಿಯು ಅವನ ತಂಗಿ. ಅವಳ ನೀಲೋತ್ಪಲ- ಸಮಾನವಾದ ಗಂಧವು ಒಂದು ಕ್ರೋಶದ ದೂರದಿಂದಲೂ ಬೀಸುತ್ತದೆ.

ತಾಂ ಯಜ್ಞಸೇನಸ್ಯ ಸುತಾಂ ಸ್ವಯಂವರಕೃತಕ್ಷಣಾಮ್ ।
ಗಚ್ಛಾಮಹೇ ವಯಂ ದ್ರಷ್ಟುಂ ತಂ ಚ ದೇವಮಹೋತ್ಸವಮ್ ॥೨೩॥

ನಾವು ಸ್ವಯಂವರ ಸಂದರ್ಭದಲ್ಲಿರುವ ಆ ಯಜ್ಞಸೇನನ ಮಗಳನ್ನು ಮತ್ತು ದೇವಮಹೋತ್ಸವವನ್ನು ನೋಡಲು ಹೋಗುತ್ತೇವೆ.

ರಾಜಾನೋ ರಾಜಪುತ್ರಾಶ್ಚ ಯಜ್ವಾನೋ ಭೂರಿದಕ್ಷಿಣಾಃ ।
ಸ್ವಾಧ್ಯಾಯವಂತಃ ಶುಚಯೋ ಮಹಾತ್ಮಾನೋ ಮಹಾವ್ರತಾಃ ॥೨೪॥

ತರುಣಾ ದರ್ಶನೀಯಾಶ್ಚ ನಾನಾದೇಶಸಮಾಗತಾಃ ।
ಮಹಾರಥಾಃ ಕೃತಾಸ್ತ್ರಾಶ್ಚ ಸಮುಪೈಷ್ಯಂತಿ ಭೂಮಿಪಾಃ ॥೨೫॥

ಅಲ್ಲಿಗೆ ಸ್ವಾಧ್ಯಾಯಶೀಲರೂ, ಶುಚಿಗಳೂ, ಮಹಾನುಭಾವರೂ, ಮಹಾವ್ರತಧಾರಿಗಳೂ, ಮಹಾರಥರೂ, ಅಸ್ತ್ರಜ್ಞರೂ, ತರುಣರೂ, ಸುಂದರರೂ, ಬಹಳ ದಕ್ಷಿಣೆಗಳನ್ನೂ ಕೊಡುವವರೂ ಆದ ಯಜ್ಞಶೀಲರಾದ ಅನೇಕ ರಾಜರು ಮತ್ತು ರಾಜಪುತ್ರರು ಬರುವರು.

ತೇ ತತ್ರ ವಿವಿಧಾನ್ ದೇಯಾನ್ ವಿಜಯಾರ್ಥಂ ನರೇಶ್ವರಾಃ ।
ಪ್ರದಾಸ್ಯಂತಿ ಧನಂ ಗಾಶ್ಚ ಭಕ್ಷ್ಯಂ ಭೋಜ್ಯಂ ಚ ಸರ್ವಶಃ ॥೨೬॥

ಅಲ್ಲಿ ಆ ರಾಜರು ತಮ್ಮ ವಿಜಯದ ಸಲುವಾಗಿ ಧನವನ್ನೂ, ಗೋವುಗಳನ್ನೂ, ಅನೇಕ ವಿಧವಾದ ಭಕ್ಷ್ಯಭೋಜ್ಯಗಳನ್ನೂ, ಇನ್ನೂ ಅನೇಕ ದಾನಗಳನ್ನೂ ಕೊಡುವರು.

ಪ್ರತಿಗೃಹ್ಯ ಚ ತತ್ ಸರ್ವಂ ದೃಷ್ಟ್ವಾ ಚೈವ ಸ್ವಯಂವರಮ್ ।
ಅನುಭೂಯೋತ್ಸವಂ ಚೈವ ಗಮಿಷ್ಯಾಮೋ ಯಥೇಪ್ಸಿತಮ್ ॥೨೭॥

ಅವೆಲ್ಲವನ್ನೂ ಸ್ವೀಕರಿಸಿ ಸ್ವಯಂವರವನ್ನು ನೋಡಿ, ಉತ್ಸವದಲ್ಲಿ ಆನಂದಿಸಿ ನಮಗೆ ಇಷ್ಟ ಬಂದಂತೆ ನಾವು ಅಲ್ಲಿಂದ ಹೊರಡೋಣ.

ಯೇ ಚ ವೈತಾಲಿಕಾಶ್ಚೈವ ನರ್ತಕಾಃ ಸೂತಮಾಗಧಾಃ ।
ನಿಯೋಧಕಾಶ್ಚ ದೇಶೇಭ್ಯಃ ಸಮೇಷ್ಯಂತಿ ಮಹಾಬಲಾಃ ॥೨೮॥

ಏವಂ ಕೌತೂಹಲಂ ದೃಷ್ಟ್ವಾ ಭುಕ್ತ್ವಾ ಚ ಪ್ರತಿಗೃಹ್ಯ ಚ ।
ಸಹಾಸ್ಮಾಭಿರ್ಮಹಾತ್ಮಾನಃ ಪುನಃ ಪ್ರತಿನಿವರ್ತ್ಸ್ಯಥ ॥೨೯॥

ಅಲ್ಲಿಗೆ ನಿಯೋಧಕಾರರೂ, ನರ್ತಕರೂ, ಸೂತಮಾಗಧರೂ, ಮಹಾಬಲರಾದ ಯೋಧರೂ ಅನೇಕ ದೇಶಗಳಿಂದ ಬರುವರು. ಹೀಗೆ ಕೌತೂಹಲವನ್ನು ನೋಡಿ ಭೋಜನವನ್ನು ಮಾಡಿ, ದಾನಗಳನ್ನು ಸ್ವೀಕರಿಸಿ, ಮಹಾತ್ಮರಾದ ನೀವು ನಮ್ಮ ಜೊತೆಯಲ್ಲಿ ಪುನಃ ಹಿಂದಿರುಗಬಹುದು.

ದರ್ಶನೀಯಾಂಶ್ಚ ವಃ ಸರ್ವಾನ್ ದೇವರೂಪಾನವಸ್ಥಿತಾನ್ ।
ಸಮೀಕ್ಷ್ಯ ಕೃಷ್ಣಾ ವರಯೇತ್ ಸಂಗತ್ಯಾಽನ್ಯತಮಂ ಪತಿಮ್ ॥೩೦॥

ದೇವತೆಗಳಂತೆ ರೂಪವುಳ್ಳ ಮನೋಹರರಾದ ನಿಮ್ಮೆಲ್ಲರನ್ನೂ ನೋಡಿ ದ್ರೌಪದಿಯು ನಿಮ್ಮಲ್ಲಿ ಯಾರನ್ನಾದರೂ ಒಬ್ಬನನ್ನು ಪತಿಯನ್ನಾಗಿ ವರಿಸಬಹುದು.

ಅಯಂ ಭ್ರಾತಾ ತವ ಶ್ರೀಮಾನ್ ದರ್ಶನೀಯೋ ಮಹಾಭುಜಃ ।
ನಿಯುಧ್ಯಮಾನೋ ವಿಜಯೇತ್ ಸಂಗತ್ಯ ದ್ರವಿಣಂ ಬಹು ॥೩೧॥

ಈ ನಿಮ್ಮ ಮಹಾಭುಜನಾದ, ಸುಂದರನಾದ, ಕಾಂತಿಯುಕ್ತನಾದ ಸಹೋದರನನು ನಿಯುಧ್ಯದಲ್ಲಿ (ಕುಸ್ತಿಯಲ್ಲಿ) ಪ್ರತಿಸ್ಪರ್ಧಿಯೊಡನೆ ಸಂಗತನಾಗಿ ಬಹಳ ಧನವನ್ನು ಗೆಲ್ಲಬಹುದು.

ಯುಧಿಷ್ಠಿರಃ

ಪರಮಂ ಭೋ ಗಮಿಷ್ಯಾಮೋ ದ್ರಷ್ಟುಂ ದೇವಮಹೋತ್ಸವಮ್ ।
ಭವದ್ಭಿಃ ಸಹಿತಾಃ ಸರ್ವೇ ಕನ್ಯಾಯಾಸ್ತಂ ಸ್ವಯಂವರಮ್ ॥೩೨॥

ಬ್ರಾಹ್ಮಣರೇ, ಬಹಳ ಸಂತೋಷ. ಆ ದೇವಮಹೋತ್ಸವವನ್ನೂ, ಆ ಕನ್ಯೆಯ ಸ್ವಯಂವರವನ್ನೂ ನೋಡಲು ನಾವೂ ಸಹ ನಿಮ್ಮ ಜೊತೆಯಲ್ಲಿ ಬರುವೆವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಚತುರಶೀತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಸ್ವಯಂವರಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ಎಂಭತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ರಾಜನ್ಯಮಂಡಲಮುದೀಕ್ಷ್ಯ ಸುಪೂರ್ಣಮತ್ರ
ಕೃಷ್ಣಾಂ ಪ್ರಗೃಹ್ಯ ಸಹಜಃ ಪ್ರಗೃಹೀತಮಾಲಾಂ ।
ತೇಷಾಂ ಚ ಮಧ್ಯಮಗಮತ್ ಕುಲವೀರ್ಯಸಂಪ-
ದ್ಯುಕ್ತಾಂ ವಿಭೂತಿಮಥ ಚಾಹ ಸಮಸ್ತರಾಜ್ಞಾಂ ॥೧೧೯॥

ತುಂಬಿದ ರಾಜರ ಸಭೆಯನ್ನು ಕಂಡು ಸ್ವಯಂವರ ಮಾಲೆಯನ್ನು ಹಿಡಿದ ದ್ರೌಪದಿಯನ್ನು ಒಡಹುಟ್ಟಿದ ಧೃಷ್ಟದ್ಯುಮ್ನ ಕರೆತಂದು ರಾಜರ ಮಧ್ಯಕ್ಕೆ ನಡೆದ. ಎಲ್ಲ ರಾಜರ ಕುಲವೀರ್ಯ ಸಂಪತ್ತನ್ನೂ ಧನ ಸಂಪತ್ತನ್ನೂ ಅವಳಿಗೆ ವರ್ಣಿಸಿದ.

ತಾಂಶ್ಚ ಪ್ರದರ್ಶ್ಯ ಸಕಲಾನ್ ಸ ಹುತಾಶನಾಂಶ-
ಶ್ಚಾಪಂ ಚ ತತ್ ಪ್ರತಿನಿಧಾಯ ಸಪಂಚಬಾಣಂ ।
ಆಹಾಭಿಭಾಷ್ಯ ಸಕಲಾನ್ ನೃಪತೀನಥೋಚ್ಚೈ-
ರ್ದೀಪ್ತದ್ಧುತಾಶನವಪುರ್ಧ್ವನತುಲ್ಯಘೋಷಃ ॥೧೨೦॥

ಉರಿವ ಬೆಂಕಿಯಂಥ ಶರೀರದ ಅಗ್ನಿಯ ಅವತಾರನಾದ ಧೃಷ್ಟದ್ಯುಮ್ನ ಎಲ್ಲ ರಾಜರನ್ನೂ ದ್ರುಪದಿಗೆ ಪರಿಚಯ ಮಾಡಿಕೊಟ್ಟು ಒಂದು ಬಿಲ್ಲನ್ನು ಐದು ಬಾಣಗಳೊಂದಿಗೆ ಅವರ ಮುಂದೆ ಇಟ್ಟು ಎಲ್ಲ ರಾಜರನ್ನೂ ಸಂಬೋಧಿಸಿ ಗಟ್ಟಿಯಾಗಿ ಗಟ್ಟಿಯಾಗಿ ಗುಡುಗಿನ ಧ್ವನಿಯಿಂದ ನುಡಿದ.

ಏತೇನ ಕಾರ್ಮುಕವರೇಣ ತರೂಪರಿಸ್ಥಂ
ಮತ್ಸ್ಯಾವಭಾಸಮುದಕೇ ಪ್ರತಿವೀಕ್ಷ್ಯ ಯೇನ ।
ಏತೈಃ ಶರೈಃ ಪ್ರತಿಹತೋ ಭವತೀಹ ಮತ್ಸ್ಯಃ
ಕೃಷ್ಣಾನುಯಾಸ್ಯತಿ ತಮದ್ಯ ನರೇಂದ್ರ ವೀರಾಃ ॥೧೨೧॥

'ವೀರರಾದ ರಾಜರೆ, ಮರದ ಮೇಲಿರುವ ಮತ್ಸ್ಯಾಕೃತಿಯರ ಪ್ರತಿಬಿಂಬವನ್ನು ನೀರಲ್ಲಿ ಕಂಡು ಈ ಬಿಲ್ಲಿನಿಂದ ಈ ಐದು ಬಾಣಗಳಿಂದ ಯಾರು ಅದನ್ನು ಭೇದಿಸುವನೋ ಅವನನ್ನು ಇಂದು ದ್ರೌಪದಿ ವರಿಸುತ್ತಾಳೆ'.

ಇತ್ಯಸ್ಯ ವಾಕ್ಯಮನು ಸರ್ವನರೇಂದ್ರಪುತ್ರಾ
ಉತ್ತಸ್ಥುರುದ್ಧತಮದಾಶ್ಚಲಕುಂಡಲಾಸ್ಯಾಃ ।
ಅಸ್ತ್ರಂ ಬಲಂ ಚ ಬಹು ನೈಜಮಭೀಕ್ಷಮಾಣಾಃ
ಸ್ಪರ್ಧಂತ ಏವ ಚ ಮಿಥಃ ಸಮಲಂಕೃತಾಂಗಾಃ ॥೧೨೨॥

ಧೃಷ್ಟದ್ಯುಮ್ನ ಹೀಗೆ ಹೇಳಿದೊಡನೆ ಮೈಯನ್ನು ಚೆನ್ನಾಗಿ ಸಿಂಗರಿಸಿಕೊಂಡಿದ್ದ ಎಲ್ಲ ರಾಜಕುಮಾರರೂ ಚಲಿಸುವ ಕರ್ಣಕುಂಡಗಳಿಂದ ಶೋಭಿಸುವ ಮುಖ ಉಳ್ಳವರಾಗಿ ಬೀಗಿದ ದರ್ಪದಿಂದ ತಮ್ಮ ಅಸ್ತ್ರಬಲವನ್ನು ಬಾಹುಬಲವನ್ನೂ ಹೆಚ್ಚೆಂದು ತಿಳಿಯುತ್ತ ಪರಸ್ಪರ ಸ್ಪರ್ಧಿಸುತ್ತ ಎದ್ದುನಿಂತರು.

★ ★ ★ ★

ನೂರ ಎಂಭತ್ತೈದನೆಯ ಅಧ್ಯಾಯ

(ಸ್ವಯಂವರಕ್ಕಾಗಿ ಪಾಂಡವರ ಮತ್ತು ಉಳಿದ ರಾಜರ ದ್ರುಪದಪುರಪ್ರವೇಶ. ಧೃಷ್ಟದ್ಯುಮ್ನನಿಂದ ಸ್ವಯಂವರದ ಘೋಷಣೆ.)

ವೈಶಂಪಾಯನಃ

ಏವಂ ಮತ್ವಾ ಪ್ರಯಾತಾಸ್ತೇ ಪಾಂಡವಾ ಜನಮೇಜಯ ।
ಬ್ರಹ್ಮರೂಪಧರಾಃ ಸರ್ವೇ ಜಟಿಲಾ ಬ್ರಹ್ಮಚಾರಿಣಃ ।
ರಾಜನ್ ದಕ್ಷಿಣಪಾಂಚಾಲಾನ್ ದ್ರುಪದೇನಾಭಿರಕ್ಷಿತಾನ್ ॥೧॥

ಎಲೈ ಜನಮೇಜಯನೇ, ಹೀಗೆ ಆಲೋಚಿಸಿ ಬ್ರಹ್ಮಚಾರಿಗಳಾದ ಆ ಪಾಂಡವರು ನಾರುಮಡಿಗಳನ್ನುಟ್ಟು ಎಲ್ಲರೂ ಬ್ರಾಹ್ಮಣವೇಷವನ್ನು ಧರಿಸಿ ದ್ರುಪದನಿಂದ ಆಳಲ್ಪಟ್ಟ ದಕ್ಷಿಣಪಾಂಚಾಲದೇಶವನ್ನು ಕುರಿತು ಹೊರಟರು.

ತತಸ್ತೇ ತಂ ಮಹಾತ್ಮಾನಂ ಶುದ್ಧಾತ್ಮಾನಮಕಲ್ಮಷಮ್ ।
ದದೃಶುಃ ಪಾಂಡವಾ ರಾಜನ್ ಪಥಿ ದ್ವೈಪಾಯನಂ ತದಾ ।
ತಸ್ಯೈ ಯಥಾವತ್ ಸತ್ಕಾರಂ ಕೃತ್ವಾ ತೇನ ಚ ಸಾಂತ್ವಿತಾಃ ॥೨॥

ರಾಜನೇ, ದಾರಿಯಲ್ಲಿ ಹೋಗುತ್ತಾ ಆ ಪಾಂಡವರು ಶುದ್ಧಾತ್ಮರಾದ ನಿರ್ದುಷ್ಟರಾದ ಮಹಾನುಭಾವರಾದ ದ್ವೈಪಾಯನರನ್ನು ನೋಡಿದರು. ಅವರಿಗೆ ಯಥಾಯೋಗ್ಯವಾಗಿ ಸತ್ಕಾರವನ್ನು ಮಾಡಿ ಅವರಿಂದ ಆಶ್ವಾಸನೆಯ ಮಾತುಗಳನ್ನು ಸ್ವೀಕರಿಸಿದರು.

ಕಥಯಿತ್ವಾಽಭ್ಯನುಜ್ಞಾತಾಃ ಪ್ರಯಯುರ್ದ್ರುಪದಕ್ಷಯಮ್ ।
ಪಶ್ಯಂತೋ ರಮಣೀಯಾನಿ ವನಾನಿ ಚ ಸರಾಂಸಿ ಚ ॥೩॥

ವ್ಯಾಸರ ಜೊತೆಯಲ್ಲಿ ಅವರು ಮಾತನಾಡಿ, ಅವರ ಅನುಜ್ಞೆಯನ್ನು ಪಡೆದು ರಮಣೀಯವಾದ ವನಗಳನ್ನೂ ಮತ್ತು ಸರೋವರಗಳನ್ನೂ ನೋಡುತ್ತಾ ದ್ರುಪದನ ಮನೆಗೆ ಹೊರಟರು.

ತತ್ರ ತತ್ರ ವಸಂತಶ್ಚ ಶನೈರ್ಜಗ್ಮುರ್ಮಹಾರಥಾಃ ।
ಸ್ವಾಧ್ಯಾಯವಂತೋ ಮಧುರಾಃ ಪಾಂಡವಾಃ ಪ್ರಿಯವಾದಿನಃ ॥೪॥

ಸ್ವಾಧ್ಯಾಯಶೀಲರೂ, ಮಧುರಪ್ರಿಯವಚನರೂ ಆದ ಮಹಾರಥರಾದ ಪಾಂಡವರು ಅಲ್ಲಲ್ಲಿ ತಂಗುತ್ತಾ ಮೆಲ್ಲನೆ ನಡೆದರು.

ಆನುಪೂರ್ವ್ಯೇಣ ಸಂಪ್ರಾಪ್ತಾಃ ಪಾಂಚಾಲಾನ್ ಕುರುನಂದನಾಃ ।
ತೇ ತು ದೃಷ್ಟ್ವಾ ಪುರಂ ತಸ್ಯ ಸ್ಕಂಧಾವಾರಂ ಚ ಪಾಂಡವಾಃ ॥೫॥

ಕುಂಭಕಾರಸ್ಯ ಶಾಲಾಯಾಂ ನಿವಾಸಂ ಚಕ್ರಿರೇ ತದಾ ।
ತತ್ರ ಭಿಕ್ಷಾಂ ಸಮಾಜಹ್ರುರ್ಬ್ರಾಹ್ಮೀಂ ವೃತಿಂ ಸಮಾಶ್ರಿತಾಃ ॥೬॥

ಆ ಕುರುನಂದನರು ಒಬ್ಬರ ಹಿಂದೆ ಒಬ್ಬರು ನಡೆದು ಪಾಂಚಾಲ ದೇಶವನ್ನು ಸೇರಿದರು. ಆ ಪಾಂಡವರು ಆ ಪಟ್ಟಣವನ್ನೂ, ಸೈನಿಕರ ಕಂಬಳ ಕುಟೀರಗಳನ್ನೂ ನೋಡಿ, ಒಬ್ಬ ಕುಂಬಾರನ ಶಾಲೆಯಲ್ಲಿ ಬಿಡಾರವನ್ನು ಮಾಡಿದರು. ಬ್ರಾಹ್ಮಣವೃತ್ತಿಯನ್ನು ಆಶ್ರಯಿಸಿದ ಅವರು ಅಲ್ಲಿ ಭಿಕ್ಷೆಯನ್ನು ತರುತ್ತಿದ್ದರು.

ತಾಂಶ್ಚ ಪ್ರಾಪ್ತಾಂಸ್ತಥಾ ವೀರಾನ್ ಜಜ್ಞಿರೇ ನ ನರಾಃ ಕ್ವಚಿತ್ ।
ಯಜ್ಞಸೇನಸ್ಯ ಕಾಮಸ್ತು ಪಾಂಡವಾಯ ಕಿರೀಟಿನೇ ॥೭॥

ಕೃಷ್ಣಾಂ ದದಾನೀತಿ ಸದಾ ನ ಚೈತದ್ ವಿವೃಣೋತಿ ಸಃ ।
ಜಾಮಾತೃಬಲಸಂಯೋಗಂ ಮೇನೇ ಹಿ ಬಲವತ್ತರಮ್ ॥೮॥

ಆ ವೀರರು ಅಲ್ಲಿಗೆ ಬಂದಿರುವ ವಿಷಯವು ನಗರವಾಸಿಗಳಾದ ಯಾರಿಗೂ ತಿಳಿಯಲಿಲ್ಲ. ಯಜ್ಞಸೇನನು ಪಾಂಡವನಾದ ಅರ್ಜುನನಿಗೆ ದ್ರೌಪದಿಯನ್ನು ಕೊಡಬೇಕು ಎಂಬ ಆಸೆಯನ್ನು ಹೊಂದಿದ್ದಾನೆ. ಆದರೆ ಅವನು ಯಾರಿಗೂ ಸ್ಪಷ್ಟವಾಗಿ ಹೇಳುವುದಿಲ್ಲ. ತನ್ನ ಬಲದ ಜೊತೆಗೆ (ಅರ್ಜುನನಂತಹ ಅಳಿಯನ) ಬಲವೂ ಸೇರಿದರೆ ಶ್ರೇಷ್ಠವಾಗಿರುತ್ತದೆಂದು ಯಜ್ಞಸೇನನು ತಿಳಿದಿದ್ದನು.

ಅನ್ವೇಷಮಾಣಃ ಪಾಂಚಾಲಃ ಕೌಂತೇಯಾನ್ ಜನಮೇಜಯ ।
ದೃಢಂ ಧನುರನಾಯಮ್ಯಂ ಕಾರಯಾಮಾಸ ಭಾರತ ॥೯॥

ಜನಮೇಜಯನೇ, ಕೌಂತೇಯರನ್ನು ಹುಡುಕುತ್ತಿದ್ದ ಯಜ್ಞಸೇನನು ಬಗ್ಗಿಸಲು ಅಸಾಧ್ಯವಾದ ಒಂದು ದೃಢವಾದ ಧನುಸ್ಸನ್ನು ಮಾಡಿಸಿದನು.

ತದ್ಧನುಃ ಕಿಂಧುರಂ ನಾಮ ದೇವದತ್ತಮುಪಾನಯತ್ ।
ಜ್ಯಾಯಸೀ ತಸ್ಯ ಚ ಜ್ಯಾಽಸೀತ್ ಪ್ರತಿಬದ್ಧಾಮಹಾಬಲಾ ॥೧೦॥

ನ ತು ಜ್ಯಾಂ ಪ್ರಸಹೇದನ್ಯಸ್ತದ್ಧನುಃ ಪ್ರವರಂ ಮಹತ್ ।
ಶಂಕರೇಣ ವರಂ ದತ್ತಂ ಪ್ರೀತೇನ ಚ ಮಹಾತ್ಮನಾ ॥೧೧॥

ದೇವದತ್ತವಾದ ಕಿಂಧುರವೆಂಬ ಶ್ರೇಷ್ಠವಾದ ಧನುಸ್ಸದು. ಅದಕ್ಕೆ ಈ ಧನುಸ್ಸನ್ನು ಬಲಿಷ್ಠ ಕಟ್ಟಲ್ಪಟ್ಟ ಹೆದೆ ಇತ್ತು. ಪ್ರೀತನಾದ ಮಹರುದ್ರನು ಅರ್ಜುನನ ಹೊರತು ಇನ್ನಾರೂ ಹೆದೆಯೇರಿಸಲಾರರೆಂದು ವರ ಸಹಿತವಾಗಿಯೇ ದ್ರುಪದನಿಗೆ ನೀಡಿದ್ದ.

ಯಂತ್ರಂ ವೈಹಾಯಸಂ ಚಾಪಿ ಕಾರಯಾಮಾಸ ಕೃತ್ರಿಮಮ್ ।
ತೇನ ಯಂತ್ರೇಣ ಸಹಿತಂ ಕಾರಯಾಮಾಸ ಕಾಂಚನಮ್ ॥೧೨॥

ಇದಂ ಸಜ್ಯಂ ಧನುಃ ಕೃತ್ವಾ ಛಿದ್ರೇಣಾನೇನ ಸಾಯಕೈಃ ।
ಅತೀತ್ಯ ಲಕ್ಷ್ಯಂ ಯೋ ವೇದ್ಧಾ ಸ ಲಬ್ಧಾ ಚ ಸುತಾಮಿತಿ ॥೧೩॥

ಅವನು ಆಕಾಶದಲ್ಲಿರುವ (ಎತ್ತರದಲ್ಲಿರುವ) ಒಂದು ಯಂತ್ರವನ್ನು ಮಾಡಿಸಿ ಆ ಯಂತ್ರದ ಜೊತೆಯಲ್ಲಿ ಒಂದು ಕೃತ್ರಿಮಮತ್ಸ್ಯವನ್ನೂ ಮಾಡಿಸಿದನು. ಈ ಧನುಸ್ಸನ್ನು ಹೆದೆಯೇರಿಸಿ ಯಂತ್ರದ ಮಧ್ಯ ಇರುವ ರಂದ್ರದಿಂದ ಮೇಲ್ಮುಖವಾಗಿ ಬಾಣವನ್ನು ಬಿಟ್ಟು ಯಾವನು ಲಕ್ಷ್ಯವನ್ನು ಭೇದಿಸುತ್ತಾನೋ ಅವನು ತನ್ನ ಮಗಳನ್ನು ಪಡೆಯುವನು ಎಂದು ಅವನ ಅಭಿಪ್ರಾಯವಿದ್ದಿತು.

ಇತ್ಯೇವಂ ದ್ರುಪದೋ ರಾಜಾ ಸರ್ವತಃ ಸಮಘೋಷಯತ್ ।
ತಚ್ಛ್ರುತ್ವಾ ಪಾಂಡವಾಃ ಸರ್ವೇ ಸಮೀಯುಸ್ತತ್ರ ಭಾರತ ॥೧೪॥

ದ್ರುಪದನು ಈ ರೀತಿಯ ಅಭಿಪ್ರಾಯವನ್ನು ಎಲ್ಲ ಕಡೆಗಳಲ್ಲಿಯೂ ಘೋಷಣೆ ಮಾಡಿಸಿದನು. ಭಾರತನೇ, ಅದನ್ನು ಕೇಳಿದ ಪಾಂಡವರೆಲ್ಲರೂ ಅಲ್ಲಿಗೆ ಬಂದರು.

ಋಷಯಶ್ಚ ಮಹಾತ್ಮಾನಃ ಸ್ವಯಂವರದಿದೃಕ್ಷಯಾ ।
ದುರ್ಯೋಧನಪುರೋಗಾಶ್ಚ ಸಕರ್ಣಾಃ ಕುರವೋ ನೃಪಾಃ ॥೧೫॥

ಬ್ರಾಹ್ಮಣಾಶ್ಚ ಮಹಾಭಾಗಾ ದೇಶೇಭ್ಯಃ ಸಮುಪಾಗತಾಃ ।
ಅಭ್ಯರ್ಚಿತಾ ರಾಜಗಣಾ ದ್ರುಪದೇನ ಮಹಾತ್ಮನಾ ॥೧೬॥

ಸ್ವಯಂವರವನ್ನು ನೋಡಲು ಮಹಾತ್ಮರಾದ ಋಷಿಗಳು ಬಂದರು. ಕರ್ಣನಿಂದ ಸಹಿತನಾದ ದುರ್ಯೋಧನ ಮೊದಲಾದ ಕುರುರಾಜರು ಮಹಾನುಭಾವರಾದ ಬ್ರಾಹ್ಮಣರು ದೇಶ-ದೇಶಗಳಿಂದ ಬಂದರು. ಮಹಾತ್ಮನಾದ ದ್ರುಪದನು ಆ ರಾಜಗಣವೆಲ್ಲವನ್ನೂ ಮತ್ತು ಉಳಿದವರನ್ನೂ ಸತ್ಕರಿಸಿದನು.

ತತಃ ಪುರವರಶ್ರೇಷ್ಠೇ ಸಾಗರೋದ್ಧತನಿಸ್ವನೇ ।
ಶಿಂಶುಮಾರಗಿರಿಂ ಪ್ರಾಪ್ಯ ನ್ಯವಿಶಂತ ಮಹಾರಥಾಃ ॥೧೭॥

ಅನಂತರ ಅಲ್ಲೋಲಕಲ್ಲೋಲವಾದ ಸಾಗರದಂತೆ ಘೋಷವನ್ನು ಹೊಂದಿದ್ದ ಆ ಶ್ರೇಷ್ಠವಾದ ಪಟ್ಟಣದಲ್ಲಿ ಶಿಂಶುಮಾರಗಿರಿಯನ್ನು ತಲುಪಿ, ಮಹಾರಥರು ಬಿಡಾರವನ್ನು ಮಾಡಿದರು.

ಪ್ರಾಗುತ್ತರೇ ಚ ನಗರಾದ್ ಭೂಮಿಭಾಗೇ ಸಮೇ ಶುಭೇ ।
ಸಮಾಜವಾಟಃ ಶುಶುಭೇ ಭವನೈಃ ಸರ್ವತೋ ವೃತಃ ॥೧೮॥

ನಗರದ ಈಶಾನ್ಯಭಾಗದಲ್ಲಿ ಶುಭವಾದ ಸಮತಲವಾದ ಭೂಮಿ- ಭಾಗದಲ್ಲಿ ಎಲ್ಲ ಕಡೆಗಳಲ್ಲಿಯೂ ಭವನಗಳಿಂದ ಅಲಂಕೃತವಾದ ಆ ಸಮಾಗಮಸ್ಥಾನವು ಶೋಭಿಸಿತು.

ಪ್ರಾಸಾದಪರಿಘೋಪೇತೋ ದ್ವಾರತೋರಣಮಂಡಿತಃ ।
ವಿತಾನೇನ ವಿಚಿತ್ರೇಣ ಸರ್ವತಃ ಸಮಲಂಕೃತಃ ॥೧೯॥

ಆ ಸ್ಥಾನವು ಪ್ರಾಸಾದಗಳಿಂದಲೂ, ಪರಿಘಗಳಿಂದಲೂ ಕೂಡಿದುದಾಗಿ, ದ್ವಾರದಲ್ಲಿ ತೋರಣಗಳಿಂದಲೂ, ವಿಚಿತ್ರವಾದ ತಳಿರುತೋರಣಗಳಿಂದಲೂ ಎಲ್ಲಾ ಕಡೆಗಳಲ್ಲಿಯೂ ಅಲಂಕೃತವಾಗಿದ್ದಿತು.

ತೂರ್ಯೌಘಶತಸಂಕೀರ್ಣಃ ಪರಾರ್ಘ್ಯಾಗುರುಧೂಪಿತಃ ।
ಚಂದನೋದಕಸಿಕ್ತಶ್ಚ ಮಾಲ್ಯದಾಮೈಶ್ಚ ಶೋಭಿತಃ ॥೨೦॥

ಕೈಲಾಸಶಿಖರಪ್ರಖ್ಯೈರ್ನಭಸ್ತಲವಿಲೇಖಿಭಿಃ ।
ಸರ್ವತಃ ಸಂವೃತೈರ್ನದ್ಧಃ ಪ್ರಾಸಾದೈಃ ಸುಕೃತೋಚ್ಛ್ರಿತೈಃ ॥೨೧॥

ಆ ಸಮಾಜವಾಟವು ನೂರಾರು ತೂರ್ಯಗಳ ನಾದದಿಂದ ತುಂಬಿ, ಬೆಲೆಬಾಳುವ ಅಗರು ಧೂಪದಿಂದ ಸುವಾಸಿತವಾಗಿ, ಎಲ್ಲ ಕಡೆಗಳಲ್ಲಿಯೂ ಗಂಧೋದಕಗಳಿಂದ ಸಿಂಪಡಿಸಲ್ಪಟ್ಟು, ಹೂಮಾಲೆಗಳಿಂದ ಶೋಭಿತವಾಗಿದ್ದಿತು. ಕೈಲಾಸಶಿಖರದಂತಿರುವ ಆಕಾಶವನ್ನು ಭೇದಿಸುವಂತಿರುವ ಚೆನ್ನಾಗಿ ಕಟ್ಟಲ್ಪಟ್ಟ ಉನ್ನತವಾದ ಪ್ರಾಸಾದಗಳಿಂದ ಆವೃತವಾಗಿದ್ದಿತು.

ಸುವರ್ಣಜಾಲಸಂವೀತೈರ್ಮಣಿಕುಟ್ಟಿಮಭೂಷಿತೈಃ ।
ಸುಖಾರೋಹಣಸೋಪಾನೈರ್ಮಹಾಸನಪರಿಚ್ಛದೈಃ ॥೨೨॥

ಆಗ್ರಾಮ್ಯಸಮವಚ್ಛನ್ನೈರಗುರೂತ್ತಮಧೂಪಿತೈಃ ।
ಹಂಸವರ್ಣೈಶ್ಚ ಬಹುಭಿರಾಯೋಜನಸುಗಂಧಿಭಿಃ ॥೨೩॥

ಸಸಂಬಾಧಪಥದ್ವಾರೈಃ ಶಯನಾಸನಶೋಭಿತೈಃ ।
ಬಹುಧಾತುಪಿನದ್ಧಾಂಗೈರ್ಹಿಮವಚ್ಛಿಖರೈರಿವ ॥೨೪॥

ಆ ಪ್ರಾಸಾದಗಳಲ್ಲಿ ಸುವರ್ಣಜಾಲಗಳೂ, ಮಣಿಮಯವಾದ ಎತ್ತರವಾದ ಪ್ರದೇಶಗಳೂ, ಸುಖವಾಗಿ ಹತ್ತಬಹುದಾದ ಮೆಟ್ಟಿಲುಗಳೂ, ಶ್ರೇಷ್ಠವಾದ ಆಸನ ಮೊದಲಾದ ಸಾಮಗ್ರಿಗಳೂ ಇದ್ದವು. ಆ ಪ್ರಾಸಾದವು ಅಲಂಪಟರಾದ ಪುರುಷರಿಂದ ತುಂಬಿದ್ದು ಉತ್ತಮವಾದ ಅಗರು ಧೂಪದಿಂದ ಕೂಡಿ ಹಂಸದಂತೆ ಶ್ವೇತವರ್ಣವನ್ನು ಹೊಂದಿ ಅನೇಕ ಯೋಜನೆಗಳವರೆಗೆ ತನ್ನ ಸುಗಂಧವನ್ನು ಬೀರುತ್ತಿದ್ದಿತು. ಹೋಗುವ ಮತ್ತು ಬರುವ ಜನರು ಮತ್ತು ವಾಹನಗಳಿಂದ ನಿಬಿಡವಾದ ದ್ವಾರಗಳಿಂದಲೂ ಶಯನ ಮತ್ತು ಆಸನಗಳಿಂದಲೂ ಹಿಮಾಲಯ ಶಿಖರದಂತಿರುವ ಅನೇಕ ಧಾತುಗಳನ್ನು ಮೆಟ್ಟಿದ ಭಿತ್ತಿ ಮೊದಲಾದ ಅವಯವಗಳಿಂದಲೂ ಆ ಪ್ರಾಸಾದಗಳು ಶೋಭಿತವಾಗಿದ್ದವು.

ತತ್ರ ನಾನಾಪ್ರಕಾರೇಷು ವಿಮಾನೇಷು ಸ್ವಲಂಕೃತಾಃ ।
ಸ್ಪರ್ಧಮಾನಾಸ್ತದಾಽನ್ಯೋನ್ಯಂ ನಿಷೇದುಃ ಸರ್ವಪಾರ್ಥಿವಾಃ ॥೨೫॥

ಅಲ್ಲಿ ಚೆನ್ನಾಗಿ ಅಲಂಕೃತವಾದ ಅನೇಕ ವಿಧವಾದ ಉಪ್ಪರಿಗೆಯ ಮನೆಗಳಲ್ಲಿ ಆ ಎಲ್ಲ ರಾಜರುಗಳೂ ಅನ್ಯೋನ್ಯವಾಗಿ ಸ್ಪರ್ಧೆ ಮಾಡುತ್ತಾ ಕುಳಿತುಕೊಂಡರು.

ತತ್ರೋಪವಿಷ್ಟಾ ದದೃಶುರ್ಮಹಾಸತ್ವಾನ್ ಪೃಥಗ್ಜನಾಃ ।
ರಾಜಸಿಂಹಾನ್ ಮಹಾಭಾಗಾನ್ ಮೃಷ್ಟಸ್ರಗನುಲೇಪನಾನ್ ॥೨೬॥

ಸಾಧಾರಣಜನರೂ ಸಹ ಸಮಾಜವಾಟದಲ್ಲಿ ತಮಗೆ ಯೋಗ್ಯವಾದ ಸ್ಥಳಗಳಲ್ಲಿ ಕುಳಿತು ಮಹಾಸತ್ವವುಳ್ಳವರೂ, ಮಹಾನುಭಾವರೂ, ಉತ್ತಮವಾದ ಮಾಲ್ಯಲೇಪನವನ್ನು ಧರಿಸಿದವರೂ ಆದ ಆ ರಾಜಸಿಂಹರನ್ನು ನೋಡಿದರು.

ಮಹಾಪ್ರಸಾದಾನ್ ಬ್ರಹ್ಮಣ್ಯಾನ್ ಸ್ವರಾಷ್ಟ್ರಪರಿರಕ್ಷಿಣಃ ।
ಪ್ರಿಯಾನ್ ಸರ್ವಸ್ಯ ಲೋಕಸ್ಯ ಸುಕೃತೈಃ ಕರ್ಮಭಿಃ ಶುಭೈಃ ॥೨೭॥

ಮಹಾನುಗ್ರಹಶೀಲರಾದ, ಬ್ರಾಹ್ಮಣವತ್ಸಲರಾದ, ತಮ್ಮ ತಮ್ಮ ರಾಷ್ಟ್ರಗಳನ್ನು ರಕ್ಷಿಸುವ, ಚೆನ್ನಾಗಿ ಮಾಡಿದ ತಮ್ಮ ಶುಭಕರ್ಮಗಳಿಂದ ಎಲ್ಲ ಜನರಿಗೂ ಪ್ರಿಯರಾದ ರಾಜರುಗಳನ್ನು ನೋಡಿದರು.

ತತೋಽಧಿಮಂಚೇಷು ತದಾ ಪೌರಜಾನಪದಾ ಜನಾಃ ।
ಉಪೋಪವಿವಿಶುಃ ಸರ್ವೇ ಯಾಜ್ಞಸೇನೀದಿದೃಕ್ಷವಃ ॥೨೮॥

ಅನಂತರ ಪೌರಜಾನಪದರು ತಮಗೆ ಕ್ಲೃಪ್ತವಾದ ಮಂಚಗಳಲ್ಲಿ ದ್ರೌಪದಿಯನ್ನು ನೋಡುವ ಆಸೆಯಿಂದ ಹತ್ತಿರ-ಹತ್ತಿರ ಕುಳಿತುಕೊಂಡರು.

ಬ್ರಾಹ್ಮಣೈಶ್ಚೈವ ಸಹಿತಾಃ ಪಾಂಡವಾಃ ಸಮುಪಾವಿಶನ್ ।
ವೃದ್ಧಿಂ ಪಾಂಚಾಲದೇಶಸ್ಯ ಪಶ್ಯಂತಸ್ತಾಮನುತ್ತಮಾಮ್ ॥೨೯॥

ಪಾಂಡವರೂ ಪಾಂಚಾಲದೇಶದ ಶ್ರೇಷ್ಠವಾದ ಆ ಸಮೃದ್ಧಿಯನ್ನು ನೋಡುತ್ತಾ ಬ್ರಾಹ್ಮಣರ ಜೊತೆಯಲ್ಲಿ ಕುಳಿತುಕೊಂಡರು.

ತತಃ ಸಮಾಜೋ ವವೃತೇ ಸ ರಾಜನ್ ದಿವಸಾನ್ ಬಹೂನ್ ।
ರತ್ನಪ್ರದಾನಬಹುಲಃ ಶೋಭಿತೋ ನಟನರ್ತಕೈಃ ॥೩೦॥

ರಾಜನೇ, ಅನಂತರ ನಟನರ್ತಕರಿಂದ ಶೋಭಿತವಾದ ಅನೇಕ ರತ್ನಪ್ರದಾನವನ್ನು ಹೊಂದಿದ ಆ ಸಮಾಜವು (ಸಮಾಗಮವು) ಬಹಳ ದಿನಗಳವರೆಗೆ ಬೆಳೆಯಿತು.

ವರ್ತಮಾನೇ ಸಮಾಜೇ ತು ರಮಣೀಯೇಽಹ್ನಿ ಷೋಡಶೇ ।
ಆಪ್ಲುತಾ ಶುದ್ಧವಸನಾ ಸರ್ವಾಭರಣಭೂಷಿತಾ ॥೩೧॥

ವೀರಕಾಂಸ್ಯಮುಪಾದಾಯ ಕಾಂಚನಂ ಸಮಲಂಕೃತಮ್ ।
ಅವತೀರ್ಣಾ ತತೋ ರಂಗೇ ದ್ರೌಪದೀ ದ್ರುಪದಾತ್ಮಜಾ ॥೩೨॥

ಹೀಗೆ ಆ ಸಮಾಜವು ಬೆಳೆಯುತ್ತಿರಲು ರಮಣೀಯವಾದ ಹದಿನಾರನೆಯ ದಿವಸದಲ್ಲಿ ದ್ರೌಪದಿಯು ಸ್ನಾನವನ್ನು ಮಾಡಿ, ಶುಭ್ರವಸ್ತ್ರವನ್ನು ಧರಿಸಿ, ಸರ್ವಾಭರಣಭೂಷಿತಳಾಗಿ ವೀರರ ಕೊರಳಿಗೆ ಯೋಗ್ಯವಾದ ಅಲಂಕೃತವಾದ ಸುವರ್ಣಮಯವಾದ ಮಾಲೆಯನ್ನು ಹಿಡಿದು ರಂಗಸ್ಥಳದಲ್ಲಿ ಅವತರಿಸಿದಳು.

ಪುರೋಹಿತಃ ಸೋಮಕಾನಾಂ ಮಂತ್ರವಿದ್ ಬ್ರಾಹ್ಮಣಃ ಶುಚಿಃ ।
ಪರಿಸ್ತೀರ್ಯ ಜುಹಾವಾಗ್ನಿಮಾಜ್ಯೇನ ವಿಧಿನಾ ತದಾ ॥೩೩॥

ಮಂತ್ರಜ್ಞನೂ, ಶುಚಿಯಾದ ಬ್ರಾಹ್ಮಣನೂ ಆದ ದ್ರುಪದನ ಪುರೋಹಿತನು ಪರಿಸ್ತರಣವನ್ನು ಮಾಡಿ ಆಜ್ಯದಿಂದ ಆಗ ವಿಧಿವತ್ತಾಗಿ ಅಗ್ನಿಯಲ್ಲಿ ಹೋಮವನ್ನು ಮಾಡಿದನು.

ಸಂತರ್ಪಯಿತ್ವಾ ಜ್ವಲನಂ ಬ್ರಾಹ್ಮಣಾನ್ ಸ್ವಸ್ತಿ ವಾಚ್ಯ ಚ ।
ವಾರಯಾಮಾಸ ಸರ್ವಾಣಿ ವಾದಿತ್ರಾಣಿ ಸಮಂತತಃ ॥೩೪॥

ಪುರೋಹಿತನು ಅಗ್ನಿದೇವನನ್ನು ಸಂತೋಷಪಡಿಸಿ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿ, ಎಲ್ಲಾ ಕಡೆಗಳಲ್ಲಿಯೂ ಮೊಳಗುತ್ತಿದ್ದ ವಾದ್ಯಗಳನ್ನು ಪ್ರತಿಷೇಧಿಸಿದನು.

ನಿಶ್ಶಬ್ದೇ ತು ಕೃತೇ ತಸ್ಮಿನ್ ಧೃಷ್ಟದ್ಯುಮ್ನೋ ವಿಶಾಂಪತೇ ।
ರಂಗಮಧ್ಯಂ ಗತಸ್ತತ್ರ ಮೇಘಗಂಭೀರಯಾ ಗಿರಾ ।
ವಾಕ್ಯಮುಚ್ಚೈರ್ಜಗಾದೇದಂ ಶ್ಲಕ್ಷ್ಣಮರ್ಥವದುತ್ತಮಮ್ ॥೩೫॥

ಎಲೈ ರಾಜನೇ, ರಂಗಮಂಚವು ನಿಶ್ಶಬ್ದವಾಗುತ್ತಿರಲು ಧೃಷ್ಟದ್ಯುಮ್ನನು ರಂಗಮಧ್ಯದಲ್ಲಿ ನಿಂತು ತನ್ನ ಮೇಘಗಂಭೀರವಾದ, ಮಧುರವಾದ, ಅರ್ಥಪೂರ್ಣವಾದ ಮತ್ತು ಉತ್ತಮವಾದ ಮಾತುಗಳಿಂದ ಉಚ್ಚಸ್ವರದಲ್ಲಿ ಹೀಗೆ ಹೇಳಿದನು.

ಧೃಷ್ಟದ್ಯುಮ್ನಃ

ಇದಂ ಧನುರ್ಲಕ್ಷ್ಮಿಮೇ ಚ ಬಾಣಾಃ
ಶೃಣ್ವಂತು ಮೇ ಕ್ಷತ್ರಿಯಾಃ ಸರ್ವ ಏವ ।
ಯಂತ್ರಚ್ಛಿದ್ರೇಣಾಭ್ಯತಿಕ್ರಮ್ಯ ಲಕ್ಷಂ
ಸಮರ್ಪಯಧ್ವಂ ಖಗಮೈರ್ದಶಾರ್ಧೈಃ ॥೩೬॥

ಇದು ಧನುಸ್ಸು, ಇದು ಲಕ್ಷ್ಯ, ಇವು ಐದು ಬಾಣಗಳು. ಎಲ್ಲಾ ಕ್ಷತ್ರಿಯರೂ ನನ್ನ ಮಾತನ್ನು ಕೇಳಿ. ನೀವು ಯಂತ್ರದ ಮಧ್ಯದಲ್ಲಿರುವ ಛಿದ್ರದ ಮೂಲಕ ಆಕಾಶದಲ್ಲಿ ಹೋಗುವ ಐದು ಬಾಣಗಳನ್ನು ಪ್ರಯೋಗಿಸಿ ಲಕ್ಷ್ಯವನ್ನು ಭೇದಿಸಬೇಕು.

ಏತತ್ ಕೃತ್ವಾ ಕರ್ಮ ಸುದುಷ್ಕರದತ್ರ ಯಃ
ಕುಲೇನ ರೂಪೇಣ ಬಲೇನ ಯುಕ್ತಃ ।
ತಸ್ಯಾಸ್ಯ ಭಾರ್ಯಾ ಭಗಿನೀ ಮಮೇಯಂ
ಕೃಷ್ಣಾ ಭವಿತ್ರೀ ನ ಮೃಷಾ ಬ್ರವೀಮಿ ॥೩೭॥

ಕುಲದಿಂದಲೂ, ರೂಪದಿಂದಲೂ ಮತ್ತು ಬಲದಿಂದಲೂ ಯುಕ್ತವಾದ ಯಾವನು ಈ ದುಸ್ಸಾಧ್ಯವಾದ ಕಾರ್ಯವನ್ನು ಮಾಡುತ್ತಾನೋ, ಅವನಿಗೆ ನನ್ನ ತಂಗಿಯಾದ ಈ ಕೃಷ್ಣೆಯು ಪತ್ನಿಯಾಗುವಳು. ಇದು ಸತ್ಯವಾದ ಮಾತು.

ವೈಶಂಪಾಯನಃ

ತಾನೇವಮುಕ್ತ್ವಾ ದ್ರುಪದಸ್ಯ ಪುತ್ರಃ
ಪಶ್ಚಾದಿದಂ ದ್ರೌಪದೀಮಿತ್ಯುವಾಚ ।
ನಾಮ್ನಾ ಚ ಗೋತ್ರೇಣ ಚ ಕರ್ಮಣಾ ಚ
ಸಂಕೀರ್ತಯಂಸ್ತಾನ್ ನೃಪತೀನ್ ಸಮೇತಾನ್ ॥೩೮॥

ಆ ರಾಜರುಗಳನ್ನು ಕುರಿತು ಹೀಗೆ ಹೇಳಿ, ದ್ರುಪದನ ಪುತ್ರನಾದ ಧೃಷ್ಟದ್ಯುಮ್ನನು ಅಲ್ಲಿಗೆ ಬಂದ ರಾಜರುಗಳನ್ನು ಅವರ ಹೆಸರು, ಗೋತ್ರ ಮತ್ತು ಕರ್ಮಗಳಿಂದ ದ್ರೌಪದಿಗೆ ಪರಿಚಯ ಮಾಡಿಕೊಡುತ್ತಾ ದ್ರೌಪದಿಯನ್ನು ಕುರಿತು ಹೀಗೆ ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚಾಶೀತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಸ್ವಯಂವರಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರಎಂಭತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಕೇಚಿನ್ನಿರೀಕ್ಷ್ಯ ಧನುರೇತ್ಯ ನ ಮೇ ಸುಶಕ್ಯ-
ಮಿತ್ಯೇವ ಚಾಪಯಯುರನ್ಯ ಉತ ಪ್ರಚಾಲ್ಯ ।
ತತ್ರಾಸಸಾದ ಶಿಶುಪಾಲ ಉರುಪ್ರತಾಪಃ
ಸಂಗೃಹ್ಯ ತತ್ ಸಮನುರೋಪಣಯತ್ನ ಆಸೀತ್ ॥೧೨೩॥

ಕೆಲವರು ಬಂದು ಆ ಬಿಲ್ಲನ್ನು ದೂರದಿಂದ ನೋಡಿಯೆ ಇದು ನಮಗೆ ಶಕ್ಯವಲ್ಲ ಎಂದು ಹಿಂದಿರುಗಿದರು. ಆಗ ಮಹಾಪ್ರತಾಪಿಯಾದ ಶಿಶುಪಾಲ ಬಂದ. ಬಿಲ್ಲನ್ನೆತ್ತಿ ಹೆದೆ ಏರಿಸಲು ಯತ್ನಿಸಿದ.

ಮಾಷಾಂತರಾಯ ಸ ಚಕರ್ಷ ಯದೈವ ಕೋಟ್ಯಾ
ಉನ್ನಮ್ಯ ತತ್ ಪ್ರತಿಜಘಾನ ತಮೇವ ಚಾಶು ।
ಅನ್ಯತ್ರ ಫಲ್ಗುನತ ಏತದಶಕ್ಯಮೇವೇ-
ತ್ಯಂಜೋ ಗಿರೀಶವರತಃ ಸ ಯಯೌ ಚ ಭಗ್ನಃ ॥೧೨೪॥

ಶಿಶುಪಾಲ ಬಿಲ್ಲಿನ ತುದಿಯನ್ನೆಳೆದ. ಹೆದೆಗೂ ಬಿಲ್ಲಿನ ತುದಿಗೂ ಉದ್ದಿನ ಕಾಳಿನಷ್ಟೇ ಅಂತರವಿದ್ದಾಗ ತಕ್ಷಣ ಬಿಲ್ಲು ಸೆಟೆದು ಅವನಿಗೇ ಬಡಿಯಿತು. ಅರ್ಜುನನಿಗೆ ಹೊರತು ಬೇರೆಯವರಿಗೆ ಈ ಬಿಲ್ಲು ಹೆದೆಯೇರಿಸಲು ಅಶಕ್ಯವೆಂದು ಶಿವನ ವರವಿದ್ದುದರಿಂದ ಶಿಶುಪಾಲ ಹೀಗೆ ಸೋತು ಹಿಂದಿರುಗಿದ.

ಮದ್ರೇಶ ಏತ್ಯ ಚಕೃಷೇ ಸ್ಥವಿರೋಽಪಿ ವೀರ್ಯಾತ್
ಚೇದೀಶತೋಽಪ್ಯಧಿಕಮೇವ ಸ ಮುದ್ಗಮಾತ್ರೇ ।
ಶಿಷ್ಟೇಽಮುನಾ ಪ್ರತಿಹತಃ ಸ ಯಯಾವಶಕ್ಯಂ
ಮತ್ವಾಽಽತ್ಮನಸ್ತದನು ಭೂಪತಯೋ ವಿಷಣ್ಣಾಃ ॥೧೨೫॥

ಮದ್ರರಾಜ ಶಲ್ಯ ವೃದ್ಧನಾದರೂ ಸ್ವಶಕ್ತಿಯಿಂದ ಶಿಶುಪಾಲನಿಗಿಂತ ಹೆಚ್ಚೇ ಬಿಲ್ಲು ಬಗ್ಗಿಸಿದ. ಹೆಸರು ಕಾಳಿನಷ್ಟು ಮಾತ್ರ ಅಂತರ ಉಳಿದಿದ್ದಾಗ ಬಿಲ್ಲು ಅವನಿಗೂ ಬಡಿಯಿತು. ಇದು ತನಗೆ ಅಶಕ್ಯವೆಂದು ಮನಗಂಡು ಅವನು ಹಿಂತಿರುಗಿದ. ಒಡನೆ ರಾಜರುಗಳು ವಿಷಣ್ಣರಾದರು.

ಸನ್ನೇಷು ಭೂಪತಿಷು ಮಾಗಧ ಆಸಸಾದ
ಸೋಽವಜ್ಞಯೈವ ಬಲವೀರ್ಯಮದೇನ ದೃಪ್ತಃ ।
ಚಾಪಂ ಚಕರ್ಷ ಚಲಪಾದತಳೋ ಬಲೇನ
ಶಿಷ್ಟೇ ಸ ಸರ್ಷಪಮಿತೇಽಭಿಹತೋಽಮುನೈವ ॥೧೨೬॥

ಜಾನುನ್ಯಮುಷ್ಯ ಧರಣೀಂ ಯಯತುಸ್ತದೈವ
ದರ್ಪೇಣ ಚಾಸ್ಥಿರಪದಸ್ಥಿತಿಮಾತ್ರಹೇತೋಃ ।
ರೌದ್ರಾದ್ ವರಾತ್ಸ ಜಳತಾಂ ಗಮಿತೋಽಥ ರಾಜಾ
ರಾಜ್ಞಾಂ ಮುಖಾನ್ಯನಭಿವೀಕ್ಷ್ಯ ಯಯೌಸ್ವರಾಷ್ಟ್ರಂ ॥೧೨೭॥

ರಾಜರು ಸುಮ್ಮನೆ ಕುಳಿತಿದ್ದಾಗ ಜರಾಸಂಧ ಬಂದ. ಬಲವೀರ್ಯ ಮದದಿಂದ ದೃಪ್ತನಾಗಿದ್ದ ಆತ ಅಲಕ್ಷ್ಯತೆಯಿಂದ ಬಿಲ್ಲು ಬಗ್ಗಿಸಿದ. ಆದರೆ ಸಾಸಿವೆಕಾಳಿನಷ್ಟು ಅಂತರವಿರುವಾಗ ಬಿಲ್ಲು ಅವನನ್ನು ಬಲವಾಗಿ ಬಡಿಯಿತು. ಅವನ ಅಂಗಾಲುಗಳು ಚಲಿಸಿದವು. ನೆಲದ ಮೇಲೆ ಕಾಲೂರಿ ನಿಲ್ಲಲಾಗದಿದ್ದಾಗ ದರ್ಪದಿಂದ ಅದನ್ನು ತೋರಗೊಡದೆ ಮೊಳಕಾಲೂರಿ ಹೇಗೋ ನೆಲವನ್ನಾಶ್ರಯಿಸಿ ನಿಂತ. ಶಿವನ ವರವಿದ್ದುದರಿಂದಲೆ ಅವನೂ ನಿಶ್ಚೇಷ್ಟನಾಗಬೇಕಾಯಿತು. ಲಜ್ಜೆಯಿಂದ ರಾಜರ ಮುಖ ನೋಡದೆ ತನ್ನೊಂದಿಗೆ ಹೊರಟು ಹೋದ.

ಪ್ರಾಯೋ ಗತಾಸ್ತಮನು ಭೂಪತಯೋಽಥ ಕರ್ಣೋ
ದುರ್ಯೋಧನಾರ್ಥಮನುಗೃಹ್ಯ ಧನುಶ್ಚಕರ್ಷ ।
ರಾಮಾದುಪಾತ್ತ ಶುಭಶಿಕ್ಷಿತಮಾತ್ರತೋಽಸೌ
ರೋಮಾವಶಿಷ್ಟಮಕರೋದ್ ಧನುಷೋಽಂತಮಾಶು ॥೧೨೮॥

ಜರಾಸಂಧ ಪರಾಭವಗೊಂಡುಹೋದ ಅನಂತರ ಪ್ರಾಯಶಃ ಎಲ್ಲ ರಾಜರೂ ಹೊರಟು ಹೋದರು. ಆಗ ಕರ್ಣ ದುರ್ಯೋಧನನಿಗಾಗಿ ಬಿಲ್ಲನ್ನೆತ್ತಿ ಸೆಳೆದ. ಪರಶುರಾಮನಿಂದ ಪಡೆದ ಉತ್ತಮ ಶಿಕ್ಷಣದ ಬಲದಿಂದ ಬಿಲ್ಲಿನ ತುದಿಗೆ ಒಂದು ರೋಮದಷ್ಟು ಮಾತ್ರ ಅಂತರವಿರುವಂತೆ ಮಾಡಿದ.

ತಸ್ಮಿಂಶ್ಚ ತೇನ ವಿಹತೇ ಪ್ರತಿಸನ್ನಿವೃತ್ತೇ
ಭೀಮಾರ್ಜುನೌ ದ್ವಿಜಸದಸ್ಯುಪಸನ್ನಿವಿಷ್ಟೌ ।
ಉತ್ತಸ್ಥತೂ ರವಿಶಶಿಪ್ರತಿಮಾನರೂಪೌ
ವಿಪ್ರೇಷು ತತ್ರ ಚ ಭಯಾ ವಿನಿವಾರಯತ್ಸು ॥೧೨೯॥

ಕರ್ಣನೂ ಬಿಲ್ಲಿನ ಏಟು ತಿಂದು ಹಿಂತಿರುಗಿದಾಗ ಬ್ರಾಹ್ಮಣರ ಸಭೆಯಲ್ಲಿ ಸೂರ್ಯ ಚಂದ್ರರಂತೆ ಹೊಳೆಯುತ್ತ ಕುಳಿತಿದ್ದ ಭೀಮಾರ್ಜುನರು, ಬ್ರಾಹ್ಮಣರು ಭಯದಿಂದ ತಡೆಯುತ್ತಿದ್ದಂತೆಯೇ ಎದ್ದುನಿಂತರು.

ವಿಪ್ರಾಶ್ಚ ಕೇಚಿದತಿಯುಕ್ತಮಿಮೌ ಹಿ ವೀರೌ
ದೇವೋಪಮಾವಿತಿ ವಚೋ ಜಗದುಸ್ತತಸ್ತೈ ।
ದೃಷ್ಟ್ವೈವ ಕೃಷ್ಣಮುಖಪಂಕಜಮಾಶು ಚಾಪ-
ಸಾನ್ನಿಧ್ಯಮಾಯಯತುರುತ್ತಮವೀರ್ಯಸಾರೌ ॥೧೩೦॥

ಕೆಲವು ಬ್ರಾಹ್ಮಣರು 'ಇದು ಅತ್ಯಂತ ಯುಕ್ತ. ಏಕೆಂದರೆ ಇವರಿಬ್ಬರೂ ವೀರರು. ದೇವಸಮಾನರು' ಎಂಬ ಮಾತನ್ನಾಡಿದರು. ಆಗ ಉತ್ತಮ ವೀರ್ಯಬಲ ಉಳ್ಳ ಭೀಮಾರ್ಜುನರು ಮೊದಲಿಗೆ ಶ್ರೀಕೃಷ್ಣನ ಮುಖಕಮಲವನ್ನು ನೋಡಿ ಕೂಡಲೆ ಬಿಲ್ಲಿನ ಬಳಿಗೆ ಬಂದರು.

★ ★ ★ ★

ನೂರ ಎಂಭತ್ತಾರನೆಯ ಅಧ್ಯಾಯ

(ಧೃಷ್ಟದ್ಯುಮ್ನನಿಂದ ತಂಗಿಗೆ ಬಂದ ರಾಜರ ಪರಿಚಯ, ಸ್ಪರ್ಧೆಯಿಂದ ಲಕ್ಷ್ಯವೇಧವನ್ನು ಮಾಡಲು ಪ್ರಯತ್ನಿಸಿದ ರಾಜರ ವೈಫಲ್ಯ, ಪಾಂಡವರನ್ನು ನೋಡಿ ಕೃಷ್ಣನ ಹರ್ಷ, ಅರ್ಜುನನ ಧನುಸ್ಸಮೀಪ ಗಮನ)

ಧೃಷ್ಟದ್ಯುಮ್ನಃ

ದುರ್ಯೋಧನೋ ದುರ್ವಿಷಹೋ ದುರ್ಮುಖೋ ದುಷ್ಪ್ರಧರ್ಷಣಃ ।
ವಿವಿಂಶತಿರ್ವಿಕರ್ಣಶ್ಚ ಸಹೋ ದುಃಶಾಸನಃ ಸಮಃ ॥೧॥

ದುರ್ಯೋಧನ, ದುರ್ವಿಷಹ, ದುರ್ಮುಖ, ದುಷ್ಪ್ರಧರ್ಷಣ, ವಿವಿಂಶತಿ, ವಿಕರ್ಣ, ಸಹ, ದುಃಶಾಸನ, ಸಮ.

ಯುಯುತ್ಸುರ್ವಾಯುವೇಗಶ್ಚ ಭೀಮವೇಗಶ್ಚ ವೀರ್ಯವಾನ್ ।
ಉಗ್ರಾಯುಧೋ ಬಲಾನೀಕಃ ಕನಕಾಯುರ್ವಿರೋಚನಃ ॥೨॥

ಯುಯುತ್ಸು, ವಾಯುವೇಗ, ಭೀಮವೇಗ, ವೀರ್ಯವಾನ್, ಉಗ್ರಾಯುಧ, ಬಲಾನೀಕ, ಕನಕಾಯು, ವಿರೋಚನ.

ಸಕುಂಡಲಶ್ಚಿತ್ರಸೇನಃ ಸುವರ್ಚಾಃ ಕನಕಧ್ವಜಃ ।
ನಂದಕೋ ಬಾಹುಶಾಲೀ ಚ ಕುಂಡಲೀ ವಿಕಟಸ್ತಥಾ ॥೩॥

ಕುಂಡಲಸಹಿತನಾದ ಚಿತ್ರಸೇನ, ಸುವರ್ಚ, ಕನಕಧ್ವಜ, ನಂದಕ, ಬಾಹುಶಾಲೀ, ಕುಂಡಲೀ, ವಿಕಟ.

ವಿಂದಶ್ಚಾಪ್ಯನುವಿಂದಶ್ಚ ಸದೀಪೀ ವಿಕಲಃ ಕರೀ ।
ಏತೇ ಚಾನ್ಯೇ ಚ ಬಹವೋ ಧಾರ್ತರಾಷ್ಟ್ರಾ ಮಹಾಬಲಾಃ ॥೪॥

ವಿಂದ, ಅನುವಿಂದ, ಸದೀಪೀ, ವಿಕಲ, ಕರಿ, ಮಹಾಬಲರಾದ ಇವರೂ ಮತ್ತು ಇನ್ನೂ ಅನೇಕ ಧೃತರಾಷ್ಟ್ರಪುತ್ರರು.

ಕರ್ಣೇನ ಸಹಿತಾ ವೀರಾಃ ತ್ವದರ್ಥೇ ಸಮುಪಾಗತಾಃ ।
ಶತಸಂಖ್ಯಾ ಮಹಾತ್ಮಾನಃ ಸಮೇತಾ ದೇವರೂಪಿಣಃ ॥೫॥

ದೇವತೆಗಳಂತಿರುವ ಮಹಾಪ್ರಯತ್ನಶಾಲಿಗಳಾದ ಈ ಶತವೀರರು ಕರ್ಣನ ಜೊತೆಯಲ್ಲಿ ನಿನ್ನನ್ನು ಪಡೆಯುವ ಸಲುವಾಗಿ ಇಲ್ಲಿಗೆ ಬಂದಿದ್ದಾರೆ.

ಶಕುನಿಶ್ಚಾಚಲಶ್ಚೈವ ವೃಷಕೋಽಥ ಮಹಾಧನುಃ ।
ಏತೇ ಗಾಂಧಾರರಾಜಸ್ಯ ಸುತಾಃ ಸರ್ವೇ ಸಮಾಗತಾಃ ॥೬॥

ಶಕುನಿ, ಅಚಲ, ವೃಷಕ, ಮಹಾಧನು ಈ ಎಲ್ಲಾ ಗಾಂಧಾರರಾಜನ ಪುತ್ರರೂ ಬಂದಿದ್ದಾರೆ.

ಅಶ್ವತ್ಥಾಮಾ ಚ ಭೋಜಶ್ಚ ಸರ್ವಶಸ್ತ್ರಭೃತಾಂ ವರೌ ।
ವಾರ್ಧಕ್ಷೇಮಿಃ ಸುವರ್ಚಾಶ್ಚ ಸೇನಾಬಿಂದುಶ್ಚ ವೀರ್ಯವಾನ್ ॥೭॥

ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠರಾದ ಅಶ್ವತ್ಥಾಮಾ, ಭೋಜ ಇವರಿಬ್ಬರು ವಾರ್ಧಕ್ಷೇಮಿ, ಸುವರ್ಚಾ, ವೀರ್ಯಶಾಲಿಯಾದ ಸೇನಾಬಿಂದು.

ಅಭಿಭೂಃ ಸಹ ಪುತ್ರೇಣ ವಸುನಾ ಚ ಸುವರ್ಚಸಾ ।
ಸುಮಿತ್ರಃ ಸುಕುಮಾರಶ್ಚ ವೃತ್ತಃ ಸತ್ಯಧೃತಿಸ್ತಥಾ ॥೮॥

ವಸು ಮತ್ತು ಸುವರ್ಚಾ ಎಂಬ ಮಕ್ಕಳಿಂದ ಸಹಿತನಾದ ಅಭಿಭೂ, ಸುಮಿತ್ರ ಸುಕುಮಾರ, ವೃತ್ತ, ಸತ್ಯಧೃತಿ.

ಸೂರ್ಯಧ್ವಜೋ ರೋಚಮಾನೋ ನೀಲಶ್ಚಿತ್ರಾಯುಧಸ್ತಥಾ ।
ಅಂಶುಮಾಂಶ್ಚೇಕಿತಾನಶ್ಚ ಶ್ರೇಣಿಮಾಂಶ್ಚ ಮಹಾಬಲಃ ॥೯॥

ಸೂರ್ಯಧ್ವಜ, ರೋಚಮಾನ, ನೀಲ, ಚಿತ್ರಾಯುಧ, ಅಂಶುಮಾನ್ ಚೇಕಿತಾನ, ಮಹಾಬಲನಾದ ಶ್ರೇಣಿಮಾನ್

ಸಮುದ್ರಸೇನಸ್ತತ್ಪುತ್ರ ಇಂದ್ರಸೇನಶ್ಚ ಪಾರ್ಥಿವಃ ।
ಜರಾಸಂಧಃ ಸಪುತ್ರಶ್ಚ ಸುದಂಡೋ ದಂಡ ಏವ ಚ ॥೧೦॥

ಸಮುದ್ರಸೇನ, ಅವನ ಪುತ್ರ, ಇಂದ್ರಸೇನ, ಪುತ್ರಸಹಿತನಾದ ಜರಾಸಂಧ, ಸುದಂಡ, ದಂಡ,

ಪೌಂಡ್ರಕೋ ವಾಸುದೇವಶ್ಚ ಭಗದತ್ತಶ್ಚ ವೀರ್ಯವಾನ್ ।
ಕಳಿಂಗಸ್ತಾಮ್ರಲಿಪ್ತಶ್ಚ ಪತ್ತನಾಧಿಪತಿರ್ಮಹಾನ್ ॥೧೧॥

ಪೌಂಡ್ರಕವಾಸುದೇವ, ಪರಾಕ್ರಮಶಾಲಿಯಾದ ಭಗದತ್ತ, ಕಳಿಂಗಾಧಿಪತಿಯಾದ ತಾಮ್ರಲಿಪ್ತ, ಪತ್ತನಾಧಿಪತಿಯಾದ ಮಹಾನ್

ಮದ್ರರಾಜಸ್ತಥಾ ಶಲ್ಯಃ ಸಹಪುತ್ರೈರ್ಮಹಾಬಲಃ ।
ರುಗ್ಮಾಂಗದೇನ ವೀರೇಣ ತಥಾ ರುಗ್ಮರಥೇನ ಚ ॥೧೨॥

ಮಹಾಬಲನಾದ ತನ್ನ ಪುತ್ರರಾದ ರುಗ್ಮಾಂಗದ ಮತ್ತು ರುಗ್ಮರಥರಿಂದ ಕೂಡಿದ ಮದ್ರರಾಜನಾದ ಶಲ್ಯ

ಕೌರವ್ಯಃ ಸೋಮದತ್ತಶ್ಚ ಪುತ್ರಾಸ್ತ ಸ್ಯ ಮಹಾರಥಾಃ ।
ಸಮವೇತಾಸ್ತ್ರಯಃಶೂರಾ ಭೂರಿರ್ಭೂರಿಶ್ರವಾಃ ಶಲಃ ॥೧೩॥

ಕೌರವ್ಯನಾದ ಸೋಮದತ್ತ, ಮಹಾರಥರಾದ ಶೂರರಾದ ಅವನ ಮೂರು ಪುತ್ರರಾದ ಭೂರಿ, ಭೂರಿಶ್ರವ ಮತ್ತು ಶಲ

ಸುದಕ್ಷಿಣಶ್ಚ ಕಾಂಭೋಜೋ ದೃಢಧನ್ವಾ ಚ ಕೌರವಃ ।
ಬೃಹದ್ಬಲಃ ಸುಷೇಣಶ್ಚ ಶಿಬಿರೌಶೀನರಸ್ತಥಾ ॥೧೪॥

ಕಾಂಭೋಜಾಧಿಪತಿಯಾದ ಸುದಕ್ಷಿಣ, ದೃಢಧನುಸ್ಸನ್ನು ಹೊಂದಿದ ಬೃಹದ್ಬಲ, ಸುಷೇಣ, ಔಶೀನರನಾದ ಶಿಬಿ (ಶಿವಿ)

ಪಾಂಡ್ಯಕೇರಳಚೋಳೇಂದ್ರಾಸ್ತ್ರಯಸ್ತ್ರೇತಾಗ್ನಯೋ ಯಥಾ ।
ಆಸನೇಷು ವಿರಾಜಂತೇ ಆಶಾಮಾಗಸ್ಯಮಾಶ್ರಿತಾಃ ॥೧೫॥

ಆಗ್ನೇಯ ದಿಕ್ಕಿನಲ್ಲಿ ಆಸನದಲ್ಲಿ ವಿರಾಜಿಸುವ ಮೂರು ಅಗ್ನಿಗಳಂತಿರುವ ಪಾಂಡ್ಯ, ಕೇರಳ, ಚೋಳ ರಾಜರು

ಸಂಕರ್ಷಣೋ ರೌಹಿಣೇಯೋ ವಾಸುದೇವಶ್ಚ ವೀರ್ಯವಾನ್ ।
ಸಾಂಬಶ್ಚ ಚಾರುದೇಷ್ಣಶ್ಚ ಸಾರಣೋಽಥ ಗದಸ್ತಥಾ ॥೧೬॥

ರೋಹಿಣಿಯ ಪುತ್ರನಾದ ಬಲರಾಮ, ಪರಾಕ್ರಮಶಾಲಿಯಾದ ಕೃಷ್ಣ ಸಾಂಬ, ಚಾರುದೇಷ್ಣ, ಸಾರಣ, ಗದ

ಅಕ್ರೂರಃ ಸಾತ್ವಿಕಶ್ಚೈವ ಯುಯುಧಾನಶ್ಚ ಸಾತ್ಯಕಿಃ ।
ಕೃತವರ್ಮಾ ಚ ಹಾರ್ದಿಕ್ಯಃ ಪೃಥುರ್ವಿಪೃಥುರೇವ ಚ ॥೧೭॥

ಅಕ್ರೂರ, ಸಾತ್ವಿಕ, ಯುಯುಧಾನ, ಸಾತ್ಯಕಿ, ಹೃದಿಕನ ಪುತ್ರನಾದ ಕೃತವರ್ಮ, ಪೃಥು, ವಿಪೃಥು

ವಿದೂರಥಶ್ಚ ಕಣ್ವಶ್ಚ ಸಮೀಕಃ ಸಾರಿಮೇಜಯಃ ।
ವೀರೋ ಧನಪತಿಶ್ಚೈವ ಬಾಹ್ಲಿಕಾಂಗಾರಕಸ್ತಥಾ ।
ಉಶೀನರಶ್ಚ ವಿಕ್ರಾಂತೋ ವೃಷ್ಣಯಸ್ತೇ ಪ್ರಕೀರ್ತಿತಾಃ ॥೧೮॥

ವಿದೂರಥ, ಕಣ್ವ, ಸಮೀಕ, ಸಾರಿಮೇಜಯ, ಧನಪತಿ, ಬಾಹ್ಲೀಕ ದೇಶದ ಅಂಗಾರಕ, ಪರಾಕ್ರಮಶಾಲಿಯಾದ ಉಶೀನರ, ಈ ಎಲ್ಲಾ ವೃಷ್ಣಿಗಳೂ ಬಂದಿದ್ದಾರೆ.

ಭಗೀರಥೋ ಬೃಹತ್ಕ್ಷತ್ರಃ ಸೈಂಧವಶ್ಚ ಬೃಹದ್ರಥಃ ।
ಜಯದ್ರಥೋ ಬಾಹ್ಲಿಕಶ್ಚ ಶ್ರುತಾಯುರಥ ವೀರ್ಯವಾನ್ ।
ಉಲ್ಮುಕಃ ಕೈತವೋ ರಾಜಾ ಚಿತ್ರಾಂಗದಶುಭಾಂಗದೌ ॥೧೯॥

ಭಗೀರಥ, ಬೃಹತ್ಕ್ಷತ್ರ, ಬೃಹದ್ರಥ, ಜಯದ್ರಥ, ಬಾಹ್ಲೀಕ, ಪರಾಕ್ರಮಶಾಲಿಯಾದ ಶ್ರುತಾಯು, ಉಲ್ಮುಕ, ಕೈತವ, ಚಿತ್ರಾಂಗದ, ಶುಭಾಂಗದರು,

ವತ್ಸರಾಜಶ್ಚ ಧೃತಿಮಾನ್ ಕೋಸಲಾಧಿಪತಿರ್ಮಹಾನ್ ।
ಕರ್ಣಶ್ಚ ಸಹ ಪುತ್ರೇಣ ವೃಷಸೇನಶ್ಚ ವೀರ್ಯವಾನ್ ॥೨೦॥

ವತ್ಸರಾಜನಾದ ಧೃತಿಮಾನ್, ಕೋಸಲಾಧಿಪತಿಯಾದ ಮಹಾನ್, ಪುತ್ರಸಹಿತನಾದ ಕರ್ಣ, ಪರಾಕ್ರಮಶಾಲಿಯಾದ ವೃಷಸೇನ,

ಬೃಹದ್ಬಲಶ್ಚ ಬಲವಾನ್ ರಾಜಾ ಚೈವಾಥ ದುರ್ಜಯಃ ।
ದಮಘೋಷಾತ್ಮಜಶ್ಚೈವ ಶಿಶುಪಾಲೋ ಮಹಾಬಲಃ ॥೨೧॥

ಚೇದೀನಾಮಧಿಪೋ ವೀರೋ ಬಲವಾನಂತಕೋಪಮಃ ।
ಏತೇ ಚಾನ್ಯೇ ಚ ಬಹವೋ ನಾನಾಜನಪದೇಶ್ವರಾಃ ॥೨೨॥

ಬಲಿಷ್ಠನಾದ ಬೃಹದ್ಬಲ, ರಾಜನಾದ ದುರ್ಜಯ, ಮಹಾಬಲನಾದ ದಮಘೋಷನ ಮಗನಾದ ಯಮನಂತಿರುವ ಚೇದಿರಾಜನಾದ, ವೀರನಾದ ಶಿಶುಪಾಲ, ಇವರೂ ಮತ್ತು ಇನ್ನೂ ಅನೇಕ ರಾಜರೂ ಮತ್ತು ಭೂಮಿಯಲ್ಲಿ ಪ್ರಸಿದ್ಧರಾದ ಅನೇಕ ಕ್ಷತ್ರಿಯರೂ ನಿನ್ನ ಸಲುವಾಗಿ ಬಂದಿದ್ದಾರೆ. (ವೃಷ್ಣ್ಯಂಧಕರು ಕೃಷ್ಣನ ಆದೇಶದಂತೆ ಸ್ವಯಂವರವನ್ನು ನೋಡುವುದಕ್ಕೆ ಮಾತ್ರ ಬಂದಿದ್ದಾರೆ. ಅವರು ಧನುಸ್ಸನ್ನು ಮುಟ್ಟುವುದೂ ಇಲ್ಲ. ಉಳಿದ ರಾಜರು ಮೊದಲಾದವರು ದ್ರೌಪದಿಯನ್ನು ಪಡೆಯಲು ಬಂದಿದ್ದಾರೆ)

ತ್ವದರ್ಥಮಾಗತಾ ಭದ್ರೇ ಕ್ಷತ್ರಿಯಾಃ ಪ್ರಥಿತಾ ಭುವಿ ।
ಏತೇ ವಿಧ್ಯಂತಿ ವಿಕ್ರಾಂತಾಸ್ತ್ವದರ್ಥೇ ಲಕ್ಷಮುತ್ತಮಮ್ ।
ವೇದ್ಧಾ ತು ಯೋ ಭವೇದೇಷಾಂ ತಂ ವರಂ ವರಯ ಸ್ವಯಮ್॥೨೩॥

ಈ ವಿಕ್ರಾಮಶಾಲಿಗಳಾದ ಪುರುಷರು ನಿನ್ನ ಸಲುವಾಗಿ ಲಕ್ಷ್ಯವೇಧವನ್ನು ಮಾಡುತ್ತಾರೆ. ಯಾವನು ಲಕ್ಷ್ಯವೇಧವನ್ನು ಮಾಡುತ್ತಾನೆಯೋ ನೀನು ಅವನನ್ನು ಸ್ವಯಂವರದಲ್ಲಿ ವರಿಸು.

ವೈಶಂಪಾಯನಃ

ತೇऽಲಂಕೃತಾಃ ಕುಂಡಲಿನೋ ಯುವಾನಃ
ಪರಸ್ಪರಂ ಸ್ಪರ್ಧಮಾನಾಃ ಸಮೇತಾಃ ।
ಅಸ್ತ್ರಂ ಬಲಂ ಚಾತ್ಮನಿ ಮನ್ಯಮಾನಾಃ
ಸರ್ವೇ ಸಮುತ್ಪೇತುರಹಂಕೃತೇನ ॥೨೪॥

ಅಲಂಕೃತರೂ, ಕುಂಡಲಗಳನ್ನು ಧರಿಸಿದವರೂ, ಆದ ಅವರು ಪರಸ್ಪರ ಸ್ಪರ್ಧೆಯಿಂದ ಅಲ್ಲಿ ಸನ್ನಿಹಿತರಾಗಿ ತಮ್ಮಲ್ಲಿ ಶ್ರೇಷ್ಠವಾದ ಅಸ್ತ್ರವೂ ಬಲವೂ ಇದೆ ಎಂದು ತಿಳಿದು ಅಹಂಕಾರದಿಂದ ಎಲ್ಲರೂ ಮೇಲೆದ್ದರು.

ವೀರ್ಯೇಣ ರೂಪೇಣ ಕುಲೇನ ಚೈವ
ಶೀಲೇನ ಚೈವಾಥ ಚ ಯೌವನೇನ ।
ಸಮೃದ್ಧದರ್ಪಾ ಮದವೇಗಭಿನ್ನಾ
ಮತ್ತಾ ಯಥಾ ಹೈಮವತಾ ಗಜೇಂದ್ರಾಃ ॥೨೫॥

ವೀರ್ಯದಿಂದಲೂ, ರೂಪದಿಂದಲೂ, ಕುಲದಿಂದಲೂ, ಶೀಲದಿಂದಲೂ, ಯೌವನದಿಂದಲೂ, ಬಹಳ ದರ್ಪದಿಂದಲೂ ಕೂಡಿದವರಾಗಿ, ಕಾಮವೇಗದಿಂದ ತುಂಬಿದವರಾಗಿ ಹಿಮಾಲಯದ ಮದಿಸಿದ ಗಜಗಳಂತೆ (ಮೇಲೆದ್ದರು)

ಪರಸ್ಪರಂ ಸ್ಪರ್ಧಯಾ ವೀಕ್ಷಮಾಣಾಃ ।
ಸಂಕಲ್ಪಜೇನಾಭಿಪರಿಪ್ಲುತಾಂಗಾಃ ।
ಕೃಷ್ಣಾ ಮಮೈವೇತ್ಯಭಿಭಾಷಮಾಣಾ
ನೃಪಾಃ ಸಮುತ್ಪೇತುರಥಾಸನೇಭ್ಯಃ ॥೨೬॥

ಒಬ್ಬರನ್ನೊಬ್ಬರು ಸ್ಪರ್ಧೆಯಿಂದ ನೋಡುತ್ತಾ ಕಾಮದಿಂದ ತುಂಬಿದ ಸರ್ವಶರೀರವುಳ್ಳವರಾಗಿ ದ್ರೌಪದಿಯು ನನಗೇ ಸೇರುವಳು ಎಂದು ಹೇಳುತ್ತಾ ರಾಜರು ತಮ್ಮ ಆಸನಗಳಿಂದ ಎದ್ದರು.

ತೇ ಕ್ಷತ್ರಿಯಾ ರಂಗಗತಾಃ ಸಮೇತಾ
ಜಿಹೀರ್ಷಮಾಣಾ ದ್ರುಪದಾತ್ಮಜಾಂ ತಾಮ್ ।
ಚಕಾಶಿರೇ ಪರ್ವತರಾಜಕನ್ಯಾಮ್
ಉಮಾಂ ಯಥಾ ದೇವಗಣಾಃ ಸಮೇತಾಃ ॥೨೭॥

ದ್ರೌಪದಿಯನ್ನು ಪಡೆಯುವ ಸಲುವಾಗಿ ರಂಗವನ್ನು ಪ್ರವೇಶಿಸಿದ ಆ ಕ್ಷತ್ರಿಯರು ಗಿರಿಜಾಸ್ವಯಂವರದಲ್ಲಿ ಒಟ್ಟಾಗಿ ಸೇರಿದ ದೇವತೆಗಳ ಸಮೂಹದಂತೆ ಶೋಭಿಸಿದರು.

ಕಂದರ್ಪಬಾಣಾಭಿನಿಪೀಡಿತಾಂಗಾಃ
ಕೃಷ್ಣಾಗತೈಸ್ತದ್ಧೃದಯೈರ್ನರೇಂದ್ರಾಃ ।
ರಂಗಾವತೀರ್ಣಾ ದ್ರುಪದಾತ್ಮಜಾರ್ಥಂ
ದ್ವೇಷಂ ಹಿ ಚಕ್ರುಃ ಸುಹೃದೋಽಪಿ ಸರ್ವೇ ॥೨೮॥

ಮನ್ಮಥನ ಬಾಣದಿಂದ ವಿದ್ಧರಾದ ಅವರು ದ್ರೌಪದಿಯನ್ನು ಪಡೆಯುವ ಸಲುವಾಗಿ ಅವಳಲ್ಲೇ ಆಸಕ್ತವಾದ ಮನಸ್ಸನ್ನು ಹೊಂದಿ ರಂಗವನ್ನು ಪ್ರವೇಶಿಸಿ ಮಿತ್ರರಾದವರೂ ಕೂಡ ಪರಸ್ಪರ ದ್ವೇಷವನ್ನು ಮಾಡಿದರು.

ಅಥಾಯಯುರ್ದೇವಗಣಾ ವಿಮಾನೈ
ರುದ್ರಾದಿತ್ಯಾ ವಸವೋಽಥಾಶ್ವಿನೌ ಚ
ಸಾಧ್ಯಾಶ್ಚ ಸರ್ವೇ ಮರುತಸ್ತಥೈವ
ಧರ್ಮಂ ಪುರಸ್ಕೃತ್ಯ ಧನೇಶ್ವರಂ ಚ ॥೨೯॥

ಅನಂತರ ದೇವತೆಗಳು ಗಣಗಳಲ್ಲಿ ತಮ್ಮ ವಿಮಾನಗಳಲ್ಲಿ ಅಲ್ಲಿಗೆ ಬಂದರು. ರುದ್ರರೂ, ಆದಿತ್ಯರೂ, ವಸುಗಳೂ, ಅಶ್ವಿನಿಗಳೂ, ಯಮ ಮತ್ತು ಕುಬೇರರನ್ನು ಮುಂದೆ ಮಾಡಿಕೊಂಡು ಸಾಧ್ಯರೂ ಮತ್ತು ಮರುತ್ತುಗಳೂ (ಎಲ್ಲರೂ) ಬಂದರು.

ದೈತ್ಯಾಃ ಸುಪರ್ಣಾಶ್ಚ ಮಹೋರಗಾಶ್ಚ
ದೇವರ್ಷಯೋ ಗುಹ್ಯಕಾಶ್ಚಾರಣಾಶ್ಚ ।
ವಿಶ್ವಾವಸುರ್ನಾರದಃ ಪರ್ವತಶ್ಚ
ಗಂಧರ್ವಮುಖ್ಯಾಃ ಸಹಿತಾಽಪ್ಸರೋಭಿಃ ॥೩೦॥

ದೈತ್ಯರೂ, ಪಕ್ಷಿಗಳೂ, ಮಹಾಸರ್ಪಗಳೂ, ದೇವರ್ಷಿಗಳೂ, ಗುಹ್ಯಕರೂ, ಚಾರಣರೂ, ವಿಶ್ವಾವಸು, ನಾರದ, ಪರ್ವತ, ಅಪ್ಸರೆಯರಿಂದ ಸೇವಿತರಾದ ಗಂಧರ್ವಶ್ರೇಷ್ಠರೂ (ಎಲ್ಲರೂ ಬಂದರು)

ಹಲಾಯುಧಸ್ತತ್ರ ಚ ಕೇಶವಶ್ಚ
ವೃಷ್ಣ್ಯಂಧಕಾಶ್ಚೈವ ಯಥಾಪ್ರಧಾನಾಃ ।
ಪ್ರೇಕ್ಷಾಂಬಭೂವುರ್ಯದುಪುಂಗವಾಸ್ತೇ
ಸ್ಥಿತಾ ಹಿ ಕೃಷ್ಣಸ್ಯ ಮತೇ ಬಭೂವುಃ ॥೩೧॥

ಅಲ್ಲಿ ಬಲರಾಮ, ಕೃಷ್ಣ ವೃಷ್ಣಿಗಳೂ, ಅಂಧಕರೂ ಮತ್ತು ವೃಷ್ಣ್ಯಂಧಕರಲ್ಲಿ ಹಿರಿಯರಾದವರೂ, ಯದುಪುಂಗವರೂ, ಎಲ್ಲರೂ ಕೃಷ್ಣನ ಅಭಿಪ್ರಾಯವನ್ನು ಅನುಸರಿಸಿದವರಾಗಿ ರಂಗದಲ್ಲಿ ಕುಳಿತುಕೊಂಡು ಕೇವಲ ಪ್ರೇಕ್ಷಕರಾದರು.

ದೃಷ್ಟ್ವಾ ಹಿ ತಾನ್ ಮತ್ತಗಜೇಂದ್ರರೂಪಾನ್
ಪದ್ಮಾಭಿಪನ್ನಾನಿವ ವಾರಣೇಂದ್ರಾನ್ ।
ಭಸ್ಮಾವೃತಾಂಗಾನಿವ ಹವ್ಯವಾಹಾನ್
ಪಾರ್ಥಾನ್ ಪ್ರದಧ್ಯೌ ಸ ಯದುಪ್ರವೀರಃ ॥೩೨॥

ಯದುವೀರನಾದ ಕೃಷ್ಣನು ಪದ್ಮವನ್ನು ಪಡೆಯುವ ಸಲುವಾಗಿ ಬಂದ ಮದಿಸಿದ ಗಜಗಳಂತಿರುವ ಹಾಗೆಯೇ ಭಸ್ಮಾವೃತವಾದ ಅಗ್ನಿಯಂತೆ ಇರುವ ಪಾಂಡವರನ್ನು ನೋಡಿ ಮನಸ್ಸಿನಲ್ಲಿ ಚಿಂತಿಸಿದನು.

ಶಶಂಸ ರಾಮಾಯ ಯುಧಿಷ್ಠಿರಂ ಚ
ಭೀಮಂ ಸ ಜಿಷ್ಣುಂ ಯಮಜೌ ಚ ವೀರೌ ।
ಶನೈಶ್ಶನೈಸ್ತಾಂಶ್ಚ ನಿರೀಕ್ಷ್ಯ ರಾಮೋ
ಜನಾರ್ದನಂ ಪ್ರೀತಮನಾ ದದರ್ಶ ॥೩೩॥

ಕೃಷ್ಣನು ಬಲರಾಮನಿಗೆ ಯುಧಿಷ್ಠಿರನನ್ನೂ, ಭೀಮನನ್ನೂ ಅರ್ಜುನನ್ನೂ ವೀರರಾದ ನಕುಲ-ಸಹದೇವರನ್ನೂ ದೂರದಿಂದಲೇ ತೋರಿಸಿ ಪರಿಚಯಿಸಿದನು. ಬಲರಾಮನು ನಿಧಾನವಾಗಿ ಅವರನ್ನು ನೋಡಿ ಅನಂತರ ಕೃಷ್ಣನ ಮುಖವನ್ನು ನೋಡಿ ತನ್ನ ಸಂತೋಷವನ್ನು ವ್ಯಕ್ತಪಡಿಸಿದನು.

ಅನ್ಯೇ ತು ವೀರಾ ನೃಪಪುತ್ರಪೌತ್ರಾಃ
ಕೃಷ್ಣಾಗತೈರ್ನೇತ್ರಮನಸ್ಸ್ವಭಾವೈಃ
ವ್ಯಾಯಚ್ಛಮಾನಾ ದದೃಶುರ್ನ ತಾನ್ ವೈ
ಸಂದಷ್ಟದಂತಚ್ಛದತಾಮ್ರವಕ್ತ್ರಾಃ ॥೩೪॥

ಉಳಿದ ವೀರರಾದ, ದ್ರೌಪದಿಯಲ್ಲೇ ನೆಟ್ಟ ಮನಸ್ಸು ಮತ್ತು ದೃಷ್ಟಿಯುಳ್ಳ ರಾಜರು ಮತ್ತು ರಾಜಪುತ್ರರು ಹಲ್ಲುಮುಡಿಯನ್ನು ಕಚ್ಚಿಕೆಂಪಾದ ಮುಖವುಳ್ಳವರಾಗಿ ಬಹಳವಾಗಿ ದಕ್ಷಿಣೆಯನ್ನು ಕೊಡುತ್ತಾ ಪಾಂಡವರನ್ನು ಗಮನಿಸಲಿಲ್ಲ.

ತಥೈವ ವೀರಾಃ ಪೃಥುದೀರ್ಘಬಾಹವಃ
ಪಾರ್ಥಾ ಯಮೌ ಚೈವ ಮಹಾನುಭಾವೌ ।

ತಾಂ ದ್ರೌಪದೀಂ ಪ್ರೇಕ್ಷ್ಯ ತದಾ ಸ್ಮ ಸರ್ವೇ
ಕಂದರ್ಪಬಾಣಾಭಿಹತಾ ಬಭೂವುಃ ॥೩೫॥

ಹಾಗೆಯೇ, ಪೃಥುದೀರ್ಘಬಾಹುಗಳುಳ್ಳ ವೀರರಾದ ಕುಂತಿಯ ಮತ್ತು ಮಾದ್ರಿಯ ಮಕ್ಕಳಾದ ಮಹಾನುಭಾವರಾದ ಆ ಪಾಂಡವರೂ ಸಹ ದ್ರೌಪದಿಯನ್ನು ನೋಡಿ ಎಲ್ಲರೂ ಕಾಮಬಾಣವಶರಾದರು.

ದೇವರ್ಷಿಗಂಧರ್ವಸಮಾಕುಲಂ ತತ್
ಸುಪರ್ಣನಾಗಾಸುರಯಕ್ಷಜುಷ್ಟಮ್ ।
ದಿವ್ಯೇನ ಗಂಧೇನ ಸಮಾಕುಲಂ ಚ
ದಿವ್ಯೈಶ್ಚ ಮಾಲ್ಯೈರವಕೀರ್ಯಮಾಣಮ್ ।
ಸಮಾಹತೈರ್ದುಂದುಭಿಭಿಶ್ಚ ರಾಜನ್
ರರಾಜ ತತ್ ಸಂಕುಲಮಂತರಿಕ್ಷಮ್ ॥೩೬॥

ರಾಜನೇ, ದೇವರ್ಷಿ ಗಂಧರ್ವರಿಂದ ತುಂಬಿದ, ಸುಪರ್ಣ, ನಾಗ ಮತ್ತು ಯಕ್ಷರಿಂದ ತುಂಬಿದ, ದಿವ್ಯಗಂಧದಿಂದಲೂ ದಿವ್ಯ ಮಾಲೆಗಳಿಂದಲೂ, ಎಲ್ಲ ಕಡೆಗಳಲ್ಲಿಯೂ ಶೋಭಿಸುವ, ದುಂದುಭಿಯ ನಾದಗಳಿಂದ ಕೂಡಿದ, ಅಂತರಿಕ್ಷವು ಬಹಳ ನಿಬಿಡವಾಗಿ ಪ್ರಕಾಶಿಸಿತು.

ವಿಮಾನಸಂಬಾಧಮಭೂತ್ ಸಮಂತಾತ್ ।
ಸವೇಣುವೀಣಾಪಣವಾನುವಾದಮ್ ।
ಸಮಾಜವಾಟೋಪರಿ ಸಂಸ್ಥಿತಾನಾಂ
ಮೇಘೈಃ ಸಮಂತಾದಿವ ಗರ್ಜಮಾನೈಃ ।
ಸಕರ್ಣದುರ್ಯೋಧನಸಾಲ್ವಶಲ್ಯಾ
ದ್ರೋಣ್ಯಾದಯಶ್ಚೈವ ಸವೀರ್ಯವಂತಃ ॥೩೭॥

ಆ ಸಮಾಜವಾಟದ ಮೇಲೆ ಅಂತರಿಕ್ಷದಲ್ಲಿ ಇದ್ದ ವಿಮಾನಗಳು ವೇಣುವೀಣಾಪಣವಧ್ವನಿಗಳಿಂದ ಕೂಡಿ ಎಲ್ಲ ಕಡೆಯೂ ಗರ್ಜಿಸುವ ಮೇಘಗಳಿಂದಲೋ ಎಂಬಂತೆ ವಿಮಾನಗಳಿಗೆ ಸಂಮರ್ದವುಂಟಾಯಿತು.

ಕಳಿಂಗವಂಗಾಧಿಪಪಾಂಸುಪೌಂಡ್ರಾ
ವಿದೇಹರಾಜೋಽಥ ವನಾಧಿಪಶ್ಚ ।
ಅನ್ಯೇ ಚ ನಾನಾನೃಪಪುತ್ರಪೌತ್ರಾ
ರಾಜಾಧಿಪಾಃ ಪಂಕಜಪತ್ರನೇತ್ರಾಃ ॥೩೮॥

ಕರ್ಣದುರ್ಯೋಧನಶಲ್ಯರೂ, ಪರಾಕ್ರಮಶಾಲಿಗಳಾದ ದ್ರೋಣಾದಿಗಳೂ, ಕಳಿಂಗ, ವಂಗ, ಪಾಂಸುಪೌಂಡ್ರ, ವಿದೇಹ ಮತ್ತು ವನಗಳ ಅಧಿಪತಿಗಳಾದ ರಾಜರೂ ಉಳಿದ ಪುತ್ರ ಪೌತ್ರರಿಂದ ಒಡಗೂಡಿದ ಪದ್ಮನೇತ್ರರಾದ ಅನೇಕ ರಾಜರೂ

ಕಿರೀಟಹಾರಾಂಗದಕಂಕಣಾದ್ಯೈ-
ರ್ವಿಭೂಷಿತಾಲಂಕೃತಬಾಹವಸ್ತೇ ।
ಸುರೂಪಿಣೋ ವಿಕ್ರಮಸತ್ವಯುಕ್ತಾ
ಬಲೇನ ದರ್ಪೇಣ ಚ ನರ್ದಮಾನಾಃ ॥೩೯॥

ಕಿರೀಟ, ಹಾರ, ಅಂಗದ, ಕಂಕಣ ಮೊದಲಾದವುಗಳಿಂದ ಅಲಂಕೃತವಾದ ಬಾಹುಗಳುಳ್ಳ ಒಳ್ಳೆಯ ರೂಪವನ್ನೂ, ವಿಕ್ರಮವನ್ನೂ, ಬಲವನ್ನೂ ಹೊಂದಿದವರಾಗಿ ಬಲದಿಂದಲೂ, ದರ್ಪದಿಂದಲೂ ಕೂಡಿದವರಾಗಿ ಗರ್ಜಿಸಿದರು.

ತತಸ್ತು ತೇ ರಾಜಗಣಾಃ ಕ್ರಮೇಣ
ಕೃಷ್ಣಾನಿಮಿತ್ತಂ ಚ ಸಮೀಹಮಾನಾಃ ।
ತತ್ಕಾರ್ಮುಕಂ ಸಂಹನನೋಪಪನ್ನಂ
ಸಜ್ಯಂ ನ ಶೇಕುಸ್ತರಸಾ ಹಿ ಕರ್ತುಮ್ ॥೪೦॥

ಅನಂತರ ಆ ರಾಜರುಗಳು ಒಬ್ಬೊಬ್ಬರಾಗಿ ಬಂದು ದ್ರೌಪದಿಯನ್ನು ಪಡೆಯುವ ಸಲುವಾಗಿ ವ್ಯಾಪಾರವನ್ನು ಮಾಡುತ್ತಾ ದೃಢವಾದ ಆ ಧನುಸ್ಸನ್ನು ತಮ್ಮ ಬಲದಿಂದ ಹೆದೆಯೇರಿಸಲಾರದೇ ಹೋದರು.

ತೇ ವಿಕ್ರಮಂತಃ ಸ್ಫುರತಾ ದೃಢೇನ
ನಿಪೀಡ್ಯಮಾನಾ ಧನುಷಾ ನರೇಂದ್ರಾಃ ।
ವಿವೇಷ್ಟಮಾನಾ ಧರಣೀತಲಸ್ಥಾ
ದೃಶ್ಯಂತ ತತ್ರ ಪ್ರತಿಭಗ್ನದರ್ಪಾಃ ॥೪೧॥

ಆ ರಾಜರು ಪ್ರಯತ್ನವನ್ನು ಮಾಡಿ ಧನುಸ್ಸಿನ ಒಂದು ಕೋಟಿಯಿಂದ ಹೊಡೆಯಲ್ಪಟ್ಟು ಭೂಮಿಯ ಮೇಲೆ ಬಿದ್ದು ಹೊರಳಾಡುತ್ತಾ ಭಗ್ನದರ್ಪರಾಗಿ ಅಲ್ಲಿ ಕಾಣುತ್ತಿದ್ದರು.

ಹಾಹಾಕೃತಂ ತದ್ಧನುಷಾ ದೃಢೇನ
ವಿಸ್ರಸ್ತನಾನಾಭರಣಾಂಬರಸ್ರಜಮ್ ।
ಕೃಷ್ಣಾನಿಮಿತ್ತಂ ಚ ನಿವೃತ್ತಭಾವಂ
ರಾಜ್ಞಾಂ ತದಾ ಮಂಡಲಮಾರ್ತ್ತಮಾಸೀತ್ ॥೪೨॥

ಆ ದೃಢವಾದ ಧನುಸ್ಸಿನ ಹೊಡೆತದಿಂದ ಬಡಿಯಲ್ಪಟ್ಟು ಅಸ್ತವ್ಯಸ್ತವಾದ ಮಾಲ್ಯಾಭರಣವನ್ನುಳ್ಳ ದ್ರೌಪದಿಯನ್ನು ಪಡೆಯಲು ಬಂದ ಆ ರಾಜಸಮೂಹದಲ್ಲಿ ಹಾಹಾಕಾರವುಂಟಾಗಿ ಅವರಿಗೆ ದ್ರೌಪದಿಯನ್ನು ಪಡೆಯುವ ಆಸೆಯು ದೂರವಾಯಿತು.

ಏವಂ ತೇಷು ನಿವೃತ್ತೇಷು ಕ್ಷತ್ರಿಯೇಷು ಸಮಂತತಃ ।
ಚೇದೀನಾಮಧಿಪೋ ವೀರೋ ಬಲವಾನಂತಕೋಪಮಃ ॥೪೩॥

ದಮಘೋಷಾತ್ಮಜೋ ವೀರಃ ಶಿಶುಪಾಲೋ ಮಹಾದ್ಯುತಿಃ ।
ತಮಪ್ಯಾರೋಪ್ಯಮಾಣಂ ತು ಮಾಷಮಾತ್ರೇऽಭ್ಯತಾಡಯತ್ ॥೪೪॥

ಹೀಗೆ ಆ ಕ್ಷತ್ರಿಯರೆಲ್ಲರೂ ರಂಗಮಧ್ಯದಿಂದ ಹಿಂದೆ ಬರುತ್ತಿರಲು ಅಂತಕನಂತೆ ಬಲಿಷ್ಠನಾದ, ದಮಘೋಷಸುತನಾದ, ಮಹಾಕಾಂತಿವಂತನಾದ ಚೇದಿಪತಿಯಾದ ಶಿಶುಪಾಲನು ಧನುಸ್ಸಿನ ಬಳಿಗೆ ಬಂದನು. ಹೆದೆಯೇರಿಸಲು ಧನುಸ್ಸನ್ನು ಬಗ್ಗಿಸುತ್ತಿರುವಾಗ ಒಂದು ಉದ್ದಿನಕಾಳಿನಷ್ಟು ಅಂತರವಿರುವಾಗ ಧನುಸ್ಸು ಅವನಿಗೂ ಹೊಡೆಯಿತು.

ತಾಡಿತಃ ಸ ಧನುಷ್ಕೋಟ್ಯಾ ಪಪಾತೋರ್ವ್ಯಾಂ ವಿಯನ್ಮುಖಃ ॥೪೫॥

ಧನುಷ್ಕೋಟಿಯಿಂದ ತಾಡಿತನಾದ ಅವನು ಭೂಮಿಯ ಮೇಲೆ ಆಕಾಶದ ಕಡೆ ಮುಖವನ್ನು ಮಾಡಿಕೊಂಡು ಬಿದ್ದನು.

ತತೋ ರಾಜಾ ಜರಾಸಂಧೋ ಮಹಾವೀರ್ಯೋ ಮಹಾಬಲಃ ।
ಕಂಬುಗ್ರೀವಃ ಪೃಥುವ್ಯಂಸೋ ಮತ್ತವಾರಣವಿಕ್ರಮಃ ॥೪೬॥

ಮತ್ತವಾರಣತಾಮ್ರಾಕ್ಷೋ ಮತ್ತವಾರಣವೇಗವಾನ್ ।
ಧನುಷೋಽಭ್ಯಾಶಮಾಗತ್ಯ ತಸ್ಥೌ ಗಿರಿರಿವಾಚಲಃ ॥೪೭॥

ಅನಂತರ ಮಹಾವೀರ್ಯನೂ, ಮಹಾಬಲನೂ, ಕಂಬುಗ್ರೀವನೂ, ಉನ್ನತ ಭುಜಗಳುಳ್ಳವನೂ, ಮತ್ತಗಜವಿಕ್ರಮವುಳ್ಳವನೂ , ಮತ್ತಗಜದಂತೆ ಕೆಂಪಾದ ಕಣ್ಣುಗಳುಳ್ಳವನೂ, ಮತ್ತಗಜದ ವೇಗವುಳ್ಳವನೂ ಆದ ಜರಾಸಂಧನು ಧನುಸ್ಸಿನ ಸಮೀಪಕ್ಕೆ ಬಂದು ಪರ್ವತದಂತೆ ನಿಂತನು.

ತಮಪ್ಯಾರೋಪ್ಯಮಾಣಂ ತು ಸರ್ಷಮಾತ್ರೇಽಭ್ಯತಾಡಯತ್ ।
ಧನುಷಾ ವಿಧ್ಯಮಾನಸ್ತು ಜಾನುಭ್ಯಾಮಗಮನ್ಮಹೀಮ್ ।
ತತ ಉತ್ಥಾಯ ರಾಜಾ ಸ ಸ್ವರಾಷ್ಟ್ರಮಭಿಜಗ್ಮಿವಾನ್ ॥೪೮॥

ಧನುಸ್ಸನ್ನು ಹೆದೆಯೇರಿಸುವಾಗ ಒಂದು ಸಾಸಿವೆಯ ಕಾಳಿನಷ್ಟು ಮಾತ್ರ ಅಂತರವು ಉಳಿದಿರಲು ಅವನಿಗೂ ಧನುಸ್ಸು ಹೊಡೆಯಿತು. ಅವನು ಮಂಡಿಗಳ ಮೇಲೆ ನೆಲಕ್ಕೆ ಬಿದ್ದನು. ಅಲ್ಲಿಂದ ಎದ್ದು ತನ್ನ ರಾಷ್ಟ್ರಕ್ಕೆ ಹಿಂದಿರುಗಿದನು.

ತತಃ ಶಲ್ಯೋ ಮಹಾವೀರ್ಯೋ ಮದ್ರರಾಜೋ ಮಹಾಬಲಃ ।
ತಮಥಾರೋಪ್ಯಮಾಣಂ ತು ಮುದ್ಗಮಾತ್ರೇಽಭ್ಯತಾಡಯತ್ ॥೪೯॥

ಅನಂತರ ಮಹಾವೀರ್ಯನೂ, ಮಹಾಬಲನೂ ಆದ ಮದ್ರರಾಜನಾದ ಶಲ್ಯನು ಬಂದನು. ಧನುಸ್ಸನ್ನು ಬಗ್ಗಿಸುವಾಗ ಒಂದು ಹೆಸರುಕಾಳಿನಷ್ಟು ಮಾತ್ರ ಅಂತರವು ಉಳಿದಿರಲು, ಅವನಿಗೂ ಧನುಸ್ಸು ಬಡಿಯಿತು.

ಸ ಪಪಾತ ಮಹೀಂ ರಂಗಾದರ್ಧಯೋಜನದೂರತಃ ।
ತಥೈವಾಗಾತ್ ಸ್ವಕಂ ರಾಜ್ಯಂ ಪಶ್ಚಾದನವಲೋಕಯನ್ ॥೫೦॥

ಅವನು ಅರ್ಧಯೋಜನ ದೂರದಲ್ಲಿ ಹೋಗಿ ಭೂಮಿಯ ಮೇಲೆ ಬಿದ್ದನು. ಅನಂತರ ಹಿಂದೆ ತಿರುಗಿ ನೋಡದೆ ತನ್ನ ರಾಜ್ಯಕ್ಕೆ ಹೊರಟು ಹೋದನು.

ತತೋ ದುರ್ಯೋಧನೋ ರಾಜಾ ಧಾರ್ತರಾಷ್ಟ್ರಃ ಪರಂತಪಃ ।
ಮಾನೀ ದೃಢಾಸ್ತ್ರಸಂಪನ್ನಃ ಸರ್ವೈಶ್ಚ ನೃಪಲಕ್ಷಣೈಃ ॥೫೧॥

ಉತ್ಥಿತಃ ಸಹಸಾ ತತ್ರ ಭ್ರಾತೃಮಧ್ಯೇ ಮಹಾಬಲಃ ।
ವಿಲೋಕ್ಯ ದ್ರೌಪದೀಂ ಹೃಷ್ಟೋ ಧನುಷೋಽಭ್ಯಾಶಮಾಗಮತ್ ॥೫೨॥

ಅನಂತರ ಪರಂತಪನೂ, ಮಾನಿಯೂ, ದೃಢಾಸ್ತ್ರವುಳ್ಳವನೂ, ಎಲ್ಲಾ ರಾಜಲಕ್ಷಣದಿಂದಲೂ ಕೂಡಿದವನೂ ಮಹಾಬಲನೂ ಆದ ದುರ್ಯೋಧನನು ತನ್ನ ಭ್ರಾತೃಗಳ ಸಮೂಹದಿಂದ ಮೇಲೆದ್ದನು. ಅವನು ದ್ರೌಪದಿಯನ್ನು ನೋಡಿ ಹರ್ಷದಿಂದ ಧನುಸ್ಸಿನ ಸಮೀಪಕ್ಕೆ ಬಂದನು.

★ (ಈ ಪ್ರಕರಣವು ತಾತ್ಪರ್ಯನಿರ್ಣಯದಲ್ಲಿಲ್ಲ).

ಸ ಬಭೌ ಧನುರಾದಾಯ ಶಕ್ರಶ್ಚಾಪಧರೋ ಯಥಾ ।
ಆರೋಪ್ಯಮಾಣಂ ತದ್ ರಾಜಾ ಧನುಷಾ ಬಲಿನಾ ತದಾ ॥೫೩॥

ಉತ್ತಾನಶಯ್ಯಮಪತದ್ ಅಂಗುಲ್ಯಂತರತಾಡಿತಃ ।
ಸ ಯಯೌ ತಾಡಿತಸ್ತೇನ ವ್ರೀಡನ್ನಿವ ನರಾಧಿಪಃ ॥೫೪॥

ಅವನು ಕೈಯಲ್ಲಿ ಧನುಸ್ಸನ್ನು ಹಿಡಿದು, ಧನುಸ್ಸನ್ನು ಹಿಡಿದ ಇಂದ್ರನಂತೆ ಶೋಭಿಸಿದನು. ಧನುಸ್ಸನ್ನು ಬಗ್ಗಿಸುವಾಗ ಇನ್ನೂ ಒಂದು ಬೆರಳಿನಷ್ಟು ಅಂತರವು ಉಳಿದಿರಲು ಆ ಧನುಸ್ಸು ಅವನಿಗೂ ಬಡಿದು ಅವನು ಉತ್ತಾನಶಾಯಿಯಾಗಿ (ಮುಖವನ್ನು ಮೇಲೆ ಮಾಡಿಕೊಂಡು) ಭೂಮಿಯ ಮೇಲೆ ಬಿದ್ದನು. ಧನುಸ್ಸಿನಿಂದ ತಾಡಿತನಾದ ಆ ರಾಜನು ನಾಚಿಕೆಯಿಂದಲೋ ಎಂಬಂತೆ ಹೊರಟು ಹೋದನು.

ತತೋ ವೈಕರ್ತನಃ ಕರ್ಣೋ ವೃಷಾ ವೈ ಸೂತನಂದನಃ ।
ಧನುರಭ್ಯಾಶಮಾಗಮ್ಯ ತೋಲಯಾಮಾಸ ತದ್ಧನುಃ ।
ತಂ ಚಾಪ್ಯರೋಪ್ಯಮಾಣಂ ತು ರೋಮಮಾತ್ರೇಽಭ್ಯತಾಡಯತ್ ॥

ಅನಂತರ ಸೂತನಂದನನಾದ, ವೃಷನಾದ, ವೈಕರ್ತನನೂ ಆದ ಕರ್ಣನು ಧನುಸ್ಸಿನ ಸಮೀಪಕ್ಕೆ ಬಂದು ಧನುಸ್ಸನ್ನು ಕೈಯಲ್ಲಿ ಹಿಡಿದು ಅದನ್ನು ಓಲಾಡಿಸಿದನು.

ಧನುಸ್ಸನ್ನು ಬಗ್ಗಿಸುವಾಗ ಒಂದು ರೋಮಮಾತ್ರದಷ್ಟೇ ಅಂತರವು ಉಳಿದಿರಲು ಅವನಿಗೂ ಧನುಸ್ಸು ಬಡಿಯಿತು.

ತ್ರೈಲೋಕ್ಯವಿಜಯೀ ಕರ್ಣಃ ಸತ್ವೇ ತ್ರೈಲೋಕ್ಯವಿಶ್ರುತಃ ।
ಧನುಷಾ ಸೋಽಪಿ ನಿರ್ಧೂತ ಇತಿ ಸರ್ವೇ ಭಯಾಕುಲಾಃ ॥೫೬॥

ತ್ರೈಲೋಕ್ಯವಿಜಯಿಯೂ, ಬಲದಲ್ಲಿ ಮೂರು ಲೋಕದಲ್ಲಿಯೂ ವಿಶ್ರುತನೂ ಆದ ಕರ್ಣನೂ ಸಹ ಧನುಸ್ಸಿನಿಂದ ತಾಡಿತನಾದುದನ್ನು ನೋಡಿ ಎಲ್ಲರೂ ಭಯಗ್ರಸ್ತರಾದರು.

ಏವಂ ಕರ್ಣೇ ವಿನಿರ್ಧೂತೇ ಧನುಷಾಽನ್ಯೇ ನೃಪೋತ್ತಮಾಃ ।
ಚಕ್ಷುರ್ಭಿರಪಿ ನಾಪಶ್ಯನ್ ವಿನಮ್ರಮುಖಪಂಕಜಾಃ ॥೫೭॥

ದೃಷ್ಟ್ವಾ ಕರ್ಣಂ ವಿನಿರ್ಧೂತಂ ಲೋಕವೀರಾ ನೃಪೋತ್ತಮಾಃ ।
ನಿರಾಶಾ ಧನುಷೋದ್ದಾರೇ ದ್ರೌಪದೀಸಂಗಮೇಽಪಿ ಚ ॥೫೮॥

ಕರ್ಣನು ನಿವೃತ್ತನಾದ ಮೇಲೆ ಭಯಾಕುಲರಾದ ನೃಪೋತ್ತಮರು ಮುಖಗಳನ್ನು ತಗ್ಗಿಸಿ ತಮ್ಮ ಕಣ್ಣುಗಳಿಂದ ಆ ಧನುಸ್ಸನ್ನು ನೋಡದೆ ಕುಳಿತರು. ಕರ್ಣನು ತಿರಸ್ಕೃತನಾದುದನ್ನು ನೋಡಿ ಲೋಕವೀರರಾದ ನೃಪೋತ್ತಮರು ಧನುಸ್ಸನ್ನು ಎತ್ತುವ ವಿಷಯದಲ್ಲಿಯೂ ಮತ್ತು ದ್ರೌಪದಿಯನ್ನು ಪಡೆಯುವ ವಿಷಯದಲ್ಲಿಯೂ ನಿರಾಶರಾದರು.

ತಸ್ಮಿಂಸ್ತು ಸಂಭ್ರಾಂತಜನೇ ಸಮಾಜೇ
ನಿಕ್ಷಿಪ್ತಶಸ್ತ್ರೇಷು ಜನಾಧಿಪೇಷು ।
ಕುಂತೀಸುತೋ ಜಿಷ್ಣುರಿಯೇಷ ಕರ್ತುಂ
ಸಜ್ಯಂ ಧನುಸ್ತತ್ ಸಶರಂ ಚ ವೀರಃ ॥೫೯॥

ಆ ಸಮಾಜದಲ್ಲಿ ಎಲ್ಲ ಜನರೂ ದಿಗ್ಭ್ರಾಂತರಾಗಿರಲು, ಎಲ್ಲ ರಾಜರೂ ತಮ್ಮ ಶಸ್ತ್ರಗಳನ್ನು ಕೆಳಗೆ ಹಾಕಿ ಕುಳಿತಿರಲು, ಕುಂತೀಪುತ್ರನಾದ, ವೀರನಾದ ಅರ್ಜುನನು (ಭೀಮಸೇನನ ಅನುಜ್ಞೆಯನ್ನು ಪಡೆದು) ಬಾಣಗಳಿಂದ ಸಹಿತವಾಗಿದ್ದ ಆ ಧನುಸ್ಸನ್ನು ಸಜ್ಯವನ್ನಾಗಿ ಮಾಡಲು (ಹೆದೆಯೇರಿಸಲು) ಬಯಸಿದನು.

ತತೋ ವರಿಷ್ಠಃ ಸುರದಾನವಾನಾಮ್
ಉದಾರಧೀರ್ವೃಷ್ಣಿಕುಲಪ್ರವೀರಃ ।
ಜಹರ್ಷ ರಾಮೇಣ ಸ ಪೀಡ್ಯ ಹಸ್ತಂ
ಹಸ್ತಂ ಗತಾಂ ಪಾಂಡುಸುತಸ್ಯ ಮತ್ವಾ ॥೬೦॥

ಆಗ ಸುರಾಸುರಲೋಕದಲ್ಲಿ ಅತ್ಯಂತ ಶ್ರೇಷ್ಠನಾದ, ಉದಾರ ಬುದ್ಧಿಯುಳ್ಳ, ವೃಷ್ಣಿಕುಲವೀರನಾದ ಕೃಷ್ಣನು ಬಲರಾಮನ ಕೈಯನ್ನು ಹಿಡಿದು ಮೃದುವಾಗಿ ಪೀಡಿಸಿ ಅರ್ಜುನನು ದ್ರೌಪದಿಯನ್ನು ಪಡೆದನೆಂದು ತಿಳಿದು ಸಂತೋಷಪಟ್ಟನು.

ನ ಜಜ್ಞುರನ್ಯೇ ನೃಪವೀರಮುಖ್ಯಾಃ
ಸಂಛನ್ನರೂಪಾನಥ ಪಾಂಡುಪುತ್ರಾನ್ ।
ವಿನಾ ಹಿ ಭೀಷ್ಮಂ ಚ ಯದುಪ್ರವೀರೌ
ಧೌಮ್ಯಂ ಚ ಧರ್ಮಂ ಸಹ ಸೋದರಾಂಶ್ಚ ॥೬೧॥

ಆದರೆ ಭೀಷ್ಮರನ್ನೂ ಕೃಷ್ಣಬಲರಾಮರನ್ನೂ ಮತ್ತು ಧೌಮ್ಯರನ್ನೂ ಬಿಟ್ಟು ಉಳಿದ ಯಾವ ರಾಜರುಗಳೂ ಸಹ ಗುಪ್ತರೂಪದಲ್ಲಿದ್ದ ಪಾಂಡುಪುತ್ರರಾದ ಧರ್ಮರಾಜ ಮತ್ತು ಅವನ ಸೋದರರನ್ನು ಗುರುತಿಸಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಷಡಶೀತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಸ್ವಯಂವರಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ಎಂಭತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ತತ್ರಾರ್ಜುನಃ ಪವನಜಾತ್ ಪ್ರಿಯತೋಽಪ್ಯನುಜ್ಞಾ-
ಮಾದಾಯ ಕೇಶವಮಜಂ ಮನಸಾ ಪ್ರಣಮ್ಯ ।
ಕೃತ್ವಾಗುಣಾನ್ವಿತಮದೋ ಧನುರಶ್ರಮೇಣ
ಯಂತ್ರಾಂತರೇಣ ಶರೈರಧುನೋಚ್ಚ ಲಕ್ಷಮ್ ॥೧೩೧೧॥

ಅರ್ಜುನ ಲಕ್ಷ್ಯವೇಧಕ್ಕಾಗಿ ಪ್ರಿಯನಾದ ಭೀಮನಿಂದ ಅನುಜ್ಞೆ ಪಡೆದು ಶ್ರೀಕೃಷ್ಣನನ್ನೂ ಅನುಜ್ಞೆಗಾಗಿ ಮನಸಿನಿಂದ ನಮಿಸಿ ಅನಾಯಾಸವಾಗಿ ಬಿಲ್ಲಿಗೆ ಹೆದೆಯೇರಿಸಿ ಯಂತ್ರದ ಮಧ್ಯದಲ್ಲಿರುವ ತೂತಿನ ಮೂಲಕ ಲಕ್ಷ್ಯವನ್ನು ಐದೂ ಬಾಣಗಳಿಂದ ಹೊಡೆದ.

ಕೃಷ್ಣಾ ತದಾಸ್ಯ ವಿದಧೇ ನವಕಂಜಮಾಲಾಂ
ಮಧ್ಯೇ ಚ ತಾಂ ಪ್ರತಿವಿಧಾಯ ನರೇಂದ್ರಪುತ್ರೌ ।
ಭೀಮಾರ್ಜುನೌ ಯಯತುರಚ್ಯುತಮಾಭಿನಮ್ಯ
ಕ್ಷುಬ್ಧಂ ತದಾ ನೃಪವರಾಬ್ಧಿರಮಾವಧಾವತ್ ॥೧೩೨೧॥

ದ್ರೌಪದಿ ಆಗ ಹೊಸ ಕಮಲದ ಮಾಲೆಯನ್ನು ಅರ್ಜುನನ ಕೊರಳಲ್ಲಿ ಹಾಕಿದಳು. ಅವಳನ್ನು ಮಧ್ಯದಲ್ಲಿ ಮಾಡಿಕೊಂಡು ರಾಜಕುಮಾರರಾದ ಭೀಮಾರ್ಜುನರು ಕೃಷ್ಣನನ್ನು ನಮಿಸಿ ಹೊರಟರು. ಆಗ ಪ್ರಕ್ಷುಬ್ಧವಾದ ಸಮುದ್ರದಂತಿದ್ದ ರಾಜಶ್ರೇಷ್ಠರ ಸಮೂಹ ಭೀಮಾರ್ಜುನರ ಬಳಿಗೆ ಧಾವಿಸಿ ಬಂದಿತು.

★ ★ ★ ★

ನೂರ ಎಂಭತ್ತೇಳನೆಯ ಅಧ್ಯಾಯ

(ಬ್ರಾಹ್ಮಣರು ಅನೇಕ ರೀತಿಯಲ್ಲಿ ಮಾತನಾಡುತ್ತಿರಲು ಅರ್ಜುನನಿಂದ ಲಕ್ಷ್ಯವೇಧ, ಬ್ರಾಹ್ಮಣರ ಹರ್ಷ, ದ್ರೌಪದಿಯಿಂದ ಮಾಲಾರ್ಪಣೆ)

ವೈಶಂಪಾಯನಃ

ತದೋದತಿಷ್ಠದ್ ವಿಪ್ರಾಣಾಂ ಮಧ್ಯಾಜ್ಜಿಷ್ಣುರುದಾರಧೀಃ ।
ಉದಕ್ರೋಶನ್ ವಿಪ್ರಮುಖ್ಯಾ ವಿಧುನ್ವಂತೋಽಜಿನಾನಿ ವೈ ॥೧॥

ಆಗ ವಿಪ್ರರ ಸಮೂಹದ ಮಧ್ಯದಿಂದ ಉದಾರಬುದ್ಧಿಯುಳ್ಳ ಅರ್ಜುನನು ಎದ್ದನು. ಬ್ರಾಹ್ಮಣಶ್ರೇಷ್ಠರು ತಮ್ಮ ಕೃಷ್ಣಾಜಿನವನ್ನು ಕೊಡವುತ್ತಾ ಕೇಕೆ ಹಾಕಿದರು.

ದೃಷ್ಟ್ವಾ ಸಮುತ್ಥಿತಂ ಪಾರ್ಥಮಿಂದ್ರಕೇತುಸಮಪ್ರಭಮ್ ।
ಕೇಚಿದಾಸನ್ ವಿಮನಸಃ ಕೇಚಿದಾಸನ್ ಮುದಾಽನ್ವಿತಾಃ ॥೨॥

ಇಂದ್ರಧ್ವಜದ ಕಾಂತಿಯನ್ನು ಹೊಂದಿದ್ದ ಅರ್ಜುನನು ಎದ್ದುದನ್ನು ನೋಡಿ ಕೆಲವರಿಗೆ ಬೇಸರವಾಯಿತು. ಇನ್ನು ಕೆಲವರು ಹರ್ಷಪಟ್ಟರು.

ಆಹುಃ ಪರಸ್ಪರಂ ಕೇಚಿನ್ನಿಪುಣಾ ಬುದ್ಧಿಚಿಂತಕಾಃ ।
ಯತ್ ಕರ್ಣಶಲ್ಯಪ್ರಮುಖೈಃ ಪಾರ್ಥಿವೈರ್ಲೋಕವಿಶ್ರುತೈಃ ॥೩॥

ನಾನತಂ ಬಲವದ್ಭಿರ್ಹಿ ಧನುರ್ವೇದಪರಾಯಣೈಃ ।
ತತ್ಕಥಂ ತ್ವಕೃತಾಸ್ತ್ರೇಣ ಪ್ರಾಣತೋ ದುರ್ಬಲೀಯಸಾ ॥೪॥

ದ್ವಿಜಮಾತ್ರೇಣ ಶಕ್ಯಂ ಹಿ ಸಜ್ಯಂ ಕರ್ತುಂ ಧನುರ್ದ್ವಿಜಾಃ ।
ಸಜ್ಯಂ ಚೇತ್ ಕೃತವಾನೇಷ ವಿದ್ಧಂ ಲಕ್ಷ್ಯಂ ಕಥಂ ಭವೇತ್ ॥೫॥

ನಿಪುಣರಾದ ಚಿಂತಕರಾದ ಅವರು ತಮ್ಮತಮ್ಮಲ್ಲಿಯೇ ಹೀಗೆ ಮಾತನಾಡಿಕೊಂಡರು. ಯಾವ ಧನುಸ್ಸನ್ನು ಧನುರ್ವೇದ ಪರಾಯಣರಾದ,

ಬಲಿಷ್ಠರಾದ ಲೋಕವಿಖ್ಯಾತರಾದ, ಕರ್ಣ, ಶಲ್ಯ ಮೊದಲಾದ ರಾಜರುಗಳಿಂದ ಬಗ್ಗಿಸಲು ಸಾಧ್ಯವಾಗಲಿಲ್ಲವೋ ಅಂತಹ ಧನುಸ್ಸನ್ನು ಅಸ್ತ್ರಜ್ಞಾನವಿಲ್ಲದ ಪ್ರಾಣಶಕ್ತಿಯಿಂದ ದುರ್ಬಲನಾದ ಒಬ್ಬ ಬ್ರಾಹ್ಮಣನು ಹೇಗೆ ಹೆದೆಯೇರಿಸಲು ಸಾಧ್ಯ? ಬ್ರಾಹ್ಮಣರೇ, ಒಂದುಪಕ್ಷ ಅವನು ಹೆದೆಯೇರಿಸಿದರೂ ಲಕ್ಷ್ಯವೇಧವು ಹೇಗೆ ಉಂಟಾಗುವುದು?

ಅಪಹಾಸ್ಯಾ ಭವಿಷ್ಯಂತಿ ಬ್ರಾಹ್ಮಣಾಃ ಸರ್ವರಾಜಸು ।
ಕರ್ಮಣ್ಯಸ್ಮಿನ್ನಸಂಸಿದ್ಧೇ ಚಾಪಲಾದಪರೀಕ್ಷಿತೇ ॥೬॥

ಯದ್ಯೇಷ ದರ್ಪಾನ್ಮೋಹಾದ್ ವಾ ಯದಿ ವಾ ಬ್ರಹ್ಮಚಾಪಲಾತ್ ।
ಪ್ರಸ್ಥಿತೋ ಧನುರಾಯಂತುಂ ವಾರ್ಯತಾಂ ಸಾಧು ಮಾ ಗಮತ್ ॥

ಚಪಲತೆಯಿಂದ ತನ್ನ ಶಕ್ತಿಯನ್ನು ತಿಳಿದುಕೊಳ್ಳದೆ ಈ ಕಾರ್ಯದಲ್ಲಿ ಈ ಬ್ರಾಹ್ಮಣನು ವಿಫಲನಾದರೆ ಎಲ್ಲ ಬ್ರಾಹ್ಮಣರೂ, ಎಲ್ಲ ರಾಜರುಗಳಿಂದ ಅಪಹಾಸ್ಯಕ್ಕೆ ಗುರಿಯಾಗುತ್ತಾರೆ. ಈ ಬ್ರಾಹ್ಮಣನು ದರ್ಪದಿಂದಲೋ, ಅಥವಾ ಮೋಹದಿಂದಲೋ ಅಥವಾ ಬ್ರಾಹ್ಮಣಚಪಲತೆಯಿಂದಲೋ ಧನುಸ್ಸನ್ನು ಬಗ್ಗಿಸಲು ಹೊರಟಿದ್ದರೆ ಬೇಗ ಅವನನ್ನು ತಡೆಯಿರಿ. ಅವನು ಮುಂದೆ ಹೋಗುವುದು ಬೇಡ.

ನಾಪಹಾಸ್ಯಾ ಭವಿಷ್ಯಾಮೋ ನ ಚ ಲಾಘವಮಾಸ್ಥಿತಾಃ ।
ನ ಚ ವಿದ್ವಿಷತಾಂ ಲೋಕೇ ಗಮಿಷ್ಯಾಮೋ ಮಹೀಕ್ಷಿತಾಮ್ ॥೮॥

ನಾವು ಅಪಹಾಸ್ಯಕ್ಕೆ ಗುರಿಯಾಗುವುದು ಬೇಡ. ಬ್ರಾಹ್ಮಣರಾದ ನಮಗೆ ಲಾಘವವು (ಕ್ಷಿಪ್ರತೆ ಮತ್ತು ನಿಖರತೆ) ಇಲ್ಲ. ನಾವು ನಮ್ಮನ್ನು ದ್ವೇಷಿಸುವ ರಾಜರುಗಳ ಮಧ್ಯೆ ಇನ್ನೊಮ್ಮೆ ಹೋಗಲಾರೆವು.

ಕೇಚಿದಾಹುರ್ಯುವಾ ಶ್ರೀಮಾನ್ ನಾಗರಾಜವರೋಪಮಃ ।
ಪೀನಸ್ಕಂಧೋರುಬಾಹುಶ್ಚ ಧೈರ್ಯೇಣ ಹಿಮವಾನಿವ ॥೯॥

ಇನ್ನೂ ಕೆಲವು ಬ್ರಾಹ್ಮಣರು ಈ ಬ್ರಾಹ್ಮಣಕುಮಾರನು ಯುವಕನೂ, ಕಾಂತಿಯುಕ್ತನೂ, ಶ್ರೇಷ್ಠವಾದ ಆನೆಯನ್ನು ಹೋಲುವವನೂ ಆಗಿದ್ದಾನೆ. ಎತ್ತರವಾದ ಭುಜಗಳು ಮತ್ತು ಪುಷ್ಟವಾದ ಬಾಹುಗಳನ್ನು ಹೊಂದಿದ ಇವನು ಧೈರ್ಯದಲ್ಲಿ ಹಿಮಾಲಯದಂತಿದ್ದಾನೆ.

ಸಂಭಾವ್ಯಂ ತಸ್ಯ ಕರ್ಮೇದಮುತ್ಸಾಹಾಚ್ಚಾನುಮೀಯತೇ ।
ಶಕ್ತಿರಸ್ಯ ಮಹೋತ್ಸಾಹಾ ನ ಹ್ಯಶಕ್ತಃ ಸ್ವಯಂ ವ್ರಜೇತ್ ॥೧೦॥

ಅವನು ಈ ಕಾರ್ಯವನ್ನು ಮಾಡಲು ಸಮರ್ಥನೆಂದು ಅವನ ಉತ್ಸಾಹದಿಂದ ಊಹಿಸಬಹುದಾಗಿದೆ. ಇವನಿಗೆ ಬಹಳ ಉತ್ಸಾಹವು ಮತ್ತು ಶಕ್ತಿಯೂ ಇದೆ. ಶಕ್ತಿಯಿಲ್ಲದವನು ತಾನೇ ಎದ್ದು ಹೋಗಲಾರ.

ನ ಚ ತದ್ ವಿದ್ಯತೇ ಕಿಂಚಿತ್ ಕರ್ಮ ಲೋಕೇಷು ಯದ್ ಭವೇತ್ ।
ಬ್ರಾಹ್ಮಣಾನಾಮಸಾಧ್ಯಂ ವಾ ಧೃಷ್ಣು ಸ್ಥಾಸ್ನು ಚರಿಷ್ಣು ಚ ॥೧೧॥

ಬ್ರಾಹ್ಮಣರಿಗೆ ಅಸಾಧ್ಯವಾದ ಕರ್ಮವು ಅದು ಧೈರ್ಯಯುಕ್ತ- ವಾಗಿರಬಹುದು, ಸ್ಥಿರವಾಗಿರಬಹುದು ಅಥವಾ ಚಲಿಸುವುದಾಗಿರಬಹುದು, ಲೋಕಗಳಲ್ಲಿ ಯಾವುದೂ ಇಲ್ಲ.

ಅಬ್ಭಕ್ಷಾ ವಾಯುಭಕ್ಷಾಶ್ಚ ಫಲಾಹಾರಾ ದೃಢವ್ರತಾಃ ।
ದುರ್ಬಲಾ ಹಿ ಬಲೀಯಂಸೋ ವಿಪ್ರಾ ಹಿ ಬ್ರಹ್ಮತೇಜಸಾ ॥೧೨॥

ಅಬ್ಭಕ್ಷರಾಗಿ, ವಾಯುಭಕ್ಷರಾಗಿ ಫಲಗಳನ್ನು ಸೇವಿಸಿ ಅನೇಕ ವ್ರತಗಳನ್ನು ಮಾಡಿ ಬ್ರಾಹ್ಮಣರು ಶರೀರದಿಂದ ದುರ್ಬಲರಾದರೂ ಬ್ರಹ್ಮತೇಜಸ್ಸಿನಿಂದ ಬಲಿಷ್ಠರಾದವರೇ ಸರಿ.

ಬ್ರಾಹ್ಮಣೋ ನಾವಮಂತವ್ಯಃ ಸದಸದ್ವಾ ಸಮಾಚರನ್ ।
ವಿರೂಪೋ ವಾ ಸುರೂಪೋ ವಾ ಸಂಸ್ಕೃತಃ ಪ್ರಾಕೃತೋಽಪಿ ವಾ ॥೧೩॥

ಬ್ರಾಹ್ಮಣನು ವಿರೂಪನಾಗಿರಲಿ ಅಥವಾ ಸುರೂಪನಾಗಿರಲಿ, ಸಂಸ್ಕೃತನಾಗಿರಲಿ ಅಥವಾ ಅಸಂಸ್ಕೃತನಾಗಿರಲಿ, ಒಳ್ಳೆಯ ಕಾರ್ಯವನ್ನು ಮಾಡಲಿ ಅಥವಾ ಕೆಟ್ಟಕಾರ್ಯವನ್ನು ಮಾಡಲಿ, ಅವನಿಗೆ ಅವಮಾನವನ್ನು ಮಾಡಬಾರದು.

ಸ್ವಾತ್ಮತೇಜೋ ವಿಗೂಹಂತೋ ಭಸ್ಮಚ್ಛನ್ನಾ ಇವಾಗ್ನಯಃ ।
ಧನುರ್ವೇದೇ ಚ ವೇದೇ ಚ ಯೋಗೇಷು ವಿವಿಧೇಷು ಚ ॥೧೪॥

ಬ್ರಾಹ್ಮಣರು ಬೂದಿಮುಚ್ಚಿದ ಕೆಂಡದಂತೆ ತಮ್ಮ ಪರಾಕ್ರಮವನ್ನು ಪ್ರಕಾಶಗೊಳಿಸದೆ ಧನುರ್ವೇದದಲ್ಲಿಯೂ, ವೇದದಲ್ಲಿಯೂ, ವಿವಿಧ ಯೋಗಗಳಲ್ಲಿಯೂ ಪಾರಂಗತರಾಗಿರುತ್ತಾರೆ.

ನ ತಂ ಪಶ್ಯಾಮಿ ಮೇದಿನ್ಯಾಂ ಬ್ರಾಹ್ಮಣೇಭ್ಯೋಽಧಿಕೋ ಭವೇತ್ ।
ಮಂತ್ರಯೋಗಬಲೇನಾಪಿ ಮಹತಾऽऽತ್ಮಬಲೇನ ಚ ॥೧೫॥

ಮಂತ್ರಯೋಗಬಲದಿಂದಾಗಲೀ ಅಥವಾ ಶ್ರೇಷ್ಠವಾದ ಆತ್ಮಬಲ- ದಿಂದಾಗಲೀ ಬ್ರಾಹ್ಮಣರಿಗಿಂತ ಶ್ರೇಷ್ಠವಾದ ವ್ಯಕ್ತಿಯು ಭೂಮಿಯಲ್ಲಿ ಯಾರೂ ಕಾಣುವುದಿಲ್ಲ.

ವಿದ್ವಾಂಸೋ ದೃಢತತ್ವಜ್ಞಾಃ ತಪಸಾ ಶಾಂತಿಮಾಗತಾಃ ।
ನ ಪ್ರಕಾಶಂತಿ ಚಾತ್ಮಾನಂ ನ ಚಾಲ್ಯಾಃ ಪೂರ್ಣಕುಂಭವತ್ ।
ಕಾಲೇನ ಜೃಂಭಯೀಯುಸ್ತೇ ಹೀನಲೋಕಮಿವ ದ್ವಿಜಾಃ ॥೧೬॥

ವಿದ್ವಾಂಸರೂ, ಒಳ್ಳೆಯ ತತ್ವಜ್ಞಾನಿಗಳೂ, ತಪಸ್ಸಿನಿಂದ ಶಾಂತರಾದವರೂ ಆದ ಬ್ರಾಹ್ಮಣರು ತಮ್ಮನ್ನು ಪ್ರಕಾಶಿಸಿಕೊಳ್ಳುವುದಿಲ್ಲ. ತುಂಬಿದ ಕೊಡದಂತೆ ಅವರು ಅಲುಗಾಡುವುದಿಲ್ಲ. ಯೋಗ್ಯವಾದ ಕಾಲವು ಬಂದಾಗ ಸೂರ್ಯಚಂದ್ರರು ಇಲ್ಲದಿರುವಾಗ ನಕ್ಷತ್ರಗಳು ಬೆಳಗುವಂತೆ ಅವರು ಬೆಳಗುತ್ತಾರೆ.

ಏವಂ ತೇಷಾಂ ವಿಲಪತಾಂ ವಿಪ್ರಾಣಾಂ ವಿವಿಧಾ ಗಿರಃ ।
ಅರ್ಜುನೋ ಧನುಷೋಽಭ್ಯಾಶೇ ತಸ್ಥೌ ಗಿರಿರಿವಾಚಲಃ ॥೧೭॥

ಹೀಗೆ ಬ್ರಾಹ್ಮಣರು ವಿಧವಿಧವಾಗಿ ಮಾತನಾಡುತ್ತಿರಲು ಅರ್ಜುನನು ಆ ಧನುಸ್ಸಿನ ಸಮೀಪಕ್ಕೆ ಬಂದು ಪರ್ವತದಂತೆ ಸ್ಥಿರವಾಗಿ ನಿಂತನು.

ಅರ್ಜುನಃ ಪಾಂಡವಶ್ರೇಷ್ಠೋ ಧೃಷ್ಟದ್ಯುಮ್ನಮಥಾಬ್ರವೀತ್ ।
ಏತದ್ಧನುರ್ಬ್ರಾಹ್ಮಣಾನಾಂ ಸಜ್ಯಂ ಕರ್ತುಮಲಂ ನು ಕಿಮ್ ।
ತಸ್ಯ ತದ್ವಚನಂ ಶ್ರುತ್ವಾ ಧೃಷ್ಟದ್ಯುಮ್ನೋಽಬ್ರವೀದ್ ವಚಃ ॥೧೮॥

ಪಾಂಡವ ಶ್ರೇಷ್ಠನಾದ ಅರ್ಜುನನು ಆಗ ಧೃಷ್ಟದ್ಯುಮ್ನನನ್ನು ಕುರಿತು, ಈ ಧನುಸ್ಸನ್ನು ಬ್ರಾಹ್ಮಣರು ಹೆದೆಯೇರಿಸಬಹುದೆ ಎಂದು ಕೇಳಿದನು. ಅವನ ಮಾತನ್ನು ಕೇಳಿ ಧೃಷ್ಟದ್ಯುಮ್ನನು ಉತ್ತರವನ್ನು ಕೊಟ್ಟನು.

ಬ್ರಾಹ್ಮಣೋ ವಾऽಥ ರಾಜನ್ಯೋ ವೈಶ್ಯೋ ವಾ ಶೂದ್ರ ಏವ ವಾ ।
ಏತೇಷಾಂ ಯೋ ಧನುಶ್ಶ್ರೇಷ್ಠಂ ಸಜ್ಯಂ ಕುರ್ಯಾದ್ ದ್ವಿಜೋತ್ತಮ ॥

ತಸ್ಮೈ ಪ್ರದೇಯಾ ಭಗಿನೀ ಸತ್ಯಮುಕ್ತಂ ಮಯಾ ವಚಃ ।
ತಸ್ಯ ತದ್ವಚನಂ ಶ್ರುತ್ವಾ ಪ್ರಯಯೌ ಬ್ರಾಹ್ಮಣೈರ್ವೃತಃ ॥೨೦॥

ಬ್ರಾಹ್ಮಣಶ್ರೇಷ್ಠನೇ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇವರಲ್ಲಿ ಯಾವನು ಈ ಶ್ರೇಷ್ಠವಾದ ಧನುಸ್ಸನ್ನು ಹೆದೆಯಿಂದ ಬಿಗಿದು (ಲಕ್ಷ್ಯವೇಧವನ್ನು ಮಾಡುತ್ತಾನೋ) ಅವನಿಗೆ ನನ್ನ ತಂಗಿಯನ್ನು ಕೊಡುತ್ತೇನೆ ಇದು ನನ್ನ ಸತ್ಯವಾದ ಮಾತು. ಧೃಷ್ಟದ್ಯುಮ್ನನ ಆ ಮಾತನ್ನು ಕೇಳಿ ಅರ್ಜುನನು ಬ್ರಾಹ್ಮಣರ ಜೊತೆಯಲ್ಲಿ ಇನ್ನೂ ಧನುಸ್ಸಿನ ಸಮೀಪಕ್ಕೆ ಹೋದನು.

ತತಃ ಪಶ್ಚಾನ್ಮಹಾತೇಜಾಃ ಪಾಂಡವೋ ರಣದುರ್ಜಯಃ ।
ಸ ತದ್ಧನುಃ ಪರಿಕ್ರಮ್ಯ ಪ್ರದಕ್ಷಿಣಮಥಾಕರೋತ್ ॥೨೧॥

ಅನಂತರ ಮಹಾತೇಜಸ್ವಿಯಾದ ರಣದುರ್ಜಯನಾದ ಪಾಂಡು- ಪುತ್ರನಾದ ಅರ್ಜುನನು ಆ ಧನುಸ್ಸಿನ ಸಮೀಪಕ್ಕೆ ಹೋಗಿ ಪ್ರದಕ್ಷಿಣೆಯನ್ನು ಮಾಡಿದನು.

ಪ್ರಣಮ್ಯ ಶಿರಸಾ ಹೃಷ್ಟೋ ಜಗೃಹೇ ಚ ಪರಂತಪಃ ।
ಪ್ರಣಮ್ಯ ಶಿರಸಾ ದೇವಮೀಶಾನಂ ವರದಂ ಶುಭಮ್ ।
ಕೃಷ್ಣಂ ಚ ಮನಸಾ ಕೃತ್ವಾ ಜಗೃಹೇ ಚಾರ್ಜುನೋ ಧನುಃ ॥೨೨॥

ಪರಂತಪನಾದ ಅರ್ಜುನನು ಧನುಸ್ಸಿಗೆ ಶಿರಸಾ ಪ್ರಣಾಮವನ್ನು ಮಾಡಿ ಸಂತೋಷದಿಂದ ಧನುಸ್ಸನ್ನು ಕೈಗೆತ್ತಿಕೊಂಡನು. ಅನಂತರ ವರದನಾದ ಮಂಗಳಪ್ರದನಾದ ರುದ್ರದೇವನಿಗೆ ಶಿರಸಾ ಪ್ರಣಾಮವನ್ನು ಮಾಡಿ ಮನಸ್ಸಿನಿಂದಲೇ ಕೃಷ್ಣನಿಗೆ ಪ್ರಣಾಮವನ್ನು ಮಾಡಿ ಅರ್ಜುನನು ಧನುಸ್ಸನ್ನು ಮೇಲಕ್ಕೆತ್ತಿದನು.

ಸಜ್ಯಂ ಚ ಚಕ್ರೇ ನಿಮಿಷಾಂತರೇಣ
ಶರಾಂಶ್ಚ ಜಗ್ರಾಹ ದಶಾರ್ಧಸಂಖ್ಯಾನ್ ।
ವಿವ್ಯಾಧ ಲಕ್ಷ್ಯಂ ನಿಪಪಾತ ತಚ್ಚ
ಛಿದ್ರೇಣ ಭೂಮೌ ಸಹಸಾऽತಿವಿದ್ಧಮ್ ॥೨೩॥

ಒಂದು ನಿಮಿಷಕ್ಕೂ ಕಡಿಮೆ ಕಾಲದಲ್ಲಿ ಧನುಸ್ಸನ್ನು ಬಗ್ಗಿಸಿ ಹೆದೆಯನ್ನು ಬಿಗಿದು ಐದು ಬಾಣಗಳನ್ನು ಕೈಗೆ ತೆಗೆದುಕೊಂಡನು. ಆ ಬಾಣಗಳಿಂದ ವಿದ್ಧವಾದ ಲಕ್ಷ್ಯವು ಯಂತ್ರದ ಛಿದ್ರದ ಮೂಲಕವಾಗಿ ತಕ್ಷಣ ಭೂಮಿಯ ಮೇಲೆ ಬಿದ್ದಿತು.

ತತೋಽಂತರಿಕ್ಷೇ ಚ ಬಭೂವ ನಾದಃ
ಸಮಾಜಮಧ್ಯೇ ಚ ಮಹಾನ್ ನಿನಾದಃ ।
ಪುಷ್ಪಾಣಿ ದಿವ್ಯಾನಿ ಪವರ್ಷ ದೇವಃ
ಪಾರ್ಥಸ್ಯ ಮೂರ್ಧ್ನಿ ದ್ವಿಷತಾಂ ನಿಹಂತುಃ ॥೨೪॥

ಆಗ ಅಂತರಿಕ್ಷದಲ್ಲಿ ದೊಡ್ಡ ನಾದವುಂಟಾಯಿತು. ಭೂಮಿಯಲ್ಲಿ ಸಮಾಜದಲ್ಲಿಯೂ ದೊಡ್ಡ ನಿನಾದವುಂಟಾಯಿತು. ಶತ್ರುನಾಶನನಾದ ಇಂದ್ರನು ಅರ್ಜುನನ ತಲೆಯ ಮೇಲೆ ಸ್ವರ್ಗಲೋಕದ ಪುಷ್ಪಗಳಿಂದ ಪುಷ್ಪವೃಷ್ಟಿಯನ್ನು ಮಾಡಿದನು.

ಚೇಲಾಂಶ್ಚ ದುಧುವುಸ್ತತ್ರ ಬ್ರಾಹ್ಮಣಾಶ್ಚ ಸಹಸ್ರಶಃ ।
ನನಂದುರ್ನನೃತುಶ್ಚಾತ್ರ ಧೂನ್ವಂತೋ ವ್ಯಜನಾನಿ ಚ ॥೨೫॥

ಬ್ರಾಹ್ಮಣರು ಸಹಸ್ರಸಂಖ್ಯೆಯಲ್ಲಿ ಎದ್ದು ತಮ್ಮ ಉತ್ತರೀಯಗಳನ್ನು ಕೊಡವಿ ಹಾರಾಡಿಸಿದರು. ತಮ್ಮ ಕೃಷ್ಣಾಜಿನಗಳನ್ನೂ, ಬೀಸಣಿಗೆಗಳನ್ನೂ ಅಲುಗಾಡಿಸುತ್ತಾ ನರ್ತನ ಮಾಡಿ ಸಂತೋಷಪಟ್ಟರು.

ನ್ಯಪತಂಶ್ಚಾತ್ರ ನಭಸಃ ಸಮಂತಾತ್ ಪುಷ್ಪವೃಷ್ಟಯಃ ।
ಶಂಖಾನಿ ಚೈವ ತೂರ್ಯಾಣಿ ವಾದಕಾಶ್ಚಾಭ್ಯವಾದಯನ್ ।
ಸೂತಮಾಗಧಸಂಘಾಶ್ಚಾಪ್ಯಸ್ತುವಂಸ್ತತ್ರ ನಿಸ್ವನಮ್ ॥೨೬॥

ಆಕಾಶದಿಂದ ಎಲ್ಲ ಕಡೆಗಳಲ್ಲಿಯೂ ಪುಷ್ಪವೃಷ್ಟಿಯಾಯಿತು. ದೇವವಾದಕರು ಶಂಖಗಳನ್ನೂ, ತೂರ್ಯಗಳನ್ನೂ ಮೊಳಗಿಸಿದರು. ಭೂಮಿಯ ಮೇಲಿದ್ದ ಸೂತ ಮಾಗಧರೂ ಸಹ ಆ ದೇವದುಂದುಭಿ ನಿಸ್ವನವನ್ನು ಪ್ರಶಂಸಿದರು.

ತಸ್ಮಿಂಸ್ತು ಶಬ್ದೇ ಮಹತಿ ಪ್ರವೃತ್ತೇ
ಯುಧಿಷ್ಠಿರೋ ಧರ್ಮಭೃತಾಂ ವರಿಷ್ಠಃ ।

ಆವಾಸಮೇವಾಭಿಜಗಾಮ ಶೀಘ್ರಂ
ಸಾರ್ಧಂ ಯಮಾಭ್ಯಾಂ ಪುರುಷೋತ್ತಮಭ್ಯಾಮ್ ॥೨೭॥

ಸಮಾಜದಲ್ಲಿ ಅಷ್ಟು ದೊಡ್ಡ ಶಬ್ದಕೋಲಾಹಲವು ನಡೆಯುತ್ತಿರುವಾಗ ಧರ್ಮಭೃತರಲ್ಲಿ ಶ್ರೇಷ್ಠನಾದ ಯುಧಿಷ್ಠಿರನು ಪುರುಷಶ್ರೇಷ್ಠರಾದ ನಕುಲಸಹದೇವರ ಜೊತೆಯಲ್ಲಿ ಶೀಘ್ರವಾಗಿ ತನ್ನ ನಿವಾಸಕ್ಕೆ ತೆರಳಿದನು.

ವಿದ್ಧಂ ಚ ಲಕ್ಷ್ಯಂ ಪ್ರಸಮೀಕ್ಷ್ಯ ಕೃಷ್ಣಾ
ಪಾರ್ಥಂ ಚ ಶಕ್ರಪ್ರತಿಮಂ ನಿರೀಕ್ಷ್ಯ ।
ಸ್ವಭಾವರೂಪಾऽಪಿ ನಚೇವ ನಿತ್ಯಾ
ವಿನಾऽಪಿ ಹಾಸಂ ಹಸತೀವ ಕನ್ಯಾ ॥೨೮॥

ಮದಾದೃತೇऽಪಿ ಸ್ಖಲತೀವ ಭಾವೈ-
ರ್ವಾಚಾ ವಿನಾ ವ್ಯಾಹರತೀವ ದೃಷ್ಟ್ಯಾ ।
ಆದಾಯ ಶುಕ್ಲಂ ವರಮಾಲ್ಯದಾಮ
ಜಗಾಮ ಕುಂತೀಸುತಮುತ್ಸ್ಮಯಂತೀ ॥೨೯॥

ದ್ರೌಪದಿಯು ಲಕ್ಷ್ಯವೇಧವನ್ನು ನೋಡಿ ಇಂದ್ರನಂತಿರುವ ಅರ್ಜುನನನ್ನು ನೋಡಿ ಸ್ವಾಭಾವಿಕವಾಗಿ ರೂಪವತಿಯಾದರೂ ತನ್ನ ಲಾವಣ್ಯವನ್ನು ಆಚ್ಛಾದನೆ ಮಾಡಿಕೊಳ್ಳುತ್ತಿದ್ದ ಅವಳು (ಸ್ವಾಭಾವಿಕವಾದ ರೂಪವನ್ನು ಹೊಂದಿದ್ದರೂ ನಿತ್ಯವೂ ಅಂತಹ ರೂಪವತಿಯಾಗಿ ಕಾಣಿಸಿಕೊಳ್ಳದವಳು)

ಮುಗುಳ್ನಗೆಯನ್ನು ನಗದಿದ್ದರೂ ಮುಗುಳ್ನಗುತ್ತಿರುವಂತೆ ಕಾಣುವಂತಹ, ಮದವಿಲ್ಲದಿದ್ದರೂ ಎಡವುವಂತೆ ತೋರುವ, ಮಾತುಗಳನ್ನಾಡದಿದ್ದರೂ ತನ್ನ ಮನಸ್ಸಿನಿಂದಲೂ ಮತ್ತು ದೃಷ್ಟಿಯಿಂದಲೂ ಮಾತಾಡುವಂತೆ ತೋರುವ, ಆ ಕನ್ಯೆಯಾದ ದ್ರೌಪದಿಯು ಒಳ್ಳೆಯ ಮುಗುಳ್ನಗೆಯನ್ನು ಬೀರುತ್ತಾ ಶ್ರೇಷ್ಠವಾದ ಬಿಳಿಯ ಹೂವಿನ ಮಾಲೆಯನ್ನು ಹಿಡಿದು ಕುಂತೀಸುತನಾದ ಅರ್ಜುನನ ಸಮೀಪಕ್ಕೆ ಹೋದಳು.

ಸಮೇತ್ಯ ತಸ್ಯೋಪರಿ ಸೋತ್ಸಸರ್ಜ
ಸಮಾಗತಾನಾಂ ಪುರತೋ ನೃಪಾಣಾಮ್ ।

ವಿನ್ಯಸ್ಯ ಮಾಲಾಂ ವಿನಯೇನ ತಸ್ಥೌ
ವಿಹಾಯ ರಾಜ್ಞಃ ಸಹಸಾ ನೃಪಾತ್ಮಜಾ ॥೩೦॥

ಆ ರಾಜಕುಮಾರಿಯು ಅರ್ಜುನನ್ನು ಸಮೀಪಿಸಿ ಸಮಾಗತರಾದ ಎಲ್ಲ ರಾಜರ ಎದುರಿಗೆ ಅವನ ಕಂಠದಲ್ಲಿ ಮಾಲೆಯನ್ನು ಹಾಕಿದಳು. ರಾಜರ ಸಮೂಹವನ್ನು ಬಿಟ್ಟು ಅರ್ಜುನನ ಸಮೀಪಕ್ಕೆ ಹೋದ ಅವಳು ಅವನ ಕೊರಳಿನಲ್ಲಿ ಮಾಲೆಯನ್ನು ಹಾಕಿ ವಿನಯದಿಂದ ನಿಂತುಕೊಂಡಳು.

ಶಚೀವ ದೇವೇಂದ್ರಮಥಾಗ್ನಿದೇವಂ
ಸ್ವಾಹೇವ ಲಕ್ಷ್ಮೀಶ್ಚ ಯಥಾ ಮುಕುಂದಮ್ ।
ಉಷೇವ ಸೂರ್ಯಂ ಮದನಂ ರತೀವ
ಮಹೇಶ್ವರಂ ಪರ್ವತರಾಜಪುತ್ರೀ ।
ರಾಮಂ ಯಥಾ ಮೈಥಿಲರಾಜಪುತ್ರೀ
ಭೈಮೀ ಯಥಾ ರಾಜವರಂ ನಲಂ ಹಿ ॥೩೧॥

ಶಚಿಯಿಂದ ಕೂಡಿದ ದೇವೇಂದ್ರನಂತೆ, ಸ್ವಾಹಾದೇವಿಯಿಂದ ಕೂಡಿದ ಅಗ್ನಿಯಂತೆ, ಲಕ್ಷ್ಮಿಯಿಂದ ಕೂಡಿದ ಮುಕುಂದನಂತೆ, ಉಷೆಯಿಂದ ಕೂಡಿದ ಸೂರ್ಯನಂತೆ, ರತಿಯಿಂದ ಕೂಡಿದ ಮದನನಂತೆ, ಪಾರ್ವತಿಯಿಂದ ಕೂಡಿದ ಮಹೇಶ್ವರನಂತೆ, ಜಾನಕಿಯಿಂದ ಕೂಡಿದ ರಾಮನಂತೆ, ದಮಯಂತಿಯಿಂದ ಕೂಡಿದ ನಳನಂತೆ, ದ್ರೌಪದಿಯ ಜೊತೆಯಲ್ಲಿ ಅರ್ಜುನನು ಮೆರೆದನು.

ತಂ ಸಾಧುವಾದಾಃ ಪ್ರಶಶಂಸುರೇವ
ಧಿಕ್ ಕ್ಷತ್ರಮಿತ್ಯೇವ ವಚೋಽತ್ರ ಚೋಚುಃ ।
ಸ್ವಯಂವರೇ ಕ್ಷತ್ರಮಹೀಯತೇತಿ
ಹೃತಾ ಹಿ ಕೃಷ್ಣಾ ದ್ವಿಜಸತ್ತಮೇನ ॥೩೨॥

ಆಗ ಸಾಧುವಾದರಾದ ಬ್ರಾಹ್ಮಣರು ಅರ್ಜುನನನ್ನು ಪ್ರಶಂಸಿಸಿದರು. ಕ್ಷತ್ರಿಯರಿಗೆ ಧಿಕ್ಕಾರವಿರಲಿ, ಸ್ವಯಂವರದಲ್ಲಿ ಕ್ಷತ್ರಿಯಕುಲವು ಹೀನವಾಯಿತು. ದ್ರೌಪದಿಯನ್ನು ಒಬ್ಬ ದ್ವಿಜಶ್ರೇಷ್ಠನು ಜಯಿಸಿದನು ಎಂಬ ಮಾತುಗಳು ಅಲ್ಲಿ ಕೇಳಿಬಂದವು.

ತಂ ದೃಷ್ಟ್ವಾ ದ್ರುಪದಃ ಪ್ರೀತೋ ಬಭೂವಾರಿನಿಷೂದನಃ ।
ಸಹ ಸೈನ್ಯೇನ ಪಾರ್ಥಸ್ಯ ಸಾಹಾಯ್ಯಾರ್ಥಮಿಯೇಷ ಸಃ ॥೩೩॥

ಶತ್ರುನಾಶನನಾದ ಅರ್ಜುನನನ್ನು ನೋಡಿ ದ್ರುಪದಪುತ್ರನಾದ ಧೃಷ್ಟದ್ಯುಮ್ನನು ಸಂತುಷ್ಟನಾದನು. ಶತ್ರುಸಂಹಾರಕವಾದ ತನ್ನ ಸೈನ್ಯದ ಜೊತೆಯಲ್ಲಿ ಅವನು ಪಾರ್ಥನಿಗೆ ಸಹಾಯವನ್ನು ಮಾಡಲು ಬಯಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಸಪ್ತಾಶೀತ್ಯದಧಿಕಶತತಮೋऽಧ್ಯಾಯಃ ॥
॥ ಇತಿ ಸ್ವಯಂವರಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ಎಂಭತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ದ್ರಷ್ಟುಂ ಹಿ ಕೇವಲಗತಿರ್ನ ತು ಕನ್ಯಕಾಯಾ
ಅರ್ಥೇ ನ ಚಾಪಮಿಹ ವೃಷ್ಣಿವರಾಃ ಸ್ಪೃಶಂತು ।
ಇತ್ಯಾಜ್ಞಯೈವ ವರಚಕ್ರಧರಸ್ಯ ಲಿಪ್ಸಾ-
ಮಪ್ಯತ್ರ ಚಕ್ರುರಿಹ ನೈವ ಯದುಪ್ರವೀರಾಃ ॥೧೩೩॥

ಸ್ವಯಂವರವನ್ನು ನೋಡುವುದಕ್ಕಾಗಿ ಕೇವಲ ಹೋಗಬೇಕು ಹೊರತು ಕನ್ಯೆಗಾಗಿ ಅಲ್ಲ. ಅದರಿಂದ ಯಾದವ ವೀರರು ಸ್ವಯಂವರದಲ್ಲಿ ಬಿಲ್ಲನ್ನು ಸ್ಪರ್ಶಿಸಕೂಡಲೆಂದು ಶ್ರೀಕೃಷ್ಣನ ಆಜ್ಞೆ ಇದ್ದುದರಿಂದ ಯಾದವ ವೀರರು ಸ್ವಯಂವರ ಪಣವನ್ನು ಗೆಲ್ಲುವ ಆಸೆಯನ್ನೂ ಮಾಡಿರಲಿಲ್ಲ.

ಭೀಮಸ್ತು ರಾಜಸಮಿತಿಂ ಪ್ರತಿಸಂಪ್ರಯಾತಾಂ
ದೃಷ್ಟ್ವೈವ ಯೋಜನದಶೋಚ್ಛ್ರಯಮಾಶು ವೃಕ್ಷಂ ।
ಆರುಜ್ಯ ಸರ್ವನೃಪತೀನಭಿತೋ ಪ್ಯತಿಷ್ಠದ್
ದೃಷ್ಟ್ವಾಪಲಾಯನಪರಾಶ್ಚ ಬಭೂವುರೇತೇ ॥೧೩೪॥

ರಾಜಸಮೂಹ ತಮ್ಮ ಮೇಲೆ ಏರಿಬರುವುದನ್ನು ಕಂಡು ಭೀಮ ಹತ್ತು ಯೋಜನ ಎತ್ತರದ ಒಂದು ಮರವನ್ನು ಬೇಗನೆ ಕಿತ್ತು ಅವರಿಗೆ ಎದುರಾಗಿ ನಿಂತ. ರಾಜರು ನೋಡಿ ಪಲಾಯನ ಮಾಡಲು ತೊಡಗಿದರು.

ಭೀಮೋಽಯಮೇಷ ಪುರೂಹೂತಸುತೋಽನ್ಯ ಏತೇ
ಪಾರ್ಥಾ ಇತಿ ಸ್ಮ ಹಲಿನೇ ಹರಿರಭ್ಯವೋಚತ್ ।
ದೃಷ್ಟ್ವೈವ ಸೋಽಪಿ ಮುದಮಾಪ ಶಿನೇಶ್ಚ ಪೌತ್ರಃ
ಖಡ್ಗಂ ಪ್ರಗೃಹ್ಯ ಹರ್ಷಾತ್ ಪರಿಪುಪ್ಲುವೇಽತ್ರ ॥೧೩೫॥

ಶ್ರೀಕೃಷ್ಣ ಬಲರಾಮನಿಗೆ ಇವನು ಭೀಮ. ಇವನು ಅರ್ಜುನ, ಇವರು ಮಿಕ್ಕ ಪಾಂಡವರು ಎಂದು ಹೇಳಿದ. ಬಲರಾಮ ಪಾಂಡವರನ್ನು ನೋಡಿದ ಮಾತ್ರಕ್ಕೆ ಆನಂದಪಟ್ಟ. ಸಾತ್ಯಕಿ ಸಂತೋಷದಿಂದ ಕತ್ತಿ ಹಿರಿದು ಕೃಷ್ಣನ ಬಳಿ ಸುತ್ತಲೂ ಕುಣಿದಾಡಿದ.

ಪ್ರೀತೇಷು ಸರ್ವಯದುಷು ಪ್ರಪಲಾಯಿತೇಷು
ದುರ್ಯೋಧನಾದಿನೃಪತಿಷ್ವಖಿಲೇಷು ಭೀಮಾತ್ ।
ಕರ್ಣೋಽಭ್ಯಯಾದ್ಧರಿಹಯಾತ್ಮಜಮಾಶು ಮದ್ರ-
ರಾಜೋ ಜಗಾಮ ಪವನಾತ್ಮಜಮೇವ ವೀರಃ ॥೧೩೬॥

ಎಲ್ಲ ಯಾದವರೂ ಸಂತುಷ್ಟರಾದಾಗ, ದುರ್ಯೋಧನಾದಿ ಸಕಲ ರಾಜರೂ ಭೀಮನಿಂದಾಗಿ ಪಲಾಯನಗೈದಾಗ ವೀರಕರ್ಣ ಅರ್ಜುನನ ಮೇಲೂ ವೀರಶಲ್ಯ ಭೀಮನ ಮೇಲೂ ಆಕ್ರಮಣಗೈದರು.

ವಿಪ್ರೇಷು ದಂಡಪಟದರ್ಭಮಹಾಜಿನಾನಿ
ಕೋಪಾತ್ ಕ್ಷಿಪತ್ಸು ನ ವಿನಾಶನಮತ್ರ ಭೂಯಾತ್ ।
ಕ್ಷತ್ರಸ್ಯ ವೈರತ ಇತಿ ದ್ರುಪದೇ ಚ ಕೃಷ್ಣಂ
ವಿಪ್ರಾಂಶ್ಚ ಯಾಚತಿ ಸ ಮಾರುತಿರಾರ ಶಲ್ಯಂ ॥೧೩೭॥

ಬ್ರಾಹ್ಮಣರು ಕೋಪದಿಂದ ದಂಡ ಧೋತ್ರ ದರ್ಭೆ ಕೃಷ್ಣಾಜಿನಗಳನ್ನು ಎಸೆದಾಗ, ಬ್ರಾಹ್ಮಣರ ಕ್ರೋಧದಿಂದ ಕ್ಷತ್ರಿಯರ ವಿನಾಶವಾಗಬಾರದೆಂದು ಕೃಷ್ಣನನ್ನೂ ಬ್ರಾಹ್ಮಣರನ್ನೂ ದ್ರುಪದ ಬೇಡಿಕೊಳ್ಳುತ್ತಿದ್ದಾಗ ಅತ್ತ ಭೀಮ ಶಲ್ಯವನ್ನು ಇದಿರಿಸಿದ.

ನೂರ ಎಂಭತ್ತೆಂಟನೆಯ ಅಧ್ಯಾಯ

(ರಾಜರ ಕ್ಷೋಭೆ, ದ್ರುಪದನನ್ನು ಕೊಲ್ಲಲು ಪ್ರಯತ್ನ. ಭೀಮಸೇನನ ಸ್ಥೈರ್ಯ, ಕೃಷ್ಣನಿಂದ ಬಲರಾಮನಿಗೆ ಪಾಂಡವರ ಪ್ರತ್ಯೇಕ ಪರಿಚಯ.)

ವೈಶಂಪಾಯನಃ

ತಸ್ಮೈ ದಿತ್ಸತಿ ಕನ್ಯಾಂ ತು ಬ್ರಾಹ್ಮಣಾಯ ಮಹಾತ್ಮನೇ ।
ಕೋಪ ಆಸೀನ್ಮಹೀಪಾನಾಮಾಲೋಕ್ಯಾನ್ಯೋನ್ಯಮಂತಿಕಾತ್ ॥೧॥

ದ್ರುಪದನು ಮಹಾತ್ಮನಾದ ಆ ಬ್ರಾಹ್ಮಣನಿಗೆ ತನ್ನ ಕನ್ಯೆಯನ್ನು ಕೊಡಲು ಬಯಸುತ್ತಿರಲು ಅಲ್ಲಿ ನೆರೆದಿದ್ದ ರಾಜರುಗಳು ಸಮೀಪದಲ್ಲಿ ಒಬ್ಬರನ್ನೊಬ್ಬರು ನೋಡಿ, ದ್ರುಪದನ ಮೇಲೆ ಕೋಪಗೊಂಡರು.

ಅಸ್ಮಾನಯಮತಿಕ್ರಮ್ಯ ತೃಣೀಕೃತ್ಯ ಚ ಸಂಗತಾನ್ ।
ದಾತುಮಿಚ್ಛತಿ ವಿಪ್ರಾಯ ದ್ರೌಪದೀಂ ಯೋಷಿತಾಂ ವರಾಮ್ ॥೨॥

ಈ ದ್ರುಪದನು ಇಲ್ಲಿ ಸೇರಿದ ನಮ್ಮೆಲ್ಲರನ್ನೂ ಅತಿಕ್ರಮಿಸಿ ಮತ್ತು ತುಚ್ಛೀಕರಿಸಿ ಶ್ರೇಷ್ಠಕನ್ಯೆಯಾದ ದ್ರೌಪದಿಯನ್ನು ಬ್ರಾಹ್ಮಣನಿಗೆ ಕೊಡಲು ಬಯಸುತ್ತಿದ್ದಾನೆ.

ತೇ ಹನ್ಮೈನಂ ದುರಾತ್ಮಾನಂ ಯೋ ಹ್ಯಸ್ಮಾನವಮನ್ಯತೇ ।
ನಾಯಮರ್ಹತಿ ಸತ್ಕಾರಂ ನ ಹಿ ವೃದ್ಧೋ ಮತೋ ಗುಣೈಃ ॥೩॥

ನಮಗೆ ಅವಮಾನವನ್ನು ಮಾಡಿರುವ ಈ ದುರಾತ್ಮನಾದ ದ್ರುಪದನನ್ನು ನಾವು ಕೊಲ್ಲೋಣ. ಇವನು ಗುಣಗಳಿಂದ ವೃದ್ಧನಲ್ಲದ ಕಾರಣ ನಮ್ಮ ಸತ್ಕಾರಕ್ಕೆ ಅರ್ಹನಲ್ಲ.

ಹನ್ಮೈನಂ ಸಹ ಪುತ್ರೇಣ ದುರಾತ್ಮಾನಂ ನೃಪದ್ವಿಷಮ್ ।
ಅಯಂ ಸರ್ವಾನಿಹಾಹೂಯ ಸತ್ಕೃತ್ಯ ಚ ನರಾಧಿಪಾನ್ ।
ಗುಣವದ್ ಭೋಜಯಿತ್ವಾ ತು ತತಃ ಪಶ್ಚಾದ್ ವಿನಿಂದತಿ ॥೪॥

ರಾಜದ್ವೇಷಿಯಾದ ದುರಾತ್ಮನಾದ ಈ ದ್ರುಪದನನ್ನು ಅವನ ಮಗನ ಜೊತೆಯಲ್ಲಿಯೇ ಕೊಲ್ಲೋಣ. ಅವನು ರಾಜರಾದ ನಮ್ಮೆಲ್ಲರನ್ನು ಇಲ್ಲಿಗೆ ಕರೆಸಿ,

ಸತ್ಕಾರವನ್ನು ಮಾಡಿ, ಒಳ್ಳೆಯ ಭೋಜನವನ್ನು ನೀಡಿ, ಅನಂತರ ಅವಮಾನ ಮಾಡುತ್ತಿದ್ದಾನೆ.

ಅಸ್ಮಿನ್ ರಾಜಸಮಾವಾಯೇ ದೇವಾನಾಮಿವ ಸನ್ನಯೇ ।
ಕಿಮಯಂ ಸದೃಶಂ ಕಂಚಿನ್ನೃಪತಿಂ ನೈವ ದೃಷ್ಟವಾನ್ ॥೫॥

ದೇವತೆಗಳ ಸಮುದಾಯದಂತಿರುವ ಈ ರಾಜರ ಸಮೂಹದಲ್ಲಿ ಇವನಿಗೆ ಅನುರೂಪನಾದ ಒಬ್ಬ ರಾಜನೂ ದೊರೆಯಲಿಲ್ಲವೇ?

ನ ಚ ವಿಪ್ರೇಷ್ವಧೀಕಾರೋ ವಿದ್ಯತೇ ವರಣಂ ಪ್ರತಿ ।
ಸ್ವಯಂವರಃ ಕ್ಷತ್ರಿಯಾಣಾಮಿತೀಯಂ ಪ್ರಥಿತಾ ಶ್ರುತಿಃ ॥೬॥

ವಿಪ್ರರಿಗೆ ಸ್ವಯಂವರದಲ್ಲಿ ಅಧಿಕಾರವಿಲ್ಲ. ಕ್ಷತ್ರಿಯರಿಗೆ ಸ್ವಯಂವರದಲ್ಲಿ ಅಧಿಕಾರ ಎಂದು ವೇದದಲ್ಲಿ ಪ್ರಖ್ಯಾತವಾಗಿದೆ.

ಅಥವಾ ಯದಿ ಕನ್ಯೇಯಂ ನೇಹ ಕಿಂಚಿದ್ ಬುಭೂಷತಿ ।
ತಿಲಶಃ ಪ್ರವಿಭಜ್ಯೈನಾಂ ಯಾಮ ರಾಷ್ಟ್ರಾಣಿ ಪಾರ್ಥಿವಾಃ ॥೭॥

ರಾಜರೇ, ಅಥವಾ ಈ ಕನ್ಯೆಯು ನಮ್ಮಲ್ಲಿ ಯಾರನ್ನೂ ಬಯಸದಿದ್ದರೆ, ಇವಳನ್ನು ಎಳ್ಳಿನಷ್ಟು ಸಣ್ಣ ಚೂರುಗಳಾಗಿ ಕತ್ತರಿಸಿ ನಮ್ಮ ರಾಷ್ಟ್ರಗಳಿಗೆ ಹಿಂದಿರುಗೋಣ.

ಬ್ರಾಹ್ಮಣೋ ಯದಿ ವಾ ಬಾಲ್ಯಾನ್ಮೋಹಾದ್ ವಾ ಕೃತವಾನಿದಮ್।
ವಿಪ್ರಿಯಂ ಪಾರ್ಥಿವೇಂದ್ರಾಣಾಂ ನೈಷ ವರ್ಧ್ಯಃ ಕಥಂಚನ ॥೮॥

ಯಾವ ಬ್ರಾಹ್ಮಣನು ಬಾಲ್ಯದಿಂದಲಾಗಲಿ, ಮೋಹದಿಂದಾಗಲಿ, ಕ್ಷತ್ರಿಯರಿಗೆ ಇಂತಹ ಅಪ್ರಿಯವನ್ನು ಮಾಡಿದ್ದಾನೆಯೋ, ಅಂತಹ ಬ್ರಾಹ್ಮಣನು ಅಭಿವೃದ್ಧಿಯನ್ನು ಹೊಂದುವುದಕ್ಕೆ ಅವಕಾಶ ಕೊಡಬಾರದು.

ಬ್ರಾಹ್ಮಣಾರ್ಥಂ ಚ ನೋ ರಾಜ್ಯಂ ಜೀವಿತಂ ಚ ವಸೂನಿ ಚ ।
ಪುತ್ರಪೌತ್ರಂ ಚ ಯಚ್ಚಾನ್ಯದಸ್ಮಾಕಂ ವಿದ್ಯತೇ ಧನಮ್ ॥೯॥

ನಮ್ಮ ರಾಜ್ಯವೂ, ಕೋಶವೂ, ಜೀವನವೂ, ಪುತ್ರ-ಪೌತ್ರರೂ ಇನ್ನು ಏನೇನಿದೆಯೋ ಅದೆಲ್ಲವೂ ಬ್ರಾಹ್ಮಣರ ಸಲುವಾಗಿಯೇ ಇದೆ. (ಆದರೆ ಇಂತಹ ಬ್ರಾಹ್ಮಣರ ಸಲುವಾಗಿ ಇಲ್ಲ.)

ಅವಮಾನಭಯಾದ್ ರೋಷಾತ್ ಸ್ವಧರ್ಮಪರಿರಕ್ಷಣಾತ್।
ಸ್ವಯಂವರಾಣಾಂ ಚಾನ್ಯೇಷಾಂ ಮಾ ಭೂದೇವಂವಿಧಾ ಗತಿಃ ॥೧೦॥

ನಾವು ಮಾಡುವ ಅವಮಾನದ ಭಯದಿಂದಲಾಗಲಿ, ಅಥವಾ ನಮಗೆ ಉಂಟಾಗುವ ರೋಷದ ಭಯದಿಂದಲಾಗಲಿ, ಅಥವಾ ಸ್ವಯಂವರಕ್ಕೆ ಹೋಗದಿರುವ ತಮ್ಮ ಧರ್ಮವನ್ನು ರಕ್ಷಿಸುವ ಕಾರಣದಿಂದಾಗಲಿ, ಬ್ರಾಹ್ಮಣರು ಇನ್ನು ಮುಂದೆ ಸ್ವಯಂವರಕ್ಕೆ ಬರಬಾರದು. ಇಲ್ಲದಿದ್ದರೆ ಎಲ್ಲಾ ಸ್ವಯಂವರಗಳಿಗೂ ಇದೇ ಗತಿಯಾದೀತು.

ಇತ್ಯುಕ್ತ್ವಾ ರಾಜಶಾರ್ದೂಲಾ ರುಷ್ಟಾಃ ಪರಿಘಬಾಹವಃ ।
ದ್ರುಪದಂ ಸಂಜಿಘೃಕ್ಷಂತಃ ಸಾಯುಧಾಃ ಸಮುಪಾದ್ರವನ್ ॥೧೧॥

ತಾನ್ ಗೃಹೀತಶರಾನ್ ಪಾಪಾನ್ ಕ್ರುದ್ಧಾನಾಪತತೋ ಭೃಶಮ್।
ದ್ರುಪದೋ ವೀಕ್ಷ್ಯ ಸಂತ್ರಾಸಾದ್ ಬ್ರಾಹ್ಮಣಾನ್‌ಶರಣಂ ಗತಃ ॥೧೨॥

ಪರಿಘ ಬಾಹುಗಳುಳ್ಳ ಆ ರಾಜಶಾರ್ದೂಲರು ರೋಷದಿಂದ ಹೀಗೆ ಹೇಳಿ ದ್ರುಪದನನ್ನು ಹಿಡಿಯಲು ಆಯುಧಗಳನ್ನು ಹಿಡಿದು ಮುಂದೆ ಬಂದರು. ಕೋಪದಿಂದ ತನ್ನ ಮೇಲೆ ಎರಗಿ ಬರುತ್ತಿರುವ ಬಾಣವನ್ನು ಹಿಡಿದ ಆ ಪಾಪಿಗಳಾದ ರಾಜರುಗಳನ್ನು ನೋಡಿ, ತ್ರಾಸವನ್ನು ಹೊಂದಿದ ದ್ರುಪದನು ಬ್ರಾಹ್ಮಣರಿಗೆ ಶರಣಾಗತನಾದನು.

ನ ಭಯಾನ್ನಾಪಿ ಕಾರ್ಪಣ್ಯಾನ್ನ ಪ್ರಾಣಪರಿರಕ್ಷಣಾತ್ ।
ಜಗಾಮ ದ್ರುಪದೋ ವಿಪ್ರಾನ್ ಧರ್ಮಾರ್ಥೀ ಪ್ರತ್ಯಪದ್ಯತ ॥೧೩॥

ವೇಗೇನಾಪತತಸ್ತಾಂಸ್ತು ಪ್ರಭಿನ್ನಾನಿವ ವಾರಣಾನ್ ।
ಪಾಂಡುಪುತ್ರೌ ಮಹಾವೀರ್ಯೌ ಪ್ರತೀಯತುರರಿಂದಮೌ ॥೧೪॥

ಭಯದಿಂದಲಾಗಲಿ, ಅಥವಾ ಕಾರ್ಪಣ್ಯದಿಂದಲಾಗಲಿ, ಅಥವಾ ತನ್ನ ಪ್ರಾಣವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕಾಗಲಿ, ದ್ರುಪದನು ಬ್ರಾಹ್ಮಣರನ್ನು ಆಶ್ರಯಿಸಲಿಲ್ಲ. ಕ್ಷತ್ರಿಯನು ಕಷ್ಟ ಒದಗಿದಾಗ ಬ್ರಾಹ್ಮಣರನ್ನು ಆಶ್ರಯಿಸಬೇಕು ಎಂಬ ಧರ್ಮವನ್ನು ಪಾಲಿಸುವುದಕ್ಕಾಗಿ ಅವನು ಬ್ರಾಹ್ಮಣರಿಗೆ ಶರಣಾಗತನಾದನು. ಮದಿಸಿದ

ಸತ್ಕಾರವನ್ನು ಮಾಡಿ, ಒಳ್ಳೆಯ ಭೋಜನವನ್ನು ನೀಡಿ, ಅನಂತರ ಅವಮಾನ ಮಾಡುತ್ತಿದ್ದಾನೆ.

ಅಸ್ಮಿನ್ ರಾಜಸಮಾವಾಯೇ ದೇವಾನಾಮಿವ ಸನ್ನಯೇ ।
ಕಿಮಯಂ ಸದೃಶಂ ಕಂಚಿನ್ನೃಪತಿಂ ನೈವ ದೃಷ್ಟವಾನ್ ॥೫॥

ದೇವತೆಗಳ ಸಮುದಾಯದಂತಿರುವ ಈ ರಾಜರ ಸಮೂಹದಲ್ಲಿ ಇವನಿಗೆ ಅನುರೂಪನಾದ ಒಬ್ಬ ರಾಜನೂ ದೊರೆಯಲಿಲ್ಲವೇ?

ನ ಚ ವಿಪ್ರೇಷ್ವಧೀಕಾರೋ ವಿದ್ಯತೇ ವರಣಂ ಪ್ರತಿ ।
ಸ್ವಯಂವರಃ ಕ್ಷತ್ರಿಯಾಣಾಮಿತೀಯಂ ಪ್ರಥಿತಾ ಶ್ರುತಿಃ ॥೬॥

ವಿಪ್ರರಿಗೆ ಸ್ವಯಂವರದಲ್ಲಿ ಅಧಿಕಾರವಿಲ್ಲ. ಕ್ಷತ್ರಿಯರಿಗೆ ಸ್ವಯಂವರದಲ್ಲಿ ಅಧಿಕಾರ ಎಂದು ವೇದದಲ್ಲಿ ಪ್ರಖ್ಯಾತವಾಗಿದೆ.

ಅಥವಾ ಯದಿ ಕನ್ಯೇಯಂ ನೇಹ ಕಿಂಚಿದ್ ಬುಭೂಷತಿ ।
ತಿಲಶಃ ಪ್ರವಿಭಜ್ಯೈನಾಂ ಯಾಮ ರಾಷ್ಟ್ರೇ ಪಾರ್ಥಿವಾಃ ॥೭॥

ರಾಜರೇ, ಅಥವಾ ಈ ಕನ್ಯೆಯು ನಮ್ಮಲ್ಲಿ ಯಾರನ್ನೂ ಬಯಸದಿದ್ದರೆ, ಇವಳನ್ನು ಎಳ್ಳಿನಷ್ಟು ಸಣ್ಣ ಚೂರುಗಳಾಗಿ ಕತ್ತರಿಸಿ ನಮ್ಮ ರಾಷ್ಟ್ರಗಳಿಗೆ ಹಿಂದಿರುಗೋಣ.

ಬ್ರಾಹ್ಮಣೋ ಯದಿ ವಾ ಬಾಲ್ಯಾನ್ಮೋಹಾದ್ ವಾ ಕೃತವಾನಿದಮ್।
ವಿಪ್ರಿಯಂ ಪಾರ್ಥಿವೇಂದ್ರಾಣಾಂ ನೈಷ ವರ್ಧ್ಯಃ ಕಥಂಚನ ॥೮॥

ಯಾವ ಬ್ರಾಹ್ಮಣನು ಬಾಲ್ಯದಿಂದಲಾಗಲಿ, ಮೋಹದಿಂದಾಗಲಿ, ಕ್ಷತ್ರಿಯರಿಗೆ ಇಂತಹ ಅಪ್ರಿಯವನ್ನು ಮಾಡಿದ್ದಾನೆಯೋ, ಅಂತಹ ಬ್ರಾಹ್ಮಣನು ಅಭಿವೃದ್ಧಿಯನ್ನು ಹೊಂದುವುದಕ್ಕೆ ಅವಕಾಶ ಕೊಡಬಾರದು.

ಬ್ರಾಹ್ಮಣಾರ್ಥಂ ಚ ನೋ ರಾಜ್ಯಂ ಜೀವಿತಂ ಚ ವಸೂನಿ ಚ ।
ಪುತ್ರಪೌತ್ರಂ ಚ ಯಚ್ಚಾನ್ಯದಸ್ಮಾಕಂ ವಿದ್ಯತೇ ಧನಮ್ ॥೯॥

ನಮ್ಮ ರಾಜ್ಯವೂ, ಕೋಶವೂ, ಜೀವನವೂ, ಪುತ್ರ-ಪೌತ್ರರೂ ಇನ್ನು ಏನೇನಿದೆಯೋ ಅದೆಲ್ಲವೂ ಬ್ರಾಹ್ಮಣರ ಸಲುವಾಗಿಯೇ ಇದೆ. (ಆದರೆ ಇಂತಹ ಬ್ರಾಹ್ಮಣರ ಸಲುವಾಗಿ ಇಲ್ಲ.)

ಅವಮಾನಭಯಾದ್ ರೋಷಾತ್ ಸ್ವಧರ್ಮಪರಿರಕ್ಷಣಾತ್।
ಸ್ವಯಂವರಾಣಾಂ ಚಾನ್ಯೇಷಾಂ ಮಾ ಭೂದೇವಂವಿಧಾ ಗತಿಃ ॥೧೦॥

ನಾವು ಮಾಡುವ ಅವಮಾನದ ಭಯದಿಂದಲಾಗಲಿ, ಅಥವಾ ನಮಗೆ ಉಂಟಾಗುವ ರೋಷದ ಭಯದಿಂದಲಾಗಲಿ, ಅಥವಾ ಸ್ವಯಂವರಕ್ಕೆ ಹೋಗದಿರುವ ತಮ್ಮ ಧರ್ಮವನ್ನು ರಕ್ಷಿಸುವ ಕಾರಣದಿಂದಾಗಲಿ, ಬ್ರಾಹ್ಮಣರು ಇನ್ನು ಮುಂದೆ ಸ್ವಯಂವರಕ್ಕೆ ಬರಬಾರದು. ಇಲ್ಲದಿದ್ದರೆ ಎಲ್ಲಾ ಸ್ವಯಂವರಗಳಿಗೂ ಇದೇ ಗತಿಯಾದೀತು.

ಇತ್ಯುಕ್ತ್ವಾ ರಾಜಶಾರ್ದೂಲಾ ರುಷ್ಟಾಃ ಪರಿಘಬಾಹವಃ ।
ದ್ರುಪದಂ ಸಂಜಿಘೃಕ್ಷಂತಃ ಸಾಯುಧಾಃ ಸಮುಪಾದ್ರವನ್ ॥೧೧॥

ತಾನ್ ಗೃಹೀತಶರಾನ್ ಪಾಪಾನ್ ಕ್ರುದ್ಧಾನಾಪತತೋ ಭೃಶಮ್।
ದ್ರುಪದೋ ವೀಕ್ಷ್ಯ ಸಂತ್ರಾಸಾದ್ ಬ್ರಾಹ್ಮಣಾನ್‌ಶರಣಂ ಗತಃ ॥೧೨॥

ಪರಿಘ ಬಾಹುಗಳುಳ್ಳ ಆ ರಾಜಶಾರ್ದೂಲರು ರೋಷದಿಂದ ಹೀಗೆ ಹೇಳಿ ದ್ರುಪದನನ್ನು ಹಿಡಿಯಲು ಆಯುಧಗಳನ್ನು ಹಿಡಿದು ಮುಂದೆ ಬಂದರು. ಕೋಪದಿಂದ ತನ್ನ ಮೇಲೆ ಎರಗಿ ಬರುತ್ತಿರುವ ಬಾಣವನ್ನು ಹಿಡಿದ ಆ ಪಾಪಿಗಳಾದ ರಾಜರುಗಳನ್ನು ನೋಡಿ, ತ್ರಾಸವನ್ನು ಹೊಂದಿದ ದ್ರುಪದನು ಬ್ರಾಹ್ಮಣರಿಗೆ ಶರಣಾಗತನಾದನು.

ನ ಭಯಾನ್ನಾಪಿ ಕಾರ್ಪಣ್ಯಾನ್ನ ಪ್ರಾಣಪರಿರಕ್ಷಣಾತ್ ।
ಜಗಾಮ ದ್ರುಪದೋ ವಿಪ್ರಾನ್ ಧರ್ಮಾರ್ಥೀ ಪ್ರತ್ಯಪದ್ಯತ ॥೧೩॥

ವೇಗೇನಾಪತತಸ್ತಾಂಸ್ತು ಪ್ರಭಿನ್ನಾನಿವ ವಾರಣಾನ್ ।
ಪಾಂಡುಪುತ್ರೌ ಮಹಾವೀರ್ಯೌ ಪ್ರತೀಯತುರರಿಂದಮೌ ॥೧೪॥

ಭಯದಿಂದಲಾಗಲಿ, ಅಥವಾ ಕಾರ್ಪಣ್ಯದಿಂದಲಾಗಲಿ, ಅಥವಾ ತನ್ನ ಪ್ರಾಣವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕಾಗಲಿ, ದ್ರುಪದನು ಬ್ರಾಹ್ಮಣರನ್ನು ಆಶ್ರಯಿಸಲಿಲ್ಲ. ಕ್ಷತ್ರಿಯನು ಕಷ್ಟ ಒದಗಿದಾಗ ಬ್ರಾಹ್ಮಣರನ್ನು ಆಶ್ರಯಿಸಬೇಕು ಎಂಬ ಧರ್ಮವನ್ನು ಪಾಲಿಸುವುದಕ್ಕಾಗಿ ಅವನು ಬ್ರಾಹ್ಮಣರಿಗೆ ಶರಣಾಗತನಾದನು. ಮದಿಸಿದ

ಆನೆಗಳಂತೆ ಮೇಲೆರಗುತ್ತಿರುವ ಆ ರಾಜರುಗಳನ್ನು ಅರಿಂದಮರಾದ ಮಹಾವೀರ್ಯರಾದ ಪಾಂಡುಪುತ್ರರಾದ ಭೀಮಾರ್ಜುನರು ಎದುರಿಸಿದರು.

ತತಃ ಸಮಾನೇದುರುದಾಯುಧಾಸ್ತೇ
ಮಹೀಕ್ಷಿತೋ ಬದ್ಧತಲಾಂಗುಲಿತ್ರಾಃ ।
ಜಿಘಾಂಸಮಾನಾಃ ಕುರುರಾಜಸಿಂಹಾ-
ವಮರ್ಷಯಂತೋಽರ್ಜುನಭೀಮಸೇನೌ ॥೧೫॥

ಆಗ ಕೈಗಳಿಗೆ ಚರ್ಮದ ರಕ್ಷಣೆಗಳನ್ನು ಹಾಕಿಕೊಂಡು, ಆಯುಧಗಳನ್ನು ಎತ್ತಿಹಿಡಿದು ಗರ್ಜಿಸುತ್ತಾ ಕುರುರಾಜಸಿಂಹರಾದ ಭೀಮಾರ್ಜುನರನ್ನು ಕೊಲ್ಲಲು ಬಯಸಿ ಆ ರಾಜರು ಭೀಮಾರ್ಜುನರಿಗೆ ಕೋಪವನ್ನು ಉಂಟು ಮಾಡಿ ಗರ್ಜಿಸಿದರು.

ತತಸ್ತು ಭೀಮೋಽದ್ಭುತವೀರ್ಯಕರ್ಮಾ
ಮಹಾಬಲೋ ವಜ್ರಸಮಾನವೇಗಃ ।
ಉತ್ಪಾಟ್ಯ ದೋರ್ಭ್ಯಾಂ ದ್ರುಮಮೇಕವೀರೋ
ನಿಷ್ಪತ್ರಯಾಮಾಸ ಯಥಾ ಗಜೇಂದ್ರಃ ॥೧೬॥

ಆಗ ಅದ್ಭುತನೂ, ವೀರ್ಯಕರ್ಮನೂ, ಮಹಾಬಲನೂ, ವಜ್ರದ ವೇಗವುಳ್ಳವನೂ ಆದ ಭೀಮಸೇನನು ಎರಡೂ ಬಾಹುಗಳಿಂದ ಒಂದು ಮರವನ್ನು ಕಿತ್ತು ಅದರ ಎಲೆಗಳನ್ನು ಉದುರಿಸಿ ಗಜರಾಜನಂತೆ ನಿಂತನು.

ತಂ ವೃಕ್ಷಮಾದಾಯ ರಿಪುಪ್ರಮಾಥೀ
ದಂಡೀವ ದಂಡಂ ಪಿತೃರಾಜ ಉಗ್ರಮ್ ।
ತಸ್ಥೌ ಸಮೀಪೇ ಪುರುಷರ್ಷಭಸ್ಯ
ಪಾರ್ಥಸ್ಯ ಪಾರ್ಥಃ ಪೃಥುದೀರ್ಘಬಾಹುಃ ॥೧೭॥

ರಿಪುಹಿಂಸಕನಾದ ಪುಷ್ಟವಾದ ಮತ್ತು ದೀರ್ಘವಾದ ಬಾಹುಗಳುಳ್ಳ ಆ ಭೀಮನು ಯಮನು ಉಗ್ರವಾದ ತನ್ನ ದಂಡವನ್ನು ಹಿಡಿದಂತೆ ಆ ಮರವನ್ನು ಹಿಡಿದು ಪುರುಷಶ್ರೇಷ್ಠನಾದ ತನ್ನ ತಮ್ಮನಾದ ಅರ್ಜುನನ ಸಮೀಪದಲ್ಲಿ ನಿಂತನು.

ತದಂತರೇ ಧರ್ಮಸುತೋಽಪಿ ಗತ್ವಾ
ವಿಜ್ಞಾಯ ಕುಂತೀಂ ಕುಶಲೀಂ ಕ್ಷಣೇನ ।
ಆಗಮ್ಯ ತಸ್ಥೌ ಸಹ ಸೋದರಾಭ್ಯಾಂ
ಪುರುಷರ್ಷಭಾಭ್ಯಾಂ ಪುರುಷಪ್ರವೀರಃ ॥೧೮॥

ಈ ಮಧ್ಯದಲ್ಲಿ ಧರ್ಮರಾಜನೂ ಸಹ ತನ್ನ ಬಿಡಾರಕ್ಕೆ ಹೋಗಿ ಕುಂತಿಯ ಕ್ಷೇಮವನ್ನು ತಿಳಿದು ಶೀಘ್ರವಾಗಿ ಹಿಂದಿರುಗಿ ಪುರುಷಶ್ರೇಷ್ಠರಾದ ತನ್ನ ತಮ್ಮಂದಿರ ಜೊತೆಯಲ್ಲಿ ಪುರುಷಪ್ರವೀರನಾದ ಅವನೂ ನಿಂತನು.

ತದಾಽಬ್ರವೀಜ್ಜಿಷ್ಣುರುದಾರಕರ್ಮಾ
ಮಾ ಸಿಂಹನಾದಂ ಕುರು ಪೂರ್ವಜೇಹ ।
ಮಾ ಘೋರತಾಂ ದರ್ಶಯ ಶತ್ರುಮಧ್ಯೇ
ಸಾಧಾರಣಂ ಯೋಧಯ ತಾವದಾರ್ಯ ॥೧೯॥

ಆಗ ಉದಾರಕರ್ಮವನ್ನುಳ್ಳ ಭೀಮಸೇನನನ್ನು ಕುರಿತು, ಅಣ್ಣ ಸಿಂಹನಾದವನ್ನು ಮಾಡಬೇಡ. ಶತ್ರುಗಳ ಮಧ್ಯದಲ್ಲಿ ನಿನ್ನ ಉಗ್ರತನವನ್ನು ಪ್ರದರ್ಶಿಸಬೇಡ. ಸಾಧಾರಣವಾಗಿ ಯುದ್ಧವನ್ನು ಮಾಡು ಎಂದು ಹೇಳಿದನು.

ತತ್ ಪ್ರೇಕ್ಷ್ಯ ಕರ್ಮಾತಿಮನುಷ್ಯಬುದ್ಧಿ-
ರ್ಜಿಷ್ಣೋಃ ಸ ಹ ಭ್ರಾತುರುದಾರಕರ್ಮಾ ।
ದಾಮೋದರೋ ಭ್ರಾತರಮುಗ್ರವೀರ್ಯಂ
ಹಲಾಯುಧಂ ವಾಕ್ಯಮಿದಂ ಬಭಾಷೇ ॥೨೦॥

ಮನುಷ್ಯರಿಗೂ ಮೀರಿದ ಬುದ್ಧಿಯುಳ್ಳ ಉದಾರಕರ್ಮನಾದ ಅರ್ಜುನನು ತನ್ನ ಅಣ್ಣನ ಕರ್ಮವನ್ನು ನೋಡಿ ಹೀಗೆ ಮಾತನಾಡಿದನು. ಆಗ ಕೃಷ್ಣನು ಉಗ್ರವೀರ್ಯನಾದ ಹಲಾಯುಧನಾದ ತನ್ನ ಅಣ್ಣನನ್ನು ಕುರಿತು ಹೀಗೆ ಮಾತನಾಡಿದನು.

ಯ ಏಷ ಮತ್ತರ್ಷಗಜೇಂದ್ರಗಾಮೀ
ಮಹದ್ಧನುಃ ಕರ್ಷತಿ ತಾಲಮಾತ್ರಮ್ ।

ಏಷೋಽರ್ಜುನೋ ನಾತ್ರ ವಿಚಾರ್ಯಮಸ್ತಿ
ಯದ್ಯಸ್ಮಿ ಸಂಕರ್ಷಣ ವಾಸುದೇವಃ ॥೨೧॥

ಮತ್ತಗಜಗಾಮಿಯಾಗಿ ತಾಲಪ್ರಮಾಣದ ದೊಡ್ಡ ಧನುಸ್ಸನ್ನು ಬಗ್ಗಿಸುತ್ತಿರುವ ಇವನು ಅರ್ಜುನ. ಸಂಕರ್ಷಣನೇ, ನಾನು ಕೃಷ್ಣನೇ ಆದರೆ ಇವನು ಅರ್ಜುನನೇ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಯ ಏಷ ವೃಕ್ಷಂ ತರಸಾ ವಿರುಜ್ಯ
ರಾಜ್ಞಾಂ ವಿಕಾರೇ ಸಹಸಾಽನಿವೃತ್ತಃ ।
ವೃಕೋದರೋ ನಾನ್ಯ ಇಹೈತದದ್ಯ
ಕರ್ತುಂ ಸಮರ್ಥೋ ಭುವಿ ಮರ್ತ್ಯಧರ್ಮಃ ॥೨೨॥

ರಾಜರುಗಳು ಕೋಪವಿಕಾರಕ್ಕೆ ಒಳಗಾದಾಗ ಮಾಡುವಾಗ ಯಾವನು ವೇಗವಾಗಿ ಮರವನ್ನು ಕಿತ್ತು ಎಲೆಗಳನ್ನು ಉದುರಿಸಿ, ನಿವೃತ್ತನಾಗದೆ ಎದುರಿಗೆ ನಿಂತಿದ್ದಾನೆಯೋ ಅವನು ಭೀಮಸೇನ. ಭೂಮಿಯಲ್ಲಿ ಈದಿನ ಮರಣಶೀಲನಾದ ಯಾವ ಇನ್ನೊಬ್ಬ ವ್ಯಕ್ತಿಯೂ ಇಂತಹ ಕಾರ್ಯವನ್ನು ಮಾಡಲಾರ.

ಯೋಽಸೌ ಪುರಸ್ತಾತ್ ಕಮಲಾಯತಾಕ್ಷ್ಯಃ
ಧನುರ್ಮಹಾನ್ ಸಿಂಹಗತಿರ್ನ್ಯವೀರಃ ।
ಧೀರಃ ಪ್ರಚಂಡೋಜ್ಜ್ವಲಚಾರುಘೋಣೋ
ವಿನಿಸ್ಸೃತಃ ಸೋಽಪ್ಯಥ ಧರ್ಮಪುತ್ರಃ ॥೨೩॥

ಕಮಲನೇತ್ರೆಯಾದ ಕನ್ಯೆಯ ಎದುರಿಗೆ ದೊಡ್ಡ ಧನುಸ್ಸನ್ನು ಹಿಡಿದು ಸಿಂಹಗತಿಯನ್ನು ಹೊಂದಿರುವ ಉನ್ನತವಾದ ಸುಂದರ ನಾಸಿಕವನ್ನು ಹೊಂದಿರುವ ಈ ಧೀರನು ಮಾಲಾರ್ಪಣೆಗಿಂತ ಮೊದಲೇ ಹೊರಗೆ ಹೋಗಿದ್ದ ಯುಧಿಷ್ಠಿರ.

ಯೌ ತೌ ಕುಮಾರಾವಿವ ಕಾರ್ತಿಕೇಯೌ
ದ್ವಾವಾಶ್ವಿನೇಯಾವಿತಿ ಮೇ ವಿತರ್ಕಃ ।
ಮುಕ್ತಾ ಹಿ ತಸ್ಮಾಜ್ಜತುವೇಶ್ಮದಾಹಾ-
ನ್ಮಯಾ ಶ್ರುತಾಃ ಪಾಂಡುಸುತಾಃ ಪೃಥಾ ಚ ॥೨೪॥

ಷಣ್ಮುಖರಂತಿರುವ ಕುಮಾರರಾದ ಇವರಿಬ್ಬರು ಅಶ್ವಿನಿದೇವತೆಗಳ ಮಕ್ಕಳಾದ ನಕುಲ-ಸಹದೇವರು ಎಂದು ನನ್ನ ಊಹೆ. ಪಾಂಡವರೂ ಮತ್ತು ಕುಂತಿಯೂ ಜತುಗೃಹದಾಹದಿಂದ ಪಾರಾಗಿದ್ದಾರೆ ಎಂಬ ವಾರ್ತೆಯನ್ನು ನಾನು ಕೇಳಿದ್ದೇನೆ.

ವೈಶಂಪಾಯನಃ

ತಮಬ್ರವೀತ್ ತೋಯದನಿರ್ಮಲಾಭೋ
ಹಲಾಯುಧೋಽನಂತರಜಂ ಪ್ರತೀತಃ ।
ಪ್ರೀತೋಽಸ್ಮಿ ದೃಷ್ಟ್ವಾ ಹಿ ಪಿತೃಷ್ವಸಾಂ ನಃ
ಪೃಥಾ ವಿಮುಕ್ತಾ ಸಹ ಕೌರವಾಗ್ರ್ಯೈಃ ॥೨೫॥

ಆಗ ನಿರ್ಮಲವಾದ ಮೋಡದ ಕಾಂತಿಯನ್ನು ಹೊಂದಿದ್ದ ಹಲಾಯುಧನು ಸಂತೋಷದಿಂದ ತಮ್ಮನನ್ನು ಕುರಿತು ಮಾತನಾಡಿದನು. ನಮ್ಮ ಸೋದರತ್ತೆಯನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ಅವಳು ಕೌರವಶ್ರೇಷ್ಠರಾದ ಪಾಂಡವರ ಜೊತೆಯಲ್ಲಿ ಸಂಕಟದಿಂದ ಪಾರಾಗಿದ್ದಾಳೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಅಷ್ಟಾಶೀತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಸ್ವಯಂವರಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ಎಂಭತ್ತೆಂಟನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ವಿಪ್ರೇಷು ದಂಡಪಟದರ್ಭಮಹಾಜಿನಾನಿ
ಕೋಪಾತ್ ಕ್ಷಿಪತ್ಸು ನ ವಿನಾಶನಮತ್ರ ಭೂಯಾತ್ ।
ಕ್ಷತ್ರಸ್ಯ ವೈರತ ಇತಿ ದ್ರುಪದೇ ಚ ಕೃಷ್ಣಂ
ವಿಪ್ರಾಂಶ್ಚ ಯಾಚತಿ ಸ ಮಾರುತಿರಾರ ಶಲ್ಯಂ ॥೧೩೭॥

ಬ್ರಾಹ್ಮಣರು ಕೋಪದಿಂದ ದಂಡ ಧೋತ್ರ ದರ್ಭೆ ಕೃಷ್ಣಾಜಿನಗಳನ್ನು ಎಸೆದಾಗ, ಬ್ರಾಹ್ಮಣರ ಕ್ರೋಧದಿಂದ ಕ್ಷತ್ರಿಯರ ವಿನಾಶವಾಗಬಾರದೆಂದು ಕೃಷ್ಣನನ್ನೂ ಬ್ರಾಹ್ಮಣರನ್ನೂ ದ್ರುಪದ ಬೇಡಿಕೊಳ್ಳುತ್ತಿದ್ದಾಗ ಅತ್ತ ಭೀಮ ಶಲ್ಯವನ್ನು ಇದಿರಿಸಿದ.

ವೃಕ್ಷಂ ತ್ವಸೌ ಪ್ರತಿನಿಧಾಯ ಚ ಮದ್ರರಾಜಂ
ದೋರ್ಭ್ಯಾಂ ಪ್ರಗೃಹ್ಯ ಜವತೋ ಗಗನೇ ನಿಧಾಯ ।
ಬಂಧುತ್ವತೋ ಭುವಿ ಶನೈರದಧಾತ್‌ಸ ತಸ್ಯ
ವಿಜ್ಞಾಯ ವೀರ್ಯಮಗಮನ್ನಿಜರಾಜಧಾನೀಂ ॥೧೩೮॥

ಭೀಮ ಮರವನ್ನು ಕೆಳಗಿಟ್ಟು ಬೇಗನೆ ಶಲ್ಯವನ್ನು ಎರಡು ಕೈಗಳಿಂದ ಆಕಾಶದಲ್ಲಿ ಎತ್ತಿಹಿಡಿದು ಬಂಧುತ್ವ ಪ್ರಯುಕ್ತ ಮೆಲ್ಲಗೆ ನೆಲಕ್ಕೆ ಇಳಿಸಿದ. ಆಗ ಶಲ್ಯ ಭೀಮನ ಬಾಏಹುಬಲವನ್ನು ತಿಳಿದು ತನ್ನ ರಾಜಧಾನಿಗೇ ಹಿಂತಿರುಗಿದ.

ಪಾರ್ಥೋ೯ऽಪಿ ತೇನ ಧನುಷಾ ಯುಯುಧೇ ಸ್ಮ ಕರ್ಣಂ
ಸೋऽಪ್ಯಸ್ತ್ರ ಬಾಹುಬಲಮಾವಿರಮುತ್ರ ಚಕ್ರೇ ।
ತೌ ಧನ್ವಿನಾಮನುಪಮೌ ಚಿರಮಸ್ಯತಾಂ ಚ
ಸೂರ್ಯಾತ್ಮಜೋऽತ್ರ ವಚನಂ ವ್ಯಥಿತೋ ಬಭಾಷೇ ॥೧೩೯॥

ಅರ್ಜುನ ಅದೇ ಬಿಲ್ಲಿನಿಂದ ಕರ್ಣನೊಡನೆ ಯುದ್ಧಮಾಡಿದ. ಕರ್ಣನೂ ಅಸ್ತ್ರಬಲ ಬಾಹುಬಲಗಳನ್ನು ಅವನ ಮುಂದೆ ಪ್ರದರ್ಶಿಸಿದ. ಇಬ್ಬರೂ ಅನುಪಮ ಬಿಲ್ಲುಗಾರರು. ಬಹುಹೊತ್ತು ಬಾಣಗಳನ್ನು ಎಸೆದರು. ಬಳಿಕ ಕರ್ಣ ವ್ಯಥಿತನಾಗಿ ನುಡಿದ.

ತ್ವಂ ಫಲ್ಗುನೋ ಹರಿಹಯೋ ದ್ವಿಜಸತ್ತಪೋ ವಾ
ಮೂರ್ತಂ ನ ಮೇ ಪ್ರಮುಖತಃ ಸ್ಥಿತಿಮನ್ಯ ಈಷ್ಟೇ ।
ಯೋ ವಾಸ್ಮಿ ಕೋಽಪಿ ಯದಿ ತೇ ಕ್ಷಮಮದ್ಯ ಬಾಣಾನ್
ಮುಂಚಾನ್ಯಥೇಹಿ ರಣತಸ್ತಿ ತ್ವಿ ಪಾರ್ಥ ಆಹ ॥೧೪೦॥

'ನೀನು ಅರ್ಜುನನೊ? ಇಂದ್ರನೋ? ಅಥವಾ ಮೂರ್ತಿಮತ್ತಾಗಿ ಬಂದು ನಿಂತ ಬ್ರಾಹ್ಮಣರ ತಪಸ್ಸೊ? ಬೇರೆ ಯಾರೂ ನನ್ನ ಮುಂದೆ ನಿಲ್ಲಲು ಶಕ್ತನಾಗಲಾರ' ಎಂದ ಕರ್ಣ. ಅರ್ಜುನನೆಂದ, 'ನಾನು ಯಾರಾದರೇನು? ನಿನಗೆ ಶಕ್ತಿ ಇದ್ದರೆ ಬಾಣಗಳನ್ನು ಎಸೆ. ಇಲ್ಲದಿದ್ದರೆ ಯುದ್ಧದಿಂದ ಹಿಂತಿರುಗಿ ಹೋಗು.

ಕಾರ್ಯಂ ನ ಮೇ ದ್ವಿಜವರೈಃ ಪ್ರತಿಯೋಧನೇನೇ-
ತ್ಯುಕ್ತ್ವಾ ಯಯೌ ರವಿಸುತಃ ಸ ಸುಯೋಧನಾದ್ಯೈಃ ।
ನಾಗಾಹ್ವಯಂ ಪುರಮಥ ದ್ರುಪದಾತ್ಮಜಾಂ ತಾ-
ಮಾದಾಯ ಚಾರ್ಜುನಯುತಃ ಪ್ರಯಯೌ ಸ ಭೀಮಃ ॥೧೪೧॥

'ಬ್ರಾಹ್ಮಣೋತ್ತಮರೊಂದಿಗೆ ಯುದ್ಧದಿಂದ ನನಗೆ ಏನು ಫಲವಿಲ್ಲ' ಎಂದು ಹೇಳಿ ಕರ್ಣ ದುರ್ಯೋಧನಾದಿಗಳೊಡನೆ ಹಸ್ತಿನಾವತಿಗೆ ಹೊರಟು ಹೋದ. ಬಳಿಕ ಭೀಮ ಅರ್ಜುನನೊಂದಿಗೆ ದ್ರೌಪದಿಯನ್ನು ಕರೆದುಕೊಂಡು ನಡೆದ.

ಅಗ್ರೇಽಶ್ವಿಪುತ್ರಸಹಿತಃ ಸ ತು ಧರ್ಮಸೂನುಃ
ಪ್ರಾಯಾತ್‌ಕುಲಾಲಗೃಹಮನ್ವಪಿ ಭೀಮಪಾರ್ಥೌ ।
ಭಿಕ್ಷೇತಿ ತೈರಭಿಹಿತೇ ಪ್ರಜಗಾದ ಕುಂತೀ
ಭುಜ್‌ಧ್ವಂ ಸಮಸ್ತಶ ಇತಿ ಪ್ರದದರ್ಶ ಕನ್ಯಾಂ ॥೧೪೨॥

ಮುಂದಿನಿಂದ ನಕುಲ ಸಹದೇವರೊಂದಿಗೆ ಧರ್ಮರಾಜ ನಡೆದು ಕುಂಬಾರನ ಮನೆಗೆ ಬಂದ. ಹಿಂದಿನಿಂದ ಭೀಮಾರ್ಜುನರೂ ಬಂದರು. 'ಭಿಕ್ಷೆ ಸಿಕ್ಕಿತು' ಎಂದು ಅವರು ಹೇಳಿದಾಗ ಕುಂತಿ 'ಎಲ್ಲರೂ ಸ್ವೀಕರಿಸಿರಿ' ಎಂದಳು. ಬಳಿಕ ಕನ್ಯೆಯನ್ನು ಕಂಡಳು.

★ ★ ★ ★

ನೂರ ಎಂಭತ್ತೊಂಭತ್ತನೆಯ ಅಧ್ಯಾಯ

(ಕರ್ಣಾರ್ಜುನರ, ಭೀಮಶಲ್ಯರ, ಧರ್ಮರಾಜ ಸುಯೋಧನರ, ದ್ವಂದ್ವ ಯುದ್ಧ, ಕರ್ಣಾದಿಗಳ ಪರಾಜಯ, ಪಶ್ಚಾತ್‌ನಿವೃತ್ತಿ, ಭೀಮಾರ್ಜುನರಿಂದ ದ್ರೌಪದಿಯನ್ನು ಕರೆದುಕೊಂಡು ಕುಂತಿಯ ಸಮೀಪಗಮನ)

ವೈಶಂಪಾಯನಃ

ಅಜಿನಾನ್ಯವಧುನ್ವಂತಃ ಕರಕಾಂಶ್ಚ ದ್ವಿಜರ್ಷಭಾಃ ।
ಊಚುಸ್ತೇ ಭೀರ್ನ ಕರ್ತವ್ಯಾ ವಯಂ ಯೋತ್ಸ್ಯಾಮಹೇ ರಿಪೂನ್ ॥

ಬ್ರಾಹ್ಮಣಶ್ರೇಷ್ಠರು ತಮ್ಮ ಕೃಷ್ಣಾಜಿನಗಳನ್ನು ಮತ್ತು ಕಮಂಡಲಗಳನ್ನು ಕೊಡವುತ್ತಾ ಹೆದರಬೇಡಿ ನಾವು ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವೆವು ಎಂದು ಹೇಳಿದರು.

ತಾನೇವಂ ವದತೋ ವಿಪ್ರಾನರ್ಜುನಃ ಪ್ರಹಸನ್ನಿವ ।
ಉವಾಚ ಪ್ರೇಕ್ಷಕಾ ಭೂತ್ವಾ ಯೂಯಂ ತಿಷ್ಠತ ಪಾರ್ಶ್ವತಃ ॥೨॥

ಹೀಗೆ ಮಾತನಾಡುವ ಬ್ರಾಹ್ಮಣರನ್ನು ಕುರಿತು ಅರ್ಜುನನು ನಗುತ್ತಾ ನೀವು ಒಂದು ಕಡೆ ಪ್ರೇಕ್ಷಕರಾಗಿರಿ ಸಾಕು ಎಂದು ಹೇಳಿದನು.

ಅಹಮೇನಾನಜಿಹ್ಮಾಗ್ರೈಃ ಶತಶೋ ವಿಕಿರಂಛರೈಃ ।
ವಾರಯಿಷ್ಯಾಮಿ ಸಂಕ್ರುದ್ಧಾನ್ ಮಂತ್ರೈರಾಶಾವಿಷಾನಿವ ॥೩॥

ಹರಿತವಾದ ಅಗ್ರವಿರುವ ನೂರಾರು ಬಾಣಗಳನ್ನು ಪ್ರಯೋಗಿಸಿ ಸಂಕ್ರುದ್ಧರಾದ ಇವರನ್ನು ಮಂತ್ರಗಳಿಂದ ಸರ್ಪಗಳನ್ನು ನಿಗ್ರಹಿಸಿದಂತೆ ನಾನೇ ನಿರೋಧಿಸುವೆನು.

ಇತ್ಯುಕ್ತ್ವಾ ಧನುರಾದಾಯ ಶುಲ್ಕವಾಪ್ತಮಹಾರಥಃ ।
ಭ್ರಾತ್ರಾ ಭೀಮೇನ ಸಹಿತಃ ತಸ್ಥೌ ಗಿರಿರಿವಾಚಲಃ ॥೪॥

ಹೀಗೆ ಹೇಳಿ ಸ್ವಯಂವರದಲ್ಲಿ ಶುಲ್ಕವಾಗಿ ಪಡೆದ ರಥವನ್ನೇರಿ ಧನುಸ್ಸನ್ನು ಹಿಡಿದು ಅಣ್ಣನಾದ ಭೀಮನ ಜೊತೆಯಲ್ಲಿ ಪರ್ವತದಂತೆ ಸ್ಥಿರವಾಗಿ ನಿಂತನು

ತತಃ ಕರ್ಣಮುಖಾನ್ ಕ್ರುದ್ಧಾನ್ ಕ್ಷತ್ರಿಯಾನ್ ಸಮುಪಸ್ಥಿತಾನ್ ।
ಆಸೇದತುರುಭೌ ಪಾರ್ಥೌ ಗಜೌ ಪ್ರತಿಗಜಾನಿವ ॥೫॥

ಅನಂತರ ಕರ್ಣ ಮೊದಲಾದ ಎದುರಿಗಿರುವ ಕ್ರುದ್ಧರಾದ ಕ್ಷತ್ರಿಯ ಸಮೂಹವನ್ನು ಎರಡು ಗಜಗಳು ಪ್ರತಿಗಜಗಳ ಮೇಲೆ ಎರಗಿದಂತೆ ಭೀಮಾರ್ಜುನರಿಬ್ಬರೂ ಸಮೀಪಿಸಿದರು.

ಊಚುಶ್ಚ ವಾಚಃ ಪರುಷಾಃ ತೇ ರಾಜಾನೋ ಯುಯುತ್ಸವಃ ।
ಆಹವೇಷು ದ್ವಿಜಸ್ಯಾಪಿ ವಧೋ ದೃಷ್ಟೋ ಯುಯುತ್ಸತಃ ॥೬॥

ಯುದ್ಧ ಮಾಡುವ ಇಚ್ಛೆಯನ್ನು ಹೊಂದಿದ್ದ ಆ ರಾಜರುಗಳು ಯುದ್ಧದಲ್ಲಿ ಯುದ್ಧ ಮಾಡುವ ಬ್ರಾಹ್ಮಣನ ವಧೆಯೂ ಧಾರ್ಮಿಕವಾಗಿದೆ ಎಂದು ಒರಟಾದ ಮಾತುಗಳನ್ನು ಆಡಿದರು.

ತತೋ ವೈಕರ್ತನಃ ಕರ್ಣೋ ಜಗಾಮಾರ್ಜುನಮೋಜಸಾ ।
ಯುದ್ಧಾರ್ಥೀ ವಾಸಿತಾಹೇತೋರ್ಗಜಃ ಪ್ರತಿಗಜಂ ಯಥಾ ॥೭॥

ಅನಂತರ ವೈಕರ್ತನನಾದ ಕರ್ಣನು ಯುದ್ಧವನ್ನು ಬಯಸಿ, ಮೊದಲನೆಯ ಸಲ ಋತುಮತಿಯಾದ ಹೆಣ್ಣಾನೆಯ ಸಮೀಪದಲ್ಲಿರುವ ಗಜವನ್ನು ಕುರಿತು ಪ್ರತಿಗಜವು ಹೋದಂತೆ ತನ್ನ ಸಾಮರ್ಥ್ಯದಿಂದ ಅರ್ಜುನನನ್ನು ಸಮೀಪಿಸಿದನು.

ಭೀಮಸೇನಂ ಯಯೌ ರಾಜಾ ಮದ್ರಾಣಾಮೀಶ್ವರೋ ಬಲೀ ।
ದುರ್ಯೋಧನಾದಯಃ ಸರ್ವೇ ಬ್ರಾಹ್ಮಣೈಃ ಸಹ ಸಂಗತಾಃ ॥೮॥

ಮದ್ರರಾಜನಾದ ಬಲಿಷ್ಠನಾದ ಶಲ್ಯನು ಭೀಮಸೇನನ ಜೊತೆಯಲ್ಲಿ ಯುದ್ಧಕ್ಕೆ ಹೋದನು. ದುರ್ಯೋಧನಾದಿಗಳೆಲ್ಲರೂ ಬ್ರಾಹ್ಮಣರ ಜೊತೆಯಲ್ಲಿ ಸೇರಿದರು.

ಮೃದುಪೂರ್ವಮಯತ್ನೇನ ಪ್ರತ್ಯಯುಧ್ಯಂಸ್ತದಾऽऽಹವೇ ।
ತತೋऽರ್ಜುನಃ ಪ್ರತ್ಯವಿಧ್ಯತ್ ತಾಪಯಂಸ್ತಂ ತ್ರಿಭಿಃ ಶರೈಃ ॥೯॥

ಕರ್ಣಂ ವೈಕರ್ತನಂ ಧೀಮಾನ್ ವಿಕೃಷ್ಯ ಬಲವದ್ ಧನುಃ ।
ಬಲೇನ ಸುವ್ಯವಚ್ಛಿನ್ನೈರವಾರ್ಯಂ ತಮವಾರಯತ್ ॥೧೦॥

ಅರ್ಜುನನು ಮೊದಲು ಹೆಚ್ಚು ಪ್ರಯತ್ನ ಪಡದೆ ಮೃದುವಾಗಿ ಯುದ್ಧ ಮಾಡಿದನು. ಅನಂತರ ಮೇಧಾವಿಯಾದ ಅವನು ದೃಢವಾದ ಧನುಸ್ಸನ್ನು ಎಳೆದು ಮೂರು ಬಾಣಗಳಿಂದ ಸೂರ್ಯಪುತ್ರನಾದ ಕರ್ಣನನ್ನು ಗಾಯಗೊಳಿಸಿ ಅವನಿಗೆ ತಾಪವನ್ನು ಉಂಟುಮಾಡಿದನು. ಯಾರಿಂದಲೂ ತಡೆಯಲು ಅಸಾಧ್ಯನಾದ ಆ ಕರ್ಣನನ್ನು ಬಲದಿಂದ ಪ್ರಯೋಗ ಮಾಡಿದ ತನ್ನ ಶ್ರೇಷ್ಠವಾದ ಬಾಣಗಳಿಂದ ತಡೆದನು.

ತೇಷಾಂ ಶರಾಣಾಂ ವೇಗೇನ ಶಿತಾನಾಂ ತಿಗ್ಮತೇಜಸಾಮ್ ।
ವಿಮೋಹ್ಯಮಾನೋ ರಾಧೇಯೋ ಯತ್ನಾತ್ ತಮನುಧಾವತಿ ॥೧೧॥

ಕ್ರೂರತೇಜಸ್ಸುಳ್ಳ ಹರಿತವಾದ ಆ ಬಾಣಗಳ ವೇಗದಿಂದ ಗಾಯಗೊಂಡು ಮೋಹವನ್ನು ಹೊಂದಿದವನಾಗಿ ಕರ್ಣನು ಬಹಳ ಕಷ್ಟಪಟ್ಟು ಅರ್ಜುನನನ್ನು ಎದುರಿಸಿ ಯುದ್ಧಮಾಡಿದನು.

ತಾವುಭಾವಪ್ಯನಿರ್ದೇಶ್ಯೌ ಲಾಘವಾಜ್ಜಯತಾಂ ವರೌ ।
ಅಯುಧ್ಯೇತಾಂ ಸುಸಂಕ್ರುದ್ಧಾವನ್ಯೋನ್ಯಂ ವಿಜಯೈಷಿಣೌ ॥೧೨॥

ಅನಿರ್ದೇಶ್ಯವಾದ ಕ್ಷಿಪ್ರತೆಯನ್ನು ಹೊಂದಿದ್ದ ಜಯಶಾಲಿಗಳಲ್ಲಿ ಶ್ರೇಷ್ಠರಾದ ಅವರಿಬ್ಬರೂ ಪರಸ್ಪರ ವಿಜಯವನ್ನು ಬಯಸಿ ಬಹಳ ಕ್ರೋಧದಿಂದ ಯುದ್ಧಮಾಡಿದರು.

ಕೃತೇ ಪ್ರತಿಕೃತಂ ಪಶ್ಯ ಪಶ್ಯ ಬಾಹುಬಲಂ ಚ ಮೇ ।
ಇತಿ ಶೂರೌ ಸ್ವವಚನೈರಭಾಷೇತಾಂ ಪರಸ್ಪರಮ್ ॥೧೩॥

ತತೋಽರ್ಜುನಸ್ಯ ಭುಜಯೋರ್ವೀರ್ಯಮಪ್ರತಿಮಂ ಭುವಿ ।
ಜ್ಞಾತ್ವಾ ವೈಕರ್ತನಃ ಕರ್ಣಃ ಸಂರಬ್ಧಃ ಸಮಯೋಧಯತ್ ॥೧೪॥

ನಿನ್ನ ಕಾರ್ಯಕ್ಕೆ ನನ್ನ ಪ್ರತೀಕಾರವನ್ನು ನೋಡು ನನ್ನ ಬಾಹುಬಲವನ್ನು ನೋಡು ಎಂದು ತಮ್ಮ ಮಾತುಗಳಿಂದ ಆ ಶೂರರು ಪರಸ್ಪರವಾಗಿ ಹೇಳಿದರು. ಆಗ ಯುದ್ಧದಲ್ಲಿ ಅರ್ಜುನನ ಬಲವು ಭೂಮಿಯಲ್ಲಿ ಅಸದೃಶವಾದುದೆಂದು ತಿಳಿದು ಸೂರ್ಯಪುತ್ರನಾದ ಕರ್ಣನು ಕೋಪದಿಂದ ಯುದ್ಧಮಾಡಿದನು.

ಅರ್ಜುನೇನ ಪ್ರಯುಕ್ತಾಂಸ್ತಾನ್ ಬಾಣಾನ್ ವೇಗವತಸ್ತಥಾ ।
ಪ್ರತಿಹತ್ಯ ನನಾದೋಚ್ಚೈಃ ಸೈನ್ಯಾಸ್ತಮಭಿಪೂಜಯನ್ ॥೧೫॥

ಅರ್ಜುನನಿಂದ ಪ್ರಯುಕ್ತವಾದ ಆ ವೇಗವುಳ್ಳ ಬಾಣಗಳನ್ನು ವಿನಾಶ ಮಾಡಿ ಗಟ್ಟಿಯಾದ ಸಿಂಹನಾದವನ್ನು ಮಾಡಿದನು. ಸೈನ್ಯದಲ್ಲಿದ್ದವರೆಲ್ಲರೂ ಕರ್ಣನ ಕೌಶಲವನ್ನು ಪೂಜಿಸಿದರು.

ಕರ್ಣಃ

ತುಷ್ಯಾಮಿ ತೇ ವಿಪ್ರಮುಖ್ಯ ಭುಜವೀರ್ಯಸ್ಯ ಸಂಯುಗೇ ।
ಅವಿಷಾದಸ್ಯ ಚೈವಾಸ್ಯ ಶಸ್ತ್ರಾಸ್ತ್ರವಿಷಯಸ್ಯ ಚ ॥೧೬॥

ಬ್ರಾಹ್ಮಣಶ್ರೇಷ್ಠನೇ, ಯುದ್ಧದಲ್ಲಿ ನಿನ್ನ ಧೈರ್ಯವನ್ನೂ ಈ ಶಸ್ತ್ರಾಸ್ತ್ರಗಳ ವಿಷಯಕವಾದ ನಿನ್ನ ಭುಜವೀರ್ಯವನ್ನೂ ನೋಡಿ ನನಗೆ ಸಂತೋಷವಾಗಿದೆ.

ಕಿಂ ತ್ವಂ ಸಾಕ್ಷಾದ್ ಧನುರ್ವೇದೋ ರಾಮೋ ವಾ ವಿಪ್ರಸತ್ತಮಃ ।
ಅಥ ಸಾಕ್ಷಾದ್ಧರಿಹಯಃ ಸಾಕ್ಷಾದ್ವಾ ವಿಷ್ಣುರವ್ಯಯಃ ॥೧೭॥

ನೀನೇನು ಶರೀರವನ್ನು ಧರಿಸಿ ಬಂದ ಧನುರ್ವೇದವೋ, ಅಥವಾ ಬ್ರಾಹ್ಮಣಶ್ರೇಷ್ಠನಾದ ಪರಶುರಾಮನೋ ಅಥವಾ ಸಾಕ್ಷಾದ್ ಇಂದ್ರನೋ ಅಥವಾ ಅವ್ಯಯನಾದ ಸಾಕ್ಷಾದ್ ವಿಷ್ಣುವೋ?

ಆತ್ಮಪ್ರಚ್ಛಾದನಾರ್ಥಂ ವೈ ಬಾಹುವೀರ್ಯಮುಪಾಶ್ರಿತಃ ।
ವಿಪ್ರರೂಪಂ ವಿಧಾಯೇದಂ ತತೋ ಮಾಂ ಪ್ರತಿಯುಧ್ಯಸೇ ॥೧೮॥

ನಿನ್ನ ನಿಜವಾದ ರೂಪವನ್ನು ಮರೆಮಾಡಿಕೊಳ್ಳಲು ಬ್ರಾಹ್ಮಣ ರೂಪವನ್ನು ಧರಿಸಿ, ಬಾಹುವೀರ್ಯವನ್ನು ಅವಲಂಬಿಸಿ ನನ್ನ ಜೊತೆಯಲ್ಲಿ ಯುದ್ಧ ಮಾಡುತ್ತಿದ್ದೀಯೆ.

ನ ಹಿ ಮಾಮಾಹವೇ ಕ್ರುದ್ಧಮನ್ಯಃ ಸಾಕ್ಷಾಚ್ಛಚೀಪತೇಃ ।
ಪುಮಾನ್ ಯೋಧಯಿತುಂ ಶಕ್ತಃ ಪಾಂಡವಾದ್ವಾ ಕಿರೀಟಿನಃ ॥೧೯॥

ಯುದ್ಧದಲ್ಲಿ ಕೋಪಗೊಂಡ ನನ್ನ ಜೊತೆಯಲ್ಲಿ ಸಾಕ್ಷಾದ್ ಇಂದ್ರನನ್ನು ಬಿಟ್ಟು, ಅಥವಾ ಪಾಂಡುಪುತ್ರನಾದ ಅರ್ಜುನನನ್ನು ಬಿಟ್ಟು ಬೇರೆ ಯಾರೂ ಎದುರಿಗೆ ನಿಂತು ಯುದ್ಧಮಾಡಲು ಶಕ್ತರಲ್ಲ.

ತ್ವಾಮಾಸಾದ್ಯ ಮಹಾಬಾಹೋ ಬಲಂ ಮೇ ಪ್ರತಿಹನ್ಯತೇ ।
ದಗ್ಧಾ ಜತುಗೃಹೇ ಸರ್ವೇ ಪಾಂಡವಾಃ ಸಾರ್ಜುನಾಸ್ತದಾ ॥೨೦॥

ಮಹಾಬಾಹುವೇ, ನಿನ್ನನ್ನು ಎದುರಿಸಿ ನನ್ನ ಬಲವು ಕುಂದಿಹೋಗುತ್ತಿದೆ. ಅರ್ಜುನನ ಜೊತೆಯಲ್ಲಿ ಎಲ್ಲಾ ಪಾಂಡವರೂ ಆಗ ಜತುಗೃಹದಲ್ಲಿ ದಗ್ಧರಾದರಷ್ಟೇ.

ವೈಶಂಪಾಯನಃ

ಇತ್ಯುವಾಚಾರ್ಜುನಮಿದಂ ಪ್ರತ್ಯಾಹಂತುಮಶಕ್ನುವನ್ ।
ತಮೇವಂವಾದಿನಂ ತತ್ರ ಪ್ರತ್ಯುವಾಚಾಥ ಫಲ್ಗುನಃ ॥೨೧॥

ಅರ್ಜುನನ ಶಸ್ತ್ರಗಳಿಗೆ ಪ್ರತೀಕಾರ ಮಾಡಲು ಅಶಕ್ತನಾದ ಕರ್ಣನು ಹೀಗೆ ಮಾತನಾಡಿದನು. ಆಗ ಹೀಗೆ ಮಾತನಾಡುವ ಕರ್ಣನನ್ನು ಕುರಿತು ಅಲ್ಲಿ ಅರ್ಜುನನು ಪ್ರತ್ಯುತ್ತರವನ್ನು ಕೊಟ್ಟನು.

ನಾಸ್ಮಿ ಕರ್ಣ ಧನುರ್ವೇದೋ ನಾಸ್ಮಿ ರಾಮಃ ಪ್ರತಾಪವಾನ್ ।
ನಾಹಂ ವಿಷ್ಣುರ್ನ ಶಕ್ರೋಽಹಂ ಕಶ್ಚಿದನ್ಯೋ ಬಲಾನ್ವಿತಃ ॥೨೨॥

ಕರ್ಣನೇ, ನಾನು ಧನುರ್ವೇದವಲ್ಲ, ಪ್ರತಾಪಶಾಲಿಯಾದ ಪರಶುರಾಮನೂ ಅಲ್ಲ, ನಾನು ವಿಷ್ಣುವೂ ಅಲ್ಲ, ಇಂದ್ರನೂ ಅಲ್ಲ. ನಾನು ಇವರಿಗಿಂತ ಅನ್ಯನಾದ ಬಲಾಢ್ಯನಾದ ಒಬ್ಬ ವ್ಯಕ್ತಿ.

ಬ್ರಾಹ್ಮಣೋಽಸ್ಮಿ ಯುಧಾಂ ಶ್ರೇಷ್ಠ ಸರ್ವಶಸ್ತ್ರಭೃತಾಂ ವರಃ ।
ಬ್ರಾಹ್ಮೇ ಚಾಸ್ತ್ರೇ ಚ ವೇದೇ ಚ ನಿಷ್ಠಿತೋ ಗುರುಶಾಸನಾತ್ ॥೨೩॥

ಯುದ್ಧಮಾಡುವವರಲ್ಲಿ ಶ್ರೇಷ್ಠನಾದವನೇ, ನಾನು ಎಲ್ಲಾ ಶಸ್ತ್ರಭೃತರಲ್ಲಿ ಶ್ರೇಷ್ಠನಾದ ಒಬ್ಬ ಬ್ರಾಹ್ಮಣ. ಅಸ್ತ್ರಗಳಲ್ಲಿಯೂ, ವೇದಗಳಲ್ಲಿಯೂ ಮತ್ತು ಉಳಿದ ಬ್ರಹ್ಮವಿದ್ಯೆಯಲ್ಲಿಯೂ ಗುರುಗಳ ಶಾಸನದಂತೆ ನಾನು ನಿಷ್ಠೆಯುಳ್ಳವನಾಗಿದ್ದೇನೆ.

ಸ್ಥಿತೋಽಸ್ಮ್ಯಥ ರಣೇ ಜೇತುಂ ತ್ವಾಂ ವೀರ ವಿಚಲೋ ಭವ ।
ನಿರ್ಜಿತೋಽಸ್ಮೀತಿ ವಾ ಬ್ರೂಹಿ ತತೋ ವ್ರಜ ಯಥಾಸುಖಮ್ ॥೨೪॥

ಈಗ ನಿನ್ನನ್ನು ಗೆಲ್ಲಲು ನಾನು ಯುದ್ಧದಲ್ಲಿ ಉಪಸ್ಥಿತನಾಗಿದ್ದೇನೆ. ವೀರನೇ ಸ್ಥಿರವಾಗಿರು. (ಸ್ಥಿರವಾಗಿ ನಿಂತು ಯುದ್ಧಮಾಡು) ಇಲ್ಲದಿದ್ದರೆ ನಾನು ಸೋತಿದ್ದೇನೆ ಎಂದು ಹೇಳಿ ಸುಖವಾಗಿ ಮನೆಗೆ ಹಿಂದಿರುಗು.

ವೈಶಂಪಾಯನಃ

ಏವಮುಕ್ತ್ವಾ ತು ಕರ್ಣಸ್ಯ ಧನುರ್ಜ್ಯಾಮಥ ಸೋಽಚ್ಛಿನತ್ ।
ತತಃ ಕರ್ಣವಿನಾಶಾಯ ಸಂದಧೇ ಶರಮರ್ಜುನಃ ।
ಜಿತೋಽಸ್ಮೀತ್ಯಬ್ರವೀತ್ ಕರ್ಣಃ ಸಂಜಹಾರ ತತೋಽರ್ಜುನಃ ॥೨೫॥

ಹೀಗೆ ಮಾತನಾಡಿ ಅರ್ಜುನನು ಕರ್ಣನ ಧನುಸ್ಸಿನ ಹೆದೆಯನ್ನು ಕತ್ತರಿಸಿದನು. ಅನಂತರ, ಕರ್ಣವಿನಾಶವನ್ನು ಉದ್ದೇಶಿಸಿ ಬಿಲ್ಲಿನಲ್ಲಿ ಬಾಣವನ್ನು ಹೂಡಿದನು. ಆಗ ಕರ್ಣನು ಸೋತಿದ್ದೇನೆ ಎಂದು ಹೇಳಿದನು. ಅರ್ಜುನನು ಬಾಣವನ್ನು ಉಪಸಂಹಾರ ಮಾಡಿದನು.

ಯುದ್ಧಾಯೋಪಗತೌ ತತ್ರ ರಾಜನ್ ಶಲ್ಯವೃಕೋದರೌ ।
ಬಲಿನೌ ಯುಗಪನ್ಮತ್ತೌ ಸ್ಪರ್ಧಯಾ ಚ ಬಲೇನ ಚ ।
ಅನ್ಯೋನ್ಯಮಾಹ್ವಯಂತೌ ತೌ ಮತ್ತಾವಿವ ಮಹಾಗಜೌ ॥೨೬॥

ರಾಜನೇ, ಅಲ್ಲಿ ಬಲಿಷ್ಠರಾದ ಶಲ್ಯವೃಕೋದರರು ಯುದ್ಧಕ್ಕೆ ಸಿದ್ಧರಾಗಿ ಒಬ್ಬರನ್ನೊಬ್ಬರು ಆಹ್ವಾನಿಸುತ್ತಾ ಸ್ಪರ್ಧೆಯಿಂದಲೂ ಮತ್ತು ಬಲದಿಂದಲೂ ಮತ್ತರಾಗಿ ಎರಡು ಮದಿಸಿದ ಮಹಾಗಜಗಳಂತೆ ಯುದ್ಧಮಾಡಿದರು.

ಮುಷ್ಟಿಭಿರ್ಜಾನುಭಿಶ್ಚೈವ ನಿಘ್ನಂತಾವಿತರೇತರಮ್ ।
ಮುಹೂರ್ತಂ ತಾವಥಾನ್ಯೋನ್ಯಂ ಬಾಹುಭ್ಯಾಮಪಕರ್ಷತಾಮ್ ॥೨೭॥

ಒಂದು ಮಹೂರ್ತದ ಕಾಲ ಪರಸ್ಪರವಾಗಿ ಮುಷ್ಟಿಗಳಿಂದಲೂ, ಮಂಡಿಗಳಿಂದಲೂ ಪ್ರಹಾರಮಾಡುತ್ತಾ ಅನಂತರ ಬಾಹುಗಳಿಂದ ಅವರು ಒಬ್ಬರನ್ನೊಬ್ಬರು ಎಳೆದಾಡಿದರು.

ತತೋ ಭೀಮಃ ಸಮುತ್ಕ್ಷಿಪ್ಯ ಬಾಹುಭ್ಯಾಂ ಶಲ್ಯಮಾಹವೇ ।
ನಾವಧೀದ್ ಬಲಿನಾಂ ಶ್ರೇಷ್ಠೋ ಜಹಸುರ್ಬ್ರಾಹ್ಮಣಾಸ್ತದಾ ॥೨೮॥

ಅನಂತರ ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮನು ಯುದ್ಧದಲ್ಲಿ ತನ್ನ ಬಾಹುಗಳಿಂದ ಶಲ್ಯನನ್ನು ಮೇಲಕ್ಕೆಸೆದು ಕೊಲ್ಲಲಿಲ್ಲ. (ಚೆಂಡಿನಂತೆ ಮೇಲಕ್ಕೆಸೆದು ಪುನಃ ಚೆಂಡಿನಂತೆಯೇ ಅವನನ್ನು ಹಿಡಿದುಕೊಂಡು ಭೂಮಿಯ ಮೇಲೆ ನಿಲ್ಲಿಸಿದನು) ಆಗ ಬ್ರಾಹ್ಮಣರೆಲ್ಲರೂ ನಕ್ಕರು.

ತತೋ ರಾಜಸಮೂಹಸ್ಯ ಸಂಕ್ರುದ್ಧೋ ವೃಕ್ಷಮಾರುಜತ್ ।
ತತಸ್ತು ಭೀಮಂ ಸಂಜ್ಞಾಭಿರ್ವಾರಯಾಮಾಸ ಧರ್ಮರಾಟ್ ॥೨೯॥

ಆಕಾರಜ್ಞಸ್ತತೋ ಭ್ರಾತುಃ ಪಾಂಡವೋಽಪಿ ನ್ಯವರ್ತತ ।
ಧರ್ಮರಾಜಶ್ಚ ಕೌರವ್ಯ ದುರ್ಯೋಧನಮಮರ್ಷಿಣಮ್ ॥೩೦॥

ಬ್ರಹ್ಮರೂಪಪ್ರತಿಚ್ಛನ್ನೋ ರಾಜಾನಂ ಸಮಯೋಧಯತ್ ।
ಭುಜಯೋರಂತರೇಽವಿಧ್ಯದ್ ಬಾಣೇನಾನತಪರ್ವಣಾ ।
ದುರ್ಯೋಧನಮಮಿತ್ರಘ್ನಂ ಧರ್ಮರಾಜೋ ಯುಧಿಷ್ಠಿರಃ ॥೩೧॥

ಅನಂತರ ಭೀಮನು ರಾಜಸಮೂಹದ ಮೇಲಿನ ಕ್ರೋಧದಿಂದ ಒಂದು ಮರವನ್ನು ಕೀಳಲು ಹೊರಟನು. ಆಗ ಧರ್ಮರಾಜನು ಸಂಕೇತವನ್ನು ಮಾಡಿ ಭೀಮನು ಹಾಗೆ ಮಾಡದಂತೆ ತಡೆದನು. ಅಣ್ಣನ ಇಂಗಿತವನ್ನು ತಿಳಿದ ಭೀಮನು ಆ ಕಾರ್ಯದಿಂದ ಹಿಂದೆ ಸರಿದನು. ಜನಮೇಜಯನೇ, ಬ್ರಾಹ್ಮಣರೂಪದಿಂದ ಪ್ರತಿಚ್ಛನ್ನನಾದ ಧರ್ಮರಾಜನು ಅಸೂಯಾಪರನಾದ ದುರ್ಯೋಧನನ ಜೊತೆಯಲ್ಲಿ ಯುದ್ಧಮಾಡಿದನು. ಧರ್ಮರಾಜನಾದ ಯುಧಿಷ್ಠಿರನು ಬಾಗಿದ ಅಗ್ರವುಳ್ಳ ಬಾಣದಿಂದ ಶತ್ರುಸಂಹಾರಕನಾದ ದುರ್ಯೋಧನನಿಗೆ ಭುಜಗಳ ಮಧ್ಯದಲ್ಲಿ ಹೊಡೆದನು.

ತತೋ ದುರ್ಯೋಧನಃ ಕ್ರುದ್ಧೋ ದಂಡಾಹತ ಇವೋರಗಃ ।
ಪ್ರತ್ಯವಿಧ್ಯತ ರಾಜಾನಂ ಯತ್ನಂ ಪರಮಮಾಸ್ಥಿತಃ ।
ಛಿತ್ತ್ವಾ ರಾಜಾ ಧನುರ್ಜ್ಯಾಂ ತು ಧಾರ್ತರಾಷ್ಟ್ರಸ್ಯ ಸಂಯುಗೇ ॥೩೨॥

ನಾರಾಚೇನ ಸುತೀಕ್ಷ್ಣೇನ ಕಾಯಾವರಣಭೇದಿನಾ ।
ಹೃದಿ ವಿವ್ಯಾಧ ಭೂಯೋಽಸ್ಯ ಬಾಹ್ವೋರುರಸಿ ಚಾರ್ಪಯತ್ ॥೩೩॥

ಆಗ ದುರ್ಯೋಧನನು ಕೋಲಿನಿಂದ ಹೊಡೆದ ಸರ್ಪದಂತೆ ಪರಮಪ್ರಯತ್ನವನ್ನು ಹೊಂದಿದವನಾಗಿ ಮಹಾಪ್ರಯತ್ನವನ್ನು ಮಾಡಿ ಪ್ರತಿಯಾಗಿ ಧರ್ಮರಾಜನಿಗೆ ಬಾಣಪ್ರಯೋಗವನ್ನು ಮಾಡಿದನು. ಧರ್ಮರಾಜನು ಹರಿತವಾದ ನಾರಾಚದಿಂದ ಅವನ ಧನುಸ್ಸನ್ನು ಮತ್ತು ಹೆದೆಯನ್ನು ಕತ್ತರಿಸಿ ಅವನ ಕವಚವನ್ನು ಭೇದಿಸಿ ಬಾಣಗಳನ್ನು ಅವನ ಹೃದಯಕ್ಕೂ, ಬಾಹುಗಳಿಗೂ, ವಕ್ಷಸ್ಥಳಕ್ಕೂ ಅರ್ಪಿಸಿದನು.

ಅಭ್ಯವರ್ಷಚ್ಛರೌಘೈಸ್ತಂ ಸ ಹಿತ್ವಾ ಪ್ರಾದ್ರವದ್ರಣಾತ್ ।
ದುಶ್ಶಾಸನಸ್ತು ಸಂಕ್ರುದ್ಧಃ ಸಹದೇವೇನ ಸಂಗತಃ ॥೩೪॥

ಬಾಣಗಳ ಮಳೆಗೆ ಸಿಲುಕಿದ ದುರ್ಯೋಧನನು ಧರ್ಮರಾಜನನ್ನು ಬಿಟ್ಟು ಯುದ್ಧದಿಂದ ಓಡಿಹೋದನು. ದುಶ್ಶಾಸನನು ಕ್ರೋಧದಿಂದ ಸಹದೇವನ ಜೊತೆಯಲ್ಲಿ ಯುದ್ಧಮಾಡಿದನು.

ಯುದ್ಧ್ವಾ ಚ ಸುಚಿರಂ ಕಾಲಂ ಧನುಷಾ ಸ ಮಹಾರಥಃ ।
ಉತ್ಸೃಜ್ಯ ಚ ಧನುಃ ಸಂಖೇ ಬಾಹುಭ್ಯಾಮೇವ ಕೌರವ ॥೩೫॥

ಪಾಂಡವಂ ತ್ವಭಿದುದ್ರಾವ ಸೋಽಸಿಂ ಜಗ್ರಾಹ ಚರ್ಮ ಚ ।
ವಿಕರ್ಣಚಿತ್ರಸೇನಾಭ್ಯಾಂ ನಿಗೃಹೀತಶ್ಚ ಕೌರವಃ ॥೩೬॥

ಮಹಾರಥನಾದ ಅವನು ಧನುರ್ಬಾಣಗಳಿಂದ ಬಹಳ ಸಮಯ ಯುದ್ಧವನ್ನು ಮಾಡಿ ಧನುಸ್ಸನ್ನು ಬಿಟ್ಟು ಬಾಹುಗಳಿಂದಲೇ ಸಹದೇವನ ಜೊತೆ ಯುದ್ಧವನ್ನು ಮಾಡಲು ಅವನ ಕಡೆಗೆ ಬಂದನು. ಸಹದೇವನು ಖಡ್ಗಚರ್ಮಗಳನ್ನು ಹಿಡಿದುಕೊಂಡನು. ವಿಕರ್ಣ ಮತ್ತು ಚಿತ್ರಸೇನರು ದುಶ್ಶಾಸನನನ್ನು ತಡೆದರು.

ದುಸ್ಸಹೋ ನಕುಲಶ್ಚಾಪಿ ಯುದ್ಧಂ ಕರ್ತುಂ ಸಮುದ್ಯತೌ ।
ತೌ ದೃಷ್ಟ್ವಾ ಕೌರವಾ ಯುದ್ಧಂ ವಾಕ್ಯಮೂಚುರ್ಮಹಾಬಲೌ ॥೩೭॥

ದುಸ್ಸಹ ಮತ್ತು ನಕುಲರು ಯುದ್ಧವನ್ನು ಮಾಡಲು ಸನ್ನದ್ಧರಾದರು. ಮಹಾಬಲಿಷ್ಠರಾದ ಅವರು ಯುದ್ಧಸನ್ನದ್ಧರಾದುದನ್ನು ನೋಡಿ ಉಳಿದ ಕೌರವರು ಹೀಗೆ ಮಾತನಾಡಿದರು.

ನಿವರ್ತಂತಾಂ ಭವಂತೋ ವೈ ಕುತೋ ವಿಪ್ರೇಷು ವಿಗ್ರಹಃ ।
ನ ಚೇಮೇ ಕೇವಲಂ ವಿಪ್ರಾ ನ ಚೈಷಾಂ ಮಾನುಷಂ ಬಲಮ್ ॥೩೮॥

ನೀವು ಹಿಂದಿರುಗಿರಿ, ಬ್ರಾಹ್ಮಣರ ಜೊತೆಯಲ್ಲಿ ಏಕೆ ವಿರೋಧ? ಇವರು ಕೇವಲ ಬ್ರಾಹ್ಮಣರೂ ಅಲ್ಲ ಮತ್ತು ಇವರ ಬಲವು ಕೇವಲ ಮಾನುಷಬಲವೂ ಅಲ್ಲ.

ದ್ವಾವತ್ರ ಬ್ರಾಹ್ಮಣೌ ಕ್ರೂರೌ ವಾಯ್ವಗ್ನಿಸದೃಶೌ ಬಲೇ ।
ಯೇ ವಾ ಕೇ ವಾ ನಮಸ್ತೇಭ್ಯೋ ಗಚ್ಛಾಮಃ ಸ್ವಪುರಂ ವಯಮ್ ॥

ಇಲ್ಲಿ ಈ ಇಬ್ಬರೂ ಬ್ರಾಹ್ಮಣರೂ ಬಲದಲ್ಲಿ ವಾಯು ಅಗ್ನಿಗಳಿಗೆ ಸದೃಶರಾಗಿ ಕ್ರೂರರಾಗಿದ್ದಾರೆ. ಅವರು ಯಾರಾದರೂ ಆಗಿರಲಿ ಅವರಿಗೆ ನಮಸ್ಕಾರವನ್ನು ಮಾಡಿ ನಮ್ಮ ಪಟ್ಟಣಕ್ಕೆ ಹಿಂದಿರುಗೋಣ.

ಏವಂ ಸಂಭಾಷ್ಯ ತೇ ವೀರಾ ವಿನಿವರ್ತಂತ ಕೌರವಾಃ ।
ಜಹಸುರ್ಬ್ರಾಹ್ಮಣಾಸ್ತತ್ರ ಸಮೇತಾ ರಾಜಮಂಡಲೇ ॥೪೦॥

ವೀರರಾದ ಕೌರವರು ಹೀಗೆ ಮಾತನಾಡಿ ಯುದ್ಧದಿಂದ ನಿವೃತ್ತರಾದರು. ಅಲ್ಲಿ ರಾಜಸಮೂಹದಲ್ಲಿ ಸೇರಿದ ಬ್ರಾಹ್ಮಣರು ಅವರನ್ನು ಹಾಸ್ಯ ಮಾಡಿದರು.

ತೇ ಪ್ರಯಾತಾಸ್ತತಸ್ತತ್ರ ಕ್ಷತ್ರಿಯಾ ರಣಮೂರ್ಧನಿ ।
ಬ್ರಾಹ್ಮಣಾಶ್ಚ ಜಯಂ ಪ್ರಾಪ್ಯ ಕನ್ಯಾಮಾದಾಯ ನಿರ್ಯಯುಃ ॥೪೧॥

ಆ ಕ್ಷತ್ರಿಯರು ಘೋರಯುದ್ಧದ ಸಂದರ್ಭದಲ್ಲಿ ಯುದ್ಧವನ್ನು ಬಿಟ್ಟು ಹೊರಟರು. ಬ್ರಾಹ್ಮಣರೂ ಸಹ ಜಯವನ್ನು ಹೊಂದಿ ಕನ್ಯೆಯನ್ನು ಕರೆದುಕೊಂಡು ಹೊರಟರು.

ಪಾತಿತೇ ಭೀಮಸೇನೇನ ಶಲ್ಯೇ ಕರ್ಣೇ ಚ ನಿರ್ಜಿತೇ ।
ದುರ್ಯೋಧನೇ ಚಾಪಗತೇ ತಥಾ ದುಶ್ಶಾಸನೇ ರಣಾತ್ ॥೪೨॥

ಶಂಕಿತಾಃ ಸರ್ವರಾಜಾನಃ ಸಮರೇ ಚಾತಿಮಾನುಷೇ ।
ಊಚುಶ್ಚ ಸಹಿತಾಸ್ತತ್ರ ಸಾಧ್ವಿಮೇ ಬ್ರಾಹ್ಮಣರ್ಷಭಾಃ ॥೪೩॥

ಭೀಮಸೇನನಿಂದ ಶಲ್ಯನು ಉರುಳಿಸಲ್ಪಡುತ್ತಿರಲು ಕರ್ಣನು ನಿರ್ಜಿತನಾಗುತ್ತಿರಲು, ದುರ್ಯೋಧನ ಮತ್ತು ದುಶ್ಶಾಸನರು ಯುದ್ಧವನ್ನು ಬಿಟ್ಟು ಹೋಗುತ್ತಿರಲು ಆ ಅತಿಮಾನುಷವಾದ ಯುದ್ಧವನ್ನು ನೋಡಿ ಶಂಕೆಯನ್ನು ಹೊಂದಿದ ಎಲ್ಲ ರಾಜರೂ ಒಟ್ಟಿಗೆ ಸೇರಿ ಹೀಗೆ ಮಾತನಾಡಿದರು.

ವಿಜ್ಞಾಯಂತಾಂ ಕ್ವಜನ್ಮಾನಃ ಕ್ವನಿವಾಸಾಸ್ತಥೈವ ಚ ।
ಕೋ ಹಿ ರಾಧಾಸುತಂ ಕರ್ಣಂ ಶಕ್ತೋ ವಾರಯಿತುಂ ರಣೇ ॥೪೪॥

ತಥೈವ ಮದ್ರರಾಜಾನಂ ಶಲ್ಯಂ ಬಲವತಾಂ ವರಮ್ ।
ಬಲದೇವಾದೃತೇ ವೀರಾತ್ ಕೃಪಾದ್ವಾಪಿ ಶರದ್ವತಃ ॥೪೫॥

ಕೃಷ್ಣಾದ್ ವಾ ದೇವಕೀಪುತ್ರಾತ್ ಫಲ್ಗುನಾದ್ ವಾ ಪರಂತಪಾತ್ ।
ಕ್ರಿಯತಾಮಪಹಾರೋಽಸ್ಮಾದ್ ಯುದ್ಧಾದ್ ಬ್ರಾಹ್ಮಣಸಂಯುತಾತ್।
ತಥೈನಾನುಪಲಭ್ಯೇಹ ಪುನರ್ಯೋತ್ಸ್ಯಾಮಹೇ ವಯಮ್ ॥೪೬॥

ಈ ಬ್ರಾಹ್ಮಣಶ್ರೇಷ್ಠರು ಯಾರೆಂದು ಚೆನ್ನಾಗಿ ತಿಳಿಯಿರಿ. ಅವರು ಎಲ್ಲಿ ಜನಿಸಿದವರು? ಮತ್ತು ಎಲ್ಲಿ ವಾಸಮಾಡುತ್ತಾರೆ? ಬಲರಾಮನನ್ನು ಬಿಟ್ಟು, ಕೃಪಾಚಾರ್ಯರನ್ನು ಬಿಟ್ಟು, ದೇವಕೀಪುತ್ರನಾದ ಕೃಷ್ಣನನ್ನು ಬಿಟ್ಟು, ಪರಂತಪನಾದ ಅರ್ಜುನನನ್ನು ಬಿಟ್ಟು ಬೇರೆ ಯಾರು ತಾನೇ ಯುದ್ಧದಲ್ಲಿ ಕರ್ಣನನ್ನು ತಡೆಯಲು ಸಾಧ್ಯ ? ಹಾಗೆಯೇ ಬಲಿಷ್ಠರಲ್ಲಿ ಶ್ರೇಷ್ಠನಾದ ಮದ್ರರಾಜನನ್ನೂ ಸಹ ಯಾರು ತಡೆಯಲು ಸಾಧ್ಯ ? ಈ ಬ್ರಾಹ್ಮಣಸಂಯುಕ್ತವಾದ ಯುದ್ಧದಿಂದ ಹಿಂದಕ್ಕೆ ಸರಿಯಿರಿ. ಇವರು ಯಾರೆಂದು ತಿಳಿದು ನಾವು ಪುನಃ ಯುದ್ಧವನ್ನು ಮಾಡೋಣ.

ತತ್ಕರ್ಮ ಭೀಮಸ್ಯ ಸಮೀಕ್ಷ್ಯ ಕೃಷ್ಣಃ
ಕುಂತೀಸುತೌ ತೌ ಪರಿಶಂಕಮಾನಃ ।
ನಿವಾರಯಾಮಾಸ ಮಹೀಪತೀಂಸ್ತಾನ್
ಧರ್ಮೇಣ ಲಬ್ಧೇತ್ಯನುನೀಯ ಸರ್ವಾನ್ ॥೪೭॥

ಭೀಮನ ಆ ಕರ್ಮವನ್ನು ನೋಡಿದ ಕೃಷ್ಣನು ಇವರು ಕುಂತೀಸುತರೆಂಬ ಶಂಕೆಗೆ ಒಳಗಾಗಿ ಎಲ್ಲಾ ರಾಜರುಗಳನ್ನೂ ಪ್ರಿಯೋಕ್ತಿಗಳಿಂದ ರಂಜಿಸುತ್ತಾ ಧರ್ಮದಿಂದಲೇ ದ್ರೌಪದಿಯು ಲಬ್ಧವಾಗಿದ್ದಾಳೆ ಎಂದು ಹೇಳಿ ಎಲ್ಲರನ್ನೂ ಸಮಾಧಾನಪಡಿಸಿ ಎಲ್ಲಾ ರಾಜರುಗಳನ್ನೂ ಯುದ್ಧದಿಂದ ಹಿಮ್ಮೆಟ್ಟಿಸಿದನು.

ಏವಂ ತೇ ಸನ್ನಿರುದ್ಧಾಸ್ತು ಯುದ್ಧಾದ್ ಯುದ್ಧವಿಶಾರದಾಃ ।
ಯಥಾವಾಸಂ ಯಯುಃ ಸರ್ವೇ ವಿಸ್ಮಿತಾ ರಾಜಸತ್ತಮ ॥೪೮॥

ರಾಜಶ್ರೇಷ್ಠನೇ, ಯುದ್ಧದಿಂದ ಹಿಮ್ಮೆಟ್ಟಿಸಲ್ಪಟ್ಟ ಯುದ್ಧವಿಶಾರದರಾದ ಅವರೆಲ್ಲರೂ ವಿಸ್ಮಿತರಾಗಿ ತಮ್ಮ ತಮ್ಮ ಆವಾಸಗಳಿಗೆ ಹೊರಟರು.

ವೃತ್ತೋ ಬ್ರಹ್ಮೋತ್ತರೋ ರಂಗಃ ಪಾಂಚಾಲೀ ಬ್ರಾಹ್ಮಣೈರ್ಹೃತಾ ।
ಇತಿ ಬ್ರುವಂತಃ ಪ್ರಯಯುರ್ಯೇ ತತ್ರಾಸನ್ ಸಮಾಗತಾಃ ॥೪೯॥

ರಂಗದಲ್ಲಿ ಬ್ರಾಹ್ಮಣರದೇ ಮೇಲುಗೈಯಾಯಿತು, ದ್ರೌಪದಿಯನ್ನು ಬ್ರಾಹ್ಮಣರು ಜಯಿಸಿದರು ಎಂದು ಹೇಳಿ ಅಲ್ಲಿ ಸಮಾಗತ- ರಾಗಿದ್ದವರೆಲ್ಲರೂ ಹೊರಟರು.

ಬ್ರಾಹ್ಮಣೈಶ್ಚ ಪ್ರತಿಚ್ಛನ್ನೌ ರೌರವಾಜಿನವಾಸಿಭಿಃ ।
ಕೃಚ್ಛ್ರೇಣ ಜಗ್ಮತುಸ್ತತ್ರ ಭೀಮಸೇನಧನಂಜಯೌ ॥೫೦॥

ಭೀಮಸೇನಾರ್ಜುನರು ರೌರವಾಜಿನಧಾರಿಗಳಾದ ಬ್ರಾಹ್ಮಣರಿಂದ ಪ್ರತಿಚ್ಛನ್ನರಾಗಿ ಮತ್ತೊಮ್ಮೆ ಯುದ್ಧವಾಗದಿರಲಿ ಎಂಬ ಮನಃಕ್ಲೇಶದಿಂದ ಅಲ್ಲಿಂದ ಹೊರಟರು. (ರೌರವ ಎಂದರೆ ಜಿಂಕೆಯ ಒಂದು ಪ್ರಭೇದ. ಅದರ ಚರ್ಮವನ್ನು ಧರಿಸಿದವರು ಎಂದರ್ಥ).

ವಿಮುಕ್ತೌ ಜನಸಂಬಾಧಾಚ್ಛತ್ರುಭಿಃ ಪರಿವೀಕ್ಷಿತೌ ।
ಕೃಷ್ಣಯಾಽನುಗತೌ ತತ್ರ ನೃವೀರೌ ಹಿ ವಿಚೇರತುಃ ॥೫೧॥

ಶತ್ರುಗಳಿಂದ ವೀಕ್ಷಿಸಲ್ಪಟ್ಟು ಜನಜಂಗುಳಿಯಿಂದ ಹೊರಬಂದ ಆ ಮನುಷ್ಯವೀರರು ದ್ರೌಪದಿಯಿಂದ ಹಿಂಬಾಲಿಸಲ್ಪಟ್ಟವರಾಗಿ ನಡೆದರು.

ತೇಷಾಂ ಮಾತಾ ಬಹುವಿಧಂ ವಿನಾಶಂ ಪರ್ಯಚಿಂತಯತ್ ।
ಅನಾಗಚ್ಛತ್ಸು ಪುತ್ರೇಷು ಭೈಕ್ಷಕಾಲೇಽಭಿಗಚ್ಛತಿ ॥೫೨॥

ಧಾರ್ತರಾಷ್ಟ್ರೈರ್ಹತಾ ನೂನಂ ವಿಜ್ಞಾಯ ಕುರುಪುಂಗವಾಃ ।
ಮಾಯಾನ್ವಿತೈರ್ವಾ ರಕ್ಷೋಭಿಃ ಸುಘೋರೈರ್ದೃಢವೈರಿಭಿಃ ॥೫೩॥

ಭಿಕ್ಷೆ ಬೇಡುವ ಕಾಲವು ಮೀರಿದರೂ ಪುತ್ರರು ಬಿಡಾರಕ್ಕೆ ಬರದಿರುತ್ತಿರಲು ಅವರ ತಾಯಿಯಾದ ಕುಂತಿಯು ಅನೇಕ ವಿಧವಾದ ವಿನಾಶಗಳನ್ನು ಮನಸ್ಸಿನಲ್ಲಿ ಚಿಂತಿಸಿದಳು. ಕುರುಪುಂಗವರಾದ ನನ್ನ ಮಕ್ಕಳುಗಳನ್ನು ತಿಳಿದು ನಿಶ್ಚಿತವಾಗಿ ದುರ್ಯೋಧನಾದಿಗಳು ಸಂಹರಿಸಿದ್ದಾರೆ ಅಥವಾ ದೃಢವೈರವುಳ್ಳ ಮಾಯಾನ್ವಿತರಾದ ಉಗ್ರರಾದ ರಾಕ್ಷಸರಿಂದ ನನ್ನ ಪುತ್ರರು ಹತರಾಗಿದ್ದಾರೆ.

ವಿಪರೀತಂ ಮತಂ ಜಾತಂ ವ್ಯಾಸಸ್ಯಾಪಿ ಮಹಾತ್ಮನಃ ।
ಇತ್ಯೇವಂ ಚಿಂತಯಾಮಾಸ ಸುತಸ್ನೇಹಾನ್ವಿತಾ ಪೃಥಾ ॥೫೪॥

ಮಹಾತ್ಮರಾದ ವ್ಯಾಸರ ಅಭಿಪ್ರಾಯವೂ ವಿಪರೀತವಾಯಿತು. ಹೀಗೆ ಪುತ್ರಸ್ನೇಹದಿಂದ ಕೂಡಿದ ಕುಂತಿಯು ಚಿಂತಿಸಿದಳು.

ತತೋ ಭುಕ್ತಜನಪ್ರಾಯೇ ಘನೈಃ ಸೂರ್ಯ ಇವಾವೃತಃ ।
ಬ್ರಾಹ್ಮಣೈಃ ಪ್ರಾವಿಶತ್ ತತ್ರ ಜಿಷ್ಣುರ್ಧರ್ಮಪುರಸ್ಕೃತಃ ॥೫೫॥

ಆಗ ಜನರ ಭೋಜನವೆಲ್ಲವೂ ಇನ್ನೇನು ಮುಗಿದಿದೆ ಎನ್ನುವ ವೇಳೆಗೆ ಮೋಡಗಳಿಂದ ಆವೃತನಾದ ಸೂರ್ಯನಂತೆ ಅರ್ಜುನನು ಬ್ರಾಹ್ಮಣರಿಂದ ಆವೃತನಾಗಿ ಧರ್ಮರಾಜನನ್ನು ಮುಂದಿಟ್ಟುಕೊಂಡು ಅಲ್ಲಿ ಪ್ರವೇಶಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕೋನನವತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಸ್ವಯಂವರಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ಎಂಭತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಪ್ರಾಮಾದಿಕಂ ಚ ವಚನಂ ನ ಮೃಷಾ ತಯೋಕ್ತಂ
ಪ್ರಾಯೋ ಹಿ ತೇನ ಕಥಮೇತದಿತಿ ಸ್ಮ ಚಿಂತಾ ।
ತೇಷಾಂ ಬಭೂವ ವಸುದೇವಸುತೋ ಹರಿಶ್ಚ
ತತ್ರಾಜಗಾಮ ಪರಮೇಣ ಹಿ ಸೌಹೃದೇನ ॥೧೪೩॥

ಕುಂತಿ ಪ್ರಮಾದದಿಂದ ಹೇಳಿದ ಮಾತೂ ಕೂಡ ಎಂದೂ ಸುಳ್ಳಾದುದಿಲ್ಲ. ಅದರಿಂದ ಇದು ಹೇಗೆ ಎಂದು ಪಾಂಡವರಿಗೆ ಚಿಂತೆಯಾಯಿತು. ಅಷ್ಟರಲ್ಲಿ ವಾಸುದೇವ ಶ್ರೀಕೃಷ್ಣ ಪರಮಸ್ನೇಹದಿಂದ ಅಲ್ಲಿಗೆ ಬಂದ.

★ ★ ★ ★

ನೂರ ತೊಂಭತ್ತನೆಯ ಅಧ್ಯಾಯ

(ಭೀಮಾರ್ಜುನರಿಂದ ಕುಂತಿಗೆ ದ್ರೌಪದಿಯ ನಿವೇದನೆ, ಕುಂತಿಯ ವಾಕ್ಯ, ಪಾಂಡವರ ದಿಗ್ಭ್ರಮೆ. ಐವರಿಗೂ ಪತ್ನಿಯೆಂಬ ಯುಧಿಷ್ಠಿರನ ನಿಶ್ಚಯ. ಕೃಷ್ಣಬಲರಾಮರ ಆಗಮನ ಮತ್ತು ಕುಶಲ ಪ್ರಶ್ನೆ.)

ವೈಶಂಪಾಯನಃ

ಗತ್ವಾ ತತೋ ಭಾರ್ಗವಕರ್ಮಶಾಲಾಂ
ಪಾರ್ಥೌ ಪೃಥಾಂ ಪ್ರೇಕ್ಷ್ಯ ಮಹಾನುಭಾವೌ ।
ತಾಂ ಯಾಜ್ಞಸೇನೀಂ ಪರಮಪ್ರತೀತಾಂ
ಭಿಕ್ಷೇತ್ಯಥಾವೇದಯತಾಂ ನರಾಗ್ರ್ಯೌ ॥೧॥

ಮಹಾನುಭಾವರಾದ ಭೀಮಾರ್ಜುನರು ಅನಂತರ ಕುಂಬಾರನ ಕರ್ಮಶಾಲೆಗೆ ಹೋಗಿ, ತಾಯಿಯನ್ನು ನೋಡಿ ಪರಮಸಂತೋಷದಲ್ಲಿದ್ದ ದ್ರೌಪದಿಯನ್ನು ನರಶ್ರೇಷ್ಠರಾದ ಅವರು ಭಿಕ್ಷೆಯನ್ನು ತಂದಿದ್ದೇವೆ ಎಂದು ನಿವೇದಿಸಿದರು.

ಕುಟೀಗತಾ ಸಾ ತ್ವನವೇಕ್ಷ್ಯ ಪುತ್ರೌ
ಪ್ರೋವಾಚ ಭುಂಕ್ತೇತಿ ಸಮೇತ್ಯ ಸರ್ವೇ ।
ಪಶ್ಚಾತ್ ತು ಕುಂತೀ ತ್ವಭಿವೀಕ್ಷ್ಯ ಕನ್ಯಾಂ
ಕಷ್ಟಂ ಮಯಾ ಭಾಷಿತಮಿತ್ಯುವಾಚ ॥೨॥

ಮನೆಯ ಒಳಭಾಗದಲ್ಲಿದ್ದ ಅವಳು ಭೀಮಾರ್ಜುನರನ್ನು ನೋಡದೆ ಎಲ್ಲರೂ ಸೇರಿ ಭೋಗಿಸಿ ಎಂದು ಹೇಳಿದಳು. ಕುಂತಿಯು ಅನಂತರ ಕನ್ಯೆಯನ್ನು ನೋಡಿ ನನ್ನ ಮಾತು ದುಃಖಕರವಾಗಿದೆ ಎಂದು ಹೇಳಿದಳು.

ಸಾಽಧರ್ಮಭೀತಾ ಹಿ ವಿಲಜ್ಜಮಾನಾಂ
ತಾಂ ಯಾಜ್ಞಸೇನೀಂ ಪರಮಪ್ರತೀತಾ ।
ಪಾಣೌ ಗೃಹೀತ್ವೋಪಜಗಾಮ ಕುಂತೀ
ಯುಧಿಷ್ಠಿರಂ ವಾಕ್ಯಮುವಾಚ ಚೇದಮ್ ॥೩॥

ಅಧರ್ಮಕ್ಕೆ ಹೆದರಿದ ಆ ಕುಂತಿಯು ನಾಚಿಕೆಗೊಳ್ಳುತ್ತಿದ್ದ ದ್ರೌಪದಿಯನ್ನು ಪರಮಸಂತೋಷದಿಂದ ಕೈಯಲ್ಲಿ ಹಿಡಿದು ಯುಧಿಷ್ಠಿರನನ್ನುದ್ದೇಶಿಸಿ ಈ ವಾಕ್ಯವನ್ನು ಹೇಳಿದಳು.

ಇಯಂ ಚ ಕನ್ಯಾ ದ್ರುಪದಸ್ಯ ರಾಜ್ಞಃ
ತವಾನುಜಾಭ್ಯಾಂ ಮಯಿ ಸನ್ನಿಸೃಷ್ಟಾ ।
ಯಥಾನ್ವಿತಂ ಪುತ್ರ ಮಯಾಽಪಿ ಚೋಕ್ತಂ
ಸಮೇತ್ಯ ಭುಂಜೀಧ್ವಮಿತಿ ಪ್ರಮಾದಾತ್ ॥೪॥

ಪುತ್ರನೇ, ದ್ರುಪದರಾಜನ ಕನ್ಯೆಯಾದ ಇವಳನ್ನು ನಿನ್ನ ತಮ್ಮಂದಿರು ನನಗೆ ಒಪ್ಪಿಸಿದರು. ನಾನೂ ಸಹ ಪ್ರಮಾದದಿಂದ ಎಂದಿನಂತೆ ಎಲ್ಲರೂ ಭೋಗಿಸಿ ಎಂದು ಹೇಳಿದೆ.

ಮಯಾ ಕಥಂ ನಾನೃತಮುಕ್ತಮದ್ಯ
ಭವೇತ್ ಕುರೂಣಾಮೃಷಭ ಬ್ರವೀಹಿ ।
ಪಾಂಚಾಲರಾಜಸ್ಯ ಸುತಾಮಧರ್ಮೇ
ನ ಚೋಪವರ್ತೇತ ನಭೂತಪೂರ್ವಃ ॥೫॥

ಕುರುಶ್ರೇಷ್ಠನೇ, ನನ್ನ ಮಾತು ಹೇಗೆ ಅನೃತವಾಗಲಾರದು ಎಂಬುದನ್ನು ಹೇಳು. ಹಿಂದೆ ಯಾವ ಸಜ್ಜನರೂ ಮಾಡದ ಅಧರ್ಮವು ಪಾಂಚಾಲರಾಜಕುಮಾರಿಯನ್ನು ಸ್ಪರ್ಶಿಸಬಾರದು.

ವೈಶಂಪಾಯನಃ

ತತೋ ಮುಹೂರ್ತಂ ತ್ವನುಚಿಂತ್ಯ ರಾಜಾ
ಯುಧಿಷ್ಠಿರೋ ಭ್ರಾತರಮುತ್ತಮೌಜಾಃ ।
ಕುಂತೀಂ ಸಮಾಶ್ವಾಸ್ಯ ಕುರುಪ್ರವೀರೋ
ಧನಂಜಯಂ ವಾಕ್ಯಮಿದಂ ಬಭಾಷೇ ॥೬॥

ಅನಂತರ ಉತ್ತಮತೇಜಸ್ವಿಯಾದ ಧರ್ಮರಾಜನು ಒಂದು ಮುಹೂರ್ತದ ಕಾಲ ಆಲೋಚಿಸಿ ತಮ್ಮನನ್ನು ಕುರಿತು ಆಲೋಚಿಸಿ, ಕುಂತಿಯನ್ನು ಸಮಾಧಾನಗೊಳಿಸಿ ಆ ಕುರುಪ್ರವೀರನು ಅರ್ಜುನನನ್ನು ಕುರಿತು ಈ ಮಾತನ್ನು ಆಡಿದನು.

ತ್ವಯಾ ಜಿತಾ ಪಾಂಡವ ಯಾಜ್ಞಸೇನೀ
ತ್ವಯ್ಯೇವ ತೋಷಿಷ್ಯತಿ ರಾಜಪುತ್ರೀ ।
ಪ್ರಜ್ವಾಲ್ಯತಾಮಗ್ನಿರಮಿತ್ರಸಾಹ
ಗೃಹಾಣ ಪಾಣಿಂ ವಿಧಿವತ್ ತ್ವಮಸ್ಯಾಃ ॥೭॥

ಅರ್ಜುನನೇ, ದ್ರೌಪದಿಯನ್ನು ಜಯಿಸಿದವನು ನೀನು. ರಾಜಕುಮಾರಿಯು ಆ ಕಾರಣದಿಂದ ನಿನ್ನ ಜೊತೆಯಲ್ಲಿಯೇ ಸಂತೋಷಪಡುವವಳು. ಶತ್ರುಗಳನ್ನು ಸಹಿಸುವವನೇ, ಅಗ್ನಿಯನ್ನು ಪ್ರಜ್ವಲಿಸಿ ವಿಧಿಪೂರ್ವಕವಾಗಿ ಇವಳ ಪಾಣಿಗ್ರಹಣವನ್ನು ಮಾಡು.

ಅರ್ಜುನಃ

ಮಾ ಮಾಂ ನರೇಂದ್ರ ತ್ವಮಧರ್ಮರಾಜಂ
ಕೃಥಾ ನ ಧರ್ಮೋ ಹ್ಯಯಮೀಪ್ಸಿತೋಽನ್ಯೈಃ ।
ಭವಾನ್ ನಿವೇಶ್ಯಃ ಪ್ರಥಮಂ ತತೋಽಯಂ
ಭೀಮೋ ಮಹಾಬಾಹುರಚಿಂತ್ಯಕರ್ಮಾ ॥೮॥

ರಾಜೇಂದ್ರನೇ, ಬೇಡ. ನನ್ನನ್ನು ಅಧರ್ಮರಾಜನನ್ನಾಗಿ ಮಾಡಿ ನೀನು ಧರ್ಮರಾಜನಾಗಬೇಡ. ಉಳಿದವರು ಯಾರೂ ಹೀಗೆ ಮಾಡಿದರೆ ಇದನ್ನು ಧರ್ಮವೆಂದು ಒಪ್ಪುವುದಿಲ್ಲ. ಮೊದಲು ನೀನು ವಿವಾಹವನ್ನು ಮಾಡಿಕೊಳ್ಳಬೇಕು. ಅನಂತರ ಈ ಮಹಾಬಾಹುವೂ, ಅಚಿಂತ್ಯಕರ್ಮವುಳ್ಳವನೂ ಆದ ಭೀಮಸೇನನು ವಿವಾಹ ಮಾಡಿಕೊಳ್ಳಬೇಕು.

ಅಹಂ ತತೋ ನಕುಲೋಽನಂತರಂ ಮೇ
ಮಾದ್ರೀಸುತಃ ಸಹದೇವೋ ಜಘನ್ಯಃ ।
ವೃಕೋದರೋಽಹಂ ಚ ಯಮೌ ಚ ರಾಜ-
ನ್ನಿಯಂ ಚ ಕನ್ಯಾ ಭವತಶ್ಚ ಸರ್ವೇ ॥೯॥

ಅನಂತರ ನಾನು, ಅನಂತರ ನಕುಲ, ಅನಂತರ ಮಾದ್ರಿಯ ಪುತ್ರರಲ್ಲಿ ಚಿಕ್ಕವನಾದ ಸಹದೇವ ವಿವಾಹ ಮಾಡಿಕೊಳ್ಳಬೇಕು. ರಾಜನೇ, ಭೀಮಸೇನ, ನಾನು, ನಕುಲ ಸಹದೇವರು ಮತ್ತು ಈ ಕನ್ಯೆ ಎಲ್ಲರೂ ನಿನ್ನ ಅಧೀನರಾದವರು.

ಏವಂ ಗತೇ ಯತ್ ಕರಣೀಯಮತ್ರ
ಧರ್ಮ್ಯಂ ಯಶಸ್ಯಂ ಕುರು ತದ್ ವಿಚಿಂತ್ಯ ।
ಪಾಂಚಾಲರಾಜಸ್ಯ ಹಿ ಯತ್ ಪ್ರಿಯಂ ಸ್ಯಾತ್
ತದ್ ಬ್ರೂಹಿ ಸರ್ವೇ ಸ್ಮ ವಶೇ ಸ್ಥಿತಾಸ್ತೇ ॥೧೦॥

ಪರಿಸ್ಥಿತಿಯು ಹೀಗಿರುವಾಗ ಯಾವುದು ಧರ್ಮಸಮ್ಮತ ಮತ್ತು ಕೀರ್ತಿಪ್ರದ ಎಂದು ವಿಮರ್ಶೆ ಮಾಡಿ ಅದರಂತೆ ಮಾಡು. ಪಾಂಚಾಲರಾಜನಿಗೆ ಯಾವುದು ಪ್ರಿಯವಾಗುವುದೋ ಅದನ್ನು ಹೇಳು. ನಾವೆಲ್ಲರೂ ನಿನ್ನ ಅಧೀನರಾಗಿದ್ದೇವೆ.

ವೈಶಂಪಾಯನಃ

ದೃಷ್ಟ್ವಾ ತೇ ತತ್ರ ತಿಷ್ಠಂತೀಂ ಸರ್ವೇ ಕೃಷ್ಣಾಂ ಯಶಸ್ವಿನೀಮ್ ।
ಸಂಪ್ರೇಕ್ಷ್ಯಾನ್ಯೋನ್ಯಮಾಸೀನಾ ಹೃದಯೈಸ್ತಾಮಧಾರಯನ್ ॥೧೧॥

ಅಲ್ಲಿ ಕುಳಿತ ಅವರೆಲ್ಲರೂ ಅಲ್ಲಿಯೇ ನಿಂತಿದ್ದ ಯಶಸ್ವಿನಿಯಾದ ದ್ರೌಪದಿಯನ್ನು ನೋಡಿ ಅಣ್ಣತಮ್ಮಂದಿರ ಮುಖವನ್ನು ಪರಸ್ಪರ ನೋಡಿ ತಮ್ಮ ಹೃದಯಗಳಲ್ಲಿ ದ್ರೌಪದಿಯನ್ನು ಧರಿಸಿದರು.

ತೇಷಾಂ ಚ ದ್ರೌಪದೀಂ ದೃಷ್ಟ್ವಾ ಸರ್ವೇಷಾಮಮಿತೌಜಸಾಮ್ ।
ಸಂಪ್ರಮಥ್ಯೇಂದ್ರಿಯಗ್ರಾಮಂ ಪ್ರಾದುರಾಸೀನ್ಮನೋಭವಃ ॥೧೨॥

ದ್ರೌಪದಿಯನ್ನು ನೋಡಿದ ಅಮಿತಪರಾಕ್ರಮಿಗಳಾದ ಅವರಿಗೆ ಎಲ್ಲಾ ಇಂದ್ರಿಯಗಳನ್ನೂ ಅಲುಗಾಡಿಸುವಂತೆ ಮನಸ್ಸಿನಲ್ಲಿ ಅವಳ ವಿಷಯದಲ್ಲಿ ಕಾಮವು ಉಂಟಾಯಿತು.

ಕಾಮ್ಯರೂಪಂ ಹಿ ಪಾಂಚಾಲ್ಯಾ ವಿಧಾತ್ರಾ ವಿಹಿತಂ ಸ್ವಯಮ್ ।
ಬಭೂವಾಧಿಕಮನ್ಯಾಭ್ಯಃ ಸರ್ವಭೂತಮನೋಹರಮ್ ॥೧೩॥

ಬ್ರಹ್ಮದೇವರು ತಾವಾಗಿಯೇ ದ್ರೌಪದಿಗೆ ಒಳ್ಳೆಯ ಸೌಂದರ್ಯವನ್ನು ಕೊಟ್ಟಿದ್ದರು. ಸರ್ವಭೂತಮನೋಹರವಾದ ಅವಳ ಸೌಂದರ್ಯವು ಉಳಿದ ಸ್ತ್ರೀಯರ ಸೌಂದರ್ಯಕ್ಕಿಂತ ಅಧಿಕವಾಗಿದ್ದಿತು.

ತೇ ಮನ್ಯಮಾನಾಃ ಕೌಂತೇಯಾಃ ಸರ್ವಭೂತಮನೋಹರಾಮ್ ।
ಚಕಮುಃ ಸತ್ತ್ವಸಂಪನ್ನಾ ವಿಧಾತ್ರಾ ಚ ಪ್ರಚೋದಿತಾಃ ॥೧೪॥

ಧೈರ್ಯಸಂಪನ್ನರಾದ ಆ ಪಾಂಡವರು ದ್ರೌಪದಿಯು ಸರ್ವಭೂತ-ಮನೋಹರಳೆಂದು ತಿಳಿದು ಬ್ರಹ್ಮದೇವರ ಪ್ರೇರಣೆಯಿಂದ ಅವಳಲ್ಲಿ ಕಾಮವನ್ನು ಹೊಂದಿದರು.

ತೇಷಾಮಾಕಾರತತ್ತ್ವಜ್ಞಃ ಕುಂತೀಪುತ್ರೋ ಯುಧಿಷ್ಠಿರಃ ।
ದ್ವೈಪಾಯನವಚಃ ಕೃತ್ಸ್ನಂ ಸಂಸ್ಮರನ್ ಮನುಜರ್ಷಭಃ ॥೧೫॥

ಅಬ್ರವೀತ್ ಸಹಿತಾನ್ ಭ್ರಾತೄನ್ ಮಿಥೋ ಭೇದಭಯಾನ್ನೃಪಃ ।
ಸರ್ವೇಷಾಂ ದ್ರೌಪದೀ ಭಾರ್ಯಾ ಮಹಿಷೀ ನೋ ಭವಿಷ್ಯತಿ ॥೧೬॥

ಕುಂತೀಪುತ್ರನಾದ ಮನುಜಶ್ರೇಷ್ಠನಾದ ಯುಧಿಷ್ಠಿರನು ಅವರ ಆಕಾರದಿಂದ ಅವರ ಇಂಗಿತವನ್ನು ತಿಳಿದು ವೇದವ್ಯಾಸರ ಮಾತನ್ನು ಸಮಗ್ರವಾಗಿ ಸ್ಮರಿಸಿಕೊಂಡು ಅಣ್ಣತಮ್ಮಂದಿರಲ್ಲಿ ವಿರೋಧವುಂಟಾದೀತೆಂಬ ಭಯದಿಂದ ಎಲ್ಲರನ್ನೂ ಕುರಿತು ಹೀಗೆ ಹೇಳಿದನು. ದ್ರೌಪದಿಯು ನಮ್ಮೆಲ್ಲರಿಗೂ ಪತ್ನಿಯಾಗುವಳು.

ಪ್ರತ್ಯಗೃಹ್ಣಂಸ್ತತೋ ವಾಣೀಂ ಭ್ರಾತುಜ್ಯೇಷ್ಠಸ್ಯ ಪಾಂಡವಾಃ ।
ಅನ್ಯೋನ್ಯಂ ಚಾನುಪಶ್ಯಂತೋ ಧರ್ಮಾರ್ಥಂ ಕಾಮಮೀಪ್ಸಿತಮ್ ॥

ಆಗ ಪಾಂಡವರು ಧರ್ಮದ ಸಲುವಾಗಿ ಇಷ್ಟವಾದ ಕಾಮವನ್ನು ಪರಸ್ಪರವಾಗಿ ನಾಶಮಾಡಿಕೊಳ್ಳದೆ ಅಣ್ಣನ ಮಾತನ್ನು ಎಲ್ಲರೂ ಸ್ವೀಕರಿಸಿದರು.

ಜನಮೇಜಯಃ

ಸತಾऽಪಿ ಶಕ್ತೇನ ಚ ಕೇಶವೇನ
ಸಜ್ಯಂ ಧನುಸ್ತನ್ನ ಕೃತಂ ಕಿಮರ್ಥಮ್ ।
ವಿದ್ಧಂ ಚ ಲಕ್ಷ್ಯಂ ನ ಚ ಕಸ್ಯ ಹೇತೋ -
ರಾಚಕ್ಷ್ವ ತನ್ಮೇ ದ್ವಿಪದಾಂ ವರಿಷ್ಠ ॥೧೮॥

ಸಮರ್ಥನಾದ ಕೇಶವನು ಸ್ವಯಂವರಸಮಾಜದಲ್ಲಿ ಇದ್ದರೂ ಏಕೆ ಧನುಸ್ಸಿಗೆ ರಜ್ಜುಬಂಧನವನ್ನು ಮಾಡಲಿಲ್ಲ? ಮನುಷ್ಯರಲ್ಲಿ ಶ್ರೇಷ್ಠರಾದ ವೈಶಂಪಾಯನರೇ, ಅವನು ಯಾವ ಕಾರಣದಿಂದ ಲಕ್ಷ್ಯವೇಧವನ್ನು ಮಾಡಲಿಲ್ಲ ಎಂದು ನನಗೆ ಹೇಳಿ.

ವೈಶಂಪಾಯನಃ

ಶಕ್ತೇನ ಕೃಷ್ಣೇನ ಚ ಕಾರ್ಮುಕಂ ತ-
ನ್ನಾರೋಪಿತಂ ಜ್ಞಾತುಕಾಮೇನ ಪಾರ್ಥಾನ್ ।
ಪರಿಶ್ರವಾದೇವ ಬಭೂವ ಲೋಕೇ
ಜೀವಂತಿ ಪಾರ್ಥಾ ಇತಿ ನಿಶ್ಚಯೋऽಸ್ಯ ॥೧೯॥

ಕೃಷ್ಣನು ಪಾಂಡವರು ಬದುಕಿದ್ದಾರೆ ಎಂಬ ವಾರ್ತೆಯನ್ನು ಮಾತ್ರ ಕೇಳಿ ಪಾಂಡವರು ಜೀವಿಸಿದ್ದಾರೆ ಎಂಬ ನಿಶ್ಚಯದಲ್ಲಿದ್ದನು. (ಆದರೆ ಪಾಂಡವರನ್ನು

ನೋಡಿರಲಿಲ್ಲ) ಪಾಂಡವರನ್ನು ತಿಳಿಯುವ ಉದ್ದೇಶದಿಂದ ಅವನು ಧನುಸ್ಸಿಗೆ ಹೆದೆಯನ್ನು ಆರೋಪಿಸಲಿಲ್ಲ.

ಅನ್ಯಾನಶಕ್ತಾನ್ ನೃಪತೀನ್ ಸಮೀಕ್ಷ್ಯ
ಸ್ವಯಂವರೇ ಕಾರ್ಮುಕೇಣೋತ್ತಮೇನ ।
ಧನಂಜಯಸ್ತು ಧನುರೇಕವೀರಃ
ಸಜ್ಯಂ ಕರೋತೀತ್ಯಭಿವೀಕ್ಷ್ಯ ಕೃಷ್ಣಃ ॥೨೦॥

ಉಳಿದ ಯಾವ ರಾಜರೂ ಆ ಧನುಸ್ಸನ್ನು ಹೆದೆಯೇರಿಸಲು ಸಮರ್ಥರಲ್ಲ. ಏಕವೀರನಾದ ಧನಂಜಯನೊಬ್ಬನೇ ಅದನ್ನು ಮಾಡಲು ಸಮರ್ಥ ಎಂದು ಕೃಷ್ಣನು ತಿಳಿದಿದ್ದನು.

ಇತಿ ಸ್ವಯಂ ವಾಸುದೇವೋ ವಿಚಿಂತ್ಯ
ಪಾರ್ಥಾನ್ ವಿಚಿನ್ವನ್ ವಿವಿಧೈರುಪಾಯೈಃ ।
ನ ತದ್ ಧನುಃ ಸಜ್ಯಮಿಯೇಷ ಕರ್ತುಂ
ಕೃಷ್ಣಸ್ಯ ವೈ ಪ್ರಾಣಸಮೋ ಹಿ ಪಾರ್ಥಃ ॥೨೧॥

ಹೀಗೆ ಆಲೋಚಿಸಿದ ವಾಸುದೇವನು ಪಾರ್ಥರನ್ನು ಹುಡುಕಲು ಅನೇಕ ಉಪಾಯಗಳನ್ನು ಮಾಡಿದ ಕಾರಣದಿಂದ ಆ ಧನುಸ್ಸನ್ನು ಆರೋಪಿಸಲು ಬಯಸಲಿಲ್ಲ. ಕೃಷ್ಣನಿಗೆ ಅರ್ಜುನನು ಪ್ರಾಣಸಮನೆಂಬುವುದು ಪ್ರಸಿದ್ಧವಷ್ಟೇ?

ಭ್ರಾತುರ್ವಚಸ್ತತ್ ಪ್ರಸಮೀಕ್ಷ್ಯ ಸರ್ವೇ
ಜ್ಯೇಷ್ಠಸ್ಯ ಪಾಂಡೋಸ್ತನಯಾಸ್ತದಾನೀಮ್ ।
ತಮೇವಾರ್ಥಂ ಧ್ಯಾಯಮಾನಾ ಮನೋಭಿ-
ರಾಸಾಂಚಕ್ರುರಥ ತತ್ರಾಮಿತೌಜಸಃ ॥೨೨॥

ಅಣ್ಣನ ಮಾತುಗಳನ್ನು ಕೇಳಿದ ಅಮಿತಪರಾಕ್ರಮಿಗಳಾದ ಆ ಪಾಂಡವರು ಅದೇ ವಿಷಯವನ್ನು ಮನಸ್ಸಿನಲ್ಲಿ ಚಿಂತಿಸುತ್ತಾ ಕುಳಿತರು.

ವೃಷ್ಣಿಪ್ರವೀರಃ ಕುರುಪುಂಗವಾಂಸ್ತಾ-
ನಾಶಂಸಮಾನಃ ಸಹರೌಹಿಣೇಯಃ ।
ಜಗಾಮ ತಾಂ ಭಾರ್ಗವಕರ್ಮಶಾಲಾಂ
ಯತ್ರಾಸತೇ ತೇ ಪುರುಷಪ್ರವೀರಾಃ ॥೨೩॥

ಆಗ ವೃಷ್ಣಿಪ್ರವೀರನಾದ ಕೃಷ್ಣನು ಲಕ್ಷ್ಯವೇಧವನ್ನು ಮಾಡಿದವರು ಕುರುಪುಂಗವರೆಂದು ಆಶಂಸಿಸಿ ಬಲರಾಮನನ್ನು ಕರೆದುಕೊಂಡು, ಆ ಕುರುಪ್ರವೀರರು ವಾಸಿಸುತಿದ್ದ ಕುಂಬಾರನ ಮನೆಗೆ ಬಂದನು.

ತತ್ರೋಪವಿಷ್ಟಂ ಪೃಥುದೀರ್ಘಬಾಹುಂ
ದದರ್ಶ ಕೃಷ್ಣಃ ಸಹರೌಹಿಣೇಯಃ ।
ಅಜಾತಶತ್ರುಂ ಪರಿವಾರ್ಯ ತಾಂಶ್ಚ
ಉಪೋಪವಿಷ್ಟಾನ್ ಜ್ವಲನಪ್ರಕಾಶಾನ್ ॥೨೪॥

ಕೃಷ್ಣನು ಅಲ್ಲಿ ಕುಳಿತಿದ್ದ ಪೃಥುದೀರ್ಘಬಾಹುವಾದ ಯುಧಿಷ್ಠಿರನನ್ನು ಬಲರಾಮನ ಜೊತೆಯಲ್ಲಿ ನೋಡಿದನು. ಅಜಾತಶತ್ರುವನ್ನು ಸುತ್ತುವರಿದು ಸಮೀಪದಲ್ಲಿ ಕುಳಿತಿದ್ದ ಅಗ್ನಿಯಂತೆ ಪ್ರಕಾಶಿಸುತ್ತಿದ್ದ ಆ ತಮ್ಮಂದಿರನ್ನು ನೋಡಿದನು.

ತಾಂಶ್ಚಾಬ್ರವೀದ್ ವಾಸುದೇವೋಽಭಿಗಮ್ಯ
ಕುಂತೀಸುತಾನ್ ಧರ್ಮಭೃತಾಂ ವರಿಷ್ಠಾನ್ ।
ಕೃಷ್ಣೋಽಹಮಸ್ಮೀತಿ ನಿಪೀಡ್ಯ ಪಾದೌ
ಯುಧಿಷ್ಠಿರಸ್ಯಾಜಮೀಢಸ್ಯ ತಸ್ಥೌ ॥೨೫॥

ವಸುದೇವನ ಸುತನಾದ ಕೃಷ್ಣನು ಧರ್ಮಭೃತರಲ್ಲಿ ಶ್ರೇಷ್ಠರಾದ ಪಾಂಡವರನ್ನು ಸಮೀಪಿಸಿ, ನಾನು ಕೃಷ್ಣ ಎಂದು ಹೇಳಿ ಅಜಮೀಢ ವಂಶೋತ್ಪನ್ನನಾದ ಯುಧಿಷ್ಠಿರನ ಪಾದಗಳಿಗೆ ನಮಸ್ಕರಿಸಿ ನಿಂತನು.

ತಥೈವ ತಸ್ಯಾಪ್ಯನು ರೌಹಿಣೇಯಃ
ತೇ ಚಾಪಿ ಹೃಷ್ಟಾಃ ಕುರವೋಽಭ್ಯನಂದನ್ ।
ಪಿತೃಷ್ವಸುಶ್ಚೈವ ಮಧುಪ್ರವೀರಾ-
ವಾಗೃಹ್ಣೀತಾಂ ಭಾರತಮುಖ್ಯ ಪಾದೌ ॥೨೬॥

ಅನಂತರ ಹಾಗೆಯೇ ಬಲರಾಮನು ನಮಸ್ಕರಿಸಿದನು. ಕೃಷ್ಣ, ಬಲರಾಮರನ್ನು ನೋಡಿ, ಪಾಂಡವರು ಸಂತುಷ್ಟರಾದರು. ಭಾರತಶ್ರೇಷ್ಠನೇ, ಮಧುಪ್ರವೀರರಾದ ಕೃಷ್ಣ, ಬಲರಾಮರಿಬ್ಬರೂ ಸೋದರತ್ತೆಯಾದ ಕುಂತಿಯ ಪಾದಗಳಿಗೂ ನಮಸ್ಕರಿಸಿದರು.

ಅಜಾತಶತ್ರುಸ್ತು ಕುರುಪ್ರವೀರಃ
ಪಪ್ರಚ್ಛ ಕೃಷ್ಣಂ ಕುಶಲಂ ನಿವೇದ್ಯ ।
ಕಥಂ ವಯಂ ವಾಸುದೇವ ತ್ವಯೇಹ
ಗೂಢಾ ವಸಂತೋ ವಿದಿತಾಃ ಸ್ಮ ಸರ್ವೇ ॥೨೭॥

ಕುರುಪ್ರವೀರನಾದ ಅಜಾತಶತ್ರುವು ತನ್ನ ಕುಶಲವನ್ನು ನಿವೇದಿಸಿ, ಕೃಷ್ಣನನ್ನು ಕುರಿತು ಕುಶಲ ಪ್ರಶ್ನೆಯನ್ನು ಮಾಡಿದನು. ವಾಸುದೇವನೇ, ನಾವೆಲ್ಲರೂ ಇಲ್ಲಿ ಪ್ರಚ್ಛನ್ನರಾಗಿ ವಾಸ ಮಾಡುತ್ತಿರುವುದನ್ನು ನೀನು ಹೇಗೆ ತಿಳಿದೆ?

ತಮಬ್ರವೀದ್ ವಾಸುದೇವಃ ಪ್ರಹಸ್ಯ
ಗೂಢೋಽಪ್ಯಗ್ನಿರ್ಜ್ಞಾಯತ ಏವ ರಾಜನ್ ।
ತಂ ವಿಕ್ರಮಂ ಪಾಂಡವೇಯಾನತೀತ್ಯ
ಕೋಽನ್ಯಃ ಕರ್ತಾ ವಿದ್ಯತೇ ಮಾನುಷೇಷು ॥೨೮॥

ಆಗ ವಾಸುದೇವನು ನಕ್ಕು, ಅಜಾತಶತ್ರುವನ್ನು ಕುರಿತು ಹೀಗೆ ಹೇಳಿದನು - ರಾಜನೇ, ಅಗ್ನಿಯು ಗೂಢವಾಗಿದ್ದರೂ ಎಲ್ಲರಿಗೂ ತಿಳಿಯುತ್ತದೆ. ಪಾಂಡುವಿನ ಮಕ್ಕಳನ್ನು ಬಿಟ್ಟು ಮನುಷ್ಯರಲ್ಲಿ ಯಾವನು ಆ ವಿಕ್ರಮವನ್ನು ಮಾಡುವವನು ಇದ್ದಾನೆ?

ದಿಷ್ಟ್ಯಾ ತಸ್ಮಾತ್ ಪಾವಕಾಚ್ಚಾಥ ಮುಕ್ತಾ
ಯೂಯಂ ಸರ್ವೇ ಪಾಂಡವಾಃ ಶತ್ರುಸಾಹಾಃ ।
ದಿಷ್ಟ್ಯಾ ಪಾಪೋ ಧೃತರಾಷ್ಟ್ರಃ ಸಪುತ್ರಃ
ಸಾಮಾತ್ಯೋ ವೈ ನ ಸಕಾಮೋಽಭವಿಷ್ಯತ್ ॥೨೯॥

ಶತ್ರುಗಳ ವಿರೋಧವನ್ನು ಎದುರಿಸುವ ಪಾಂಡುಪುತ್ರರಾದ ನೀವೆಲ್ಲರೂ ಭಗವದನುಗ್ರಹದಿಂದ ಜತುಗೃಹದಾಹದಿಂದ ಮುಕ್ತರಾಗಿದ್ದೀರಿ. ದೈವಾನುಗ್ರಹದಿಂದ

ಪುತ್ರಾಮಾತುಸಹಿತನಾಗಿ ದುಷ್ಟಬುದ್ಧಿಯನ್ನು ಹೊಂದಿದ ಧೃತರಾಷ್ಟ್ರನ ಆಸೆಯು ಈಡೇರಲಿಲ್ಲ.

ಭದ್ರಂ ವೋಽಸ್ತು ನಿಹಿತಂ ಯದ್ ಗುಹಾಯಾಂ
ವಿವೃದ್ಧಂ ವೈ ಜ್ವಲನಮಿವೇಧ್ಯಮಾನಮ್ ।
ಮಾ ವೋ ವಿದುಃ ಪಾರ್ಥಿವಾಃ ಕೇಚನೇಹ
ಯಾಸ್ಯಾವೋಽಽವಾಂ ಶಿಬಿರಾಯೈವ ತಾವತ್ ॥೩೦॥

ಹೃದಯಗುಹೆಯಲ್ಲಿರುವ ಗುಣಪೂರ್ಣನಾದ ಅಗ್ನಿಯಂತೆ ಜ್ವಲಿಸುವ ನಾರಾಯಣನ ಅನುಗ್ರಹದಿಂದ ನಿಮಗೆ ಮಂಗಳವಾಗಲಿ. ಪಾರ್ಥಿವರೇ ನಿಮ್ಮನ್ನು ಇಲ್ಲಿ ಯಾರೂ ತಿಳಿಯುವುದು ಬೇಡ. ನಾವಿಬ್ಬರೂ ನಮ್ಮ ಶಿಬಿರಕ್ಕೆ ಹಿಂದಿರುಗುತ್ತೇವೆ.

ಸೋಽನುಜ್ಞಾತಃ ಪಾಂಡವೇನಾವ್ಯಯಶ್ರೀಃ
ಪ್ರಾಯಾಚ್ಛೀಘ್ರಂ ಬಲದೇವೇನ ಸಾರ್ಧಮ್ ।
ತತ್ಕೈವಾಸನ್ ಪಾಂಡವಾಶ್ಚಾಜಘನ್ಯಾ
ಮಾತ್ರಾ ಸಾರ್ಧಂ ಕೃಷ್ಣಯಾ ಚಾಪಿ ವೀರಾಃ ॥೩೧॥

ಅಕ್ಷಯವಾದ ಸಂಪತ್ತನ್ನು ಹೊಂದಿದ್ದ ಕೃಷ್ಣನು ಧರ್ಮರಾಜನ ಅನುಮತಿಯನ್ನು ಪಡೆದು, ಬಲರಾಮನ ಜೊತೆಯಲ್ಲಿ ಶೀಘ್ರವಾಗಿ ಹಿಂದಿರುಗಿದನು. ಉತ್ಕೃಷ್ಟರೂ ಮತ್ತು ವೀರರೂ ಆದ ಪಾಂಡವರು ತಾಯಿ ಮತ್ತು ದ್ರೌಪದಿಯ ಜೊತೆಯಲ್ಲಿ ಅಲ್ಲಿಯೇ ಇದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ ನವತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಸ್ವಯಂವರಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ತೊಂಭತ್ತನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಸಂಭಾಷ್ಯ ತೈಃ ಸ ಭಗವಾನಮಿತಾತ್ಮಶಕ್ತಿಃ
ಪ್ರಾಯಾನ್ನಿಜಾಂ ಪುರಮಮಾ ಯದುಭಿಃ ಸಮಸ್ತೈಃ ।
ಜ್ಞಾತುಂ ಚ ತಾನ್‌ನಿಶಿ ಸ ತು ದ್ರುಪದಃ ಸ್ವಪುತ್ರಂ
ಪ್ರಾಸ್ಥಾಪಯತ್ ಸ ಚ ವಿಲೀನ ಇಮಾನಪಶ್ಯತ್ ॥೧೪೪॥

ಅಮಿತ ಆತ್ಮಶಕ್ತಿಯುಳ್ಳ ಭಗವಾನ್ ಶ್ರೀಕೃಷ್ಣ ಪಾಂಡವರೊಡನೆ ಮಾತನಾಡಿ ಸಮಸ್ತ ಯಾದವರೊಂದಿಗೆ ತನ್ನ ದ್ವಾರಕಾಪುರಿಗೆ ಹೊರಟು ಹೋದ. ಬಳಿಕ ದ್ರುಪದ ಪಾಂಡವರನ್ನು ಯಾರೆಂದು ತಿಳಿಯಲು ರಾತ್ರಿಯಲ್ಲಿ ತನ್ನ ಮಗನಾದ ಧೃಷ್ಟದ್ಯುಮ್ನನನ್ನು ಕಳಿಸಿದ. ಅವನು ಮರೆಯಲ್ಲಿ ನಿಂತು ಪಾಂಡವರನ್ನು ವೀಕ್ಷಿಸಿದ.

ಭಿಕ್ಷಾನ್ನಭೋಜಿನ ಉತೋ ಭಗಿನೀಂ ನಿಜಾಂ ಚ
ತತ್ರಾತಿತೃಪ್ತಹೃದಯಾಮಥ ಯುದ್ಧವಾರ್ತ್ತಾಂ ।
ತೇಷಾಂ ನಿಶಮ್ಯ ನದತಾಂ ಘನವದ್ ಗಭೀರಾಂ
ಕ್ಷತ್ತೋತ್ತಮಾ ಇತಿ ಮತಿಂ ಸ ಚಕಾರ ವೀರಃ ॥೧೪೫॥

ಪಾಂಡವರು ಭಿಕ್ಷಾನ್ನ ಉಣ್ಣುವುದನ್ನೂ ತನ್ನ ತಂಗಿ ಅವರ ಬಳಿ ಬಲು ಸಂತೃಪ್ತ ಹೃದಯದವಳಾಗಿ ಇರುವುದನ್ನೂ ವೀರ ಧೃಷ್ಟದ್ಯುಮ್ನ ಕೂಡ. ಅವರು ಗುಡುಗಿನಂಥ ಗಂಭೀರ ಧ್ವನಿಯಿಂದ ಮಾತನಾಡುತ್ತ ಯುದ್ಧವಾರ್ತೆಯನ್ನು ಹೇಳಿಕೊಳ್ಳುವುದನ್ನು ಹೇಳಿಕೊಳ್ಳುವುದನ್ನು ಕೇಳಿ ಇವರು ಉತ್ತಮ ಕ್ಷತ್ರಿಯರೆಂದು ನಿಶ್ಚಯಿಸಿದ.

★ ★ ★ ★

ನೂರ ತೊಂಭತ್ತೊಂದನೆಯ ಅಧ್ಯಾಯ

(ಧೃಷ್ಟದ್ಯುಮ್ನನಿಂದ ದ್ರೌಪದಿಯನ್ನು ಹಿಂಬಾಲಿಸಿ ಪಾಂಡವರ ಪರೀಕ್ಷಣ, ದ್ರುಪದನ ಬಳಿಗೆ ಪುನರಾಗಮನ)

ವೈಶಂಪಾಯನಃ

ಧೃಷ್ಟದ್ಯುಮ್ನಸ್ತು ಪಾಂಚಾಲ್ಯಃ ಪೃಷ್ಠತಃ ಕುರುನಂದನೌ ।
ಅನ್ವಗಚ್ಛತ್ ತದಾ ಯಾಂತೌ ಭಾರ್ಗವಸ್ಯ ನಿವೇಶನಮ್ ॥೧॥

ಧೃಷ್ಟದ್ಯುಮ್ನನು ಕುಂಬಾರನ ಮನೆಗೆ ಹೊರಟ ಕುರುನಂದನರಾದ ಭೀಮಾರ್ಜುನರ ಹಿಂದೆ ಹೊರಟ ದ್ರೌಪದಿಯನ್ನು ಹಿಂಬಾಲಿಸಿದನು.

ಸೋಽಜ್ಞಾಯಮಾನಃ ಪುರುಷಾನವಧಾರ್ಯ ಸಮಂತತಃ ।
ಸ್ವಯಮಾರಾನ್ನಿವಿಷ್ಟೋಽಭೂದ್ ಭಾರ್ಗವಸ್ಯ ನಿವೇಶನಾತ್ ॥೨॥

ಅವನು ತಾನು ಬೇರೆ ಯಾರಿಗೂ ತಿಳಿಯದಂತೆ ಎಲ್ಲರೂ ತನ್ನಿಂದ ದೂರವಿರುವುದನ್ನು ಗಮನಿಸಿ ತಾನು ಕುಂಬಾರನ ಮನೆಯ ಸಮೀಪದಲ್ಲಿ ನಿಂತನು.

ಜಿಜ್ಞಾಸಮಾನಸ್ತು ತದಾ ಸಂದಿದೇಶ ನೃಪಾತ್ಮಜಃ ।
ಪುರುಷಾನ್ ದ್ರೌಪದೀಹೇತೋರ್ಜಾನೀಧ್ವಂ ಕೇ ತ್ವಿಮೇ ದ್ವಿಜಾಃ ॥೩॥

ದ್ರೌಪದಿಯ ಸಲುವಾಗಿ ಪಾಂಡವರನ್ನು ತಿಳಿಯುವ ಉದ್ದೇಶದಿಂದ ರಾಜಕುಮಾರನಾದ ಧೃಷ್ಟದ್ಯುಮ್ನನು ಈ ಬ್ರಾಹ್ಮಣರು ಯಾರು ಎಂದು ತಿಳಿಯಿರಿ ಎಂದು ತನ್ನ ಗೂಢಚಾರರಿಗೆ ಆದೇಶವನ್ನು ನೀಡಿದನು.

ಸಾಯಂ ಚ ಭೀಮಶ್ಚ ರಿಪುಪ್ರಮಾಥೀ
ಜಿಷ್ಣುರ್ಯಮೌ ಚಾಪಿ ಮಹಾನುಭಾವೌ ।
ಭೈಕ್ಷಂ ಚರಿತ್ವಾ ತು ಯುಧಿಷ್ಠಿರಸ್ಯ
ನಿವೇದಯಾಂಚಕ್ರುರದೀನಸತ್ವಾಃ ॥೪॥

ಸಾಯಂಕಾಲದ ಸಮಯದಲ್ಲಿ ಶತ್ರುನಾಶಕನಾದ ಭೀಮನೂ, ಮಹಾನುಭಾವರಾದ ಅರ್ಜುನ, ನಕುಲ ಸಹದೇವರೂ ಭೈಕ್ಷ್ಯವನ್ನು ತಂದು ಅದೀನಸತ್ವರಾದ ಅವರು ಧರ್ಮರಾಜನಿಗೆ ನಿವೇದಿಸಿದರು.

ತತಸ್ತು ಕುಂತೀ ದ್ರುಪದಾತ್ಮಜಾಂ ತಾ-
ಮುವಾಚ ಕಾಲೇ ವಚನಂ ವದಾನ್ಯಾ ।
ಅತೋಽಗ್ರ್ಯಮಾದಾಯ ಕುರುಷ್ವ ಭದ್ರೇ
ಬಲಿಂ ಚ ವಿಪ್ರಾಯ ಚ ದೇಹಿ ಭಿಕ್ಷಾಮ್ ॥೫॥

ಆಗ ಉದಾರಳಾದ ಕುಂತಿಯು ದ್ರುಪದಾತ್ಮಜೆಯಾದ ಕೃಷ್ಣೆಯನ್ನು ಕುರಿತು ಹೇಳಿದಳು. ಭದ್ರೇ, ಈ ಅನ್ನದ ಶ್ರೇಷ್ಠವಾದ ಭಾಗವನ್ನು ತೆಗೆದು ಭೂತಬಲಿಯನ್ನು ನೀಡಿ ಬ್ರಾಹ್ಮಣರಿಗೆ ಭಿಕ್ಷೆಯನ್ನು ನೀಡು.

ಯೇ ಚಾನ್ನಮಿಚ್ಛಂತಿ ಹಿ ದೇಹಿ ತೇಭ್ಯಃ
ಪರಿಶ್ರಿತಾ ಯೇ ಪರಿತೋ ಮನುಷ್ಯಾಃ ।
ತತಸ್ತು ಶೇಷಂ ಪ್ರವಿಭಜ್ಯ ಶೀಘ್ರ-
ಮರ್ಧಂ ಚತುರ್ಧಾ ಮಮ ಚಾತ್ಮನಶ್ಚ ॥೬॥

ಬೇರೆ ಯಾರಾದರೂ ಮನುಷ್ಯರು ಅನ್ನವನ್ನು ಬಯಸುವವರಿದ್ದರೆ ಅವರಿಗೂ ಅನ್ನವನ್ನು ನೀಡು. ಉಳಿದ ಅನ್ನವನ್ನು ಎರಡು ಭಾಗವನ್ನು ಮಾಡಿ ಒಂದು ಅರ್ಧಭಾಗದಲ್ಲಿನಾಲ್ಕು ಮಕ್ಕಳಿಗೂ ನನಗೂ ನಿನಗೂ, ಸೇರಿ ಆರು ಭಾಗವನ್ನು ಮಾಡು.

ಅರ್ಧಂ ಚ ಭೀಮಾಯ ಚ ದೇಹಿ ಭದ್ರೇ
ಯ ಏಷ ನಾಗರ್ಷಭವೀರ್ಯರೂಪಃ ।
ಶ್ಯಾಮೋ ಯುವಾ ಸಂಹನನೋಪಪನ್ನ
ಏಷೋ ಹಿ ವೀರೋ ಬಹುಭುಕ್ ಸದೈವ ॥೭॥

ಭದ್ರೇ, ಉಳಿದ ಅರ್ಧಭಾಗವನ್ನು ಭೀಮಸೇನನಿಗೆ ಕೊಡು. ಶ್ರೇಷ್ಠಗಜದ ಪರಾಕ್ರಮವುಳ್ಳ ಶ್ಯಾಮನೂ, ಯುವಕನೂ, ದೃಢಶರೀರನೂ ಆದ ಈ ವೀರನು ಯಾವಾಗಲೂ ಬಹಳ ಊಟವನ್ನು ಮಾಡುವವನು.

ವೈಶಂಪಾಯನಃ

ಸಾ ಹೃಷ್ಟರೂಪೈವ ಚ ರಾಜಪುತ್ರೀ
ತಸ್ಯಾ ವಚಃ ಸಾಧ್ವವಿಶಂಕಮಾನಾ ।
ಯಥಾ ತಯೋಕ್ತಂ ವಚನಂ ಚಕಾರ
ತೇ ಚಾಪಿ ಸರ್ವೇಽಭ್ಯವಜಹ್ರುರನ್ನಮ್ ॥೮॥

ಆ ರಾಜಕುಮಾರಿಯು ಯಾವ ಶಂಕೆಯನ್ನೂ ಮಾಡದೆ ಸಂತೋಷದಿಂದಲೇ ಕುಂತಿಯು ಹೇಳಿದಂತೆ ಮಾಡಿದಳು. ಅವರೆಲ್ಲರೂ ರಾತ್ರಿಯಲ್ಲಿ ಊಟವನ್ನು ಮಾಡಿದರು.

ಕುಶೈಸ್ತು ಭೂಮೌ ಶಯನಂ ಚಕಾರ
ಮಾದ್ರೀಸುತಃ ಸಹದೇವಸ್ತರಸ್ವೀ ।
ಅಥಾತ್ಮಕೀನಾನ್ಯಜಿನಾನಿ ಸರ್ವೇ
ಸಂಸ್ತೀರ್ಯ ವೀರಾಃ ಸುಷುಪುರ್ಧರಣ್ಯಾಮ್ ॥೯॥

ಮಾದ್ರೀಸುತನಾದ ಸಹದೇವನು ಶೀಘ್ರವಾಗಿ ಭೂಮಿಯಲ್ಲಿ ದರ್ಭೆಗಳನ್ನು ಹಾಸಿ ಶಯನಗಳನ್ನು ಸಿದ್ದಮಾಡಿದನು. ಅನಂತರ ಆ ವೀರರು ತಮ್ಮ ಕೃಷ್ಣಾಜಿನಗಳನ್ನು ಆ ದರ್ಭೆಗಳ ಮೇಲೆ ಹರಡಿ ಭೂಮಿಯಲ್ಲಿ ಮಲಗಿದರು.

ಅಗಸ್ಯಕಾಂತಾಮಭಿತೋ ದಿಶಂ ತು
ಶಿರಾಂಸಿ ತೇಷಾಂ ಕುರುಸತ್ತಮಾನಾಮ್ ।
ಕುಂತೀ ಪುರಸ್ತಾತ್ ತು ಬಭೂವ ತೇಷಾಂ
ಕೃಷ್ಣಾ ತಿರಶ್ಚ್ಯೈವ ಬಭೂವ ಸಾಧ್ವೀ ॥೧೦॥

ಪಾಂಡವರು ದಕ್ಷಿಣಕ್ಕೆ ಶಿರಸ್ಸನ್ನು ಮಾಡಿ ಮಲಗಿದರು. ಕುಂತಿಯು ಆ ಕುರುಶ್ರೇಷ್ಠರ ಬಲಗಡೆಯಲ್ಲಿ ಎಂದರೆ ಪೂರ್ವದಲ್ಲಿ ದಕ್ಷಿಣಕ್ಕೆ ತಲೆ ಮಾಡಿ ಮಲಗಿದಳು. ದ್ರೌಪದಿಯು ಅವರ ಕೆಳಗೆ ಮಲಗಿದಳು. (ಉತ್ತರ ದಿಕ್ಕಿನಲ್ಲಿ ಮಲಗಿದಳು)

ಅಶೇತ ಭೂಮೌ ಸಹ ಪಾಂಡುಪುತ್ರೈಃ
ಪಾದೋಪಧಾನೇವ ಕೃತಾ ಕುಶೇಷು ।

ನ ತತ್ರ ದುಃಖಂ ಚ ಸಮಾಸಸಾದ
ನ ಚಾವಮೇನೇ ಕುರುಪುಂಗವಾಂಸ್ತಾನ್ ॥೧೧॥

ದ್ರೌಪದಿಯು ಪಾಂಡುಪುತ್ರರ ಜೊತೆಯಲ್ಲಿ ಅವರ ಪಾದದ ಕಡೆಯಲ್ಲಿ ಪಾದಗಳಿಗೆ ಇಟ್ಟ ದಿಂಬಿನಂತೆ ಮಲಗಿದಳು. ಅವಳು ದುಃಖವನ್ನು ಪಡಲಿಲ್ಲ. ನನ್ನ ಪತಿಗಳು ದರಿದ್ರರು ಎಂದು ಆ ಕುರುಪುಂಗವರನ್ನು ಅವಮಾನ ಮಾಡಲೂ ಇಲ್ಲ.

ತೇ ತತ್ರ ಶೂರಾಃ ಕಥಯಾಂಬಭೂವುಃ
ಕಥಾ ವಿಚಿತ್ರಾಃ ಪೃತನಾಧಿಕಾರಾಃ ।
ಅಸ್ತ್ರಾಣಿ ದಿವ್ಯಾನಿ ರಥಾಂಶ್ಚ ನಾಗಾನ್
ತಥಾ ಗದಾಶ್ಚಾಪಿ ಪರಶ್ವಧಾಂಶ್ಚ ॥೧೨॥

ಆ ಶೂರರಾದ ಪಾಂಡವರು ರಾತ್ರಿಯ ವೇಳೆಯಲ್ಲಿ ಸೈನ್ಯಕ್ಕೆ ಸಂಬಂಧಿಸಿದ ದಿವ್ಯಾಸ್ತ್ರಗಳು, ರಥಗಳು, ಗಜಗಳು, ಗದೆಗಳು, ಪರಶ್ವಧಗಳು ಇವುಗಳನ್ನು ಕುರಿತು ವಿಚಿತ್ರವಾದ ಮಾತುಗಳನ್ನು ಆಡಿದರು.

ತೇಷಾಂ ಕಥಾಸ್ತಾಃ ಪರಿಕೀರ್ತ್ಯಮಾನಾಃ ।
ಪಾಂಚಾಲರಾಜಸ್ಯ ಸುತಸ್ತದಾನೀಮ್ ।
ಶ್ರುತ್ವಾ ಕೃಷ್ಣಾಂ ಚ ತಥಾऽಭಿಪನ್ನಾಂ
ತೇ ಚಾಪಿ ಸರ್ವೇ ದದೃಶುರ್ಮನುಷ್ಯಾಃ ॥೧೩॥

ಅವರು ಆಡುವ ಆ ಮಾತುಗಳನ್ನು ಅಜ್ಞಾತವಾಗಿ ಧೃಷ್ಟದ್ಯುಮ್ನನು ಕೇಳಿದನು. ದ್ರೌಪದಿಯು ಅಪ್ಪು ಸಮಾಧಾನ ಮತ್ತು ಸಂತೋಷದಿಂದ ಇರುವುದನ್ನೂ ಅವನು ನೋಡಿದನು, ಅವನ ಗೂಢಚಾರರೂ ನೋಡಿದರು.

ಧೃಷ್ಟದ್ಯುಮ್ನೋ ರಾಜಪುತ್ರಸ್ತು ಸರ್ವಂ
ವೃತ್ತಂ ತೇಷಾಂ ಕಥಿತಂ ಚೈವ ರಾತ್ರೌ ।
ಸರ್ವಂ ರಾಜ್ಞೇ ದ್ರುಪದಾಯಾಖಿಲೇನ
ನಿವೇದಯಿಷ್ಯಂಸ್ತ್ವರಿತೋ ಜಗಾಮ ॥೧೪॥

ಪ್ರಾತಃಕಾಲದಲ್ಲಿ ಧೃಷ್ಟದ್ಯುಮ್ನನು ರಾತ್ರಿ ತಾನು ಕೇಳಿದ ಅವರ ಮಾತುಕಥೆಗಳನ್ನೂ, ನೋಡಿದ ವಿಷಯಗಳನ್ನೂ ರಾಜನಾದ ದ್ರುಪದನಿಗೆ ತಿಳಿಸಲು ಬಯಸಿ ಶೀಘ್ರವಾಗಿ ಅವನ ಬಳಿಗೆ ಹೋದನು.

ಪಾಂಚಾಲರಾಜಸ್ತು ವಿಷಣ್ಣರೂಪ-
ಸ್ತಾನ್ ಪಾಂಡವಾನಪ್ರತಿವಿಂದಮಾನಃ ।
ಧೃಷ್ಟದ್ಯುಮ್ನಂ ಪರ್ಯಪೃಚ್ಛನ್ಮಹಾತ್ಮಾ
ಕ್ವ ಸಾ ಗತಾ ಕೇನ ಹೃತಾ ಚ ಕೃಷ್ಣಾ ॥೧೫॥

ಪಾಂಡವರನ್ನು ಎಲ್ಲೂ ಕಾಣದೆ ವಿಷಾದದಿಂದ ಕುಳಿತಿದ್ದ ಮಹಾನುಭಾವನಾದ ಪಾಂಚಾಲರಾಜನಾದ ದ್ರುಪದನು ಧೃಷ್ಟದ್ಯುಮ್ನನನ್ನು ನೋಡಿ, ದ್ರೌಪದಿಯು ಎಲ್ಲಿ ಹೋದಳು, ಅವಳನ್ನು ಜಯಿಸಿದವರು ಯಾರು ಎಂದು ಕೇಳಿದನು.

ಕಚ್ಚಿನ್ನ ಶೂದ್ರೇಣ ನ ಹೀನಜೇನ
ವೈಶ್ಯೇನ ವಾ ಕರಣೇನೋಪಪನ್ನಾ ।
ಕಚ್ಚಿತ್ ಪದಂ ಮೂರ್ಧ್ನಿ ನ ಮೇ ವಿಷಕ್ತಂ
ಕಚ್ಚಿಚ್ಚ ಬಾಲಾ ಪತಿತಾ ನ ಶ್ಮಶಾನೇ ॥೧೬॥

ಯಾವನಾದರೂ ಶೂದ್ರನಾಗಲಿ, ಅಥವಾ ಜಾತಿಹೀನನಾಗಲಿ ಅಥವಾ ವೈಶ್ಯನಾಗಲಿ ಅಥವಾ ಶೂದ್ರಕುಮಾರನಾಗಲಿ, ನನ್ನ ತಲೆಯ ಮೇಲೆ ತನ್ನ ಪಾದವನ್ನು ಇಟ್ಟಿಲ್ಲವಷ್ಟೇ? ನನ್ನ ಮಗಳು ಶ್ಮಶಾನದ ಪಾಲಾಗಿಲ್ಲವಷ್ಟೇ?

ಕಚ್ಚಿತ್ ಸುವರ್ಣಪ್ರತಿಮೋ ಮನುಷ್ಯ
ಉದ್ರಿಕ್ತವರ್ಣೋಽಪ್ಯಥ ವೇಹ ಕಚ್ಚಿತ್ ।
ಕಚ್ಚಿನ್ನ ವಾಮೋ ಮಮ ಮೂರ್ಧ್ನಿ ಪಾದಃ
ಕೃಷ್ಣಾಭಿಮರ್ಶೇನ ಕೃತೋಽದ್ಯ ಪುತ್ರ ॥೧೭॥

ಅವಳನ್ನು ಜಯಿಸಿದ ಮನುಷ್ಯನು ಶ್ರೇಷ್ಠವಾದ ಬ್ರಾಹ್ಮಣ ವರ್ಣಕ್ಕೆ ಸೇರಿದವನಷ್ಟೇ? ಅಥವಾ ಉದ್ರಿಕ್ತವಾದ ಕ್ಷತ್ರಿಯ ವರ್ಣಕ್ಕೆ ಸೇರಿದವನಷ್ಟೇ? ಪುತ್ರನೇ, ಯಾವನಾದರೂ ವಕ್ರನಾದವನು ಕೃಷ್ಣೆಯನ್ನು ಮುಟ್ಟಿ ನನ್ನ ತಲೆಯ ಮೇಲೆ ತನ್ನ ಎಡಗಾಲವನ್ನು ಇಟ್ಟಿಲ್ಲವಷ್ಟೇ?

ಕಚ್ಚಿಚ್ಚಯಿಷ್ಯೇ ಪರಮಪ್ರತೀತ-
ಸ್ತಾಂ ಯೋಜ್ಯ ಪಾರ್ಥೇನ ನರರ್ಷಭೇಣ ।
ವದಸ್ವ ತತ್ತ್ವೇನ ಮಹಾನುಭಾವ
ಕೋಽಸೌ ವಿಜೇತಾ ದುಹಿತುರ್ಮಮಾದ್ಯ ॥೧೮॥

ಪುತ್ರನೇ, ನಾನು ಎಂದಾದರೂ ಕೃಷ್ಣೆಯನ್ನು ಅರ್ಜುನನಿಗೆ ಕೊಟ್ಟು ಸುಖವಾಗಿ ನಿದ್ದೆಮಾಡುತ್ತೇನೆಯೇ? ಮಹಾನುಭಾವನೇ, ನನ್ನ ಮಗಳನ್ನು ಜಯಿಸಿದವರು ಯಾರು ಎಂದು ಇಂದು ನೀನು ನಿಜವಾಗಿ ಹೇಳು.

ವೈಚಿತ್ರವೀರ್ಯಸ್ಯ ತು ಕಚ್ಚಿದದ್ಯ
ಕುರುಪ್ರವೀರಸ್ಯ ಚರಂತಿ ಪೌತ್ರಾಃ ।
ಕಚ್ಚಿಚ್ಚ ಪಾರ್ಥೇನ ಯವೀಯಸಾಽದ್ಯ
ಧನುರ್ಗೃಹೀತಂ ನಿಹತಂ ಚ ಲಕ್ಷ್ಯಮ್ ॥೧೯॥

ಕುರುಪ್ರವೀರನಾದ ವಿಚಿತ್ರವೀರ್ಯನ ಪೌತ್ರರು ಇನ್ನೂ ಭೂಮಿಯಲ್ಲಿ ತಿರುಗಾಡುತ್ತಿದ್ದಾರಷ್ಟೇ? ಅಥವಾ ಕುಂತಿಯ ಮಕ್ಕಳಲ್ಲಿ ಚಿಕ್ಕವನಾದ ಅರ್ಜುನನು ಧನುಸ್ಸನ್ನು ಹಿಡಿದು ಲಕ್ಷ್ಯವೇಧವನ್ನು ಮಾಡಿದ್ದಾನಷ್ಟೇ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಏಕನವತ್ಯಧಿಕಶತತಮೋಽಧ್ಯಾಯಃ॥
॥ ಇತಿ ಸ್ವಯಂವರಪರ್ವಣಿ ಅಷ್ಟಮೋಽಧ್ಯಾಯಃ ॥

॥ ಸ್ವಯಂವರಪರ್ವ ಸಮಾಪ್ತಮ್॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ತ್ತೊಂಭತ್ತೊಂದನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ಸ್ವಯಂವರಪರ್ವವು ಮುಗಿಯಿತು.

★★★★★

೧೨. ವೈವಾಹಿಕಪರ್ವ

ನೂರ ತೊಂಭತ್ತೆರಡನೆಯ ಅಧ್ಯಾಯ

(ಧೃಷ್ಟದ್ಯುಮ್ನನಿಂದ ರಾತ್ರಿಯ ವೃತ್ತಾಂತದ ಕಥನ, ದ್ರುಪದನಿಂದ ಧರ್ಮರಾಜನ ಬಳಿಗೆ ಪುರೋಹಿತನ ಪ್ರೇಷಣ, ಧರ್ಮರಾಜ ಮತ್ತು ಪುರೋಹಿತನ ಸಂವಾದ)

ವೈಶಂಪಾಯನಃ

ತತಸ್ತಥೋಕ್ತಃ ಪರಿಹೃಷ್ಟರೂಪಃ
ಪಿತ್ರೇ ಶಶಂಸಾಥ ನರೇಂದ್ರಪುತ್ರಃ ।
ಧೃಷ್ಟದ್ಯುಮ್ನಃ ಸೋಮಕಾನಾಂ ಪ್ರಬರ್ಹೋ
ಚಿತ್ತಂ ಯಥಾ ಯೇನ ಹೃತಾ ಚ ಕೃಷ್ಣಾ ॥೧॥

ತಂದೆಯಿಂದ ಹೀಗೆ ಹೇಳಲ್ಪಟ್ಟವನಾಗಿ ಸೋಮಕವಂಶದಲ್ಲಿ ಶ್ರೇಷ್ಠನಾದ, ರಾಜಕುಮಾರನಾದ ಧೃಷ್ಟದ್ಯುಮ್ನನು ಸಂತೋಷಗೊಂಡು ತನ್ನ ತಂದೆಯನ್ನು ಕುರಿತು ತಂದೆಯ ಚಿತ್ತದಂತೆಯೇ ಲಕ್ಷ್ಯವೇಧಿಯಾದ ಪುರುಷನು ದ್ರೌಪದಿಯನ್ನು ಕರೆದುಕೊಂಡು ಹೋದ ವಿಷಯವನ್ನು (ರಾತ್ರಿ ನಡೆದ ಘಟನೆಗಳನ್ನೂ) ಹೇಳಿದನು.

ಧೃಷ್ಟದ್ಯುಮ್ನಃ

ಯೋಽಸೌ ಯುವಾ ಸ್ವಾಯತಲೋಹಿತಾಕ್ಷಃ
ಕೃಷ್ಣಾಜಿನೀ ರೂಪಮತೀವ ಬಿಭ್ರತ್ ।
ಯಃ ಕಾರ್ಮುಕಾಗ್ರ್ಯಂ ಕೃತವಾನಧಿಜ್ಯಂ
ಲಕ್ಷ್ಯಂ ಚ ತತ್ ಪಾತಿತವಾನ್ ಪೃಥಿವ್ಯಾಮ್ ॥೨॥

ಆಸಜ್ಜಮಾನಶ್ಚ ಗತಸ್ತರಸ್ವೀ
ದ್ವಿಜಾತಿಭಿಸ್ತೈರಭಿಪೂಜ್ಯಮಾನಃ ।
ಏಕ್ರಮ್ಯ ವಜ್ರೀವ ದಿತೇಃ ಸುತೇಷು
ಸರ್ವೈಶ್ಚ ದೇವೈರ್ಋಷಿಭಿಶ್ಚ ದೃಷ್ಟಃ ॥೩॥

ಕೃಷ್ಣಾಜಿನವನ್ನು ಧರಿಸಿದ್ದ ಸೌಂದರ್ಯಶಾಲಿಯಾದ ವಿಸ್ತಾರವಾದ ನೇತ್ರಗಳುಳ್ಳ ಯಾವ ಯುವಕನು ಧನುಸ್ಸನ್ನು ಬಗ್ಗಿಸಿ ಹೆದೆಯೇರಿಸಿ ಲಕ್ಷ್ಯವನ್ನು ಭೂಮಿಯಲ್ಲಿ ಕೆಡವಿದನೋ, ಅವನು ಬ್ರಾಹ್ಮಣರಿಂದ ಸುತ್ತುವರೆಯಲ್ಪಟ್ಟು, ಸತ್ಕರಿಸಲ್ಪಟ್ಟು ಬ್ರಾಹ್ಮಣರ ಜೊತೆಯಲ್ಲೇ ಕೂಡಿಕೊಂಡು, ಇಂದ್ರನು ದಿತಿಪುತ್ರರ ಮೇಲೆ ಆಕ್ರಮಣವನ್ನು ಮಾಡಿದಂತೆ ಎಲ್ಲಾ ಋಷಿಗಳಿಂದ ಮತ್ತು ದೇವತೆಗಳಿಂದ ದೃಷ್ಟನಾದ ಅವನು,

ಶ್ಯಾಮೋ ಯುವಾ ವಾರಣಮಂದಗಾಮೀ
ಕೃತ್ವಾ ಮಹತ್ ಕರ್ಮ ಸುದುಷ್ಕರಂ ತತ್ ।
ಕೃಷ್ಣಾಽಪಿ ಕೃಷ್ಣಾಜಿನಿನಂ ಜಗಾಮ
ನಾಗಂ ಯಥಾ ನಾಗವಧೂಃ ಪ್ರಹೃಷ್ಟಾ ॥೪॥

ಶ್ಯಾಮವರ್ಣನೂ, ಗಜಗಾಮಿಯೂ, ಯುವಕನೂ ಆದ ಅವನು ಸುದುಷ್ಕರವಾದ ಆ ಮಹತ್ಕರ್ಮವನ್ನು ಮಾಡಿದ ಮೇಲೆ ಆನೆಯ ಹಿಂದೆ ಹೆಣ್ಣಾನೆಯು ಹೋದಂತೆ ಹರ್ಷಯುಕ್ತಳಾದ ದ್ರೌಪದಿಯು ಕೃಷ್ಣಾಜಿನವನ್ನು ಧರಿಸಿದ ಅವನ ಹಿಂದೆ ಹೋದಳು.

ಯಃ ಸೂತಪುತ್ರೇಣ ಚಕಾರ ಯುದ್ಧಂ
ಶಂಕೇಽರ್ಜುನಂ ತಂ ತ್ರಿದಶೇಶವೀರ್ಯಮ್ ।
ಅಮೃಷ್ಯಮಾಣೇಷು ನರಾಧಿಪೇಷು
ಕ್ರುದ್ಧೇಷು ತಂ ತತ್ರ ಸಮಾಪತತ್ಸು ॥೫॥

ರಾಜರುಗಳೆಲ್ಲಾ ಇವನ ಶ್ರೇಷ್ಠವಾದ ಕರ್ಮವನ್ನು ಸಹಿಸದೆ ಕ್ರುದ್ಧರಾಗಿ ಯುದ್ಧಕ್ಕೆ ಬರುತ್ತಿರಲು, ಯಾವನು ಕರ್ಣನ ಜೊತೆಯಲ್ಲಿ ಯುದ್ಧಮಾಡಿದನೋ ಅವನನ್ನು ಇಂದ್ರನ ಪರಾಕ್ರಮವುಳ್ಳ ಅರ್ಜುನನೆಂದು ನಾನು ಶಂಕಿಸುತ್ತೇನೆ.

ತತೋ ವಟುಃ ಪಾರ್ಥಿವಸಂಘಮಧ್ಯೇ
ಪ್ರಹೃಷ್ಟಮಾರುಜ್ಯ ಮಹೀಪ್ರರೋಹಮ್ ।
ಅಕಾಲಯತ್ ತತ್ರ ಸ ಪಾರ್ಥಿವೌಘಂ
ಭೀಮೋಽಂತಕಃ ಪ್ರಾಣಭೃತೋ ಯಥೈವ ॥೬॥

ಅನಂತರ ಯಾವ ವಟುವು ಆ ರಾಜಸಮೂಹದ ಮಧ್ಯದಲ್ಲಿ ಅರಳಿನಿಂತಿದ್ದ ಚಿಗುರಿದ ಮರವನ್ನು ಕಿತ್ತು ಯಮನು ಜೀವರನ್ನು ಓಡಿಸಿದಂತೆ ಎಲ್ಲ ರಾಜರ ಸಮೂಹವನ್ನು ಓಡಿಸಿದನೋ ಅವನನ್ನು ಭೀಮನೆಂದು ಶಂಕಿಸುತ್ತೇನೆ.

ತೌ ಪಾರ್ಥಿವಾನಾಂ ವಿಷತಾಂ ನರೇಂದ್ರ
ಕೃಷ್ಣಾಮುಪಾದಾಯ ಗತೌ ನರಾಗ್ರ್ಯೌ ।
ವಿಭ್ರಾಜಮಾನಾವಿವ ಚಂದ್ರಸೂರ್ಯೌ
ಬಾಹ್ಯಾಂ ಪುರಾದ್ ಭಾರ್ಗವಕರ್ಮಶಾಲಾಮ್ ॥೭॥

ರಾಜನೇ, ಆ ಇಬ್ಬರು ಮನುಷ್ಯಶ್ರೇಷ್ಠರು ಉಳಿದ ರಾಜರು ನೋಡುತ್ತಿರುವಂತೆಯೇ ದ್ರೌಪದಿಯನ್ನು ಕರೆದುಕೊಂಡು ಜೊತೆಯಲ್ಲಿ ಪ್ರಕಾಶಿಸುವ ಚಂದ್ರಸೂರ್ಯರಂತೆ ನಡೆದು ಊರಿನ ಹೊರಗಿರುವ ಕುಂಬಾರನ ಮನೆಯನ್ನು ಪ್ರವೇಶಿಸಿದರು.

ತತ್ರೋಪವಿಷ್ಟಾರ್ಚಿರಿವಾನಲಸ್ಯ
ತೇಷಾಂ ಜನಿತ್ರೀತಿ ಮಮ ಪ್ರತರ್ಕಃ ।
ತಥಾವಿಧೈರೇವ ನರಪ್ರವೀರೈ-
ರುಪೋಪವಿಷ್ಟಾ ತ್ರಿಭಿರಗ್ನಿಕಲ್ಪೈಃ ॥೮॥

ಅಲ್ಲಿ ಅಗ್ನಿಶಿಖೆಯನ್ನು ಹೋಲುತ್ತಾ ಕುಳಿತಿದ್ದವಳು ಅವರ ತಾಯಿಯೆಂದು ನನ್ನ ಊಹೆ. ಅವಳ ಸಮೀಪದಲ್ಲಿ ಅಂತಹದೇ ರೂಪವನ್ನು ಹೊಂದಿದ್ದ ಮೂವರು ಅಗ್ನಿಸದೃಶರಾದ ಪುರುಷಶ್ರೇಷ್ಠರು ಕುಳಿತಿದ್ದರು.

ತಸ್ಯಾಸ್ತತಸ್ತಾವಭಿವಾದ್ಯ ಪಾದಾ-
ವುಪೋಪವಿಷ್ಟೌ ನರಲೋಕವೀರೌ ।

ಭಿಕ್ಷಾಂ ಚ ತತ್ಸೈವ ನಿವೇದ್ಯ ಕೃಷ್ಣಾಂ
ಭಿಕ್ಷಾಪ್ರಚಾರಾಯ ಗತಾ ನರಾಗ್ರ್ಯಃ ॥೯॥

ಈ ಇಬ್ಬರು ನರಲೋಕವೀರರು ಅವಳ ಪಾದಗಳಿಗೆ ನಮಸ್ಕರಿಸಿ ಅವಳ ಸಮೀಪದಲ್ಲಿ ಕುಳಿತುಕೊಂಡರು. ಅವರು ದ್ರೌಪದಿಯನ್ನು ತಾಯಿಗೆ ಭಿಕ್ಷೆಯೆಂದು ನಿವೇದಿಸಿ ಭೈಕ್ಷವನ್ನು ತರಲು ಹೊರಗೆ ಹೋದರು.

ತೇಷಾಂ ತು ಭೈಕ್ಷಂ ಪ್ರತಿಗೃಹ್ಯ ಕೃಷ್ಣಾ
ದತ್ತ್ವಾ ಬಲಿಂ ಬ್ರಾಹ್ಮಣಸಾಚ್ಚ ಕೃತ್ವಾ ।
ತಾಂ ಚೈವ ವೃದ್ಧಾಂ ಪರಿವೇಷ್ಯ ತಾಂಶ್ಚ
ನರಪ್ರವೀರಾನ್ ಸ್ವಯಮಪ್ಯಭುಂಕ್ತ ॥೧೦॥

ದ್ರೌಪದಿಯು ಅವರು ತಂದ ಭೈಕ್ಷದಲ್ಲಿ ಮೊದಲು ಭೂತಬಲಿಯನ್ನು ಕೊಟ್ಟು ಅನಂತರ ಬ್ರಾಹ್ಮಣರಿಗೆ ಒಂದು ಭಾಗವನ್ನು ನೀಡಿ ಆ ವೃದ್ಧಳಿಗೂ ಮತ್ತು ಆ ಇನ್ನಿತರ ಪುರುಷಶ್ರೇಷ್ಠರಿಗೂ ಬಡಿಸಿ ತಾನೂ ಭೋಜನವನ್ನು ಮಾಡಿದಳು.

ಸುಪ್ತಾಸ್ತು ತೇ ಪಾರ್ಥಿವ ಸರ್ವ ಏವ
ಕೃಷ್ಣಾ ಚ ತೇಷಾಂ ಚರಣೋಪಧಾನಮ್ ।
ಆಸೀತ್ ಪೃಥಿವ್ಯಾಂ ಶಯನಂ ಚ ತೇಷಾಂ
ದರ್ಭಾಜಿನಾಗ್ರ್ಯಾಸ್ತರಣೋಪಪನ್ನಮ್ ॥೧೧॥

ರಾಜನೇ, ಅವರೆಲ್ಲರೂ ಅನಂತರ ಮಲಗಿದರು. ದ್ರೌಪದಿಯು ಅವರ ಕಾಲಿನ ಕೆಳಗೆ ದಿಂಬಿನಂತೆ ಮಲಗಿದ್ದಳು. ಭೂಮಿಯ ಮೇಲೆ ಹರಡಿದ ದರ್ಭೆಗಳ ಮೇಲೆ ಹಾಕಿದ ಕೃಷ್ಣಾಜಿನವು ಅವರಿಗೆ ಶ್ರೇಷ್ಠವಾದ ಹಾಸಿಗೆಯಾಯಿತು.

ತೇ ನರ್ದಮಾನಾ ಇವ ಕಾಲಮೇಘಾಃ
ಕಥಾ ವಿಚಿತ್ರಾಃ ಕಥಯಾಂಬಭೂವುಃ ।
ನ ವೈಶ್ಯಶೂದ್ರೌಪಯಿಕೀಃ ಕಥಾಸ್ತಾ
ನ ಚ ದ್ವಿಜಾಹಾರ್ಹಾಃ ಕಥಯಂತಿ ವೀರಾಃ ॥೧೨॥

ಅವರು (ರಾತ್ರಿಯ ವೇಳೆಯಲ್ಲಿ) ಪ್ರಳಯಕಾಲದ ಮೋಡಗಳಂತೆ ಗರ್ಜಿಸುತ್ತಾ ವಿಚಿತ್ರವಾದ ಕಥೆಗಳನ್ನು ಹೇಳುತ್ತಿದ್ದರು. ಆ ವೀರರು ಹೇಳುತ್ತಿದ್ದ ಕಥೆಗಳು ವೈಶ್ಯರಿಗಾಗಲಿ, ಅಥವಾ ಶೂದ್ರರಿಗಾಗಲಿ ಉಪಯೋಗವಾಗುವಂತಹವುಗಳಾಗಲಿ ಅಥವಾ ಬ್ರಾಹ್ಮಣರಿಗೆ ಯೋಗ್ಯವಾದವುಗಳಾಗಲಿ ಆಗಿರಲಿಲ್ಲ.

ನಿಃಸಂಶಯಂ ಕ್ಷತ್ರಿಯಪುಂಗವಾಸ್ತೇ
ಯಥಾ ಹಿ ಯುದ್ಧಂ ಕಥಯಂತಿ ರಾಜನ್ ।
ಆಶಾ ಹಿ ನೋ ವ್ಯಕ್ತಮಿಯಂ ಸಮೃದ್ಧಾ
ಮುಕ್ತಾನ್ ಹಿ ಪಾರ್ಥಾನ್ ಶೃಣುಮೋऽಗ್ನಿದಾಹಾತ್ ॥೧೩॥

ರಾಜನೇ, ಅವರು ಯುದ್ಧದ ವಿಷಯವನ್ನು ಮಾತನಾಡುತ್ತಿದ್ದುದನ್ನು ಕೇಳಿದರೆ ಅವರು ನಿಸ್ಸಂಶಯವಾಗಿ ಕ್ಷತ್ರಿಯಶ್ರೇಷ್ಠರೇ ಸರಿ. ನನಗೆ ಈ ಮಹದಾಸೆಯಿದೆಯಷ್ಟೇ ? ನಾವು ಪಾಂಡವರು ಅಗ್ನಿದಾಹದಿಂದ ಮುಕ್ತರಾಗಿದ್ದಾರೆಂದು ಕೇಳುತ್ತಿದ್ದೇವೆ.

ಯಥಾ ಹಿ ಲಕ್ಷ್ಯಂ ನಿಹತಂ ಧನುಶ್ಚ
ಸಜ್ಯಂ ಕೃತಂ ತೇನ ತಥಾ ಪ್ರಗೃಹ್ಯ ।
ತಥಾऽವದನ್ನೇವ ಪರಸ್ಪರಂ ತೇ
ಚ್ಛನ್ನಂ ವಸಂತೋ ವಿಚರಂತಿ ಪಾರ್ಥಾಃ ॥೧೪॥

ಅವನು ಧನುಸ್ಸನ್ನು ಹಿಡಿದು ಹೆದೆಯೇರಿಸಿ ಲಕ್ಷ್ಯವೇಧವನ್ನು ಹೇಗೆ ಮಾಡಿದ್ದನೋ ಅದಕ್ಕೆ ಅನುಗುಣವಾದ ಮಾತುಗಳನ್ನೇ ಅವರು ಪರಸ್ಪರವಾಗಿ ಆಡುತ್ತಿದ್ದರು. ಖಂಡಿತವಾಗಿ ಪಾರ್ಥರು ಛದ್ಮವೇಷದಲ್ಲಿ ವಾಸಿಸುತ್ತಾ ತಿರುಗಾಡುತ್ತಿದ್ದಾರೆ.

ವೈಶಂಪಾಯನಃ

ತತಃ ಸ ರಾಜಾ ದ್ರುಪದಃ ಪ್ರಹೃಷ್ಟಃ
ಪುರೋಹಿತಂ ಪ್ರೇಷಯಾಮಾಸ ತತ್ರ ।
ವಿದ್ಯಾಮ ಯುಷ್ಮಾನಿತಿ ಭಾಷಮಾಣೋ
ಮಹಾತ್ಮನಃ ಪಾಂಡುಸುತಾಃ ಸ್ಥ ಕಚ್ಚಿತ್ ॥೧೫॥

ಅನಂತರ ದ್ರುಪದರಾಜನು ಬಹಳ ಸಂತೋಷ ಹೊಂದಿ ತನ್ನ ಪುರೋಹಿತನನ್ನು ಕರೆದು ನೀವು ಏನಾದರೂ ಮಹಾನುಭಾವರಾದ ಪಾಂಡುಪುತ್ರರೇ ಎಂದು ಕೇಳಿ ಅವನಿಂದ ತಿಳಿದುಕೊಳ್ಳಲು ಅಲ್ಲಿಗೆ ತನ್ನ ಪುರೋಹಿತನನ್ನು ಕಳುಹಿಸಿದನು.

ಗೃಹೀತವಾಕ್ಯೋ ನೃಪತೇಃ ಪುರೋಧಾ
ಗತ್ವಾ ಪ್ರಶಂಸಾಮಭಿಧಾಯ ತೇಷಾಮ್ ।
ವಾಕ್ಯಂ ಯಥಾವನ್ನೃಪತೇಃ ಸಮಗ್ರ-
ಮುವಾಚ ತೇಭ್ಯಃ ಸಮನುಕ್ರಮೇಣ ॥೧೬॥

ರಾಜನ ವಾಕ್ಯವನ್ನು ಗ್ರಹಿಸಿದ ಪುರೋಹಿತನು ಕುಂಬಾರನ ಮನೆಗೆ ಹೋಗಿ ಅವರನ್ನು ಪ್ರಶಂಸಿಸಿ ರಾಜನ ಮಾತುಗಳನ್ನು ಯಥಾವತ್ತಾಗಿ ಕ್ರಮವಾಗಿ ಅವರಿಗೆ ಹೇಳಿದನು.

ವಿಜ್ಞಾತುಮಿಚ್ಛತ್ಯವನೀಶ್ವರೋ ವಃ
ಪಾಂಚಾಲರಾಜೋ ದ್ರುಪದೋ ವರಾರ್ಹಾನ್ ।
ಲಕ್ಷ್ಯಸ್ಯ ವೇದ್ಧಾರಮಿಮಂ ಹಿ ದೃಷ್ಟ್ವಾ
ಹರ್ಷಸ್ಯ ನಾಂತಂ ಪರಿವಸ್ಯತೇ ಸಃ ॥೧೭॥

ಅವನೀಶ್ವರನಾದ ಪಾಂಚಾಲರಾಜ ದ್ರುಪದನು ಶ್ರೇಷ್ಠರಾದ ನಿಮ್ಮನ್ನು ತಿಳಿದುಕೊಳ್ಳಲು ಬಯಸುತ್ತಾನೆ. ಲಕ್ಷ್ಯವೇಧವನ್ನು ಮಾಡಿದ ಇವನನ್ನು ನೋಡಿ ಅವನ ಸಂತೋಷಕ್ಕೆ ಪಾರವೇ ಇಲ್ಲ.

ಆಚಕ್ಷಧ್ವಂ ಜ್ಞಾತಿಕುಲಾನುರೂಪಂ
ಶಿರಸ್ಸು ಪಾದಾನ್ ದ್ವಿಷತಾಂ ಕುರುಧ್ವಮ್ ।
ಸಂಹ್ಲಾದಯಧ್ವಂ ಹೃದಯಂ ಮಮೇದಂ
ಪಾಂಚಾಲರಾಜಸ್ಯ ಸಹಾತ್ಮಜಸ್ಯ ॥೧೮॥

ನಿಮಗೆ ಅನುರೂಪವಾದ ನಿಮ್ಮ ಕುಲವನ್ನೂ ನಿಮ್ಮ ಬಂಧುಗಳನ್ನೂ ತಿಳಿಸಿ. ಶತ್ರುಗಳ ತಲೆಯ ಮೇಲೆ ನಿಮ್ಮ ಪಾದಗಳನ್ನು ಊರಿ. ಪುತ್ರನಿಂದ ಕೂಡಿದ ಪಾಂಚಾಲರಾಜನಾದ ನನ್ನ ಈ ಮನಸ್ಸಿಗೆ ಸಂತೋಷವನ್ನು ಉಂಟುಮಾಡಿ.

ಪಾಂಡುರ್ಹಿ ರಾಜಾ ದ್ರುಪದಸ್ಯ ರಾಜ್ಞಃ
ಪ್ರಿಯಃ ಸಖಾ ಚಾತ್ಮಸಮೋ ಬಭೂವ ।
ತಸ್ಯೈಷ ಕಾಮೋ ದುಹಿತಾ ಮಮೇಯಂ
ಸ್ನುಷಾ ಯದಿ ಸ್ಯಾದಿತಿ ಕೌರವಸ್ಯ ॥೧೯॥

ಪಾಂಡುರಾಜನು ದ್ರುಪದರಾಜನ ಪ್ರಿಯನಾದ ಸ್ನೇಹಿತ. ಅವನು ದ್ರುಪದನ ಆತ್ಮದಂತೆಯೇ ಇದ್ದನು. ದ್ರುಪದನಿಗೆ ನನ್ನ ಮಗಳು ಕೌರವನಾದ ಪಾಂಡುವಿಗೆ ಸೊಸೆಯಾದರೆ ಮಾತ್ರ ಅವಳು ನನ್ನ ಮಗಳೇ ಸರಿ ಎಂಬ ಆಸೆಯಿದ್ದಿತು.

ಅಯಂ ಚ ಕಾಮೋ ದ್ರುಪದಸ್ಯ ರಾಜ್ಞೋ
ಹೃದಿ ಸ್ಥಿತೋ ನಿತ್ಯಮನಿಂದಿತಾಂಗಾಃ ।
ಯದರ್ಜುನೋ ಮೇ ಪೃಥುದೀರ್ಘಬಾಹು-
ರ್ಧರ್ಮೇಣ ಏಂದೇತ ಸುತಾಂ ಮಮೇತಿ ॥೨೦॥

ನಿರ್ದುಷ್ಟ ಶರೀರವುಳ್ಳವರೇ, ದ್ರುಪದನ ಹೃದಯದಲ್ಲಿ ಪೃಥು-ದೀರ್ಘಬಾಹುವಾದ ಅರ್ಜುನನು ಧರ್ಮದಿಂದಲೇ ನನ್ನ ಮಗಳನ್ನು ಪಡೆಯಬೇಕು ಎಂಬ ಆಸೆಯು ಯಾವಾಗಲೂ ಇದೆ.

ವೈಶಂಪಾಯನಃ

ತಥೋಕ್ತವಾಕ್ಯಂ ತು ಪುರೋಹಿತಂ ತಂ
ಸ್ಥಿತಂ ವಿಧಿಜ್ಞಂ ಸಮುದೀಕ್ಷ್ಯ ರಾಜಾ ।
ಸಮೀಪಸ್ಥಂ ಭೀಮಮಿದಂ ಶಶಾಸ
ಪ್ರದೀಯತಾಂ ಪಾದ್ಯಮರ್ಘ್ಯಂ ತಥಾಽಸ್ಯೈ
ಮಾನ್ಯಃ ಪುರೋಧಾ ದ್ರುಪದಸ್ಯ ರಾಜ್ಞ-
ಸ್ತಸ್ಮೈ ಪ್ರಯೋಜ್ಯಾಽಭ್ಯಧಿಕಾ ಚ ಪೂಜಾ ॥೨೧॥

ಭೀಮಸ್ತಥಾ ಚ ಕೃತವಾನ್ ನರೇಂದ್ರ
ತಾಂ ಚೈವ ಪೂಜಾಂ ಪ್ರತಿಗೃಹ್ಯ ತತ್ರ ।
ಸುಖೋಪವಿಷ್ಟಂ ತು ಪುರೋಹಿತಂ ತಂ
ಯುಧಿಷ್ಠಿರೋ ಬ್ರಾಹ್ಮಣಮಿತ್ಯುವಾಚ ॥೨೨॥

ಹೀಗೆ ಮಾತನಾಡಿದ ಶಾಸ್ತ್ರಜ್ಞನಾದ ಪುರೋಹಿತನನ್ನು ನೋಡಿ ರಾಜನಾದ ಯುಧಿಷ್ಠಿರನು ಸಮೀಪದಲ್ಲಿದ್ದ ಭೀಮನನ್ನು ಕುರಿತು ಇವರಿಗೆ ಅರ್ಘ್ಯಪಾದ್ಯಗಳನ್ನು ಕೊಡಿ, ದ್ರುಪದರಾಜನ ಪುರೋಹಿತರು ನಮಗೆ ಮಾನ್ಯನಾದವರು, ಅವರಿಗೆ ವಿಶೇಷವಾದ ಪೂಜೆಯನ್ನು ಮಾಡಬೇಕು ಎಂದು ಆದೇಶ ನೀಡಿದನು. ನರೇಂದ್ರನೇ, ಅಣ್ಣನು ಹೇಳಿದಂತೆಯೇ ಪೂಜೆಯನ್ನು ಸ್ವೀಕರಿಸಿ ಎಂದು ಹೇಳಿ ಭೀಮನು ಆ ಪುರೋಹಿತರಿಗೆ ಪೂಜೆಯನ್ನು ಸಲ್ಲಿಸಿದನು. ಸುಖೋಪವಿಷ್ಟನಾದ, ಬ್ರಾಹ್ಮಣನಾದ ಪುರೋಹಿತರನ್ನು ಕುರಿತು ಯುಧಿಷ್ಠಿರನು ಹೀಗೆ ಮಾತನಾಡಿದನು.

ಯುಧಿಷ್ಠಿರಃ

ಪಾಂಚಾಲರಾಜೇನ ಸುತಾ ನಿಸೃಷ್ಟಾ
ಸ್ವಧರ್ಮದೃಷ್ಟೇನ ಯಥಾ ನಿಕಾಮಮ್ ।
ಪ್ರದಿಷ್ಟಶುಲ್ಕಾ ದ್ರುಪದೇನ ರಾಜ್ಞಾ
ಸಾ ತೇನ ವೀರೇಣ ತಥಾऽನುವೃತ್ತಾ ॥೨೩॥

ಪಾಂಚಾಲರಾಜನು ತನ್ನ ಕ್ಷತ್ರಿಯಧರ್ಮಕ್ಕೆ ಅನುಸಾರವಾಗಿ ಸ್ವಯಂವರವಿಧಾನದಿಂದ ತನ್ನ ಇಚ್ಛೆಯಂತೆ ಆದೇಶವನ್ನು ನೀಡಿದ್ದಾನೆ. ವೀರ್ಯಶುಲ್ಕದಿಂದ ತನ್ನಮಗಳನ್ನುಪಡೆಯಬೇಕೆಂದು ದ್ರುಪದನ ಆಸೆ. ಆ ಆಸೆಯನ್ನು ಈ ವೀರನು ನೆರವೇರಿಸಿದ್ದಾನೆ.

ನ ತತ್ರ ವರ್ಣೇಷು ಕೃತಾ ವಿವಕ್ಷಾ
ನ ಜೀವಶಿಲ್ಪೇ ನ ಕುಲೇ ನ ಗೋತ್ರೇ ।
ಕೃತೇನ ಸಜ್ಯೇನ ಹಿ ಕಾರ್ಮುಕೇಣ
ವಿದ್ಧೇನ ಲಕ್ಷ್ಯೇಣ ಚ ಸನ್ನಿಸೃಷ್ಟಾ ॥೨೪॥

ದ್ರುಪದನು ಆದೇಶವನ್ನು ಕೊಡುವಾಗ ವರ್ಣದ ವಿಷಯದಲ್ಲಾಗಲಿ, ಲಕ್ಷ್ಯವೇಧವನ್ನು ಮಾಡಿದವನು ಮಾಡುವ ಇತರ ವಿಷಯಗಳಲ್ಲಾಗಲಿ ಅವನ ಕುಲ ಅಥವಾ ಗೋತ್ರದ ವಿಷಯಗಳಲ್ಲಾಗಲಿ ಯಾವ ನಿರ್ಬಂಧವನ್ನೂ ವ್ಯಕ್ತಪಡಿಸಲಿಲ್ಲ. ಧನುಸ್ಸನ್ನು ಕಟ್ಟಿ ಬಾಣಪ್ರಯೋಗ ಮಾಡಿ ಲಕ್ಷ್ಯವೇಧವನ್ನು ಮಾಡಿದವನು ಮಗಳನ್ನು ಪಡೆಯುತ್ತಾನೆ ಎಂದಿಷ್ಟೇ ಆದೇಶವಿದ್ದಿತು.

ಸೇಯಂ ತಥಾಽನೇನ ಮಹಾತ್ಮನೇಹ
ಕೃಷ್ಣಾ ಜಿತಾ ಪಾರ್ಥಿವಸಂಘಮಧ್ಯೇ ।
ನೈವಂ ಗತೇ ಸೋಮಕಿರದ್ಯ ರಾಜಾ
ಸಂತಾಪಮರ್ಹತ್ಯಸುಖೇನ ಕರ್ತುಮ್ ॥೨೫॥

ಅಂತಹ ಕೃಷ್ಣೆಯು ಈ ಮಹಾತ್ಮನಿಂದ ರಾಜರ ಸಮೂಹದ ಮಧ್ಯದಲ್ಲಿ ಗೆಲ್ಲಲ್ಪಟ್ಟಿದ್ದಾಳೆ. ಹೀಗಿರುವಾಗ ಸೋಮಕವಂಶದಲ್ಲಿ ಬಂದ ದ್ರುಪದರಾಜನು ದುಃಖದಿಂದ ಸಂತಾಪ ಪಡುವುದು ಯುಕ್ತವಲ್ಲ.

ಕಾಮಶ್ಚ ಯೋಽಸೌ ದ್ರುಪದಸ್ಯ ರಾಜ್ಞಃ
ಸ ಚಾಪಿ ಸಂಪತ್ಸ್ಯತಿ ಪಾರ್ಥಿವಸ್ಯ ।
ಸುಪ್ರಾಪ್ತರೂಪಂ ಹಿ ನರೇಂದ್ರಕನ್ಯಾ-
ಮಿಮಾಮಹಂ ಬ್ರಾಹ್ಮಣ ಸಾಧು ಮನ್ಯೇ ॥೨೬॥

ದ್ರುಪದನ ಮನಸ್ಸಿನಲ್ಲಿದ್ದ ಕಾಮವು ನೆರವೇರುವುದು ಎಂದೇ ನನ್ನ ಅಭಿಪ್ರಾಯ. ಬ್ರಾಹ್ಮಣನೇ, ಈ ರಾಜಕುಮಾರಿಯು ಬಹಳ ಅನುರೂಪನಾದ ಪತಿಯನ್ನೇ ಪಡೆದಿದ್ದಾಳೆ ಎಂದು ನಾನು ಚೆನ್ನಾಗಿ ಭಾವಿಸಿದ್ದೇನೆ.

ನ ತದ್ಧನುರ್ಮಂದಬಲೇನ ಶಕ್ಯಂ
ಮೌರ್ವ್ಯಾ ಸಮಾಯೋಜಯಿತುಂ ತಥಾ ಹಿ ।
ನ ಚಾಕೃತಾಸ್ತ್ರೇಣ ನ ಹೀನಜೇನ
ಲಕ್ಷ್ಯಂ ತಥಾ ಪಾತಯಿತುಂ ಚ ಶಕ್ಯಮ್ ॥೨೭॥

ಹೀನಬಲನಾದ ವ್ಯಕ್ತಿಯಿಂದ ಆ ಧನುಸ್ಸಿಗೆ ಹೆದೆಯೇರಿಸಲು ಸಾಧ್ಯವಿಲ್ಲ. ಅಸ್ತ್ರಜ್ಞಾನವಿಲ್ಲದವನೂ ಮತ್ತು ಹೀನಯೋನಿಯಲ್ಲಿ ಜನಿಸಿದವನೂ ಸಹ ಲಕ್ಷ್ಯವೇಧವನ್ನು ಮಾಡಲು ಶಕ್ತನಾಗುವುದಿಲ್ಲ.

ತಸ್ಮಾನ್ನ ಪಾಪಂ ದುಹಿತುರ್ನಿಮಿತ್ತಂ
ಪಾಂಚಾಲರಾಜೋಽರ್ಹತಿ ಕರ್ತುಮದ್ಯ ।
ನ ಚಾಪಿ ತತ್ಪಾತನಮನ್ಯಥೇಹ
ಕರ್ತುಂ ವಿಷಹ್ಯಂ ಭುವಿ ಮಾನವೇನ ॥೨೮॥

ಆದ್ದರಿಂದ ಪಾಂಚಾಲರಾಜನು ಈ ದಿನ ಮಗಳ ನಿಮಿತ್ತದಿಂದ ಸಂತಾಪ ಪಡುವುದು ಯೋಗ್ಯವಲ್ಲ. ಇಲ್ಲದಿದ್ದರೆ ಭೂಮಿಯಲ್ಲಿ ಯಾವ ಮನುಷ್ಯನೂ ಆ ಲಕ್ಷ್ಯವನ್ನು ಉರುಳಿಸುತ್ತಿರಲಿಲ್ಲ.

ವೈಶಂಪಾಯನಃ

ಏವಂ ಬ್ರುವತ್ಯೇವ ಯುಧಿಷ್ಠಿರೇ ತು
ಪಾಂಚಾಲರಾಜಸ್ಯ ಸಮೀಪತೋಽನ್ಯಃ ।
ತತ್ರಾ ಜಗಮಾಶು ನರೋ ದ್ವಿತೀಯೋ
ನಿವೇದಯಿಷ್ಯನ್ನಥ ಸಿದ್ಧಮನ್ನಮ್ ॥೨೯॥

ಯುಧಿಷ್ಠಿರನು ಹೀಗೆ ಹೇಳುತ್ತಿರುವಾಗಲೇ ಪಾಂಚಾಲರಾಜನ ಕಡೆಯಿಂದ ಇನ್ನೊಬ್ಬ ಚಾರನು ಬಂದು ಅನ್ನವು ಸಿದ್ಧವಾಗಿದೆ ಎಂದು ನಿವೇದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ದ್ವಿನವತ್ಯಧಿಕಶತತಮೋಽಧ್ಯಾಯಃ ॥
॥ ಇತಿ ವೈವಾಹಿಕಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ತ್ತೊಂಭತ್ತೆರಡನೆಯ ಅಧ್ಯಾಯ ಮುಗಿಯಿತು.

★★★★★

ನೂರ ತೊಂಭತ್ಮೂರನೆಯ ಅಧ್ಯಾಯ

(ದ್ರುಪದನಿಂದ ಪಾಂಡವರ ಪರೀಕ್ಷೆ, ಅವರು ಕ್ಷತ್ರಿಯರೆಂದು ನಿರ್ಧಾರ)

ದೂತಃ

ಜನ್ಯಾರ್ಥಮನ್ನಂ ದ್ರುಪದೇನ ರಾಜ್ಞಾ
ವಿವಾಹಹೇತೋರುಪಸಂಸೃತಂ ಚ ।
ತದಾಪ್ನುವಧ್ವಂ ಕೃತಸರ್ವಕಾರ್ಯಾಃ
ಕೃಷ್ಣಾ ತು ತತ್ಕೈತು ಚಿರಂ ನ ಕಾರ್ಯಮ್ ॥೦॥

ದ್ರುಪದರಾಜನು ವಿವಾಹದಲ್ಲಿ ವರನಿಗೂ ಮತ್ತು ವರನ ಬಂಧುಗಳಿಗೂ ಕೊಡಬೇಕಾದ ಉತ್ತಮ ಭೋಜನವನ್ನು ಸಿದ್ಧಪಡಿಸಿದ್ದಾನೆ. ನಿಮ್ಮ ಎಲ್ಲಾ ಕಾರ್ಯಗಳನ್ನು ಮುಗಿಸಿ ಅಲ್ಲಿಗೆ ಬಂದು ಅದನ್ನು ಸ್ವೀಕರಿಸಿ. ದ್ರೌಪದಿಯೂ ಅಲ್ಲಿಗೆ ಬರಬೇಕು, ತಡಮಾಡಬಾರದು.

ಇಮೇ ರಥಾಃ ಕಾಂಚನರತ್ನಚಿತ್ರಾಃ
ಸದಶ್ವಯುಕ್ತಾ ವಸುಧಾಧಿಪಾರ್ಹಾಃ ।
ಏತಾನ್ ಸಮಾರುಹ್ಯ ಪುರೇತ ಸರ್ವೇ
ಪಾಂಚಾಲರಾಜಸ್ಯ ನಿವೇಶನಂ ತತ್ ॥೨॥

ರಾಜರಿಗೆ ಯೋಗ್ಯವಾದ ಈ ರಥಗಳು ಸುವರ್ಣರತ್ನಗಳಿಂದ ಭೂಷಿತವಾಗಿ ಒಳ್ಳೆಯ ಅಶ್ವಗಳಿಂದ ಯುಕ್ತವಾಗಿವೆ. ಇವುಗಳನ್ನು ಏರಿ ನೀವೆಲ್ಲರೂ ಮುಂದೆ ಹೊರಟು ಪಾಂಚಾಲರಾಜನ ನಿವೇಶನಕ್ಕೆ ಹೋಗಿ.

ವೈಶಂಪಾಯನಃ

ತತಃ ಪ್ರಯಾತಾಃ ಕುರುಪುಂಗವಾಸ್ತೇ
ಪುರೋಹಿತಂ ತಂ ಪ್ರಥಮಂ ಪ್ರಯಾಪ್ಯ ।
ಆಸ್ಥಾಯ ಯಾನಾನಿ ಮಹಾಂತಿ ತಾನಿ
ಕುಂತೀ ಚ ಕೃಷ್ಣಾ ಚ ಸಹ ಪ್ರಯಾತೇ ॥೩॥

ಅನಂತರ ಪಾಂಡವರು ಪುರೋಹಿತನನ್ನು ಮೊದಲು ಕಳುಹಿಸಿ ಆ ದೊಡ್ಡರಥಗಳನ್ನು ಏರಿ ಹೊರಟರು. ಕುಂತಿ ಮತ್ತು ದ್ರೌಪದಿಯರು ಒಂದೇ ರಥದಲ್ಲಿ ಕುಳಿತು ಹೊರಟರು.

ಸ ವೈ ತಥೋಕ್ತಸ್ತು ಯುಧಿಷ್ಠಿರೇಣ
ಪಾಂಚಾಲರಾಜಸ್ಯ ಪುರೋಹಿತಾಗ್ರ್ಯಃ ।
ಸರ್ವಂ ಯಥೋಕ್ತಂ ಕುರುನಂದನೇನ
ನಿವೇದಯಾಮಾಸ ನೃಪಾಯ ಗತ್ವಾ ॥೪॥

ಯುಧಿಷ್ಠಿರನ ಜೊತೆಯಲ್ಲಿ ಮಾತನಾಡಿದ್ದ ಆ ಶ್ರೇಷ್ಠನಾದ ಪಾಂಚಾಲರಾಜನ ಪುರೋಹಿತನು ಪಾಂಚಾಲರಾಜನ ಬಳಿಗೆ ಹೋಗಿ ಯುಧಿಷ್ಠಿರನು ಹೇಳಿದ ಎಲ್ಲಾ ವಿಷಯಗಳನ್ನೂ ಅವನು ಹೇಳಿದಂತೆಯೇ ತಿಳಿಸಿದನು.

ಶ್ರುತ್ವಾ ತು ವಾಕ್ಯಂ ತು ಪುರೋಹಿತಸ್ಯ
ಯಾನ್ಯುಕ್ತವಾನ್ ಭಾರತ ಧರ್ಮರಾಜಃ ।
ಜಿಜ್ಞಾಸಯೈವಾಥ ಕುರೂತ್ತಮಾನಾಂ
ದ್ರವ್ಯಾಣ್ಯನೇಕಾನ್ಯುಪಸಂಜಹಾರ ॥೫॥

ಭಾರತನೇ, ಧರ್ಮರಾಜನು ಪುರೋಹಿತನಲ್ಲಿ ಹೇಳಿದ ಮಾತುಗಳನ್ನು ಕೇಳಿ ದ್ರುಪದನು ಆ ಕುರೂತ್ತಮರನ್ನು ತಿಳಿದುಕೊಳ್ಳುವ ಆಸೆಯಿಂದ ಅವರು ಬರುವ ಮನೆಯಲ್ಲಿ ಅನೇಕ ವಿಧವಾದ ವಸ್ತುಗಳನ್ನು ಸಂಗ್ರಹಿಸಿದನು.

ಫಲಾನಿ ಮಾಲ್ಯಾನ್ಯಥ ಸಂಸ್ಕೃತಾನಿ
ಚರ್ಮಾಣಿ ವರ್ಮಾಣಿ ತಥಾऽऽಸನಾನಿ ।
ಗಾಶ್ಚೈವ ರಾಜನ್ನಥ ಚೈವ ರಜ್ಜೂ-
ರನ್ಯಾನಿ ಧಾನ್ಯಾನಿ ಕೃಷೇರ್ನಿಮಿತ್ತಮ್ ॥೬॥

ಹಣ್ಣುಗಳು, ಪುಷ್ಪಮಾಲೆಗಳು, ಹದಮಾಡಿದ ಚರ್ಮಗಳು, ಕವಚಗಳು ಮತ್ತು ಆಸನಗಳು, ಗೋವುಗಳು ಮತ್ತು ಹಗ್ಗಗಳು, ಕೃಷಿಗೆ ಸಂಬಂಧಿಸಿದ ಎಲ್ಲಾ ಧಾನ್ಯಗಳು, ಎಲ್ಲವೂ ಅಲ್ಲಿದ್ದವು.

ಅನ್ಯೇಷು ಶಿಲ್ಪೇಷ್ವಪಿ ಯಾನ್ಯಪಿ ಸ್ಯುಃ
ಸರ್ವಾಣಿ ಕೃತ್ಯಾನ್ಯಖಿಲೇನ ತತ್ರ ।
ಕ್ರೀಡಾನಿಮಿತ್ತಾನಿ ಚ ಯಾನಿ ತಾನಿ
ಸರ್ವಾಣಿ ತತ್ರೋಪಜಹಾರ ರಾಜಾ ॥೭॥

ಬೇರೆ ಬೇರೆ ವಿದ್ಯೆಗಳಿಗೆ ಸಂಬಂಧಿಸಿದ ಎಲ್ಲಾ ವಸ್ತುಗಳೂ ಅಲ್ಲಿದ್ದವು. ಕ್ರೀಡೆಗೆ ಸಂಬಂಧಿಸಿದ ಎಲ್ಲಾ ಉಪಕರಣಗಳನ್ನೂ ರಾಜನು ಅಲ್ಲಿ ಸಂಗ್ರಹಿಸಿದ್ದನು.

ಸರ್ವಾಣಿ ಶಸ್ತ್ರಾಣಿ ಚ ಭಾನುಮಂತಿ
ಖಡ್ಗಾ ಮಹಾಂತೋऽಥ ರಥಾಶ್ಚ ಚಿತ್ರಾಃ ।
ಧನೂಂಷಿ ಚೋಗ್ರಾಣಿ ಶರಾಶ್ಚ ಮುಖ್ಯಾಃ
ಶಕ್ತ್ಯೃಷ್ಟಯಃ ಕಾಂಚನಭೂಷಿತಾಶ್ಚ ॥೮॥

ಪ್ರಾಸಾನ್ ಭುಸುಂಡೀಶ್ಚ ಪರಶ್ವಧಾಂಶ್ಚ
ಸಾಂಗ್ರಾಮಿಕಾಂಶ್ಚೈವ ತಥಾऽಪಿ ಚಾನ್ಯಾನ್ ।
ಶಯ್ಯಾಸನಾನ್ಯುತ್ತಮಸಂಸ್ಕೃತಾನಿ
ತಥೈವ ರಾಜನ್ ವಿವಿಧಾನಿ ತತ್ರ ॥೯॥

ಹೊಳೆಯುವ ಎಲ್ಲಾ ಶಸ್ತ್ರಗಳೂ, ದೊಡ್ಡ ಖಡ್ಗಗಳೂ, ವಿಚಿತ್ರವಾದ ರಥಗಳೂ, ಬಿಲ್ಲುಗಳೂ, ನಿಶಿತವಾದ ಬಾಣಗಳೂ, ಸುವರ್ಣದಿಂದ ಅಲಂಕೃತವಾದ ಶಕ್ತಿ, ಋಷ್ಟಿ ಮುಂತಾದ ಆಯುಧಗಳೂ, ಪ್ರಾಸಗಳೂ, ಭುಸುಂಡಿಗಳೂ, ಪರಶ್ವಧಗಳೂ, ಮತ್ತು ಯುದ್ಧಕ್ಕೆ ಸಂಬಂಧಿಸಿದ ಇನ್ನೂ ಅನೇಕ ವಸ್ತುಗಳೂ ಹಾಗೆಯೇ, ಒಳ್ಳೆಯ ಹಾಸಿಗೆಗಳೂ, ಸುಸಂಸ್ಕೃತವಾದ ವಿಧವಿಧವಾದ ಆಸನಗಳೂ, ಎಲ್ಲವನ್ನೂ ರಾಜನು ಅಲ್ಲಿ ಸಂಗ್ರಹಿಸಿದನು.

ಕುಂತೀ ತು ಕೃಷ್ಣಾಂ ಪರಿಗೃಹ್ಯ ಸಾಧ್ವೀ-
ಮಂತಃಪುರಂ ದ್ರುಪದಸ್ಯಾವಿವೇಶ
ರಾಜಸ್ತ್ರಿಯಃ ಕೌರವ ರಾಜಪುತ್ರೀಂ
ಪ್ರತ್ಯರ್ಚಯಾಂಚಕ್ರುರದೀನಸತ್ವಾಮ್ ॥೧೦॥

ಕುಂತಿಯು ಸಾಧ್ವಿಯಾದ ದ್ರೌಪದಿಯ ಕೈಯನ್ನು ಹಿಡಿದುಕೊಂಡು ದ್ರುಪದನ ಅಂತಃಪುರವನ್ನು ಪ್ರವೇಶಿಸಿದಳು. ಕೌರವನಾದ ಜನಮೇಜಯನೇ, ರಾಜಸ್ತ್ರೀಯರು ದೈನ್ಯರಹಿತರಾಗಿ ಸಹಜವಾಗಿದ್ದ ಆ ಕೌರವವಂಶದವಳಾದ, ರಾಜಕುಮಾರಿಯಾದ ಕುಂತಿಯನ್ನು ಪೂಜಿಸಿದರು.

ತಾನ್ ಸಿಂಹವಿಕ್ರಾಂತಗತೀನುದೀಕ್ಷ್ಯ
ಮಹರ್ಷಭಾಕ್ಷಾನಜಿನೋತ್ತರೀಯಾನ್ ।
ವ್ಯೂಢಾಂತರಾಂಸಾನ್ ಭುಜಗೇಂದ್ರಭೋಗ-
ಪ್ರಲಂಬಬಾಹೂನ್ ಪುರುಷಪ್ರವೀರಾನ್ ॥೧೧॥

ರಾಜಾ ಚ ರಾಜ್ಞಃ ಸಚಿವಾಶ್ಚ ಸರ್ವೇ
ಪುತ್ರಾಶ್ಚ ರಾಜ್ಞಃ ಸುಹೃದಸ್ತಥೈವ ।

ಪ್ರೇಷ್ಯಾಶ್ಚ ಸರ್ವೇ ನಿಖಿಲೇನ ರಾಜನ್
ಹರ್ಷಂ ಸಮಾಪೇತುರತೀವ ತತ್ರ ॥೧೨॥

ಸಿಂಹವಿಕ್ರಾಂತಗತಿವುಳ್ಳವರೂ, ವೃಷಭಾಕ್ಷರೂ, ಉನ್ನತ ಭುಜವುಳ್ಳವರೂ, ಭುಜಗೇಂದ್ರನ ಶರೀರದಂತೆ ಉದ್ದವಾದ ಬಾಹುವುಳ್ಳವರೂ, ಆದ ಆ ಪುರುಷಶ್ರೇಷ್ಠರನ್ನು ನೋಡಿ ರಾಜನೂ, ರಾಜನ ಎಲ್ಲಾ ಮಂತ್ರಿಗಳೂ, ರಾಜಪುತ್ರರೂ, ರಾಜನ ಬಂಧುಗಳೂ, ರಾಜನ ಎಲ್ಲಾ ಸೇವಕರೂ ಬಹಳ ಹರ್ಷವನ್ನು ಹೊಂದಿದರು.

ತೇ ತತ್ರ ವೀರಾಃ ಪರಮಾಸನೇಷು
ಸಪಾದಪೀಠೇಷ್ವವಿಶಂಕಮಾನಾಃ ।
ಯಥಾನುಪೂರ್ವ್ಯಾದ್ ವಿವಿಶುರ್ನರಾಗ್ರ್ಯಾ-
ಸ್ತಥಾ ಮಹಾರ್ಹೇಷು ನವಿಸ್ಮಯಂತಃ ॥೧೩॥

ಅಲ್ಲಿ ಆ ವೀರರು ಪಾದಪೀಠಗಳಿಂದ ಕೂಡಿದ ಶ್ರೇಷ್ಠವಾದ ಆಸನಗಳಲ್ಲಿ ಯಾವ ಶಂಕೆಯೂ ಇಲ್ಲದೆ ಆಶ್ಚರ್ಯವನ್ನೂ ಪಡದೆ ಜ್ಯೇಷ್ಠಕ್ರಮದಿಂದ ಎಲ್ಲರೂ ಕುಳಿತುಕೊಂಡರು.

ಉಚ್ಚಾವಚಂ ಪಾರ್ಥಿವಭೋಜನೀಯಂ
ಪಾತ್ರೇಷು ಜಾಂಬೂನದರಾಜತೇಷು ।
ದಾಸಾಶ್ಚ ದಾಸ್ಯಶ್ಚ ಸುಮೃಷ್ಟವೇಷಾಃ
ಜನ್ಯಂ ವರಂ ಚಾಪ್ಯುಪಜಹ್ರುರನ್ನಮ್ ॥೧೪॥

ರಾಜರಿಗೆ ಯೋಗ್ಯವಾದ ಉಚ್ಚಾವಚವಾದ ಭೋಜನಪದಾರ್ಥಗಳನ್ನು ಸುವರ್ಣಮಯ ಮತ್ತು ರಜತಮಯ ಪಾತ್ರೆಗಳಲ್ಲಿ, ಅಲಂಕೃತರಾಗಿದ್ದ ದಾಸರು ಮತ್ತು ದಾಸಿಯರು ತಂದು ಆ ಜನ್ಯವಾದ ಶ್ರೇಷ್ಠವಾದ ಅನ್ನವನ್ನು ಬಡಿಸಿದರು.

ತೇ ತತ್ರ ಭುಕ್ತ್ವಾ ಪುರುಷಪ್ರವೀರಾ
ಯಥಾನುಕಾಮಂ ಸುಭೃಶಂ ಪ್ರತೀತಾಃ ।
ಉತ್ಸೃಜ್ಯ ಸರ್ವಾಣಿ ವಸೂನಿ ತತ್ರ
ಸಾಂಗ್ರಾಮಿಕಾಣ್ಯಾವಿವಿಶುರ್ನವೀರಾಃ ॥೧೫॥

ಆ ಪುರುಷಪ್ರವೀರರು ಅಲ್ಲಿ ತಮ್ಮ ಇಷ್ಟದಂತೆ ಭೋಜನವನ್ನು ಮಾಡಿ ಬಹಳ ಸಂತುಷ್ಟರಾಗಿ ಅಲ್ಲಿಂದ ಎದ್ದು ಉಳಿದ ಎಲ್ಲಾ ವಸ್ತುಗಳನ್ನೂ ದಾಟಿ ಯುದ್ಧದ ಸಲಕರಣೆಗಳಿದ್ದ ಕಡೆಗೆ ಬಂದರು.

ತಲ್ಲಕ್ಷಯಿತ್ವಾ ದ್ರುಪದಸ್ಯ ಪುತ್ರಾ
ರಾಜಾ ಚ ಸರ್ವೇ ಸಹ ಮಂತ್ರಿಮುಖ್ಯಾಃ ।
ಸಮ್ಮಂತ್ರಯಾಮಾಸುರತೀವ ಹೃಷ್ಟಾಃ
ಕುಂತೀಸುತಾನ್ ಪಾರ್ಥಿವಪುತ್ರಪೌತ್ರಾನ್ ॥೧೬॥

ಅದನ್ನು ಗಮನಿಸುತ್ತಿದ್ದ ರಾಜನೂ, ರಾಜಪುತ್ರರೂ ಮತ್ತು ಎಲ್ಲಾ ಮಂತ್ರಿಶ್ರೇಷ್ಠರೂ ಬಹಳ ಸಂತೋಷವನ್ನು ಹೊಂದಿದವರಾಗಿ, ಇವರು (ಈ ಕುಂತೀಪುತ್ರರು) ರಾಜರ ಮಕ್ಕಳು ಮತ್ತು ಮೊಮ್ಮಕ್ಕಳಾಗಿರಬೇಕು ಎಂದು ಮಂತ್ರಾಲೋಚನೆಯನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ತ್ರಿನವತ್ಯಧಿಕಶತತಮೋऽಧ್ಯಾಯಃ ॥
॥ ಇತಿ ವೈವಾಹಿಕಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರತೊಂಭತ್ತಮೂರನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ಪ್ರಾತಸ್ತು ತಸ್ಯ ಜನಿತುರ್ವಚಸಾ ಪುರೋಧಾ-
ಸ್ತಾನ್ ಪ್ರಾಪ್ಯ ಮಂತ್ರವಿಧಿನಾ ಮರುದಾತ್ಮಚೇನ ।
ಸಂಪೂಜಿತೋऽತಿವಿದುಷಾ ಪ್ರತಿಗೃಹ್ಯತಾಂಶ್ಚ
ಪ್ರಾವೇಶಯನ್ನೃಪತಿಗೇಹಮಮೈವ ಮಾತ್ರಾ ॥೧೪॥

ಬೆಳಿಗ್ಗೆ ದ್ರುಪದನ ಮಾತಿನಂತೆ ರಾಜಪುರೋಹಿತ ಪಾಂಡವರ ಬಳಿಗೆ ಬಂದು ವೇದೋಕ್ತ ವಿಧಿಗನುಸಾರ ಮಹಾಜ್ಞಾನಿಯಾದ ಭೀಮನಿಂದ ಸತ್ಕೃತನಾಗಿ ಅವರನ್ನು ಕುಂತೀಸಮೇತವಾಗಿ ಅರಮನೆಯೊಳಗೆ ಪ್ರವೇಶ ಮಾಡಿಸಿದ.

ತಾನಾಗತಾನ್ ಸಮಭಿಪೂಜ್ಯ ನಿಜಾತ್ಮಜಾಂ ಚ
ವಿಪ್ರಾದಿಯೋಗ್ಯಪೃಥಗುಕ್ತ ಪದಾರ್ಥಜಾತೈಃ ।
ಪೂರ್ಣಾನ್ ಗೃಹಾಂಶ್ಚತುರ ಏವ ದಿದೇಶ ರಾಜಾ
ತತ್ತ್ಯಾಯುಧಾದಿಪರಿಪೂರ್ಣಗೃಹಂ ಚ ತೇಽಗುಃ ॥೧೪೭॥

ಚತುರನಾದ ದ್ರುಪದ ತನ್ನ ಆರಮನೆಗೆ ಬಂದ ಪಾಂಡವರನ್ನೂ ತನ್ನ ಮಗಳನ್ನೂ ಚೆನ್ನಾಗಿ ಸತ್ಕರಿಸಿ ಅವರಿಗೆ ಬ್ರಾಹ್ಮಣಾದಿ ನಾಲ್ಕು ವರ್ಣದವರಿಗೆ ಉಚಿತವಾಗಿ ಪ್ರತ್ಯೇಕ ವಿಹಿತವಾದ ವಸ್ತುಗಳಿಂದ ನಾಲ್ಕು ಮನೆಗಳನ್ನು ಸಜ್ಜುಗೊಳಿಸಿ ತೋರಿಸಿದ. ಅವುಗಳಲ್ಲಿ ಕ್ಷತ್ರಿಯರಿಗೆ ವಿಹಿತವಾದ ಆಯುಧಾದಿ ವಸ್ತುಗಳಿಂದ ತುಂಬಿದ ಮನೆಯನ್ನೇ ಪಾಂಡವರು ಪ್ರವೇಶಿಸಿದರು.

ಚೇಷ್ಟಾಸ್ವರಾಕೃತಿವಿವಕ್ಷಿತವೀರ್ಯಶೌರ್ಯ-
ಪ್ರಾಗಲ್ಭ್ಯಪೂರ್ವಕಗುಣೈಃ ಕ್ಷಿತಿಭರ್ತೃಪುತ್ರಾನ್ ।
ವಿಜ್ಞಾಯ ತಾನ್ ದ್ರುಪದ ಏತ್ಯ ಚ ಧರ್ಮಸೂನುಂ
ಪಪ್ರಚ್ಛ ಕೋಽಸಿ ನರವರ್ಯ ವದಸ್ವ ಸತ್ಯಂ ॥೧೪೮॥

ಶಾರೀರಕ್ರಿಯೆಗಳು, ಕಂಠಧ್ವನಿ, ಮೈಯ ಆಕಾರ, ಮಾತು, ವೀರ್ಯ, ಶೌರ್ಯ, ಧೈರ್ಯ ಮುಂತಾದ ಕ್ಷತ್ರಿಯಲ್ಲಿರಬೇಕಾದ ಎಲ್ಲ ಗುಣಗಳಿದ್ದುದರಿಂದ ಪಾಂಡವರನ್ನು ರಾಜಕುಮಾರರೆಂದೇ ತಿಳಿದು ದ್ರುಪದ ಬಂದು ಧರ್ಮರಾಜನನ್ನು ಕೇಳಿದ. 'ನರವರ್ಯನೆ, ನೀನಾರು, ನಿಜ ಹೇಳು'.

ಸ ಪ್ರಾಹ ಮಂದಹಸಿತಃ ಕಿಮಿಹಾದ್ಯ ರಾಜನ್
ಪೂರ್ವಂ ಹಿ ವರ್ಣವಿಷಯೇ ನ ವಿಶೇಷ ಉಕ್ತಃ ।
ಪುತ್ರೀಕೃತೇ ತವ ಸುತೇನ ತು ಲಕ್ಷವೇಧ
ಉಕ್ತೋ ನರೇಂದ್ರಸಮಿತೌ ಸ ಕೃತೋಽಪ್ಯನೇನ ॥೧೪೯॥

ಧರ್ಮರಾಜ ನಸುನಕ್ಕು ನುಡಿದ. 'ರಾಜ, ಅದರಿಂದೇನು ಪ್ರಯೋಜನ? ಹಿಂದೆ ವರ್ನದ ವಿಷಯದಲ್ಲಿ ವಿಶೇಷವೇನೂ ಉತ್ತಮವಾಗಿರಲಿಲ್ಲ. ಮಗಳಿಗಾಗಿ, ರಾಜರ ಮುಂದೆ ನಿನ್ನ ಮಗ, ಲಕ್ಷ್ಯವೇಧ ಮಾಡಬೇಕೆಂದು ಮಾತ್ರ ಹೇಳಿದ್ದ. ಅದನ್ನು ನನ್ನ ತಮ್ಮ ಮಾಡಿದ್ದಾನೆ!'

ಏವಂ ಬ್ರುವಾಣಮಥ ತಂ ಪೃಥಯಾ ಸಹೈವ
ರಾಜಾ ವದೇತಿ ಪುನರೇವ ಯಯಾಚ ಏಷಃ ।
ಸರ್ವಂ ಪೃಥಾಪ್ಯವದತಾಂ ಸ ಚ ತೇನ ತುಷ್ಟೋ
ವಾಚಂ ಜಗಾದ ಕೃತಕೃತ್ಯ ಇಹಾಸಮದ್ಯ ॥೧೫೦॥

ಧರ್ಮರಾಜ ಹೀಗೆ ಹೇಳಿದಾಗ ದ್ರುಪದ ಅವನನ್ನೂ ಕುಂತಿಯನ್ನೂ ಮತ್ತೆ ಮತ್ತೆ 'ನಿಜ ಹೇಳಿರೆಂದು' ಬೇಡಿದ. ಆಗ ಧರ್ಮರಾಜ ಕುಂತಿ ಇಬ್ಬರೂ ಎಲ್ಲ ಸಂಗತಿಗಳನ್ನೂ ವಿವರವಾಗಿ ಹೇಳಿದರು. ಅದರಿಂದ ದ್ರುಪದ ಸಂತುಷ್ಟನಾಗಿ 'ನಾನೀಗ ಕನ್ಯಾದಾನ ಕಾರ್ಯದಲ್ಲಿ ಕೃತಕೃತ್ಯನಾದೆನು' ನುಡಿದ.

ಪಾರ್ಥಾರ್ಥಮೇವ ಹಿ ಮಯೈಷ ಕೃತಃ ಪ್ರಯತ್ನಃ
ತ್ವಂ ಫಲ್ಗುನೋऽನ್ಯ ಉತ ವಾದ್ಯ ಕರಂ ಸುತಾಯಾಃ ।
ಗೃಹ್ಣಾತ್ವಿತೀರಿತ ಇಮಂ ಸ ತು ಧರ್ಮಸೂನು-
ರಾಹಸ್ಮ ಸರ್ವ ಇತಿ ಮೇ ಮನಸಿ ಪ್ರರೂಢಂ ॥೧೫೧॥

ಪಾರ್ಥನಿಗೋಸ್ಕರವೆಂದೇ ನಾನು ಈ ಪ್ರಯತ್ನ ಮಾಡಿದ್ದೇನೆ. ಈಗ ನೀನಾಗಲಿ ಅರ್ಜುನನಾಗಲಿ ಅಥವಾ ಇನ್ನೊಬ್ಬ ಪಾಂಡವನಾಗಲಿ ನನ್ನ ಮಗಳ ಪಾಣಿಗ್ರಹಣ ಮಾಡಲಿ' ಎಂದು ದ್ರುಪದ ಹೇಳಿದಾಗ ಧರ್ಮರಾಜ ನುಡಿದ, 'ಎಲ್ಲರೂ ಪಾಣಿಗ್ರಹಣ ಮಾಡಲಿ ಎಂದು ನನ್ನ ಮನಸ್ಸಿನಲ್ಲಿ ಸಂಕಲ್ಪ ಮೂಡಿದೆ'.

ನಾತ್ರ ಪ್ರಮಾ ಮಮ ಹೃದಿ ಪ್ರತಿಭಾತ್ಯಥಾಪಿ
ಧರ್ಮಾಚಲಾ ಮಮ ಮತಿರ್ಹಿ ತದೇವ ಮಾನಂ ।
ಇತ್ಯುಕ್ತವತ್ಯಪಿ ಸಹೈವ ಸುತೇನ ರಾಜಾ
ನೈವೈಚ್ಛದತ್ರ ಭಗವಾನಗಮಚ್ಚ ಕೃಷ್ಣಃ ॥೧೫೨॥

'ಇದಕ್ಕೆ ಶಾಸ್ತ್ರಪ್ರಮಾಣವೇನೂ ನನ್ನ ಬುದ್ಧಿಯಲ್ಲಿ ಹೊಳೆಯುತ್ತಿಲ್ಲ. ಆದರೂ ನನ್ನ ಬುದ್ಧಿ ಧರ್ಮದಲ್ಲಿ ನಿಶ್ಚಲವಾಗಿದೆ. ಅದರಿಂದ ಅದೇ ಪ್ರಮಾಣ'. ಹೀಗೆ ಧರ್ಮರಾಜ ಹೇಳಿದರೂ ದ್ರುಪದ ಧೃಷ್ಟದ್ಯುಮ್ನರು ಸರ್ವಥಾ ಒಪ್ಪಲಿಲ್ಲ. ಅಷ್ಟರಲ್ಲಿ ಅಲ್ಲಿಗೆ ಭಗವಾನ್ ಬಾದರಾಯಣರು ಬಂದರು.

★ ★ ★ ★

ನೂರ ತೊಂಭತ್ತನಾಲ್ಕನೆಯ ಅಧ್ಯಾಯ

(ಧರ್ಮರಾಜನಿಂದ ತಾವು ಪಾಂಡುಪುತ್ರರೆಂದು ಕಥನ, ದ್ರುಪದನ ಹರ್ಷ, ಐದು ಜನರಿಗೆ ದ್ರೌಪದಿಯನ್ನು ಕೊಡಲು ಅಸಂತೋಷ)

ವೈಶಂಪಾಯನಃ

ತತ ಆಹೂಯ ಪಾಂಚಾಲೋ ರಾಜಪುತ್ರಂ ಯುಧಿಷ್ಠಿರಮ್ ।
ಪರಿಗ್ರಹೇಣ ಬ್ರಾಹ್ಮೇಣ ಪರಿಗೃಹ್ಯ ಮಹಾದ್ಯುತಿಃ ॥೧॥

ಅನಂತರ ಪಾಂಚಾಲರಾಜನು ಯುಧಿಷ್ಠಿರನನ್ನು ಆಹ್ವಾನಿಸಿ, ಬ್ರಾಹ್ಮಣವಿಧಿಯಂತೆ ಅವನನ್ನು ಸತ್ಕರಿಸಿದನು.

ಪರ್ಯಪೃಚ್ಛದದೀನಾತ್ಮಾ ಕುಂತೀಪುತ್ರಂ ಯುಧಿಷ್ಠಿರಮ್ ।
ಕಥಂ ಜಾನೀಮ ಭವತಃ ಕ್ಷತ್ರಿಯಾನ್ ಬ್ರಾಹ್ಮಣಾನುತ ॥೨॥

ಮಹಾತೇಜಸ್ವಿಯಾದ ಉದಾರಮನಸ್ಸುಳ್ಳ ಅವನು ಕುಂತೀಪುತ್ರನಾದ ಯುಧಿಷ್ಠಿರನನ್ನು ಕರೆದು ಹೀಗೆ ಕೇಳಿದನು. ನೀವು ಬ್ರಾಹ್ಮಣರೋ ಅಥವಾ ಕ್ಷತ್ರಿಯರೋ ಎಂದು ನಾವು ಹೇಗೆ ತಿಳಿಯೋಣ?

ವೈಶ್ಯಾನ್ ವಾ ಗುಣಸಂಪನ್ನಾನುತ ವಾ ಶೂದ್ರಯೋನಿಜಾನ್ ।
ಮಾಯಾಮಾಸ್ಥಾಯ ವಾ ಸಿದ್ಧಾಂಶ್ಚರತಃ ಸರ್ವತೋದಿಶಮ್ ॥೩॥

ಕೃಷ್ಣಾಹೇತೋರನುಪ್ರಾಪ್ತಾನ್ ದೇವಸಂದರ್ಶನಾರ್ಥಿನಃ ।
ಬ್ರವೀತು ನೋ ಭವಾನ್ ಸತ್ಯಂ ಸಂದೇಹೋಽತ್ರ ಚ ನೋಽಬಲಾನ್॥

ಅಥವಾ ಗುಣಸಂಪನ್ನರಾದ ವೈಶ್ಯರೋ, ಅಥವಾ ಶೂದ್ರಯೋನಿಯಲ್ಲಿ ಜನಿಸಿದವರೋ ಅಥವಾ ದ್ರೌಪದಿಯನ್ನು ಪಡೆಯುವ ನಿಮಿತ್ತವಾಗಿ ದೇವಸಂದರ್ಶನಾರ್ಥಿಗಳಾಗಿ ಮಾಯಾರೂಪವನ್ನು ಧರಿಸಿಬಂದ ಎಲ್ಲ ಕಡೆಯಲ್ಲೂ ಸಂಚಾರ ಮಾಡುವ ಸಿದ್ಧರೋ ಎಂದು ಹೇಗೆ ತಿಳಿಯೋಣ? ನೀನು ನನಗೆ ಸತ್ಯವನ್ನು ಹೇಳು. ದುರ್ಬಲರಾದ ನಮಗೆ ಈ ವಿಷಯದಲ್ಲಿ ಸಂಶಯವಿದೆ.

ಅಪಿ ನಃ ಸಂಶಯಸ್ಯಾಂತೇ ಮನಸ್ತುಷ್ಟಿರಿಹಾವಿಶೇತ್ ।
ಅಪಿ ನೋ ಭಾಗಧೇಯಾನಿ ಶುಭಾನಿ ಸ್ಯುಃ ಪರಂತಪ ॥೫॥

ಪರಂತಪನೇ, ನಮ್ಮ ಸಂಶಯಗಳು ಪರಿಹಾರವಾಗಿ ಮನಸ್ಸಿಗೆ ಸಂತೋಷವಾಗುವ ಅವಕಾಶವಿದೆಯೇ? ನಮ್ಮ ಅದೃಷ್ಟಗಳು ಶುಭವಾಗಿವೆಯೇ?

ಕಾಮಯೇಯಂ ಬ್ರೂಹಿ ಸತ್ಯಂ ಸತ್ಯಂ ರಾಜಸು ಶೋಭತೇ ।
ಇಷ್ಟಾಪೂರ್ತೇ ನ ಚ ತಥಾऽವಕ್ತವ್ಯಮನೃತಂ ಭವೇತ್ ॥೬॥

ಇದನ್ನು ತಿಳಿಯಲು ಇಚ್ಛಿಸುತ್ತೇನೆ. ಸತ್ಯವನ್ನು ಹೇಳು. ರಾಜರಿಗೆ ಸತ್ಯವಚನವು ಶೋಭಿಸುತ್ತದೆ. ಸತ್ಯವಚನವು ಉಂಟುಮಾಡುವ ಶೋಭೆಯನ್ನು ಇಷ್ಟಾಪೂರ್ತಗಳು ಉಂಟುಮಾಡುವುದಿಲ್ಲ. ಸುಳ್ಳನ್ನು ಯಾವಾಗಲೂ ಹೇಳಬಾರದಷ್ಟೆ?

ಶ್ರುತ್ವಾ ಹ್ಯಮರಸಂಕಾಶ ತವ ವಾಕ್ಯಮರಿಂದಮ ।
ಧ್ರುವಂ ವಿವಾಹಕರಣಮಾಸ್ಥಾಸ್ಯಾಮಿ ವಿಧಾನತಃ ॥೭॥

ದೇವತೆಯಂತಿರುವ ಅರಿಂದಮನೇ, ನಿನ್ನ ಉತ್ತರವನ್ನು ಕೇಳಿ ನಾನು ವಿವಾಹದ ವಿಧಾನಗಳನ್ನು ಅಣಿಗೊಳಿಸುವೆನು.

ಯುಧಿಷ್ಠಿರಃ

ಮಾ ರಾಜನ್ ವಿಮನಾ ಭೂಸ್ತ್ವಂ ಪಾಂಚಾಲ ಪ್ರೀತಿರಸ್ತು ತೇ ।
ಈಪ್ಸಿತಸ್ತೇ ಧ್ರುವಃ ಕಾಮಃ ಸಂವೃತ್ತೋऽಯಮಸಂಶಯಮ್ ॥೮॥

ಪಾಂಚಾಲರಾಜನೇ, ಮನಸ್ಸಿನಲ್ಲಿ ಖೇದವನ್ನು ಹೊಂದಬೇಡ. ನಿನಗೆ ಸಂತೋಷವಿರಲಿ, ನಿನ್ನ ಬಹುಕಾಲದ ಆಸೆಯು ನಿಸ್ಸಂಶಯವಾಗಿ ನೆರವೇರಿದೆ.

ವಯಂ ಹಿ ಕ್ಷತ್ರಿಯಾ ರಾಜನ್ ಪಾಂಡೋಃ ಪುತ್ರಾ ಮಹಾತ್ಮನಃ ।
ಜ್ಯೇಷ್ಠಂ ಮಾಂ ವಿದ್ಧಿ ಕೌತೇಯಂ ಭೀಮಸೇನಾರ್ಜುನಾವಿಮೌ ॥೯॥

ರಾಜನೇ, ನಾವು ಕ್ಷತ್ರಿಯರು. ಮಹಾತ್ಮನಾದ ಪಾಂಡುವಿನ ಪುತ್ರರು. ನಾನು ಕುಂತಿಯ ಹಿರಿಯಮಗ ಎಂದು ತಿಳಿ. ಇವರಿಬ್ಬರೂ ಭೀಮಸೇನಾರ್ಜುನರು.

ಆಭ್ಯಾಂ ತವ ಸುತಾ ರಾಜನ್ ನಿರ್ಜಿತಾ ರಾಜಸಂಸದಿ ।
ಇಮೇ ಚ ತೇ ವಯಂ ರಾಜನ್ ಯತ್ರ ಕೃಷ್ಣಾ ಪ್ರತಿಷ್ಠಿತಾ ॥೧೦॥

ರಾಜನೇ, ಇವರಿಬ್ಬರಿಂದ ನಿನ್ನ ಮಗಳು ರಾಜಸಭೆಯಲ್ಲಿ ಗೆಲ್ಲಲ್ಪಟ್ಟಳು. ರಾಜನೇ, ನಿನ್ನ ಮಗಳು ಯಾರನ್ನು ಆಶ್ರಯಿಸುವಳೋ ಅಂತಹ ಪಾಂಡವರು ನಾವು.

ವ್ಯೇತು ತೇ ಮಾನಸಂ ದುಃಖಂ ಕ್ಷತ್ರಿಯಾಃ ಸ್ಮೋ ನರಾಧಿಪ ।
ಪದ್ಮಿನೀವ ಸುತೇಯಂ ತೇ ಹ್ರದಾದನ್ಯಹ್ರದಂ ಗತಾ ॥೧೧॥

ರಾಜನೇ, ನಿನ್ನ ಮಾನಸಿಕ ಚಿಂತೆಯನ್ನು ತ್ಯಜಿಸು, ನಾವು ಕ್ಷತ್ರಿಯರು. ನಿನ್ನ ಮಗಳು ಒಂದು ಸರೋವರದಿಂದ ಇನ್ನೊಂದು ಸರೋವರಕ್ಕೆ ಹೋದ ಪದ್ಮಿನಿಯಂತೆ ನಮ್ಮನ್ನು ಸೇರಿದ್ದಾಳೆ.

ಇತಿ ತಥ್ಯಂ ಮಹಾರಾಜ ಸರ್ವಮೇತದ್ ಬ್ರವೀಮಿ ತೇ ।
ಭವಾನ್ ಹಿ ಗುರುರಸ್ಮಾಕಂ ಪರಮಂ ಚ ಪರಾಯಣಮ್ ॥೧೨॥

ಮಹಾರಾಜನೇ, ಇದು ಸತ್ಯ , ಇದೆಲ್ಲವನ್ನೂ ನಿನಗೆ ಹೇಳಿದ್ದೇನೆ. ನೀನು ನಮಗೆ ಗುರು, ಅಷ್ಟೇ ಅಲ್ಲದೇ ಶ್ರೇಷ್ಠನಾದ ಆಶ್ರಯದಾತನೂ ಹೌದು.

ವೈಶಂಪಾಯನಃ

ತತಃ ಸ ದ್ರುಪದೋ ರಾಜಾ ಹರ್ಷವ್ಯಾಕುಲಲೋಚನಃ ।
ಪ್ರತಿವಕ್ತುಂ ನ ಶಕ್ತೋಽಭೂದ್ ಧರ್ಮಸೂನುಂ ತದಾಽನಘಮ್ ॥

ಆಗ ದ್ರುಪದರಾಜನು ಸಂತೋಷದಿಂದ ಕಣ್ಣುಗಳಲ್ಲಿ ನೀರು ತುಂಬಿಕೊಂಡವನಾಗಿ ನಿರ್ದೋಷನಾದ ಯುಧಿಷ್ಠಿರನನ್ನು ಕುರಿತು ಮಾತನಾಡಲು ಸಮರ್ಥನಾಗಲಿಲ್ಲ.

ಯತ್ನೇನ ತು ಸ ತಂ ಹರ್ಷಂ ಸನ್ನಿಗೃಹ್ಯ ಪರಂತಪಃ ।
ಅನುರೂಪಂ ತತೋ ರಾಜಾ ಪ್ರತ್ಯುವಾಚ ಯುಧಿಷ್ಠಿರಮ್ ॥೧೪॥

ಪರಂತಪನಾದ ದ್ರುಪದನು ಪ್ರಯತ್ನಪೂರ್ವಕವಾಗಿ ತನ್ನ ಹರ್ಷವನ್ನು ನಿಗ್ರಹಿಸಿ ಯುಧಿಷ್ಠಿರನನ್ನು ಕುರಿತು ಅವನಿಗೆ ಅನುಗುಣವಾದ ರೀತಿಯಲ್ಲಿ ಮಾತನಾಡಿದನು.

ಪರ್ಯಪೃಚ್ಛದದೀನಾತ್ಮಾ ಯಥಾ ತೇ ಪ್ರದ್ರುತಾಃ ಪುರಾ ।
ತಥಾಽಸ್ಯೈ ಸರ್ವಮಾಚಷ್ಟ ಆನುಪೂರ್ವ್ಯೇಣ ಪಾಂಡವಃ ॥೧೫॥

ಉದಾರಬುದ್ಧಿಯುಳ್ಳ ಅವನು, ಹಿಂದೆ ಅವರು ಅರಗಿನ ಮನೆಯಿಂದ ಓಡಿಹೋದ ವಿಷಯವನ್ನೆಲ್ಲಾ ಬಗೆಬಗೆಯಾಗಿ ಪ್ರಶ್ನಿಸಿದನು. ಪಾಂಡವನಾದ ಧರ್ಮರಾಜನು ಅವನ ಪ್ರಶ್ನೆಯ ಕ್ರಮಗಳನ್ನು ಅನುಸರಿಸಿ ಎಲ್ಲವನ್ನೂ ಅವನಿಗೆ ತಿಳಿಸಿದನು.

ತಚ್ಚ್ರುತ್ವಾ ದ್ರುಪದೋ ರಾಜಾ ಕುಂತೀಪುತ್ರಸ್ಯ ಭಾಷಿತಮ್ ।
ವಿಗರ್ಹಯಾಮಾಸ ತದಾ ಧೃತರಾಷ್ಟ್ರಂ ನರೇಶ್ವರಮ್ ॥೧೬॥

ಕುಂತೀಪುತ್ರನಾದ ಧರ್ಮರಾಜನ ಮಾತುಗಳನ್ನು ಕೇಳಿದ ದ್ರುಪದರಾಜನು ಆಗ ಧೃತರಾಷ್ಟ್ರನನ್ನು ನಿಂದಿಸಿದನು.

ಆಶ್ವಾಸಯಾಮಾಸ ತದಾ ಕುಂತೀಪುತ್ರಂ ಯುಧಿಷ್ಠಿರಮ್ ।
ಪ್ರತಿಜಜ್ಞೇ ಸ ರಾಜ್ಯಾಯ ದ್ರುಪದೋ ದದತಾಂ ವರಃ ॥೧೭॥

ಮಾತನಾಡುವವರಲ್ಲಿ ಶ್ರೇಷ್ಠನಾದ ಆ ದ್ರುಪದನು ಕುಂತೀಪುತ್ರನಾದ ಯುಧಿಷ್ಠಿರನಿಗೆ ಆಶ್ವಾಸನೆಯನ್ನು ನೀಡಿ ಪಾಂಡವರ ರಾಜ್ಯಲಾಭಕ್ಕೋಸ್ಕರ ಪ್ರಯತ್ನಪಡುವುದಾಗಿ ಪ್ರತಿಜ್ಞೆಯನ್ನು ಮಾಡಿದನು.

ತತಃ ಕುಂತೀ ಚ ಕೃಷ್ಣಾ ಚ ಭೀಮಸೇನಾರ್ಜುನಾವಪಿ ।
ಯಮೌ ಚ ರಾಜ್ಞಾ ಸಂದಿಷ್ಟಾ ವಿವಿಶುರ್ಭವನಂ ಮಹತ್ ॥೧೮॥

ಅನಂತರ ರಾಜನ ಆದೇಶವನ್ನು ಪಡೆದು ಕುಂತಿಯೂ, ದ್ರೌಪದಿಯೂ ಭೀಮಸೇನಾರ್ಜುನರೂ ಮತ್ತು ನಕುಲಸಹದೇವರೂ ರಾಜನ ಅರಮನೆಯೊಳಗೆ ಪ್ರವೇಶಿಸಿದರು.

ತತ್ರ ತೇ ನ್ಯವಸನ್ ರಾಜನ್ ಯಜ್ಞಸೇನೇನ ಪೂಜಿತಾಃ ।
ಪರ್ಯಾಶ್ವಸ್ತಾಂಸ್ತದಾ ರಾಜಾ ಸಹ ಪುತ್ರೈರುವಾಚ ತಾನ್ ॥೧೯॥

ರಾಜನೇ, ಯಜ್ಞಸೇನನಿಂದ ಸತ್ಕೃತರಾಗಿ ಅವರು ಅಲ್ಲಿ ವಾಸವನ್ನು ಮಾಡಿದರು. ಅವರು ಸಮಾಧಾನವನ್ನು ಹೊಂದಿದ ಮೇಲೆ ರಾಜನು ತನ್ನ ಮಕ್ಕಳ ಜೊತೆಯಲ್ಲಿ ಅವರನ್ನು ಕುರಿತು ಮಾತನಾಡಿದನು.

ಗೃಹ್ಣಾತು ವಿಧಿವತ್ ಪಾಣಿಮದ್ಯೈವ ಕುರುನಂದನಃ ।
ಪುಣ್ಯೇಽಹನಿ ಮಹಾಬಾಹುರರ್ಜುನಃ ಕುರುತಾಂ ಕ್ಷಣಮ್ ॥೨೦॥

ಕುರುನಂದನನಾದ ಮಹಾಬಾಹುವಾದ ಅರ್ಜುನನು ಪವಿತ್ರವಾದ ಈ ದಿನವೇ ಅವಕಾಶವನ್ನು ಮಾಡಿಕೊಂಡು ಪಾಣಿಗ್ರಹಣವನ್ನು ಮಾಡಲಿ.

ವೈಶಂಪಾಯನಃ

ತತಸ್ತಮಬ್ರವೀದ್ ರಾಜಾ ಧರ್ಮಪುತ್ರೋ ಯುಧಿಷ್ಠಿರಃ ।
ಮಮಾಪಿ ದಾರಸಂಬಂಧಃ ಕಾರ್ಯಸ್ತಾವದ್ ವಿಶಾಂಪತೇ ।
ತಸ್ಮಾತ್ ಪೂರ್ವಂ ಮಯಾ ಕಾರ್ಯಂ
ತದ್ ಭವಾನನುಮನ್ಯತಾಮ್ ॥೨೧॥

ಆಗ ಧರ್ಮಪುತ್ರನಾದ ಯುಧಿಷ್ಠಿರನು ಅವನನ್ನು ಕುರಿತು ಮಾತನಾಡಿದನು. ರಾಜನೇ, ನಾನೂ ವಿವಾಹವನ್ನು ಮಾಡಿಕೊಳ್ಳಬೇಕಾಗಿದೆ. ಆದ್ದರಿಂದ ನಾನು ಮೊದಲು ಪಾಣಿಗ್ರಹಣ ಮಾಡಬೇಕು. ಅದಕ್ಕೆ ನಿನ್ನ ಅನುಮತಿಯನ್ನು ಕೊಡು.

ದ್ರುಪದಃ

ಭವಾನ್ ವಾ ವಿಧಿವತ್ ಪಾಣಿಂ ಗೃಹ್ಣಾತು ದುಹಿತುರ್ಮಮ ।
ಯಸ್ಯ ವಾ ಮನ್ಯಸೇ ವೀರ ತಸ್ಯ ಕೃಷ್ಣಾಮುಪಾದಿಶ ॥೨೨॥

ನೀನೇ ಬೇಕಾದರೂ ವಿಧಿಪೂರ್ವಕವಾಗಿ ನನ್ನ ಮಗಳ ಪಾಣಿಗ್ರಹಣವನ್ನು ಮಾಡು. ಅಥವಾ ನಿಮ್ಮಲ್ಲಿ ಯಾರಿಗೆ ನಾನು ದ್ರೌಪದಿಯನ್ನು ಕೊಡಬೇಕೆಂದಾದರೂ ತಿಳಿಸು.

ಯುಧಿಷ್ಠಿರಃ

ಸರ್ವೇಷಾಂ ದ್ರೌಪದೀ ರಾಜನ್ ಮಹಿಷೀ ನೋ ಭವಿಷ್ಯತಿ ।
ಏವಂ ಹಿ ವ್ಯಾಹೃತಂ ಪೂರ್ವಂ ಮಮ ಮಾತ್ರಾ ವಿಶಾಂಪತೇ ॥

ರಾಜನೇ, ದ್ರೌಪದಿಯು ನಮ್ಮೆಲ್ಲರಿಗೂ ರಾಣಿಯಾಗುವಳು. ರಾಜನೇ, ಹೀಗೆ ನನ್ನ ತಾಯಿಯು ಮೊದಲೇ ಹೇಳಿದ್ದಾಳೆ.

ಅಹಂ ಚಾಪ್ಯನಿವಿಷ್ಟೋ ವೈ ಭೀಮಸೇನಶ್ಚ ಪಾಂಡವಃ ।
ಪಾರ್ಥೇನ ವಿಜಿತಾ ಚೈಷಾ ರತ್ನಭೂತಾ ಚ ತೇ ಸುತಾ ॥೨೪॥

ನನಗಿನ್ನೂ ವಿವಾಹವಾಗಿಲ್ಲ, ಪಾಂಡವನಾದ ಭೀಮಸೇನನಿಗೂ ವಿವಾಹವಾಗಿಲ್ಲ, ರತ್ನದಂತಿರುವ ಈ ನಿನ್ನ ಮಗಳು ಅರ್ಜುನನಿಂದ ಜಯಿಸಲ್ಪಟ್ಟಿದ್ದಾಳೆ.

ಏಷ ನಃ ಸಮಯೋ ರಾಜನ್ ರತ್ನಸ್ಯ ಸಹಭೋಜನಮ್ ।
ನ ಚೈನಂ ಹಾತುಮಿಚ್ಛಾಮಃ ಸಮಯಂ ರಾಜಸತ್ತಮ ॥೨೫॥

ರಾಜನೇ, ರತ್ನವನ್ನು ನಾವೆಲ್ಲರೂ ಒಟ್ಟಿಗೆ ಭೋಗಿಸಬೇಕೆಂದು ನಮ್ಮ ನಿಯಮವಿದೆ. ರಾಜಶ್ರೇಷ್ಠನೇ, ಈ ನಿಯಮವನ್ನು ನಾವು ಪರಿತ್ಯಾಗ ಮಾಡಲು ಬಯಸುವುದಿಲ್ಲ.

ಅಕ್ರಮೇಣ ನಿವೇಶೇ ಚ ಧರ್ಮಲೋಪೋ ಮಹಾನ್ ಭವೇತ್ ।
ಸರ್ವೇಷಾಂ ಧರ್ಮತಃ ಕೃಷ್ಣಾ ಮಹಿಷೀ ನೋ ಭವಿಷ್ಯತಿ ।
ಆನುಪೂರ್ವ್ಯೇಣ ಗೃಹ್ಣಂತು ಸರ್ವೇऽಗ್ನೌ ಜ್ವಲಿತೇ ಕರಮ್ ॥೨೬॥

ಜ್ಯೇಷ್ಠಕ್ರಮವನ್ನು ಬಿಟ್ಟು ದ್ರೌಪದಿಯನ್ನು ಯಾರಾದರೂ ಚಿಕ್ಕವರಿಗೆ ಕೊಟ್ಟರೆ ದೊಡ್ಡ ಧರ್ಮಲೋಪ ಉಂಟಾಗುತ್ತದೆ. ದ್ರೌಪದಿಯು ಧರ್ಮದಿಂದಲೇ ನಮ್ಮೆಲ್ಲರಿಗೂ ರಾಣಿಯಾಗುವಳು. ಜ್ವಲಿತವಾದ ಅಗ್ನಿಯ ಸನ್ನಿಧಿಯಲ್ಲಿ ನಾವೆಲ್ಲರೂ ಜ್ಯೇಷ್ಠಕ್ರಮದಿಂದ ಅವಳ ಪಾಣಿಯನ್ನು ಗ್ರಹಣ ಮಾಡುವೆವು.

ದ್ರುಪದಃ

ಏಕಸ್ಯ ಬಹ್ವ್ಯೋ ವಿಹಿತಾ ಮಹಿಷ್ಯಃ ಕುರುನಂದನ ।
ನೈಕಸ್ಯಾ ಬಹವಃ ಪುಂಸೋ ವಿಧೀಯಂತೇ ಕದಾಚನ ॥೨೭॥

ಕುರುನಂದನನೇ, ಒಬ್ಬನಿಗೆ ಅನೇಕ ಪತ್ನಿಯರು ವಿಹಿತರಾಗುತ್ತಾರೆ. ಆದರೆ, ಒಬ್ಬ ಸ್ತ್ರೀಗೆ ಅನೇಕ ಪುರುಷರು ಪತಿಗಳಾಗಿ ಎಂದೂ ವಿಧಾನ ಮಾಡಲ್ಪಡುವುದಿಲ್ಲ.

ನ ಚಾಪ್ಯಾಚರಿತಃ ಪೂರ್ವೈರಯಂ ಧರ್ಮೋ ಮಹಾತ್ಮಭಿಃ ।
ನಚ ಧರ್ಮೋ ಹ್ಯನೇಕಸ್ಥಶ್ಚರಿತವ್ಯಃ ಸನಾತನಃ ॥೨೮॥

ನೀನು ಸೂಚಿಸಿರುವ ಈ ಮಾರ್ಗವು ಹಿಂದಿನ ಮಹಾತ್ಮರಿಂದ ಆಚರಿಸಲ್ಪಟ್ಟಿಲ್ಲ. ಎಲ್ಲರೂ ಆಚರಿಸಬೇಕಾದ ಸನಾತನಧರ್ಮವು ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿರುವುದಿಲ್ಲ. ಎಲ್ಲರೂ ಒಂದೇ ರೀತಿಯಲ್ಲೇ ಅನುಸರಿಸಬೇಕು.

ಸೋಽಯಂ ನ ಲೋಕೇ ವೇದೇ ವಾ ಜಾತು ಧರ್ಮಃ ಪ್ರಶಸ್ಯತೇ ।
ಲೋಕವೇದವಿರುದ್ಧಂ ಚ ನಾಧರ್ಮಂ ಧಾರ್ಮಿಕಃ ಶುಚಿಃ ।
ಕರ್ತುಮರ್ಹಸಿ ಕೌಂತೇಯ ಕಸ್ಮಾತ್ ತೇ ಬುದ್ಧಿರೀದೃಶೀ ॥೨೯॥

ಐದು ಜನರು ಒಬ್ಬಳನ್ನೇ ಮದುವೆ ಮಾಡಿಕೊಳ್ಳುವುದು ಲೋಕದಲ್ಲಾಗಲಿ, ವೇದದಲ್ಲಾಗಲಿ ಎಂದೂ ವಿಧಿಸಲ್ಪಡುವುದಿಲ್ಲ. ಕೌಂತೇಯನೇ, ಧಾರ್ಮಿಕನೂ ಮತ್ತು ಶುಚಿಯೂ ಆದ ನೀನು ಲೋಕಕ್ಕೂ ಮತ್ತು ವೇದಕ್ಕೂ ವಿರುದ್ಧವಾದ ಅಧರ್ಮವನ್ನು ಆಚರಿಸಬಾರದು. ನಿನಗೆ ಏಕೆ ಇಂತಹ ಬುದ್ಧಿಯುಂಟಾಗಿದೆ?

ಯುಧಿಷ್ಠಿರಃ

ಸೂಕ್ಷ್ಮೋ ಧರ್ಮೋ ಮಹಾರಾಜ ನಾಸ್ಯ ವಿದ್ಮೋ ಗತಿಂ ವಯಮ್ ।
ಲೋಕವೇದಾವಿರುದ್ಧೋಽಯಂ ಧರ್ಮೋ ಧರ್ಮಭೃತಾಂ ವರ ॥೩೦॥

ಮಹಾರಾಜನೇ, ಧರ್ಮದ ಗತಿಯು ಸೂಕ್ಷ್ಮವಾಗಿದೆ. ಅದನ್ನು ನಾವು ತಿಳಿಯಲಾರೆವು. ಧರ್ಮಭೃತರಲ್ಲಿ ಶ್ರೇಷ್ಠನಾದವನೇ, ನಾನು ಹೇಳುತ್ತಿರುವ ಈ ಕಾರ್ಯವು ಲೋಕಕ್ಕೂ ಮತ್ತು ವೇದಕ್ಕೂ ಅವಿರುದ್ಧವಾದ ಧರ್ಮವೇ ಆಗಿದೆ.

ಸರ್ವೇಷಾಮಾನುಪೂರ್ವ್ಯೇಣ ಯಾತಂ ತೈರನುಯಾಮಹೇ ।
ನ ಮೇ ವಾಗನೃತಂ ಪ್ರಾಹ ನಾಧರ್ಮೇ ಧೀಯತೇ ಮತಿಃ ॥೩೧॥

ಎಲ್ಲರಿಗೂ ಅನುಕೂಲವಾಗುವಂತೆ ಹಿಂದಿನವರು ನಡೆದ ಮಾರ್ಗದಲ್ಲಿಯೇ ನಾವು ನಡೆಯುತ್ತಿದ್ದೇವೆ. ನಾನು ಎಂದೂ ಸುಳ್ಳು ಮಾತನಾಡಿಲ್ಲ. ಅಥವಾ ನನ್ನ ಮನಸ್ಸು ಎಂದೂ ಅಧರ್ಮವನ್ನು ಯೋಚಿಸುವುದಿಲ್ಲ.

ಏವಂ ಚೈವ ವದತ್ಯಂಬಾ ಮಮಾಪಿ ಚ ಮನೋಗತಮ್ ।
ಆಶ್ರಮೇಷು ವಿನಿರ್ದಿಷ್ಟಾದ್ ವ್ಯಾಸಾದೇತನ್ಮಯಾ ಶ್ರುತಮ್ ॥೩೨॥

ತಾಯಿಯೂ ಹೀಗೆಯೇ ಹೇಳುತ್ತಾಳೆ. ನನ್ನ ಮನಸ್ಸಿನ ಅಭಿಪ್ರಾಯವೂ ಹೀಗೆಯೇ ಇದೆ. ನಾನು ಆಶ್ರಮಗಳಲ್ಲಿ ವಾಸಿಸುವ ವ್ಯಾಸರಿಂದಲೂ ಈ ವಿಷಯವನ್ನು ಹೀಗೆಯೇ ಕೇಳಿದ್ದೇನೆ.

ಧರ್ಮ ಏಷ ಧ್ರುವೋ ರಾಜನ್ ಯಸ್ಮಾದೇವಂ ಕರೋಮ್ಯಹಮ್ ।
ಮಾ ಚ ತತ್ರ ವಿಶಂಕಾ ಭೂನ್ನ ಹ್ಯಧರ್ಮೇ ಮತಿರ್ಮಮ ॥೩೩॥

ರಾಜನೇ, ನಾನು ಹೀಗೆ ಮಾಡುತ್ತಿರುವುದರಿಂದ ಇದು ನಿಶ್ಚಯವಾಗಿ ಧರ್ಮವೇ ಸರಿ. ನಿನಗೆ ಅದರಲ್ಲಿ ಸಂಶಯವು ಬೇಡ. ನಾನು ಎಂದೂ ಅಧರ್ಮವನ್ನು ಚಿಂತಿಸುವುದಿಲ್ಲ.

ದ್ರುಪದಃ

ತ್ವಂ ಚ ಕುಂತೀ ಚ ಕೌಂತೇಯ ಧೃಷ್ಟದ್ಯುಮ್ನಶ್ಚ ಮೇ ಸುತಃ ।
ಕಥಯಂತ್ವಿಹ ಕರ್ತವ್ಯಂ ಶ್ವಃ ಕಾಲ್ಯೇ ಕರವಾಮಹೇ ॥೩೪॥

ಕೌಂತೇಯನೇ, ನೀನೂ, ಕುಂತಿಯೂ ಮತ್ತು ಧೃಷ್ಟದ್ಯುಮ್ನನೂ ಸೇರಿ ವಿಚಾರ ಮಾಡಿ ಏನು ಮಾಡಬೇಕೆಂದು ತಿಳಿಸಿ. ನಾಳೆ ಬೆಳಿಗ್ಗೆ ಹಾಗೆಯೇ ಮಾಡೋಣ.

ವೈಶಂಪಾಯನಃ

ತೇ ಸಮೇತ್ಯ ತತಃ ಸರ್ವೇ ಕಥಯಂತಿ ಸ್ಮ ಭಾರತ ।
ಅಥ ದ್ವೈಪಾಯನೋ ರಾಜನ್ನಾಜಗಾಮ ಯದೃಚ್ಛಯಾ ॥೩೫॥

ಭಾರತನೇ, ಆಗ ಅವರೆಲ್ಲರೂ ಒಂದೆಡೆ ಸೇರಿ ಮಾತನಾಡಲು ಆರಂಬಿಸಿದರು.ರಾಜನೇ, ಆ ವೇಳೆಗೆ ಸರಿಯಾಗಿ ಅನಿರೀಕ್ಷಿತವಾಗಿ ಅಲ್ಲಿಗೆ ವೇದವ್ಯಾಸರು ಆಗಮಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಚತುರ್ನವತ್ಯಧಿಕಶತತಮೋಽಧ್ಯಾಯಃ ॥
॥ ಇತಿ ವೈವಾಹಿಕಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರತೊಂಭತ್ತನಾಲ್ಕನೆಯ ಅಧ್ಯಾಯ ಮುಗಿಯಿತು.

ಮಹಾಭಾರತತಾತ್ಪರ್ಯನಿರ್ಣಯ - ಅಧ್ಯಾಯ-೧೯

ವ್ಯಾಸಂ ತಮೀಕ್ಷ್ಯ ಭಗವಂತಮಗಣ್ಯಪೂರ್ಣ-
ನಿತ್ಯಾವ್ಯಯಾತ್ಮಗುಣಮಾಶು ಸಮಸ್ತ ಏವ ।
ನತ್ವಾಭಿಪೂಜ್ಯ ವರಪೀಠಗತಸ್ಯ ಚಾಜ್ಞಾ-
ಮಾದಾಯ ಚೋಪವಿವಿಶುಃ ಸಹಿತಾಸ್ತದಂತೇ ॥೧೫೩॥

ಅಗಣಿತ ಗುಣಪೂರ್ಣರಾದ ನಿತ್ಯ ಅವ್ಯಯ ಸ್ವರೂಪಭೂತ ಗುಣಶಾಲಿಗಳಾದ ಭಗವಾನ್ ವೇದವ್ಯಾಸರನ್ನು ಕಂಡು ಎಲ್ಲರೂ ನಮಿಸಿ ಸತ್ಕರಿಸಿ, ಶ್ರೇಷ್ಠವಾದ ಆಸನದಲ್ಲಿ ಅವರು ಕುಳಿತ ಬಳಿಕ ಅವರಿಂದ ಆಜ್ಞೆ ಪಡೆದು ಅವರ ಬಳಿ ಎಲ್ಲರೂ ಜೊತೆಗೆ ಕುಳಿತರು.

ಕೃಷ್ಣಸ್ತದಾಹ ನೃಪತಿಂ ಪ್ರತಿ ದೇಹಿ ಕನ್ಯಾಂ
ಸರ್ವೇಭ್ಯ ಏವ ವೃಷವಾಯುಪುರಂದರಾ ಹಿ ।
ನಾಸತ್ಯದಸ್ರಸಹಿತಾ ಇಮ ಏವ ಇಂದ್ರಾಃ
ಪೂರ್ವೇ ಚ ಸಂಪ್ರತಿತನಶ್ಚ ಹರೇರ್ಹಿ ಪಶ್ಚಾತ್ ॥೧೫೪॥

ಏಷಾಂ ಶ್ರೀಯಶ್ಚ ನಿಖಿಲಾ ಅಪಿ ಚೈಕದೇಹಾಃ
ಪುತ್ರೀ ತವೈವ ನ ತತೋಽತ್ರ ವಿರುದ್ಧತಾ ಹಿ ।
ಇತ್ಯುಕ್ತವತ್ಯಪಿ ಯದಾ ದ್ರುಪದಶ್ಚಕಾರ
ಸಂವಾದಿನೀಂ ನ ಧಿಯಮೇನಮಥಾಹ ಕೃಷ್ಣಃ ॥೧೫೫॥

ವೇದವ್ಯಾಸರು ಆಗ ದ್ರುಪದನನ್ನು ಕುರಿತು 'ಎಲ್ಲರಿಗೂ ಕನ್ಯಾದಾನ ಮಾಡು' ಇವರು ಯಮ ವಾಯು ಪುರಂದರ ನಾಸತ್ಯ ದಸ್ರರು. ಯಜ್ಞನಾಮಕ ಹರಿಯ ಅನಂತರದಲ್ಲಿ ಇಂದ್ರಪದವಿಯನ್ನಾಳಿದ ಹಿಂದಿನ ಮತ್ತು ಈಗಿನ ಇಂದ್ರರು. ಇದರ ಪತ್ನಿಯರು ಒಂದೇ ಶರೀರಉಳ್ಳವರಾಗಿ ನಿನ್ನ ಮಗಳಾಗಿ ಜನಿಸಿದ್ದಾರೆ. ಅದರಿಂದ ಇಲ್ಲಿ ವಿರೋಧವಿಲ್ಲ' ಎಂದು ಹೇಳಿದರೂ ದ್ರುಪದ ಮಗಳನ್ನು ಐವರಿಗೆ ಕೊಡಲು ಮನಸ್ಸು ಮಾಡಲಿಲ್ಲ. ಆಗ ವೇದವ್ಯಾಸರು ಅವನಿಗೆ ಹೇಳಿದರು.

ದಿವ್ಯಂ ಹಿ ದರ್ಶನಮಿದಂ ತವ ದತ್ತಮದ್ಯ
ಪಶ್ಯಾಶು ಪಾಂಡುತನಯಾನ್ ದಿವಿ ಸಂಸ್ಥಿತಾಂಸ್ತ್ವಂ ।
ಏತಾಂ ಚ ತೇ ದುಹಿತರಂ ಸಹ ತೈಃ ಪೃಥಕ್ಸ್ಥಾಂ
ತಲ್ಲಕ್ಷಣೈಃ ಸಹ ತತಃ ಕುರು ತೇ ಯಥೇಷ್ಟಂ ॥೧೫೬॥

'ನಿನಗೆ ಈಗ ದಿವ್ಯದೃಷ್ಟಿ ನೀಡಿದ್ದೇನೆ. ದೇವಲೋಕದಲ್ಲಿರುವ ಪಾಂಡವರನ್ನೂ ಜೊತೆಗೆ, ಅವರೊಡನೆ ಬೇರೆ ಬೇರೆಯಾಗಿ ಆಯಾ ಲಕ್ಷಣಗಳಿಂದ ಒಪ್ಪುತ್ತ ನಿಂತಿರುವ ನಿನ್ನ ಮಗಳನ್ನೂ ಬೇಗನೆ ನೋಡು. ಬಳಿಕ ನಿನ್ನ ಇಷ್ಟದಂತೆ ಮಾಡು'.

ಇತ್ಯುಕ್ತವಾಕ್ಯಮನು ತಾನ್ ಸ ದದರ್ಶ ರಾಜಾ
ಕೃಷ್ಣಪ್ರಸಾದಬಲತೋ ದಿವಿ ತಾದೃಶಾಂಶ್ಚ ।
ಏತಾನ್ ನಿಶಾಮ್ಯ ಚರಣೌ ಜಗದೀಶಿತುಶ್ಚ
ಭೀತೋ ಜಗಾಮ ಶರಣಂ ತದನಾದರೇಣ ॥೧೫೭॥

ವೇದವ್ಯಾಸರು ಹೀಗೆ ಹೇಳಿದೊಡನೆ ಅವರ ಅನುಗ್ರಹ ಬಲದಿಂದ ರಾಜಾ ದ್ರುಪದ ದೇವಲೋಕದಲ್ಲಿ ಪಾಂಡವರು ಯಮ ವಾಯು ಪುರಂದರಾದಿ ಲಕ್ಷಣಯುಕ್ತರಾಗಿ ನಿಂತಿದ್ದುದನ್ನು ಮತ್ತು ದ್ರೌಪದಿ ಅವರ ಬಳಿಯಲ್ಲಿ ಶ್ಯಾಮಲಾ ಭಾರತ್ಯಾದಿ ಲಕ್ಷಣಯುಕ್ತಳಾಗಿ ಐದು ರೂಪಗಳಿಂದ ನಿಂತಿದ್ದುದನ್ನೂ ನೋಡಿ 'ಜಗದೊಡೆಯನ ಪಾದಗಳನ್ನು ನಾನು ಅನಾದರಿಸಿದೆನಲ್ಲ!' ಎಂದು ಭೀತನಾಗಿ ಶರಣು ಹೊಂದಿದ.

★ ★ ★ ★

ನೂರ ತೊಂಭತ್ತೈದನೆಯ ಅಧ್ಯಾಯ

(ವ್ಯಾಸರನ್ನು ಕುರಿತು ದ್ರುಪದನ ಪ್ರಶ್ನೆ, ಧರ್ಮರಾಜ ಮತ್ತು ಕುಂತಿಯ ವಚನಗಳು, ವ್ಯಾಸರಿಂದ ದ್ರುಪದನಿಗೆ ಏಕಾಂತದಲ್ಲಿ ಉಪದೇಶ)

ವೈಶಂಪಾಯನಃ

ತತಸ್ತೇ ಪಾಂಡವಾಃ ಸರ್ವೇ ಪಾಂಚಾಲ್ಯಶ್ಚ ಮಹಾರಥಃ ।
ಪ್ರತ್ಯುತ್ಥಾಯ ಮಹಾತ್ಮಾನಂ ಕೃಷ್ಣಂ ದೃಷ್ಟ್ವಾಽಭ್ಯಪೂಜಯನ್ ॥೧॥

ಆಸನೇ ಕಾಂಚನೇ ಶುಭ್ರೇ ನಿಷಸಾದ ಮಹಾಮುನಿಃ ।
ಅಭಿನಂದ್ಯ ಚ ತಾನ್ ಸರ್ವಾನ್ ಪೃಷ್ಟ್ವಾ ಚ ಕುಶಲಂ ಹಿ ಸಃ ॥೨॥

ಆಗ ಮಹಾರಥನಾದ ದ್ರುಪದನು ಮತ್ತು ಪಾಂಡವರೆಲ್ಲರೂ ಮಹಾನುಭಾವರಾದ ವ್ಯಾಸರನ್ನು ನೋಡಿ ಆಸನಗಳಿಂದ ಎದ್ದು ಅವರನ್ನು ಸತ್ಕರಿಸಿದರು. ಮಹಾಮುನಿಗಳಾದ ವ್ಯಾಸರು ಅವರನೆಲ್ಲಾ ಅಭಿನಂದಿಸಿ, ಕ್ಷೇಮವನ್ನು ವಿಚಾರಿಸಿ ಶುಭ್ರವಾದ ಕಾಂಚನಮಯವಾದ ಆಸನದಲ್ಲಿ ಕುಳಿತುಕೊಂಡರು.

ಅನುಜ್ಞಾತಾಸ್ತು ತೇ ಸರ್ವೇ ಕೃಷ್ಣೇನಾಮಿತತೇಜಸಾ ।
ಆಸನೇಷು ಯಥಾರ್ಹೇಷು ನಿಷೇದುರ್ದ್ವಿಪದಾಂ ವರಾಃ ॥೩॥

ಅಮಿತತೇಜಸ್ವಿಗಳಾದ ವ್ಯಾಸರಿಂದ ಅನುಮತಿಯನ್ನು ಪಡೆದ ಆ ನರಶ್ರೇಷ್ಠರು ಯಥಾಯೋಗ್ಯವಾಗಿ ತಮ್ಮತಮ್ಮ ಆಸನಗಳಲ್ಲಿ ಕುಳಿತು ಕೊಂಡರು.

ತತೋ ಮುಹೂರ್ತಂ ಮಧುರಾಂ ವಾಚಮುಚ್ಚಾರ್ಯ ಪಾರ್ಷತಃ ।
ಪಪ್ರಚ್ಛ ತಂ ಮಹಾತ್ಮಾನಂ ದ್ರೌಪದ್ಯರ್ಥಂ ಮಹಾಮುನಿಮ್ ॥೪॥

ಕಥಮೇಕಾ ಬಹೂನಾಂ ಸ್ಯಾನ್ನ ಚ ಸ್ಯಾದ್ ಧರ್ಮಸಂಕರಃ ।
ಏತನ್ನೋ ಭಗವಾನ್ ಸರ್ವಂ ಪ್ರಬ್ರವೀತು ಯಥಾತಥಮ್ ॥೫॥

ಅನಂತರ, ದ್ರುಪದನು ಒಂದು ಮಹೂರ್ತದ ಕಾಲ ಮಧುರವಾದ ಬೇರೆಯ ಮಾತುಗಳನ್ನಾಡಿ ಮಹಾನುಭಾವರಾದ ಆ ಮಹಾಮುನಿಗಳನ್ನು ದ್ರೌಪದಿಯ ವಿಷಯದಲ್ಲಿ ಪ್ರಶ್ನೆ ಮಾಡಿದನು. ಪೂಜ್ಯರೇ, ಒಬ್ಬಳು ಅನೇಕರಿಗೆ ಪತ್ನಿಯಾದರೆ ಹೇಗೆ ಧರ್ಮಸಂಕರವಾಗುವುದಿಲ್ಲ? ಈ ವಿಷಯವನ್ನು ತಾವು ಯಥಾರ್ಥವಾಗಿ ತಿಳಿಸಬೇಕು.

ವ್ಯಾಸಃ

ಅಸ್ಮಿನ್ ಧರ್ಮೇ ವಿಪ್ರಲಬ್ಧೇ ಲೋಕವೇದವಿರೋಧಿತೇ ।
ಯಸ್ಯ ಯಸ್ಯ ಮತಂ ಯದ್ಯಚ್ಛ್ರೋತುಮಿಚ್ಛಾಮಿ ತಸ್ಯ ತತ್ ॥೬॥

ಲೋಕದ ಮತ್ತು ವೇದದ ವಿರೋಧವುಳ್ಳ ಈ ಸಂಶಯಗ್ರಸ್ತವಾದ ಧರ್ಮದಲ್ಲಿ ಯಾರುಯಾರಿಗೆ ಏನೇನು ಅಭಿಪ್ರಾಯಗಳಿವೆಯೆಂದು ಕೇಳಲು ಬಯಸುತ್ತೇನೆ.

ದ್ರುಪದಃ

ಅಧರ್ಮೋಽಯಂ ಮಮ ಮತೋ ವಿರುದ್ಧೋ ಲೋಕವೇದಯೋಃ।
ನ ಹ್ಯೇಕಾ ವಿದ್ಯತೇ ಪತ್ನೀ ಬಹೂನಾಂ ದ್ವಿಜಸತ್ತಮ ॥೭॥

ಲೋಕವೇದವಿರುದ್ಧವಾದ ಇದು ಅಧರ್ಮವೆಂದು ನನ್ನ ಅಭಿಪ್ರಾಯ. ಬ್ರಾಹ್ಮಣಶ್ರೇಷ್ಠರೇ, ಅನೇಕರಿಗೆ ಒಬ್ಬಳೇ ಪತ್ನಿಯಿರುವುದಿಲ್ಲ.

ನ ಚಾಪ್ಯಾಚರಿತಃ ಪೂರ್ವೈರಯಂ ಧರ್ಮೋ ಮಹಾತ್ಮಭಿಃ ।
ನ ಚ ಧರ್ಮೋಽಪ್ಯನೇಕಸ್ಥಶ್ಚರಿತವ್ಯಃ ಸನಾತನಃ ॥೮॥

ಈ ಮಾರ್ಗವು ಪೂರ್ವದ ಮಹಾನುಭಾವರಿಂದ ಧರ್ಮವೆಂದು ಆಚರಿಸಲ್ಪಟ್ಟಿಲ್ಲ. ಎಲ್ಲರೂ ಆಚರಿಸಬೇಕಾದ ಸನಾತನವಾದ ಧರ್ಮವು ಒಬ್ಬೊಬ್ಬರಿಗೆ ಒಂದೊಂದು ರೀತಿ ಇರುವುದಿಲ್ಲ.

ಅತೋ ನಾಹಂ ಕರೋಮ್ಯೇನಂ ವ್ಯವಸಾಯಂ ಸುತಾಂ ಪ್ರತಿ ।
ಧರ್ಮಸಂದೇಹಸಂದಿಗ್ಧಂ ಪ್ರತಿಭಾತೀಹ ಮಾಮಿದಮ್ ॥೯॥

ಆದ್ದರಿಂದ ನಾನು ನನ್ನ ಮಗಳ ವಿಷಯದಲ್ಲಿ ಅನೇಕರಿಗೆ ಕೊಡುವ ನಿರ್ಧಾರವನ್ನು ಮಾಡುವುದಿಲ್ಲ. ಈ ಧರ್ಮವು ಸಂದೇಹಗ್ರಸ್ತವಾದುದೆಂದು ನನಗೆ ತೋರುತ್ತದೆ.

ಧೃಷ್ಟದ್ಯುಮ್ನಃ

ಯವೀಯಸಃ ಕಥಂ ಭಾರ್ಯಾಂ ಜ್ಯೇಷ್ಠೋ ಭ್ರಾತಾ ದ್ವಿಜರ್ಷಭ ।
ಬ್ರಹ್ಮನ್ ಸಮಭಿವರ್ತೇತ ಸದ್ವೃತ್ತಃ ಸಂಸ್ತಪೋಧನ ॥೧೦॥

ದ್ವಿಜಶ್ರೇಷ್ಠನೇ, ತಮ್ಮನ ಭಾರ್ಯೆಯನ್ನು ಸದ್ವೃತ್ತನಾದ ಅಣ್ಣನು ಹೇಗೆ ಸ್ವೀಕರಿಸಬಹುದು ?

ನ ತು ಧರ್ಮಸ್ಯ ಸೂಕ್ಷ್ಮತ್ವಾದ್ ಗತಿಂ ವೇದ್ಮಿ ಕಥಂಚನ ।
ಅಧರ್ಮೋ ಧರ್ಮ ಇತಿ ವಾ ವ್ಯವಸಾಯೋ ನ ಶಕ್ಯತೇ ॥೧೧॥

ಕರ್ತುಮಸ್ಮದ್ವಿಧೈರ್ಬ್ರಹ್ಮನ್ನತೋ ನ ವ್ಯವಸಾಮ್ಯಹಮ್ ।
ಪಂಚಾನಾಂ ಮಹಿಷೀ ಕೃಷ್ಣಾ ಭವತ್ವಿತಿ ಕಥಂಚನ ॥೧೨॥

ಧರ್ಮದ ಗತಿಯು ಸೂಕ್ಷ್ಮವಾದುದರಿಂದ ನನಗೆ ಏನೂ ತಿಳಿಯುತ್ತಿಲ್ಲ. ಇದು ಅಧರ್ಮವೆಂದಾಗಲೀ ಅಥವಾ ಧರ್ಮವೆಂದಾಗಲೀ ನಮ್ಮಂತಹವರು ನಿರ್ಧರಿಸಲು ಸಾಧ್ಯವಿಲ್ಲ. ಆದ್ದರಿಂದ ದ್ರೌಪದಿಯು ಐದುಜನರಿಗೂ ರಾಣಿಯಾಗಲಿ ಎಂಬ ನಿರ್ಧಾರವನ್ನು ನಾನು ತೆಗೆದುಕೊಳ್ಳುವುದಿಲ್ಲ.

ಯುಧಿಷ್ಠಿರಃ

ನ ಮೇ ವಾಗನೃತಂ ಪ್ರಾಹ ನಾಧರ್ಮೇ ಧೀಯತೇ ಮತಿಃ ।
ವರ್ತತೇ ಚ ಮನೋ ಮೇಽತ್ರ ನೈಷೋಽಧರ್ಮಃ ಕಥಂಚನ ॥೧೩॥

ನಾನು ಎಂದೂ ಸುಳ್ಳು ಮಾತನಾಡಿಲ್ಲ. ನನ್ನ ಮನಸ್ಸು ಎಂದೂ ಅಧರ್ಮವನ್ನು ಯೋಚಿಸುವುದಿಲ್ಲ. ನನ್ನ ಮನಸ್ಸಿಗೆ ಹೀಗೆಯೇ ಮಾಡಬೇಕೆಂದು ತೋರುತ್ತದೆ. ಆದ್ದರಿಂದ ಇದು ಅಧರ್ಮವಲ್ಲ.

ಶ್ರೂಯತೇ ಹಿ ಪುರಾಣೇಷು ಜಟಿಲೋ ನಾಮ ಗೌತಮಃ ।
ತಸ್ಯ ಪುತ್ರೀ ಮಹಾಪ್ರಾಜ್ಞೀ ಗೌತಮಸ್ಯ ಯಶಸ್ವಿನೀ ।
ಋಷೀನಧ್ಯಾಸಿತವತೀ ಸಪ್ತ ಧರ್ಮಭೃತಾಂ ವರಾನ್ ॥೧೪॥

ಪುರಾಣಗಳಲ್ಲಿ ಗೌತಮಗೋತ್ರದ ಜಟಿಲ ಎಂಬ ಬ್ರಾಹ್ಮಣನ ಕಥೆಯು ಕೇಳಿಬರುತ್ತದೆ. ಆ ಗೌತಮರ ಮೇಧಾವಿನಿಯೂ, ಯಶಸ್ವಿನಿಯೂ ಆದ ಪುತ್ರಿಯು ಧರ್ಮಭೃತರಲ್ಲಿ ಶ್ರೇಷ್ಠರಾದ ಏಳು ಋಷಿಗಳನ್ನು ವಿವಾಹವಾದಳೆಂದು ನಾವು ಕೇಳುತ್ತೇವೆ.

ತಥೈವ ಮುನಿಜಾ ವಾರ್ಕ್ಷೀ ತಪೋಭಿರ್ಭಾವಿತಾನ್ ಮುನೀನ್ ।
ದಶಾಭಜದೃಷೀನ್ ಭ್ರಾತೄ ನೇಕನಾಮ್ನಃ ಪ್ರಚೇತಸಃ ॥೧೫॥

ಹಾಗೆಯೇ ಕಂಡು ಋಷಿಯ ಮಗಳಾದ ವಾರ್ಷ್ಣಿಯು ತಪಸ್ಸಿನಿಂದ ಪರಿಶುದ್ಧಾಂತಃಕರಣರಾದ ಒಂದೇ ನಾಮವನ್ನು ಧರಿಸಿದ ಅಣ್ಣ- ತಮ್ಮಂದಿರಾದ ಹತ್ತುಜನ ಪ್ರಚೇತಸರನ್ನು ವಿವಾಹವಾದದ್ದನ್ನು ಕೇಳುತ್ತೇವೆ.

ಗುರೋಶ್ಚ ವಚನಂ ಪ್ರಾಹುರ್ಧರ್ಮ್ಯಂ ಧರ್ಮಭೃತಾಂ ವರಾಃ ।
ಗುರೂಣಾಂ ಚೈವ ಸರ್ವೇಷಾಂ ಜನಿತ್ರೀ ಪರಮೋ ಗುರುಃ ॥೧೬॥

ಸಾ ಚಾಪ್ಯುಕ್ತವತೀ ಚಾಸ್ಮಾನ್ ಭೈಕ್ಷವದ್ ಭುಜ್ಯತಾಮಿತಿ ।
ತಸ್ಮಾದೇತದಹಂ ಮನ್ಯೇ ಪರಂ ಧರ್ಮಂ ದ್ವಿಜೋತ್ತಮ ॥೧೭॥

ಧರ್ಮವನ್ನು ಧರಿಸಿದವರಲ್ಲಿ ಶ್ರೇಷ್ಠರಾದವರು ಗುರುಗಳ ಮಾತನ್ನು ಧರ್ಮವೆಂದು ಹೇಳುತ್ತಾರೆ. ಎಲ್ಲಾ ಗುರುಗಳಿಗಿಂತಲೂ ಶ್ರೇಷ್ಠವಾದ ಗುರುವೆಂದರೆ ತಾಯಿಯೇ. ಅವಳೂ ಸಹ ಭೈಕ್ಷದಂತೆ ಎಲ್ಲರೂ ಸ್ವೀಕರಿಸಿ ಎಂದು ಹೇಳಿದ್ದಾಳೆ. ಬ್ರಾಹ್ಮಣೋತ್ತಮರೇ, ಆದ್ದರಿಂದ ನಾನು ಇದನ್ನು ಶ್ರೇಷ್ಠವಾದ ಧರ್ಮವೆಂದು ಭಾವಿಸುತ್ತೇನೆ.

ಕುಂತೀ

ಏವಮೇತದ್ ಯಥಾSSಹಾಹಂ ಧರ್ಮಚಾರೀ ಯುಧಿಷ್ಠಿರಃ ।
ಭುಜ್ಯತಾಂ ಭ್ರಾತೃಭಿಃ ಸಾರ್ಧಮಿತ್ಯರ್ಜುನಮಚೋದಯಮ್ ।
ಅನೃತಾನ್ಮೇ ಭಯಂ ತೀವ್ರಂ ಮುಚ್ಯೇSಹಮನೃತಾತ್ ಕಥಮ್ ॥೧೮॥

ಧರ್ಮಚಾರಿಯಾದ ಯುಧಿಷ್ಠಿರನು ನಾನು ಹೇಳಿದಂತೆಯೇ ಮಾತನಾಡಿದ್ದಾನೆ. ನಾನು ಅರ್ಜುನನನ್ನು ಕುರಿತು ಎಲ್ಲಾ ಸಹೋದರರೂ ಜೊತೆಯಲ್ಲಿ ಭುಂಜಿಸಿ ಎಂದು ಹೇಳಿದೆ. ನಾನು ಅನೃತವಚನದ ಕಾರಣದಿಂದ ತೀವ್ರವಾಗಿ ಭಯಪಡುತ್ತಿದ್ದೇನೆ. ಈ ಅನೃತದಿಂದ ನಾನು ಪಾರಾಗುವ ಬಗೆ ಹೇಗೆ?

ವ್ಯಾಸಃ

ಅನೃತಾನ್ಮೋಕ್ಷ್ಯಸೇ ಭದ್ರೇ ಧರ್ಮಶ್ಚೈಷ ಸನಾತನಃ ।
ನನು ವಕ್ಷ್ಯಾಮಿ ಸರ್ವೇಷಾಂ ಪಾಂಚಾಲ ಶೃಣು ಮೇ ವಚಃ ॥೧೯॥

ಭದ್ರೇ, ನೀನು ಅನೃತದಿಂದ ಮುಕ್ತಳಾಗುವಿ. ಇದು ಸನಾತನವಾದ ಧರ್ಮ. ನಾನು ಎಲ್ಲರನ್ನೂ ಕುರಿತು ಹೇಳುತ್ತಿದ್ದೇನೆ. ದ್ರುಪದರಾಜನೇ ನನ್ನ ಮಾತನ್ನು ಕೇಳು.

ಯಥಾऽಯಂ ವಿಹಿತೋ ಧರ್ಮೋ ಯತಶ್ಚಾಯಂ ಸನಾತನಃ ।
ಯಥಾ ಚಾಪ್ಯಾಹ ಕೌಂತೇಯಸ್ತಥಾ ಧರ್ಮೋ ನ ಸಂಶಯಃ ॥೨೦॥

ಇದು ಹೇಗೆ ಧರ್ಮ, ಇದು ಯಾವ ರೀತಿಯಲ್ಲಿ ಸನಾತನ ಎಂದು ಹೇಳುತ್ತೇನೆ. ಧರ್ಮರಾಜನು ಹೇಳಿದಂತೆ ಇದು ಧರ್ಮವೇ ಸರಿ, ಇದರಲ್ಲಿ ಸಂಶಯವಿಲ್ಲ.

ವೈಶಂಪಾಯನಃ

ತತ ಉತ್ಥಾಯ ಭಗವಾನ್ ಕೃಷ್ಣದ್ವೈಪಾಯನಃ ಪ್ರಭುಃ ।
ಕರೇ ಗೃಹೀತ್ವಾ ರಾಜಾನಂ ರಾಜವೇಶ್ಮ ಸಮಾವಿಶತ್ ॥೨೧॥

ಅನಂತರ, ಪೂಜ್ಯರಾದ, ಪ್ರಭುಗಳಾದ ದ್ವೈಪಾಯನರು ದ್ರುಪದರಾಜನನ್ನು ಕೈಯಲ್ಲಿ ಹಿಡಿದುಕೊಂಡು ಅರಮನೆಯ ಒಳಭಾಗಕ್ಕೆ ಪ್ರವೇಶಿಸಿದರು.

ಪಾಂಡವಾಸ್ತ್ವಥ ಕುಂತೀ ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ನಾನಾಕಥಾಭಿಸ್ತೇ ಸರ್ವೇ ಪ್ರತೀಕ್ಷಂತೇ ಸ್ಮ ತಾವುಭೌ ॥೨೨॥

ಹೊರಗಡೆಯಲ್ಲಿ ಪಾಂಡವರೂ, ಕುಂತಿಯೂ, ದ್ರುಪದನ ಮಗನಾದ ಧೃಷ್ಟದ್ಯುಮ್ನನೂ ಅನೇಕ ಮಾತುಗಳನ್ನು ಆಡುತ್ತಾ ಅವರಿಬ್ಬರನ್ನು ನಿರೀಕ್ಷಿಸುತ್ತಾ ಕುಳಿತರು.

ತತೋ ದ್ವೈಪಾಯನಸ್ತಸ್ಯೈ ನರೇಂದ್ರಾಯ ವಿಶಾಂಪತೇ ।
ಆಚಖ್ಯೌ ತದ್ಯಥಾ ಧರ್ಮೋ ಬಹೂನಾಮೇಕಪತ್ನಿತಾ ॥೨೩॥

ರಾಜನೇ, ಅನಂತರ ದ್ವೈಪಾಯನರು ದ್ರುಪದನಿಗೆ ಅನೇಕರಿಗೆ ಒಬ್ಬಳೇ ಪತ್ನೀತ್ವವು ಹೇಗೆ ಧರ್ಮವಾಗುತ್ತದೆ ಎಂದು ವಿವರಿಸಿದರು.

ಯಥಾ ದೇವಾ ದದುಶ್ಚೈವ ರಾಜಪುತ್ರ್ಯಾಃ ಪುರಾ ವರಮ್ ।
ಧರ್ಮಾದ್ಯಾಸ್ತಪಸಾ ತುಷ್ಟಾಃ ಪಂಚಪತ್ನೀತ್ವಮೀಶ್ವರಾಃ ॥೨೪॥

ಹಿಂದೆ ರಾಜಪುತ್ರಿಯ ತಪಸ್ಸಿನಿಂದ ತುಷ್ಟರಾದ ಧರ್ಮಾದಿ ದೇವತೆಗಳು ಅವಳಿಗೆ ಪಂಚಪತ್ನೀತ್ವವನ್ನು ಹೇಗೆ ಕೊಟ್ಟರು ಎಂಬುದನ್ನು ವಿವರಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಪಂಚನವತ್ಯಧಿಕಶತತಮೋऽಧ್ಯಾಯಃ ॥
॥ ಇತಿ ವೈವಾಹಿಕಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ ನೂರತೊಂಭತ್ತೈದನೆಯ ಅಧ್ಯಾಯ ಮುಗಿಯಿತು.

★★★★★

ನೂರ ತೊಂಭತ್ತಾರನೆಯ ಅಧ್ಯಾಯ

(ವ್ಯಾಸರಿಂದ ಪಂಚಕನ್ಯೋಪಾಖ್ಯಾನ ಪ್ರಾರಂಭ. ಅದರಲ್ಲಿ ನಾಳಾಯನಿಯ ಜನ್ಮ. ಅನಂತರ ಪತಿಸೇವೆಯಿಂದ ನಾಳಾಯನಿಯ ವರಸ್ವೀಕಾರ. ಅನಂತರ ಇಂದ್ರಸೇನೆಯ ಜನ್ಮ. ರುದ್ರದೇವರಿಂದ ಪಂಚಪತ್ನೀತ್ವವರಸ್ವೀಕಾರ.)

ವ್ಯಾಸಃ

ಮಾ ಭೂದ್ ರಾಜಂಸ್ತವ ತಾಪೋ ಮನಸ್ಸ್ಥಃ
ಪಂಚಾನಾಂ ಭಾರ್ಯಾ ದುಹಿತಾ ಮಮೇತಿ ।
ಮಾತುರೇಷಾ ಪಾರ್ಥಿವ ಪ್ರಾರ್ಥಿತಾ ಸ್ಯಾತ್
ಪಂಚಾನಾಂ ಭಾರ್ಯಾ ದುಹಿತಾ ಮಮೇತಿ ॥೧॥

ರಾಜನೇ, ನನ್ನ ಮಗಳು ಐವರ ಪತ್ನಿಯೆಂದು ಮನಸ್ಸಿನಲ್ಲಿ ಸಂತಾಪ ಪಡಬೇಡ. ರಾಜನೇ, ಈ ದ್ರೌಪದಿಯ ತಾಯಿಯು, ನನ್ನ ಮಗಳು ಐವರ ಪತ್ನಿಯಾಗಬೇಕೆಂದು ಪ್ರಾರ್ಥಿಸಿದ್ದಳು.

ಯಾಜೋಪಯಾಜೌ ಧರ್ಮಘೃಣೇ ತಪೋಭ್ಯಾಂ
ತೌ ಚಕ್ರತುಃ ಪಂಚಪತಿತ್ವಮಸ್ಯಾಃ ।
ಸಾ ಧರ್ಮತಃ ಪಾಂಡುಸುತೈರವಾಪ್ತಾ
ಭಾರ್ಯಾ ಕೃಷ್ಣಾ ಮೋದತಾಂ ವೈ ಕುಲಂ ತೇ ॥೨॥

ಧರ್ಮಿಷ್ಠರು ಮತ್ತು ಕೃಪಾಳುಗಳಾದ ಯಾಜೋಪಯಾಜರು ತಮ್ಮ ತಪಸ್ಸಿನ ಬಲದಿಂದ ಇವಳಿಗೆ ಪಂಚಪತಿತ್ವವನ್ನು ತಂದುಕೊಟ್ಟರು. ಆ ಕೃಷ್ಣೆಯನ್ನು ಪಾಂಡವರು ಧರ್ಮದಿಂದಲೇ ಪಡೆದಿದ್ದಾರೆ. ನಿನ್ನ ಕುಲವು ಸಂತೋಷ ಪಡಲಿ.

ಲೋಕೇ ನಾನ್ಯೋ ನಾಥವಾಂಸ್ತ್ವದ್ವಿಶಿಷ್ಟಃ
ಸರ್ವಾರೀಣಾಮಪ್ರಧೃಷ್ಯೋಽಸಿ ರಾಜನ್ ।
ಭೂಯಸ್ತು ಮೇ ಶೃಣ್ವದಂ ತ್ವಂ ವಿಶೋಕೋ
ಯಥಾಗಮಂ ಪಂಚಪತಿತ್ವಮಸ್ಯಾಃ ॥೩॥

ಲೋಕದಲ್ಲಿ ನಿನಗಿಂತ ಶ್ರೇಷ್ಠನಾದ ಇನ್ನೊಬ್ಬ ನಾಥನಿಲ್ಲ. ರಾಜನೇ, ನೀನು ಯಾವ ಶತ್ರುಗಳೂ ಸೋಲಿಸಲು ಅಸಾಧ್ಯನಾಗಿದ್ದೀಯೆ. ಪುನಃ ಶೋಕವನ್ನು ಬಿಟ್ಟು ಇವಳಿಗೆ ಪಂಚಪತಿತ್ವವು ಹೇಗೆ ಉಂಟಾಯಿತು ಎಂಬ ವಿಷಯದಲ್ಲಿ ನಾನು ಹೇಳುವುದನ್ನು ಕೇಳು.

ಏಷಾ ನಾಳಾಯನೀ ಪೂರ್ವಂ ಮೌದ್ಗಲ್ಯಂ ಸ್ಥವಿರಂ ಪತಿಮ್ ।
ಆರಾಧಯಾಮಾಸ ತದಾ ಕುಷ್ಠಿನಂ ತಮನಿಂದಿತಾ ॥೪॥

ನಾಳಾಯನೀ ಎಂಬ ಹೆಸರಿನ ಇವಳು ಹಿಂದೆ ವೃದ್ಧರಾದ ಮೌದ್ಗಲ್ಯನನ್ನು ಪತಿಯನ್ನಾಗಿ ಪಡೆದಳು. ಅನಿಂದಿತಳಾದ ಇವಳು ಕುಷ್ಠರೋಗಗ್ರಸ್ತನಾದ ಅವನನ್ನು ಆರಾಧಿಸಿದಳು. (ಆಚಾರ್ಯರ ವಚನದಂತೆ ಮೌದ್ಗಲ್ಯ ಎಂಬ ಶಬ್ದಕ್ಕೆ ಮುದ್ಗಲ ಎಂದೇ ಅರ್ಥಮಾಡಬೇಕೆಂದು ತೋರುತ್ತದೆ.)

ತ್ವಗಸ್ಥಿಭೂತಂ ಕಟುಕಂ ಲೋಲಮೀರ್ಷ್ಯಂ ಸುಕೋಪನಮ್ ।
ಸುಗಂಧೇತರಗಂಧಾಢ್ಯಂ ವಲೀಪಲಿತಧಾರಿಣಮ್ ॥೫॥

ಸ್ಥವಿರಂ ವಿಕೃತಾಕಾರಂ ಶೀರ್ಯಮಾಣನಖಿತ್ವಚಮ್ ।
ಉಚ್ಛಿಷ್ಟಮುಪಭುಂಜಾನಾ ಪರ್ಯುಪಾಸ್ತೇ ಮಹಾವ್ರತಾ ॥೬॥

ಚರ್ಮ ಮತ್ತು ಅಸ್ಥಿಗಳನ್ನು ಮಾತ್ರ ಶರೀರವಾಗಿವುಳ್ಳ, ಚುಚ್ಚಿ ಮಾತನಾಡುವ ಸ್ವಭಾವವುಳ್ಳ, ವಿಷಯಾಸಕ್ತನೂ, ಅಸೂಯಾಪರನೂ, ಶೀಘ್ರಕೋಪನನೂ ಆದ, ದುರ್ಗಂಧದಿಂದ ಕೂಡಿದ, ಸುಕ್ಕು ಮತ್ತು ನೆರೆತ ಕೂದಲುಗಳಿಂದ ಕೂಡಿದ,

ವಿರೂಪನಾದ, ನಖ ಮತ್ತು ಚರ್ಮಗಳು ಉದುರಿಹೋಗುತ್ತಿದ್ದ ವೃದ್ಧನಾದ ಅವನನ್ನು ಮಹಾವ್ರತವನ್ನು ಧರಿಸಿದ ಅವಳು ಅವನ ಉಚ್ಛಿಷ್ಟವನ್ನು ಭೋಜನ ಮಾಡುತ್ತಾ ಚೆನ್ನಾಗಿ ಉಪಾಸನೆ ಮಾಡಿದಳು.

ತತಃ ಕದಾಚಿದಂಗುಷ್ಠೋ ಭುಂಜಾನಸ್ಯ ವ್ಯಶೀರ್ಯತ ।
ಅನ್ನಾದುದ್ಧೃತ್ಯ ತಚ್ಚಾನ್ನಮುಪಭುಂಕ್ತೇSವಿಶಂಕಿತಾ ॥೭॥

ಅನಂತರ ಒಮ್ಮೆ ಮುದ್ಗಲನು ಭೋಜನ ಮಾಡುವಾಗ ಅವನ ಅಂಗುಷ್ಠವು ಭೋಜನಪಾತ್ರದಲ್ಲಿ ಬಿದ್ದುಹೋಯಿತು. ಅವಳು ಏನೂ ಬೇಸರಿಸದೆ ಅಂಗುಷ್ಠವನ್ನು ತೆಗೆದಿಟ್ಟು ಅದೇ ಅನ್ನವನ್ನು ಭುಂಜಿಸಿದಳು.

ತೇನ ತಸ್ಯಾಃ ಪ್ರಸನ್ನೇನ ಕಾಮವ್ಯಾಹಾರಿಣಾ ತದಾ ।
ವರಂ ವೃಣೀಷ್ವೇತ್ಯಸಕೃದುಕ್ತಾ ವವ್ರೇ ವರಂ ತದಾ ॥೮॥

ಅದರಿಂದ ಪ್ರಸನ್ನನಾದ ಮುದ್ಗಲನು ಅವಳ ಆಸೆಯನ್ನು ಪೂರೈಸುವ ಮಾತುಗಳನ್ನಾಡುತ್ತಾ ಬೇಕಾದ ವರವನ್ನು ಕೇಳು ಎಂದು ಅನೇಕ ಬಾರಿ ಹೇಳಿದಾಗ ಅವಳು ಅವರನ್ನು ಬೇಡಿದಳು.

ಮೌದ್ಗಲ್ಯಃ

ನಾಸ್ಮಿ ವೃದ್ಧೋ ನ ಕಟುಕೋ ನೇರ್ಷ್ಯುರ್ನೈವಾತಿಕೋಪನಃ ।
ನ ಚ ದುರ್ಗಂಧವದನೋ ನ ಕೃಶೋ ನ ಚ ಲೋಲುಪಃ ॥೯॥

ನಾನು ಮುದುಕನಲ್ಲ, ಕಟುಕನೂ ಅಲ್ಲ, ಅಸೂಯಾಪರನೂ ಅಲ್ಲ, ಕೋಪಶೀಲನೂ ಅಲ್ಲ, ದುರ್ಗಂಧಯುಕ್ತನಾಗಿಲ್ಲ, ಕೃಶನಲ್ಲ, ಇಂದ್ರಿಯಲೋಲುಪನೂ ಅಲ್ಲ.

ಕಥಂ ತ್ವಾಂ ರಮಯಾಮೀಹ ಕಥಂ ತ್ವಾಂ ವಾಸಯಾಮ್ಯಹಮ್ ।
ವದ ಕಲ್ಯಾಣಿ ಭದ್ರಂ ತೇ ಯಥಾ ತ್ವಂ ಮನಸೇಚ್ಛಸಿ ॥೧೦॥

ನಿನ್ನನ್ನು ಎಂತಹ ಮನೆಯಲ್ಲಿ ಇರುವಂತೆ ಮಾಡಬೇಕು, ಹೇಗೆ ನಿನ್ನನ್ನು ಸಂತೋಷ ಪಡಿಸಬೇಕು ಎಂದು ಹೇಳು. ಕಲ್ಯಾಣಿಯೇ, ನಿನಗೆ ಮಂಗಳವಾಗಲಿ. ನಿನ್ನ ಮನಸ್ಸಿನ ಆಸೆಯಿದ್ದಂತೆ ನನಗೆ ಹೇಳು.

ವ್ಯಾಸಃ

ತದಾ ಸಾऽಕ್ಲಿಷ್ಟಕರ್ಮಾಣಂ ವರದಂ ಸರ್ವಕಾಮದಮ್ ।
ಭರ್ತಾರಮನವದ್ಯಾಂಗೀ ಪ್ರಸನ್ನಂ ಪ್ರತ್ಯುವಾಚ ಹ ॥೧೧॥

ಆಗ ಆ ಅನವದ್ಯಾಂಗಿಯು ಎಲ್ಲಾ ಕಾಮಗಳನ್ನು ಕೊಡುವ ಶಕ್ತಿಯನ್ನು ಹೊಂದಿದ ವರವನ್ನು ಕೊಡುವಂತಹ, ಎಲ್ಲ ಕಾರ್ಯಗಳನ್ನೂ ಅನಾಯಾಸವಾಗಿ ಮಾಡುವಂತಹ, ತನ್ನ ಮೇಲೆ ಪ್ರಸನ್ನನಾದ ತನ್ನ ಪತಿಯನ್ನು ಕುರಿತು ಮಾತನಾಡಿದಳು.

ನಾಳಾಯನೀ

ಪಂಚಧಾ ಮಾಂ ವಿಭಕ್ತಾತ್ಮಾ ಭಗವಂಲ್ಲೋಕವಿಶ್ರುತ ।
ರಮಯ ತ್ವಮಚಿಂತ್ಯಾತ್ಮನ್ ಪುನಶ್ಚೈಕತ್ವಮಾಸ್ಥಿತಃ ॥೧೨॥

ಪೂಜ್ಯನೇ, ಲೋಕಪ್ರಖ್ಯಾತನೇ, ಅಚಿಂತ್ಯಶಕ್ತಿಯುಳ್ಳವನೇ, ನೀನು ಐದು ದೇಹಗಳನ್ನು ತೆಗೆದುಕೊಂಡು ನನ್ನನ್ನು ರಮಿಸಿ ಪುನಃ ಒಂದೇ ದೇಹವನ್ನು ಸ್ವೀಕರಿಸಿ ನನ್ನನ್ನು ರಮಿಸಬೇಕು.

ವ್ಯಾಸಃ

ತಾಂ ತಥೇತ್ಯಬ್ರವೀದ್ ಧೀಮಾನ್ ಬ್ರಹ್ಮರ್ಷಿರ್ವೈ ಮಹಾತಪಾಃ ।
ಸ ಪಂಚಧಾ ತು ಭೂತಾಂ ಚ ರಮಯಾಮಾಸ ಸರ್ವಶಃ ॥೧೩॥

ನಾಳಾಯನೀಂ ಸುಕೇಶಾಂತಾಂ ಮೌದ್ಗಲ್ಯಶ್ಚಾರುಹಾಸಿನೀಮ್ ।
ಆಶ್ರಮೇಷ್ವಧಿಕಂ ಚಾಪಿ ಪೂಜ್ಯಮಾನೋ ಮಹರ್ಷಿಭಿಃ ॥೧೪॥

ಬ್ರಹ್ಮರ್ಷಿಯೂ, ಮಹಾತಪಸ್ವಿಯೂ ಮತ್ತು ಮೇಧಾವಿಯೂ ಆದ ಆ ಬ್ರಹ್ಮರ್ಷಿಯು ಹಾಗೆಯೇ ಆಗಲಿ ಎಂದು ಹೇಳಿದನು. ಅವನು ಐದು ರೂಪವನ್ನು ತೆಗೆದುಕೊಂಡು ಅವಳನ್ನು ರಮಿಸಿದನು. ಮೌದ್ಗಲ್ಯನು ಸುಂದರ ಮಂದಸ್ಮಿತವುಳ್ಳ ಸುಂದರವಾದ ಚೈತಲೆಯುಳ್ಳ ನಾಳಾಯನಿಯನ್ನು ರಮಿಸಿದನು.

ವಿಚಚಾರ ಯಥಾಕಾಮಂ ಕಾಮರೂಪವಪುಃ ಪುನಃ ॥೧೫॥

ಅವನು ತನ್ನ ಮನಸ್ಸಿಗೆ ಬಂದಂತೆ ಬೇರೆ ರೂಪಗಳನ್ನು ಧರಿಸಿ ಆಶ್ರಮಗಳಲ್ಲಿ ಮಹರ್ಷಿಗಳಿಂದ ಅಧಿಕವಾಗಿ ಪೂಜಿಸಲ್ಪಟ್ಟು ಸಂಚರಿಸಿದನು.

ಯದಾ ಯಯೌ ದಿವಂ ಚಾಪಿ ತತ್ರ ದೇವರ್ಷಿಭಿಃ ಸಹ ।
ಸ್ವಧಾಮೃತಸಮಾಹಾರಃ ಸುರಲೋಕೇ ಚಚಾರ ಹ ॥೧೬॥

ಅವನು ದೇವಲೋಕಕ್ಕೆ ಹೋದಾಗ ದೇವತೆಗಳ ಮತ್ತು ಋಷಿಗಳ ಜೊತೆಯಲ್ಲಿ ಪಿತ್ರನ್ನವಾದ ಸ್ವಧೆಗೆ ಸಮಾನವಾದ, ದೇವತಾನ್ನವಾದ ಅಮೃತಕ್ಕೆ ಸಮಾನವಾದ, ಆಹಾರವನ್ನು ಸೇವಿಸುತ್ತಾ ದೇವಲೋಕದಲ್ಲಿ ಸಂಚರಿಸಿದನು.

ಪೂಜ್ಯಮಾನಸ್ತಥಾ ಶಚ್ಯಾ ಶಕ್ರಸ್ಯ ಭವನೇಷ್ವಪಿ ।
ಮಹೇಂದ್ರಸೇನಯಾ ಸಾರ್ಧಂ ಪರ್ಯಧಾವದ್ ರಿರಂಸಯಾ ॥೧೭॥

ಇಂದ್ರನ ಭವನದಲ್ಲಿ ಶಚಿಯಿಂದ ಪೂಜಿಸಲ್ಪಟ್ಟು ಇಂದ್ರನ ದೊಡ್ಡ ಸೈನ್ಯದ ಜೊತೆಯಲ್ಲಿ ಸಂತೋಷಪಡುವ ಇಚ್ಛೆಯಿಂದ ತಿರುಗಾಡಿದನು.

ಸೂರ್ಯಸ್ಯ ಚ ರಥಂ ದಿವ್ಯಮಾರುಹ್ಯ ಭಗವಾನ್ ಪ್ರಭುಃ ।
ಪರ್ಯುಪೇತ್ಯ ಪುನರ್ಮೇರುಂ ಮೇರೌ ವಾಸಮರೋಚಯತ್ ॥

ಪೂಜ್ಯನಾದ ಮತ್ತು ಸಮರ್ಥನಾದ ಅವನು ಸೂರ್ಯನ ದಿವ್ಯವಾದ ರಥವನ್ನು ಏರಿ ಮೇರುಪರ್ವತಕ್ಕೆ ಪ್ರದಕ್ಷಿಣೆಯನ್ನು ಮಾಡಿ ಪುನಃ ಮೇರುಪರ್ವತದಲ್ಲಿ ವಾಸಮಾಡಲು ಇಚ್ಛಿಸಿದನು.

ಆಕಾಶಗಂಗಾಮಾಪ್ಲುತ್ಯ ತಯಾ ಸಹ ತಪೋನಿಧಿಃ ।
ಅಂಶುಜಾಲೇಷು ಚಂದ್ರಸ್ಯ ಉವಾಸ ಚ ಯಥಾऽನಿಲಃ ॥೧೯॥

ತಪೋನಿಧಿಯಾದ ಅವನು ತನ್ನ ಪತ್ನಿಯ ಜೊತೆಯಲ್ಲಿ ಆಕಾಶಗಂಗೆಯಲ್ಲಿ ಸ್ನಾನವನ್ನು ಮಾಡಿ ವಾಯುವಿನಂತೆ ಚಂದ್ರನ ಕಿರಣಸಮೂಹಗಳಲ್ಲಿ ವಾಸಿಸಿದನು.

ಗಿರಿರೂಪಂ ಯಥಾ ದಧ್ರೇ ಸ ಮಹರ್ಷಿಸ್ತದಾ ಪುನಃ ।
ತತ್ಪ್ರಭಾವೇನ ಸಾ ತಸ್ಯ ಮಧ್ಯೇ ಜಜ್ಞೇ ಮಹಾನದೀ ॥೨೦॥

ವ್ಯಾಸಃ

ತದಾ ಸಾऽಕ್ಲಿಷ್ಟಕರ್ಮಾಣಂ ವರದಂ ಸರ್ವಕಾಮದಮ್ ।
ಭರ್ತಾರಮನವದ್ಯಾಂಗೀ ಪ್ರಸನ್ನಂ ಪ್ರತ್ಯುವಾಚ ಹ ॥೧೧॥

ಆಗ ಆ ಅನವದ್ಯಾಂಗಿಯು ಎಲ್ಲಾ ಕಾಮಗಳನ್ನು ಕೊಡುವ ಶಕ್ತಿಯನ್ನು ಹೊಂದಿದ ವರವನ್ನು ಕೊಡುವಂತಹ, ಎಲ್ಲ ಕಾರ್ಯಗಳನ್ನೂ ಅನಾಯಾಸವಾಗಿ ಮಾಡುವಂತಹ, ತನ್ನ ಮೇಲೆ ಪ್ರಸನ್ನನಾದ ತನ್ನ ಪತಿಯನ್ನು ಕುರಿತು ಮಾತನಾಡಿದಳು.

ನಾಳಾಯನೀ

ಪಂಚಧಾ ಮಾಂ ವಿಭಕ್ತಾತ್ಮಾ ಭಗವಂಲ್ಲೋಕವಿಶ್ರುತ ।
ರಮಯ ತ್ವಮಚಿಂತ್ಯಾತ್ಮನ್ ಪುನಶ್ಚೈಕತ್ವಮಾಸ್ಥಿತಃ ॥೧೨॥

ಪೂಜ್ಯನೇ, ಲೋಕಪ್ರಖ್ಯಾತನೇ, ಅಚಿಂತ್ಯಶಕ್ತಿಯುಳ್ಳವನೇ, ನೀನು ಐದು ದೇಹಗಳನ್ನು ತೆಗೆದುಕೊಂಡು ನನ್ನನ್ನು ರಮಿಸಿ ಪುನಃ ಒಂದೇ ದೇಹವನ್ನು ಸ್ವೀಕರಿಸಿ ನನ್ನನ್ನು ರಮಿಸಬೇಕು.

ವ್ಯಾಸಃ

ತಾಂ ತಥೇತ್ಯಬ್ರವೀದ್ ಧೀಮಾನ್ ಬ್ರಹ್ಮರ್ಷಿರ್ವೈ ಮಹಾತಪಾಃ ।
ಸ ಪಂಚಧಾ ತು ಭೂತಾಂ ಚ ರಮಯಾಮಾಸ ಸರ್ವಶಃ ॥೧೩॥

ನಾಳಾಯನೀಂ ಸುಕೇಶಾಂತಾಂ ಮೌದ್ಗಲ್ಯಶ್ಚಾರುಹಾಸಿನೀಮ್ ।
ಆಶ್ರಮೇಷ್ವಧಿಕಂ ಚಾಪಿ ಪೂಜ್ಯಮಾನೋ ಮಹರ್ಷಿಭಿಃ ॥೧೪॥

ಬ್ರಹ್ಮರ್ಷಿಯೂ, ಮಹಾತಪಸ್ವಿಯೂ ಮತ್ತು ಮೇಧಾವಿಯೂ ಆದ ಆ ಬ್ರಹ್ಮರ್ಷಿಯು ಹಾಗೆಯೇ ಆಗಲಿ ಎಂದು ಹೇಳಿದನು. ಅವನು ಐದು ರೂಪವನ್ನು ತೆಗೆದುಕೊಂಡು ಅವಳನ್ನು ರಮಿಸಿದನು. ಮೌದ್ಗಲ್ಯನು ಸುಂದರ ಮಂದಸ್ಮಿತವುಳ್ಳ ಸುಂದರವಾದ ಚೈತಲೆಯುಳ್ಳ ನಾಳಾಯನಿಯನ್ನು ರಮಿಸಿದನು.

ವಿಚಚಾರ ಯಥಾಕಾಮಂ ಕಾಮರೂಪವಪುಃ ಪುನಃ ॥೧೫॥

ಅವನು ತನ್ನ ಮನಸ್ಸಿಗೆ ಬಂದಂತೆ ಬೇರೆ ರೂಪಗಳನ್ನು ಧರಿಸಿ ಆಶ್ರಮಗಳಲ್ಲಿ ಮಹರ್ಷಿಗಳಿಂದ ಅಧಿಕವಾಗಿ ಪೂಜಿಸಲ್ಪಟ್ಟು ಸಂಚರಿಸಿದನು.

ಯದಾ ಯಯೌ ದಿವಂ ಚಾಪಿ ತತ್ರ ದೇವರ್ಷಿಭಿಃ ಸಹ ।
ಸ್ವಧಾಮೃತಸಮಾಹಾರಃ ಸುರಲೋಕೇ ಚಚಾರ ಹ ॥೧೬॥

ಅವನು ದೇವಲೋಕಕ್ಕೆ ಹೋದಾಗ ದೇವತೆಗಳ ಮತ್ತು ಋಷಿಗಳ ಜೊತೆಯಲ್ಲಿ ಪಿತೃನ್ನವಾದ ಸ್ವಧೆಗೆ ಸಮಾನವಾದ, ದೇವತಾನ್ನವಾದ ಅಮೃತಕ್ಕೆ ಸಮಾನವಾದ, ಆಹಾರವನ್ನು ಸೇವಿಸುತ್ತಾ ದೇವಲೋಕದಲ್ಲಿ ಸಂಚರಿಸಿದನು.

ಪೂಜ್ಯಮಾನಸ್ತಥಾ ಶಚ್ಯಾ ಶಕ್ರಸ್ಯ ಭವನೇಷ್ವಪಿ ।
ಮಹೇಂದ್ರಸೇನಯಾ ಸಾರ್ಧಂ ಪರ್ಯಧಾವದ್ ರಿರಂಸಯಾ ॥೧೭॥

ಇಂದ್ರನ ಭವನದಲ್ಲಿ ಶಚಿಯಿಂದ ಪೂಜಿಸಲ್ಪಟ್ಟು ಇಂದ್ರನ ದೊಡ್ಡ ಸೈನ್ಯದ ಜೊತೆಯಲ್ಲಿ ಸಂತೋಷಪಡುವ ಇಚ್ಛೆಯಿಂದ ತಿರುಗಾಡಿದನು.

ಸೂರ್ಯಸ್ಯ ಚ ರಥಂ ದಿವ್ಯಮಾರುಹ್ಯ ಭಗವಾನ್ ಪ್ರಭುಃ ।
ಪರ್ಯುಪೇತ್ಯ ಪುನರ್ಮೇರುಂ ಮೇರೌ ವಾಸಮರೋಚಯತ್ ॥

ಪೂಜ್ಯನಾದ ಮತ್ತು ಸಮರ್ಥನಾದ ಅವನು ಸೂರ್ಯನ ದಿವ್ಯವಾದ ರಥವನ್ನು ಏರಿ ಮೇರುಪರ್ವತಕ್ಕೆ ಪ್ರದಕ್ಷಿಣೆಯನ್ನು ಮಾಡಿ ಪುನಃ ಮೇರುಪರ್ವತದಲ್ಲಿ ವಾಸಮಾಡಲು ಇಚ್ಛಿಸಿದನು.

ಆಕಾಶಗಂಗಾಮಾಪ್ಲುತ್ಯ ತಯಾ ಸಹ ತಪೋನಿಧಿಃ ।
ಅಂಶುಜಾಲೇಷು ಚಂದ್ರಸ್ಯ ಉವಾಸ ಚ ಯಥಾऽನಿಲಃ ॥೧೯॥

ತಪೋನಿಧಿಯಾದ ಅವನು ತನ್ನ ಪತ್ನಿಯ ಜೊತೆಯಲ್ಲಿ ಆಕಾಶಗಂಗೆಯಲ್ಲಿ ಸ್ನಾನವನ್ನು ಮಾಡಿ ವಾಯುವಿನಂತೆ ಚಂದ್ರನ ಕಿರಣಸಮೂಹಗಳಲ್ಲಿ ವಾಸಿಸಿದನು.

ಗಿರಿರೂಪಂ ಯಥಾ ದಧ್ರೇ ಸ ಮಹರ್ಷಿಸ್ತದಾ ಪುನಃ ।
ತತ್ಪ್ರಭಾವೇನ ಸಾ ತಸ್ಯ ಮಧ್ಯೇ ಜಜ್ಞೇ ಮಹಾನದೀ ॥೨೦॥

ಆ ಮಹರ್ಷಿಯು ಒಂದು ಪರ್ವತದ ರೂಪವನ್ನು ಧರಿಸಿದಾಗ ಮಹರ್ಷಿಯ ಪ್ರಭಾವದಿಂದ ಅವಳು ಪರ್ವತದ ಮಧ್ಯೆ ಒಂದು ಮಹಾನದಿಯಾಗಿ ಹರಿದಳು.

ಯದಾ ಪುಷ್ಪಾಕುಲಃ ಸಾಲಃ ಸಂಜಜ್ಞೇ ಮುನಿಸತ್ತಮಃ ।
ಲತಾತ್ವಮಥ ಸಂಪೇದೇ ತಮೇವಾಭ್ಯನುವೇಷ್ಟತೀ ॥೨೧॥

ಆ ಮುನಿಶ್ರೇಷ್ಠನು ಪುಷ್ಪಗಳು ತುಂಬಿದ ಸಾಲವೃಕ್ಷವಾದಾಗ ಅವಳು ಲತೆಯಾಗಿ ಅವನನ್ನೇ ಸುತ್ತಿಕೊಂಡಿರುತ್ತಿದ್ದಳು.

ಪುಪೋಷ ಚ ವಪುರ್ಯದ್ವತ್ ತಸ್ಯ ತಸ್ಯಾನುಗಂ ಪುನಃ ।
ಸಾ ಪುಪೋಷ ಸಮಂ ಭರ್ತುಃ ಸ್ಕಂಧೇನಾಪಿ ಚಚಾರ ಹ ।
ತತಸ್ತಸ್ಯ ಚ ತಸ್ಯಾಶ್ಚ ತುಲ್ಯಾ ಪ್ರೀತಿರವರ್ಧತ ॥೨೨॥

ಅವನು ಬೇರೆ ಬೇರೆ ಶರೀರಗಳನ್ನು ತೆಗೆದುಕೊಂಡು ಆ ಶರೀರಗಳನ್ನು ಪೋಷಿಸಿದಂತೆ ಅವಳೂ ಸಹ ಅದಕ್ಕೆ ಅನುಗುಣವಾದ ಶರೀರಗಳನ್ನು ತೆಗೆದುಕೊಂಡು ಅದನ್ನು ಪೋಷಿಸಿದಳು. ಅವಳು ಪತಿಯ ಹೆಗಲಿನ ಮೇಲೆ ಕುಳಿತುಕೊಂಡು ಸಂಚರಿಸಿದಳು. ಆಗ ಅವರಿಬ್ಬರಿಗೂ ಪರಸ್ಪರವಾಗಿ ಅತ್ಯಧಿಕವಾದ ಪ್ರೀತಿಯುಂಟಾಯಿತು.

ಯಥಾ ಹ ಭಗವಾಂಸ್ತಸ್ಯಾಃ ಪ್ರಸಾದಾದೃಷಿಸತ್ತಮಃ ।
ವಿಜಜ್ಞೇ ಚ ಸಾ ತತ್ರ ದೈವಯೋಗೇನ ಭಾಮಿನೀ ॥೨೩॥

ಆ ಋಷಿಸತ್ತಮನು ಹೇಳಿದಂತೆ ಅವನು ಒಂದೇ ಶರೀರವನ್ನು ತೆಗೆದುಕೊಂಡಾಗ ನಾಳಾಯನಿಯು ಅವನ ಅನುಗ್ರಹದಿಂದ ಮತ್ತು ದೈವಯೋಗದಿಂದ ಒಂದೇ ಶರೀರವನ್ನು ತೆಗೆದುಕೊಂಡು ಜನಿಸಿದಳು.

ಸ ಚ ತಾಂ ತಪಸಾ ದೇವೀಂ ದೈವಯೋಗಾತ್ ತು ವೈ ದ್ವಿಜಃ ।
ಏಕಪತ್ನೀಂ ಪುನರ್ಭೂತ್ವಾ ಸದೈವಾಗ್ರೇ ತಪಸ್ವಿನೀಮ್ ॥೨೪॥

ಆ ಬ್ರಾಹ್ಮಣನು ದೈವಯೋಗದಿಂದ ಮೊದಲಿನಿಂದಲೂ ತಪಸ್ವಿನಿಯಾದ ಅವಳನ್ನು ಪುನಃ ಪತ್ನಿಯಾಗಿ ಪಡೆದನು.

ಅರುಂಧತೀವ ಸೀತೇವ ಬಭೂವಾತಿಪತಿವ್ರತಾ ।
ದಮಯಂತ್ಯಾಶ್ಚ ಮಾತುಃ ಸಾ ವಿಶೇಷಮಧಿಕಂ ಯಯೌ ।
ಏತತ್ತಥ್ಯಂ ಮಹಾರಾಜ ಮಾ ಭೂದ್ ಬುದ್ಧಿರತೋಽನ್ಯಥಾ ॥೨೫॥

ಅವಳು ಅರುಂಧತಿಯಂತೆ, ಸೀತೆಯಂತೆ ಮಹಾಪತಿವ್ರತೆಯಾಗಿ ತಾಯಿಯಾದ ದಮಯಂತಿಯನ್ನೂ ಮೀರಿಸಿ ಅಧಿಕವಾಗಿ ಶೋಭಿಸಿದಳು. ಮಹಾರಾಜನೇ, ಇದು ಸತ್ಯವಾದ ವಿಷಯ. ನೀನು ಇದನ್ನು ಬೇರೆ ರೀತಿಯಲ್ಲಿ ತಿಳಿಯಬೇಡ.

ಏಷಾ ನಾಳಾಯನೀ ಜಜ್ಞೇ ದೈವಯೋಗೇನ ಕೇನಚಿತ್ ।
ರಾಜಂಸ್ತವಾತ್ಮಜಾ ಕೃಷ್ಣಾ ವೇದ್ಯಾಂ ತೇಜಸ್ವಿನೀ ಶುಭಾ ॥೨೬॥

ತಸ್ಮಿಂಸ್ತಸ್ಯಾ ಮನಃ ಸಕ್ತಂ ನ ಶಶಾಕ ಕದಾಚನ ।
ತಯಾ ಪ್ರಣಿಹಿತೋ ಹ್ಯಾತ್ಮಾ ತಸ್ಯಾಸ್ತಸ್ಮಿನ್ ದ್ವಿಜೋತ್ತಮೇ ॥೨೭॥

ಅದೇ ನಾಳಾಯನಿಯು ಯಾವುದೋ ದೈವಯೋಗದಿಂದ ನಿನ್ನ ಮಗಳಾಗಿ ವೇದಿಮಧ್ಯದಿಂದ ಮಂಗಳಸ್ವರೂಪಳೂ ತೇಜಸ್ವಿನಿಯೂ ಆಗಿ ಜನಿಸಿದ್ದಾಳೆ.

ಹಿಂದೆ ನಾಳಾಯನಿಯ ಮನಸ್ಸು ಆ ಮುದ್ಗಲನಲ್ಲಿ ಕಾಮದಿಂದ ಆಸಕ್ತವಾಗಿರಲಿಲ್ಲ. ಆಗ ಈ ರೀತಿಯಲ್ಲಿ ಅವಳು ತನ್ನ ದೇಹವನ್ನು ತನ್ನ ವ್ರತದ ಸಲುವಾಗಿ ದ್ವಿಜೋತ್ತಮನಿಗೆ ಅರ್ಪಿಸಿದ್ದಳು. ಆದರೆ ಪತಿಸೇವೆಯ ನಿಮಿತ್ತವಾಗಿ ಅವನ ದುರವಸ್ಥೆಯನ್ನು ಸಹಿಸಿಕೊಂಡು ಅವನನ್ನು ಸೇವಿಸಿದಳು. ಪತಿಯೆಂಬ ಕಾರಣದಿಂದ ಅವನನ್ನು ಸೇವಿಸಿದಳು. ಜುಗುಪ್ಸಿತ ದೇಹದಲ್ಲಿಯೂ ಪಾತಿವ್ರತ್ಯವನ್ನು ಬಿಡದಿದ್ದ ಅವಳು ಈಗಂತೂ ಪಾತಿವ್ರತ್ಯವನ್ನು ಎಂದೂ ತೊರೆಯುವುದಿಲ್ಲ. ಆ ದೇಹದಲ್ಲಿರುವ ತನ್ನ ತನ್ನ ಪತಿಗಳ ಜೊತೆಯಲ್ಲಿ ರಮಣ ಮಾಡುವಳು.

ದ್ರುಪದಃ

ಬ್ರೂಹಿ ತತ್ಕಾರಣಂ ಯೇನ ಬ್ರಹ್ಮನ್ ಜಾತಾ ತಪಸ್ವಿನೀ ।
ಸುತಾ ಮಮಾಧ್ವರೇ ಕೃಷ್ಣಾ ಸರ್ವವೇದವಿದಾಂ ವರ ॥೨೮॥

ಬ್ರಹ್ಮರ್ಷಿಗಳೇ, ಸರ್ವವೇದಜ್ಞರಲ್ಲಿ ಶ್ರೇಷ್ಠರಾದವರೇ, ಆ ತಪಸ್ವಿನಿಯು ನನ್ನ ಯಜ್ಞದಲ್ಲಿ ಮಗಳಾಗಿ ಜನಿಸುವುದಕ್ಕೆ ಏನು ಕಾರಣ ಎಂದು ತಿಳಿಸಿ.

ವ್ಯಾಸಃ

ಶೃಣು ರಾಜನ್ ಯಥಾ ಹ್ಯಸ್ಯಾ ದತ್ತೋ ರುದ್ರೇಣ ವೈ ವರಃ ।
ಯದರ್ಥಂ ಚೈವ ಸಂಭೂತಾ ತವ ಯಜ್ಞೇ ಯಶಸ್ವಿನೀ ।
ಹಂತ ತೇ ಕಥಯಿಷ್ಯಾಮಿ ಕೃಷ್ಣಾಯಾಃ ಪೌರ್ವದೈಹಿಕಮ್ ॥೨೯॥

ರಾಜನೇ, ಇವಳಿಗೆ ರುದ್ರದೇವರು ಹೇಗೆ ವರವನ್ನು ಕೊಟ್ಟರು, ಯಾವ ಕಾರಣದಿಂದ ಯಶಸ್ವಿನಿಯಾದ, ಇಂದ್ರಸೇನೆ ಎಂದು ವಿಖ್ಯಾತಳಾದ ಅವಳು ನಿನ್ನ ಯಜ್ಞದಲ್ಲಿ ಉದ್ಭವಿಸಿದಳು ಎಂದು ಹೇಳುತ್ತೇನೆ ಕೇಳು. ನಾನು ನಿನಗೆ ಸಂತೋಷದಿಂದ ನಾಳಾಯನಿಯಾದ ಕೃಷ್ಣೆಯ ಪೂರ್ವದೇಹದ ಚರಿತ್ರೆಯನ್ನು ಹೇಳುವೆನು.

ಇಂದ್ರಸೇನೇತಿ ವಿಖ್ಯಾತಾ ಪುರಾ ನಾಳಾಯನೀ ಶುಭಾ ।
ಮೌದ್ಗಲ್ಯಂ ಪತಿಮಾಸಾದ್ಯ ಚಚಾರ ವಿಗತಜ್ವರಾ ।
ಮೌದ್ಗಲ್ಯಸ್ಯ ಮಹರ್ಷೇಶ್ಚ ರಮಮಾಣಸ್ಯ ವೈ ತಯಾ ॥೩೦॥

ಹಿಂದೆ ನಳನ ಪುತ್ರಿಯಾದ ಶುಭಳಾದ ಇಂದ್ರಸೇನೆಯು ಮುದ್ಗಲನನ್ನು ಪತಿಯಾಗಿ ಪಡೆದು ಯಾವ ಮನಸ್ಸಿನ ತಾಪವೂ ಇಲ್ಲದೆ ಸಂಚರಿಸಿದಳು. ಅವಳ ಜೊತೆಯಲ್ಲಿ ರಮಿಸುತ್ತಿದ್ದ ಮೌದ್ಗಲ್ಯರಿಗೆ ಅನೇಕ ವರ್ಷಗಳು ಒಂದು ಕ್ಷಣದಂತೆ ಕಳೆದುಹೋದವು.

ಸಂವತ್ಸರಗಣಾ ರಾಜನ್ ವ್ಯತೀಯುಃ ಕ್ಷಣವತ್ ತದಾ ।
ತತಃ ಕದಾಚಿದ್ ಧರ್ಮಾತ್ಮಾ ತೃಪ್ತೋ ಭೂಮೇರ್ವ್ಯರಜ್ಯತ ।
ಅನಿಚ್ಛನ್ ಸ ಪರಂ ಬ್ರಹ್ಮ ತ್ಯಾಗಧರ್ಮಪರೋಽಭವತ್ ॥೩೧॥

ಉತ್ಸಸರ್ಜ ಸ ತಾಂ ವಿಪ್ರಃ ಸಾ ತದಾ ಚಾಪತದ್ ಭುವಿ ।
ಮೌದ್ಗಲ್ಯೋ ರಾಜಶಾರ್ದೂಲ ತಪೋಭಿರ್ಭಾವಿತಃ ಸದಾ ॥೩೨॥

ಅನಂತರ ಒಮ್ಮೆ ಆ ಧರ್ಮಾತ್ಮನು ಭೂಮಿಯಲ್ಲಿ ವಿರಕ್ತನಾದನು. ಪರಬ್ರಹ್ಮನ ಪ್ರಸಾದವನ್ನು ಬಯಸಿ ಅವನು ತ್ಯಾಗಧರ್ಮಪರನಾದನು. ರಾಜಶಾರ್ದೂಲನೇ, ತಪಸ್ಸುಗಳಿಂದ ಶುದ್ಧನಾದ ಆ ಮೌದ್ಗಲ್ಯಬ್ರಾಹ್ಮಣನು (ಮುದ್ಗಲ ಬ್ರಾಹ್ಮಣನು) ಅವಳನ್ನು ಪರಿತ್ಯಾಗ ಮಾಡಿದನು. ಆಗ ಅವಳು ಭೂಮಿಯ ಮೇಲೆ ಬಿದ್ದಳು.

ನಾಳಾಯನೀ

ಪ್ರಸೀದ ಭಗವನ್ ಮಹ್ಯಂ ನ ಮಾಮುತ್ಸ್ರಷ್ಟುಮರ್ಹಸಿ ।
ಅವಿತೃಪ್ತಾऽಸ್ಮಿ ವಿಪ್ರರ್ಷೇ ಕಾಮಾನಾಂ ಮಮ ಕಾಮದ ॥೩೩॥

ಆಗ ಅವಳು ಅವನನ್ನು ಕುರಿತು, ಕಾಮದನಾದ ವಿಪ್ರರ್ಷಿಯೇ, ಪೂಜ್ಯನಾದ ನೀನು ನನ್ನನ್ನು ಅನುಗ್ರಹಿಸು. ನನ್ನನ್ನು ಪರಿತ್ಯಾಗ ಮಾಡಬೇಡ, ನಿನ್ನ ಜೊತೆಯಲ್ಲಿ ನಾನು ಕಾಮತೃಪ್ತಿಯನ್ನು ಪಡೆದಿಲ್ಲವೆಂದು ಹೇಳಿದಳು.

ಋಷಿಃ

ಯಸ್ಮಾತ್ ತ್ವಂ ಮಯಿ ನಿಶ್ಶಂಕಾ ಹ್ಯವಕ್ತವ್ಯಂ ಪ್ರಭಾಷಸೇ ।
ಆಚರಂತೀ ತಪೋವಿಘ್ನಂ ತಸ್ಮಾಚ್ಛೃಣು ವಚೋ ಮಮ ॥೩೪॥

ನೀನು ನನಗೆ ಹೇಳಬಾರದ ವಿಷಯಗಳನ್ನು ನಿಶ್ಶಂಕವಾಗಿ ಹೇಳುತ್ತಾ ತಪೋವಿಘ್ನವನ್ನು ಮಾಡುತ್ತಿರುವುದರಿಂದ ನನ್ನ ಮಾತನ್ನು ಕೇಳು.

ಭವಿಷ್ಯಸಿ ನೃಲೋಕೇऽಸ್ಮಿನ್ ರಾಜಪುತ್ರೀ ಯಶಸ್ವಿನೀ ।
ಪಾಂಚಾಲರಾಜಸ್ಯ ಸುತಾ ದ್ರುಪದಸ್ಯ ಮಹಾತ್ಮನಃ ॥೩೫॥

ನೀನು ಮನುಷ್ಯಲೋಕದಲ್ಲಿ ಪಾಂಚಾಲರಾಜನಾದ ಮಹಾತ್ಮನಾದ ದ್ರುಪದರಾಜನ ಮಗಳಾಗಿ ಕೀರ್ತಿವಂತಳಾದ ರಾಜಕುಮಾರಿಯಾಗಿ ಜನಿಸುವಿ.

ಭವಿತಾರಸ್ತತಸ್ತತ್ರ ಪತಯಃ ಪಂಚ ವಿಶ್ರುತಾಃ ।
ತೈ ಸಾರ್ಧಂ ಮಧುರಾಕಾರೈಶ್ಚಿರಂ ರತಿಮವಾಪ್ಸ್ಯಸಿ ॥೩೬॥

ಆಗ ನಿನಗೆ ಪ್ರಖ್ಯಾತರಾದ ಐದು ಜನರು ಪತಿಗಳಾಗುವರು. ಮನೋಹರವಾದ ಆಕಾರವನ್ನು ಹೊಂದಿರುವ ಅವರ ಜೊತೆಯಲ್ಲಿ ನೀನು ಬಹುಕಾಲ ಸುಖವನ್ನು ಅನುಭವಿಸುವಿ.

ವ್ಯಾಸಃ

ಸೈವಂ ಶಪ್ತಾ ತು ವಿಮನಾ ವನಂ ಪ್ರಾಯಾದ್ ಯಶಸ್ವಿನೀ ।
ಭೋಗೈರತೃಪ್ತಾ ದೇವೇಶಂ ತಪಸಾऽऽರಾಧಯತ್ ತದಾ ॥೩೭॥

ಹೀಗೆ ಶಪ್ತಳಾದ ಆ ಯಶಸ್ವಿನಿಯು ಮನಸ್ಸಿನಲ್ಲಿ ಬೇಸರಗೊಂಡು ಕಾಡಿಗೆ ಹೋದಳು. ಭೋಗಗಳಲ್ಲಿ ತೃಪ್ತಿಯನ್ನು ಹೊಂದದೆ ಅವಳು ಆಗ ರುದ್ರದೇವರನ್ನು ತಪಸ್ಸಿನಿಂದ ಆರಾಧಿಸಿದಳು.

ನಿರಾಶೀರ್ಮಾರುತಾಹಾರಾ ವ್ರತಶೀಲಾ ತಥೈವ ಚ ।
ಅನುವರ್ತಮಾನಾ ಚಾದಿತ್ಯಂ ತಥಾ ಪಂಚತಪಾಽಭವತ್ ॥೩೮॥

ಎಲ್ಲಾ ಆಸೆಗಳನ್ನೂ ತೊರೆದು ಕೇವಲ ವಾಯುವನ್ನು ಸೇವಿಸಿ, ವ್ರತಶೀಲಳಾಗಿ, ಸೂರ್ಯನು ತಿರುಗಿದಂತೆ ಅವನಿಗೆ ಅಭಿಮುಖಳಾಗಿ ತಿರುಗಿ ಪಂಚಾಗ್ನಿ ತಪಸ್ಸನ್ನು ಮಾಡಿದಳು.

ತೀವ್ರೇಣ ತಪಸಾ ತಸ್ಯಾಸ್ತುಷ್ಟಃ ಪಶುಪತಿಃ ಸ್ವಯಮ್ ।
ವರಂ ಪ್ರಾದಾತ್ ತದಾ ರುದ್ರಃ ಸರ್ವಲೋಕೇಶ್ವರಃ ಪ್ರಭುಃ ॥೩೯॥

ಅವಳ ತೀವ್ರವಾದ ತಪಸ್ಸಿನಿಂದ ಸಂತುಷ್ಟರಾದ ಪಶುಪತಿಯಾದ, ಸರ್ವಲೋಕೇಶ್ವರರಾದ, ಸಮರ್ಥರಾದ ರುದ್ರದೇವರು ತಾವಾಗಿಯೇ ಅವಳಿಗೆ ವರವನ್ನು ಕೊಟ್ಟರು.

ಮಹೇಶ್ವರಃ

ಭವಿಷ್ಯಸಿ ಪರಂ ಜನ್ಮನ್ ಮನುಷ್ಯೇಷು ವರಾಂಗನೇ ।
ಭವಿಷ್ಯಂತಿ ಚ ತೇ ಭದ್ರೇ ಪತಯಃ ಪಂಚ ಸುವ್ರತಾಃ ॥೪೦॥

ವರಾಂಗನೆಯೇ, ನೀನು ಮುಂದಿನ ಜನ್ಮದಲ್ಲಿ ಮನುಷ್ಯಲೋಕದಲ್ಲಿ ಜನಿಸುವಿ. ಆಗ ನಿನಗೆ ಒಳ್ಳೆಯ ವ್ರತವನ್ನು ಧರಿಸಿದ ಐದುಜನರು ಪತಿಗಳಾಗುವರು.

ಮಹೇಂದ್ರವಪುಷಃ ಸರ್ವೇ ಮಹೇಂದ್ರಸಮವಿಕ್ರಮಾಃ ।
ತತ್ರಸ್ಥಾ ಚ ಮಹತ್ಕರ್ಮ ಸುರಾಣಾಂ ತ್ವಂ ಕರಿಷ್ಯಸಿ ॥೪೧॥

ಅವರೆಲ್ಲರೂ ಮಹೇಂದ್ರನ ಶರೀರದಂತಿರುವ ಶರೀರವುಳ್ಳವರು ಮತ್ತು ಮಹೇಂದ್ರನ ವಿಕ್ರಮಕ್ಕೆ ಸಮವಾದ ವಿಕ್ರಮವುಳ್ಳವರು. ನೀನು ಅವರಲ್ಲಿದ್ದು ಮಹತ್ತಾದ ದೇವಕಾರ್ಯವನ್ನು ಮಾಡುವಿ.

ನಾಳಾಯನೀ

ಏಕಃ ಖಲು ಮಯಾ ಭರ್ತಾ ವೃತಃ ಪಂಚ ತ್ವಿಮೇ ಕಥಮ್ ।
ಭವಿಷ್ಯಂತಿ ಮಮೈಕಸ್ಯಾಃ ಪತಯಸ್ತದ್ ಬ್ರವೀಹಿ ಮೇ ॥೪೨॥

ನಾನು ಒಬ್ಬ ಪತಿಯನ್ನು ಕೇಳಿದೆ, ಒಬ್ಬಳಾದ ನನಗೆ ಐದು ಜನರು ಹೇಗೆ ಪತಿಗಳಾಗುವರು? ಅದನ್ನು ನನಗೆ ಹೇಳು.

ಮಹೇಶ್ವರಃ

ಪಂಚಕೃತ್ವಸ್ತ್ವಯಾ ಹ್ಯುಕ್ತಃ ಪತಿಂ ದೇಹೀತ್ಯಹಂ ಪುನಃ ।
ಪಂಚ ತೇ ಪತಯೋ ಭದ್ರೇ ಭವಿಷ್ಯಂತಿ ಸುಖಾವಹಾಃ ॥೪೩॥

ಭದ್ರೇ, ನೀನು ಐದು ಬಾರಿ ಪತಿಂದೇಹಿ ಎಂದು ಹೇಳಿದೆ, ಆದ್ದರಿಂದ ನಿನಗೆ ಸುಖವನ್ನು ಕೊಡುವ ಐದು ಜನರು ಪತಿಗಳಾಗುತ್ತಾರೆ.

ನಾಳಾಯನೀ

ಧರ್ಮ ಏಕಃ ಪತಿಃ ಸ್ತ್ರೀಣಾಂ ಪೂರ್ವಮೇವ ಪ್ರಕಲ್ಪಿತಃ ।
ಬಹುಪತ್ನೀಕೃತಃ ಪುಂಸೋ ಧರ್ಮಶ್ಚ ಪಿತೃಭಿಃ ಕೃತಃ ॥೪೪॥

ಒಬ್ಬ ಸ್ತ್ರೀಗೆ ಒಬ್ಬನೇ ಪತಿಯೆಂಬುದು ಧರ್ಮವೆಂದು ಹಿಂದಿನಿಂದಲೂ ನಿಯುಕ್ತವಾಗಿದೆ. ಪುರುಷನು ಅನೇಕ ಪತ್ನಿಯರನ್ನು ಹೊಂದಿದರೂ ಅದು ಧರ್ಮವೆಂದು ಹಿರಿಯರು ಅಂಗೀಕರಿಸಿದ್ದಾರೆ.

ಸ್ತ್ರೀಧರ್ಮಃ ಪೂರ್ವಮೇವಾಯಂ ನಿರ್ಮಿತೋ ಮುನಿಭಿಃ ಪುರಾ ।
ಸಹ ಧರ್ಮಭೃತಾಂ ಭರ್ತುರೇಕಾ ಏಕಸ್ಯ ಚೋಚ್ಯತೇ ॥೪೫॥

ಧರ್ಮಜ್ಞರ ಮಧ್ಯದಲ್ಲಿ ಋಷಿಗಳು ಒಬ್ಬಳಿಗೆ ಒಬ್ಬನೇ ಪತಿಯೆಂದು ಸ್ತ್ರೀಧರ್ಮವನ್ನು ನಿರ್ಮಿಸಿದ್ದಾರೆ.

ಏಕೋ ಭರ್ತಾ ಹಿ ನಾರೀಣಾಂ ಕೌಮಾರ ಇತಿ ಲೌಕಿಕಃ ।
ಆಪತ್ಸು ಚ ವಿಯೋಗೇ ಚ ಸಂತಾನಾರ್ಥೇ ಪರಃ ಸ್ಮೃತಃ ॥೪೬॥

ಬಾಲ್ಯದಲ್ಲಿಯೇ ಸ್ತ್ರೀಗೆ ಒಬ್ಬನೇ ಪತಿಯೆಂಬುವುದು ಲೋಕನೀತಿ. ಆಪತ್ತು ಉಂಟಾದಾಗ ಅಥವಾ ವಿಯೋಗವಾದರೆ ಸಂತಾನದ ಸಲುವಾಗಿ ನಿಯೋಗ ಪದ್ಧತಿಯಿಂದ ಎರಡನೆಯ ಪತಿಯು ಹೇಳಲ್ಪಡುತ್ತಾನೆ.

ಗಚ್ಛೇತ ಯಾ ತೃತೀಯಂ ತು ತಸ್ಯಾ ನಿಷ್ಕೃತಿರುಚ್ಯತೇ ।
ಚತುರ್ಥೇ ಪತಿತಾ ಧರ್ಮಾತ್ ಪಂಚಮೇ ಬಂಧಕೀ ಭವೇತ್ ॥೪೭॥

ಯಾವಳು ಮೂರನೆಯ ಪತಿಯನ್ನು ಹೊಂದುವಳೊ ಅವಳಿಗೆ ಪ್ರಾಯಶ್ಚಿತ್ತವು ಹೇಳಲ್ಪಡುತ್ತದೆ. ನಾಲ್ಕನೆಯ ಪತಿಯನ್ನು ಹೊಂದಿದವಳು ಪತಿತಳಾಗಿ ಧರ್ಮಭ್ರಷ್ಟಳಾಗುತ್ತಾಳೆ. ಐದನೆಯ ಪತಿಯನ್ನು ಹೊಂದಿದವಳು ವೇಶ್ಯೆಯೆನಿಸಿಕೊಳ್ಳುತ್ತಾಳೆ.

ಏವಂ ಗತೇ ಧರ್ಮಪಥೇ ನ ವೃಣೇ ಬಹುಪುಂಸ್ಕತಾಮ್ ।
ಅಲೋಕಾಚರಿತಾತ್ ತಸ್ಮಾತ್ ಕಥಂ ಮುಚ್ಯೇಯ ಸಂಕರಾತ್ ॥೪೮॥

ಧರ್ಮಮಾರ್ಗವು ಹೀಗಿರುವಾಗ ನಾನು ಅನೇಕರನ್ನು ಪತಿಗಳನ್ನಾಗಿ ಬಯಸುವುದಿಲ್ಲ. ಇದು ಲೋಕಾಚರಿತವಾದ ಮಾರ್ಗವಲ್ಲ. ಆದ್ದರಿಂದ ಈ ಸಾಂಕರ್ಯದೋಷದಿಂದ ನಾನು ಬಿಡುಗಡೆಯಾಗುವುದು ಹೇಗೆ?

ಮಹೇಶ್ವರಃ

ಅನಾವೃತಾಃ ಪುರಾ ನಾರ್ಯೋ ಹ್ಯಾಸನ್ ಶುಧ್ಯಂತಿ ಚಾರ್ತವೇ ।
ಸಕೃದುಕ್ತಂ ತ್ವಯಾ ನೈತನ್ನಾಧರ್ಮಸ್ತೇ ಭವಿಷ್ಯತಿ ॥೪೯॥

ಹಿಂದೆ ಸ್ತ್ರೀಯರು ಅನಾವೃತರಾಗಿದ್ದರು. (ಪತಿಯ ಜೊತೆಯಲ್ಲಿಯೇ ಇರಬೇಕೆಂಬ ನಿಯಮವು ಇರಲಿಲ್ಲ) ಪ್ರತಿ ಋತುಕಾಲದಲ್ಲಿ ಶುದ್ಧರಾಗುತ್ತಿದ್ದರು. ಪತಿಂದೇಹಿ ಎಂಬ ಮಾತನ್ನು ನೀನು ಒಂದು ಬಾರಿ ಹೇಳಲಿಲ್ಲ (ಐದು ಬಾರಿ ಹೇಳಿದೆ), ಆದ್ದರಿಂದ ನಿನಗೆ ಅಧರ್ಮವು ಉಂಟಾಗುವುದಿಲ್ಲ.

ನಾಳಾಯನೀ

ಯದಿ ಮೇ ಪತಯಃ ಪಂಚ ವರಾನಿಚ್ಛಾಮಿ ತೈರ್ಮಿಥಃ ।
ಕೌಮಾರಂ ಚ ಭವೇತ್ ಸರ್ವೈಃ ಸಂಗಮೇಸಂಗಮೇ ಚ ಮೇ ॥೬೦॥

ನನಗೆ ಐದು ಪತಿಗಳು ಆಗುವುದಾದರೆ ನಾನು ಆ ಪತಿಗಳಿಗೂ ಮತ್ತು ನನಗೂ ನಿನ್ನಿಂದ ವರವನ್ನು ಬೇಡುತ್ತೇನೆ. ನಾನು ಎಲ್ಲರ ಜೊತೆಯಲ್ಲಿ ಸಂಗವನ್ನು ಮಾಡಿದರೂ ಪ್ರತಿದಿನವೂ ನಾನು ಕುಮಾರಿಯೇ ಆಗಬೇಕು.

ಪತಿಶುಶ್ರೂಷಯಾ ಚೈವ ಸಿದ್ಧಿಃ ಪ್ರಾಪ್ತಾ ಮಯಾ ಪುರಾ ।
ಭೋಗೇಚ್ಛಾ ಚ ಮಯಾ ಪ್ರಾಪ್ತಾ ಸ ಚ ಭೋಗಶ್ಚ ಮೇ ಭವೇತ್ ॥

ನಾನು ಹಿಂದೆ ಪತಿಸೇವೆಯಿಂದ ಸಿದ್ಧಿಯನ್ನು ಪಡೆದೆ. ಆದರೆ, ಭೋಗೇಚ್ಛೆಯು ಹೋಗಲಿಲ್ಲ ಆದ್ದರಿಂದ ನಾನು ಬಯಸುವ ಭೋಗವೂ ನನಗೆ ಉಂಟಾಗಬೇಕು.

ಮಹೇಶ್ವರಃ

ರತಿಶ್ಚ ಭದ್ರೇ ಸಿದ್ಧಿಶ್ಚ ನ ಭಜೇತೇ ಪರಸ್ಪರಮ್ ।
ದುರ್ಭಗಾ ಲಪ್ಸ್ಯಸೇ ಸಿದ್ಧಿಂ ಯೋಗೇನ ಚ ಮಹತ್ತಾಮ್ ॥೫೨॥

ಭದ್ರೆಯೇ, ಸದಾ ರತಿಯೂ ಮತ್ತು ಪುಣ್ಯಸಿದ್ಧಿಯೂ ಜೊತೆಯಲ್ಲಿ ಹೋಗುವುದಿಲ್ಲ. ಐದು ಪತಿಗಳನ್ನು ಹೊಂದಿದರೆ ಏಕಪತಿತ್ವ ಇಲ್ಲದ ಕಾರಣ ದೌರ್ಭಾಗ್ಯವನ್ನು ಹೊಂದಿ ಸತತ ರತಿಯಿಂದಾಗಿ ಭೋಗದ ಸಿದ್ಧಿಯನ್ನು ಪಡೆಯುವಿ. ಅದನ್ನು ಬಿಟ್ಟು ಏಕಪತಿತ್ವವನ್ನು ಹೊಂದಿ ತಪಸ್ಸು ಮಾಡಿದರೆ ರೂಪಲಾವಣ್ಯಗಳಿಂದ ಮಹತ್ವವನ್ನೂ, ಪುಣ್ಯದಿಂದ ಮಹತ್ವವನ್ನೂ ಪಡೆಯುವಿ. ಬಹುಪತಿಗಳಿದ್ದರೆ ಯಾವಾಗಲೂ ರತಿಯ ಆಸೆಯಿಂದ ರೂಪಲಾವಣ್ಯಗಳು ನಾಶವನ್ನು ಹೊಂದುತ್ತವೆ.

ಅನ್ಯದೇಹಾಂತರೇ ತ್ವಂ ಚ ರೂಪಭಾಗ್ಯಗುಣಾನ್ವಿತಾ ।
ಪಂಚಭಿಃ ಪ್ರಾಪ್ಯ ಕೌಮಾರಂ ಮಹಾಭಾಗಾ ಭವಿಷ್ಯಸಿ ॥೪೩॥

ಮುಂದಿನ ಜನ್ಮದಲ್ಲಿ ಬೇರೆಯೇ ದೇಹದೊಳಗೆ ನೀನು ನಿನ್ನನ್ನೂ ಸೇರಿ ಐದುಜನ ದೇವಿಯರ ಜೊತೆಯಲ್ಲಿ ವಾಸಮಾಡಿ ನಿತ್ಯವೂ ಕುಮಾರಿಯಾಗಿ ಅಧಿಕವಾದ ಅಂಶದಿಂದ ಇರುತ್ತೀಯೆ.

ಶ್ಲೋಕದಲ್ಲಿ ಮಹಾಭಾಗಾ ಎಂಬಲ್ಲಿ ಭಾಗ ಎಂದರೆ ಅಂಶ ಎಂದೇ ಅರ್ಥ. ದೇಹದಲ್ಲಿರುವ ಇತರ ಸ್ತ್ರೀಯರ ಅಂಶಕ್ಕಿಂತ ನಿನ್ನ ಅಂಶವು ಅಧಿಕವಾಗಿರುವುದು

ಎಂದು ತಾತ್ಪರ್ಯ. ಒಂದೇ ದಿವಸದಲ್ಲಿ ನಿನ್ನೊಬ್ಬಳ ಜೊತೆಯಲ್ಲಿಯೇ ಐದು ಜನ ಪತಿಗಳೂ ರಮಣವನ್ನು ಮಾಡಿದರೆ ಪಾತಿವ್ರತ್ಯರೂಪವಾದ ಗುಣವೂ, ಮಹತ್ವರೂಪವಾದ ಭಾಗ್ಯವೂ, ಅತಿಯಾದ ವಿಷಯಾಸಕ್ತಿಯಿಂದ ರೂಪಲಾವಣ್ಯಗಳೂ ನಾಶವನ್ನು ಹೊಂದುತ್ತವೆ. ನೀನು ಆ ದೇಹದಲ್ಲಿ ಕೇವಲ ಸಾಕ್ಷಿಯಾಗಿರುವ ಪಾರ್ವತಿಯೂ ಸೇರಿದಂತೆ ಧರ್ಮ,ಇಂದ್ರ ಮತ್ತು ಅಶ್ವಿನಿಗಳ ಪತ್ನಿಯರ ಜೊತೆಯಲ್ಲಿ ಸೇರಿ ಆ ದೇಹದ ಒಳಗೆ ಪ್ರವೇಶಿಸಿದರೆ ಒಂದೊಂದು ದಿವಸ ಒಬ್ಬೊಬ್ಬರಿಗೆ ಒಬ್ಬೊಬ್ಬ ಪತಿಯಿಂದ ಭೋಗ ಎಂದು ವಿಭಾಗವನ್ನು ಮಾಡಿದರೆ ನಿನ್ನ ಜೊತೆಯಲ್ಲಿ ವಾಯುವಿಗೆ, ಶ್ಯಾಮಲೆಯ ಜೊತೆಯಲ್ಲಿ ಧರ್ಮನಿಗೆ, ಶಚಿಯ ಜೊತೆಯಲ್ಲಿ ಇಂದ್ರನಿಗೆ, ಉಷೆಯ ಜೊತೆಯಲ್ಲಿ ಅಶ್ವಿನಿಗಳಿಗೆ ನಿಯಮದಿಂದ ಭಾಗಗಳು ಪೂರ್ಣವಾಗುತ್ತಿರಲು ಇದಕ್ಕೆ ಸಾಕ್ಷಿಯಾಗಿ ಪಾರ್ವತಿಯು ಅಲ್ಲಿ ಇರುವ ಕಾರಣದಿಂದ ಪಂಚಪಾಂಡವರಿಗೆ ತಮ್ಮ ತಮ್ಮ ಪತ್ನಿಯರ ಜೊತೆಯಲ್ಲಿಯೇ ಭೋಗವು ಪೂರ್ಣವಾಗಿ ಪಾರ್ವತಿಯ ಅಪೇಕ್ಷೆಯಿಲ್ಲದಿರುವುದರಿಂದ ಯಾರಿಗೂ ಪಾತಿವ್ರತ್ಯರೂಪವಾದ ಗುಣದ ಹಾನಿಯಾಗುವುದಿಲ್ಲ ಅಥವಾ ಮಹತ್ವರೂಪವಾದ ಭಾಗ್ಯದ ಹಾನಿಯೂ ಆಗುವುದಿಲ್ಲ. ಒಬ್ಬಳ ಜೊತೆಯಲ್ಲಿಯೇ ಐದುಜನರ ಭೋಗವಿಲ್ಲದಿರುವುದರಿಂದ, ಅತಿವಿಷಯಾಸಕ್ತಿ ಇಲ್ಲದಿರುವ ಕಾರಣದಿಂದ ರೂಪಯೌವನದ ಹಾನಿಯೂ ಆಗುವುದಿಲ್ಲ. ಬೇರೆ ಸ್ತ್ರೀಯರ ದಿನದಲ್ಲಿ(ಭಾರತಿಯ) ಸ್ವಲ್ಪಸನ್ನಿಧಾನವೂ ಇರುವುದರಿಂದ ಅವರ ಪತಿಯ ಅಂತರ್ಗತನಾದ ವಾಯುದೇವರ ಜೊತೆಯಲ್ಲಿ ನಿನಗೆ ಪರಕೀಯ ದೇಹದಿಂದಲೇ ಸದಾರಮಣ. ಆ ದಿನದಲ್ಲಿ ಅಭಿಮಾನವುಳ್ಳ ಅಯಾ ದೇವಿಯರಿಂದ ಕುಮಾರಭಾವವನ್ನು ರಕ್ಷಿಸಿದ ಆ ದೇಹದಲ್ಲಿ ಸೌಂದರ್ಯದ ಅನಾಶ. ಆ ದೇವಿಯರ ಅಂಶಕ್ಕಿಂತ ಹೀಗೆ ನಿನ್ನ ಅಂಶವೇ ಅಧಿಕವಾಗಿರುವುದರಿಂದ ನಿನಗೆ ಮಹಾಭಾಗದಿಂದ ಕೂಡಿರುವಿಕೆ ಎಲ್ಲವೂ ಸಿದ್ಧವಾಗುತ್ತದೆ. ರೂಪಭಾಗ್ಯಗುಣಾನ್ವಿತಾ ಎಂಬ ಶಬ್ದದಿಂದ ಭಾಗ್ಯವನ್ನು ಮೊದಲೇ ಹೇಳಿರುವುದರಿಂದ ಮಹಾಭಾಗಾ ಎಂಬಲ್ಲಿರುವ ಭಾಗ ಶಬ್ದಕ್ಕೆ ಭಾಗ್ಯವೆಂದು ಅರ್ಥಮಾಡದೆ ಅಂಶವೆಂದೇ ಅರ್ಥಮಾಡಬೇಕು.

ಗಚ್ಛ ಗಂಗಾಜಲಸ್ಥಾ ಚ ನರಂ ಪಶ್ಯಸಿ ಯಂ ಶುಭೇ ।
ತಮಾನಯ ಮಮಾಭ್ಯಾಶಂ ಸುರರಾಜಂ ಶುಚಿಸ್ಮಿತೇ ॥೫೪॥

ಶುಚಿಸ್ಮಿತೆಯೇ, ನೀನು ಗಂಗೆಗೆ ಹೋಗು, ಶುಭಳಾದವಳೇ, ಅಲ್ಲಿ ನೀನು ನೋಡುವ ಸುರರಾಜನಾದ ದೇವೇಂದ್ರನನ್ನು ನನ್ನ ಬಳಿಗೆ ಕರೆದುಕೊಂಡು ಬಾ.

ವ್ಯಾಸಃ

ಇತ್ಯುಕ್ತಾ ವಿಶ್ವರೂಪೇಣ ರುದ್ರಂ ಕೃತ್ವಾ ಪ್ರದಕ್ಷಿಣಮ್ ।
ಜಗಾಮ ಗಂಗಾಮುದ್ದಿಶ್ಯ ಪುಣ್ಯಾಂ ತ್ರಿಪಥಗಾಂ ನದೀಮ್ ॥೫೫॥

ವಿಶ್ವನಾಥನಾದ ರುದ್ರನಿಂದ ಹೀಗೆ ಹೇಳಲ್ಪಟ್ಟ ಅವಳು ಅವನಿಗೆ ಪ್ರದಕ್ಷಿಣೆಯನ್ನು ಮಾಡಿ ಪವಿತ್ರವಾದ ತ್ರಿಪಥೆಗೆಯಾದ ಗಂಗಾನದಿಯನ್ನು ಉದ್ದೇಶಿಸಿ ಹೊರಟಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮಾದಿಪರ್ವಣಿ
ಷಣ್ಣವತ್ಯಧಿಕಶತತಮೋಽಧ್ಯಾಯಃ॥
॥ ಇತಿ ವೈವಾಹಿಕಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರತೊಂಭತ್ತಾರನೆಯ ಅಧ್ಯಾಯ ಮುಗಿಯಿತು.

★★★★★

ನೂರ ತೊಂಭತ್ತೇಳನೆಯ ಅಧ್ಯಾಯ

(ಪಂಚೇಂದ್ರೋಪಾಖ್ಯಾನ - ದೇವತೆಗಳ ಸತ್ರದಲ್ಲಿ ಬ್ರಹ್ಮದೇವರ ವಾಕ್ಯವನ್ನು ಕೇಳಿ ದೇವತೆಗಳಿಂದ ಗಂಗಾಸಮೀಪ ಗಮನ, ಅಲ್ಲಿ ಅಳುತ್ತಿರುವ ವನಿತೆಯ ದರ್ಶನ, ಅವಳನ್ನು ಕರೆದುಕೊಂಡು ರುದ್ರಸಮೀಪಕ್ಕೆ ಗಮನ, ರುದ್ರ ಮತ್ತು ಇಂದ್ರರ ಸಂವಾದ, ರುದ್ರನಿಂದ ಇಂದ್ರನ ನಿಂದೆ, ವ್ಯಾಸರಿಂದ ದ್ರುಪದನಿಗೆ ದಿವ್ಯದೃಷ್ಟಿಯನ್ನು ಕೊಟ್ಟು ಪಂಚೇಂದ್ರರ ಮತ್ತು ಅವರ ಸಮೀಪದಲ್ಲಿ ದ್ರೌಪದಿಯ ದರ್ಶನ, ದ್ರುಪದನ ಸಮಾಧಾನ ಮತ್ತು ಹರ್ಷ)

ವ್ಯಾಸಃ

ಪುರಾ ವೈ ನೈಮಿಶಾರಣ್ಯೇ ದೇವಾಃ ಸತ್ರಮುಪಾಸತೇ ।
ತತ್ರ ವೈವಸ್ವತೋ ರಾಜನ್ ಶಾಮಿತ್ರಮಕರೋತ್ ತದಾ ॥೧॥

ರಾಜನೇ, ಹಿಂದೆ ನೈಮಿಶಾರಣ್ಯದಲ್ಲಿ ದೇವತೆಗಳು ಒಂದು ಸತ್ರವನ್ನು ಮಾಡಿದರು. ಅಲ್ಲಿ ಪಶುವಧೆ ಮಾಡುವ ಯಮನು ದೀಕ್ಷಿತನಾಗಿ ಕುಳಿತನು.

ತತೋ ಯಮೋ ದೀಕ್ಷಿತಸ್ತತ್ರ ರಾಜನ್
ನಾಮಾರಯತ್ ಕಿಂಚಿದಪಿ ಪ್ರಜಾಭ್ಯಃ ।
ತತಃ ಪ್ರಜಾಸ್ತಾ ಬಹುಲಾ ಬಭೂವುಃ
ಕಾಲಾತಿಪಾತಾನ್ಮರಣಾತ್ ಪ್ರಹೀಣಾಃ ॥೨॥

ರಾಜನೇ, ಯಮನು ದೀಕ್ಷಿತನಾಗಿ ಕುಳಿತ ಕಾರಣದಿಂದ ಯಾವ ಪ್ರಜೆಗಳನ್ನೂ ಸಂಹಾರ ಮಾಡಲಿಲ್ಲ. ಆಗ ಮರಣವಿಲ್ಲದೆ ಅಧಿಕಕಾಲ ಬದುಕಿದ ಕಾರಣ ಪ್ರಜೆಗಳ ಸಂಖ್ಯೆಯು ಹೆಚ್ಚಾಯಿತು.

ತತಶ್ಚ ಶಕ್ರೋ ವರುಣಃ ಕುಬೇರಃ
ಸಾಧ್ಯಾಶ್ಚ ರುದ್ರಾ ವಸವಶ್ಚಾಶ್ವಿನೌ ಚ ।
ಪ್ರಣೇತಾರಂ ಭುವನಸ್ಯ ಪ್ರಜಾಪತಿಂ
ಸಮಾಜಗ್ಮುಸ್ತತ್ರ ದೇವಾಸ್ತಥಾಽನ್ಯೇ ॥೩॥

ಆಗ ಇಂದ್ರ, ವರುಣ, ಕುಬೇರ, ಸಾಧ್ಯರು, ರುದ್ರರು, ವಸುಗಳು ಅಶ್ವಿನಿಗಳು, ಮತ್ತು ಉಳಿದ ದೇವತೆಗಳು ಲೋಕನಾಯಕರಾದ ಬ್ರಹ್ಮದೇವರ ಬಳಿಗೆ ಬಂದರು.

ತತೋಽಬ್ರುವಂಲ್ಲೋಕಗುರುಂ ಸಮೇತಾ
ಭಯಂ ನಸ್ತೀವ್ರಂ ಮಾನುಷಾಣಾಂ ಸಮೃದ್ಧ್ಯಾ ।
ತಸ್ಮಾದ್ ಭಯಾದುದ್ವಿಜಂತಃ ಸುಖೇಪ್ಸವಃ
ಪ್ರಯಾಮ ಸರ್ವೇ ಶರಣಂ ಭವಂತಮ್ ॥೪॥

ಅನಂತರ ಅವರೆಲ್ಲರೂ ಒಟ್ಟಿಗೆ ಬ್ರಹ್ಮದೇವರನ್ನು ಕುರಿತು ಹೇಳಿದರು. ನಮಗೆ ಮನುಷ್ಯರ ವೃದ್ಧಿಯಿಂದ ತೀವ್ರವಾದ ಭಯವುಂಟಾಗಿದೆ. ನಾವೆಲ್ಲರೂ ಆ ಭಯದಿಂದ ನಡುಗುತ್ತಾ ಸುಖವನ್ನು ಬಯಸಿ ನಿಮಗೆ ಶರಣಾಗತರಾಗಿದ್ದೇವೆ.

ಬ್ರಹ್ಮಾ

ಕಿಂ ವೋ ಭಯಂ ಮಾನುಷೇಭ್ಯೋ
ಯೂಯಂ ಸರ್ವೇ ಯತೋಽಮರಾಃ ।
ನ ವೋ ಮರ್ತ್ಯಸಕಾಶಾದ್ ವೈ ಭಯಂ ಭವತಿ ಕರ್ಹಿಚಿತ್ ॥೫॥

ನೀವೆಲ್ಲರೂ ಮರಣರಹಿತರಾದ ಕಾರಣದಿಂದ ನಿಮಗೆ ಮನುಷ್ಯರಿಂದ ಏನು ಭಯ? ನಿಮಗೆ ಮನುಷ್ಯರಿಂದ ಯಾವ ಭಯವೂ ಉಂಟಾಗಲು ಸಾಧ್ಯವಿಲ್ಲ.

ದೇವಾಃ

ಮರ್ತ್ಯಾ ಹ್ಯಮರ್ತ್ಯಾ ಸಂಭೂತಾ ನ ವಿಶೇಷೋಽಸ್ತಿ ಕಶ್ಚನ ।
ಅವಿಶೇಷಾದುದ್ವಿಜಂತೋ ವಿಶೇಷಾರ್ಥಮಿಹಾಗತಾಃ ॥೬॥

ಈಗ ಮರ್ತ್ಯರೂ ಅಮರರಾಗಿದ್ದಾರೆ. ನಮ್ಮಲ್ಲಿ ಯಾವ ವಿಶೇಷವೂ ಉಳಿದಿಲ್ಲ. ಈ ಸಾಮ್ಯದಿಂದ ಭಯವನ್ನು ಹೊಂದಿ ನಮ್ಮ ಅತಿಶಯವನ್ನು ಉಳಿಸಿಕೊಳ್ಳಲು ಇಲ್ಲಿಗೆ ಬಂದಿದ್ದೇವೆ.

ಬ್ರಹ್ಮಾ

ವೈವಸ್ವತೋ ವ್ಯಾಪೃತಃ ಸತ್ರಹೇತೋಃ
ತೇನ ತ್ವಿಮೇ ನ ಮ್ರಿಯಂತೇ ಮನುಷ್ಯಾಃ ।
ತಸ್ಮಿನ್ನೇಕಾಗ್ರೇ ಕೃತಸರ್ವಕಾರ್ಯೇ
ತದೈತೇಷಾಂ ಭವಿತೈವಾಂತಕಾಲಃ ॥೭॥

ಯಮನು ಶಾಮಿತ್ರಕರ್ಮವನ್ನು ವಹಿಸಿ ಸತ್ರಯಾಗದಲ್ಲಿ ನಿರತನಾಗಿದ್ದಾನೆ. ಆದ್ದರಿಂದ ಈ ಮನುಷ್ಯರು ಸಾಯುತ್ತಿಲ್ಲ. ಏಕಾಗ್ರನಾಗಿ ಯಮನು ಸತ್ರಯಾಗದ ಎಲ್ಲಾ ಕಾರ್ಯಗಳನ್ನು ಮುಗಿಸಿದ ಮೇಲೆ ಈ ಪ್ರಜೆಗಳಿಗೆ ಮರಣಕಾಲವು ಉಂಟಾಗುವುದು.

ವೈವಸ್ವತಸ್ಯೇಹ ತನುರ್ವಿಭೂತ್ವಾ
ವೀರ್ಯೇಣ ಯುಷ್ಮಾಕಮುತ ಪ್ರವೃದ್ಧಾ ।

ಏಷಾಮಂತೋ ಭವಿತಾ ಹ್ಯಂತಕಾಲೇ
ನಿಯಚ್ಛಧ್ವಂ ಮೋಹಮಮಿತ್ರಸಾಹಾಃ ॥೮॥

ಯಮನ ದೇಹವೇ ಹೆಚ್ಚು ಸಾಮರ್ಥ್ಯವನ್ನು ಹೊಂದಿ ನಿಮ್ಮ ತೇಜಸ್ಸಿನಿಂದ ಇನ್ನೂ ಹೆಚ್ಚು ಸಾಮರ್ಥ್ಯವನ್ನು ಹೊಂದಿದಾಗ ಇವರಿಗೆ ಅಂತಕಾಲವು ಉಂಟಾಗುವುದು. ಶತ್ರುಸಾಹರೇ, ನಿಮ್ಮ ಮೋಹವನ್ನು ನಿಯಂತ್ರಿಸಿಕೊಳ್ಳಿ.

ವ್ಯಾಸಃ

ತತಸ್ತು ತೇ ಪೂರ್ವಜದೇವವಾಕ್ಯಂ
ಶ್ರುತ್ವಾ ಜಗ್ಮುರ್ಯತ್ರ ದೇವಾ ಯಜಂತೇ ।
ಸಮಾಸೀನಾಸ್ತೇ ಸಮವೇತಾ ಮಹಾಬಲಾ
ಭಾಗೀರಥ್ಯಾಂ ದದೃಶುಃ ಪುಂಡರೀಕಮ್ ॥೯॥

ಆಗ ಅವರು ಬ್ರಹ್ಮದೇವರ ವಾಕ್ಯವನ್ನು ಕೇಳಿ ದೇವತೆಗಳು ಸತ್ರಯಾಗವನ್ನು ಮಾಡುತ್ತಿದ್ದ ಗಂಗಾತೀರಕ್ಕೆ ಹೋದರು. ಮಹಾಬಲರಾದ ಅವರು ಒಟ್ಟಿಗೆ ಅಲ್ಲಿ ಕುಳಿತು ಭಾಗೀರಥಿಯಲ್ಲಿ ಒಂದು ಕಮಲವನ್ನು ನೋಡಿದರು.

ದೃಷ್ಟ್ವಾ ಚ ತದ್ ವಿಸ್ಮಿತಾಸ್ತೇ ಬಭೂವುಃ
ತೇಷಾಮಿಂದ್ರಸ್ತತ್ರ ಶೂರೋ ಜಗಾಮ ।
ಸೋಽಪಶ್ಯದ್ ಯೋಷಾಮಥ ಪಾವಕಪ್ರಭಾಂ
ಯತ್ರ ಗಂಗಾ ಸತತಂ ದೇವೀ ಪ್ರಭೂತಾ ॥೧೦॥

ಅದನ್ನು ನೋಡಿ ಅವರೆಲ್ಲರೂ ವಿಸ್ಮಿತರಾದರು. ಶೂರನಾದ ಇಂದ್ರನು ಅವರನ್ನು ಬಿಟ್ಟು ಮುಂದೆ ಹೋಗಿ ಗಂಗೆಯು ಸತತವಾಗಿ ಉತ್ಪತ್ತಿಯಾಗುವ ಸ್ಥಳದಲ್ಲಿ ಅಗ್ನಿಯ ಪ್ರಭೆಯನ್ನು ಹೊಂದಿದ ಒಬ್ಬ ವನಿತೆಯನ್ನು ನೋಡಿದನು.

ಸಾ ತತ್ರ ಯೋಷಾ ರುದತೀ ಜಲಾರ್ಥಿನೀ
ಗಂಗಾಂ ದೇವೀಂ ವ್ಯವಗಾಹ್ಯ ವ್ಯತಿಷ್ಠತ್ ।
ತಸ್ಯಾಶ್ರುಬಿಂದುಃ ಪತಿತೋ ಜಲೇ ವೈ
ತತ್ಪದ್ಮಮಾಸೀದಥ ತತ್ರ ಕಾಂಚನಮ್ ॥೧೧॥

ಜಲಾರ್ಥಿನಿಯಾದ ಆ ವನಿತೆಯು ಗಂಗೆಯಲ್ಲಿ ಸ್ನಾನಮಾಡಿ ಅಳುತ್ತಾ ನಿಂತಿದ್ದಳು. ಅವಳ ಕಣ್ಣುಗಳಿಂದ ಬಂದ ಕಣ್ಣೀರು ಗಂಗೆಯಲ್ಲಿ ಬಿದ್ದು ಕಾಂಚನಮಯವಾದ ಒಂದು ಪದ್ಮವಾಯಿತು.

ತದದ್ಭುತಂ ಪ್ರೇಕ್ಷ್ಯ ವಜ್ರೀ ತದಾನೀಮ್
ಅಪೃಚ್ಛತ್ ತಾಂ ಯೋಷಿತಮಂತಿಕಾದ್ ವೈ
ಕಾ ತ್ವಂ ಕುತೋ ರೋದಿಷಿ ಕಸ್ಯ ಹೇತೋ-
ರ್ವಾಕ್ಯಂ ತಥ್ಯಂ ಕಾಮಯೇಽಹಂ ಬ್ರವೀಹಿ ॥೧೨॥

ಆ ಅದ್ಭುತವನ್ನು ನೋಡಿದ ಇಂದ್ರನು ಆಗ ಅವಳ ಸಮೀಪಕ್ಕೆ ಹೋಗಿ ಅವಳನ್ನು ನೀನು ಯಾರು? ಏತಕ್ಕೆ ಅಳುತ್ತಿದ್ದೀಯೆ? ಏನು ಉದ್ದೇಶ? ನಿಜವಾದ ತಥ್ಯವನ್ನು ಹೇಳು, ನಾನು ತಿಳಿದುಕೊಳ್ಳಲು ಬಯಸುತ್ತೇನೆ ಎಂದು ಹೇಳಿದನು.

ಸ್ತ್ರೀ

ತ್ವಂ ವೇತ್ಸ್ಯಸೇ ಮಾಮಿಹ ಯಾಽಸ್ಮಿ ಶಕ್ರ
ಯದರ್ಥಂ ಚಾಹಂ ರೋದಿಮಿ ಮಂದಭಾಗ್ಯಾ ।
ಆಗಚ್ಛ ರಾಜನ್ ಪುರತೋ ಗಮಿಷ್ಯೇ
ದ್ರಷ್ಟಾಸಿ ತದ್ ರೋದಿಮಿ ಯತ್ಕೃತೇಽಹಮ್ ॥೧೩॥

ಇಂದ್ರನೇ, ನಾನು ಯಾರು, ಮಂದಭಾಗ್ಯಳಾದ ನಾನು ಏತಕ್ಕೆ ಅಳುತ್ತಿದ್ದೇನೆ ಎಂದು ತಿಳಿಯುವಿ, ದೇವರಾಜನೇ, ನನ್ನ ಜೊತೆಯಲ್ಲಿ ಬಾ, ನಾನು ಮುಂದೆ ಹೋಗುವೆನು. ನಾನು ಏತಕ್ಕೆ ಅಳುತ್ತಿದ್ದೇನೆ ಎಂಬುದನ್ನು ನೀನು ತಿಳಿಯುವಿ.

ವ್ಯಾಸಃ

ತಾಂ ಗಚ್ಛಂತೀಮನ್ವಗಚ್ಛತ್ ತದಾನೀಂ
ಸೋಽಪಶ್ಯದಾರಾತ್ ತರುಣಂ ದರ್ಶನೀಯಮ್ ।
ಸಿಂಹಾಸನಸ್ಥಂ ಯುವತೀಸಹಾಯಂ
ಕ್ರೀಡಂತಮಕ್ಷೈರ್ಗಿರಿರಾಜಮೂರ್ಧ್ನಿ ॥೧೪॥

ತಮಬ್ರವೀದ್ ದೇವರಾಜೋ ಮಮೇದಂ
ತ್ವಂ ವಿದ್ಧಿ ವಿಶ್ವಂ ಭುವನಂ ವಶೇ ಸ್ಥಿತಮ್ ।
ಈಶೋಽಹಮಸ್ಮೀತಿ ಸಮನ್ಯುರಬ್ರವೀದ್
ದೃಷ್ಟ್ವಾ ತಮಕ್ಷ್ಣೋಃ ಸುಭೃಶಂ ಪ್ರಮತ್ತಮ್ ॥೧೫॥

ಇಂದ್ರನು ಆಗ ಮುಂದೆ ಹೋಗುವ ಅವಳನ್ನು ಹಿಂಬಾಲಿಸಿ ಮನೋಹರನೂ, ಪತ್ನೀಸಹಿತನೂ, ಪರ್ವತದಮೇಲೆ ಸಿಂಹಾಸನದಲ್ಲಿ ಕುಳಿತು ಪಗಡೆಯನ್ನು ಆಡುತ್ತಿರುವವನೂ ಆದ ರುದ್ರದೇವರನ್ನು ನೋಡಿದನು.

ಅಕ್ಷಕ್ರೀಡೆಯಲ್ಲಿ ತಲ್ಲೀನರಾದ ಅವರನ್ನು ನೋಡಿ ದೇವರಾಜನಾದ ಇಂದ್ರನು ಅವರನ್ನು ಕುರಿತು ಈ ವಿಶ್ವವು ನನ್ನ ಅಧೀನದಲ್ಲಿದೆ ಎಂದು ತಿಳಿ. ಇದಕ್ಕೆ ನಾನು ಒಡೆಯ ಎಂದು ಕೋಪದಿಂದ ಹೇಳಿದನು. (ಹೀಗಿರುವಾಗ ನೀನು ಇವಳಿಗೆ ಶಾಪವನ್ನು ಕೊಟ್ಟು ಇವಳು ಅಳುವಂತೆ ಮಾಡಿದ್ದೀಯೆ)

ಕ್ರುದ್ಧಂ ಸ ಶಕ್ರಂ ಪ್ರಸಮೀಕ್ಷ್ಯ ದೇವೋ
ಜಹಾಸ ಶಕ್ರಂ ಚ ಶನೈರುದೀಕ್ಷ್ಯ ।
ಸಂಸ್ತಂಭಿತೋಽಭೂದಥ ದೇವರಾಜಃ
ತೇನೇಕ್ಷಿತಃ ಸ್ಥಾಣುರಿವಾವತಸ್ಥೇ ॥೧೬॥

ರುದ್ರದೇವರು ಕೋಪಗೊಂಡ ಶಕ್ರನನ್ನು ನಿಧಾನವಾಗಿ ನೋಡಿ ನಕ್ಕರು. ಅದರಿಂದ ಇಂದ್ರನು ಸ್ತಂಭಿತನಾಗಿ ವೃಕ್ಷದಂತೆ ಅಲುಗಾಡದೇ ನಿಂತನು.

ಯದಾ ತು ಪರ್ಯಾಪ್ತಿರಿಹಾಕ್ಷಕ್ರೀಡಯಾ
ತದಾ ದೇವೀಂ ರುದಂತೀಂ ತಾಮುವಾಚ
ಆನೀಯತಾಮೇಷ ಯತೋಽಕ್ಷಮಾರಾತ್
ನೈನಂ ದರ್ಪಃ ಪುನರಪ್ಯಾವಿಶೇತ ॥೧೭॥

ಅಕ್ಷಕ್ರೀಡೆಯು ಮುಗಿದ ಮೇಲೆ ರುದ್ರದೇವರು ಆ ದೇವಿಯನ್ನು ಕುರಿತು, ಅವನನ್ನು ಕೈಯಲ್ಲಿ ಹಿಡಿದು ಪಗಡೆಯಾಡುತ್ತಿದ್ದ ಈ ಸ್ಥಳಕ್ಕೆ ಕರೆದುಕೊಂಡು ಬಾ, ಇನ್ನೊಮ್ಮೆ ಅವನಿಗೆ ದರ್ಪವು ಉಂಟಾಗಬಾರದು ಎಂದು ಹೇಳಿದರು.

ತದಾ ಶಕ್ರಃ ಸ್ಪೃಷ್ಟಮಾತ್ರೇ ತಯಾ ತು
ಸ್ರಸ್ತೈರಂಗೈಃ ಪತಿತೋಽಭೂದ್ ಧರಣ್ಯಾಮ್ ।
ತಮಬ್ರವೀದ್ ಭಗವಾನುಗ್ರತೇಜಾ
ನೈವಂ ಪುನಃ ಶಕ್ರ ಕೃಥಾಃ ಕಥಂಚಿತ್ ॥೧೮॥

ಆ ದೇವಿಯು ಸ್ಪರ್ಶಮಾಡಿದ ತಕ್ಷಣ ಇಂದ್ರನು ತನ್ನ ದೇಹದ ಅಂಗಗಳು ಸಡಿಲವಾಗಿ ಭೂಮಿಯಮೇಲೆ ಬಿದ್ದನು. ಉಗ್ರತೇಜಸ್ವಿಗಳಾದ, ಪೂಜ್ಯರಾದ ರುದ್ರದೇವರು ಅವನನ್ನು ಕುರಿತು ಇಂದ್ರನೇ, ಇನ್ನೊಮ್ಮೆ ಹೀಗೆ ಮಾಡಬೇಡ ಎಂದು ಹೇಳಿದರು.

ವಿವರ್ತಯೈನಂ ಚ ಮಹಾದ್ರಿರಾಜಂ
ಬಲಂ ಚ ವೀರ್ಯಂ ಚ ತವಾಪ್ರಮೇಯಮ್ ।
ವಿವೃತ್ಯ ಚೈವಾವಿಶ ಮಧ್ಯಮಸ್ಯ
ಯತ್ರಾಸತೇ ತದ್ವಿಧಾಃ ಸೂರ್ಯಭಾಸಃ ॥೧೯॥

ಈ ದೊಡ್ಡ ಪರ್ವತವನ್ನು ನಿನ್ನ ಅಪ್ರಮೇಯವಾದ ಬಲ ಮತ್ತು ಪರಾಕ್ರಮದಿಂದ ಹೊರಳಿಸಿ ಅದರ ಮಧ್ಯಭಾಗವನ್ನು ಪ್ರವೇಶಿಸು. ಅಲ್ಲಿ ಸೂರ್ಯನ ಕಾಂತಿಯನ್ನು ಹೊಂದಿರುವ ನಿನ್ನಂತಹವರು ಇದ್ದಾರೆ.

ಸ ತದ್ ವಿವೃತ್ಯ ಶಿಖರಂ ಮಹಾಗಿರೇಃ
ತುಲ್ಯದ್ಯುತೀಂಸ್ತಾಂಶ್ಚತುರೋ ದದರ್ಶ ।
ಸ ತಾನಭಿಪ್ರೇಕ್ಷ್ಯ ಬಭೂವ ದುಃಖಿತಃ
ಕಥಂ ನಾಹಂ ಭವಿತಾ ವೈ ಯಥೇಮೇ ॥೨೦॥

ಇಂದ್ರನು ಆ ಮಹಾಪರ್ವತದ ಶಿಖರವನ್ನು ಹೊರಳಿಸಿ ಸಮಾನವಾದ ಕಾಂತಿಯುಳ್ಳ ನಾಲ್ವರನ್ನು ನೋಡಿದನು. ಅವನು ಅವರನ್ನು ನೋಡಿ ನಾನು ಇವರ ಗತಿಯನ್ನು ಹೊಂದದಿರುವುದು ಹೇಗೆ ಎಂದು ಯೋಚಿಸಿ ದುಃಖಿತನಾದನು.

ತತೋ ದೇವೋ ಗಿರಿಶೋ ವಜ್ರಪಾಣಿಂ
ವಿವೃತ್ಯ ನೇತ್ರೇ ರುಷಿತೋಽಭ್ಯುವಾಚ ।

ದರೀಮೇತಾಂ ಪ್ರವಿಶ ತ್ವಂ ಶತಕ್ರತೋ
ಯನ್ಮಾಂ ಬಾಲ್ಯಾದವಮಂಸ್ಥಾಃ ಪುರಸ್ತಾತ್ ॥೨೧॥

ಆಗ ರುದ್ರದೇವರು ಕಣ್ಣುಗಳನ್ನು ಅರಳಿಸಿ ಸಿಟ್ಟಿನಿಂದ ವಜ್ರಪಾಣಿಯನ್ನುಕುರಿತು ಶತಕ್ರತುವೇ, ಹುಡುಗತನದಿಂದ ನನ್ನನ್ನು ಮೊದಲು ಅವಮಾನ ಮಾಡಿದ ಕಾರಣ ನೀನೂ ಈ ಗುಹೆಯನ್ನು ಪ್ರವೇಶಿಸು ಎಂದು ಹೇಳಿದರು.

ಉಕ್ತಸ್ತ್ವೇವಂ ವಿಭುನಾ ದೇವರಾಜಃ
ಪ್ರವೇಪಮಾನೋ ಭೃಶಮೇವಾಭಿಷಂಗಾತ್ ।
ಸ್ರಸ್ತೈರಂಗೈರನಿಲೇನೇವ ನುನ್ನ-
ಮಶ್ವತ್ಥಪತ್ರಂ ಗಿರಿರಾಜಮೂರ್ಧ್ನಿ ॥೨೨॥

ಪ್ರಭುಗಳಾದ ರುದ್ರದೇವರಿಂದ ಹೀಗೆ ಹೇಳಲ್ಪಡುತ್ತಿರಲು ದೇವರಾಜನಾದ ಇಂದ್ರನು ಆ ಪರ್ವತದ ಶಿಖರದಲ್ಲಿ ವಾಯುವಿನಿಂದ ಕಂಪಿಸುವ ಅಶ್ವತ್ಥಪತ್ರದಂತೆ ಶಿಥಿಲವಾದ ಅವಯವವುಳ್ಳವನಾಗಿ ಭಯದಿಂದ ನಡುಗಿದನು.

ಸ ಪ್ರಾಂಜಲಿಃ ಸನ್ ವಿನತೇನಾನನೇನ
ಪ್ರವೇಪಮಾನಃ ಸಹಸೈವ ಮುಕ್ತಃ ।
ಉವಾಚ ದೇವಂ ಬಹುರೂಪಮುಗ್ರಂ
ದೃಷ್ಟ್ವಾ ಶೇಷಂ ಭಗವಂಸ್ತ್ವಂ ಭವಾದ್ಯ ॥೨೩॥

ಗುಹಾಪ್ರವೇಶದಿಂದ ನಿವಾರಿಸಲ್ಪಟ್ಟ ಇಂದ್ರನು ವಿನಯದಿಂದ ತಲೆಯನ್ನು ತಗ್ಗಿಸಿ ಕೈಗಳನ್ನು ಮುಗಿದು ನಡುಗುತ್ತಾ ಬಹುರೂಪನೂ, ಶೇಷರೂಪಿಯೂ ಆದ ಅವನನ್ನು ಕುರಿತು ಪೂಜ್ಯನೇ, ನನಗೆ ಈದಿನ ನೀನು ರಕ್ಷಕನಾಗು ಎಂದು ಹೇಳಿದನು.

ತಮಬ್ರವೀದುಗ್ರಧನ್ವಾ ಪ್ರಹಸ್ಯ
ನೈವಂವಿಧಾಃ ಶೇಷಮಿಹಾಪ್ನುವಂತಿ ।
ಏತೇಽಪ್ಯೇವಂ ಭವಿತಾರಃ ಪುರಸ್ತಾತ್
ತಸ್ಮಾದೇತೇ ದರೀಮೇನಾಂ ಪ್ರವಿಷ್ಟಾಃ ॥೨೪॥

ಉಗ್ರಧನ್ವರಾದ ರುದ್ರದೇವರು ನಕ್ಕು, ಅವನನ್ನು ಕುರಿತು ಹೀಗೆ ಅಹಂಕಾರದಿಂದ ಯುಕ್ತರಾದವರು ಮೋಕ್ಷಮಾರ್ಗಭೂತನಾದ, ಶೇಷರೂಪಿಯಾದ ನನ್ನನ್ನು ಹೊಂದುವುದಿಲ್ಲ. ಈ ನಾಲ್ಕೂ ಜನರೂ ಹಿಂದೆ ಹೀಗೆಯೇ ಅಹಂಕಾರಿಗಳಾಗಿದ್ದರು. ಆದ್ದರಿಂದ ಅವರು ಈ ಗುಹೆಯನ್ನು ಪ್ರವೇಶಿಸಿದ್ದಾರೆ.

ಏಷಾ ದೇವೀ ಭವಿತಾ ವೋ ನ ಸಂಶಯೋ
ಯೋನಿಂ ಸರ್ವೇ ಮಾನುಷೀಮಾವಿಶಧ್ವಮ್ ।
ತತ್ರ ಯೂಯಂ ಕರ್ಮ ಕೃತ್ವಾಽವಿಷಹ್ಯಂ
ಭೂಭಾರಸ್ಯ ನಿಧನಂ ಪ್ರಾಪಯಿತ್ವಾ ॥೨೫॥

ಶಸ್ತ್ರೈರ್ದಿವ್ಯೈರ್ಮಾನುಷಾನ್ ಯೋಧಯಿತ್ವಾ
ಶೂರಾನ್ ಸರ್ವೇ ಚಾಹವೇ ತಾನ್ ವಿಮೃದ್ಯ ।
ಆಗಂತಾರಃ ಪುನರೇವೇಂದ್ರಲೋಕಂ
ಸ್ವಕರ್ಮಣಾ ಪೂಜ್ಯಮಾನಾ ಮಹಾರ್ಹಾಃ ।
ಸರ್ವೈರ್ಮಯಾ ಭಾಷಿತಮೇತದೇವಂ
ಕರ್ತವ್ಯಮನ್ಯದ್ ವಿವಿಧಾರ್ಥವಚ್ಚ ॥೨೬॥

ಈ ದೇವಿಯು ನಿಮ್ಮೆಲ್ಲರಿಗೂ ಪತ್ನಿಯಾಗುವಳು. ಇದರಲ್ಲಿ ಸಂಶಯವಿಲ್ಲ. ಎಲ್ಲರೂ ಮನುಷ್ಯಯೋನಿಯನ್ನು ಪ್ರವೇಶಿಸಿ. ಅಲ್ಲಿ ನೀವು ಅಸಾಧಾರಣವಾದ ಕರ್ಮವನ್ನು ಮಾಡಿ ಭೂಭಾರವನ್ನು ಹರಣ ಮಾಡಿ ದಿವ್ಯಶಸ್ತ್ರಗಳಿಂದ ಮನುಷ್ಯರ ಜೊತೆಯಲ್ಲಿ ಯುದ್ಧವನ್ನು ಮಾಡಿ ಯುದ್ಧದಲ್ಲಿ ಆ ಶೂರರೆಲ್ಲರನ್ನೂ ವಿನಾಶಗೊಳಿಸಿ ಪುನಃ ಇಂದ್ರಲೋಕಕ್ಕೆ ಬಂದು ನಿಮ್ಮ ನಿಮ್ಮ ಕರ್ಮಗಳನ್ನು ಮಾಡಿ ಮಹಾಸತ್ಕಾರಕ್ಕೆ ಯೋಗ್ಯರಾಗಿ ಪೂಜ್ಯರಾಗುವಿರಿ. ನಾನು ಹೇಳಿದಂತೆ ನೀವೆಲ್ಲರೂ ಈ ಕಾರ್ಯವನ್ನು ಮಾಡಬೇಕು. ಇದರಿಂದ ಅನೇಕ ಪ್ರಯೋಜನಗಳಿವೆ.

ಪೂರ್ವೇಂದ್ರಾಃ

ಗಮಿಷ್ಯಾಮೋ ಮಾನುಷಂ ದೇವಲೋಕಾದ್
ದುರಾವರೋ ವಿಹಿತೋ ಯತ್ರ ಮೋಕ್ಷಃ ।

ದೇವಾಸ್ತ ಸ್ಥಾನಾದಧೀರನ್ ಜನನ್ಯಾಂ
ಧರ್ಮೋ ವಾಯುರ್ಮಘವಾನಶ್ವಿನೌ ಚ ॥೨೭॥

ನಾವು ದೇವಲೋಕವನ್ನು ಬಿಟ್ಟು ದುರ್ಲಭವಾದ ಮೋಕ್ಷಕ್ಕೆ ಎಲ್ಲಿ ಶ್ರವಣಮನನಾದಿ ಸಾಧನಗಳು ವಿಹಿತವಾಗಿವೆಯೋ ಅಂತಹ ಮನುಷ್ಯ- ಲೋಕಕ್ಕೆ ಹೋಗುವೆವು. ದೇವತೆಗಳಾದ ಧರ್ಮ, ವಾಯು, ಇಂದ್ರ ಮತ್ತು ಅಶ್ವಿನೀದೇವತೆಗಳು ನಮ್ಮನ್ನು ತಾಯಿಯ ಉದರದಲ್ಲಿ ಆಧಾನ ಮಾಡಲಿ.

ವ್ಯಾಸಃ

ಏತಚ್ಛ್ರುತ್ವಾ ವಜ್ರಪಾಣೇರ್ವಚಸ್ತು
ದೇವಶ್ರೇಷ್ಠಃ ಪುನರೇವೇದಮಾಹ ।
ವೀರ್ಯೇಣಾಹಂ ಪುರುಷಂ ಕಾರ್ಯಹೇತೋ-
ರ್ದದ್ಯಾಮೇಷಾಂ ಪಂಚಮಂ ಮತ್ಸುತಮ್ ॥೨೮॥

ಇಂದ್ರನ ಈ ಮಾತುಗಳನ್ನು ಕೇಳಿ ದೇವಶ್ರೇಷ್ಠರಾದ ರುದ್ರದೇವರು, ನಾನು ದೇವಕಾರ್ಯದ ಸಲುವಾಗಿ ನನ್ನಿಂದ ಉತ್ಪನ್ನನಾದ ನನ್ನ ಪರಾಕ್ರಮವನ್ನು ತೆಗೆದುಕೊಂಡು ಜನಿಸುವ ಐದನೆಯ ಪುರುಷನನ್ನು ನಿಮಗೆ ಕೊಡುತ್ತೇನೆ ಎಂದು ಹೇಳಿದರು.

ತೇಷಾಂ ಕಾಮಂ ಭಗವಾನುಗ್ರಕರ್ಮಾ
ಪ್ರಾದಾದಿಷ್ಟಂ ಸನ್ನಿಸರ್ಗಾದ್ ಯಥೋಕ್ತಮ್ ।
ತಾಂ ಚಾಪ್ಯೇಷಾಂ ಯೋಷಿತಂ ಲೋಕಕಾಂತಾಂ
ಶ್ರಿಯಂ ಭಾರ್ಯಾಂ ವ್ಯದಧಾನ್ಮಾನುಷೇಷು ॥೨೯॥

ಉಗ್ರಕರ್ಮರಾದ ರುದ್ರದೇವರು ಅವರಿಗೆ ಇಷ್ಟವಾದ ಕಾಮವನ್ನು ಕೊಟ್ಟು, ಹೇಳಿದಂತೆ ಅವರನ್ನು ಮನುಷ್ಯಯೋನಿಯಲ್ಲಿ ಹಾಕಿದರು. ಇವರ ಭಾರ್ಯೆಯಾದ ಲೋಕಮನೋಹರಳಾದ ಶ್ರೀದೇವಿಯನ್ನೂ ಮನುಷ್ಯಯೋನಿಯಲ್ಲಿ ಹಾಕಿದರು.

(ಸುಖರೂಪರಾದ ವಾಯುದೇವರಲ್ಲಿ ರತರಾದುದರಿಂದ ಭಾರತಿಗೆ ಶ್ರೀ ಎಂದು ಹೆಸರು. ಶಚಿ, ಶ್ಯಾಮಲೆ ಮತ್ತು ಉಷೆಯರು ತಮ್ಮ ತಮ್ಮ ಪತಿಗಳನ್ನು ಆಶ್ರಯಿಸಿರುವುದರಿಂದ ಅವರಿಗೂ ಶ್ರೀದೇವಿ ಎಂದು ಹೆಸರಿದೆ.)

ತೈರೇವ ಸಾರ್ಧಂ ತು ತತಃ ಸ ದೇವೋ
ಜಗಾಮ ನಾರಾಯಣಮಪ್ರಮೇಯಮ್ ।
ಸ ಚಾಪಿ ತದ್ ವ್ಯದಧಾತ್ ಸರ್ವಮೇವ
ತತಃ ಸರ್ವೇ ಸಂಬಭೂವುರ್ಧರಣ್ಯಾಮ್ ॥೩೦॥

ರುದ್ರದೇವರು ಆ ಎಲ್ಲರನ್ನೂ ಕರೆದುಕೊಂಡು ಅಪ್ರಮೇಯನಾದ ನಾರಾಯಣನ ಬಳಿಗೆ ಹೋದರು. ನಾರಾಯಣನೂ ಸಹ ಎಲ್ಲವೂ ಹಾಗೆಯೇ ಆಗಲಿ ಎಂದು ಸಮ್ಮತಿಸಿದ ಮೇಲೆ ಅವರೆಲ್ಲರೂ ಭೂಮಿಯಲ್ಲಿ ಜನಿಸಿದರು.

ನರಂ ತು ದೇವಂ ವಿಬುಧಪ್ರಧಾನ-
ಮಿಂದ್ರಾದ್ ವಿಷ್ಣುಃ ಪಂಚಮಂ ಕಲ್ಪಯಿತ್ವಾ ।
ಸ ಚಾಪಿ ಕೇಶೌ ಹರಿರುದ್ಬಬರ್ಹ
ಶುಕ್ಲಮೇಕಮಪರಂ ಚಾಪಿ ಕೃಷ್ಣಮ್ ॥೩೧॥

ವಿಷ್ಣುವು ದೇವಪ್ರಧಾನನಾದ ಇಂದ್ರನನ್ನು ಶೇಷದೇವರಿಂದ ಮತ್ತು ವಾಯುದೇವರಿಂದ ಕೂಡಿದ ನರಾವೇಶವುಳ್ಳವನಾಗಿ ಐದನೆಯವನನ್ನಾಗಿ ಕಲ್ಪಿಸಿ ತನ್ನ ಕೂದಲುಗಳಲ್ಲಿ ಒಂದು ಬಿಳಿಯ ಕೂದಲನ್ನೂ, ಒಂದು ಕಪ್ಪು ಕೂದಲನ್ನೂ ಕಿತ್ತನು.

ತೌ ಚಾಪಿ ಕೇಶೌ ವಿಶತಾಂ ಯದೂನಾಂ
ಕುಲೇ ಸ್ತ್ರಿಯೋ ದೇವಕೀಂ ರೋಹಿಣೀಂ ಚ ।
ತಯೋಃ ಶ್ವೇತೋ ಬಲದೇವೋ ಬಭೂವ
ಕೃಷ್ಣೋ ದ್ವಿತೀಯಃ ಕೇಶವಃ ಸಂಬಭೂವ ॥೩೨॥

ಆ ಎರಡು ಕೇಶಗಳೂ ಸಹ ಯದುಕುಲವನಿತೆಯರಾದ ರೋಹಿಣಿ ಮತ್ತು ದೇವಕಿಯರನ್ನು ಪ್ರವೇಶಿಸಿದವು. ಶ್ವೇತಕೇಶವು ಬಲರಾಮನಾಗಿ ಅವತರಿಸಿತು. ಎರಡನೆಯ ಕೃಷ್ಣಕೇಶವು ಕೇಶವನಾಗಿ (ಕೃಷ್ಣನಾಗಿ) ಅವತರಿಸಿತು.

ಯೇ ತೇ ಪೂರ್ವಂ ಶಕ್ರರೂಪಾ ನಿವಿಷ್ಟಾಃ
ತಸ್ಯಾಂ ದರ್ಯಾಂ ಪರ್ವತಸ್ಯೋತ್ತಮಸ್ಯ ।
ಇಹೈವ ತೇ ಪಾಂಡವಾ ವೀರ್ಯವಂತಃ
ಶಕ್ರಸ್ಯಾಂಶಃ ಪಾಂಡವಃ ಸವ್ಯಸಾಚೀ ॥೩೩॥

ಹಿಂದೆ ಆ ಶ್ರೇಷ್ಠಪರ್ವತದ ಗುಹೆಯಲ್ಲಿ ಇದ್ದವರೇ ಇಲ್ಲಿ ಪರಾಕ್ರಮಶಾಲಿಗಳಾದ ಪಾಂಡವರಾದರು. ಪಾಂಡುಪುತ್ರನಾದ ಸವ್ಯಸಾಚಿಯು ಇಂದ್ರನ ಅಂಶ. (ಇಂದ್ರನ ಅಂಶವಾಗಿ ಅವತರಿಸಿದನು)

ಏವಮೇತೇ ಪಾಂಡವಾಃ ಸಂಬಭೂವು-
ರ್ಯೇ ತೇ ರಾಜನ್ ಪೂರ್ವಮಿಂದ್ರಾ ಬಭೂವುಃ ।
ಲಕ್ಷ್ಮೀಶ್ಚೈಷಾಂ ಪೂರ್ವಮೇವೋಪದಿಷ್ಟಾ
ಭಾರ್ಯಾ ಚೈಷಾ ದ್ರೌಪದೀ ವ್ಯಕ್ತರೂಪಾ ॥೩೪॥

ರಾಜನೇ, ಹಿಂದೆ ಇಂದ್ರರಾಗಿದ್ದ ಇವರೆಲ್ಲರೂ ಪಾಂಡವರಾಗಿ ಜನಿಸಿದರು. ಎಲ್ಲಾ ಲಕ್ಷಣಗಳಿಂದ ಕೂಡಿದ ಇವರ ಭಾರ್ಯೆಯೇ ವ್ಯಕ್ತವಾದ ಸೌಂದರ್ಯವುಳ್ಳ ಈ ದ್ರೌಪದಿಯಾಗಿದ್ದಾಳೆ.

ಕಥಂ ಹಿ ಸ್ತ್ರೀ ಕರ್ಮಣೋಂಽತೇ ಮಹೀತಳಾತ್
ಸಮುತ್ತಿಷ್ಠೇದನ್ಯತೋ ದೈವಯೋಗಾತ್ ।
ಯಸ್ಯಾ ರೂಪಂ ಸೋಮಸೂರ್ಯಪ್ರಕಾಶಂ
ಗಂಧಶ್ಚಾಗ್ರ್ಯಃ ಕ್ರೋಶಮಾತ್ರಾತ್ ಪ್ರವಾತಿ ॥೩೫॥

ಇಂತಹ ದೈವಯೋಗವಿಲ್ಲದಿದ್ದರೆ ಯಜ್ಞರೂಪವಾದ ಕರ್ಮದ ಕೊನೆಯಲ್ಲಿ ಒಬ್ಬ ವನಿತೆಯು ಭೂಮಿಯಿಂದ ಎದ್ದು ಬರುವುದು ಹೇಗೆ? ಅಪ್ರತಿಮವಾದ ಸೋಮಸೂರ್ಯಕಾಂತಿಯನ್ನು ಹೊಂದಿರುವ ಅವಳ ಸೌಂದರ್ಯವೂ ಒಂದು ಕ್ರೋಶದಿಂದ ಬೀಸುವ ಅವಳ ಸುಗಂಧವೂ (ದೈವಯೋಗವಿಲ್ಲದಿದ್ದರೆ) ಹೇಗೆ ಸಾಧ್ಯವಾಗುತ್ತದೆ?

ಇದಂ ಚಾನ್ಯತ್ ಪ್ರೀತಿಪೂರ್ವಂ ನರೇಂದ್ರ
ದದಾಮಿ ತೇ ದಿವ್ಯಮತ್ಯದ್ಭುತಂ ಚ ।
ದಿವ್ಯಂ ಚಕ್ಷುಃ ಪಶ್ಯ ಕುಂತೀಸುತಾಂಸ್ತ್ವಂ
ಪುಣ್ಯೈರ್ದಿವ್ಯೈಃ ಪೂರ್ವದೇಹೈರುಪೇತಾನ್ ॥೩೬॥

ನರೇಂದ್ರನೇ, ನಾನು ನಿನಗೆ ಪ್ರೀತಿಪೂರ್ವಕವಾಗಿ ಅನುಗ್ರಹವನ್ನು ಮಾಡಿ ಅದ್ಭುತವಾದ ದಿವ್ಯದೃಷ್ಟಿಯನ್ನು ಕೊಡುತ್ತೇನೆ. ನೀನು ದಿವ್ಯಚಕ್ಷುಸ್ಸನ್ನು ಹೊಂದಿ ಈ

ಕುಂತಿಯ ಪುತ್ರರು ಪವಿತ್ರವಾದ ಮತ್ತು ದಿವ್ಯವಾದ ಪೂರ್ವದೇಹಗಳನ್ನು ಹೊಂದಿರುವುದನ್ನು ನೋಡು.

ವೈಶಂಪಾಯನಃ

ತತೋ ವ್ಯಾಸಃ ಪರಮೋದಾರಕರ್ಮಾ
ಶುಚಿರ್ವಿಪ್ರಸ್ತಪಸಾ ತಸ್ಯ ರಾಜ್ಞಃ ।
ಚಕ್ಷುರ್ದಿವ್ಯಂ ಪ್ರದದೌ ತೇನ ಸರ್ವಾನ್
ರಾಜಾऽಪಶ್ಯತ್ ಪೂರ್ವದೇಹೈರುಪೇತಾನ್ ॥೩೭॥

ಅನಂತರ, ಶುಚಿಯೂ, ಪರಮೋದಾರಕರ್ಮರೂ, ವಿಪ್ರರೂ ಆದ ವ್ಯಾಸರು ತಮ್ಮ ತಪೋಬಲದಿಂದ ಆ ರಾಜನಿಗೆ ದಿವ್ಯದೃಷ್ಟಿಯನ್ನು ನೀಡಿದರು. ರಾಜನು ದಿವ್ಯದೃಷ್ಟಿಯಿಂದ ಪೂರ್ವದೇಹಗಳಿಂದ ಯುಕ್ತರಾದ ಆ ಎಲ್ಲರನ್ನೂ ನೋಡಿದನು.

ತತೋ ದಿವ್ಯಾನ್ ಹೇಮಕಿರೀಟಮಾಲಿನಃ
ಶಕ್ರಪ್ರಖ್ಯಾನ್ ಪಾವಕಾದಿತ್ಯವರ್ಣಾನ್
ಬದ್ಧಾಪೀಡಾಂಶ್ಚಾರುರೂಪಾಂಶ್ಚ ಯೂನೋ
ವ್ಯೂಢೋರಸ್ಕಾನ್ ಸಾಲಮಾತ್ತ್ರಾನ್ ದದರ್ಶ ॥೩೮॥

ರಾಜನು ಚಿನ್ನದ ಕಿರೀಟವನ್ನೂ ಮತ್ತು ಮಾಲೆಗಳನ್ನೂ ಧರಿಸಿದ, ಇಂದ್ರನ ತೇಜಸ್ಸನ್ನು ಹೊಂದಿರುವ, ಅಗ್ನಿ ಮತ್ತು ಆದಿತ್ಯ ವರ್ಣಗಳನ್ನು ಹೊಂದಿರುವ, ತಲೆಗಳ ಮೇಲೆ ಉಷ್ಣೀಷಗಳನ್ನು ಧರಿಸಿರುವ, ಮನೋಹರ ರೂಪವನ್ನುಳ್ಳ, ಉನ್ನತವಾದ ವಕ್ಷಸ್ಥಳವುಳ್ಳ, ಸಾಲವೃಕ್ಷದಂತೆ ಎತ್ತರವಾದ ಯುವಕರಾದ ಅವರೆಲ್ಲರನ್ನೂ ನೋಡಿದನು.

ದಿವ್ಯೈರ್ವಸ್ತ್ರೈರರಜೋಭಿಃ ಸುವರ್ಣೈ-
ರ್ಮಾಲ್ಯೈಶ್ಚಾಗ್ರ್ಯೈಃ ಶೋಭಮಾನಾನತೀವ ।
ಸಾಕ್ಷಾತ್ ತ್ರ್ಯಕ್ಷಾನ್ ವಾಸವಾನ್ ವಾऽಥ ದಿವ್ಯಾನ್
ಆದಿತ್ಯಾನ್ ವಾ ಸರ್ವಗುಣೋಪಪನ್ನಾನ್ ॥೩೯॥

ಶುಭ್ರವಾದ ಕಲ್ಮಶರಹಿತವಾದ ದಿವ್ಯವಸ್ತ್ರಗಳನ್ನು ಧರಿಸಿದ್ದಂತಹ, ಶ್ರೇಷ್ಠವಾದ ಸುವರ್ಣಮಾಲೆಗಳನ್ನು ಧರಿಸಿದ್ದಂತಹ, ಸಾಕ್ಷಾತ್ ರುದ್ರರಂತೆ ಅಥವಾ ಇಂದ್ರರಂತೆ ಅಥವಾ ಸೂರ್ಯರಂತೆ ಸರ್ವಗುಣದಿಂದ ಕೂಡಿದವರಾಗಿ ಬೆಳಗುತ್ತಿದ್ದ ಅವರನ್ನು ನೋಡಿದನು.

ಪೂರ್ವೇಂದ್ರಾಂಸ್ತಾನೇವಮೀಕ್ಷ್ಯಾಭಿರೂಪಾನ್
ಪ್ರೀತೋ ರಾಜಾ ದ್ರುಪದೋ ವಿಸ್ಮಿತಶ್ಚ।
ದಿವ್ಯಾಂ ಮಾಯಾಂ ತಾಮವಾಪ್ಯಾಪ್ರಮೇಯಾಂ
ತಾಂ ಚೈವಾಗ್ರ್ಯಾಂ ಶ್ರಿಯಮಿವ ರೂಪಿಣೀಂ ಚ ॥೪೦॥

ಯೋಗ್ಯಾಂ ತೇಷಾಂ ರೂಪತೇಜೋಯಶೋಭಿಃ ।
ಪುತ್ರೀಮಿಷ್ಟಾಂ ದೃಷ್ಟವಾನ್ ಪಾರ್ಥಿವೇಂದ್ರಃ ॥೪೧॥

ದ್ರುಪದರಾಜನು ಅಭಿರೂಪರಾದ ಪೂರ್ವೇಂದ್ರರನ್ನು ಈ ರೀತಿಯಲ್ಲಿ ನೋಡಿ ವಿಸ್ಮಯವನ್ನೂ ಮತ್ತು ಸಂತೋಷವನ್ನೂ ಹೊಂದಿದನು. ರೂಪ, ತೇಜಸ್ಸು ಮತ್ತು ಕಾಂತಿಗಳಿಂದ ಅವರಿಗೆ ಅನುರೂಪಳಾದ ಲಕ್ಷ್ಮಿಯಂತೆ ಕಂಗೊಳಿಸುತ್ತಿರುವ ಅಪ್ರಮೇಯವಾದ ಮಹಿಮೆಯುಳ್ಳ ತನ್ನ ಮಗಳ ದಿವ್ಯವಾದ ರೂಪವನ್ನೂ ರಾಜನು ನೋಡಿದನು.

ಸ ತಾಂ ದೃಷ್ಟ್ವಾ ಮಹದಾಶ್ಚರ್ಯರೂಪಾಂ
ಜಗ್ರಾಹ ಪಾದೌ ಸತ್ಯವತ್ಯಾಃ ಸುತಸ್ಯ ।
ನೈತಚ್ಚಿತ್ರಂ ಪರಮರ್ಷೇ ತ್ವಯೀತಿ
ಪ್ರಸನ್ನಚೇತಾಃ ಸ ಉವಾಚ ಚೈನಮ್ ॥೪೨॥

ರಾಜನು ಮಹದಾಶ್ಚರ್ಯಕರವಾದ ದ್ರೌಪದಿಯ ಆ ರೂಪವನ್ನು ನೋಡಿ ಸತ್ಯವತೀಸುತರಾದ ವ್ಯಾಸರ ಪಾದಗಳನ್ನು ಹಿಡಿದು ಪರಮರ್ಷಿಗಳೇ, ನಿಮ್ಮಲ್ಲಿ ನಿಮ್ಮ ತಪಸ್ಸಿಗೆ ನಿಲುಕದ ಯಾವ ಆಶ್ಚರ್ಯವೂ ಇಲ್ಲ (ನಿಮ್ಮ ಯೋಗ್ಯತೆಗೆ ಇದು ಆಶ್ಚರ್ಯವಲ್ಲ) ಎಂದು ಪ್ರಸನ್ನವಾದ ಮನಸ್ಸಿನಿಂದ ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಸಪ್ತನವತ್ಯಧಿಕಶತತಮೋऽಧ್ಯಾಯಃ॥
॥ ಇತಿ ವೈವಾಹಿಕಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರತೊಂಭತ್ತೇಳನೆಯ ಅಧ್ಯಾಯ ಮುಗಿಯಿತು.

★★★★★

ಮಹಾಭಾರತ ತಾತ್ಪರ್ಯ ನಿರ್ಣಯ - ಅಧ್ಯಾಯ-೧೯

ದತ್ತ್ವಾಽಭಯಂ ಸ ಭಗವಾನ್ ದ್ರುಪದಸ್ಯ ಕಾರ್ಯೇ
ತೇನೋಮಿತಿ ಸ್ಮ ಕಥಿತೇ ಸ್ವಯಮೇವ ಸರ್ವಾಂ ।
ವೈವಾಹಿಕೀಂ ಕೃತಿಮಥ ವ್ಯದಧಾಚ್ಚ ಧೌಮ್ಯ-
ಯುಕ್ತಃ ಕ್ರಮೇಣ ಜಗೃಹುರ್ನಿಖಿಲಾಶ್ಚ ಪಾಣಿಮ್ ॥೧೫೮॥

ಭಗವಾನ್ ವೇದವ್ಯಾಸರು ದ್ರುಪದನಿಗೆ ಅಭಯ ನೀಡಿ, ಅವನು ಕನ್ಯಾದಾನ ಕಾರ್ಯಕ್ಕೆ ಸಮ್ಮತಿಸಿದಾಗ ಧೌಮ್ಯರ ಜೊತೆಗೆ ತಾನೇನಿಂತು ಎಲ್ಲ ವಿವಾಹ ಕಾರ್ಯಗಳನ್ನು ನಡೆಸಿಕೊಟ್ಟರು. ಪಾಂಡವರೆಲ್ಲರೂ ಕ್ರಮವಾಗಿ ಪಾಣಿಗ್ರಹಣ ಮಾಡಿದರು.

ಪಾಂಚಾಲಕೇಷು ಚ ಮಹೋತ್ಸವ ಆಸ ರಾಜಾ
ತುಷ್ಟೋಽಭವತ್ ಸಹ ಸುತೈಃ ಸ್ವಜನೈಶ್ಚ ಸರ್ವೈಃ ।
ಪೌರೈಶ್ಚ ಜಾನಪದಿಕೈಶ್ಚ ಯಥೈವ ರಾಮೇ
ದತ್ತ್ವಾ ಸುತಾಂ ಜನಕ ಆಪ ಮುದಂ ತತೋಽನು ॥೧೫೯॥

ಪಾಂಚಾಲದೇಶದಲ್ಲಿ ಮಂಗಳ ಮಹೋತ್ಸವ ನಡೆಯಿತು. ರಾಜ ತನ್ನ ಮಕ್ಕಳು ಮತ್ತು ಬಂಧುಗಳೆಲ್ಲರ ಜೊತೆಗೆ, ಪೌರರ ಮತ್ತು ದೇಶವಾಸಿಗಳ ಜೊತೆಗೆ ಮಹೋತ್ಸವದ ಆನಂದವನ್ನು ಅನುಭವಿಸಿದ. ಹಿಂದೆ ಶ್ರೀರಾಮನಿಗೆ ತನ್ನ ಮಗಳನ್ನಿತ್ತು ಜನಕರಾಜ ಮುದಗೊಂಡಂತೆ, ದ್ರುಪದನೂ ಮುದಗೊಂಡ.

ಉದ್ವಾಹ್ಯ ತತ್ರ ನಿವಸತ್ಸು ಚ ಪಾಂಡವೇಷು
ಶ್ರುತ್ವೈವ ರಾಮಸಹಿತಃ ಸಹ ಯಾದವೈಶ್ಚ ।
ಆದಾಯ ಪಾರಿಬರ್ಹಂ ಬಹುಲಂ ಸ ಕೃಷ್ಣ
ಆಯಾನ್ಮೃದೈವ ಪೃಥಯಾ ಸಹಿತಾಂಶ್ಚ ಪಾರ್ಥಾನ್ ॥೧೬೦॥

ಪಾಂಡವರು ಮದುವೆಯಾಗಿ ಪಾಂಚಾಲದೇಶದಲ್ಲಿದ್ದಾಗ ಆ ವೃತ್ತಾಂತವನ್ನು ಕೇಳಿ ಶ್ರೀಕೃಷ್ಣ ಬಲರಾಮ ಮತ್ತು ಯಾದವರ ಸಹಿತನಾಗಿ ಬಹಳ ಉಡುಗೊರೆಗಳನ್ನು ತೆಗೆದುಕೊಂಡು ಕುಂತೀಸಮೇತರಾದ ಪಾಂಡವರ ಬಳಿಗೆ ಆನಂದದಿಂದ ಬಂದ.

ದೃಷ್ಟ್ವೈವ ತಂ ಮುಮುದುರಾಶು ಕುರುಪ್ರವೀರಾ
ಆಶ್ಲಿಷ್ಯ ಕೃಷ್ಣಮಥ ನೇಮುರಸೌ ಚ ಕೃಷ್ಣಾಂ ।
ದೃಷ್ಟ್ವಾ ಪ್ರದಾಯ ಗೃಹಯೋಗ್ಯಸಮಸ್ತಭಾಂಡಂ
ಸೌವರ್ಣಮೇಭ್ಯ ಉರುಭೂಷಣಮಚ್ಯುತೋಽದಾತ್ ॥೧೬೧॥

ಶ್ರೀಕೃಷ್ಣನನ್ನು ಕಂಡೊಡನೆ ಪಾಂಡವರು ಆನಂದಿಸಿದರು. ಬೇಗನೆ ಅವನನ್ನು ಆಲಿಂಗಿಸಿ ನಮಿಸಿದರು. ಕೃಷ್ಣ ದ್ರೌಪದಿಯನ್ನು ನೋಡಿ ಮನೆಗೆ ಬೇಕಾಗುವ ಎಲ್ಲ ಪಾತ್ರೆಗಳನ್ನೂ ನೀಡಿ ಪಾಂಡವರಿಗೆ ಬಹಳ ಚಿನ್ನದ ಆಭರಣಗಳನ್ನು ನೀಡಿದ.

ದೇವಾಂಗಯೋಗ್ಯಶುಭಕುಂಡಲಹಾರಮೌಲಿ-
ಕೇಯೂರವಸ್ತ್ರಸಹಿತಾನ್ಯುರುಭೂಷಣಾನಿ ।
ಷಣ್ಣಾಂ ಪೃಥಕ್ ಪೃಥಗದಾತ್ ಪೃಥಗೇವ ಯೋಗ್ಯಾ-
ನ್ಯನ್ಯದ್ ದದಾವಥ ಪಿತೃಷ್ವಸುರಾತ್ಮ ಯೋಗ್ಯಂ ॥೧೬೨॥

ದೇವತೆಗಳ ಮೈಗೆ ಯೋಗ್ಯವಾದ ಶುಭಕರವಾದ ಕುಂಡಲ, ಹಾರ, ಕಿರೀಟ, ತೋಳ್ಬಂದಿ ವಸ್ತ್ರಮತ್ತು ಅನೇಕ ಆಭರಣಗಳನ್ನೂ ಆರುಮಂದಿಗೂ ಬೇರೆ ಬೇರೆಯಾಗಿ ಅವರವರಿಗೆ ತಕ್ಕುದಾದಂತೆ ಶ್ರೀಕೃಷ್ಣ ನೀಡಿದ, ಬಳಿಕೆ ಸೋದರತ್ತೆಯಾದ ಕುಂತಿಗೂ ಅವಳಿಗೆ ಯೋಗ್ಯವಾದ ಉಡುಗೊರೆ ಇತ್ತ.

ರತ್ನಾನಿ ಗಾ ಗಜತುರಂಗರಥಾನ್ ಸುವರ್ಣ-
ಭಾರಾನ್ ಬಹೂನಪಿ ದದಾವಥ ಚಾಶಿಷೋಽಗ್ರ್ಯಾಃ ।
ವ್ಯಾಸೋಽಪ್ಯದಾದಿಹ ಪರತ್ರ ಚ ಪಾರ್ಷತೋಽಪಿ
ಭೂಷಾರಥಾಶ್ವಗಜರತ್ನಸುಕಾಂಚನಾನಿ ॥೧೬೩॥

ಶ್ರೀಕೃಷ್ಣ ಪಾಂಡವರಿಗೆ ರತ್ನಗಳನ್ನೂ ಗೋವು ಗಜ ತುರಗ ರಥಗಳನ್ನೂ ಬಹಳ ಸುವರ್ಣ ಭಾರಗಳನ್ನೂ ಕೊಟ್ಟ. ಇಹ ಪರಗಳಲ್ಲಿ ಉತ್ತಮ ಸುಖದ ಆಶೀರ್ವಾದಗಳನ್ನು ವೇದವ್ಯಾಸರು ಇತ್ತರು. ದ್ರುಪದ ಭೂಷಣ ರಥ ಅಶ್ವಗಜ ರತ್ನ ಸುವರ್ಣಗಳನ್ನಿತ್ತ.

ದಾಸೀಶ್ಚ ದಾಸಸಹಿತಾಃ ಶುಭರೂಪವೇಷಾಃ
ಸಾಹಸ್ರಶೋ ದದತುರತ್ರ ಹರಿರ್ನೃಪಶ್ಚ ।

ತಾಸಾಂ ವಿಚಿತ್ರವಸನಾನ್ಯುರುರತ್ನಮಾಲಾಃ
ಪ್ರತ್ಯೇಕಶೋ ದದತುರಪ್ಯುರುಭೂಷಣಾನಾಂ ॥೧೬೪॥

ಮಂಗಲ ರೂಪವೇಷಗಳಿಂದ ಯುಕ್ತರಾದ ಸಾವಿರಾರು ದಾಸದಾಸಿಯರನ್ನೂ ಶ್ರೀಕೃಷ್ಣದ್ರುಪದರು ನೀಡಿದರು. ಬಹು ಆಭರಣಗಳಿಂದ ಅಲಂಕೃತರಾದ ದಾಸಿಯರೂ ಸುಂದರವಸ್ತ್ರಗಳನ್ನು, ಬಹಳ ರತ್ನಹಾರಗಳನ್ನು ಬೇರೆಬೇರೆಯಾಗಿ ನೀಡಿದರು.

ಮಾಸಾನ್ ಬಹೂನಪಿ ವಿಹೃತ್ಯ ಸಹೈವ ಪಾರ್ಥೈಃ
ಕೃಷ್ಣೋ ಯಯೌ ಯದುಪುರೀಂ ಸಹಿತೋಽಗ್ರಜೇನ ।
ಅಂತರ್ಹಿತೇ ಭಗವತಿ ಪ್ರತತೋರುಶಕ್ತೌ
ವ್ಯಾಸೇ ಚ ವತ್ಸರಮಿಹೋಷುರಿಮೇ ತು ಪಾರ್ಥಾಃ ॥೧೬೫॥

ಅನೇಕ ತಿಂಗಳುಗಳ ಕಾಲ ಪಾಂಡವರೊಂದಿಗೆ ಶ್ರೀಕೃಷ್ಣ ವಿಹರಿಸಿ ಬಲರಾಮನೊಂದಿಗೆ ದ್ವಾರಕೆಗೆ ತೆರಳಿದ. ಪೂರ್ಣಮಹಾಶಕ್ತಿಯುಳ್ಳ ಭಗವಾನ್ ವ್ಯಾಸರೂ ಅಂತರ್ಧಾನಗೊಂಡ ಬಳಿಕ ಪಾಂಡವರು ಒಂದು ವರ್ಷ ಪಾಂಚಾಲ ನಗರದಲ್ಲಿ ವಾಸವಾಗಿದ್ದರು.

ಊಷುಸ್ತಥೈವ ಪರಿವತ್ಸರಪಂಚಕಂ ತೇ
ಪಾಂಡೋರ್ಗೃಹೇ ಸುಸುಖಿನೋಽಖಿಲಭೋಗಯುಕ್ತಾಃ ।
ಕೃಷ್ಣಾ ಚ ತೇಷು ಪೃಥಗೇವ ಚತುಃಸ್ವರೂಪಾ
ರೇಮೇ ತಥೈಕತನುರಪ್ಯಭಿಮಾನಿಭೇದಾತ್ ॥೧೬೬॥

ಪಾಂಡವರು ಪಾಂಡುವಿನ ಮನೆಯಲ್ಲಿ ಹಾಗೇ ಐದು ಪರಿವತ್ಸರಗಳಷ್ಟು ಕಾಲ ಸಕಲ ಭೋಗಯುಕ್ತರಾಗಿ ಸುಖಿಗಳಾಗಿ ವಾಸಮಾಡಿದರು. ದ್ರೌಪದಿ ಒಂದೇ ಶರೀರದವಳಾದರೂ ಅಭಿಮಾನಿ ಭೇದ ಪ್ರಯುಕ್ತ ಪ್ರತ್ಯೇಕ ನಾಲ್ಕು ಸ್ವರೂಪ ಉಳ್ಳವಳಾಗಿ ಪಾಂಡವರಲ್ಲಿ ರಮಿಸಿದಳು.

ಕನ್ಯೈವ ಸಾಽಭವದತಃ ಪ್ರತಿವಾಸರಂ ಚ
ಜನ್ಮಾಭವದ್ಭ್ಯಭಿಮತೇಃ ಪೃಥಗೇವ ನಾಶಾತ್ ।
ಪ್ರಾಯೋ ಹಿ ನಾಭಿಮತಿನಾಶಮವಾಪ ವಾಣೇ
ತಸ್ಮಾನ್ನರುಚ್ಚ ಸಕಲೇಷ್ವಭಿವಿಷ್ಟ ಆಸೀತ್ ॥೧೬೭॥

ಪ್ರತಿದಿನವೂ ದ್ರೌಪದಿ ಕನ್ಯೆಯಾಗುತ್ತಿದ್ದಳು. ಏಕೆಂದರೆ ಪ್ರತಿದಿನವೂ ಶರೀರಾಭಿಮಾನಗಳು ಪ್ರತ್ಯೇಕವಾಗಿ ನಾಶಹೊಂದಿ ಪುನರುತ್ಪತ್ತಿಯಾಗುತ್ತಿದ್ದುದರಿಂದ ಪ್ರತಿದಿನ ಮರಣವೂ ಜನನವೂ ಉಂಟಾಗುತ್ತಿತ್ತು. ಭಾರತಿ ಮಾತ್ರ ಎಂದೂ ಪೂರ್ತಿ ಶರೀರಾಭಿಮಾನನಾಶ ಹೊಂದುತ್ತಿರಲಿಲ್ಲ. ಆದರಿಂದ ವಾಯು ಎಲ್ಲ ನಾಲ್ಕೂ ಜನ ಪಾಂಡವರಲ್ಲಿ ಪ್ರವಿಷ್ಟನಾಗಿದ್ದ.

ಧರ್ಮಾತ್ಮಜಾದಿಷು ಮರುತ್ ಪ್ರತಿವಿಷ್ಟ ಏಷಾಂ
ಬುದ್ಧಿಂ ವಿಮೋಹ್ಯ ರಮತೇ ಸತತಂ ತಯಾ ಯತ್ ।
ಶುದ್ಧೈವ ಸಾ ಹಿ ತತ ಏವ ದಿನೇದಿನೇ ಚ
ಸಮ್ಮೋಹತೋ ಮರಣವದ್ ಭವತೀಹ ಕನ್ಯಾ ॥೧೮೫॥

ಧರ್ಮರಾಜ ಮುಂತಾದವರಲ್ಲಿ ಪ್ರವಿಷ್ಟನಾದ ವಾಯು ಸದಾ ಅವರ ಬುದ್ಧಿಯನ್ನು ಭಾರತೀದೇವಿಯ ವಿಷಯದಲ್ಲಿ ನಿಷ್ಠೆಯಗೊಳಿಸಿಯೆ ಅವಳೊಡನೆ ರಮಿಸುತ್ತಿದ್ದ. ಆದರಿಂದ ದೇವಿ ಶುದ್ಧಳೇ ಆಗಿರುತ್ತಿದ್ದಳು. ಪ್ರತಿದಿನದಲ್ಲಿಯೂ ಮರಣದಲ್ಲಿ ಹೇಗೋಹಾಗೆ ಬುದ್ಧಿಗೆ ನಿಷ್ಠೆಯತೆ ಬರುತ್ತಿದ್ದುದರಿಂದ ಕನ್ಯೆಯೆ ಆಗುತ್ತಿದ್ದಳು.

ನೋ ಸುಪ್ತಿವತ್ ತ್ವಿದಮತೋಽನ್ಯವಶತ್ವತೋ ಹಿ
ದೇಹಸ್ಯ ಸಂಸೃತಿತ ಏವ ಹರೇರ್ನ ಮೋಹಃ ।
ನಾವೇಶವಚ್ಚ ತತ ಏವ ಮೃತೇಃ ಸ್ವರೂಪ-
ಮೇತತ್ ತ್ವತಃ ಪ್ರತಿದಿನಂ ಜನನಾದ್ಧಿ ಕನ್ಯಾ .॥೧೮೬॥

ದೇಹವನ್ನು ಅನ್ಯವಶಮಾಡಿ ಅಭಿಮಾನತ್ಯಾಗ ಮಾಡುತ್ತಿದ್ದುದರಿಂದ, ಹರಿಸ್ಮರಣೆಯನ್ನೂ ಮಾಡುತ್ತಿದ್ದುದರಿಂದ ದೇವಿಯರಿಗೆ ಇದು ಸುಪ್ತಿಯಂತೆಯೂ ಅಲ್ಲ, ಮೂರ್ಛೆಯಂತೆಯೂ ಅಲ್ಲ, ಆವೇಶದಂತೆಯೂ ಅಲ್ಲ, ಮರಣ ಸ್ವರೂಪವೇ ಆಗಿತ್ತು. ಆದರಿಂದ ಪ್ರತಿದಿನವೂ ಜನನವಿದ್ದುದರಿಂದ ಕನ್ಯೆಯಾಗುತ್ತಿದ್ದಳು.

ಏವಂ ಸ ವಾಯುರನುವಿಷ್ಟಯುಧಿಷ್ಠಿರಾದಿ-
ಭೀಮಾನ್ಮನೈವ ರಮತೇ ಸತತಂ ತಯೈಕಃ ।
ಅನ್ಯಾದೃಶಾ ಹಿ ಸುರಭುಕ್ತಿರತೋಽನ್ಯರೂಪಾ
ಮಾನುಷ್ಯಭುಕ್ತಿ ರಿತಿ ನಾತ್ರ ವಿಚಾರ್ಯಮಸ್ತಿ ॥೧೮೭॥

ಹೀಗೆ ಒಬ್ಬನೇ ವಾಯು ಧರ್ಮರಾಜಾದಿಗಳಲ್ಲಿ ಆವೇಶಗೊಂಡು ನಾಲ್ಕು ಅಂಶ ರೂಪಗಳಿಂದಲೂ ಭೀಮರೂಪದಿಂದಲೂ ಭಾರತೀದೇವಿಯೊಡನೆಯೇ ಸದಾ ರಮಿಸುತ್ತಿದ್ದ. ದೇವತೆಗಳು ರಮಿಸುವ ರೀತಿಯೇ ಬೇರೆ. ಮನುಷ್ಯರು ರಮಿಸುವ ರೀತಿಯೇ ಬೇರೆ. ಆದರಿಂದ ಈ ವಿಷಯದಲ್ಲಿ ವಿಚಾರಣೀಯವಾದ ಅಂಶ ಏನೂ ಉಳಿಯುವುದಿಲ್ಲ.

ವಾಸಿಷ್ಠಯಾದವವೃಷಾವಪಿ ಕೇಶವೌ ತೌ
ತತ್ರೋಷತುಃ ಪರಮಸೌಹೃದತೋ ಹಿ ತೇಷು ।
ತಾಭ್ಯಾಮನಂತಗುಣಪೂರ್ಣಸುಖಾತ್ಮಕಾಭ್ಯಾಂ
ಪಾರ್ಥಾಶ್ಚ ತೇ ಮುಮುದಿರೇ ಯುತಸತ್ಕಥಾಭಿಃ ॥೧೮೮॥

ವೇದವ್ಯಾಸರೂ ಶ್ರೀಕೃಷ್ಣನೂ ಪಾಂಡವರಲ್ಲಿ ಪರಮಪ್ರೀತಿಯಿಂದ ಅವರ ಮನೆಗಳಲಿಯೇ ವಾಸ ಮಾಡಿದರು. ಅನಂತಗುಣಪೂರ್ಣರೂ ಪೂರ್ಣ ಸುಖ ಸ್ವರೂಪರೂ ಆದ ಅವರಿಬ್ಬರೊಡನೆ ಪಾಂಡವರು ಅನ್ಯೋನ್ಯವಾಗಿ ಮಧುರ ಸಂಭಾಷಣೆಗಳಿಂದ ಆನಂದಿಸಿದರು.

★ ★ ★ ★

ನೂರ ತೊಂಭತ್ತೆಂಟನೆಯ ಅಧ್ಯಾಯ

(ವ್ಯಾಸರಿಂದ ದ್ರೌಪದಿಯ ದೇವತಾಂಶತ್ವ ಸಮರ್ಥನೆ. ದ್ರುಪದನಿಂದ ವ್ಯಾಸರ ಅಭಿಪ್ರಾಯದ ಅಂಗೀಕಾರ, ವಿವಾಹ, ಉಡುಗೊರೆಗಳು ಮತ್ತು ಎಲ್ಲರ ಹರ್ಷ.)

ವ್ಯಾಸಃ

ಇದಂ ಚಾಪಿ ಪುರಾವೃತ್ತಂ ಮನ್ನಿಬೋಧ ಚ ಭೂಮಿಪ ।
ಕೀರ್ತ್ಯಮಾನಂ ನೃಪರ್ಷೀಣಾಂ ಪೂರ್ವೇಷಾಂ ದಾರಕರ್ಮಣಿ ॥೧॥

ರಾಜನೇ, ಋಷಿಗಳ ಸಮುದಾಯದಲ್ಲಿ ವಿವಾಹದ ಪ್ರಸ್ತಾಪದಲ್ಲಿ ಹೇಳಲ್ಪಡುವ ಹಿಂದೆ ನಡೆದ ಒಂದು ಘಟನೆಯನ್ನು ನನ್ನಿಂದ ಕೇಳು.

ನಿತಂತುರ್ನಾಮ ರಾಜರ್ಷಿರ್ಬಭೂವ ಭುವಿ ವಿಶ್ರುತಃ ।
ತಸ್ಯ ಪುತ್ರಾ ಮಹೇಶ್ವಾಸಾ ಬಭೂವುಃ ಪಂಚ ಭೂಮಿಪಾಃ ॥೨॥

ಹಿಂದೆ ನಿತಂತು ಎಂಬ ಪ್ರಖ್ಯಾತನಾದ ರಾಜರ್ಷಿಯಿದ್ದನು. ಅವನಿಗೆ ವೀರರಾದ ಐದುಮಕ್ಕಳು ಜನಿಸಿದರು.

ಸಾಲ್ವೇಯಃ ಶೂರಸೇನಶ್ಚ ಶ್ರುತಸೇನಶ್ಚ ವೀರ್ಯವಾನ್ ।
ತಿಂದುಸಾರೋಽದ್ರಿಸಾರಶ್ಚ ಕ್ಷತ್ರಿಯಾಃ ಕ್ರತುಯಾಜಿನಃ ।
ನಾತಿಚಕ್ರಮುರನ್ಯೋನ್ಯಮನ್ಯೋನ್ಯಸ್ಯ ಪ್ರಿಯಂವದಾಃ ॥೩॥

ಸಾಲ್ವೇಯ, ಶೂರಸೇನ, ಶ್ರುತಸೇನ, ತಿಂದುಸಾರ, ಅದ್ರಿಸಾರ ಎಂಬ ಯಾಗವನ್ನು ಮಾಡುವ ಕ್ಷತ್ರಿಯರು ಅವನ ಮಕ್ಕಳು. ಅವರು ಒಬ್ಬರನ್ನೊಬ್ಬರು ಮೀರುತ್ತಿರಲಿಲ್ಲ ಮತ್ತು ಪ್ರಿಯವಾಗಿ ಮಾತನಾಡುತ್ತಿದ್ದರು.

ಏತಾನ್ ನೈತಂತವಾನ್ ಪಂಚ ಶೈಬ್ಯಾ ಚಾತ್ರ ಸ್ವಯಂವರೇ ।
ಅವಾಪ ತಾನ್ ಪತೀನ್‌ವೀರಾನ್ ಭೌಮಾಶ್ವೀ ಮನುಜಾಧಿಪಾನ್ ।
ವೀಣೇವ ಮಧುರಾಭಾಷಾ ಗಾಂಧಾರಸ್ವರಮೂರ್ಚ್ಛಿತಾ ॥೪॥

ನಿತಂತುವಿನ ಈ ಐದುಮಕ್ಕಳನ್ನು ಗಾಂಧಾರಾದಿಸ್ವರ ವಿಸ್ತಾರವನ್ನುಳ್ಳ ವೀಣೆಯಂತೆ ಮಧುರವಾಗಿ ಮಾತನಾಡುವ ಉಶೀನರನ ಮಗಳಾದ ಭೌಮಾಶ್ವಿಯು ಸ್ವಯಂವರದಲ್ಲಿ ಪತಿಗಳನ್ನಾಗಿ ಪಡೆದಳು.

ಉತ್ತಮಾ ಸರ್ವನಾರೀಣಾಂ ಭೌಮಾಶ್ವೀ ಹ್ಯಭವತ್ ತದಾ ।
ಯಸ್ಯಾ ನೈತಂತವಾಃ ಪಂಚ ಪತಯಃ ಕ್ಷತ್ರಿಯರ್ಷಭಾಃ ॥೫॥

ಕ್ಷತ್ರಿಯರ್ಷಭರಾದ ಐದುಜನ ನೈತಂತವರನ್ನು ಪತಿಗಳಾಗಿ ಹೊಂದಿದ ಕಾರಣ ಭೂಮಿಯಲ್ಲಿ ಅವಳು ಆಗ ಎಲ್ಲ ನಾರಿಯರಿಗಿಂತ ಶ್ರೇಷ್ಠಳಾದಳು.

ಬಭೂವುಃ ಪೃಥಿವೀಪಾಲಾಃ ಸರ್ವೈಃ ಸಮುದಿತಾ ಗುಣೈಃ ।
ತೇಷಾಮೇಕಾಽಭವದ್ ಭಾರ್ಯಾ ರಾಜ್ಞಾಮೌಶೀನರೀ ಶುಭಾ ॥೬॥

ಆ ಐದುಜನ ಪತಿಗಳು ಗುಣಗಳಿಂದ ಕೂಡಿದ ರಾಜರಾದರು. ಉಶೀನರ ರಾಜನ ಕುಮಾರಿಯಾದ, ಶುಭಳಾದ ಅವಳು ಅವರೆಲ್ಲರಿಗೂ ಒಬ್ಬಳೇ ಪತ್ನಿಯಾದಳು.

ಭೌಮಾಶ್ವೀ ನಾಮ ಭದ್ರಂ ತೇ ತದಾ ರೂಪಗುಣಾನ್ವಿತಾ ।
ಪಂಚಭ್ಯಃ ಪಂಚಧಾ ಪಂಚ ದಾಯಾದಾನ್ ಸಾ ವ್ಯಜಾಯತ ॥೭॥

ರಾಜನೇ ನಿನಗೆ ಮಂಗಳವಾಗಲಿ. ಅಂತಹ ಗುಣರೂಪಗಳಿಂದ ಕೂಡಿದ ಭೌಮಾಶ್ವಿಯು ಐದುಜನ ಪತಿಗಳಿಂದ ಐದು ಮಕ್ಕಳನ್ನು ಪಡೆದಳು.

ತೇಭ್ಯೋ ನೈತಂತವೇಭ್ಯಶ್ಚ ರಾಜಶಾರ್ದೂಲ ವೈ ತದಾ ।
ಪೃಥಗಾಖ್ಯಾऽಭವತ್ ತೇಷಾಂ ಭ್ರಾತೄಣಾಂ ಪಂಚಧಾ ಭುವಿ ॥೮॥

ರಾಜಶಾರ್ದೂಲನೇ, ಆ ಐದುಜನ ನೈತಂತವರಿಂದ ಅವರ ವಂಶಗಳು ಬೇರೆ ಬೇರೆ ಹೆಸರುಗಳನ್ನು ಹೊಂದಿದವು.

ಯಥಾವತ್ ಕೀರ್ತ್ಯಮಾನಾಂಸ್ತಾನ್ ಶೃಣು ಮೇ ರಾಜಸತ್ತಮ ।
ಸಾಲ್ವೇಯಾಃ ಶೂರಸೇನಾಶ್ಚ ಶ್ರುತಸೇನಾಶ್ಚ ಪಾರ್ಥಿವಾಃ ॥೯॥

ತಿಂದುಸಾರಾದ್ರಿಸಾರಾಶ್ಚ ವಂಶಾ ಏಷಾಂ ನೃಪೋತ್ತಮ ।
ಏವಮೇಕಾऽಭವದ್ ಭಾರ್ಯಾ ಭೌಮಾಶ್ವೀ ಭುವಿ ವಿಶ್ರುತಾ ॥೧೦॥

ರಾಜಶ್ರೇಷ್ಠನೇ, ಆ ವಂಶದ ಹೆಸರುಗಳನ್ನು ನಾನು ಹೇಳುವೆನು ಕೇಳು. ಸಾಲ್ವೇಯರು, ಶೂರಸೇನರು, ಶ್ರುತಸೇನರು, ತಿಂದುಸಾರರು, ಅದ್ರಿಸಾರರು ಎಂದು ಆ ವಂಶದ ಹೆಸರುಗಳು. ನೃಪೋತ್ತಮನೇ, ಭೂಮಿಯಲ್ಲಿ ಪ್ರಖ್ಯಾತಳಾದ ಈ ಒಬ್ಬಳೇ ಭೌಮಾಶ್ವಿಯು ಐದುಜನರಿಗೆ ಪತ್ನಿಯಾಗಿದ್ದಳು.

ವ್ಯಾಸಃ

ಆಸೀತ್ ತಪೋವನೇ ಕಾಚಿದ್ ಋಷೇಃ ಕನ್ಯಾ ಮನಸ್ವಿನೀ ।
ನಾಧ್ಯಗಚ್ಛತ್ ಪತಿಂ ಸಾ ತು ಕನ್ಯಾ ರೂಪವತೀ ಸತೀ ॥೧೧॥

ಹಿಂದೆ ತಪೋವನದಲ್ಲಿ ಧೈರ್ಯಶಾಲಿನಿಯಾದ ಒಬ್ಬ ಋಷಿಕನ್ಯೆಯಿದ್ದಳು. ಅವಳು ಸೌಂದರ್ಯವತಿಯಾಗಿದ್ದರೂ, ಅವಳಿಗೆ ಪತಿಯು ದೊರೆಯಲಿಲ್ಲ. (ಇದು ಹನುಮದವತಾರದ ಕಾಲದಲ್ಲಿದ್ದ ವಿಪ್ರಕನ್ಯೆಯ ಕಥೆ.)

ತೋಷಯಾಮಾಸ ತಪಸಾ ಸಾ ತು ದೇವಂ ಮಹೇಶ್ವರಮ್ ।
ತಾಮುವಾಚೇಶ್ವರಸ್ತುಷ್ಟೋ ವೃಣೇಥಾಃ ಕಾಮಮೀಪ್ಸಿತಮ್ ॥೧೨॥

ಅವಳು ತಪಸ್ಸಿನಿಂದ ರುದ್ರದೇವರನ್ನು ಸಂತೋಷ ಪಡಿಸಿದಳು. ತಪಸ್ಸಿನಿಂದ ತುಷ್ಟರಾದ ರುದ್ರದೇವರು ನಿನಗೆ ಬೇಕಾದ ವರವನ್ನು ಕೇಳು ಎಂದು ಅವಳಿಗೆ ಹೇಳಿದರು.

ಅಥೇಶ್ವರಮುವಾಚೇದಮಾತ್ಮನೋ ಯದ್ಧಿತಂ ವಚಃ ।
ಪತಿಂ ಸರ್ವಗುಣೋಪೇತಮಿಚ್ಛಾಮೀತಿ ಪುನಃ ಪುನಃ ॥೧೩॥

ಆಗ ಅವಳು ರುದ್ರದೇವರನ್ನು ಕುರಿತು ತನಗೆ ಹಿತವಾದುದನ್ನು ಕೇಳುತ್ತಾ ಎಲ್ಲ ಗುಣಗಳಿಂದಲೂ ಕೂಡಿದ ಪತಿಯನ್ನು ಬಯಸುತ್ತೇನೆ ಎಂದು ಪುನಃ ಪುನಃ ಹೇಳಿದಳು.

ಏವಮುಕ್ತಸ್ತದಾ ದೇವ ಇದಂ ವಚನಮಬ್ರವೀತ್ ।
ಪಂಚ ತೇ ಪತಯಃ ಶ್ರೇಷ್ಠಾ ಭವಿಷ್ಯಂತೀತಿ ಶಂಕರಃ ॥೧೪॥

ಅವಳು ಹೀಗೆ ಹೇಳಿದಾಗ ರುದ್ರದೇವರು ನಿನಗೆ ಶ್ರೇಷ್ಠರಾದ ಪಂಚಪತಿಗಳು ಆಗುವರು ಎಂದು ಹೇಳಿದರು.

ಸಾ ಪ್ರಸಾದಯತೀ ದೇವಮಿದಂ ಭೂಯೋಽಭ್ಯಭಾಷತ ।
ಏಕಂ ಪತಿಂ ಗುಣೋಪೇತಂ ತ್ವತ್ತೋಽರ್ಹಾಮೀತಿ ಶಂಕರ ॥೧೫॥

ಅವಳು ರುದ್ರದೇವರನ್ನು ಓಲೈಸುತ್ತಾ ಪುನಃ ಶಂಕರನೇ, ನಿನ್ನ ಅನುಗ್ರಹದಿಂದ ಗುಣವಂತನಾದ ಒಬ್ಬ ಪತಿಯನ್ನು ಪಡೆಯಲು ಬಯಸುತ್ತೇನೆ ಎಂದು ಹೇಳಿದಳು.

ತಾಂ ದೇವದೇವಃ ಪ್ರೀತಾತ್ಮಾ ಪುನಃ ಪ್ರಾಹ ಶುಭಂ ವಚಃ ।
ಪಂಚಕೃತ್ವಸ್ತ್ವಯಾ ಪ್ರೋಕ್ತಃ ಪತಿಂ ದೇಹೀತ್ಯಹಂ ಶುಭೇ ॥೧೬॥

ದೇಹಮನ್ಯಂ ಗತಾಯಾಸ್ತೇ ಯಥೋಕ್ತಂ ವೈ ಭವಿಷ್ಯತಿ ।
ಸೈವ ನಾಳಾಯನೀ ಭೂತ್ವಾ ರೂಪೇಣಾಪ್ರತಿಮಾ ಭುವಿ ।
ಮೌದ್ಗಲ್ಯಂ ಪತಿಮಾಸಾದ್ಯ ಶಿವಾದ್ ವರಮವಾಪ್ಯ ಚ ॥೧೭॥

ಆಗ ದೇವದೇವನಾದ ಶಂಕರನು ಅವಳನ್ನು ಕುರಿತು ಸಂತೋಷದಿಂದ ಶುಭವಾದ ಈ ಮಾತುಗಳನ್ನು ಆಡಿದನು - ಶುಭಳಾದವಳೇ, ನೀನು ಐದುಬಾರಿ ಪತಿಂದೇಹಿ ಎಂದು ಹೇಳಿದೆ. ನಿನಗೆ ಮುಂದಿನ ದೇಹದಲ್ಲಿ (ಮುಂದಿನ ಜನ್ಮದಲ್ಲಿ) ನಾನು ಹೇಳಿದಂತೆ ಆಗುವುದು. ಅವಳೇ ನಳನ ಮಗಳಾಗಿ (ಇಂದ್ರಸೇನೆ ಎಂಬ ಹೆಸರಿನಿಂದ) ಭೂಮಿಯಲ್ಲಿ ಜನಿಸಿ ಅಪ್ರತಿಮವಾದ ರೂಪದಿಂದ ಕೂಡಿದವಳಾಗಿ ಶಿವನ ವರದ ಬಲದಿಂದ ಮೌದ್ಗಲ್ಯರನ್ನು (ಮುದ್ಗಲರನ್ನು) ಪತಿಯನ್ನಾಗಿ ಪಡೆದಳು.

ದ್ರುಪದೈಷಾ ತತೋ ಜಜ್ಞೇ ಸುತಾ ತೇ ದೇವರೂಪಿಣೀ ।
ಪಂಚಾನಾಂ ಸಹಿತಾ ಕೃಷ್ಣಾರೂಪಾ ಪಾರ್ವತ್ಯನಿಂದಿತಾ ॥೧೮॥

ದ್ರುಪದನೇ, ಅನಂತರ ದೇವರೂಪಿಣಿಯಾದ ಕೃಷ್ಣೆಯ ರೂಪವನ್ನು ಧರಿಸಿದ ಅನಿಂದಿತಳಾದ ಪಾರ್ವತಿಯು ತನ್ನನ್ನೂ ಸೇರಿ ಐದು ದೇವಿಯರಿಂದ ಸಹಿತಳಾಗಿ ನಿನ್ನ ಮಗಳಾಗಿ ಜನಿಸಿದಳು.

ಪಂಚಾನಾಂ ಸಹಿತಾ ಎಂಬುದಕ್ಕೆ ಪಂಚಭಿಃ ಸಹಿತಾ ಎಂದು ಅರ್ಥ ಮಾಡಬೇಕು. ಸಹಶಬ್ದಯೋಗವಿರುವುದರಿಂದ ತೃತೀಯಾವಿಭಕ್ತಿಯು ಅವಶ್ಯಕವಾದುದರಿಂದ ಹೀಗೆ ಅರ್ಥವನ್ನು ಮಾಡಬೇಕು. ಜನನ ಕಾಲದಲ್ಲಿಯೇ ಐವರ ಸಾಹಿತ್ಯವನ್ನು ಹೇಳಿರುವುದರಿಂದ ಇದು ಪತಿಗಳ ಸಂಖ್ಯೆಯನ್ನು ಹೇಳುವುದಿಲ್ಲ. ಆದರೆ ದ್ರೌಪದಿಯ ದೇಹದಲ್ಲಿ ಜನನಕಾಲದಲ್ಲಿಯೇ ಐದುಜನ ದೇವಿಯರು ಇದ್ದಾರೆಂದು ಹೇಳುವ ಅಭಿಪ್ರಾಯದಿಂದ ಬಂದಿದೆ. ಆ ದೇಹದಲ್ಲಿರುವ ಭಾರತಿ, ಶಚಿ, ಶ್ಯಾಮಲೆ ಮತ್ತು ಉಷೆ ನಾಲ್ವರು ಪ್ರಸಿದ್ಧರಾಗಿದ್ದಾರೆ. ಆದರೆ ಅಲ್ಲಿ ಪಾರ್ವತಿಯೂ ಇದ್ದಾಳೆ. ಬ್ರಹ್ಮದೇವರ ಶಾಪದಿಂದ ಪಾರ್ವತಿಯು ಅಲ್ಲಿದ್ದಾಳೆಂದು ಆಚಾರ್ಯರು ನಿರೂಪಿಸಿದ್ದಾರೆ. ದ್ರೌಪದಿಯ ದೇಹದಲ್ಲಿ ಐದುಜನ ದೇವಿಯರಿದ್ದರೂ ಯಾರಿಗೂ ಪಾತಿವ್ರತ್ಯಲೋಪವಿಲ್ಲ ಎಂಬುದನ್ನು ಅನಿಂದಿತಾ ಎಂಬ ಪದದಿಂದ ಹೇಳಿದ್ದಾರೆ.

ಸ್ವರ್ಗಾಚ್ಚ್ಯುತೈಃ ಪಾಂಡವಾರ್ಥಾಯ ಸಮುತ್ಪನ್ನಾ ತಮಹಾಮುಖೇ ।
ಸೈವಂ ತಪ್ತ್ವಾ ತಪೋ ಘೋರಂ ದುಹಿತೃತ್ವಂ ಗತಾ ತವ ॥೧೯॥

ತೋಷಯಾಮಾಸ ತಪಸಾ ಸಾ ತು ದೇವಂ ಮಹೇಶ್ವರಮ್ ।
ತಾಮುವಾಚೇಶ್ವರಸ್ತುಷ್ಟೋ ವೃಣೇಥಾಃ ಕಾಮಮೀಪ್ಸಿತಮ್ ॥೧೨॥

ಅವಳು ತಪಸ್ಸಿನಿಂದ ರುದ್ರದೇವರನ್ನು ಸಂತೋಷ ಪಡಿಸಿದಳು. ತಪಸ್ಸಿನಿಂದ ತುಷ್ಟರಾದ ರುದ್ರದೇವರು ನಿನಗೆ ಬೇಕಾದ ವರವನ್ನು ಕೇಳು ಎಂದು ಅವಳಿಗೆ ಹೇಳಿದರು.

ಅಥೇಶ್ವರಮುವಾಚೇದಮಾತ್ಮನೋ ಯದ್ಧಿತಂ ವಚಃ ।
ಪತಿಂ ಸರ್ವಗುಣೋಪೇತಮಿಚ್ಛಾಮೀತಿ ಪುನಃ ಪುನಃ ॥೧೩॥

ಆಗ ಅವಳು ರುದ್ರದೇವರನ್ನು ಕುರಿತು ತನಗೆ ಹಿತವಾದುದನ್ನು ಕೇಳುತ್ತಾ ಎಲ್ಲ ಗುಣಗಳಿಂದಲೂ ಕೂಡಿದ ಪತಿಯನ್ನು ಬಯಸುತ್ತೇನೆ ಎಂದು ಪುನಃ ಪುನಃ ಹೇಳಿದಳು.

ಏವಮುಕ್ತಸ್ತದಾ ದೇವ ಇದಂ ವಚನಮಬ್ರವೀತ್ ।
ಪಂಚ ತೇ ಪತಯಃ ಶ್ರೇಷ್ಠಾ ಭವಿಷ್ಯಂತೀತಿ ಶಂಕರಃ ॥೧೪॥

ಅವಳು ಹೀಗೆ ಹೇಳಿದಾಗ ರುದ್ರದೇವರು ನಿನಗೆ ಶ್ರೇಷ್ಠರಾದ ಪಂಚಪತಿಗಳು ಆಗುವರು ಎಂದು ಹೇಳಿದರು.

ಸಾ ಪ್ರಸಾದಯತೀ ದೇವಮಿದಂ ಭೂಯೋಽಭ್ಯಭಾಷತ ।
ಏಕಂ ಪತಿಂ ಗುಣೋಪೇತಂ ತ್ವತ್ತೋಽರ್ಹಾಮೀತಿ ಶಂಕರ ॥೧೫॥

ಅವಳು ರುದ್ರದೇವರನ್ನು ಓಲೈಸುತ್ತಾ ಪುನಃ ಶಂಕರನೇ, ನಿನ್ನ ಅನುಗ್ರಹದಿಂದ ಗುಣವಂತನಾದ ಒಬ್ಬ ಪತಿಯನ್ನು ಪಡೆಯಲು ಬಯಸುತ್ತೇನೆ ಎಂದು ಹೇಳಿದಳು.

ತಾಂ ದೇವದೇವಃ ಪ್ರೀತಾತ್ಮಾ ಪುನಃ ಪ್ರಾಹ ಶುಭಂ ವಚಃ ।
ಪಂಚಕೃತ್ವಸ್ತ್ವಯಾ ಪ್ರೋಕ್ತಃ ಪತಿಂ ದೇಹೀತ್ಯಹಂ ಶುಭೇ ॥೧೬॥

ದೇಹಮನ್ಯಂ ಗತಾಯಾಸ್ತೇ ಯಥೋಕ್ತಂ ವೈ ಭವಿಷ್ಯತಿ ।
ಸೈವ ನಾಳಾಯನೀ ಭೂತ್ವಾ ರೂಪೇಣಾಪ್ರತಿಮಾ ಭುವಿ ।
ಮೌದ್ಗಲ್ಯಂ ಪತಿಮಾಸಾದ್ಯ ಶಿವಾದ್ ವರಮವಾಪ್ಯ ಚ ॥೧೭॥

ಆಗ ದೇವದೇವನಾದ ಶಂಕರನು ಅವಳನ್ನು ಕುರಿತು ಸಂತೋಷದಿಂದ ಶುಭವಾದ ಈ ಮಾತುಗಳನ್ನು ಆಡಿದನು - ಶುಭಳಾದವಳೇ, ನೀನು ಐದುಬಾರಿ ಪತಿಂದೇಹಿ ಎಂದು ಹೇಳಿದೆ. ನಿನಗೆ ಮುಂದಿನ ದೇಹದಲ್ಲಿ (ಮುಂದಿನ ಜನ್ಮದಲ್ಲಿ) ನಾನು ಹೇಳಿದಂತೆ ಆಗುವುದು. ಅವಳೇ ನಳನ ಮಗಳಾಗಿ (ಇಂದ್ರಸೇನೆ ಎಂಬ ಹೆಸರಿನಿಂದ) ಭೂಮಿಯಲ್ಲಿ ಜನಿಸಿ ಅಪ್ರತಿಮವಾದ ರೂಪದಿಂದ ಕೂಡಿದವಳಾಗಿ ಶಿವನ ವರದ ಬಲದಿಂದ ಮೌದ್ಗಲ್ಯರನ್ನು (ಮುದ್ಗಲರನ್ನು) ಪತಿಯನ್ನಾಗಿ ಪಡೆದಳು.

ದ್ರುಪದೈಷಾ ತತೋ ಜಜ್ಞೇ ಸುತಾ ತೇ ದೇವರೂಪಿಣೀ ।
ಪಂಚಾನಾಂ ಸಹಿತಾ ಕೃಷ್ಣಾರೂಪಾ ಪಾರ್ವತ್ಯನಿಂದಿತಾ ॥೧೮॥

ದ್ರುಪದನೇ, ಅನಂತರ ದೇವರೂಪಿಣಿಯಾದ ಕೃಷ್ಣೆಯ ರೂಪವನ್ನು ಧರಿಸಿದ ಅನಿಂದಿತಳಾದ ಪಾರ್ವತಿಯು ತನ್ನನ್ನೂ ಸೇರಿ ಐದು ದೇವಿಯರಿಂದ ಸಹಿತಳಾಗಿ ನಿನ್ನ ಮಗಳಾಗಿ ಜನಿಸಿದಳು.

ಪಂಚಾನಾಂ ಸಹಿತಾ ಎಂಬುದಕ್ಕೆ ಪಂಚಭಿಃ ಸಹಿತಾ ಎಂದು ಅರ್ಥ ಮಾಡಬೇಕು. ಸಹಶಬ್ದಯೋಗವಿರುವುದರಿಂದ ತೃತೀಯಾವಿಭಕ್ತಿಯು ಅವಶ್ಯಕವಾದುದರಿಂದ ಹೀಗೆ ಅರ್ಥವನ್ನು ಮಾಡಬೇಕು. ಜನನ ಕಾಲದಲ್ಲಿಯೇ ಐವರ ಸಾಹಿತ್ಯವನ್ನು ಹೇಳಿರುವುದರಿಂದ ಇದು ಪತಿಗಳ ಸಂಖ್ಯೆಯನ್ನು ಹೇಳುವುದಿಲ್ಲ. ಆದರೆ ದ್ರೌಪದಿಯ ದೇಹದಲ್ಲಿ ಜನನಕಾಲದಲ್ಲಿಯೇ ಐದುಜನ ದೇವಿಯರು ಇದ್ದಾರೆಂದು ಹೇಳುವ ಅಭಿಪ್ರಾಯದಿಂದ ಬಂದಿದೆ. ಆ ದೇಹದಲ್ಲಿರುವ ಭಾರತಿ, ಶಚಿ, ಶ್ಯಾಮಲೆ ಮತ್ತು ಉಷೆ ನಾಲ್ವರು ಪ್ರಸಿದ್ಧರಾಗಿದ್ದಾರೆ. ಆದರೆ ಅಲ್ಲಿ ಪಾರ್ವತಿಯೂ ಇದ್ದಾಳೆ. ಬ್ರಹ್ಮದೇವರ ಶಾಪದಿಂದ ಪಾರ್ವತಿಯು ಅಲ್ಲಿದ್ದಾಳೆಂದು ಆಚಾರ್ಯರು ನಿರೂಪಿಸಿದ್ದಾರೆ. ದ್ರೌಪದಿಯ ದೇಹದಲ್ಲಿ ಐದುಜನ ದೇವಿಯರಿದ್ದರೂ ಯಾರಿಗೂ ಪಾತಿವ್ರತ್ಯಲೋಪವಿಲ್ಲ ಎಂಬುದನ್ನು ಅನಿಂದಿತಾ ಎಂಬ ಪದದಿಂದ ಹೇಳಿದ್ದಾರೆ.

ಸ್ವರ್ಗಾಚ್ಛ್ರೀಃ ಪಾಂಡವಾರ್ಥಾಯ ಸಮುತ್ಪನ್ನಾ ತಮಹಾಮುಖೇ ।
ಸೈವಂ ತಪ್ತ್ವಾ ತಪೋ ಘೋರಂ ದುಹಿತೃತ್ವಂ ಗತಾ ತವ ॥೧೯॥

ಸ್ವರ್ಗದಿಂದ ಬಂದ ದ್ಯುನಾಮಕ ಸ್ತ್ರೀ ದೇವತೆಯಾಗ ಶ್ರೀದೇವಿಯು ಯಜ್ಞಕುಂಡದಲ್ಲಿ ಜನಿಸಿ ಪಾಂಡವರನ್ನು ಪಡೆಯುವ ಸಲುವಾಗಿ ಘೋರವಾದ ತಪಸ್ಸನ್ನು ಆಚರಿಸಿ, ನಿನ್ನ ಮಗಳಾಗಿ ಜನಿಸಿದ್ದಾಳೆ.

ಸೈಷಾ ದೇವೀ ರುಚಿರಾ ದೇವಜುಷ್ಟಾ
ಪಂಚಾನಾಮೇಕಾ ಸ್ವಕೃತೇನೈವ ಕರ್ಮಣಾ ।
ಸೃಷ್ಟಾ ಪೂರ್ವಂ ದೇವಪತ್ನೀ ಸ್ವಯಂಭುವಾ
ಶ್ರುತ್ವಾ ರಾಜನ್ ದ್ರುಪದೇಷ್ಟಂ ಕುರುಷ್ವ ॥೨೦॥

ಆದ್ದರಿಂದ ದೇವತೆಗಳಿಂದ ಸೇವಿತಳಾದ, ಮನೋಹರಳಾದ, ದೇವಿಯಾದ ಈ ನಿನ್ನ ಮಗಳು ತನ್ನ ಕರ್ಮಗಳಿಂದಲೇ, ಪಂಚಪತಿತ್ವವನ್ನು ಸಂಪಾದಿಸಿದ್ದಾಳೆ. ಬ್ರಹ್ಮದೇವರು ಇವಳನ್ನು ಅಂತಹ ಐದುಜನ ದೇವತೆಗಳ ಪತ್ನಿಯೆಂದೇ ಸೃಷ್ಟಿಸಿದ್ದಾರೆ. ದ್ರುಪದರಾಜನೇ, ಇದನ್ನು ಕೇಳಿ ನಿನಗೆ ಇಷ್ಟಬಂದಂತೆ ಮಾಡು.

ದ್ರುಪದಃ

ಅಶ್ರುತ್ವೈವೈವಂ ವಚನಂ ತೇ ಮಹರ್ಷೇ
ಮಯಾ ಪೂರ್ವಂ ಯತಿತಂ ವರ್ಜಯಿತ್ವಾ ।
ನ ಹಿ ಶಕ್ಯಂ ವಿಹಿತಾಚ್ಚಾಪಯಾತುಂ
ತದೇವೇದಮುಪಪನ್ನಂ ವಿಧಾನಮ್ ॥೨೧॥

ಮಹರ್ಷಿಗಳೇ, ಈ ನಿಮ್ಮ ಮಾತನ್ನು ನಾನು ಕೇಳುವುದಕ್ಕಿಂತ ಮೊದಲು ಐದು ಜನರಿಗೆ ಮಗಳನ್ನು ಕೊಡುವುದಿಲ್ಲವೆಂದು ಪ್ರಯತ್ನಮಾಡಿದೆ. ವಿಹಿತವಾದುದನ್ನು ಯಾರೂ ಮೀರಲು ಸಾಧ್ಯವಿಲ್ಲ. ನೀವು ಹೇಳಿದ ವಿಧಾನವೇ ಯುಕ್ತವಾದುದು.

ದಿಷ್ಟಸ್ಯ ಗ್ರಂಥಿರನಿವರ್ತನೀಯಾ
ಸ್ವಕರ್ಮಣಾ ವಿಹಿತೇಷ್ವೇವ ಕಿಂಚಿತ್ ।
ಕೃತಂ ನಿಮಿತ್ತಂ ಹಿ ವರೈಕಹೇತೋಃ
ತದೇವೈತದುಪಪನ್ನಂ ಬಹೂನಾಮ್ ॥೨೨॥

ಬ್ರಹ್ಮದೇವರು ಮಾಡಿದ ಘಟನೆಯನ್ನು ಯಾರೂ ವಿಘಟನೆ ಮಾಡಲು ಸಾಧ್ಯವಿಲ್ಲ. ನಾನು ಒಬ್ಬವರನನ್ನು ಪಡೆಯುವ ಉದ್ದೇಶದಿಂದ ಕ್ಷತ್ರಿಯನಾದ ನನಗೆ ವಿಹಿತವಾದ ಅನೇಕ ಉಪಾಯಗಳಲ್ಲಿ ಸ್ವಯಂವರವೆಂಬ ಒಂದು ಉಪಾಯವನ್ನು ಆಶ್ರಯಿಸಿದೆ. ಸ್ವಯಂವರದ ಪಣವು ಅರ್ಜುನನಿಂದ ಜಯಿಸಲ್ಪಟ್ಟಿತು. ಆದ್ದರಿಂದ ನನ್ನ ಮಗಳು ಅನೇಕರಿಗೆ ಪತ್ನಿಯಾಗುವುದು ಯುಕ್ತವಾಗಿದೆ.

ಯಥೈವ ಕೃಷ್ಣೋಕ್ತವತೀ ಪುರಸ್ತಾತ್
ನೈಕಾನ್ ಪತೀನ್ ಮೇ ಭಗವಾನ್ ದದಾತು ।
ಸ ಚಾಪ್ಯೇತದ್ ವರಮಿತ್ಯಬ್ರವೀತ್ ತದಾ
ದೇವೋಽಪಿ ವೇದ ಪರಮಂ ಯದತ್ರ ॥೨೩॥

ದ್ರೌಪದಿಯು ಹಿಂದೆ ನನಗೆ ಅನೇಕ ಪತಿಗಳನ್ನು ಪೂಜ್ಯರು ಕೊಡಬೇಕು ಎಂದು ಕೇಳಿದುದಕ್ಕೆ ಅನುಗುಣವಾಗಿ ರುದ್ರದೇವರೂ ಸಹ ಹಾಗೆಯೇ ಆಗಲಿ ಎಂಬ ವರವನ್ನು ಕೊಟ್ಟಿದ್ದಾರಷ್ಟೆ. ಅವರಿಗೂ ಕೂಡ ಈ ವಿಷಯದಲ್ಲಿ ಯಾವುದು ಶ್ರೇಷ್ಠ ಎಂಬುದು ತಿಳಿದಿದೆ.

ಯದಿ ತ್ವಯಂ ವಿಹಿತಃ ಶಂಕರೇಣ
ಧರ್ಮೋಽಧರ್ಮೋ ವಾ ನಾತ್ರ ಮಮಾಪರಾಧಃ ।
ಗೃಹ್ಣಂತ್ವಿಮೇ ಪಾಂಡವಾಃ ಪಾಣಿಮಸ್ಯಾ
ಯಥಾಜೋಷಂ ವಿಹಿತೈಷಾಂ ಹಿ ಕೃಷ್ಣಾ ॥೨೪॥

ಯಾವಾಗ ಇದು ರುದ್ರದೇವರ ಮನಸ್ಸಿಗೂ ಬಂದಿದೆ ಎಂದಾಯಿತೋ ಆಗ ಇದು ಧರ್ಮವೋ ಅಥವಾ ಅಧರ್ಮವೋ ಎಂದು ವಿಚಾರಮಾಡುವ ಅವಶ್ಯಕತೆಯಿಲ್ಲ. ನನಗೆ ಯಾವ ದೋಷವೂ ಬರುವುದಿಲ್ಲ. ಈ ಐದುಜನ ಪಾಂಡವರೂ ಸಂತೋಷದಿಂದ ಇವಳ ಪಾಣಿಗ್ರಹಣವನ್ನು ಮಾಡಲಿ. ಕೃಷ್ಣೆಯು ಇವರಿಗೆ ಪತ್ನಿಯಾಗಿ ವಿಹಿತಳಾಗಿದ್ದಾಳೆ.

ವೈಶಂಪಾಯನಃ

ತತ ಆಜಗ್ಮತುಸ್ತತ್ರ ತೌ ಕೃಷ್ಣದ್ರುಪದಾವುಭೌ ।
ಕುಂತೀ ಸಪುತ್ರಾ ಯತ್ರಾಸ್ತೇ ಧೃಷ್ಟದ್ಯುಮ್ನಶ್ಚ ಪಾರ್ಷತಃ ॥೨೫॥

ಅನಂತರ, ವೇದವ್ಯಾಸರು ಮತ್ತು ದ್ರುಪದರಾಜನು ಒಳಭಾಗದಿಂದ ಕುಂತಿಯು, ಪಾಂಡವರು ಮತ್ತು ಧೃಷ್ಟದ್ಯುಮ್ನನು ಕುಳಿತಿದ್ದ ಕಡೆಗೆ ಬಂದರು.

ತತೋ ದ್ವೈಪಾಯನಃ ಕೃಷ್ಣೋ ಯುಧಿಷ್ಠಿರಮಥಾಬ್ರವೀತ್ ।
ಅದ್ಯ ಪುಣ್ಯಮಹಶ್ಚಂದ್ರೋ ರೋಹಿಣ್ಯಾ ಚ ಸಮೇಷ್ಯತಿ ॥೨೬॥

ಕ್ರಮೇಣ ಪುರುಷವ್ಯಾಘ್ರ ಪಾಣಿಂ ಗೃಹ್ಣಂತು ಪಾಂಡವಾಃ ।
ದ್ರೌಪದ್ಯಾ ಧರ್ಮತಃ ಸರ್ವೇ ದೃಷ್ಟಮೇತತ್ ಪುರಾऽನಘ ॥೨೭॥

ಆಗ ವ್ಯಾಸರು ಧರ್ಮರಾಜನನ್ನುಕುರಿತು ಈ ದಿನ ಪವಿತ್ರವಾಗಿದೆ. ಚಂದ್ರನು ರೋಹಿಣೀನಕ್ಷತ್ರದಿಂದ ಕೂಡಿದ್ದಾನೆ. ಪುರುಷವ್ಯಾಘ್ರನೇ, ಪಾಂಡವರಾದ ನೀವು ಧರ್ಮದಿಂದಲೇ ಜ್ಯೇಷ್ಠಕ್ರಮದಿಂದ ದ್ರೌಪದಿಯ ಪಾಣಿಗ್ರಹಣವನ್ನು ಮಾಡಿ. ಅನಘನೇ, ಇದು ಮೊದಲೇ ಕುಪ್ಪತವಾಗಿದೆ ಎಂದು ಹೇಳಿದರು.

ವೈಶಂಪಾಯನಃ

ತತೋ ರಾಜಾ ಯಜ್ಞಸೇನಃ ಸಪುತ್ರೋ
ಜನ್ಯಾರ್ಥಮುಕ್ತಂ ಬಹುರತ್ನಮಗ್ರ್ಯಮ್ ।
ಸಮರ್ಪಯಾಮಾಸ ಸುತಾಂ ಚ ಕೃಷ್ಣಾಮ್
ಆಪ್ಲಾವ್ಯ ರತ್ನೈರ್ಬಹುಭಿರ್ವಿಭೂಷ್ಯ ॥೨೮॥

ಅನಂತರ, ರಾಜನಾದ ಯಜ್ಞಸೇನನು ಧೃಷ್ಟದ್ಯುಮ್ನನೊಡನೆ, ಬಹುಪರಿವಾರೋಪೇತನಾದ ಧರ್ಮರಾಜನಿಗೆ ರತ್ನಾದಿಗಳಿಂದ ಕೂಡಿದ ಶ್ರೇಷ್ಠವಾದ ಅನೇಕ ಉಡುಗೊರೆಗಳನ್ನು ನೀಡಿದನು. ಮಗಳಾದ ಕೃಷ್ಣೆಯನ್ನು ಸ್ನಾನಮಾಡಿಸಿ ಅನೇಕ ರತ್ನಗಳಿಂದ ಅಲಂಕರಿಸಿ (ಅವಳನ್ನೂ ನೀಡಿದನು)

ತತಃ ಸರ್ವೇ ಸುಹೃದಸ್ತತ್ರ ತಸ್ಯ
ಸಮಾಜಗ್ಮುಃ ಸಚಿವಾ ಮಂತ್ರಿಣಶ್ಚ ।
ದ್ರಷ್ಟುಂ ವಿವಾಹಂ ಪರಮಪ್ರತೀತಾ
ದ್ವಿಜಾಶ್ಚ ಪೌರಾಶ್ಚ ತಥಾ ಪ್ರಧಾನಾಃ ॥೨೯॥

ಆಗ ಅವನ ಎಲ್ಲಾ ಸುಹೃದರೂ, ಸಚಿವರೂ, ಮಂತ್ರಿಗಳೂ ಪರಮಸಂತೋಷದಿಂದ ಆ ವಿವಾಹವನ್ನು ನೋಡಲು ಬಂದರು. ಹಾಗೆಯೇ, ಬ್ರಾಹ್ಮಣರೂ, ಪೌರರೂ ಮತ್ತು ಪ್ರಧಾನರೂ ಬಂದರು.

ತತ್ತಸ್ಯ ವೇಶ್ಮಾರ್ಥಿಜನೋಪಶೋಭಿತಂ
ವಿಕೀರ್ಣಪದ್ಮೋತ್ಪಲಶೋಭಿತಾಂಘ್ರಿಕಮ್ ।
ಬಭೂವ ರತ್ನೌಘವಿಚಿತ್ರಮಾಲ್ಯಂ
ದಿವಂ ಯಥಾ ನಿರ್ಮಲತಾರಕಾಚಿತಮ್ ॥೩೦॥

ಆಗ ದ್ರುಪದನ ಅರಮನೆಯು ಎಲ್ಲ ಕಡೆಗಳಿಂದಲೂ ಅತಿಥಿ ಜನಗಳಿಂದ ತುಂಬಿ ಅಲ್ಲಲ್ಲಿ ಹರಡಿದ ಪದ್ಮೋತ್ಪಲಗಳ ರಾಶಿಗಳಿಂದಲೂ, ರತ್ನಮಾಲೆಗಳ ರಾಶಿಗಳಿಂದಲೂ, ನಕ್ಷತ್ರಗಳಿಂದ ಕೂಡಿದ ಆಕಾಶದಂತೆ ಶೋಭಿಸಿತು.

ತತಸ್ತು ತೇ ಕೌರವರಾಜಪುತ್ರಾ
ವಿಭೂಷಿತಾಃ ಕುಂಡಲಿನಃ ಸುವೇಷಾಃ ।
ಮಹಾರ್ಹವಸ್ತ್ರಾ ವರಚಂದನೋಕ್ಷಿತಾಃ
ಕೃತಾಭಿಷೇಕಾ ಕೃತಕೌತುಕಕ್ರಿಯಾಃ ॥೩೧॥

ಪುರೋಹಿತೇನಾಗ್ನಿಸಮೇನ ತೇಜಸಾ
ಸಹೈವ ಧೌಮ್ಯೇನ ತಥಾ ಯಥಾವಿಧಿ ।
ಕ್ರಮೇಣ ಸರ್ವೇ ವಿವಿಶುಶ್ಚ ತತ್ಸದೋ
ಮಹರ್ಷಭಾ ಗೋಷ್ಠಮಿವಾಭಿನಂದಿನಃ ॥೩೨॥

ಅನಂತರ ಆ ಕೌರವರಾಜಪುತ್ರರು ಮಂಗಳಸ್ನಾನವನ್ನು ಮಾಡಿ, ಮಂಗಳಕ್ರಿಯೆಗಳನ್ನು ಮುಗಿಸಿ, ವಿಭೂಷಿತರಾಗಿ, ಕುಂಡಲಗಳನ್ನು ಧರಿಸಿ, ಒಳ್ಳೆಯ ವೇಷವನ್ನು ಧರಿಸಿ, ಬೆಲೆಬಾಳುವ ವಸ್ತ್ರಗಳನ್ನುಟ್ಟು, ಶ್ರೇಷ್ಠವಾದ ಚಂದನಲಿಪ್ತರಾಗಿ ಅಗ್ನಿಯಂತಿದ್ದ ಪುರೋಹಿತರಾದ ಧೌಮ್ಯರ ಜೊತೆಯಲ್ಲಿ ಆ ಸಭೆಗೆ ಮಹರ್ಷಭಗಳು ಗೋವುಗಳಿರುವ ಸ್ಥಳಕ್ಕೆ ಬಂದಂತೆ, ಆನಂದದಿಂದ ಕ್ರಮವಾಗಿ ಆ ಸಭೆಗೆ ಬಂದರು.

ತತಃ ಸಮಾಧಾಯ ಸ ವೇದಪಾರಗೋ
ಜುಹಾವ ಮಂತ್ರೈರ್ಜ್ವಲಿತಂ ಹುತಾಶನಮ್ ।
ಯುಧಿಷ್ಠಿರಂ ಚಾಪ್ಯುಪನೀಯ ಮಂತ್ರವಿ-
ನ್ನಿಯೋಜಯಾಮಾಸ ಸಹೈವ ಕೃಷ್ಣಯಾ ॥೩೩॥

ಅನಂತರ, ವೇದಪಾರಗರಾದ ಆ ಪುರೋಹಿತರು ಅಗ್ನಿಯಲ್ಲಿ ಹೋಮವನ್ನು ಮಾಡಿ, ಜ್ವಲಿತನಾದ ಹುತಾಶನನ ಎದುರಿಗೆ ಯುಧಿಷ್ಠಿರನನ್ನು ಕರೆದು ಮಂತ್ರಪೂರ್ವಕವಾಗಿ ಕೃಷ್ಣೆಯ ಪಾಣಿಗ್ರಹಣವನ್ನು ಮಾಡಿಸಿದರು.

ಪ್ರದಕ್ಷಿಣಂ ತೌ ಪರಿಗೃಹ್ಯ ಪಾಣಿನಾ
ಸಮಾನಯಾಮಾಸ ಸ ವೇದಪಾರಗಃ ॥೩೪॥

ವೇದಪಾರಗರಾದ ಆ ಪುರೋಹಿತರು ಅವರಿಬ್ಬರಿಂದ ಕೈಯಲ್ಲಿ ಹಿಡಿದು ಪ್ರದಕ್ಷಿಣೆ ಮಾಡಿಸಿದರು.

ವಿಪ್ರಾಂಸ್ತು ಸಂತರ್ಪ್ಯ ಯುಧಿಷ್ಠಿರೋ ಧನೈ-
ರ್ಗೋಭಿಶ್ಚ ರತ್ನೈರ್ವಿವಿಧೈಶ್ಚ ಪೂರ್ವಜಃ ।
ಜಗ್ರಾಹ ಪಾಣಿಂ ನರದೇವ ಕನ್ಯಯಾ
ಧೌಮ್ಯೇನ ಮಂತ್ರೈರ್ವಿಧಿವದ್ಧುತೇಽಗ್ನೌ
ತತೋಽಂತರಿಕ್ಷಾತ್ ಕುಸುಮಾನಿ ಪೇತು-
ರ್ವವೌ ಚ ವಾಯುಃ ಸುಮನೋಜ್ಞಗಂಧಃ ॥೩೫॥

ಅಗ್ರಜನಾದ ಧರ್ಮರಾಜನು ಬ್ರಾಹ್ಮಣರ ಸಂತರ್ಪಣೆಯನ್ನು ಮಾಡಿ ಅವರಿಗೆ ಗೋದಾನಗಳನ್ನೂ, ವಿವಿಧ ರತ್ನದಾನಗಳನ್ನೂ ಮಾಡಿ, ಧೌಮ್ಯರು ವಿಧಿಪ್ರಕಾರವಾಗಿ ಮಂತ್ರಗಳಿಂದ ಅಗ್ನಿಯನ್ನು ಅರ್ಚಿಸುತ್ತಿರಲು, ಕನ್ಯೆಯ ಪಾಣಿಗ್ರಹಣವನ್ನು ಮಾಡಿದನು. ಆಗ ಅಂತರಿಕ್ಷದಿಂದ ಪುಷ್ಪವೃಷ್ಟಿಯಾಯಿತು. ಸುಗಂಧಭರಿತವಾದ ವಾಯುವು ಎಲ್ಲ ಕಡೆಯೂ ಬೀಸಿತು.

ತತೋಽಭ್ಯನುಜ್ಞಾಯ ತಮಾಜಿಶೋಭನಂ
ಪುರೋಹಿತೋ ರಾಜಗೃಹಾದ್ ವಿನಿರ್ಯಯೌ ।

ಕ್ರಮೇಣ ಚಾನೇನ ನರಾಧಿಪಾತ್ಮಜಾಃ
ವರಸ್ತ್ರಿಯಾಸ್ತೇ ಜಗೃಹುಃ ಕರಂ ತದಾ ॥೩೬॥

ಅನಂತರ, ಯುದ್ಧದಲ್ಲಿ ಶೋಭಿಸುವ ಧರ್ಮರಾಜನ ಅನುಜ್ಞೆಯನ್ನು ಪಡೆದು ದ್ರುಪದನ ಪುರೋಹಿತನು ಅರಮನೆಯಿಂದ ಹೊರಟುಹೋದನು. ಆಗ, ವಿವಿಧ ರಾಜಕುಮಾರರಾದ ಭೀಮಸೇನ ಮೊದಲಾದವರು ಅದೇ ಕ್ರಮದಿಂದ ಶ್ರೇಷ್ಠಕನ್ಯೆಯಾದ ದ್ರೌಪದಿಯ ಪಾಣಿಗ್ರಹಣವನ್ನು ಮಾಡಿದರು.

ಇದಂ ಚ ತತ್ರಾದ್ಭುತಮುತ್ತಮಂ ತದಾ
ದಧಾತಿ ಕೃಷ್ಣಾ ವಪುಷಾऽತಿಮಾನುಷಮ್ ।
ಮಹಾನುಭಾವಾ ಕಿಲ ಸಾಧುಮಧ್ಯಮಾ
ಬಭೂವ ಕನ್ಯೈವ ಗತೇ ಗತೇऽಹನಿ ॥೩೭॥

ಇದೊಂದು ಅದ್ಭುತವಾದ ಮತ್ತು ಶ್ರೇಷ್ಠವಾದ ಘಟನೆಯು ನಡೆಯಿತು. ಕೃಷ್ಣೆಯು ಪ್ರತಿದಿವಸವೂ ಕನ್ಯೆಯೇ ಆಗುತ್ತಿದ್ದಳು. ಇದು ಮನುಷ್ಯಲೋಕವನ್ನು ಮೀರಿದ ಘಟನೆಯಾದ್ದರಿಂದ ಅದ್ಭುತವಾದುದು. ಮಹಾನುಭಾವಳಾದ ಆ ಸುಂದರಿಗೆ ಮಾತ್ರ ಇದು ಸಾಧ್ಯ.

'ಗತೇ ಗತೇ ಹನಿ' ಎಂದು ಶ್ಲೋಕದಲ್ಲಿ ಐವರು ದೇವಿಯರಲ್ಲಿ ಇನ್ನೊಬ್ಬ ದೇವಿಯ ಪತಿಯ ದಿವಸವು ಕಳೆಯುತ್ತಿರಲು ಎಂದರ್ಥ. ಇದು ಉಪಲಕ್ಷಣ. ತನ್ನ ತನ್ನ ಪತಿಯ ದಿವಸವು ಬಂದಾಗ ಎಂದೂ ಇಟ್ಟುಕೊಳ್ಳಬೇಕು. ಹೊಸದಿವಸವು ಬಂದಾಗ ಹಿಂದಿನ ದಿವಸದ ಪತ್ನಿಯು ಆ ದೇಹದಲ್ಲಿ ಅಭಿಮಾನವನ್ನು ತ್ಯಾಗಮಾಡಿ, ಆ ದಿವಸದ ಪತ್ನಿಯು ಆ ದೇಹದಲ್ಲಿ ಹೊಸ ಅಭಿಮಾನವನ್ನು ಹೊಂದುವುದರಿಂದ ಅಭಿಮಾನೋತ್ಪತ್ತಿಯೇ ಜನನವಾದುದರಿಂದ ಪ್ರತಿದಿವಸವೂ ಅವಳು ಕುಮಾರಿಯೇ ಆಗುತ್ತಿದ್ದಳು. ಪ್ರತಿದಿವಸವೂ ಅವರವರ ಪತಿಗಳಿಂದ ಆಯಾ ದೇವಿಯರಿಗೆ ಮಾನಸಿಕ ವಿವಾಹವು ನಡೆಯುತ್ತಿದ್ದಿತು. ಇದನ್ನು ಮೊದಲನೆಯ ಅಧ್ಯಾಯಗಳಲ್ಲೇ ಒಂದು ಕಡೆಯಲ್ಲಿ ಮನುಷ್ಯರಿಗೆ ಅದೃಶ್ಯವಾಗಿ ದೇವತೆಗಳೇ ಆ ವಿವಾಹವನ್ನು ಮಾಡುತ್ತಿದ್ದರು ಎಂದು ಹೇಳಿದ್ದಾರೆ. ಆದ್ದರಿಂದ ಒಂದೇ ದೇಹದಲ್ಲಿ ಐದು ಜನ ದೇವಿಯರಿದ್ದರೂ ಯಾರಿಗೂ ಪಾತಿವ್ರತ್ಯಲೋಪವಾಗುವುದಿಲ್ಲ.

ಕೃತೇ ವಿವಾಹೇ ದ್ರುಪದೋ ಧನಂ ದದೌ
ಮಹಾರಥೇಭ್ಯೋ ಬಹುರೂಪಮುತ್ತಮಮ್ ।
ಶತಂ ರಥಾನಾಂ ವರಹೇಮಭೂಷಿತಂ
ಚತುರ್ಯುಜಾಂ ಹೇಮವಿಚಿತ್ರಮಾಲಿನಾಮ್ ॥೩೮॥

ಶತಂ ಗಜಾನಾಮಭಿಪದ್ಮಕಾನಾಂ
ಯಥಾ ಗಿರೀಣಾಮಿವ ಹೇಮಶೃಂಗಿಣಾಮ್ ।
ಶತಂ ದದೌ ಸನ್ಮಣಿಹೇಮಭೂಷಣಾನ್
ಮನೋಜವಾನ್ ದ್ವಾದಶವಾರ್ಷಿಕಾನ್ ಹಯಾನ್ ॥೩೯॥

ಹೈಮಾನಿ ಶಯ್ಯಾಸನಭಾಜನಾನಿ
ದ್ರವ್ಯಾಣಿ ಚಾನ್ಯಾನಿ ಮಹಾಸನಾನಿ ।
ಪೃಥಕ್ಪೃಥಕ್ ಚೈವ ದಶಾಯುತಾನಿ
ಧನಂ ದದೌ ಸೋಮಕಿರಗ್ನಿಸಾಕ್ಷಿಕಮ್ ॥೪೦॥

ವಿವಾಹವನ್ನು ನೆರವೇರಿಸಿ ದ್ರುಪದನು, ಮಹಾರಥರಾದ ತನ್ನ ಅಳಿಯಂದಿರಿಗೆ ಬಹುವಿಧವಾದ ಧನವನ್ನು ಕೊಟ್ಟನು. ನಾಲ್ಕು ಕುದುರೆಗಳನ್ನು ಹೂಡುವ ಸುವರ್ಣಮಯವಾದ ನೂರು ರಥಗಳು, ಹಾಗೆಯೇ, ಸುವರ್ಣಶೃಂಗವನ್ನು ಹೊಂದಿದ, ಪರ್ವತದಂತೆ ಕಾಣುವ, ಅಭಿಪದ್ಮಜಾತಿಯ (ಒಳಗೆ ಮದವನ್ನು ಹೊಂದಿದ್ದರೂ ಹೊರಗೆ ಮದವನ್ನು ತೋರಿಸದಿರುವ ಆನೆಗಳಿಗೆ ಅಭಿಪದ್ಮಕವೆಂದು ಹೆಸರು) ನೂರು ಗಜಗಳು, ಹಾಗೆಯೇ, ಮಣಿಹೇಮಭೂಷಿತವಾದ, ಮನೋಜವವನ್ನು ಹೊಂದಿದ ಹನ್ನೆರಡು ವರ್ಷ ಪ್ರಾಯದ ನೂರು ಅಶ್ವಗಳು, ಸುವರ್ಣಾಲಂಕೃತವಾದ ಶಯನ ಮತ್ತು ಆಸನಗಳು, ಭೋಜನಪಾತ್ರೆಗಳು, ಇನ್ನೂ ಅನೇಕ ದ್ರವ್ಯಗಳನ್ನೂ ಒಂದು ಲಕ್ಷ ಪರಿಮಿತವಾದ ಸುವರ್ಣಧನವನ್ನೂ ಒಬ್ಬೊಬ್ಬರಿಗೂ ಪ್ರತ್ಯೇಕವಾಗಿ ಅಗ್ನಿ- ಸಾಕ್ಷಿಕವಾಗಿ ದ್ರುಪದನು ಕೊಟ್ಟನು.

ತಥೈವ ದಾಸೀಶತಮಗ್ರ್ಯಯೌವನಂ
ಮಹಾರ್ಹವೇಷಾಭರಣಾಂಬರಸ್ರಜಮ್ ।
ತಥೈವ ವಸ್ತ್ರಾಣಿ ಚ ಭೂಷಣಾನಿ
ಪ್ರಭಾವಯುಕ್ತಾನಿ ಮಹಾಧನಾನಿ ॥೪೧॥

ಹಾಗೆಯೇ, ಅನರ್ಘ್ಯವಾದ ವೇಷ, ಆಭರಣ, ವಸ್ತ್ರ ಮತ್ತು ಮಾಲೆಗಳಿಂದ ಭೂಷಿತವಾದ ಒಳ್ಳೆಯ ಯೌವನದಿಂದ ಕೂಡಿದ ನೂರು ಜನ ದಾಸಿಯರನ್ನೂ, ಇನ್ನೂ ಅನೇಕ ವಸ್ತ್ರಗಳನ್ನೂ, ಭೂಷಣಗಳನ್ನೂ, ಮಹಾಧನಗಳನ್ನೂ ನೀಡಿದನು.

ಕೃತೇ ವಿವಾಹೇ ಚ ತತಸ್ತು ಪಾಂಡವಾಃ
ಪ್ರಭೂತರತ್ನಾಮುಪಲಭ್ಯ ತಾಂ ಶ್ರಿಯಮ್ ।
ವಿಜಹ್ರುರಿಂದ್ರಪ್ರತಿಮಾ ಮಹಾಬಲಾಃ
ಪುರೇ ತು ಪಾಂಚಾಲನೃಪಸ್ಯ ತಸ್ಯ ಹ ॥೪೨॥

ವಿವಾಹವು ಮುಗಿಯುತ್ತಿರಲು ಪಾಂಡವರು ಪ್ರಭೂತರತ್ನಗಳ ಜೊತೆಯಲ್ಲಿ ಬಂದ ಆ ಶ್ರೀದೇವಿಯನ್ನು ಪಡೆದು ಮಹಾಬಲರಾದ ಅವರು ಪಾಂಚಾಲರಾಜನ ಆ ಪಟ್ಟಣದಲ್ಲಿ ಇಂದ್ರರಂತೆ ವಿಹಾರಮಾಡಿದರು.

ಸರ್ವೇऽಪ್ಯತುಷ್ಯನ್ ನೃಪ ಪಾಂಡವೇಯಾಃ
ತಸ್ಯಾಃ ಶುಭೈಃ ಶೀಲಸಮಾಧಿವೃತ್ತೈಃ ।
ಸಾ ಚಾಪ್ಯೇಷಾ ಯಾಜ್ಞಸೇನೀ ತದಾನೀಂ
ವಿವರ್ಧಯಾಮಾಸ ಮುದಂ ಸ್ವಸುವ್ರತೈಃ ॥೪೩॥

ದ್ರೌಪದಿಯ ಶೀಲ ಸಮಾಧಾನ ಮೊದಲಾದ ಶುಭಗುಣಗಳಿಂದ ಎಲ್ಲ ಪಾಂಡವರೂ ಸಂತೋಷಪಟ್ಟರು. ಆ ಯಾಜ್ಞಸೇನಿಯಾದರೋ ಆಗ ತನ್ನ ಒಳ್ಳೆಯ ವ್ರತನಿಯಮಗಳಿಂದ ಅವರ ಸುಖವನ್ನು ಅಭಿವೃದ್ಧಿಪಡಿಸಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಅಷ್ಟನವತ್ಯಧಿಕಶತತಮೋऽಧ್ಯಾಯಃ ॥
॥ ಇತಿ ವೈವಾಹಿಕಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ತೊಂಭತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ತೊಂಭತ್ತೊಂಭತ್ತನೆಯ ಅಧ್ಯಾಯ

(ದ್ರೌಪದಿಗೆ ಕುಂತಿಯ ಆಶೀರ್ವಾದ. ಕೃಷ್ಣನು ಕಳುಹಿಸಿದ ಉಡುಗೊರೆಗಳು.)

ವೈಶಂಪಾಯನಃ

ಏವಂ ವಿವಾಹಂ ಕೃತ್ವಾ ತೇ ವೀರಾ ದ್ರುಪದವೇಶ್ಮನಿ ।
ಊಷುಃ ಸರ್ವೇ ಯಥಾ ಪುಣ್ಯಂ ಕೃತವಂತೋಽಂತರಿಕ್ಷಗಾಃ ॥೧॥

ಆ ವೀರರೆಲ್ಲರೂ ಹೀಗೆ ವಿವಾಹವನ್ನು ಮಾಡಿಕೊಂಡು, ದ್ರುಪದನ ಮನೆಯಲ್ಲಿ ಪುಣ್ಯವನ್ನು ಮಾಡಿದವರು ಸ್ವರ್ಗದಲ್ಲಿ ವಾಸಿಸುವಂತೆ ವಾಸಿಸಿದರು.

ಪಾಂಡವೈಃ ಸಹ ಸಂಯೋಗಂ ಗತಸ್ಯ ದ್ರುಪದಸ್ಯ ತು ।
ನ ಬಭೂವ ಭಯಂ ಕಿಂಚಿದ್ ದೇವೇಭ್ಯೋಽಪಿ ಕಥಂಚನ ॥೨॥

ಪಾಂಡವರ ಸಂಬಂಧವನ್ನು ಪಡೆದ ದ್ರುಪದನು ದೇವತೆಗಳ ಭಯವನ್ನೂ ತೊರೆದನು.

ಕುಂತೀಮಾಸಾದ್ಯ ತಾ ನಾಯ್ಯೋ ದ್ರುಪದಸ್ಯ ಮಹಾತ್ಮನಃ ।
ಪಾದೌ ವವಂದಿರೇ ಹೃಷ್ಟಾಃ ಶಿರೋಭಿರ್ನಾಮ ಕೀರ್ತಯನ್ ॥೩॥

ಮಹಾತ್ಮರಾದ ದ್ರುಪದನಾರಿಯರು ಕುಂತಿಯ ಸಮೀಪಕ್ಕೆ ಬಂದು ಸಂತೋಷದಿಂದ ತಮ್ಮ ಹೆಸರುಗಳನ್ನು ಹೇಳುತ್ತಾ ತಮ್ಮ ಶಿರಸ್ಸಿನಿಂದ ಅವರ ಪಾದಗಳಿಗೆ ನಮಸ್ಕರಿಸಿದರು.

ದ್ರೌಪದೀ ಕ್ಷೌಮಸಂವೀತಾ ಕೃತಕೌತುಕಮಂಗಲಾ ।
ಅಭಿವಾದ್ಯ ತದಾ ಶ್ವಶ್ರ್ಯಾಂ ತಸ್ಥೌ ಪ್ರಹ್ವಾ ಕೃತಾಂಜಲಿಃ ॥೪॥

ದ್ರೌಪದಿಯು ಮಂಗಳಕಾರ್ಯವನ್ನು ಮುಗಿಸಿ ಪೀತಾಂಬರವನ್ನು ಹೊದ್ದು ಅತ್ತೆಗೆ ನಮಸ್ಕಾರವನ್ನು ಮಾಡಿ ಕೈಗಳನ್ನು ಮುಗಿದು ವಿನಯದಿಂದ ನಿಂತುಕೊಂಡಳು.

ರೂಪಯೌವನಸಂಪನ್ನಾಂ ಶೀಲಾಚಾರಸಮನ್ವಿತಾಮ್ ।
ದ್ರೌಪದೀಮವದತ್ ಪ್ರೇಮ್ಣಾ ಪೃಥಾऽऽಶೀರ್ವಚನಂ ಸುಷಾಮ್ ॥೫॥

ರೂಪಯೌವನಸಂಪನ್ನಳಾದ, ಶೀಲಾಚಾರಯುಕ್ತಳಾದ, ಸೊಸೆಯಾದ ದ್ರೌಪದಿಗೆ ಕುಂತಿಯು ಪ್ರೇಮದಿಂದ ಆಶೀರ್ವಚನವನ್ನು ನೀಡಿದಳು.

ಯಥೇಂದ್ರಾಣೀ ಹರಿಹಯೇ ಸ್ವಾಹಾ ಚೈವ ಹುತಾಶನೇ ।
ರೋಹಿಣೀ ಚ ಯಥಾ ಸೋಮೇ ದಮಯಂತೀ ಯಥಾ ನಳೇ ॥೬॥

ಯಥಾ ವೈಶ್ರವಣೇ ಭದ್ರಾ ವಸಿಷ್ಠೇ ಚಾಪ್ಯರುಂಧತೀ ।
ಯಥಾ ನಾರಾಯಣೇ ಲಕ್ಷ್ಮೀಸ್ತಥಾ ತ್ವಂ ಭವ ಭರ್ತೃಷು ॥೭॥

ಶಚಿಯು ಇಂದ್ರನಲ್ಲಿ ನಡೆದುಕೊಂಡಂತೆ, ಸ್ವಾಹಾದೇವಿಯು ಅಗ್ನಿಯಲ್ಲಿ ನಡೆದುಕೊಂಡಂತೆ, ರೋಹಿಣಿಯು ಚಂದ್ರನ ವಿಷಯದಲ್ಲಿ ನಡೆದುಕೊಂಡಂತೆ, ದಮಯಂತಿಯು ನಳನ ವಿಷಯದಲ್ಲಿ ನಡೆದುಕೊಂಡಂತೆ, ಭದ್ರೆಯು ಕುಬೇರನ ವಿಷಯದಲ್ಲಿ ನಡೆದುಕೊಂಡಂತೆ, ಅರುಂಧತಿಯು ವಸಿಷ್ಠರ ವಿಷಯದಲ್ಲಿ ನಡೆದುಕೊಂಡಂತೆ, ಲಕ್ಷ್ಮಿಯು ನಾರಾಯಣನಲ್ಲಿ ನಡೆದುಕೊಂಡಂತೆ, ನೀನು ಪತಿಗಳ ವಿಷಯದಲ್ಲಿ ನಡೆದುಕೋ.

ಜೀವ ತ್ವಂ ವೀರಸೂರ್ಭದ್ರೇ ಬಹುಪುತ್ರಸಮನ್ವಿತಾ ।
ಸುಭಗಾ ಭೋಗಸಂಪನ್ನಾ ಯಜ್ಞಪತ್ನೀ ಭವಾನಘೇ ॥೮॥

ಭದ್ರೆಯೇ, ವೀರರಾದ ಮಕ್ಕಳನ್ನು ಪಡೆದು, ಅನೇಕ ಪುತ್ರಸಮನ್ವಿತಳಾಗಿ ಬಹುಕಾಲ ಬಾಳು. ಅನಘಳೇ, ಸೌಭಾಗ್ಯದಿಂದ ಕೂಡಿದವಳಾಗಿ, ಭೋಗಸಂಪನ್ನಳಾಗಿ ಪತಿಯ ಜೊತೆಯಲ್ಲಿ ಯಜ್ಞವನ್ನು ಮಾಡುವವಳಾಗು.

ಅತಿಥೀನಾಗತಾನ್ ಸಾಧೂನ್ ವೃದ್ಧಾನ್ ಬಾಲಾನ್ ಗುರೂಂಸ್ತಥಾ।
ಪೂಜಯಂತ್ಯಾ ಯಥಾನ್ಯಾಯಂ ಶಶ್ವದ್ ಗಚ್ಛಂತು ತೇ ಸಮಾಃ ॥೯॥

ಅತಿಥಿಗಳನ್ನೂ, ಅಭ್ಯಾಗತರನ್ನೂ, ಸಾಧುಗಳನ್ನೂ, ವೃದ್ಧರನ್ನೂ, ಬಾಲರನ್ನೂ, ಗುರುಗಳನ್ನೂ, ಶಾಸ್ತ್ರೋಕ್ತವಾಗಿ ಪೂಜಿಸುತ್ತಾ ನಿನ್ನ ಬಹುಕಾಲವು ಕಳೆಯಲಿ.

ಕುರುಜಾಂಗಲಮುಖ್ಯೇಷು ರಾಷ್ಟ್ರೇಷು ನಗರೇಷು ಚ ।
ಅನು ತ್ವಮಭಿಷಿಂಚಸ್ವ ಕುರುರಾಜಂ ಯುಧಿಷ್ಠಿರಮ್ ॥೧೦॥

ಕುರುಜಾಂಗಲಪ್ರಧಾನವಾದ ರಾಷ್ಟ್ರಗಳಲ್ಲಿ ಮತ್ತು ನಗರಗಳಲ್ಲಿ ಕುರುರಾಜನಾದ ಯುಧಿಷ್ಠಿರನ ಅನಂತರ ನೀನು ಅಭಿಷಿಕ್ತಳಾಗು.

ಪತಿಭಿರ್ನಿರ್ಜಿತಾಮುರ್ವೀಂ ವಿಕ್ರಮೇಣ ಮಹಾಬಲೈಃ ।
ಕುರು ಬ್ರಾಹ್ಮಣಸಾತ್ ಸರ್ವಾಮಶ್ವಮೇಧೇ ಮಹಾಕ್ರತೌ ॥೧೧॥

ಮಹಾಬಲರಾದ ಪತಿಗಳು ತಮ್ಮ ಪರಾಕ್ರಮದಿಂದ ಜಯಿಸಿದ ಭೂಮಿಯನ್ನು ಎಲ್ಲವನ್ನೂ ಅಶ್ವಮೇಧ ಮಹಾಕ್ರತುವಿನಲ್ಲಿ ಬ್ರಾಹ್ಮಣರಿಗೆ ದಾನ ಮಾಡು.

ಪೃಥಿವ್ಯಾಂ ಯಾನಿ ರತ್ನಾನಿ ಗುಣವಂತಿ ಗುಣಾನ್ವಿತೇ ।
ತಾನ್ಯಾಪ್ನುಹಿ ತ್ವಂ ಕಲ್ಯಾಣಿ ಸುಖಿನೀ ಶರದಾಂ ಶತಮ್ ॥೧೨॥

ಗುಣಾನ್ವಿತಳೇ, ಪೃಥಿವಿಯಲ್ಲಿರುವ ಎಲ್ಲಾ ಶ್ರೇಷ್ಠವಾದ ರತ್ನಗಳನ್ನೂ ನೀನು ಹೊಂದು. ಕಲ್ಯಾಣಿಯೇ, ನೂರು ವರ್ಷಗಳ ಕಾಲ ಸುಖದಿಂದ ಬಾಳು.

ಯಥಾ ಚ ತ್ವಾಽಭಿನಂದಾಮಿ ವಧ್ವದ್ಯ ಕ್ಷೌಮಸಂವೃತಾಮ್ ।
ತಥಾ ಭೂಯೋಽಪಿ ನಂದಿಷ್ಯೇ ಸುತಾನ್ ಪುತ್ರಾನ್ ಗುಣಾನ್ವಿತಾನ್ ॥೧೩॥

ವಧುವೇ, ಹೇಗೆ ಈ ದಿನ ಪೀತಾಂಬರವನ್ನು ಹೊದ್ದ ನಿನ್ನನ್ನು ಅಭಿನಂದಿಸುತ್ತಿದ್ದೇನೋ ಅದಕ್ಕಿಂತಲೂ ಹೆಚ್ಚಾಗಿ ಗುಣಾನ್ವಿತರಾದ ನನ್ನ ಪುತ್ರರನ್ನು ಅಭಿನಂದಿಸುತ್ತೇನೆ.

ವೈಶಂಪಾಯನಃ

ಪ್ರಾಹಿಣೋದ್ ವಾಸುದೇವಸ್ತು ಪಾಂಡವೇಭ್ಯೋ ರಿಪುಂಜಯಃ ।
ಮುಕ್ತಾವೈಢೂರ್ಯಚಿತ್ರಾಣಿ ಹೈಮಾನ್ಯಾಭರಣಾನಿ ಚ ॥೧೪॥

ವಾಸಾಂಸಿ ಚ ಮಹಾರ್ಹಾಣಿ ನಾನಾದೇಶ್ಯಾನಿ ಮಾಧವಃ ।
ಕಂಬಲಾಜಿನರತ್ನಾನಿ ಸ್ಪರ್ಶವಂತಿ ಶುಭಾನಿ ಚ ॥೧೫॥

ಶಯನಾಸನಯಾನಾನಿ ವಿವಿಧಾನಿ ಮಹಾಂತಿ ಚ ।
ವೈಢೂರ್ಯರತ್ನಚಿತ್ರಾಣಿ ಶತಶೋ ಭಾಜನಾನಿ ಚ ॥೧೬॥

ರೂಪಯೌವನದಾಕ್ಷಿಣ್ಯೈರುಪೇತಾಶ್ಚ ಸ್ವಲಂಕೃತಾಃ ।
ಪ್ರೇಷ್ಯಾಃ ಸಂಪ್ರದದೌ ಕೃಷ್ಣೋ ನಾನಾದೇಶ್ಯಾಃ ಸಹಸ್ರಶಃ ॥೧೭॥

ರಿಪುಂಜಯನಾದ ಶ್ರೀಕೃಷ್ಣನು ಪಾಂಡವರಿಗೆ ಅನೇಕ ಉಡುಗೊರೆಗಳನ್ನು ಕಳುಹಿಸಿದನು. ಮುತ್ತು ಮತ್ತು ವೈಢೂರ್ಯಗಳಿಂದ ಖಚಿತವಾದ ಸುವರ್ಣಾಭರಣಗಳು, ನಾನಾದೇಶದ ಬೆಲೆಬಾಳುವ ವಸ್ತುಗಳು, ಕಂಬಳಿಗಳು, ಅಜಿನಗಳು, ರತ್ನಗಳು, ಮೃದುಸ್ಪರ್ಶವುಳ್ಳ ಶಯನೆಗಳು, ಆಸನಗಳು, ವಿಧವಿಧವಾದ ದೊಡ್ಡ ವಾಹನಗಳು, ವೈಢೂರ್ಯರತ್ನಖಚಿತವಾದ ನೂರಾರು ಪಾತ್ರೆಗಳು, ರೂಪಯೌವನ ಸೌಜನ್ಯದಿಂದ ಕೂಡಿದ ಅಲಂಕೃತರಾದ, ನಾನಾದೇಶದಿಂದ ಕರೆತಂದ ಸಹಸ್ರಾರು ದಾಸಿಯರು, ಎಲ್ಲವನ್ನೂ ಕಳುಹಿಸಿದನು.

ಗಜಾನ್ ವಿನೀತಾನ್ ಭದ್ರಾಂಶ್ಚ ಸದಶ್ವಾಂಶ್ಚ ಸ್ವಲಂಕೃತಾನ್ ।
ರಥಾಂಶ್ಚ ದಾಂತಾನ್ ಸೌವರ್ಣಾನ್ ಶುಭ್ರೈಃ ಪತ್ತ್ರೈರಲಂಕೃತಾನ್ ॥೧೮॥

ಕೋಟಿಶಶ್ಚ ಸುವರ್ಣಾನಾಂ ತಥೈವ ಕೃತಕಂ ಬಹು ।
ಕೃತಾಕೃತಮಮೇಯಾತ್ಮಾ ಪ್ರಾಹಿಣೋನ್ಮಧುಸೂದನಃ ॥೧೯॥

ಪಳಗಿಸಿದ ಆನೆಗಳನ್ನೂ, ಮಂಗಳವಾದ, ಅಲಂಕೃತವಾದ ಶ್ರೇಷ್ಠ ಕುದುರೆಗಳನ್ನೂ, ದಂತಗಳಿಂದ ಮಾಡಿದ ಸುವರ್ಣಾಲಂಕೃತವಾದ ಪತ್ರಗಳಿಂದ ಅಲಂಕೃತವಾದ ಅನೇಕ ರಥಗಳನ್ನೂ, ಕೋಟಿಗಟ್ಟಲೆ ಸುವರ್ಣವನ್ನೂ, ಕೇವಲ ಸುವರ್ಣದಿಂದ ಮಾಡಿದ ಆಭರಣಗಳನ್ನೂ, ಸುವರ್ಣ ಮತ್ತು ರತ್ನಾದಿಗಳಿಂದ ಕೂಡಿದ ಆಭರಣಗಳನ್ನೂ ಮಧುಸೂದನನು ಕಳುಹಿಸಿದನು.

ತತ್ ಸರ್ವಂ ಪ್ರತಿಜಗ್ರಾಹ ಧರ್ಮರಾಜೋ ಯುಧಿಷ್ಠಿರಃ ।
ಅರ್ಚಯಿಷ್ಯನ್ ಹೃಷೀಕೇಶಂ ಗೋವಿಂದಪ್ರಿಯಕಾಮ್ಯಯಾ ॥೨೦॥

ಧರ್ಮರಾಜನಾದ ಯುಧಿಷ್ಠಿರನು ಕೃಷ್ಣನಿಗೆ ಸಂತೋಷವನ್ನುಂಟು ಮಾಡುವ ಆಸೆಯಿಂದ ಕೃಷ್ಣನನ್ನು (ಮನಸ್ಸಿನಲ್ಲಿಯೇ) ಪೂಜಿಸುತ್ತಾ ಆ ಎಲ್ಲಾ ಉಡುಗೊರೆಗಳನ್ನೂ ಸ್ವೀಕರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಮಾದಿಪರ್ವಣಿ
ಏಕೋನದ್ವಿಶತಶತತಮೋऽಧ್ಯಾಯಃ ॥
॥ ಇತಿ ವೈವಾಹಿಕಪರ್ವಣಿ ಅಷ್ಟಮೋऽಧ್ಯಾಯಃ ॥

॥ ವೈವಾಹಿಕಪರ್ವ ಸಮಾಪ್ತಮ್ ॥

ಇಲ್ಲಿಗೆ ಮಹಾಭಾರತದ ಆದಿಪರ್ವದಲ್ಲಿ
ನೂರ ತೊಂಭತ್ತೊಂಭತ್ತನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ವೈವಾಹಿಕ ಪರ್ವವು ಮುಗಿಯಿತು.

★★★★★

ದಧಿಯ ಸಾರ ನವನೀತ.
ಎರಡು ಪಾದದ ಪ್ರಾಣಿಗಳಲ್ಲಿ ಬ್ರಾಹ್ಮಣ ಶ್ರೇಷ್ಠ.
ವೇದಗಳಲ್ಲಿ ಉಪನಿಷತ್ತು ಶ್ರೇಷ್ಠ.
ಔಷಧಿಗಳಲ್ಲಿ ಅಮೃತ, ಜಲಾಶಯಗಳಲ್ಲಿ
ಸಮುದ್ರ, ಚತುಷ್ಪಾದಿಗಳಲ್ಲಿ ಗೋವು ಶ್ರೇಷ್ಠ.
ಇದರಂತೆ ಪ್ರಮೇಯವನ್ನು
ನಿರೂಪಿಸುವ ಗ್ರಂಥಗಳಲ್ಲಿ
ಮಹಾಭಾರತವು ಶ್ರೇಷ್ಠವಾಗಿದೆ.

"ಯಥೈತಾನಿ ವಿಶಿಷ್ಟಾನಿ
ತಥಾ ಭಾರತಮುಚ್ಯತೇ ॥"

ISBN 978-93-81807-45-3